UNIVERSAL
LIBRARY
OU_200993
UNIVERSAL
LIBRARY

ತತ್ತ್ವಸಂಗ್ರಹ ರಾಮಾಯಣಂ.

ಬಾಲಕಾಂಡಂ

ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್

ಜಿ. ಸಿ. ಎಸ್. ಐ. ಯವರ

ಆಸ್ಥಾನ ಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಶಾಸ್ತ್ರಿಕೃತ

ತತ್ತ್ವಪ್ರಕಾಶನಾಮಕ ಟೀಕಾ ಸಹಿತಂ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.

ಪ್ರಕಾಶಕರೂ, ಪುಸ್ತಕ ವ್ಯಾಪಾರಿಗಳು.

ಮಾಳಮಡ್ಡಿ ಧಾರವಾಡ.

ಪರಿಧಾವಿ ಸಂ॥ ಚೈತ್ರಶುಕ್ಲ ನವಮಿಯಾ

೧೯೧೨

ಬಿ. ಟಿ. ಎ. ಪ್ರೆಸ್, ಮೈಸೂರು

(ಕಾಪಿರೈಟ್ ರಿಜಿಸ್ಟರ್)

ಶ್ರೀಃ

ಶ್ರೀ ತತ್ವಸಂಗ್ರಹ ರಾಮಾಯಣಂ

ಬಾಲಕಾಂಡ

ವಿಷಯ ಸೂಚಿಕೆ

ಸರ್ಗ	ವಿಷಯ	ಪುಟ
೧	ಮಂಗಳಾಚರಣೆ	೧
,,	ಸತ್ಪುರುಷ ಲಕ್ಷಣ	೭
,,	ನಾನಾಮುನಿ ಸಮಾಗಮ	೮
೨	ಶ್ರೀರಾಮನು ವಿಷ್ಣುವೆಂದು ನಿರೂಪಣೆ	೯
೩	,, ಶಿವನೆಂದು ನಿರೂಪಣೆ	೧೭
,,	,, ತ್ರಿಮೂರ್ತಿಸ್ವರೂಪನೆಂದೂ, ತ್ರಿಮೂರ್ತ್ಯತೀತನೆಂದೂ ನಿರೂಪಣೆ	೨೧
೪	ವಿರಾಟ್ಸ್ವರೂಪ ರಾಮಧ್ಯಾನ	೨೫
೫	ರಾಮಾಯಣ ರಹಸ್ಯಕಥನ	೩೧
೬	ಶಿವ ಸಭಾವರ್ಣನೆ	೪೨
೭	ಶ್ರೀ ಪರಮೇಶ್ವರನು ಪಾರ್ವತಿಗೆ ಮಾಡಿದ ತತ್ತ್ವೋಪದೇಶ ...	೪೭
೮	ಶಿವಕೃತರಾಮಧ್ಯಾನಾದಿ ವರ್ಣನ	೫೩
,,	ಕಾಶಿಯಲ್ಲಿ ತಾರಕೋಪದೇಶ	೫೪
೯	ಬ್ರಹ್ಮಾದಿ ತಪಶ್ಚರಣ	೫೬
೧೦	ಜಯವಿಜಯ ಶಾಪಾದಿಕಥನ	೬೧
೧೧	ರಾವಣ ಕುಂಭಕರ್ಣಾದಿ ಜನ್ಮಕಥನ	೭೫
,,	ರಾವಣಾದಿ ತಪಶ್ಚರಣ	೭೬
೧೨	ದೇವಕೃತ ವಿಷ್ಣುಸ್ತುತಿ. ವಿಷ್ಣುಕೃತವರಪ್ರದಾನ ...	೭೮
೧೩	ಮನುತಪಶ್ಚರಣ, ಪುತ್ರಕಾಮೇಷ್ಟಿ, ದಶರಥನವರಪ್ರದಾನ. ಪಾಯಸದಾನ	೮೧
೧೪	ಶ್ರೀರಾಮಾವತಾರ, ಶ್ರೀರಾಮ ವಿಶ್ವರೂಪೋತ್ಪತ್ತಿ ...	೧೦೧
೧೫	ಶ್ರೀರಾಮನವಮೀ ವ್ರತಮಹಿಮೆ	೧೧೫

೧೬	ವಿಶ್ವಾಮಿತ್ರ ಸಮಾಗಮನ	೧೨೦
೧೭	ವಸಿಷ್ಠೋಕ್ತರಾಮತತ್ವ, ರಾಮಪ್ರೇಷಣಾದಿ ನಿರೂಪಣ ...	೧೨೬
೧೮	ತಾಟಕಾಸಂಹಾರ	೧೩೧
೧೯	ವಿಶ್ವಾಮಿತ್ರ ಯಜ್ಞರಕ್ಷಣ, ಶ್ರೀರಾಮಮಾನಸಪೂಜೆ ...	೧೩೯
೨೦	ಸಾಲಗ್ರಾಮ ರಾಮಪೂಜಾದಿ ಮಹಿಮೆ. ತೀರ್ಥಪ್ರಸಾದ ಮಹಿಮೆ	೧೪೦
೨೧	ತುಲಸೀಪೂಜಾ ಮಹಿಮೆ	೧೬೦
೨೨	ಅಗಸ್ತ್ಯರು ಸುತೀಕ್ಷ್ಣರಿಗೆ ರಾಮತತ್ವವನ್ನುಪದೇಶಿಸುವಿಕೆ ...	೧೬೩
,,	ರಾಮಮಂತ್ರ ಮಹಿಮೆ	೧೬೪
೨೩	ಅಷ್ಟಾಂಗಯೋಗ ನಿರೂಪಣೆ	೧೩೫
೨೪	ಶ್ರೀರಾಮನಾಮಸ್ಮರಣ ಮಾಹಾತ್ಮ್ಯ	೧೪೦
,,	ಸುಮತಿರಾಜನಿಗೆ ಅಭಯಪ್ರದಾನ	೧೯೧
೨೫	ಅಹಲ್ಯೋತ್ಪತ್ತಿ	೧೯೩
,,	ಇಂದ್ರನಿಗೂ ಅಹಲ್ಯೆಗೂ ಶಾಪಪ್ರದಾನ	೧೯೪
೨೬	ಅಹಲ್ಯಾಕೃತರಾಮಸ್ತುತಿ	೨೦೦
,,	ಅಹಲ್ಯಾ ಶಾಪವಿಮೋಚನ	೨೦೧
೨೭	ಗೌತಮಕೃತ ರಾಮಸ್ತುತಿ	೨೦೬
,,	ಶ್ರೀರಾಮನು ಗೌತಮಮುನಿಗೆ ಮಾಡಿದ ತತ್ಪೋಪದೇಶ ...	೨೦೪
೨೪	ಶ್ರೀರಾಮನು ಮಿಥಿಲಾನಗರಕ್ಕೆ ಪ್ರವೇಶಮಾಡುವಿಕೆ ...	೨೧೧
೨೯	ಸೀತಾವಿವಾಹಾರ್ಥವಾಗಿ ಸಕಲದೇವ ಸಮಾಗಮನ ...	೨೧೩
,,	ಶಿವಕೃತ ರಾಮಸ್ತುತಿ	೨೧೯
೩೦	ಶೈವಧನುರ್ಭಂಗಾದಿ ನಿರೂಪಣ	೨೨೩
೩೧	ಸೀತಾಕಲ್ಯಾಣ ಮಹೋತ್ಸವ ವರ್ಣನ	೨೩೧
೩೨	ಬ್ರಹ್ಮಾದಿಕೃತ ರಾಮಸ್ತುತಿ	೨೪೦
೩೩	ಪರಶುರಾಮ ಸಂವಾದ	೨೪೧
೩೪	ಪರಶುರಾಮಭಂಗಕಾರಣಾದಿ ನಿರೂಪಣೆ	೨೬೧
೩೫	ಅಯೋಧ್ಯಾಪುರ ಪ್ರವೇಶಾದಿವರ್ಣನೆ	೨೭೦

ಶ್ರೀತತ್ವಸಂಗ್ರಹ ರಾಮಾಯಣಂ.

ಬಾಲಕಾಂಡ.

ಶುದ್ಧಾಶುದ್ಧಪತ್ರಿಕೆ.

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೨೩	೩೧	ವಿಷು	ವಿಷ್ಣು
೨೪	೨೪	ಸ್ವರೂಪತ	ಸ್ವರೂಪತ್ವ
೩೧	೧೨	ರೀಯಾಗಿ	ರೀತಿಯಾಗಿ
,,	೧೪	ಯಾದ;ದು;	ಯಾದುದು;
೫೧	೩	ಜನಾನ್ತಿ	ಜಾನನ್ತಿ
೫೪	೨೯	ಮುಕಿ	ಮುಕ್ತಿ
೫೯	೧೧	ಸ್ಯಕಾತ್ಪ	ಸ್ತ್ರೈಕಾತ್ಪ
೭೫	೩೧	ವಿಭೀಷನೂ	ವಿಭೀಷಣನೂ
೪೧	೨೬	ತಕ್ಯನನೂ	ತಕ್ಯವನೂ
೪೪	೨೨	ನಮಡಿ	ನಮಾಡಿ
೧೩೨	೫	ವಪುತಾ	ವಪುಷಾ
೧೩೩	೨೦	ವಿಶ್ವಾಮುನಿ	ವಿಶ್ವಾಮಿತ್ರಮುನಿ
೧೪೩	೨೪	ಸಕಹ	ಸಕ್ಷಹ
೧೫೩	೨೪	ವಾ್ರಜ	ವಾ್ರಜ್ಞ
೧೫೭	೧೪	ವಿಷ್ಟವಾ್	ವಿಷ್ಟವಾ್
೧೬೩	೧	ಪುಷ್ಪೆವಾ್	ಪುಷ್ಪೈವಾ್
೧೭೧	೨೦	ಸುತೀಣಷ್ಣ	ಸುತೀಕ್ಷ್ಣ
೧೪೬	೨೯	ಶಿತ್ತ	ಶಿಕ್ತ
೧೯೩	೫	ದೇವಾ	ದೇಯಾ
,,	೭	ಕಮಯೇ	ಸಮಯೇ
೧೯೬	೧೨	ಶಕಮುಖ	ಶತಮುಖ
೧೯೯	೨೪	ಪುಷ	ಪುಷ್ಪ
೨೧೪	೩	ಪಾದಾಮ್ಮುಜ	ಪಾದಾಮ್ಬುಜ
೨೨೧	೬	ಕಜ್ಯೆಣೇ್	ಕಜ್ಯೈಣೇ
,,	೨೩	ತೋಭಿತ	ಶೋಭಿತ
೨೩೭	೨೬	ಅನುರರಿಸಿ	ಅನುಸರಿಸಿ
೨೩೪	೬	ಮ್ಪತ್ಯೋ	ದಮ್ಪತ್ಯೋ
,,	೭	ದಏವಂ	ಏವಂ
೨೬೧	೨೪	ನೀರು	ನೀನು

ಓಮ್

ಶ್ರೀರಸ್ತು

ಶ್ರೀ ತತ್ತ್ವಸಂಗ್ರಹ ರಾಮಾಯಣಂ

ಬಾಲಕಾಂಡಃ

ಶ್ರೀರಾಮಚನ್ದ್ರಾಯ ಪರಮಾತ್ಮನೇ ನಮೋನಮಃ

ಶುಕ್ಲಾಮ್ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾನ್ತಯೇ ॥

ಯೋಗ್ಯೇ ಸರ್ಗಾದೌಕವಿವಾಸ ಪಶ್ಚಾತ್
ವಿಕಂ ಸನ್ತಂ ಬಹುಧಾ ಯಂ ವದನ್ತಿ ।
ಯಃ ಸರ್ವಜ್ಞಃ ಸರ್ವಗಶ್ಚಾನ್ತವಿಕಃ
ತಂ ರಾಮಾಖ್ಯಂ ದೈವಮೀಕಂ ಭಜೇಹಮ್ ॥೧॥

ಆಪದಾಮಪಹರ್ತಾರಂ ದಾತಾರಂ ಸರ್ವಸಮ್ಪದಾಮ್ ।
ಲೋಕಾಭಿರಾಮಂ ಶ್ರೀರಾಮಂ ಭೂಯೋಭೂಯೋ ನಮಾಮ್ಯಹಮ್ ॥

ಸಚ್ಚಿದಾನಂದರೂಪನಾದ ಯಾವ ಪರಮಾತ್ಮನು, ಈ ಪ್ರಪಂಚಸೃಷ್ಟಿಗಿಂತ ಮೊದಲೂ ತಾನೊಬ್ಬನೇ ಇದ್ದನೋ;—ಅನಂತರವೂ ಒಬ್ಬನೇ ಆಗಿರುವ ಯಾವನನ್ನು, ಆಯಾ ಶಾಸ್ತ್ರ ಪ್ರವರ್ತಕರು ತಂತಮ್ಮ ಅಭಿಪ್ರಾಯವನ್ನನುಸರಿಸಿ ನಾನಾರೂಪನಾಗಿ ಹೇಳಿರುವರೋ;—ಸರ್ವಜ್ಞನಾಗಿಯೂ ಸರ್ವಾಂತರ್ಗತನಾಗಿಯೂ ಇರುವ ಯಾವನು, ಪ್ರಳಯಾಂತದಲ್ಲಿಯೂ ಒಬ್ಬನೇ ಇರುವನೋ;—ಶ್ರೀರಾಮರೂಪನಾಗಿ ಅವತರಿಸಿದ ಅಂತಹ ಅದ್ವಿತೀಯನಾದ ಪರಮಾತ್ಮನನ್ನು ನಾನು ಭಜಿಸುವೆನು ॥೧॥

ಯತ್ ಪದ್ಮಂ ಭುವನೈಕಧಾಮವಿಲಸದ್ವಿಶ್ವಸ್ಯ ನಾಭ್ಯುತ್ಥಿತಂ
ತತ್ ಕ್ರೀಡಾಕಮಲಂ ವಿಧಾಯ ವಿಹರತ್ಯನ್ಯೈವ ರಾಮೇ ಹಿ ಯಾ ।
ಶಕ್ತಿಂ ತಾಂ ಜಗತಾಂ ಕ್ರಿಯಾಭಿರನಿಶಂ ಸಜ್ಜೀಕ್ರೀಡಯನ್ತೀಂ ಪರಾಂ
ಸೇವೇ ತಾಂ ನಿಜಲೋಕಭಾಗ್ಯನಿವಹಾಂ ಸೀತಾಭಿಧಾಂ ಕಾಮದಾಮ್ ॥೧॥

ಗುರುಂ ವಾಣೀಂ ಗಣೇಶಂ ಚ ನತ್ವಾ ವ್ಯಾಸಂ ಶಿವಂ ಶಿವಾಮ್ ।
ವಾಲ್ಮೀಕಿಂ ನಾರದಾದೀಂಶ್ಚ ಭಜೇ ರಾಮಕಥಾವಿದಃ ॥೨॥

ರಾಮಾಯಣೇ ಪುರಾಣೇಷು ಸಂಹಿತಾಸ್ವಾಗಮಾದಿಷು ।
ರಾಮತತ್ತ್ವಚರಿತ್ರಾದೌ ವಿಶೇಷಾಃ ಸನ್ತಿ ಭೂರಿಶಃ ॥೪॥

ಏಕತ್ರೈವ ವಿಶೇಷಾಂಸ್ತಾನ್ ಅವಗಾಹಿತುಮಿಚ್ಛತಾಮ್ ।
ಯತ್ರ ಯೇಽಯೇ ವಿಶೇಷಾಃ ಸ್ಯುಃ ತಾಂಸ್ತಾನ್ಸಙ್ಗೃಹ್ಯ ಸಾರತಃ ॥೫॥

ಪ್ರಸಿದ್ಧಾರ್ಥಸ್ಯ ಸಜ್ಜೀಕ್ಲೃಪ್ತೈಃ ಅಪ್ರಸಿದ್ಧಾರ್ಥವಿಸ್ತರೈಃ ।
ಶ್ರೀರಾಮತುಷ್ಟ್ಯೈ ಪದ್ಯೈಶ್ಚ ಮಣಿಭಿರ್ಮಾಲಿಕಾಮಿವ ॥೬॥

ಕ್ಷೀರಸಮುದ್ರ ಮಧ್ಯದಲ್ಲಿ ಆದಿಶೇಷಶಾಯಿಯಾಗಿಯೂ ಸಮಸ್ತ ಬ್ರಹ್ಮಾಂಡಕ್ಕೂ ಮುಖ್ಯಾಧಾರಭೂತನಾಗಿಯೂ ಸಕಲ ಜಗದ್ವಿಲಾಸಕ್ಕೂ ಮುಖ್ಯಕಾರಣಭೂತನಾಗಿಯೂ ಇರುವ ಶ್ರೀಮನ್ನಾರಾಯಣನ ನಾಭಿಯಿಂದ ಜನಿಸಿದ ದಿವ್ಯಕಮಲವನ್ನು, ಜಗನ್ಮಾತೆಯಾದ ಯಾವ ಲಕ್ಷ್ಮಿಯು, ವಿಲಾಸಾರ್ಥವಾದ ಕಮಲವನ್ನಾಗಿ ಮಾಡಿಕೊಂಡು ಕೈಲಿ ಧರಿಸಿ, ವಸ್ತುತಃ ಪರಮಾತ್ಮನಿಗಿಂತ ತಾನು ಪೃಥಕ್ಕಲ್ಲದವಳಾಗಿದ್ದರೂ— ಪೃಥಗ್ಭೂತಳಂತೆ ಕಾಣುತ, ಸಾಕ್ಷಾತ್ಪರ ಮಾತ್ಮನಾದ ಶ್ರೀರಾಮನಲ್ಲಿ ವಿಹರಿಸಿಕೊಂಡಿರುವಳೋ ;— ಸಮಸ್ತ ಜಗತ್ತಿಗೂ ಆದಿಶಕ್ತಿ ರೂಪಳಾಗಿ— ನಾನಾವಿಧ ವ್ಯಾಪಾರಗಳಿಂದ ಪ್ರಪಂಚವನ್ನೆಲ್ಲ ಕ್ರೀಡೆಪಡಿಸುತ್ತಿರುವ-ತನ್ನ ಭಕ್ತರಿಗೆ ಭಾಗ್ಯರೂಪಳಾದ-ಸರ್ವಲೋಕ ಕಾಮಿತಪ್ರದಳಾದ-ಆ ಪರಾತ್ಪರ ಶಕ್ತಿಸ್ವರೂಪ ಳಾದ-ಶ್ರೀ ಸೀತಾದೇವಿಯನ್ನು, ನಾನು ಸೇವಿಸ ಬೇನು ॥೧॥

ಪ್ರಥಮತಃ ಗುರುವನ್ನೂ ಸರಸ್ವತಿಯನ್ನೂ ಗಣಪತಿಯನ್ನೂ ನಮಸ್ಕರಿಸಿ, ಅನಂತರ, ಶ್ರೀರಾಮಕಥೆಯನ್ನು ತಿಳಿದವರಾದ-ವ್ಯಾಸಮಹರ್ಷಿಯನ್ನೂ ಪರಮೇಶ್ವರನನ್ನೂ ಪಾರ್ವತೀ ದೇವಿಯನ್ನೂ ವಾಲ್ಮೀಕಿ ಮುನಿಯನ್ನೂ ನಾರದಮಹರ್ಷಿ ಮೊದಲಾದವರನ್ನೂ ಭಜಿಸುವೆನು ॥೨॥

ಶ್ರೀ ವಾಲ್ಮೀಕಿ ರಾಮಾಯಣದಲ್ಲಿಯೂ, ಸ್ಕಾಂದಾದಿ ಪುರಾಣಗಳಲ್ಲಿಯೂ, ಆಗಸ್ತ್ಯಾದಿ ಸಂಹಿತೆಗಳಲ್ಲಿಯೂ, ಶೈವಾದ್ಯಾಗಮಗಳಲ್ಲಿಯೂ, ರಾಮತತ್ವಚರಿತ್ರ ಮೊದಲಾದ ಗ್ರಂಥಗಳ ಲ್ಲಿಯೂ ಕೂಡ, ಶ್ರೀರಾಮಕಥಾವಿಷಯಕಗಳಾದ ವಿಶೇಷಗಳು ಅನೇಕವಾಗಿರುವುವು ॥೪॥

ಆ ವಿಶೇಷಗಳನ್ನೆಲ್ಲ ಒಂದೇಕಡೆಯಲ್ಲಿ ತಿಳಿದುಕೊಳ್ಳಲೇಚ್ಛಿಸತಕ್ಕವರ ಅನುಕೂಲ್ಯಕ್ಕಾಗಿ, ಎಲ್ಲೆಲ್ಲಿ ಯಾವಯಾವ ವಿಶೇಷಗಳಿವೆಯೋ—ಅವುಗಳನ್ನೆಲ್ಲ ವಿಚಾರಮಾಡಿ, ಅವುಗಳಲ್ಲಿಯೂ ಸಾರ ಭೂತವಾದುವುಗಳನ್ನು ಸಂಗ್ರಹಿಸಿ, ಪ್ರಸಿದ್ಧವಾದ ವಿಷಯವನ್ನು ಸಂಕ್ಷೇಪಮಾಡಿ, ಅಪ್ರಸಿದ ವಾದುವುಗಳನ್ನು ವಿಸ್ತರಪಡಿಸಿ, ಶ್ರೀರಾಮಚಂದ್ರನ ಪ್ರೀತಿಗೋಸ್ಕರ, ರತ್ನಗಳನ್ನು ಸೇರಿಸಿ ಹಾರವನ್ನು ಮಾಡುವಂತೆ, ಪುರಾತನನಾದ ಶ್ಲೋಕಗಳನ್ನು ಸೇರಿಸಿ 'ತತ್ವಸಂಗ್ರಹ' ನಾಮಕ

ಶ್ಲೋಕೈರ್ನಾನಾಪುರಾಣಾದಿಸಿದ್ಧೈರೇವ ಸಕಲ್ಪಿತೈಃ ।
ಕುರ್ವೇ ರಾಮಾಯಣಂ ತತ್ತ್ವಸಙ್ಗ್ರಹಾಖ್ಯಂ ಮನೋರಮಮ್ ॥೩॥
ಪ್ರಾಯಶೋ ಧರ್ಮಕಾಣ್ಡಸ್ಥಾ ತದ್ವದ್ರಾಮಾಯಣಸ್ಥಿತಾಃ ।
ತಥಾ ಶ್ಲೋಕಾನಗಸ್ತ್ಯೇಮಾಸಂಹಿತೋಕ್ತಾಂಶ್ಚ ಭೂರಿಶಃ ॥೪॥
ಕುತ್ರಜಿತ್ ತತ್ತ್ವಭಾಗೇ ಚಾಧ್ಯಾತ್ಮರಾಮಾಯಣೇ ಸ್ಥಿತಾಃ ।
ಕ್ವಚಿತ್ಕ್ವಚಿತ್ ಕೌರ್ಮಪಾದ್ಮನಾರಸಿಂಹಪುರಾಣಗಾಃ ॥೫॥
ತಥಾ ಬ್ರಹ್ಮಪುರಾಣಸ್ಥಾಃ ಬ್ರಹ್ಮಾಣ್ಡಸ್ಥಾಂಶ್ಚ ಕುತ್ರಜಿತ್ ।
ಸಾನ್ದನಾನಾಖಣ್ಡಸಂಸ್ಥಾಃ ತಥಾ ಭಾಗವತಸ್ಥಿತಾಃ ॥೬॥
ಕ್ವಚಿದ್ವಿಷ್ಣುಪುರಾಣಸ್ಥಾಃ ರಾಮತಾಪಿನ್ಯುದೀರಿತಾಃ ।
ತದ್ವದ್ಧಿರಣ್ಯಗರ್ಭಸ್ಯ ಸಂಹಿತಾಸಂಸ್ಥಿತಾನಪಿ ॥೭॥
ಕ್ವಚಿದ್ಭಾರತತಚ್ಛೇಷಧರ್ಮಸಂಸ್ಥಾಂಶ್ಚ ಸಙ್ಗ್ರಹಾತ್ ।
ಏವಂ ನಾನಾರಾಮಮನ್ತ್ರಪ್ರತಿಪಾದಕಕಲ್ಪಗಾಃ ॥೮॥
ಶ್ಲೋಕಾನನೇಕಶಃ ಸಮ್ಯಕ್ ಸಮಾಹೃತ್ಯಾಜ್ಞಯಾ ಹರೇಃ ।
ಕುರ್ವೇ ರಾಮಾಯಣಂ ತತ್ತ್ವಸಙ್ಗ್ರಹಾಖ್ಯಂ ಬುಧಪ್ರಿಯಮ್ ॥೯॥
ಭಕ್ತ್ಯಸ್ಯ ಸಾನ್ತಂ ಶ್ರೋತೄಣಾಂ ಸಂಶಯೋ ರಾಮತತ್ತ್ವಕೇ ।

ವಾದ ಅತಿ ಮನೋಹರವಾಗಿರುವ ರಾಮಾಯಣವನ್ನು ರಚಿಸುವೆನು. ಇದರಲ್ಲಿರುವ ಶ್ಲೋಕಗಳೆಲ್ಲವೂ, ಅನೇಕವಾದ ಪುರಾಣಾದಿ ಗ್ರಂಥಗಳಲ್ಲಿರತಕ್ಕುವುಗಳೇ ಹೊರತು-ನನ್ನ ಸ್ವಕಪೋಲ ಕಲ್ಪಿತವಾದುದೊಂದೂ ಇಲ್ಲವೆಂದು ತಿಳಿಯುಬೇಕು ॥೫-೭॥

ಈ ತತ್ವಸಂಗ್ರಹ ರಾಮಾಯಣವೆಂಬ ಗ್ರಂಥದಲ್ಲಿ,-ಪ್ರಾಯಶಃ ಧರ್ಮಕಾಂಡನಾಮಕ ಗ್ರಂಥದಲ್ಲಿರುವ ಶ್ಲೋಕಗಳನ್ನೂ, ಹಾಗೆಯೇ ಶ್ರೀ ವಾಲ್ಮೀಕಿರಾಮಾಯಣದಲ್ಲಿರುವುವುಗಳನ್ನೂ, ಹೆಚ್ಚಾಗಿ-ಅಗಸ್ತ್ಯಸಂಹಿತೆ ಉಮಾಸಂಹಿತೆಗಳಲ್ಲಿ ಹೇಳಿರುವುವುಗಳನ್ನೂ, ಕೆಲವುಕಡೆ ತತ್ವಭಾಗಹೇಳುವಾಗ ಅಧ್ಯಾತ್ಮರಾಮಾಯಣಸ್ಥವಾದ ಶ್ಲೋಕಗಳನ್ನೂ, ಕೆಲಕೆಲವೆಡೆಗಳಲ್ಲಿ ಕೌರ್ಮ ವಾದ್ಮ ನಾರಸಿಂಹ ಪುರಾಣಗಳ ಶ್ಲೋಕಗಳನ್ನೂ, ಹಾಗೆಯೇ ಬ್ರಹ್ಮಪುರಾಣಸ್ಥವಾದುವುಗಳನ್ನೂ, ಕೆಲವೆಡೆ ಬ್ರಹ್ಮಾಂಡಪುರಾಣಸ್ಥಿತವಾದುವುಗಳನ್ನೂ, ಸ್ಕಾಂದಪುರಾಣದ ಅನೇಕವಾದ ಖಂಡಗಳಲ್ಲಿರುವ ಪದ್ಯಗಳನ್ನೂ, ಹಾಗೆಯೇ ಭಾಗವತದಲ್ಲಿರುವ ಶ್ಲೋಕಗಳನ್ನೂ, ಕೆಲವುಕಡೆ ವಿಷ್ಣುಪುರಾಣದ ಶ್ಲೋಕಗಳನ್ನೂ, ರಾಮತಾಪಿನಿಯುಲ್ಲಿ ಹೇಳಲ್ಪಟ್ಟಿರುವ ಗ್ರಂಥಗಳನ್ನೂ, ಅದರಂತೆಯೇ ಹಿರಣ್ಯಗರ್ಭಸಂಹಿತೆಯುಲ್ಲಿರುವುವುಗಳನ್ನೂ, ಕೆಲವು ಸ್ಥಳದಲ್ಲಿ ಮಹಾಭಾರತ ಶೇಷಧರ್ಮಗಳೊಳಗಿನ ಶ್ಲೋಕಗಳನ್ನೂ ಸೇರಿಸಿರುವೆನು. ಹೀಗೆಯೇ ಇನ್ನೂ ಅನೇಕವಾಗಿ ರಾಮತಂತ್ರವನ್ನು ತಿಳಿಯಿಸುವ ಕಲ್ಪಗಳಲ್ಲಿರುವ ಶ್ಲೋಕಗಳನ್ನೂ ಕೂಡ ಸಂಗ್ರಹಿಸಿ, ಶ್ರೀ ಹರಿಯ ಆಜ್ಞಾನುಸಾರವಾಗಿ, ವಿದ್ವಾಂಸರಿಗೆ ಪ್ರೀತಿಕರವಾದ ತತ್ವಸಂಗ್ರಹನಾಮಕವಾದ ರಾಮಾಯಣವನ್ನು ನಾನು ರಚಿಸುವೆನು ॥೪-೧೩॥

ಈ ಗ್ರಂಥವನ್ನು ಸಮೂಲಾಗ್ರವಾಗಿ ಭಕ್ತಿಯಿಂದ ಕೇಳತಕ್ಕವರಿಗೆ, ಪುನಃ ಶ್ರೀರಾಮನ

ತದ್ವಿಶೇಷಬುಭುತ್ಸಾ ವಾ ನ ಭೂಯೋ ವಿದುಷಾಂ ಭವೇತ್ ॥೧೪॥
ನಾನುಕ್ತಾಃ ಪ್ರಕ್ರಿಯಾಃ ಕಾಶ್ಚಿತ್ ಶ್ಲೋಕಾವಾ ಮುನಿಭಿಃ ಕ್ವಚಿತ್ ।
ಕಿಂತ್ವನ್ಯೋನ್ಯಂ ಸಂಶ್ರಿತಾರ್ಥಾಃ ರಚ್ಯಂತೇತ್ರ ಕಥಾತ್ಮನಾ ॥೧೫॥
ಋಷ್ಯುಕ್ತೇಷ್ವಪಿ ಪದ್ಯೇಷು ರಾಮತತ್ತ್ವಪ್ರಪಾದಕಾಃ ।
ಶ್ಲೋಕಾವಾತ್ರ ಲಿಖ್ಯಂತೇ ನ ಕಥಾಂತರವರ್ತಿನಃ ॥೧೬॥
ಬಹುಗ್ರಂಥೇಷ್ವನೇಕರೂಪೇ ತತ್ತ್ವೇ ಸ್ತೋತ್ರೇ ಕಥಾಸು ವಾ ।
ಸರ್ವೋತ್ತಮಾರ್ಥಮಾತ್ರಂ ತು ಲಿಖ್ಯತೇ ನಾನ್ಯವಿಸ್ತರಃ ॥೧೭॥
ಪ್ರಯೋಗಾಅಪಿ ತತ್ರತ್ಯಾಏವ ದೋಷೋ ನ ಮೇಽಸ್ತ್ಯತಃ ।
ಮಣಿಸ್ಥಗುಣದೋಷಾಭ್ಯಾಂ ಮೂಲಾಕರ್ತುರ್ಯಥಾ ತಥಾ ॥೧೮॥
ಅತೋಽಕೃತಾರ್ಥೇ ಸಂಶಯಾನೈಃ ವಿದ್ವದ್ಭಿಶ್ಚೇದ್ವಿಚಾರ್ಯತೇ ।
ಉದಾಹೃತಪುರಾಣಾದಿ ತದಾ ಮೇ ಸಫಲಃ ಶ್ರಮಃ ॥೧೯॥
ಯಥಾ ಮೂಲಾಗುಣಾದೇವ ಮೂಲಾಂ ಗೃಹ್ಣಾತಿ ಸಾರವಿತ್ ।
ನ ಕರ್ತೃಗುಣತಸ್ತದ್ವತ್ ಗೃಹ್ಣಾತ್ವಿದಮದೋಷದೃಕ್ ॥೨೦॥

ತತ್ವವಿಷಯದಲ್ಲಿ ಸಂಶಯವೂ-ಆ ರಾಮತತ್ವದಲ್ಲಿರುವ ವಿಶೇಷಗಳನ್ನು ಮತ್ತೆಲ್ಲಿಯಾದರೂ ತಿಳಿದು ಕೊಳ್ಳಬೇಕೆಂಬ ಆಶೆಯೂ ಉಂಟಾಗಲಾರವು ॥೧೪॥

ಈ ಗ್ರಂಥದಲ್ಲಿ, ವಾಲ್ಮೀನರಾದ ಮಹರ್ಷಿಗಳಿಂದ ಹೇಳಲ್ಪಡದಿರುವ ಪ್ರಕ್ರಮಗಳಾಗಲಿ-ಅಥವಾ ಶ್ಲೋಕಗಳಾಗಲಿ-ಹೇಳಲ್ಪಡುವುದಿಲ್ಲ. ಮತ್ತೇನೆಂದರೆ,—ಪರಸ್ಪರ ಸಂಬದ್ಧಗಳಾಗಿ ಅಲ್ಲಲ್ಲಿ ಹೇಳಲ್ಪಟ್ಟಿರುವ ವಿಷಯಗಳು, ಈ ಗ್ರಂಥದಲ್ಲಿ ಕಥಾರೂಪವಾಗಿ ಸೇರಿಸಲ್ಪಡುವುವು॥

ಹೀಗೆ ಋಷಿಪ್ರೋಕ್ತವಾದ ಪದ್ಯಗಳಲ್ಲಿಯೂ ಕೂಡ, ಶ್ರೀರಾಮನ ತತ್ವವನ್ನು ಹೇಳುವ ಸಂದರ್ಭದಲ್ಲಿರುವ ಶ್ಲೋಕಗಳೇ ಇಲ್ಲಿ ಬರೆಯಲ್ಪಟ್ಟಿರುವುವೇ ಹೊರತು, ಇತರ ಕಥೆಗಳ ಮಧ್ಯದಲ್ಲಿರುವವು ಇಲ್ಲಿ ಸೇರಿಸಲ್ಪಡುವುದಿಲ್ಲ ॥೧೫॥

ತತ್ವವಾಗಲಿ-ಸ್ತೋತ್ರವಾಗಲಿ-ಕಥೆಯಾಗಲಿ-ಅನೇಕ ಗ್ರಂಥಗಳಲ್ಲಿ ಒಂದೇವಿಧವಾಗಿರುವ ಸಂದರ್ಭದಲ್ಲಿ, ಅವುಗಳಲ್ಲೆಲ್ಲ ಉತ್ತಮವಾಗಿರುವ ಅರ್ಥಮಾತ್ರವೇ ಹೇಳಲ್ಪಡುವುದಲ್ಲದೆ, ಇತರವಾದ ಅನಾವಶ್ಯಕ ವಿಸ್ತರವು ಇಲ್ಲಿ ಹೇಳಲ್ಪಡುವುದಿಲ್ಲ ॥೧೭॥

ಪದವಾಕ್ಯಗಳ ಪ್ರಯೋಗಗಳೂಕೂಡ, ಅಯಾ ಮೂಲಗ್ರಂಥಗಳಲ್ಲಿರತಕ್ಕುವುಗಳೇ ಇಲ್ಲಿರುವುವು; ಅದುಕಾರಣ, ಮಣಿಯಲ್ಲಿರತಕ್ಕ ಗುಣದೋಷಗಳಿಂದ ಹಾರರಚನೆಮಾಡಿದವನಿಗೆ ದೋಷವಿಲ್ಲದಿರುವಂತೆ, ಇದರಲ್ಲಿ ನನ್ನ ದೋಷವಿಲ್ಲ ॥೧೮॥

ಹೀಗೆ ನಾನು ಹೇಳುವ ವಿಷಯದಲ್ಲಿ ಸಂಶಯಪಟ್ಟು ವಿದ್ವಾಂಸರಾದವರು ನನ್ನಿಂದ ಮೇಲೆ ಹೇಳಲ್ಪಟ್ಟಿರುವ ಪುರಾಣಾದಿ ಗ್ರಂಥಗಳನ್ನು ವಿಚಾರಮಾಡಿದಪಕ್ಷದಲ್ಲಿ, ಆಗ ನನ್ನ ಶ್ರಮವು ಸಾರ್ಥಕವಾಯೆ್ತಂದು ಭಾವಿಸುವೆನು ॥೧೯॥

ಪ್ರಪಂಚದಲ್ಲಿ, ಸಾರಜ್ಞನಾದವನು, ರತ್ನಹಾರದಲ್ಲಿರುವ ಗುಣದಿಂದಲೇ ಅದನ್ನು ಗ್ರಹಿಸುವನಲ್ಲದೆ, ಅದನ್ನು ಮಾಡಿದವನ ಗುಣವನ್ನು ನೋಡಿ ಹಾರವನ್ನು ಗ್ರಹಿಸುವುದಿಲ್ಲವಲ್ಲವೆ! ಇದರಂತೆಯೇ, ಗುಣಜ್ಞನಾದವನು ಈ ನನ್ನ ಗ್ರಂಥವನ್ನೂ ಗ್ರಹಿಸಬೇಕೆಂದು ಪ್ರಾರ್ಥಿಸುವೆನು॥

ಪುರುಷಾರ್ಥಸುಧಾಸಿನ್ಧೌ ಇತಿಹಾಸಸಮುಚ್ಚಯೇ ।
ಯಥಾ ಪುರಾಣಸಾರೇ ಚ ಹರಿಮಾಹಾತ್ಮ್ಯದರ್ಪಣೇ ॥೧೧॥
ಗುಣೈಕಗ್ರಾಹಿಣಾಂ ನೃಣಾಂ ಗ್ರನ್ಥೇಷ್ವೇತಾದೃಶೇಷು ಯಾ ।
ಸಾ ಸ್ಯಾದ್ರಾಮಾಯಣೇ ಪ್ರೀತಿಃ ತತ್ತ್ವಸಙ್ಗ್ರಹನಾಮಕೇ ॥೧೨॥
ರಾಮಾಯಣಂ ತತ್ತ್ವಸಙ್ಗ್ರಹಾಖ್ಯಂ ತು ಪಠತೀಹ ಯಃ ।
ಧೂತಪಾಪೋ ರಾಮಭಕ್ತ್ಯಾ ಭುಕ್ತಿಂ ಮುಕ್ತಿಂ ಚ ಸೋಶ್ನುತೇ ॥೧೩॥
ಕ್ವ ರಾಮಚರಿತಾಮ್ಭೋಧಿಃ ಅನೌದ್ಧತ್ಯಂ ಮನ್ದಧೀಃ ಕ್ವ ಚ !
ತಥಾಪಿ ರಾಮಚನ್ದ್ರಸ್ಯ ಕೃಪಯಾ ಕಿಂ ನ ಸಾಧ್ಯತೇ ॥೧೪॥
ರಾಮಚನ್ದ್ರಪ್ರೇರಣಯಾ ವಿನತೀಕೃತಧೀರಹಮ್ ।
ಸಾಹಸಂ ಕರ್ತುಮುದ್ಯುಕ್ತಃ ಕ್ಷನ್ತವ್ಯಂ ತದ್ಧಿ ಸಾಧುಭಿಃ ॥೧೫॥
ಕದಾಚಿತ್ ಗೌತಮೀತೀರೇ ನೈಮಿಶೇ ಮುನಿಸಂಶ್ರಿತೇ ।
ಸಭಾಂ ಚಕ್ರುರ್ಮಹಾತ್ಮಾನೋ ಮುನಯೋ ಧರ್ಮವತ್ಸಲಾಃ ॥೧೬॥
ಮಾರ್ಕಣ್ಡೇಯೋಥ ಮೌದ್ಗಲ್ಯೋ ಜಾಬಾಲಿರ್ಗೌತಮಃ ಕಚಃ ।
ವಸಿಷ್ಠೋ ವಾಮದೇವಶ್ಚ ಭರದ್ವಾಜಶ್ಚ ಕಾಶ್ಯಪಃ ॥೧೭॥

ಪುರುಷಾರ್ಥಸುಧಾಸಿಂದು, ಇತಿಹಾಸಸಮುಚ್ಚಯ, ಪುರಾಣಸಾರ, ಹರಿಮಾಹಾತ್ಮ್ಯದರ್ಪಣ, ಇತ್ಯಾದಿ ಗ್ರಂಥಗಳು-ಅಯಾ ಗ್ರಂಥಕರ್ತೃಗಳಿಂದ ಸ್ವಕಪೋಲಕಲ್ಪಿತಗಳಲ್ಲದೆ-ಪ್ರಾಚೀನ ಗ್ರಂಥಸಂಗ್ರಹರೂಪವಾಗಿದ್ದರೂ, ಗುಣೈಕಪಕ್ಷಪಾತಿಗಳಾದ ಮನುಷ್ಯರಿಂಗೆ ಅವುಗಳಲ್ಲಿ ಹೇಗೆ ಪ್ರೀತಿಯಿರುವುದೋ,-ಅದರಂತೆಯೇ ಈ ತತ್ವಸಂಗ್ರಹನಾಮಕವಾದ ರಾಮಾಯಣದಲ್ಲಿ ಗುಣೈಕಪಕ್ಷಪಾತಿಗಳು ಪ್ರೀತಿಯಿಡಬೇಕೆಂದು ಬೇಡುವೆನು ॥೧೧-೧೨॥

ಈ ತತ್ವಸಂಗ್ರಹಾಖ್ಯವಾದ ರಾಮಾಯಣವನ್ನು ಯಾವನು ಪಠಿಸುವನೋ, ಅವನು ವಿಶೇಷವಾಗಿ ರಾಮಭಕ್ತಿಯುಳ್ಳವನಾಗಿ, ಸಕಲ ಪಾಪಗಳನ್ನೂ ಕಳೆದುಕೊಂಡು, ಭುಕ್ತಿ ಮುಕ್ತಿಗಳನ್ನು ಪಡೆಯುವನು ॥೧೩॥

ಶ್ರೀರಾಮಚರಿತ್ರೆಯೆಂಬ ದೊಡ್ಡ ಸಮುದ್ರವೆಲ್ಲಿ?—ವಿವೇಕಶೂನ್ಯನಾಗಿ ಮೂಢಬುದ್ಧಿಯಾಗಿರುವ ನಾನೆಲ್ಲಿ? ನನ್ನಂಥವನು ಈ ಕೆಲಸಕ್ಕೆ ಕೈಹಾಕುವುದು ಪರಿಹಾಸಾಸ್ಪದವೇ ಸರಿ. ಆದರೂ, ಶ್ರೀರಾಮಚಂದ್ರನ ಕೃಪೆಯಿಂದ ಏನೇನುತಾನೆ ಸಿದ್ಧಿಸಲಾರದು! ॥೧೪॥

ಮುಖ್ಯವಾಗಿ ನಾನು ಶ್ರೀರಾಮಚಂದ್ರನ ಪ್ರೇರಣೆಯಿಂದ ಪರವಶವಾದ ಬುದ್ಧಿಯುಳ್ಳವನಾಗಿ, ಈ ದೊಡ್ಡ ಸಾಹಸಕಾರ್ಯವನ್ನು ಮಾಡಲುದ್ಯುಕ್ತನಾಗಿರುವೆನು. ಮಹಾತ್ಮರಾದವರು ಇದನ್ನು ಕ್ಷಮಿಸಬೇಕು ॥೧೫॥

ಪೂರ್ವದಲ್ಲೊಂದುವೇಳೆ, ಗೌತಮಿನದೀತೀರದಲ್ಲಿ, ಮುನಿಗಳಿಂದ ಆಶ್ರಯಿಸಲ್ಪಟ್ಟರುವ ನೈಮಿಶಾರಣ್ಯದೊಳಗೆ, ಧರ್ಮವತ್ಸಲರಾದ ಮಹಾತ್ಮರಾದ ಅನೇಕ ಮಹರ್ಷಿಗಳು ಒಂದು ದೊಡ್ಡ ಸಭೆಯನ್ನು ಮಾಡಿದರು ॥೧೬॥

ಆ ಸಭೆಯಲ್ಲಿ, ಮಾರ್ಕಂಡೇಯ ಮೌದ್ಗಲ್ಯ ಜಾಬಾಲಿ ಗೌತಮ ಕಚ ವಸಿಷ್ಠ ವಾಮದೇವ ಭರದ್ವಾಜ ಕಾಶ್ಯಪ ಪುಲಸ್ತ್ಯ ಗಾಲವ ಅತ್ರಿ ಶತಾನಂದ ಕೌಶಿಕ ಅಂಗಿರ ಪುಲಹ ದಕ್ಷ ನಾರದ

ಪುಲಸ್ತ್ಯೋ ಗಾಲವೋತ್ರಿಶ್ಚ ಶತಾನನ್ದಶ್ಚ ಕೌಶಿಕಃ ।
ಅಙ್ಗಿರಾಃ ಪುಲಹೋ ದಕ್ಷೋ ನಾರದೋ ಭೃಗುಭಾರ್ಗವೌ ॥೮೪॥
ಶೌನಕೋ ವ್ಯಾಸಶಿಷ್ಯಶ್ಚ ಕಣ್ವೋ ಬೋಧಾಯನೋ ಗುರುಃ ।
ಅಗಸ್ತ್ಯಾದ್ಯಾಶ್ಚ ಮುನಯಃ ತೇಷಾಂ ಶಿಷ್ಯಪ್ರಶಿಷ್ಯಕಾಃ ॥೮೫॥
ವಿಷ್ಣುಪೂಜಾರತಾಃ ಸರ್ವೇ ವಿಷ್ಣುಧ್ಯಾನಪರಾಯಣಾಃ ।
ಸರ್ವೇ ಬ್ರಹ್ಮವಿದಾಂ ಶ್ರೇಷ್ಠಾಃ ಪರತತ್ತ್ವವಿಚಾರಕಾಃ ॥೮೬॥
ಸೂತಾನಿ ಕಮುಪಾಗಮ್ಯ ಪರಸ್ಪರಸಮಾಗಮೇ ।
ತತ್ತ್ವವಾದಾ ಬಹೂಂಶ್ಚಕ್ರುಃ ಸ್ವಸ್ವಬೋಧಾನುಸಾರತಃ ॥೮೭॥
ಏತಸ್ಮಿನ್ನೇವ ಸಮಯೇ ವಾಲ್ಮೀಕಿರ್ಮುನಿಸತ್ತಮಃ ।
ಸಶಿಷ್ಯ ಆಜಗಾಮಾಶು ರಾಮಧ್ಯಾನಪರಾಯಣಃ ॥೮೮॥
ರಾಮಂ ಸರ್ವಾತ್ಮಕಂ ಪಶ್ಯನ್ ರಾಮೇರಾಮೇತಿ ಕೀರ್ತಯನ್ ।
ರಾಮಾನನ್ದೇ ನಿಮಜ್ಜನ್ ವೈ ತದಾ ರಾಮಇವಾಬಭೌ ॥೮೯॥
ತಂ ದೃಷ್ಟ್ವಾ ಮುನಯಃ ಸರ್ವೇ ಪೂಜಾಂ ಕೃತ್ವಾ ಯಥಾವಿಧಿ ।
ತದ್ದರ್ಶನಾಜ್ಜಾತರಾಮಸ್ಮೃತಯೋನ್ಯೋನ್ಯಮಬ್ರುವನ್ ॥೯೪॥

ಮುನಯ ಊಚುಃ

ಅಹೋ ಸತ್ಸಙ್ಗಮಾಹಾತ್ಮ್ಯಂ ಯತೋ ವಾಲ್ಮೀಕಿದರ್ಶನಮ್ ।

ಭೃಗು ಭಾರ್ಗವ ವ್ಯಾಸಶಿಷ್ಯನಾದ ಶೌನಕ ಕಣ್ವ ಗುರುವಾದ ಬೋಧಾಯನ ಅಗಸ್ತ್ಯ— ಇತ್ಯಾದಿ ಮಹರ್ಷಿಗಳೂ, ಅವರ ಶಿಷ್ಯಪ್ರಶಿಷ್ಯರೂ ಸೇರಿದ್ದರು ॥೮೩-೮೯॥

ಅಲ್ಲಿ ಸೇರಿದ್ದ ಸಮಸ್ತರೂ, ವಿಷ್ಣುಪೂಜಾನಿರತರಾಗಿಯೂ ವಿಷ್ಣುಧ್ಯಾನಾಸಕ್ತರಾಗಿಯೂ ಬ್ರಹ್ಮಜ್ಞಾನಿಗಳಲ್ಲಿ ಅಗ್ರಗಣ್ಯರಾಗಿಯೂ ಉತ್ತಮವಾದ ತತ್ವವನ್ನು ವಿಚಾರಮಾಡತಕ್ಕವರಾಗಿಯೂ ಇದ್ದರು ॥೮೬॥

ಹೀಗೆ ಮಹರ್ಷಿಗಳು ಪರಸ್ಪರವಾಗಿ ಸೇರಿರುವ ಕಾಲದಲ್ಲಿ ಸೂತಮುನಿಯು ಹತ್ತಿರಕ್ಕೆ ಬಂದು ಕುಳಿತುಕೊಂಡು, ತಂತಮ್ಮ ಜ್ಞಾನವಿದ್ದಷ್ಟುಮಟ್ಟಿಗೆ, ನಾನಾವಿಧವಾಗಿ ತತ್ವವಿಚಾರ ಮಾಡುತಿದ್ದರು ॥೮೭॥

ಹೀಗಿರುವಾಗಲೇ, ಮಹರ್ಷಿಶ್ರೇಷ್ಠನಾದ ವಾಲ್ಮೀಕಿಯು, ಶಿಷ್ಯಪರಿವೃತನಾಗಿ ರಾಮ ಧ್ಯಾನಮಾಡುತ ತಟ್ಟನೆ ಅಲ್ಲಿಗೆ ಬಂದನು ॥೮೮॥

ಆಗ ಆ ವಾಲ್ಮೀಕಿಮುನಿಯು, ಸಕಲ ಪದಾರ್ಥವನ್ನೂ ಶ್ರೀರಾಮ ರೂಪವನ್ನಾಗಿ ನೋಡುತ, ರಾಮರಾಮ ಎಂದು ನಾಮಕೀರ್ತನೆ ಮಾಡುತ, ರಾಮಾನಂದದಲ್ಲಿ ಮುಣುಗಿದವನಾಗಿ, ಸ್ವಯಂ ಶ್ರೀರಾಮಚಂದ್ರನಂತೆ ಪ್ರಕಾಶಿಸುತಿದ್ದನು ॥೮೯॥

ಇಂತಹ ಆ ವಾಲ್ಮೀಕಿ ಮುನಿಯನ್ನು ಕಂಡು, ಅಲ್ಲಿರುವ ಋಷಿಗಳೆಲ್ಲರೂ ಅವನಿಗೆ ಯಥಾವಿಧಿಯಾಗಿ ಸತ್ಕಾರಮಾಡಿ, ಅವನನ್ನು ಕಂಡುದುದರಿಂದ ಶ್ರೀರಾಮನ ಸ್ಮರಣೆಯುಂಟಾದವರಾಗಿ, ಪರಸ್ಪರವಾಗಿ ಹೀಗೆ ಮಾತಾಡಿಕೊಂಡರು ॥೯೪॥

ಆಗ ಮುನಿಗಳು ಹೇಳಿದುದೇನೆಂದರೆ :—

ಅಹಹ! ಸತ್ಸಂಗದ ಮಹಿಮೆಯನ್ನು ಎಷ್ಟು ಹೇಳೋಣ! ಈ ಸತ್ಪುರುಷನಾದ ವಾಲ್ಮೀಕಿ

ರಾಮಸ್ಮೃತೌ ಕಾರಣಂ ನಃ ಸಙ್ಗಃ ಕಾರ್ಯೋ ಮುನೀಷಿಭಿಃ ॥೫೫॥
ಜನ್ಮಾನ್ತರತಪೋಲಭ್ಯಃ ಸತ್ಸಙ್ಗೋ ಹಿ ಮಹಾತ್ಮಭಿಃ ।
ಸತ್ಸಙ್ಗೋ ಯದಿ ಲಬ್ಧೋತ ಕ್ರಮಾತ್ ಪಾಪಕ್ಷಯೋ ಭವೇತ್ ॥೫೬॥
ಪಾಪಕ್ಷಯಾದ್ಭವೇದ್ಭಕ್ತಿಃ ಭಕ್ತ್ಯಾ ಜ್ಞಾನಂ ಪ್ರಜಾಯತೇ ।
ಜ್ಞಾನಾದ್ಬನ್ಧವಿನಿರ್ಮುಕ್ತಃ ಕೈವಲ್ಯಂ ಲಭತೇ ನರಃ ॥೫೭॥
ಸಙ್ಗಃ ಸರ್ವಾತ್ಮನಾ ತ್ಯಾಜ್ಯಃ ಸ ಚೇತ್ ತ್ಯಕ್ತುಂ ನ ಶಕ್ಯತೇ ।
ಸ ಸದ್ಭಿಃ ಸಹ ಕರ್ತವ್ಯಃ ಸನ್ತಃ ಸಙ್ಗಸ್ಯ ಭೇಷಜಮ್ ॥೫೮॥
ಮಹಾಪಾತಕಯುಕ್ತೋ ವಾ ಯುಕ್ತೋ ವಾಪ್ಯುಪಪಾತಕೈಃ ।
ಸತ್ಸಙ್ಗಾದ್ಭವತೇ ಪೂತಃ ಪಾಪನಿಷ್ಕೃತಿಕಾರಣಾತ್ ॥೫೯॥
ಶ್ರುತಿಸ್ಮೃತಿಪುರಾಣಜ್ಞಾಃ ಸದಾನುಷ್ಠಾನತತ್ಪರಾಃ ।
ಪರಲೋಕವಿಚಾರಸ್ಥಾಃ ತೇ ಸನ್ತಃ ಪರಿಕೀರ್ತಿತಾಃ ॥೬೦॥
ನಿರ್ಮತ್ಸರಾಃ ಸದಾಚಾರಾಃ ಧರ್ಮಿಷ್ಠಾಃ ಸತ್ಯವಾದಿನಃ ।
ತರ್ತುಕಾಮಾಭವಾಬ್ಧಿಂ ಸನ್ತಸ್ತೇ ಪರಿಕೀರ್ತಿತಾಃ ॥೬೧॥
ಜಿತಾರಿವರ್ಗಾನಿರ್ವಿಣ್ಣಾಃ ವಿರತಾಗಾಃ ಕೃಪಾಳವಃ ।
ಸ್ತ್ರೀಷು ಸ್ತ್ರೈಣೇಷ್ವನಾಸಕ್ತಾಃ ಸನ್ತಸ್ತೇ ಪರಿಕೀರ್ತಿತಾಃ ॥೬೨॥

ಮುನಿಯು ದರ್ಶನವು, ನಮಗೆ ಈಗ ಶ್ರೀರಾಮಸ್ಮರಣೆಗೆ ಕಾರಣವಾಯ್ತಲ್ಲವೆ! ಅದುಕಾರಣ, ಪುರುಷನಾದವನು ಸರ್ವದಾ ಮಹಾತ್ಮರೊಡನೆ ಸಹವಾಸಮಾಡಬೇಕು ॥೫೫॥

ಮಹಾತ್ಮರಾದವರು, ಅನೇಕ ಪೂರ್ವಜನ್ಮ ತಪಸ್ಸುಗಳಿಂದ ಸತ್ಸಂಗವನ್ನು ಪಡೆಯುವರು. ಸತ್ಸಂಗವು ಲಬ್ಧವಾದರೆ, ಬಳಿಕ ಕ್ರಮವಾಗಿ ಪಾಪಕ್ಷಯವಾಗುವುದು ಪಾಪಕ್ಷಯವಾದ ಬಳಿಕ ಶ್ರೀರಾಮನಲ್ಲಿ ಭಕ್ತಿಯುದಯಿಸುವುದು. ಈ ಭಕ್ತಿಯಿಂದ ಜ್ಞಾನವು ಹುಟ್ಟುವುದು. ಜ್ಞಾನ ವುಂಟಾದಬಳಿಕ, ಪುರುಷನು ಬಂಧವಿಮುಕ್ತನಾಗಿ ಕೈವಲ್ಯವನ್ನು ಪಡೆಯುವನು ॥೫೬-೫೭॥

ಪುರುಷನಾದವನು, ಸುತರಾಂ ಸಂಗವನ್ನು ಬಿಟ್ಟುಬಿಡಬೇಕು. ಅದನ್ನು ಬಿಡುವುದು ಅಸಾಧ್ಯವಾದ ಪಕ್ಷದಲ್ಲಿ, ಆ ಸಂಗವನ್ನು ಸತ್ಪುರುಷರೊಡನೆ ಮಾಡಬೇಕು. ಈ ಸತ್ಪುರುಷರೇ, ಸಂಗಕ್ಕೆ ಪರಮೌಷಧವಾಗಿರುವವರು ॥೫೮॥

ಮಹಾಪಾತಕಯುಕ್ತನಾದವನಾಗಲಿ-ಉಪಪಾತಕಯುಕ್ತನಾದವನಾಗಲಿ ಪಾಪಪರಿಹಾರಕವಾದ ಸತ್ಸಂಗದಿಂದಲೇ ಪರಿಶುದ್ಧನಾಗುವನು ॥೫೯॥

ಸತ್ಪುರುಷರಾರೆಂದರೆ :—ಶ್ರುತಿಸ್ಮೃತಿಪುರಾಣಗಳನ್ನು ತಿಳಿದವರಾಗಿ-ಸರ್ವದಾ ಅನುಷ್ಠಾನಾಸಕ್ತರಾಗಿ-ಪರಲೋಕವಿಚಾರಮಾಡುತಿರುವವರೇ ಸತ್ಪುರುಷರೆಂದು ಹೇಳಲ್ಪಟ್ಟಿರುವರು ॥

ನಿರ್ಮತ್ಸರರಾಗಿ ಸದಾಚಾರಸಂಪನ್ನರಾಗಿ-ಧರ್ಮಿಷ್ಠರಾಗಿ-ಸತ್ಯವಾದಿಗಳಾಗಿ-ಈ ಸಂಸಾರ ಸಮುದ್ರವನ್ನು ದಾಟಲಪೇಕ್ಷಿಸತಕ್ಕವರೇ ಸತ್ಪುರುಷರೆನ್ನಿಸಿಕೊಳ್ಳುವರು ॥೬೧॥


ಅರಿಷಡ್ವರ್ಗಗಳನ್ನು ಗೆದ್ದವರಾಗಿ-ಸುಖದುಃಖಾದಿ ದ್ವಂದ್ವಹೀನರಾಗಿ-ಕೃಪಾಯುಕ್ತರಾಗಿ-ಸ್ತ್ರೀಯರಲ್ಲಿಯೂ ಸ್ತ್ರೀಜಿತರಲ್ಲಿಯೂ ಆಸಕ್ತಿಯಿಲ್ಲದಿರುವರೇ ಸತ್ಪುರುಷರು ॥೬೨॥

ನಿವೃತ್ತಿಧರ್ಮನಿರತಾಃ ವಿಷ್ಣುಭಕ್ತಾಜಿತೇನ್ದ್ರಿಯಾಃ ।
ನಿನ್ದಾಸ್ತುತಿಸಮಾದಕ್ಷಾಃ ತೇ ಸನ್ತಃ ಪರಿಕೀರ್ತಿತಾಃ ॥೪೩॥

ಏವಂಗುಣಯುತಾಃ ಸನ್ತಃ ಪರಾರ್ಥೈಕಪ್ರಯೋಜನಾಃ ।
ತೈಸ್ತು ಸಙ್ಗಃ ಸದಾ ಕಾರ್ಯೋ ಮನುಷ್ಯೈರ್ಜನ್ಮಭೀರುಭಿಃ ॥೪೪॥

ಏವಂ ವಾಲ್ಮೀಕಿಸಬಿಸ್ಸೀತ್ಥರಾಮಬೋಧಾಮಹಾತ್ಮನಾವಃ ।
ಸಙ್ಗಂ ಸ್ತುತ್ವಾ ರಾಮಭಕ್ತ್ಯೈ ಮುನಯಃ ಸೂತಮಬ್ರುವ ॥೪೫॥

ಇತಿ ಶ್ರೀನಾನಾಪುರಾಣಾಗಮಾದಿಸಿದ್ಧತತ್ತ್ವಸಙ್ಗ್ರಹಭೂತೇ ತತ್ತ್ವಸಙ್ಗ್ರಹ
ರಾಮಾಯಣೇ ಬಾಲಕಾಣ್ಡೇ ನಾನಾಮುನಿಸಮಾಗಮೋ ನಾಮ
ಪ್ರಥಮಃ ಸರ್ಗಃ.



ನಿವೃತ್ತಿಧರ್ಮ(ಮೋಕ್ಷಮಾರ್ಗ)ದಲ್ಲಿ ಆಸಕ್ತರಾಗಿ-ವಿಷ್ಣುಭಕ್ತಿಯುಳ್ಳವರಾಗಿ-ಜಿತೇಂದ್ರಿಯರಾಗಿ-ಪರರು ನಿಂದಿಸಿದರೂ ಸ್ತುತಿಸಿದರೂ ಸಮಾನವಾದ ಚಿತ್ತವೃತ್ತಿಯುಳ್ಳವರಾಗಿ-ಸಮರ್ಥರಾಗಿರುವವರೇ ಸತ್ಪುರುಷರೆಂದು ಹೇಳಿಕೊಳ್ಳುವರು ॥೪೩॥

ಇಂತಹ ಗುಣವುಳ್ಳ ಸತ್ಪುರುಷರು, ಪರಪ್ರಯೋಜನವೊಂದೇ ತಮಗೆ ಮುಖ್ಯಫಲವೆಂದು ತಿಳಿದುಕೊಂಡಿರುವರು. ಅದುಕಾರಣ, ಈ ಸಂಸಾರಮಾರ್ಗದಿಂದ ಹೆದರುವ ಮನುಷ್ಯರು, ಸತ್ಪುರುಷರೊಡನೆ ಸಂಗಮಾಡಬೇಕು ॥೪೪॥


ಹೀಗೆ ಶ್ರೀ ವಾಲ್ಮೀಕಿಮುನಿಯು ಸಹವಾಸದಿಂದ ರಾಮಸ್ಮೃತಿಯುಂಟಾದವರಾದ ಆ ಮಹರ್ಷಿಗಳು, ಮಹಾತ್ಮರ ಸಂಗಮಹಿಮೆಯನ್ನು ಸ್ತುತಿಸಿದವರಾಗಿ, ರಾಮಭಕ್ತಿಯುಕ್ತರಾಗಿ ಸೂತರನ್ನು ಕುರಿತು ಮಾತಾಡಲುಪಕ್ರಮಿಸಿದರು ॥೪೫॥

ಇದು ಶ್ರೀ ತತ್ವಸಂಗ್ರಹರಾಮಾಯಣದಲ್ಲಿ ಬಾಲಕಾಂಡದೊಳಗೆ ನಾನಾಮುನಿ
ಸಮಾಗಮವೆಂಬ ಮೊದಲನೆಯ ಸರ್ಗವು.



ಇಂತು ಶ್ರೀಮದಖಿಲ ಮಹೀಮಂಡಲ ಮಂಡನಾಯಮಾನ ಕರ್ಣಾಟಕ ಜನಪದಾಧೀಶ್ವರ
ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ ಸಿ ಎಸ್. ಐ. ಯವರ ಆಸ್ಥಾನ
ಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿ ವಿರಚಿತವಾದ "ತತ್ವಪ್ರಕಾಶ"
ವೆಂಬ ಶ್ರೀ ತತ್ವಸಂಗ್ರಹ ರಾಮಾಯಣದ ಟೀಕಿನೊಳಗೆ
ಬಾಲಕಾಂಡದ ಪ್ರಥಮ ಸರ್ಗವು.

ಅಥ ಬಾಲಕಾಣ್ಡೇ ದ್ವಿತೀಯಃ ಸರ್ಗಃ.



ಮುನಯಊಚುಃ.

ಸೂತಸೂತ ಮಹಾಭಾಗ ಪುರಾಣಾರ್ಥವಿಶಾರದ ।
ತ್ವಯಾ ಪ್ರೋಕ್ತಾಃ ಸಂಹಿತಾಶ್ಚ ಪುರಾಣಾನಿ ಚ ಭಾರತಮ್ ॥೧॥
ತೇಷು ಸರ್ವೇಷು ರಾಮಸ್ಯ ತತ್ತ್ವಂ ತು ವಿವಿಧಂ ಶ್ರುತಮ್ ।
ಕ್ವಚಿದ್ವಿಷ್ಣುಃ ಕ್ವಚಿದ್ರುದ್ರಃ ಕ್ವಚಿದ್ಬ್ರಹ್ಮೇತಿ ಗೀಯತೇ ॥೨॥
ಕ್ವಚಿನ್ಮೂರ್ತಿತ್ರಯಾತ್ಮಾಯಂ ಕ್ವಚಿದ್ಧರಿಹರಾತ್ಮಕಃ ।
ಕ್ವಚಿನ್ಮೂರ್ತಿತ್ರಯಾತೀತೋ ನಿರ್ಗುಣಃ ಕೇವಲೋಽವ್ಯಯಃ ॥೩॥
ಇತಿ ನಾನಾಪುರಾಣೇಷು ರಾಮತತ್ತ್ವಂ ತ್ವಯೋದಿತಮ್ ।
ವಿರುದ್ಧಮಿವ ತದ್ಭಾತಿ ನಾನೇವ ಪ್ರತಿಭಾದನಾತ್ ॥೪॥
ರಾಮಾಯಣೇ ಪುರಾಣೇಷು ಸಂಹಿತಾಸು ಚ ಭಾರತೇ ।
ವಿರೋಧಂ ದರ್ಶಯಿಷ್ಯಾವೋ ಯತೋ ನಃ ಸಂಶಯೋ ಭವೇತ್ ॥೫॥

ಬಾಲಕಾಂಡದಲ್ಲಿ ಎರಡನೆಯ ಸರ್ಗವು.



ಶೌನಕಾದಿಮುನಿಗಳು ಸೂತಮಹರ್ಷಿಯನ್ನು ಕುರಿತು ಹೇಳುವರು :—

ಸಕಲ ಪುರಾಣಗಳ ಅರ್ಥವನ್ನೂ ಸ್ಪಷ್ಟವಾಗಿ ತಿಳಿದಿರುವ ಮಹಾತ್ಮರಾದ ಸೂತರೆ! ನೀವು ನಮಗೆ ಅನೇಕ ಸಂಹಿತೆಗಳನ್ನೂ ಪುರಾಣಗಳನ್ನೂ ಭಾರತವನ್ನೂ ಹೇಳಿರುವಿರಿ ॥೧॥

ಅವುಗಳಲ್ಲೆಲ್ಲ ಶ್ರೀರಾಮನ ತತ್ವವು ನಾನಾವಿಧವಾಗಿ ಕೇಳಲ್ಪಟ್ಟಿರುವುದು. ಶ್ರೀರಾಮನು—ಕೆಲವು ಸ್ಥಳದಲ್ಲಿ ವಿಷ್ಣುವೆಂದೂ, ಕೆಲವುಕಡೆ ರುದ್ರನೆಂದೂ, ಮತ್ತೆ ಕೆಲವುಕಡೆ ಬ್ರಹ್ಮನೆಂದೂ ಹೇಳಲ್ಪಟ್ಟಿರುವನು ॥೨॥

ಮತ್ತೆ ಕೆಲವುಕಡೆ ಇವನು ತ್ರಿಮೂರ್ತ್ಯಾತ್ಮಕನೆಂದೂ, ಕೆಲವು ಸ್ಥಳದಲ್ಲಿ ಹರಿಹರಾತ್ಮಕನೆಂದೂ, ಇನ್ನು ಕೆಲವೆಡೆಯಲ್ಲಿ ಇವನು ಮೂರ್ತಿತ್ರಯಾತೀತನಾಗಿ ಕೇವಲನಾಗಿ ನಿರ್ಗುಣನಾಗಿ ಅವ್ಯಯನಾಗಿರುವ ಪರಮಾತ್ಮನೆಂದೂ ಹೇಳಲ್ಪಟ್ಟಿರುವನು ॥೩॥

ಹೀಗೆ ನಾನಾಪುರಾಣಗಳಲ್ಲಿ ನಾನಾವಿಧವಾಗಿ ರಾಮತತ್ವವನ್ನು ತಾವು ಅಪ್ಪಣೆಕೊಟ್ಟಿರುವಿರಿ. ಹೀಗೆ ಬಗೆಬಗೆಯಾಗಿ ಹೇಳಿರುವುದರಿಂದ, ಅದು ಪರಸ್ಪರವಿರುದ್ಧವಾಗಿರುವುದೆಂದು ನಮಗೆ ತೋರುವುದು ॥೪॥

ಈಗ, ರಾಮಾಯಣದಲ್ಲಿಯೂ ಪುರಾಣಗಳಲ್ಲಿಯೂ ಸಂಹಿತೆಗಳಲ್ಲಿಯೂ ಭಾರತದಲ್ಲಿಯೂ ಇರುವ ವಿರೋಧವನ್ನು ತಮಗೆ ತೋರಿಸುವೆವು. ಇದರಿಂದಲೇ ನಮಗೆ ಸಂಶಯವುಂಟಾಗಿರುವುದು ॥೫॥

ತತ್ರ ರಾಮಾಯಣೇ ದೇವಾಃ ವಿಷ್ಣುಮೇವಂ ಬಭಾಷಿರೇ ।
ತ್ವಾಂ ನಿಯೋಕ್ಷ್ಯಾಮಹೇ ವಿಷ್ಣೋ ಲೋಕಾನಾಂ ಹಿತಕಾಮ್ಯಯಾ ॥೬॥
ರಾಜ್ಞೋ ದಶರಥಸ್ಯ ತ್ವಂ ಅಯೋಧ್ಯಾಧಿಪತೇಃ ಪ್ರಭೋಃ ।
ಧರ್ಮಜ್ಞಸ್ಯ ವದಾನ್ಯಸ್ಯ ಮಹರ್ಷಿಸಮತೇಜಸಃ ॥೭॥
ತಸ್ಯ ಭಾರ್ಯಾಸು ತಿಸೃಷು ಹ್ರೀಶ್ರೀಕೀರ್ತ್ಯುಪಮಾಸು ಚ ।
ವಿಷ್ಣೋ ಪುತ್ರತ್ವಮಾಗಚ್ಛ ಕೃತ್ವಾತ್ಮಾನಂ ಚತುರ್ವಿಧಮ್ ॥೮॥
ತತ್ರ ತ್ವಂ ಮಾನುಷೋ ಭೂತ್ವಾ ಪ್ರವೃದ್ಧಂ ಲೋಕಕಣ್ಟಕಮ್ ।
ಅವಧ್ಯಂ ದೈವತೈರ್ವಿಷ್ಣೋ ಸಮರೇ ಜಹಿ ರಾವಣಮ್ ॥೯॥
ಏವಮುಕ್ತಸ್ತು ದೇವೇಶೋ ವಿಷ್ಣುಸ್ತ್ರಿದಶಪುಙ್ಗವಃ ।
ಮಾನುಷೇ ಜನ್ತ್ವಯಾಮಾಸ ಜನ್ಮಭೂಮಿಮಿಹಾತ್ಮನಃ ॥೧೦॥
ತತಃ ಪದ್ಮಪಲಾಶಾಕ್ಷಃ ಕೃತ್ವಾತ್ಮಾನಂ ಚತುರ್ವಿಧಮ್ ।
ಪಿತರಂ ರೋಚಯಾಮಾಸ ತದಾ ದಶರಥಂ ನೃಪಮ್ ॥೧೧॥

ಇತಿ ಬಾಲಕಾಣ್ಡೇ.

ಸ ಹಿ ದೇವೈರುದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ ।
ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಃ ಸನಾತನಃ ॥೧೨॥

ಇತ್ಯಯೋಧ್ಯಾಕಾಣ್ಡೇ.

ಅವುಗಳೊಳಗೆ ರಾಮಾಯಣದಲ್ಲಿರುವ ವಿರೋಧವನ್ನು ಮೊದಲು ತೋರಿಸುವೆವು. ಅದರಲ್ಲಿ ಬಾಲಕಾಂಡದೊಳಗೆ ದೇವತೆಗಳು ವಿಷ್ಣುವನ್ನು ಕುರಿತು ಹೀಗೆ ಹೇಳಿರುವರು :—ಎಲೈ ಮಹಾವಿಷ್ಣುವೆ! ಲೋಕಗಳಿಗೆ ಹಿತವಾಗಬೇಕೆಂಬ ಇಚ್ಛೆಯಿಂದ ನಾವು ನಿನ್ನನ್ನು ಈ ಕೆಲಸದಲ್ಲಿ ನಿಯೋಗಿಸುವೆವು. ನೀನು, ಅಯೋಧ್ಯಾಧಿಪತಿಯಾದ ಧರ್ಮಜ್ಞನಾದ ದಾತೃವಾದ ಮಹರ್ಷಿಸಮಾನನಾದ ದಶರಥರಾಜನಿಗೆ, ಹ್ರೀ (ಲಜ್ಜೆ) ಶ್ರೀ ಕೀರ್ತ್ಯುಪಮರಾದ ಅವನ ಮೂರು ಮಂದಿ ಪತ್ನಿಯರಲ್ಲಿ, ನಿನ್ನ ಆತ್ಮವನ್ನು ನಾಲ್ಕುಭಾಗ ಮಾಡಿಕೊಂಡು ಪುತ್ರನಾಗಿ ಜನಿಸು. ಅಲ್ಲಿ ನೀನು ಮನುಷ್ಯನಾಗಿ, ಅತ್ಯುದ್ಧತನಾಗಿ ಲೋಕಕಂಟಕನಾಗಿ ಇತರ ದೇವತೆಗಳಿಗೆ ಅವಧ್ಯನಾಗಿರುವ ರಾವಣನನ್ನು ಯುದ್ಧದಲ್ಲಿ ಸಂಹರಿಸು.—ಎಂದು ದೇವತೆಗಳು ಹೇಳಿದರು. ಹೀಗೆ ಅವರಿಂದ ಹೇಳಲ್ಪಟ್ಟು ದೇವದೇವೇಶ್ವರನಾದ ಶ್ರೀಮನ್ಮಹಾವಿಷ್ಣುವು, ಈ ಮನುಷ್ಯಲೋಕದಲ್ಲಿ ತನಗೆ ಜನ್ಮಭೂಮಿಯನ್ನು ಪರ್ಯಾಲೋಚಿಸಿದನು. ಬಳಿಕ ಆ ಪುಂಡರೀಕಾಕ್ಷನು, ತನ್ನನ್ನು ನಾಲ್ಕು ವಿಧವಾಗಿ ಮಾಡ್ಡಿಕೊಂಡು, ಆಗ ದಶರಥರಾಜನು ತನಗೆ ತಂದೆಯಾಗಿರಲೆಂದಪೇಕ್ಷಿಸಿದನು ॥೬-೧೧॥

ಹೀಗೆಂದು ಬಾಲಕಾಂಡದಲ್ಲಿರುವುದು.

ಉದ್ಧತನಾದ ರಾವಣನ ವಧೆಯನ್ನು ಅಪೇಕ್ಷಿಸುವ ದೇವತೆಗಳಿಂದ ಪ್ರಾರ್ಥಿತನಾದ ಸನಾತನ (ಶಾಶ್ವತ) ನಾದ ಶ್ರೀಮನ್ಮಹಾವಿಷ್ಣುವು, ಮನುಷ್ಯಲೋಕದಲ್ಲಿ ಆ ಶ್ರೀರಾಮರೂಪದಿಂದ ಅವತರಿಸಿರುವನು ॥೧೨॥

ಹೀಗೆಂದು ಅಯೋಧ್ಯಾಕಾಂಡದಲ್ಲಿರುವುದು.

ಸೀತಾ ಲಕ್ಷ್ಮೀರ್ಭವಾ ವಿಷ್ಣುಃ ದೇವಃ ಕೃಷ್ಣಃ ಪ್ರಜಾಪತಿಃ ।
ವಧಾರ್ಥಂ ರಾವಣಸ್ಯೇಹ ಪ್ರವಿಷ್ಟೋ ಮಾನುಷೀಂ ತನುಮ್ ॥೧೩॥

ಇತಿ ಯುದ್ಧಕಾಂಡೇ.

ಪಿತಾಮಹವಚಃ ಶ್ರುತ್ವಾ ವಿನಿಶ್ಚಿತ್ಯ ಮಹಾಮತಿಃ ।
ವಿವೇಶ ವೈಷ್ಣವಂ ತೇಜಃ ಸಶರೀರಃ ಸಹಾಸುಜಃ ॥೧೪॥

ಇತ್ಯುತ್ತರಕಾಂಡೇ.

ಪಾದ್ಮೇ ತು ದೇವಾ೯ ಪ್ರತಿ ವಿಷ್ಣುವಚನಮ್.

ಮಾಭೈಷ್ಟೇತಿ ಸುರಾ೯ ಪ್ರಾಹ ದತ್ವಾ ಚಾಭಯದಕ್ಷಿಣಾಮ್ ।
ಪುತ್ರೋ ದಶರಥಸ್ಯಾಹಂ ಭವಿಷ್ಯಾಮಿ ಭವತ್ಕೃತೇ ॥೧೫॥
ತತ್ರೈವ ಸ್ತೋತ್ರಸಮಯೇ ರಾಮಂ ಪ್ರತಿ ಶಿವೋಬ್ರವೀತ್ ।
ತ್ವಂ ಹಿ ನಾರಾಯಣಃ ಶ್ರೀಮಾ೯ ಸೀತಾ ಲಕ್ಷ್ಮೀಃ ಸನಾತನೀ ।
ಮಾತಾ ಸರ್ವಸ್ಯ ವೈದೇಹೀ ಪಿತಾ ತ್ವಂ ರಘುನಂದನ ॥೧೬॥
ಪಾದ್ಮೋಕ್ತ್ಯೈವಂ ಹರೀರಾಮಃ ಶ್ರೀಮದ್ಭಾಗವತೇ ತಥಾ ।
ತಸ್ಯಾಪಿ ಭಗವಾನೇಷಃ ಸಾಕ್ಷಾದ್ಬ್ರಹ್ಮಮಯೋ ಹರಿಃ ॥೧೭॥

ಸೀತೆಯೇ ಸಾಕ್ಷಾಲ್ಲಕ್ಷ್ಮಿಯು ; ನೀನು ಸಕಲ ಲೋಕಗಳಿಗೂ ಸೃಷ್ಟಿಸ್ಥಿತಿಲಯಗಳನ್ನುಂಟು ಮಾಡುವ ಸಾಕ್ಷಾದ್ವಿಷ್ಣುವು. ರಾವಣನ ವಧೆಗೋಸ್ಕರವಾಗಿ ಈ ಲೋಕದಲ್ಲಿ ಮನುಷ್ಯದೇಹವನ್ನು ಪ್ರವೇಶಿಸಿರುವೆ ॥೧೩॥

ಹೀಗೆ ಯುದ್ಧಕಾಂಡದಲ್ಲಿರುವುದು.

ಪದ್ಮಪುರಾಣದಲ್ಲಿಯಾದರೋ, ದೇವತೆಗಳನ್ನು ಕುರಿತು ವಿಷ್ಣು ಹೇಳಿದ ಮಾತು ಈರೀತಿಯಾಗಿರುವುದು :—

ನೀವು ಹೆದರಬೇಡಿರೆಂದು ಅಭಯಪ್ರದಾನ ಮಾಡಿ, ದೇವತೆಗಳನ್ನು ಕುರಿತು ಮಹಾವಿಷ್ಣು ವೀರೀತಿಯಾಗಿ ಹೇಳಿರುವನು—ನಾನು ನಿಮಗೋಸ್ಕರವಾಗಿ ದಶರಥನ ಮಗನಾಗಿ ಅವತರಿಸುವೆನು ॥೧೪॥

ಆ ಪಾದ್ಮದಲ್ಲಿಯೇ, ಸ್ತೋತ್ರಕಾಲದಲ್ಲಿ ರಾಮನನ್ನು ಕುರಿತು ಶಿವನೀರೀತಿಯಾಗಿ ಹೇಳಿರುವನು :—ನೀನು ಶ್ರೀಮನ್ನಾರಾಯಣನು; ಸೀತೆಯು ಸನಾತನಳಾದ ಲಕ್ಷ್ಮಿಯು. ಹೇ ರಘುನಂದನ! ವಿದೇಹರಾಜಪುತ್ರಿಯಾದ ಈ ಸೀತೆಯು ಸಮಸ್ತಲೋಕಕ್ಕೂ ತಾಯಿಯಾದವಳು; ನೀನು ಜಗತ್ತಿಗೆಲ್ಲ ತಂದೆಯಾದವನು.—ಎಂದು ಹೇಳಿರುವನು ॥೧೫-೧೬॥

ಹೀಗೆ ಪದ್ಮಪುರಾಣವಚನದಿಂದ, ರಾಮನು ವಿಷ್ಣುವೆಂದು ಸ್ಪಷ್ಟವಾಯ್ತು. ಶ್ರೀಮದ್ಭಾಗವತದಲ್ಲಿಯೂ ಹಾಗೆಯೇ ಇರುವುದು. ಅಲ್ಲಿರುವುದೇನೆಂದರೆ :—(೧) ಎಲೈ ಮಹಾಭಾಗನೆ! ಆಗ ಆ ಸಾಕ್ಷಾತ್ಪರಬ್ರಹ್ಮರೂಪನಾದ ಮಹಾವಿಷ್ಣುವು, ದಶರಥನಿಗೆ ಅಂಶದಿಂದ ಪುತ್ರನಾಗಬೇಕೆಂದು ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ, ರಾಮ ಲಕ್ಷ್ಮಣ ಭರತ ಶತ್ರುಘ್ನ—ಎಂಬ ಹೆಸರಿನಿಂದ ಅವತರಿಸಿ, ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದನು. ಲಂಕೆಯೊಡನೆ ರಾವಣನನ್ನು

ಅಂಶಾಂಶೇನ ಮಹಾಭಾಗ ಪುತ್ರತ್ವಂ ಪ್ರಾರ್ಥಿತಃ ಸುರೈಃ ।
ರಾಮಲಕ್ಷ್ಮಣಶತ್ರುಘ್ನಭರತಾಇತಿ ಸಂಜ್ಞಯಾ ॥೧೯॥
ಸೋಽಬ್ಧಿಂ ಬಬನ್ಧ ದಶಕಣ್ಠಮರ್ದ ಸಲಜ್ಜಂ ಸೀತಾಪತಿರ್ಜಯತಿ ಲೋಕ
ಮಲಜ್ಜ್ಯಕೀರ್ತಿಃ ।
ಏವಂ ಭಾಗವತೋಕ್ತ್ಯಾ ಚ ರಾಮೋ ವಿಷ್ಣುರ್ನ ಸಂಶಯಃ ॥೧೯॥

ಕೌರ್ಮೇ.

ರಾಮೋ ದಾಶರಥಿರ್ವೀರೋ ಧರ್ಮಜ್ಞೋ ಲೋಕವಿಶ್ರುತಃ ।
ಭರತೋ ಲಕ್ಷ್ಮಣಶ್ಚೈವ ಶತ್ರುಘ್ನಶ್ಚ ಮಹಾಬಲಃ ॥೨೦॥
ಸರ್ವೇ ಶಕ್ರಸಮಾಯುದ್ಧೇ ವಿಷ್ಣುಭಕ್ತ್ಯಾ ಸಮನ್ವಿತಾಃ ।
ಜಜ್ಞೇ ರಾವಣನಾಶಾರ್ಥಂ ವಿಷ್ಣುರಂಶೇನ ವಿಶ್ವಕೃತ್ ॥೨೧॥
ಕೌರ್ಮೋಕ್ತವಚನೈರೇವಂ ಉಕ್ತ್ವಾ ರಾಮಸ್ಯ ವಿಷ್ಣುತಾ ।
ರಾಮಾಯಣೇಧ್ಯಾತ್ಮಸಂಜ್ಞೇಪ್ಯೇವಮಾಹ ವಿಧಿರ್ಹರಿಮ್ ॥೨೨॥
ರಾವಣೋ ನಾಮ ಪೌಲಸ್ತ್ಯತನಯೋ ದನುಜೋ ಮಹಾ ।
ರಾಕ್ಷಸಾನಾಮಧಿಪತಿಃ ಮದ್ದತ್ತವರದರ್ಪಿತಃ ॥೨೩॥
ಮಾನುಷೇಣ ಮೃತಿಸ್ತಸ್ಯ ಮಯಾ ಕಲ್ಯಾಣ ಕಲ್ಪಿತಾ ।

ಕೊಂದನು. ಇಂತಹ ಸೀತಾಪತಿಯಾದ ಶ್ರೀರಾಮನ ಕೀರ್ತಿಯನ್ನು ಯಾರೂ ಅತಿಕ್ರಮಿಸ ಲಾರರು. ಇಂತಹ ಶ್ರೀರಾಮಚಂದ್ರನು ಪ್ರಪಂಚದಲ್ಲೆಲ್ಲ ಸರ್ವೋತ್ಕೃಷ್ಟನಾಗಿರುವನು.— ಹೀಗೆ ಭಾಗವತವಚನದಿಂದಲೂ ಶ್ರೀರಾಮನು ವಿಷ್ಣುವೆಂದು ಸ್ಪಷ್ಟಪಡುವುದರಲ್ಲಿ ಸಂಶ ಯವಿಲ್ಲ ॥೧೭-೧೯॥

ಕೂರ್ಮಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿರುವುದು —

ದಶರಥಪುತ್ರನಾದ ಶ್ರೀರಾಮನು, ಮಹಾವೀರನೆಂದೂ ಧರ್ಮಜ್ಞನೆಂದೂ ಪ್ರಪಂಚ ದಲ್ಲೆಲ್ಲ ವಿಖ್ಯಾತನಾಗಿರುವನು. ಭರತನೂ ಲಕ್ಷ್ಮಣನೂ ಶತ್ರುಘ್ನನೂಕೂಡ ಮಹಾ ಬಲಶಾಲಿ ಗಳಾದವರು. ಇವರೆಲ್ಲರೂ, ಯುದ್ಧದಲ್ಲಿ ಮಹೇಂದ್ರನಿಗೆ ಸಮಾನರಾದವರು; ಕೇವಲ ವಿಷ್ಣು ಭಕ್ತಿಯುಕ್ತರಾದವರು. ಸಮಸ್ತಲೋಕಕರ್ತನಾದ ಶ್ರೀಮನ್ಮಹಾವಿಷ್ಣುವೇ, ರಾವಣನಾಶ ಕ್ಕೋಸ್ಕರ ತನ್ನ ಅಂಶದಿಂದ ಈ ರೀತಿಯಾಗಿ ಅವತರಿಸಿದನು ॥೨೦-೨೧॥

ಹೀಗೆ ಕೂರ್ಮಪುರಾಣದಲ್ಲಿರುವ ವಚನದಿಂದಲೂ ಶ್ರೀರಾಮನಿಗೆ ವಿಷ್ಣುತ್ವವುಕ್ತವಾಗಿರು ವುದು. ಅಧ್ಯಾತ್ಮರಾಮಾಯಣದಲ್ಲಿಯೂಕೂಡ, ಬ್ರಹ್ಮನು ವಿಷ್ಣುವನ್ನು ಕುರಿತು ಹೀಗೆ ಹೇಳಿರು ವನು—ಹೇ ವಿಷ್ಣೋ! ಪುಲಸ್ತ್ಯಬ್ರಹ್ಮಪುತ್ರನಾದ ವಿಶ್ರವಸ್ಸೆಂಬವನಿಗೆ ರಾವಣನೆಂದು ಪ್ರಸಿದ್ಧನಾದ ಮಹಾರಾಕ್ಷಸನು ಮಗನಾಗಿ ಹುಟ್ಟಿರುವನು. ಸಮಸ್ತರಾಕ್ಷಸರಿಗೂ ಒಡೆಯ ನಾದ ಇವನು ನನ್ನಿಂದ ವರವನ್ನು ಪಡೆದು ಕೇವಲ ಗರ್ವಿತನಾಗಿರುವನು. ಹೇ ಮಂಗಳಾತ್ಮಕ! ನಾನು ಅವನಿಗೆ ಮನುಷ್ಯರಿಂದ ಮರಣವಾಗಬೇಕೆಂದು ಕಲ್ಪಿಸಿರುವೆನು. ಆದುಕಾರಣ, ಹೇ ಪ್ರಭೋ! ನೀನು ಮನುಷ್ಯನಾಗಿ ಅವತರಿಸಿ, ಆ ದೇವಶತ್ರುವಾದ ರಾವಣನನ್ನು ಸಂಹರಿಸು.

ಅತಸ್ತ್ವಂ ಮಾನುಷೋ ಭೂತ್ವಾ ಜಹಿ ದೇವರಿಪುಂ ಪ್ರಭೋ ॥೨೪॥
ಬ್ರಹ್ಮಣ್ಯ ಲೋಕೋಪಕಾರಾಯ ಜನಿಷ್ಯಾಮಿ ರಘೋಃ ಕುಲೇ ।
ಇತ್ಯುಕ್ತ್ವಾನ್ತರ್ದಧೇ ವಿಷ್ಣುಃ ತಸ್ಮಾದ್ರಾಮೋ ಹರಿಃ ಸ್ಫುಟಮ್ ॥೨೫॥

ವಿಷ್ಣುಪುರಾಣೇ ತು :—

ದಶರಥಸ್ಯಾಪಿ ಭಗವಾನಬ್ಜನಾಭೋ ಜಗತ್ಪತ್ಯರ್ಥಂ ಆತ್ಮಾಂಶೇನ ರಾಮು
ಲಕ್ಷ್ಮಣಭರತಶತ್ರುಘ್ನರೂಪೇಣ ಚತುರ್ಧಾ ಪುತ್ರೋಯವಮಾಸೀತ್ ॥೨೬॥
ಏವಂ ವಿಷ್ಣುಪುರಾಣೋಕ್ತರೀತ್ಯಾಪಿ ಹರಿರೇವ ಸಃ ॥೨೭॥

ಧರ್ಮಖಂಡಪೂರ್ವಭಾಗೇ ಶ್ರೀಶಿವವಚನಮು :—

ತತೋ ಯಕ್ಷಾಃ ಸಗನ್ಧರ್ವಾಃ ಮುನಯಶ್ಚ ತಪೋಧನಾಃ ।
ಪ್ರಪನ್ನಾಃ ಶರಣಂ ದೇವಂ ಶಙ್ಖಚಕ್ರಧರಂ ಪ್ರಭುಮ್ ॥೨೮॥
ಹರಿಂ ನಾರಾಯಣಂ ವಿಷ್ಣುಂ ವಯಂ ದೇವಗಣೈಃ ಸಹ ।
ಸ್ತುತಿಭಿಃ ಸಂಸ್ತುತಸ್ತತ್ರ ಪ್ರಸನ್ನೋ ನೋ ಭವಿಷ್ಯತಿ ॥೨೯॥
ರಾಮೋ ದಾಶರಥಿರ್ಭೂತ್ವಾ ಸಾಕೇತನಗರೇ ಶುಭೇ ।
ಲಕ್ಷ್ಮಣೇನ ಸಹಾಯೇನ ಭರತೇನ ಯವೀಯಸಾ ॥೩೦॥

ಹೀಗೆಂದು ಬ್ರಹ್ಮನಿಂದ ಪ್ರಾರ್ಥಿತನಾದ ಶ್ರೀಮನ್ಮಹಾವಿಷ್ಣುವು–" ಎಲೈ ಬ್ರಹ್ಮನೆ! ಲೋಕೋಪಕಾರಾರ್ಥವಾಗಿ ನಾನು ರಘುಕುಲದಲ್ಲಿ ಜನಿಸುವೆನು " ಎಂದು ಹೇಳಿ ಅಂತರ್ಧಾನಹೊಂದಿದನು.—ಹೀಗೆಂದು ಅಧ್ಯಾತ್ಮರಾಮಾಯಣದಲ್ಲಿ ಹೇಳಲ್ಪಟ್ಟಿರುವುದರಿಂದ, ಶ್ರೀರಾಮನು ವಿಷ್ಣುವೆಂದು ಸ್ಫುಟವಾಗುವುದು ॥೨೨–೨೫॥

ವಿಷ್ಣುಪುರಾಣದಲ್ಲಿಯಾದರೋ —

ಆ ದಶರಥನಿಗೆ, ಭಗವಂತನಾದ ಮಹಾವಿಷ್ಣುವು, ಪ್ರಪಂಚರಕ್ಷಣಾರ್ಥವಾಗಿ, ತನ್ನ ಅಂಶದಿಂದ, ರಾಮ ಲಕ್ಷ್ಮಣ ಭರತ ಶತ್ರುಘ್ನ—ಎಂದು ನಾಲ್ಕು ಬಗೆಯಾಗಿ ಪುತ್ರನಾಗಿ ಅವತರಿಸಿದನು.—ಹೀಗೆ ವಿಷ್ಣುಪುರಾಣದಲ್ಲಿ ಹೇಳಿರುವಪ್ರಕ್ರಮದಿಂದಲೂ, ಆ ಶ್ರೀರಾಮನು ವಿಷ್ಣುವೇ ಸರಿ ॥೨೬-೨೭॥

ಧರ್ಮಖಂಡದ ಪೂರ್ವಭಾಗದಲ್ಲಿ, ಶ್ರೀ ಶಿವನು ಈ ರೀತಿಯಾಗಿ ಹೇಳಿರುವನು :—

ಬಳಿಕ, ಗಂಧರ್ವರೊಡಗೂಡಿದ ಯಕ್ಷರೂ, ತಪೋಧನರಾದ ಮುನಿಗಳೂ, ಸಮಸ್ತ ದೇವ ಸಮೂಹದೊಡಗೂಡಿದ ನಾವೂ ಕೂಡ, ಶಂಖಚಕ್ರಧರನಾಗಿಯೂ—ಸರ್ವಲೋಕ ಪ್ರಭುವಾಗಿಯೂ—ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಮುಖ್ಯಕರ್ತೃವಾಗಿಯೂ ಇರುವ ಶ್ರೀಮನ್ಮಹಾವಿಷ್ಣುವನ್ನು ಶರಣಹೊಕ್ಕೆವು. ಆಗ ನಮ್ಮಗಳ ಸ್ತೋತ್ರಗಳಿಂದ ಪ್ರಸನ್ನನಾಗಿ ಆ ಮಹಾವಿಷ್ಣುವು, ತನ್ನ ಸಹಾಯಾರ್ಥವಾಗಿ ಅವತರಿಸಿದ ಲಕ್ಷ್ಮಣ ಭರತರೆಂಬ ತಮ್ಮಂದಿರೊಡನೆ, ಅತಿ ಮಂಗಳಕರವಾದ ಅಯೋಧ್ಯಾನಗರದೊಳಗೆ, ದಶರಥನ ಮಗನಾದ ಶ್ರೀರಾಮನೆಂದು ಅವತರಿಸಿದನು.—ಎಂದು ಹೇಳಿರುವನು ॥೨೮-೩೦॥

ಅಗಸ್ತ್ಯಸಂಹಿತಾಯಾಮಗಸ್ತ್ಯವಚನಮ್ :—

ಕ್ಷೀರಾಬ್ಧೌ ದೇವದೇವೋಸೌ ಲಕ್ಷ್ಮ್ಯಾ ನಾರಾಯಣೋ ವಿಭುಃ ।
ಸಶೇಷಃ ಶಙ್ಖಚಕ್ರಾಭ್ಯಾಂ ದೇವೈರ್ಬ್ರಹ್ಮಾದಿಭಿಃ ಸಹ ॥೩೧॥
ತ್ರೇತಾಯುಗೇ ದಾಶರಥಿರ್ಭೂತ್ವಾ ನಾರಾಯಣೋ ಬಭೌ ;
ಶೇಷೋಭೂಲ್ಲಕ್ಷ್ಮಣೋ ಲಕ್ಷ್ಮೀಃ ಜಾನಕೀ ಶಙ್ಖಚಕ್ರಕೇ ॥೩೨॥
ಜಾತೌ ಭರತಶತ್ರುಘ್ನೌ ದೇವಾಃ ಸರ್ವೇಪಿ ವಾನರಾಃ ।
ಬಭೂವುರೇವಂ ಸರ್ವೇಪಿ ದೇವರ್ಷಿಭಯಶಾನ್ತಯೇ ॥೩೩॥
ತತ್ರ ನಾರಾಯಣೋ ದೇವಃ ಶ್ರೀರಾಮಇತಿ ವಿಶ್ರುತಃ ।
ಸರ್ವಲೋಕೋಪಕಾರಾಯ ಭೂವಮೌ ಸೋಯಮವಾತರತ್ ॥೩೪॥
ಅವತೀರ್ಣಸ್ಯಾಪಿ ತತ್ತ್ವಂ ನ ಜಾನನ್ತಿ ಯಥಾರ್ಥತಃ ।
ಅಗಸ್ತ್ಯಸಂಹಿತಾಪ್ರೋಕ್ತರೀತ್ಯೈವಂ ರಾಘವೋ ಹರಿಃ ॥೩೫॥

ಉಮಾಸಂಹಿತಾಯಾಂ ಶಿವಃ.

ಚಕ್ರಪಾಣಿರಭೂದ್ರಾಮಃ ಇನ್ದಿರಾ ಧರಣೀಸುತಾ ।
ಅನನ್ತೋ ಲಕ್ಷ್ಮಣೋ ಜಾತೋ ಭರತಶ್ಚ ಕ್ರಮೇವ ಹಿ ॥೩೬॥
ಶತ್ರುಘ್ನೋಭೂತ್ ಪಾಞ್ಚಜನ್ಯಃ ಇತ್ಯುಮಾಸಂಹಿತೋಕ್ತಿತಃ ।
ರಾಮೋ ವಿಷ್ಣುರಿವಾಭಾತಿ ಹ್ಯೇವಮನ್ಯತ್ರ ಭೂರಿಶಃ ॥೩೭॥

ಅಗಸ್ತ್ಯಸಂಹಿತೆಯಲ್ಲಿ ಅಗಸ್ತ್ಯರು ಈರೀತಿಯಾಗಿ ಹೇಳಿರುವರು :—

ಕ್ಷೀರಸಮುದ್ರದಲ್ಲಿ ಲಕ್ಷ್ಮೀದೇವಿಯೊಡನೆ ವಿಹರಿಸುತಿದ್ದ ದೇವದೇವನಾದ ಆ ಮಹಾ ವಿಷ್ಣುವು, ಆದಿಶೇಷನೊಡನೆಯೂ ಶಂಖಚಕ್ರಗಳೊಡನೆಯೂ ಬ್ರಹ್ಮಾದಿ ದೇವತೆಗಳೊಡನೆಯೂ ಕೂಡ, ತ್ರೇತಾಯುಗದಲ್ಲಿ ದಶರಥಪುತ್ರನಾಗಿ ಅವತರಿಸಿ ಪ್ರಕಾಶಿಸುತಿದ್ದನು. ಆದಿಶೇಷನು ಲಕ್ಷ್ಮಣನಾಗಿ ಹುಟ್ಟಿದನು ; ಮಹಾಲಕ್ಷ್ಮಿಯು ಸೀತೆಯಾಗಿ ಅವತರಿಸಿದಳು ; ಶಂಖಚಕ್ರಗಳು ಭರತಶತ್ರುಘ್ನರಾಗಿ ಹುಟ್ಟಿದುವು ; ಸಮಸ್ತರಾದ ದೇವತೆಗಳೂ ಕಪಿಗಳಾಗಿ ಜನಿಸಿದರು. ದೇವತೆಗಳಿಗೂ ಋಷಿಗಳಿಗೂ ಉಂಟಾಗಿದ್ದ ಭಯವು ಶಾಂತಿಪಡೆಯುವುದಕ್ಕಾಗಿ ಅವರೆಲ್ಲರೂ ಈರೀತಿಯಾದರು. ಹೀಗೆ ಶ್ರೀಮನ್ನಾರಾಯಣನು ಸರ್ವಲೋಕೋಪಕಾರಾರ್ಥವಾಗಿ ಭೂಮಿಯಲ್ಲಿ ಶ್ರೀರಾಮನೆಂದು ಪ್ರಥಿತನಾಗಿ ಅವತರಿಸಿದನು. ಹೀಗೆ ಅವತರಿಸಿದ್ದವನಾದರೂ, ಇವನ ತತ್ವವನ್ನು ಯಥಾವತ್ತಾಗಿ ಜನರು ಅರಿಯರು.—ಹೀಗೆಂದು ಅಗಸ್ತ್ಯಸಂಹಿತೆಯಲ್ಲಿ ಹೇಳಲ್ಪಟ್ಟಿರುವ ರೀತಿಯಾಗಿಯೂ ಶ್ರೀರಾಮನು ಹರಿಯೆಂದು ನಿಶ್ಚಯವಾಗುವುದು ॥೩೧-೩೫॥

ಉಮಾಸಂಹಿತೆಯಲ್ಲಿ ಶಿವನು ಹೀಗೆ ಹೇಳಿರುವನು :—

ವಿಷ್ಣುವು ರಾಮನಾಗಿಯೂ, ಲಕ್ಷ್ಮಿಯು ಸೀತೆಯಾಗಿಯೂ, ಆದಿಶೇಷನು ಲಕ್ಷ್ಮಣನಾಗಿಯೂ, ಚಕ್ರವು ಭರತನಾಗಿಯೂ, ಶಂಖವು ಶತ್ರುಘ್ನನಾಗಿಯೂ ಅವತರಿಸಿದರು.—ಹೀಗೆಂದು ಉಮಾಸಂಹಿತೆಯಲ್ಲಿ ಹೇಳಲ್ಪಟ್ಟಿರುವುದರಿಂದಲೂ, ಶ್ರೀರಾಮನು ವಿಷ್ಣುವೇಯೆಂದು ತೋರುವುದು. ಹೀಗೆಯೇ ಇನ್ನೂ ಇತರವಾದ ಅನೇಕ ಗ್ರಂಥಗಳಲ್ಲಿಯೂ ಉಕ್ತವಾಗಿರುವುದು ॥

ಹಿರಣ್ಯಗರ್ಭಸಂಹಿತಾಯಾಮ್.

ನಾರಾಯಣಂ ಜಗನ್ನಾಥಂ ಅಭಿರಾಮಂ ಜಗತ್ಪತಿಮ್ ।
ಕವಿಂ ಪುರಾಣಂ ವಾಗೀಶಂ ರಾಮಂ ದಶರಥಾತ್ಮಜಮ್ ॥೩೪॥
ಪಾರ್ವತೀವರದಂ ವಾಚ್ಯಂ ಶ್ರೀಪತಿಂ ಪಕ್ಷಿವಾಹನಮ್ ।
ಶ್ರೀಶಾರ್ಙ್ಗಧಾರಿಣಂ ರಾಮಂ ಚಿನ್ಮಯಾನನ್ದವಿಗ್ರಹಮ್ ॥೩೫॥
ಏವಂ ಹಿರಣ್ಯಗರ್ಭಾಖ್ಯಸಂಹಿತೋಕ್ತ್ಯಾ ಚ ರಾಘವಮ್ ।
ಶ್ರೀವಿಷ್ಣುಮಾಹ ದೇವರ್ಷಿಃ ಧರ್ಮರಾಜಾಯ ಧೀಮತೇ ॥೩೬॥

ರಾಮತಾಪಿನ್ಯಾಮ್.

ಜನ್ಮಯೇಸ್ಮಿನ್ ಮಹಾವಿಷ್ಣೋ ಜಾತೇ ದಾಶರಥೌ ಹರೌ ।
ರಘೋಃ ಕುಲೇಖಿಲಂ ರಾತಿ ರಾಜತೇ ಯೋ ಮಹೀಸ್ಥಿತಃ ॥೩೧॥
ಸ ರಾಮಇತಿ ಲೋಕೇಷು ವಿದ್ವದ್ಭಿಃ ಪ್ರಕಟೀಕೃತಃ ।
ತಾಪಿನೀಶ್ರುತಿತೋಪ್ಯೇವಂ ರಾಮೇ ವಿಷ್ಣುತ್ವಧೀಃ ಸತಾಮ್ ॥೩೨॥

ಭಾರತೇ.

ವಿಷ್ಣೋರ್ಭಕ್ತಾನಾಂ ಸ್ವಭಕ್ತಾನಾಂ ಅಪವರ್ಗಪ್ರದೋ ಹರಿಃ ।
ಸಮ್ಪ್ರಾರ್ಥಿತೋ ದೇವಗಣೈಃ ಭೂತ್ವಾ ರಘುಕುಲೋತ್ತಮಃ ॥೩೩॥

ಹಿರಣ್ಯಗರ್ಭಸಂಹಿತೆಯಲ್ಲಿ :—

ಕ್ಷೀರಾಬ್ಧಿಶಾಯಿ ಜಗನ್ನಾಥ ಲೋಕಾಭಿರಾಮ ಜಗದ್ರಕ್ಷಕ ಆದಿಕವಿ ವಾಗೀಶ ರಾಮ ದಶರಥಪುತ್ರ ಪಾರ್ವತೀವರದ ಸರ್ವಶಬ್ದವಾಚ್ಯ ಶ್ರೀಪತಿ ಗರುಡವಾಹನ ಶಾರ್ಙ್ಗಧರ ಚಿನ್ಮಯಾನಂದವಿಗ್ರಹ— ಇತ್ಯಾದಿ ರೀತಿಯಾಗಿ, ಹಿರಣ್ಯಗರ್ಭಸಂಹಿತೆಯಲ್ಲಿ, ಬುದ್ಧಿಶಾಲಿಯಾದ ಧರ್ಮರಾಜನಿಗೆ, ದೇವಮುನಿಯು, ಶ್ರೀರಾಮನು ವಿಷ್ಣುವೆಂದು ಹೇಳಿರುವನು ॥೩೪—೩೬॥

ರಾಮತಾಪಿನಿಯಲ್ಲಿ :—


ಚಿನ್ಮಯಸ್ವರೂಪನಾದ ಮಹಾವಿಷ್ಣುವು ರಘುವಂಶದಲ್ಲಿ ದಶರಥಪುತ್ರನಾಗಿ ಹುಟ್ಟಿದಾಗ, ಸಮಸ್ತವನ್ನೂ 'ರಾತಿ' ಎಂದರೆ ಸ್ವೀಕರಿಸುವುದರಿಂದಲೂ, ಭೂವಿಯಲ್ಲಿದ್ದುಗೊಂಡು ರಾಜಿಸುವನಾದುದರಿಂದಲೂ, ಅವನು ರಾಮನೆಂದು ಲೋಕದಲ್ಲಿ ವಿದ್ವಾಂಸರಿಂದ ಪ್ರಕಟಪಡಿಸಲ್ಪಟ್ಟನು.— ಹೀಗೆಂದು ರಾಮತಾಪಿನಿಯಲ್ಲಿ ಹೇಳಲ್ಪಟ್ಟಿರುವುದರಿಂದಲೂ ಪ್ರಾಜ್ಞರಿಗೆ ರಾಮನಲ್ಲಿ ವಿಷ್ಣುತ್ವ ಬುದ್ಧಿ ಸ್ಥಿರಪಡುವುದು ॥೪೧—೪೨॥

ಭಾರತದಲ್ಲಿ :—

ತನ್ನ ಭಕ್ತರಿಗೆ ಮೋಕ್ಷಪ್ರದನಾದ ಶ್ರೀ ಮಹಾವಿಷ್ಣುವು, ದೇವಸಮೂಹಗಳಿಂದ ಪ್ರಾರ್ಥಿಸಲ್ಪಟ್ಟು, ರಘುಕುಲಶ್ರೇಷ್ಠನಾಗಿ ಅವತರಿಸಿ, ಧರ್ಮಮಾರ್ಗದಿಂದ ರಾವಣನನ್ನು ಕೊಂದು, ಅಯೋಧ್ಯಾಪಟ್ಟಣವನ್ನು ಹೊಂದಿದನು. ಹೀಗೆ ಆ ಭಗವಂತನಾದ ಶ್ರೀರಾಮಚಂದ್ರನು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಸುಗ್ರೀವಾದಿಗಳಾದ ಮಹಾವೀರರಾದ ಕಪಿಗಳೊಡ

ವಿನಿಹತ್ಯ ದಶಗ್ರೀವಂ ಆಯೋಧ್ಯಾಂ ಪ್ರಾಪ ಧರ್ಮವಿತ್ ।
ಶ್ರೀರಾಮಚಂದ್ರೋ ಭಗವಾ ನೀತಯಾ ಲಕ್ಷ್ಮಣೇನ ಚ ॥೪೪॥
ಸುಗ್ರೀವಪ್ರಮುಖೈರ್ವೀರೈಃ ವಾನರೈಃ ಸ್ವಪುರಂ ಯಯೌ ।
ಏವಮಾಶ್ಚರ್ಯಪರ್ವೋಕ್ತ್ಯಾ ರಾಮೋ ನಾರಾಯಣಃ ಸ್ವಯಮ್ ॥೪೫॥
ಸಭಾದ್ರೋಣಾರಣ್ಯಸಂಜ್ಞಪರ್ವಸ್ವಪ್ಯುಕ್ತಮಜ್ಜಸಾ ।
ರಾಘವೋ ವಿಷ್ಣುರಿತ್ಯೇವ ಪ್ರೋಕ್ತಂ ಸೂತ ಮಹಾತ್ಮಭಿಃ ॥೪೬॥
ಇತ್ಯಾದ್ಯನೇಕಶಾಸ್ತ್ರೇಷು ವಿಷ್ಣುರಿತ್ಯೇವ ರಾಘವಃ ।
ವರ್ಣಿತೋ ಮುನಿಭಿಸ್ತದ್ವತ್ ಶಿವಇತ್ಯಪಿ ವರ್ಣ್ಯತೇ ॥೪೭॥

ಇತಿ ಬಾಲಕಾಂಡೇ ರಾಮಸ್ಯ ವಿಷ್ಣುತ್ವಪ್ರತಿಪಾದನಂ
ನಾಮ ದ್ವಿತೀಯಃ ಸರ್ಗಃ.



ಸೀಯೂ ತನ್ನ ಪಟ್ಟಣಕ್ಕೆ ಬಂದನು.—ಹೀಗೆಂದು ಆಶ್ಚರ್ಯಪರ್ವದಲ್ಲಿ ಹೇಳಿರುವಕಾರಣ, ರಾಮನು ಸಾಕ್ಷಾನ್ನಾರಾಯಣನೇ ಸರಿ. ಎಲೈ ಸೂತರೆ! ಸಭಾಪರ್ವ ದ್ರೋಣಪರ್ವ ಅರಣ್ಯಪರ್ವಗಳಲ್ಲಿಯೂ ಕೂಡ, ಶ್ರೀರಾಮನು ವಿಷ್ಣುವೆಂಬುದಾಗಿಯೇ ಮಹಾತ್ಮರಿಂದ ಹೇಳಲ್ಪಟ್ಟಿರುವುದು ॥

ಎಲೈ ಮಹರ್ಷಿಯೆ! ಇದು ಮೊದಲಾದ ಇನ್ನೂ ಅನೇಕ ಶಾಸ್ತ್ರಗಳಲ್ಲಿ, ಅನೇಕ ಮಹರ್ಷಿಗಳಿಂದ ಶ್ರೀರಾಮನು ವಿಷ್ಣುವೆಂದೇ ಹೇಳಲ್ಪಟ್ಟಿರುವನು. ಅದರಂತೆಯೇ ಶಿವನೆಂಬುದಾಗಿಯೂ ವರ್ಣಿಸಲ್ಪಟ್ಟಿರುವನೆಂಬುದನ್ನು ತಮಗೆ ತೋರಿಸಿಕೊಡುವೆವು ॥೪೭॥

ಇದು ಬಾಲಕಾಂಡದಲ್ಲಿ ಶ್ರೀರಾಮನು ವಿಷ್ಣುವೆಂಬುದನ್ನು ಸಮರ್ಥಿಸುವಿಕೆಯೆಂಬ
ಎರಡನೆಯ ಸರ್ಗವು.



ಅಥ ಬಾಲಕಾಣ್ಡೇ ತೃತೀಯಃ ಸರ್ಗಃ.

ಉತ್ತರಧರ್ಮಕಾಣ್ಡೇ ಶಿವಃ.

ಅಹಂ ಮಾನುಷರೂಪೇಣ ರಾಮೋ ಭೂತ್ವಾ ಹರಾಮಿ ತವ್ ।
ರಾಮೋ ದಾಶರಥಿಶ್ಚಾಹಂ ಕೌಸಲ್ಯಾನನ್ದವರ್ಧನಃ ॥೧॥
ಶತ್ರುಘ್ನಭರತಾಭ್ಯಾಂ ಚ ಲಕ್ಷ್ಮಣೇನ ಮಹಾತ್ಮನಾ ।
ದೇವತಾಭ್ಯರ್ಥಿತಃ ಸತ್ಯಂ ಅಯೋಧ್ಯಾಯಾಂ ಭವಾಮ್ಯಹಮ್ ॥೨॥
ಲಕ್ಷ್ಮಣೋಪಿ ಹರೇಃ ಸಾಕ್ಷಾತ್ ಸೇವಾಂ ಮಮ ಕರಿಷ್ಯತಿ ।
ರಾಮೋ ಮಮಾಂಶಸಮ್ಭೂತಃ ಸೀತಾ ಚ ಗಿರಿಜಾಂಶಜಾ ॥೩॥
ಇತ್ಯಾದಿಧರ್ಮಕಾಣ್ಡೋಕ್ತರೀತ್ಯಾ ರಾಮೇ ಶಿವತ್ವಧೀಃ ।
ಏವಂ ಕಾವೇರಜಾಖಣ್ಡೇ ಉಕ್ತಾ ರಾಮಸ್ಯ ಕಮ್ಬುತಾ ॥೪॥

ಶಿವಉವಾಚ.

ಅಹಂ ದಾಶರಥೀರಾಮೋ ಭೂತ್ವಾ ವೈ ದಣ್ಡಕಾವನೇ ।
ಅಚಿರೇಣೈವ ಕಾಲೇನ ಹತ್ವಾ ವೋಕ್ಷಂ ದದಾಮಿ ವಃ ॥೫॥

ಬಾಲಕಾಂಡದಲ್ಲಿ ಮೂರನೆಯ ಸರ್ಗವು.

ಉತ್ತರಧರ್ಮಕಾಂಡದಲ್ಲಿ ಶ್ರೀಶಿವವಚನವು :—

ನಾನು ಮನುಷ್ಯರೂಪದಿಂದ ರಾಮನಾಗಿ ಹುಟ್ಟಿ ಅವನನ್ನು (ರಾವಣನನ್ನು) ಕೊಲ್ಲುವೆನು. ನಾನು ದಶರಥನಿಗೆ ಮಗನಾಗಿಯೂ ಕೌಸಲ್ಯೆಗೆ ಆನಂದವನ್ನುಂಟುಮಾಡುವ ಪುತ್ರನಾಗಿಯೂ ಹುಟ್ಟಿ, ದೇವತೆಗಳಿಂದ ವ್ಯಾರ್ಥಿಸಲ್ಪಟ್ಟು ಶತ್ರುಘ್ನ ಭರತರೊಡನೆಯೂ ಮಹಾತ್ಮನಾದ ಲಕ್ಷ್ಮಣನೊಡನೆಯೂ ಅಯೋಧ್ಯಾಪಟ್ಟಣದಲ್ಲಿಯೂ ವಾಸಮಾಡುವೆನು ॥೧-೨॥

ಸಾಕ್ಷಾದ್ವಿಷ್ಣುವು ಲಕ್ಷ್ಮಣರೂಪನಾಗಿ ಹುಟ್ಟಿ ನನ್ನ ಸೇವೆಯನ್ನು ಮಾಡುವನು. ರಾಮನು ನನ್ನಂಶದಿಂದ ಹುಟ್ಟುವನು ; ಸೀತೆಯು ಪಾರ್ವತಿಯ ಅಂಶದಿಂದ ಹುಟ್ಟುವಳು ॥೩॥

ಇತ್ಯಾದಿರೀತಿಯಾಗಿ ಧರ್ಮಕಾಂಡದಲ್ಲಿ ಉಕ್ತವಾಗಿರುವ ಪ್ರಕ್ರಮದಿಂದ, ಶ್ರೀರಾಮನಲ್ಲಿ ಶಿವನೆಂಬ ಬುದ್ಧಿ ಹುಟ್ಟುವುದು. ಹೀಗೆ ಕಾವೇರೀಖಂಡದಲ್ಲಿಯೂ ರಾಘವನಿಗೆ ಶಿವತ್ವವು ಉಕ್ತವಾಗಿರುವುದು ॥೪॥

ಅಲ್ಲಿ ಶ್ರೀಶಿವನು ಹೇಳುವುದೇನೆಂದರೆ :—

ನಾನು ದಶರಥಪುತ್ರನಾದ ರಾಮನಾಗಿ ಹುಟ್ಟಿ, ದಂಡಕಾರಣ್ಯದಲ್ಲಿ ಬೇಗನೆ ರಾಕ್ಷಸರನ್ನು ಕೊಂದು, ನಿಮಗೆ ಮೋಕ್ಷವನ್ನು ಕೊಡುವೆನು ॥೫॥

ಏವಂ ತಪಸ್ವಿನಃ ಪ್ರಾಪ ಚಿತ್ರಕೂಟೇ ದ್ವಿಜಾನ್ ಶಿವಃ ।
ತಸ್ಮಾದ್ರಾಮಃ ಶಿವಇವ ಭಾತಿ ಸೂತ ಮಹಾಮತೇ ॥೬॥

ಆಶ್ಚರ್ಯಪರ್ವಣಿ ಪೂರ್ವಂ ದೇವಾನ್ ಪ್ರತಿ ಶಿವೇನೈವಮುಕ್ತಮಿತಿ ಶ್ರೀರಾಮಂ ಪ್ರತಿ ಮತಂಗಮುನಿರೇವೋಚ್ಯತೇ.

ಶಿವಉವಾಚ.

ರಾಮೋಹಂ ತು ಭವಿಷ್ಯಾಮಿ ನಿಷ್ಪಕ್ಷೇನಸಮನ್ವಿತಃ ।
ದಶಾನನಪುರೋಗಾಣಿ ಹನಿಷ್ಯೇ ತಾನಿ ಸಂಯುಗೇ ॥೭॥
ಋಕ್ಷವಾನರರೂಪೇಣ ಯೂಯಂ ತು ಜನಯಿಷ್ಯಥ ।
ವಿಹರಾಮಿ ವನೇ ಪುಣ್ಯೇ ಗೋಲಾಙ್ಗೂಲನಿಷೇವಿತೇ ॥೮॥
ಗಙ್ಗಾಜಲಸಮೂಹೇನ ತುಷ್ಟೋ ಮೂಲಫಲೇನ ಚ ।
ಇತ್ಯುಕ್ತಾ ದೇವದೇವೇನ ಭೂತನಾಥೇನ ರಾಘವ ॥೯॥
ಸಂಪ್ರಹೃಷ್ಟಾಃ ಸುರಗಣಾಃ ದಿವಂ ಜಗ್ಮುರ್ಯಥಾಗತಮ್ ।
ಸ ತ್ವಂ ರಾಮ ಮಹಾಬಾಹೋ ಶಙ್ಕರೋ ಲೋಕಶಙ್ಕರಃ ॥೧೦॥
ವಧಾರ್ಥಂ ರಾವಣಾದೀನಾಂ ಜಾತೋ ರಘುಕುಲೇ ಶುಭೇ ।
ಏವಂ ತು ಶೇಷಧರ್ಮೋಕ್ತ್ಯಾ ರಾಮಃ ಶಿವಇತೀರ್ಯತೇ ॥೧೧॥

ಹೀಗೆಂದು ಶ್ರೀಶಿವನು ಚಿತ್ರಕೂಟದಲ್ಲಿ ತಪಸ್ಸು ಮಾಡುತಿದ್ದ ಬ್ರಾಹ್ಮಣರಿಗೆ ಹೇಳಿರುವನು. ಅದುಕಾರಣ, ಎಲೈ ಮಹಾಮತಿಯಾದ ಸೂತರೆ! ರಾಮನು ಶಿವಾವತಾರವಾಗಿರುವಂತೆ ತೋರುವುದು ॥೬॥

ಆಶ್ಚರ್ಯಪರ್ವದಲ್ಲಿ, ಹಿಂದೆ ದೇವತೆಗಳನ್ನು ಕುರಿತು ಶಿವನು ಹೀಗೆ ಹೇಳಿರುವನೆಂದು, ಶ್ರೀರಾಮನನ್ನು ಕುರಿತು ಮತಂಗಮಹರ್ಷಿ ಹೇಳಿರುವನು:—

ಶ್ರೀ ಶಿವನು ಹೇಳಿದುದೇನೆಂದರೆ :—

ನಾನು ರಾಮನಾಗಿ ಹುಟ್ಟುವೆನು. ಆಗ ಶ್ರೀ ವಿಷ್ಣುವಿನೊಡಗೂಡಿದವನಾಗಿ, ರಾವಣ ಮುಂತಾದ ಆ ರಾಕ್ಷಸರನ್ನೆಲ್ಲ ಯುದ್ಧದಲ್ಲಿ ಕೊಲ್ಲುವೆನು ॥೭॥

ನೀವೂಕೂಡ, ಋಕ್ಷ (ಕರಡಿ) ವಾನರರೂಪದಿಂದ ಪ್ರಜೆಗಳನ್ನು ಸೃಷ್ಟಿಮಾಡುವಿರಿ. ಗೋಲಾಂಗೂಲ (ಸಿಂಗಳೀಕ) ಪರಿವೃತವಾಗಿ ಪುಣ್ಯವಾದ ವನದಲ್ಲಿ ನಾನು ಗಂಗಾನದಿಯ ಜಲದಿಂದಲೂ ಫಲಮೂಲಗಳಿಂದಲೂ ಸಂತುಷ್ಟನಾಗಿ ವಿಹರಿಸುತಿರುವೆನು.—ಅಯ್ಯಾ ರಾಘವ! ಹೀಗೆಂದು ಸರ್ವಭೂತಪತಿಯಾದ ಪರಮೇಶ್ವರನಿಂದ ಹೇಳಲ್ಪಟ್ಟು, ಸಮಸ್ತ ದೇವಸಮೂಹಗಳೂ ತಾವು ಬಂದಹಾಗೆ ಸ್ವರ್ಗಕ್ಕೆ ಹೊರಟುಹೋದುವು. ಹೀಗಿರುವುದರಿಂದ, ಮಹಾಭುಜನಾದ ಎಲೈ ರಾಮನೆ! ನೀನು, ಸರ್ವಲೋಕ ಸುಖಕರನಾದ ಶಂಕರನ ಅವತಾರರೂಪನಾದವನು. ರಾವಣಾದಿಗಳ ವಧೆಗೋಸ್ಕರವಾಗಿ, ಶುಭವಾದ ರಘುಕುಲದಲ್ಲಿ ಹುಟ್ಟಿರುವೆ.—ಸ್ವಾಮಿ! ಸೂತರೆ! ಈರೀತಿಯಾಗಿ ಶೇಷಧರ್ಮದಲ್ಲಿ ಹೇಳಲ್ಪಟ್ಟಿರುವುದರಿಂದ, ರಾಮನು ಶಿವನೆಂದು ಸ್ಪಷ್ಟವಾಗುವುದು ॥೪–೧೧॥

ಬ್ರಹ್ಮಾಂಡಸ್ಕಾಂದವಾತ್ಸ್ಯದಿಷ್ವೇವಂ ಪ್ರಾಯೋ ರಘೂತ್ತಮಃ ।
ಶಿವಇತ್ಯುದಿತೋನ್ಯತ್ರ ತಥಾ ಬ್ರಹ್ಮೇತಿ ಕಥ್ಯತೇ ॥೧೦॥
ಶ್ರೀಮದ್ರಾಮಾಯಣೇ ರಾಮೋ ಬ್ರಹ್ಮೇತ್ಯಾಹಾಗ್ನಿಜಃ ಪುಮಾನ್ ।
ಪ್ರಾಜಾಪತ್ಯಂ ನರಂ ವಿದ್ಧಿ ಮಾಮಿಹಾಭ್ಯಾಗತಂ ನೃಪ ॥೧೩॥

ಇತಿ ಬಾಲಕಾಂಡೇ.

ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ।
ಗವಾಂ ಕೋಟ್ಯಯುತಂ ದತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ॥೧೪॥
ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ।
ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ॥೧೫॥

ಇತಿ ಸಙ್ಗ್ರಹರಾಮಾಯಣೇ.

ಬ್ರಹ್ಮಪುರಾಣೇ,

ಲೋಕಸ್ರಷ್ಟ್ರಾ ಪುರಾ ದೇವೈಃ ಅವತೀರ್ಣೋ ಮಹೀತಳೇ ।
ರಾಮಇತ್ಯುಚ್ಯತೇ ಲೋಕೈಃ ರಾವಣಾದಿವಧಾನ್ಮುನೇ ॥೧೬॥
ಏವಂ ಬ್ರಹ್ಮಪುರಾಣೇಪಿ ರಾಮಸ್ಯೋಕ್ತಾ ವಿರಿಞ್ಚಿತಾ ।
ಇತ್ಯಾದಿಶ್ಲೋಕನಿಕರೈಃ ರಾಮೋ ಬ್ರಹ್ಮೈವ ಭಾತಿ ನಃ ॥೧೭॥

ಬ್ರಹ್ಮಾಂಡ ಸ್ಕಾಂದ ವಾತ್ಸ್ಯ ಇತ್ಯಾದಿ ಪುರಾಣಗಳಲ್ಲಿಯೂ ಕೂಡ, ಹೀಗೆಯೇ ಪ್ರಾಯಿಕವಾಗಿ ರಾಮನು ಶಿವನೆಂದು ಹೇಳಲ್ಪಟ್ಟಿರುವುದು. ಹಾಗೆಯೇ, ಬ್ರಹ್ಮನೆಂದೂ ಹೇಳಲ್ಪಟ್ಟಿರುವುದು ॥೧೦॥

ಶ್ರೀಮದ್ರಾಮಾಯಣದಲ್ಲಿ, ಅಗ್ನಿಕುಂಡದಿಂದ ಉತ್ಪನ್ನನಾದ ಪುರುಷನು ದಶರಥನನು ಕುರಿತು ' ಎಲೈ ದಶರಥನೆ! ಇಲ್ಲಿ ಬಂದಿರುವ ನನ್ನನ್ನು ಬ್ರಹ್ಮಸಂಬಂಧಿಯಾದ ಪುರುಷನೆಂದು ತಿಳಿ' ಎಂದು ಹೇಳಿರುವುದರಿಂದ, ಶ್ರೀರಾಮನು ಬ್ರಹ್ಮನೆಂದು ಹೇಳಿದಹಾಗಾಯ್ತು ॥೧೩॥

ಹೀಗೆ ಬಾಲಕಾಂಡದಲ್ಲಿರುವುದು.

ಬಹು ಸುವರ್ಣದಕ್ಷಿಣಾಸಮೇತವಾದ ಅಶ್ವಮೇಧಶತಗಳನ್ನು ಮಾಡಿ, ಹತ್ತುಸಾವಿರ ಕೋಟಿ ಗೋದಾನಗಳನ್ನು ಮಾಡಿ, ಶ್ರೀರಾಮನು ಬ್ರಹ್ಮಲೋಕಕ್ಕೆ ಹೋಗುವನು ॥೧೪॥

ಶ್ರೀರಾಮನು, ಒಟ್ಟು ಹನ್ನೊಂದುಸಾವಿರವರ್ಷಕಾಲ ರಾಜ್ಯಭಾರಮಾಡಿ, ಬಳಿಕ ಬ್ರಹ್ಮಲೋಕಕ್ಕೆ ಹೋಗುವನು ॥೧೫॥

ಹೀಗೆ ಸಂಕ್ಷೇಪರಾಮಾಯಣದಲ್ಲಿರುವುದು.

ಬ್ರಹ್ಮಪುರಾಣದಲ್ಲಿ :—

ಎಲೈ ಮುನಿಯೆ! ಪೂರ್ವದಲ್ಲಿ ದೇವತೆಗಳೂಡನೆ ಭೂಮಿಯಲ್ಲವತರಿಸಿದ ಬ್ರಹ್ಮನು, ರಾವಣಾದಿಗಳನ್ನು ಕೊಂದು ಜನರಿಗೆಲ್ಲ ಅಭಿರಾಮನಾದುದರಿಂದ, ಸಮಸ್ತ ಲೋಕದಿಂದಲೂ ರಾಮನೆಂದು ಹೇಳಲ್ಪಡುತಿರುವನು ॥೧೬॥

ಹೀಗೆ ಬ್ರಹ್ಮಪುರಾಣದಲ್ಲಿಯೂ ರಾಮನು ಬ್ರಹ್ಮನೆಂದು ಹೇಳಲ್ಪಟ್ಟಿರುವುದು. ಇತ್ಯಾದಿ ಗ್ರಂಥಸಮುದಾಯಗಳಿಂದ, ಶ್ರೀರಾಮನು ಬ್ರಹ್ಮನೇ ಸರಿಯೆಂದು ನಮಗೆ ತೋರುವುದು ॥೧೭॥

ಸ್ಕಾನ್ದೇ ರಾವಣವಧಾಯ ದೇವಾಲೋಚನಸಮಯೇ ಅಶರೀರವಾಕ್ಯಮ್.

ಉಭಾಭ್ಯಾಂ ವಿನಿಹನ್ತವ್ಯೋ ರಾವಣೋ ಲೋಕರಾವಣಃ ।
ಆಶರೀರವಚಃ ಶ್ರುತ್ವಾ ಪ್ರಹಸ್ಯ ಹರಿಶಙ್ಕರೌ ॥೧೯॥
ತಥೈವ ಚಕ್ರತೂರಾರ್ಜ್ ರಾವೋ ಹರಿಹರಾತ್ಮಕಃ ।
ಪರಬ್ರಹ್ಮಸ್ವರೂಪೋಯಂ ಪ್ರಾಕೃತೋ ನ ಹಿ ಮಾನುಷಃ ॥೧೯॥
ಶಿವರೂಪೇಣ ಸಂಹಾರಂ ವಿಷ್ಣುರೂಪೇಣ ಪಾಲನಮ್ ।
ಶಿವವಿಷ್ಣುಸ್ವರೂಪೇಣ ಪರಬ್ರಹ್ಮೈವ ಕೇವಲಮ್ ॥೨೦॥

ತತ್ರೈವಾನ್ಯತ್ರ ಶ್ರೀರಾಮಃ.

ಶಿವಂ ಮಾಂ ಪ್ರತಿಜಾನೀಹಿ ನಾವಯೋರನ್ತರಂ ದ್ವಿಜ ।
ಆವಯೋರನ್ತರಜ್ಞಾನಂ ತದೇವಾಜ್ಞಾನಮಿಷ್ಯತೇ ॥೨೦॥

ಗಾರುಡೇ.

ತಸ್ಯಾಂ ದಶರಥಾದ್ರಾಜ್ಞೋ ದಶಗ್ರೀವವಧಾರ್ಥಿಭಿಃ ।
ಬ್ರಹ್ಮಾದ್ಯೈರರ್ಥಿತೋ ವಿಷ್ಣುಃ ಈಶಾಂಶೇನಾವತೀರ್ಣವಾನ್ ॥೨೨॥
ತಸ್ಯ ರಾಮಾಭಿಧಾನಸ್ಯ ಜಗನ್ನಾಥಸ್ಯ ಶಾರ್ಙ್ಗಿಣಃ ।
ಸ್ಕಾನ್ದಗಾರುಡವಾಕ್ಯೈರಪ್ಯೇವಂ ತಸ್ಯೋಭಯಾತ್ಮತಾ ॥೨೩॥

ಸ್ಕಾಂದಪುರಾಣದಲ್ಲಿ, ರಾವಣನ ಕೊಲೆಗೋಸ್ಕರ ದೇವತೆಗಳು ಆಲೋಚಿಸುತಿರುವಾಗ ಹೀಗೆ ಅಶರೀರವಾಕ್ಯವಾಗಿರುವುದು :—

'ಲೋಕವನ್ನೆಲ್ಲ ಕಷ್ಟಪಡಿಸತಕ್ಕ ರಾವಣನು, ಇಬ್ಬರಿಂದಲೂ ಕೊಲ್ಲಲ್ಪಡಬೇಕು.' ಹೀಗಾದ ಅಶರೀರವಚನವನ್ನು ಕೇಳಿ, ಹರಿಹರರಿಬ್ಬರೂ ಮುಗುಳುನಗೆ ನಕ್ಕು, ಹಾಗೆಯೇ (ಇಬ್ಬರೂ ಸೇರಿ) ರಾವಣವಧೆಯನ್ನು ಮಾಡಿದರು. ಆಯ್ಯಾ ರಾಜ! ಆದುಕಾರಣ, ರಾಮನು ಹರಿಹರ ಸ್ವರೂಪನಾದವನು ॥೧೯-೧೯॥

ಶಿವರೂಪದಿಂದ ಸಂಹಾರವನ್ನೂ ವಿಷ್ಣುರೂಪದಿಂದ ಪರಿಪಾಲನೆಯನ್ನೂ ಮಾಡುವನು. ಹೀಗೆ ಶಿವ ವಿಷ್ಣುಸ್ವರೂಪದಿಂದ, ಕೇವಲ ಪರಬ್ರಹ್ಮವೇ ವಿಲಾಸಪಡುತಿರುವುದು ॥೨೦॥

ಅಲ್ಲಿಯೇ ಮತ್ತೊಂದುಬಳಿ ಶ್ರೀರಾಮನು ಹೀಗೆ ಹೇಳಿರುವನು :—

ಆಯ್ಯಾ ಬ್ರಾಹ್ಮಣ! ನನ್ನನ್ನು ಶಿವನೆಂದು ತಿಳಿಯುವನಾಗು. ನಮ್ಮಿಬ್ಬರಿಗೂ ಭೇದವಿಲ್ಲ. ನಮ್ಮಿಬ್ಬರಿಗೂ ಭೇದವನ್ನು ತಿಳಿದುಕೊಳ್ಳುವುದು ಯಾವುದುಂಟೋ, ಅದೇ ಅಜ್ಞಾನವೆಂದು ಹೇಳಲ್ಪಡುವುದು ॥೨೧॥

ಗರುಡಪುರಾಣದಲ್ಲಿ :—

ರಾವಣವಧಾರ್ಥಿಗಳಾದ ಬ್ರಹ್ಮಾದಿಗಳಿಂದ ಪ್ರಾರ್ಥಿತನಾದ ಶ್ರೀಮನ್ನಾರಾಯಣನು, ಆ ಅಯೋಧ್ಯಾನಗರಿಯಲ್ಲಿ ದೊರೆಯಾದ ದಶರಥನ ದೆಸೆಯಿಂದ, ಈಶ್ವರಾಂಶದಿಂದವತರಿಸಿದನು ॥

ರಾಮನಾಮಕನಾಗಿರುವ ಜಗನ್ನಾಥನಾದ ಆ ವಿಷ್ಣುವಿಗೆ, ಈ ರೀತಿಯಾಗಿ ಸ್ಕಾಂದ ಗಾರುಡವಾಕ್ಯಗಳಿಂದಲೂ ಉಭಯಾತ್ಮಕತ್ವವು ಸಿದ್ಧಿಸುವುದು ॥೨೩॥

ನಿರ್ವಾಣಖಂಡ್ಡೇ ಶ್ರೀರಾಮಂ ಪ್ರತಿ ಶಿವಃ.

ಭ್ರಾತರಸ್ತೇ ತ್ರಯೋ ರಾಮ ಬ್ರಹ್ಮಾ ವಿಷ್ಣುರಹಂ ತಥಾ ।
ತ್ವತ್ತೋ ವಿನಿರ್ಗತಾಭೂಯೋ ಪರಂ ಲೀಯೇಮಹಿ ತ್ವಯಿ ॥೦೪॥
ತ್ವಮೇವ ಪರಮಂ ಗುಹ್ಯಂ ತ್ವಮೇವ ಪರಮಂ ಪದಮ್ ।
ತ್ವಮೇವ ಪರಮಂ ಬ್ರಹ್ಮ ತ್ವಮೇವ ಶರಣಂ ಹಿ ನಃ ॥೦೫॥
ಏವಂ ನಿರ್ವಾಣಖಂಡ್ಡೋಕ್ತಾ ರಾಮೋ ಮೂರ್ತಿತ್ರಯಾತ್ ಪರಃ ।
ಏವಂ ಚ ದರ್ಶಯಿಷ್ಯಾಮಃ ಶ್ರೀಮದ್ರಾಮಾಯಣೇಪಿ ಚ ॥೦೬॥

ಬ್ರಹ್ಮೋವಾಚ.

ಪದ್ಮೇ ದಿವ್ಯೇಕಸಜ್ಞಾಶೇ ನಾಭ್ಯಾಮುತ್ಪಾದ್ಯ ಮಾನುಪಿ ।
ಪ್ರಾಜಾಪತ್ಯಂ ತ್ವಯಾ ಕರ್ಮ ಸರ್ವಂ ಮಯಿ ನಿವೇಶಿತಮ್ ॥೦೭॥
ಸೋಹಂ ಸನ್ನ್ಯಸ್ತಭಾರೋಪಿ ತ್ವಾಮುಪಾಸೇ ಜಗತ್ಪತಿಮ್ ।
ರಕ್ಷಾಂ ವಿಧಾಸ್ಯ ಭೂತೇಷು ಮಮ ತೇಜಸ್ಕರೋ ಭವಾ ॥೦೮॥
ತತಸ್ತ್ವಮಪಿ ದುರ್ಧರ್ಷಃ ತಸ್ಮಾದ್ಬ್ರಾವಾತ್ ಸನಾತನಾತ್ ।
ರಕ್ಷಾರ್ಥಂ ಸರ್ವಭೂತಾನಾಂ ವಿಷ್ಣುತ್ವಮುಪಜಜ್ಞಿವಾ ॥೦೯॥

ನಿರ್ವಾಣಖಂಡದಲ್ಲಿ ಶ್ರೀರಾಮನನ್ನು ಕುರಿತು ಶಿವನು ಹೇಳಿರುವುದೇನೆಂದರೆ:—

ಅಯ್ಯಾ ರಾಮ! ಬ್ರಹ್ಮನೂ ವಿಷ್ಣುವೂ ನಾನೂಕೂಡ, ನಿನ್ನ ಮೂರುಮಂದಿ ತಮ್ಮಂದಿರಾಗಿರುವೆವು. ನಾವುಗಳು, ನಿನ್ನ ದೆಸೆಯಿಂದಲೇ ಉದಯಿಸಿದವರಾಗಿರುವೆವು; ನಿನ್ನಲ್ಲಿಯೇ ಲಯವನ್ನೂ ಹೊಂದುವೆವು ॥೨೪॥

ನೀನೇ ಪರಮರಹಸ್ಯವಾದ ಪದಾರ್ಥವು; ನೀನೇ ಪರಮಪದವು; ನೀನೇ ಪರಬ್ರಹ್ಮವು. ನಮಗೆಲ್ಲ ನೀನೇ ಗತಿ ॥೨೫॥

ಹೀಗೆ ನಿರ್ವಾಣಖಂಡವಚನವಿರುವುದರಿಂದ, ರಾಮನು ಮೂರ್ತಿತ್ರಯಾತೀತನೆಂದು ಗೊತ್ತಾಗುವುದು. ಹೀಗೆಯೇ ಶ್ರೀಮದ್ರಾಮಾಯಣದಲ್ಲಿಯೂ ತೋರಿಸುವೆವು ॥೦೬॥

ಅಲ್ಲಿ ಬ್ರಹ್ಮನು ಹೇಳಿರುವನೇನೆಂದರೆ:—

ಸೂರ್ಯಸಮವಾದ ದಿವ್ಯವಾದ ನಾಭಿಕಮಲದಲ್ಲಿ ನನ್ನನ್ನೂ ಸೃಷ್ಟಿಮಾಡಿ, ನೀನು ಸಮಸ್ತವಾದ ಪ್ರಾಜಾಪತ್ಯ (ಬ್ರಹ್ಮನು ಮಾಡಬೇಕಾದ) ಕೃತ್ಯವನ್ನೂ ನನ್ನಲ್ಲಿ ಇರಿಸಿದವನಾದೆ ॥೨೭॥

ಹೀಗಿರುವ ನಾನು, ಸಮಸ್ತ ಪ್ರಪಂಚಭಾರವನ್ನೂ ನಿನ್ನ ದ್ವಾರಾ ವಹಿಸಿದವನಾಗಿದ್ದರೂ, ಸಮಸ್ತ ಭೂತಗಳಿಗೂ ರಕ್ಷಣೆಯನ್ನುಂಟುಮಾಡುವುದಕ್ಕೋಸ್ಕರ, ಸರ್ವಲೋಕಪತಿಯಾದ ನಿನ್ನನ್ನು ಉಪಾಸನೆಮಾಡುವೆನು. ನನಗೆ ನೀನೇ ತೇಜಸ್ಸನ್ನುಂಟುಮಾಡತಕ್ಕವನಾಗಿರುವೆಯಲ್ಲವೆ! ॥೨೮॥

ಅದುಕಾರಣ, ಸಮಸ್ತ ಲೋಕರಕ್ಷಣಾರ್ಥವಾಗಿ, ದುರಾಧರ್ಷನಾದ ನೀನು, ಅವ್ಯಯವಾದ ಆ ಬ್ರಹ್ಮದದೆಸೆಯಿಂದ ವಿಷ್ಣುತ್ವವನ್ನು ಪಡೆದವನಾದೆ ॥೨೯॥

ಅಗ್ನಿಃ ಕೋಪಃ ಪ್ರಸಾದಸ್ತೇ ಇತಿ ಬ್ರಹ್ಮಸ್ತುತೌ ಸ್ಫುಟಮ್ ।
ರುದ್ರಃ ಪ್ರೋಕ್ತೋಗ್ನಿಶಬ್ದೇನ ರುದ್ರೋವೇತಿ ಶ್ರುತೇಸ್ತಥಾ ॥೩೦॥

ಅಸ್ಮಿನ್ನರ್ಥೇ ಶ್ರೀರಾಮಗೀತಾಯಾಂ ಶಿವಂ ಪ್ರತಿ ರಾಮವಾಕ್ಯಮಪಿ ಪ್ರಮಾಣಮ್.

ಯೋಸೌ ಕೋಪಾಗ್ನಿರುದ್ರೋಭೂತ್ ಮತ್ತಃ ಶತ್ರುವಿನಾಶನಃ ।
ಮದಂಶಜಸ್ತ್ವಮೇವಾಜೌ ಅಮೋಘಾಸ್ತ್ರಂ ಭವಿಷ್ಯಸಿ ॥೩೧॥

ಏವಂ ಪದ್ಮಭುವಾ ಪ್ರೋಕ್ತವಾಕ್ಯೈರ್ಮೂರ್ತಿತ್ರಯಾತಿಗಃ ।
ರಾಮಇತ್ಯುಚ್ಯತೇ ಲೋಕೇ ಶ್ರೀಮದ್ರಾಮಾಯಣೇ ಸ್ಫುಟಮ್ ॥೩೨॥

ವಿಷ್ಣುಯಾಮಳೇ ನಾರದಃ.

ಬ್ರಹ್ಮವಿಷ್ಣುಶಿವಾದ್ಯೈರ್ಯತ್ ಜಗಜ್ಜನ್ಮಾದಿಕಾರಣಮ್ ।
ಸದಸದ್ರೂಪಮವ್ಯಕ್ತಂ ತದ್ರಾಮೋಭೂದ್ರಘೂಣಾಂ ಕುಲೇ ॥೩೩॥

ಸ್ಕಾಂದೇ.

ರಾಮೋ ವಿಷ್ಣುಶ್ಚ ಶಮ್ಭುಶ್ಚ ತ್ರಯೋ ದೇವಾಶ್ಚ ದೇವತಾಃ ।
ಸೀತಾ ಚ ಪಾರ್ವತೀ ಲಕ್ಷ್ಮೀಃ ವಾಣೀ ದೇವಸ್ತ್ರಯೋಪಿ ಚ ॥೩೪॥

'ಅಗ್ನಿಃ ಕೋಪಃ ಪ್ರಸಾದಸ್ತೇ' ಇತ್ಯಾದಿ ಬ್ರಹ್ಮಸ್ತೋತ್ರದಲ್ಲಿ—'ರುದ್ರೋವಾಏಷ ಯದಗ್ನಿಃ' ಇತ್ಯಾದಿ ಶ್ರುತಿಪ್ರಮಾಣಾನುಸಾರವಾಗಿ—ಅಗ್ನಿಯೆಂಬ ಶಬ್ದದಿಂದ ಸ್ಪಷ್ಟವಾಗಿ ರುದ್ರನು ಹೇಳಲ್ಪಟ್ಟಿರುವನು ॥೩೦॥

ಈ ವಿಷಯದಲ್ಲಿ, ರಾಮಗೀತೆಯೊಳಗೆ ಶಿವನನ್ನು ಕುರಿತು ಶ್ರೀರಾಮನು ಹೇಳಿರುವ ವಚನವೂ ಪ್ರಮಾಣವಾಗಿರುವುದು.

ಶತ್ರುವಿನಾಶಕನಾದ ಯಾವ ಕೋಪಾಗ್ನಿರುದ್ರನು ನನ್ನ ದೆಸೆಯಿಂದ ಉದಯಿಸಿದನೋ, ನನ್ನ ಅಂಶದಿಂದ ಉತ್ಪನ್ನನಾದ ಅವನೇ ನೀನಾಗಿ, ಯುದ್ಧದಲ್ಲಿ ಅಮೋಘವಾದ ಅಸ್ತ್ರವಾಗುವೆ॥

ಹೀಗೆ ಶ್ರೀಮದ್ರಾಮಾಯಣದಲ್ಲಿ ಬ್ರಹ್ಮನಿಂದ ಉಕ್ತವಾದ ವಾಕ್ಯಗಳಿಂದಲೂ, ಶ್ರೀರಾಮನು ಮೂರ್ತಿತ್ರಯಾತೀತನೆಂದು ಪ್ರಪಂಚದಲ್ಲಿ ಸ್ಪಷ್ಟವಾಗಿ ಹೇಳಲ್ಪಡುವನು ॥೩೨॥

ವಿಷ್ಣುಯಾಮಳದಲ್ಲಿ ನಾರದವಚನವು :—

ಬ್ರಹ್ಮ ವಿಷ್ಣು ಶಿವ—ಇತ್ಯಾದಿ ರೂಪಗಳಿಂದ ಯಾವ ವಸ್ತುವು ಜಗತ್ತಿನ ಉತ್ಪತ್ತಿ ಲಯ ಮುಂತಾದುವುಗಳಿಗೆ ಕಾರಣವಾಗಿರುವುದೋ, ಅಂತಹ ಸದಸದ್ರೂಪವಾದ ಅವ್ಯಕ್ತವಾದ ವಸ್ತುವೇ—ರಘುಕುಲದಲ್ಲಿ ಶ್ರೀರಾಮರೂಪವಾಗಿ ಅವತರಿಸಿತು ॥೩೩॥

ಸ್ಕಾಂದಪುರಾಣ ವಚನವು :—

ಶ್ರೀರಾಮನೇ, ವಿಷ್ಣುವೂ ಶಂಭುವೂ ತ್ರಿಮೂರ್ತಿಗಳೂ ಸಮಸ್ತ ದೇವತೆಗಳೂ ಆಗಿರುವನು. ಸೀತೆಯು, ಪಾರ್ವತಿಯೂ ಲಕ್ಷ್ಮಿಯೂ ಸರಸ್ವತಿಯೂ ಸರ್ವದೇವತಾ ಸ್ತ್ರೀಯರೂ ಆಗಿರುವಳು ॥೩೪॥

ತ್ವಂ ಶಮ್ಭುರಿವ ಮೇ ರಾಮ ವಿಷ್ಣುರೂಪೇಣ ಚಾವ್ಯಯಃ ।
ಚತುರ್ಮೂರ್ತಿಮಯಶ್ಚಾಸಿ ತ್ರಿಮೂರ್ತಿಸ್ತ್ವಂ ಪರಾತ್ಪರಃ ॥೩೫॥

ಹಿರಣ್ಯಗರ್ಭಸಂಹಿತಾಯಾಮ್.

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವೇನ್ದ್ರೋ ದೇವತಾಸ್ತಥಾ ।
ಆದಿತ್ಯಾದಿಗ್ರಹಾಶ್ಚೈವ ತ್ವಮೇವ ರಘುನನ್ದನ ॥೩೬॥

ಪಾದ್ಮೇ.

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ತ್ವಮೇವ ರಘುನನ್ದನ ।
ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥೩೭॥

ಇತ್ಯಾದಿಸ್ತವನ್ದಪಾದ್ಮಸ್ಯ ಸ್ತವರಾಜೋಕ್ತಮಾರ್ಗತಃ ।
ಅಗಸ್ತ್ಯಸಂಹಿತಾಶ್ಲೋಕೈಃ ಪರೋ ರಾಮಸ್ತ್ರಿಮೂರ್ತಿತಃ ॥೩೮॥

ಬ್ರಹ್ಮಸ್ತೋತ್ರೇ ಚ ತಾಪಿನ್ಯಾಂ ರಾಮಸ್ಯೋಕ್ತಾಖಿಲಾತ್ಮತಾ ।
ತಥಾ ತ್ರಿಮೂರ್ತ್ಯತೀತತ್ವಂ ಕಾರಣಾನಾಂ ಚ ಹೇತುತಾ ॥೩೯॥

ಬ್ರಹ್ಮಾಣ್ಡೇ.

ಬ್ರಹ್ಮವಿಷ್ಣುಶಿವರೂಪತೋಽಖಿಲಂ ಪಾತಿ ಹನ್ತಿ ಸೃಜತಿ ಸ್ವಯಂ ಪ್ರಭುಃ ।
ರಾಮಮೇವ ಮುನಿವರ್ಯ ತತೋಽನ್ಯತ್ ನಾಸ್ತಿ ನಾಸ್ತಿ ಪರಮಂ ಶ್ರುತಿಷೂಕ್ತಮ್ ॥

ಹೇ ರಾಮ! ನೀನು ನನಗೆ ಶಿವರೂಪನಾಗಿಯೂ ವಿಷ್ಣುರೂಪನಾಗಿಯೂ ಬ್ರಹ್ಮರೂಪನಾಗಿಯೂ ಮೂರ್ತಿತ್ರಯಾತ್ಮಕನಾಗಿ ಕಾಣಿಸುವೆ. ನೀನೇ ಪರಾತ್ಪರ ವಸ್ತುವು ॥೩೫॥

ಹಿರಣ್ಯಗರ್ಭಸಂಹಿತೆಯು ವಚನವು:—

ಹೇ ರಘುನಂದನ! ಬ್ರಹ್ಮನೂ, ವಿಷ್ಣುವೂ, ರುದ್ರನೂ, ದೇವೇಂದ್ರನೂ, ಇತರ ದೇವತೆಗಳೂ, ಆದಿತ್ಯಾದಿ ಗ್ರಹಗಳೂ ನೀನೇಯೆ ॥೩೬॥

ಪದ್ಮಪುರಾಣ ವಚನವು:—

ಎಲೈ ರಾಮ! ಬ್ರಹ್ಮನೂ ವಿಷ್ಣುವೂ ರುದ್ರನೂ ನೀನೇಯೇ. ಸಹಸ್ರಶೀರ್ಷನಾಗಿ ಸಹಸ್ರನೇತ್ರನಾಗಿ ಸಹಸ್ರಪಾದನಾಗಿರುವ ವಿರಾಟ್ಪುರುಷನೂ ನೀನೇ ॥೩೭॥

ಹೇ ಸೂತ! ಇವೇ ಮೊದಲಾದ ಸ್ಕಾಂದ ಪಾದ್ಮಪುರಾಣಗಳಲ್ಲಿರುವ ಸ್ತವರಾಜ (ಪ್ರಶಸ್ತವಾದ ಸ್ತುತಿ) ದೊಳಗೆ ಉಕ್ತವಾದ ರೀತಿಯಿಂದಲೂ, ಅಗಸ್ತ್ಯಸಂಹಿತೆಯಲ್ಲಿರುವ ಶ್ಲೋಕಗಳಿಂದಲೂ ಕೂಡ, ರಾಮನು ಮೂರ್ತಿತ್ರಯಾತೀತನೆಂದು ಸ್ಪಷ್ಟವಾಗುವುದು ॥೩೮॥

ಶ್ರೀರಾಮತಾಪಿನಿಯಲ್ಲಿಯೂ ಬ್ರಹ್ಮಸ್ತೋತ್ರದಲ್ಲಿಯೂ, ಶ್ರೀರಾಮನು ಸರ್ವಾತ್ಮಕನೆಂದು ಹೇಳಲ್ಪಟ್ಟಿರುವುದು. ಹಾಗೆಯೇ, ಮೂರ್ತಿತ್ರಯಾತೀತನೆಂದೂ—ಸಮಸ್ತ ಕಾರಣಗಳಿಗೂ ಇವನು ಮೂಲಕಾರಣನೆಂದೂ ಸ್ಪಷ್ಟವಾಗಿರುವುದು ॥೩೯॥

ಬ್ರಹ್ಮಾಂಡಪುರಾಣ ವಚನವು:—

ಹೇ ಮುನಿಶ್ರೇಷ್ಠ! ಸ್ವಯಂಪ್ರಭುವಾದ ಶ್ರೀರಾಮನೇ, ಬ್ರಹ್ಮ ವಿಷ್ಣು ಶಿವರೂಪಗಳನ್ನು ಧರಿಸಿದವನಾಗಿ, ಸೃಷ್ಟಿಸ್ಥಿತಿ ಲಯಗಳನ್ನು ಮಾಡುವನು. ಅವನಿಗಿಂತ ಬೇರೆಯಾಗಿ ವೇದಪ್ರತಿಪಾದ್ಯವಾದ ವಸ್ತುವಾವುದೂ ಸುತರಾಂ ಇಲ್ಲವೇಯಿಲ್ಲ ॥೪೦॥

ಬ್ರಹ್ಮಾಂಡಸ್ಕಂದಪದ್ಮಾನಿ ರಾಮಗೀತಾ ಚ ತಾಪಿನೀ ।
ಪ್ರಾಯೋ ರಾಮಸ್ಯ ಮೂನಾನಿ ಪರತ್ವೇ ತು ತ್ರಿಮೂರ್ತಿತಃ ॥೪೧॥
ಏವಮಾದಿಷ್ವನೇಕೇಷು ಶಾಸ್ತ್ರೇಷು ಬಹುಧರ್ಷಿಭಿಃ ।
ರಾಮಾವತಾರಕಥನಾತ್ ಸಂಶಯಸ್ತೂಪಜಾಯತೇ ॥೪೨॥
ತದೇಕಂ ವದ ನಿಶ್ಚಿತ್ಯ ಸರ್ವಶಾಸ್ತ್ರಾವಿರೋಧತಃ ।
ಸಜ್ಗೃಹ್ಯ ರಾಮತತ್ತ್ವಂ ನೋ ವಕ್ತುಮರ್ಹಸ್ಯಸಂಶಯಮ್ ॥೪೩॥

ಇತಿ ಶ್ರೀಬಾಲಕಾಣ್ಡೇ ಶ್ರೀರಾಮಸ್ಯ ಶಿವತ್ವ ಬ್ರಹ್ಮತ್ವ ಹರಿಹರಾ
ತ್ಮಕತ್ವ ತ್ರಿಮೂರ್ತಿತ್ವ ತ್ರಿಮೂರ್ತ್ಯತೀತತ್ವ
ಪ್ರತಿಪಾದನಂ ನಾಮ ತೃತೀಯಃ ಸರ್ಗಃ.



ಎಲೈ ಸೂತರೆ! ಹೀಗೆ, ರಾಮನು ತ್ರಿಮೂರ್ತ್ಯತೀತನೆಂಬ ವಿಷಯದಲ್ಲಿ, ಬ್ರಹ್ಮಾಂಡ ಪುರಾಣ ಸ್ಕಾಂದಪುರಾಣ ಪದ್ಮಪುರಾಣ ರಾಮಗೀತೆ ರಾಮತಾಪಿನಿ—ಇವುಗಳೆಲ್ಲವೂ ಬಹಳವಾಗಿ ಪ್ರಮಾಣವಾಗಿರುವುವು ॥೪೧॥

ಇತ್ಯಾದಿಗಳಾದ ಅನೇಕ ಶಾಸ್ತ್ರಗಳಲ್ಲಿ ಅನೇಕ ಋಷಿಗಳು ಅನೇಕ ವಿಧವಾಗಿ ರಾಮಾವತಾರಸ್ವರೂಪವನ್ನು ಹೇಳಿರುವುದರಿಂದ, ನಮಗೆ ವಿಶೇಷವಾಗಿ ಸಂಶಯವು ಹುಟ್ಟಿರುವುದು ॥೪೨॥

ಅದುಕಾರಣ, ಸಕಲ ಶಾಸ್ತ್ರಗಳಿಗೂ ವಿರೋಧವಿಲ್ಲದಂತೆ ಯಾವುದಾದರೊಂದನ್ನು ನಿಶ್ಚಯಿಸಿ, ರಾಮನ ತತ್ವಗಳನ್ನೆಲ್ಲ ಸಂಗ್ರಹಿಸಿ, ನೀವು ನಮಗೆ ನಿಸ್ಸಂಶಯವಾಗಿ ಹೇಳಬೇಕಾಗಿರುವುದು ॥೪೩॥

ಇದು ಬಾಲಕಾಂಡದಲ್ಲಿ ಶ್ರೀರಾಮನಿಗೆ ಶಿವತ್ವ ಬ್ರಹ್ಮತ್ವ ಹರಿಹರಾತ್ಮಕತ್ವ ತ್ರಿಮೂರ್ತಿ
ಸ್ವರೂಪತ ತ್ರಿಮೂರ್ತ್ಯತೀತತ್ವಕಥನವೆಂಬ ಮೂರನೆಯ ಸರ್ಗವು.



ಅಥ ಬಾಲಕಾಣ್ಡೇ ಚತುರ್ಥಃ ಸರ್ಗಃ.

ಶ್ರೀ ಸೂತಉವಾಚ.

ಸಾಧು ಪೃಷ್ಟಂ ಮಹಾಭಾಗಾಃ ಪ್ರಶ್ನೋಽಯಂ ಲೋಕಸಮ್ಮತಃ ।
ಯಸ್ತು ಶ್ರೀರಾಮಚನ್ದ್ರಸ್ಯ ಪುನಾತಿ ಭುವನತ್ರಯಮ್ ॥೧॥
ಅಹೋ ಭಾಗ್ಯಮಹೋ ಭಾಗ್ಯಂ ಮತ್ತಃ ಪುಣ್ಯತರೋ ನ ಹಿ ।
ಯೇನ ಸಂಸ್ಮಾರಿತೋ ರಾಮೋ ಯುಷ್ಮಾಭಿರ್ಬ್ರಹ್ಮವಾದಿಭಿಃ ॥೨॥
ರಾಮಚನ್ದ್ರಕಥಾಪ್ರಶ್ನಃ ಪುರುಷಾಂಸ್ತ್ರೀನ್ ಪುನಾತಿ ಹಿ ।
ವಕ್ತಾರಂ ಪೃಚ್ಛಕಂ ಶ್ರೋತೄಂಸ್ತತ್ಕಥಾಜ್ಞಾನಂ ಯಥಾ ಜನಾಃ ॥೩॥
ದುರ್ವಿಜ್ಞೇಯೋ ಭವತ್ಪ್ರಶ್ನೋ ವಕ್ತುಂ ಪ್ರಷ್ಟುಂ ಚ ಹೇದ್ವಿಜಾಃ ।
ತಥಾಪಿ ತು ಯಥಾಶಕ್ತಿ ವಕ್ಷ್ಯೇಽಹಂ ಸತ್ಯಾ ಗುರೂಂಶ್ಚ ಪರಾಂಶ್ಚ ॥೪॥
ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋನಮಃ ॥೫॥

ಬಾಲಕಾಂಡದಲ್ಲಿ ನಾಲ್ಕನೆಯ ಸರ್ಗವು.

ಶ್ರೀ ಸೂತಪೌರಾಣಿಕರು ಶೌನಕಾದಿ ಮುನಿಗಳನ್ನು ಕುರಿತು ಹೇಳಲುಪಕ್ರಮಿಸಿದರು:—

ಎಲೈ ಮಹಾತ್ಮರಾ! ನೀವು ಕೇಳಿದುದು ಬಹು ಯುಕ್ತವಾಗಿರುವುದು. ನೀವು ಮಾಡಿರುವ ಈ ಪ್ರಶ್ನೆಯು, ಸರ್ವಲೋಕಸಮ್ಮತವಾದುದು. ಇದು ಶ್ರೀರಾಮಚಂದ್ರವಿಷಯಕವಾದುದರಿಂದ ಮೂರು ಲೋಕವನ್ನೂ ಪರಿಶುದ್ಧಮಾಡುವುದು ॥೧॥

ಅಹ! ನನ್ನ ಭಾಗ್ಯೋದಯವು! ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲ! ನನಗಿಂತ ಪುಣ್ಯಾತ್ಮನಾದವನೊಬ್ಬನೂ ಇಲ್ಲ ಏಕೆಂದರೆ,—ಬ್ರಹ್ಮವಾದಿಗಳಾದ ನೀವುಗಳು, ನನಗೆ ಈಗ ಶ್ರೀರಾಮನ ಸ್ಮರಣೆಯುಂಟಾಗುವಂತೆ ಮಾಡಿದಿರಲ್ಲ! ॥೨॥

ಶ್ರೀರಾಮನ ಕಥೆಯು ವಿಷಯವನ್ನು ಕುರಿತು ಮಾಡುವ ಪ್ರಶ್ನೆಯು, ಆತ್ಮಜ್ಞಾನವು ಸರ್ವಜನರನ್ನೂ ಪಾವನಮಾಡುವಂತೆ, ಹೇಳತಕ್ಕವನು ಪ್ರಶ್ನೆಮಾಡತಕ್ಕವನು ಕೇಳತಕ್ಕವನು.—ಈ ಮೂರು ಜನರನ್ನೂ ಪಾವನಮಾಡುವುದು ॥೩॥

ಎಲೆ ಬ್ರಾಹ್ಮಣರಾ! ನೀವು ಮಾಡಿರುವ ಈ ಪ್ರಶ್ನೆಯು, ಉತ್ತರ ಹೇಳಲ್ಪಡುವುದಕ್ಕೂ ಪ್ರಶ್ನೆಮಾಡಲ್ಪಡುವುದಕ್ಕೂ ಅಸಾಧ್ಯವಾದುದು. ಆದರೂ, ಶ್ರೇಷ್ಠರಾದ ಗುರುಗಳನ್ನು ನಮಸ್ಮರಿಸಿ, ಯಥಾಶಕ್ತಿಯಾಗಿ ಹೇಳುವೆನು ॥೪॥

ಆ ಮಹಾತ್ಮನಾದ ವ್ಯಾಸನೇ ವಿಷ್ಣುರೂಪನು; ವಿಷ್ಣುವೇ ವ್ಯಾಸರೂಪನು. ಹೀಗೆ ಅವರಿಬ್ಬರಿಗೂ ಭೇದವೇ ಇಲ್ಲ. ಇಂತಹ ಬ್ರಹ್ಮಜ್ಞಾನನಿಧಿಯಾದ ವಸಿಷ್ಠವಂಶಪ್ರಸೂತನಾದ ವೇದವ್ಯಾಸನುನಿಗೆ ಶತಶಃ ನಮಸ್ಕಾರಮಾಡುವೆನು ॥೫॥

ನಮೋಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥೬॥

ಏವಂ ನತ್ವಾ ಗುರೂ೯ ದೇವಾ೯ ಸರ್ವಾ೯ರ್ಥ್ಯಚ ಮುಹುರ್ಮುಹುಃ ।
ಸೂತಪುತ್ರೋ ಮಹಾಯೋಗೀ ಧ್ಯಾತುಂ ಸಮುಪಚಕ್ರಮೇ ॥೭॥

ಹೃತ್ಪದ್ಮಜೇ ಸಮಾಸೀನಂ ಸ್ವೇನ ಕಲ್ಪಿತಮಂಟಪೇ ।
ಮುಕ್ತಾಜಾಲವಿತಾನಾಢ್ಯೇ ಸಿಂಹಾಸನಗತಂ ಪ್ರಭುಮ್ ॥೮॥

ಇಂದ್ರನೀಲದಳಶ್ಯಾಮಂ ಪೀತಕೌಶೇಯವಾಸಸಮ್ ।
ದಿಗೀಶರತ್ನಮಕುಟವಿನ್ಯಸ್ತಪದಪಲ್ಲವಮ್ ॥೯॥

ಮಣಿಪಾದುಕಪಾದಾಬ್ಜಂ ಯೋಗಿಧ್ಯೇಯಂ ಸನಾತನಮ್ ।
ನಾನಾವಿಧಮಣಿಚ್ಛನ್ನತುಲಾಕೋಟಿವಿರಾಜಿತಮ್ ॥೧೦॥

ವೃತ್ತಪೀನಕಟಿನ್ಯಸ್ತರಶನಾರತ್ನಶೋಭಿತಮ್ ।
ಜಗದಾಧಾರನಳಿನಕೋಶನಾಭಿವಿರಾಜಿತಮ್ ॥೧೧॥

ಲಕ್ಷ್ಮಣಸಹಿತನಾದ ಶ್ರೀರಾಮನಿಗೆ ನಮಸ್ಕಾರವು; ಆ ಜನಕರಾಜಪುತ್ರಿಯಾದ ಸೀತಾದೇವಿಗೂ ನಮಸ್ಕಾರವು; ರುದ್ರ ಇಂದ್ರ ಯಮ ವಾಯು—ಇವರುಗಳಿಗೂ ನಮಸ್ಕಾರವು; ಚಂದ್ರ ಸೂರ್ಯ ಸಕಲದೇವತಾಸಮೂಹ—ಇವರುಗಳಿಗೂ ನಮಸ್ಕಾರವು ॥೬॥

ಈರೀತಿಯಾಗಿ ಮಹಾಯೋಗಿಯಾದ ಸೂತಪುತ್ರನು, ಗುರುಗಳನ್ನೂ ದೇವತೆಗಳನ್ನೂ ನಮಸ್ಕರಿಸಿ, ಪುನಃಪುನಃ ಪ್ರಾರ್ಥನೆಮಾಡಿಕೊಂಡು, ಧ್ಯಾನಮಾಡಲುಪಕ್ರಮಿಸಿದನು ॥೭॥

ಆಗ ಸೂತನು ತನ್ನ ಹೃದಯಕಮಲದಲ್ಲಿ ಧ್ಯಾನಮಾಡಿದ ಶ್ರೀರಾಮನು ಹೇಗಿದ್ದನೆಂದರೆ:—ಸೂತನಿಂದ ತನ್ನ ಹೃದಯದಲ್ಲಿಯೇ ಒಂದು ದಿವ್ಯಮಂಟಪವು ಕಲ್ಪಿಸಲ್ಪಟ್ಟಿತು; ಅದಕ್ಕೆ ಅನೇಕವಾದ ಮುಕ್ತಾಸರಗಳಿಂದ ಮೇಲ್ಕಟ್ಟು ಕಟ್ಟಿದ್ದರು. ಆ ಮಂಟಪದೊಳಗೆ ಶ್ರೀರಾಮನು ದಿವ್ಯ ಸಿಂಹಾಸನದ ಮೇಲೆ ಕುಳಿತಿದ್ದನು ॥೮॥

ಆಗ ಆ ರಾಮನು, ಇಂದ್ರನೀಲಮಣಿಯಂತೆ ಶ್ಯಾಮವರ್ಣನಾಗಿಯೂ, ಪೀತವರ್ಣವಾದ ದುಕೂಲವನ್ನುಟ್ಟವನಾಗಿಯೂ ಇದ್ದನು. ಸಮಸ್ತ ದಿಕ್ಪಾಲಕರ ರತ್ನಕಿರೀಟಗಳ ಮೇಲೆ ತನ್ನ ಪಾದಪದ್ಮವನ್ನಿಟ್ಟುಕೊಂಡು ಕುಳಿತಿದ್ದನು ॥೯॥

ಪಾದಕಮಲಗಳಿಗೆ ರತ್ನಮಯವಾದ ಪಾದುಕೆಗಳನ್ನು ಹಾಕಿಕೊಂಡಿದ್ದನು. ಆ ಸನಾತನ ಮೂರ್ತಿಯನ್ನು ಅನೇಕರಾದ ಯೋಗಿಗಳು ಧ್ಯಾನಮಾಡುತಿದ್ದರು. ಅನೇಕ ರತ್ನಖಚಿತವಾದ ಕಾಲುಸರಗಳಿಂದ ವಿರಾಜಿಸುತಿದ್ದನು ॥೧೦॥

ಅವನ ಕಟಿಪ್ರದೇಶವು ವರ್ತುಳಾಕಾರವಾಗಿಯೂ ಮಾಂಸಲವಾಗಿಯೂ ಇದ್ದಿತು. ಇಂತಹ ಕಟಿಪ್ರದೇಶದಲ್ಲಿ, ದಿವ್ಯವಾದ ರತ್ನಮಯಕಟಿಸೂತ್ರವು ಶೋಭಿಸುತಿದ್ದಿತು. ಜಗತ್ತಿಗೆಲ್ಲ ಆಧಾರವಾದ ನಾಭಿಕಮಲದಿಂದ ಪ್ರಕಾಶಿಸುತಿದ್ದನು ॥೧೧॥

ಸರ್ವಲೋಕಾಸ್ಪದೀಭೂತವಳತ್ರಯಯುತೋದರಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಾಲಙ್ಕೃತೋರಸಮ್ ॥೧೦॥
ಆಜಾನುಬಾಹುಂ ಶ್ರೀರಾಮಂ ಪದ್ಮಗರ್ಭಾಭಪಾಣಿನಮ್ ।
ರತ್ನಕಙ್ಕಣಕೇಯೂರಮುದ್ರಿಕಾರತ್ನಶೋಭಿತಮ್ ॥೧೩॥
ಧನುರ್ಬಾಣಧರಂ ದೇವಂ ಶಙ್ಖಚಕ್ರಗದಾಧರಮ್ ।
ಹಾರಸಿಪ್ಕಾದಿಶೋಭಾಢ್ಯಂ ಸ್ವರ್ಣಯಜ್ಞೋಪವೀತಿನಮ್ ॥೧೪॥
ಮನ್ದಾರಮಾಲಾವಿತತಂ ದಿವ್ಯಚನ್ದನಚರ್ಚಿತಮ್ ।
ಕುನ್ದಾಗ್ರಸುದತಂ ಶಾನ್ತಂ ಸ್ಮಿತಪೂರ್ವಾಭಿಭಾಷಿಣಮ್ ॥೧೫॥
ಸುನಾಸಂ ಸುಭ್ರುವಂ ದೇವಂ ಸುಸ್ಮಿತಂ ಸ್ವಚ್ಛವಿಗ್ರಹಮ್ ।
ವಿಶಾಲಲೋಚನಂ ಭ್ರಾಜತ್ಕುಣ್ಡಲಾಲಙ್ಕೃತಾನನಮ್ ॥೧೬॥
ಬಿಮ್ಬೋಷ್ಠಂ ಕಮ್ಬುಕಣ್ಠಂ ಚ ಸೀತಾಲಿಙ್ಗಿತವಿಗ್ರಹಮ್ ।
ಕಸ್ತೂರೀತಿಲಕಾಶೋಭಿನೀಲಾಳಕವೃತಾನನಮ್ ॥೧೭॥

ಸರ್ವಲೋಕಗಳಿಗೂ ಆಶ್ರಯಭೂತವಾದ ತ್ರಿವಳಿಗಳು ಅವನ ಉದರಪ್ರದೇಶದಲ್ಲಿದ್ದುವು. ಇವನ ಎದೆಯಲ್ಲಿ, ಶ್ರೀವತ್ಸವೆಂಬ ಚಿಹ್ನೆಯೂ ಕೌಸ್ತುಭವೆಂಬ ದಿವ್ಯರತ್ನವೂ ದೇದೀಪ್ಯಮಾನವಾಗಿದ್ದುವು ॥೧೨॥

ಆಗ ಆ ಶ್ರೀರಾಮನು, ಆಜಾನುಬಾಹುವಾಗಿಯೂ—ಕಮಲದ ಮಧ್ಯದಂತೆ ಶೋಭಿಸುವ ಹಸ್ತತಲವುಳ್ಳವನಾಗಿಯೂ ಇದ್ದನು. ರತ್ನಮಯವಾದ ಕಂಕಣಗಳಿಂದಲೂ ಅಂಗದಗಳಿಂದಲೂ ಮುದ್ರಿಕೆಯಿಂದಲೂ ಶೋಭಿಸುತಿದ್ದನು ॥೧೩॥

ಕೈಯಲ್ಲಿ ಧನುಸ್ಸನ್ನೂ ಬಾಣವನ್ನೂ ಶಂಖಚಕ್ರಗಳನ್ನೂ ಧರಿಸಿದ್ದನು. ಎದೆಯಲ್ಲಿ ಮುಕ್ತಾಹಾರಗಳ ಕಾಂತಿಯೂ, ಕನಕಾಭರಣಗಳತೇಜಸ್ಸೂ ಪರಿಪೂರ್ಣವಾಗಿದ್ದುವು. ಸುವರ್ಣಮಯವಾದ ಯಜ್ಞೋಪವೀತವನ್ನು ಹಾಕಿಕೊಂಡಿದ್ದನು ॥೧೪॥

ದಿವ್ಯವಾದ ಮಂದಾರಪುಷ್ಪಮಾಲಿಕೆಯನ್ನು ಧರಿಸಿಕೊಂಡು, ಸರ್ವೋತ್ತಮವಾದ ಗಂಧವನ್ನು ಲೇಪನಮಾಡಿಕೊಂಡಿದ್ದನು. ಅವನ ದಂತಗಳು, ಕುಂದಕೋರಕಗಳ ಅಗ್ರದಂತೆ ವಿರಾಜಿಸುತಿದ್ದುವು. ಅವನು ಶಾಂತನಾಗಿಯೂ ಮಂದಹಾಸವುರಸ್ಸರವಾಗಿ ಮಾತನಾಡುತಲೂ ಇದ್ದನು॥

ಅವನ ನಾಸಿಕೆ ಹುಬ್ಬು ಮುಂತಾದ ಅವಯವಗಳೆಲ್ಲ ಸುಲಕ್ಷಣವಾಗಿದ್ದುವು; ಅವನ ಮಂದಹಾಸವು ಸರ್ವರಿಗೂ ಕ್ಷೇಮಸೂಚವಾಗಿಯೂ, ಶರೀರವು ಅತಿ ನಿರ್ಮಲವಾಗಿಯೂ, ಕಣ್ಣುಗಳು ವಿಶಾಲಗಳಾಗಿಯೂ, ಮುಖವು ಪ್ರಕಾಶಮಾನವಾದ ರತ್ನಕುಂಡಲಗಳಿಂದ ಅಲಂಕೃತವಾಗಿಯೂ ಇದ್ದುವು ॥೧೫॥

ಅವನ ಓಷ್ಠವು ಬಿಂಬಫಲ (ತೊಂಡೆಯ ಹಣ್ಣು) ದಂತೆಯೂ, ಅವನ ಕಂಠವು ಶಂಖದಂತೆ ವರ್ತುಳವಾಗಿಯೂ ಶೋಭಿಸುತಿದ್ದುವು. ಶ್ರೀ ಸೀತಾದೇವಿಯು ಅವನನ್ನಾಲಂಗಿಸಿದ್ದಳು. ಕಪ್ಪಗಿರುವ ಮುಂಗುರುಳುಗಳಿಂದ ವ್ಯಾಪ್ತವಾದ ಅವನ ಮುಖವು, ಕಸ್ತೂರೀತಿಲಕದಿಂದ ಶೋಭಿಸುತಿದ್ದಿತು ॥೧೬॥

ದೀರ್ಘನೀಲಸುಗನ್ಧಾಢ್ಯಕೇಶಬನ್ಧಾದಿಬನ್ಧುರಮ್ ।
ಮಧ್ಯಾಹ್ನಾರ್ಕಸಮಾನಾಭಕಿರೀಟಮಣಿಭಾಸುರಮ್ ॥೧೪॥
ಬಹುವಿದ್ಯುದ್ಗಣಾಬದ್ಧನೀಲಮೇಘಮಿವ ಸ್ಥಿತಮ್ ।
ಸ್ವರ್ಣಧಾತ್ವಙ್ಗಶೋಭ್ಯಙ್ಗತೋದ್ಭಿನ್ನಶಕ್ರನೀಲಾದ್ರಿವಿಗ್ರಹಮ್ ॥೧೫॥
ಅಗ್ರೇ ನಿಷಣ್ಣಹನುಮದ್ವೀಕ್ಷ್ಯತಾಸನಸಜ್ಜಿತಮ್ ।
ತತ್ಪಾಣಿಕಮಲನ್ಯಸ್ತವಾಮಪಾದಾಮ್ಬುಜಂ ಪ್ರಭುಮ್ ॥೧೬॥
ವ್ಯಾಖ್ಯಾನಪರಮಂ ದೇವಂ ಜ್ಞಾನಮುದ್ರಾವಿರಾಜಿತಮ್ ।
ವಾಮಜಾನೂಪರಿನ್ಯಸ್ತವಾಮಹಸ್ತಾಮ್ಬುಜಂ ಗುರುಮ್ ॥೧೭॥
ಭರತೇನ ಧೃತಚ್ಛತ್ರಂ ಶತ್ರುಘ್ನಧೃತಚಾಮರಮ್ ।
ಲಕ್ಷ್ಮಣಾನುಚರಂ ದೇವಂ ಸನಕಾದಿನುಸಿಸ್ತುತಮ್ ॥೧೮॥
ಕಪಿರಾಕ್ಷಸರಾಜಾಭ್ಯಾಂ ದ್ವಾರೋಪಾನ್ತನಿಷೇವಿತಮ್ ।
ಚಿದಾನನ್ದಂ ಚಿದಾಕಾರಂ ಚಿನ್ಮಯಂ ಚಿತ್ಸ್ವರೂಪಿಣಮ್ ॥೧೯॥
ಸದಾನನ್ದಮಯಂ ದೇವಂ ಕೇವಲಂ ನಿತ್ಯಮವ್ಯಯಮ್ ।

ಅವನ ಬಂಧುರ (ದಪ್ಪ) ವಾದ ಕೇಶಬಂಧ (ಜುಟ್ಟುಗಂಟು) ವು, ದೀರ್ಘವಾಗಿಯೂ ಕಪ್ಪಾಗಿಯೂ ಸುಗಂಧಪರಿಪೂರ್ಣವಾಗಿಯೂ ಇದ್ದಿತು. ಮಧ್ಯಾಹ್ನಕಾಲದ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಕಿರೀಟರತ್ನದಿಂದ ಆ ಶ್ರೀರಾಮನು ಪ್ರಕಾಶಿಸುತಿದ್ದನು ॥೧೪॥

ಹೀಗಿರುವುದರಿಂದ, ಅನೇಕ ವಿದ್ಯುತ್ಸಮೂಹಪರಿವೃತವಾದ ನೀಲಮೇಘದಂತೆಯೂ—ಸುವರ್ಣಮಯವಾದ ಧಾತುಗಳಿಂದ ವ್ಯಾಪ್ತವಾದ ಇಂದ್ರನೀಲಪರ್ವತದಂತೆಯೂ ಶೋಭಿಸುತಿದ್ದನು ॥೧೫॥

ಅವನ ಮುಂದುಗಡೆಯಲ್ಲಿ ಹನುಮಂತನು ಕುಳಿತುಕೊಂಡು, ಆ ಶ್ರೀರಾಮನ ಮುಖದಲ್ಲಿಯೇ ದೃಷ್ಟಿಯಿಟ್ಟಿದ್ದನು. ಇಂತಹ ಹನುಮಂತನ ಕರಯುಗ್ಮದಲ್ಲಿ, ಶ್ರೀರಾಮನು ತನ್ನ ವಾಮಪಾದವನ್ನಿಟ್ಟುಕೊಂಡು ಕುಳಿತಿದ್ದನು ॥೧೬॥

ಆ ದೇವನು, ಜ್ಞಾನಮುದ್ರೆಯನ್ನು ಕೈಯಲ್ಲಿ ಧರಿಸಿಕೊಂಡು ವಿರಾಜಿಸುತ, ಸಮಸ್ತರಾದ ಬ್ರಹ್ಮರ್ಷಿಗಳಿಗೂ ತತ್ವರಹಸ್ಯಗಳನ್ನು ವ್ಯಾಖ್ಯಾನಮಾಡುತ, ಎಡತೊಡೆಯ ಮೇಲುಗಡೆ ಎಡದ ಕೈಯನ್ನಿಟ್ಟುಕೊಂಡು, ಸಮಸ್ತರಾದ ಜ್ಞಾನಿಗಳಿಗೂ ಗುರುವಾಗಿದ್ದನು ॥೧೭॥

ಆಗ, ಭರತನು ಛತ್ರಿಯನ್ನೂ—ಶತ್ರುಘ್ನನು ಚಾಮರವನ್ನೂ ಹಿಡಿದುಕೊಂಡಿದ್ದರು. ಆ ರಾಮದೇವನನ್ನು, ಲಕ್ಷ್ಮಣನು ಕೇವಲ ವಿನಯದಿಂದ ಅನುಚರನಾಗಿ ಸೇವಿಸುತಲೂ, ಸನಕಾದಿ ಮುನಿಗಳು ಸ್ತುತಿಸುತಲೂ ಇದ್ದರು ॥೧೮॥

ಆ ಶ್ರೀರಾಮನಿರುವ ಮುಂಟಪದ ಬಾಗಿಲಿನ ಹತ್ತಿರ, ಸುಗ್ರೀವ ವಿಭೀಷಣರು ಕಾಯ್ದುಕೊಂಡಿದ್ದರು. ಅವನು, ಚಿದಾನಂದ ಸ್ವರೂಪನಾಗಿಯೂ—ಚಿದಾಕಾರನಾಗಿಯೂ—ಚಿನ್ಮಯನಾಗಿಯೂ—ಚಿತ್ಸ್ವರೂಪನಾಗಿಯೂ ಇದ್ದನು ॥೧೯॥

ಅವನು, ಸತ್ಯರೂಪನಾಗಿಯೂ—ಆನಂದರೂಪನಾಗಿಯೂ—ಅದ್ವಿತೀಯನಾಗಿಯೂ—

ವಿಭುಂ ಪ್ರಭುಂ ಸರ್ವಗತಂ ಸರ್ವಪ್ರಾಣಿಹೃದಾಲಯಮ್ ॥೨೪॥
ತ್ರಾತಾರಂ ಸರ್ವಲೋಕಾನಾಂ ಭಕ್ತಾನುಗ್ರಹಕಾರಿಣಮ್ ।
ಜಗದುತ್ಪತ್ತಿಸಂಹಾರಕಾರಣಂ ತಮಸಃ ಪರಮ್ ॥೨೫॥
ಏವಂ ಧ್ಯಾತ್ವಾ ರಾಮಚಂದ್ರಂ ಪರಮಾನಂದನಿರ್ಭರಃ ।
ಸರ್ವಂ ಬ್ರಹ್ಮಾಂಡಗೋಳಸ್ಥಂ ರಾಮದೇಹೇ ಸಮೀಕ್ಷತ ॥೨೬॥
ಪೃಥಿವೀ ವಾಯುರಾಕಾಶಃ ಆಪೋ ಜ್ಯೋತಿಶ್ಚ ಪಞ್ಚಮಮ್ ।
ವಿಜೆತ್ರ್ಯಾಪಿ ಸರ್ವಾಣಿ ಭುವನಾನಿ ಚತುರ್ದಶ ॥೨೭॥
ಚಂದ್ರಸೂರ್ಯಾಗ್ರಹಾಶ್ಚೈವ ನಕ್ಷತ್ರಾಣ್ಯಪಿ ತಾರಕಾಃ ।
ಋಷಯೋ ವಾಲಖಿಲ್ಯಾದ್ಯಾಃ ಗೌತಮಾದ್ಯಾಮಹರ್ಷಯಃ ॥೨೮॥
ಧ್ರುವಶ್ಚಾರುಂಧತೀ ದೇವೀ ಶಿಂಶುಮಾರಸ್ತಥೈವ ಚ ।
ವಸವೋ ಲೋಕಪಾಲಾಶ್ಚ ಸನಕಾದ್ಯಾಃ ಪುರಂದರಃ ॥೨೯॥
ಗನ್ಧರ್ವಾಯಕ್ಷರಕ್ಷಾಂಸಿ ದೇವತಾಶ್ಚಾಪ್ಸರಸಾಂ ಗಣಾಃ ।
ಸರ್ವಾನೇತಾನ್ ಮಹಾಭಾಗೋ ರಾಮದೇಹೇ ಸ ಪಶ್ಯತಿ ॥೩೦॥
ಷಡಙ್ಗಸಹಿತಾನ್ ವೇದಾನ್ ಪುರಾಣಾಗಮಸಂಹಿತಾಃ ।
ನಾನಾವಿಜೆತ್ರತನ್ತ್ರಾಣಿ ಸೇತಿಹಾಸಾನ್ಯನೇಕಶಃ ॥೩೧॥

ನಿತ್ಯವಾಗಿಯೂ—ಅವ್ಯಯನಾಗಿಯೂ— ವಿಭುವಾಗಿಯೂ—ಸರ್ವಪ್ರಭುವಾಗಿಯೂ—ಸರ್ವಗತನಾಗಿಯೂ—ಸರ್ವಪ್ರಾಣಿ ಹೃದಯಾವಾಸನಾಗಿಯೂ ಇದ್ದನು ॥೨೪॥

ಅವನು, ಸಮಸ್ತ ಲೋಕರಕ್ಷಕನಾಗಿಯೂ—ಭಕ್ತಾನುಗ್ರಹತತ್ಪರನಾಗಿಯೂ—ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣನಾಗಿಯೂ—ಮಾಯಾತೀತನಾಗಿಯೂ ಇದ್ದನು ॥೨೫॥

ಈ ರೀತಿಯಾಗಿ ಆ ಸೂತಮುನಿಯು ತನ್ನ ಹೃದಯದಲ್ಲಿ ಶ್ರೀ ರಾಮಚಂದ್ರನನ್ನು ಧ್ಯಾನ ಮಾಡಿ, ಪರಮಾನಂದಭರಿತನಾಗಿ, ಈ ಬ್ರಹ್ಮಾಂಡಮಂಡಲದಲ್ಲಿರುವ ಸಮಸ್ತ ಪದಾರ್ಥಸಮುದಾಯವನ್ನೂ ಶ್ರೀರಾಮನ ದೇಹದೊಳಗೆ ಕಂಡನು ॥೨೬॥

ಪೃಥಿವಿ ವಾಯು ಆಕಾಶ ಅಪ್ಪು ತೇಜಸ್ಸು—ಎಂಬ ಪಂಚಮಹಾಭೂತಗಳೂ, ನಾನಾವಿಧವಾದ ಸಮಸ್ತ ಭುವನಗಳೂ, ಆಗ ಶ್ರೀರಾಮನ ದೇಹದೊಳಗೆ ಕಾಣಿಸಿದುವು ॥೨೭॥


ಚಂದ್ರಸೂರ್ಯರುಗಳೂ, ಇತರವಾದ ಗ್ರಹಗಳೂ, ಸಣ್ಣ ದೊಡ್ಡ ನಕ್ಷತ್ರಗಳೂ, ವಾಲಖಿಲ್ಯ ಮೊದಲಾದ ಮುನಿಗಳೂ, ಗೌತಮ ಮುಂತಾದ ಮಹರ್ಷಿಗಳೂ ಇದ್ದರು ॥೨೮॥

ಧ್ರುವ ಅರುಂಧತಿ ಶಿಂಶುಮಾರಚಕ್ರ ಅಷ್ಟವಸುಗಳು ದಿಕ್ಪಾಲಕರು ಸನಕಾದಿ ಮುನಿಗಳು ಇಂದ್ರ ಗಂಧರ್ವರು ಯಕ್ಷರು ರಾಕ್ಷಸರು ದೇವತೆಗಳು ಅಪ್ಸರಸ್ತ್ರೀ ಸಮೂಹಗಳು—ಇವುಗಳೆಲ್ಲವನ್ನೂ ಆ ಮಹಾನುಭಾವನಾದ ಸೂತನು ರಾಮನ ದೇಹದೊಳಗೆ ನೋಡುತಿದ್ದನು ॥

ಮತ್ತು, ಷಡಂಗಸಹಿತವಾದ ವೇದ ಪುರಾಣ ಆಗಮ ಸಂಹಿತೆ—ಇವುಗಳನ್ನೂ, ಅನೇಕವಿಧವಾದ ತಂತ್ರಶಾಸ್ತ್ರಗಳನ್ನೂ, ಅನೇಕವಾದ ಇತಿಹಾಸಗಳನ್ನೂ, ಶತಕೋಟಿವಿಸ್ತಾರವಾದ

ರಾಮಾಯಣಂ ವೇದರೂಪಂ ಶತಕೋಟಿಪ್ರವಿಸ್ತರಮ್ ।
ವಿಚಿತ್ರಂ ರಾಮತತ್ತ್ವಂ ಚ ನಾನಾಶಾಸ್ತ್ರೇಷ್ವನುಷ್ಠಿತಮ್ ॥೩೧॥
ವಿಶ್ವರೂಪೇ ಮಹಾಭೂತೇ ವಿಶ್ವಸ್ಮಿನ್ ಸರ್ವತೋಮುಖೇ ।
ಉರಗಾಃ ಪಕ್ಷಿಣಶ್ಚೈವ ಪಾತಾಳಂ ಭೂರ್ಭುವಾದಿಕಮ್ ॥೩೨॥
ಅನನ್ತಂ ತಕ್ಷಕಂ ಚೈವ ಶೇಷಂ ಕಾರ್ಕೋಟಕಂ ತಥಾ ।
ಕಪಿಲಾದಿಮುನೀನ್ದ್ರಾಂಶ್ಚ ಬಲಿಪ್ರಭೃತಿರಾಕ್ಷಸಾನ್ ॥೩೪॥
ಪಾತಾಳೇಷು ಚ ಸರ್ವೇಷು ಭೂತಂ ಭವ್ಯಂ ಚ ಯದ್ಭವೇತ್ ।
ವರ್ತಮಾನಂ ಚ ತತ್ ಸರ್ವಂ ರಾಮದೇಹೇ ಸ ದೃಷ್ಟವಾನ್ ॥೩೫॥
ಏವಂ ಧ್ಯಾನಬಲಾಲ್ಲಬ್ಧರಾಮಬೋಧಸ್ತದಾ ಮುನೀನ್ ।
ಸೂತಃ ಪ್ರೋವಾಚ ಧರ್ಮಾತ್ಮಾ ತತ್ತ್ವಂ ರಾಮಸ್ಯ ಸಙ್ಗ್ರಹಾತ್ ॥೩೬॥

ಇತಿ ಬಾಲಕಾಣ್ಡೇ ಸೂತಕೃತರಾಮಧ್ಯಾನಾನುವರ್ಣನಂ
ನಾಮ ಚತುರ್ಥಃ ಸರ್ಗಃ.




ವೇದರೂಪವಾದ ರಾಮಾಯಣವನ್ನೂ, ನಾನಾಶಾಸ್ತ್ರಗಳಲ್ಲಿ ಉಕ್ತವಾಗಿರುವ ವಿಚಿತ್ರವಾದ ರಾಮತತ್ವವನ್ನೂ ಅಲ್ಲಿ ಕಾಣುತಿದ್ದನು ॥೩೧-೩೩॥

ವಿಶ್ವರೂಪವಾಗಿಯೂ ಮಹಾಭೂತಸ್ವರೂಪವಾಗಿಯೂ ವಿಶ್ವಾಕಾರವಾಗಿಯೂ ಸರ್ವತೋಮುಖವಾಗಿಯೂ ಇರುವ ಆ ಶ್ರೀರಾಮನ ದೇಹದೊಳಗೆ, ಸರ್ಪಗಳೂ—ಪಕ್ಷಿಗಳೂ—ಪಾತಾಳವೂ—ಭೂರ್ಭುವರಾದಿ ಲೋಕಗಳೂ—ಅನಂತ ತಕ್ಷಕ ಶೇಷ ಕಾರ್ಕೋಟಕ ಮುಂತಾದ ಮಹಾಸರ್ಪಗಳೂ—ಕಪಿಲ ಮುಂತಾದ ಮಹಾಮುನಿಗಳೂ—ಬಲಿಪ್ರಭೃತಿ ಮುಂತಾದ ಮಹಾರಾಕ್ಷಸರೂ—ಇವರೆಲ್ಲರೂ ಇರುವದನ್ನು ಆ ಸೂತನು ನೋಡಿದನು ॥೩೩-೩೫॥

ಮತ್ತೂ, ಸಮಸ್ತವಾದ ಅಧೋಲೋಕಗಳಲ್ಲಿಯೂ ಊರ್ಧ್ವಲೋಕಗಳಲ್ಲಿಯೂ ಭೂತ ಭವಿಷ್ಯದ್ವರ್ತಮಾನಗಳಾದ ಯಾವ ಪದಾರ್ಥಜಾತವಿರಬಹುದೋ, ಅದೆಲ್ಲವನ್ನೂ ಶ್ರೀರಾಮನ ದೇಹದೊಳಗೆ ಆ ಸೂತನು ನೋಡುತಿದ್ದನು ॥೩೫॥

ಈರೀತಿಯಾಗಿ ಧ್ಯಾನಮಹಿಮೆಯಿಂದ ಜ್ಞಾನವನ್ನು ಪಡೆದವನಾಗಿ, ಮಹಾತ್ಮನಾದ ಆ ಸೂತನು, ಆಗ ಮುನಿಗಳನ್ನು ಕುರಿತು ಸಂಕ್ಷೇಪವಾಗಿ ಶ್ರೀರಾಮನ ತತ್ವವನ್ನು ಹೇಳಿದನು ॥

ಇದು ಬಾಲಕಾಂಡದೊಳಗೆ ಸೂತಕೃತ ರಾಮಧ್ಯಾನವರ್ಣನವೆಂಬ
ನಾಲ್ಕನೆಯ ಸರ್ಗವು.



ಅಥ ಬಾಲಕಾಣ್ಡೇ ಪಞ್ಚಮಃ ಸರ್ಗಃ.

ಸೂತಉವಾಚ.

ಯೋಯಂ ಸಾಕ್ಷಾತ್ ಪರಬ್ರಹ್ಮ ಸಚ್ಚಿದಾನನ್ದವಿಗ್ರಹಃ ।
ಏಕಃ ಪರೋಽವ್ಯಯಃ ಸಾಕ್ಷೀ ಕೂಟಸ್ಥೋಽವ್ಯಕ್ತಸಂಜ್ಞಕಃ ॥೧॥
ನಿರಞ್ಜನೋ ನಿರಾಭಾಸೋ ದುರ್ಜ್ಞೇಯೋ ಮಾನವರ್ಜಿತಃ ।
ನಿರ್ವಿಕಲ್ಪೋಽಕ್ಷಯೋ ಮುಕ್ತೋ ನಿರ್ಗುಣೋ ರೂಪವರ್ಜಿತಃ ॥೨॥
ಪ್ರಪಞ್ಚೋಪಶಮಃ ಶುದ್ಧಃ ಸರ್ವಯೋನಿರಜಃ ಶುಭಃ ।
ನಾನ್ತಃಪ್ರಜ್ಞಶ್ಚ ನಪ್ರಜ್ಞೋ ನಾಪ್ರಜ್ಞೋ ನ ಬಹಿಸ್ತಥಾ ॥೩॥
ಅದೃಶ್ಯೋಽವ್ಯವಹಾರ್ಯಶ್ಚ ಮನಸೋಪಿ ನಗೋಚರಃ ।
ಆಕಾಶವತ್ ಸ್ಥಿತೋ ನಿತ್ಯಂ ಸರ್ವತೈವಂವಿಧೋ ವಿಭುಃ ॥೪॥
ಅಪಾಣಿಪಾದೋ ಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ ।

ಬಾಲಕಾಣ್ಡದಲ್ಲಿ ಅಯ್ದನೆಯ ಸರ್ಗವು.

ಹೀಗೆಂದೊಕ್ತರೀಯಾಗಿ ಧ್ಯಾನಮಾಡಿದಬಳಿಕ ಸೂತರು, ಮುನಿಗಳನ್ನು ಕುರಿತು ಹೇಳಲು ಪಕ್ರಮಿಸಿದರು :—

ಅಯ್ಯಾ ಮುನಿಗಳಿರಾ ! ನೀವು ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದಕ್ಕಿಂತ ಮೊದಲು, ಆತ್ಮಸ್ವರೂಪವನ್ನು ಸ್ವಲ್ಪವಾಗಿ ಹೇಳುವೆನು ; ಅದನ್ನು ಕೇಳುವವರಾಗಿರಿ. ಯಾವ ಸಾಕ್ಷಾತ್ ಪರಬ್ರಹ್ಮಪದಾರ್ಥವಿರುವುದೋ, ಅದು —ಸತ್ಯಜ್ಞಾನಾನಂದಸ್ವರೂಪವಾದುದು ; ಅದ್ವಿತೀಯವಾದುದುದು ; ಪರಾತ್ಪರ (ಎಲ್ಲಕ್ಕಿಂತ ಅಚೆಯಿರುವುದು) ವಾದುದು ; ಅದಕ್ಕೆ ನಾಶವಿಲ್ಲ ; ಅದು ಸರ್ವ ಸಾಕ್ಷಿಯಾದ;ದು; ಕೂಟಸ್ಥನೆಂದೂ ಅವ್ಯಕ್ತವೆಂದೂ ಅದಕ್ಕೆ ವ್ಯವಹಾರವು ॥೧॥

ಆ ಬ್ರಹ್ಮಪದಾರ್ಥವು—ನಿರ್ದೋಷವಾದುದು ; ಯಾವವಿಧವಾದ ಆಭಾಸ (ತೋರುವಿಕೆ) ವೂ ಅದರಲ್ಲಿಲ್ಲ; ಮಾಯಾಧೀನರಾದವರು ಅದನ್ನು ತಿಳಿಯುಲಾರರು ; ಇದು ಇಷ್ಟೇ ಇದೆಯೆಂದು ಪರಿಚ್ಛೇದಮಾಡುವುದು ಸಾಧ್ಯವಲ್ಲ ; ಇದರಲ್ಲಿ ಯಾವ ವಿಕಲ್ಪವೂ ಇಲ್ಲ ; ಇದಕ್ಕೆ ಲಯವಿಲ್ಲ ; ಇದು ಮಾಯಾವಾಶದಿಂದ ಮುಕ್ತವಾಗಿರುವುದು ; ಇದರಲ್ಲಿ ಯಾವ ಗುಣವೂ ರೂಪವೂ ಇಲ್ಲ ॥

ಸಮಸ್ತ ಪ್ರಪಂಚವೂ ಇದರಲ್ಲಿ ಲಯಹೊಂದುವುದು; ಇದು ಶುದ್ಧವಾದುದು;ಸಮಸ್ತವೂ ಇದರಿಂದಲೇ ಹುಟ್ಟುವುದು ; ಇದು ಹುಟ್ಟತಕ್ಕ ಸ್ಥಳವಾವುದೂ ಇಲ್ಲ; ಇದು ಸರ್ವದಾ ಶುಭವಾದುದು; ಇದು ಅಂತಃಪ್ರಜ್ಞ (ಒಳಗೆ ಜ್ಞಾನವುಳ್ಳದು) ವೂ ಅಲ್ಲ ; ಬಹಿಃಪ್ರಜ್ಞವೂ ಅಲ್ಲ ; ಜ್ಞಾನವುಳ್ಳದೂ ಅಲ್ಲ ; ಜ್ಞಾನಹೀನವೂ ಅಲ್ಲ ॥೩॥

ಇದು ಯಾರ ಕಣ್ಣಿಗೂ ಗೋಚರವಾಗುವುದಿಲ್ಲ ; ಇದನ್ನು ಹೀಗಿದೆಯೆಂದು ವ್ಯವಹರಿಸುವುದೇ ಅಸಾಧ್ಯವು ; ಕೊನೆಗೆ ಮನಸ್ಸಿಗೂ ಇದು ಗೋಚರವಾಗುವುದಿಲ್ಲ ; ಆಕಾಶದಂತೆ ನಿರ್ಲಿಪ್ತವಾಗಿ ಸರ್ವವ್ಯಾಪಿಯಾಗಿರುವುದು ॥೪॥

ಈ ಪರಬ್ರಹ್ಮವಸ್ತುವು, ಕೈಕಾಲುಗಳಿಲ್ಲದುದಾದರೂ ಅತಿವೇಗವಾಗಿ ಸಂಚರಿಸುತಲೂ

ಸ ವೇತ್ತಿ ವೇದ್ಯಂ ನ ಚ ತಸ್ಯ ವೇತ್ತಾ ತಮಾಹುರಗ್ರ್ಯಂ ಪುರುಷಂಮಹಾನ್ತಮ್॥
ಅಣೋರಣೀಯಾ೯ ಮಹತೋ ಮಹೀಯಾ೯
ಆತ್ಮಾ ಗುಹಾಯಾಂ ನಿಹಿತೋಸ್ಯ ಜನ್ತೋಃ ।
ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾಯಂ ಭೂತ್ವಾಽಭವಿತಾ ವಾ ನ[ಭೂಯಃ ॥೬॥
ಏವಂವಿಧೋ ಬ್ರಹ್ಮತತ್ತ್ವೀ ಜಾತೇ ರಾಘವರೂಪಿಣಿ ।
ತತ್ತತ್ವಮಕ್ಷ್ಮಮಂ ಬೋದ್ಧುಂ ವಿನಾ ರಾಮದಯಾಂ ದ್ವಿಜಾಃ ॥೭॥
ಬ್ರಹ್ಮಾದ್ಯಾಸ್ತಂ ನ ಜಾನನ್ತಿ ತತ್ತ್ವತೋ ಮುನಿ ಪುಙ್ಗವಾಃ ।
ಅನ್ಯೇಷು ಕಾ ಕಥಾ ತತ್ರ ಮಹಾಮೋಹಾಹಿದಂಶಿತಾಃ ॥೮॥
ತಥಾಪಿ ವೇ೯ ಯಥಾಬುದ್ಧಿ ಯಥಾ ಶ್ರುತಮಿದಂ ದ್ವಿಜಾಃ ।
ತಥಾ ವಕ್ಷ್ಯೇ ರಾಮೆತತ್ತ್ವಂ ಸಙ್ಗ್ರಹೇಣ ನಿಬೋಧತ ॥೯॥

(ಕೆಲವು ಪುಸ್ತಕಗಳಲ್ಲಿ ಇಲ್ಲಿಗೇ ಸರ್ಗ ಪೂರೈಸಿದೆ.)

ಗಾಯತ್ರೀನಿಜಗರ್ಭತ್ವಾತ್ ಗಾಯತ್ರ್ಯರ್ಥೈಕಬೋಧಕಮ್ ।
ರಾಮಾಯಣಂ ಯತೋ ವಿಪ್ರಾಃ ದುರ್ಜ್ಞೇಯಂ ಪಣ್ಡಿತೈರಪಿ ॥೧೦॥

ಎಲ್ಲವನ್ನೂ ಹಿಡಿದುಕೊಳ್ಳುತಲೂ ಇರುವುದು; ಕಣ್ಣಿಲ್ಲದಿದ್ದರೂ ನೋಡುವುದು; ಕಿವಿಯಿಲ್ಲದಿದ್ದರೂ ಕೇಳುವುದು. ಅದು ಸಮಸ್ತವಾದ ಜ್ಞೇಯವನ್ನೂ ತಿಳಿದುಕೊಳ್ಳುವುದು; ಅದನ್ನು ತಿಳಿದುಕೊಳ್ಳತಕ್ಕವರು ಯಾರೂ ಇಲ್ಲ. ಇಂತಹ ಬ್ರಹ್ಮಪದಾರ್ಥವನ್ನು, ಎಲ್ಲಕ್ಕೂ ಆದಿಯಾದ ಪುರುಷನೆಂದೂ ಮಹಾತ್ಮನೆಂದೂ ಪ್ರಾಜ್ಞರು ಹೇಳುವರು ॥೫॥

ಮತ್ತು, ಈ ಪರಮಾತ್ಮನು—ಸೂಕ್ಷ್ಮಕ್ಕಿಂತ ಸೂಕ್ಷ್ಮನಾಗಿಯೂ ಮಹತ್ತಿಗಿಂತ ಮಹತ್ತಾಗಿಯೂ ಇರುವನು. ಇವನು ಸಕಲ ಪ್ರಾಣಿಗಳ ಹೃದಯದಲ್ಲಿಯೂ ನೆಲೆಸಿರುವನು. ಇವನು ಯಾವಾಗಲೂ ಹುಟ್ಟುವುದೂ ಇಲ್ಲ; ಸಾಯುವುದೂ ಇಲ್ಲ. ಇವನು ಒಂದಾವೃತ್ತಿಯಿದ್ದವನಾಗಿ ಮತ್ತೆ ಅಭಾವವನ್ನು ಹೊಂದತಕ್ಕವನೂ ಅಲ್ಲ ॥೬॥

ಆರ್ಯಾ! ಬ್ರಾಹ್ಮಣೋತ್ತಮರೇ! ಇಂತಹ ಪರಬ್ರಹ್ಮವು ಶ್ರೀರಾಮರೂಪದಿಂದ ಅವತರಿಸಿರುವಾಗಲೂ, ಆ ಶ್ರೀರಾಮನ ದಯೆಯಿಲ್ಲದೆ ಅದರ ತತ್ವವನ್ನು ತಿಳಿಯುವುದು ಸಾಧ್ಯವಲ್ಲ ॥

ಎಲೈ ಮುನಿಶ್ರೇಷ್ಠರೇ! ಬ್ರಹ್ಮಾದಿಗಳೂ ಅವನನ್ನು ಸ್ಪಷ್ಟವಾಗಿ ಅರಿಯಲಾರರು; ಹೀಗಿರುವಾಗ, ಮಹಾಮೋಹವೆಂಬ ಸರ್ಪದಿಂದ ದಷ್ಟರಾಗಿರುವ ಇತರರ ವಿಷಯವನ್ನು ಹೇಳುವುದೇನು! ॥೮॥

ಆದರೂ, ಆರ್ಯಾ ಬ್ರಾಹ್ಮಣಶ್ರೇಷ್ಠರೇ! ನನಗೆ ಬುದ್ಧಿಯಿರುವಮಟ್ಟಿಗೆ, ನಾನು ಹೇಗೆ ಕೇಳಿ ತಿಳಿದುಕೊಂಡಿರುವೆನೋ ಹಾಗೆಯೇ, ಶ್ರೀರಾಮನ ತತ್ವವನ್ನು ಸಂಕ್ಷೇಪಿಸಿ ಹೇಳುವೆನು; ನೀವು ಅದನ್ನು ತಿಳಿಯುವರಾಗಿರಿ ॥೯॥

ಶ್ರೀಮದ್ರಾಮಾಯಣವು, ತನ್ನೊಳಗೆ ಗಾಯತ್ರಿಯನ್ನೆಲ್ಲ ಒಳಗೊಂಡು ಗಾಯತ್ರಿಯ ಅರ್ಥವನ್ನು ಮುಖ್ಯವಾಗಿ ಬೋಧಿಸತಕ್ಕುದಾಗಿರುವುದು. ಹೀಗಿರುವುದರಿಂದ, ಇದು ಎಂತಹ ಪಂಡಿತರಿಗೂ ತಿಳಿಯಲಸಾಧ್ಯವಾಗಿರುವುದು ॥೧೦॥

ತತೋ ನಾನೇವ ತತ್ತ್ವಂ ಭಾತ್ಯರ್ಥಸ್ತು ವಿಚಾರತಃ ।
ಗಾಯತ್ರ್ಯುಕ್ತಂ ತು ಯತ್ ತತ್ತ್ವಂ ತದೇವಾಸ್ಯೇತಿ ನಿರ್ಣಯಃ ॥೧೧॥

ಋಷಯಊಚುಃ.

ಸೂತಸೂತ ಮಹಾಪ್ರಾಜ್ಞ ತ್ವಾದೃಶಾನಾಂ ಮಹಾತ್ಮನಾಮ್ ।
ಕೃತ್ಯಂ ನ ವಿದ್ಯತೇ ಸ್ವಾರ್ಥಂ ಲೋಕಾನುಗ್ರಹಮಂತರಾ ॥೧೨॥
ತಸ್ಮಾದ್ರಾಮಾಯಣೇ ಸೂತ ಯಾನ್ತ್ರಬೀಜಾನಿ ಯಾನ್ಯಲಮ್ ।
ಕುತ್ರಕುತ್ರ ಸ್ಥಾಪಿತಾನಿ ತಾನ್ಯಾಚಕ್ಷ್ವ ಯಥಾಕ್ರಮಮ್ ॥೧೩॥
ಪದಶೋಕ್ಷರಶಶ್ಚಾರ್ಥಂ ಗಾಯತ್ರ್ಯಾಬೂಹಿ ನೋ ಯಥಾ ।
ಶ್ರೀರಾಮದ್ರಾಮಾಯಣೇ ಯೋರ್ಥಃ ಸ್ಫುರೇದರ್ಥಶ್ಚ ಗೋಪಿತಃ ॥೧೪॥

ಸೂತಉವಾಚ.

ಗುಹ್ಯಮೇತದ್ಭವತ್ಪೃಷ್ಟಂ ನ ವಾಚ್ಯಂ ಯಸ್ಯಕಸ್ಯಚಿತ್ ।
ತಥಾಪಿ ವಕ್ಷ್ಯೇ ವಃ ಪ್ರೀತ್ಯಾ ಯಥಾಶ್ರುತಮಹಂ ದ್ವಿಜಾಃ ॥೧೫॥
ಗುಣಾಢ್ಯತ್ವಂ ಕಾರಣತ್ವಂ ಶರಣ್ಯತ್ವಂ ಪ್ರಕಾಶತಾ ।
ಪ್ರಕಾಶಿತ್ವಂ ಚ ನಿಖಿಲೈಃ ಧ್ಯೇಯತ್ವಂ ಚ ನಿಯನ್ತೃತಾ ।
ಏತೇ ಬ್ರಹ್ಮಗುಣಾನಿತ್ಯಾಃ ಗಾಯತ್ರ್ಯಪದಬೋಧಿತಾಃ ॥೧೬॥

ಅದುಕಾರಣ, ಇದರ ಶಬ್ದವು ನಾನಾವಿಧವಾಗಿರುವಂತೆ ತೋರುವುದು. ಆದರೆ, ವಿಚಾರ ಮಾಡಿ ನೋಡುವಾಗ, ಗಾಯತ್ರಿಯಿಂದ ಉಕ್ತವಾಗುವ ಶಬ್ದವಾವುದೋ—ಅದೇ ಈ ರಾಮಾಯಣದ ಅರ್ಥವೆಂದು ನಿಶ್ಚಯವುಂಟಾಗುವುದು ॥೧೧॥

ಋಷಿಗಳು ಹೇಳುವರು :—

ಎಲೈ ಸೂತನೆ! ಮಹಾಪ್ರಾಜ್ಞನೆ! ನಿಮ್ಮಂತಹ ಮಹಾತ್ಮರಿಗೆ, ಲೋಕಾನುಗ್ರಹವನ್ನು ಬಿಟ್ಟು—ಸ್ವಾರ್ಥವಾದ ಕೆಲಸವೊಂದೂ ಇರುವುದಿಲ್ಲ ॥೧೨॥

ಅದುಕಾರಣ, ರಾಮಾಯಣದೊಳಗೆ ಯಾವಯಾವ ಸ್ಥಳದಲ್ಲಿ ಯಾವಯಾವ ಮಂತ್ರ ಬೀಜಗಳು ಇಡಲ್ಪಟ್ಟಿರುವುವು? ಅವುಗಳನ್ನು ಯಥಾಕ್ರಮವಾಗಿ ನಮಗೆ ಹೇಳುವವನಾಗು ॥

ಗಾಯತ್ರಿಯ ಪದಪದಕ್ಕೂ ವರ್ಣವರ್ಣಕ್ಕೂ ಹೇಗೆ ಅರ್ಥವಿದೆಯೋ ಅದನ್ನೂ, ಶ್ರೀರಾಮದ್ರಾಮಾಯಣದಲ್ಲಿ ಯಾವ ಅರ್ಥವಿದೆಯೋ ಅದನ್ನೂ, ಅಲ್ಲಿರುವ ರಹಸ್ಯಾರ್ಥವನ್ನೂ ನಮಗೆ ಹೇಳುವವನಾಗು ॥೧೪॥

ಸೂತರು ಹೇಳುವರು :—

ಆಯ್ಯಾ! ಬ್ರಾಹ್ಮಣರಾ! ನೀವು ಕೇಳಿದ ಈ ಪ್ರಶ್ನೆಯು ಅತಿ ರಹಸ್ಯವಾದುದು; ಸಾಮಾನ್ಯವಾಗಿ ಯಾರೊಬ್ಬರಿಗೂ ಹೇಳಲ್ಪಡಕ್ಕುದಲ್ಲ. ಆದರೂ, ನಿಮ್ಮ ವಿಷಯದಲ್ಲಿ ಪ್ರೀತಿಯಿರುವುದರಿಂದ, ನಾನು ಹೇಗೆ ಕೇಳಿರುವೆನೋ ಹಾಗೆಯೇ ಹೇಳುವೆನು ॥೧೫॥

ಗುಣಾಢ್ಯತ್ವ, ಕಾರಣತ್ವ, ಶರಣ್ಯತ್ವ, ಪ್ರಕಾಶಕತ್ವ, ಪ್ರಕಾಶಿತ್ವ, ಸರ್ವಧ್ಯೇಯತ್ವ, ನಿಯಾಮಕತ್ವ,—ಇವಿಷ್ಟೂ ಪರಬ್ರಹ್ಮನಲ್ಲಿರುವ ಗುಣಗಳು. ಇವುಗಳೆಲ್ಲವೂ ಗಾಯತ್ರಿಯ ಪದಗಳಿಂದ ಬೋಧಿಸಲ್ಪಟ್ಟಿರುವುವು ॥೧೬॥

ಪ್ರಥಮೇನ ಗುಣಾಢ್ಯತ್ವಂ ಕಾರಣತ್ವಂ ದ್ವಿತೀಯತಃ ।
ತೃತೀಯೇನ ಶರಣ್ಯತ್ವಂ ಭಾಸಕತ್ವಂ ಚತುರ್ಥತಃ ॥೧೭॥
ಪಞ್ಚಮೇನ ಪದೇನೈವ ಪ್ರಕಾಶಿತ್ವಂ ಪ್ರಬೋಧ್ಯತೇ ।
ಷಷ್ಠೇನ ಧ್ಯೇಯತಾನ್ಯೈಶ್ಚ ಚತುರ್ಭಿಶ್ಚ ನಿಯನ್ತೃತಾ ॥೧೪॥
ಏವಂ ನಿರುಕ್ತೋ ಗಾಯತ್ರ್ಯಃ ಪ್ರಾಕ್ತನೈಃ ಪದಸಞ್ಚಯಃ ।
ಶ್ರೀರಾಘವೇಪಿ ದೃಶ್ಯನ್ತೇ ಮನ್ತ್ರವಾಚ್ಯಾ ಇಮೇ ಗುಣಾಃ ॥೧೯॥
ಕೋನ್ವಸ್ಮಿನ್ ಸಾಮ್ಪ್ರತಂ ಲೋಕೇ ಇತ್ಯಾರಭ್ಯ ವಿಶೇಷತಃ ।
ಉಕ್ತಾ ಗುಣಾಢ್ಯತಾ ವಿಷ್ಣೋಃ ಶ್ಲೋಕೈರಪ್ಯಾದಶೈಃ ಸ್ಫುಟಮ್ ॥೨೦॥
ಗುಣಪ್ರಕರಣೋತ್ಪ್ರೇರ್ಯಾಪ್ಯುಕ್ತಾಃ ಕಾರಣತಾದಯಃ ।
ಪ್ರಜಾಪತಿಸಮಃ ಶ್ರೀಮಾನ್ ಧಾತೇತಿ ಸ್ಪಷ್ಟಮುದೀರಿತಾ ॥೨೧॥
ಸಂಹರ್ತೃತ್ವಂ ಚ ತತ್ರಾಪಿ ರಿಪುಘಾತಿನಮಿತ್ಯತಃ ।
ರಕ್ಷಿತಾ ಜೀವಲೋಕಸ್ಯೇತ್ಯಾದಿನಾ ಸ್ಥಿತಿಕರ್ತೃತಾ ॥೨೨॥
ಸರ್ವದಾಭಿಗತಃ ಸದ್ಭಿಃ ಇತ್ಯಾದಿಷು ಶರಣ್ಯತಾ ।
ಯಶಸ್ವೀ ಜ್ಞಾನಸಮ್ಪನ್ನಃ ಇತಿ ಪ್ರೋಕ್ತಾ ಪ್ರಕಾಶತಾ ॥೨೩॥

ಮೊದಲನೆಯ ಪದದಿಂದ ಗುಣಾಢ್ಯತ್ವವೂ, ಎರಡನೆಯ ಪದದಿಂದ ಸಕಲಜಗತ್ಕಾರ
ತ್ವವೂ, ಮೂರನೆಯದರಿಂದ ಶರಣಾಗತರಕ್ಷಕತ್ವವೂ, ನಾಲ್ಕನೆಯದರಿಂದ ಪ್ರಕಾಶಕತ್ವವು
ಅಯ್ದನೆಯದರಿಂದ ಸ್ವಯಂಪ್ರಕಾಶಸಹಿತತ್ವವೂ, ಆರನೆಯದರಿಂದ ಧ್ಯಾನವಿಷಯತ್ವವೂ, ಉಳಿ
ನಾಲ್ಕುಪದಗಳಿಂದ ಸಕಲ ನಿಯಾಮಕತ್ವವೂ ಬೋಧಿಸಲ್ಪಡುವುವು ॥೧೭-೧೪॥

ಹೀಗೆ ಗಾಯತ್ರಿಯ ಪದಸಮುದಾಯವನ್ನು ಪ್ರಾಚೀನರು ನಿರ್ವಚನಮಾಡಿರುವರ
ಈ ಗಾಯತ್ರೀಮಂತ್ರಬೋಧ್ಯವಾಗಿರುವ ಗುಣಗಳು, ಶ್ರೀರಾಮನಲ್ಲಿಯೂ ಸ್ಪಷ್ಟವಾ
ಕಾಣುವುವು ॥೧೯॥

ಶ್ರೀಮದ್ರಾಮಾಯಣದ ಮೊದಲನೆಯ ಸರ್ಗದಲ್ಲಿಯೇ 'ಕೋನ್ವಸ್ಮಿನ್ ಸಾಮ್ಪ್ರತ
ಲೋಕೇ' ಇತ್ಯಾದಿಯಾಗಿ ಹದಿನೆಂಟು ಶ್ಲೋಕಗಳಲ್ಲಿ ಶ್ರೀ ಮಹಾವಿಷ್ಣುವಿನ ಗುಣಾಢ್ಯತ್ವ
ಸ್ಪಷ್ಟವಾಗಿ ಉಕ್ತವಾಗಿರುವುದು ॥೨೦॥

ಮತ್ತು, ಈ ಗುಣನಿರೂಪಣ ಪ್ರಕರಣದಲ್ಲಿಯೇ ಜಗತ್ಕಾರಣತ್ವ ಮುಂತಾದುವು ಹೇ
ಲ್ಪಟ್ಟಿರುವುವು. 'ಪ್ರಜಾಪತಿಸಮಃ, ಶ್ರೀಮಾನ್, ಧಾತಾ' ಇತ್ಯಾದಿ ಶಬ್ದಗಳಿಂದ ಪ್ರಪಂ
ಸೃಷ್ಟಿಕರ್ತೃತ್ವವುಕ್ತವಾಗಿರುವುದು ॥೨೧॥

ಅಲ್ಲಿಯೇ 'ರಿಪುಘಾತಿನಂ' ಎಂಬ ಶಬ್ದದಿಂದ ಸಂಹಾರಕತ್ವವೂ ಉಕ್ತವಾಯ್ತು. 'ರಕ್ಷಿತ
ಜೀವಲೋಕಸ್ಯ' ಎಂಬುದರಿಂದ ಸ್ಥಿತಿಕರ್ತೃವು ಹೇಳಲ್ಪಟ್ಟಿತು ॥೨೨॥

'ಸರ್ವದಾಭಿಗತಃ ಸದ್ಭಿಃ' ಇತ್ಯಾದಿ ಸ್ಥಳಗಳಲ್ಲಿ ಶರಣಾಗತರಕ್ಷಕತ್ವವು ಹೇಳಲ್ಪಟ್ಟಿತ
'ಯಶಸ್ವೀ ಜ್ಞಾನಸಮ್ಪನ್ನಃ' ಎಂಬುದರಿಂದ ಪ್ರಕಾಶಕತ್ವವು ತಿಳಿಯಿಸಲ್ಪಟ್ಟಿರುವುದು ॥೨೩॥

ಧರ್ಮಜ್ಞಃ ಸತ್ಯಸನ್ಧಶ್ಚ ಪ್ರಜಾನಾಂ ಚ ಹಿತೇ ರತಃ ।
ಇತ್ಯತ್ರ ಸ್ಥಿತಧರ್ಮಜ್ಞಪದೇನೋಕ್ತಾ ಪ್ರಕಾಶಿತಾ ॥೨೪॥

ಯಶಸ್ವೀ ಜ್ಞಾನಸಮ್ಪನ್ನಃ ಶುಚಿರ್ವಶ್ಯಃ ಸಮಾಧಿಮಾ್ ।
ಇತ್ಯತ್ರ ವಶ್ಯಶಬ್ದೇನ ಭಕ್ತವಶ್ಯತ್ವವಾಚಿನಾ ॥೨೫॥

ಧ್ಯೇಯತ್ವಮುಕ್ತಮರ್ಧೇನ ದ್ಯುತಿಮಾ್ ಧೃತಿಮಾ್ ವಶೀ ।
ಇತ್ಯಾದಿಪದಸನ್ದೋಹಾತ್ ಜ್ಞೋಧ್ಯತೇ ಚ ನಿಯನ್ತೃತಾ ॥೨೬॥

ಏವಂ ಗುಣಾಮಹಾವಿಷ್ಣೋಃ ಅರ್ಥತಃ ಪ್ರತಿಪಾದಿತಾಃ ।
ವೃತ್ತಾನ್ತೇ ಯೌವರಾಜ್ಯಾದೌ ಸೂಚ್ಯನ್ತೇ ತಇಮೇ ಗುಣಾಃ ॥೨೭॥

ಸಾಮಾನ್ಯೇನ ಗುಣಾಢ್ಯತ್ವಂ ಸುಪುಷ್ಟಂ ತತ್ರತತ್ರ ಚ ॥೨೮॥

ಶಬರೀಶರಭಙ್ಗಾದಿವೃತ್ತಾನ್ತೇ ಸ್ಥಿತಿಕರ್ತೃತಾ ।
ದಶಗ್ರೀವವಧಾರ್ಥೇ ತು ವೃತ್ತಾನ್ತೇ ಲಯಕರ್ತೃತಾ ।
ಇತ್ಯಾದೌ ಜನ್ಮಕರ್ತೃತ್ವಂ ಸಮುತ್ಥಾಪ್ಯ ಚ ವಾನರಾ ॥೨೯॥

ವಿಭೀಷಣಾದಿವೃತ್ತಾನ್ತೇ ಶರಣ್ಯತ್ವಂ ಪ್ರಕೀರ್ತಿತಮ್ ।
ನಿಗ್ರಹಾನುಗ್ರಹಾಭ್ಯಾಂ ಚ ಸರ್ವತ್ರೋಕ್ತಾ ಪ್ರಕಾಶತಾ ॥೩೦॥

'ಧರ್ಮಜ್ಞಃ ಸತ್ಯಸನ್ಧಶ್ಚ ಪ್ರಜಾನಾಂ ಚ ಹಿತೇರತಃ' ಎಂಬ ಕಡೆಯಲ್ಲಿರುವ ಧರ್ಮಜ್ಞ ಶಬ್ದದಿಂದ ಪ್ರಕಾಶಸಹಿತತ್ವವುಕ್ತವಾಯ್ತು ॥೨೪॥

'ಯಶಸ್ವೀ ಜ್ಞಾನಸಮ್ಪನ್ನಃ ಶುಚಿರ್ವಶ್ಯಃ ಸಮಾಧಿಮಾ್' ಎಂಬ ಕಡೆಯಲ್ಲಿರುವ ಭಕ್ತ ಪರಾಧೀನತ್ವವಾಚಕವಾದ ವಶ್ಯಶಬ್ದದಿಂದ, ಧ್ಯೇಯತ್ವವು ಅರ್ಧವಾಗಿ ಹೇಳಲ್ಪಟ್ಟಿತು. 'ದ್ಯುತಿಮಾ್ ಧೃತಿಮಾ್ ವಶೀ' ಇತ್ಯಾದಿ ಪದಸಮುದಾಯದಿಂದ ನಿಯಾಮಕತ್ವವು ಬೋಧಿಸಲ್ಪಡುವುದು ॥೨೫-೨೬॥

ಹೀಗೆ ಶ್ರೀಮನ್ಮಹಾವಿಷ್ಣುವಿನ ಗುಣಗಳು, ಶಬ್ದಾರ್ಥನಿರೂಪಣಕಾಲದಲ್ಲಿ ತೋರಿಸಲ್ಪಟ್ಟುವು. ಇವು, ಯೌವರಾಜ್ಯಾಭಿಷೇಕಮುಂತಾದಸಮಯಗಳಲ್ಲಿ ತೋರಿಸಲ್ಪಟ್ಟಿರುವುವು. ಇದಲ್ಲದೆ, ಅಲ್ಲಲ್ಲಿ ಪ್ರಕರಣಾನುಸಾರವಾಗಿ ಸಾಮಾನ್ಯತಃ ಗುಣಾಢ್ಯತ್ವವು ಚೆನ್ನಾಗಿ ಪರಿಪೋಷಿಸಲ್ಪಟ್ಟಿರುವುದು ॥೨೭-೨೮॥

ಶಬರಿ ಶರಭಂಗ ಮುಂತಾದವರ ವೃತ್ತಾನ್ತದಲ್ಲಿ ಸ್ಥಿತಿಕರ್ತೃತ್ವವೂ, ರಾವಣವಧವೃತ್ತಾನ್ತದಲ್ಲಿ ಲಯಕರ್ತೃತ್ವವೂ, 'ಸಮುತ್ಥಾಪ್ಯ ಚ ವಾನರಾ' ಇತ್ಯಾದಿಸ್ಥಳಗಳಲ್ಲಿ ಉತ್ಪತ್ತಿಕರ್ತೃತ್ವವೂ ತೋರಿಸಲ್ಪಟ್ಟಿರುವುವು ॥೨೯॥

ವಿಭೀಷಣ ಮುಂತಾದವರ ವೃತ್ತಾನ್ತದಲ್ಲಿ, ಶರಣಾಗತರಕ್ಷಕತ್ವವು ನಿರೂಪಿಸಲ್ಪಟ್ಟಿರುವುದು. ಸರ್ವತ್ರ ನಿಗ್ರಹಾನುಗ್ರಹ ಶಕ್ತಿಯನ್ನು ತೋರಿಸಿರೋಣದರಿಂದ ಪ್ರಕಾಶಕತ್ವವು ಹೇಳಲ್ಪಟ್ಟಿತು ॥೩೦॥

ಚಾತುರ್ವರ್ಣ್ಯಂ ಚ ಲೋಕೇಸ್ಮಿನ್ ಸ್ವೇಸ್ವೇ ಧರ್ಮೇ ನಿಯೋಕ್ಷ್ಯತಿ ।
ಇತ್ಯಾದಿಷು ನಿಯನ್ತೃತ್ವಂ ಇತ್ಯರ್ಥಃ ಸಾಮ್ಪ್ರದಾಯಿಕಃ ॥೫೧॥
ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ ।
ಇತ್ಯತ್ರೋಕ್ತಾ ಧ್ಯೇಯತಾ ಚ ಶ್ರೀರಾಮಸ್ಯ ಪರಾತ್ಮನಃ ॥೫೨॥
ಉಕ್ತಾರ್ಥವಿಷಯೇಪ್ಯನ್ಯೋ ವಿಶೇಷಃ ಸಾಮ್ಪ್ರದಾಯಿಕಃ ।
ಅಸ್ತೀ ಗುಹ್ಯತಮಃ ಸೋಪಿ ವಿಸ್ತರೇಣ ಪ್ರಕಾಶ್ಯತೇ ॥೫೩॥
ಅದ್ಯವರ್ಣೋ ಹರೇರ್ವಕ್ತಿ ಸತ್ಯಜ್ಞಾನಾದಿಕಾ ಗುಣಾ ।
ಸಶ್ಚ ಸತ್ಯಪ್ರತಿಜ್ಞತ್ವಂ ವಕ್ತಿ ವಿಷ್ಣೋಃ ಪರಾತ್ಮನಃ ॥೫೪॥
ವಿಷ್ಣೋರ್ವಿಭೂತಿಸಾಮರ್ಥ್ಯಂ ವಿಕಾರೇಣ ವಿಬೋಧ್ಯತೇ ।
ತುಕಾರೇಣೋಚ್ಯತೇ ವಿಷ್ಣೋಃ ಚಕ್ರಾದ್ಯಾಯುಧಸಙ್ಗ್ರಹಃ ॥೫೫॥
ವಕ್ತಿ ಪೂರ್ವವಕಾರೋಯಂ ಹರೇರಭಯದಾಯಿತಾಮ್ ।
ರೇಕಾರಃ ಶ್ರೀಭಗವತೋ ವಕ್ತಿ ಭಕ್ತಿನಿಷೇವ್ಯತಾಮ್ ॥೫೬॥
ಣಕಾರೋ ಬ್ರಹ್ಮಣೋ ವಕ್ತಿ ದೀನಾನಾಥಶರಣ್ಯತಾಮ್ ।
ಯಃ ಪೂರ್ವಪಾದಾನ್ತಗತೋ ಮಿತ್ರವಿಶ್ವಾಸವಾಚಕಃ ॥೫೭॥

'ಚಾತುರ್ವರ್ಣ್ಯಂ ಚ ಲೋಕೇಸ್ಮಿನ್ ಸ್ವೇಸ್ವೇ ಧರ್ಮೇ ನಿಯೋಕ್ಷ್ಯತಿ' ಇತ್ಯಾದಿ ಸ್ಥಳಗಳಲ್ಲಿ ನಿಯಾಮಕತ್ವವು ತೋರಿಸಲ್ಪಟ್ಟಿರುವುದು. ಇದು ಸಂಪ್ರದಾಯಗತವಾದ ಅರ್ಥವು ॥೫೧॥

'ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ' ಎಂಬ ಸ್ಥಳದಲ್ಲಿ, ಪರಮಾತ್ಮನಾದ ಶ್ರೀರಾಮನು ಸರ್ವರಿಗೂ ಧ್ಯೇಯನೆಂಬ ವಿಷಯವುಕ್ತವಾಯ್ತು ॥೫೨॥

ಇದುವರೆಗೆ ಹೇಳಲ್ಪಟ್ಟಿರುವ ವಿಷಯದಲ್ಲಿ, ಸಂಪ್ರದಾಯಗತವಾದ ರಹಸ್ಯಾರ್ಥವಿನ್ನೂ ವಿಶೇಷವಾಗಿರುವುದು. ಅದು ಇಲ್ಲಿ ಪ್ರಕಾಶಪಡಿಸಲ್ಪಡುವುದು ॥೫೩॥

ಗಾಯತ್ರಿಯ ಮೊದಲನೆಯಕ್ಷರವು, ಶ್ರೀಹರಿಯು ಸತ್ಯಜ್ಞಾನಾದಿಗುಣಗಳನ್ನು ಹೇಳುವುದು. ಎರಡನೆಯದಾದ ಸಕಾರವು, ಪರಮಾತ್ಮನಾದ ವಿಷ್ಣುವು ಸತ್ಯಪ್ರತಿಜ್ಞನೆಂಬ ವಿಷಯವನ್ನು ಬೋಧಿಸುವುದು ॥೫೪॥

ಗಾಯತ್ರಿಯಲ್ಲಿ ಮೂರನೆಯದಾದ 'ವಿ' ಎಂಬ ಅಕ್ಷರದಿಂದ, ವಿಷ್ಣುವಿನ ವಿಭೂತಿಸಾಮರ್ಥ್ಯವು ಬೋಧಿಸಲ್ಪಡುವುದು. ತುಕಾರದಿಂದ, ವಿಷ್ಣುವಿನ ಚಕ್ರಾದ್ಯಾಯುಧಸಂಪತ್ತು ತೋರಿಸಲ್ಪಡುವುದು ॥೫೫॥

ಗಾಯತ್ರಿಯೊಳಗಣ ವಕಾರಗಳಲ್ಲಿ ಮೊದಲನೆಯದು, ಶ್ರೀಹರಿಯು ಅಭಯಪ್ರದನೆಂಬುದನ್ನು ತೋರಿಸುವುದು. ರೇಕಾರವು, ಭಗವಂತನು ಭಕ್ತಿಯಿಂದ ಸೇವಿಸಲ್ಪಡತಕ್ಕವನೆಂಬುದನ್ನು ಹೇಳುವುದು ॥೫೬॥

ಣಕಾರವು, ಬ್ರಹ್ಮನು ದೀನರಿಗೂ ಅನಾಥರಿಗೂ ರಕ್ಷಕನೆಂಬುದನ್ನು ತಿಳಿಯಪಡಿಸುವುದು. ಗಾಯತ್ರಿಯು ಪ್ರಥಮಪಾದದ ಕೊನೆಯಲ್ಲಿರುವ ಯಕಾರವು, ಶ್ರೀ ಪರಮಾತ್ಮನಲ್ಲಿರುವ ಮಿತ್ರವಿಶ್ವಾಸವನ್ನು ಹೇಳುವುದು ॥೫೭॥

ಬಲಾವಿಷ್ಕರಣಂ ವಿಷ್ಣೋಃ ಭಕಾರೇಣ ಪ್ರಕಾಶ್ಯತೇ ।
ಆಶ್ರಿತಾನನ್ದದಾತೃತ್ವಂ ಗಕಾರೇಣಾಭಿಧೀಯತೇ ॥೫೪॥
ದೇಕಾರೇಣ ವಕಾರೇಣ ಸರ್ವಪೂಜ್ಯತ್ವಮುಚ್ಯತೇ ।
ಸ್ಯಕಾರೇಣೋಚ್ಯತೇ ವಿಷ್ಣೋಃ ದೀನದುಃಖಾಪನೋದನವ್ ॥೫೫॥
ಧೀಶಬ್ದಃ ಸ್ಯಾದ್ಭಗವತೋ ಧರ್ಮಸಂಸ್ಥಾನವಾಚಕಃ ।
ಅಧಿವ್ಯಾಧಿಹರತ್ವಾರ್ಥೇ ಮಶ್ಚ ಹಿಶ್ಚಾಕ್ಷರೇ ಉಭೇ ॥೫೬॥
ಧಿಶಬ್ದಾಚ್ಚುಭಸದ್ವೃತ್ತ್ಯೋಃ ಹೇತುತ್ವಮಭಿಧೀಯತೇ ।
ನಾನಾಭೀತಿಪ್ರಹಾರಿತ್ವಂ ಯದ್ವಯೇನಾಭಿಧೀಯತೇ ॥೫೭॥
ನಾನಾಜನಾಖಿಲೈಶ್ವರ್ಯಪ್ರದತ್ವಂ ವಕ್ತಿ ನಃಪದವ್ ।
ನಿಸ್ಸೀಮೋದ್ಯಧಿಕಸ್ಥಾನಪ್ರಾಪ್ತಿರುಕ್ತಾ ಪ್ರಶಬ್ದತಃ ॥೫೮॥
ಸರ್ವಲೋಕನಿಯನ್ತೃತ್ವಂ ಚೋಶಬ್ದೇನಾಭಿಧೀಯತೇ ।
ವಿಭೂತಿದ್ವಿತಯೈಶ್ವರ್ಯಂ ಉಕ್ತಂ ವಿಷ್ಣೋರ್ದಶಬ್ದತಃ ॥೫೯॥
ಸಮಸ್ತಫಲದಾತೃತ್ವಂ ಯಾದಿತ್ಯಕ್ಷರತೋನ್ತಿಮಾತ್ ॥೬೦॥

ಗಾಯತ್ರೀ ದ್ವಿತೀಯವಾದದ ಪ್ರಥಮಾಕ್ಷರವಾದ ಭಕಾರವು, ಶ್ರೀ ವಿಷ್ಣುವು ಬಲಪ್ರದರ್ಶನ ಮಾಡುವಿಕೆಯನ್ನು ಪ್ರಕಟಪಡಿಸುವುದು. ಗಕಾರದಿಂದ, ಆಶ್ರಿತಜನ ಸಂತೋಷಪ್ರದತ್ವವು ಹೇಳಲ್ಪಡುವುದು ॥೫೪॥

ದೇಕಾರದಿಂದಲೂ, ವಕಾರದಿಂದಲೂ, ವಿಷ್ಣುವು ಸರ್ವಪೂಜ್ಯನೆಂಬ ವಿಷಯವು ಹೇಳಲ್ಪಡುವುದು. 'ಸ್ಯ' ಎಂಬ ಅಕ್ಷರದಿಂದ, ವಿಷ್ಣುವು ಸರ್ವದುಃಖವನ್ನೂ ಅಪಹರಿಸಿತಕ್ಕವನೆಂಬುದು ತೋರಿಸಲ್ಪಡುವುದು ॥೫೫॥

'ಧೀ' ಎಂಬ ವರ್ಣವು, ಭಗವಂತನ ಧರ್ಮಾಸಂಸ್ಥಾಪಕತ್ವವನ್ನು ಹೇಳತಕ್ಕದ್ದು. ಮಕಾರ ಹಿಕಾರಗಳೆರಡೂ, ಪರಮಾತ್ಮನು ಆಧಿವ್ಯಾಧಿಹರನೆಂಬ ಅರ್ಥವನ್ನು ಹೇಳುವುವು ॥೫೬॥

ಗಾಯತ್ರಿಯ ಮೂರನೆಯ ಪಾದದಲ್ಲಿ ಪ್ರಥಮವಾದ 'ಧಿ' ಎಂಬ ಅಕ್ಷರವು, ಪರಮಾತ್ಮನು ಶುಭಕ್ಕೂ ಸದ್ವೃತ್ತಿಗೂ ಹೇತುಭೂತನೆಂದು ಹೇಳುವುದು. ಅಲ್ಲಿಂದ ಮುಂದಿರತಕ್ಕ ಎರಡು ಯಕಾರಗಳು, ಪರಮಾತ್ಮನು ನಾನಾವಿಧಭೀತಿಗಳನ್ನು ಸಂಹರಿಸತಕ್ಕವನೆಂದು ಹೇಳುವುವು ॥೫೭॥

'ನಃ' ಎಂಬ ಅಕ್ಷರವು, ಶ್ರೀ ಮಹಾವಿಷ್ಣುವು ಸಮಸ್ತಜನರಿಗೂ ಸಕಲವಿಧವಾದ ಐಶ್ವರ್ಯವನ್ನೂ ಕೊಡತಕ್ಕವನೆಂದು ಹೇಳುವುದು. 'ಪ್ರ' ಎಂಬ ಅಕ್ಷರದಿಂದ, ನಿಸ್ಸೀಮತೆ ಮೊದಲಾದ ಉತ್ತಮಸ್ಥಾನಗಳ ಪ್ರಾಪ್ತಿಯು ಹೇಳಲ್ಪಡುವುದು ॥೫೮॥

'ಚೋ' ಎಂಬ ವರ್ಣದಿಂದ, ಸರ್ವಲೋಕನಿಯಾಮಕತ್ವವು ಹೇಳಲ್ಪಡುವುದು. 'ದ' ಎಂಬ ಅಕ್ಷರದಿಂದ ಶ್ರೀ ವಿಷ್ಣುವು ನಿತ್ಯವಿಭೂತಿ ಲೀಲಾವಿಭೂತಿಗಳಿಗೊಡೆಯನೆಂಬುದು ತೋರಿಸಲ್ಪಟ್ಟಿರುವುದು. ಗಾಯತ್ರಿಯ ಕೊನೆಯಲ್ಲಿರುವ 'ಯಾತ್' ಎಂಬ ಅಕ್ಷರದಿಂದ, ಶ್ರೀಹರಿಯು ಸಕಲಫಲಪ್ರದಾತನೆಂಬುದು ಸ್ಪಷ್ಟಪಡುವುದು ॥೫೯-೬೦॥

ಏವಮೇತೇ ಬ್ರಹ್ಮಗುಣಾಃ ಗಾಯತ್ರೀವರ್ಣಬೋಧಿತಾಃ ।
ತತ್ತದ್ಗುಣಪರಗ್ರನ್ಥೇ ತೇತೇ ವರ್ಣಾಃ ಸಮುದ್ಧೃತಾಃ ॥೪೫॥
ಸಂಕ್ಷೇಪೋಪಕ್ರಮೇ ಮನ್ತ್ರಪ್ರಥಮಾಕ್ಷರಮುದ್ಧೃತಮ್ ।
ಸ ಜಗಾಮ ವನಂ ವೀರಃ ಇತಿ ಸಕ್ಷ ಸಮುದ್ಧೃತಃ ॥೪೬॥
ವಿರಾಧಂ ರಾಕ್ಷಸಂ ಹತ್ವೇತ್ಯತ್ರ ವಿಕ್ಷ ಸಮುದ್ಧೃತಃ ।
ಖಡ್ಗಂ ಚ ಪರಮಪ್ರೀತಃ ತೂಣೀ ಚೇತ್ಯತ್ರ ಚಾಪಿ ತುಃ ॥೪೭॥
ವಸತಸ್ತಸ್ಯ ರಾಮಸ್ಯೇತ್ಯಾದಾವೇವ ವಉದ್ಧೃತಃ ।
ಸಜ್ಗತೋ ವಾನರೇಣೇತಿ ಗ್ರನ್ಥೇ ರೇಕಾರಉದ್ಧೃತಃ ॥೪೮॥
ಹನುಮದ್ವಚನಾಚ್ಚೈವ ಸುಗ್ರೀವೇಣೇತಿ ತತ್ರ ಣಃ ।
ಸುಗ್ರೀವಾಯ ಚ ತತ್ ಸರ್ವಂ ಇತ್ಯತ್ರ ಯಉದೀರಿತಃ ॥೪೯॥
ಬಿಭೇದ ಚ ಪುನಸ್ತಾಲಾನ್ ಇತ್ಯತ್ರ ಭಉದೀರಿತಃ ।
ತತೋಗರ್ಜದ್ಧರಿವರಃ ಇತ್ಯತ್ರ ಚ ಗಉದ್ಧೃತಃ ॥೫೦॥
ತೇನ ನಾದೇನ ಮೇತ್ಯತ್ರ ದೇಕಾರಸ್ತು ಸಮುದ್ಧೃತಃ ।
ತತೋಗರ್ಜದ್ಧರಿವರೋ ವಕಾರಶ್ಚಾತ್ರ ಸಜ್ಗತಃ ॥೫೧॥

ಹೀಗೆ ಬ್ರಹ್ಮನಲ್ಲಿರುವ ಗುಣಗಳು, ಗಾಯತ್ರಿಯ ಅಕ್ಷರಗಳಿಂದ ಬೋಧಿಸಲ್ಪಟ್ಟಿರುವುವು. ಆಯಾ ಗುಣವನ್ನು ಹೇಳುವ ಗ್ರಂಥದಲ್ಲಿ ಆಯಾ ಅಕ್ಷರಗಳೂ ಉದ್ಧರಿಸಲ್ಪಟ್ಟಿರುವುವು ॥೪೫॥

ಶ್ರೀಮದ್ರಾಮಾಯಣದ ಮೊದಲನೆಯದಾದ ಸಂಕ್ಷೇಪರಾಮಾಯಣವೆಂಬ ಸರ್ಗದ ಪ್ರಥಮದಲ್ಲಿ, ಗಾಯತ್ರಿಯ ಪ್ರಥಮಾಕ್ಷರವುದ್ಧೃತವಾಗಿರುವುದು. 'ಸ ಜಗಾಮ ವನಂ ವೀರಃ' ಎಂಬ ಕಡೆಯಲ್ಲಿ, ಗಾಯತ್ರಿಯ ದ್ವಿತೀಯಾಕ್ಷರವಾದ ಸಕಾರವು ಉದ್ಧೃತವಾಗಿರುವುದು ॥೪೬॥

'ವಿರಾಧಂ ರಾಕ್ಷಸಂ ಹತ್ವಾ' ಎಂಬ ಕಡೆಯಲ್ಲಿ 'ವಿ' ಎಂಬ ಅಕ್ಷರವು ಉದ್ಧೃತವಾಗಿರುವುದು. 'ಖಡ್ಗಂ ಚ ಪರಮಪ್ರೀತಃ ತೂಣೀ ಚಾಕ್ಷಯ್ಯಸಾಯಕೌ' ಎಂಬ ಕಡೆಯಲ್ಲಿ ತುಕಾರವು ಉದ್ಧೃತವಾಯ್ತು ॥೪೭॥

'ವಸತಸ್ತಸ್ಯ ರಾಮಸ್ಯ' ಎಂಬ ಶ್ಲೋಕದ ಮೊದಲೇ ವಕಾರವು ಉದ್ಧೃತವಾಗಿರುವುದು. 'ಸಜ್ಗತೋ ವಾನರೇಣ ಸಃ' ಎಂಬ ಕಡೆಯಲ್ಲಿ ರೇಕಾರವುದ್ಧೃತವಾಗಿರುವುದು ॥೪೮॥

'ಹನೂಮದ್ವಚನಾಚ್ಚೈವ ಸುಗ್ರೀವೇಣ ಚ ಸಜ್ಗತಃ' ಎಂಬ ಸ್ಥಳದಲ್ಲಿ ಣಕಾರವು ಉದ್ಧೃತವಾಗಿರುವುದು. 'ಸುಗ್ರೀವಾಯ ಚ ತತ್ ಸರ್ವಂ' ಎಂಬಕಡೆಯಲ್ಲಿ ಯಕಾರವು ಹೇಳಲ್ಪಟ್ಟಿರುವುದು ॥೪೯॥

'ಬಿಭೇದ ಚ ಪುನಸ್ತಾಲಾನ್' ಎಂಬಕಡೆಯಲ್ಲಿ ಭಕಾರವು ಹೇಳಲ್ಪಟ್ಟಿರುವುದು. 'ತತೋ ಗರ್ಜದ್ಧರಿವರಃ' ಎಂದಿ ಸ್ಥಳದಲ್ಲಿ ಗಕಾರವು ಉದ್ಧೃತವಾಗಿರುವುದು ॥೫೦॥

'ತೇನ ನಾದೇನ ಮಹತಾ' ಎಂಬ ಸ್ಥಳದಲ್ಲಿ ದೇಕಾರವು ಉದ್ಧೃತವಾಗಿರುವುದು. 'ತತೋಗರ್ಜದ್ಧರಿವರಃ' ಎಂಬಕಡೆಯಲ್ಲಿ ವಕಾರವೂ ಸೇರಿಕೊಂಡಿರುವುದು ॥೫೧॥

ಭರತಸ್ಯಾನ್ತಿಕಂ ರಾಮಃ ಇತ್ಯತ್ರ ಸ್ಯೇತಿ ಚಾಕ್ಷರಮ್ ।
ಏಕದೇಶೇನ ಧೀಕಾರಃ ಸುಧಾರ್ಮಿಕಇತಿ ಸ್ಥಳೇ ॥೫೦॥
ನಿರಾಮಯೋ ಹ್ಯರೋಗಶ್ಚೇತ್ಯತ್ರ ಗಶ್ಚ ಹಿಕಾರಕಃ ।
ನಾರ್ಯಶ್ಚಾವಿಧವೇತ್ಯತ್ರ ಧಿಕಾರಸ್ತ್ವೇಕದೇಶತಃ ॥೫೧॥
ನ ಚಾಗ್ನಿಜಂ ಭಯಂ ಕಿಂಚಿತ್ ಇತಿ ಶ್ಲೋಕೇ ತು ಯದ್ವಯಮ್ ।
ನಗರಾಣಿ ಚ ರಾಷ್ಟ್ರಾಣೀತ್ಯತ್ರ ನಃಪದಮರ್ಧತಃ ॥೫೪॥
ಅಶ್ವಮೇಧಶತೈರಿಷ್ಟ್ವೇತ್ಯತ್ರ ಶ್ಲೋಕೇ ಪ್ರಯುದ್ಧೃತಃ ।
ಚಾತುರ್ವರ್ಣ್ಯಮಿತಿ ಶ್ಲೋಕೇ ಏಕದೇಶೇನ ಚೋದ್ಧೃತಃ ॥೫೫॥
ದಶ ವರ್ಷಸಹಸ್ರಾಣೀತ್ಯತೋಪಾನ್ತ್ಯೋಕ್ಷರೋದ್ಧೃತಃ ।
ಸಮುದ್ಧೃತಂ ಪ್ರಬನ್ಧಾನ್ತೇ ಗಾಯತ್ರೀಚರಮಾಕ್ಷರಮ್ ॥೫೬॥
ಏವಮುಕ್ತಾಮನ್ತ್ರವರ್ಣಾಃ ಸಂಕ್ಷೇಪೇ ಸಾಮ್ಪ್ರದಾಯಿಕಾಃ ॥೫೭॥
ಚತುರ್ವಿಂಶತ್ಸಹಸ್ರಾಣಾಂ ಆದ್ಯಶ್ಲೋಕಾಃ ಪೃಥಕ್ಪೃಥಕ್ ।

'ಭರತಸ್ಯಾನ್ತಿಕಂ ರಾಮಃ' ಎಂಬಕಡೆಯಲ್ಲಿ 'ಸ್ಯ' ಎಂಬ ಅಕ್ಷರವೂ, 'ಸುಧಾರ್ಮಿಕಃ' ಎಂಬ ಸ್ಥಳದಲ್ಲಿ ಧೀಕಾರದ ಏಕದೇಶವೂ ಉದ್ಧೃತವಾಗಿರುವುವು ॥೫೦॥

'ನಿರಾಮಯೋ ಹ್ಯರೋಗಶ್ಚ' ಎಂಬ ಕಡೆಯಲ್ಲಿ ಮಕಾರಹಿಕಾರಗಳೂ—'ನಾರ್ಯಶ್ಚಾವಿಧವಾನಿತ್ಯಂ' ಎಂಬಕಡೆಯಲ್ಲಿ ಧಿಕಾರದ ಏಕದೇಶವೂ ಉದ್ಧೃತವಾಗಿರುವುವು ॥೫೧॥

'ನ ಚಾಗ್ನಿಜಂ ಭಯಂ ಕಿಂಚಿತ್ ನ ಚ ವ್ಯಾಳಕೃತಂ ಭಯಂ' ಎಂಬ ಶ್ಲೋಕದಲ್ಲಿ ಎರಡು ಯಕಾರಗಳೂ —'ನಗರಾಣಿ ಚ ರಾಷ್ಟ್ರಾಣಿ' ಎಂಬಕಡೆಯಲ್ಲಿ 'ನಃ' ಎಂಬಪದದ ಅರ್ಧ ಭಾಗವೂ ಸೇರಿರುವುವು ॥೫೪॥

'ಅಶ್ವಮೇಧಶತೈರಿಷ್ಟ್ವಾ' ಎಂಬ ಶ್ಲೋಕದ ಕೊನೆಯುದಾದ 'ಪ್ರಯಾಸ್ಯತಿ' ಎಂಬ ಪದದಲ್ಲಿ 'ಪ್ರ' ಎಂಬ ಅಕ್ಷರವು ಉದ್ಧೃತವಾಗಿರುವುದು. 'ಚಾತುರ್ವರ್ಣ್ಯಂ' ಇತ್ಯಾದಿ ಶ್ಲೋಕದಲ್ಲಿ 'ಚೋ' ಎಂಬ ಶಬ್ದದ ಏಕದೇಶವು ಉದ್ಧೃತವಾಗಿರುವುದು ॥೫೫॥

'ದಶ ವರ್ಷಸಹಸ್ರಾಣಿ' ಎಂಬ ಶ್ಲೋಕದ ಮೊದಲಿನಲ್ಲಿ, ಗಾಯತ್ರಿಯ ಉಪಾಂತ್ಯ (ಕೊನೆಯ ಹಿಂದಿನದು) ವಾದ ದಕಾರವುದ್ಧೃತವಾಗಿರುವುದು. ಈ ಸಂಕ್ಷೇಪಸರ್ಗದ ಕೊನೆಯಲ್ಲಿ, ಗಾಯತ್ರೀಮಂತ್ರದ ಕೊನೆಯಾದ 'ಯಾತ್' ಎಂಬ ಶಬ್ದವು ನಿವೇಶಿತವಾಗಿರುವುದು. ಹೀಗೆ ಸಂಕ್ಷೇಪಸರ್ಗದಲ್ಲಿಯೇ ಗಾಯತ್ರೀಮಂತ್ರದ ಅಕ್ಷರಗಳೆಲ್ಲವೂ ಸನ್ನಿವೇಶಿತವಾಗಿರುವವೆಂಬುದು ಸಂಪ್ರದಾಯಜ್ಞರಿಂದ ಜ್ಞಾತವ್ಯವು ॥೫೬-೫೭॥

ಹೀಗೆಯೇ, ಶ್ರೀಮದ್ರಾಮಾಯಣದ ಇಪ್ಪತ್ತುನಾಲ್ಕುಸಾವಿರ ಶ್ಲೋಕಗಳಿಗೂ, ಪ್ರತಿಯೊಂದುಸಾವಿರದ ಮೊದಲಿನ ಶ್ಲೋಕದಲ್ಲಿಯೂ ಪ್ರಥಮಾಕ್ಷರವು ಕ್ರಮವಾಗಿ ಗಾಯತ್ರೀವರ್ಣವಾಗಿರುವುದು. ಮೊದಲನೆಯ ಸಾವಿರದ ಆದಿಯಲ್ಲಿ ಗಾಯತ್ರಿಯ ಮೊದಲನೆಯಕ್ಷರವೂ, ದ್ವಿತೀಯಸಹಸ್ರದ ಆದಿಯಲ್ಲಿ ಗಾಯತ್ರಿಯ ದ್ವಿತೀಯಾಕ್ಷರವೂ, ಹೀಗೆಯೇ ಗಾಯತ್ರಿಯ

ಕ್ರಮೇಣ ದರ್ಶಯಿಷ್ಯನ್ತೀ ಗಾಯತ್ರ್ಯಕ್ಷರಗರ್ಭಿತಾಃ ॥೪೪॥
"ತಪಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥೪೫॥
ಸ ತೇನ ಪರಮಾಸ್ತ್ರೇಣ ಮಾನವೇನ ಸಮಾಹತಃ ।
ಸಮ್ಪೂರ್ಣೇ ಯೋಜನಶತೇ ನಿಕ್ಷಿಪ್ತಃ ಸಾಗರಾಪ್ಲವೇ ॥೪೦॥
ವಿಶ್ವಾಮಿತ್ರೋ ಮಹಾತೇಜಾಃ ಭೂಯಸ್ತೇಪೇ ಮಹಾತಪಾಃ ।
ತತಃ ಕಾಲೇನ ಮಹತಾ ಮೇನಕಾ ಪರಮಾಪ್ಸರಾಃ ॥೪೧॥
ಚತುರಶ್ವೋ ರಥಃ ಶ್ರೀಮಾ ನಿಸ್ತ್ರಿಂಶೋ ಧನುರುತ್ತಮಮ್ ।
ವಾಹನಂ ನರಸಂಯುಕ್ತಂ ಛತ್ರಂ ಚ ಶಶಿಸನ್ನಿಭಮ್ ॥೪೨॥
ವರ್ತತೇ ಚೋತ್ತಮಾಂ ವೃತ್ತಿಂ ಲಕ್ಷ್ಮಣೋಸ್ಮಿನ್ ಸದಾನಘೇ ।
ದಯಾವಾನ್ ಸರ್ವಭೂತೇಷು ಲಾಭಸ್ತಸ್ಯ ಮಹಾತ್ಮನಃ ॥೪೩॥
ದ್ವಾರೇಣ ವೈಜಯನ್ತೀನ ಪ್ರಾವಿಶದ್ಭ್ರಾನ್ತವಾಹನಃ ।
ದ್ವಾಸ್ಥೈರುತ್ಥಾಯ ವಿಜಯಂ ಉಕ್ತಸ್ತೈಃ ಸಹಿತೋ ಯಯೌ ॥೪೪॥
ಉಟಜೇ ರಾಮಮಾಸೀನಂ ಜಟಾಮಣ್ಡಲಧಾರಿಣಮ್ ।
ತನ್ತು ಕೃಷ್ಣಾಜಿನಧರಂ ಚೀರವಲ್ಕಲವಾಸಸಮ್ ॥೪೫॥
ತೇ ವಯಂ ವನಮುತ್ಸೃಗ್ಯ ಪ್ರವಿಷ್ಟಾಃ ಪಿತೃಶಾಸನಾತ್ ।
ದ್ರಷ್ಟುಮಿಚ್ಛಾಮಹೇ ಸರ್ವೇ ಭಗವನ್ತಂ ನಿವೇದ್ಯತಾಮ್ ॥೪೬॥
ಮಮ ಭರ್ತಾ ಮಹಾತೇಜಾಃ ವಯಸಾ ಪಞ್ಚವಿಂಶಕಃ ।
ಅಷ್ಟಾದಶ ಚ ವರ್ಷಾಣಿ ಮಮ ಜನ್ಮನಿ ಗಣ್ಯತೇ ॥೪೭॥
ತತಃ ಪರಮಸಂಹೃಷ್ಟೋ ಹನೂಮಾ ಪ್ಲವಗರ್ಷಭಃ ।
ಪ್ರತ್ಯುವಾಚ ತತೋ ರಾಮಂ ವಾಕ್ಯಂ ವಾಕ್ಯವಿಶಾರದಃ ॥೪೮॥
ನೃದೇವಸೂನುರ್ನರದೇವಪುತ್ರಂ ರಾಮಾನುಜಃ ಪೂರ್ವಜಮಿತ್ಯುವಾಚ ।
ನ ವಾನರಃ ಸ್ಥಾಸ್ಯತಿ ಸಾಧುವೃತ್ತೇ ನ ಮಂಸ್ಯತೇ ಕರ್ಮಫಲಾನುಷಙ್ಗಮ್ ॥

ಇಪ್ಪತ್ತ್ಮನಾಲ್ಕು ಅಕ್ಷರಗಳೂ ಇರುವುವು. (೧) ॥೫೪॥೫೯–೪೨॥

---

(೧) ಇಲ್ಲಿಂದ ಮುಂದಕ್ಕಿರುವ ಇಪ್ಪತ್ತ್ಮನಾಲ್ಕು ಶ್ಲೋಕಗಳೂ ಶ್ರೀಮದ್ರಾಮಾಯಣದಲ್ಲಿ ಪ್ರತಿಯೊಂದು ಸಾವಿರಶ್ಲೋಕದ ಮೊದಲಲ್ಲಿರತಕ್ಕುವುಗಳು. ಇದಕ್ಕೆ ಗಾಯತ್ರೀರಾಮಾಯಣವೆಂದು ಹೆಸರು. ಈ ಗಾಯತ್ರೀರಾಮಾಯಣವು, ಸಾಮಾನ್ಯವಾಗಿ ಎಲ್ಲರೂ ಪಾರಾಯಣ ಮಾಡುವುದಕ್ಕೂ ಇಲ್ಲಿರುವುದು ಸ್ವತಂತ್ರವಾಗಿರುವುದು. ಗಾಯತ್ರೀವರ್ಣಗಳೂ ಇದರಲ್ಲಿ ಸರಿಯಾಗಿರುವಂತಿಲ್ಲ. ಆದರೂ ಮಾಹಾತ್ಮ್ಯ ಎಂತೆ ಇಲ್ಲಿ ಮುದ್ರಿಸಲ್ಪಟ್ಟಿರುವುದು. ಇವುಗಳಿಗೆ ಇಲ್ಲಿ ಅಪ್ರಕರಣಿಕವಾದುದರಿಂದ ಅರ್ಥವು ಬರೆಯಲ್ಪಟ್ಟಿಲ್ಲ.

ತತೋ ರಾವಣನೀತಾಯಾಃ ಸೀತಾಯಾಃ ಶತ್ರುಕರ್ಶನಃ ।
ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ ॥೨೦॥
ತತಸ್ತಸ್ಯ ನಗಸ್ಯಾಗ್ರೇ ಹ್ಯಾಕಾಶಸ್ಥಸ್ಯ ದನ್ತಿನಃ ।
ಭರ್ತ್ರಾ ಪರಿಗೃಹೀತಸ್ಯ ಜಾನಕೀ ಸ್ಕನ್ಧಮಾಶ್ರಿತಾ ॥೨೧॥
ಮಾನವಮಾನ್ಯೋ ಭವದ್ಭಿಶ್ಚ ಹರಿಃ ಕ್ರೂರಪರಾಕ್ರಮಃ ।
ದೃಷ್ಟಾಹಿ ಹರಯಃ ಶೀಘ್ರಾಃ ಮಯಾ ವಿಪುಲವಿಕ್ರಮಾಃ ॥೨೦॥
ಶ್ರುತ್ವಾ ಹನುಮತೋ ವಾಕ್ಯಂ ಯಥಾವದಭಿಭಾಷಿತಮ್ ।
ರಾಮಃ ಪ್ರೀತಮನಾಮುಕ್ತ್ವಾ ವಾಕ್ಯಮುತ್ತರಮಬ್ರವೀತ್ ॥೨೩॥
ರಕ್ಷೋಗಣಪರಿಕ್ಷಿಪ್ತೋ ರಾಜಾ ಹ್ಯೇಷ ವಿಭೀಷಣಃ ।
ಶ್ರೀಮತಾ ರಾಜರಾಜೇನ ಲಙ್ಕಾಯಾಮಭಿಷೇಚಿತಃ ॥೨೪॥
ಪ್ರದರ್ಶನೇನ ಬುದ್ಧಿಶ್ಚ ಸ್ಮೃತಿಶ್ಚ ದ್ವಿಗುಣಂ ತಯೋಃ ।
ತಾವುತ್ಥಾಪ್ಯ ಮಹಾವೀರ್ಯೋ ಗರುಡೋ ವಾಸವೋಪಮೌ ॥೨೫॥
ಕುಮ್ಭಕರ್ಣಂ ಹತಂ ದೃಷ್ಟ್ವಾ ರಾಘವೇಣ ಮಹಾತ್ಮನಾ ।
ರಾಕ್ಷಸಾರಾಕ್ಷಸೇನ್ದ್ರಾಯ ರಾವಣಾಯ ನ್ಯವೇದಯನ್ ॥೨೬॥
ವಿಜ್ಞಾಯ ಸ ಮನಸ್ತಸ್ಯ ರಾಘವಸ್ಯ ಮಹಾತ್ಮನಃ ।
ಸನ್ನಿವೃತ್ತ್ಯಾಹವಾತ್ ತಸ್ಮಾತ್ ಪ್ರವಿವೇಶ ಪುರೀಂ ತದಾ ॥೨೭॥
ಮರಣಾನ್ತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥೨೮॥
ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆಜಗ್ಮುರ್ಮುನಯಃ ಸರ್ವೇ ರಾಘವಂ ಪ್ರತಿನನ್ದಿತುಮ್ ॥೨೯॥
ತತಃ ಪ್ರಚೋದಯನ್ತ್ಸೂತಃ ತಾನ್ ಹಯಾನ್ ರುಧಿರಪ್ರಭಾನ್ ।
ಪ್ರಯಯೌ ಭೀಮಸನ್ನಾದೋ ಯತ್ರ ರಕ್ಷಃಪತಿಃ ಸ್ಥಿತಃ ॥೩೦॥
ವಿಸೃಜ್ಯ ಚ ಮಹಾಬಾಹುಃ ಋಕ್ಷವಾನರಪುಙ್ಗವಾನ್ ।
ಭ್ರಾತೃಭಿಃ ಸಹಿತೋ ರಾಮಃ ಪ್ರಮುಮೋದ ಸುಖಂ ಸುಖೀ ॥೩೧॥
ಬ್ರಾಹ್ಮಣಸ್ಯ ಚ ಧರ್ಮೇಣ ತ್ವಯಾ ವೈ ಜೀವಿತಃ ಸುತಃ ।
ಉಪ್ಯತಾಂ ಚೇಹ ರಜನೀಂ ಸಕಾಶೇ ಮಮ ರಾಘವ ॥೩೨॥”
ಚತುರ್ವಿಂಶತ್ಸಹಸ್ರಾಣಾಂ ಆದ್ಯಶ್ಲೋಕಾಇಮೇ ಕ್ರಮಾತ್ ।
ಏಷು ಶ್ಲೋಕೇಷು ದೃಶ್ಯನ್ತೇ ಮನ್ತ್ರಾವರ್ಣಾಶ್ಚ ತತ್ಪ್ರಮಾತ್ ॥೩೩॥

ಕ್ರಮವು

ಇವು, ಇಪ್ಪತ್ತುನಾಲ್ಕುಸಾವಿರಗಳಿಗೂ ಕ್ರಮವಾಗಿ ಗಾಯತ್ರೀ ಮಂತ್ರದ ಅಕ್ಷರಗಳೇ ಆದ್ಯಶ್ಲೋಕಗಳು. ಈ ಶ್ಲೋಕಗಳಲ್ಲಿ ಅದೇ ಕ್ರಮವಾಗಿ ಗಾಯತ್ರೀ ಮಂತ್ರದ ಅಕ್ಷರಗಳೂ ಕಾಣಿಸುವುವು ॥೩೩॥

ದೃಶ್ಯತೇ ಚ ಪ್ರಬನ್ಧಾನ್ತೇ ಮನ್ತ್ರಾತ್ಮ್ಯಂ ವ್ಯಞ್ಜನಾಕ್ಷರಮ್ ।
ತಸ್ಮಾದಿದಂ ತ್ವಾದಿಕಾವ್ಯಂ ಗಾಯತ್ರೀಸಮ್ಮಿತಂ ವಿದುಃ ॥೪೪॥
ಇತ್ಯೇಷ ಆದಿಕಾವ್ಯಾರ್ಥಃ ರಹಸ್ಯಃ ಸಾಮ್ಪ್ರದಾಯಿಕಃ ।
ನ ಸ್ಫುರೇದ್ಯಸ್ಯಕಸ್ಯಾಪಿ ಹಠಾದಾಪಾತದರ್ಶಿನಃ ॥೪೫॥
ಸರ್ವಸಾಕ್ಷೀ ಸರ್ವಪತಿಃ ಸದ್ಗುಣಃ ಸತ್ಪ್ರಕಾಶಕಃ ।
ಧ್ಯೇಯೋ ನಿಯನ್ತಾ ಶರಣಂ ರಾಮಇತ್ಯುಚ್ಯತೇ ಧ್ರುವಮ್ ॥೪೬॥
ಏವಂ ಸಂಕ್ಷೇಪತಃ ಪ್ರೋಕ್ತಂ ತತ್ತ್ವಂ ರಾಮಸ್ಯ ವೋ ದ್ವಿಜಾಃ ।
ವಿಸ್ತರೇಣ ಪ್ರವಕ್ಷ್ಯಾಮಿ ಪಾರ್ವತ್ಯೈ ಶಮ್ಭುನೋದಿತಮ್ ॥೪೭॥

ಇತಿ ಶ್ರೀ ಬಾಲಕಾಣ್ಡೇ ರಾಮಾಯಣರಹಸ್ಯಕಥನಂ
ನಾಮ ಪಞ್ಚಮಃ ಸರ್ಗಃ.




ಈ ಗ್ರಂಥದ ಕೊನೆಯಲ್ಲಿ, ಗಾಯತ್ರೀಮಂತ್ರದ ಕೊನೆಯದಾದ ವ್ಯಂಜನಾಕ್ಷರವೂ ಇರುವುದು. ಹೀಗಿರುವುದರಿಂದ, ಈ ಆದಿಕಾವ್ಯವನ್ನು ಗಾಯತ್ರೀಸಮ್ಮಿತವೆಂದು ಪ್ರಾಜ್ಞರು ಹೇಳುವರು ॥೪೪॥

ಹೀಗೆ ರಹಸ್ಯವಾಗಿ ಸಂಪ್ರದಾಯಾಗತವಾದ ಆದಿಕಾವ್ಯದ ಅರ್ಥವಿಶೇಷವು, ಹಠಾತ್ಕಾರದಿಂದ ಅಪಾತತಃ ಗ್ರಂಥಪಠನಮಾಡುವ ಯಾವನೊಬ್ಬನಿಗೂ ಸ್ಫುರಿಸಲಾರದು ॥೪೫॥

ಆ ಶ್ರೀರಾಮನು, ಸರ್ವಸಾಕ್ಷಿಯೆಂದೂ–ಸರ್ವೇಶ್ವರನೆಂದೂ-ಸದ್ಗುಣಭೂಷಿತನೆಂದೂ-ಸತ್ಯ ಪ್ರಕಾಶನೆಂದೂ–ಸಕಲರಿಗೂ ಧ್ಯೇಯನೆಂದೂ–ಸರ್ವನಿಯಾಮಕನೆಂದೂ-ಸರ್ವಲೋಕಶರಣನೆಂದೂ ಹೇಳಲ್ಪಡುವನು; ಇದು ನಿಶ್ಚಯವು ॥೪೬॥

ಅಯ್ಯಾ ಬ್ರಾಹ್ಮಣೋತ್ತಮರೆ ! ಈರೀತಿಯಾಗಿ ನಿಮಗೆ ಶ್ರೀರಾಮನ ತತ್ವವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದು ಪೂರ್ವದಲ್ಲಿ ಪಾರ್ವತಿಗೆ ಈಶ್ವರನಿಂದ ವಿಸ್ತರವಾಗಿ ಹೇಳಲ್ಪಟ್ಟಿರುವುದು. ಅದನ್ನು ನಾನು ತಮಗೆ ಮುಂದೆ ಹೇಳುವೆನು ॥೪೭॥

ಇದು ಬಾಲಕಾಂಡದಲ್ಲಿ ರಾಮಾಯಣರಹಸ್ಯಕಥನವೆಂಬ
ಅಯ್ದನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಷಷ್ಠಃ ಸರ್ಗಃ.

ಶ್ರೀ ಸೂತಉವಾಚ.

ಪುರಾ ಕೈಲಾಸಶಿಖರೇ ಪಾರ್ವತ್ಯಾ ಪರಮೇಶ್ವರಃ ।
ವಿಚಚಾರ ಮಹಾಯೋಗೀ ಸ್ವರೂಪಮನುಚಿನ್ತಯನ್ ॥೧॥
ನಾನಾಪ್ರಸೂನವಿತತೇ ನಾನಾವೃಕ್ಷಸಮಾಕುಲೇ ।
ನಾನಾವಲ್ಲೀಸಮಾಕೀರ್ಣೇ ಸಿದ್ಧಚಾರಣಸೇವಿತೇ ॥೨॥
ಪ್ರವಾಳೈಃ ಪುಷ್ಯರಾಗೈಶ್ಚ ಮುಕ್ತಾಜಾಲೈರ್ವಿಜೃಮ್ಭಿತೇ ।
ದ್ವಾತ್ರಿಂಶದ್ಯೋಜನಾಯಾಮವಿಸ್ತೃತೇ ಹೇಮಮಣ್ಟಪೇ ॥೩॥
ನವದ್ವಾರಯುತೇ ಪುಣ್ಯೇ ನವಪ್ರಾಕಾರಶೋಭಿತೇ ।
ಗೋಪುರೈರ್ಲಕ್ಷವಿಸ್ತಾರೈಃ ಕೋಟ್ಯುಚ್ಛ್ರಾಯಸಮನ್ವಿತೈಃ ॥೪॥
ಪ್ರಾಸಾದೈಶ್ಚನ್ದ್ರಸಙ್ಕಾಶೈಃ ಕೂಟಾಗಾರೈಶ್ಚ ಮಣ್ಡಿತೇ ।
ಪ್ರಮಥೈಃ ಕೋಟಿಕೋಟೀಭಿಃ ಶೂಲಮುದ್ಗರಪಾಣಿಭಿಃ ॥೫॥

ಬಾಲಕಾಂಡದಲ್ಲಿ ಆರನೆಯಸರ್ಗವು.

ಶ್ರೀಸೂತರು ಶೌನಕಾದಿಮುನಿಗಳನ್ನು ಕುರಿತು ಹೇಳಲುಪಕ್ರಮಿಸಿದರು:—

ಆಯ್ಯಾ ಮಹರ್ಷಿಗಳಿರಾ! ಪೂರ್ವದಲ್ಲಿ ಕೈಲಾಸಪರ್ವತದ ಶಿಖರದಮೇಲೆ, ಮಹಾಯೋಗಿಯಾದ ಪರಮೇಶ್ವರನು, ಸ್ವಸ್ವರೂಪ ವಿಚಾರಮಾಡುತ, ಪಾರ್ವತಿಯೊಡನೆ ಸಂಚಾರಮಾತಿದ್ದನು ॥೧॥

ಆ ಕೈಲಾಸಶಿಖರದಲ್ಲಿ ನಾನಾವಿಧವಾದ ಪುಷ್ಪಗಳು ವಿಸ್ತಾರವಾಗಿ ಹರಡಿಕೊಂಡಿದ್ದುವು; ಅನೇಕವಿಧ ವೃಕ್ಷಗಳೂ ಲತೆಗಳೂ ವ್ಯಾಪಿಸಿಕೊಂಡಿದ್ದುವು; ಸಿದ್ಧರೂ ಚಾರಣರೂ ಅಲ್ಲಿ ಬಂದು ಸೇವಿಸುತಿದ್ದರು ॥೨॥

ಅಂತಹ ಕೈಲಾಸಶಿಖರದಲ್ಲಿ, ದಿವ್ಯವಾದ ಒಂದು ಸುವರ್ಣಮಂಟಪವಿರುವುದು. ಅದು, ಮುತ್ತು ಹವಳ ಪುಷ್ಯರಾಗ ಮುಂತಾದ ರತ್ನಗಳಿಂದ ವಿಚಿತ್ರವಾಗಿ ಮಾಡಲ್ಪಟ್ಟುದು. ಮೂವತ್ತೆರಡು ಯೋಜನದ ಉದ್ದವಾಗಿರುವುದು ॥೩॥

ಪುಣ್ಯತಮವಾದ ಆ ಸುವರ್ಣಮಂಟಪಕ್ಕೆ, ಒಂಭತ್ತು ಬಾಗಿಲುಗಳೂ-ಒಂಭತ್ತು ಪ್ರಾಕಾರಗಳೂ-ಲಕ್ಷಯೋಜನದ ಅಗಲವೂ ಕೋಟಿಯೋಜನದ ಎತ್ತರವೂ ಉಳ್ಳ ಅನೇಕ ಗೋಪುರಗಳೂ ಇರುವುವು ॥೪॥

ಚಂದ್ರಮಂಡಲಸಮಾನಗಳಾದ ಗೋಪುರಗಳೂ, ಅನೇಕ (೧) ಕೂಟಗೃಹಗಳೂ, ಆ ಸುವರ್ಣಮಂಟಪವನ್ನಲಂಕರಿಸುತ್ತಿದ್ದುವು. ಅನೇಕಕೋಟಿ ಸಂಖ್ಯಾಕರಾದ ಪ್ರಮಥಗಣಗಳು, ಕೈಯಲ್ಲಿ ಶೂಲವನ್ನೂ ಮುದ್ಗರವನ್ನೂ ಹಿಡಿದುಕೊಂಡು, ಸಮಸ್ತದೇಹಕ್ಕೂ ಭಸ್ಮಲೇಪನಮಾಡಿ

---

(೧) ಕಪಟದಿಂದ ನಿರ್ಮಿಸಲಾಗಿರುವ ಯಂತ್ರಗಳುಳ್ಳ ಮನೆಗಳು.

ಅಧಿಷ್ಠಿತೇ ಗುಲ್ಮದೇಶೇ ದ್ವಾರದೇಶೇಷು ಸರ್ವತಃ ।
ಭಸ್ಮೋದ್ಧೂಳಿತಸರ್ವಾಙ್ಗೈಃ ಜಟಾಮುಕುಟನುಣ್ಡಿತೈಃ ॥೬॥
ತ್ರಿಪುಣ್ಡ್ರಭಸ್ಮರೇಖಾಭಿಃ ವಿಲಸತ್ಫಾಲಮಣ್ಡಲೈಃ ।
ಕಞ್ಚುಕೋಷ್ಣೀಷವಣಧರೈಃ ವೇತ್ರಜರ್ಝರಪಾಣಿಭಿಃ ॥೭॥
ಅಧಿಷ್ಠಿತೇ ಸೌವಿದಲ್ಲೈಃ ಗದಾಶೂಲಾಸಿಧಾರಿಭಿಃ ।
ಇನ್ದ್ರಾದಿಭಿರ್ಲೋಕಪಾಲೈಃ ಇನ್ದ್ರಾಣ್ಯಾದಿವಧೂಯುತೈಃ ॥೮॥
ಶ್ಲಾಘ್ಯಂ ಪ್ರಭೋರವಸರಂ ಕಾಂಕ್ಷದ್ಭಿಃ ಸನಕಾದಿಭಿಃ ।
ಮಣ್ಟಪೈರ್ಬಹುಶಾಖಾಗ್ರೈಃ ಸಾಹಸ್ರಸ್ತಮ್ಬಶೋಭಿತೈಃ ॥೯॥
ಏವಂವಿಧಗುಣೋಪೇತೇ ರಜತಾಚಲಸನ್ನಿಭೇ ।
ರತ್ನಸಿಂಹಾಸನೇ ಶುಭ್ರೇ ರತ್ನಚ್ಛತ್ರೋಪಶೋಭಿತೇ ॥೧೦॥
ಋಷಿಭಿಃ ಸನಕಾದ್ಯೈಶ್ಚ ಸ್ತೂಯಮಾನಂ ಮಹೇಶ್ವರಮ್ ।
ಉಮಾ ಪ್ರಣಮ್ಯ ಪಪ್ರಚ್ಛ ದೇವದೇವಂ ಪಿನಾಕಿನಮ್ ॥೧೧॥

ಪಾರ್ವತ್ಯುವಾಚ.

ದೇವದೇವ ಮಹಾದೇವ ಜಯ ಚನ್ದ್ರಾರ್ಧಶೇಖರ ।
ಜಯ ಮನ್ನಾಥ ಲೋಕಸ್ಯ ಸೃಷ್ಟಿಸ್ಥಿತ್ಯನ್ತಕಾರಕ ॥೧೨॥

ಕೊಂಡು, ಜಟಾಮುಕುಟಗಳಿಂದಲಂಕೃತರಾಗಿ, ಹಣೆಯಲ್ಲಿರುವ ತ್ರಿಪುಂಡ್ರರೇಖೆಗಳಿಂದ ವಿರಾಜಿಸುತ್ತ, ಕಂಚುಕವನ್ನೂ ಉಷ್ಣೀಷ(ರುಮ್ಮಾಲು)ವನ್ನೂ ಧರಿಸಿದವರಾಗಿ, ಸರ್ವದಾ ಬೆತ್ತವನ್ನು ಹಿಡಿದಿರುವುದರಿಂದ ಜರ್ಜರವಾದ ಹಸ್ತತಲವುಳ್ಳವರಾಗಿ, ಗದೆ ಶೂಲ ಕತ್ತಿ-ಇವುಗಳನ್ನು ಕೈಯಲ್ಲಿ ಹಿಡಿದುಕೊಂಡು, ಕಂಚುಕಿ(ಪಹರೆಯವರು)ಗಳಾಗಿ ಬಾಗಿಲುಕಾಯ್ದುಕೊಂಡು ನಿಂತಿದ್ದರು. ಶಚೀದೇವಿ ಮೊದಲಾದ ಸ್ತ್ರೀಯರಿಂದ ಪರಿವೃತರಾದ ಇಂದ್ರಾದಿಲೋಕಪಾಲಕರೂ, ಸನಕಾದಿಮುನಿಗಳೂ ಕೂಡ, ಬಾಗಿಲಹೊರಗೆ ನಿಂತಿದ್ದರು ಇಂತಹ ಸುವರ್ಣಮಂಟಪದ ಒಳಗಡೆ, ಸಹಸ್ರಸ್ತಂಭಶೋಭಿತವಾದ ಶಾಖಾಭೂತವಾದ ಸಣ್ಣಸಣ್ಣ ಮಂಟಪಗಳು ಅಸಂಖ್ಯಾತವಾಗಿದ್ದುವು ॥೫—೯॥

ಇಂತಹ ಗುಣವುಳ್ಳ ಆ ದಿವ್ಯಮಂಟಪದೊಳಗೆ, ರಜತಾಚಲಸಮಾನವಾಗಿಯೂ ದಿವ್ಯವಾದ ಛತ್ರಿಯಿಂದ ವಿಭೂಷಿತವಾಗಿಯೂ ಶುಭ್ರವಾಗಿಯೂ ಇರುವ ರತ್ನಸಿಂಹಾಸನದಮೇಲೆ ಕುಳಿತುಕೊಂಡು—ಸನಕಾದಿಮುದಿಗಳಿಂದ ಸ್ತೋತ್ರಮಾಡಲ್ಪಡುತಿರುವ—ಸಕಲಲೋಕಮಹೇಶ್ವರನಾದ—ಸರ್ವದೇವದೇವನಾದ—ಶ್ರೀ ಪರಮೇಶ್ವರನನ್ನು, ಪಾರ್ವತೀದೇವಿಯು ನಮಸ್ಕರಿಸಿ, ಈರೀತಿಯಾಗಿ ಪ್ರಶ್ನೆಮಾಡಿದಳು ॥೧೦—೧೧॥

ಶ್ರೀ ಪಾರ್ವತಿ ಹೇಳಿದುದೇನೆಂದರೆ:—

ಹೇ ದೇವದೇವ! ಮಹಾದೇವ! ಚಂದ್ರಶೇಖರ! ನಿನಗೆ ಜಯವಾಗಲಿ. ನನ್ನ ಪ್ರಾಣನಾಥನೆ! ಸರ್ವಲೋಕಕ್ಕೂ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡತಕ್ಕವನೆ! ನಿನಗೆ ಜಯವಾಗಲಿ ॥

ಜಯ ವೇದಾನ್ತಸಂವೇದ್ಯ ಜಯ ವಾಙ್ಮಾನಗೋಚರ ।
ಜಯ ಬ್ರಹ್ಮಾದಿದೇವಾನಾಂ ಆದಿಕರ್ತ್ರವಿಧಾಯಕ ॥೧೩॥
ಸಂಹಾರಕಾರಿಣೇ ತುಭ್ಯಂ ನಮೋ ವಿಶ್ವಸ್ವರೂಪಿಣೇ ।
ತ್ವಂ ವೇದಸ್ತ್ವಂ ವಷಟ್ಕಾರಃ ತ್ವಮೋಙ್ಕಾರಸ್ತಥಾ ಸ್ವಯಮ್ ॥೧೪॥
ಯಜ್ಞಾಶ್ಚ ಧರ್ಮಕರ್ತಾ ಚ ಹುತಭುಕ್ ಸೋಮಪಸ್ತಥಾ ।
ಚನ್ದ್ರಃ ಸೂರ್ಯಸ್ತಥಾ ವಾಯುಃ ಪೃಥಿವೀ ಜಲಮೇವ ಚ ॥೧೫॥
ಆಕಾಶಶ್ಚ ಪ್ರಕಾಶಶ್ಚ ಸಸಮುದ್ರಾಃ ಸರೀಸೃಪಾಃ ।
ವೃಕ್ಷಾಶ್ಚ ಮನುಜಾತಾಶ್ಚ ಸಿಂಹಾದ್ಯಾಮೃಗಜಾತಯಃ ॥೧೬॥
ಸರ್ವಂ ತ್ವದ್ರೂಪತೋ ಭಿನ್ನಂ ನ ಚಾಪಶ್ಯಂ ಮನಾಗಪಿ ।
ಇತಿ ಸ್ತುತೋ ಗಿರಿಜಯಾ ಪ್ರಸಾದಮಕರೋಚ್ಛಿವಃ ॥೧೭॥

ಶ್ರೀ ಶಿವಉವಾಚ.

ಉಮೇ ದೇವಿ ವಿವಕ್ಷಾಸ್ತಿ ಕಾ ತೇ ಸರ್ವಾಙ್ಗಸುನ್ದರಿ ।
ಶೃಣು ವಕ್ಷ್ಯಾಮಿ ತತ್ತ್ವೇನ ಮನಸಾ ಸಮ್ಯಗೀಪ್ಸಿತಮ್ ॥೧೮॥

ಶ್ರೀಪಾರ್ವತ್ಯುವಾಚ.

ಭವತಾ ಸರ್ವಮಾಖ್ಯಾನಂ ಉಕ್ತಂ ವಿಸ್ತರತಃ ಪುರಾ ।
ತನ್ತ್ರಾಣಿ ಚ ಪುರಾಣಾನಿ ಸಂಹಿತಾಶ್ಚಾಗಮಾಸ್ತಥಾ ॥೧೯॥

ಸಮಸ್ತ ವೇದಾಂತವಾಕ್ಯಗಳಿಗೂ ವಿಷಯಭೂತನಾದವನೆ! ನಿನಗೆ ಜಯವಾಗಲಿ. ವಾಕ್ಕು ಗಳಿಗೆ ಅಗೋಚರನಾದವನೆ ! ನಿನಗೆ ಜಯವಾಗಲಿ. ಬ್ರಹ್ಮಾದಿ ಸಮಸ್ತ ದೇವತೆಗಳಿಗೂ ಪ್ರಥಮಸೃಷ್ಟಿಕರ್ತನೆ! ನಿನಗೆ ಜಯವಾಗಲಿ ॥೧೩॥

ಪ್ರಪಂಚ ಲಯಕರ್ತನಾದ ವಿಶ್ವರೂಪನಾದ ನಿನಗೆ ನಮಸ್ಕಾರವು. ಸಮಸ್ತ ವೇದಗಳೂ ನೀನೇ ; ಯಜ್ಞಾಗಳಲ್ಲಿ ಉಚ್ಚರಿಸಲ್ಪಡುವ ವಷಟ್ಕಾರವೂ ನೀನೇ ; ಓಂಕಾರವೂ ನೀನೇ ॥೧೪॥

ಸಮಸ್ತ ಯಜ್ಞಗಳು, ಸಕಲ ಧರ್ಮಕರ್ತರುಗಳು, ಅಗ್ನಿ, ಸೋಮಪಾನಕರ್ತ, ಚಂದ್ರ, ಸೂರ್ಯ, ವಾಯು, ಪೃಥಿವಿ, ಜಲ, ಆಕಾಶ, ತೇಜಸ್ಸು, ಸಮುದ್ರ, ಸರ್ಪ, ವೃಕ್ಷ, ಮನುಷ್ಯ, ಸಿಂಹ ಮೊದಲಾದ ಮೃಗಜಾತಿ,—ಇವೆಲ್ಲವೂ ನಿನ್ನ ದೇಹದಲ್ಲಿಯೇ ಇರುವುವು. ನಿನ್ನ ದೇಹಕ್ಕಿಂತ ಪೃಥಕ್ಕಾಗಿ ನಾನು ಸ್ವಲ್ಪವೂ ನೋಡಿಲ್ಲ.—ಈರೀತಿಯಾಗಿ ಪಾರ್ವತಿಯಿಂದ ಸ್ತುತಿಸಲ್ಪಟ್ಟವನಾದ ಶ್ರೀ ಪರಮೇಶ್ವರನು, ಅವಳಲ್ಲಿ ವಿಶೇಷವಾಗಿ ಅನುಗ್ರಹತೋರಿಸಿದನು ॥೧೫—೧೭॥

ಆಗ ಶ್ರೀ ಶಿವನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಸರ್ವಾಂಗಸುಂದರಿ ! ದೇವಿ ! ಪಾರ್ವತಿ ! ನೀನು ಏನುಹೇಳಬೇಕೆಂದಪೇಕ್ಷಿಸುವೆ? ನಿನ್ನ ಮನಸ್ಸಿನ ಬಯಕೆಯನ್ನು ಹೇಳು. ನಾನು ಯಥಾರ್ಥವಾಗಿ ಹೇಳುವೆನು; ಅವಶ್ಯಕವಾಗಿ ಕೇಳು ॥೧೮॥

ಪಾರ್ವತಿ ಹೇಳುವಳು:—

ಸ್ವಾಮಿ ! ನೀವು ಪೂರ್ವದಲ್ಲಿ ಸಮಸ್ತ ಉಪಾಖ್ಯಾನಗಳನ್ನೂ ತಂತ್ರಗಳನ್ನೂ ಪುರಾಣಗಳನ್ನೂ ಸಂಹಿತೆಗಳನ್ನೂ ಆಗಮಗಳನ್ನೂ ನನಗೆ ವಿಸ್ತಾರವಾಗಿ ಹೇಳಿರುವಿರಿ ॥೧೯॥

ಶ್ರುತಾನಿ ತಾನ್ಯಶೇಷೇಣ ಮನೋ ನ ಸ್ವಾಸ್ಥ್ಯಮಾಗತಮ್ ।
ಸ್ವಸ್ಥಂ ಭವೇನ್ಮನೋ ಯೇನ ತಮುಪಾಯಂ ವದಸ್ವ ಮೇ ॥೦೦॥
ಕಮುಪಾಸ್ಯ ಲಭೇನ್ಮುಕ್ತಿಂ ಕ್ರಿಯಯಾ ವಾ ಕಯಾ ವಿಭೋ ।
ಮುಮುಕ್ಷೂಣಾಮಪೀಶಾನ ವದ ಮೇ ಭವಭಞ್ಜನ ॥೦೧॥

ಇತಿ ಶ್ರೀ ಬಾಲಕಾಣ್ಡೇ ಶಿವಸಭಾವರ್ಣನ ಪಾರ್ವತೀಕೃತಪ್ರಶ್ನಕಥನಂ

ನಾಮ ಷಷ್ಠಃ ಸರ್ಗಃ.



ನಾನು ಅವುಗಳೆಲ್ಲವನ್ನೂ ಸಮಗ್ರವಾಗಿ ಕೇಳಿರುವೆನು. ಆದರೂ, ನನ್ನ ಮನಸ್ಸು ಸ್ವಾಸ್ಥ್ಯಪಡೆಯಲಿಲ್ಲ. ಅದುಕಾರಣ, ಯಾವುದರಿಂದ ಮನಸ್ಸು ಸ್ವಸ್ಥವಾಗುವುದೋ—ಅಂತಹ ಉಪಾಯವನ್ನು ತಾವು ನನಗೆ ಹೇಳಬೇಕು ॥೨೦॥

ಹೇ ವಿಭೋ! ಈಶ್ವರ! ಮತ್ತು, ಮುಕ್ತಿಹೊಂದಲಪೇಕ್ಷಿಸುವವನು, ಯಾರ ಉಪಾಸನೆ ಮಾಡಿ ಮುಕ್ತಿಯನ್ನು ಹೊಂದುವನು? ಅಥವಾ, ಯಾವ ಕರ್ಮವನ್ನು ಆಚರಿಸಿದರೆ ಮುಕ್ತಿ ಸಿಕ್ಕುವುದು? ಹೇ ಸಂಸಾರಪಾಶಚ್ಛೇದಕ! ಅದನ್ನೂ ತಾವು ದಯೆಯಿಟ್ಟು ಅಪ್ಪಣೆಕೊಡಿಸಬೇಕು ॥೨೧॥

ಇದು ಬಾಲಕಾಂಡದಲ್ಲಿ ಶಿವಸಭಾವರ್ಣನೆಯೆಂಬ

ಆರನೆಯ ಸರ್ಗವು.



ಅಥ ಬಾಲಕಾಣ್ಡೇ ಸಪ್ತಮಃ ಸರ್ಗಃ.

ಈಶ್ವರಉವಾಚ.

ಶೃಣು ದೇವಿ ಮಹಾಭಾಗೇ ರಹಸ್ಯಂ ಕಥಯಾಮ್ಯಹಮ್ ।
ಯಜ್ಜ್ಞಾತ್ವಾ ಮುಚ್ಯತೇ ಜನ್ತುಃ ಜನ್ಮಸಂಸಾರಬನ್ಧನಾತ್ ॥೧॥
ಅಪಾಣಿಪಾದೋ ಜವನೋ ಗ್ರಹೀತಾ ವೀಕ್ಷತೇಪ್ಯದೃಕ್ ।
ಅಕರ್ಣಃ ಸ ಶೃಣೋತ್ಯೇವ ಶಬ್ದಂ ರೂಪಂ ಮಹಃ ಪರಮ್ ॥೨॥
ವೇತ್ತಿ ವೇದ್ಯಂ ಸ ಸರ್ವಜ್ಞೋ ನಾವೇದ್ಯಂ ವಿದ್ಯತೇ ಗುರೋಃ ।
ಸ ಮಹಾಪುರುಷಃ ಪುಂಸಾಂ ಸ್ತ್ರೀಣಾಂ ವ್ಯಕ್ತಿವಿಲಕ್ಷಣಃ ॥೩॥
ಸ್ತ್ರೀಪುನ್ನಪುಂಸಕಾಕಾರಹಿತಃ ಪುರುಷೋತ್ತಮಃ ।
ಸುರೇಶ್ವರಃ ಸರ್ವರೂಪಃ ಸರ್ವದೇವಮಯೋ ಹರಿಃ ॥೪॥
ಸತ್ಯಜ್ಞಾನಮಯೋನನ್ತೋನಾದಿರಾನನ್ದಉಚ್ಯತೇ ।
ಸದಾ ಸ್ಮರಣಮಾತ್ರೇಣ ಜನ್ಮಾದಿಕ್ಲೇಶನಾಶನಃ ॥೫॥

ಬಾಲಕಾಂಡದಲ್ಲಿ ಏಳನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸಿದನು :—

ಹೇ ಮಹಾಭಾಗೆ! ಪಾರ್ವತಿ! ಕೇಳುವವಳಾಗು. ನಾನು ನಿನಗೆ ರಹಸ್ಯವನ್ನು ಹೇಳುವೆನು. ಇದನ್ನು ತಿಳಿದಮಾತ್ರದಿಂದಲೇ, ಪ್ರಾಣಿಯು ಜನನಮರಣರೂಪವಾದ ಸಂಸಾರಬಂಧದಿಂದ ಮುಕ್ತನಾಗುವನು ॥೧॥

ಪ್ರಥಮತಃ ಆತ್ಮಸ್ವರೂಪವನ್ನು ಕೇಳುವವಳಾಗು : —ಈ ಪರಮಾತ್ಮನು, ಕೈಯಿಲ್ಲದಿದ್ದರೂ ಹಿಡಿದುಕೊಳ್ಳುವನು; ಕಾಲಿಲ್ಲದವನಾದರೂ ವೇಗವಾಗಿ ಓಡುವನು; ಕಿವಿಯಿಲ್ಲದಿದ್ದರೂ ಶಬ್ದಗಳನ್ನು ಕೇಳುವನು. ಇವನು ಮಹಾ ತೇಜೋರೂಪನಾದವನು ॥೨॥

ಸರ್ವಜ್ಞನಾದ ಆ ಪರಮಾತ್ಮನು, ಸಮಸ್ತವಾದ ವೇದ್ಯ(ತಿಳಿಯಲ್ಪಡಬೇಕಾದುದು)ಗಳನ್ನೂ ತಿಳಿಯುವನು. ಸರ್ವಲೋಕಗುರುವಾದ ಆ ಪರಮಾತ್ಮನಿಗೆ ತಿಳಿಯದಿರುವ ವಿಷಯವೊಂದೂ ಇಲ್ಲ. ಆ ಮಹಾಪುರುಷನು ಸ್ತ್ರೀಪುರುಷವ್ಯಕ್ತಿವಿಲಕ್ಷಣರೂಪನಾದನು ॥೩॥

ಆ ಪುರುಷೋತ್ತಮನು, ಸ್ತ್ರೀ ಪುರುಷ ನಪುಂಸಕ—ಇವರೊಬ್ಬರ ಆಕಾರವೂ ಇಲ್ಲದವನು. ಆ ಶ್ರೀಹರಿಯು, ಸಕಲ ದೇವತೆಗಳಿಗೂ ಈಶ್ವರನಾದವನು; ಅವನು ಸರ್ವರೂಪನಾಗಿಯೂ ಸರ್ವದೇವಮಯನಾಗಿಯೂ ಇರುವನು ॥೪॥

ಅವನು, ಸತ್ಯಜ್ಞಾನಾನಂದಮಯನೆಂಬುದಾಗಿಯೂ ಅನಂತನೆಂಬುದಾಗಿಯೂ ಅನಾದಿಯೆಂಬುದಾಗಿಯೂ ಹೇಳಲ್ಪಡುವನು. ಇವನು, ಸರ್ವದಾ ಸ್ಮರಣಮಾತ್ರದಿಂದಲೇ ಜನನಮರಣಾದಿಕ್ಲೇಶಗಳನ್ನು ನಾಶಪಡಿಸುವನು ॥೫॥

ಸರ್ವಸ್ಯ ಜಗದುತ್ಪತ್ತಿಸ್ಥಿತಿಸಂಹಾರಕಾರಣಮ್ ।
ತಸ್ಯಾತ್ಮತತ್ತ್ವಧೀಃ ಸರ್ವೇಷಾಂ ಪುನರಾವೃತ್ತಿಕರ್ತರೀ ॥೬॥
ಸರ್ವೇಶ್ವರಃ ಸರ್ವಮಯಃ ಸರ್ವಭೂತಹಿತೇ ರತಃ ।
ಸರ್ವೇಷಾಮುಪಕಾರಾಯ ಸಾಕಾರೋಽಭೂನ್ನರಾಕೃತಿಃ ॥೭॥
ಯದಾಯದಾ ಚ ಭಕ್ತಾನಾಂ ಭಯಮುತ್ಪದ್ಯತೇ ತದಾ ।
ತತ್ತದ್ಭಯವಿನಾಶಾಯ ತತ್ತದ್ರೂಪೋ ವ್ಯಜಾಯತ ॥೮॥
ಮತ್ಸ್ಯಕೂರ್ಮವರಾಹಾದಿರೂಪೈಃ ಪರಮಾರ್ಥಧೃತ್ ।
ತತ್ತತ್ಕಾಲೇಷು ಸಮ್ಭೂಯ ಸರ್ವೇಷಾಮುಪ್ಯುಪಕರೋತ್ ॥೯॥
ಅಜೋಽಯಂ ಜಾಯತೇನಂತಃ ಸಾನ್ತೋಽಭೂದಿವ ಸರ್ವಗಃ ।
ಕದಾಜಿದವತೀರ್ಯಾಯಂ ಮನ್ದಭಕ್ತಾನುಕಮ್ಪಯಾ ॥೧೦॥
ಕ್ಷೀರಾಬ್ಧೇರ್ದೇವದೇವೋಸೌ ಲಕ್ಷ್ಮ್ಯಾ ನಾರಾಯಣೋ ಭುವಿ ।
ಸಶೇಷಃ ಶಙ್ಖಚಕ್ರಾಭ್ಯಾಂ ದೇವೈರ್ಬ್ರಹ್ಮಾದಿಭಿಃ ಸಹ ॥೧೧॥
ತ್ರೇತಾಯುಗೇ ದಾಶರಥಿಃ ಭೂತ್ವಾ ನಾರಾಯಣೋ ಬಭೌ ।
ಧ್ಯಾನಮಾತ್ರೇಣ ದೇವೇಶಿ ಮಹಾಪಾತಕನಾಶಕೃತ್ ॥೧೨॥

ಸಮಸ್ತವಾದ ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೂ ಅವನೇ ಕಾರಣಭೂತನು. ಅವನಲ್ಲಿ ಆತ್ಮತತ್ವಜ್ಞಾನವು ಸಮಸ್ತ ಜೀವರುಗಳಿಗೂ ಪುನರಾವೃತ್ತಿಯನ್ನು ಕತ್ತರಿಸತಕ್ಕದು ॥೬॥

ಸರ್ವೇಶ್ವರನಾಗಿಯೂ ಸರ್ವಮಯನಾಗಿಯೂ ಸರ್ವಭೂತಹಿತಾಚರಣೆಯಲ್ಲಿ ಆಸಕ್ತನಾಗಿಯೂ ಇರುವ ಆ ಪರಮಾತ್ಮನು, ಸಕಲ ಪ್ರಾಣಿಗಳ ಉಪಕಾರಾರ್ಥವಾಗಿ, ಸ್ವಯಂನಿರಾಕಾರನಾಗಿದ್ದರೂ ಸಾಕಾರನಾಗಿ, ಮನುಷ್ಯರೂಪದಿಂದ ಅವತರಿಸಿದನು ॥೭॥

ಯಾವಯಾವಾಗ ಯಾವಯಾವ ವಿಧವಾಗಿ ಭಕ್ತರಿಗೆ ಭಯವುತ್ಪನ್ನವಾಯ್ತೋ, ಆಗಾಗ ಅಂತಂತಹರೀತಿಯಾಗಿ ಆಯಾ ಭಯವನ್ನು ನಾಶಪಡಿಸುವುದಕ್ಕೋಸ್ಕರವಾಗಿ, ಶ್ರೀಮನ್ನಾರಾಯಣನು ಆಯಾ ರೂಪದಿಂದವತರಿಸಿದನು ॥೮॥

ಹೀಗೆ ವಸ್ತುತಃ ಪರಮಾತ್ಮರೂಪನಾಗಿರುವ ಆ ಸ್ವಾಮಿಯು, ಮತ್ಸ್ಯ ಕೂರ್ಮ ವರಾಹ-ಇತ್ಯಾದಿ ರೂಪದಿಂದ ಆಯಾ ಕಾಲಗಳಲ್ಲಿ ಅವತರಿಸಿ, ಸರ್ವಲೋಕಕ್ಕೂ ಉಪಕಾರಮಾಡಿದನು ॥೯॥

ಈ ಪರಮಾತ್ಮನು, ವಸ್ತುತಃ ಸ್ವಯಂ ಜನ್ಮರಹಿತನಾಗಿದ್ದರೂ, ಮೂಢರಾದ ಭಕ್ತರಲ್ಲಿ ಅನುಗ್ರಹವಿಟ್ಟವನಾಗಿ, ಒಂದೊಂದು ಸಮಯದಲ್ಲಿ ಅವತರಿಸಿ ಜನ್ಮವೆತ್ತಿದವನಂತೆ ಕಾಣಿಸಿಕೊಂಡನು; ಮತ್ತು, ಸ್ವಯಂ ಅನಂತನಾಗಿಯೂ ಸರ್ವವ್ಯಾಪಿಯಾಗಿಯೂ ಇದ್ದರೂ, ಅಂತವುಳ್ಳವನಂತೆ ಆದನು ॥೧೦॥

ಮತ್ತು, ಎಲೌ ದೇವೇಶ್ವರಿ! ಈರೀತಿಯಾಗಿ ಅನೇಕ ಅವತಾರಗಳನ್ನು ಮಾಡಿದ ಆ ಶ್ರೀಮನ್ನಾರಾಯಣನು, ಹಿಂದೆ ತ್ರೇತಾಯುಗದಲ್ಲಿ ಲಕ್ಷ್ಮಿಯೊಡನೆಯೂ ಆದಿಶೇಷನೊಡನೆಯೂ ಶಂಖಚಕ್ರಗಳೊಡನೆಯೂ ಬ್ರಹ್ಮಾದಿದೇವತೆಗಳೊಡನೆಯೂ ಕೂಡಿದವನಾಗಿ, ಕ್ಷೀರಸಮುದ್ರವನ್ನು ಬಿಟ್ಟು ಭೂಮಿಯಲ್ಲಿ ದಶರಥಪುತ್ರನಾಗಿ ಅವತರಿಸಿ, ತನ್ನ ಧ್ಯಾನದಿಂದಲೇ ಸರ್ವರಿಗೂ ಮಹಾಪಾಪಗಳನ್ನು ನಾಶಮಾಡತಕ್ಕವನಾಗಿ ವಿರಾಜಿಸುತ್ತಿದ್ದನು ॥೧೧—೧೨॥

ತತಃ ಸೌಮಿತ್ರಿಭರತಶತ್ರುಘ್ನೈಃ ಸೀತಯಾ ಸಹ ।
ಕಪಿಭಿಶ್ಚಾನ್ವಿತೋ ದೇವೋ ಭಕ್ತಾರ್ತ್ತಿ ಪೂರ್ವಮಪಾಲಯತ್ ॥೧೩॥
ರಾಮರಾಮೇತಿ ರಕ್ಷೇತಿ ಯೋ ವದನ್ತ್ಯಪಿ ಪಾಪಿನಃ ।
ಪಾಪಕೋಟಿಸಹಸ್ರೇಭ್ಯಃ ತಾನುದ್ಧರತಿ ರಾಘವಃ ॥೧೪॥
ಯತೋ ವಾಚೋ ನಿವರ್ತನ್ತೇ ಮನೋಭಿಃ ಸಹ ಯೋಗಿನಾಮ್ ।
ಭಗವಾನ್ ಯೇನ ಸರ್ವೇಷಾಂ ಸ ಪ್ರತ್ಯಕ್ಷಮಜಾಯತ ॥೧೫॥
ತಸ್ಯೈವೋಪಾಸನಂ ಕಾರ್ಯಂ ಕೋಮಲಾಭ್ಯಾಂ ಮುಮುಕ್ಷುಣಾ ।
ತದುಪಾಸನಮೇವೇಹ ಶೀಘ್ರಂ ಜ್ಞಾನಾಯ ಕಲ್ಪತೇ ॥೧೬॥
ಮನಶ್ಚ ಸ್ವಸ್ಥತಾಮೇತಿ ಸಾಧನಾನ್ತರದುರ್ಘಟಾನಮ್ ।
ಶ್ರೀರಾಮಭಜನಾದೇವ ಸತ್ಯಂ ಸತ್ಯಂ ಮಯೋದಿತಮ್ ॥೧೭॥
ಪುರಾಪಿ ಬಹವೋ ರಾಮಂ ಧ್ಯಾತ್ವಾ ತದ್ಭಾವಮಾಗತಾಃ ।
ಪಾಪಿಷ್ಠೋ ವಾಪ್ಯಪಾಪಿಷ್ಠೋ ರಾಮಸ್ಮೃತ್ಯೈವ ಮುಚ್ಯತೇ ॥೧೮॥
ನ ಕಾಲೋ ನ ಜಪೋ ಹೋಮೋ ನ ಸ್ನಾನನಿಯಮಾದಿಕಮ್ ।
ಸಕೃದುಚ್ಚಾರ್ಯ ರಾಮೇತಿ ಮುಕ್ತೋ ಭವತಿ ಕಿಲ್ಬಿಷಾತ್ ॥೧೯॥

ಬಳಿಕ, ಲಕ್ಷ್ಮಣ ಭರತ ಶತ್ರುಘ್ನರೊಡನೆಯೂ ಸೀತೆಯೊಡನೆಯೂ ಕಪಿಗಳೊಡನೆಯೂ ಕೂಡಿದವನಾಗಿ, ಆ ದೇವದೇವನು ಭಕ್ತರನ್ನು ಸರಿಪಾಲಿಸಿದನು ॥೧೩॥

ಮಹಾಪಾಪಿಷ್ಠರಾಗಿದ್ದರೂ—ಯಾರು 'ರಾಮ ರಾಮ ರಕ್ಷ' ಎಂದು ಒಂದುಸಲ ಉಚ್ಚರಿಸುವರೋ, ಅವರನ್ನು ಶ್ರೀರಾಮನು ಅನೇಕಕೋಟಿ ಪಾಪಗಳಿಂದಲೂ ಉದ್ಧಾರಮಾಡುವನು॥

ಎಲೆ ಕೋಮಲಾಂಗಿ! ಪಾರ್ವತಿ! ಯಾವ ಪರಮಾತ್ಮನನ್ನು ಹಿಡಿಯಲಾರದೆ, ಯೋಗಿಗಳ ವಾಕ್ಯಗಳು ಮನಸ್ಸುಗಳೊಡನೆ ಹಿಂದಿರುಗುವವೋ, ಅಂತಹ ಭಗವಂತನು ಸರ್ವರಿಗೂ ಪ್ರತ್ಯಕ್ಷನಾಗಿ ಅವತರಿಸಿದಕಾರಣ, ಮುಮುಕ್ಷುವಾದವನು ಅವನ ಉಪಾಸನೆಯನ್ನೇ ಮಾಡಬೇಕು. ಅವನ ಉಪಾಸನೆಯೇ, ಈ ಪ್ರಪಂಚದಲ್ಲಿ ಶೀಘ್ರವಾಗಿ ಜ್ಞಾನೋತ್ಪಾದನಸಮರ್ಥವಾದುದು ॥೧೫–೧೬॥

ಮತ್ತು, ಪುರುಷರ ಮನಸ್ಸು, ಇತರ ವಿಧವಾದ ಯಾವ ಸಾಧನೆಯಿಂದಲೂ ಲಭಿಸಲಸಾಧ್ಯವಾದ ಸ್ವಾಸ್ಥ್ಯವನ್ನು, ಈ ರಾಮಸೇವೆಯಿಂದಲೇ ಪಡೆಯುವುದು. ನಾನು ಹೇಳಿರುವ ಈ ಮಾತು ಅತ್ಯಂತ ಸತ್ಯವಾದುದು ॥೧೭॥

ಪೂರ್ವದಲ್ಲಿಯೂ ಅನೇಕರು ಶ್ರೀರಾಮನನ್ನು ಧ್ಯಾನಮಾಡಿ ಆ ಶ್ರೀರಾಮನ ಸಾರೂಪ್ಯವನ್ನು ಹೊಂದಿರುವರು. ಪಾಪಶಾಲಿಯಾಗಲಿ— ಪುಣ್ಯಶಾಲಿಯಾಗಲಿ— ರಾಮನಾಮಸ್ಮರಣೆಯಿಂದಲೇ ಮುಕ್ತನಾಗುವನು ॥೧೮॥

ಈ ನಾಮಸ್ಮೃತಿಗೆ–ಕಾಲವೂ ಇಲ್ಲ; ಜಪನಿಯಮವೂ ಇಲ್ಲ; ಹೋಮವಿಧಿಯೂ ಇಲ್ಲ; ಸ್ನಾನಾದಿ ನಿಯಮಗಳೂ ಇಲ್ಲ. ಒಂದಾವೃತ್ತಿ 'ಶ್ರೀರಾಮ' ಎಂದು ಉಚ್ಚರಿಸಿದಮಾತ್ರದಿಂದಲೇ, ಮನುಷ್ಯನು ಪಾಪದಿಂದ ಬಿಡುಗಡೆ ಹೊಂದುವನು ॥೧೯॥

ಪಾರ್ವತ್ಯುವಾಚ.

ಭೂಯೋಪಿ ವದ ಮೇ ದೇವ ರಾಮತತ್ತ್ವಂ ವಿಶೇಷತಃ ।
ಯಸ್ಯ ಶ್ರವಣಮಾತ್ರೇಣ ಭಕ್ತಿಃ ಸ್ಯಾದ್ರಾಘವೇ ದೃಢಾ ॥೦೫॥
ಕೋ ರಾಮಸ್ತತ್ಕಥಾ ಕೀದೃಕ್ ತತ್ಸ್ವರೂಪಂ ಚ ಕೀದೃಶಮ್ ।
ಕಾ ಸೀತಾ ಲಕ್ಷ್ಮಣಃ ಕೋ ವಾ ಶತ್ರುಘ್ನೋ ಭರತಶ್ಚ ಕಃ ॥೦೬।

ಶ್ರೀಶಿವಉವಾಚ.

ಧನ್ಯಾಸಿ ಭಕ್ತಾಸಿ ಪರಾತ್ಮನಸ್ತ್ವಂ
ಯಜ್ಜಿಜ್ಞಾಸುರಿಚ್ಛಾ ತವ ರಾಮತತ್ತ್ವಮ್ ।
ಪುರಾ ನ ಕೇನಾಪ್ಯಭಿಚೋದಿತೋಽಹಂ
ವಕ್ಷ್ಯೇ ರಹಸ್ಯಂ ಪರಮಂ ನಿಗೂಢಮ್ ॥೦೭॥
ರಾಮಃ ಪರಾತ್ಮಾ ಪ್ರಕೃತೇರನಾದಿಃ
ಆನನ್ದೈಕಃ ಪುರುಷೋತ್ತಮೋಪಿ ।
ಸ್ವಮಾಯಯಾ ಸರ್ವಮಿದಂ ಚ ಸೃಷ್ಟ್ವಾ
ನಭೋವದನ್ತರ್ಬಹಿರಾಸ್ಥಿತೋಜಃ ॥೦೫॥
ಸರ್ವಾನ್ತರಸ್ಥೋಪಿ ನಿಗೂಢಆತ್ಮಾ
ಸ್ವಮಾಯಯಾ ಸರ್ವಮಿದಂ ವಿಚಷ್ಟೇ ।

ಶ್ರೀಪಾರ್ವತಿ ಹೇಳುವಳು:—

ದೇವ! ಯಾವುದನ್ನು ಕೇಳಿದರೆ ಶ್ರೀರಾಮನಲ್ಲಿ ಭಕ್ತಿ ದೃಢವಾಗುವುದೋ, ಅಂತಹ ರಾಮ ತತ್ವವನ್ನು ನನಗೆ ಮತ್ತೆ ವಿಶೇಷವಾಗಿ ಹೇಳಬೇಕು ॥೦೦॥

ರಾಮನೆಂಬವನು ಯಾರು? ಅವನ ಕಥೆಯೆಂತಹುದು? ಅವನ ಸ್ವರೂಪವೆಂತಹುದು? ಸೀತೆ ಯಾರು? ಲಕ್ಷ್ಮಣನು ಯಾರು? ಶತ್ರುಘ್ನನು ಯಾರು? ಭರತನೆಂಬವನೂ ಯಾರು? ॥೨೧॥

ಶ್ರೀ ಪರಮೇಶ್ವರನು ಉತ್ತರ ಹೇಳುವನು: —

ಎಲೌ ಪಾರ್ವತಿ! ನೀನೇ ಧನ್ಯಳು! ನೀನೇ ಪರಮಾತ್ಮಭಕ್ತಳು! ಏತಕ್ಕೆಂದರೆ,—ಶ್ರೀರಾಮನ ತತ್ವವನ್ನು ತಿಳಿದುಕೊಳ್ಳಬೇಕೆಂದು ನಿನಗೆ ಇಚ್ಛೆ ಹುಟ್ಟಿರುವುದಲ್ಲವೆ! ಹಿಂದೆ ನಾನು ಈರೀತಿಯಾಗಿ ಯಾರಿಂದಲೂ ಪ್ರೇರಿತನಾಗಿರಲಿಲ್ಲ. ಈಗ ನಿನ್ನಿಂದ ಪ್ರೇರಿತನಾಗಿರುವಕಾರಣ, ಅತಿ ಗೂಢವಾದ ಈ ರಹಸ್ಯವನ್ನು ನಿನಗೆ ಹೇಳುವೆನು ॥೨೨॥

ಶ್ರೀರಾಮನು, ಪ್ರಕೃತಿಗಿಂತ ಭಿನ್ನನಾದವನು; ಆನಂದಸ್ವರೂಪನು; ಅದ್ವಿತೀಯನಾದವನು; ಪುರುಷೋತ್ತಮನಾದವನು. ಸ್ವರೂಪತಃ ಜನ್ಮರಹಿತನಾದ ಇವನು, ತನ್ನ ಮಾಯೆಯಿಂದ ಇದೆಲ್ಲವನ್ನೂ ಸೃಷ್ಟಿಮಾಡಿ, ಆಕಾಶದಂತೆ ಒಳಗೂ ಹೊರಗೂ ವ್ಯಾಪಿಸಿಕೊಂಡಿರುವನು ॥೨೩॥

ಅವನು, ಸರ್ವಾಂತರ್ಯಾಮಿಯಾಗಿ, ಪರಮರಹಸ್ಯಭೂತನಾಗಿ, ತನ್ನ ಮಾಯೆಯಿಂದ ಈ ಪ್ರಪಂಚವೆಲ್ಲವನ್ನೂ ವ್ಯಕ್ತಗೊಳ್ಳಿಸುವನು. ಸೂಜಿಗಲ್ಲಿನ ಹತ್ತಿರ ಕಬ್ಬುನವು ಸುತ್ತುವಂತೆ, ಅವನ ಹತ್ತಿರ ಸುತ್ತಲೂ ಅನೇಕ ಜಗತ್ತುಗಳು ಸುತ್ತುತಿರುವುವು ॥೨೪॥

ಜಗನ್ತಿ ನಿತ್ಯಂ ಪರಿತೋ ಭ್ರಮನ್ತಿ
ತತ್ಸನ್ನಿಧೌ ಚುಮ್ಬ ಕಲೋಹವದ್ಧಿ ॥೨೪॥
ಏತಂ ನ ಜಾನನ್ತಿ ವಿಮೂಢಜೀವಾಃ
ಸ್ವಾವಿದ್ಯಯಾ ಸಂವೃತಮಾನಸಾಸ್ತೇ !
ಸ್ವಾಜ್ಞಾನಮಜ್ಞಾಸ್ತು ನಿಗೂಢಬೋಧೇ
ಸಂರೋಪಯನ್ತೀಹ ನಿರಾಸ್ತಮಾಯೇ ॥೨೫॥
ಸಂಸಾರಮೇವಾನುಸರನ್ತಿ ತೇ ವೈ
ಪುತ್ರಾದಿಸಕ್ತಾಃ ಪುರುಕರ್ಮಯುಕ್ತಾಃ ।
ಜಾನನ್ತಿ ನೈನಂ ಹೃದಯೇ ಸ್ಥಿತಂ ವಾ
ಚಾವಿರಾಕರಂ ಕಣ್ಠಗತಂ ಯಥಾಜ್ಞಾಃ ॥೨೬॥
ಯಥಾಽಪ್ರಕಾಶೋ ನ ತು ವಿದ್ಯತೇ ರವೌ
ಜ್ಯೋತಿಸ್ಸ್ವಭಾವೇ ಪರಮೇಶ್ವರೇ ತಥಾ !
ವಿಶುದ್ಧವಿಜ್ಞಾನಘನೇ ರಘೂತ್ತಮೇ
ಽವಿದ್ಯಾ ಕಥಂ ಸ್ಯಾತ್ ಪರತಃಪರಾತ್ಮನಿ ॥೨೭॥
ಯಥಾ ಹಿ ಚಾಕ್ಷ್ಣೋರ್ಭ್ರಮತೋಗರ್ಗಹಾದಿಕಂ
ವಿನಷ್ಟಪ್ಲಷ್ಟೇರ್ಭ್ರಮತೀವ ದೃಶ್ಯತೇ ।
ಜ್ಞಾನಂ ತಥಾಽಜ್ಞಾನಮಿದಂ ದ್ವಯಂ ಹರೌ
ರಾಮೇ ಕಥಂ ಸ್ಯಾತ್ಸ್ಯತಿ ಶುದ್ಧಚಿದ್ಘನೇ ॥೨೮॥

ಮಾಯಾವೃತರಾದ ಯಾವ ಮೂಢಹೃದಯರು ಇವನ ಸ್ವರೂಪವನ್ನು ತಿಳಿಯುವುದಿಲ್ಲವೋ, ಅವರು—ತಮ್ಮ ಅಜ್ಞಾನವನ್ನು—ನಿಗೂಢತತ್ವನಾಗಿ ಮಾಯಾರಹಿತನಾಗಿರುವ ಈ ಪರಮಾತ್ಮನಲ್ಲಿ ಆರೋಪಿಸುವರು ॥೨೫॥

ಬಾಲಕರು ತಮ್ಮ ಕುತ್ತಿಗೆಯಲ್ಲಿರುವ ಸುವರ್ಣಹಾರದ ಸ್ವರೂಪವನ್ನು ತಿಳಿಯದಿರುವಂತೆ, ತಮ್ಮ ಹೃದಯದಲ್ಲಿಯೇ ಇರುವ ಈ ಪರಮಾತ್ಮನನ್ನು ಯಾರು ತಿಳಿಯುವುದಿಲ್ಲವೋ, ಅವರು—ಪತ್ನೀಪುತ್ರಾದಿಗಳಲ್ಲಿ ಆಸಕ್ತರಾಗಿ—ಅನೇಕ ಕರ್ಮಗಳಲ್ಲಿ ಸಿಕ್ಕಿಕೊಂಡು—ಸಂಸಾರಮಾರ್ಗವನ್ನೇ ಅನುಸರಿಸುವರು ॥೨೬॥

ತೇಜೋರೂಪನಾದ ಸೂರ್ಯನಲ್ಲಿ ತಮಸ್ಸು ಹೇಗೆ ಸುತರಾಂ ಸಂಭವಿಸುವುದಿಲ್ಲವೋ, ಹಾಗೆ—ಕೇವಲ ವಿಶುದ್ಧಜ್ಞಾನ ಘನರೂಪನಾಗಿ ಪರಾತ್ಪರತರನಾಗಿ ಸರ್ವಲೋಕೇಶ್ವರನಾಗಿರುವ ಶ್ರೀರಾಮನಲ್ಲಿ ಅವಿದ್ಯೆಯೆಂಬುದು ಹೇಗೆ ಸಂಭವಿಸೀತು? ॥೨೭॥

ಕಣ್ಣುಕೆಟ್ಟುಹೋಗಿರತಕ್ಕವನಿಗೆ, ಅವನ ಕಣ್ಣುಗಳು ಸುತ್ತುತಿರುವಾಗ, ಸುತ್ತಲೂ ಇರುವ ಮನೆಮಠಗಳೆಲ್ಲ ಸುತ್ತುತಿರುವಂತೆ ಹೇಗೆ ಕಾಣುವುವೋ, ಹಾಗೆ—ಶುದ್ಧ ಚಿದ್ಘನರೂಪನಾದ ಶ್ರೀಹರಿಯ ಅವತಾರರೂಪನಾದ ಶ್ರೀರಾಮನಲ್ಲಿ—ಜ್ಞಾನವೂ ಅಜ್ಞಾನವೂ ಎರಡೂ ಇರುವಂತೆ ಭ್ರಮೆಯುಂಟಾಗುವುವೇಹೊರತು, ಸ್ವರೂಪತಃ ಇವುಗಳು ಅವನಲ್ಲಿ ಹೇಗೆ ಇರುವುವು? ॥೨೮॥

ತಸ್ಮಾತ್ ಪರಾನನ್ದಮಯೇ ರಘೂತ್ತಮೇ
ವಿಜ್ಞಾನರೂಪೇ ನ ಹಿ ವಿದ್ಯತೇ ತಮಃ ।
ಅಜ್ಞಾನಸಾಕ್ಷ್ಯಾರವಿನ್ದಲೋಚನೇ
ಮಾಯಾಶ್ರಯತ್ವಂ ನ ತು ಮೋಹಕಾರಣಮ್ ॥೨೯॥
ರಾಮಸ್ತ್ವವಸ್ಥಾದೃಗನನ್ತಶಕ್ತಿಃ
ಕೋಶಾತಿಗಃ ಶಾಸತಿ ಚಾನ್ತರಸ್ಥಃ ।
ಸ್ವತ್ಯೇಕವಿಜ್ಞೇಯನಿಜಾನುಭೂತಿಃ
ಆನನ್ದಏಕೋ ಹಿ ನಿಗದ್ಯತೇ ಸಃ ॥೩೦॥
ಏವಂ ಪರಾತ್ಮಾ ನಿಜಮಾಯಯಾಭೂತ್
ರಾಮಸ್ತು ಸೀತಾ ಪ್ರಕೃತಿಃ ಪರಾತ್ಮನಃ ।
ಸ ಲಕ್ಷ್ಮಣೋಽಹಿರ್ಭರತಸ್ತು ಚಕ್ರಂ
ಶತ್ರುಘ್ನಆಸೀಜ್ಜಲಜೋ ಮುರಾರೇಃ ॥೩೧॥

ಇತಿ ಶ್ರೀ ಬಾಲಕಾಣ್ಡೇ ಶಿವೋಕ್ತರಾಮತತ್ತ್ವಕಥನಂ ನಾಮ
ಸಪ್ತಮಃ ಸರ್ಗಃ.

ಅದುಕಾರಣ, ಪರಮಾನಂದರೂಪನಾಗಿಯೂ ವಿಜ್ಞಾನರೂಪವಾಗಿಯೂ ಅಜ್ಞಾನಸಾಕ್ಷಿಯಾಗಿಯೂ ಪುಂಡರೀಕಾಕ್ಷನಾಗಿಯೂ ಇರುವ ಶ್ರೀರಾಮಚಂದ್ರನಲ್ಲಿ, ತಮಸ್ಸು ಇಲ್ಲವೇ ಇಲ್ಲ. ಇವನು ಮಾಯೆಗಾಶ್ರಯನಾಗಿರುವನು; ಆದರೂ ಈ ಮಾಯಾಶ್ರಯತ್ವವು ಇವನಿಗೆ ಮೋಹಹೇತುವಾಗುವುದಿಲ್ಲ ॥೨೯॥

ಇಂತಹ ಈ ಶ್ರೀರಾಮನು, ಜಾಗ್ರತ್ ಸ್ವಪ್ನ ಸುಷುಪ್ತಿರೂಪವಾದ ಅವಸ್ಥಾತ್ರಯಕ್ಕೂ ಸಾಕ್ಷಿಭೂತನಾದವನು; ಇವನ ಶಕ್ತಿಯು ಅನಂತವಾದುದು; ಇವನು ಪಂಚಕೋಶಗಳನ್ನೂ ಅತಿಕ್ರಮಿಸಿರತಕ್ಕವನು; ಸರ್ವಭೂತಗಳಿಗೂ ಅಂತರ್ಯಾಮಿಯಾಗಿ ನಿಯಾಮಕನಾಗಿರುವನು. ಇವನ ಸ್ವರೂಪವು, ಕೇವಲ ಶಾಸ್ತ್ರಜ್ಞಾನದಿಂದಲೇ ಅನುಭವಕ್ಕೆ ಬರಬೇಕಾಗಿರುವುದು. ಇವನು ಆನಂದರೂಪನೆಂದೂ ಅದ್ವಿತೀಯನೆಂದೂ ಸಕಲ ಶಾಸ್ತ್ರಗಳಲ್ಲಿಯೂ ಹೇಳಲ್ಪಡುವನು ॥೩೦॥

ಎಲೌ ಪಾರ್ವತಿ! ಈರೀತಿಯಾಗಿ, ಪರಮಾತ್ಮನು ತನ್ನ ಮಾಯೆಯಿಂದ ಶ್ರೀರಾಮನಾದನು. ಆ ಪರಮಾತ್ಮನ ಪ್ರಕೃತಿಯೇ ಸೀತೆಯಾದಳು; ಆದಿಶೇಷನೇ ಆ ಲಕ್ಷ್ಮಣನಾಗಿ ಅವತರಿಸಿದನು; ಚಕ್ರವೇ ಭರತನಾಗಿಯೂ, ಶಂಖವೇ ಶತ್ರುಘ್ನನಾಗಿಯೂ ಅವತರಿಸಿದರು ॥೩೧॥

ಇದು ಬಾಲಕಾಂಡದಲ್ಲಿ ಶಿವೋಕ್ತರಾಮತತ್ವಕಥನವೆಂಬ
ಏಳನೆಯ ಸರ್ಗವು.



ಅಥ ಶ್ರೀ ಬಾಲಕಾಂಡೇ ಅಷ್ಟಮಃ ಸರ್ಗಃ.

ಶ್ರೀಪಾರ್ವತ್ಯುವಾಚ.

ಯದೇಕಂ ನಿಷ್ಕಳಂ ಬ್ರಹ್ಮ ಸರ್ವವ್ಯಾಪಕಮವ್ಯಯಮ್ ।
ಭೂಮಾವವತತಾರಾತ್ರ ಕಿಮರ್ಥಂ ತದ್ವದಸ್ವ ಮೇ ॥೧॥
ಅವತೀರ್ಣೇಪಿ ಸತ್ಯಾದಿಲಕ್ಷಣೇ ನಿರ್ವಿಕಾರಿಣಿ ।
ರಾಮಾಯಣೇ ಪುರಾಣಾದೌ ಕಿಂ ನಾನಾತ್ವೇನ ವರ್ಣಿತಮ್ ॥೨॥
ಕ್ವಚಿದ್ಬ್ರಹ್ಮ ಶಿವೋ ವಿಷ್ಣುಃ ಕ್ವಚಿನ್ಮೂರ್ತಿತ್ರಯಾತ್ ಪರಃ ।
ಕಚಿನ್ಮೂರ್ತಿತ್ರಯಾತ್ಮಾಯಂ ಕ್ವಚಿದ್ಧರಿಹರಾತ್ಮಕಃ ॥೩॥
ಇತ್ಯಾದಿ ನಾನಾರೂಪೇಣ ವಿರುದ್ಧಮಿವ ವರ್ಣಿತಮ್ ।
ಋಷಿಭಿರ್ಬಹುಧಾ ಚಾತ್ರ ಸಂಶಯೋ ಜಾಯತೇ ಮಮ ॥೪॥
ತ್ವಾಮೃತೇ ಸಂಶಯಸ್ಯಾಸ್ಯ ಚ್ಛೇತ್ತಾ ಲೋಕೇ ನ ವಿದ್ಯತೇ ।
ನುದ್ಯೈನಂ ಸಂಶಯಂ ಶರ್ವ ವಿಷ್ಣುಭಕ್ತ್ಯಾ ರಘುಂ ಯಥಾ ॥೫॥

ಬಾಲಕಾಂಡದಲ್ಲಿ ಎಂಟನೆಯ ಸರ್ಗವು.

ಶ್ರೀ ಪಾರ್ವತಿಯು ಶ್ರೀ ಪರಮೇಶ್ವರನನ್ನು ಕುರಿತು ಪ್ರಶ್ನೆಮಾಡುವಳು :—

ಸ್ವಾಮಿನ್! ಪರಮೇಶ್ವರ! ನಿರ್ವಿಕಲ್ಪವಾಗಿ ಸರ್ವವ್ಯಾಪಿಯಾಗಿ ಅವ್ಯಯವಾಗಿರುವ ಯಾವ ಬ್ರಹ್ಮವಸ್ತುವುಂಟೋ, ಅದು ಈ ಭೂಮಿಯಲ್ಲಿ ಏತಕ್ಕಾಗಿ ಅವತರಿಸಿತು? ಅದನ್ನು ತಾವು ನನಗೆ ಅಪ್ಪಣೆಕೊಡಿಸಬೇಕು ॥೧॥

ಸತ್ಯಜ್ಞಾನಾನಂದರೂಪವಾಗಿ ನಿರ್ವಿಕಾರವಾಗಿರುವ ಆ ಬ್ರಹ್ಮವು ಅವತರಿಸಿದಾಗ್ಯೂ, ರಾಮಾಯಣದಲ್ಲಿಯೂ ಪುರಾಣ ಮುಂತಾದುವುಗಳಲ್ಲಿಯೂ ಅದು ನಾನಾವಿಧವಾಗಿ ವರ್ಣಿಸಲ್ಪಟ್ಟಿರುವುದಕ್ಕೆ ಕಾರಣವೇನು? ॥೨॥

ಒಂದುಕಡೆಯಲ್ಲಿ ಬ್ರಹ್ಮನೆಂದೂ, ಒಂದುಕಡೆಯಲ್ಲಿ ಶಿವನೆಂದೂ, ಒಂದುಕಡೆಯಲ್ಲಿ ವಿಷ್ಣುವೆಂದೂ, ಕೆಲವುಕಡೆಯಲ್ಲಿ ಮೂರ್ತಿತ್ರಯಾತೀತನೆಂದೂ, ಮತ್ತೆ ಕೆಲವು ಸ್ಥಳಗಳಲ್ಲಿ ಮೂರ್ತಿತ್ರಯಸ್ವರೂಪನೆಂದೂ, ಇನ್ನು ಕೆಲವುಕಡೆ ಹರಿಹರರೂಪನೆಂದೂ, ಶ್ರೀರಾಮನು ಹೇಳಲ್ಪಟ್ಟಿರುವನು ॥೩॥

ಇತ್ಯಾದಿರೀತಿಯಾಗಿ, ಋಷಿಗಳು ಶ್ರೀರಾಮನನ್ನು ನಾನಾವಿಧವಾಗಿ ವರ್ಣಿಸಿರುವರು. ಇದು ಪರಸ್ಪರ ವಿರುದ್ಧವಾಗಿರುವಂತೆ ತೋರುವುದು. ಆದುಕಾರಣ, ಈ ವಿಷಯದಲ್ಲಿ ನನಗೆ ಸಂಶಯವು ಹುಟ್ಟಿರುವುದು ॥೪॥

ಸ್ವಾಮಿ! ತಮ್ಮನ್ನು ಬಿಟ್ಟರೆ, ಈ ಸಂಶಯವನ್ನು ಛೇದಿಸತಕ್ಕವರು ಪ್ರಪಂಚದಲ್ಲಿ ಯಾರೂ ಇಲ್ಲ. ಆದುಕಾರಣ, ಹೇ ಶಂಭೋ! ವಿಷ್ಣುಭಕ್ತ್ಯಾಯು ರಘುವಿನ ಸಂಶಯವನ್ನು ಹೋಗಲಾಡಿಸುವಂತೆ, ತಾವು ನನ್ನ ಈ ಸಂಶಯವನ್ನು ಹೋಗಲಾಡಿಸಬೇಕು ॥೫॥

ಸರ್ವತೋ ರಾಮತತ್ತ್ವಸ್ಯ ಸಾರಮುದ್ಧೃತ್ಯ ಶಙ್ಕರ ।
ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋ ಭವೇನ್ಮಮ ॥೬॥

ಶ್ರೀಶಿವಉವಾಚ.

ಧನ್ಯಾಸಿ ರಾಮಭಕ್ತಾಸಿ ಕೃತಕೃತ್ಯಾಸಿ ಭಾಮಿನಿ ।
ರಾಮತತ್ತ್ವೇ ಪರೇ ಸೂಕ್ಷ್ಮೇ ಯಸ್ಯಾಸ್ತೇ ಮತಿರೀದೃಶೀ ॥೭॥
ರಾಮತತ್ತ್ವಂ ಪರಂ ಗೋಪ್ಯಂ ಗುಹ್ಯಾದ್ಗುಹ್ಯತರಂ ಮಹತ್ ।
ನ ಕೋಪಿ ವೇದ ತತ್ತತ್ತ್ವಂ ಯನ್ಮಾಯಾವಞ್ಚಿತೋ ನರಃ ॥೮॥
ದೇಹಜಾತ್ಯಾದಿಮಾನೇನ ಭ್ರಮತಾಂ ಭವಕಾನನೇ ।
ರಾಗದ್ವೇಷಾದಿಮೂಢಾನಾಂ ರಾಮೇ ಭಕ್ತಿಃ ಸುದುರ್ಲಭಾ ॥೯॥
ಮನ್ವನ್ತರಸಹಸ್ರಾಣಿ ಕಾಶ್ಯಾಂ ವೃಷಭಕೇತನಃ ।
ಅಹಂ ತಪಃ ಸಮಾಸ್ಥಾಯ ತತ್ಸ್ವರೂಪಮವೇದಿಷಮ್ ।
ರಾಮಾರ್ಥಃ ಖಲು ದುರ್ಜ್ಞೇಯೋ ನರೈಃ ಪ್ರಾಕೃತಲೋಚನೈಃ ॥೧೦॥
ಮುಮೂರ್ಷೂಣಾಂ ಮನುಷ್ಯಾಣಾಂ ಕಾಶ್ಯಾಂ ಶ್ರೋತ್ರಪುಟೇ ಸ್ಫುಟಮ್।
ತಾರಕಂ ರಾಮಶಬ್ದಾಖ್ಯಂ ಉಪದೇಕ್ಷ್ಯಾಮಿ ಭಾಮಿನಿ ॥೧೧॥

ಹೇ ಶಂಕರ! ತಾವು ಶ್ರೀರಾಮತತ್ವದ ಸಾರವನ್ನು ಎಲ್ಲಕಡೆಯಿಂದಲೂ ತೆಗೆದುಕೊಂಡು, ಯಾವುದರಿಂದ ನನಗೆ ಶ್ರೇಯಸ್ಸುಂಟಾಗುವುದೋ—ಅಂತಹ ಒಂದೇಒಂದು ತತ್ವವನ್ನು ನಿಶ್ಚಯಿಸಿ ಅಪ್ಪಣೆಕೊಡಿಸಬೇಕು ॥೬॥

ಶ್ರೀಶಿವನು ಹೇಳುವನು :—

ಹೇ ಪ್ರಿಯೇ! ಅತ್ಯುತ್ತಮವಾಗಿಯೂ ಅತಿ ಸೂಕ್ಷ್ಮವಾಗಿಯೂ ಇರುವ ಶ್ರೀರಾಮನ ತತ್ವದಲ್ಲಿ, ನಿನಗೆ ಇಂತಹ ಬುದ್ಧಿಯುಂಟಾಗಿರುವುದಲ್ಲ! ನೀನೇ ಧನ್ಯಳು! ನೀನೇ ರಾಮಭಕ್ತಳು!! ನೀನೇ ಕೃತಕೃತ್ಯಳು!!! ॥೭॥

ಶ್ರೀರಾಮನ ತತ್ವವು ಅತಿ ಶ್ರೇಷ್ಠವಾದುದು; ಅತ್ಯಂತ ಮರೆಯಾಗಿ ಇಟ್ಟರಬೇಕಾದುದು; ರಹಸ್ಯಗಳಲ್ಲೆಲ್ಲ ಅತಿ ರಹಸ್ಯವಾದುದು; ಇದು ಬಹು ದೊಡ್ಡದು. ಪ್ರಪಂಚದಲ್ಲಿ ಸಾಮಾನ್ಯವಾಗಿ ಮನುಷ್ಯನಾದವನು ಮಾಯಾವಂಚಿತನಾಗಿರುವುದರಿಂದ, ಆ ಶ್ರೀರಾಮನ ತತ್ವವನ್ನು ಯಾರೂ ಅರಿಯರು ॥೮॥

ದೇಹಾಭಿಮಾನ ಜಾತ್ಯಭಿಮಾನ ಮುಂತಾದುವುಗಳಿಂದ ಸಂಸಾರವೆಂಬ ಕಾಡಿನಲ್ಲಿ ಸುತ್ತುತರಾಗದ್ವೇಷಾದಿ ಮೋಹಿತರಾಗಿರುವ ಮನುಜರಿಗೆ, ಶ್ರೀರಾಮನಲ್ಲಿ ಭಕ್ತಿಯು ಸುತರಾಂ ದುರ್ಲಭವಾದುದು ॥೯॥

ವೃಷಭಧ್ವಜನಾದ ನಾನು, ಕಾಶಿಯಲ್ಲಿ ಸಾವಿರಾರುಮನ್ವಂತರಕಾಲ ತಪಸ್ಸುಮಾಡಿ, ಆ ಶ್ರೀರಾಮನ ತತ್ವವನ್ನು ತಿಳಿದುಕೊಂಡೆನು. ಹೀಗಿರುವುದರಿಂದ, ವ್ಯಾಕೃತದೃಷ್ಟಿಯುಳ್ಳ ಸಾಮಾನ್ಯಮನುಷ್ಯರಿಗೆ, ಈ ಶ್ರೀರಾಮನ ತತ್ವವು ಸುತರಾಂ ತಿಳಿಯಲಸಾಧ್ಯವಾದುದು ॥೧೦॥

ಆದುದರಿಂದ, ಎಲೌ ಪಾರ್ವತಿ! ನಾನು ಕಾಶಿಯಲ್ಲಿ ಮುಮೂರ್ಷುಗಳಾದ ಮನುಷ್ಯರ

ಉಪದೇಶನಮಾತ್ರೇಣ ಮುಕ್ತಿರ್ಭವತಿ ದೇಹಿನಾಮ್ ॥೧೦॥
ಇತ್ಯುಕ್ತ್ವಾ ರಾಮಚಂದ್ರಸ್ಯ ಸ್ಮರಣಾದ್ವಿವಶೀಕೃತಃ ।
ಭಕ್ತ್ಯಾ ಪುಲಕಿತಾಙ್ಗಿಃ ಸನ್ ದಧ್ಯೌ ರಾಮಂ ಹೃದಾ ಶಿವಃ ॥೧೩॥
ಜಗತ್ಪ್ರಭುಂ ದೇವದೇವಂ ಶಙ್ಖಚಕ್ರಗದಾಧರಮ್ ।
ಮುಗ್ಧಸ್ಮಿತಮುದಾರಾಙ್ಗಂ ಕರುಣಾಪೂರ್ಣಮಾನಸಮ್ ॥೧೪॥
ಜಗತ್ಕಾರಣಕರ್ತಾರಂ ವಿರಾಜಂ ಪುರುಷಂ ಪರಮ್ ।
ಶಿವಂ ಬ್ರಹ್ಮಾಣಮೀಶಾನಂ ಲೋಕನಾಥಂ ಮಹಾದ್ಭುತಮ್ ॥೧೫॥
ಧ್ಯಾತ್ವೈವಂ ರಾಘವಂ ದೇವಂ ಸಚ್ಚಿದಾನನ್ದವಿಗ್ರಹಮ್ ।
ಧ್ಯಾನಾವಿರ್ಭೂತತದ್ಭೇದಃ ಶಿವಃ ಪ್ರೋವಾಚ ಪಾರ್ವತೀಮ್ ॥೧೬॥

ಇತಿ ಶ್ರೀಬಾಲಕಾಣ್ಡೇ ಶಿವಕೃತರಾಮಧ್ಯಾನಾದಿಕಥನಂ ನಾಮ
ಅಷ್ಟಮಃ ಸರ್ಗಃ.



ಕವಿಯೊಳಗೆ ಶ್ರೀರಾಮಶಬ್ದವೆಂಬ ತಾರಕಮಂತ್ರವನ್ನುಪದೇಶಿಸುವೆನು. ಈ ತಾರಕಮಂತ್ರದ ಉಪದೇಶಮಾತ್ರದಿಂದಲೇ ಪ್ರಾಣಿಗಳೆಲ್ಲ ಮುಕ್ತಿ ಸಿದ್ಧಿಸುವುದು ॥೧೧-೧೨॥


ಅಯ್ಯಾ! ಮಹರ್ಷಿಗಳಿರಾ! ಆ ಪರಮೇಶ್ವರನು, ಪಾರ್ವತಿಯನ್ನು ಕುರಿತು ಈರೀತಿಯಾಗಿ ಹೇಳಿ, ಆ ರಾಮನ ಸ್ಮೃತಿಯಿಂದ ಪರವಶನಾಗಿಬಿಟ್ಟು, ಭಕ್ತಿಯಿಂದ ಮೈಯೆಲ್ಲ ರೋಮಾಂಚವುಂಟಾದವನಾಗಿ, ತನ್ನ ಹೃದಯದಲ್ಲಿ, ಜಗತ್ಪ್ರಭುವಾದ ದೇವದೇವನಾದ ಶಂಖಚಕ್ರಗದಾಧರನಾದ ಸುಂದರಮಂದಹಾಸಪೂರ್ಣನಾದ ಮನೋರಮಶರೀರನಾದ ಕರುಣಾಪೂರ್ಣಮಾನಸನಾದ ಜಗತ್ಕಾರಣಕರ್ತೃವಾದ ವಿರಾಟ್ಪುರುಷನಾದ ಶಿವಬ್ರಹ್ಮಸ್ವರೂಪನಾದ ಸರ್ವಲೋಕಮಹೇಶ್ವರನಾದ ತ್ರಿಲೋಕನಾಥನಾದ ಪರಮಾಶ್ಚರ್ಯರೂಪನಾದ ಶ್ರೀರಾಮಚಂದ್ರನನ್ನು ಧ್ಯಾನಿಸಿದನು ॥೧೩-೧೫॥

ಈರೀತಿಯಾಗಿ ಸಚ್ಚಿದಾನಂದವಿಗ್ರಹನಾದ ಶ್ರೀರಾಮದೇವನನ್ನು ಧ್ಯಾನಮಾಡಿ, ಪರಮೇಶ್ವರನು, ಈ ಧ್ಯಾನದಿಂದ ಆವಿರ್ಭವಿಸಿದ ಶ್ರೀರಾಮನ ತತ್ವಜ್ಞಾನವುಳ್ಳವನಾಗಿ, ಪುನಃ ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸಿದನು ॥೧೬॥

ಇದು ಬಾಲಕಾಂಡದಲ್ಲಿ ಶಿವಕೃತರಾಮಧ್ಯಾನಾದಿವರ್ಣನೆಯೆಂಬ
ಎಂಟನೆಯ ಸರ್ಗವು.



ಅಥ ಶ್ರೀ ಬಾಲಕಾಂಡೇ ನವಮಃ ಸರ್ಗಃ.



ಶ್ರೀ ಶಿವಉವಾಚ.

ರಮನ್ತೇ ಯೋಗಿನೋನನ್ತೇ ಸತ್ಯಾನನ್ದಜಿದಾತ್ಮನಿ ।
ಇತಿ ರಾಮಪದೇನಾಸೌ ಪರಬ್ರಹ್ಮಾಭಿಧೀಯತೇ ॥೧॥

ಸ್ವಭೂರ್ಜ್ಯೋತಿರ್ಮಯೋನನ್ತರೂಪಃ ಸ್ವೇನೈವ ಭಾಸತೇ ।
ರೇಫಾರೂಢಾಮೂರ್ತಯಸ್ತು ಶಕ್ತಯಸ್ತಿಸ್ರಏವ ಚ ॥೨॥


ಯಥೈವ ವಟಬೀಜಸ್ಥಃ ಪ್ರಾಕೃತಶ್ಚ ಮಹಾದ್ರುಮಃ ।
ತಥೈವ ರಾಮಬೀಜಸ್ಥಂ ಜಗದೇತಚ್ಚರಾಚರಮ್ ॥೩॥

ಅಕಾರಾಕ್ಷರಸಂಭೂತಃ ಸೌಮಿತ್ರಿರ್ವಿಶ್ವಭಾವನಃ ।
ಉಕಾರಾಕ್ಷರಸಂಭೂತೋ ಭರತಸ್ತೈಜಸಾತ್ಮಕಃ ॥೪॥

ಪ್ರಾಜ್ಞಾತ್ಮಕಸ್ತು ಶತ್ರುಘ್ನೋ ಮಕಾರಾಕ್ಷರಸಮ್ಭವಃ ।
ಅರ್ಧಮಾತ್ರಾತ್ಮಕೋ ರಾಮೋ ಬ್ರಹ್ಮಾನನ್ದೈಕವಿಗ್ರಹಃ ॥೫॥

ಶ್ರೀರಾಮಸಾನ್ನಿಧ್ಯವಶಾತ್ ಜಗದಾನನ್ದಕಾರಿಣೀ ।
ಉತ್ಪತ್ತಿಸ್ಥಿತಿಸಂಹಾರಕಾರಿಣೀ ಸರ್ವದೇಹಿನಾಮ್ ॥೬॥

ಬಾಲಕಾಂಡದಲ್ಲಿ ಒಂಬತ್ತನೆಯ ಸರ್ಗವು.



ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳಿದುದೇನೆಂದರೆ :—

ಎಲೌ ಪಾರ್ವತಿ! 'ರಮನ್ತೇ ಅಸ್ಮಿನ್ ಇತಿ ರಾಮಃ' (ಎಂದರೆ ಇವನಲ್ಲಿ ರಮಿಸುವರಾದುದರಿಂದ ರಾಮನೆಂಬ ಶಬ್ದವು ಇವನಲ್ಲಿ ರೂಢವಾಗಿರುವುದು) ಎಂದು ಶ್ರೀರಾಮಶಬ್ದಕ್ಕೆ ವ್ಯುತ್ಪತ್ತಿಯಿರುವುದು. 'ಸಚ್ಚಿದಾನಂದರೂಪವಾದ ಅನಂತವಾದ ವಸ್ತುವಿನಲ್ಲಿ ಯೋಗಿಗಳೆಲ್ಲರೂ ರಮಿಸುವರು' ಎಂಬುದಾಗಿ—'ರಾಮ' ಪದದಿಂದ ಪರಬ್ರಹ್ಮವು ಹೇಳಲ್ಪಡುವುದು ॥೧॥

ಈ ರಾಮನು, ಸ್ವಯಂಭುವಾಗಿಯೂ ಜ್ಯೋತಿರ್ಮಯನಾಗಿಯೂ ಅನಂತರೂಪನಾಗಿಯೂ ಸ್ವಯಂಪ್ರಕಾಶನಾಗಿಯೂ ಇರುವನು. ರಾಮಶಬ್ದದಲ್ಲಿರುವ ರೇಫವನ್ನು, ತ್ರಿಮೂರ್ತಿಗಳೂ ತ್ರಿಶಕ್ತಿಗಳೂ ಆಶ್ರಯಿಸಿರುವುವು ॥೨॥

ಒಂದು ಆಲದ ಬೀಜದೊಳಗೆ ದೊಡ್ಡದೊಂದು ಆಲದಮರವು ಹೇಗಿರುವುದೋ, ಹಾಗೆ ರಾಮಬೀಜದಲ್ಲಿ ಈ ಚರಾಚರಾತ್ಮಕಪ್ರಪಂಚವೆಲ್ಲ ಅಡಗಿರುವುದು ॥೩॥

ಎಲೌ ಪಾರ್ವತಿ! ಓಂಕಾರದಲ್ಲಿ, ಅಕಾರ ಉಕಾರ ಮಕಾರ ಅರ್ಧಮಾತ್ರೆಗಳು ಸೇರಿರುವವಷ್ಟೆ! ಇವುಗಳಲ್ಲಿ, ಅಕಾರದಿಂದ ಹುಟ್ಟಿದ ಲಕ್ಷ್ಮಣನು ವಿರಾಡ್ರೂಪನಾದವನು; ಉಕಾರದಿಂದ ಹುಟ್ಟಿದ ಭರತನು ತೈಜಸಾತ್ಮಕನು; ಮಕಾರದಿಂದ ಹುಟ್ಟಿದ ಶತ್ರುಘ್ನನು ಪ್ರಾಜ್ಞಾತ್ಮಕನು; ಅರ್ಧಮಾತ್ರಾತ್ಮಕನಾದ ಶ್ರೀರಾಮನೇ ಆನಂದರೂಪನಾದ ಪರಬ್ರಹ್ಮನು ॥೪-೫॥

ಹೀಗೆ ಪರಬ್ರಹ್ಮರೂಪನಾದ ಶ್ರೀರಾಮನ ಸಾನ್ನಿಧ್ಯವಶದಿಂದ ಸರ್ವಪ್ರಾಣಿಗಳಿಗೂ ಉತ್ಪತ್ತಿಸ್ಥಿತಿಸಂಹಾರಗಳನ್ನು ಮಾಡುತಿರುವ ಮೂಲಪ್ರಕೃತಿಯೇ ಜಗದಾನಂದಕಾರಿಣಿಯಾದ

ಸೀತಾ ಭಗವತೀ ಜ್ಞೇಯಾ ಮೂಲಪ್ರಕೃತಿಸಂಸ್ಥಿತಾ ।
ಪ್ರಣವತ್ವಾತ್ ಪ್ರಕೃತಿರಿತಿ ವದನ್ತಿ ಬ್ರಹ್ಮವಾದಿನಃ ॥೬॥
ತಸ್ಯಾಃ ಪ್ರಕೃತಿಭೂತಾಯಾಃ ಗುಣೈರ್ಬ್ರಹ್ಮಾ ಹರಿಃ ಶಿವಃ ।
ಕಲ್ಪಿತಾಸ್ತದಧಿಷ್ಠಾತಾ ರಾಮಃ ಪ್ರಕೃತಿಪಾಲಕಃ ॥೪॥
ಸಏವ ವೈಷ್ಣವಂ ತೇಜಃ ಪ್ರಧಾನೀಕೃತ್ಯ ತೇಜಸೀ ।
ಕೃತ್ವೋಪಸರ್ಜನೇ ರಾಮೋ ಬಭೂವ ಬ್ರಹ್ಮರುದ್ರಯೋಃ ॥೯॥
ನಾರಾಯಣಾನ್ತರ್ಯಾಮೀಶವಾಸುದೇವಾದಿಶಬ್ದಿತಮ್ ।
ಯದ್ವಸ್ತು ರಾಮರೂಪೇಣ ಜಾತಂ ತನ್ಮಿಜಮಾಯಯಾ ॥೧೦॥
ವಿಷ್ಣ್ವಂಶಾಧಿಕ್ಯತೋ ವಿಷ್ಣುಃ ಇತ್ಯುಕ್ತೋ ರಾಘವೋ ಬುಧೈಃ ।
ಯಾದೃಶಂ ತಂ ಭಜೇಲ್ಲೋಕಃ ತಾದೃಕ್ ಸ್ಯಾದ್ರಾಘವೋಪ್ಯತಃ ॥೧೧॥
ತಪಸ್ವಿನಾಂ ನ್ಯಾಸಿನಾಂ ಚ ಭಾತಿ ಮೂರ್ತಿತ್ರಯಾತ್ ಪರಃ ।
ತತ್ತತ್ಪ್ರಾಜ್ಞೇನತಪಸಾ ರಾಮೋ ನಾನೇವ ಭಾಸತೇ ॥೧೨॥
ಪೂರ್ವಂ ಬ್ರಹ್ಮಾ ತಪಸ್ತೇಪೇ ಕಲ್ಪಕೋಟಿಶತತ್ರಯಮ್ ।
ಮುನೀನ್ದ್ರೈರ್ಬಹುಭಿಃ ಸಾರ್ಧಂ ದುರ್ಧರ್ಷಾರ್ನಶನವ್ರತಮ್ ।

ಪೂಜ್ಯಳಾದ ಸೀತೆಯೆಂದು ತಿಳಿಯಬೇಕು. ಇವಳು ಪ್ರಣವಸ್ವರೂಪಳಾದ ಪ್ರಕೃತಿಯೆಂದು ಕರೆಯಲ್ಪಡುವಳೆಂಬುದಾಗಿ ಬ್ರಹ್ಮವಾದಿಗಳು ಹೇಳುವರು ॥೬-೭॥

ಪ್ರಕೃತಿಭೂತಳಾದ ಅವಳ ರಜೋಗುಣದಿಂದ ಬ್ರಹ್ಮನೂ, ಸತ್ವಗುಣದಿಂದ ವಿಷ್ಣುವೂ, ತಮೋಗುಣದಿಂದ ಶಿವನೂ ಕಲ್ಪಿಸಲ್ಪಟ್ಟಿರುವರು. ಈ ಪ್ರಕೃತಿಗೆ ಪ್ರಭುವಾಗಿರುವ ಶ್ರೀರಾಮನು, ಇವರೆಲ್ಲರಿಗೂ ಅಧಿಷ್ಠಾತೃವಾಗಿರುವನು ॥೪॥

ಹೀಗೆ ಆ ಪರಮಾತ್ಮನೇ, ವಿಷ್ಣುವಿನ ತೇಜಸ್ಸನ್ನು ಪ್ರಧಾನವನ್ನಾಗಿಯೂ ಬ್ರಹ್ಮರುದ್ರರ ತೇಜಸ್ಸುಗಳನ್ನು ಉಪಸರ್ಜನ (ಮುಖ್ಯವಲ್ಲದ—ಅಂಗಭೂತ) ಗಳನ್ನಾಗಿಯೂ ಮಾಡಿಕೊಂಡು, ಭೂಮಿಯಲ್ಲಿ ಶ್ರೀರಾಮರೂಪನಾಗಿ ಅವತರಿಸಿದನು ॥೯॥

ನಾರಾಯಣ ಅಂತರ್ಯಾಮಿ ಈಶ ವಾಸುದೇವ ಇತ್ಯಾದಿ ಶಬ್ದಗಳಿಂದ ಬೋಧಿತವಾಗಿರುವ ಯಾವ ವಸ್ತುವಿರುವುದೋ, ಅದೇ ತನ್ನ ಮಾಯೆಯಿಂದ ಶ್ರೀರಾಮರೂಪವಾಗಿ ಜನಿಸಿತು ॥೧೦॥

ಇಂತಹ ಶ್ರೀರಾಮನು, ವಿಷ್ಣುವಿನ ತೇಜಸ್ಸು ಅಧಿಕವಾಗಿದ್ದಕಾರಣ ವಿದ್ವಾಂಸರಿಂದೆಲ್ಲ ವಿಷ್ಣುವೆಂದು ಹೇಳಲ್ಪಡುತ್ತಿರುವನು. ಮುಖ್ಯವಾಗಿ, ಜನರು ಇವನನ್ನು ಎಂಥವನನ್ನಾಗಿ ಭಜಿಸುವರೋ, ಅವರ ಪಾಲಿಗೆ ಇವನು ಅಂಥವನೇ ಆಗುವನು. ಅದುಕಾರಣ, ಈ ಶ್ರೀರಾಮನು ತಪಸ್ವಿಗಳಿಗೂ ಸನ್ಯಾಸಿಗಳಿಗೂ ಮೂರ್ತಿತ್ರಯಾತೀತನಾಗಿ ಭಾಸಿಸುವನು. ಅವರವರ ಪೂರ್ವ ಜನ್ಮತಪಸ್ಸಿಗನುಗುಣವಾಗಿ, ಶ್ರೀರಾಮನು ನಾನಾರೂಪನಾಗಿರುವಂತೆ ತೋರುವನು ॥೧೧-೧೨॥

ಪೂರ್ವದಲ್ಲಿ ಬ್ರಹ್ಮನು, ಆ ಶ್ರೀರಾಮನ ಯಾಥಾರ್ಥ್ಯವನ್ನು ತಿಳಿಯಬೇಕೆಂದಪೇಕ್ಷಿಸಿದವನಾಗಿ, ಅನೇಕರಾದ ಮುನಿಶ್ರೇಷ್ಠರೊಡನೆ, ಅತಿದುಷ್ಕರವಾದ ಉಪವಾಸವನ್ನು ಸ್ವೀಕರಿಸಿ,

ಪುರಸ್ಕೃತ್ಯಾಗ್ನಿಮಧ್ಯಸ್ಥಃ ತದ್ಯಾಥಾರ್ಥ್ಯಬುಭುತ್ಸಯಾ ॥೧೩॥
ತಪಃ ಕುರ್ವನ್ತಿ ತಂ ಕೇಚಿತ್ ಅಪರೋಕ್ಷಂ ನಿರೀಕ್ಷಿತುಮ್ ।
ಪಞ್ಚಾಗ್ನಿಮಧ್ಯೇ ಗ್ರೀಷ್ಮೇ ತು ವರ್ಷಾಸು ಭುವಿ ಶೇರತೇ ॥೧೪॥
ಶಿಶಿರೇಷು ಜಲೇಷ್ವೇವ ತಪಃ ಕೇಚನ ತೇಪಿರೇ ॥೧೫॥
ಜಪನ್ತೋ ರಾಮರಾಮೇತಿ ಸುಖಾಮೃತನಿಧೌ ಮನಃ ।
ಪ್ರವಿಲಾಪ್ಯಾಮೃತೀಭೂಯ ಸುಖಂ ತಿಷ್ಠನ್ತಿ ಕೇಚನ ॥೧೬॥
ಗುಣಾತೀತಂ ಪರಾತ್ಮಾನಂ ಬ್ರಹ್ಮೇಶಾನಾದಿಕಾರಣಮ್ ।
ಕೇಚಿತ್ ತಂ ಬ್ರಹ್ಮರೂಪೇಣ ಕೇಚಿತ್ ತಂ ವಿಷ್ಣುರೂಪಿಣಮ್ ॥೧೭॥
ರುದ್ರರೂಪೇಣ ತಂ ಕೇಚಿತ್ ಕೇಚನ್ಮೂರ್ತಿತ್ರಯಾತ್ಮಕಮ್ ।
ಕೇಚಿನ್ಮೂರ್ತಿತ್ರಯಾತೀತಂ ಕೇಚಿದ್ಧರಿಹರಾತ್ಮಕಮ್ ॥೧೮॥
ಅಜಾನನ್ತಃ ಪರಂ ತತ್ತ್ವಂ ಏವಂ ತಂ ಮನ್ವತೇ ಪ್ರಿಯೇ ॥೧೯॥
ಜಿಜ್ಞಾಸವಃ ಪರಂ ತತ್ತ್ವಂ ಕೇಚಿತ್ ತೇಪುಶ್ಚ ಮುಕ್ತಯೇ ।
ಕೇಚಿತ್ ತು ಧರ್ಮಕಾಮಾರ್ಥಾತ್ ಕೇಚಿತ್ ಪಾಪಾಪನುತ್ತಯೇ ॥೨೦॥

ಪಂಚಾಗ್ನಿಮಧ್ಯದಲ್ಲಿ ನಿಂತುಕೊಂಡು, ಮುನ್ನೂರುಕೋಟಿ ಕಲ್ಪಕಾಲ ತಪಸ್ಸುಮಾಡಿದನು ॥೧೩॥

ಆಗ ಆ ರಾಮನನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು, ಕೆಲವರು ಗ್ರೀಷ್ಮಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿ ನಿಂತುಕೊಂಡೂ, ಕೆಲವರು ವರ್ಷಾಕಾಲದಲ್ಲಿ ನೆಲದಮೇಲೆ ಮಲಗಿಕೊಂಡೂ, ಕೆಲವರು ಶಿಶಿರಋತುವಿನಲ್ಲಿ ನೀರಿನೊಳಗೆ ಮುಣುಗಿಕೊಂಡೂ, ತಪಸ್ಸುಮಾಡಿದರು ॥೧೪—೧೫॥

ಮತ್ತೆ ಕೆಲವರು, ರಾಮರಾಮ ಎಂದು ಜಪಮಾಡುತ, ಆನಂದಾಮೃತ ಸಮುದ್ರದೊಳಗೆ ತಮ್ಮ ಮನಸ್ಸು ಲೀನವಾಗುವಂತೆ ಮಾಡಿಕೊಂಡು, ತಾವು ಜೀವನ್ಮುಕ್ತಸ್ಥಿತಿಯನ್ನು ಪಡೆದು, ಸುಖವಾಗಿರುತ್ತಿದ್ದರು ॥೧೬॥

ಎಲೌ ಪ್ರಿಯಳೆ! ಪರಮಾರ್ಥವನ್ನು ತಿಳಿಯದೆ, ನಿರ್ಗುಣನಾಗಿಯೂ ಬ್ರಹ್ಮವಿಷ್ಣು ಮಹೇಶ್ವರಾದಿಗಳಿಗೆಲ್ಲ ಮುಖ್ಯಕಾರಣಭೂತನಾಗಿಯೂ ಇರುವ ಆ ಪರಮಾತ್ಮರೂಪನಾದ ಶ್ರೀ ರಾಮನನ್ನು, ಆಗ ಕೆಲವರು ಬ್ರಹ್ಮರೂಪನನ್ನಾಗಿಯೂ, ಕೆಲವರು ವಿಷ್ಣುರೂಪನನ್ನಾಗಿಯೂ, ಕೆಲವರು ರುದ್ರರೂಪನನ್ನಾಗಿಯೂ, ಕೆಲವರು ತ್ರಿಮೂರ್ತಿಸ್ವರೂಪನನ್ನಾಗಿಯೂ, ಕೆಲವರು ಮೂರ್ತಿತ್ರಯಾತೀತನನ್ನಾಗಿಯೂ, ಕೆಲವರು ಹರಿಹರರೂಪನನ್ನಾಗಿಯೂ, ಹೀಗೆ ತಂತಮಗೆ ತೋರಿದಂತೆ ಧ್ಯಾನಮಾಡುತ್ತಿದ್ದರು ॥೧೭—೧೯॥

ಕೆಲವರು ಪರಮತತ್ವವನ್ನು ತಿಳಿಯಬೇಕೆಂಬ ಇಚ್ಛೆಯಿಂದಲೂ, ಕೆಲವರು ಮುಕ್ತಿಗೋಸ್ಕರವಾಗಿಯೂ, ಇನ್ನು ಕೆಲವರು ಧರ್ಮ ಕಾಮ ಅರ್ಥಗಳನ್ನು ಹೊಂದಬೇಕೆಂದೂ, ತಪಸ್ಸು ಮಾಡುತಿದ್ದರು ॥೨೦॥

ಮನುಷ್ಯಮಿವ ತಂ ದೃಷ್ಟ್ವಾ ವ್ಯವಹರ್ತುಂ ಚ ಬನ್ಧುವತ್ ।
ಅಧ್ಯಾಪನಾರ್ಥಂ ವಿದ್ಯಾನಾಂ ಯೋದ್ಧುಮಪ್ಯಪರೇ ತಪಃ ।
ಚಕ್ರಿರೇ ವೈರಿಣೋ ಭೂತ್ವಾ ಕೇಚಿದ್ಗೋಷ್ಠೀಷು ತೇಪಿರೇ ॥೧೧॥
ಏವಂ ತಪಸ್ಸು ಸರ್ವೇಷು ತತ್ತದ್ಧ್ಯಾನಾನುಸಾರತಃ ।
ತತ್ತದ್ರೂಪೇಣ ಭಾತ್ಯೇಷಃ ಸರ್ವರೂಪಧರಃ ಪರಃ ॥೧೨॥
ತಪಸ್ತಪಸ್ವಿನಾಂ ತತ್ತತ್ ಕೃಪಯಾನ್ವಗ್ರಹೀದಿಹ ।
ಮಾನುಷೀಭೂಯ ಸರ್ವೇಷಾಂ ಭಕ್ತಾನಾಂ ಭಕ್ತವತ್ಸಲಃ ॥೧೩॥
ತತ್ತತ್ಕಾರ್ಯಪ್ರಸಿದ್ಧ್ಯರ್ಥಂ ರಾಮೋ ಭೂತ್ವಾವತೀರ್ಣವಾ ।
ಉಗ್ರೇಣ ತಪಸಾ ತೇಷಾಂ ಸೋಭೂದೇವಂ ದಯಾನಿಧಿಃ ॥೧೪॥

ಶ್ರೀಪಾರ್ವತ್ಯುವಾಚ.

ದೇವೇಶ ಬ್ರಹ್ಮರುದ್ರಾದಿತೇಜಸ್ಯಕ್ತ್ವಾ ಪರಾನರಃ ।
ವಿಷ್ಣುತೇಜಃಪ್ರಧಾನಸ್ಸನ್ ಕಿಮರ್ಥಮಭವತ್ ಪ್ರಭುಃ ॥೧೫॥

ಶ್ರೀಶಿವಉವಾಚ.

ವಿಷ್ಣೋಃ ಸರ್ವಪ್ರಧಾನತ್ವಾತ್ ಕರ್ತೃತ್ವಾಜ್ಜಗತಃ ಸ್ಥಿತೇಃ ।

ಕೆಲವರು ಮನುಷ್ಯನಂತೆ ಅವನನ್ನು ಪ್ರತ್ಯಕ್ಷವಾಗಿ ನೋಡಬೇಕೆಂದೂ, ಕೆಲವರು ಬಂಧುಗಳಂತೆ ಅವನೊಡನೆ ವ್ಯವಹರಿಸಬೇಕೆಂದೂ, ಕೆಲವರು ವಿದ್ಯೆಕಲಿಯಬೇಕೆಂದೂ, ಕೆಲವರು ಅವನಿಗೆ ಶತ್ರುಗಳಾಗಿ ಅವನೊಡನೆ ಯುದ್ಧಮಾಡಬೇಕೆಂದೂ. ಕೆಲವರು ಅವನೊಡನೆ ವಿನೋದ ಗೋಷ್ಠಿಯಲ್ಲಿ ಕುಳಿತು ಸರಸಸಲ್ಲಾಪಮಾಡುತಿರಬೇಕೆಂದೂ, ತಂತಮ್ಮ ಇಷ್ಟಾನುಸಾರವಾಗಿ ಅಭಸಂಧಿಮಾಡಿಕೊಂಡು ತಪಸ್ಸನ್ನು ಆಚರಿಸುತಿದ್ದರು ॥೨೧॥

ಹೀಗೆ ಅವರೆಲ್ಲರೂ ತಪಸ್ಸುಮಾಡುತಿರಲಾಗಿ, ಸರ್ವರೂಪಧರನಾದ ಈ ಪರಮಾತ್ಮನು, ಅವರವರ ಧ್ಯಾನಕ್ಕನುಸಾರವಾಗಿ ಆಯಾ ರೂಪದಿಂದ ಅವರವರೆದುರಿಗೆ ಪ್ರತ್ಯಕ್ಷವಾಗಿ ಪ್ರಕಾಶಿಸುತಿದ್ದನು ॥೨೨॥

ಭಕ್ತವತ್ಸಲನಾದ ಆ ಪರಮಾತ್ಮನು, ಈ ಲೋಕದಲ್ಲಿ ಮನುಷ್ಯನಾಗಿ ಅವತರಿಸಿ, ತನ್ನ ಭಕ್ತರಾದ ಸಮಸ್ತ ತಪಸ್ವಿಗಳ ಆಯಾ ತಪಸ್ಸನ್ನೆಲ್ಲಾ ಅನುಗ್ರಹಿಸಿದನು ॥೨೩॥

ಎಲೌ ಪಾರ್ವತಿ! ಆ ಪರಮಾತ್ಮನು, ಅವರವರ ಕಾರ್ಯಗಳು ಸಿದ್ಧಿಸುವುದಕ್ಕೋಸ್ಕರವಾಗಿ, ಶ್ರೀರಾಮರೂಪದಿಂದ ಅವತರಿಸಿದನು. ದಯಾನಿಧಿಯಾದ ಆ ಪರಮಾತ್ಮನು, ಅವರುಗಳ ಉಗ್ರವಾದ ತಪಸ್ಸಿನಿಂದ ಹೀಗೆ ಅನುಗ್ರಹವಿಶಿಷ್ಟನಾದನು ॥೨೪॥

ಶ್ರೀ ಪಾರ್ವತಿಯು ಪ್ರಶ್ನೆಮಾಡುವಳು:—

ಹೇದೇವದೇವೇಶ್ವರ! ಆ ಪರಾತ್ಪರನಾದ ಪ್ರಭುವು, ಬ್ರಹ್ಮ ರುದ್ರ ಮುಂತಾದವರ ತೇಜಸ್ಸುಗಳನ್ನೆಲ್ಲ ಬಿಟ್ಟುಬಿಟ್ಟು, ವಿಷ್ಣುವಿನ ತೇಜಸ್ಸನ್ನೇ ಮುಖ್ಯನಾಗಿಟ್ಟುಕೊಂಡು ಇಲ್ಲಿ ಏತಕ್ಕಾಗಿ ಅವತರಿಸಿದನು? ॥೨೫॥

ಶ್ರೀ ಪರಮೇಶ್ವರನು ಉತ್ತರಹೇಳುವನು:—

ಎಲೌ ಪಾರ್ವತಿ! ವಿಷ್ಣುವು ಸಕಲದೇವತೆಗಳಲ್ಲಿಯೂ ಮುಖ್ಯನಾಗಿರುವುದರಿಂದಲೂ,

ಬ್ರಹ್ಮೇಶಾಭ್ಯಾಂ ಹರಿಃ ಶ್ರೇಷ್ಠಃ ಇತಿ ನಿಶ್ಚಿತ್ಯ ಚಾದ್ರಿಜೇ ॥೬೬॥
ಸನಕಾದಿಕೃತಂ ಶಾಪಂ ವಿಷ್ಣುನಾ ದ್ವಾರಪಾಲಯೋಃ ।
ದತ್ತಂ ವರಂ ಚ ಸಂಸ್ಮೃತ್ಯ ಜಜ್ಞೇ ವಿಷ್ಣುಃ ಸನಾತನಃ ॥೬೭॥

ಇತಿ ಶ್ರೀ ಬಾಲಕಾಣ್ಡೇ ಬ್ರಹ್ಮಾದಿ ತಪಶ್ಚರಣವರ್ಣನಂ ನಾಮ

ನವಮಃ ಸರ್ಗಃ.



ಈ ವಿಷ್ಣುವು ಪ್ರಪಂಚಸ್ಥಿತಿಗೆ ಕರ್ತೃವಾಗಿರುವುದರಿಂದ—ಇವನು ಬ್ರಹ್ಮ ರುದ್ರರಿಗಿಂತ ಶ್ರೇಷ್ಠ ನೆಂದು ನಿಶ್ಚಯಿಸಿಯೂ, ದ್ವಾರಪಾಲಕರಾದ ಜಯವಿಜಯರಿಗೆ ಸನಕಾದಿಮುನಿಗಳು ಕೊಟ್ಟ ಶಾಪವನ್ನೂ ವಿಷ್ಣು ಕೊಟ್ಟ ವರವನ್ನೂ ಸ್ಮರಿಸಿಕೊಂಡೂ, ಆ ಪರಮಾತ್ಮನು ವಿಷ್ಣು ತೇಜಃಪ್ರಧಾನ ನಾಗಿ ಅವತರಿಸಿದನು ॥೬೬—೬೭॥

ಇದು ಬಾಲಕಾಂಡದಲ್ಲಿ ಬ್ರಹ್ಮಾದಿ ತಪಶ್ಚರಣವರ್ಣನೆಯೆಂಬ

ಒಂಭತ್ತನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ದಶಮಃ ಸರ್ಗಃ.

ಶ್ರೀ ಪಾರ್ವತ್ಯುವಾಚ.

ಕಿಮರ್ಥಂ ದ್ವಾರಪಾಲಾಭ್ಯಾಂ ಶಾಪೋ ದತ್ತೋ ಮುನೀಶ್ವರೈಃ ।
ವಿಷ್ಣುನಾ ಚ ವರೋ ದತ್ತಃ ತನ್ಮೇ ಬ್ರೂಹಿ ಸುರೇಶ್ವರ ॥೧॥

ಶ್ರೀ ಶಿವಉವಾಚ.

ಕದಾಜಿದ್ದೇವಿ ಗೋವಿನ್ದೋ ಮಾಮಾಹೂಯೇದಮಬ್ರವೀತ್ ।
ಯುದ್ಧಶ್ರದ್ಧಾಸ್ತಿ ಮೇ ಶರ್ವೋ ಯುದ್ಧಂ ಕುರು ಮಯಾ ಸಹ ॥೨॥
ಏವಮುಕ್ತೋ ವಿಷ್ಣುನಾಹಂ ಪ್ರತ್ಯುವಾಚ ತದಾ ಪ್ರಭುಮ್ ।
ನಾಹಂ ಶಕ್ತಸ್ತ್ವಯಾ ಸಾಕಂ ಯುದ್ಧಂ ಕರ್ತುಮರಿನ್ದಮ ॥೩॥
ತತೋ ಬುದ್ಧಿಸ್ತಸ್ಯ ಜಾತಾ ಕ್ರೀಡಿತುಂ ರಾಘವಾತ್ಮನಾ ।
ಸ್ವತನ್ತ್ರಃ ಪ್ರೇರಯಾಮಾಸ ಸನಕಾದಿಮುನೀಶ್ವರಾ ॥೪॥
ತೇ ತು ಸಂಚೋದಿತಾಸ್ತೇನ ವೈಕುಣ್ಠನಗರಂ ಯಯುಃ ।
ವಿರಕ್ತಾ ವಾತರಶನಾಃ ಪಞ್ಚವರ್ಷವಯೋನ್ವಿತಾಃ ॥೫॥

ಬಾಲಕಾಂಡದಲ್ಲಿ ಹತ್ತನೆಯ ಸರ್ಗವು.

ಶ್ರೀಪಾರ್ವತೀದೇವಿಯು ಪರಮೇಶ್ವರನನ್ನು ಕುರಿತು ಪುನಃ ಪ್ರಶ್ನೆಮಾಡುವಳು:—

ಸಕಲದೇವತೆಗಳಿಗೂ ಸ್ವಾಮಿಯಾದ ಪರಮೇಶ್ವರನೆ! ದ್ವಾರಪಾಲಕರಿಗೆ, ಸನಕಾದಿಮುನೀಶ್ವರರಿಂದ ಏತಕ್ಕೆ ಶಾಪಕೊಡಲ್ಪಟ್ಟಿತು? ಮತ್ತು, ವಿಷ್ಣುವಿನಿಂದ ವರವೇತಕ್ಕೆ ಕೊಡಲ್ಪಟ್ಟಿತು? ಅದನ್ನು ತಾವು ನನಗೋಸ್ಕರ ಅಪ್ಪಣೆಕೊಡಿಸಬೇಕು ॥೧॥

ಇದಕ್ಕೆ ಪರಮೇಶ್ವರನು ಉತ್ತರ ಹೇಳುವನು:—

ಎಲೌ ದೇವಿ! ಒಂದಾನೊಂದು ಸಮಯದಲ್ಲಿ, ವಿಷ್ಣುವು ನನ್ನನ್ನು ಕರೆದು 'ಹೇ ಶಂಭೋ! ನನಗೆ ಯುದ್ಧದಲ್ಲಿ ಕುತೂಹಲವುಂಟಾಗಿರುವುದು. ಅದುಕಾರಣ, ನೀನು ನನ್ನೊಡನೆ ಯುದ್ಧ ಮಾಡು' ಎಂದು ಹೇಳಿದನು ॥೨॥

ಆಗ ಹೀಗೆ ವಿಷ್ಣುವಿನಿಂದ ಹೇಳಲ್ಪಟ್ಟ ನಾನು 'ಎಲೈ ಸರ್ವಶತ್ರುವಿನಾಶಕನೆ! ನಾನು ನಿನ್ನೊಡನೆ ಯುದ್ಧಮಾಡಲು ಸಮರ್ಥನಲ್ಲ' ಎಂದು, ಆ ಸ್ವಾಮಿಯನ್ನು ಕುರಿತು ಪ್ರತ್ಯುತ್ತರ ಕೊಟ್ಟೆನು ॥೩॥

ಬಳಿಕ, ಆ ಮಹಾವಿಷ್ಣುವಿಗೆ ಶ್ರೀರಾಮರೂಪದಿಂದ ಅವತರಿಸಲು ಬುದ್ಧಿಯುಂಟಾಯ್ತು. ಆಗ ಸರ್ವಸ್ವತಂತ್ರನಾದ ಆ ಪರಮಾತ್ಮನು, ಸನಕಾದಿಮುನೀಶ್ವರರಿಗೆ ಪ್ರೇರಣೆಮಾಡಿದನು ॥೪॥

ಆಗ ವಿರಕ್ತರಾಗಿಯೂ ದಿಗಂಬರರಾಗಿಯೂ ಅಯ್ದುವರ್ಷ ವಯಸ್ಸುಳ್ಳವರಾಗಿಯೂ ಮಹಾತೇಜಸ್ವಿಗಳಾಗಿಯೂ ಬ್ರಹ್ಮನಿಗೆ ಮಾನಸಪುತ್ರರಾಗಿಯೂ ಇರುವ ಆ ಸನಕ ಸನಂದನ

ಸನತ್ಸುನಸ್ಪ್ರಸನಕಸನತ್ಸುತ್ರಾಮಹೌಜಸಃ ।
ಬ್ರಹ್ಮವಾನಸಪುತ್ರಾಸ್ತೇ ವೇದವೇದಾಙ್ಗಪಾರಗಾಃ ॥೬॥
ದುರ್ಗಮಂ ದುರ್ವಿಭಾವ್ಯಂ ಚ ಸುಕೃತೇತರಕರ್ಮಭಿಃ ।
ಸರ್ವತ್ರ ಕಾಮುದೀರಮ್ಯಂ ಮಣಿಮೌಕ್ತಿಕಶೋಭಿತಮ್ ॥೭॥
ಮಣಿಸಞ್ಚಯಸಮ್ಪೂರ್ಣಂ ಸ್ವರ್ಣಪ್ರಾಕಾರವೇಷ್ಟಿತಮ್ ।
ಸಮುದ್ರಮಿವ ಸಧ್ವಾನಂ ಸರ್ವರತ್ನಾಕರಂ ಪುನಃ ।
ಸಾರೂಪ್ಯಜನಸಮ್ಬಾಧಂ ಸ್ತ್ರೀಜನೈಃ ಪರಿಸೇವಿತಮ್ ॥೮॥
ನಿತ್ಯಾನನ್ದಮಯಾಯತ್ರ ಕೃತಕೃತ್ಯಾಶ್ಚ ಪಾರ್ಷದಾಃ ।
ಚತುರ್ವ್ಯೂಹಸಮಾಯುಕ್ತಂ ವ್ಯೂಹನಾಥೈರ್ನಮಸ್ಕೃತಮ್ ॥೯॥
ಗತ್ವಾ ತು ತೇ ಮುನಿಶ್ರೇಷ್ಠಾಃ ವೈಕುಣ್ಠಂ ವಿಷ್ಣುಮನ್ದಿರಮ್ ।
ಪಶ್ಯಾಮ ಭಗವನ್ಮೂರ್ತಿಂ ಯೋಗಿನಾಂ ಮಾನಸಾಲಯಾಮ್ ॥೧೦॥
ಇನ್ದೀವರದಳಶ್ಯಾಮಾಂ ಶಙ್ಖಚಕ್ರಗದಾಸ್ವಿತಾಮ್ ।
ಇತಿ ಬ್ರುವನ್ತಸ್ತೇ ಸರ್ವೇ ಕಕ್ಷ್ಯಾಸ್ಥಾಃ ಸಮುತೀತ್ಯ ಚ ॥೧೧॥
ಭಗವದ್ದರ್ಶನದ್ವಾರಿ ದದೃಶುಃ ಪರ್ವತೋಪಮೌ ।

ಸನತ್ಸುಜಾತ ಸನತ್ಕುಮಾರರುಗಳು, ಹೀಗೆ ಪರಮಾತ್ಮನಿಂದ ಪ್ರೇರಿತರಾಗಿ, ಶ್ರೀ ವೈಕುಂಠನಗರಕ್ಕೆ ಹೋದರು ॥೫—೬॥

ಆ ವೈಕುಂಠವು, ಪಾಪಿಷ್ಠರಿಂದ ಹೊಂದಲ್ಪಡುವುದಕ್ಕೂ—ಕೊನೆಗೆ ಮನಸ್ಸಿನಲ್ಲಿ ಯೋಚಿಸಲ್ಪಡುವುದಕ್ಕೂ ಅಸಾಧ್ಯವಾದುದು. ಅಲ್ಲಿ ಸರ್ವತ್ರ ಬೆಳದಿಂಗಳು ಬಿದ್ದು, ನೋಡುವುದಕ್ಕೆ ಅತಿರಮ್ಯವಾಗಿದ್ದಿತು. ರತ್ನಗಳಿಂದಲೂ ಮುತ್ತುಗಳಿಂದಲೂ ಆ ವೈಕುಂಠನಗರವು ಅಲಂಕರಿಸಲ್ಪಟ್ಟಿದ್ದಿತು ॥೭॥

ಆ ವೈಕುಂಠವು, ನಾನಾವಿಧ ರತ್ನರಾಶಿಗಳಿಂದ ಪರಿಪೂರ್ಣವಾಗಿಯೂ, ಸುವರ್ಣಮಯವಾದ ಪ್ರಾಕಾರದಿಂದ ಪರಿವೇಷ್ಟಿತವಾಗಿಯೂ ಇರುವುದು. ಅದು, ಸಮುದ್ರದಂತೆ ಗಂಭೀರ ಧ್ವನಿಯುಕ್ತವಾಗಿಯೂ ಸರ್ವರತ್ನಾಕರವಾಗಿಯೂ ಇರುವುದು. ಸಾರೂಪ್ಯಸಿದ್ಧಿಪಡೆದಿರುವ ಜನಗಳು ಅಲ್ಲಿ ತುಂಬಿಕೊಂಡಿರುವರು. ಅನೇಕರಾದ ಲೋಕಪಾಲಸ್ತ್ರೀಯರು ಅದನ್ನು ಸೇವಿಸುತಿದ್ದರು ॥೮॥

ಆ ವೈಕುಂಠದಲ್ಲಿರುವ ಸಭಾಸದರೂ ಕೂಡ, ನಿತ್ಯಾನಂದಮಯರಾಗಿಯೂ ಕೃತಕೃತ್ಯರಾಗಿಯೂ ಇರುವರು. ಅಲ್ಲಿ ನಾಲ್ಕು ವಿಧವಾದ ವ್ಯೂಹಮೂರ್ತಿಗಳೂ ಇರುವುವು. ಸೇನಾನಾಯಕರು ಅಲ್ಲಿ ನಮಸ್ಕರಿಸುತಿದ್ದರು ॥೯॥

ಈವಿಧವಾದ ವೈಕುಂಠವೆಂಬ ವಿಷ್ಣುಮಂದಿರವನ್ನು ಹೊಂದಿ, ಆ ಸಮಸ್ತಮುನಿಗಳೂ 'ಯೋಗಿಗಳ ಹೃದಯದಲ್ಲಿ ವಾಸಮಾಡತಕ್ಕ ಇಂದೀವರದಳಶ್ಯಾಮವಾದ ಶಂಖಚಕ್ರಗದಾಧರವಾದ ಆ ಭಗವನ್ಮೂರ್ತಿಯನ್ನು ನೋಡೋಣ' ಎಂದು ಮಾತನಾಡಿಕೊಳ್ಳುತ, ಕೆಲವು ಕಕ್ಷ್ಯೆಗಳನ್ನು ದಾಟಿದವರಾಗಿ, ಭಗವಂತನನ್ನು ನೋಡಬೇಕಾದ ಮಂಟಪದ ಬಾಗಿಲಿನಲ್ಲಿ, ಪರ್ವತಾಕಾರರಾಗಿಯೂ ಮಹಾತ್ಮರಾಗಿಯೂ ಅತಿಕ್ರೂರಪರಾಕ್ರಮಶಾಲಿಗಳಾಗಿಯೂ ಎಡಬಲದ

ಗದಾಧರೌ ಮಹಾತ್ಮಾನೌ ಚಣ್ಡತೀವ್ರಪರಾಕ್ರಮೌ ॥೧೦॥
ಸವ್ಯಾಪಸವ್ಯಬಾಹ್ವಂಸೌ ದೀರ್ಘಬಾಹೂ ಮಹಾಬಲೌ ।
ಕ್ರೋಧಸಂರಕ್ತನಯನೌ ನಿಶ್ವಾಸೋನ್ನತನಾಸಿಕೌ ॥೧೩॥
ಹಠಾತ್ ಸಮಾಗತಾ೯ ದೃಷ್ಟ್ವಾ ಮುನೀ೯ ಸ್ವಾಮ್ಯಾಜ್ಞಯಾ ವಿನಾ ।
ದ್ವಾರಸ್ಥಾವಪಿ ತೌ ವಿಪ್ರೌ೯ ಅನ್ತರ್ನಿಶ್ಚಕ್ರತುರಾಗತಾ೯ ॥೧೪॥
ದೃಷ್ಟ್ವಾ ಚಕ್ರತುರನ್ಯೋನ್ಯಂ ಸ್ವಮ್ಭ್ರಾಪಾಂ ಹರಿಮೋಹಿತೌ ॥೧೫॥

ಜಯವಿಜಯವೂಚತುಃ.

ಏತೇ ಕ್ವನು ಸಮಾಯಾತಾಃ ಬಾಲಕಾಃ ಪರಮೌಜಸಃ ।
ಬಾಲಕಾಅಪಿ ದೃಶ್ಯನ್ತೇ ಏತೇ ವೃದ್ಧತಮಾಇವ ॥೧೬॥
ತಪೋಮಯಾಸ್ತಪೋರೂಪಾಃ ತಪಸಾ ಸೂರ್ಯವರ್ಚಸಃ ।
ತಥಾಪಿ ನೌ ಸ್ವಾಮಿಕಾರ್ಯೇ ಅಪ್ರಮತ್ತೌ ಭವಾವ ಹಿ ॥೧೭॥
ಇತ್ಯನ್ಯೋನ್ಯಂ ಸಮಾಭಾಷ್ಯ ಚಕ್ರತುರ್ದ್ವಾರಣಂ ॥೧೮॥
ನಿವಾರಿತಾಸ್ತತೋ ದ್ವಾರಿ ಪ್ರಾಕೃತಾವಮಾನವಾಯಥಾ ।
ಚುಕ್ಷುಭುರ್ಮುನಯಃ ಸರ್ವೇ ಕ್ರೋಧಸಂರಕ್ತಲೋಚನಾಃ ॥೧೯॥
ಕೋ ವಾ ವಾರಯಿತಾಸ್ಮಾಕಂ ವೈಕುಣ್ಠೇ ವಿಷ್ಣುಮನ್ದಿರೇ ।

ಹೆಗಲುಗಳಮೇಲೆ ಗದೆಗಳನ್ನು ಇಟ್ಟುಕೊಂಡಿರತಕ್ಕವರಾಗಿಯೂ ದೀರ್ಘಭುಜರಾಗಿಯೂ ಮಹಾಬಲಶಾಲಿಗಳಾಗಿಯೂ ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿಯೂ ಉಸಿರುಬಿಡುವಾಗ ಅರಳುತಿರುವ ನಾಸಿಕೆಯುಳ್ಳವರಾಗಿಯೂ ಇದ್ದ ಇಬ್ಬರುದ್ವಾರಪಾಲಕರನ್ನು ಕಂಡರು॥೧೦-೧೩॥

ಆ ದ್ವಾರಪಾಲಕರಾದರೋ, ಸ್ವಾಮಿಯು ಅಪ್ಪಣೆಯಿಲ್ಲದೆ ಒಳಕ್ಕೆ ಹಠಾತ್ತಾಗಿ ನಿಶ್ಶಂಕವಾಗಿ ಬಂದ ಆ ಮುನಿಗಳನ್ನು ಕಂಡು, ಹರಿಮಾಯಾಮೋಹಿತರಾಗಿ, ಒಬ್ಬರನ್ನೊಬ್ಬರು ನೋಡುತ, ಹೀಗೆ ಮಾತನಾಡಿಕೊಂಡರು॥೧೪—೧೫॥

ಆ ಜಯವಿಜಯರು ಹೇಳಿದುದೇನೆಂದರೆ:—

ಮಹಾ ತೇಜಸ್ವಿಗಳಾದ ಈ ಬಾಲಕರು ಎಲ್ಲಿಂದ ಬಂದರು? ಇವರು ವಯಸ್ಸಿನಲ್ಲಿ ಬಾಲಕರಾಗಿದ್ದರೂ ವೃದ್ಧತಮರಂತೆ ಕಾಣಿಸುತಿರುವರು॥೧೬॥

ಇವರು, ತಪೋಮಯರಾಗಿಯೂ ತಪೋರೂಪರಾಗಿಯೂ ತಪಸ್ಸಿನಿಂದ ಸೂರ್ಯನಿಗೆ ಸಮವಾದ ಕಾಂತಿಯುಳ್ಳವರಾಗಿಯೂ ಇರುವರು. ಆದರೂ, ನಾವು ನಮ್ಮ ಸ್ವಾಮಿಕಾರ್ಯದಲ್ಲಿ ಜಾಗರೂಕರಾಗಿಯೇ ಇರಬೇಕು॥೧೭॥

ಹೀಗೆ ಅವರಿಬ್ಬರೂ ಪರಸ್ಪರವಾಗಿ ಮಾತನಾಡಿಕೊಂಡು, ಕೈಲಿದ್ದ ಕೋಲಿನಿಂದ ಆ ಮುನಿಗಳನ್ನು ತಡೆದುಬಿಟ್ಟರು॥೧೮॥

ಬಳಿಕ, ಪ್ರಾಕೃತರಾದ ಮನುಷ್ಯರಂತೆ ಬಾಗಿಲಿನಲ್ಲಿ ತಡೆಯಲ್ಪಟ್ಟ ಆ ಸಮಸ್ತ ಮುನಿಗಳೂ, ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಮಹಾಸಂರಂಭ ಮಾಡಿದರು॥೧೯॥

'ಮಹಾವಿಷ್ಣುವಿನ ನಿವಾಸಸಾನವಾದ ಈವೈಕುಂಠದಲ್ಲಿ ನಮ್ಮನ್ನು ತಡೆಯತಕ್ಕವನಾವನು?

ಕಾಮಕ್ರೋಧಾದಿಯುಕ್ತಾನಾಂ ನಿವಾಸೋತ್ರ ನ ಹೀಷ್ಯತೇ ।
ಇತೀರಯಿತ್ವಾ ತೇ ಸರ್ವೇ ದದುಃ ಶಾಪಂ ಮಹಾತ್ಮನೋಃ ॥೦೦॥

ಸನಕಾದಯಊಚುಃ.

ಚ್ಯುತೌ ವೈಕುಂಠಭವನಾತ್ ರಾಕ್ಷಸೀಂ ಯೋನಿಮಾಶ್ರಿತೌ ।
ಭವಿಷ್ಯಥೋ ದುರಾತ್ಮಾನೌ ಕಾಮಕ್ರೋಧವಿದೂಷಿತೌ ।
ಚತುರ್ದಶಾನಾಂ ಲೋಕಾನಾಂ ಬಾಧಕೌ ಚ ಭವಿಷ್ಯಥಃ ॥೦೧॥
ಇತಿ ತೇ ಕ್ರೋಧಮುತ್ಸೃಜ್ಯ ಶಾಪವ್ಯಾಜೇನ ವಜ್ರಿಣಃ ।
ತತಃ ಸಜ್ಜಿತ್ಯ ತೇ ಸರ್ವೇ ಪಶ್ಚಾತ್ತಾಪಸಮನ್ವಿತಾಃ ॥೦೦॥
ಮಾಯಯಾ ದುರತ್ಯಯಾ ವಿಷ್ಣೋಃ ಸರ್ವೇಷಾಮಪಿ ದೇಹಿನಾಮ್ ।
ವಯಮುತ್ಪನ್ನವಿಜ್ಞಾನಾಃ ಮೋಹಿತಾವಿಷ್ಣು ಮಾಯಯಾ ॥೦೩॥
ತ್ಯಕ್ತಪ್ರಯೋಜನಾನಾಂ ನಃ ಕಿಂ ವೈಕುಂಠೇನ ಭಾಸ್ವತಾ ।
ಕಿಮಾಗಮನಕಾರ್ಯಂ ನಃ ಕೃತ್ಯಶೇಷಮುತಾಪಿ ವಾ ॥೦೪॥
ಕುತೋ ವಜ್ರಿನಮುಸ್ಮಾಕಂ ಮಾನಾಮಾನಾವವಿದ್ಯಯಾ ।
ಗನ್ತವ್ಯಂ ನಿರ್ಗಮಶ್ಚಾಪಿ ಕುತೋ ದಂಡನಿವಾರಣಮ್ ॥೦೫॥

ಕಾಮಕ್ರೋಧಾದಿಯುಕ್ತರಾದವರಿಗೆ ಇಲ್ಲಿ ನಿವಾಸವು ಒಪ್ಪತಕ್ಕುದಲ್ಲ ' ಹೀಗೆಂದು ಹೇಳಿ, ಅವರೆಲ್ಲರೂ ಮಹಾತ್ಮರಾದ ಜಯವಿಜಯರಿಗೆ ಈರೀತಿಯಾಗಿ ಶಾಪವನ್ನು ಕೊಟ್ಟರು ॥೨೦॥

ಸನಕಾದಿಗಳು ಕೊಟ್ಟ ಶಾಪಪ್ರಕಾರವೇನೆಂದರೆ:—

ಎಲೈ ದುರಾತ್ಮರಾ! ಕಾಮಕ್ರೋಧದೂಷಿತರಾಗಿರುವ ನೀವಿಬ್ಬರೂ, ಈ ವೈಕುಂಠನಗರದಿಂದ ಆಚೆಗೆ ಬಿದ್ದವರಾಗಿ, ರಾಕ್ಷಸಯೋನಿಯನ್ನು ಹೊಂದತಕ್ಕವರಾಗುವಿರಿ. ಮತ್ತು, ಚತುರ್ದಶಲೋಕಗಳಿಗೂ ಬಾಧೆಕೊಡತಕ್ಕವರಾಗಿಯೂ ಇರುವಿರಿ ॥೨೧॥

ಹೀಗೆ ಆ ಸನಕಾದಿಮುನಿಗಳೆಲ್ಲರೂ, ಭಗವನ್ನಾಮಾವಂಚಿತರಾಗಿ, ಶಾಪದ ವ್ಯಾಜದಿಂದ ತಮ್ಮ ಕ್ರೋಧವನ್ನು ಅವರುಗಳಮೇಲೆ ಬಿಟ್ಟುಬಿಟ್ಟು, ಬಳಿಕ ತಮ್ಮೊಳಗೆ ಆಲೋಚಿಸಿ ತಾವು ಮಾಡಿದ ಕೆಲಸದಿಂದ ಪಶ್ಚಾತ್ತಾಪಪಟ್ಟವರಾಗಿ, ಹೀಗೆ ಯೋಚನೆಮಾಡಿದರು ॥೨೨॥

ಅಹಹ! ಆ ಮಹಾವಿಷ್ಣುವಿನ ಮಾಯೆಯು ಸಮಸ್ತಪ್ರಾಣಿಗಳಿಗೂ ಅತಿಕ್ರಮಿಸಲಸಾಧ್ಯವಾದುದು. ನಾವುಗಳು ಇಷ್ಟುಮಟ್ಟಿಗೆ ಜ್ಞಾನಸಂಪಾದನೆ ಮಾಡಿದವರಾಗಿದ್ದರೂ, ವಿಷ್ಣು ಮಾಯೆಯಿಂದ ಮೋಹಿತರಾಗಿಬಿಟ್ಟೆವಲ್ಲ! ॥೨೩॥

ಸಮಸ್ತವಾದ ಇಷ್ಟಾರ್ಥಗಳನ್ನೂ ಬಿಟ್ಟಿರುವ ನಮಗೆ, ಈ ತೇಜೋಮಯವಾದ ವೈಕುಂಠದಿಂದ ತಾನೆ ಪ್ರಯೋಜನವೇನಿರುವುದು? ನಾವು ಇಲ್ಲಿಗೆ ಬಂದುದುತಾನೆ ಏತಕ್ಕೆ? ನಾವು ಮಾಡಬೇಕಾದ ಕೆಲಸತಾನೆ ಯಾವುದು ಅವಶಿಷ್ಟವಾಗಿರುವುದು? ॥೨೪॥

ನಮಗೆ ಈ ಮಾಯೆಯಿಂದುಂಟಾದ ವಂಚನೆಯೇಕೆ? ಮಾನಾವಮಾನಗಳೆಲ್ಲಿಯವು? ಒಂದುಕಡೆಗೆ ಹೋಗಬೇಕೆಂಬುದೂ, ಅಲ್ಲಿಂದ ಹಿಂದಿರುಗಬೇಕೆಂಬುದೂ ಏಕೆ? ಇಲ್ಲಿ ಬಂದು ಈ ದ್ವಾರಪಾಲಕರ ಕೈಲಿ ದಂಡದಿಂದ ತಡೆಯಿಸಿಕೊಳ್ಳುವುದೇಕೆ? ॥೨೫॥

ವಾರಿತಾಇತ್ಯಹಙ್ಕಾರೋ ವಿಷ್ಣುಮಾಯಾವಿನಿರ್ಮಿತಃ ।
ಅಹಙ್ಕಾರಾತ್ ಪ್ರವರ್ತನ್ತೇ ವಿದ್ಯಾಕಾರ್ಯಾಣಿ ಸರ್ವತಃ ॥೬೬॥
ಪ್ರವೃತ್ತಿಶ್ಚ ನಿವೃತ್ತಿಶ್ಚ ಕರ್ಮಾಕರ್ಮ ಚ ಪಾತಕಮ್ ।
ಪುಣ್ಯಂ ಮೌನಾವಮೌನೌ ಚ ಸುಖಂ ದುಃಖಂ ಚ ಕಲ್ಪಿತಮ್ ॥೬೭॥
ಅಹೋ ಮಾಯಾ ಭಗವತೋ ಜ್ಞಾನಿನಾಮಪಿ ಮೋಹಿನೀ ।
ಅಹಮ್ಭಾವಃ ಪುನಸ್ತ್ಯಕ್ತಃ ಸ್ವೀಕೃತಸ್ತ್ಯಕ್ತಮಾಲ್ಯವತ್ ।
ಶಾಪೋತ್ಸರ್ಗಃ ಕಥಂ ತೇನ ವಿನಾಸ್ಮಾಭಿಃ ಪ್ರವರ್ತಿತಃ ॥೬೯॥
ಇತಿ ಚಿನ್ತಯತಾಂ ತೇಷಾಂ ಪ್ರಾದುರಾಸೀದ್ಧರಿಃ ಸ್ವಯಮ್ ।
ಶಙ್ಖಚಕ್ರಗದಾಪಾಣಿಃ ಪೀತವಾಸಾ ಜಗತ್ಪ್ರಭುಃ ॥೭೦॥
ನೀಲಮೇಘಸವರ್ಣಾಭೋ ಲಕ್ಷ್ಮ್ಯಾಲಙ್ಕೃತ ವಿದ್ಯುತ್ಸವರ್ಣಯಾ ।
ವನಮಾಲಾಪರೀತಾಙ್ಗಃ ಕೌಸ್ತುಭಾಲಙ್ಕೃತೋದರಃ ॥೭೧॥
ಸರ್ವಾಲಙ್ಕಾರಸಮ್ಪೂರ್ಣಃ ಶ್ರೀವತ್ಸೋ ಯಸ್ಯ ಚೋದಕಃ ।
ಪರಮಾತ್ಮಾ ಪರಾನನ್ದಃ ಕೇವಲಶ್ಚಿನ್ಮಯಃ ಪ್ರಭುಃ ॥೭೨॥

ಇವರು ನಮ್ಮನ್ನು ತಡೆದರೆಂಬ ಅಹಂಕಾರವು, ವಿಷ್ಣುಮಾಯೆಯಿಂದ ನಿರ್ಮಿತವಾಗಿರುವುದು. ಈ ಅಹಂಕಾರದದೆಸೆಯಿಂದ, ಸರ್ವತೋಮುಖವಾಗಿ ಅಜ್ಞಾನಕಾರ್ಯಗಳುದಯಿಸುವುವು ॥೬೬॥

ಪ್ರವೃತ್ತಿನಿವೃತ್ತಿಗಳೂ, ಕಾರ್ಯಾಕಾರ್ಯಗಳೂ, ಪಾಪಪುಣ್ಯಗಳೂ, ಮೌನಾವಮೌನಗಳೂ, ಸುಖದುಃಖಗಳೂ ಕೂಡ, ಈ ಅಹಂಕಾರದಿಂದಲೇ ಕಲ್ಪಿತವಾದುವುಗಳು ॥೬೭॥

ಅಹಹ! ಭಗವಂತನ ಮಾಯೆಯು, ಎಂತಹ ಜ್ಞಾನವಂತರಿಗೂ ಮೋಹವುಂಟುಮಾಡಿಬಿಡುವುದಲ್ಲ! ನಾವುಗಳು, ಆಚೆಗೆಸೆದಿದ್ದ ಪುಷ್ಪಮಾಲೆಯನ್ನು ಪುನಃ ಸ್ವೀಕರಿಸುವಂತೆ, ಬಿಟ್ಟು ಬಿಟ್ಟಿದ್ದ ಅಹಂಕಾರವನ್ನು ಪುನಃ ಸ್ವೀಕರಿಸಿದೆವಲ್ಲ! ಈ ಅಹಂಕಾರವಿಲ್ಲದಿದ್ದರೆ, ನಾವು ಈ ಶಾಪೋತ್ಸರ್ಗವನ್ನು ಹೇಗೆ ಮಾಡುತಿದ್ದೆವು? ॥೬೮॥

ಈರೀತಿಯಾಗಿ ಆ ಮುನಿಗಳು ಚಿಂತೆಮಾಡುತಿರುವಾಗ, ಶ್ರೀಹರಿಯು ತಾನಾಗಿ ಅವರೆದುರಿಗೆ ಬಂದು ನಿಂತನು. ಆಗ ಜಗತ್ಪ್ರಭುವಾದ ಆ ಸ್ವಾಮಿಯು, ಶಂಖಚಕ್ರಗದಾಪಾಣಿಯಾಗಿಯೂ ಪೀತಾಂಬರಧರನಾಗಿಯೂ ಇದ್ದನು ॥೬೯॥

ನೀಲಮೇಘಕ್ಕೆ ಸಮಾನವಾದ ಕಾಂತಿಯುಳ್ಳವನಾಗಿಯೂ, ಮಿಂಚಿಗೆ ಸಮಾನಳಾದ ಲಕ್ಷ್ಮೀದೇವಿಯೊಡನೆ ಕೂಡಿದವನಾಗಿಯೂ, ವನಮಾಲೆಯಿಂದ ಪರಿವೃತವಾದ ಶರೀರವುಳ್ಳವನಾಗಿಯೂ, ಕೌಸ್ತುಭಮಣಿಯಿಂದ ಅಲಂಕೃತವಾದ ಉದರವುಳ್ಳವನಾಗಿಯೂ ಇದ್ದನು ॥೭೦॥

ಸಮಸ್ತವಿಧವಾದ ಆಭರಣಗಳಿಂದಲೂ ಪರಿಪೂರ್ಣನಾಗಿ, ಅನನ್ಯಸಾಧಾರಣವಾದ ಶ್ರೀವತ್ಸಚಿಹ್ನೆಯನ್ನು ಧರಿಸಿಕೊಂಡು, ಪರಮಾನಂದರೂಪನಾದ, ಅದ್ವಿತೀಯನಾದ, ಚಿನ್ಮಯನಾದ, ಸರ್ವತೋಮುಖೈಶ್ವರ್ಯಶಾಲಿಯಾದ, ಜ್ಞಾನಾನಂದಮಯನಾದ, ದೇವದೇವನಾದ, ಚಿತ್ಸ್ವರೂಪನಾದ, ಮಾಯಾರಹಿತನಾದ ಪರಮಾತ್ಮನು, ಆ ಸನಕಾದಿಗಳ ಎದುರಿಗೆ ಪ್ರತ್ಯಕ್ಷನಾಗಿ ನಿಂತನು.

ಚಿದಾನನ್ದಮಯೋ ದೇವಃ ಚಿತ್ಸ್ವರೂಪೀ ನಿರಞ್ಜನಃ ।
ತಂ ದೃಷ್ಟ್ವಾ ಮುನಯಃ ಸರ್ವೇ ಪ್ರಣೇಮುರ್ಭಯವಿಹ್ವಲಾಃ ॥೩೦॥
ತದ್ದರ್ಶನಕೃತೋತ್ಸಾಹಾಃ ತದ್ಭಕ್ತ್ಯಾ ವಿವಶೀಕೃತಾಃ ।
ಸ್ತುತಿಂ ಚಕ್ರುಶ್ಚ ಬಹುಧಾ ಸ್ವಾನನಾದ್ಭಶ್ರುಪರಿಪ್ಲುತಾಃ ॥೩೩॥
ವ್ಯೂಹನಾಥಾಶ್ಚ ತತ್ರಾಸನ್ ತದಾ ವೈಕುಣ್ಠವಾಸಿನಃ ।
ಪ್ರಣೇಮುಃ ಸ್ವಾಮಿನಂ ದೃಷ್ಟ್ವಾ ಭಕ್ತ್ಯಾನಮ್ರಾ ಮಹೌಜಸಃ ॥೩೪॥
ದೃಷ್ಟ್ವಾ ಸ್ವೀಯಾನ್ ಮಹಾಬಾಹುಃ ವಿಷ್ವಕ್ಸೇನ್ರದಶವುಜ್ಜ್ವಲಃ ।
ಶಿಕ್ಷಯನ್ ಸಕಲಾನ್ ಭೃತ್ಯಾನ್ ಇದಮಾಹ ಮಹಾಮತಿಃ ॥೩೫॥
ನಮಸ್ಕುರುತ ವಿಪ್ರೇನ್ದ್ರಾನ್ ವನ್ದನೀಯಾನಮಯಾಪಿ ತೇ ।
ಆಚಾರ್ಯಪೂಜಾ ಪ್ರಥಮಂ ತತೋ ಮಾಮರ್ಚಯೇದ್ದ್ವಿಜಃ ॥೩೬॥
ಆಚಾರ್ಯಂ ಮಾಂ ವಿಜಾನೀತ ಮಾ ಮತ್ತಾ ಭೇದಬುದ್ಧಯಃ ।
ಬ್ರಾಹ್ಮಣಾಃ ಸರ್ವಲೋಕಾನಾಂ ಆಚಾರ್ಯಾಃ ಪರಿಕೀರ್ತಿತಾಃ ॥೩೭॥
ಅಹಂ ವಿಪ್ರಮುಖೇ ಯದ್ವತ್ ಭೋಕ್ಷ್ಯಾಮಿ ನ ತಥಾನ್ಯತಃ ।
ಯಾಗೈರಾರಾಧನೈರ್ವಾಪಿ ಮಮತೃಪ್ತಿರ್ನ ಜಾಯತೇ ॥೩೮॥

ಇಂತಹ ಪರಮಾತ್ಮನನ್ನು ನೋಡಿ, ಆ ಸಮಸ್ತಮುನಿಗಳೂ ಭಯಭ್ರಾಂತರಾಗಿ ನಮಸ್ಕರಿಸಿದರು ॥೩೧—೩೨॥

ಅವನ ದರ್ಶನದಿಂದ ಹೆಚ್ಚಿದ ಉತ್ಸಾಹವುಳ್ಳ ಆ ಮುನಿಗಳು, ಅವನಲ್ಲಿ ಭಕ್ತಿಭಾವದಿಂದ ಪರವಶರಾಗಿ, ಆನಂದಬಾಷ್ಪದಲ್ಲಿ ತೇಲಿಹೋಗುತ, ನಾನಾವಿಧವಾಗಿ ಸ್ತೋತ್ರಮಾಡಿದರು ॥

ಆಗ ಅಲ್ಲಿ ವೈಕುಂಠವಾಸಿಗಳಾದ ವ್ಯೂಹನಾಥರುಗಳೂ ಇದ್ದರು. ಮಹಾತೇಜಸ್ವಿಗಳಾದ ಅವರೆಲ್ಲರೂ, ಆ ಸ್ವಾಮಿಯನ್ನು ಕಂಡು ನಮಸ್ಕರಿಸಿದರು ॥೩೪॥

ಬಳಿಕ, ಸಮಸ್ತ ದೇವಾಧೀಶನಾದ ಮಹಾಬಾಹುವಾದ ಮಹಾಮತಿಯಾದ ಮಹಾವಿಷ್ಣುವು, ತನ್ನ ಭೃತ್ಯರುಗಳನ್ನು ನೋಡಿ, ಅವರೆಲ್ಲರಿಗೂ ಶಿಕ್ಷೆಯುಂಟಾಗುವಂತೆ ಈ ಮಾತನ್ನು ಹೇಳಿದನು ॥೩೫॥

ಎಲೈ ಜಯವಿಜಯರೇ? ಈ ಬ್ರಾಹ್ಮಣೋತ್ತಮರಿಗೆ ಈಕ್ಷಣವೇ ನಮಸ್ಕಾರಮಾಡಿರಿ. ಇವರು ನನಗೂ ನಮಸ್ಕಾರಾರ್ಹರಾದವರು. ಪ್ರಪಂಚದಲ್ಲಿ, ಆಚಾರ್ಯಪೂಜೆಯನ್ನು ಮೊದಲು ಮಾಡಿ, ಆ ಬಳಿಕ ಬ್ರಾಹ್ಮಣನು ನನ್ನನ್ನು ಪೂಜಿಸಬೇಕು ॥೩೬॥

ನೀವುಗಳು, ಆಚಾರ್ಯನನ್ನು ನಾನೆಂದು ತಿಳಿಯಬೇಡಿರಿ. ಬ್ರಾಹ್ಮಣರು ಸಮಸ್ತಲೋಕಕ್ಕೂ ಆಚಾರ್ಯರೆಂದು ಹೇಳಲ್ಪಟ್ಟಿರುವರು ॥೩೭॥

ನಾನು ಬ್ರಾಹ್ಮಣರ ಮುಖದಲ್ಲಿ ಎಷ್ಟುಮಟ್ಟಿಗೆ ಭೋಜನ ಮಾಡುವೆನೊ, ಅಷ್ಟು ಮಟ್ಟಿಗೆ ಇತರ ಮಾರ್ಗದಲ್ಲಿ ಭೋಜನಮಾಡುವುದಿಲ್ಲ. ಇತರವಾದ ಯಜ್ಞಗಳಿಂದಲೂ ಪೂಜನಗಳಿಂದಲೂ ನನಗೆ ತೃಪ್ತಿಯುಂಟಾಗುವುದಿಲ್ಲ ॥೩೮॥

ಯಾ ಪ್ರೀತಿರ್ಜಾಯತೇ ವಿಪ್ರ ಸ್ಥಾಪನೈರ್ಮಮ ಮಾನವಾಃ।
ದೇವಾಲಯೈರಾಭರಣೈಃ ತಾವತ್ ಪ್ರೀತಿರ್ನ ಜಾಯತೇ ॥೯೯॥
ಪ್ರಿಯಂ ಮಮಾನುಜಾನೀಯಾತ್ ಮಾಂ ವಿದ್ಯಾದ್ವಿಪ್ರರೂಪಿಣಮ್ ।
ವಿಪ್ರದ್ರೋಹೇ ಮಮ್ಯಮೇವ ದ್ರೋಹೋ ಭವತಿ ಭೃತ್ಯಕಾಃ ॥೪೦॥
ಆಯುಃ ಶ್ರಿಯಂ ಯಶೋ ಧೈರ್ಯಂ ಲೋಕಾನಾಶಿಷ ಏವ ಚ ।
ಹನ್ತಿ ಶ್ರೇಯಾಂಸಿ ಸರ್ವಾಣಿ ಪುಂಸಾಂ ಮಹದತಿಕ್ರಮಃ ॥೪೧॥
ಇತೀರಯಿತ್ವಾ ತಾಃ ಸರ್ವಾಃ ಸನಕಾದಿಮುನೀಂಸ್ತತಃ ।
ಉವಾಚ ವಚನಂ ವಿಷ್ಣುಃ ಸಾನ್ತ್ವಯನ್ ಶ್ಲಕ್ಷ್ಣಯಾ ಗಿರಾ ॥೪೨॥
ಅದ್ಯ ವೈಕುಣ್ಠಲೋಕಸ್ಯ ನಿಷ್ಠಾ ಭವತಿ ಪಾವನೀ ।
ಯೇಷಾಂ ವಃ ಪಾದರಜಸಾ ಸಂಯುಕ್ತಂ ಮನ್ದಿರಂ ಮಮ ॥೪೩॥
ಯನ್ನಿಷಿಪದಾವೋಜರಜಃಕಣಪವಿತ್ರಿತಮ್ ।
ತದೇವ ಭವನಂ ನೋ ಚೇತ್ ಭಕಾರಸ್ತತ್ರ ಲುಪ್ಯತೇ ॥೪೪॥
ಮಮ ಭೃತ್ಯಕೃತಂ ಕಾರ್ಯಂ ಮಯೈವ ವಿಹಿತಂ ದ್ವಿಜಾಃ।

ಎಲೈ ನನ್ನ ಸೇವಕರಾ! ಬ್ರಾಹ್ಮಣರನ್ನು ಉದ್ಧಾರಮಾಡುವುದರಿಂದ ನನಗೆ ಎಷ್ಟು ಪ್ರೀತಿಯುಂಟಾಗುವುದೋ, ದೇವಾಲಯಗಳನ್ನು ಕಟ್ಟಿಸುವುದರಿಂದಲೂ ನನಗೆ ದಿವ್ಯಾಭರಣವನ್ನು ಸಮರ್ಪಿಸುವುದರಿಂದಲೂ ಅಷ್ಟು ಪ್ರೀತಿಯುಂಟಾಗುವುದಿಲ್ಲ ॥೩೯॥

ಎಲೈ ಭೃತ್ಯರಾ! ಬ್ರಾಹ್ಮಣನು ನನಗೆ ಕೇವಲ ಪ್ರಿತಿಪಾತ್ರನೆಂದು ತಿಳಿಯಬೇಕು. ನನ್ನನ್ನು ಬ್ರಾಹ್ಮಣರೂಪಿಯೆಂದರಿಯಬೇಕು. ಬ್ರಾಹ್ಮಣರಿಗೆ ದ್ರೋಹಮಾಡಿದರೆ, ನನಗೂ ದ್ರೋಹಮಾಡಿದಂತಾಗುವುದು ॥೪೦॥

ಪ್ರಪಂಚದಲ್ಲಿ ಮಹಾತ್ಮರನ್ನು ಉಲ್ಲಂಘಿಸಿ ನಡೆಯುವಿಕೆಯೂ, ಮನುಷ್ಯರ ಆಯುಸ್ಸನ್ನೂ ಸಂಪತ್ತನ್ನೂ ಧೈರ್ಯವನ್ನೂ ಪುಣ್ಯಲೋಕಗಳನ್ನೂ ಸಕಲವಾದ ಇಷ್ಟಾರ್ಥಗಳನ್ನೂ ಸಮಸ್ತ ಶ್ರೇಯಸ್ಸುಗಳನ್ನೂ ನಾಶಪಡಿಸುತ್ತದೆ ॥೪೧॥

ಎಲೌ ಪಾರ್ವತಿ ಆ ಮಹಾವಿಷ್ಣುವು, ಜಯವಿಜಯರನ್ನು ಕುರಿತು ಈರೀತಿಯಾಗಿ ಹೇಳಿ, ಬಳಿಕ ಸನಕಾದಿ ಸಕಲಮುನಿಗಳನು ಸಮಾಧಾನಪಡಿಸುತ, ಹೀಗೆ ಮೃದುಮಧುರವಾದ ಮಾತನ್ನು ಹೇಳಿದನು ॥೪೨॥

ಎಲೈ ದ್ವಿಜಶ್ರೇಷ್ಠರಾ! ಈಗ ತಮ್ಮಗಳ ಪಾದಧೂಳಿಯಿಂದ ನನ್ನ ಮನೆಯು ಯುಕ್ತವಾಯ್ತಾದಕಾರಣ, ಈ ವೈಕುಂಠಲೋಕದ ಸ್ಥಿತಿಯೇ ಪವಿತ್ರತಮವಾಯ್ತು ॥೪೩॥

ಯಾವ ಭವನವು, ಮಹಾತ್ಮರ ಪಾದಕಮಲಧೂಳಿಯಿಂದ ಪರಿಶುದ್ಧಮಾಡಲ್ಪಡುವುದೋ, ಅದೇ ಭವನವು. ಹಾಗಲ್ಲದಿದ್ದರೆ, ಆದರಲ್ಲಿರುವ ಭಕಾರಕ್ಕೆ ಲೋಪಬರುವುದು. (ಭವನವು ವನವಾಗುವುದು) ॥೪೪॥

ಅಯ್ಯಾ ಬ್ರಾಹ್ಮಣರಾ! ನನ್ನ ಭೃತ್ಯರಿಂದ ಮಾಡಲ್ಪಟ್ಟ ಕಾರ್ಯವು ನನ್ನಿಂದಲೇ ಮಾಡಲ್ಪ

ಕ್ಷಮಧ್ವಂ ಮಮ ಯತ್ ಕರ್ಮ ಕ್ಷಮಾಸಾರಾಹಿ ಭೂಸುರಾಃ ॥೪೫॥
ಕ್ಷಮಾವಶಾನುಯಂ ಲೋಕಃ ಪರಲೋಕೋ ಮಹಾತ್ಮನಾಮ್ ।
ಬ್ರಾಹ್ಮಣಃ ಕ್ಷಮಿನ್ತ್ಯಾ ಪೂಜ್ಯೋ ನ ಗರಿಷ್ಠೋಽಜಿತೇನ್ದ್ರಿಯಃ ॥
ವಿತ್ತಂ ಕ್ಷಮಾ ದ್ವಿಜಾತೀನಾಂ ಯತೀನಾಂ ಜ್ಞಾನಿನಾಮಪಿ ।
ದ್ವಿಜಾಭವನ್ತೋ ಯತಯಃ ಜ್ಞಾನಿನಶ್ಚ ವಿಶೇಷತಃ ॥೪೭॥
ಕ್ಷಮಾವತೋ ವಿನೀತಸ್ಯ ಸಾಧೋರ್ಮತಿಮತಃ ಶುಚೇಃ ।
ವಿದ್ಯಾದಯಃ ಪ್ರಭಾಸನ್ತೇ ಘರ್ಮೇರ್ಕಸ್ಯೇವ ರಶ್ಮಯಃ ॥೪೮॥
ಯುಷ್ಮನ್ನಿವಾರಣಂ ತ್ವಾಭ್ಯಾಂ ಕ್ಷಮಧ್ವಂ ಮುನಿಪುಙ್ಗವಾಃ ।
ಸರ್ವಭೂತಹಿತಾಯೂಯಂ ಸರ್ವತ್ರ ಸಮದರ್ಶಿನಃ ॥೪೯॥

ಸನಕಾದಯಊಚುಃ.

ಅಪರಾಧವತಾಂ ದೇವ ಶ್ಲೇಷವಾಕ್ಯೈರ್ಭವೇತ ಕಿಮ್ ।
ತೇನೈವ ಕ್ಲೇಶಯುಕ್ತಾನಾಂ ಪುನಃ ಕ್ಲೇಶಾಯ ತದ್ಭವೇತ್ ॥೫೦॥
ಯದ್ಯಸ್ಮಾಕಂ ಭವೇಚ್ಛಾನ್ತಿಃ ಕಥಂ ಕ್ಲೇಶಕರಾವಯಮ್ ।
ಭೃತ್ಯಶಾಪಪ್ರದಾನೇನ ಸ್ವಾಮಿದ್ರೋಹಾತ್ ಕೃತಾಗಸಃ ॥೫೧॥

ಟ್ಟುದೆಂದು ತಿಳಿಯಿರಿ. ನನ್ನ ಈ ದುಷ್ಕರ್ಮವನ್ನು ನೀವುಗಳು ಕ್ಷಮಿಸಬೇಕು. ಪ್ರಪಂಚದಲ್ಲಿ ಬ್ರಾಹ್ಮಣರುಗಳು ಕ್ಷಮೆಯನ್ನೆ ಸಾರವಾಗಿಟ್ಟುಕೊಂಡಿರುವರಲ್ಲವೆ ! ॥೪೫॥

ಕ್ಷಮಾವಂತರಾದ ಮಹಾತ್ಮರಿಗೆ, ಈಲೋಕ ಪರಲೋಕಗಳೆರಡೂ ಉಂಟು. ಪ್ರಪಂಚದಲ್ಲಿ, ಕ್ಷಮಾವಂತನಾದ ಬ್ರಾಹ್ಮಣನೇ ಪೂಜ್ಯನಲ್ಲದೆ, ಜಿತೇಂದ್ರಿಯನಲ್ಲದ ಬ್ರಾಹ್ಮಣನೆಂದಿಗೂ ಶ್ರೇಷ್ಠನಲ್ಲ ॥೪೬॥

ಬ್ರಾಹ್ಮಣರಿಗೂ, ಯತಿಗಳಿಗೂ, ಜ್ಞಾನಿಗಳಿಗೂ ಕೂಡ, ಕ್ಷಮೆಯೇ ಧನವು. ನೀವುಗಳು ಬ್ರಾಹ್ಮಣರಾಗಿಯೂ ಯತಿಗಳಾಗಿಯೂ ವಿಶೇಷವಾಗಿ ಜ್ಞಾನಿಗಳಾಗಿಯೂ ಇರುವಿರಿ ॥೪೭॥

ಕ್ಷಮಾವಂತನಾಗಿಯೂ ವಿನೀತನಾಗಿಯೂ ಸಾಧುವಾಗಿಯೂ ಬುದ್ಧಿವಂತನಾಗಿಯೂ ಶುಚಿಯಾಗಿಯೂ ಇರತಕ್ಕವನಿಗೆ, ಗ್ರೀಷ್ಮಕಾಲದಲ್ಲಿ ಸೂರ್ಯರಶ್ಮಿಗಳು ಭಾಸಿಸುವಂತೆ, ವಿದ್ಯಾದಿಗಳೆಲ್ಲವೂ ಭಾಸಿಸುವುವು ॥೪೮॥

ಎಲೈ ಮುನಿಶ್ರೇಷ್ಠರಾ ! ಈ ಜಯವಿಜಯರು ನಿಮ್ಮಗಳಿಗೆ ಮಾಡಿದ ನಿವಾರಣೆಯನ್ನು ಕ್ಷಮಿಸಿರಿ. ನೀವುಗಳು, ಸರ್ವಭೂತಹಿತರಾಗಿಯೂ ಸರ್ವತ್ರ ಸಮದರ್ಶಿಗಳಾಗಿಯೂ ಇರುವಿರಲ್ಲವೆ॥

ಇದನ್ನು ಕೇಳಿ ಸನಕಾದಿಮಹರ್ಷಿಗಳು ವಿಜ್ಞಾಪಿಸುವರು:—

ಸ್ವಾಮಿ ! ದೊಡ್ಡ ಅಪರಾಧವನ್ನು ಮಾಡಿದವರಾದ ನಮಗೆ, ಈಶ್ಲೇಷವಾಕ್ಯಗಳಿಂದ ಫಲವೇನು? ಆ ಅಪರಾಧಮಾಡಿದುದರಿಂದಲೇ ಕ್ಲೇಶಪಡುತಿರುವ ನಮ್ಮಗಳಿಗೆ, ಈ ಕ್ಲೇಶವಚನವು ಮತ್ತೂ ಕ್ಲೇಶವನ್ನು ಹೆಚ್ಚಿಸುವುದು ॥೫೦॥

ನಮ್ಮಗಳಿಗೆ ಶಾಂತಿಯಿದ್ದ ಪಕ್ಷದಲ್ಲಿ, ನಾವು ನಿನ್ನ ಭೃತ್ಯರಿಗೆ ಶಾಪಕೊಟ್ಟು ತನ್ಮೂಲಕವಾಗಿ ಸ್ವಾಮಿದ್ರೋಹಮಾಡಿ ನಿನ್ನಲ್ಲಿ ಇಷ್ಟು ಅಪರಾಧಿಗಳಾಗಿ ನಿನಗೆ ಹೀಗೆ ಕ್ಲೇಶವುಂಟುಮಾಡತಕ್ಕವರಾಗುತಿದ್ದೆವೆ ? ॥೫೧॥

ದಣ್ಡನೀಯಾವಯಂ ದೇವ ಭವತಾ ಶಾಸತಾ ಜಗತ್ ।
ಕ್ರೋಧೇನ ಕಲುಷೀಭೂತಾಃ ಕ್ರೋಧಃ ಸರ್ವಾರ್ಥನಾಶಕಃ ॥೫೦॥
ಕ್ರೋಧಾವಿಷ್ಟೋ ಹಿ ಸರ್ವೇಷಾಂ ಭಾತಿ ರಾಕ್ಷಸವನ್ನೃಣಾಮ್ ।
ತಸ್ಮಾತ್ ಚಣ್ಡಾಲವನ್ನಿತ್ಯಂ ಕ್ರೋಧಸ್ತ್ಯಾಜ್ಯೋ ಮುನೀಷಿಭಿಃ ॥೫೧॥
ಕ್ರೋಧೇ ಸತಿ ಕಥಂ ಜ್ಞಾನಂ ಕ್ರೋಧೇ ಸತಿ ಕಥಂ ತಪಃ ।
ಕೃತ್ಯಾಕೃತ್ಯಂ ನ ಜಾನಾತಿ ಕ್ರೋಧವಾನ್ ನಿರಯಂ ವ್ರಜೇತ್ ॥೫೪॥

ಶ್ರೀ ಭಗವಾನುವಾಚ.

ಕ್ರೋಧೇ ಸತ್ಯಪಿ ನೋ ದೋಷಃ ಕಾರ್ಯಾಕಾರ್ಯವಿಚಾರಣೇ ।
ಯಃ ಕಾಲೇ ಸಫಲಃ ಕ್ರೋಧಃ ಸ ಶ್ಲಾಘ್ಯಃ ಸಮವರ್ತಿನಾಮ್ ॥೫೫॥
ಅಕಾಲೇ ವಿಫಲಃ ಕ್ರೋಧಃ ಸರ್ವೇಷಾಂ ಹಾಸ್ಯಕಾರಣಮ್ ।
ಇತಿ ವಿಜ್ಞಾಯತೇ ಯೇನ ಸ ಶಾನ್ತಃ ಸ ವಿಚಕ್ಷಣಃ ॥೫೬॥
ಇತ್ಯುಕ್ತ್ವಾ ಭಗವಾನ್ ಪ್ರಾಹ ಪುನಸ್ತಾನ್ ಮುನಿಪುಙ್ಗವಾನ್ ।
ಶಾಪದಾನೇನ ಸಂಖಿನ್ನಾನ್ ವ್ರೀಡಿತಾನ್ ಸ್ವೋಕ್ತಿಭಿಃ ಪ್ರಭುಃ ॥೫೭॥
ವಿಪ್ರಶಾಪಂ ನಿರಾಕರ್ತುಂ ಶಕ್ತೋಪಿ ಭಗವಾನ್ ಹರಿಃ ।
ನ ನಿವಾರಿತವಾನ್ ದೇವಃ ಭಾವಿಕಾರ್ಯಸ್ಯ ಗೌರವಾತ್ ॥೫೮॥

ಹೇ ದೇವ, ಸಮಸ್ತ ಜಗತ್ತನ್ನೂ ಶಾಸಿಸುತ್ತಿರುವ ನೀನು, ಕ್ರೋಧದಿಂದ ಕಲುಷೀಕೃತರಾದ ನಮ್ಮನ್ನು ಅವಶ್ಯವಾಗಿ ದಂಡಿಸಬೇಕು. ಪುರುಷರಿಗೆ ಕ್ರೋಧವು ಸರ್ವಾರ್ಥನಾಶಕವಾದುದು ॥೫೦॥

ಕ್ರೋಧಾವಿಷ್ಟನಾದ ಪುರುಷನು, ಸಾಮಾನ್ಯರಾದ ಮನುಷ್ಯರಿಗೂ ಸರ್ವದಾ ಚಂಡಾಲನಂತೆ ಕಾಣಿಸಿಕೊಳ್ಳುವನು. ಅದುಕಾರಣ, ಕ್ರೋಧವನ್ನು ನಿತ್ಯವೂ ಚಂಡಾಲನಂತೆ ತಿಳಿದು ದಂಡಿಸಬೇಕು ॥೫೧॥

ಕ್ರೋಧವಿದ್ದರೆ ಜ್ಞಾನ ಹೇಗಿರುವುದು? ಕ್ರೋಧವಿದ್ದರೆ ತಪಸ್ಸೆಲ್ಲಿರುವುದು? ಕ್ರೋಧವಂಶನಾದವನು, ಕೃತ್ಯಾಕೃತ್ಯಗಳನ್ನು ತಿಳಿಯಲಾರನು; ಕೊನೆಗೆ ನರಕವನ್ನು ಹೊಂದುವನು ॥೫೪॥

ಶ್ರೀಭಗವಂತನು ಹೇಳುವನು:—

ಆರ್ಯ್ಯ! ಮಹರ್ಷಿಗಳಿರಾ! ಕ್ರೋಧವಿದ್ದರೂ, ಕಾರ್ಯ್ಯಾಕಾರ್ಯ್ಯಗಳನ್ನು ವಿಚಾರಮಾಡಿ ನಡೆವರಿಗೆ ಅದರಿಂದ ದೋಷವಿಲ್ಲ. ಸರ್ವತ್ರ ಸಮದರ್ಶಿಗಳಾಗಿದ್ದುಗೊಂಡು ಸರಿಯಾದ ಕಾಲದಲ್ಲಿ ಸಫಲವಾಗಿಮಾಡುವ ಕೋಪವಾವುದುಂಟೋ, ಅದು ಸಮಸ್ತರಿಗೂ ಪರಿಹಾಸಾಸ್ಪದವಾಗುವುದು ಈ ವಿಷಯವನ್ನು ಯಾವನು ತಿಳಿದುಕೊಂಡು ನಡೆಯುವನೋ, ಅವನೇ ಶಾಂತನು; ಅವನೇ ವಿಚಕ್ಷಣನು ॥೫೫–೫೬॥

ಎಲೌ ಪಾರ್ವತಿ! ಆ ಭಗವಂತನು ಹೀಗೆ ಹೇಳಿ, ತಾವು ಶಾಪಕೊಟ್ಟುದುದರಿಂದ ಖಿನ್ನರಾಗಿ ತನ್ನಮಾತಿನಿಂದ ಲಜ್ಜಿಪಡುತಿರುವ ಆ ಬ್ರಾಹ್ಮಣರನ್ನು ಕುರಿತು, ಮತ್ತೆ ಮಾತನಾಡಿದನು ॥

ಆ ಭಗವಂತನಾದ ಶ್ರೀಹರಿಯು, ಬ್ರಾಹ್ಮಣರು ಕೊಟ್ಟ ಜಯವಿಜಯರ ಶಾಪವನ್ನು ನಿವಾರಿಸುವುದಕ್ಕೆ ಸಮರ್ಥನಾಗಿದ್ದರೂ ಮುಂದಣ ಕಾರ್ಯ್ಯಗೌರವದಿಂದ ಅದನ್ನು ನಿವಾರಿಸಲಿಲ್ಲ ॥

ಶ್ರೀ ಭಗವಾನುವಾಚ.

ಏತೌ ದರ್ಪಾತಿರೇಕೇಣ ಶಾಪದಗ್ಧೌ ಮಹಾತ್ಮನಾಮ್ ।
ಕ್ರಿಯತಾಮೇತಯೋರ್ಯಾವತ್ ವ್ಯವಸ್ಥಾ ಮುನಿಪುಙ್ಗವಾಃ ॥೫೯॥

ಋಷಯಊಚುಃ.

ಕಿಂ ನೋ ಮೋಹಯಸೇ ದೇವ ಕಿಙ್ಕರಾ ದರ್ಶನಾರ್ಥಿನಃ ।
ಭವತೋ ದರ್ಶನಂ ಯಾವತ್ ತಾವದ್ಭ್ರಾಮ್ಯನ್ತಿ ದೇಹಿನಃ ॥೬೦॥
ನ ಪಕ್ಷಪಾತೋ ದೇವಸ್ಯ ತತ್ತತ್ಕರ್ಮಸು ದೇಹಿಷು ।
ಕರ್ಮಭಿರ್ಭ್ರಾಮ್ಯಮಾಣೇಷು ಭವತೋನುಗ್ರಹಃ ಕುತಃ ॥೬೧॥
ಬ್ರಹ್ಮಾಣ್ಡಕೋಟಯೋ ದೇವ ನಿರ್ಮಿತಾಲೀಲಯಾ ತ್ವಯಾ ।
ತತ್ತದ್ಬ್ರಹ್ಮಾಣ್ಡಭಾಣ್ಡೇಷು ವ್ಯವಸ್ಥಾ ಚ ತ್ವಯಾ ಕೃತಾ ॥೬೨॥
ಭ್ರಾಮಯನ್ತ್ಯೇ ಜಗತ್ ಸರ್ವಂ ಮಾಯಾ ಯದ್ಯಸ್ತಿ ತೇ ವಶೇ ।
ಕೊತ್ರ ಭಾರೋಸ್ತಿ ದೇವೇಶ ಭೃತ್ಯಾನಾಂ ನಿಯಮೇ ಪ್ರಭೋ ॥೬೩॥

ಶ್ರೀ ಭಗವಾನುವಾಚ.

ಏತೌ ರಾಕ್ಷಸವಂಶೇಷು ತ್ರಿಧಾ ಭೂತ್ವಾ ಮಯಾ ಹತೌ ।
ವಿನಿರ್ಗತೌ ಚಿರಂ ಸ್ಥಿತ್ವಾ ಪುನರ್ಯೌಕುಣ್ಠಮೇಷ್ಯತಃ ॥೬೪॥

ಆಗ ಭಗವಂತನು ಹೇಳಿದುದೇನಂದರೆ:—

ಎಲೈ ಮುನಿಶ್ರೇಷ್ಠರೆ! ಈ ಜಯವಿಜಯರು, ಸರ್ವಾತಿಶಯದಿಂದ ಮಹಾತ್ಮಶಾಪದಗ್ಧರಾಗಿರುವರು. ಇವರಿಗೆ ಯಾವುದಾದರೊಂದು ವ್ಯವಸ್ಥೆ (ಶಾಪಕ್ಕೆ ಅವಧಿ) ಮಾಡಲ್ಪಡಬೇಕು।

ಋಷಿಗಳು ಹೇಳುವರು:—

ಹೇದೇವ! ನಿನ್ನ ದರ್ಶನಾರ್ಥಿಗಳಾಗಿ ಬಂದಿರುವ ಈಕಿಂಕರರನ್ನು ಏತಕ್ಕಾಗಿ ಮೋಹಪಡಿಸುವೆ? ನಿನ್ನ ದರ್ಶನವಾವಾಗ ಸಂಭವಿಸುವುದೋ, ಅದುವರೆಗೆಮಾತ್ರವೇ ಪ್ರಾಣಿಗಳು ಮೋಹಕ್ಕೊಳಗಾಗುವರು ॥೬೦॥

ಸರ್ವಲೋಕಸ್ವಾಮಿಯಾದ ನಿನಗೆ, ಅಯಾ ಕರ್ಮಗಳನ್ನು ಮಾಡಿಕೊಂಡಿರುವ ದೇಹಿಗಳಲ್ಲೆಂದಿಗೂ ಪಕ್ಷಪಾತವಿಲ್ಲ. ಆದರೆ, ಅಯಾ ಪ್ರಾಣಿಗಳು ತಂತಮ್ಮ ಕರ್ಮಗಳಿಂದಲೇ ಸುತ್ತಿಸಲ್ಪಡುತಿದ್ದುಬಿಟ್ಟಪಕ್ಷದಲ್ಲಿ ನಿನ್ನ ಅನುಗ್ರಹವೇತಕ್ಕೆ? ಅದಕ್ಕೆ ಫಲವೇ ಇಲ್ಲದಂತಾಗುವುದು॥೬೧॥

ಹೇದೇವ! ನಿನ್ನಿಂದ ಬ್ರಹ್ಮಾಂಡಕೋಟಿಗಳು ನಿರ್ಮಿಸಲ್ಪಟ್ಟಿರುವುವು. ಅಯಾ ಬ್ರಹ್ಮಾಂಡಗೋಳಗಳಲ್ಲಿ ನಿನ್ನಿಂದ ಸರಿಯಾದ ವ್ಯವಸ್ಥೆಯೂ ಮಾಡಲ್ಪಟ್ಟಿರುವುದು ॥೬೨॥


ಹೀಗಿರುವಾಗ, ಎಲೈ ಪ್ರಭುವೆ! ಸಮಸ್ತ ಜಗತ್ತನ್ನೂ ಭ್ರಮೆಪಡಿಸುತಿರುವ ಈ ಮಾಯೆಯೊಂದು ನಿನ್ನ ವಶದಲ್ಲಿದ್ದು ಬಿಟ್ಟಮೇಲೆ, ಈ ಭೃತ್ಯರ ನಿಯಮನದಲ್ಲಿ ಭಾರವೇನಿರುವುದು? ॥೬೩॥

ಶ್ರೀ ಭಗವಂತನು ಹೇಳುವನು:—

ಅಯ್ಯಾ ಮಹರ್ಷಿಗಳಿರಾ! ಈ ಜಯವಿಜಯರಿಬ್ಬರೂ, ಮೂರುವೇಳೆ ರಾಕ್ಷಸರ ವಂಶಗಳಲ್ಲಿ ಹುಟ್ಟಿ, ಅಲ್ಲಿ ಬಹುಕಾಲ ಇದ್ದುಗೊಂಡು, ನನ್ನಿಂದಲೇ ಹೊಡೆಯಲ್ಪಟ್ಟು, ಅಲ್ಲಿಂದ ಹೊರಟು ಮತ್ತೆ ವೈಕುಂಠವನ್ನೇ ಹೊಂದುವರು ॥೬೪॥

ಪಿತಾಭ್ಯಾಂ ಸರ್ವಲೋಕಾನಾಂ ಭವಿಷ್ಯನ್ತಿ ಮಹಾಪದಃ ।
ದೇವದ್ವಿಜಮುನೀನಾಂ ಚ ಸಾಧೂನಾಂ ಸರ್ವದೇಹಿನಾಮ್ ॥೬೫॥
ರಾಮಕೃಷ್ಣಾದಿರೂಪೇಣ ಹತ್ವಾ ತೌ ರಾಕ್ಷಸಾಧಮೌ ।
ಪುನರ್ವೈಕುಂಠಮಾಗತ್ಯ ಪಾಲಯಾಮಿ ಚ ಪಾರ್ವತಿ ॥೬೬॥
ಏವಂ ಶಾಪಸ್ಯ ಮರ್ಯಾದಾಂ ಕೃತ್ವಾಥಾನ್ತರ್ದಧೇ ಹರಿಃ ।
ತಥೇತ್ಯುಕ್ತ್ವಾ ಮುನಿಗಣಾಃ ನತ್ವಾ ವಿಷ್ಣುಂ ಪುನರ್ಯಯುಃ ॥೬೭॥

ಇತಿ ಶ್ರೀಬಾಲಕಾಣ್ಡೇ ಜಯವಿಜಯಶಾಪ ವಿಷ್ಣುದತ್ತವರಪ್ರದಾನ
ಕಥನಂ ನಾಮ ದಶಮಃ ಸರ್ಗಃ.



ಇವರುಗಳಿಂದ, ಸರ್ವಲೋಕಗಳಿಗೂ ದೇವತೆಗಳಿಗೂ ಬ್ರಾಹ್ಮಣರಿಗೂ ಋಷಿಗಳಿಗೂ ಸಾಧುಗಳಿಗೂ ಸಮಸ್ತ ಪ್ರಾಣಿಗಳಿಗೂ ದೊಡ್ಡ ವಿಪತ್ತುಗಳು ಸಂಭವಿಸುವವು ॥೬೫॥

ನಾನು ರಾಮಕೃಷ್ಣಾದಿರೂಪದಿಂದ ಆ ರಾಕ್ಷಸಾಧಮರನ್ನು ಕೊಂದು, ಮತ್ತೆ ವೈಕುಂಠವನ್ನು ಹೊಂದಿ, ನನ್ನ ಸಾಮಾಜಿಕರನ್ನೆಲ್ಲ ಯಥಾಪೂರ್ವವಾಗಿ ಕಾಪಾಡುವೆನು ॥೬೬॥

ಎಲೌ! ಪಾರ್ವತಿ! ಶ್ರೀಹರಿಯು ಈರೀತಿಯಾಗಿ ಶಾಪಕ್ಕೆ ಅವಧಿಯನ್ನು ಕಲ್ಪಿಸಿ, ಬಳಿಕ ಅಂತರ್ಧಾನಹೊಂದಿದನು. ಆ ಮುನಿಸಮೂಹವೂ ಕೂಡ, ಹಾಗೆಯೇ ಆಗಲೆಂದು ವಿಜ್ಞಾಪಿಸಿ, ಆ ಮಹಾವಿಷ್ಣುವನ್ನು ನಮಸ್ಕರಿಸಿ, ತಾವು ಬಂದಂತೆಯೇ ಹಿಂದಿರುಗಿ ಹೊರಟುಹೋದರು॥೬೭॥

ಇದು ಬಾಲಕಾಂಡದಲ್ಲಿ ಜಯವಿಜಯಶಾಪ ವಿಷ್ಣುವರಪ್ರದಾನ
ಕಥನವೆಂಬ ಹತ್ತನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಏಕಾದಶಃ ಸರ್ಗಃ.

ಶ್ರೀ ಶಿವಉವಾಚ.

ತತಃ ಪತನಭೀತ್ಯಾ ತೌ ಕಮ್ಪಿತೌ ಕೋಕಕರ್ಶಿತೌ ।
ಪೇತತುಃ ಸಹಸಾ ಲಕ್ಷ್ಮ್ಯಾಃ ಪಾದಯೋಃ ಶರಣೈಷಿಣೌ ॥೧॥
ಆವಾಂ ತ್ರಾಯಸ್ವ ವರದೇ ಭಕ್ತಾನಾಂ ಭಯನಾಶಿನಿ ।
ಕಥಂ ನೌ ತರಣೋಪಾಯಃ ಪತತೋರ್ನೀಚಯೋನಿಷು ॥೨॥
ಇತ್ಯುಕ್ತಾ ಕಮಲಾ ಪ್ರಾಹ ಖಿನ್ನೌ ತೌ ಭಕ್ತವತ್ಸಲಾ ।
ಮಾಭೈಷ್ಟಂ ಶಾಪತೋ ವತ್ಸೌ ಕಾಲೋ ಹಿ ಗುರತಿಕ್ರಮಃ ॥೩॥
ಜನ್ಮತ್ರಯಂ ಭಗವತಾ ಯುವಯೋಃ ಪ್ರತಿಪಾದಿತಮ್ ।
ತದನ್ಯಥಯಿತುಂ ಶಕ್ಯಂ ನ ಬ್ರಹ್ಮಾದ್ಯೈರಪೀಶ್ವರೈಃ ॥೪॥
ಸಹಾಯಮಾತ್ರಂ ವಕ್ಷ್ಯೇಹಂ ತತ್ರ ವಾಂ ಪ್ರಥಮೇ ಭವೇ ।
ಭೂರ್ಭಕ್ತರೂಪೋ ಧರ್ಮಶ್ಚ ಸಹಾಯಂ ವಾಂ ಕರಿಷ್ಯತಃ ॥೫॥

ಬಾಲಕಾಂಡದಲ್ಲಿ ಹನ್ನೊಂದನೆಯ ಸರ್ಗವು.

ಶ್ರೀ ಪರಮೇಶ್ವರನು ಹೇಳುವನು :—

ಎಲೌ ಪಾರ್ವತಿ! ಹಿಂದೆ ಹೇಳಿದಂತೆ ಭಗವಂತನು ಅಂತರ್ಧಾನಹೊಂದಿದನಂತರ, ಸನಕಾದಿಗಳು ಹೊರಟುಹೋಗಲಾಗಿ, ಆ ಜಯವಿಜಯರಿಬ್ಬರೂ, ಅಧೋಗತಿ ಬಂದಿತೆಂದು ಹೆದರಿಕೆಯಿಂದ ನಡುಗುತ, ಕೇವಲ ಶೋಕಾಕ್ರಾಂತರಾಗಿ, ಶರಣಾರ್ಥಿಗಳಾಗಿ ತಟ್ಟನೆ ಲಕ್ಷ್ಮೀದೇವಿಯ ಪಾದಗಳ ಮೇಲೆ ಬಿದ್ದರು ॥೧॥

ಸರ್ವರಿಗೂ ವರವನ್ನು ಕೊಡತಕ್ಕವಳೆ! ಭಕ್ತರಿಗೆ ಭಯವನ್ನು ನಾಶಪಡಿಸತಕ್ಕವಳೆ! ನೀಚಯೋನಿಗಳಲ್ಲಿ ಬೀಳಬೇಕಾಗಿರುವ ನಮ್ಮಗಳಿಗೆ, ಈಗ ಇದನ್ನು ದಾಟುವುದಕ್ಕುಪಾಯವೇ ನಿರುವುದು? ॥೨॥

ಹೀಗೆಂದು ಅವರಿಂದ ಕೇಳಲ್ಪಟ್ಟ ಭಕ್ತವತ್ಸಲಳಾದ ಲಕ್ಷ್ಮೀದೇವಿಯು, ಖಿನ್ನರಾಗಿರುವ ಆವರನ್ನು ಕುರಿತು ಹೀಗೆ ಹೇಳಿದಳು :—ಎಲೈ ವತ್ಸರಾ! ನೀವು ಈ ಶಾಪಕ್ಕೆ ಹೆದರಬೇಡಿರಿ. ಕಾಲಮಹಿಮೆಯು ಸರ್ವರಿಗೂ ಅನತಿಕ್ರಮಣೀಯವಾದುದು ॥೩॥

ಭಗವಂತನು ನಿಮ್ಮಿಬ್ಬರಿಗೂ ಮೂರು ಜನ್ಮಗಳನ್ನು ಅಪ್ಪಣೆ ಕೊಟ್ಟಿರುವನು. ಅದು, ಬ್ರಹ್ಮಾದಿ ದೇವತೆಗಳಿಂದಲೂ ಅನ್ಯಥಾ ಮಾಡಲಸಾಧ್ಯವಾಗಿರುವುದು ॥೪॥

ಆದರೆ, ಈ ವಿಷಯದಲ್ಲಿ ನಿಮಗೆ ನಾನು ಸ್ವಲ್ಪ ಸಹಾಯವನ್ನು ಹೇಳಿಕೊಡುವೆನು. ನಿಮಗೆ ಮೊದಲನೆಯ ಜನ್ಮದಲ್ಲಿ ಭೂಮಿಯೂ ಭಗವದ್ಭಕ್ತರೂಪವಾದ ಧರ್ಮವೂ ಸಹಾಯವಾಗುವುವು ॥೫॥

ಜನ್ಮನ್ಯಹಂ ದ್ವಿತೀಯೇ ಸ್ಯಾಂ ಯುಷ್ಮದ್ವಧಸಹಾಯಿನೀ ।
ಸುದರ್ಶನಂ ತೃತೀಯೇ ತು ಸಹಾಯಂ ವಾಂ ಕರಿಷ್ಯತಿ ॥೬॥
ಭೂಮಿಂ ಭಕ್ತಂ ಚ ಮಾಂ ಚಕ್ರಂ ನಿಮಿತ್ತೀಕೃತ್ಯ ಮಾಧವಃ ।
ಯುವಾಂ ಜನ್ಮತ್ರಯೇ ನೂನಂ ಭಗವಾ೯ ಸಂಹರಿಷ್ಯತಿ ॥೭॥
ಯುವಾಂ ಭಗವತಾ ಸಾಕಂ ಯುದ್ಧಂ ಕೃತ್ವಾ ತ್ರಿಜನ್ಮಸು ।
ಹತೌ ಶಾಪವಿನಿರ್ಮುಕ್ತೌ ಶೀಘ್ರಂ ವೈಕುಣ್ಠಮೇಷ್ಯತಃ ॥೮॥
ಇತ್ಯುಕ್ತ್ವಾ ತೌ ಮಹಾತ್ಮಾನೌ ದ್ವಾರಪಾಲೌ ತದೇನ್ದಿರಾ ।
ಅನ್ತರ್ಜಗಾಮ ಸಹಸಾ ಸ್ವಸೇವಕಜನಾನ್ವಿತಾ ॥೯॥
ತತಶ್ಚ ತೌ ಪಾರಿಷದೌ ಪಶ್ಯತಾಂ ಸರ್ವದೇಹಿನಾಮ್ ।
ಹಾಹಾಕಾರಂ ಪ್ರಚಕ್ರುಸ್ತೇ ತದಾ ವೈಕುಣ್ಠವಾಸಿನಃ ॥೧೦॥
ತತಸ್ತೌ ದಿತಿಸಮ್ಭೂತೌ ಕಶ್ಯಪಾದೃಷಿಸತ್ತಮಾತ್ ।
ಹಿರಣ್ಯಕಶಿಪುಶ್ಚೈವ ಹಿರಣ್ಯಾಕ್ಷಶ್ಚ ದುರ್ಧರಃ ॥೧೧॥
ಬ್ರಹ್ಮದತ್ತವರೋನ್ನಾಸೌ ತ್ರೀನ್ ಲೋಕಾನ್ ಬಾಧತೇ ಬಲಃ ।
ಭೂಮಿಂ ಗೃಹೀತ್ವಾ ಪಾತಾಳಂ ಪ್ರವಿವೇಶ ಮಹಾಸುರಃ ॥೧೨॥

ಎರಡನೆಯ ಜನ್ಮದಲ್ಲಿ, ನಾನು ನಿಮ್ಮ ವಧಕ್ಕೆ ಸಹಾಯಭೂತಳಾಗುವೆನು. ಮೂರನೆಯ ಜನ್ಮದಲ್ಲಿ, ಸ್ವಾಮಿಯು ಸುದರ್ಶನವೆಂಬ ಚಕ್ರವು ನಿಮಗೆ ಸಹಾಯವಾಗುವುದು ॥೬॥

ಹೀಗೆ ಭಗವಂತನಾದ ಶ್ರೀ ಮಾಧವನು, ಭೂಮಿಯನ್ನೂ ಭಕ್ತನನ್ನೂ ನನ್ನನ್ನೂ ಚಕ್ರವನ್ನೂ ನಿಮಿತ್ತಮಾಡಿಕೊಂಡು, ಮೂರು ಜನ್ಮಗಳಲ್ಲಿಯೂ ನಿಮ್ಮನ್ನು ಸಂಹರಿಸುವನು; ಇದು ನಿಶ್ಚಯವು ॥೭॥

ನೀವಿಬ್ಬರೂ, ಮೂರು ಜನ್ಮಗಳಲ್ಲಿಯೂ ಭಗವಂತನೊಡನೆ ಯುದ್ಧಮಾಡಿ, ಅವನಿಂದ ಹೊಡೆಯಲ್ಪಟ್ಟವರಾಗಿ, ಶಾಪದಿಂದ ಬಿಡುಗಡೆ ಹೊಂದಿ, ಮತ್ತೆ ಬೇಗನೆ ವೈಕುಂಠಕ್ಕೆ ಬರುವಿರಿ ॥೮॥

ಎಲೌ ವಾರ್ವತಿ! ಆಗ ಆ ಮಹಾಲಕ್ಷ್ಮಿಯು, ಮಹಾತ್ಮರಾದ ದ್ವಾರಪಾಲಕರನ್ನು ಕುರಿತು ಹೀಗೆ ಹೇಳಿದವಳಾಗಿ, ತನ್ನ ಸೇವಕಜನರೊಡಗೂಡಿ ತಟ್ಟನೆ ಒಳಕ್ಕೆ ಹೊರಟುಹೋದಳು ॥೯॥

ಬಳಿಕ, ಆ ದ್ವಾರಪಾಲಕರನ್ನು ಅಲ್ಲಿರುವ ಸಮಸ್ತರೂ ನೋಡುತಿರುವಾಗಲೇ, ಆ ವೈಕುಂಠವಾಸಿಗಳಾದವರೆಲ್ಲರೂ ಹಾಹಾಕಾರವನ್ನು ಮಾಡಿದರು ॥೧೦॥

ಅನಂತರ, ಅವರಿಬ್ಬರೂ ಕಶ್ಯಪಮಹಾಮುನಿಯ ದೆಸೆಯಿಂದ ದಿತಿದೇವಿಯ ಗರ್ಭದಲ್ಲಿ ಹಿರಣ್ಯಕಶಿಪುವೆಂಬುದಾಗಿಯೂ ಹಿರಣ್ಯಾಕ್ಷನೆಂಬುದಾಗಿಯೂ ನಾಮಧೇಯವಿಟ್ಟುಕೊಂಡು ಹುಟ್ಟಿದರು ॥೧೧॥

ಆಗ ಮಹಾನೀಚನಾದ ಹಿರಣ್ಯಾಕ್ಷನೆಂಬ ರಾಕ್ಷಸನು, ಬ್ರಹ್ಮನಿಂದ ಕೊಡಲ್ಪಟ್ಟ ವರದಿಂದ ದರ್ಪಿತನಾಗಿ, ಭೂಮಿಯನ್ನು ಅಪಹರಿಸಿಕೊಂಡು ಪಾತಾಳಲೋಕಕ್ಕೆ ಹೊರಟುಹೋದನು ॥

ತತೋ ಯಜ್ಞವರಾಹೇಣ ಹಿರಣ್ಯಾಕ್ಷೋ ನಿಪಾತಿತಃ ।
ಭೂಮಿರ್ಗೃಹೀತಾ ದೇವೇನ ಯಥಾಸ್ಥಾನಂ ನಿವೇಶಿತಾ ॥೧೩॥
ತಥಾ ಹಿರಣ್ಯಕಶಿಪುಂ ನಾರಸಿಂಹವಪುರ್ಧರಿಃ ।
ಸ್ತಮ್ಭಾದುದ್ಭೂಯ ಸಹಸಾ ಪ್ರಹ್ಲಾದಾರ್ಥಂ ಜಘಾನ ತಮ್ ॥೧೪॥

ಶ್ರೀ ಪಾರ್ವತ್ಯುವಾಚ.

ವರಾಹೇಣ ನೃಸಿಂಹೇನ ಹತೌ ತೌ ರಾಕ್ಷಸಾಧಮೌ ।
ತತಃ ಕಿಂ ಭವತಃ ಪಾಪಾತ್ ಮೋ ವದಸ್ವ ಸುರೇಶ್ವರ ॥೧೫॥

ಶ್ರೀ ಶಿವಉವಾಚ.

ಹಿರಣ್ಯಕಹಿರಣ್ಯಾಕ್ಷೌ ದ್ವಿತೀಯಂ ಜನ್ಮಸಂಶ್ರಿತೌ ।
ಕುಮ್ಭಕರ್ಣದಶಗ್ರೀವೌ ಆಜಾಯೇತಾಂ ಮಹಾಬಲೌ ॥೧೬॥
ಬ್ರಹ್ಮಪುತ್ರಃ ಪುಲಸ್ತ್ಯೋಭೂತ್ ತತ್ಪುತ್ರೋ ವಿಶ್ರವಾಮುನಿಃ ।
ಸುಕೇಶೀತನಯಸ್ಯಾಸ್ಯ ಸುಮಾಲೀದೈತ್ಯಸವಸ್ಯ ಚ ।
ಕೇಕಸೀ ನಾಮ ತನಯಾ ಭಾರ್ಯಾ ವಿಶ್ರವಸೋಭವತ್ ॥೧೭॥
ಕಾಮೋದ್ರಿಕ್ತಾ ತು ಸಾ ದೇವೀ ಸನ್ಧ್ಯಾಕಾಲೇ ಮಹಾಮುನಿಮ್ ।
ರಮಯಾಮಾಸ ತನ್ವಙ್ಗೀ ಯಥೇಷ್ಟಂ ಗಾಮ್ಯಧರ್ಮತಃ ॥೧೮॥

ಅನಂತರ, ಯಜ್ಞವರಾಹರೂಪವಾಗಿ ಅವತರಿಸಿದ ಶ್ರೀ ಭಗವಂತನು, ಹಿರಣ್ಯಾಕ್ಷನನ್ನು ಕೊಂದು, ಭೂಮಿಯನ್ನು ಮೇಲಕ್ಕೆ ತಂದು ಯಥಾಸ್ಥಾನದಲ್ಲಿರಿಸಿದನು ॥೧೩॥

ಹಾಗೆಯೇ, ಶ್ರೀಹರಿಯು ನರಸಿಂಹವೇಷಧಾರಿಯಾಗಿ ಪ್ರಹ್ಲಾದನೆಂಬ ಭಕ್ತನಿಗೋಸ್ಕರ ಸ್ತಂಭದಿಂದ ತಟ್ಟನೆ ಆವಿರ್ಭವಿಸಿ, ಆ ಹಿರಣ್ಯಕಶಿಪುವನ್ನು ಕೊಂದನು ॥೧೪॥

ಶ್ರೀ ಪಾರ್ವತಿ ಕೇಳುವಳು :—

ಹೇ ಪರಮೇಶ್ವರ! ಹೀಗೆ ವರಾಹರೂಪನಾಗಿಯೂ ನೃಸಿಂಹರೂಪನಾಗಿಯೂ ಅವತರಿಸಿದ ಶ್ರೀಮನ್ನಾರಾಯಣನಿಂದ ಕೊಲ್ಲಲ್ಪಟ್ಟ ಆ ರಾಕ್ಷಸಾಧಮರು, ಅನಂತರ ಆ ಪಾಪದಿಂದ ಯಾವ ರೀತಿಯಾದರು? ಅದನ್ನು ಅಪ್ಪಣೆಕೊಡಿಸಬೇಕು ॥೧೫॥

ಶ್ರೀ ಶಿವನು ಹೇಳುವನು :—

ಎಲೌ ಪಾರ್ವತಿ! ಹಿರಣ್ಯಾಕ್ಷ ಹಿರಣ್ಯಕಶಿಪುಗಳಿಬ್ಬರೂ, ಎರಡನೆಯ ಜನ್ಮವನ್ನು ಹೊಂದಿ, ಮಹಾಬಲಿಷ್ಠರಾದ ರಾವಣ ಕುಂಭಕರ್ಣರಾಗಿ ಜನಿಸಿದರು ॥೧೬॥

ಈಗ ಆ ರಾವಣ ಕುಂಭಕರ್ಣರ ಉತ್ಪತ್ತಿಯನ್ನು ಸ್ವಲ್ಪಮಾತ್ರ ಹೇಳುವೆನು,—ಪೂರ್ವದಲ್ಲಿ, ಪುಲಸ್ತ್ಯನೆಂಬ ಬ್ರಹ್ಮಮಾನಸಪುತ್ರನೊಬ್ಬನಿದ್ದನು. ಇವನಿಗೆ ವಿಶ್ರವಸ್ಸೆಂಬ ಮುನಿಯು ಮಗನಾದನು. ಸುಕೇಶಿಯೆಂಬವಳ ಮಗನಾದ ಈ ವಿಶ್ರವಸಿಗೆ, ಸುಮಾಲಿಯೆಂಬ ರಾಕ್ಷಸನ ಮಗಳಾದ ಕೇಕಸಿಯೆಂಬವಳು ಪತ್ನಿಯಾದಳು ॥೧೭॥

ಕೇವಲ ಸುಂದರಿಯಾದ ಆ ಕೇಕಸಿಯು, ಅತಿ ಕಾಮೋದ್ರಿಕ್ತಳಾಗಿ, ಸಂಧ್ಯಾಕಾಲದಲ್ಲಿ ಆ ಮುನಿಯೊಡನೆ ಯಥೇಚ್ಛವಾಗಿ ರಮಿಸಿದಳು ॥೧೮॥

ತತ್ಕಾಲಸಮ್ಭವಾದ್ಗರ್ಭಾತ್ ತಸ್ಯಾಂ ಜಾತೌ ಮಹಾಬಲೌ ।
ರಾವಣೋ ದಶಕಣ್ಠೋಽಭೂತ್ ಕುಮ್ಭಕರ್ಣೋಽಥ ರಾಕ್ಷಸಃ ॥೧೯॥
ತಯೋರವರಜಾ ಕನ್ಯಾ ಜಾತಾ ಶೂರ್ಪಣಖಾಽಽಖ್ಯಯಾ ॥೨೦॥
ಕಸ್ಮಿಂಶ್ಚಿದ್ಧರ್ಮಕಾಲೇ ತು ತೇಷಾಮವರಜೋಽಭವತ್ ।
ವಿಭೀಷಣೋ ವಿಷ್ಣುಭಕ್ತಃ ಸತ್ಯವಾಕ್ ಧರ್ಮವಾನ್ ಶುಚಿಃ ॥೨೧॥
ಕುಮ್ಭಕರ್ಣೋಽಥ ಮಹಾಕಾಯಃ ತ್ರಿಶತಂ ಯೋಜನೋನ್ನತಃ ।
ರಾವಣೋ ವಿಕೃತಾಕಾರೋ ಬೃಹದ್ಗಾತ್ರೋ ಬಭೂವ ಹ ॥೨೨॥
ರಾವಣಃ ಕುಮ್ಭಕರ್ಣಶ್ಚ ಗತ್ವಾ ಗೋಕರ್ಣಮುತ್ತಮಮ್ ।
ಮಹೋಗ್ರತಪಸಾ ಮಾಂ ತು ಪೂಜಯಾಮಾಸತುಃ ಪ್ರಿಯೇ ॥೨೩॥
ಕುಮ್ಭಕರ್ಣಸ್ತಥಾ ಯತ್ತೋ ನಿತ್ಯಂ ಧರ್ಮಪಥೇ ಸ್ಥಿತಃ ।
ತತಾಪ ಗ್ರೀಷ್ಮಕೇ ಕಾಲೇ ವೀರಃ ಪಞ್ಚಾಗ್ನಿಮಧ್ಯಗಃ ॥೨೪॥
ಏವಂ ವರ್ಷಸಹಸ್ರಾಣಿ ದಶ ತಸ್ಯಾತಿಚಕ್ರಮುಃ ।
ವಿಭೀಷಣೋಽಪ್ಯೇವಮೇವ ಧರ್ಮಾರ್ಥಂ ಕೃತವಾಂಸ್ತಪಃ ॥೨೫॥
ದಶವರ್ಷಸಹಸ್ರಂ ತು ನಿರಾಹಾರೋ ದಶಾನನಃ ।
ಗತೇ ವರ್ಷಸಹಸ್ರೇ ತು ಶಿರಶ್ಛಾಗ್ನೌ ಜುಹಾವ ಸಃ ॥೨೬॥

ಆ ಕಾಲದಲ್ಲಿ ಸಂಭವಿಸಿದ ಗರ್ಭದಿಂದೆಸೆಯಿಂದ, ಅವಳಲ್ಲಿ ಇಬ್ಬರು ಮಹಾಬಲಿಷ್ಠರಾದ ಮಕ್ಕಳು ಹುಟ್ಟಿದರು. ಅವರಲ್ಲಿ ಒಬ್ಬನು ದಶಕಂಠನಾದ ರಾವಣನು; ಮತ್ತೊಬ್ಬನು ಕುಂಭಕರ್ಣನು. ಇವರಿಬ್ಬರೂ ರಾಕ್ಷಸರು. ಇವರಿಬ್ಬರಿಗೂ ತಂಗಿಯಾಗಿ, ಶೂರ್ಪಣಖೆಯೆಂಬ ಕನ್ಯಕೆ ಹುಟ್ಟಿದಳು ॥೧೯-೨೦॥

ಯಾವುದೋ ಒಂದು ಧರ್ಮಮಯವಾದ ಸಮಯದಲ್ಲಿ, ಇವರೆಲ್ಲರಿಗೂ ತಮ್ಮನಾದ–ವಿಷ್ಣುಭಕ್ತನಾಗಿಯೂ ಸತ್ಯವಂತನಾಗಿಯೂ ಧರ್ಮವಂತನಾಗಿಯೂ ಶುಚಿಯಾಗಿಯೂ ಇರುವ–ವಿಭೀಷಣನೆಂಬವನು ಹುಟ್ಟಿದನು ॥೨೧॥

ಮಹಾದೇಹನಾದ ಕುಂಭಕರ್ಣನು, ಮುನ್ನೂರು ಯೋಜನದಷ್ಟು ಎತ್ತರವಾಗಿ ಬೆಳೆದಿದನು. ಕೇವಲ ವಿಕಾರವಾದ ಆಕಾರವುಳ್ಳ ರಾವಣನೂ ಮಹಾದೇಹನೇ ಆಗಿದ್ದನು ॥೨೨॥

ಎಲ್ಲೋ ಪ್ರಿಯೆ! ರಾವಣನೂ ಕುಂಭಕರ್ಣನೂ ಗೋಕರ್ಣಕ್ಷೇತ್ರಕ್ಕೆ ಹೋದವರಾಗಿ, ಅತ್ಯುಗ್ರವಾದ ತಪಸ್ಸಿನಿಂದ ನನ್ನನ್ನು ಪೂಜಿಸಿದರು ॥೨೩॥

ಹಾಗೆಯೇ ನಿಯಮಶೀಲನಾಗಿರುವ ಮಹಾವೀರನಾದ ಕುಂಭಕರ್ಣನು, ನಿತ್ಯವೂ ಧರ್ಮಮಾರ್ಗದಲ್ಲಿರುತ, ಗ್ರೀಷ್ಮಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿ ನಿಂತುಕೊಂಡು ತಪಸ್ಸು ಮಾಡಿದನು ॥೨೪॥

ಹೀಗೆ ತಪಸ್ಸು ಮಾಡುತಿರುವ ಆ ರಾವಣನಿಗೆ, ಹತ್ತುಸಾವಿರ ವರ್ಷಗಳು ಕಳೆದುಹೋದುವು. ವಿಭೀಷಣನೂ ಹೀಗೆಯೇ ಧರ್ಮಸಂಪಾದನಾರ್ಥವಾಗಿ ತಪಸ್ಸುಮಾಡುತಿದ್ದನು ॥೨೫॥

ರಾವಣನು ಹತ್ತುಸಾವಿರ ವರ್ಷಕಾಲ ನಿರಾಹಾರನಾಗಿ ತಪಸ್ಸು ಮಾಡುತ, ಒಂದೊಂದು ಸಾವಿರವರ್ಷ ಕಳೆದಾಗ ಒಂದೊಂದು ತಲೆಯನ್ನು ಕತ್ತರಿಸಿ ಅಗ್ನಿಯಲ್ಲಿ ಹೋಮಮಾಡಿದನು ॥

ಏವಂ ವರ್ಷಸಹಸ್ರಾಣಿ ನವ ತಸ್ಯಾತಿಚಕ್ರಮುಃ ।
ಅರ್ಪಯಂ ದಶಮಂ ಮೌಳಿಂ ಛೇತ್ತುಮೈಚ್ಛತ್ ತತೋ ರುಷಾ ॥೬೬॥

ತತಸ್ತಮಬ್ರುವಂ ಧೃಷ್ಟಂ ದೃಷ್ಟ್ವಾ ಕರ್ಮ ಸುದಾರುಣಮ್ ।
ವರಂ ವೃಣೀಷ್ವ ಮೇ ವತ್ಸ ಯತ್ ತೇ ಮನಸಿ ವರ್ತತೇ "॥೬೪॥

ತತಃ ಪ್ರೋವಾಚ ದುಷ್ಟಾತ್ಮಾ ದೇವಗನ್ಧರ್ವಯೋಗಿಭಿಃ ।
ತ್ವಯಾ ವಿಷ್ಣುವಿಧಿಭ್ಯಾಂ ಚಾಪ್ಯವಧ್ಯತ್ವಂ ಪ್ರದೇಹಿ ಮೇ ॥೬೯॥

ಇತ್ಯುಕ್ತ್ವಾವಜ್ಞಯಾ ಮೌಢ್ಯಾತ್ ನರಾದಿಭ್ಯೋ ನ ಯಾಜಿತವಮ್ ।
ಯದುಕ್ತಂ ತತ್ ತಥಾ ಭೂಯಾತ್ ಇತ್ಯುಕ್ತ್ವಾ ತಂ ವ್ಯಸರ್ಜಯಮ್'॥೭೦॥

ಕುಮ್ಭಕರ್ಣೋ ಜ್ಯೇಷ್ಠವನ್ಮಾಂ ಸರ್ವಾವಧ್ಯತ್ವಮರ್ಥಯ್ ।
ಅಧಿಕಂ ಚಾರ್ಥಯನ್ನಿದ್ರಾಂ ವಞ್ಚಿತೋ ಬ್ರಹ್ಮಣಾ ಮಯಾ ॥೭೧॥

ವಿಭೀಷಣಮಥೋವಾಚ ತಪಸಾರಾಧಿತೋ ವಿಧಿಃ ।
ಪರಿತುಷ್ಟೋಸ್ಮಿ ಧರ್ಮಾತ್ಮನ್ ವರಂ ವರಯ ಸುವ್ರತ ॥೭೨॥

ಹೀಗೆ ಅವನಿಗೆ ಒಂಬತ್ತುಸಾವಿರ ವರುಷಗಳು ಕಳೆದುಹೋದುವು. ಅನಂತರ ಅವನ ಅಷ್ಟಾದರೂ ಸಿದ್ಧಿಯಾಗದೆ ಹೋದುದರಿಂದ ಕುಪಿತನಾಗಿ, ಹತ್ತನೆಯ ತಲೆಯನ್ನೂ ಅಗ್ನಿಯಲ್ಲಿ ಸಮರ್ಪಿಸಲುದ್ಯುಕ್ತನಾಗಿ ಕತ್ತರಿಸುವುದಕ್ಕೆ ಹೊರಟನು ॥೨೭॥

ಎಲೌ ಪಾರ್ವತಿ! ಬಳಿಕ ನಾನು ಅವನ ಅತಿಕ್ರೂರವಾದ ಕರ್ಮವನ್ನು ಕಂಡು, ಅವನಿಗೆ ಪ್ರತ್ಯಕ್ಷನಾಗಿ, ಮಹಾಧೀರನಾದ ಅವನನ್ನು ಕುರಿತು 'ವತ್ಸ! ನಿನ್ನ ಮನಸ್ಸಿನಲ್ಲಿರುವ ವರವನ್ನು ಬೇಡು' ಎಂದು ಹೇಳಿದೆನು ॥೨೮॥

ಬಳಿಕ, ದುಷ್ಟಾತ್ಮನಾದ ಅವನು ನನ್ನನ್ನು ಕುರಿತು 'ಹೇ ಶಂಭೋ! 'ದೇವತೆಗಳಿಂದಲೂ ಗಂಧರ್ವರಿಂದಲೂ ಯೋಗಿಗಳಿಂದಲೂ ನಿನ್ನಿಂದಲೂ ವಿಷ್ಣುವಿನಿಂದಲೂ ಬ್ರಹ್ಮನಿಂದಲೂ ಕೊಯಾಗದಿರುವಂತೆ ವರವನ್ನು ಕೊಡು' ಎಂದು ಪ್ರಾರ್ಥಿಸಿದನು ॥೨೯॥


ಆ ರಾವಣನು ಹೀಗೆ ಕೇಳಿಕೊಂಡು, ಮೂಢತನದಿಂದ ಲಕ್ಷ್ಯವಿಲ್ಲದೆ, ಮನುಷ್ಯಾದಿಗಳಿಂದ ಕೊಲೆ ಬೇಡವೆಂಬುದನ್ನು ಯಾಚಿಸಲಿಲ್ಲ. ನಾನಾದರೋ, ನೀನು ಯಾವುದನ್ನು ಕೇಳಿಕೊಂಯೋ—ಅದು ಹಾಗೆಯೇ ಆಗಲೆಂದು ಹೇಳಿ, ಅವನನ್ನು ಕಳುಹಿಸಿಬಿಟ್ಟೆನು ॥೩೦॥

ಕುಂಭಕರ್ಣನು, ಅಣ್ಣನಂತೆಯೇ ನನ್ನನ್ನು ಕುರಿತು ಯಾರಿಂದಲೂ ಕೊಲೆಯಾಗಬೇವೆಂದು ಪ್ರಾರ್ಥಿಸಿ, ಅವನಿಗಿಂತ ಹೆಚ್ಚಾಗಿ ನಿದ್ರೆಯೊಂದನ್ನು ಪ್ರಾರ್ಥಿಸುವುದಕ್ಕೆ ಉದ್ಯುಕ್ತನಾದನು; ಆಗ ನಾನು ಬ್ರಹ್ಮನದ್ವಾರಾ ಅವನನ್ನು ಮೋಸಪಡಿಸಿದೆನು ॥೩೧॥

ಬಳಿಕ, ತಪಸ್ಸಿನಿಂದ ಪ್ರೀತನಾದ ಬ್ರಹ್ಮನು, ವಿಭೀಷಣನನ್ನು ಕುರಿತು 'ಎಲೈ ಧರ್ಮಾತ್ಮನೆ! ಉತ್ತಮ ವ್ರತಶೀಲನೆ! ನಿನ್ನ ವಿಷಯದಲ್ಲಿ ನಾನು ಸಂತುಷ್ಟನಾದೆನು; ವರವನ್ನು ಪ್ರಾರ್ಥಿಸು' ಎಂದು ಹೇಳಿದನು ॥೩೨॥

ವಿಭೀಷಣಸ್ತತಃ ಪ್ರಾಹ ಧರ್ಮೇ ಮಮ ಮತಿರ್ಭವೇತ್ ।
ಅಶಿಕ್ಷಿತಂ ಚ ಬ್ರಹ್ಮಾಸ್ತ್ರಂ ಭಗವಂ ಪ್ರತಿಭಾತು ಮೇ ॥೩೩॥
ಯಾಯಾ ಮೇ ಜಾಯತೇ ಬುದ್ಧಿಃ ಯೇಷುಯೇಷ್ವಾಶ್ರಮೇಷು ಚ ।
ಸಾಸಾ ಭವತು ಧರ್ಮಿಷ್ಠಾ ತಂತಂ ಧರ್ಮಂ ಚ ಪಾಲಯೇ ॥೩೪॥
ಏವಮುಕ್ತಸ್ತತೋ ಬ್ರಹ್ಮಾ ತಥಾಸ್ತ್ವಿತ್ಯವದತ್ ಪ್ರಭುಃ ।
ತತ್ಕರ್ಮಬುದ್ಧ್ಯಾ ತುಷ್ಟಃ ಸ ಅಮರತ್ವಂ ಚ ದತ್ತವಾ ॥೩೫॥
ಏವಂ ಲಬ್ಧವರಾಃ ಸರ್ವೇ ಭ್ರಾತರೋ ದೀಪ್ತತೇಜಸಃ ।
ಲಙ್ಕಾಮಧ್ಯಾಸ್ತ ನಗರೀಂ ರಾವಣೋ ರಾಕ್ಷಸೈರ್ವೃತಃ ॥೩೬॥

ಇತಿ ಶ್ರೀ ಬಾಲಕಾಣ್ಡೇ ರಾವಣಕುಮ್ಭಕರ್ಣಾದ್ಯುತ್ಪತ್ತಿ ತತ್ತಪಶ್ಚರಣ
ವರ್ಣನಂ ನಾಮ ಏಕಾದಶಃ ಸರ್ಗಃ.



ಬಳಿಕ ವಿಭೀಷಣನು 'ಭಗವಂತನೆ! ನನಗೆ ಸರ್ವದಾ ಧರ್ಮದಲ್ಲಿಯೇ ಬುದ್ಧಿಯಿರಬೇಕು. ಗುರುಮುಖದಿಂದ ಅಭ್ಯಾಸವಿಲ್ಲದೆಯೇ ನನಗೆ ಬ್ರಹ್ಮಾಸ್ತ್ರವು ಸಿದ್ಧಿಸಬೇಕು. ನನಗೆ ಯಾವ ಯಾವ ಆಶ್ರಮಧರ್ಮಗಳಲ್ಲಿ ಯಾವಯಾವ ಬುದ್ಧಿಯುದಯಿಸುವುದೋ, ಅದೆಲ್ಲವೂ ಧರ್ಮಯುಕ್ತವಾಗಿರಬೇಕಲ್ಲದೆ, ಧರ್ಮವಿರುದ್ಧವಾಗಿರಕೂಡದು. ನಾನು ಆಯಾ ಧರ್ಮಗಳನ್ನೆಲ್ಲ ಪರಿಪಾಲಿಸುತ್ತಿರಬೇಕು. ಇಂತಹ ವರವನ್ನು ನನಗೆ ದಯೆವಾಲಿಸು' ಎಂದು ಬ್ರಹ್ಮನನ್ನು ಕುರಿತು ಪ್ರಾರ್ಥಿಸಿದನು ॥೩೩-೩೪॥

ಬಳಿಕ, ಅವನಿಂದ ಹೀಗೆ ಪ್ರಾರ್ಥಿಸಲ್ಪಟ್ಟ ಸರ್ವಶಕ್ತನಾದ ಬ್ರಹ್ಮನು, ಹಾಗೆಯೇ ಆಗಲೆಂದು ಹೇಳಿದನು. ಮತ್ತು, ಅವನ ಸತ್ಕರ್ಮದಿಂದಲೂ ಧರ್ಮಬುದ್ಧಿಯಿಂದಲೂ ವಿಶೇಷ ಸಂತುಷ್ಟನಾಗಿ, ಅವನಿಗೆ ಚಿರಂಜೀವಿತ್ವವನ್ನೂ ಕೊಟ್ಟನು ॥೩೫॥

ಹೀಗೆ ಆ ಸಹೋದರರೆಲ್ಲರೂ ವರಗಳನ್ನು ಪಡೆದವರಾಗಿ, ಮಹಾತೇಜಸ್ವಿಗಳಾದರು. ಬಳಿಕ, ರಾವಣನು ರಾಕ್ಷಸ ಸಮೂಹಪರಿವೃತನಾಗಿ ಲಂಕಾಪಟ್ಟಣವನ್ನಾಶ್ರಯಿಸಿದನು ॥೩೬॥

ಇದು ಬಾಲಕಾಂಡದಲ್ಲಿ ರಾವಣಕುಂಭಕರ್ಣಾದಿಗಳ ಉತ್ಪತ್ತಿ ಅವರ
ತಪಶ್ಚರಣವರ್ಣನೆಯೆಂಬ ಹನ್ನೊಂದನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ದ್ವಾದಶಃ ಸರ್ಗಃ.

ಶ್ರೀಶಿವಉವಾಚ.

ತತಃ ಶೂರ್ಪಣಖಾಂ ಪ್ರಾದಾತ್ ವಿದ್ಯುಜ್ಜಿಹ್ವಾಯ ರಾವಣಃ ।
ಮಣ್ಡೋದರೀಂ ದಶಗ್ರೀವಃ ಉಪಯೇಮೇ ಮಯಾತ್ಮಜಾಮ್ ॥೧॥
ಮೇಘನಾದಾದಯೋಽಸ್ಯಾಸ್ತ ಮಯಾ ದತ್ತವರಾಃ ಸುತಾಃ ।
ವಜ್ರಾರಾ ಕುಮ್ಭಕರ್ಣೋಽಥಾ ತಜಾಶ್ಚ ಕುಮ್ಭನಿಕುಮ್ಭಕೌ ।
ವಿಭೀಷಣೋಽಥಾ ಸರಮಾ ತತ್ಸುತಾ ತ್ರಿಜಟಾ ಸತೀ ॥೨॥
ತತ್ಸೇನಾಸೀಃ ಪ್ರಹಸ್ತೋಽಭೂತ್ ಮಾರೀಚಾದ್ಯಾಶ್ಚ ಮನ್ತ್ರಿಣಃ ।
ಸಹಸ್ರಾಕ್ಷೌಹಿಣೀ ಸೇನಾ ದಶಗ್ರೀವಸಮಾ ಯುಧಿ ॥೩॥
ಏವಂ ಪುತ್ರೈಶ್ಚ ಪೌತ್ರೈಶ್ಚ ಲಬ್ಧೈಃಶಃ ಪೀಡಯನ್ ಮಹೀಮ್ ॥೪॥
ಜಿತ್ವಾ ಸಕಲದಿಕ್ಪಾಲಾನ್ ತಾನ್ ಕೃತ್ವಾ ಮೂಲಕಿಙ್ಕರಾನ್ ।
ಧಿಕ್ಕೃತ್ಯ ಮಾಂ ವಿಧಿಂ ವಿಷ್ಣುಂ ತ್ರೈಲೋಕ್ಯಂ ವಶಮಾನಯತ್ ॥೫॥

ಬಾಲಕಾಂಡದಲ್ಲಿ ಹನ್ನೆರಡನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಬಳಿಕ ಆ ರಾವಣನು ತನ್ನ ತಂಗಿಯಾದ ಶೂರ್ಪಣಖೆಯನ್ನು ವಿದ್ಯುಜ್ಜಿಹ್ವನೆಂಬವನಿಗೆ ಕೊಟ್ಟನು. ಆ ದಶಗ್ರೀವನಾದ (ಹತ್ತು ಕುತ್ತಿಗೆಯುಳ್ಳ) ರಾವಣನು, ಮಯಾಸುರನ ಮಗಳಾದ ಮಂಡೋದರಿಯನ್ನು ಮದುವೆ ಮಾಡಿಕೊಂಡನು ॥೧॥

ಈ ರಾವಣನಿಗೆ ಮೇಘನಾದ (ಇಂದ್ರಜಿತು) ಮೊದಲಾದ ಮಕ್ಕಳು ಜನಿಸಿದರು; ಇವರು ನನ್ನಿಂದ ಬೇಕಾದ ವರವನ್ನೆಲ್ಲ ಪಡೆದುಕೊಂಡರು. ಕುಂಭಕರ್ಣನು ವಜ್ರಾರೆಯೆಂಬವಳನ್ನು ಮದುವೆ ಮಾಡಿಕೊಂಡನು. ಅವನಿಗೆ ಕುಂಭ ನಿಕುಂಭರೆಂಬ ಇಬ್ಬರು ಮಕ್ಕಳು ಹುಟ್ಟಿದರು. ವಿಭೀಷಣನು ಸರಮೆಯೆಂಬವಳನ್ನು ಮದುವೆ ಮಾಡಿಕೊಂಡನು. ಅವನಿಗೆ ಮಹಾಶ್ರೇಷ್ಠಳಾದ ತ್ರಿಜಟೆಯೆಂಬ ಮಗಳು ಜನಿಸಿದಳು ॥೨॥

ಆ ರಾವಣನಿಗೆ, ಪ್ರಹಸ್ತನೆಂಬವನು ಸೇನಾಪತಿಯಾಗಿಯೂ, ಮಾರೀಚ ಮೊದಲಾದವರು ಮಂತ್ರಿಗಳಾಗಿಯೂ ಇದ್ದರು. ಮತ್ತು ಯುದ್ಧದಲ್ಲಿ ರಾವಣನಿಗೆ ಸಮಾನವಾದ ಒಂದು ಸಹಸ್ರ ಅಕ್ಷೌಹಿಣೀಸಂಖ್ಯಾಕವಾದ ಸೇನೆಯು ಸಿದ್ಧವಾಗಿದ್ದಿತು ॥೩॥

ಹೀಗೆ ಆ ಲಂಕಾಧಿಪತಿಯಾದ ರಾವಣನು, ಪುತ್ರರಿಂದಲೂ ಪೌತ್ರರಿಂದಲೂ ಪರಿವೃತನಾಗಿ, ಋಷಿಗಳನ್ನು ಪೀಡಿಸುತ, ಸಮಸ್ತ ದಿಕ್ಪಾಲಕರನ್ನೂ ಗೆದ್ದು, ಅವರನ್ನು ಮುಖ್ಯಸೇವಕರನ್ನಾಗಿ ಮಾಡಿಕೊಂಡು, ನನ್ನನ್ನೂ ಬ್ರಹ್ಮನನ್ನೂ ವಿಷ್ಣುವನ್ನೂ ಧಿಕ್ಕರಿಸಿ, ಮೂರು ಲೋಕವನೂ ವಶಪಡಿಸಿಕೊಂಡಿದ್ದನು ॥೪-೫॥

ಪೀಡಿತಾಸ್ತೇನ ತೇ ದೇವಾಃ ಬ್ರಹ್ಮಾಣಂ ಶರಣಂ ಗತಾಃ ।
ಬ್ರಹ್ಮಾ ಮದನ್ತಿಕಂ ಪ್ರಾಪ್ತಃ ಸಹ ಸರ್ವೈಃ ಸುರಾದಿಭಿಃ ॥೬॥
ಅಹಂ ಬ್ರಹ್ಮಾ ಚ ದೇವಾಶ್ಚ ಸಿದ್ಧಚಾರಣಕಿನ್ನರಾಃ ।
ಕ್ಷೀರಾಬ್ಧೇಸ್ತೀರಮಾಸಾದ್ಯ ಕೃತವನ್ತಸ್ತಪೋ ಮಹತ್ ॥೭॥
ಏವಂ ಕತಿಪಯೇ ಕಾಲೇ ಸರ್ವೇಷಾಂ ತಪಸೋನ್ತೇತಃ ।
ಹರ್ಷಗದ್ಗದಯಾ ವಾಚಾ ಧಾತಾ ಸ್ತೋತುಂ ಪ್ರಚಕ್ರಮೇ ॥೮॥
ನಮೋಸ್ತು ತೇ ಮಹಾಯೋಗಿನ್ ಪ್ರಾಣಬುದ್ಧೀನ್ದ್ರಿಯಾತ್ಮಭಿಃ ।
ಯಚ್ಛನ್ತ್ಯಸೇ ಕರ್ಮಪಾಶಾತ್ ಹೃದಿ ನಿತ್ಯಂ ಮುಮುಕ್ಷುಭಿಃ ॥೯॥
ಮಾಯಯೈವ ಗುಣಮಯ್ಯಾ ತ್ವಂ ಸೃಜಸ್ಯವಸಿ ಲುಮ್ಪಸಿ ।
ಜಗತ್ ತೇನೈವ ನ ತೇ ಲೇಪಃ ಸ್ವಾನನ್ದಾನುಭವಾತ್ಮನಃ ॥೧೦॥
ತಥಾ ಸಿದ್ಧಿರ್ನ ದುಷ್ಟಾನಾಂ ದಾನಾಧ್ಯಯನಕರ್ಮಭಿಃ ।
ಶುದ್ಧಾತ್ಮನಾಂ ತೇ ಯಶಸಿ ಶ್ರದ್ಧಾಭಕ್ತಿಮತಾಂ ಯಥಾ ॥೧೧॥
ಅತಸ್ತ್ವಾಙ್ಘ್ರಿರ್ಮೇ ದೃಷ್ಟಿಃ ಚಿತ್ತದೋಷಾಪನುತ್ತಯೇ ।
ಸ್ಮರತೇ ಹೃದಯೇ ನಿತ್ಯಂ ಮುನಿಭಿಃ ಸಾತ್ವತೈರ್ವೃತಃ ।

ಅವನಿಂದ ಪೀಡಿತರಾದ ಆ ದೇವತೆಗಳು, ಬ್ರಹ್ಮನನ್ನು ಶರಣುಹೊಕ್ಕರು. ಬ್ರಹ್ಮನು ಸಮಸ್ತ ದೇವಾದಿಗಳೊಡಗೂಡಿ ನನ್ನ ಸವಿಾಪಕ್ಕೆ ಬಂದನು ॥೬॥

ಬಳಿಕ, ನಾನೂ ಬ್ರಹ್ಮನೂ ದೇವತೆಗಳೂ ಸಿದ್ಧರೂ ಚಾರಣರೂ ಕಿನ್ನರರೂ ಕೂಡ, ಕ್ಷೀರಸಮುದ್ರತೀರಕ್ಕೆ ಹೋಗಿ, ಅತಿ ಮಹತ್ತಾದ ತಪಸ್ಸನ್ನು ಮಾಡಿದೆವು ॥೭॥

ಹೀಗೆ ಕೆಲವುಕಾಲ ಕಳೆಯುಲಾಗಿ, ಸಮಸ್ತರೂ ತಪಸು ಮಾಡಿ ಮುಗಿದ ಬಳಿಕ, ಬ್ರಹ್ಮನು, ಹರ್ಷದಿಂದ ಗದ್ಗದವಾದ ವಾಣಿನಿಂದ ಸ್ತುತಿಸಲುಪಕ್ರಮಿಸಿದನು ॥೮॥

ಬ್ರಹ್ಮನು ಮಾಡಿದ ಸ್ತೋತ್ರಪ್ರಕ್ರಮವೇನೆಂದರೆ:—ಹೇ ಮಹಾಯೋಗಿನ್! ಕರ್ಮಪಾಶದ ದೆಸೆಯಿಂದ ಬಿಡುಗಡೆಹೊಂದಲೆಳಸುವ ಮಹಾತ್ಮರುಗಳು, ಯಾವ ನಿನ್ನನ್ನು, ಪ್ರಾಣ ಬುದ್ಧಿ ಇಂದ್ರಿಯ ಮುಂತಾದ ಸಕಲ ರೂಪಗಳಿಂದ ಧ್ಯಾನಮಾಡುವರೋ, ಅಂತಹ ನಿನಗೆ ನಮಸ್ಕಾರವು ॥೯॥

ನಿರ್ಗುಣನಾದ ನೀನು, ತ್ರಿಗುಣಾತ್ಮಿಕಳಾದ ಮಾಯೆಯಿಂದ, ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವೆ. ಅದುಕಾರಣ, ಆತ್ಮನಂದಾನುಭವರೂಪನಾಗಿರುವ ನಿನಗೆ, ಯಾವ ಲೇಪವೂ ಇಲ್ಲ ॥೧೦॥

ಶುದ್ಧಾತ್ಮರಾಗಿ ನಿನ್ನ ಗುಣಶ್ರವಣದಲ್ಲಿ ಶ್ರದ್ಧಾಭಕ್ತಿಯುಳ್ಳವರಾಗಿರತಕ್ಕವರಿಗೆ ಸಿದ್ಧಿಯು ಸುಲಭವಾಗಿರುವಂತೆ, ದಾನವನ್ನೂ ವೇದಾಭ್ಯಾಸಾದಿಗಳನ್ನೂ ಮಾಡುತ ನಿನ್ನ ಗುಣಶ್ರವಣದಲ್ಲಿ ಶ್ರದ್ಧಾಭಕ್ತಿಯಿಲ್ಲದ ದುಷ್ಟರಿಗೆ ಸಿದ್ಧಿಯು ಸುಲಭವಲ್ಲ ॥೧೧॥

ಅದುಕಾರಣ, ಸಾತ್ವಿಕಶಿರೋಮಣಿಗಳಾದ ಮಹರ್ಷಿಗಳೆಲ್ಲರೂ ವರಿಸಶಕ್ಯವಾದ ನಿನ್ನ ಪಾದಕಮಲವು, ನನ್ನ ಚಿತ್ತದೋಷನಿವಾರಣಕ್ಕೋಸ್ಕರ ನನ್ನಿಂದ ದರ್ಶನಮಾಡಲ್ಪಟ್ಟು,

ರುದಾದ್ಯೈಶ್ಚಾತ್ಮಸಿದ್ಧ್ಯರ್ಥಂ ಅಸ್ಮಾಭಿಃ ಪೂರ್ವಸೇವಿತಃ ॥೧೦॥
ತವಾಪ್ಯಪೂಜಾನಿರ್ಮಾಲ್ಯತುಲಸೀಮಾಲಯಾ ವಿಭೋ ।
ಸ್ಪರ್ಧತೇ ವಕ್ಷಸಿ ಪದಂ ಲಬ್ಧ್ವಾಪಿ ಶ್ರೀಃ ಸಪತ್ನಿವತ್ ॥೧೧॥
ಅತಸ್ತ್ವತ್ಪಾದಭಕ್ತೇಷು ತವ ಪ್ರೀತಿಃ ಶ್ರಿಯೋಧಿಕಾ ।
ಭಕ್ತಿಮೇವಾಭಿವಾಞ್ಛಂತಿ ತ್ವದ್ಭಕ್ತಾಃ ಸಾರವೇದಿನಃ ॥೧೪॥
ಅತಸ್ತ್ವತ್ಪಾದಕಮಲೇ ಭಕ್ತಿರೇವ ಸದಾಸ್ತು ಮೇ ।
ಸಂಸಾರಾಮಯತಪ್ತಾನಾಂ ಭೇಷಜಂ ಭಕ್ತಿರೇವ ತೇ ॥೧೫॥
ಇತಿ ಸ್ತುವತಿ ದೇವೇಶೇ ಮಯಾ ಚ ಋಷಿಭಿಃ ಸಹ ।
ತತಃ ಪ್ರಾದುರಭೂಜ್ಜ್ಯೋತಿಃ ದುರ್ನಿರೀಕ್ಷ್ಯಂ ದುರಾಸದಮ್ ॥೧೬॥
ತೇಜಸ್ಯೇವ ತತಸ್ತಸ್ಮಿನ್ ಕೋಟ್ಯರ್ಕಸಮವಿಗ್ರಹಃ ।
ಬ್ರಹ್ಮವಿಷ್ಣುಮಹೇಶಾನಕಾರಣಾತ್ಮಾ ಪರಾತ್ಪರಃ ॥೧೭॥
ನವನೀಲಾಮ್ಬುದಶ್ಯಾಮಃ ಸರ್ವಾಭರಣಭೂಷಿತಃ ।
ಕಿರೀಟಹಾರಕೇಯೂರರತ್ನಕುಂಡಲಮಂಡಿತಃ ।
ಸನ್ತಪ್ತಕಾಞ್ಚನಪ್ರಖ್ಯಪೀತವಾಸೋಯುಗಾನ್ವಿತಃ ॥೧೮॥

ಸರ್ವದಾ ನನ್ನ ಹೃದಯದಲ್ಲಿ ಸ್ಫುರಿಸುತಿರುವುದು. ರುದ್ರನೇ ಮೊದಲಾಗಿರುವ ನಾವೆಲ್ಲರೂ ಆತ್ಮ ಜ್ಞಾನಸಿದ್ಧ್ಯರ್ಥವಾಗಿ, ನಿನ್ನ ಈ ಪಾದಕಮಲವನ್ನು ಮೊದಲಿಂದಲೂ ಸೇವಿಸಿಕೊಂಡಿರುವೆವು ॥

ಎಲ್ಲೆ ವಿಭುವೆ! ಜಗನ್ಮಾತೆಯಾದ ಆ ಮಹಾಲಕ್ಷ್ಮಿಯು, ನಿನ್ನ ಹೃದಯಕಮಲದಲ್ಲಿ ಆವಾ ಸವನ್ನು ಹೊಂದಿದವಳಾಗಿದ್ದರೂ, ನಿನ್ನ ಪಾದಪೂಜೆ ಮಾಡಿ ನಿರ್ಮಾಲ್ಯವಾದ ತುಲಸೀಮಾಲಿಕೆ ಯೊಡನೆ ಸಪತ್ನಿ(ಸವತಿ)ಯಂತೆ ಸ್ಪರ್ಧೆಮಾಡುತಿರುವಳು. (ಆ ತುಳಸೀಮಾಲಿಕೆಯಷ್ಟು ಗೌರವವು ತನಗಿಲ್ಲದೆ ಹೋಯ್ತೆಂದು, ಅದಕ್ಕಾಗಿ ಹೋರಾಡುವಳೆಂದು ಭಾವವು) ॥೧೩॥

ಅದುಕಾರಣ, ನಿನಗೆ ಲಕ್ಷ್ಮಿಯಲ್ಲಿರುವುದಕ್ಕಿಂತಲೂ ಹೆಚ್ಚಾಗಿ ನಿನ್ನ ಪಾದಭಕ್ತರಲ್ಲಿ ಪ್ರೀತಿ ಯಿರುವುದು. ಸಾರವನ್ನು ಚೆನ್ನಾಗಿ ತಿಳಿದುಕೊಂಡಿರುವ ನಿನ್ನ ಭಕ್ತರು, ನಿನ್ನಲ್ಲಿ ಭಕ್ತಿಯೊಂ ದನ್ನೇ ಅಪೇಕ್ಷಿಸುವರು ॥೧೪॥

ಆದುದರಿಂದ, ನನಗೆ ಸರ್ವದಾ ನಿನ್ನ ಪಾದಕಮಲದಲ್ಲಿ ಭಕ್ತಿಯೊಂದೇ ಇರಲಿ. ಸಂಸಾ ರವೆಂಬ ರೋಗದಿಂದ ತಪ್ತರಾದವರಿಗೆ, ನಿನ್ನಲ್ಲಿ ಭಕ್ತಿಯೇ ಪರಮೌಷಧವಾಗುವುದು ॥೧೫॥

ಈರೀತಿಯಾಗಿ ಆ ಬ್ರಹ್ಮನು ನನ್ನೊಡನೆಯೂ ಋಷಿಗಳೊಡನೆಯೂ ಸ್ತೋತ್ರಮಾಡಿ ದಬಳಿಕ, ನೋಡುವುದಕ್ಕೂ ಹತ್ತಿರ ಹೋಗುವುದಕ್ಕೂ ಅಸಾಧ್ಯವಾದ ಒಂದಾನೊಂದು ತೇಜಸ್ಸು ಪ್ರಾದುರ್ಭವಿಸಿತು ॥೧೬॥

ಅನಂತರ ಆ ತೇಜಸ್ಸಿನೊಳ್ಗೆಯೇ, ಸೂರ್ಯಕೋಟಿ ಸಮಶರೀರನಾಗಿಯೂ ಬ್ರಹ್ಮ ವಿಷ್ಣು ಮಹೇಶ್ವರರಿಗೆ ಕಾರಣಭೂತನಾಗಿಯೂ ಪರಾತ್ಪರನಾಗಿಯೂ ಇರುವ ಶ್ರೀಮನ್ನಾರಾಯಣನು ಆವಿರ್ಭವಿಸಿದನು ॥೧೭॥

ಆವನು, ಹೊಸದಾದ ನೀಲಮೇಘದಂತೆ ಶ್ಯಾಮಲನಾಗಿಯೂ, ಸರ್ವಾಭರಣಭೂಷಿತನಾ ಗಯೂ, ಕಿರೀಟ ಹಾರ ಕೇಯೂರ ರತ್ನಕುಂಡಲಗಳಿಂದ ಅಲಂಕೃತನಾಗಿಯೂ, ಪುಟಹಾಕಿದ ಚಿನ್ನಕ್ಕೆ ಸಮಾನವಾಗಿ ಪ್ರಕಾಶಿಸುತಿರುವ ಪೀತಾಂಬರಯುಗ್ಮದಿಂದ ಯುಕ್ತನಾಗಿಯೂ ಇದ್ದನು ॥೧೮॥

ತೇಜೋಮಯಃ ಸೋಮಸೂರ್ಯವಿದ್ಯುದುಲ್ಕಾಗ್ನಿಕೋಟಿಯುಃ ।
ವಿಳಿತ್ವಾವಿರ್ಭವನ್ತೀವ ಪ್ರಾದುರಾಸೀತ್ ಪುರಃ ಪ್ರಭುಃ ॥೧೯॥
ಸ್ತಮ್ಭೀಭೂತಾಸ್ತತಃ ಸರ್ವೇ ಕ್ಷಣಂ ತಸ್ಥುರ್ವಿಮೋಹಿತಾಃ ।
ತುಷ್ಟುವುರ್ದಿವಿಜಾಃ ಸರ್ವೇ ಬ್ರಹ್ಮಣಾ ಚ ಮಯಾ ಸಹ ॥೨೦॥

ದೇವಾಊಚುಃ.

ತ್ವಮೇವ ವಿಶ್ವತಶ್ಚಕ್ಷುಃ ವಿಶ್ವತೋಮುಖಉಚ್ಯಸೇ ।
ವಿಶ್ವತೋಬಾಹುರೇಕಃ ಸನ್ ವಿಶ್ವತಸ್ತ್ವಂ ತಥಾ ಪರಃ ॥೨೧॥
ಜನಯನ್ ಭೂರ್ಭುವೋಲೋಕಾನ್ ಸ್ವರ್ಲೋಕಂ ಸರ್ವಶಾಸ್ತ್ರಕೃತ್ ।
ಅಕ್ಷ್ಣಿಭ್ಯಾಮಪಿ ಬಾಹುಭ್ಯಾಂ ಕರ್ಣಾಭ್ಯಾಂ ಭುವನತ್ರಯಮ್ ।
ಪದ್ಭ್ಯಾಂ ಚ ನಾಸಿಕಾಭ್ಯಾಂ ಚ ಸರ್ವಂ ಸರ್ವತ್ರ ಪಶ್ಯಸಿ ॥೨೨॥
ಸಮಾಧತ್ಸೇ ಶೃಣೋಷ್ಯೇತತ್ ಸರ್ವಂ ಗಚ್ಛಸಿ ಸರ್ವದೃಕ್ ।
ಜಿಘ್ರಸ್ಯೇವ ನ ತೇ ಕಿಂಚಿತ್ ಅವಿಜ್ಞಾತಂ ಪ್ರಭೋಸ್ತಿ ಹಿ ॥೨೩॥

ಕೇವಲ ತೇಜೋಮಯನಾಗಿದ್ದ ಆ ಪ್ರಭುವು, ಕೋಟಿಸಂಖ್ಯಾಕವಾಗಿರುವ ಚಂದ್ರನೂ ಸೂರ್ಯನೂ ಮಿಂಚೂ ಅಗ್ನಿಯೂ ಒಟ್ಟಾಗಿ ಸೇರಿಕೊಂಡು ಉದಯಿಸುತಿರುವುವೋ ಎಂಬಂತೆ, ಆ ದೇವತೆಗಳ ಮುಂದುಗಡೆ ಪ್ರಾದುರ್ಭವಿಸಿದನು ॥೧೯॥

ಬಳಿಕ, ಸಮಸ್ತ ದೇವತೆಗಳೂ ಒಂದು ಕ್ಷಣಕಾಲ ಸ್ತಂಭೀಭೂತರಾಗಿ ಮೂಢರಂತೆ ನಿಂತುಬಿಟ್ಟರು. ಅನಂತರ, ಬ್ರಹ್ಮನೊಡನೆಯೂ ನನ್ನೊಡನೆಯೂ ಸೇರಿಕೊಂಡು ಸ್ತೋತ್ರ ಮಾಡಿದರು ॥೨೦॥

ಆ ದೇವತೆಗಳು ಸ್ತೋತ್ರಮಾಡಿದುದು ಹೇಗೆಂದರೆ :—

ಹೇ ಭಗವಂ! ನೀನು ಒಬ್ಬನೇ ಆಗಿದ್ದರೂ, (೧) ವಿಶ್ವತಶ್ಚಕ್ಷುವೆಂಬುದಾಗಿಯೂ, ವಿಶ್ವತೋಮುಖನೆಂಬುದಾಗಿಯೂ, ವಿಶ್ವತೋಬಾಹುವೆಂಬುದಾಗಿಯೂ, ವಿಶ್ವವ್ಯಾಪಿಯೆಂಬುದಾಗಿಯೂ, ಹೀಗಿದ್ದರೂ ಈ ವಿಶ್ವಕ್ಕಿಂತ ಪರತರನೆಂಬುದಾಗಿಯೂ ಹೇಳಲ್ಪಡುತ್ತೀಯೆ ॥೨೧॥

ಹೇ ಸ್ವಾಮಿ! ನೀನು, ಭೂಲೋಕ ಭುವರ್ಲೋಕ ಸುವರ್ಲೋಕಗಳನ್ನು ಸೃಷ್ಟಿಮಾಡತಕ್ಕವನಾಗಿಯೂ, ಸರ್ವಶಾಸ್ತ್ರಕರ್ತನಾಗಿಯೂ ಇರುವೆ. ನೇತ್ರಗಳಿಂದ ಸಮಸ್ತ ಲೋಕತ್ರಯವನ್ನು ನೋಡತಕ್ಕವನೂ, ಬಾಹುಗಳಿಂದ ಕಾವಾಡತಕ್ಕವನೂ, ಕಿವಿಗಳಿಂದ ಕೇಳತಕ್ಕವನೂ, ಕಾಲುಗಳಿಂದ ಸಂಚರಿಸತಕ್ಕನೆನೂ, ನಾಸಿಕೆಯಿಂದ ವಾಸನೆ ನೋಡತಕ್ಕವನೂ ನೀನೇಯೆ ॥೨೨॥

ನೀನು ಸರ್ವವನ್ನೂ ಸಮಾಧಾನಪಡಿಸುವೆ; ಸರ್ವವನ್ನೂ ಕೇಳುವೆ; ಸರ್ವವನ್ನೂ ಹೊಂದುವೆ; ಸರ್ವವನ್ನೂ ನೋಡುವೆ; ಸರ್ವವನ್ನೂ ಆಘ್ರಾಣಿಸುವೆ. ಹೇ ಪ್ರಭೋ! ನಿನಗೆ ಗೊತ್ತಾಗದಿರುವುದು ಯಾವುದೂ ಇಲ್ಲವೇ ಇಲ್ಲವಷ್ಟೆ! ॥೨೩॥

---

(೧) ಎಲ್ಲಾಕಡೆಯಲ್ಲಿಯೂ ಕಣ್ಣುಳ್ಳವನು ವಿಶ್ವತೋಮುಖನು. ಹೀಗೆಯೇ, ವಿಶ್ವತೋಮುಖಾದಿ ಶಬ್ದಗಳಿಗೂ ಅರ್ಥ ಹೇಳಬೇಕು.

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ತ್ವಮೇವ ಸನು ಕೇಶವ ।
ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥೬॥
ಪೃಥಿವ್ಯಪ್ತೇಜಸಾಂ ರೂಪಂ ಮರುದಾಕಾಶಯೋರಪಿ ।
ಕಾರ್ಯಕರ್ತಾ ಕೃತಿರ್ಯೋನಿಃ ಕಾರಣಂ ತ್ವಂ ಹಿ ಕೇವಲಮ್ ॥೭॥
ಅಣೋರಣೀಯಾನ್ ಮಹತೋ ಮಹೀಯಾನ್ ಮಧ್ಯತಃ ಸ್ವಯಮ್ ।
ಮಧ್ಯೇಽಸಿ ನಿರ್ವಿಕಲ್ಪೋಽಸಿ ನಿರ್ವಿಕಾರೋಽಸಿ ನಿರ್ಮಲಃ ॥೮॥
ಮನೋವಾಚಾಮಗಮ್ಯತ್ವಾತ್ ಕಸ್ತ್ವಾಂ ಸ್ತೋತುಮಗಚ್ಛತಿ ॥೯॥
ಏವಮಾದಿಬಹುಸ್ತೋತ್ರೈಃ ಸ್ತುತಃ ಸ ಪರಮೇಶ್ವರಃ ।
ವೈದಿಕೈಃ ಕೃಪಯಾ ವಿಷ್ಣುಃ ಇದಮುಸ್ಮಾನಥಾಬ್ರವೀತ್ ॥೧೦॥

ಶ್ರೀ ಭಗವಾನುವಾಚ.

ಸ್ತುತಸ್ತುಷ್ಟೋಽಸ್ಮಿ ದೇವೇಶಾಃ ಉಗ್ರೇಣ ತಪಸಾಽನಘಾಃ ।
ವೃಣೀಧ್ವಂ ಯದಭೀಷ್ಟಂ ವೋ ದಾಸ್ಯಾಮ್ಯದ್ಯಾಪಿ ಸುರ್ದುರ್ಲಭಮ್ ॥೧೧॥

ದೇವಾಊಚುಃ.

ಸರ್ವಜ್ಞಃ ಸರ್ವಸಾಕ್ಷೀ ತ್ವಂ ಸರ್ವೇಷಾಂ ಹೃದ್ಯವಸ್ಥಿತಃ ।

ಹೇ ಕೇಶವ! ಬ್ರಹ್ಮನೂ ವಿಷ್ಣುವೂ ರುದ್ರನೂ ನೀನೇಯೆ. ಸಹಸ್ರ ಶಿರಸ್ಸಾಗಿಯೂ ಸಹಸ್ರ ನೇತ್ರನಾಗಿಯೂ ಸಹಸ್ರಚರಣನಾಗಿಯೂ ಇರುವ ಪುರುಷನೂ ನೀನೇ ॥೬॥

ಪೃಥಿವಿ ಅಪ್ಪು ತೇಜಸ್ಸು ವಾಯು ಆಕಾಶ ಎಂಬ ಪಂಚಭೂತಗಳ ರೂಪವೂ ನೀನೇಯೆ. ಕಾರ್ಯವನ್ನು ಮಾಡತಕ್ಕವನೂ, ಅದನ್ನು ಮಾಡುವಿಕೆಯೂ, ಅದರ ಫಲವನ್ನು ಕೊಡುವ ದೈವವೂ, ಅದಕ್ಕೆ ಹೇತುವೂ ನೀನೇಯೆ. ಅದರೂ ನೀನು ಕೇವಲಾತ್ಮಕನಾಗಿರುತ್ತೀಯೆ ॥೭॥

ಹೇ ಭಗವಂ! ನೀನು, ಅಣುವಿಗಿಂತ ಅಣುವಾಗಿಯೂ, ಮಹತ್ತಿಗಿಂತ ಮಹತ್ತಾಗಿಯೂ, ಮಧ್ಯದಲ್ಲಿ ಮಧ್ಯನಾಗಿಯೂ ಇರುವೆ. ನಿರ್ವಿಕಲ್ಪನಾಗಿಯೂ, ನಿರ್ವಿಕಾರನಾಗಿಯೂ, ನಿರ್ಮಲನಾಗಿಯೂ ಇರುವವನೂ ನೀನೇಯೆ. ಹೇ ದೇವ! ನೀನು ಮನಸ್ಸಿಗೂ ವಾಕ್ಯಿಗೂ ಅಗಮ್ಯನಾಗಿರುವುದರಿಂದ, ನಿನ್ನ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಯಲು ಯಾರು ಸಮರ್ಥರಾದಾರು? ॥೮॥

ಎಲೌ ವಾರ್ವತಿ! ಇತ್ಯಾದಿರೀತಿಯಾಗಿ ವೇದಮುಖವಾದ ಅನೇಕ ಸ್ತೋತ್ರಗಳಿಂದ ಸ್ತುತಿಸಲ್ಪಟ್ಟ ಆ ಪರಮೇಶ್ವರನಾದ ಶ್ರೀಮನ್ನಾರಾಯಣನು, ಒಳಕ ನಮ್ಮಗಳನ್ನು ಕುರಿತು ಹೀಗೆ ಹೇಳಿದನು ॥೯॥

ಶ್ರೀ ಭಗವಂತನು ಹೇಳಿದುದೇನೆಂದರೆ.—

ಎಲೈ ದೇವಶ್ರೇಷ್ಠರಾ! ನಿಮ್ಮಗಳ ಸ್ತೋತ್ರದಿಂದಲೂ, ನಿಮ್ಮಗಳ ತಪಸ್ಸಿನಿಂದಲೂ, ನಾನು ಸಂತೋಷಪಟ್ಟವನಾದೆನು. ನೀವು ನಿಮಗೆ ಇಷ್ಟವಾದ ವರವನ್ನು ಕೇಳಿಕೊಳ್ಳಿರಿ. ಅದು ಎಷ್ಟು ದುರ್ಲಭವಾಗಿದ್ದರೂ ನಾನು ಕೊಡುವೆನು ॥೧೧॥

ಇದನ್ನು ಕೇಳಿ ದೇವತೆಗಳು ವ್ಯಾಧಿಸಿಕೊಳ್ಳುವರು:—

ಹೇ ಭಗವಂ! ನೀನು—ಸರ್ವಜ್ಞನು; ಸರ್ವಸಾಕ್ಷಿಯು; ಸರ್ವರ ಹೃದಯದಲ್ಲಿಯೂ ನೆಲೆ

ತ್ವಮೇವ ವೇತ್ಸಿ ನಃ ಕಾರ್ಯಂ ಸುಖಂ ದುಃಖಂ ಸ್ವರೂಪತಃ ॥೩೦॥
ತಥಾಪಿ ತದ್ವದಿಷ್ಯಾವೋ ಯದ್ಭಯಂ ನೋನುವರ್ತತೇ ।
ಮಹತ್ಸ್ವಪಿ ಚ ಕಾರ್ಯೇಷ್ವಮೂ ದೇವಾನಾಂ ತ್ವಂ ಪರಾ ಗತಿಃ ॥೩೧॥
ರಾವಣೋ ನಾಮ ದುರ್ವೃತ್ತೋ ರಾಕ್ಷಸೋ ಲೋಕಕಣ್ಟಕಃ ।
ಪೌಲಸ್ತ್ಯತನಯೋ ವೀರ್ಯಾತ್ ಸರ್ವಾ ನೋ ಬಾಧತೇ ಭೃಶಮ್ ॥೩೨॥
ರಕ್ಷಸಾ ನಸ್ವಸಂ ಛಿನ್ನಂ ವಿಲುಪ್ತಾನಿ ಧನಾನಿ ನಃ ।
ಪಾರಿಜಾತತರುಂ ಪಾಪೀ ನಿನಾಯ ಸ್ವಗೃಹಂ ಬಲಃ ॥೩೩॥
ದಿಕ್ಪಾಲಾಃ ಸರ್ವಥಾ ವೈತೇ ತಸ್ಯ ದಾಸತ್ವಮಾಗತಾಃ ।
ವಾಯುಃ ಸಮ್ಮಾರ್ಜನಪರೋ ರಾವಣಸ್ಯ ಗೃಹಾಜ್ಜಿರೇ ॥೩೪॥
ಗೋಸುವೋದಕಸಂಯುಕ್ತಃ ಪರ್ಜನ್ಯಃ ಪ್ರತರುತಿ ತಃ ।
ಅಗ್ನಿಃ ಪಾತ್ರಕರ್ಮಾಣಿ ಕರೋತ್ಯಸ್ಯ ಸದಾದರಾತ್ ॥೩೫॥
ಅಪಾಕೇ ಛಿನ್ನಪಾಕೇ ಚ ತಾಡನಂ ಕೃಷ್ಣವರ್ತ್ಮನಃ ।
ಹೈಮನ್ತೇ ಶೈಶಿರೇ ಚೈವ ಸೂರ್ಯಃ ಶೈತ್ಯನಿವಾರಕಃ ।
ವಸನ್ತಗ್ರೀಷ್ಮವಾಸೇಷು ಚನ್ದ್ರೋ ಭವತಿ ತಾಪಹಾ ॥೩೬॥

ಸಿರತಕ್ಕವನು. ನಮ್ಮಗಳ ಕಾರ್ಯವನ್ನೂ, ನಮ್ಮ ಸುಖದುಃಖಗಳನ್ನೂ, ನೀನೇ ಯಥಾವಸ್ಥಿತವಾಗಿ ತಿಳಿದಿರುವೆ ॥೩೦॥

ಆದರೂ, ಯಾವುದರಿಂದ ನಮ್ಮಗಳಿಗೆ ಭಯವು ಸರ್ವದಾ ಉಂಟಾಗಿರುವುದೋ, ಅದನ್ನು ನಿನಗೆ ಹೇಳುವೆವು. ಎಂತಹ ದೊಡ್ಡ ಕೆಲಸಗಳಲ್ಲಿಯೂ, ದೇವತೆಗಳಿಗೆ ನೀನೇ ಪರಮಗತಿಯಾಗಿರುವೆಯಲ್ಲವೆ' ॥೩೧॥

ಪುಲಸ್ತ್ಯಗೋತ್ರದಲ್ಲಿ ಹುಟ್ಟಿ ಲೋಕಕಂಟಕನಾಗಿರುವ ರಾವಣನೆಂಬ ದುರ್ವೃತ್ತನಾದ ರಾಕ್ಷಸನು, ತನ್ನ ವೀರ್ಯಾತಿಶಯದಿಂದ ನಮ್ಮಗಳನ್ನೆಲ್ಲ ವಿಶೇಷವಾಗಿ ಬಾಧೆಪಡಿಸುತ್ತಿರುವನು॥

ಅವನು ಮಾಡಿರುವ ಅಕಾರ್ಯವನ್ನು ಎಷ್ಟು ಹೇಳೋಣ! ನಮ್ಮ ನಂದನವನ್ನು ಕತ್ತರಿಸಿ, ನಮ್ಮ ಧನವನ್ನೆಲ್ಲ ಅಪಹರಿಸಿಕೊಂಡು ಹೋಗಿರುವನು. ಪಾಪಿಯಾದ ಆ ನೀಚರಾಕ್ಷಸನು, ನಮ್ಮ ವಾರಿಜಾತ ವೃಕ್ಷವನ್ನು ತನ್ನ ಮನೆಗೆ ತೆಗೆದುಕೊಂಡು ಹೋದನು ॥೩೩॥

ಈ ಸಮಸ್ತ ದಿಕ್ಪಾಲಕರೂ ಅವನಿಗೆ ದಾಸರಾಗಿಬಿಟ್ಟಿರುವರು. ಈ ವಾಯುವು, ರಾವಣನ ಮನೆಯು ಅಂಗಳದಲ್ಲಿ ಗುಡಿಸುವ ಕೆಲಸವನ್ನು ಮಾಡುತಿರುವನು ॥೩೪॥

ಪರ್ಜನ್ಯನು, ಬೆಳಗ್ಗೆ ಎದ್ದು, ಸಗಣಿನೀರನ್ನು ಕೈಯಲ್ಲಿ ಹಿಡಿದುಕೊಂಡು, ರಾವಣನ ಮನೆಯನೆಯನ್ನೆಲ್ಲ ಸಾರಿಸುವನು. ಅಗ್ನಿಯು, ಅತ್ಯಾದರದಿಂದ ರಾವಣನ ಮನೆಯಲ್ಲಿ ಅಡುಗೆಯ ಕೆಲಸವನ್ನು ಮಾಡುತಿರುವನು ॥೩೫॥

ಅಡುಗೆ ಚೆನ್ನಾಗಿಲ್ಲದಿದ್ದರೂ, ರಾವಣನ ಅಭಿಪ್ರಾಯಕ್ಕೆ ಸರಿಬರದ ಅಡುಗೆಯನ್ನು ಮಾಡಿದರೂ, ಈ ಅಗ್ನಿಗೆ ಏಟು ತಪ್ಪುವುದಿಲ್ಲ. ಹಿಮಂತ ಋತುವಿನಲ್ಲಿಯೂ, ಶಿಶಿರಋತುವಿನಲ್ಲಿಯೂ, ಸೂರ್ಯನು ಅವನಿಗೆ ಚಳಿಯಾಗದಂತೆ ನೋಡಿಕೊಳ್ಳುತಿರುವನು. ವಸಂತ ಗ್ರೀಷ್ಮಋತುಗಳಲ್ಲಿ, ಚಂದ್ರನು ಅವನಿಗೆ ಸೆಕೆಯನ್ನು ಪರಿಹರಿಸುತಿರುವನು ॥೩೬॥

ಋತವಃ ಪುಷ್ಪಮಾಲ್ಯಾನಿ ತ್ರಿವೇಳಂ ಸುಮನೋಹರಮ್ ।
ನಯಂತಿ ತಸ್ಯ ರಮ್ಯಾಣಿ ಮಾಲಾಕಾರನರಾಇವ ॥೩೬॥
ಬ್ರಹ್ಮಾ ಪಞ್ಚಾಙ್ಗಮಾದಾಯ ಪ್ರಾತರ್ದ್ವಾರಾಙ್ಗಣೇ ಸ್ಥಿತಃ ।
ಸಮಯೇನ್ತಃ ಪ್ರವಿಷ್ಟಃ ಸ್ಯಾತ್ ಬಹಿರೇವಾನ್ಯದಾ ಸ್ಥಿತಃ ॥೩೪॥
ಅಧ್ಯಾಪಯತಿ ತತ್ಪುತ್ರಾ೯ ಮುಹೂರ್ತಮಪಿ ಯಚ್ಛತಿ ।
ಅಪಾಯೇ ಸತಿ ಕಾರ್ಯಸ್ಯ ಪರಮೇಷ್ವ್ಯಪಿ ತಾಡ್ಯತೇ ॥೩೯॥
ನಾರದಸ್ತುಮ್ಬುರುಶ್ಚೈವ ಸದಾ ಗಾನಂ ಪ್ರಕುರ್ವತಃ
ಸತ್ಯನ್ತರೇ ಮುಷ್ಟಿಘಾತೈಃ ಕ್ರಿಯತೇ ತಾಲುಭಞ್ಜನಮ್ ॥೪೦॥
ತತ್ತತ್ಪ್ರಯೋಜನೇ ದೇವಾಃ ನಿಯುಕ್ತಾಃ ಕರ್ಮಕಾರಿಣಃ ।
ಕೈಲಾಸಕೋ೭ದ್ಧೃತಸ್ತೇನ ಕಜ್ಜರೋ೭ಪಿ ನಿರಾಕೃತಃ ॥೪೧॥
ತನ್ಮಹನ್ನೋ ಭಯಂ ತಸ್ಮಾತ್ ರಾಕ್ಷಸಾದ್ಘೋರದರ್ಶನಾತ್ ।
ವಧಾರ್ಥಂ ತಸ್ಯ ಭಗವ೯ ಉಪಾಯಂ ಕರ್ತುಮರ್ಹಸಿ ॥೪೨॥

ಸಮಸ್ತ ಋತುಗಳೂ, ತಂತಮ್ಮ ಕಾಲದಲ್ಲಿ ಆಗುವ ಪುಷ್ಪಗಳನ್ನು ಸೊಗಸಾಗಿ ಮಾಲಿಕೆ ಮಾಡಿಕೊಂಡು, ಹೂವಾಡಿಗರಂತೆ, ಅವನಿಗೆ ಮೂರು ವೇಳೆಯಲ್ಲಿಯೂ ತೆಗೆದುಕೊಂಡುಹೋಗಿ ಕೊಡುತಿರುವುವು ॥೩೭॥

ಈ ಬ್ರಹ್ಮನು, ಪಂಚಾಂಗವನ್ನು ಕೈಯಲ್ಲಿ ಹಿಡಿದುಕೊಂಡು, ಬೆಳಗ್ಗೆ ಆ ರಾವಣನಮನೆಯ ಬಾಗಿಲ ಹೊರಗೆ ಅಂಗಳದಲ್ಲಿ ನಿಂತುಕೊಂಡಿದ್ದು, ಅವನಿಗೆ ಸಮಯವಾದಾಗ ಒಳಕ್ಕೆ ಹೋಗುವನು; ಇಲ್ಲದಿದ್ದಾಗ ಹೊರಗೆಯೇ ನಿಂತಿರುವನು ॥೩೪॥

ಆ ರಾವಣನ ಮಕ್ಕಳಿಗೆಲ್ಲ ಈ ಬ್ರಹ್ಮನು ವಿದ್ಯಾಭ್ಯಾಸ ಮಾಡಿಸುತಿರುವನು. ಅವನಿಗೆ ಬೇಕಾದಾಗಲೆಲ್ಲ ಮುಹೂರ್ತವನ್ನು ಕಟ್ಟಿಕೊಡುವನು; ಇವನು ಕಟ್ಟಿದ ಮುಹೂರ್ತದಲ್ಲಿ ಮಾಡಿದ ಯಾವುದಾದರೊಂದು ಕೆಲಸವು ಕೆಟ್ಟುಹೋದರೆ, ಆಗ ಇವನಿಗೂ ಪ್ರಹಾರವಾಗುವುದು ॥೩೯॥

ನಾರದನೂ ತುಂಬುರನೂ ಸರ್ವದಾ ಆ ರಾವಣನ ಹತ್ತಿರ ಗಾನಮಾಡುತಿರುವರು. ಮಧ್ಯದಲ್ಲಿ ಸ್ವಲ್ಪ ಬಿಟ್ಟುಬಿಟ್ಟರೆ, ಆಗ ಮುಷ್ಟಿಯಿಂದ ಇವರ ಮುಸುಡಿಯನ್ನು ಮುರಿದುಬಿಡುವನು ॥೪೦॥

ಸಮಸ್ತ ದೇವತೆಗಳೂ ಅವನಿಂದ ಅಯಾ ಕೆಲಸಗಳಲ್ಲಿ ನಿಯೋಗಿಸಲ್ಪಟ್ಟಿರುವರು; ಕೈಲಾಸಪರ್ವತವೂ ಕೀಳಲ್ಪಟ್ಟಿತು; ಸಾಕ್ಷಾತ್ ಪರಮಶಿವನೂ ಇವನಿಂದ ನಿರಾಕೃತನಾಗಿರುವನು ॥೪೧॥

ಹೇ ಭಗವ೯! ಅದುಕಾರಣ, ಆ ರಾಕ್ಷಸನಿಂದ ನಮಗೆ ಮಹಾಭಯುವುಂಟಾಗಿರುವುದು; ಅವನ ದರ್ಶನವೂ ಕೂಡ ನಮಗೆ ಮಹಾಕ್ರೂರವಾಗಿಬಿಟ್ಟಿರುವುದು. ಅವನ ವಧಾರ್ಥವಾಗಿ ನೀನೇ ಯಾವುದಾದರೊಂದುವಾಯುವನ್ನು ಮಾಡಬೇಕಾಗಿರುವುದು ॥೪೨॥

ಶ್ರೀ ಭಗವಾನುವಾಚ.

ಜಾನೇ ತ್ವಾಂ ರಾಕ್ಷಸಾನ್ ಪಾಪಾನ್ ಬ್ರಹ್ಮೇಶವರದರ್ಪಿತಾನ್ ।
ತೇಷಾಂ ವೈ ದುಷ್ಟಚೇಷ್ಟಾಂ ಚ ಹಿಂಸನಂ ಚ ಪರಸ್ತ್ರಿಯಾಮ್ ॥೪೩॥
ಸುರಾಣಾಂ ಸ್ಥಾನಹಾನಿಂ ಚ ಕೈಲಾಸಸ್ಯ ಚ ಪಾತನಮ್ ।
ತೇಷಾಂ ಶಾಪಂ ಚ ಮೃತ್ಯುಂ ಚ ಜಾನಾಮಿ ಸುರಪುಙ್ಗವಾಃ ॥೪೪॥
ಪುರಾ ತೇನ ವರೋ ಲಬ್ಧಃ ಪ್ರತ್ಯೇಕಂ ತು ತ್ರಿಮೂರ್ತಿತಃ ।
ಮೃತಿರ್ಮಾಭೂದಿತೀತ್ಥಾನಾತ್ ತಸ್ಮಾತ್ ತದನುರೋಧತಃ ॥೪೫॥
ಧಾತುಃ ಶಿವಸ್ಯ ಸಙ್ಗೃಹ್ಯ ತೇಜಸೀ ಪೂರ್ಣರೂಪ್ಯಹಮ್ ।
ಕೌಸಲ್ಯಾಯಾಂ ದಶರಥಾತ್ ಭವಿಷ್ಯಾಮಿ ಭವತ್ಕೃತೇ ॥೪೬॥
ಭಯಂ ತ್ಯಜತ ಭದ್ರಂ ವೋ ಹಿತಾರ್ಥಂ ಯುಧಿ ರಾವಣಮ್ ।
ಸಪುತ್ರಪೌತ್ರಂ ಸಾಮಾತ್ಯಂ ಸಮಿತ್ರಜ್ಞಾತಿಬಾನ್ಧವಮ್ ॥೪೭॥
ಹತ್ವಾ ಕ್ರೂರಂ ದುರಾತ್ಮಾನಂ ದೇವರ್ಷೀಣಾಂ ಭಯಾವಹಮ್ ॥೪೮॥
ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ।
ವತ್ಸ್ಯಾಮಿ ಮಾನುಷೇ ಲೋಕೇ ಪಾಲಯನ್ ಪೃಥಿವೀಮಿಮಾಮ್ ॥೪೯॥

ಶ್ರೀ ಭಗವಂತನು ಹೇಳುವನು :—

ಎಲೈ ದೇವತೆಗಳಿರಾ! ಆ ರಾಕ್ಷಸರುಗಳು ಬ್ರಹ್ಮನಿಂದಲೂ ಈಶ್ವರನಿಂದಲೂ ವರಪಡೆದು ಕೊಂಡು ಗರ್ವಿಸಿರುವುದನ್ನು ನಾನು ಚೆನ್ನಾಗಿ ಬಲ್ಲೆನು; ಅವರು ಮಾಡುವ ದುಷ್ಟಚೇಷ್ಟೆಗಳನ್ನೂ, ಪರಸ್ತ್ರೀಯರಿಗೆ ಕೊಡುವ ಹಿಂಸೆಯನ್ನೂ ನಾನು ಬಲ್ಲೆನು ॥೪೩॥


ಎಲೈ ದೇವಶ್ರೇಷ್ಠರಾ! ಆ ರಾಕ್ಷಸರು ದೇವತೆಗಳಿಗೆ ಸ್ಥಾನಭ್ರಂಶವುಂಟುಮಾಡಿರುವುದನ್ನೂ, ರಾವಣನು ಕೈಲಾಸಪರ್ವತವನ್ನು ಕೆಡಹಿರುವುದನ್ನೂ, ಅವರಿಗೆ ಒಂದಿರುವ ಶಾಪವನ್ನೂ, ಅವರಿಗೆ ಮೃತ್ಯುವುಂಟಾಗುವ ಮಾರ್ಗವನ್ನೂ ನಾನು ತಿಳಿದಿರುವೆನು ॥೪೪॥

ಪೂರ್ವದಲ್ಲಿ ಅವನು, ಬೇರೆಬೇರೆಯಾಗಿ ತ್ರಿಮೂರ್ತಿಗಳಿಂದಲೂ ತನಗೆ ಮರಣವುಂಟಾಗ ಕೂಡದೆಂದು, ಪರಮೇಶ್ವರನಿಂದ ವರವನ್ನು ಪಡೆದಿರುವನು. ಅದುಕಾರಣ, ಆ ಪರಮೇಶ್ವರನ ವರಕ್ಕನುಸಾರವಾಗಿ, ನಾನು ಬ್ರಹ್ಮನ ತೇಜಸ್ಸನ್ನೂ ಈಶ್ವರನ ತೇಜಸ್ಸನ್ನೂ ಸಂಗ್ರಹಿಸಿಕೊಂಡು, ನಿಮ್ಮಗಳ ಕಾರ್ಯವನ್ನು ನೆರವೇರಿಸುವುದಕ್ಕೋಸ್ಕರ, ಕೌಸಲ್ಯೆಯಲ್ಲಿ ದಶರಥನ ದೆಸೆಯಿಂದ ಪರಿಪೂರ್ಣರೂಪನಾಗಿ ಅವತರಿಸುವೆನು ॥೪೫–೪೬॥

ನೀವುಗಳು ಭಯವನ್ನು ಬಿಟ್ಟುಬಿಡಿರಿ. ನಿಮಗೆ ಮಂಗಳವಾಗಲಿ. ನಾನು ನಿಮ್ಮ ಹಿತಕ್ಕೋಸ್ಕರ, ಕ್ರೂರನಾಗಿಯೂ ದುರಾತ್ಮನಾಗಿಯೂ ದೇವರ್ಷಿಗಳಿಗೆ ಭಯಪ್ರದನಾಗಿಯೂ ಇರುವ ರಾವಣನನ್ನು, ಪುತ್ರ ಪೌತ್ರ ಮಿತ್ರ ಮಂತ್ರಿ ಜ್ಞಾತಿ ಬಂಧುಗಳೊಡನೆ ಯುದ್ಧದಲ್ಲಿ ಕೊಂದು, ಹನ್ನೊಂದುಸಾವಿರ ವರ್ಷಕಾಲ, ಈ ಭೂಮಿಯನ್ನು ಕಾಪಾಡುತ, ಮನುಷ್ಯಲೋಕದಲ್ಲಿ ವಾಸ ಮಾಡುವೆನು ॥೪೭–೪೯॥

ಯೈರ್ಯೈರ್ಯಸ್ತಪಃ ಕೃತಂ ಪೂರ್ವಂ ಬ್ರಹ್ಮಾಣಂ ಮಾಂ ಚ ಶಙ್ಕರಮ್ ।
ತ್ರಿಮೂರ್ತ್ಯತೀತಮಾತ್ಮಾನಂ ಯೇ ಧ್ಯಾಯನ್ತಿ ನಿರನ್ತರಮ್ ॥೫೦॥
ತತ್ತತ್ತಪೋನುರೂಪೇಣ ತಾರಕಬ್ರಹ್ಮನಾಮಕಃ ।
ತೇಷಾಂ ಪ್ರದಾಸ್ಯೇ ಮುಕ್ತಿಂ ಚ ಶಾಪಸ್ಯೋಕ್ಷಂ ಚ ಶಾಪಿನಾಮ್ ॥೫೧॥
ನನ್ದಿಶಾಪಾದ್ಭವನ್ತೋಪಿ ವಾನರತ್ವಮುಪಾಗತಾಃ ।
ಅವತೀರ್ಣಸ್ಯ ಭೂಲೋಕೇ ಮಾಯಯಾ ರಾಘವಾತ್ಮನಾ ।
ಕುರುಧ್ವಂ ಮಮ ಸಾಹಾಯ್ಯಂ ಇತ್ಯುಕ್ತ್ವಾನ್ತರ್ದಧೇ ಹರಿಃ ॥೫೨॥

ಇತಿ ಬಾಲಕಾಣ್ಡೇ ದೇವಕೃತಸ್ತುತಿ ವಿಷ್ಣ್ವವರಪ್ರದಾನಂ
ನಾಮ ದ್ವಾದಶಃ ಸರ್ಗಃ.



ಮತ್ತು, ಬ್ರಹ್ಮನನ್ನೂ ನನ್ನನ್ನೂ ಈಶ್ವರನನ್ನೂ ಕುರಿತು ಪೂರ್ವದಲ್ಲಿ ಯಾರುಯಾರು ತಪಸ್ಸು ಮಾಡಿರುವರೋ, ಯಾರುಯಾರು ಮೂರ್ತಿತ್ರಯಾತೀತನಾದ ನನ್ನನ್ನು ನಿರಂತರವಾಗಿ ಧ್ಯಾನಮಾಡುತ್ತಿರುವರೋ, ಅವರವರ ತಪಸ್ಸಿಗೆ ಅನುಗುಣವಾಗಿರುವಂತೆ, ತಾರಕಬ್ರಹ್ಮನೆಂದು ಹೆಸರಿಟ್ಟುಕೊಂಡಿರುವ ನಾನು, ಅವರವರಿಗೆ ಮುಕ್ತಿಯನ್ನು ಕೊಡುವೆನು; ಶಾಪಗ್ರಸ್ತರಾಗಿರ ತಕ್ಕವರಿಗೆ ಶಾಪವಿಮೋಚನೆಯನ್ನೂ ಮಾಡುವೆನು ॥೫೦-೫೧॥

ನೀವುಗಳೂಕೂಡ, ನಂದೀಶ್ವರನ ಶಾಪದಿಂದ ವಾನರಜನ್ಮವನ್ನು ಹೊಂದಿದವರಾಗಿ, ಭೂಮಿ ಯಲ್ಲಿ ಮಾಯೆಯಿಂದ ರಾಘವರೂಪನಾಗಿ ಜನಿಸುವ ನನಗೆ ಸಾಹ್ಯವನ್ನು ಮಾಡಿರಿ.—ಎಲೌ ಪಾರ್ವತಿ! ಹೀಗೆಂದು ಹೇಳಿಬಿಟ್ಟು, ಆ ಶ್ರೀಹರಿಯು ಅಂತರ್ಧಾನಹೊಂದಿಬಿಟ್ಟನು ॥೫೨॥

ಇದು ಬಾಲಕಾಂಡದಲ್ಲಿ ದೇವಕೃತಸ್ತುತಿ ವಿಷ್ಣ್ವವರಪ್ರದಾನಕಥನವೆಂಬ
ಹನ್ನೆರಡನೆಯ ಸರ್ಗವು.

ಅಥ ಬಾಲಕಾಣ್ಡೇ ತ್ರಯೋದಶಃ ಸರ್ಗಃ.

ಶ್ರೀ ಪಾರ್ವತ್ಯುವಾಚ.

ಕೋ ವಾ ದಶರಥಃ ಪ್ರೋಕ್ತಃ ಕೌಸಲ್ಯಾ ಕಾ ನು ಕಜ್ಜಿರ ।
ಭಗವಾ೯ ಕಾರಣಾತ್ ಕಸ್ಮಾತ್ ತಯೋರ್ಜಾತೋ ವದಸ್ವ ತತ್ ॥೧॥

ಶ್ರೀಶಿವಉವಾಚ.

ಸ್ವಾಯಮ್ಭುವೋ ಮನುಃ ಪೂರ್ವಂ ದ್ವಾದಶಾರ್ಣಂ ಮಹಾಮನುಮ್ ।
ಜಜಾಪ ವರ್ಷಸಾಹಸ್ರಂ ನೈಮಿಶೇ ಗೋಮತೀತಟೇ ॥೨॥

ಪೂಜಿತಸ್ತೇನ ಲಕ್ಷ್ಮೀಶಃ ಪ್ರಸನ್ನಃ ಕರುಣಾನಿಧಿಃ ।
ಮತ್ತೋ ವರಂ ವೃಣೀಷ್ವೇತಿ ತೇನೋಕ್ತೋ ಮನುರಬ್ರವೀತ್ ॥೩॥

ಪುತ್ರತ್ವಂ ಭಜ ದೇವೇಶ ತ್ರಿಷು ಜನ್ಮಸು ಮೇ ಹರೇ ।
ತ್ವಾಂ ಪುತ್ರಲಾಲಸತ್ವೇನ ಭಜಾಮಿ ಪುರುಷೋತ್ತಮ ॥೪॥

ಶ್ರೀ ಭಗವಾನುವಾಚ.

ಏವಮಸ್ತು ಮನುಶ್ರೇಷ್ಠ ಯತ್ ತೇ ಮನಸಿ ಕಾಙ್ಕ್ಷಿತಮ್ ।
ಮಮಾಪಿ ಚ ಮಹಾಪ್ರೀತಿಃ ಅಪ್ರಂ ತೇ ಪುತ್ರತಾಮಿಹ ॥೫॥

ಬಾಲಕಾಂಡದಲ್ಲಿ ಹದಿಮೂರನೆಯ ಸರ್ಗವು.

ಶ್ರೀ ಪಾರ್ವತಿಯು ಪರಮೇಶ್ವರನನ್ನು ಪುನಃ ಪ್ರಶ್ನೆ ಮಾಡುವಳು :—

ಸ್ವಾಮಿ! ಶಂಕರ! ದಶರಥನಿಂದ ಕೌಸಲ್ಯೆಯಲ್ಲಿ ಅವತರಿಸುವೆನೆಂದು ಭಗವಂತನು ಹೇಳಿದನೆಂಬುದಾಗಿ ನೀವು ಅಪ್ಪಣೆ ಕೊಟ್ಟಿರಷ್ಟೆ! ಆ ದಶರಥನೆಂಬವನು ಯಾರು? ಕೌಸಲ್ಯೆಯೆಂಬವಳೂ ಯಾರು? ಶ್ರೀ ಭಗವಂತನು, ಇತರರಿಲ್ಲರನ್ನೂ ಬಿಟ್ಟುಬಿಟ್ಟು, ಅವರಲ್ಲಿ ಏತಕ್ಕಾಗಿ ಅವತರಿಸಿದನು? ಈ ವಿಷಯವನ್ನು ತಾವು ನನಗೆ ಅಪ್ಪಣೆ ಕೊಡಿಸಬೇಕು ॥೧॥

ಶ್ರೀ ಪರಮೇಶ್ವರನು ಉತ್ತರ ಹೇಳುವನು —

ಎಲೌ ಪಾರ್ವತಿ! ಪೂರ್ವದಲ್ಲಿ ಸ್ವಾಯಂಭವಮನುವು, ಗೋಮತಿಯೆಂಬ ನದಿಯ ತೀರದಲ್ಲಿ, ಸಾವಿರವರ್ಷಕಾಲ ದ್ವಾದಶಾಕ್ಷರೀಮಹಾಮಂತ್ರವನ್ನು ಜಪಿಸಿದನು ॥೨॥

ಹೀಗೆ ಕರುಣಾನಿಧಿಯಾದ ಆ ಲಕ್ಷ್ಮೀಪತಿಯು, ಆ ಮನುವಿನಿಂದ ಪೂಜಿತನಾಗಿ, ಪ್ರಸನ್ನನಾಗಿ 'ನಿನ್ನಿಂದ ನಿನಗೆ ಬೇಕಾಗಿರುವ ವರವನ್ನು ಕೇಳಿಕೋ' ಎಂದು ಹೇಳಿದನು. ಹೀಗೆ ಸ್ವಾಮಿಯಿಂದ ಅಜ್ಞಾಪಿಸಲ್ಪಟ್ಟ ಆ ಮನುವು 'ಎಲೈ ದೇವದೇವೇಶ್ವರನಾದ ಹರಿಯೆ! ನೀನು ನನಗೆ ಮೂರು ಜನ್ಮಗಳಲ್ಲಿ ಪುತ್ರನಾಗಿ ಜನಿಸಬೇಕು. ನಾನು ಪುತ್ರಾಪೇಕ್ಷೆಯಿಂದ ನಿನ್ನನ್ನು ಸೇವಿಸುತ್ತಿರುವೆನು' ಎಂದು ವಿಜ್ಞಾಪಿಸಿಕೊಂಡನು ॥೩-೪॥

ಇದನ್ನು ಕೇಳಿ ಶ್ರೀ ಭಗವಂತನು ಹೇಳುವನು :—

ಎಲೈ ಮನುಶ್ರೇಷ್ಠನೆ! ನಿನ್ನ ಮನಸ್ಸಿನಲ್ಲಿ ಹೇಗೆ ಇರುವುದೋ, ಹಾಗೆಯೇ ಆಗಲಿ. ನಿನ್ನ ಮಗನಾಗಿ ಹುಟ್ಟುವುದಕ್ಕೆ ನನಗೂ ವಿಶೇಷವಾಗಿ ಪ್ರೀತಿಯಿರುವುದು ॥೫॥

ಸ್ಥಿತಿಪ್ರಯೋಜನೇ ಕಾಲೇ ತತ್ರತತ್ರ ಜನಿಷ್ಯಸಿ ।
ತ್ವಯಿ ಜಾತೇ ತ್ವಹಮಪಿ ಜನಿಷ್ಯೇ ತವ ನನ್ದನಃ ॥೬॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಮ್ಭವಾಮಿ ಯುಗೇಯುಗೇ ॥೭॥
ಏವಂ ಜನ್ಮತ್ರಯೇ ಕರ್ಮ ಯೋ ವೇತ್ತಿ ಸ ವಿಮುಚ್ಯತೇ ।
ಇತಿ ದತ್ವಾ ವರಂ ತಸ್ಮೈ ತತ್ರೈವಾನ್ತರಧೀಯತ ॥೮॥
ರಘುವಂಶೇ ಮನುಃ ಪೂರ್ವಂ ಜಾತೋ ದಶರಥಾಹ್ವಯಃ ।
ದ್ವಿತೀಯೇ ವಸುದೇವೋಭೂತ್ ವೃಷ್ಣೀನಾಮನ್ವಯೇ ಥ ಸಃ ॥೯॥
ತೃತೀಯೇಭೂದ್ವ್ರಜಃ ಕಶ್ಚಿತ್ ಮನುರ್ವಿಷ್ಣುವ್ರತಾಹ್ವಯಃ ।
ಕಲೌ ದಿವ್ಯಸಹಸ್ರಾಬ್ದೇ ಗ್ರಾಮೇ ಶಮ್ಬಲಸಂಜ್ಞಕೇ ।
ಏವಂ ಜನ್ಮತ್ರಯಂ ಕೃತ್ವಾ ಮುಕ್ತಃ ಸ್ಯಾದನ್ತ್ಯಜನ್ಮನಿ ॥೧೦॥
ಕೌಸಲ್ಯಾ ಸಮಭೂತ್ ಪೂರ್ವಂ ಪತ್ನೀ ದಶರಥಸ್ಯ ಹಿ ॥೧೧॥
ದ್ವಿತೀಯೇ ವಸುದೇವಸ್ಯ ದೇವಕೀ ನಾಮ ಸಾಭವತ್ ।
ಭಾರ್ಯಾ ವಿಷ್ಣುವ್ರತಸ್ಯಾಸೀತ್ ತೃತೀಯಾ ದೇವತಾಹ್ವಯಾ ॥೧೨॥
ಏವಂ ಮಾತೃತ್ವಮಾಪನ್ನಾ ತ್ರಿಷು ಜನ್ಮಸು ಸಾ ಹರೇಃ ।
ಏವಂ ಜನ್ಮತ್ರಯಸ್ಯಾನ್ತೇ ಸಾ ವಿಮುಕ್ತಾ ಭವಿಷ್ಯತಿ ॥೧೩॥

ಪ್ರಪಂಚಸಂರಕ್ಷಣಾರ್ಥವಾದ ಸಮಯದಲ್ಲಿ, ನೀನು ಆಯಾ ಜನ್ಮಗಳಲ್ಲಿ ಹುಟ್ಟುವೆ. ನೀನು ಹುಟ್ಟಿದನಂತರ, ನಾನೂ ನಿನ್ನ ಮಗನಾಗಿ ಹುಟ್ಟುವೆನು ॥೬॥

ಸಾಧುಗಳ ಸಂರಕ್ಷಣೆಗಾಗಿಯೂ, ದುಷ್ಟರ ನಿಗ್ರಹಕ್ಕಾಗಿಯೂ, ಧರ್ಮವನ್ನು ಚೆನ್ನಾಗಿ ಸ್ಥಾಪಿಸುವುದಕ್ಕಾಗಿಯೂ, ನಾನು ಪ್ರತಿಯುಗದಲ್ಲಿಯೂ ಅವತಾರವಾಡುವೆನು ॥೭॥

ಹೀಗೆ ನಾನು ನಿನ್ನ ಮಗನಾಗಿ ಮೂರುಜನ್ಮಗಳಲ್ಲಿ ಅವತರಿಸಿ ಮಾಡುವ ಕರ್ಮಗಳನ್ನು ಯಾವನು ತಿಳಿದುಕೊಳ್ಳುವನೋ, ಅವನು ಮೋಕ್ಷಭಾಗಿಯಾಗುವನು. ಎಲೌ ವಾರ್ಷತಿ! ಹೀಗೆಂದು ಮನುವಿಗೆ ವರಪ್ರದಾನ ಮಾಡಿ, ಆ ಮಹಾವಿಷ್ಣು ಅಲ್ಲಿಯೇ ಅಂತರ್ಧಾನಮಡಿದನು ॥೮॥

ಆ ಮನುವು, ಪ್ರಥಮತಃ ರಘುವಂಶದಲ್ಲಿ ದಶರಥನೆಂಬ ನಾಮಧೇಯದಿಂದ ಹುಟ್ಟಿದನು. ಬಳಿಕ ದ್ವಿತೀಯ ಜನ್ಮದಲ್ಲಿ ವೃಷ್ಣಿವಂಶದೊಳಗೆ ವಸುದೇವನೆಂಬ ನಾಮಧೇಯದಿಂದಹುಟ್ಟಿದನು॥

ಮೂರನೆಯ ಜನ್ಮದಲ್ಲಿ, ಕಲಿಯುಗದೊಳಗೆ ದಿವ್ಯವರ್ಷ ಕಳೆದಮೇಲೆ, ಶಂಬಲನೆಂಬ ಗ್ರಾಮದಲ್ಲಿ, ಆ ಮನುವು ವಿಷ್ಣುವ್ರತನೆಂಬ ಬ್ರಾಹ್ಮಣನಾಗಿ ಹುಟ್ಟುವನು. ಹೀಗೆ ಮೂರುಜನ್ಮಗಳನ್ನು ಕಳೆದು, ಕೊನೆಯ ಜನ್ಮದಲ್ಲಿ ಮುಕ್ತನಾಗುವನು ॥೧೦॥

ಆ ಮನುವಿನ ಪತ್ನಿಯು, ಪ್ರಥಮಜನ್ಮದಲ್ಲಿ ದಶರಥನ ಪತ್ನಿಯಾದ ಕೌಸಲ್ಯೆಯಾಗಿಯೂ, ಎರಡನೆಯಜನ್ಮದಲ್ಲಿ ವಸುದೇವನ ಪತ್ನಿಯಾದ ದೇವಕಿಯೆಂಬದಾಗಿಯೂ ಹುಟ್ಟಿ, ಮೂರನೆಯ ಜನ್ಮದಲ್ಲಿ ವಿಷ್ಣುವ್ರತನ ಪತ್ನಿಯಾದ ದೇವತಾನಾಮಕಳಾಗಿ ಆಗುವಳು ॥೧೧—೧೨॥

ಹೀಗೆ ಅವಳು ಮೂರು ಜನ್ಮಗಳಲ್ಲಿ ಶ್ರೀಹರಿಗೆ ತಾಯಿಯಾದಳು. ಬಳಿಕ, ಹೀಗೆ ಮೂರು ಜನ್ಮಗಳು ಕಳೆದನಂತರ, ಅವಳು ಮುಕ್ತಳಾಗುವಳು ॥೧೩॥

ರಾಘವಃ ಪ್ರಥಮಂ ಜಜ್ಞೇ ಕೃಷ್ಣಸ್ತು ತದನಂತರಮ್ ।
ಕಲ್ಕಿರೂಪೀ ಹರಿಃ ಪಶ್ಚಾತ್ ಭವಿಷ್ಯತಿ ಕಲೌ ಯುಗೇ ॥೧೪॥

ಶ್ರೀಪಾರ್ವತ್ಯುವಾಚ.

ಸರ್ವಜ್ಞ ಕರುಣಾಸಿಂಧೋ ಶ್ರೋತುಂ ಮೇ ಯೋಗ್ಯತಾಸ್ತಿ ಚೇತ್ ।
ವದ ರಾಮಕಥಾಂ ಸರ್ವಾಂ ದುರ್ಲಭಾಮಕೃತಾತ್ಮನಾಮ್ ॥೧೫॥

ಶ್ರೀ ಶಿವಉವಾಚ.

ರಾಮಚಂದ್ರಕಥಾ ದೇವಿ ಶಬ್ದತಶ್ಚಾರ್ಥತಶ್ಚ ಹಿ ।
ದುರಂತಪಾರಾ ಗಂಭೀರಾ ದುರ್ವಿಗಾಹ್ಯಾ ಸಮುದ್ರವತ್ ॥೧೬॥
ಬ್ರಹ್ಮಲೋಕೇ ಚ ಸತತಂ ಶತಕೋಟಿಪ್ರವಿಸ್ತರಮ್ ।
ಬ್ರಹ್ಮಣಾ ಶ್ರೂಯತೇ ನಿತ್ಯಂ ಮಾರ್ಕಂಡೇಯಾದ್ವಿಜೋತ್ತಮಾತ್ ॥೧೭॥
ಸ್ಮೃತಯಶ್ಚ ಪುರಾಣಾನಿ ಭಾರತಾದೀನ್ಯಶೇಷತಃ ।
ರಾಮಾಯಣೈಕದೇಶಾನಿ ತದ್ವಿಜ್ಞೇಯಮಂ ಯಥಾರ್ಥತಃ ॥೧೮॥
ಸರ್ವಂ ತಥ್ಯಂ ವದೇತ್ ತುಲ್ಯಂ ವೇದವನ್ನ ತಥಾವಿಧಃ ।
ರಾಮಾಯಣಾನಂತ್ಯಕಥಾಪಾರಂ ಗಚ್ಛತಿ ಕೋ ನರಃ ॥೧೯॥

ಶ್ರೀಭಗವಂತನು ಪ್ರಥಮಜನ್ಮದಲ್ಲಿ ಶ್ರೀರಾಮನಾಗಿಯೂ, ಒಳಿಕ ದ್ವಿತೀಯಜನ್ಮದಲ್ಲಿ ಶ್ರೀಕೃಷ್ಣನಾಗಿಯೂ ಅವತರಿಸಿದನು. ಒಳಿಕ ಕಲಿಯುಗದಲ್ಲಿ ಕಲ್ಕಿರೂಪನಾಗಿ ಅವತರಿಸುವನು॥

ಶ್ರೀ ಪಾರ್ವತಿಯು ಹೇಳುವಳು :—

ಭಗವಂತನೆ! ದಯಾಸಾಗರನೆ! ನನಗೆ ಕೇಳಲು ಯೋಗ್ಯತೆಯಿದ್ದಪಕ್ಷದಲ್ಲಿ, ಪುಣ್ಯಾತ್ಮರಲ್ಲದವರಿಗೆ ದುರ್ಲಭವಾಗಿರುವ ಆ ಶ್ರೀರಾಮಕಥೆಯೆಲ್ಲವನ್ನೂ ನನಗೆ ಹೇಳುವವನಾಗು ॥೧೫॥

ಶ್ರೀ ಶಿವನು ಉತ್ತರ ಕೊಡುವನು :—

ಹೇ ದೇವಿ! ಶ್ರೀರಾಮಚಂದ್ರನ ಕಥೆಯು, ಶಬ್ದದಲ್ಲಿಯೂ ಅರ್ಥದಲ್ಲಿಯೂ ಒಂದು ಗಂಭೀರವಾದುದು. ಇದು, ಸಮುದ್ರದಂತೆ ಅಪಾರವಾಗಿಯೂ ದುರವಗಾಹವಾಗಿಯೂ ಇರುವುದು ॥೧೬॥

ಶತಕೋಟಿ ಸಂಖ್ಯಾಕವಾಗಿ ವಿಸ್ತರಿಸಿಕೊಂಡಿರುವ ಈ ಶ್ರೀರಾಮಕಥೆಯನ್ನು, ಬ್ರಹ್ಮಲೋಕದಲ್ಲಿ ಮಾರ್ಕಂಡೇಯ ಮಹರ್ಷಿಯು ಮುಖದಿಂದ ಬ್ರಹ್ಮನು ನಿತ್ಯವೂ ಕೇಳುತಿರುವನು ॥

ಸ್ಮೃತಿಗಳೂ, ಪುರಾಣಗಳೂ, ಭಾರತ ಮುಂತಾದ ಸಮಸ್ತ ಗ್ರಂಥಗಳೂ ಕೂಡ, ಈ ರಾಮಕಥೆಯಲ್ಲಿ ಏಕದೇಶಭೂತವಾಗಿರುವುವು. ಈ ರಾಮಾಯಣವು, ಯಥಾವತ್ತಾಗಿ ಸಾಮಾನ್ಯರಿಗೆ ತಿಳಿಯಲಸಾಧ್ಯವು ॥೧೮॥

ಪ್ರಪಂಚದಲ್ಲಿ, ಸಮಸ್ತವನ್ನೂ ಸತ್ಯವಾಗಿಯೂ ಸಮಂಜಸವಾಗಿಯೂ ಹೇಳಬೇಕು. ಹೀಗೆ ಹೇಳತಕ್ಕದ್ದು ವೇದವೊಂದೇ ಆಗಿರುವುದು. ಆದರೆ, ಈ ವೇದದಂತೆಯೇ ಇರುವ ಶ್ರೀರಾಮಾಯಣರೂಪವಾದ ಅವಾರಕಥೆಯ ಪಾರವನ್ನು ಯಾವ ಮನುಷ್ಯನು ಕಾಣುವನು? ॥

ಅಸಮ್ಭಾವಿತಶಙ್ಕೃತ್ ನರೋ ನರಕಮೇಷ್ಯತಿ ।
ಸರ್ವಂ ಸಮ್ಭಾವಿತಂ ತತ್ರ ಚೋದ್ಯತೇ ಜೈಕಭಾಜನೇ ॥೨೦॥
ರಾಮೇತಿ ವರ್ಣದ್ವಿತಯಂ ಗುಹ್ಯಾದ್ಗುಹ್ಯತಮಂ ಸದಾ ।
ತಸ್ಯ ಮಾಹಾತ್ಮ್ಯಕಥನೇ ನಾಹಂ ಬ್ರಹ್ಮಾ ನ ಚರ್ಷಯಃ ॥೨೧॥
ಮಯಾ ನ ಶಕ್ಯಂ ದೇವೇಶಿ ವಕ್ತುಂ ತದಖಿಲೇನ ತು ।
ಯತಿಜ್ಞೋ ದ್ವಿದಿತಂ ತಸ್ಯ ಮಾಹಾತ್ಮ್ಯಂ ವಜ್ರಿತಚ್ಛ್ರುಣು ॥೨೨॥
ಕೋಸಲಾಖ್ಯೇ ಜನಪದೇ ಪುಣ್ಯೇ ಧರ್ಮಜನಾಸ್ಪದೇ ।
ಸರ್ವಕಾಮಗುಣೋಪೇತೇ ಪ್ರವೃತ್ತಾ ಸರಯೂನದೀ ॥೨೩॥
ವಕ್ಷ್ಯೇಽಹಂ ಪಾಪಹಾರಿಣ್ಯಾಃ ಸರಯ್ವಾಃ ಸನ್ಮನೋ ಶುಭವೇ ।
ಯಸ್ಯಾ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥೨೪॥
ಕೈಲಾಸೋಯಂ ಗಿರಿಶ್ರೇಷ್ಠೋ ದೇವೈರ್ಬ್ರಹ್ಮರ್ಷಿಭಿರ್ಯುತಃ ।
ಸಿಷೇವಿತೋ ಮೇರುತುಲ್ಯೈಃ ಖ್ಯಾತಃ ಪುಣ್ಯತಮಸ್ತತಃ ॥೨೫॥

ಈ ವಿಷಯದಲ್ಲಿ ಮನಸ್ಸಿನೊಳಗೆ ಸಂಶಯಪಡತಕ್ಕ ಮನುಷ್ಯನು ನರಕವನ್ನು ಹೊಂದುವನು. ಆ ರಾಮಾಯಣದಲ್ಲಿರುವ ಸಮಸ್ತ ವಿಷಯವೂ ಸಂಘಾತವೇ ಹೊರತು, ಯಾವುದೂ ಅಸಂಭವವಲ್ಲ ಸಮಸ್ತ ಧರ್ಮಗಳಿಗೂ ಅದೊಂದೇ ಮುಟ್ಟಾಶ್ರಯಭೂತವೆಂದು ಹೇಳಲ್ಪಡುವುದು ॥೨೦॥

'ರಾಮ' ಎಂಬ ಅಕ್ಷರದ್ವಯವು, ಸರ್ವದಾ ರಹಸ್ಯಗಳಲ್ಲೆಲ್ಲ ರಹಸ್ಯಭೂತವಾದುದು. ಅದರ ಮಾಹಾತ್ಮ್ಯವನ್ನು ಸ್ಪಷ್ಟವಾಗಿ ತಿಳಿಸತಕ್ಕ ವಿಷಯದಲ್ಲಿ, ನಾನೂ ಸಮರ್ಥನಲ್ಲ; ಬ್ರಹ್ಮನೂ ಸಮರ್ಥನಲ್ಲ; ಇತರರಾದ ಮಹರ್ಷಿಗಳೂ ಸಮರ್ಥರಲ್ಲ ॥೨೧॥

ಅದುಕಾರಣ, ಹೇದೇವೇಶಿ! ಆ ರಾಮಾಯಣ ಮಹಿಮೆಯನ್ನೆಲ್ಲ ಸಮಗ್ರವಾಗಿ ಹೇಳುವುದಕ್ಕೆ ನಾನು ಸಮರ್ಥನಲ್ಲ ಆದರೂ, ನಾನು ಯಾವ ಸ್ವಲ್ಪಭಾಗವನ್ನು ತಿಳಿದುಕೊಂಡಿರುವೆನೋ, ಅದನ್ನು ನಿನಗೆ ಹೇಳುವೆನು, ಕೇಳು ॥೨೨॥

ಕೋಸಲವೆಂಬ ದೊಡ್ಡದೊಂದು ದೇಶವಿರುವುದು ಅದು, ಕೇವಲ ಪವಿತ್ರವಾಗಿಯೂ, ಧರ್ಮಿಷ್ಠರಾದ ಜನರಿಂದ ಪರಿಪೂರ್ಣವಾಗಿಯೂ, ಸಮಸ್ತವಾದ ಇಷ್ಟಾರ್ಥವನ್ನೂ ಕೊಡತಕ್ಕುದಾಗಿಯೂ, ಸಕಲ ಸದ್ಗುಣಭರಿತವಾಗಿಯೂ ಇರುವುದು. ಇದರ ಸವಿಾಪದಲ್ಲಿಯೇ ಸರಯೂನದಿಯು ಪ್ರವಹಿಸುತ್ತಿರುವುದು ॥೨೩॥

ಎಲೌ ದೇವಿ! ಪಾಪಪರಿಹಾರಕವಾದ ಸರಯೂನದಿಯ ಉತ್ಪತ್ತಿಯನ್ನು ನಿನಗೆ ಹೇಳುವೆನು. ಅತಿ ಮಂಗಳಕರವಾದ ಇದನ್ನು ಕೇಳಿದಮಾತ್ರದಿಂದಲೇ, ಪುರುಷನು ಸರ್ವಪಾಪಗಳಿಂದಲೂ ಮುಕ್ತನಾಗುವನು ॥೨೪॥

ಈ ಕೈಲಾಸಪರ್ವತವು, ಸಮಸ್ತ ದೇವತೆಗಳಿಂದಲೂ ಬ್ರಹ್ಮರ್ಷಿಗಳಿಂದಲೂ ಸನ್ನಿಂದಲೂ ಸೇವಿತವಾಗಿ ಮೇರುಸಮಾನವಾದುದಾಗಿರುವುದಷ್ಟೆ! ಅದುಕಾರಣವೇ, ಇದು ಮಹಾಪವಿತ್ರತಮವೆಂದು ಪ್ರಖ್ಯಾತವಾಗಿರುವುದು ॥೨೫॥

ಪರ್ವತೇಸ್ಮಿನ್ ಭವಾನ್ಯೇಕಂ ಬ್ರಹ್ಮಣಾ ನಿರ್ಮಿತಂ ಸರಃ ।
ಮನಸಾ ಮುಕ್ತಿಸಿದ್ಧ್ಯರ್ಥಂ ತೇನ ತನ್ಮಾನಸಂ ಸರಃ ॥೬೬॥
ತಸ್ಮಾತ್ ಸುಸ್ರಾವ ಸರಸಃ ಕಾಚಿತ್ ಪುಣ್ಯತಮಾ ನದೀ ।
ಸರಃಪ್ರವೃತ್ತಾ ಸರಯೂಃ ಸೈವ ಕೋಸಲದೇಶಗಾ ॥೬೭॥
ಶ್ರೀರಙ್ಗಾಖ್ಯಂ ಮಹದ್ಧಾಮ ತತ್ರ ಪ್ರಿಯತಮಂ ಹರೇಃ ।
ಸದಾಸ್ತೇ ಯತ್ರ ಭಗವಾ ಸ್ತಂ ಸಂಶ್ಲಿಷ್ಯ ವರ್ತತೇ ॥೬೮॥
ಸಾ ನಾಚ್ಛ ಜನ್ಮತಃ ಸ್ಪರ್ಶಾತ್ ಶಿವಬ್ರಹ್ಮಹರಿಪ್ರಿಯಾ ।
ತಸ್ಮಾದ್ಗಙ್ಗಾದಿತೀರ್ಥೇಭ್ಯಃ ಸರಯೂಃ ಶ್ರೇಷ್ಠತಾಂ ಗತಾ ॥೬೯॥
ತತ್ರ ಕಾದ್ಧಾದಿಕಂ ದಾನಂ ಸ್ನಾನಂ ಚಾಪಿ ಕೃತಂ ಪ್ರಿಯೇ ।
ಪುನಾತಿ ಸರ್ವಪಾಪೇಭ್ಯಃ ಸರಯ್ವಾಂ ಯಜ್ಞಕರ್ಮ ವೈ ॥೭೦॥
ಅಯೋಧ್ಯಾ ನಾಮ ನಗರೀ ಸರಯೂತೀರವಾಶ್ರಿತಾ ।
ಮನುನಾ ನಿರ್ಮಿತಾ ಪೂರ್ವಂ ವಿಭೂಷಯತಿ ತತ್ತಟಮ್ ॥೭೧॥

ಎಲೌ ಭವಾನಿ! ಈ ಪರ್ವತದೊಳಗೆ, ಬ್ರಹ್ಮನು ಮುಕ್ತಿಸಿದ್ಧಿಗೋಸ್ಕರವಾಗಿ ಮನಸ್ಸಿನಿಂದಲೇ ಒಂದು ಸರಸ್ಸನ್ನು ನಿರ್ಮಿಸಿರುವನು; ಅದುಕಾರಣ, ಅದಕ್ಕೆ ಮಾನಸಸರಸ್ಸೆಂದು ಹೆಸರುಂಟಾಗಿರುವುದು ॥೬೬॥

ಆ ಸರಸ್ಸಿನ ದೆಸೆಯಿಂದ, ಒಂದು ಪುಣ್ಯತಮವಾದ ನದಿಯು ಸ್ರವಿಸಿರುವುದು. ಸರಸ್ಸಿನ ದೆಸೆಯಿಂದ ಹೊರಟಿರುವಕಾರಣ, ಅದಕ್ಕೆ 'ಸರಯೂ' ಎಂದು ಹೆಸರಾಯ್ತು. ಆ ನದಿಯೋ, ಕೋಸಲದೇಶದಲ್ಲಿ ಪ್ರವಹಿಸಿರುವುದು ॥೬೭॥

ಅಲ್ಲಿ ಶ್ರೀರಂಗವೆಂಬ ದೊಡ್ಡದೊಂದು ಕ್ಷೇತ್ರವಿರುವುದು. ಅದು ಶ್ರೀಹರಿಗೆ ಕೇವಲ ಪ್ರಿಯತಮವಾದುದು, ಅಲ್ಲಿ ಭಗವಂತನು ಸರ್ವದಾ ಸನ್ನಿಹಿತನಾಗಿರುವನು; ಆ ನದಿಯು, ಆ ಕ್ಷೇತ್ರಗತನಾದ ಭಗವಂತನನ್ನು ಸುತ್ತಲೂ ಆವರಿಸಿಕೊಂಡಿರುವುದು ॥೬೮॥

ಆ ಸರಯೂನದಿಯು, ಈಶ್ವರನ ಕೈಲಾಸಪರ್ವತದಲ್ಲಿರುವುದರಿಂದ ಈಶ್ವರನಿಗೆ ಕೇವಲ ಪ್ರಿಯವಾಗಿರುವುದು, ಬ್ರಹ್ಮನಮಾನಸ ನಿರ್ಮಿತವಾದ ಮಾನಸಸರಸ್ಸಿನಿಂದ ಹುಟ್ಟಿದಕಾರಣ ಬ್ರಹ್ಮನಿಗೆ ಪ್ರೀತಿಪಾತ್ರವಾಗಿರುವುದು; ವಿಷ್ಣುಕ್ಷೇತ್ರವಾದ ಶ್ರೀರಂಗವನ್ನು ಆವರಿಸಿಕೊಂಡಿರುವುದರಿಂದ ವಿಷ್ಣುವಿಗೆ ಮಹಾಪ್ರಿಯವಾಗಿರುವುದು. ಹೀಗಿರುವುದರಿಂದ, ಈ ಸರಯೂನದಿಯು ಗಂಗಾದಿ ಸಮಸ್ತ ತೀರ್ಥಗಳಿಗಿಂತಲೂ ಪ್ರಶಸ್ತವಾದುದೆಂದು ನಿಶ್ಚಿತವಾಗಿರುವುದು ॥೬೯॥

ಹೇ ಪ್ರಿಯೆ! ಆ ಸರಯೂತೀರದಲ್ಲಿ ಮಾಡಲ್ಪಟ್ಟ ಶ್ರಾದ್ಧಾದಿಕರ್ಮಗಳೂ ದಾನವೂ ಯಜ್ಞವೂ ಅದರಲ್ಲಿ ಸ್ನಾನವೂ ಕೂಡ, ಪುರುಷರನ್ನು ಸಮಸ್ತ ಪಾಪಗಳಿಂದಲೂ ಬಿಡಿಸಿ ಪರಿಶುದ್ಧಗೊಳಿಸುವುದು ॥೭೦॥

ಇಂತಹ ಸರಯೂನದಿಯ ತೀರದಲ್ಲಿ ಅಯೋಧ್ಯೆಯೆಂಬ ದೊಡ್ಡದೊಂದು ಪಟ್ಟಣವಿರುವುದು. ಪೂರ್ವದಲ್ಲಿ ಮನುವಿನಿಂದ ನಿರ್ಮಿಸಲ್ಪಟ್ಟ ಈ ಪಟ್ಟಣವು, ಆ ಸರಯೂತೀರಕ್ಕೆಲ್ಲ ಅಲಂಕಾರವಾಗಿರುವುದು ॥೭೧॥

ಉತ್ತರೇ ಸರಯೂಸ್ತತ್ರ್ಯಾಃ ದಕ್ಷಿಣೇ ಗೋಮತೀ ಶುಭಾ ।
ಭಾಗೀರಥೀ ಪುರೋಭಾಗೇ ಪರಿಖಾಇವ ಸಂಸ್ಥಿತಾಃ ॥೩೦॥
ಯಸ್ಮಾದುತ್ಪದ್ಯತೇ ತಸ್ಯಾಂ ಭಗವಾ೯ ಪುರುಷೋತ್ತಮಃ ।
ತಸ್ಮಾತ್ ತು ನಗರೀ ಪುಣ್ಯಾ ಸಾಯೋಧ್ಯೇತಿ ಪ್ರಕೀರ್ತಿತಾ ॥೩೧॥
ನಗರಸ್ಯ ಪರಂ ಧಾಮ್ನೋ ನಾಮ ತಸ್ಯಾಪ್ಯಭೂಚ್ಛ್ರಿಯೇ ।
ಯತ್ರಾಸ್ತೇ ಭಗವಾ೯ ವಿಷ್ಣುಃ ತದೇವ ಪರಮಂ ಪದಮ್ ॥೩೪॥
ಆಯತಾ ದಶ ಚ ದ್ವೇ ಚ ಯೋಜನಾನಿ ಮಹಾಪುರೀ ।
ಶ್ರೀಮತೀ ತ್ರೀಣಿ ವಿಸ್ತೀರ್ಣಾ ಸುವಿಭಕ್ತ ಮಹಾಪಥಾ ॥೩೫॥
ತಸ್ಯಾಃ ಪುರ್ಯಾಮಧ್ಯದೇಶೇ ಚಕ್ರತೀರ್ಥಸಮೀಪತಃ ।
ವಿಷ್ಣೋಸ್ತು ವಸತಿಃ ಪುಣ್ಯಾ ಸರ್ವಾಲಙ್ಕಾರಶೋಭಿತಾ ॥೩೬॥
ಸಾ ಯೋಜನೇ ಚ ದ್ವೇ ಭೂಯಃ ಸತ್ಯನಾಮಾ ಪ್ರಕಾಶತೇ ॥೩೭॥
ಮರೀಚಯಃ ಸ್ವಾಯಮ್ಭುವಾಃ ಇತ್ಯಾದಿಶ್ರುತಿಸಂಹತೌ ।
ಋಷಿಭಿಃ ಪೃಶ್ನಿಭಿಸ್ತತ್ರ್ಯಾಃ ಮಾಹಾತ್ಮ್ಯಂ ಬಹುಧೇರಿತಮ್ ।
ದೇವಾನಾಂ ಪೂರಯೋದ್ಯೇತಿ ಶ್ರುತ್ಯುಕ್ತಾ ಸಾ ತತಃ ಪುರೀ ॥೩೮॥

ಆ ಅಯೋಧ್ಯಾಪಟ್ಟಣಕ್ಕೆ, ಉತ್ತರದಿಕ್ಕಿನಲ್ಲಿ ಸರಯೂನದಿಯೂ, ದಕ್ಷಿಣದಿಕ್ಕಿನಲ್ಲಿ ಶುಭಕರವಾದ ಗೋಮತೀನದಿಯೂ, ಪೂರ್ವಭಾಗದಲ್ಲಿ ಗಂಗಾನದಿಯೂ, ಪರಿಖೆ(ಅಗಳು)ಗಳಂತಿರುವವು ॥೩೦॥

ಭಗವಂತನಾದ ಶ್ರೀ ಪುರುಷೋತ್ತಮನು ಅದರಲ್ಲಿ ಅವತರಿಸುವನಷ್ಟೆ! ಅದುಕಾರಣವೇ ಆ ಅಯೋಧ್ಯಾನಗರಿಯು ಅತಿ ಪುಣ್ಯತಮವೆಂದು ಹೇಳಲ್ಪಟ್ಟಿರುವುದು ॥೩೧॥

ಹೇ ಪ್ರಿಯೆ! ಆ ನಗರಕ್ಕೂ ಸಾಕ್ಷಾದ್ವೈಕುಂಠದ ಹೆಸರೇ ಉಂಟಾಗಿರುವುದು. ಆ ಭಗವಂತನಾದ ವಿಷ್ಣುವೆಲ್ಲಿರುವನೋ, ಅದೇ ಪರಮಪದವಲ್ಲವೆ! ॥೩೪॥

ಮಹಾವೈಭವಯುಕ್ತವಾದ ಆ ಪಟ್ಟಣವು, ಹನ್ನೆರಡು ಗಾವುದದುದ್ದವೂ, ಮೂರುಗಾವುದ ದಗಲವೂ ಇರುವುದು. ಅದರಲ್ಲಿ ಅನೇಕ ರಾಜಮಾರ್ಗಗಳು ಪರಸ್ಪರ ವಿಭಕ್ತಗಳಾಗಿ ಕಣ್ಗೊಳಿಸುತಿರುವವು ॥೩೫॥

ಆ ಪಟ್ಟಣದ ಮಧ್ಯಭಾಗದಲ್ಲಿ, ಚಕ್ರತೀರ್ಥದ ಹತ್ತಿರ, ಸರ್ವಾಲಂಕಾರ ಶೋಭಿತವಾದ ಮಹಾಪುಣ್ಯತಮವಾದ ಶ್ರೀವಿಷ್ಣುವಿನ ಆಲಯವಿರುವುದು. 'ಅಯೋಧ್ಯೆ' ಯೆಂದು ಯಥಾರ್ಥನಾಮವುಳ್ಳ ಆ ಪುರವು, ಸುತ್ತಲೂ ಮತ್ತೆರಡುಗಾವುದ ವಿಸ್ತೀರ್ಣವುಳ್ಳದಾಗಿ ಪ್ರಕಾಶಿಸುತ್ತಿರುವುದು ॥೩೬-೩೭॥

'ಮರೀಚಯಃ ಸ್ವಾಯಮ್ಭುವಾಃ' ಇತ್ಯಾದಿ ತೈತ್ತಿರೀಯಾರಣ್ಯಕಶ್ರುತಿಯಲ್ಲಿ, 'ದೇವಾನಾಂ ಪೂರಯೋದ್ಯಾ' ಇತ್ಯಾದಿ ವಾಕ್ಯದಿಂದ, ಮಹಾಸತ್ವಸಂಪನ್ನರಾದ ಋಷಿಗಳು, ಆ ಅಯೋಧ್ಯೆಯ ಮಾಹಾತ್ಮ್ಯವನ್ನು ಬಹಳವಾಗಿ ಹೇಳಿರುವರು. ಅದುಕಾರಣ, ಆ ಅಯೋಧ್ಯಾಪುರಿಯು ಶ್ರುತಿಪ್ರತಿಪಾದಿತವಾದುದು ॥೩೮॥

ಪಾಪಿನಾಂ ಕರ್ಮಬದ್ಧಾನಾಂ ಮಜ್ಜತಾಂ ಭವಸಾಗರೇ ।
ತತ್ಸೇವಯಾ ಭವೇನ್ಮೋಕ್ಷಃ ಸರ್ವಕರ್ಮನಿಕೃನ್ತನಃ ॥೩೯॥
ತಾಂ ಪುರೀಂ ಗೋಪುರೈರುಚ್ಚೈಃ ಹೇಮಪ್ರಾಕಾರಸಂವೃತಾಮ್ ।
ಅಮರಾವತ್ಯತಿಶಯಾಂ ನಾರೀಮಣ್ಡಲಮಣ್ಡಿತಾಮ್ ॥೪೦॥
ಕವಾಟತೋರಣವತೀಂ ಸುವಿಭಕ್ತಾನ್ತರಾಪಣಾಮ್ ।
ಸರ್ವಯನ್ತ್ರಾಯುಧವತೀಂ ಉಪೇತಾಂ ಸರ್ವಶಿಲ್ಪಿಭಿಃ ॥೪೧॥
ಉಚ್ಚಾಟ್ಟಾಲಧ್ವಜವತೀಂ ಶತಘ್ನೀಶತಸಙ್ಕುಲಾಮ್ ।
ಪ್ರಾಸಾದೈರತ್ನವಿಕೃತೈಃ ಪರ್ವತೈರುಪಶೋಭಿತಾಮ್ ॥೪೨॥
ಕೂಟಾಗಾರೈಶ್ಚ ಸಮ್ಪೂರ್ಣಾಂ ಇನ್ದ್ರಸ್ಯೇವಾಮರಾವತೀಮ್ ।
ಜೇತ್ರೀಮಷ್ಟಪದಾಕಾರಾಂ ವರನಾರೀಗಣೈರ್ಯುತಾಮ್ ॥೪೩॥
ಸರ್ವರತ್ನಸಮಾಕೀರ್ಣಾಂ ವಿಮಾನಗೃಹಶೋಭಿತಾಮ್ ।
ಗೃಹಗಾಢಾಮವಿಚ್ಛಿನ್ನಾಂ ಸಮಭೂಮೌ ನಿವೇಶಿತಾಮ್ ॥೪೪॥

ಪಾಪಿಷ್ಠರಾಗಿಯೂ ಕರ್ಮಬದ್ಧರಾಗಿಯೂ ಸಂಸಾರಸಮುದ್ರದಲ್ಲಿ ಮುಣುಗಿದವರಾಗಿಯೂ ಇರುವವರಿಗೆ, ಆ ಅಯೋಧ್ಯಾಪಟ್ಟಣದ ಸೇವೆಯಿಂದ, ಸರ್ವ ದುಷ್ಕರ್ಮಚ್ಛೇದನಪೂರ್ವಕವಾಗಿ ಮೋಕ್ಷವುಂಟಾಗುವುದು ॥೩೯॥

ಆ ಪುರಿಯು, ಎತ್ತರವಾದ ಗೋಪುರಗಳಿಂದಲೂ ಸುವರ್ಣಪ್ರಾಕಾರಗಳಿಂದಲೂ ಯುಕ್ತವಾಗಿರುವುದು; ಇದು, ಅಮರಾವತಿಯನ್ನೂ ವಿಸ್ತರಿಸಿದ್ದಿತು; ಸುಂದರೀಜನದಿಂದ ಅಲಂಕೃತವಾಗಿದ್ದಿತು ॥೪೦॥

ಆ ಪಟ್ಟಣದ ಬಾಗಿಲುಗಳೂ, ಹೊರಬಾಗಿಲಿಗೆ ಅಲಂಕಾರಾರ್ಥವಾಗಿ ಮಾಡಿರುವ ಮರಗಳೂ ಅತಿ ಪ್ರಶಸ್ತವಾಗಿದ್ದುವು; ಅಲ್ಲಿನ ಅಂಗಡಿಗಳೊಳಗೆ, ಒಂದಕ್ಕೊಂದು ಸೇರದೆ--ಪದಾರ್ಥಗಳೆಲ್ಲವೂ ವಿರಳವಾಗಿರುತಿದ್ದುವು; ಸಮಸ್ತ ಯಂತ್ರಗಳೂ, ಸಮಸ್ತವಾದ ಆಯುಧಗಳೂ, ಅಲ್ಲಿ ಸನ್ನಿಹಿತವಾಗಿದ್ದುವು; ಸಮಸ್ತ ಶಿಲ್ಪಕಾರರೂ ಅಲ್ಲಿ ವಾಸಮಾಡಿಕೊಂಡಿದ್ದರು ॥೪೧॥

ಎತ್ತರವಾದ ಅಟ್ಟಣೆ(ಮಹಡಿ)ಗಳೂ ಧ್ವಜಗಳೂ ಅಲ್ಲಿ ಬೇಕಾದಷ್ಟಿದ್ದುವು; ಸೂರಾರು ಶತಘ್ನಿ(ಫಿರಂಗಿ)ಗಳು ಅಲ್ಲಲ್ಲಿ ಕ್ರಮವಾಗಿಡಲ್ಪಟ್ಟಿದ್ದುವು; ರತ್ನನಿರ್ಮಿತವಾದ ಪ್ರಾಸಾದಗಳೂ, ಕ್ರೀಡಾಪರ್ವತಗಳೂ, ಅಯೋಧ್ಯೆಯನ್ನಲಂಕರಿಸುತಿದ್ದುವು ॥೪೨॥

ಕೂಟಗೃಹಗಳಿಂದ ಪರಿಪೂರ್ಣವಾಗಿರುವ ಆ ಅಯೋಧ್ಯೆಯು, ಇಂದ್ರನ ಅಮರಾವತಿಯಂತಿದ್ದಿತು. ಮತ್ತು ಪಗಡೆಯ ಚಾರಿಯಂತೆ ಆಕಾರವುಳ್ಳದಾಗಿ ಅತಿ ವಿಚಿತ್ರವಾಗಿದ್ದಿತು. ಅಲ್ಲಿರುವ ಸ್ತ್ರೀಪುರುಷರೆಲ್ಲರೂ ಅತ್ಯುತ್ತಮರಾಗಿದ್ದರು ॥೪೩॥

ಅಲ್ಲಿ ಸರ್ವರತ್ನಗಳೂ ಯಥೇಚ್ಛವಾಗಿದ್ದುವು; ವಿಮಾನಗೃಹ (ವಿಮಾನದಂತೆ ಎತ್ತರದಲ್ಲಿ ಕಟ್ಟಿರುವ ಕ್ರೀಡಾಭವನ)ಗಳು, ಆ ನಗರಿಗೆ ವಿಶೇಷವಾಗಿ ಶೋಭೆಯನ್ನುಂಟುಮಾಡುತಿದ್ದುವು. ಅಲ್ಲಿನ ಮನೆಗಳು ಒಂದಕ್ಕೊಂದು ಸೇರಿಕೊಂಡು ಸಾಲಾಗಿದ್ದುವು. ನಗರನಿರ್ಮಾಣದಲ್ಲಿ ಯಾವ ದೋಷವೂ ಇರಲಿಲ್ಲ. ಹಳ್ಳತಿಟ್ಟಿಲ್ಲದ ಭೂಮಿಯಲ್ಲಿ ನಿರ್ಮಿಸಲ್ಪಟ್ಟಿದ್ದಿತು ॥೪೪॥

ವಾಜಿವಾರಣಸಮ್ಪೂರ್ಣಾಂ ಗೋಭಿರುಷ್ಟ್ರೈಃ ಖರೈಸ್ತಥಾ ।
ಸಾಮನ್ತರಾಜಸಙ್ಘೈಶ್ಚ ಬಲಿಕರ್ಮಭಿರಾವೃತಾಮ್ ॥೪೫॥
ನಾನಾದೇಶನಿವಾಸೈಶ್ಚ ವಣಿಗ್ಭಿರುಪಶೋಭಿತಾಮ್ ।
ವಧೂನಾಟಕಸಙ್ಘೈಶ್ಚ ಸಂಯುಕ್ತಾಂ ಸರ್ವತಃ ಪುರೀಮ್ ॥೪೬॥
ದುನ್ದುಭೀಭಿರ್ಮೃದಙ್ಗೈಶ್ಚ ವೀಣಾಭಿಃ ಪಣವೈಸ್ತಥಾ ।
ನಾದಿತಾಂ ಭೃಶಮತ್ಯರ್ಥಂ ಪೃಥಿವ್ಯಾಂ ತಾಮನುತ್ತಮಾಮ್ ॥೪೭॥
ಮಹಾರಥೈರತಿರಥೈಃ ಸಾದಿಭಿಶ್ಚೋತ್ತಮೈರ್ಹಯೈಃ ।
ರಥೈರಾಯುಧಸನ್ನದ್ಧೈಃ ಆವೃತಾನ್ತಾಂ ಸಹಸ್ರಶಃ ॥೪೮॥
ತಾಂ ಪುರೀಂ ಸುಮಹಾತೇಜಾಃ ರಾಜಾ ದಶರಥೋ ಮಹಾನ್ ।
ಮಹಾಭಾಗವತಶ್ಶ್ರೇಷ್ಠಃ ಸರ್ವವೇದಾನ್ತಪಾರಗಃ ॥೪೯॥
ಇಕ್ಷ್ವಾಕೂಣಾಮತಿರಥಃ ಯಜ್ವಾ ಧರ್ಮರತೋ ವಶೀ ।
ಮಹರ್ಷಿಕಲ್ಪೋ ರಾಜರ್ಷಿಃ ತ್ರಿಷು ಲೋಕೇಷು ವಿಶ್ರುತಃ ॥೫೦॥
ಯಥಾಮನುರ್ಮಹಾತೇಜಾಃ ಲೋಕಸ್ಯ ಪರಿರಕ್ಷಿತಾ ।
ತಥಾ ದಶರಥೋ ರಾಜಾ ವಸನ್ ಜಗದಪಾಲಯತ್ ॥೫೧॥

ಆನೆಗಳಿಂದಲೂ, ಕುದುರೆಗಳಿಂದಲೂ, ಗೋವುಗಳಿಂದಲೂ, ಒಂಟೆಗಳಿಂದಲೂ, ಖರ(ಹೇಸರುಕತ್ತೆ)ಗಳಿಂದಲೂ, ಆ ನಗರವು ಆವೃತವಾಗಿದ್ದಿತು. ಸಾಮಂತರಾಜರುಗಳು, ಕೈಯಲ್ಲಿ ಕಪ್ಪಗಳನ್ನು ಹಿಡಿದುಕೊಂಡು, ಅಲ್ಲಿ ಸರ್ವದಾ ಕಾಯ್ದುಕೊಂಡಿರುತಿದ್ದರು ॥೪೫॥

ನಾನಾದೇಶ ನಿವಾಸಿಗಳಾದ ವರ್ತಕರು, ವ್ಯಾಪಾರಾರ್ಥವಾಗಿ ಅಲ್ಲಿಗೆ ಬಂದು ವಾಸಮಾಡುತಿದ್ದರು. ನಾಟ್ಯಗಾತಿಯರಿಗೆ ನರ್ತನವನ್ನು ಕಲಿಯಿಸುವ ನಾಟ್ಯಾಚಾರ್ಯರುಗಳು, ಅಲ್ಲಿ ಗುಂಪುಗುಂಪಾಗಿ ವಾಸಮಾಡುತಿದ್ದರು ॥೪೬॥

ಭೂಮಿಯಲ್ಲೆಲ್ಲ ಸರ್ವೋತ್ತಮವಾದ ಆ ನಗರದಲ್ಲಿ, ದುಂದುಭಿಗಳೂ ಮೃದಂಗಗಳೂ ವೀಣೆಗಳೂ ಪಣವಗಳೂ ಅತ್ಯಂತವಾಗಿ ಧ್ವನಿಮಾಡುತಿದ್ದುವು ॥೪೭॥

ಮಹಾರಥರೂ, ಅತಿರಥರೂ, ಅಶ್ವಾರೋಹರೂ, ಆಯುಧಸನ್ನದ್ಧರಾದ ಉತ್ತಮಭಟರೂ, ದಿವ್ಯರಥಗಳೂ ಕೂಡಿ, ಆ ಪಟ್ಟಣದೊಳಗೆ ಸಾವಿರಗಟ್ಟಲೆಯಾಗಿ ತುಂಬಿದ್ದುವು ॥೪೮॥

ಆ ಅಯೋಧ್ಯಾಪಟ್ಟಣದೊಳಗೆ, ಅತಿ ತೇಜಸ್ವಿಯಾಗಿಯೂ, ಭಗವದ್ಭಕ್ತರಲ್ಲಿ ಅಗ್ರಗಣ್ಯನಾಗಿಯೂ, ಸಮಸ್ತವಾದ ವೇದವೇದಾಂತಗಳಲ್ಲಿ ಪಾರಂಗತನಾಗಿಯೂ, ಇಕ್ಷ್ವಾಕುವಂಶದಲ್ಲಿ ಹುಟ್ಟಿದವರೊಳಗೆಲ್ಲ ಅತಿರಥನಾಗಿಯೂ, ಯಥಾಕ್ರಮವಾಗಿ ಅನೇಕ ಯಜ್ಞಗಳನ್ನು ಮಾಡಿದವನಾಗಿಯೂ, ಕೇವಲ ಧರ್ಮಮಾರ್ಗತತ್ಪರನಾಗಿಯೂ, ಜಿತೇಂದ್ರಿಯನಾಗಿಯೂ, ಮಹರ್ಷಿಸಮಾನನಾಗಿಯೂ, ಮೂರು ಲೋಕಗಳಲ್ಲಿಯೂ ವಿಖ್ಯಾತನಾದ ರಾಜರ್ಷಿಯಾಗಿಯೂ ಇದ್ದ, ದಶರಥನೆಂಬ ಮಹಾರಾಜನು ವಾಸಮಾಡುತ, ಪೂರ್ವದಲ್ಲಿ ಮಹಾ ತೇಜಸ್ವಿಯಾದ ಮನುವು ಹೇಗೆ ಲೋಕವನ್ನು ಕಾಪಾಡಿದನೋ- ಹಾಗೆ ಜಗತ್ತನ್ನು ಪರಿಪಾಲಿಸುತಿದ್ದನು ॥೪೯-೫೧॥

ಸ್ವಸ್ವವರ್ಣಾಶ್ರಮೋಚಾರನಿರತಾಬ್ರಾಹ್ಮಣಾದಯಃ ।
ಅರೋಗಿಣಶ್ಚ ತರುಣಾಃ ಭಗವದ್ಭಕ್ತಿ ಸಂಯುತಾಃ ॥೫೦॥
ಸರ್ವೇ ಬ್ರಹ್ಮವಿದಾಂ ಶ್ರೇಷ್ಠಾಃ ದಾತಾರೋ ಯೋಗವಿತ್ತಮಾಃ ।
ದೀರ್ಘಾಯುಷಃ ಸುನ್ದರಾಙ್ಗಾಃ ತತ್ರಾಸನ್ ಮನುಜಾಃ ಸುಖಮ್ ॥೫೧॥
ಉಪಯೇಮೇ ನೃಪಃ ಪೂರ್ವಂ ಕೌಸಲ್ಯಾಂ ಕೋಸಲಾತ್ಮಜಾಮ್ ।
ಸುಮಿತ್ರಾಂ ಮಗಧಾಪತ್ಯಂ ದ್ವಿತೀಯಾಮಗ್ರಹೀನ್ನೃಪಃ ॥೫೨॥
ಕೈಕೇಯೀಂ ಕೇಕಯಾಪತ್ಯಂ ತೃತೀಯಾಮಗ್ರಹೀತ್ ಪುನಃ ।
ಭೂಯೋಸ್ಯ ಭಾರ್ಯಾ ಬಹುಶೋ ಬಭೂವೂರಾಜಕನ್ಯಕಾಃ ॥೫೩॥
ತಸ್ಯ ತ್ವೇವಂಪ್ರಭಾವಸ್ಯ ಧರ್ಮಜ್ಞಸ್ಯ ಮಹಾತ್ಮನಃ ।
ಸುತಾರ್ಥಂ ತಪ್ಯಮಾನಸ್ಯ ನಾಸೀದ್ವಂಶಕರಃ ಸುತಃ ॥೫೪॥
ತತೋಬ್ರವೀತ್ ಸುಮನ್ತ್ರಂ ಸಃ ಸರ್ವಾನಾನಯ ಮೇ ಗುರೂನ್ ।
ಸಮಾನಯತ್ ಸ ತಾನ್ ಸರ್ವಾನ್ ಸುಮನ್ತ್ರೋ ವೇದಪಾರಗಾನ್ ॥೫೫॥
ವಸಿಷ್ಠಂ ವಾಮದೇವಂ ಚ ಜಾಬಾಲಿಮಥ ಕಾಶ್ಯಪಮ್ ।
ತಾನ್ ಪೂಜಯಿತ್ವಾ ಧರ್ಮಾತ್ಮಾ ರಾಜಾ ದಶರಥೋಬ್ರವೀತ್ ॥೫೬॥

ಆ ದಶರಥನು ರಾಜ್ಯಭಾರ ಮಾಡುತಿರುವಾಗ, ಬ್ರಾಹ್ಮಣಾದಿಗಳು, ತಮ್ಮತಮ್ಮ ವರ್ಣಾಶ್ರಮೋಚಿತಗಳಾದ ಕರ್ಮಗಳನ್ನು ಆಚರಿಸತಕ್ಕವರಾಗಿಯೂ, ನಿತ್ಯವೂ ರೋಗರಹಿತರಾಗಿಯೂ, ಸರ್ವದಾ ಯೌವನಶಾಲಿಗಳಾಗಿಯೂ, ಭಗವದ್ಭಕ್ತಿಯುಕ್ತರಾಗಿಯೂ, ಸರ್ವರೂ ಮಹಾಬ್ರಹ್ಮಜ್ಞಾನನಿಷ್ಠರಾಗಿಯೂ, ದಾನಶೀಲರಾಗಿಯೂ, ಉಪಾಯಕುಶಲರಾಗಿಯೂ, ಸಕಲ ಮನುಜರೂ ದೀರ್ಘಾಯುಷ್ಮರಾಗಿಯೂ, ಸೌಂದರ್ಯಶಾಲಿಗಳಾಗಿಯೂ ಇರುತಿದ್ದರು ॥೫೨–೫೫॥

ಆ ರಾಜನು, ಪ್ರಥಮತಃ ಕೋಸಲದೇಶಾಧಿಪತಿ ಪುತ್ರಿಯಾದ ಕೌಸಲ್ಯೆಯನ್ನು ಮದುವೆಯಾದನು; ಮಗಧ ರಾಜಪುತ್ರಿಯಾದ ಸುಮಿತ್ರೆಯನ್ನು ದ್ವಿತೀಯ ಪತ್ನಿಯನ್ನಾಗಿ ಸ್ವೀಕರಿಸಿದನು ॥೫೪॥

ಆಮೇಲೆ, ಕೇಕಯರಾಜ ಪುತ್ರಿಯಾದ ಕೈಕಯಿಯನ್ನು ತೃತೀಯ ಪತ್ನಿಯನ್ನಾಗಿ ಸ್ವೀಕರಿಸಿದನು. ಇವರಲ್ಲದೆ, ಇನ್ನೂ ಅನೇಕಮಂದಿ ರಾಜಪುತ್ರಿಯರು ಅವನಿಗೆ ಹೆಂಡತಿಯರಾಗಿದ್ದರು ॥೫೫॥

ಇಂತಹ ಪ್ರಭಾವಶಾಲಿಯಾಗಿ ಧರ್ಮಜ್ಞನಾಗಿ ಮಹಾತ್ಮನಾಗಿದ್ದ ಆ ದಶರಥನಿಗೆ, ಮಕ್ಕಳಾಗಬೇಕೆಂದು ಎಷ್ಟು ತಪಸ್ಸು ಮಾಡಿದರೂ, ಸಂತಾನಾಭಿವರ್ಧಕನಾದ ಮಗನು ಜನಿಸಲಿಲ್ಲ ॥೫೬॥

ಹೀಗಾದಬಳಿಕ, ಆ ದಶರಥನು, ಸುಮಂತ್ರನೆಂಬ ಮಂತ್ರಿಯನ್ನು ಕುರಿತು, 'ನನ್ನ ಗುರುಗಳನ್ನೆಲ್ಲ ಇಲ್ಲಿಗೆ ಕರೆದುಕೊಂಡು ಬಾ' ಎಂದು ಹೇಳಿದನು. ಆ ಸುಮಂತ್ರನು, ವಸಿಷ್ಠ ವಾಮದೇವ ಜಾಬಾಲಿ ಕಾಶ್ಯಪ–ಮುಂತಾದ ವೇದಪಾರಗರಾದ ಸಮಸ್ತ ಗುರುಗಳನ್ನೂ ಕರೆತಂದನು. ಅವರುಗಳನ್ನೆಲ್ಲ ಧರ್ಮಾತ್ಮನಾದ ದಶರಥನು ಪೂಜಿಸಿ, ಹೀಗೆ ಹೇಳಿದನು ॥೫೭–೫೮॥

ಸುತಾರ್ಥಂ ಹುಮುವೇಧೇನ ಯಕ್ಷ್ಯೆ ವಿಮಿತಿ ಮತಿರ್ಮಮ ।
ಕಥಂ ಪ್ರಾಪ್ಸ್ಯಮ್ಯಹಂ ಕಾಮಂ ಬುದ್ಧಿರತ್ರ ವಿಚಾರ್ಯತಾಮ್ ॥೫೯॥
ತತಃ ಸಾಧ್ವಿತಿ ತದ್ವಾಕ್ಯಂ ಬ್ರಾಹ್ಮಣಾಃ ಪ್ರತ್ಯಪೂಜಯನ್ ।
ಯಸ್ಯ ತೇ ಧಾರ್ಮಿಕೀ ಬುದ್ಧಿಃ ಇಯಂ ಪುತ್ರಾರ್ಥಮಾಗತಾ ॥೬೦॥
ಸರ್ವಥಾ ಪ್ರಾಪ್ಸ್ಯಸೇ ಪುತ್ರಾ ಅಭಿಪ್ರೇತಾಂಶ್ಚ ಪಾರ್ಥಿವ ।
ಸಮಾ ರಾಃ ಸಮ್ಭ್ರಿಯನ್ತಾಂ ತೇ ತುರಗಶ್ಚ ವಿಮುಚ್ಯತಾಮ್ ॥೬೧॥
ತತೋಽಬ್ರವೀನ್ನೃಪೋಮಾತ್ಯಾ ಶ್ರುತ್ವಾ ತದ್ದ್ವಿಜಭಾಷಿತಮ್ ।
ಸಮಾ ರಾಃ ಸಮ್ಭ್ರಿಯನ್ತಾಂ ಮೇ ಗುರೂಣಾಂ ವಚನಾದಿಹ ॥೬೨॥
ಅಥ ಸಂವತ್ಸರೇ ಪೂರ್ಣೇ ತಸ್ಮಿನ್ ಪ್ರಾಪ್ತೇ ತುರಙ್ಗಮೇ ।
ಸರಯ್ವಾಶ್ಚೋತ್ತರೇ ತೀರೇ ರಾಜ್ಞೋ ಯಜ್ಞೀಯಮ್ಯವರ್ತತ ॥೬೩॥
ಋಶ್ಯಶೃಙ್ಗಂ ಪುರಸ್ಕೃತ್ಯ ಕರ್ಮ ಚಕ್ರುರ್ದ್ವಿಜರ್ಷಭಾಃ ।
ಯಥಾವಿಧಿ ಯಥಾನ್ಯಾಯಂ ಪರಿಕ್ರಾಮನ್ತಿ ಸರ್ವತಃ ॥೬೪॥
ತ್ರ್ಯಹೋಶ್ವಮೇಧಃ ಸಂಖ್ಯಾತಃ ಕಲ್ಪಸೂತ್ರೇಣ ಬ್ರಾಹ್ಮಣೈಃ ।
ಚತುಷ್ಟೋಮಮಹಸ್ತಸ್ಯ ಪ್ರಥಮಂ ಪರಿಕಲ್ಪಿತಮ್ ॥೬೫॥

ಎಲೈ ಪೂಜ್ಯರುಗಳಿರಾ! ಸಂತಾನವ್ಯಾಪ್ತಿಗಾಗಿ ಅಶ್ವಮೇಧಯಜ್ಞವನ್ನು ಮಾಡಬೇಕೆಂದು ನನಗೆ ಬುದ್ಧಿಯುಂಟಾಗಿರುವುದು. ಆದರೆ, ನಾನು ಪುತ್ರನನ್ನು ಹೇಗೆ ಪಡೆಯುವನು? ಈ ವಿಷಯದಲ್ಲಿ ನಿಮ್ಮಗಳ ಅಭಿವ್ಯಾಯವು ಹೊರಪಡಿಸಲ್ಪಡಬೇಕು ॥೫೯॥

ಹೀಗೆ ದಶರಥನು ಹೇಳಿದಬಳಿಕ, ಆ ಬ್ರಾಹ್ಮಣರೆಲ್ಲರೂ 'ಸಾಧು ಸಾಧು' ಎಂದು ಅವನ ಮಾತನ್ನು ಶ್ಲಾಘಿಸಿ, 'ಎಲೈ ದೊರೆಯೆ! ನಿನಗೆ ಈಗ ಸಂತಾನಾರ್ಥವಾಗಿ ಇಂತಹ ಧರ್ಮನಿಷ್ಠವಾದ ಬುದ್ಧಿಯುಂಟಾಗಿರುವುದಲ್ಲ! ನೀನು ಸರ್ವಥಾ ಇಷ್ಟರಾದ ಮಕ್ಕಳುಗಳನ್ನು ಪಡೆಯುವೆ. ಎಲೈ ದೊರೆಯೆ! ನೀನು ಈಗ ಸಕಲ ಸಂಭಾರಗಳನ್ನೂ ಸಿದ್ಧಗೊಳ್ಳಿಸು; ಯಜ್ಞೀಯವಾದ ಕುದುರೆಯನ್ನೂ ಬಿಟ್ಟುಬಿಡು' ಎಂದು ಹೇಳಿದರು ॥೬೦-೬೧॥

ಬಳಿಕ, ಈರೀತಿಯಾಗಿ ಬ್ರಾಹ್ಮಣರು ಹೇಳಿದ ಮಾತನ್ನು ಕೇಳಿ, ದಶರಥನು ಮಂತ್ರಿಗಳನ್ನು ಕುರಿತು 'ಗುರುಗಳು ಈಗ ಅಪ್ಪಣೆ ಕೊಟ್ಟಂತೆ, ನಾನು ಅಶ್ವಮೇಧಕ್ರತುವನ್ನು ಮಾಡುವುದಕ್ಕೆ ಬೇಕಾದ ಸಕಲ ಸಂಭಾರಗಳನ್ನೂ ಸಿದ್ಧಗೊಳ್ಳಿಸಿರಿ' ಎಂದು ಆಜ್ಞಾಪಿಸಿದನು ॥೬೨॥

ಆ ಮಂತ್ರಿಗಳು ಅವನ ಅಪ್ಪಣೆಯಂತೆ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸಿ ಯಜ್ಞಾಶ್ವವನ್ನೂ ಬಿಟ್ಟುಬಿಟ್ಟಿ ಬಳಿಕ, ಒಂದು ವರ್ಷ ಕಳೆದಮೇಲೆ ಆ ಕುದುರೆಯು ಹಿಂದಿರುಗಿ ಬರಲಾಗಿ, ಸರಯೂನದಿಯ ಉತ್ತರತೀರದಲ್ಲಿ, ದಶರಥನು ಮಾಡುವ ದಿವ್ಯವಾದಕ್ರತುವು ನಡೆಯಿತು ॥೬೩॥

ಆಗ, ಸಮಸ್ತರಾದ ಬ್ರಾಹ್ಮಣಶ್ರೇಷ್ಠರೂ, ಋಶ್ಯಶೃಂಗ ಮಹಾಮುನಿಯನ್ನು ಮುಂದಿಟ್ಟುಕೊಂಡು, ಆ ಯಜ್ಞದಲ್ಲಿ ಸಮಸ್ತ ಕರ್ಮವನ್ನೂ ಮಾಡಿದರು. ಅಲ್ಲಿ, ಸಮಸ್ತ ಋತ್ವಿಕ್ಕುಗಳೂ, ಶ್ರುತಿಯಲ್ಲಿ ಹೇಳಿರುವಂತೆಯೂ, ವಿಧಿವಾಂಸೆಗೆ ವಿರೋಧವಿಲ್ಲದಂತೆಯೂ, ಸರ್ವತ್ರ ಕರ್ಮಗಳನ್ನು ನಡೆಯಿಸುತಿದ್ದರು ॥೬೪॥

ಅಶ್ವಮೇಧಯಜ್ಞ ಪೂರ್ತಿಯಾಗುವುದಕ್ಕೆ ಅನೇಕ ದಿವಸಗಳು ಬೇಕಾಗಿದ್ದರೂ, ಅದರಲ್ಲಿ ಮೂರು ದಿವಸಗಳೇ ಸವನೀಯಾಹಸ್ಸು (ಹೋಮ ನಡೆಯತಕ್ಕ ದಿವಸವೆಂದು ಮುಖ್ಯಭಾವವು)

ಉಕ್ಥ್ಯಂ ದ್ವಿತೀಯಂ ಸಂಖ್ಯಾತಂ ಅತಿರಾತ್ರಂ ತಥೋತ್ತರಮ್ ।
ಕಾರಿತಾಸ್ತತ್ರ ಬಹವೋ ವಿಹಿತಾಃ ಶಾಸ್ತ್ರದರ್ಶನಾತ್ ॥೬೬॥
ಜ್ಯೋತಿಷ್ಟೋಮಾಯುಷೀ ಚೈವಂ ಅತಿರಾತ್ರೌ ಚ ನಿರ್ಮಿತೌ ।
ಅಭಿಜಿದ್ವಿಶ್ವಜಿಚ್ಚೈವಂ ಆಪ್ತೋರ್ಯಾಮೋ ಮಹಾಕ್ರತುಃ ॥೬೭॥
ಕ್ರತುಂ ಸಮಾಪ್ಯ ತು ತದಾ ನ್ಯಾಯತಃ ಪುರುಷರ್ಷಭಃ ।
ಋತ್ವಿಗ್ಭ್ಯೋ ಹಿ ದದೌ ರಾಜಾ ಧಾತಾಂ ತಾಂ ಕ್ರತುವರ್ಧನಃ ॥೬೮॥
ಪ್ರಾಚೀಂ ಹೋತ್ರೇ ದದೌ ರಾಜಾ ದಿಶಂ ಸ್ವಕುಲವರ್ಧನಃ ।
ಅಧ್ವರ್ಯವೇ ಪ್ರತೀಚೀಂ ತು ಬ್ರಹ್ಮಣೇ ದಕ್ಷಿಣಾಂ ದಿಶಮ್ ॥೬೯॥
ಉದ್ಗಾತ್ರೇ ಚ ತಥೋದೀಚೀಂ ದಕ್ಷಿಣೈಷಾ ವಿನಿರ್ಮಿತಾ ।
ಅಶ್ವಮೇಧೇ ಮಹಾಯಜ್ಞೇ ಸ್ವಯಮ್ಭುವಿಹಿತೇ ಪುರಾ ॥೭೦॥
ಗವಾಂ ಶತಸಹಸ್ರಾಣಿ ದಶ ತೇಭ್ಯೋ ದದೌ ನೃಪಃ ।
ದಶಕೋಟಿಂ ಸುವರ್ಣಸ್ಯ ರಜತಸ್ಯ ಚತುರ್ಗುಣಮ್ ॥೭೧॥
ತತಃ ಪ್ರೀತೇಷು ನೃಪತಿಃ ದ್ವಿಜೇಷು ದ್ವಿಜವತ್ಸಲಃ ।
ಋಶ್ಯಶೃಙ್ಗಮುವಾಚೇದಂ ಕುಲವೃದ್ಧಿಂ ಕುರುಷ್ವ ಮೇ ॥೭೨॥

ಗಳೆಂದು ಕಲ್ಪಸೂತ್ರಗಳೂ-ವೇದದ ಬ್ರಾಹ್ಮಣವಚನಗಳೂ ನಿರ್ಣಯಿಸಿರುವುವು. ಅವುಗಳಲ್ಲಿ ಮೊದಲನೆಯು ದಿವಸಕ್ಕೆ ಅಗ್ನಿಷ್ಟೋಮಯಾಗಹಸ್ಸೆಂದೂ, ದ್ವಿತೀಯದಿವಸಕ್ಕೆ ಉಕ್ಥ್ಯಹಸ್ಸೆಂದೂ, ತೃತೀಯ ದಿವಸಕ್ಕೆ ಅತಿರಾತ್ರಹಸ್ಸೆಂದೂ, ಶಾಸ್ತ್ರಸಿದ್ಧಾಂತವಿರುವುದು. ಇದಲ್ಲದೆ, ಶ್ರೇಯೋವೃದ್ಧಿಗಾಗಿ ಇನ್ನೂ ಅನೇಕ ಯಾಗಗಳನ್ನು ಅಲ್ಲಿ ಅಶ್ವಮೇಧಾನಂತರ ಶಾಸ್ತ್ರಾನುಸಾರವಾಗಿ ಮಾಡಿದರು. ಜ್ಯೋತಿಷ್ಟೋಮ, ಆಯುಷ, ಅತಿರಾತ್ರ (ಇದನ್ನು ಎರಡುವೇಳೆ ಮಾಡಿದರು), ಅಭಿಜಿತ್, ವಿಶ್ವಜಿತ್, ಆಪ್ತೋರ್ಯಾಮ—ಎಂಬ ಈ ಆರು ಯಾಗಗಳನ್ನೂ, ಅಲ್ಲಿ ಅಶ್ವಮೇಧಯಜ್ಞ ಮುಗಿದಬಳಿಕ ಮಾಡಿದರು ॥೬೫-೬೭॥

ಆಗ, ಪುರುಷಶ್ರೇಷ್ಠನಾದ ಆ ದಶರಥರಾಜನು, ತನ್ನ ಕ್ರತುಫಲವು ಸಂಪೂರ್ಣವಾಗುವುದಕ್ಕೋಸ್ಕರ, ನ್ಯಾಯಾನುಸಾರವಾಗಿ ತನ್ನ ಭೂಮಿಯನ್ನೆಲ್ಲ ಋತ್ವಿಕ್ಕುಗಳಿಗೆ ಹಂಚಿ ಕೊಟ್ಟು ಬಿಟ್ಟನು ॥೬೮॥

ಅದರ ಕ್ರಮ ಹೇಗೆಂದರೆ:—ತನ್ನ ವಂಶಾಭಿವೃದ್ಧಿಯನ್ನು ಬಯಸತಕ್ಕವನಾಗಿರುವ ಆ ದಶರಥನು, ಹೋತೃವಿಗೆ ಪೂರ್ವದಿಕ್ಕನ್ನೂ, ಅಧ್ವರ್ಯುವಿಗೆ ಪಶ್ಚಿಮದಿಕ್ಕನ್ನೂ, ಬ್ರಹ್ಮನಿಗೆ ದಕ್ಷಿಣದಿಕ್ಕನ್ನೂ, ಉದ್ಗಾತೃವಿಗೆ ಉತ್ತರದಿಕ್ಕನ್ನೂ ಕೊಟ್ಟನು. ಈ ಅಶ್ವಮೇಧವೆಂಬ ಮಹಾಯಜ್ಞವು, ಪೂರ್ವದಲ್ಲಿ ಬ್ರಹ್ಮನಿಂದ ಮಾಡಲ್ಪಟ್ಟಿತು. ಆಗ ಈ ದಕ್ಷಿಣೆಯೇರ್ಪಡಿಸಲ್ಪಟ್ಟಿತು॥೬೯-೭೦॥

ಈ ದಕ್ಷಿಣೆಯಲ್ಲದೆ, ಆ ಋತ್ವಿಕ್ಕರಿಗೆ, ಒಂದು ಲಕ್ಷ ಗೋವುಗಳನ್ನೂ, ಹತ್ತುಕೋಟಿ ಸುವರ್ಣವನ್ನೂ, ಇದಕ್ಕೆ ನಾಲ್ಕರಷ್ಟು ಹೆಚ್ಚಾಗಿ ರಜತವನ್ನೂ, ದಶರಥನು ದಾನಮಾಡಿದನು ॥

ಅನಂತರ, ಆ ಬ್ರಾಹ್ಮಣರೆಲ್ಲರೂ ಸಂತುಷ್ಟರಾಗಲಾಗಿ, ಬ್ರಾಹ್ಮಣಭಕ್ತಿಯುಳ್ಳವನಾದ ದೊರೆಯು, ಋಷ್ಯಶೃಂಗ ಮುನಿಯನ್ನು ಕುರಿತು 'ಸ್ವಾಮಿ! ನನಗೆ ವಂಶಾಭಿವೃದ್ಧಿಯುಂಟಾಗುವಂತೆ ತಾವು ಮಾಡಬೇಕು' ಎಂದು ಪ್ರಾರ್ಥಿಸಿದನು ॥೭೨॥

ತಥೇತಿ ಚ ಸ ರಾಜಾನಂ ಉವಾಚ ಋಷಿಸತ್ತಮಃ ।
ಭವಿಷ್ಯನ್ತಿ ಸುತಾರಾಜ್ಞ ಚತ್ವಾರಸ್ತೇ ಕುಲೋದ್ವಹಾಃ ॥೭೩॥
ಅಥರ್ವಶಿರಸಿ ಪ್ರೋಕ್ತೈಃ ಮನ್ತ್ರೈಃ ಸಿದ್ಧಾಂ ವಿಧಾನತಃ ।
ಇಷ್ಟಿಂ ತೇಹಂ ಕರಿಷ್ಯಾಮಿ ಪುತ್ರೀಯಾಂ ಪುತ್ರಕಾರಣಾತ್ ॥೭೪॥
ತತಃ ಪ್ರಾಕ್ರಮದಿಷ್ಟಿಂ ತಾಂ ನೃಪತೇಃ ಪುತ್ರಕಾರಣಾತ್ ।
ಜುಹಾವಾಗ್ನೌ ಚ ತೇಜಸ್ವೀ ಮನ್ತ್ರದೃಷ್ಟೇನ ಕರ್ಮಣಾ ॥೭೫॥
ತೇನ ಸಮ್ಪೂಜಿತಃ ಶ್ರೀಕೋ ವರದೋ ಹೃಷ್ಟಮಾನಸಃ ।
ಸವ್ಯಾಜ್ಞಸಶ್ರಿಯಾ ಸಾರ್ಧಂ ಶಙ್ಖಚಕ್ರಾಭಯಾಙ್ಕಿತಃ ॥೭೬॥
ಶ್ರೀವತ್ಸಕೌಸ್ತುಭೋರಸ್ಕೋ ವನಮಾಲಾವಿರಾಜಿತಃ ।
ಶುದ್ಧಜಾಮೂನದಪ್ರಖ್ಯಃ ಸರ್ವಾಭರಣಭೂಷಿತಃ ॥೭೭॥
ಪೀತಾಮ್ಬರಧರಃ ಸ್ರಗ್ವೀ ಚತುರ್ಬಾಹುರುದಾರಧೀಃ ।
ತಸ್ಮಾನ್ನಾವಿರಭೂದಗ್ನೌ ಯಜ್ಞೇ ನಾರಾಯಣಃ ಸ್ವಯಮ್ ॥೭೮॥
ವೈಷ್ಣವೇನ ಸುಯಜ್ಞೇನ ಭಕ್ತ್ಯಾ ಪರಮಯಾ ಚ ತೇ ।
ವರದೋಸ್ಮೀತಿ ತಂ ಪ್ರಾಹ ರಾಜಾನಂ ಭಕ್ತವತ್ಸಲಃ ॥೭೯॥

ಆ ಋಶ್ಯಶೃಂಗನು, ದಶರಥನನ್ನು ಕುರಿತು 'ಅಯ್ಯಾ! ರಾಜನೆ! ಹಾಗೆಯೇ ಆಗಲಿ. ನಿನಗೆ ವಂಶಪ್ರತಿಷ್ಠಾಪಕರಾದ ನಾಲ್ಕುಮಂದಿ ಮಕ್ಕಳು ಹುಟ್ಟುವರು. ನಾನು, ಅಥರ್ವಣ ವೇದದಲ್ಲಿ ಉಕ್ತವಾದ ಮಂತ್ರಗಳಿಂದ, ವಿಧ್ಯನುಸಾರವಾಗಿ, ನಿನಗೆ ಸಂತಾನವುಂಟಾಗುವುದ ಕ್ಕೋಸ್ಕರ, ಪುತ್ರಕಾಮೇಷ್ಟಿಯನ್ನು ಮಾಡುವೆನು' ಎಂದು ಹೇಳಿದನು ॥೭೩-೭೪॥

ಹೀಗೆ ಹೇಳಿ, ಆ ಋಶ್ಯಶೃಂಗಮುನಿಯು ದಶರಥನಿಗೆ ಸಂತಾನವೃದ್ಧಿಯಾಗುವುದಕ್ಕೋಸ್ಕರ ಯಾಗವನ್ನು ಪ್ರಾರಂಭಿಸಿದನು. ಮಹಾತೇಜಸ್ವಿಯಾದ ಆ ಋಶ್ಯಶೃಂಗನು, ಮಂತ್ರಪ್ರೋಕ್ತವಾದ ವಿಧಿಯಿಂದ ಅಗ್ನಿಯಲ್ಲಿ ಹೋಮವನ್ನೂ ಮಾಡಿದನು ॥೭೫॥

ಅನಂತರ, ಆ ಯಾಗದಿಂದ ಪೂಜಿತನಾದ ಲಕ್ಷ್ಮೀಪತಿಯು, ಸಂತುಷ್ಟಹೃದಯನಾಗಿ, ವರವನ್ನು ಕೊಡುವುದಕ್ಕೋಸ್ಕರ, ಆ ಯಜ್ಞದಲ್ಲಿ ಅಗ್ನಿಕುಂಡದೊಳಗೆ ತಾನಾಗಿ ಆವಿರ್ಭವಿಸಿದನು. ಅವನ ಶರೀರದ ವಾಮಪಾರ್ಶ್ವದಲ್ಲಿ ಲಕ್ಷ್ಮೀದೇವಿಯಿದ್ದಳು; ಅವನು ಶಂಖಚಕ್ರಗಳನ್ನೂ ಅಭಯಮುದ್ರೆಯನ್ನೂ ಕೈಯಲ್ಲಿ ಧರಿಸಿದ್ದನು. ಅವನ ಹೃದಯದಲ್ಲಿ, ಶ್ರೀವತ್ಸವೆಂಬ ಚಿಹ್ನೆಯೂ ಕೌಸ್ತುಭರತ್ನವೂ ವನಮಾಲಿಕೆಯೂ ವಿರಾಜಿಸುತಿದ್ದವು. ಅವನು, ಪುಟಹಾಕಿದ ಚಿನ್ನದಂತೆ ಕಾಂತಿಯುಳ್ಳವನಾಗಿಯೂ ಸರ್ವಾಭರಣಭೂಷಿತನಾಗಿಯೂ ಪೀತಾಂಬರಧರನಾಗಿಯೂ ನವರತ್ನಮಾಲಿಕಾಶೋಭಿತನಾಗಿಯೂ ಚತುರ್ಭುಜನಾಗಿಯೂ ಇದ್ದನು. ಹೀಗಿರುವ ಶ್ರೀಮನ್ನಾರಾಯಣನು, ಉದಾರಹೃದಯನಾಗಿ ಆ ಯಜ್ಞಕುಂಡದಲ್ಲಿ ಆವಿರ್ಭವಿಸಿದನು ॥೭೬—೭೮॥

ಹೀಗೆ ಆವಿರ್ಭವಿಸಿದ ಭಕ್ತವತ್ಸಲನಾದ ಶ್ರೀಮನ್ನಾರಾಯಣನು, ದಶರಥನನ್ನು ಕುರಿತು 'ಅಯ್ಯಾ ದಶರಥ! ನೀನು ವಿಷ್ಣುಪ್ರೀತಿಕರವಾಗಿ ಮಾಡಿದ ಈ ಉತ್ತಮಯಾಗದಿಂದಲೂ ನಿನ್ನ ಅಧಿಕವಾದ ಭಕ್ತಿಯಿಂದಲೂ ನಾನು ಸಂತುಷ್ಟನಾಗಿ ವರಪ್ರದಾನ ಮಾಡಲು ಬಂದಿರುವೆನು' ಎಂದು ಹೇಳಿದನು ॥೭೯॥

ತಂ ದೃಷ್ಟ್ವಾ ಸರ್ವಲೋಕೇಶಂ ರಾಜಾ ಹರ್ಷಸಮಾಕುಲಃ ।
ವವನ್ದೇ ಭಾರ್ಯಯಾ ಸಾರ್ಧಂ ತುಷ್ಟಾವ ಚ ಮುಹುರ್ಮುಹುಃ ॥೧೦॥
ಪ್ರಾಞ್ಜಲಿಃ ಪ್ರಯತೋ ಭೂತ್ವಾ ಹರ್ಷಗದ್ಗದಯಾ ಗಿರಾ ।
ಪುತ್ರತ್ವಂ ಮೇ ಭಜೇತ್ಯಾಹ ದೇವದೇವಂ ಜನಾರ್ದನಮ್ ।
ಇನ್ದೀವರದಳಶ್ಯಾಮಂ ಇನ್ದಿರಾನನ್ದವರ್ಧನಮ್ ॥೧೧॥
ತತಃ ಪ್ರಸನ್ನೋ ಭಗವಾನ್ ಪ್ರಾಹ ರಾಜಾನಮಚ್ಯುತಃ ।
ಪುತ್ರೋಽಹಂ ತೇ ಜನಿಷ್ಯಾಮಿ ಸರ್ವಲೋಕಹಿತಾಯ ವೈ ॥೧೨॥
ಪರಿತ್ರಾಣಾಯ ದೇವಾನಾಂ ರಾಕ್ಷಸಾನಾಂ ಕ್ಷಯಾಯ ಚ ।
ಮುಕ್ತಿಂ ಪ್ರದಾತುಂ ಭಕ್ತಾನಾಂ ಧರ್ಮಸಂಸ್ಥಾಪನಾಯ ವೈ ॥೧೩॥
ಸೇತ್ವಾದಿಧರ್ಮಂ ಕರ್ತುಂ ಚ ಮದ್ಗಾಥಾಸಾ ಪನಾಯ ಚ ।
ತ್ವದಾತ್ಮಜತ್ವಮಾಸಾದ್ಯ ಕರಿಷ್ಯೇ ಗಾಮರಾಕ್ಷಸಾಮ್ ॥೧೪॥
ಇತ್ಯುಕ್ತ್ವಾ ಪಾಯಸಂ ದಿವ್ಯಂ ಹೇಮಪಾತ್ರಸ್ಥಿತಂ ಶುಭಮ್ ।
ಲಕ್ಷ್ಮೀಹಸ್ತಸ್ಥಿತಂ ಶುಭ್ರಂ ಪಾರ್ಥಿವಾಯ ದದೌ ಹರಿಃ ॥೧೫॥
ಇದಂ ತು ಪಾಯಸಂ ದೇಹಿ ಪತ್ನೀಭ್ಯಸ್ತವ ಪಾರ್ಥಿವ ।
ತಸ್ಮಾತ್ ತವ ಜನಿಷ್ಯೇಽಹಂ ಅಂಶಂ ವಿಭಜ್ಯ ಚತುರ್ವಿಧಮ್ ॥೧೬॥

ಸರ್ವಲೋಕಮಹೇಶ್ವರನಾದ ಆ ಯಜ್ಞಪುರುಷನನ್ನು ಕಂಡು, ದಶರಥನು ಕೇವಲ ಹರ್ಷಾವಿಷ್ಟನಾಗಿ, ತನ್ನ ಪತ್ನಿಯೊಡನೆ ಅವನಿಗೆ ನಮಸ್ಕರಿಸಿ, ಬಾರಿಬಾರಿಗೂ ಸ್ತೋತ್ರಮಾಡಿದನು ।

ನೀಲೋತ್ಪಲಶ್ಯಾಮಲನಾಗಿಯೂ ದೇವದೇವನಾಗಿಯೂ ಲಕ್ಷ್ಮೀಪತಿಯಾಗಿಯೂ ಇರುವ ಆ ಜನಾರ್ದನನನ್ನು ಕುರಿತು 'ಸ್ವಾಮಿ! ನೀನು ನನಗೆ ಪುತ್ರನಾಗಬೇಕು' ಎಂದು ಕೈಮುಗಿದು ಕೊಂಡು ಭಕ್ತಿಯುಕ್ತನಾಗಿ ಕೇಳಿಕೊಂಡನು ॥೧೧॥

ಒಳಿಕ, ಭಗವಂತನಾದ ಅಚ್ಯುತನು ಪ್ರಸನ್ನನಾಗಿ, ದಶರಥನನ್ನು ಕುರಿತು 'ಅಯ್ಯಾ! ದಶರಥ! ನಾನು ನಿನಗೆ ಮಗನಾಗಿ ಹುಟ್ಟುವೆನು. ಸರ್ವಲೋಕಗಳಿಗೂ ಹಿತವುಂಟಾಗುವುದಕ್ಕಾಗಿಯೂ, ದೇವತೆಗಳನ್ನು ರಕ್ಷಿಸುವುದಕ್ಕಾಗಿಯೂ, ರಾಕ್ಷಸರನ್ನು ನಾಶಪಡಿಸುವುದಕ್ಕಾಗಿಯೂ, ಭಕ್ತರಿಗೆ ಮುಕ್ತಿಯನ್ನು ಕೊಡುವುದಕ್ಕಾಗಿಯೂ, ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೂ, ಸೇತು ಮುಂತಾದ ಧರ್ಮಕಾರ್ಯಗಳನ್ನು ಮಾಡುವುದಕ್ಕಾಗಿಯೂ, ನನ್ನ ಕಥೆಯನ್ನು ಈ ಲೋಕದಲ್ಲಿ ಹರಡುವುದಕ್ಕಾಗಿಯೂ, ನಾನು ನಿನ್ನ ಪುತ್ರನಾಗಿ ಅವತರಿಸಿ, ಈ ಭೂಮಿಯನ್ನೆಲ್ಲ ರಾಕ್ಷಸಶೂನ್ಯವನ್ನಾಗಿ ಮಾಡುವೆನು.' ಎಂದು ಹೇಳಿದನು ॥೧೨—೧೬॥

ಹೀಗೆಂದು ಹೇಳಿ ಆ ಹರಿಯು, ಲಕ್ಷ್ಮೀದೇವಿಯು ಕೈಯಲ್ಲಿ ಸುವರ್ಣಪಾತ್ರೆಯೊಳಗಿದ್ದ ದಿವ್ಯವಾಗಿಯೂ ಶುಭವಾಗಿಯೂ ಇರುವ ಪಾಯಸವನ್ನು ದಶರಥನಿಗೆ ಕೊಟ್ಟನು ॥೧೭॥

ಆ ಪಾಯಸವನ್ನು ಕೊಟ್ಟು ಹೀಗೆ ಹೇಳಿದನು:—ಅಯ್ಯಾ! ದಶರಥ! ಈ ಪಾಯಸವನ್ನು ನೀನು ನಿನ್ನ ಪತ್ನಿಯರಿಗೆ ಕೊಡುವವನಾಗು. ಇದರಿಂದ, ನಾನು ನನ್ನ ಅಂಶವನ್ನು ನಾಲ್ಕು


ಜನಿಷ್ಯೇ ಸಹಪತ್ನೀಕಃ ಸಪರ್ಯಾಜ್ಯಃ ಸಹಾಯುಧಃ ।
ಇತ್ಯುಕ್ತ್ವಾ ಪಾಯಸೇ ಸಾಕ್ಷಾತ್ ಪ್ರವಿಷ್ಟೋನ್ತರಧೀಯತ ॥೪೭॥

ಇತಿ ಶ್ರೀ ಬಾಲಕಾಣ್ಡೇ ಮನುತಪಶ್ಚರಣ ಪುತ್ರಕಾಮೇಷ್ಟಿ
ದಶರಥವರಪ್ರದಾನ ಪಾಯಸದಾನಾದಿ ಕಥನಂ ನಾಮ
ತ್ರಯೋದಶಃ ಸರ್ಗಃ.

ವಿಧವಾಗಿ ಮಾಡಿಕೊಂಡು ನಿನ್ನ ಮಗನಾಗಿ ಜನಿಸುವೆನು. ನಾನು, ಪತ್ನಿಯೊಡನೆಯೂ ನನ್ನ ಮುಂಚಿಭೂತನಾದ ಆದಿಶೇಷನೊಡನೆಯೂ ಆಯುಧಗಳಾದ ಶಂಖಚಕ್ರಗಳೊಡನೆಯೂ ಅವತರಿಸುವೆನು.—ಎಲೌ ವಾರ್ವತಿ! ಆ ಶ್ರೀಹರಿ ಈರೀತಿಯಾಗಿ ಹೇಳಿ, ಸರ್ವರೂ ನೋಡುತಿರುವಾಗಲೇ ಆ ಪಾಯಸದೊಳಗೆ ಪ್ರವೇಶಿಸಿ ಅಂತರ್ಧಾನಹೊಂದಿಬಿಟ್ಟನು ॥೪೬—೪೭॥

ಇದು ಬಾಲಕಾಂಡದಲ್ಲಿ ಮನುತಪಶ್ಚರಣ ಪುತ್ರಕಾಮೇಷ್ಟಿ ದಶರಥವರಪ್ರದಾನ
ಪಾಯಸದಾನಾದಿಕಥನವೆಂಬ ಹದಿಮೂರನೆಯ ಸರ್ಗವು.


ಅಥ ಶ್ರೀ ಬಾಲಕಾಂಡೇ ಚತುರ್ದಶಃ ಸರ್ಗಃ.



ಶ್ರೀ ಶಿವಉವಾಚ.

ತತೋ ದಶರಥಃ ಪ್ರಾಪ್ಯ ಪಾಯಸಂ ದೇವನಿರ್ಮಿತಮ್ ।
ಸೋಽನ್ತಃಪುರಂ ಪ್ರವಿಶ್ಯೈವ ಕೌಸಲ್ಯಾಮಿದಮಬ್ರವೀತ್ ।
ಪಾಯಸಂ ಪ್ರತಿಗೃಹ್ಣೀಷ್ವ ಪುತ್ರಾರ್ಥಂ ತ್ವಿದಮಾತ್ಮನಃ ॥೧॥
ಕೌಸಲ್ಯಾಯೈ ನರಪತಿಃ ಪಾಯಸಾರ್ಧಂ ದದೌ ತದಾ ।
ಅರ್ಧಾದರ್ಧಂ ದದೌ ಚಾಪಿ ಸುಮಿತ್ರಾಯೈ ನರಾಧಿಪಃ ॥೨॥
ಕೈಕೇಯ್ಯೈ ಚಾವಶಿಷ್ಟಾರ್ಧಂ ದದೌ ಪುತ್ರಾರ್ಥಕಾರಣಾತ್ ॥೩॥
ಪ್ರದದೌ ಚಾವಶಿಷ್ಟಾರ್ಧಂ ಪಾಯಸಸ್ಯಾಮೃತೋಪಮಮ್ ।
ಅನುಚಿನ್ತ್ಯ ಸುಮಿತ್ರಾಯೈ ಪುನರೇವ ಮಹೀಪತಿಃ ॥೪॥

ಬಾಲಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು.



ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಬಳಿಕ ದಶರಥನು ದಿವ್ಯವಾದ ಪಾಯಸವನ್ನು ಸ್ವೀಕರಿಸಿ, ಅಂತಃಪುರಕ್ಕೆ ಹೋಗಿ, ಕೌಸಲ್ಯೆಯನ್ನು ಕರೆದು, 'ನಿನಗೆ ಸಂತಾನಪ್ರದವಾದ ಈ ಪಾಯಸವನ್ನು ತೆಗೆದುಕೊ' ಎಂದು ಹೇಳಿದನು ॥೧॥

ಹೀಗೆ ಹೇಳಿ, ಆ ದಶರಥನು, ತಾನು ತಂದಿದ್ದ ಪಾಯಸವನ್ನು ಸರಿಯಾಗಿ ಅರ್ಧಮಾಡಿ, ಸಂತಾನಾರ್ಥವಾಗಿ ಕೌಸಲ್ಯೆಗೆ ಕೊಟ್ಟನು. ಉಳಿದ ಅರ್ಧವನ್ನು ಎರಡುಭಾಗ ಮಾಡಿ, ಒಂದು ಭಾಗವನ್ನು (ಒಟ್ಟಿನಲ್ಲಿ ಕಾಲುಭಾಗ) ಸುಮಿತ್ರೆಗೆ ಕೊಟ್ಟನು. ತನ್ನ ಹತ್ತಿರ ಉಳಿದಿದ್ದುದರಲ್ಲಿ ಅರ್ಧವನ್ನು (ಒಟ್ಟಿನಲ್ಲಿ ಎಂಟನೆಯಭಾಗ) ಕೈಕೇಯಿಗೆ ಕೊಟ್ಟನು ॥೨—೩॥

ಬಳಿಕ, ದಶರಥನಿಗೆ ಹೀಗೆ ಯೋಚನೆಯುಂಟಾಯ್ತು :—ನನ್ನ ಕೈಯಲ್ಲಿ ಉಳಿದಿರುವ ಈ ಪಾಯಸದ ಅಷ್ಟಮಾಂಶವನ್ನು ಈಗ ಯಾರಿಗೆ ಕೊಡಲಿ? ಕೌಸಲ್ಯೆಯು ಜ್ಯೇಷ್ಠಳಾದುದರಿಂದ, ಅವಳಿಗೆ ಒಟ್ಟಿನಲ್ಲಿ ಅರ್ಧಭಾಗವನ್ನು ಕೊಟ್ಟಿರುವುದು ಸರಿಯಾಗಿಯೇ ಇರುವುದು ಸುಮಿತ್ರೆಯು ದ್ವಿತೀಯಳಾದುದರಿಂದ, ಇವಳಿಗೆ ನಾಲ್ಕನೆಯ ಒಂದುಭಾಗವನ್ನು ಕೊಟ್ಟಿರುವುದೂ ಯುಕ್ತವೇ ಆಯ್ತು. ಹಾಗೆಯೇ, ಕೈಕೇಯಿಯು ಕೊನೆಯವಳಾದುದರಿಂದ, ಇವಳಿಗೆ ಎಂಟನೆಯ ಒಂದುಭಾಗವನ್ನು ಕೊಟ್ಟುದುದೂ ಸರಿಯೇ ಆಯ್ತು. ಈಗ ಉಳಿದಿರುವ ಈಯೆಂಟನೆಯೊಂದಂಶ ಪಾಯಸವನ್ನು ಸುಮಿತ್ರೆಗೆ ಕೊಡಲೆ? ಅಥವಾ ಕೈಕೇಯಿಗೆ ಕೊಡಲೆ? ಕೈಕೇಯಿಗೆ ಕೊಟ್ಟರೆ, ಸುಮಿತ್ರೆಗೂ ಕೈಕೇಯಿಗೂ ಸಮವಾಗಿ ನಾಲ್ಕನೆಯೊಂದಂಶವೇ ಸೇರಿದಹಾಗಾಗುವಕಾರಣ, ಆಗ ಎರಡನೆಯವಳಾದ ಸುಮಿತ್ರೆಗೂ ಮೂರನೆಯವಳಾದ ಕೈಕೇಯಿಗೂ ಯಾವತಾರತಮ್ಯವೂ ಇಲ್ಲದಂತಾಗುವುದು. ಹೀಗಿರುವುದರಿಂದ, ಈಗ ನನ್ನಲ್ಲಿ ಉಳಿದಿರುವ ಈಯೆಂಟನೆಯೊಂದಂಶ ಪಾಯಸವನ್ನು ಸುಮಿತ್ರೆಗೆ ಕೊಡುವುದೇ ಯುಕ್ತವು. ಹೀಗೆ ಮಾಡಿದರೆ, ಮೂರುಜನಕ್ಕೂ ಅವರವರ ತಾರತಮ್ಯಾನುಗುಣವಾಗಿ ಕೊಟ್ಟಂತಾಗುವುದು.—ಇಷ್ಟು ಪರ್ಯಂತವೂ ಯೋಚನೆಮಾಡಿ, ಆ ದಶರಥನು, ಅಮೃತತುಲ್ಯವಾದ ಆ ಪಾಯಸದ ಅವಶಿಷ್ಟಾರ್ಧ (ಎಂಟನೆಯೊಂದಂಶ) ವನ್ನು ಪುನಃ ಸುಮಿತ್ರೆಗೆ ಕೊಟ್ಟನು ॥೪॥

ತತಸ್ತು ತಾಃ ಪ್ರಾಶ್ಯ ತದುತ್ತಮಸ್ತ್ರಿಯೋ ಮಹೀಪತೇರುತ್ತಮಪಾಯಸಂ
[ಪೃಥಕ್ ।
ಹುತಾಶನಾದಿತ್ಯಸಮಾನತೇಜಸೋಽಜೆರೇಣ ಗರ್ಭಾಃ ಪ್ರತಿಪೇದಿರೇ ತದಾ ॥೫॥
ತಾಸಾಂ ಗರ್ಭೇಷು ದೇವೇಶಃ ಪೀತವಾಸಾ ಜನಾರ್ದನಃ ।
ಶಙ್ಖಚಕ್ರಗದಾಪಾಣಿಃ ಆವಿರ್ಭೂತೋ ದಿನೇದಿನೇ ॥೬॥
ತತಸ್ತು ದ್ವಾದಶೇ ಮಾಸಿ ವಸನ್ತೇ ಸಮನೋರಮೇ ।
ಚೈತ್ರಶುಕ್ಲನವಮ್ಯಾಂ ತು ನಕ್ಷತ್ರೇ ದಿತಿದೈವತೇ ॥೭॥
ಮಧ್ಯಾಹ್ನೇ ಕರ್ಕಟೇ ಲಗ್ನೇ ಉಚ್ಚಸ್ಥೇ ಗ್ರಹಪಞ್ಚಕೇ ।
ಮೇಷಂ ಪೂಷಣಿ ಸಮ್ಪ್ರಾಪ್ತೇ ವಾಕ್ಪತಾವಿನ್ದುನಾ ಸಹ ॥೮॥
ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ।
ಕೌಸಲ್ಯಾಜನಯದ್ರಾಮಂ ಸರ್ವಲಕ್ಷಣಸಂಯುತಮ್ ॥೯॥
ಇನ್ದೀವರದಳಶ್ಯಾಮಂ ಸರ್ವಾಭರಣಭೂಷಿತಮ್ ।
ವರದಾನಾಗತಂ ಪೂರ್ವಂ ಸಾಕ್ಷಾದ್ವಿಷ್ಣುಂ ಪರಾತ್ಪರಮ್ ।
ಸರ್ವೋಪನಿಷದಾಮರ್ಥಂ ಜಗತ್ಸರ್ಗಾದಿಕಾರಣಮ್ ॥೧೦॥
ತಸ್ಮಿನ್ ಜಾತೇ ಜಗನ್ನಾಥೇ ದೇವದುನ್ದುಭಯೋ ದಿವಿ ।
ವಿನೇದುಃ ಪುಷ್ಪವರ್ಷಾಣಿ ವವೃಷುಃ ಸುರಸತ್ತಮಾಃ ॥೧೧॥

ಬಳಿಕ, ಆ ಉತ್ತಮಸ್ತ್ರೀಯರು, ದೊರೆಯು ತಮಗೆ ಕೊಟ್ಟ ಆ ದಿವ್ಯಪಾಯಸವನ್ನು ಬೇರೆ ಬೇರೆ ಪಾತ್ರಶನವಾಡಿ, ಸ್ವಲ್ಪದಿವಸದೊಳಗಾಗಿ, ಅಗ್ನಿಸೂರ್ಯರುಗಳಿಗೆ ಸಮಾನವಾದ ಗರ್ಭಗಳನ್ನು ಹೊಂದಿದರು ॥೫॥

ಅವರುಗಳ ಗರ್ಭದೊಳಗೆ, ದೇವದೇವನಾದ ಪೀತಾಂಬರಧಾರಿಯಾದ ಶಂಖಚಕ್ರಗದಾಹಸ್ತನಾದ ಶ್ರೀಮನ್ನಾರಾಯಣನು ಆವಿರ್ಭವಿಸಿ, ದಿನದಿನಕ್ಕೆ ಅಭಿವೃದ್ಧಿಹೊಂದುತಿದ್ದನು॥೬॥

ಆನಂತರ, ಹನ್ನೆರಡನೆಯ ತಿಂಗಳಿನಲ್ಲಿ, ಮನೋಹರವಾದ ವಸಂತಋತುವಿನಲ್ಲಿ, ಚೈತ್ರ ಶುಕ್ಲ ನವಮಿಯ ದಿವಸ, ಪುನರ್ವಸುನಕ್ಷತ್ರದ ಕೊನೆಯ ಪಾದದಲ್ಲಿ, ಮಧ್ಯಾಹ್ನಕಾಲದಲ್ಲಿ, ಕರ್ಕಾಟಕಲಗ್ನದಲ್ಲಿ, ಸೂರ್ಯ ಗುರು ಶುಕ್ರ ಅಂಗಾರಕ ಶನಿಗಳೆಂಬ ಅಯ್ದು ಗ್ರಹಗಳು ಉಚ್ಚಸ್ಥಾನದಲ್ಲಿರಲಾಗಿ, ಸೂರ್ಯನು ಮೇಷರಾಶಿಯಲ್ಲಿರಲಾಗಿ, ಗುರುವು ಚಂದ್ರನೊಡನೆ ಉದಯಿಸುತಿರಲಾಗಿ, ಕೌಸಲ್ಯೆಯು, ಸರ್ವಲೋಕನಮಸ್ಕೃತನಾದ ಸರ್ವಲಕ್ಷಣಯುಕ್ತನಾದ ಜಗನ್ನಾಯಕನಾದ ಶ್ರೀರಾಮನನ್ನು ಪ್ರಸವಿಸಿದಳು. ಆ ಶ್ರೀರಾಮನು, ಇಂದೀವರದಳಶ್ಯಾಮಲನಾಗಿಯೂ, ಸರ್ವಾಭರಣಭೂಷಿತನಾಗಿಯೂ ಇದ್ದನು. ಪೂರ್ವದಲ್ಲಿ ವರಪ್ರದಾನಮಾಡುವುದಕ್ಕೆ ಬಂದಿದ್ದ ಪರಾತ್ಪರತರನಾದ ಸಾಕ್ಷಾದ್ವಿಷ್ಣುವೇ ಅಲ್ಲಿ ಅರೀತಿಯಾಗಿ ಅವತರಿಸಿದ್ದನು, ಸಮಸ್ತವಾದ ಉಪನಿಷದ್ವಾಕ್ಯಗಳಿಗೂ ಇವನೇ ವಿಷಯಭೂತನು; ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಇವನೇ ಕಾರಣಭೂತನು. ಇಂತಹ ಶ್ರೀರಾಮನನ್ನು ಕೌಸಲ್ಯೆಯು ಆಗ ಪ್ರಸವಿಸಿದಳು ॥೭—೧೦॥

ಆ ಲೋಕನಾಯಕನಾದ ಭಗವಂತನು ಅಲ್ಲಿ ಅವತರಿಸಲಾಗಿ, ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದುವು; ದೇವತೆಗಳು ಪುಷ್ಪವೃಷ್ಟಿಯನ್ನು ಸುರಿದರು; ಗಂಧರ್ವಶ್ರೇಷ್ಠರು ಗಾನ

ಜಗುರ್ಗನ್ಧರ್ವಪತಯೋ ನನೃತುಶ್ಚಾಪ್ಸರೋಗಣಾಃ ।
ವವುಃ ಪುಣ್ಯಾಃ ಶಿವಾವಾತಾಃ ಸುಪ್ರಭೋಽಭೂದ್ದಿವಾಕರಃ ॥೧೦॥
ಜಜ್ವಲುಶ್ಚಾಗ್ನಯಃ ಶಾನ್ತಾಃ ದಿಶೋ ದೇವಾಶ್ಚ ತುಷ್ಟುವುಃ ॥೧೩॥
ಕೌಸಲ್ಯಾಪಿ ಸುತಂ ದೃಷ್ಟ್ವಾ ರಮ್ಯಂ ರಾಜೀವಲೋಚನಮ್ ।
ಸಹಸ್ರಾರ್ಕಪ್ರತೀಕಾಶಕಿರೀಟೋಷ್ಣೀಷತಾನನಮ್ ॥೧೪॥
ಶಙ್ಖಚಕ್ರಗದಾಪದ್ಮವನಮಾಲಾವಿರಾಜಿತಮ್ ।
ಶ್ರೀವತ್ಸಂ ಕೌಸ್ತುಭಂ ಮಾಲಾಂ ವಕ್ಷಸ್ಯಬ್ಜೀ ಜಗತ್ತ್ರಯಮ್ ॥೧೫॥
ನಿಶ್ವಾಸೇಪ್ಯಸ್ಯ ವೇದಾಂಶ್ಚ ಜಘನೇಬ್ಧಿ ಗಿರಿದ್ವಿಷಾ ।
ನಾಭ್ಯಾಂ ತಸ್ಯ ವಿಧಿಂ ಮಾಂ ಚ ಕರ್ಣಯೋಶ್ಚ ದಿಶೋ ದಶ ॥೧೬॥
ನೇತ್ರಯೋಶ್ಚನ್ದ್ರಸೂರ್ಯೌ ಚ ಘ್ರಾಣೇ ವಾಯುಂ ಮಹಾಜವಮ್ ।
ಸ್ಮಿತವಕ್ತ್ರಾ ವಿಶಾಲಾಕ್ಷೀ ಭುವನಾನಿ ಚತುರ್ದಶ ॥೧೭॥
ರೋಮಕೂಪೇಷು ಸರ್ವೇಷು ಬ್ರಹ್ಮಾಣ್ಡಾನಿ ಚ ಕೋಟಿಶಃ ।
ತೇಷು ಸರ್ವೇಷು ದೇವರ್ಷಿಬ್ರಹ್ಮರುದ್ರಾದಿಕಾ ಬಹೂ ॥೧೮॥
ದೃಷ್ಟ್ವಾ ತಂ ಪರಮಾತ್ಮಾನಂ ಕೌಸಲ್ಯಾ ವಿಸ್ಮಯಾಕುಲಾ ।
ಹರ್ಷಪೂರ್ಣಾಶ್ರುನಯನಾ ನತ್ವಾ ಪ್ರಾಞ್ಜಲಿರಬ್ರವೀತ್ ॥೧೯॥

ಮಾಡಿದರು; ಅಪ್ಸರಸ್ತ್ರೀಯರು ನರ್ತನಮಾಡಿದರು; ವಾಯುಗಳು ಪುಣ್ಯಕರಗಳಾಗಿ ಶುಭಸೂಚಕಗಳಾಗಿ ಬೀಸಿದುವು; ಸೂರ್ಯನು ಮೇಘಾವರಣಾದಿರಹಿತನಾಗಿ ನಿರ್ಮಲನಾಗಿ ಪ್ರಕಾಶಿಸಿದನು; ಅಗ್ನಿಗಳು ಪ್ರದಕ್ಷಿಣಾಕಾರವಾಗಿ ಜ್ವಲಿಸಿದುವು; ದಿಕ್ಕುಗಳೆಲ್ಲವೂ ನಿರ್ಮಲವಾದುವು; ದೇವತೆಗಳೆಲ್ಲರೂ ಸ್ತೋತ್ರಮಾಡುತಿದ್ದರು ॥೧೧—೧೩॥

ಆಗ ಕೌಸಲ್ಯೆಯು ತನ್ನ ಉದರಲ್ಲಿ ಜನಿಸಿದ ದಿವ್ಯಮಂಗಳವಿಗ್ರಹನಾದ ಮಗನನ್ನು ಆನಂದದಿಂದ ನೋಡಿದಳು ಆ ಮಗನ ನೇತ್ರಗಳು, ಕಮಲದಳಗಳಂತೆ ವಿರಾಜಿಸುತಿದ್ದುವು. ಅವನು ತಲೆಯಮೇಲೆ ಸಹಸ್ರಸೂರ್ಯಸಮಾನವಾಗಿ ಹೊಳೆಯುತಿದ್ದ ಕಿರೀಟವನ್ನು ಧರಿಸಿರುವುದರಿಂದ, ಅದರ ಭಾರಕ್ಕೆ ಮುಖವು ಸ್ವಲ್ಪ ಬೊಗ್ಗಿಹೋಗಿದ್ದಿತು. ಶಂಖ ಚಕ್ರ ಗದಾ ಪದ್ಮ ವನಮಾಲಿಕೆಗಳು ಅವನಿಗೆ ವಿಶೇಷವಾಗಿ ಶೋಭೆಯುಂಟುಮಾಡುತಿದ್ದುವು. ಮತ್ತು, ಆ ಕೌಸಲ್ಯೆಯು, ಅವನ ಹೃದಯದಲ್ಲಿ ಶ್ರೀವತ್ಸಕೌಸ್ತುಭಗಳನ್ನೂ, ಶರೀರದೊಳಗೆ ಮೂರುಲೋಕಗಳನ್ನೂ, ಅವನ ನಿಶ್ವಾಸದಲ್ಲಿ ವೇದಗಳನ್ನೂ, ಜಘನದಲ್ಲಿ ಸಮುದ್ರ ಪರ್ವತ ದಿಗ್ಗಜಗಳನ್ನೂ, ಅವನ ನಾಭಿಯಲ್ಲಿ ಬ್ರಹ್ಮರುದ್ರರನ್ನೂ, ಶ್ರೋತ್ರಗಳಲ್ಲಿ ದಶದಿಕ್ಕುಗಳನ್ನೂ, ನೇತ್ರಗಳಲ್ಲಿ ಸೂರ್ಯಚಂದ್ರರನ್ನೂ, ನಾಸಿಕೆಯಲ್ಲಿ ವಾಯುವನ್ನೂ, ಅವನ ರೋಮಕೂಪಗಳಲ್ಲಿ ಚತುರ್ದಶಭುವನಗಳನ್ನೂ, ಅನೇಕ ಕೋಟಿ ಬ್ರಹ್ಮಾಂಡಗಳನ್ನೂ, ಆ ಬ್ರಹ್ಮಾಂಡಗಳೆಲ್ಲೆಲ್ಲ—ಅನೇಕವಾಗಿ ದೇವ ಋಷಿ ಬ್ರಹ್ಮರುದ್ರ ಮುಂತಾದವರನ್ನೂ ಕೂಡ, ವಿಶಾಲವಾಗಿ ಕಣ್ಣುತೆರೆದುಕೊಂಡು – ಮಂದಹಾಸಯುಕ್ತಳಾಗಿ ನೋಡಿದವಳಾದಳು ॥೧೪ –೧೮॥

ಈರೀತಿಯಾಗಿ ವಿಶ್ವರೂಪದರ್ಶನವನ್ನನುಗ್ರಹಿಸುತಿರುವ ಆ ಪರಮಾತ್ಮನನ್ನು ನೋಡಿ, ಅತ್ಯಾಶ್ಚರ್ಯಭರಿತಳಾದ ಕೌಸಲ್ಯೆಯು, ಆನಂದಬಾಷ್ಪಪರಿಪೂರಿತನೇತ್ರಳಾಗಿ, ಆ ಪರಮಾತ್ಮನನ್ನು ನಮಸ್ಕರಿಸಿ, ಕೈಕಟ್ಟಿಕೊಂಡು ಹೀಗೆ ಪ್ರಾರ್ಥಿಸಿದಳು ॥೧೯॥

ಕೌಸಲ್ಯೋವಾಚ.

ದೇವದೇವ ನಮಸ್ತೇಸ್ತು ಶಙ್ಖಚಕ್ರಗದಾಧರ ।
ಪರಮಾತ್ಮಚ್ಯುತಾನನ್ತ ಪೂರ್ಣಸ್ತ್ವಂ ಪುರುಷೋತ್ತಮ ॥೦೦॥
ವೆದನ್ತ್ಯಗೋಚರಂ ವಾಚಾಂ ಬುದ್ಧ್ಯಾದೀನಾಮತೀನ್ದ್ರಿಯಮ್ ।
ತ್ವಾಂ ವೇದವಾದಿನಃ ಸತ್ತಾಮಾತ್ರಂ ಜ್ಞಾನೈಕವಿಗ್ರಹಮ್ ॥೦೧॥
ತ್ವಮೇವ ಮಾಯಯಾ ವಿಶ್ವಂ ಸೃಜಸ್ಯವಸಿ ಲುಮ್ಪಸಿ ।
ಸತ್ವಾದಿಗುಣಸಂಯುಕ್ತಃ ಸತ್ಯವಾಗಚಲಃ ಸದಾ ॥೦೦॥
ಕರೋಷೀವ ನ ಕರ್ತಾ ತ್ವಂ ಗಚ್ಛಸೀವ ನ ಗಚ್ಛಸಿ ।
ನ ಶೃಣೋಷಿ ಶೃಣೋಷೀವ ಪಶ್ಯಸೀವ ನ ಪಶ್ಯಸಿ ॥೦೩॥
ಅಪ್ರಾಣೋ ಹ್ಯಮನಾಃ ಶುದ್ಧಃ ಇತ್ಯಾದಿ ಶ್ರುತಿರಬ್ರವೀತ್ ।
ಸಮಃ ಸರ್ವೇಷು ಭೂತೇಷು ತಿಷ್ಠನ್ನಪಿ ನ ಲಕ್ಷ್ಯಸೇ ।
ಅಜ್ಞಾನಭ್ರಾನ್ತಜೀತ್ಮಾನಾಂ ವ್ಯಕ್ತವಿವ ಸುಮೇಧಸಾಮ್ ॥೦೪॥
ಜಠರೇ ತವ ದೃಶ್ಯನ್ತೇ ಬ್ರಹ್ಮಾಣ್ಡಪರಮಾಣವಃ ।
ತ್ವಂ ಮಮೋದರಸಮ್ಭೂತಃ ಇತಿ ಲೋಕಾ ವಿಡಮ್ಬಸೇ ॥೦೫॥

ಆ ಕೌಸಲ್ಯೆ ಮಾಡಿದ ಪ್ರಾರ್ಥನೆಯೇನೆಂದರೆ :—

ಹೇ ದೇವದೇವ! ಶಂಖಚಕ್ರಗದಾಧರ! ಪರಮಾತ್ಮ! ಅಚ್ಯುತ! ಅನಂತ! ನಿನಗೆ ನಮಸ್ಕಾರವು. ಹೇ ಪುರುಷೋತ್ತಮ! ನಿನ್ನನ್ನು ಅಖಂಡಾಕಾರನೆಂದು ಸಮಸ್ತ ಶ್ರುತಿವಾಕ್ಯಗಳೂ ಹೇಳುತಿರುವುವು ॥೨೦॥

ವೇದಾಂತವಿಜ್ಞಾನಿಗಳು, ನಿನ್ನನ್ನು —ವಾಕ್ಕಿಗೂ ಬುದ್ಧಿಗೂ ಅಗೋಚರನೆಂದೂ, ಇಂದ್ರಿಯಗಳಿಗೆ ವಿಷಯನಲ್ಲವೆಂದೂ, ಸತ್ತಾಮಾತ್ರಸ್ವರೂಪನೆಂದೂ, ಕೇವಲ ಜ್ಞಾನೈಕದೇಹನೆಂದೂ ಹೇಳುವರು ॥೨೧॥

ನೀನೇ, ಮಾಯಾಶಬಲನಾಗಿ ರಜೋಗುಣಯುಕ್ತನಾದಾಗ, ಈ ವಿಶ್ವವನ್ನು ಸೃಷ್ಟಿಮಾಡುವೆ; ಸತ್ವಗುಣದಿಂದ ಕಾಪಾಡುವೆ; ತಮೋಗುಣಯುಕ್ತನಾದಾಗ ಸಂಹರಿಸುವೆ. ನೀನು ಸತ್ಯವಾಕ್ಯನಾದವನು; ಸರ್ವದಾ ಸ್ಥಿರನಾದವನು ॥೨೨॥

ಹೇ ಭಗವನ್! ನೀನು ವಸ್ತುತಃ ಕರ್ತೃವಲ್ಲದಿದ್ದರೂ ಕಾರ್ಯವನ್ನು ಮಾಡುವನಂತೆ ಕಾಣುವೆ; ನಡೆಯದಿದ್ದರೂ ನಡೆಯುವಂತೆ ತೋರುವೆ; ಕೇಳದಿದ್ದರೂ ಕೇಳುವವನಂತಿರುವೆ: ನೋಡದಿದ್ದರೂ ನೋಡತಕ್ಕವನಂತೆ ತೋರುವೆ ॥೨೩॥

ಶಾಸ್ತ್ರಾದ್ವೈದವೂ ಕೂಡ, ನಿನ್ನನ್ನು—ಪ್ರಾಣವಿಲ್ಲದವನೆಂದೂ ಮನಸ್ಸಿಲ್ಲದವನೆಂದೂ ಶುದ್ಧನೆಂದೂ ಹೇಳುವುದು. ನೀನು ಸರ್ವಭೂತಗಳಲ್ಲಿಯೂ ಸಮನಾಗಿ ಇರತಕ್ಕವನಾಗಿದ್ದರೂ, ಅಜ್ಞಾನದಿಂದ ಭ್ರಾಂತಹೃದಯರಾದವರಿಗೆ ಗೋಚರನಾಗದಿರುವೆ; ಜ್ಞಾನಿಗಳಾದರೋ, ನೀನು ಸರ್ವತ್ರ ನೆಲೆಸಿರುವೆಯೆಂದೇ ತಿಳಿದಿರುವರು ॥೨೪॥

ಹೇ ಸ್ವಾಮಿ! ನಿನ್ನ ಉದರದೊಳಗೆ ಈ ಅನೇಕ ಬ್ರಹ್ಮಾಂಡಗಳು ಪರಮಾಣುಗಳಂತೆ ಕಾಣಿಸುತಿರುವುವು. ಹೀಗಿದ್ದರೂ, ನೀನು ಈಗ ನನ್ನ ಹೊಟ್ಟೆಯಲ್ಲಿ ಜನಿಸಿರುವೆಯಲ್ಲ! ಇದು,

ಭಕ್ತೇಷು ತೇ ದಯಾಸ್ತೀತಿ ದೃಷ್ಟಮದ್ಯ ರಘೂತ್ತಮ ॥೨೬॥
ಸಂಸಾರಸಾಗರೇ ಮಗ್ನಾ ಪತಿಪುತ್ರಧನಾದಿಷು ।
ಭ್ರಮಾಮಿ ಮಾಯಯಾ ತೇದ್ಯ ಪಾದಮೂಲಮುಪಾಗತಾ ॥೨೭॥
ದೇವ ಸ್ವರೂಪಮೇತನ್ಮೇ ಸದಾ ತಿಷ್ಠತು ಮಾನಸೇ ।
ಆವೃಣೋತು ನ ಮಾಂ ಮಾಯಾ ತವ ವಿಶ್ವವಿಮೋಹಿನೀ ॥೨೮॥
ಉಪಸಂಹರ ವಿಶ್ವಾತ್ಮನ್ ದಿವ್ಯರೂಪಮಲೌಕಿಕಮ್ ।
ದರ್ಶಯಸ್ವ ಮಮಾನಂದಂ ಬಾಲಭಾವಂ ಸುಕೋಮಲಮ್ ॥೨೯॥
ಲಾಲನಾದಿಭಿರಾಲಾಪೈಃ ತರಿಷ್ಯೇ ದುಸ್ತರಂ ತಮಃ ।
ಇತ್ಯುಕ್ತ್ವಾ ವಿರರಾಮಾಥ ಕೌಸಲ್ಯಾ ಭಕ್ತಿಭಾವಿತಾ ॥೩೦॥

ಶ್ರೀ ಭಗವಾನುವಾಚ.

ಅಹಂ ತು ಬ್ರಹ್ಮಣಾ ಪೂರ್ವಂ ಭೂಮೇರ್ಭಾರಾಪನುತ್ತಯೇ ।
ಅರ್ಥಿತೋ ರಾವಣಂ ಹನ್ತುಂ ಮಾನುಷಂ ರೂಪಮಾಸ್ಥಿತಃ ॥೩೧॥
ತ್ವಯಾ ದಶರಥೇನಾಹಂ ತಪಸಾರಾಧಿತಃ ಪುರಾ ।

ಕೇವಲ ಲೋಕವಿಡಂಬನಾರ್ಥವಾಗಿರುವುದಲ್ಲದೆ, ವಾಸ್ತವ್ಯವಲ್ಲ. ಹೇ ರಘುಶ್ರೇಷ್ಠ! ಇದರಿಂದಲೇ, ನೀನು ಭಕ್ತರಲ್ಲಿ ಮಹಾದಯಾಶಾಲಿಯೆಂಬುದು ಈಗ ಪ್ರತ್ಯಕ್ಷವಾಯ್ತು ॥೨೬॥

ಹೇ ಜಗನ್ನಾಯಕ! ನಾನು ನಿನ್ನ ಮಾಯೆಯಿಂದ ಆವೃತಳಾಗಿ, ಸಂಸಾರವೆಂಬ ಸಮುದ್ರದಲ್ಲಿ ಮುಣುಗಿ, ಪತಿ ಪುತ್ರ ಧನ ಮುಂತಾದುವುಗಳಲ್ಲಿ ಭ್ರಮಿಸುತಿರುವೆನು. ಈಗ ನಿನ್ನ ಪಾದವನ್ನು ಶರಣುಹೊಂದಿರುವೆನು ॥೨೭॥

ಹೇದೇವ! ನೀನು ಈಗ ದರ್ಶನಕೊಡುತಿರುವ ರೂಪವು ಸರ್ವದಾ ನನ್ನ ಮನಸ್ಸಿನಲ್ಲಿ ನೆಲೆಸಿರಲಿ. ವಿಶ್ವಮೋಹಿನಿಯಾದ ನಿನ್ನ ಮಾಯೆಯು ಪುನಃ ನನ್ನನ್ನು ಆವರಿಸದಂತೆ ಅನುಗ್ರಹಿಸು॥

ಹೇ ವಿಶ್ವಾತ್ಮ! ನಿನ್ನ ಈ ಅವ್ಯಾಕೃತವಾದ ರೂಪವನ್ನು ಉಪಸಂಹರಿಸು (ಮರೆಮಾಡು). ನನಗೆ ಆನಂದದಾಯಕವಾಗಿರುವಂತೆ ಅತಿಮಧುರವಾದ ಬಾಲಭಾವವನ್ನು ತೋರಿಸು. ನಿನ್ನ ಲಾಲನಾದಿಗಳಿಂದಲೂ, ನಿನ್ನೊಡನೆ ಸಲ್ಲಾಪಗಳಿಂದಲೂ, ನಾನು ದುಸ್ತರವಾದ ತಮಸ್ಸನ್ನು ದಾಟಬೇಕಾದವಳಾಗಿರುವೆನು.—ಎಲೌ ಪಾರ್ವತಿ! ಹೀಗೆಂದು ಪ್ರಾರ್ಥಿಸಿದ ಬಳಿಕ, ಆ ಕೌಸಲ್ಯೆಯು ಭಕ್ತಿಸಮೃಳಾಗಿ ವಿರಮಿಸಿದಳು ॥೩೦॥

ಬಳಿಕ ಶ್ರೀ ಭಗವಂತನು ಕೌಸಲ್ಯೆಯನ್ನು ಕುರಿತು ಮಾತನಾಡುವನು:—

ಎಲೌ ಕೌಸಲ್ಯೆ! ಪೂರ್ವದಲ್ಲಿ, ಬ್ರಹ್ಮನು, ಭೂಮಿಯಭಾರವನ್ನು ಇಳಿಯಿಸುವುದಕ್ಕೋಸ್ಕರ, ರಾವಣನನ್ನು ಕೊಲ್ಲುವುದಕ್ಕಾಗಿ, ನನ್ನನ್ನು ಪ್ರಾರ್ಥಿಸಿಕೊಂಡನು; ಅದುಕಾರಣ, ನಾನು ಮನುಷ್ಯರೂಪವನ್ನಾಶ್ರಯಿಸಿದೆನು ॥೩೧॥

ಎಲೌ ನಿರ್ದೋಷಳೆ! ದಶರಥನೂ ಪೂರ್ವದಲ್ಲಿ ನನ್ನನ್ನು ತಪಸ್ಸಿನಿಂದ ವಿಶೇಷವಾಗಿ ಆರಾಧಿಸಿರುವನು; ನನ್ನನ್ನು ಮಗನನ್ನಾಗಿ ಪಡೆಯಬೇಕೆಂಬ ಇಚ್ಛೆಯಿಂದ, ನೀನೂ ವಿಶೇಷವಾಗಿ

ಮತ್ಪುತ್ರತ್ವಾಭಿಕಾಙ್ಕ್ಷಿಣ್ಯಾ ತಥಾ ಕೃತಮನಿನ್ದಿತೇ ॥೩೦॥
ರೂಪಮೇತತ್ ತ್ವಯಾ ದೃಷ್ಟಂ ಪ್ರಾಕ್ತನಂ ತಪಸಃ ಫಲಮ್ ।
ಮದ್ದರ್ಶನಂ ವಿಮೋಕ್ಷಾಯ ಕಲ್ಪತೇತ್ಯನ್ತದುರ್ಲಭಮ್ ॥೩೩॥
ಸಂವಾದಮಾವಯೋರ್ಯಸ್ತು ಪಠತೀಹ ಸ ಮುಕ್ತಿಭಾಕ್ ।
ಇತ್ಯುಕ್ತ್ವಾ ಮಾತರಂ ರಾಮೋ ಬಾಲೋ ಭೂತ್ವಾ ರುರೋದ ಹ ॥೩೪॥
ಅಥಾಲಿಙ್ಗ್ಯ ಚ ಸಾ ದೇವೀ ಸ್ತನ್ಯಂ ತಸ್ಮೈ ದದೌ ಮುದಾ ।
ತಸ್ಯಾಃ ಸ್ತನ್ಯಂ ಪಿಬನ್ ದೇವೋ ಮಾತುರುತ್ಸಙ್ಗಗೋ ಬಭೌ ॥೩೫॥
ತತಃ ಸ ರಾಜಾ ಹರ್ಷೇಣ ಪುತ್ರಂ ದೃಷ್ಟ್ವಾ ಸನಾತನಮ್ ।
ಪುರೋಧಸಾ ವಸಿಷ್ಠೇನ ಜಾತಕರ್ಮ ತದಾಕರೋತ್ ॥೩೬॥
ನಾಮ ಚಾಸ್ಮೈ ದದೌ ದಿವ್ಯಂ ವಸಿಷ್ಠಃ ಪ್ರಥಮೇಹನಿ ।
ಸಹಸ್ರನಾಮಸದೃಶಂ ಸ್ಮರಣಾನ್ಮುಕ್ತಿದಾಯಕಮ್ ॥೩೭॥
ಶ್ರಿಯಃ ಕಮಲವಾಸಿನ್ಯಾಃ ರಮಣೋಯಂ ಯತೋ ಹರಿಃ ।
ತಸ್ಮಾಚ್ಛ್ರೀರಾಮಇತ್ಯಸ್ಯ ನಾಮ ಸಿದ್ಧಂ ಪುರಾತನಮ್ ॥೩೮॥

ನನ್ನನ್ನು ಆರಾಧಿಸಿರುವೆ. ಆದುಕಾರಣ, ಈಗ ನಿಮ್ಮಿಬ್ಬರ ಮನೋರಥವನ್ನೂ ನಾನು ಪೂರೈಸಿರುವೆನು ॥೩೨॥

ಈಗ ನೀನು ನನ್ನ ಈ ಅವ್ಯಾಕೃತರೂಪವನ್ನು ನೋಡಿದುದು ಯಾವುದುಂಟೋ, ಅದು ನಿನ್ನ ಪೂರ್ವಕೃತ ತಪಸ್ಸಿನ ಫಲವೆಂದು ತಿಳಿ. ನನ್ನ ದರ್ಶನವು ಪ್ರಪಂಚದಲ್ಲಿ ಎಂಥವರಿಗೂ ಅತ್ಯಂತ ದುರ್ಲಭವಾದುದು. ಇದು ಲಭಿಸಿದವರಿಗೆ ಮೋಕ್ಷವು ಕರಗತವಾಗಿರುವುದು ॥೩೩॥

ಯಾವನು ಈಗ ನಮ್ಮಿಬ್ಬರಿಗೂ ನಡೆದ ಸಂವಾದವನ್ನು ಪಠಿಸುವನೋ, ಅವನು ಮುಕ್ತಿ ಭಾಜನನಾಗುವನು. ಎಲೌ ಪಾರ್ವತಿ! ಹೀಗೆಂದು ತಾಯಿಯನ್ನು ಕುರಿತು ಹೇಳಿದವನಾಗಿ, ಬಳಿಕ ಆ ರಾಮನು ವ್ಯಾಕೃತಶಿಶುರೂಪವನ್ನು ಸ್ವೀಕರಿಸಿ ಅಳುವುದಕ್ಕುಪಕ್ರಮಿಸಿದನು ॥೩೪॥

ಅನಂತರ, ಆ ಕೌಸಲ್ಯೆಯು, ಅವನನ್ನಾಲಿಂಗಿಸಿಕೊಂಡು, ಸಂತೋಷದಿಂದ ಅವನಿಗೆ ಸ್ತನ್ಯವನ್ನು ಕೊಟ್ಟಳು. ಆವಳ ಸ್ತನ್ಯವನ್ನು ಕುಡಿಯುತ ಆ ಸ್ವಾಮಿಯು ತಾಯಿಯ ಮೊಡಲಿನಲ್ಲಿ ವಿರಾಜಿಸುತಿದ್ದನು ॥೩೫॥

ಬಳಿಕ, ಆ ದಶರಥನು, ತನಗೆ ಪುತ್ರನಾಗಿ ಅವತರಿಸಿರುವ ಸನಾತನಪುರುಷನನ್ನು ನೋಡಿ, ಆಗ ಪುರೋಹಿತನಾದ ವಸಿಷ್ಠಮುನಿಯಿಂದ ಜಾತಕರ್ಮವನ್ನು ಮಾಡಿಸಿದನು ॥೩೬॥

ಆ ವಸಿಷ್ಠಮುನಿಯು, ಪ್ರಥಮದಿವಸದಲ್ಲಿಯೇ ಈ ಬಾಲಕನಿಗೆ–ಸರ್ವರಿಗೂ ಸ್ಮರಣಮಾತ್ರದಿಂದಲೇ ಮುಕ್ತಿಪ್ರದವಾದ ಸಹಸ್ರನಾಮಸಮಾನವಾದ ದಿವ್ಯವಾದ ರಾಮನೆಂಬ ನಾಮಧೇಯವನ್ನಿಟ್ಟನು ॥೩೭॥

ಆ ಶ್ರೀಹರಿಯು—ಕಮಲಾಲಯಳಾದ ಲಕ್ಷ್ಮಿಗೆ ರಮಣನಾಗಿರುವುದರಿಂದ, ಇವನಿಗೆ 'ಶ್ರೀರಾಮ' ಎಂದು ನಾಮಧೇಯವು ಅನಾದಿಸಿದ್ಧವಾಗಿರುವುದು ॥೩೮॥

ರಮನ್ತೇ ಯೋಗಿನೋನನ್ತೇ ಸತ್ಯಾನನ್ದಚಿದಾತ್ಮನಿ ।
ಇತಿ ರಾಮಪದೇನಾಸೌ ಪರಂ ಬ್ರಹ್ಮಾಭಿಧೀಯತೇ ॥೫೯॥

ರಘೋಃ ಕುಲೇಖಿಲಂ ರಾತಿ ರಾಜತೇ ಯೋ ಮಹೀಸ್ಥಿತಃ ।
ಸ ರಾಮಇತಿ ಲೋಕೇಷು ವಿದ್ವದ್ಭಿಃ ಪ್ರಕಟೀಕೃತಃ ॥೬೦॥

ರಾಕಬ್ದೋಚ್ಚಾರಣಾದೇವ ಮುಖಾನ್ನಿರ್ಯಾತಿ ಪಾತಕವತ್ ।
ಪುನಃ ಪ್ರವೇಶನಭಿಯಾ ಮಕಾರಸ್ತು ಕವಾಟವತ್ ॥೬೧॥

ಸ ಧನ್ಯಃ ಸ ನರಃ ಪುಣ್ಯಃ ಸ ಜ್ಞಾನೀ ಸ ಕುಲಾನ್ವಿತಃ ।
ಸ ಯೋಗೀ ಸುಕೃತೀ ಚೈವ ಚತುರ್ವೇದಪರಾಯಣಃ ॥೬೨॥

ಚೋರಃ ಪಾಪಸಮಾಚಾರಃ ಪಾಪಕರ್ಮರತೋಪಿ ವಾ ।
ಪಂಚಬ್ರಹ್ಮಾರತಃ ಪಾಪೀ ಚಣ್ಡಾಲಸ್ತ್ರೀನಿಷೇವಕಃ ॥೬೩॥

ಪುಳಿನ್ದಪುಲ್ಕಸಮ್ಲೇಚ್ಛ ಕಾಮಿನೀಸಙ್ಗಲಮ್ಪಟಃ ।
ಅಗಮ್ಯಾಗಮನೀ ಚೈವ ಪರದ್ರವ್ಯಾಪಹಾರಕಃ ॥೬೪॥

ಸಚ್ಚಿದಾನಂದಸ್ವರೂಪನಾಗಿ ಅನಂತನಾಗಿರುವ ಈ ಪರಮಪುರುಷನಲ್ಲಿ ಯೋಗಿಗಳು ರಮಿಸುವರಾದಕಾರಣ, ರಾಮನೆಂಬ ಪದದಿಂದ ಪರಬ್ರಹ್ಮನೇ ಹೇಳಲ್ಪಡುವುದು ॥೫೯॥

ರಘುವಂಶದಲ್ಲಿ ಜನಿಸಿದ ಯಾವ ಪರಮಪುರುಷನು ಸಮಸ್ತಲೋಕವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವನೋ, ಮತ್ತು ಭೂಮಿಯಲ್ಲಿದ್ದುಗೊಂಡು ಅನನ್ಯಸಾಧಾರಣವಾಗಿ ವಿರಾಜಿಸುತ್ತಿರುವನೋ, ಅಂತಹ ಭಗವಂತನೇ ರಾಮನೆಂದು ವಿದ್ವಾಂಸರುಗಳು ಸಾರಿರುವರು ॥೬೦॥

'ರಾ' ಎಂಬ ಶಬ್ದವನ್ನು ಉಚ್ಚರಿಸಿದ ಮಾತ್ರದಿಂದಲೇ, ಅಂತರ್ಗತವಾದ ಪಾಪವು ಮುಖದ ದೆಸೆಯಿಂದ ಹೊರಟುಹೋಗುವುದು. ಅದು ಪುನಃ ಒಳಕ್ಕೆ ಪ್ರವೇಶಿಸೀತೆಂಬ ಭಯುದಿಂದ, ಮಕಾರವು ಬಾಗಿಲಿನಂತೆ ತಡೆಯಾಗಿರುವುದು ॥೬೧॥

ಈ ಲೋಕದಲ್ಲಿ, ಯಾವ ಪುರುಷನು ಈ ರಾಮನಾಮವನ್ನು ಜಪಿಸುತ್ತಿರುವನೋ, ಅವನೇ ಧನ್ಯನು; ಅವನೇ ಜ್ಞಾನಿಯು; ಅವನೇ ಸತ್ಕುಲಪ್ರಸೂತನು; ಅವನೇ ಯೋಗಿಯು; ಅವನೇ ಸುಕೃತಶಾಲಿಯು; ಅವನೇ ಚತುರ್ವೇದಪಾರಾಯಣಫಲಭಾಗಿಯು ॥೬೨॥

ಮತ್ತು, ಚೋರನಾಗಿರಲಿ, ಅನೇಕ ಪಾಪಕೃತ್ಯಗಳನ್ನು ಮಾಡಿದವನಾಗಿರಲಿ, ಪಾಪಮಾಡಿದವರಲ್ಲಿ ಅಸಕ್ತನಾಗಿರಲಿ, ಪರಸ್ತ್ರೀಸಕ್ತನಾಗಿರಲಿ, ಪಂಚಮಹಾಪಾತಕಮಾಡಿದವನಾಗಿರಲಿ, ಚಂಡಾಲಸ್ತ್ರೀಯನ್ನು ಅನುಭವಿಸತಕ್ಕವನಾಗಲಿ, ಪುಳಿಂದ (ಬೇಡ) ಪುಲ್ಕಸ (ಹೊಲೆಯ) ಮ್ಲೇಚ್ಛಜಾತಿಯ ಸ್ತ್ರೀಯರ ಸಹವಾಸಮಾಡಿದವನಾಗಲಿ, ಇನ್ನೂ ಅನೇಕವಾಗಿ ಅಗಮ್ಯಸ್ತ್ರೀಯರನ್ನು ಗಮನಮಾಡಿದವನಾಗಲಿ, ಪರದ್ರವ್ಯಾಪಹಾರಮಾಡಿದವನಾಗಲಿ, ಮದ್ಯಪಾನಮಾಡಿದವನಾಗಲಿ, ಚಾಡಿಹೇಳತಕ್ಕವನಾಗಲಿ, ಬ್ರಹ್ಮಸ್ವತ್ತನ್ನು ಅಪಹರಿಸಿದವನಾಗಲಿ, ತನಗಿಂತ ಮೇಲಾದ ಜಾತಿಯ ಸ್ತ್ರೀಯನ್ನು ಪರಿಗ್ರಹಿಸಿದವನಾಗಲಿ, ಅಥವಾ ಕೀಳುಜಾತಿಯ ಸ್ತ್ರೀಯನ್ನು

ಮಧುಪಃ ಪಿಶುನಶ್ಚೈವ ವಿಸ್ರವಿತ್ತಾಪಹಾರಕಃ ।
ವರ್ಣಾಧಿಕಾಬ್ಜನಾಗಾಮಿ ಹೀನವರ್ಣಾಬ್ಜನಾರತಃ ॥೪೫॥
ವಿರುದ್ಧಾಚಾರನಿರತಾಃ ಪಾಪಿನೋ ಯೇ ಪರೇ ಮತಾಃ ।
ಸಕೃದುಚ್ಚಾರ್ಯ ರಾಮೇತಿ ಮುಚ್ಯನ್ತೇ ಸರ್ವಪಾತಕೈಃ ॥೪೬॥
ವಿರಕ್ತೋ ನಿರ್ಮಲಃ ಶಾನ್ತೋ ರಾಮನಾಮ ಸ್ಮರ ಜಪನ್ ।
ಸಂಸಾರೇ ವರ್ತಮಾನೋಪಿ ನ ಲಿಪ್ತಃ ಪಙ್ಕಕೀಟವತ್ ॥೪೭॥
ಪೂಜಿತಂ ನಾರದಾದ್ಯೈಶ್ಚ ಬ್ರಹ್ಮರ್ಷಿಗಣಾನಪಿ ಪ್ರಿಯಮ್ ।
ವ್ಯತ್ಯಸ್ತಂ ವಾ ಸಮಸ್ತಂ ವಾ ರಾಮನಾಮ ಸ್ಮರನ್ತಿ ಯೇ ॥೪೮॥
ತ್ಯಕ್ತಲಜ್ಜಾಸ್ತ್ಯಕ್ತಮಾಯಾಃ ತ್ಯಕ್ತದೇಹಾಭಿಮಾನಿನಃ ।
ಸಙ್ಗನೋಪಿ ಚ ನಿಸ್ಸಙ್ಗಾಃ ವಿರಕ್ತಾಃ ಸರ್ವಕರ್ಮಸು ॥೪೯॥
ಸತತಂ ಕೀರ್ತಯನ್ತಶ್ಚ ವೋದಮಾನಾನುವೋದಿನಃ ।
ಸರ್ವಸಙ್ಗವಿನಿರ್ಮುಕ್ತಾಃ ತೇ ರಾಮತ್ವಮವಾಪ್ನುಯುಃ ॥೫೦॥
ಬಹೂನಿ ಸನ್ತಿ ನಾಮಾನಿ ರಾಮನಾನಾಧಿಕಂ ತತಃ ।
ತನ್ನಾಮಜಾಪೀ ವಾಲ್ಮೀಕಿರೇವ ತತ್ರ ನಿದರ್ಶನಮ್ ॥೫೧॥

ಪರಿಗ್ರಹಿಸಿದವನಾಗಲಿ, ಮತ್ತು ಶಾಸ್ತ್ರವಿರುದ್ಧವಾದ ಆಚಾರದಲ್ಲಿಯೇ ಸರ್ವದಾ ನಿರತರಾದವರಾಗಲಿ, ಇಲ್ಲಿ ಹೇಳಲ್ಪಡದಿರುವ ಇತರವಾದ ಯಾವ ಪಾಪವನ್ನು ಮಾಡಿದವರಾಗಲಿ, 'ರಾಮ' ಎಂದು ಒಂದುಸಲ ಬಾಯಲ್ಲಿ ಉಚ್ಚರಿಸಿದ ಮಾತ್ರದಲ್ಲಿಯೇ, ಸರ್ವಪಾಪಗಳಿಂದಲೂ ಮುಕ್ತರಾಗುವರು ॥೪೫—೪೬॥

ವಿರಕ್ತನಾಗಿದ್ದುಗೊಂಡು ನಿರ್ಮಲನಾಗಿ ರಾಮನಾಮವನ್ನು ಸ್ಮರಿಸುತಲೂ ಜಪಿಸುತಲೂ ಇದ್ದರೆ, ಆ ಪುರುಷನು, ಸಂಸಾರದಲ್ಲಿರುತಿದ್ದರೂ, ಕೆಸರಿನಲ್ಲಿ ಬಿದ್ದ ಹುಳುವಿನಂತೆ, ಲೇಪಶೂನ್ಯನಾಗಿರುವನು ॥೪೭॥

ನಾರದಾದಿ ಸಮಸ್ತ ಮುನಿಗಳಿಂದಲೂ ಪೂಜಿತವಾಗಿ ಸಮಸ್ತ ಬ್ರಹ್ಮರ್ಷಿಗಳಿಗೂ, ಅತಿ ಪ್ರಿಯವಾಗಿರುವ ಈ ರಾಮನಾಮವನ್ನು, ಯಾರು ವ್ಯತ್ಯಸ್ತವಾಗಿಯಾಗಲಿ—ಕ್ರಮವಾಗಿಯಾಗಲಿ—ಸ್ಮರಿಸುತ್ತಾರೆಯೋ, ಯಾವ ಪುರುಷರು ಈ ರಾಮನಾಮಸ್ಮರಣೆಯಲ್ಲಿ ಸ್ವಲ್ಪವೂ ಲಜ್ಜೆಯಿಲ್ಲದವರಾಗಿಯೂ ಗರ್ವಶೂನ್ಯರಾಗಿಯೂ ದೇಹಾಭಿಮಾನ ಬಿಟ್ಟವರಾಗಿಯೂ ಇರುತ್ತಾರೆಯೋ, ಮತ್ತು—ಸಂಸಾರಸಂಗವುಳ್ಳವರಾದರೂ ಸಂಗಶೂನ್ಯರಾಗಿ—ಸರ್ವಕರ್ಮಗಳಲ್ಲಿಯೂ ವಿರಕ್ತರಾಗಿ—ಸರ್ವದಾ ರಾಮನಾಮವನ್ನು ಉಚ್ಚರಿಸುತ್ತಿರುವರೋ, ಮತ್ತು—ರಾಮನಾಮಜಪದಿಂದ ಸಂತೋಷಪಡತಕ್ಕವರನ್ನು ಅನುವೋದಿಸುತ್ತಿರುವರೋ, ಅವರು ಸರ್ವಸಂಗನಿರ್ಮುಕ್ತರಾಗಿ ರಾಮಸಾಯುಜ್ಯವನ್ನು ಹೊಂದುವರು ॥೪೯—೫೦॥

ಎಲೌ ಪಾರ್ವತಿ! ಈ ಪ್ರಪಂಚದಲ್ಲಿ ಅನೇಕನಾಮಗಳಿರುವುವು; ಅವುಗಳೆಲ್ಲಕ್ಕಿಂತಲೂ ರಾಮನಾಮವು ಅತ್ಯುತ್ತಮವಾದುದು. ಆ ರಾಮನಾಮಜಪದಿಂದ ಅಸಾಧಾರಣವಾದ ಶ್ರೇಯಸ್ಸನ್ನು ಪಡೆದ ವಾಲ್ಮೀಕಿಮುನಿಯೇ ಈ ವಿಷಯದಲ್ಲಿ ನಿದರ್ಶನಭೂತನಾಗಿರುವನು ॥೫೧॥

ಭಕ್ತ್ಯಂ ರಾತೀತಿ ರಾಶಬ್ದೋ ಮುಕ್ತಿದಸ್ತನ್ನಿಷೇಧಕೃತ್ ।
ಮಕಾರೋ ಮುಕ್ತಿದಂ ತಸ್ಮಾತ್ ರಾಮನಾಮಾಭಯಪ್ರದಮ್ ॥೪೨॥
ವ್ಯತ್ಯಸ್ತಂ ವಾ ಗೃಣನ್ ನಾಮ ವಾಲ್ಮೀಕಿರಭವದ್ದ್ವಿಜಃ ।
ಪ್ರಾಗ್ದೇಹೇನೈವ ಕೋ ನಾತ್ರ ನಾವನ್ನಾ ವಾ ಮನುನಾಭವತ್ ॥೪೩॥
ಸದಾ ತ್ಯಕ್ತವಿಧೇಯಸ್ಯ ಕೃತ್ಯವತ್ಕೃತಪಾಪ್ಮನಃ ।
ಜ್ಞಾನಾಜ್ಞಾನಕೃತಸ್ಯಾಪಿ ರಾಮನಾಮೈವ ನಿಷ್ಕೃತಿಃ ॥೪೪॥
ರಾಶಬ್ದಾನ್ಮುಚ್ಯತೇಽವಿದ್ಯಾದೋಷೈರ್ಮುತ್ಯೋರ್ಮಕಾರತಃ ।
ಮುಕ್ತಿಂ ಪ್ರಾಪ್ನೋತ್ಯತಃ ಶಶ್ವತ್ ರಾಮನಾಮ ಜಪೇದ್ಬುಧಃ ॥೪೫॥
ಏವಂ ಪುಣ್ಯೈಕನಿಲಯಂ ರಾಮನಾಮೇತಿ ಚಾಖ್ಯಧಾತ್ ।
ವಿಷ್ಣುರಾಸ್ಯುದ್ಭವಾದ್ವಿಷ್ಣುಃ ಇತಿ ತಸ್ಯಾಭಿಧಾಂ ದಧೌ ॥೪೬॥
ಏವಂ ನಾಮದ್ವಯಂ ದತ್ವಾ ತಸ್ಯ ದಾಶರಥೇರ್ಮುನಿಃ ।
ಭಕ್ತ್ಯಾ ಪುಳಕಿತಾಙ್ಗಃ ಸನ್ ದೃಷ್ಟ್ವಾ ಸ್ಪೃಷ್ಟ್ವಾ ಚ ತಂ ಹರಿಮ್ ॥೪೭॥

'ರಾ' ಎಂಬ ಶಬ್ದವು ಸ್ವೀಕಾರರೂಪವಾದ ಅರ್ಥವನ್ನು ಬೋಧಿಸುವಕಾರಣ, ಇಲ್ಲಿರುವ 'ರಾ' ಎಂಬ ಶಬ್ದವು, ಭಕ್ತ್ಯಸ್ವೀಕಾರರೂಪವಾದ ಅರ್ಥವನ್ನು ತೋರಿಸುತ, ಮುಕ್ತ್ಯಪ್ರದವಾಗಿರುವುದು. ಭಕ್ತ್ಯಯು ಆಚೆಗೆ ಹೋಗದಂತೆ, ಮಕಾರವು ತಡೆದುಕೊಂಡಿರುವುದು. ಆದುಕಾರಣ, ಅಭಯಪ್ರದವಾದ ರಾಮನಾಮವು ಮುಕ್ತ್ಯಪ್ರದವೆಂದು ಸ್ಪಷ್ಟವಾಗಿರುವುದು ॥೪೨॥

ಎಲೌ ಪ್ರಿಯೆ! ಪಾರ್ವತಿ! ವಾಲ್ಮೀಕಿಮುನಿಯು, ವ್ಯತ್ಯಸ್ತವಾಗಿ ರಾಮನಾಮವನ್ನು ಜಪಿಸಿದರೂ, ಆ ವ್ಯಾಧಶರೀರದಿಂದಲೇ ಬ್ರಾಹ್ಮಣ್ಯವನ್ನು ಪಡೆದನು ಈ ರಾಮನಾಮದಿಂದಲಾಗಲಿ—ರಾಮಮಂತ್ರದಿಂದಲಾಗಲಿ—ಈ ಲೋಕದಲ್ಲಿ—ಸಿದ್ಧಿಯನ್ನು ಪಡೆಯದಿರುವವನು ಯಾವನಿರುವನು? ॥೪೩॥

ಕೃತ್ಯವಾದ ಕರ್ಮವನ್ನು ನಿರಂತರವಾಗಿ ಬಿಟ್ಟುಬಿಡುತಲೂ, ಕೃತ್ಯವನ್ನು ಮಾಡುವಂತೆ ಅವಶ್ಯವಾಗಿ ಪಾಪಕರ್ಮವನ್ನು ಮಾಡುತಲೂ ಇರತಕ್ಕವನಿಗೆ, ಜ್ಞಾನದಿಂದಲಾಗಲಿ—ಅಜ್ಞಾನದಿಂದಲಾಗಲಿ ಅವನು ಮಾಡಿದ ಸರ್ವಪಾಪಕರ್ಮಗಳಿಗೂ ರಾಮನಾಮಸ್ಮರಣೆಯೇ ಪ್ರಾಯಶ್ಚಿತ್ತವು॥

'ರಾ' ಎಂಬ ಶಬ್ದದ ಉಚ್ಚಾರಣೆಯಿಂದ, ಪುರುಷನು ಅವಿದ್ಯಾದೋಷಗಳಿಂದ ಬಿಡಲ್ಪಡುವನು; 'ಮ' ಎಂಬ ಶಬ್ದದ ಉಚ್ಚಾರಣೆಯಿಂದ ಮುಕ್ತನಾಗುವನು. ಆದುಕಾರಣ, ಪ್ರಾಜ್ಞನಾದವನು ಪದೇಪದೇ ರಾಮನಾಮವನ್ನು ಜಪಿಸುತ್ತಿರಬೇಕು ॥೪೪॥

ಎಲೌ ಪಾರ್ವತಿ! ಹೀಗೆ ಪುಣ್ಯಕ್ಕೆ ಮುಖ್ಯಾಶ್ರಯವೆಂದು ತಿಳಿದು, ಆ ಶಿಶುವಿಗೆ ವಾಲ್ಮೀಕಿಯು 'ರಾಮ' ಎಂಬ ಹೆಸರನ್ನಿಟ್ಟನು; ಆ ಶಿಶುವು ವಿಷ್ಣುದೇವತಾಕವಾದ ಚೈತ್ರಮಾಸದಲ್ಲಿ ಜನಿಸಿದಕಾರಣ, ಅದಕ್ಕೆ 'ವಿಷ್ಣು' ಎಂಬ ನಾಮಧೇಯವನ್ನೂ ಇಟ್ಟನು ॥೪೬॥

ಹೀಗೆ ಮಹಾತೇಜಸ್ವಿಯಾದ ಆ ವಸಿಷ್ಠಮುನಿಯು, ದಶರಥನ ಮಗನಿಗೆ ಎರಡು ಹೆಸರುಗಳನ್ನಿಟ್ಟು, ಭಕ್ತಿಯಿಂದ ಶರೀರವೆಲ್ಲ ರೋಮಾಂಚವುಂಟಾದವನಾಗಿ, ಆ ಶ್ರೀಹರಿಯ ದರ್ಶನವನ್ನೂ ಸ್ಪರ್ಶನವನ್ನೂ ಮಾಡಿ, ಹತ್ತಿರಕ್ಕೆ ಬಂದು ನಮಸ್ಕರಿಸಿ, ಉತ್ತಮವಾದ ಸ್ತೋತ್ರಗ

ಪರಿಣೀಯ ನಮಸ್ಕೃತ್ಯ ಸ್ತುತ್ವಾ ಸ್ತುತಿಭಿರೇವ ಚ ।
ಸಂಕೀರ್ತ್ಯ ನಾಮಸಾಹಸ್ರಂ ಮುಜ್ಜಳಾರ್ಹಂ ಮಹಾತ್ಮನಃ ॥೫೪॥
ವಿನಿರ್ಯಯೌ ಮಹಾತೇಜಾಃ ತಸ್ಮಾತ್ ಪುಣ್ಯತಮೂದ್ಗೃಹಾತ್ ॥೫೫॥
ಅನ್ಯೇದ್ಯುಶ್ಚ ರಥಾಬ್ಜಾತ್ಮಾ ಕೈಕೇಯ್ಯಾಂ ಭರತೋಭವತ್ ।
ತದನ್ಯೇದ್ಯುಃ ಸುಮಿತ್ರಾಯಾಂ ಅನನ್ತಾತ್ಮಾ ಚ ಲಕ್ಷ್ಮಣಃ ।
ಶತ್ರುಘ್ನಃ ಪಾಞ್ಚಜನ್ಯಾತ್ಮಾ ದ್ವೌ ಜಾತೌ ಯುಗಪತ್ ಪ್ರಿಯೇ ॥೫೦॥
ಪುಷ್ಯೇ ಜಾತಸ್ತು ಭರತೋ ವಿಮಾನಲಗ್ನೇ ಪ್ರಸನ್ನಧೀಃ ।
ಸಾರ್ಪೇ ಜಾತೌ ತು ಸೌಮಿತ್ರೀ ಕುಳೀರೇಭ್ಯುದಿತೇ ರವೌ ॥೫೧॥
ಭರಣಾದ್ಭರತಂ ನಾಮ ಲಕ್ಷ್ಮಣಂ ಲಕ್ಷಣಾನ್ವಿತಮ್ ।
ಶತ್ರುಘ್ನಂ ಶತ್ರುಹನ್ತಾರಂ ಏವಂ ಗುರುರಭಾಷತ ॥೫೨॥
ರಾಜಾ ತು ವಿಪ್ರಮುಖ್ಯೇಭ್ಯೋ ಧನಂ ಬಹು ದದೌ ತದಾ ।
ಗ್ರಾಮಾಣಾಂ ಶತಸಾಹಸ್ರಂ ಗವಾಮಪ್ಯಮಿತಂ ದದೌ ॥೫೩॥
ವಸ್ತ್ರೈರಾಭರಣೈರ್ದಿವ್ಯೈಃ ಅಸಙ್ಖ್ಯೇಯೈರ್ಧನೈರಪಿ ।
ವಿಷ್ಣುಪ್ರೀತ್ಯೈ ತದಾ ರಾಜಾ ತರ್ಪಯಾಮಾಸ ಭೂಸುರಾನ್ ॥೫೪॥

ಳಿಂದ ಸ್ತುತಿಸಿ, ತನಗೆ ಶ್ರೇಯಸ್ಸುಂಟಾಗುವುದಕ್ಕಾಗಿ ಆ ಮಹಾತ್ಮನ ಸಹಸ್ರನಾಮವನ್ನು ನಾರಾಯಣ ಮಾಡಿ, ಅತ್ಯಂತ ಪುಣ್ಯಕರವಾದ ಆ ಸೂತಿಕಾಗೃಹದ ದೆಸೆಯಿಂದ ಹೊರಟುಬಂದನು ॥೫೩—೫೯॥

ಆ ಮಾರನೆಯ ದಿವಸ, ಪರಮಾತ್ಮನ ಚಕ್ರದ ಅಪರಾವತಾರವಾದ ಭರತನು ಕೈಕೇಯಿಯಲ್ಲಿ ಜನಿಸಿದನು. ಹೇಪ್ರಿಯೆ! ಅದಕ್ಕೆ ಮಾರನೆಯ ದಿವಸ, ಆದಿಶೇಷನ ಅವತಾರವಾದ ಲಕ್ಷ್ಮಣನೂ, ಶಂಖದ ಅವತಾರಭೂತನಾದ ಶತ್ರುಘ್ನನೂ, ಸುಮಿತ್ರೆಯಲ್ಲಿ ಒಟ್ಟಿಗೆ ಅವಳಿಮಕ್ಕಳಾಗಿ ಹುಟ್ಟಿದರು ॥೫೦॥

ಪ್ರಸನ್ನಹೃದಯನಾದ ಭರತನು, ಪುಷ್ಯನಕ್ಷತ್ರದಲ್ಲಿ ವಿಮಾನಲಗ್ನದಲ್ಲಿ ಹುಟ್ಟಿದನು. ಲಕ್ಷ್ಮಣ ಶತ್ರುಘ್ನರು, ಆಶ್ಲೇಷನಕ್ಷತ್ರದಲ್ಲಿ ಕರ್ಕಟಲಗ್ನದಲ್ಲಿ ಹುಟ್ಟಿದರು ॥೫೧॥

ಭರಣ (ರಕ್ಷಣ) ಮಾಡತಕ್ಕವನಾದುದರಿಂದ ಭರತನೆಂದೂ, ಮಹಾಲಕ್ಷಣಸಂಪನ್ನನಾದುದರಿಂದ ಲಕ್ಷ್ಮಣನೆಂದೂ, ಶತ್ರುವಿನಾಶಕನಾದುದರಿಂದ ಶತ್ರುಘ್ನನೆಂದೂ, ಈರೀತಿಯಾಗಿ ಗುರುವಾದ ವಸಿಷ್ಠಮುನಿಯು ಆ ಮೂರುಜನರಿಗೂ ನಾಮಕರಣ ಮಾಡಿದನು ॥೫೨॥

ಆಗ, ಆ ದಶರಥಮಹಾರಾಜನು, ಶ್ರೇಷ್ಠರಾದ ಬ್ರಾಹ್ಮಣರಿಗೆ, ಅಧಿಕವಾದ ಧನವನ್ನೂ, ಅನೇಕ ಗ್ರಾಮಗಳನ್ನೂ, ಅಸಂಖ್ಯಾಕವಾದ ಗೋವುಗಳನ್ನೂ ದಾನಮಾಡಿದನು ॥೫೩॥

ಮತ್ತು, ಆ ದಶರಥನು, ಶ್ರೀಮನ್ಮಹಾವಿಷ್ಣುವಿಗೆ ಪ್ರೀತಿಯುಂಟುಮಾಡುವುದಕ್ಕೋಸ್ಕರ, ದಿವ್ಯವಾದ ವಸ್ತ್ರಾಭರಣಗಳಿಂದಲೂ ಅಸಂಖ್ಯಾಕವಾದ ಧನಗಳಿಂದಲೂ ಬ್ರಾಹ್ಮಣರನ್ನು ಸಂತೋಷಪಡಿಸಿದನು ॥೫೪॥

ತಸ್ಮಿನ್ ದಿನೇ ನಿಶಾಚೂರ್ಣೈಃ ಧೂಪೈಃ ಕರ್ಪೂರಧೂಳಿಭಿಃ ।
ಉತ್ಸವಂ ಚಕ್ರಿರೇ ಸರ್ವೇ ಪೌರಜಾನಪದಾಜನಾಃ ॥೬೫॥
ಅಥ ಲೋಕೇಶ್ವರೀ ಲಕ್ಷ್ಮೀಃ ಜನಕಸ್ಯ ಪುರೇ ಸ್ವತಃ ।
ಶುಭಕ್ಷೇತ್ರೇ ಹಲೋತ್ಖಾತೇ ತಾರೇ ಚೋತ್ತರಫಲ್ಗುನೇ ॥೬೬॥
ಆಯೋನಿಜಾ ಪದ್ಮಹಸ್ತಾ ಬಾಲಾರ್ಕಶತಸನ್ನಿಭಾ ।
ಸೀರಾಮುಖೇ ಸಮುತ್ಪನ್ನಾ ಬಾಲಭಾವೇಪಿ ಸುನ್ದರೀ ।
ರಾಮಸ್ಯ ಪತ್ನೀ ಭವಿತುಂ ತ್ರೈಲೋಕ್ಯಹಿತಕಾಮ್ಯಯಾ ॥೬೭॥
ತಾಂ ದೃಷ್ಟ್ವಾ ಜನಕೋ ರಾಜಾ ಹರ್ಷಪರ್ಯಾಕುಲೇಕ್ಷಣಃ ।
ಉದ್ಧೃತ್ಯಾಸತ್ಯಭಾವೇಸ ಪುಪೋಷ ಸಹ ಭಾರ್ಯಯಾ ॥೬೮॥
ಸೀರಾಮುಖೋದ್ಭವಾತ್ ಸೀತೇತ್ಯೇತಸ್ಯೈ ನಾಮ ಚಾಕರೋತ್ ॥೬೯॥
ಯಸ್ಯಾಂ ಚೈತ್ರನವಮ್ಯಾಂ ತು ಜಾತೋ ರಾಮೋ ಹರಿಃ ಸ್ವಯಮ್ ।
ಸಾ ತಿಥಿರ್ಮುಕ್ತಿದಾ ಸರ್ವಕಾಮದಾ ಗಿರಿಜೇ ನೃಣಾಮ್ ॥೭೦॥

ಇತಿ ಶ್ರೀಬಾಲಕಾಣ್ಡೇ ಶ್ರೀರಾಮಾದ್ಯವತರಣ ವಿಶ್ವರೂಪಪ್ರದರ್ಶನ
ಕಥನಂ ನಾಮ ಚತುರ್ದಶಃ ಸರ್ಗಃ.

ಆ ದಿವಸ, ಆ ಊರಿನಲ್ಲಿಯೂ ಆ ದೇಶದಲ್ಲಿಯೂ ಇರುವ ಜನರೆಲ್ಲರೂ, ಬುಕ್ಕಿಹಿಟ್ಟಿನಿಂದಲೂ ಧೂಪಗಳಿಂದಲೂ ಕರ್ಪೂರಧೂಳಿಯಿಂದಲೂ ವಿಶೇಷವಾಗಿ ಉತ್ಸವವನ್ನು ಮಾಡಿದರು ॥

ಈರೀತಿಯಾಗಿ ಶ್ರೀಭಗವಂತನು ಅಯೋಧ್ಯೆಯಲ್ಲಿ ಅವತರಿಸಿದ ಬಳಿಕ, ಲೋಕೇಶ್ವರಿಯಾದ ಮಹಾಲಕ್ಷ್ಮಿಯು, ಮೂರುಲೋಕಕ್ಕೂ ಹಿತವುಂಟುಮಾಡಬೇಕೆಂಬ ಇಚ್ಛೆಯಿಂದ, ಶ್ರೀರಾಮನಿಗೆ ಪತ್ನಿಯಾಗುವುದಕ್ಕಾಗಿ ಜನಕಮಹಾರಾಜನ ಪಟ್ಟಣದೊಳಗೆ, ಹಲದಿಂದ ಕೃಷ್ಟವಾದ ಯಜ್ಞಭೂಮಿಯಲ್ಲಿ, ಉತ್ತರಫಲ್ಗುನಿ (ಉತ್ತರೆ) ನಕ್ಷತ್ರದಲ್ಲಿ, ಕೈಯಲ್ಲಿ ಕಮಲವನ್ನು ಹಿಡಿದುಕೊಂಡು, ಬಾಲ್ಯದಲ್ಲಿಯೇ ಮಹಾಸೌಂದರ್ಯವತಿಯಾಗಿ, ನೂರಾರು ಬಾಲಸೂರ್ಯರು ಒಟ್ಟಿಗೆ ಉದಯಿಸಿದಂತೆ, ಅಯೋನಿಜಳಾಗಿ ನೇಗಲಿನ ತುದಿಗೆ ಸಿಕ್ಕಿಕೊಂಡು ಅವಿರ್ಭವಪಡೆದಳು ॥೬೬—೬೭॥

ಅವಳನ್ನು ಕಂಡು, ಜನಕಮಹಾರಾಜನು ಹರ್ಷದಿಂದ ವಿಕಸಿತನಯನನಾಗಿ, ಅಲ್ಲಿಂದ ಮೇಲಕ್ಕೆ ತೆಗೆದುಕೊಂಡು, ಆ ಮಗುವನ್ನು ತನ್ನ ಪುತ್ರಿಯೆಂದು ನಿಶ್ಚಯಿಸಿಕೊಂಡು ಪತ್ನೀಸಹಿತನಾಗಿ ಸಂರಕ್ಷಿಸಿದನು. ಆ ಬಾಲಿಕೆಯು ಸೀರಾಮುಖ (ನೇಗಿಲುಮುದಿ)ದಲ್ಲಿ ಹುಟ್ಟಿದವಳಾದ ಕಾರಣ, ಅವಳಿಗೆ ಸೀತೆಯೆಂದೇ ನಾಮಕರಣವನ್ನೂ ಮಾಡಿದನು ॥೬೮—೬೯॥

ಎಲೌ! ಪಾರ್ವತಿ! ಯಾವ ಚೈತ್ರ ಶುಕ್ಲ ನವಮಿಯಂದಿವಸ ಸಾಕ್ಷಾದ್ಭಗವಂತನು ರಾಮರೂಪನಾಗಿ ಅವತರಿಸಿದನೋ, ಆ ತಿಥಿಯು--ಮನುಷ್ಯರಿಗೆ ಸಕಲವಾದ ಇಷ್ಟಾರ್ಥಗಳನ್ನೂ ಕೊಟ್ಟು—ಕೊನೆಗೆ ಮೋಕ್ಷವನ್ನೂ ಕೊಡುವುದು ॥೭೦॥

ಇದು ಬಾಲಕಾಂಡದಲ್ಲಿ ಶ್ರೀರಾಮಾದ್ಯವತರಣ ವಿಶ್ವರೂಪಪ್ರದರ್ಶನಕಥನವೆಂಬ
ಹದಿನಾಲ್ಕನೆಯ ಸರ್ಗವು.

ಅಥ ಶ್ರೀ ಬಾಲಕಾಣ್ಡೇ ಪಞ್ಚಾದಶಃ ಸರ್ಗಃ.

ಶ್ರೀ ಪಾರ್ವತ್ಯುವಾಚ.

ಭಗವನ್ ಸರ್ವತತ್ತ್ವಜ್ಞ ಸರ್ವಾಭೀಷ್ಟಪ್ರದಾಯಕ ।
ವದ ಲೋಕೋಪಕಾರಾಯ ಶ್ರೀರಾಮನವಮೀವ್ರತಮ್ ॥೧॥

ಶ್ರೀ ಶಿವಉವಾಚ.

ಶ್ರೀರಾಮನವಮೀ ಪ್ರೋಕ್ತಾ ಕೋಟಿಸೂರ್ಯಗ್ರಹಾಧಿಕಾ ।
ರಾಮಏವ ಪರಬ್ರಹ್ಮ ತದ್ದಿನಂ ರಾಮತೋಷಕಮ್ ॥೨॥
ತಸ್ಮಿನ್ ದಿನೇ ಮಹಾಪುಣ್ಯೇ ರಾಮಮುದ್ದಿಶ್ಯ ಭಕ್ತಿತಃ ।
ಯತ್ಕಿಞ್ಚಿತ್ ಕ್ರಿಯತೇ ಕರ್ಮ ತದ್ಭವಕ್ಷಯಕಾರಣಮ್ ॥೩॥
ಉಪೋಷಣಂ ಜಾಗರಣಂ ಪಿತೄನುದ್ದಿಶ್ಯ ತರ್ಪಣಮ್ ।
ತಸ್ಮಿನ್ ದಿನೇ ಚ ಕರ್ತವ್ಯಂ ಬ್ರಹ್ಮಸಾಫ್ಷಾತ್ಕೃತಮೀಪ್ಸುಭಿಃ ॥೪॥
ಯಃ ಕಿಂಚಿದ್ರಾಮಮುದ್ದಿಶ್ಯ ನೋ ದದಾತಿ ಸ್ವಶಕ್ತಿತಃ ।
ರೌರವೇಷು ಸ ಮೂಢಾತ್ಮಾ ಪಚ್ಯತೇ ನಾತ್ರ ಸಂಶಯಃ ॥೫॥

ಬಾಲಕಾಂಡದಲ್ಲಿ ಹದಿನೆಯ್ದನೆಯ ಸರ್ಗವು.

ಪುನಃ ಶ್ರೀ ಪಾರ್ವತಿಯು ಪ್ರಾರ್ಥಿಸುವಳು :—

ಸಮಸ್ತ ರಹಸ್ಯಗಳನ್ನೂ ತಿಳಿದಿರುವನೇ! ಸಕಲವಾದ ಇಷ್ಟಾರ್ಥಗಳನ್ನೂ ಕೊಡತಕ್ಕವನೇ! ಎಲ್ಲೆ ಭಗವಂತನಾದ ಪರಮೇಶ್ವರನೇ! ಲೋಕೋಪಕಾರಾರ್ಥವಾಗಿ ನೀನು ಶ್ರೀರಾಮನವಮಿವ್ರತದ ವಿಧಿಯನ್ನು ಹೇಳುವವನಾಗು ॥೧॥

ಶ್ರೀ ಪರಮೇಶ್ವರನು ಹೇಳುವನು :—

ಎಲೌ! ಪಾರ್ವತಿ! ಶ್ರೀರಾಮನವಮಿಯು, ಒಂದು ಕೋಟಿಸೂರ್ಯಗ್ರಹಣ ಪುಣ್ಯಕಾಲಕ್ಕಿಂತಲೂ ಅಧಿಕವಾದುದೆಂದು ಪ್ರಾಜ್ಞರಿಂದ ಉಕ್ತವಾಗಿರುವುದು. ಶ್ರೀರಾಮನೇ ಸಾಕ್ಷಾತ್ ಪರಬ್ರಹ್ಮಸದಾರ್ಥವು; ಅವನ ಅವತಾರದಿವಸವು ಅವನಿಗೆ ಕೇವಲ ಪ್ರೀತಿಕರವಾದುದು॥೨॥

ಮಹಾಪುಣ್ಯತಮವಾದ ಆ ರಾಮನವಮಿಯು ದಿವಸ, ಶ್ರೀರಾಮನನ್ನುದ್ದೇಶಮಾಡಿಕೊಂಡು, ಭಕ್ತಿಯಿಂದ ಯಾವುದೊಂದು ಸ್ವಲ್ಪ ಕರ್ಮವು ಆಚರಿಸಲ್ಪಡುವುದೋ, ಅದು ಸಂಸಾರಕ್ಷಯ ಹೇತುವಾಗುವುದು ॥೩॥

ಬ್ರಹ್ಮಸಾಕ್ಷಾತ್ಕಾರವಾಗಬೇಕೆಂದಪೇಕ್ಷಿಸುವವನು, ಆ ದಿವಸ, ಉಪವಾಸವನ್ನೂ ಜಾಗರಣೆಯನ್ನೂ ಪಿತೃಗಳಿಗೆ ತರ್ಪಣವನ್ನೂ ಮಾಡಬೇಕು ॥೪॥

ಆದಿವಸ, ಯಾವ ಮೂಢಾತ್ಮನು, ತನ್ನ ಶಕ್ತಿಯಿದ್ದಮಟ್ಟಿಗೆ, ರಾಮನನ್ನುದ್ದೇಶಿಸಿಕೊಂಡು ಏನಾದರೂ ಸ್ವಲ್ಪವಾದರೂ ದಾನವಾಡುವುದಿಲ್ಲವೋ, ಅವನು ರೌರವಾದಿನರಕಗಳಲ್ಲಿ ಸಂತಾಪಹೊಂದುವನು. ಇದರಲ್ಲಿ ಸಂಶಯವಿಲ್ಲ ॥೫॥

ಯಸ್ತು ರಾಮನವಮ್ಯಾಂ ತು ಭುಙ್ಕ್ತೇ ಮೋಹಾದ್ವಿಮೂಢಧೀಃ ।
ಕುಂಭೀಪಾಕೇಷು ಘೋರೇಷು ಪಚ್ಯತೇ ನಾತ್ರ ಸಂಶಯಃ ॥೬॥

ಭೋಕ್ತಾ ರಾಮನವಮ್ಯಾಖ್ಯತಿಥೌ ಮೂಢಮನಾ ನರಃ ।
ಸಹಸ್ರಯುಗಪರ್ಯಂತಂ ಪಚ್ಯತೇ ಕಾಲಸೂತ್ರಕೇ ॥೭॥

ಬ್ರಹ್ಮಹತ್ಯಾದಿಪಾಪಾನಾಂ ನವಮ್ಯುಪವಾಸಭೀರುಣಾಮ್ ।
ಅನ್ನಮಾಶ್ರಯಮಾಖ್ಯಾತಂ ಉಮೇ ಸರ್ವಾತ್ಮನಾ ಮಯಾ ॥೮॥

ಬ್ರಹ್ಮಹತ್ಯಾದಿಪಾಪಾನಾಂ ದೃಷ್ಟಾ ಶಾಸ್ತ್ರೇಷು ನಿಷ್ಕೃತಿಃ ।
ರಘುನಾಥನವಮ್ಯಾಂ ತು ಭೋಕ್ತೃಣಾಂ ನಾಸ್ತಿ ನಿಷ್ಕೃತಿಃ ॥೯॥
ಸಕೃಚ್ಛ್ರೀರಾಮನವಮ್ಯಾಂ ಉಪೋಷ್ಯ ಶ್ರದ್ಧಯಾ ಸಹ ।
ಏಕಾದಶೀಶತೇನಾಪಿ ನ ಲಭೇನ್ಮಾನವೋ ಧ್ರುವಮ್ ॥೧೦॥
ಸೂರ್ಯಗ್ರಹೇ ಕುರುಕ್ಷೇತ್ರೇ ಮಹಾದಾನೈಃ ಕೃತೈರ್ಮುಹುಃ ।
ಯತ್ ಫಲಂ ತದವಾಪ್ನೋತಿ ಶ್ರೀರಾಮನವಮೀವ್ರತಾತ್ ॥೧೧॥
ಕುರ್ಯಾದತನ್ದ್ರಿತೋ ರಾಮನವಮ್ಯಾಂ ಸಮುಪೋಷಣಮ್ ।
ಮಾತೃಗರ್ಭಮವಾಪ್ನೋತಿ ನೈವ ರಾಮೋ ಭವೇತ್ ಸ್ವಯಮ್ ॥೧೨॥

ಅಜ್ಞಾನಾದ ಯಾವನು ರಾಮನವಮಿಯಲ್ಲಿ ಭೋಜನಮಾಡುವನೋ, ಅವನು ಘೋರವಾದ ಕುಂಭೀಪಾಕನರಕದಲ್ಲಿ ಸಂಕಟಪಡುವನು; ಇದರಲ್ಲಿ ಸಂಶಯವಿಲ್ಲ ॥೬॥

ಶ್ರೀರಾಮನವಮಿಯೆಂಬ ದಿವಸ ಅನ್ನವನ್ನು ತಿನ್ನತಕ್ಕ ಮೂಢಹೃದಯನಾದ ಮನುಜನು, ಸಾವಿರಯುಗಪರ್ಯಂತವಾಗಿ ಕಾಲಸೂತ್ರವೆಂಬ ನರಕದಲ್ಲಿ ಯಾತನೆಯನ್ನನುಭವಿಸುವನು ॥೭॥

ಎಲೌ! ಪಾರ್ವತಿ! ಶ್ರೀರಾಮನವಮಿಯಿಂದ ಹೆದರಿ, ಬ್ರಹ್ಮಹತ್ಯಾದಿ ಪಾತಕಗಳೆಲ್ಲವೂ ಅನ್ನವನ್ನಾಶ್ರಯಿಸಿರುವುವು. ಹೀಗೆಂದು ನಾನು ಸರ್ವಾತ್ಮನಾ ಹೇಳಿರುವೆನೆಂದು ತಿಳಿ ॥೮॥

ಬ್ರಹ್ಮಹತ್ಯಾದಿಪಾತಕಗಳಿಗೂ ಶಾಸ್ತ್ರಗಳಲ್ಲಿ ಪ್ರಾಯಶ್ಚಿತ್ತವು ಸಿಕ್ಕುವುದು. ರಾಮನವಮಿಯಲ್ಲಿ ಭೋಜನಮಾಡತಕ್ಕವನಿಗಾದರೋ, ಸುತರಾಂ ಪ್ರಾಯಶ್ಚಿತ್ತವೇ ಸಿಕ್ಕುವುದಿಲ್ಲ ॥೯॥

ಶ್ರೀರಾಮನವಮಿದಿವಸ ಒಂದುಸಲ ಶ್ರದ್ಧೆಯಿಂದ ಉಪವಾಸಮಾಡಿದುದರಿಂದ ಉಂಟಾಗುವ ಪುಣ್ಯವನ್ನು, ಮನುಜನು ನೂರು ಏಕಾದಶೀವ್ರತಗಳನ್ನು ಮಾಡಿದರೂ ಹೊಂದಲಾರನು; ಇದು ದಿಟವು ॥೧೦॥

ಸೂರ್ಯಗ್ರಹಣಕಾಲದಲ್ಲಿ ಕುರುಕ್ಷೇತ್ರದೊಳಗೆ ಅನೇಕಬಾರಿ ಮಾಡಿದ ಮಹಾದಾನಗಳಿಂದ ಯಾವ ಪುಣ್ಯವು ಬರುವುದೋ, ಒಂದು ಶ್ರೀರಾಮನವಮಿವ್ರತದಿಂದ ಅಂತಹ ಪುಣ್ಯವು ಬರುವುದು ॥

ಯಾವ ಪುರುಷನು, ಆಲಸ್ಯವಿಲ್ಲದವನಾಗಿ ಶ್ರೀರಾಮನವಮಿಯಲ್ಲಿ ಉಪವಾಸಮಾಡುವನೋ, ಅವನು ಪುನಃ ಮಾತೃಗರ್ಭವಾಸದುಃಖವನ್ನು ಅನುಭವಿಸುವುದಿಲ್ಲ; ಅವನು, ಸಾಕ್ಷಾತ್ ಶ್ರೀರಾಮನೇ ಆಗಿಬಿಡುವನು ॥೧೨॥

ನಿತ್ಯಂ ನೈಮಿತ್ತಿಕಂ ಚೈವ ಕಾಮ್ಯಂ ಚೇತಿ ವಿಚಾರ್ಯತೇ ।
ನಿಷ್ಕಾಮಾನಾಂ ವಿಧಾನಾತ್ ತು ನ ಕಾಮ್ಯಂ ತಾನದಿಷ್ಯತೇ ॥೧೩॥
ಮುಮುಕ್ಷವೋಪಿ ಹಿ ಸದಾ ಶ್ರೀರಾಮನವಮೀವ್ರತಮ್ ।
ನ ತ್ಯಜನ್ತಿ ಸುರಶ್ರೇಷ್ಠೋ ದೇವೇನ್ದ್ರೋಪಿ ವಿಶೇಷತಃ ।
ಗತಾಪದಸ್ಯ ಶ್ರವಣಾತ್ ವಿತತ್ ಸ್ತುತಿಪರಂ ನ ಹಿ ॥೧೪॥
ನೈಮಿತ್ತಿಕಂ ಚ ನ ತಥಾ ಸದೇತಿ ಶ್ರೂಯತೇ ಯತಃ ।
ಯಾವಜ್ಜೀವವಿಭಾವ್ಯತ್ವಂ ಸದಾಸ್ಯಾಶ್ಚೋರ್ಧ್ವಂ ನ ಚಾನ್ಯಥಾ ॥೧೫॥
ತಸ್ಮಾದ್ರಾಮನವಮ್ಯಾಂ ತು ವ್ರತಂ ಕಾರ್ಯಂ ಶುಭೇಪ್ಸುಭಿಃ ॥೧೬॥
ಚೈತ್ರೇ ಮಾಸಿ ನವಮ್ಯಾಂ ತು ಶುಕ್ಲಾಯಾಂ ತು ರಘೂತ್ತಮಃ ।
ಪ್ರಾದುರಾಸೀತ್ ಪುರಾ ದೇವಿ ಪರಬ್ರಹ್ಮೈವ ಕೇವಲಮ್ ॥೧೭॥
ತಸ್ಮಿನ್ ದಿನೇ ತು ಕರ್ತವ್ಯಂ ಉಪವಾಸವ್ರತಂ ಸದಾ ।
ನಿತ್ಯಮೇವ ಭವೇತ್ ತಸ್ಮಾತ್ ಶ್ರೀರಾಮನವಮೀವ್ರತಮ್ ॥೧೮॥
ಶುದ್ಧಾಽಶುದ್ಧೇತಿ ಭೇದೇನ ನವಮೀ ಸಾ ದ್ವಿಧಾ ಮತಾ ।
ಸಮಾ ನ್ಯೂನಾಧಿಕಾ ಚೇತಿ ಶುದ್ಧಾಪಿ ನವಮೀ ತ್ರಿಧಾ ॥೧೯॥

ಈ ರಾಮನವಮೀವ್ರತವು—ನಿತ್ಯವೆ? ಅಥವಾ ನೈಮಿತ್ತಿಕವೆ? ಇಲ್ಲವೆ ಕಾಮ್ಯವೆ?' ಎಂದುವಿಚಾರಮಾಡಿನೋಡೋಣ. ನಿಷ್ಕಾಮರಾಗಿರತಕ್ಕ ಸನ್ಯಾಸಿ ಮುಂತಾದವರಿಗೂ ಈ ರಾಮನವಮೀ ವ್ರತವು ಶಾಸ್ತ್ರವಿಹಿತವಾಗಿರುವುದರಿಂದ, ಇದನ್ನು ಕಾಮ್ಯವೆಂದು ಒಪ್ಪುವುದಕ್ಕಾಗಲಾರದು ॥೧೩॥

ಕೇವಲ ಮುಕ್ತಿಮಾರ್ಗನಿರತರೂ ಕೂಡ ಎಂದಿಗೂ ಶ್ರೀರಾಮನವಮೀ ವ್ರತವನ್ನು ಬಿಡುವುದಿಲ್ಲ; ಸರ್ವದೇವಪತಿಯಾದ ಮಹೇಂದ್ರನೂ ಕೂಡ, ಇದರ ಮಹಿಮೆಯನ್ನು ಕೇಳಿದಮಾತ್ರದಿಂದಲೇ, ತನ್ನ ಸಂಕಟಗಳನ್ನೆಲ್ಲ ನೀಗಿಕೊಂಡನು. ನಾನು ಹೇಳುವ ಮಾತು ಕೇವಲ ಸ್ತುತಿಪರವೆಂದು ಎಣಿಸಬೇಡ ॥೧೪॥

ಇಲ್ಲಿ 'ಸದಾ' ಎಂಬ ಶಬ್ದವಿರುವುದರಿಂದ, ಈ ರಾಮನವಮೀ ವ್ರತವನ್ನು ನೈಮಿತ್ತಿಕವೆಂದು ಶಂಕಿಸುವುದಕ್ಕೂ ಅವಕಾಶವಿಲ್ಲ. ಸದಾ ಎಂಬ ಶಬ್ದಕ್ಕೆ, 'ಯಾವಜ್ಜೀವವೂ ನಡೆಯಬೇಕೆಂದು ಅರ್ಥವಾಗುವುದೇ ಹೊರತು, ಇತರ ವಿಧವಾಗಿ ಅರ್ಥವಾಗುವುದಿಲ್ಲ. ಅದುಕಾರಣ, ಮಂಗಳಾಕಾಂಕ್ಷಿಗಳೆಲ್ಲರೂ ಶ್ರೀರಾಮನವಮೀದಿವಸ ವ್ರತವನ್ನು ಮಾಡಿಯೇ ತೀರಬೇಕು ॥೧೫—೧೬॥

ಎಲೌ! ವಾರ್ಷತಿ! ಚೈತ್ರಮಾಸದಲ್ಲಿ ಶುಕ್ಲಪಕ್ಷದ ನವಮಿಯ ದಿವಸ, ಕೇವಲವಾದ ಪರಬ್ರಹ್ಮವೇ ಶ್ರೀರಾಮರೂಪದಿಂದ ಅವತರಿಸಿತು ॥೧೭॥

ಅದುಕಾರಣ, ಎಂದೆಂದಿಗೂ ಆ ದಿವಸ ಉಪವಾಸವ್ರತವನ್ನು ಮಾಡಬೇಕು. ಆದುದರಿಂದ, ಈ ಶ್ರೀರಾಮನವಮೀ ವ್ರತವು ನಿತ್ಯವೇ ಆಗುವುದಲ್ಲದೆ, ನೈಮಿತ್ತಿಕವೂ ಕಾಮ್ಯವೂ ಆಗಲಾರದು ॥೧೮॥

ಈ ನವಮಿಯು, ಶುದ್ಧವೆಂದೂ ಅಶುದ್ಧ(ವಿದ್ಧ)ವೆಂದೂ ಎರಡುವಿಧವಾಗಿರುವುದು. ಶುದ್ಧವಾದ ನವಮಿಯಲ್ಲಿಯೂ, ಸಮ ಅಧಿಕ ನ್ಯೂನ ಎಂದು ಮೂರು ಭೇದಗಳುಂಟು ॥೧೯॥

ಪುನರ್ವಸ್ವೃಕ್ಷಸಂಯೋಗವಿಯೋಗಾಭ್ಯಾಂ ತು ಷಡ್ವಿಧಾ ।
ಸಮಾದಿಭಿರ್ಋಕ್ಷಯೋಗಾದಿಭೇದೈರ್ವಿದ್ಧಾಪಿ ಷಡ್ವಿಧಾ ॥೦೫॥

ಏವಂ ದ್ವಾದಶಧಾ ಭಿನ್ನಾ ನವಮೀ ತತ್ರ ನಿಶಿ ತಾ ।
ಮಹಾಫಲಪ್ರದಾ ಶುದ್ಧಾ ಪುನರ್ವಸ್ವೃಕ್ಷಯೋಗತಃ ॥೦೧॥

ಚೈತ್ರೇ ಮಾಸಿ ನವಮ್ಯಾಂ ತು ಜಾತೋ ರಾಮೋ ಹರಿಃ ಸ್ವಯಮ್ ।
ಪುನರ್ವಸ್ವೃಕ್ಷಸಂಯುಕ್ತಾ ಸಾ ತಿಥಿಃ ಸರ್ವಕಾಮದಾ ॥೦೦॥

ಪುನರ್ವಸ್ವೃಕ್ಷಸಂಯೋಗಃ ಸ್ವಲ್ಪೋಪಿ ಯದಿ ದೃಶ್ಯತೇ ।
ಚೈತ್ರಶುಕ್ಲನವಮ್ಯಾಂ ತು ಸಾ ತಿಥಿಃ ಸರ್ವಕಾಮದಾ ॥೦೩॥

ಶ್ರೀರಾಮನವಮೀ ಪ್ರೋಕ್ತಾ ಕೋಟಿಸೂರ್ಯಗ್ರಹಾಧಿಕಾ ।
ಚೈತ್ರೇ ಶುದ್ಧಾ ತು ನವಮೀ ಪುನರ್ವಸುಯುತಾ ಯದಿ ॥೦೪॥

ಋಕ್ಷಂ ಸಜ್ಜಾವಯುಕ್ತಂ ಚೇತ್ ನವಮೀ ಸಾತಿಪುಣ್ಯದಾ ।
ಸೈವ ಮಧ್ಯಾಹ್ನಯೋಗೇನ ಮಹಾಪುಣ್ಯತಮಾ ಭವೇತ್ ॥೦೫॥

ಈ ಮೂರುವಿಧ ಶುದ್ಧನವಮಿಗೆ, ಪುನರ್ವಸು ನಕ್ಷತ್ರದ ಯೋಗವುಂಟಾಗುವುದರಿಂದಲೂ ಅದಿಲ್ಲದಿರುವುದರಿಂದಲೂ, ಒಟ್ಟು ಆರು ಭೇದವಾಗುವುದು. ಹೀಗೆಯೇ, ವಿದ್ಧವಾದ ನವಮಿಗೂ–ಸಮ ನ್ಯೂನ ಅಧಿಕ ಎಂಬ ಭೇದಗಳನ್ನೂ—ಪುನರ್ವಸುಯೋಗವಿಯೋಗಗಳನ್ನೂ ಸೇರಿಸಿದರೆ, ಇದರಲ್ಲಿಯೂ ಆರು ಭೇದವಾಗುವುದು ॥೨೦॥

ಹೀಗೆ ಈ ರಾಮನವಮಿಯು ಹನ್ನೆರಡು ವಿಧವಾದ ಭೇದವುಳ್ಳದಾಗಿರುವುದು. ಅದರಲ್ಲಿ, ಶುದ್ಧವಾಗಿಯೂ ಪುನರ್ವಸುನಕ್ಷತ್ರಯೋಗವುಳ್ಳದಾಗಿಯೂ ಇರುವ ನವಮಿಯು ಮಹಾಫಲ ಪ್ರದವಾದುದೆಂದು ಶಾಸ್ತ್ರಜ್ಞರಿಂದ ನಿಶ್ಚಯಿಸಲ್ಪಟ್ಟಿರುವುದು ॥೨೧॥

ಚೈತ್ರಮಾಸದಲ್ಲಿ ನವಮಿಯುದಿವಸ ಸಂಕ್ಷೇತ್ ಶ್ರೀಹರಿಯು ರಾಮರೂಪನಾಗಿ ಅವತರಿಸಿದನಾದಕಾರಣ, ಪುನರ್ವಸುನಕ್ಷತ್ರಯುಕ್ತವಾದ ಆ ನವಮಿಯು ಸರ್ವರಿಗೂ ಸಮಸ್ತವಾದ ಇಷ್ಟಾರ್ಥಗಳನ್ನೂ ಕೊಡಬಕ್ಕುದೆಂದು ತಿಳಿಯಬೇಕು ॥೨೨॥

ಚೈತ್ರಶುಕ್ಲ ನವಮಿಯ ದಿವಸ, ಪುನರ್ವಸು ನಕ್ಷತ್ರಯೋಗವು ಸ್ವಲ್ಪವಾಗಿ ಕಾಣಿಸಿಕೊಂಡರೂ, ಆ ದಿವಸವು ಸಕಲೇಷ್ಟಗಳನ್ನೂ ಕೊಡುವುದು ॥೨೩॥

ಚೈತ್ರಮಾಸದಲ್ಲಿ ಶುಕ್ಲಪಕ್ಷದ ನವಮಿಯು ಪುನರ್ವಸುನಕ್ಷತ್ರಯುಕ್ತವಾಗಿದ್ದಪಕ್ಷದಲ್ಲಿ, ಆ ಶ್ರೀರಾಮನವಮಿಯು ಒಂದುಕೋಟಿಸೂರ್ಯೋಪರಾಗಪುಣ್ಯಕಾಲಕ್ಕಿಂತಲೂ ಅಧಿಕವಾದುದು॥

ಆ ಪುನರ್ವಸುನಕ್ಷತ್ರವು ಸಂಗವಕಾಲಕ್ಕೆ ಸೇರಿದ ಪಕ್ಷದಲ್ಲಿ, ಆ ನವಮಿಯು ಇನ್ನೂ ಹೆಚ್ಚಾಗಿ ಪುಣ್ಯಕರವಾಗುವುದು. ಮಧ್ಯಾಹ್ನಕಾಲಕ್ಕೆ ಪುನರ್ವಸುನಕ್ಷತ್ರಯೋಗವಿದ್ದರೆ, ಮಹಾಪುಣ್ಯತಮವಾಗುವುದು ॥೨೫॥

ಕೇವಲಾಪಿ ಸದೋಪೋಷ್ಯಾ ನವಮೀಶಬ್ದಸಜ್ಞ್ಞಿತಾ ।
ತಸ್ಮಾತ್ ಸರ್ವಪ್ರಯತ್ನೇನ ಕರ್ತವ್ಯಂ ನವಮೀವ್ರತಮ್ ।
ಸರ್ವೈರಿತಿ ಚ ಸರ್ವೇಷಾಂ ಅಧಿಕಾರಃ ಪ್ರಕಾಶ್ಯತೇ ॥೮೬॥
ವಿದ್ಧೈವ ಚೇದ್ದಕ್ಷಯುಕ್ತಾ ವ್ರತಂ ತತ್ರ ಕಥಂ ಭವೇತ್ ।
ವಿದ್ಧಾನಿಷೇಧಶ್ರವಣಾತ್ ನವಮೀ ಚೇತಿ ವಾಕ್ಯತಃ ॥೮೭॥
ನವಮೀ ಚಾಷ್ಟಮೀವಿದ್ಧಾ ತ್ಯಾಜ್ಯಾ ವಿಷ್ಣುಪರಾಯಣೈಃ ।
ಉಪೋಷಣಂ ನವಮ್ಯಾಂ ವೈ ದಶಮ್ಯಾಮೇವ ಪಾರಣಮ್ ॥೮೮॥
ವೈಷ್ಣವಾನಾಂ ವಿಶೇಷಾತ್ ತು ತತ್ರ ವಿಷ್ಣುಪರೈರಿತಿ ।
ದಶಮ್ಯಾದಿಷು ವೃದ್ಧಿಶ್ಚೇತ್ ವಿದ್ಧಾ ತ್ಯಾಜ್ಯೈವ ವೈಷ್ಣವೈಃ ॥೮೯॥
ತದನ್ಯೇಷಾಂ ಚ ಸರ್ವೇಷಾಂ ವ್ರತಂ ತತ್ರೈವ ನಿಶ್ಚಿತಮ್ ।
ದಶಮ್ಯಾಮೇವ ಶಬ್ದೇನ ದಶಮೀಂ ನೈವ ಲಙ್ಘಯೇತ್ ॥೯೦॥
ನಿಶ್ಚಿತೈವಂ ವಿಚಾರೇಣ ನವಮೀವ್ರತಮಾಚರೇತ್ ॥೯೧॥
ವೈಷ್ಣವೈರಿತಿ ವಾಕ್ಯಾದ್ಧಿ ತೇಷಾಂ ಲಕ್ಷಣಮುಚ್ಯತೇ ॥೯೨॥

ನವಮಿಯೆಂಬ ಶಬ್ದವನ್ನು ಶಾಸ್ತ್ರಕಾರರು ಸ್ವೀಕರಿಸಿರುವರಾದಕಾರಣ, ನಕ್ಷತ್ರಯೋಗವಿಲ್ಲದಿದ್ದರೂ ಆ ದಿವಸ ಸರ್ವದಾ ಉಪವಾಸವನ್ನಾಡಬೇಕೆಂದು ಸ್ಪಷ್ಟವಾಗುವುದು. ಅದುಕಾರಣ, ಸರ್ವಪ್ರಯತ್ನದಿಂದಲೂ ಶ್ರೀರಾಮನವಮೀ ವ್ರತವನ್ನು ಮಾಡಬೇಕು. ಇಲ್ಲಿ 'ಸರ್ವೈ' ಎಂಬ ಶಬ್ದವಿರುವುದರಿಂದ, ಈ ವ್ರತದಲ್ಲಿ ಸರ್ವರಿಗೂ ಅಧಿಕಾರವುಂಟೆಂದು ತೋರಿಸಲ್ಪಡುವುದು ॥೮೬॥

ವಿದ್ಧ(ಅಷ್ಟಮೀಯುಕ್ತ)ವಾದ ನವಮಿಯು ಪುನರ್ವಸುನಕ್ಷತ್ರಯುಕ್ತವಾಗಿದ್ದರೂ, ವಿದ್ಧವು ನಿಸಿದ್ಧವೆಂದು ಶಾಸ್ತ್ರವಿರುವುದರಿಂದಲೂ, ನವಮಿಯೇ ಮುಖ್ಯವೆಂದು ವಚನವಿರುವುದರಿಂದಲೂ, ಅಷ್ಟಮೀವಿದ್ಧವಾದ ನವಮಿಯಲ್ಲಿ ಹೇಗೆತಾನೆ ಈ ವ್ರತವು ಸಂಭವಿಸೀತು? ॥೮೭॥

ವಿಷ್ಣುಭಕ್ತರಾದವರು, ಅಷ್ಟಮೀವಿದ್ಧವಾದ ನವಮಿಯನ್ನು ಬಿಟ್ಟುಬಿಡಬೇಕು. ನವಮಿಯಲ್ಲಿ ಉಪವಾಸವನ್ನೂ, ದಶಮಿಯಲ್ಲಿ ಪಾರಣೆಯನ್ನೂ ಮಾಡಬೇಕು ॥೮೮॥

ಅಲ್ಲಿ 'ವಿಷ್ಣುಪರ' ಎಂಬ ಶಬ್ದವಿರುವುದರಿಂದ, ಈ ವಿದ್ಧಾನಿಷೇಧವು ವೈಷ್ಣವರಿಗೆ ವಿಶೇಷವಾಗಿ ಆದರಣೀಯವೆಂದು ತಿಳಿಯಬೇಕು. ದಶಮ್ಯಾದಿ ತಿಥಿಗಳಲ್ಲಿ ವೃದ್ಧಿ ಹುಟ್ಟುವ ಕಾಲದಲ್ಲಿ, ವೈಷ್ಣವರು ಅಷ್ಟಮೀವಿದ್ಧವಾದ ನವಮಿಯನ್ನು ಬಿಟ್ಟೇಬಿಡಬೇಕು ॥೮೯॥

ಇತರರೆಲ್ಲರೂ ಆ ನವಮಿ(ವಿದ್ಧ)ಯಲ್ಲಿಯೇ ವ್ರತವನ್ನು ಮಾಡಬೇಕೆಂದು ನಿಶ್ಚಿತವಾಗಿರುವುದು. ಆದರೆ 'ದಶಮ್ಯಾಮೇವ' ಎಂಬ ಶಬ್ದವಿರುವುದರಿಂದ, ದಶಮೀದಿವಸವೆಂದಿಗೂ ಉಪವಾಸವಮಾಡಕೂಡದು. ಈ ವಿಷವಾದ ವಿಚಾರಗಳಿಂದ ಸರಿಯಾಗಿ ನಿಶ್ಚಯಮಾಡಿಕೊಂಡು ನವಮೀವ್ರತವನ್ನು ಆಚರಿಸಬೇಕು ॥೯೦—೯೧॥

'ವೈಷ್ಣವೈಃ' ಎಂಬ ಶಬ್ದವಿರುವುದರಿಂದ, ಈಗ ಆ ವೈಷ್ಣವರ ಲಕ್ಷಣವು ನಿರೂಪಿಸಲ್ಪಡುವುದು:—ಪ್ರಥಮತಃ ಸದ್ಗುರುವನ್ನು ಆಶ್ರಯಿಸಬೇಕು. ಬಳಿಕ, ಆ ಗುರುವಿನದ್ವಾರಾ, ಮಂತ್ರ

ಸದ್ಗುರುಂ ಸಮುಪಾಶ್ರಿತ್ಯ ಮನ್ತ್ರಶಾಸ್ತ್ರೋಕ್ತಮಾರ್ಗತಃ ।
ಸಾಙ್ಗಂ ಸಮುದ್ರಂ ಸನ್ಯಾಸಂ ಸಋಷಿಂ ಸಾಧಿದೈವತಮ್ ॥೩೩॥
ಸದೀಕ್ಷಾವಿಧಿ ಸಧ್ಯಾನಂ ಸಯನ್ತ್ರಂ ದ್ವಾದಶಾಕ್ಷರಮ್ ।
ಅಷ್ಟಾಕ್ಷರಮಥಾನ್ಯಂ ವಾ ಯೋ ಮನ್ತ್ರಂ ಸಮುಪಾಸತೇ ।
ಜ್ಞೇಯಾಸ್ತೇ ವೈಷ್ಣವಾಲೋಕೇ ವಿಷ್ಣ್ವರ್ಚನರತಾಃ ಸದಾ ॥೩೪॥
ಸದೀಕ್ಷಾವಿಧಿ ಸಾಂಗಂ ವಾ ಮನ್ತ್ರರಾಜಂ ಸಯನ್ತ್ರಕಮ್ ।
ಸಹಸ್ರಾಕ್ಷರಸಂಯುಕ್ತಂ ಮೂಲವ್ಯೂಹಾದಿಭೇದತಃ ॥೩೫॥
ಪಞ್ಚಾಯತನರೂಪಂ ಚ ಯೇ ವಿಪ್ರಾಃ ಸಮುಪಾಸತೇ ।
ಮಹಾವೈಷ್ಣವಸಂಜ್ಞಾಸ್ತೇ ಮಹಾವಿಷ್ಣೋರತಿಪ್ರಿಯಾಃ ॥೩೬॥
ಅಥ ಪೂಜಾಂ ಪ್ರವಕ್ಷ್ಯಾಮಿ ಸಜ್ಜಿಹ್ಮಾಶೇಷತಃ ಪ್ರಿಯೇ ।
ಯಾಂ ಕೃತ್ವಾ ಮುಚ್ಯತೇ ಮರ್ತ್ಯೋ ಮೃತ್ಯುಸಂಸಾರಬನ್ಧನಾತ್ ॥೩೭॥
ಅಷ್ಟಪತ್ರಂ ಸಮಾಲಿಖ್ಯ ಮಧ್ಯೇ ಶ್ರೀರಾಮಮಾಲಿಖೇತ್ ।
ಮಾತ್ರಾ ಸಹ ಪ್ರಪಞ್ಚಸ್ಯ ಗುಪ್ತ್ಯರ್ಥಂ ನವರೂಪಿಣಮ್ ॥೩೮॥
ಪೂರ್ವೇ ತು ಭರತಂ ಪೂಜ್ಯ ಹರೇರಂಶಂ ಸುದರ್ಶನಮ್ ।

ಶಾಸ್ತ್ರದಲ್ಲಿ ಹೇಳಿರುವಂತೆಯಾಗಿ, ಅಂಗಮುದ್ರೆ ನ್ಯಾಸ ಋಷಿ ಅಧಿದೇವತೆ ದೀಕ್ಷೆ ಧ್ಯಾನ ಯಂತ್ರ — ಇವುಗಳೊಡನೆ, ದ್ವಾದಶಾಕ್ಷರಿಯನ್ನಾಗಲಿ — ಅಷ್ಟಾಕ್ಷರಿಯನ್ನಾಗಲಿ — ಅಥವಾ ಷಡಕ್ಷರಿಮುಂತಾದ ಇತರಯಾವ ಮಂತ್ರವನ್ನಾಗಲಿ ಉಪದೇಶಮಾಡಿಸಿಕೊಂಡು, ಆ ಮಂತ್ರೋಪಾಸನೆಮಾಡುತ, ಸರ್ವದಾ ವಿಷ್ಣುಪೂಜಾಸಕ್ತರಾಗಿರಬೇಕು. ಹೀಗೆ ಯಾರಿರುವರೋ, ಅವರೇ ಈ ಲೋಕದಲ್ಲಿ ವೈಷ್ಣವರೆಂದು ತಿಳಿಯಲ್ಪಡಬೇಕು ॥೩೨—೩೪॥

ಮತ್ತು, ದೀಕ್ಷಾವಿಧಿಪೂರ್ವಕವಾಗಿ, ಯಂತ್ರದೊಡನೆ ಶ್ರೀರಾಮಮಂತ್ರವನ್ನು ಉಪದೇಶಮಾಡಿಸಿಕೊಂಡು, ಮೂಲಮಂತ್ರ ಮಾಲಾಮಂತ್ರಾದಿಭೇದಗಳಿಂದ ಅದನ್ನು ಒಂದುಸಾವಿರದ ಇಪ್ಪತ್ತೆಂಟು ಅಕ್ಷರವುಳ್ಳದನ್ನಾಗಿ ಮಾಡಿಕೊಂಡು, ಅಂತಹ ಮಂತ್ರವನ್ನು ಶ್ರೀರಾಮಯಂತ್ರದಲ್ಲಿ ಉದ್ಧಾರಮಾಡಿ, ಆ ಯಂತ್ರದಲ್ಲಿ ಶ್ರೀರಾಮಪಂಚಾಯತನವನ್ನೂ ಧ್ಯಾನಮಾಡಿಯಾವ ವಿಪ್ರರು ಉಪಾಸಿಸುವರೋ, ಅವರು ಮಹಾವೈಷ್ಣವರೆನ್ನಿಸಿಕೊಳ್ಳುವರು. ಇವರಲ್ಲಿ ಶ್ರೀಮನ್ಮಹಾವಿಷ್ಣುವು ಅತಿಯಾಗಿ ಪ್ರೀತಿಯಿಡುವನು ॥೩೫—೩೬॥

ಎಲೌ ಪ್ರಿಯಳೆ! ಇನ್ನು ಸಮಸ್ತಗ್ರಂಥಗಳ ಸಾರವನ್ನೂ ಸಂಗ್ರಹಿಸಿ, ಶ್ರೀರಾಮಪೂಜಾ ವಿಧಿಯನ್ನು ನಿನಗೆ ಹೇಳುವೆನು. ಇದನ್ನು ಮಾಡಿದ ಮನುಜನು, ಮೃತ್ಯುಬಂಧನವನ್ನೂ ಸಂಸಾರಬಂಧನವನ್ನೂ ಕಳೆದುಕೊಳ್ಳುವನು ॥೩೭॥

ಪ್ರಥಮತಃ ಅಷ್ಟದಳಪದ್ಮವನ್ನು ಬರೆಯಬೇಕು. ಅದರ ಮಧ್ಯಕರ್ಣಿಕೆಯಲ್ಲಿ, ಪ್ರಪಂಚಸಂರಕ್ಷಣಾರ್ಥವಾಗಿ ಹೊಸದಾಗಿ ಅವತರಿಸಿದ ಶ್ರೀ ಸೀತಾರಾಮನನ್ನೂ ಅವನ ತಾಯಿಯಾದ ಕೌಸಲ್ಯೆಯನ್ನೂ ಬರೆದು ಪೂಜಿಸಬೇಕು ॥೩೮॥

ಆ ಅಷ್ಟದಳಪದ್ಮದ ಪೂರ್ವದಳದಲ್ಲಿ, ಹರಿಯ ಅಂಶವಾದ ಸುದರ್ಶನಾವತಾರವಾದ ಭರತನನ್ನೂ, ದಕ್ಷಿಣದಲ್ಲಿ ಲಕ್ಷ್ಮಣನನ್ನೂ, ಪಶ್ಚಿಮದಳದಲ್ಲಿ ಶತ್ರುಘ್ನನನ್ನೂ, ಉತ್ತರದಳದಲ್ಲಿ ಸುಮಿ

ದಕ್ಷಿಣೇ ಲಕ್ಷ್ಮಣಂ ಪೂಜ್ಯ ಶತ್ರುಘ್ನಂ ಪಶ್ಚಿಮೇ ತಥಾ ॥೩೯॥
ಉತ್ತರಸ್ಯಾಂ ದಿಶಿ ತಥಾ ಸುಮಿತ್ರಾಂ ಕೇಕಯಾತ್ಮಜಾಮ್ ।
ದುರ್ಗಾಂ ವಿನಾಯಕಂ ಚಾಪಿ ಕ್ಷೇತ್ರಪಾಲಂ ಸರಸ್ವತೀಮ್ ॥೪೦॥
ಕೋಣೇಷು ಪೂಜಯೇದ್ಭಕ್ತ್ಯಾ ವಿಷ್ಣುಭಕ್ತೋ ಜಿತೇಂದ್ರಿಯಃ ।
ತದಗ್ರೇ ಲೋಕಪಾಲಾಂಶ್ಚ ತದಸ್ತ್ರಾಣಿ ತತೋ ಬಹಿಃ ॥೪೧॥
ನಾಮಮನ್ತ್ರೈಶ್ಚತುರ್ಥ್ಯನ್ತೈಃ ನಮೋನ್ತೈಃ ಪ್ರಣವಾದಿಭಿಃ ।
ಕರ್ತವ್ಯಾವಾಹನಾದ್ಯರ್ಚಾ ಗನ್ಧಪುಷ್ಪಾಕ್ಷತಾದಿಭಿಃ ॥೪೨॥
ಘಣ್ಟಾಂ ಚ ನಾದಯೇ ಧೂಪಂ ದೀಪಂ ಚಾನ್ಯೈ ನಿವೇದಯೇತ್ ।
ಭಕ್ಷ್ಯಭೋಜ್ಯಾದಿನಾ ಭಕ್ತ್ಯಾ ನೈವೇದ್ಯಂ ವಿಧಿನಾರ್ಪಯೇತ್ ॥೪೩॥
ಶಮ್ಬೂಲೀಮೋದಕೈರಾಮ್ಲಕದಳೀಫಲಮೂಲಕೈಃ ।
ಅಪೂಪೈರೇಕವಿಂಶದ್ಭಿಃ ಏಕೈಕಸ್ಯ ನಿವೇದಯೇತ್ ॥೪೪॥
ದತ್ವಾಚಮನತಾಮೂಲೀ ಮಹಾನೀರಾಜನಂ ತಥಾ ।
ನಮಸ್ಕುರ್ಯಾತ್ ತತಃ ಸ್ತೋತ್ರೈಃ ಸ್ತುತ್ವಾ ಚ ಪ್ರಜಪೇನ್ಮನುಮ್ ॥
ಶೃಣ್ವನ್ ಜಯನ್ತೀಮಾಹಾತ್ಮ್ಯಂ ದಿವ್ಯಾಂ ರಾಮಕಥಾಂ ತಥಾ ।
ರಾಮಭಕ್ತೈಃ ಸಮಂ ಯಾಮಾನ್ ನಯೇದ್ರಾತ್ರಿಮನುಸ್ಮರನ್ ॥೪೬॥

ತಾ॥ಕೈಳಯಿರುಗಳನ್ನೂ, ನಾಲ್ಕು ಕೋಣ (ಮೂಲೆ)ಗಳಲ್ಲಿಯೂ ಕ್ರಮವಾಗಿ ದುರ್ಗಾ ವಿನಾಯಕ ಕ್ಷೇತ್ರಪಾಲ ಸರಸ್ವತಿಗಳನ್ನೂ, ಅವರ ಮುಂದುಗಡೆ ಎಂಟುದಳಗಳಲ್ಲಿಯೂ ಅಷ್ಟದಿಕ್ಪಾಲಕರನ್ನೂ ಆಜೆಗೆ ಅವರ ಅಸ್ತ್ರಗಳನ್ನೂ ಬರೆದು, ವಿಷ್ಣುಭಕ್ತನು ಇಂದ್ರಿಯನಿಗ್ರಹಪೂರ್ವಕವಾಗಿ ಭಕ್ತಿಯಿಂದ ಪೂಜಿಸಬೇಕು ॥೩೯—೪೧॥

ಚತುರ್ಥೀವಿಭಕ್ತ್ಯಂತವಾದ ನಾಮಮಂತ್ರಗಳಿಗೆ ಆದಿಯಲ್ಲಿ ಪ್ರಣವವನ್ನೂ ಅಂತದಲ್ಲಿ 'ನಮಃ' ಎಂಬ ಪದವನ್ನೂ ಸೇರಿಸಿ, ಈ ಮಂತ್ರದಿಂದ (ಓಂ ಶ್ರೀರಾಮಾಯನಮಃ ಇತ್ಯಾದಿ ರೂಪವಾಗಿ), ಗಂಧಪುಷ್ಪಾಕ್ಷತಾದಿಗಳಿಂದ, ಆವಾಹನಪುರಸ್ಸರವಾಗಿ ಪೂಜಿಮಾಡಬೇಕು ॥೪೨॥

ಘಂಟಾನಾದಮಾಡುತ, ಧೂಪದೀಪಗಳನ್ನು ಸಮರ್ಪಿಸಬೇಕು. ಭಕ್ಷ್ಯಭೋಜ್ಯಾದಿಗಳಿಂದ ವಿಧಿವತ್ತಾಗಿ ನೈವೇದ್ಯವನ್ನು ಸಮರ್ಪಿಸಬೇಕು ॥೪೩॥

ಜಕ್ಕುಲಿ,ಕಡುಬು, ಮಾವಿನಹಣ್ಣು, ಬಾಳೆಯಹಣ್ಣು, ಗೆಡ್ಡೆ ಗೆಣಸು—ಇವುಗಳನ್ನೆಲ್ಲಾ ನಿವೇದಮಾಡಬೇಕು. ಇಪ್ಪತ್ತೊಂದು ಅಪೂಪ (ಕಜ್ಜಾಯ)ಗಳನ್ನು ಪ್ರತಿಯೊಬ್ಬರಿಗೂ ನಿವೇದನ ಮಾಡಬೇಕು ॥೪೪॥

ಬಳಿಕ, ಉತ್ತರಾಚಮನವನ್ನೂ ತಾಂಬೂಲವನ್ನೂ ಸಮರ್ಪಿಸಿ, ಉತ್ತರನೀರಾಜನವನ್ನೆತ್ತಿ, ಅನಂತರ ನಮಸ್ಕಾರಮಾಡಬೇಕು, ಆಮೇಲೆ ಸ್ತೋತ್ರಗಳಿಂದ ಸ್ತುತಿಮಾಡಿ, ಶ್ರೀರಾಮ ಮಂತ್ರಜಪಮಾಡಬೇಕು ॥೪೫॥

ಶ್ರೀರಾಮಜಯಂತಿಯ ಮಾಹಾತ್ಮ್ಯವನ್ನೂ ಇತರವಾದ ಶ್ರೀರಾಮಕಥೆಯನ್ನೂ ಕೇಳುತ, ಶ್ರೀರಾಮನನ್ನು ಧ್ಯಾನಿಸುತ, ರಾಮಭಕ್ತರೊಡನೆ, ಆ ರಾತ್ರಿಯ ನಾಲ್ಕು ಯಾಮಗಳನ್ನೂ ಜಾಗರಣೆಯಿಂದ ಕಳೆಯಬೇಕು ॥೪೬॥

ಫಲಗನ್ಧಾಮ್ಬು ಸಮ್ಪೂರ್ಣಂ ಗೃಹೀತ್ವಾ ಕಲ್ಪ ಮುಜ್ಜ್ವಲಮ್ ।
ಅಶೋಕಚೂತಕುಸುಮೈಃ ಯುಕ್ತಂ ಚ ತುಲಸೀದಲೈಃ ॥೪೭॥
ದಶಾನನವಧಾರ್ಥಾಯ ಧರ್ಮಸಂಸ್ಥಾಪನಾಯ ಚ ।
ದಾನಾವಾನಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥೪೮॥
ಪರಿತ್ರಾಣಾಯ ಸಾಧೂನಾಂ ಜಾತೋ ರಾಮಃ ಸ್ವಯಂ ಹರಿಃ ।
ಗೃಹಾಣಾರ್ಘ್ಯಂ ಮಯಾ ದತ್ತಂ ಭಾರ್ಯಯಾ ಸಹಿತೋನಘ ॥೪೯॥
ಏವಂ ರಾಮದಿನೇ ಪೂಜಾಂ ಕೃತ್ವಾ ಪಾರಣಮಾಚರೇತ್ ।
ಬ್ರಾಹ್ಮಣಾಂ ಭೋಜಯಿತ್ವಾ ತು ದತ್ವಾ ವಿತ್ತಂ ಯಥಾಬಲಮ್ ॥೫೦॥
ಚಾನ್ದ್ರಾಯಣಶತೇ ಯತ್ ಸ್ಯಾತ್ ತಪ್ತಕೃಚ್ಛ್ರಶತೇ ತಥಾ ।
ಶ್ರೀರಾಮನವಮ್ಯಾಂ ತತ್ ವಿನ್ದನ್ತಿ ಫಲಮಞ್ಜಸಾ ॥೫೧॥
ಏವಂ ಕೃತ್ವಾ ಸಕೃದ್ವಾಪಿ ಶ್ರೀರಾಮನವಮೀವ್ರತಮ್ ।
ರಾಮಾನುಗ್ರಹಮಾಸಾದ್ಯ ರಾಮಸಾಯುಜ್ಯಮಾಪ್ನುಯಾತ್ ॥೫೨॥
ಏವಮುಕ್ತ್ವಾ ಮಹಾದೇವಃ ಪಾರ್ವತ್ಯೈ ನವಮೀವ್ರತಮ್ ।
ಪುನಃ ಶ್ರೀರಾಮಚನ್ದ್ರಸ್ಯ ಕಥಾಮಾಹಾಘನಾಶಿನೀಮ್ ॥೫೩॥

ಇತಿ ಶ್ರೀಬಾಲಕಾಣ್ಡೇ ಶ್ರೀರಾಮನವಮೀಕಥಾಪ್ರಶಂಸನಂ
ನಾಮ ಪಞ್ಚದಶಃ ಸರ್ಗಃ.

ಅನಂತರ, ಫಲಗಂಧಜಲಗಳಿಂದ ಭರಿತವಾಗಿ—ಅಶೋಕಚೂತಪುಷ್ಪಗಳಿಂದ ವಿರಾಜಿಸುವ—ಶಂಖವನ್ನು ತೆಗೆದುಕೊಂಡು,–'ದಶಕಂಠನನ್ನು ಕೊಲ್ಲುವುದಕ್ಕೂ ಧರ್ಮವನ್ನು ಸ್ಥಾಪಿಸುವುದಕ್ಕೂ ದೈತ್ಯದಾನವರನ್ನು ನಾಶಪಡಿಸುವುದಕ್ಕೂ ಸಾಧುಗಳನ್ನು ರಕ್ಷಿಸುವುದಕ್ಕೂ ರಾಮರೂಪನಾಗಿ ಅವತರಿಸಿರುವ ಸಾಕ್ಷಾತ್ಪರಮೆಯೆ! ಎಲೈ ನಿರ್ದೋಷಮೂರ್ತಿಯೇ! ನನ್ನಿಂದ ಸಮರ್ಪಿಸಲ್ಪಡುವ ಈ ಅರ್ಘ್ಯವನ್ನು ನೀನು ನಿನ್ನ ಕಮ್ಮಂದಿರೊಡನೆ ಸ್ವೀಕರಿಸು' ಎಂಬ ಅರ್ಥವುಳ್ಳ ಮಂತ್ರವನ್ನು ಹೇಳಿ ಅರ್ಘ್ಯವನ್ನು ಸಮರ್ಪಿಸಬೇಕು ॥೪೭—೪೯॥

ಈರೀತಿಯಾಗಿ, ಶ್ರೀರಾಮನವಮಿ ದಿವಸ, ಯಥಾವಿಧಿಯಾಗಿ ಪೂಜೆಯನ್ನು ಮಾಡಿ, ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ತನ್ನ ಶಕ್ತಿಯಿದ್ದಷ್ಟು ದಕ್ಷಿಣೆಯನ್ನು ಕೊಟ್ಟು, ಅನಂತರ ತಾನು ಪಾರಣೆಮಾಡಬೇಕು ॥೫೦॥

ನೂರು ಚಾಂದ್ರಾಯಣ ವ್ರತವನ್ನೂ ನೂರು ತಪ್ತಕೃಚ್ಛ್ರವ್ರತವನ್ನೂ ಮಾಡಿದರೆ ಯಾವ ಫಲವುಂಟಾಗುವುದೋ, ಶ್ರೀರಾಮನವಮಿಯಲ್ಲಿ ವ್ರತಮಾಡುವುದರಿಂದ ಅಂತಹ ಫಲವನ್ನು ಅವಿಲಂಬವಾಗಿ ಹೊಂದುವರು ॥೫೧॥

ಈರೀತಿಯಾದ ಶ್ರೀರಾಮನವಮೀವ್ರತವನ್ನು ಒಂದುಸಲ ಮಾಡಿದರೂ ಕೂಡ, ಪುರುಷನು ಶ್ರೀರಾಮನ ಅನುಗ್ರಹಕ್ಕೆ ಪಾತ್ರನಾಗಿ, ಶ್ರೀರಾಮನಲ್ಲಿ ಐಕ್ಯಹೊಂದುವನು ॥೫೨॥

ಈರೀತಿಯಾಗಿ, ಪರಮೇಶ್ವರನು ಪಾರ್ವತೀದೇವಿಗೆ ಶ್ರೀರಾಮನವಮೀವ್ರತವಿಧಿಯನ್ನು ಹೇಳಿ, ಮತ್ತೆ ಪಾಪನಿವಾರಕವಾದ ಶ್ರೀರಾಮಚಂದ್ರನ ಕಥೆಯನ್ನು ಮುಂದಕ್ಕೆ ಹೇಳಲುಪಕ್ರಮಿಸಿದನು ॥೫೩॥

ಇದು ಬಾಲಕಾಂಡದಲ್ಲಿ ಶ್ರೀರಾಮನವಮೀಕಥಾಪ್ರಶಂಸೆಯೆಂಬ
ಹದಿನೈದನೆಯ ಸರ್ಗವು.


ಅಥ ಶ್ರೀ ಬಾಲಕಾಂಡೇ ಷೋಡಶಃ ಸರ್ಗಃ.



ಶ್ರೀ ಮಹಾದೇವ ಉವಾಚ.

ಶೃಣು ದೇವಿ ತತೋ ರಾಮಲಕ್ಷ್ಮಣಾದ್ಯಾಮಹೌಜಸಃ ।
ತಾತಂ ತೇ ರಮಯಾಮಾಸುಃ ಚೇಷ್ಟಿತೈರ್ಮಧುಭಾಷಿತೈಃ ॥೧॥
ಸ್ಮಿತವಕ್ತ್ರಾಲ್ಪದಶನಂ ಇನ್ದ್ರನೀಲಮಣಿಪ್ರಭಮ್ ।
ಆಜ್ಞಾಪೋ ರಿಙ್ಖಮಾಣಂ ತಂ ಅರ್ಭಕಾನನುಯಾಮಿನಮ್ ॥೨॥
ಶಿಞ್ಜಾನಮಣಿಮಞ್ಜೀರದಿವ್ಯಭೂಷಣರಞ್ಜಿತಮ್ ।
ದೃಷ್ಟ್ವಾ ದಶರಥೋ ರಾಜಾ ಕೌಸಲ್ಯಾ ಮುಮುದೇ ತದಾ ॥೩॥
ಭೋಕ್ಷ್ಯಮಾಣೋ ದಶರಥೋ ರಾಮಮೇಹೀತಿ ಚಾಸಕೃತ್ ।
ಆಹ್ವಯತ್ಯತಿಹಾರ್ದೇನ ಪ್ರೇಮ್ಣಾ ವಾಚಾತಿಲೀಲಯಾ ॥೪॥
ಆನಯೇತಿ ಚ ಕೌಸಲ್ಯಾಂ ಅಹ ಸಾ ಸಸ್ಮಿತಾ ಸುತಮ್ ।
ಯಾಚತ್ಯೇನಂ ನ ಶಕ್ನೋತಿ ಸ್ವಪ್ಸ್ಯಂ ಯೋಗಿಮನೋತಿಗಮ್ ॥೫॥

ಬಾಲಕಾಂಡದಲ್ಲಿ ಹದಿನಾರನೆಯ ಸರ್ಗವು.



ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ದೇವಿ! ಕೇಳುವಳಾಗು:—ಬಳಿಕ, ಮಹಾತೇಜಸ್ವಿಗಳಾದ ರಾಮ ಲಕ್ಷ್ಮಣ ಭರತ ಶತ್ರುಘ್ನರು, ತಮ್ಮ ಬಾಲಲೀಲೆಗಳಿಂದಲೂ ಮೃದುಮಧುರವಾದ ಮಾತುಗಳಿಂದಲೂ ತಂದೆಗೆ ವಿಶೇಷವಾಗಿ ಆನಂದಪಡಿಸುತಿದ್ದರು ॥೧॥

ಆಗ ಶ್ರೀರಾಮನು, ಅಕಾರಣವಾಗಿ ಮಂದಹಾಸಮಾಡುತ, ತನ್ನ ಬಾಯೊಳಗಿರುವ ಸಣ್ಣಸಣ್ಣ ಹಲ್ಲುಗಳನ್ನು ಹೊರಕ್ಕೆ ತೋರಿಸುತಿದ್ದನು; ಇಂದ್ರನೀಲಮಣಿಯಂತೆ ಅವನ ಶರೀರಕಾಂತಿಯು ಬೆಳಗುತಿದ್ದಿತು; ಮನೆಯು ಅಂಗಳದೊಳಗೆ, ಇತರರಾದ ಬಾಲಕರ ಬೆನ್ನಟ್ಟಿಕೊಂಡು ಓಡಾಡುತಿದ್ದನು; ಆಗ, ಇವನಿಗೆ ಕಟ್ಟಿದ್ದ ರತ್ನಮಯವಾದ ಕಾಲುಸರವೂ, ಇತರವಾದ ಆಭರಣಗಳೂ ಧ್ವನಿಗೈಯುತಿದ್ದುವು ಇಂಕಹ ಶ್ರೀರಾಮನನ್ನು ನೋಡುತ, ದಶರಥಮಹಾರಾಜನೂ ಕೌಸಲ್ಯಾದೇವಿಯೂ ಆನಂದಪಡುತಿದ್ದರು ॥೨—೪॥

ಒಂದು ಸಮಯದಲ್ಲಿ, ದಶರಥನು ಊಟಕ್ಕೆ ಕುಳಿತುಕೊಂಡು, ತನ್ನ ಮುದ್ದುಮಗನಿಗೆ ಸ್ವಲ್ಪ ಊಟಮಾಡಿಸೋಣವೆಂದು ಆಸೆಪಟ್ಟು, ಅತಿಪ್ರೀತಿಯಿಂದ, ರಾಮನನ್ನು 'ಇಲ್ಲಿ ಬಾ' ಎಂದು ಅತಿ ಮೃದುವಾಗಿ ಅನೇಕವೇಳೆ ಕರೆಯುತಿದ್ದನು. ಅವನು ಓರಿರಲಾಗಿ, ಅವನನ್ನು ಕರೆದುಕೊಂಡುಬರುವಂತೆ ಕೌಸಲ್ಯೆಗೆ ಹೇಳುತಿದ್ದನು. ಆಗ ಅವಳು ಮುಗುಳುನಗೆಯೊಡನೆ ಅಮಗುವನ್ನು ಎಷ್ಟು ಪ್ರಾರ್ಥಿಸಿದರೂ, ಅದು ಹತ್ತಿರಕ್ಕೆ ಒರುತಿರಲಿಲ್ಲ. ಇವಳು ಅದನ್ನು

ಪ್ರಹಸ್ಯ ಸ್ವಯಮಾಗತ್ಯ ಕರ್ದಮಾಜ್ಜಿತಪಾಣಿನಾ ।
ಕಿಂಚಿದ್ಗಲ್ಲಹೀತ್ವಾ ಕಬಳಂ ಪ್ಲವನರೇವ ಪಲಾಯತೇ ॥೬॥
ಇತ್ಯಾದಿ ಬಾಲಲೀಲಾಭಿಃ ಜಗದಾನಂದಕಾರಕಃ ।
ಮಾಪೂಬಾಲನಪುಭೂರ್ತ್ವಾ ರಮಯಾಮಾಸ ದಮ್ಪತೀ ॥೭॥
ಅಥ ಕಾಲೇನ ತೌ ಸರ್ವೌ ಕೌಮಾರಂ ಪ್ರತಿಪೇದಿರೇ ।
ಉಪನೀತಾವಸಿಷ್ಠೇನ ಸರ್ವವಿದ್ಯಾವಿಶಾರದಾಃ ॥೮॥
ಅಧೀತವೇದಾಸ್ತೌ ಸರ್ವೌ ಸರ್ವಶಾಸ್ತ್ರಾರ್ಥವೇದಿನಃ ।
ಗಜಾಶ್ವಾರೋಹನಿಪುಣಾಃ ಧನುರ್ವೇದೇ ಚ ಪಣ್ಡಿತಾಃ ॥೯॥
ತೇ ತಥಾ ಜ್ಞಾನಸಮ್ಪನ್ನಾಃ ಸರ್ವೈಃ ಸಮುದಿತಾಗುಣೈಃ ।
ಹ್ರೀಮನ್ತಃ ಕೀರ್ತಿಮನ್ತಶ್ಚ ಸರ್ವಜ್ಞಾ ದೀರ್ಘದರ್ಶಿನಃ ॥೧೦॥
ಯುಗ್ಮಂ ಬಭೂವತುಸ್ತತ್ರ ಸುಸ್ನಿಗ್ಧೌ ರಾಮಲಕ್ಷ್ಮಣೌ ।
ತಥಾ ಭರತಶತ್ರುಘ್ನೌ ಸುಸ್ನೇಹಾದ್ಯುಗ್ಮಮಾಯತುಃ ॥೧೧॥
ತದಾತದಾ ವನಂ ಗತ್ವಾ ಹತ್ವಾ ದುಷ್ಟಮೃಗಾನ್ ಬಹೂನ್ ।
ಅಹಂಪೂರ್ವಮಹಂಪೂರ್ವಂ ಇತಿ ಪಿತ್ರೋ ನ್ಯವೇದಯನ್ ॥೧೨॥

ಪಿಡಿಯುವುದಕ್ಕೆಂದು ಓಡಿಹೋದರೆ, ಅದೂ ಓಡಿಹೋಗುವುದು ಯೋಗಿಗಳ ಮನಸ್ಸನ್ನೆಲ್ಲ ಅತಿಕ್ರಮಿಸಿಹೋಗಿರುವ ಆ ಮಗುವನ್ನು ಹಿಡಿಯಲು, ಈ ಕೌಸಲ್ಯೆಗೆ ಶಕ್ತಿ ಸಾಲದಾಗುತಿದ್ದಿತು. ಆಮೇಲೆ ಇವಳು ಶಾಂತಳಾಗಿ ಸುಮ್ಮನಾಗಿಬಿಟ್ಟಬಳಿಕ, ಆ ಮಗುವು ನಗುತ ತಾನಾಗಿ ಓಡಿಬಂದು, ಕೆಸರುಬೊಳಿದಿರುವ ಕೈಯಲ್ಲಿ ಬಂದುಹಿಡಿಯನ್ನುವನ್ನು ತಬ್ಬಿನೆ ಹಿಡಿದುಕೊಂಡು ಮತ್ತೆ ಓಡಿಹೋಗುತಿದ್ದಿತು ॥೪-೬॥

ಇದು ಮೊದಲಾದ ಬಾಲಲೀಲೆಗಳಿಂದ, ಜಗತ್ತಿಗೆಲ್ಲ ಆನಂದಪ್ರದನಾದ ಶ್ರೀಹರಿಯು, ಬಾಲಕವೇಷಧಾರಿಯಾಗಿ, ಆ ದಂಪತಿಗಳಿಗೆ ಅತಿಯಾಗಿ ಆನಂದವುಂಟುಮಾಡುತಿದ್ದನು ॥೭॥

ಒಳಿಕ ಕೆಲವುಕಾಲ ಕಳೆಯಲಾಗಿ, ಅವರೆಲ್ಲರೂ ಬಾಲ್ಯವನ್ನು ಅತಿಕ್ರಮಿಸಿ ಕೌಮಾರವಯಸ್ಸನ್ನು ಹೊಂದಿದರು. ಆನಂತರ, ವಸಿಷ್ಠಮಹರ್ಷಿಯಿಂದ ಉಪನಯನ ಮಾಡಿಸಲ್ಪಟ್ಟವರಾಗಿ, ಸಕಲವಿದ್ಯೆಗಳಲ್ಲಿಯೂ ಪಂಡಿತರಾದರು ॥೮॥

ಆ ನಾಲ್ಕುಜನ ಬಾಲಕರೂ, ಸಕಲ ವೇದಗಳನ್ನೂ ಕಲಿತವರಾಗಿ, ಸಕಲ ಶಾಸ್ತ್ರಾರ್ಥಗಳನ್ನೂ ತಿಳಿದುಕೊಂಡು, ಆನೆ ಕುದುರೆಗಳ ಯಾನ(ಸವಾರಿ)ದಲ್ಲಿಯೂ ನಿಪುಣರಾಗಿ, ಧನುರ್ವೇದದಲ್ಲಿಯೂ ಪಂಡಿತರಾದರು ॥೯॥

ಹಾಗೆ ವಿದ್ಯಾಸಂಪನ್ನರಾದ ಅವರುಗಳು, ಸಕಲ ಸದ್ಗುಣಭರಿತರಾಗಿ, ಮರ್ಯಾದಾಸಂಪನ್ನರಾಗಿ, ಯಶೋಯುಕ್ತರಾಗಿ, ಸಕಲವಿಷಯಗಳನ್ನೂ ತಿಳಿದವರಾಗಿ, ದೂರಾಲೋಚನೆಯುಳ್ಳವರಾಗಿ ವಿರಾಜಿಸುತಿದ್ದರು ॥೧೦॥

ಆ ನಾಲ್ಕುಮಂದಿಗಳಲ್ಲಿ, ರಾಮ ಲಕ್ಷ್ಮಣರಿಬ್ಬರೂ ಮಹಾಸ್ನೇಹದಿಂದ ಜತೆಯಾಗಿರುತಿದ್ದರು; ಹಾಗೆಯೇ ಭರತಶತ್ರುಘ್ನರಿಬ್ಬರೂ ಅತಿಸ್ನೇಹದಿಂದ ಜತೆಯಾಗಿದ್ದರು ॥೧೧॥

ಆ ಕುಮಾರರುಗಳು, ಆಗಾಗ ಕಾಡಿಗೆ ಹೋಗಿ, ಅಲ್ಲಿ ಅನೇಕವಾದ ದುಷ್ಟಮೃಗಗಳನ್ನು ಕೊಂದು ತಾನು ಮುಂದೆ ತಾನು ಮುಂದೆಂದು—ತಂದೆಗೆ ವಿಜ್ಞಾಪಿಸುತಿದ್ದರು ॥೧೨॥

ಏವಂ ಸ ಪೌರಕಾರ್ಯಾಣಿ ರಾಘವೋ ಗುರುಚೋದಿತಃ ।
ತಾನಿ ಸರ್ವಾಣಿ ನಿಯತಃ ಕೃತ್ವಾ ಪಿತ್ರೇ ನ್ಯವೇದಯತ್ ॥೧೩॥

ಏವಂಸರಾಮೋ ಮನುಜಾವತಾರೋ ಮನುಷ್ಯಲೋಕಾನನುಸೃತ್ಯಸರ್ವಂ ।
ಚಕ್ರೇಽವಿಕಾರಿಃ ಪರಿಣಾಮಹೀನೋ ವಿಚಾರ್ಯಮಾಣೋಸಕರೋತಿಕಿಂಚಿತ್ ॥೧೪

ಅಥ ರಾಜಾ ದಶರಥಃ ತೇಷಾಂ ದಾರಕ್ರಿಯಾಂ ಪ್ರತಿ ।
ಚಿನ್ತಯಾಮಾಸ ಧರ್ಮಾತ್ಮಾ ಸೋಪಾಧ್ಯಾಯಃ ಸಬಾನ್ಧವಃ ॥೧೫॥

ಪತಸ್ಮಿನ್ನನ್ತರೇ ದೇವಿ ಕೌಶಿಕೋ ಲೋಕವಿಶ್ರುತಃ ।
ಸಿದ್ಧಾಶ್ರಮೇ ಶುಭೇ ಯಜ್ಞಂ ಆರೇಭೇ ಜಾಹ್ನವೀತಟೇ ॥೧೬॥

ವರ್ತಮಾನಸ್ಯ ಯಜ್ಞಸ್ಯ ವಿಘ್ನಂ ಚಕ್ರತುರುದ್ಧತೌ ।
ಮಾರೀಚಶ್ಚ ಸುಬಾಹುಶ್ಚ ರಾವಣಸ್ಯ ಭಟಾವುಭೌ ॥೧೭॥

ಕೌಶಿಕಶ್ಚಿನ್ತಯಿತ್ವಾಥ ರಘುವಂಶೋದ್ಭವಂ ಹರಿಮ್ ।
ಆನೇತುಮೈಚ್ಛದ್ಧರ್ಮಾತ್ಮಾ ಲೋಕಾನಾಂ ಹಿತಕಾಮ್ಯಯಾ ॥೧೮॥

ಹೀಗೆಯೇ, ಆ ರಾಮನು, ಗುರುಗಳಿಂದ ಅಪ್ಪಣೆಪಡೆದವನಾಗಿ, ಒಹು ನಿಯಮದಿಂದ ರಾಜ್ಯದ ಆಡಳಿತಗಳನ್ನೂ ನಡೆಯಿಸಿ, ತಾನು ನಡೆಯಿಸಿದ ಕಾರ್ಯಭಾರಗಳನ್ನೆಲ್ಲ ತಂದೆಗೆ ಅರಿಕೆ ಮಾಡುತಿದ್ದನು ॥೧೩॥

ಈರೀತಿಯಾಗಿ ಆ ರಾಮನು ಮನುಷ್ಯಾವತಾರಪಡೆದಿರುವನಾದಕಾರಣ, ಮನುಷ್ಯಲೋಕ ಮಾರ್ಗವನ್ನನುಸರಿಸಿ ಸಕಲವನ್ನೂ ಮಾಡುತಿದ್ದನು. ತತ್ವವನ್ನು ವಿಚಾರಮಾಡಿ ನೋಡಿದರೋ, ಯಾವ ವಿಕಾರವೂ ಇಲ್ಲದೆ—ಪರಿಣಾಮವಿಹೀನನಾಗಿರುವ ಇವನು ಯಾವುದೊಂದು ಕೆಲಸವನ್ನೂ ಮಾಡತಕ್ಕವನೇ ಅಲ್ಲ ॥೧೪॥

ಒಳಿಕ, ಧರ್ಮಾತ್ಮನಾದ ಆ ದಶರಥರಾಜನು, ಆ ಕುಮಾರರಿಗೆ ವಿವಾಹಮಾಡುವ ವಿಷಯವನ್ನು ಕುರಿತು, ತನ್ನ ಗುರುವಾದ ವಸಿಷ್ಠರೊಡನೆಯೂ ಬಂಧುಗಳೊಡನೆಯೂ ಯೋಚಿಸುತಿದ್ದನು ॥೧೫॥

ಎಲೌ ವಾರ್ವತಿ! ಹೀಗಿರುವಷ್ಟರಲ್ಲಿಯೇ, ಲೋಕಪ್ರಸಿದ್ಧನಾದ ವಿಶ್ವಾಮಿತ್ರಮಹರ್ಷಿಯು, ಗಂಗಾನದಿಯ ತೀರದಲ್ಲಿ, ದಿವ್ಯವಾದ ತನ್ನ ಸಿದ್ಧಾಶ್ರಮದೊಳಗೆ ಒಂದು ಯಜ್ಞವನ್ನು ಮಾಡಬೇಕೆಂದುಪಕ್ರಮಿಸಿದನು ॥೧೬॥

ಹೀಗೆ ಆ ಯಜ್ಞವನ್ನು ಮಾಡುತಿರುವಾಗ, ಮಹಾಗರ್ವಿತರಾದ ಮಾರೀಚಸುಬಾಹುಗಳೆಂಬ ರಾವಣಭಟರಿಬ್ಬರು, ಆ ಯಜ್ಞಕ್ಕೆ ವಿಘ್ನವನ್ನು ಮಾಡಿದರು ॥೧೭॥

ಅನಂತರ, ಮಹಾಧರ್ಮಾತ್ಮನಾದ ವಿಶ್ವಾಮಿತ್ರಮುನಿಯು, ರಘುವಂಶದಲ್ಲಿ ಶ್ರೀಹರಿಯು ಅವತರಿಸಿರುವುದನ್ನು ಯೋಚಿಸಿ, ಲೋಕಕ್ಕೆಲ್ಲ ಹಿತವಾಗಬೇಕೆಂಬ ಇಚ್ಛೆಯಿಂದ, ಆ ರಾಮನನ್ನು ತನ್ನ ಆಶ್ರಮಕ್ಕೆ ಕರೆದುತರಬೇಕೆಂದು ಯೋಚಿಸಿದನು ॥೧೮॥

ಅಥಾಗಚ್ಛದಯೋಧ್ಯಾಂ ಸಃ ವಿಶ್ವಾಮಿತ್ರೋ ಮಹಾಮುನಿಃ ।
ಪ್ರತ್ಯುದ್ಯಯೌ ದಶರಥೋ ಬ್ರಹ್ಮಾಣಮಿವ ವಾಸವಃ ॥೧೯॥
ಸ ದೃಷ್ಟ್ವಾ ಜ್ವಲಿತಂ ದೀಪ್ತ್ಯಾ ತಾಪಸಂ ಸಂಶಿತವ್ರತಮ್ ।
ಪ್ರಹೃಷ್ಟವದನೋ ರಾಜಾ ತತೋಽರ್ಘ್ಯಮುಪಹಾರಯತ್ ॥೨೦॥
ಸ ರಾಜ್ಞಃ ಪ್ರತಿಗೃಹ್ಯಾರ್ಘ್ಯಂ ಶಾಸ್ತ್ರದೃಷ್ಟೇನ ಕರ್ಮಣಾ ।
ಕುಶಲಂ ಚಾವ್ಯಯಂ ಚೈವ ಪರ್ಯಪೃಚ್ಛನ್ನರಾಧಿಪಮ್ ॥೨೧॥
ವಸಿಷ್ಠಂ ಚ ಸಮಾಗಮ್ಯ ಕುಶಲಂ ಮುನಿಪುಙ್ಗವಃ ।
ಋಷಿಂಶ್ಚಾನ್ಯಾನ್ಯಥಾನ್ಯಾಯ್ಯಂ ಮಹಾಭಾಗಾನುವಾಚ ಹ ॥೨೨॥
ತೇ ಸರ್ವೇ ಹೃಷ್ಟಮನಸಃ ತಸ್ಯ ರಾಜ್ಞೋ ನಿವೇಶನಮ್ ।
ವಿವಿಶುಃ ಪೂಜಿತಾಸ್ತತ್ರ ನಿಷೇದುಶ್ಚ ಯಥಾರ್ಹತಃ ॥೨೩॥
ತತೋಽಬ್ರವೀನ್ಮಹಾತೇಜಾಃ ವಿಶ್ವಾಮಿತ್ರಂ ಮಹಾಮುನಿಮ್ ।
ಕಂ ಚ ತೇ ಪರಮಂ ಕಾಮಂ ಕರೋಮಿ ಕಿಮು ಹರ್ಷಿತಃ ॥೨೪॥

ಹೀಗೆ ಯೋಚಿಸಿಕೊಂಡು, ಆ ವಿಶ್ವಾಮಿತ್ರಮಹಾಮುನಿಯು, ಅಯೋಧ್ಯಾಪಟ್ಟಣಕ್ಕೆ ಬಂದನು. ಈ ಮುನಿಯು ಬಂದುದನ್ನು ತಿಳಿದು, ಇಂದ್ರನು ಬ್ರಹ್ಮನನ್ನೆದುರುಗೊಳ್ಳುವಂತೆ, ದಶರಥನು ಅವನನ್ನು ಎದುರುಗೊಂಡನು ॥೧೯॥

ಅನಂತರ, ಮಹಾನಿಯಮಶೀಲನಾಗಿ ತೇಜೋಮಯನಾಗಿರುವ ಆ ತಾಪಸನನ್ನು ನೋಡಿ, ಹರ್ಷಯುಕ್ತನಾದ ದಶರಥನು, ಅವನಿಗೆ ಅರ್ಘ್ಯಾದಿಸತ್ಕಾರಗಳನ್ನು ಮಾಡಿಸಿದನು ॥೨೦॥

ಆ ವಿಶ್ವಾಮಿತ್ರನು, ದಶರಥನ ದೆಸೆಯಿಂದ ಯಥಾಶಾಸ್ತ್ರವಾದ ಸತ್ಕಾರವನ್ನು ಹೊಂದಿದವನಾಗಿ, ಆ ದೊರೆಯನ್ನು ಕುರಿತು, ಸಕಲ ವಿಷಯದಲ್ಲಿಯೂ ಯೋಗಕ್ಷೇಮಪ್ರಶ್ನೆ ಮಾಡಿದನು ॥೨೧॥

ಅನಂತರ, ಆ ಮಹರ್ಷಿಯು, ವಸಿಷ್ಠರೊಡನೆಯೂ ಪೂಜ್ಯರಾದ ಇತರ ಮಹರ್ಷಿಗಳೊಡನೆಯೂ ಯಥಾಯೋಗ್ಯವಾಗಿ ಅವರುಗಳನ್ನೆಲ್ಲ ಕುಶಲಪ್ರಶ್ನೆ ಮಾಡಿದನು ॥೨೨॥

ಅವರೆಲ್ಲರೂ ಸಂತೋಷಯುಕ್ತರಾಗಿ ಜತೆಯಲ್ಲಿ ದೊರೆಯ ಮನೆಯನ್ನು ಪ್ರವೇಶಿಸಿದರು; ಅಲ್ಲಿ ಯಥಾಯೋಗ್ಯವಾಗಿ ಮರ್ಯಾದೆಯನ್ನು ಪಡೆದು, ತಮತಮಗುಚಿತವಾದ ಆಸನಗಳಲ್ಲಿ ಕುಳಿತುಕೊಂಡರು ॥ ೨೩ ॥

ಬಳಿಕ, ಮಹಾತೇಜಸ್ವಿಯಾದ ದಶರಥನು, ಮಹಾಮುನಿಯಾದ ವಿಶ್ವಾಮಿತ್ರನನ್ನು ಕುರಿತು ಹೀಗೆ ಹೇಳಿದನು:—ಎಲ್ಲೆ ಮಹರ್ಷಿವರ್ಯರೆ! ತಮ್ಮ ಆಗಮನದಿಂದ ಕೇವಲ ಹರ್ಷಯುಕ್ತನಾಗಿರುವ ನಾನು, ತಮಗೆ ಅತ್ಯಂತ ಪ್ರಿಯವಾಗಿರುವ ಯಾವ ಕೆಲಸವನ್ನು ಯಾವ ರೀತಿಯಾಗಿ ಮಾಡಿಕೊಡಲಿ? ॥ ೨೪ ॥

ಪ್ರಪಂಚದಲ್ಲಿ, ಯಾವಕಡೆ ಸತ್ಪಾತ್ರವು ದೊರೆಯುವುದೋ, ಅದೇ ಪುಣ್ಯತಮವಾದ ದೇಶವು. ಪುಣ್ಯದೇಶ ಪುಣ್ಯಕಾಲಗಳಿಗಿಂತ ಸತ್ಪಾತ್ರವೇ ಪ್ರಪಂಚದಲ್ಲಿ ಪ್ರಶಸ್ತವಾದುದು ॥

ಯಾವಾಗ ಸತ್ಪಾತ್ರವು ಲಬ್ಧವಾಗುವುದೋ, ಆಗಲೇ ದೇಶವೂ ಕಾಲವೂ ಪುಣ್ಯತಮವೆನ್ನಿಸಿಕೊಳ್ಳುವುವು. ದೇಶಕಾಲಗಳೆರಡೂ ಉತ್ತಮವಾಗಿದ್ದರೂ, ಸತ್ಪಾತ್ರವು ದೊರೆಯದಿದ್ದ ಪಕ್ಷದಲ್ಲಿ, ಆಗ ಅವೆರಡೂ ವ್ಯರ್ಥವೇ ಅಲ್ಲವೆ! ॥೨೬॥

ಸತ್ಪಾತ್ರದಲ್ಲಿ ದೃಢಚಿತ್ತನಾಗಿ ನಿರ್ವ್ಯಾಜವಾಗಿ ದಾನಮಾಡುವ ಪುರುಷನು, ಅಯಾಸವಿಲ್ಲದೆಯೇ ಸಮಸ್ತ ಸಂಪತ್ತುಗಳನ್ನೂ ಹೊಂದುವನು ॥೨೭॥

ಸ್ವಾಮಿ! ಪ್ರಪಂಚದಲ್ಲಿ, ಪುರುಷನು ಎಷ್ಟುಮಟ್ಟಿಗೆ ದಾನವನ್ನು ಮಾಡುವನೋ, ಅಷ್ಟುಮಟ್ಟಿಗೇ ಅವನು ಅನುಭವಿಸುವನು; ಎಷ್ಟು ಕರ್ಮವನ್ನು ಮಾಡುವನೋ, ಅಷ್ಟೇ ಫಲ ಸಿಕ್ಕುವುದಲ್ಲವೆ! ಅದುಕಾರಣ, ಎಷ್ಟುಮಟ್ಟಿಗೆ ದಾನಮಾಡುವನೋ, ಅಷ್ಟುಮಟ್ಟಿಗೇ ಲಾಭವಾಗುವುದು; ಲಾಭವೆಷ್ಟಾಗುವುದೋ, ಅಷ್ಟೇ ಸೌಖ್ಯವು ॥೨೮॥

ಹೀಗಿರುವುದರಿಂದ, ಪುರುಷನು, ಸತ್ಪಾತ್ರವೊದಗಿದೊಡನೆಯೇ ದಾನಮಾಡಬೇಕು. ಎಲೈ ಬ್ರಾಹ್ಮಣೋತ್ತಮರೆ! ತಾವು ಈಗ ನನಗೆ ಸತ್ಪಾತ್ರರಾಗಿ ದಯೆಮಾಡಿಸಿರುವಿರಿ. ಎಲೈ ಧರ್ಮಾತ್ಮರೆ! ನನ್ನ ಜನ್ಮಾಂತರ ಸುಕೃತವಿಶೇಷದಿಂದ ತಾವು ಇಲ್ಲಿಗೆ ದಯೆಮಾಡಿಸಿರುವಿರಿ. ಎಲೆ ಮಹಾಮುನಿಯೇ! ತಮ್ಮ ಸಂದರ್ಶನದಿಂದ ನಾನು ಈಗ ದಿವ್ಯಕ್ಷೇತ್ರವನ್ನು ಹೊಂದಿದವನಂತಾದೆನು. ತಮ್ಮ ಪಾದಧೂಳಿಯಿಂದ ನನ್ನ ಮನೆಯು ದಿವ್ಯಕ್ಷೇತ್ರವಾಗಿ ಪರಿಣಮಿಸಿತು ॥೨೯॥

ತಾವು ಉದ್ದೇಶಿಸಿಕೊಂಡು ದಯೆಮಾಡಿಸಿರುವ ಕಾರ್ಯವು ಎಷ್ಟು ದೊಡ್ಡದಾಗಿದ್ದರೂ, ತಾವು ಆ ವಿಷಯದಲ್ಲಿ ಆಲೋಚಿಸಕೂಡದು. ಅದೆಷ್ಟು ದೊಡ್ಡಕೆಲಸವಾಗಿದ್ದರೂ, ನಾನು ಅದನ್ನು ಸಂಪೂರ್ಣವಾಗಿ ಮಾಡಿಕೊಡುವೆನು. ತಾವು ನನಗೆ ಪರದೈವವೆಂದು ಭಾವಿಸಿರುವೆನು.- ಎಂದು, ದಶರಥನು ವಿಶ್ವಾಮಿತ್ರಮುನಿಯನ್ನು ಕುರಿತು ವ್ಯಾಹರಿಸಿದನು ॥೩೦॥

ಇತಿ ಹೃದಯಸುಖಂ ನಿಶಮ್ಯ ವಾಕ್ಯಂ
ಶ್ರುತಿಸುಖಮಾತ್ಮವತಾ ವಿನೀತಮುಕ್ತಮ್ ।
ಪ್ರಥಿತಗುಣಯಶಾಗುಣೈರ್ವಿಶಿಷ್ಟಃ
ಪರಮಋಷಿಃ ಪರಮಂ ಜಗಾಮ ಹರ್ಷಮ್ ॥೩೧॥

ಇತಿ ಶ್ರೀಬಾಲಕಾಣ್ಡೇ ವಿಶ್ವಾಮಿತ್ರಸಮಾಗಮವರ್ಣನಂ
ನಾಮ ಷೋಡಶಃ ಸರ್ಗಃ.



ಎಲೌ! ವಾರ್ಷ್ಣೇಯ! ಹೀಗೆ ಆತ್ಮವಂತನಾದ ದಶರಥನು ವಿನಯಪೂರ್ವಕವಾಗಿ—ಕೇಳುವುದಕ್ಕೆ ಇಂಪಾಗಿ—ಮನೋಹರವಾಗಿ ಹೇಳಿದ ಮಾತನ್ನು ಕೇಳಿ, ಮಹಾ ಗುಣಶಾಲಿಯೆಂದು ಪ್ರಪಂಚದಲ್ಲಿ ಕೀರ್ತಿಪಡೆದವನಾಗಿಯೂ ಸ್ವಭಾವತಃ ಸದ್ಗುಣಭರಿತನಾಗಿಯೂ ಇರುವ ವಿಶ್ವಾಮಿತ್ರಮುನಿಯು, ಅತ್ಯಂತವಾಗಿ ಹರ್ಷವನ್ನು ಪಡೆದನು ॥೩೧॥

ಇದು ಬಾಲಕಾಂಡದಲ್ಲಿ ವಿಶ್ವಾಮಿತ್ರಸಮಾಗಮವರ್ಣನವೆಂಬ
ಹದಿನಾರನೆಯ ಸರ್ಗವು.



ಅಥ ಶ್ರೀ ಬಾಲಕಾಂಡೇ ಸಪ್ತದಶಃ ಸರ್ಗಃ.

ಶ್ರೀ ಶಿವಉವಾಚ.

ತಚ್ಛ್ರುತ್ವಾ ರಾಜಸಿಂಹಸ್ಯ ವಾಕ್ಯಮದ್ಭುತವಿಸ್ತರಮ್ ।
ಹೃಷ್ಟರೋಮಾ ಮಹಾತೇಜಾಃ ವಿಶ್ವಾಮಿತ್ರೋಽಭ್ಯಭಾಷತ ॥೧॥
ಅಹಂ ನಿಯಮಮಾತಿಷ್ಠೇ ಸಿದ್ಧ್ಯರ್ಥಂ ಪುರುಷರ್ಷಭ ।
ತಸ್ಯ ವಿಘ್ನಕರೌ ದ್ವೌ ತು ರಾಕ್ಷಸೌ ಕಾಮರೂಪಿಣೌ ॥೨॥
ತದರ್ಥಂ ರಾಜಶಾರ್ದೂಲ ರಾಮಂ ಸತ್ಯಪರಾಕ್ರಮಮ್ ।
ಕಾಕಪಕ್ಷಧರಂ ಶೂರಂ ಜ್ಯೇಷ್ಠಂ ಮೇ ದಾತುಮರ್ಹಸಿ ॥೩॥
ಶಕ್ತೋ ಹ್ಯಯಂ ಮಯಾ ಗುಪ್ತೋ ದಿವ್ಯೇನ ಸ್ವೇನ ತೇಜಸಾ ।
ರಾಕ್ಷಸಾ ಯೇ ವಿಕರ್ತಾರಃ ತೇಷಾಮಪಿ ವಿನಾಶನೇ ॥೪॥
ನ ಚ ತೌ ರಾಮಮಾಸಾದ್ಯ ಶಕ್ತೌ ಸ್ಥಾತುಂ ಕಥಞ್ಚನ ।
ನ ಚ ತೌ ರಾಘವಾದನ್ಯೋ ಹನ್ತುಮುತ್ಸಹತೇ ಪುಮಾನ್ ॥೫॥

ಬಾಲಕಾಂಡದಲ್ಲಿ ಹದಿನೇಳನೆಯ ಸರ್ಗವು.

ಪುನಃ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ! ಪಾರ್ವತಿ! ಈರೀತಿಯಾಗಿ ರಾಜಶ್ರೇಷ್ಠನಾದ ದಶರಥನು ಹೇಳಿದ ಆತ್ಯಾಶ್ಚರ್ಯವಾದ ಮಾತನ್ನು ಕೇಳಿ, ಮಹಾತೇಜಸ್ವಿಯಾದ ವಿಶ್ವಾಮಿತ್ರಮುನಿಯು, ರೋಮಾಂಚಯುಕ್ತನಾಗಿ, ದಶರಥನಿಗೀರೀತಿಯಾಗಿ ಹೇಳಿದನು ॥೧॥

ಎಲೈ ಪುರುಷಶ್ರೇಷ್ಠನಾದ ದಶರಥನೆ! ನಾನು ಒಂದು ಯಜ್ಞಕ್ಕಾಗಿ ನಿಯಮವನ್ನು ಅವಲಂಬಿಸಬೇಕಾಗಿರುವುದು. ಆದರೆ, ಕಾಮರೂಪಿಗಳಾದ ಇಬ್ಬರು ರಾಕ್ಷಸರು ಅದಕ್ಕೆ ವಿಘ್ನಕಾರಿಗಳಾಗಿರುವರು ॥೨॥

ಎಲೈ ರಾಜಶ್ರೇಷ್ಠನೆ! ಅವರನ್ನು ನಿಗ್ರಹಿಸುವುದಕ್ಕೋಸ್ಕರ, ನಿಶ್ಚಿತಪರಾಕ್ರಮನಾಗಿ ಕಾಕಪಕ್ಷ (ಜುಲುಪಿ) ಧರನಾಗಿ ಮಹಾಶೂರನಾಗಿರುವ ನಿನ್ನ ಜ್ಯೇಷ್ಠಪುತ್ರನಾದ ರಾಮನನ್ನು ನೀನು ನನ್ನ ವಶಕ್ಕೆ ಕೊಡಬೇಕೆಂದು ನಾನು ಯಾಚಿಸುವೆನು ॥೩॥

ನಾನು ಇವನನ್ನು ನನ್ನ ದಿವ್ಯತೇಜಸ್ಸಿನಿಂದ ಕಾಪಾಡಿಕೊಂಡಿರುವೆನಾದಕಾರಣ, ಆ ಯಿಬ್ಬರು ರಾಕ್ಷಸರಲ್ಲದೆ ಇನ್ನೂ ಅನೇಕರಾಗಿ ರಾಕ್ಷಸರು ಯಜ್ಞವಿಘ್ನಮಾಡಲು ಬಂದರೂ, ಅವರನ್ನೂ ನಿಗ್ರಹಿಸುವುದರಲ್ಲಿ ಇವರು ಶಕ್ತನಾಗುವನು ॥೪॥

ಅವರನ್ನು ನಿಗ್ರಹಿಸುವುದು ರಾಮನಿಗೆ ಅಸಾಧ್ಯವೆಂದು ತಿಳಿಯಬೇಡ. ರಾಮನ ಕಣ್ಣೆದುರಿಗೆ ನಿಲ್ಲಲು ಅವರು ಹೇಗೂ ಸುತರಾಂ ಶಕ್ತರಲ್ಲ. ಇದಲ್ಲದೆ, ಅವರಿಬ್ಬರನ್ನೂ ನಿಗ್ರಹಿಸುವುದಕ್ಕೆ, ರಾಮನನ್ನು ಬಿಟ್ಟರೆ—ಮತ್ತಾವ ಪುರುಷನೂ ಸಮರ್ಥನಾಗುವುದೂ ಇಲ್ಲ ॥೫॥

ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ವಸಿಷ್ಠೋಽಪಿ ಮಹಾತೇಜಾಃ ಯೇ ಚೇಮೇ ತಪಸಿ ಸ್ಥಿತಾಃ ॥೬॥
ನ ಚ ಪುತ್ರಕೃತಂ ಸ್ನೇಹಂ ಗನ್ತುಮರ್ಹಸಿ ಪಾರ್ಥಿವ ।
ಯದಿ ತೇ ಧರ್ಮಲಾಭಶ್ಚ ಯಶಶ್ಚ ಪರಮಂ ಭುವಿ ॥೭॥
ತಚ್ಛ್ರುತ್ವಾ ರಾಜಶಾರ್ದೂಲೋ ವಿಶ್ವಾಮಿತ್ರಸ್ಯ ಭಾಷಿತಮ್ ।
ಮುಹೂರ್ತಮಿವ ನಿಸ್ಸಂಜ್ಞಃ ಸಂಜ್ಞಾವಾನಿದಮಬ್ರವೀತ್ ॥೮॥
ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ ।
ನ ಯುದ್ಧಯೋಗ್ಯತಾಮಸ್ಯ ಪಶ್ಯಾಮಿ ಸಹ ರಾಕ್ಷಸೈಃ ॥೯॥
ದೇವದಾನವಗನ್ಧರ್ವಾಃ ಯಕ್ಷಾಃ ಪತಗಪನ್ನಗಾಃ ।
ನ ಶಕ್ತಾ ರಾವಣಂ ಸೋಢುಂ ಕಿಂ ಪುನರ್ಮಾನವಾ ಯುಧಿ ॥೧೦॥
ಕಥಮಸ್ಯಮರಪ್ರಖ್ಯಂ ಸಜ್ಞಾನಾಮಕೋವಿದಮ್ ।
ಬಾಲಂ ಮೇ ತನಯಂ ಬ್ರಹ್ಮನ್ ನೈವ ದಾಸ್ಯಾಮಿ ಪುತ್ರಕಮ್ ॥೧೧॥

ರಾಮನು ಸಾಮಾನ್ಯನೆಂದು ತಿಳಿಯಬೇಡ. ಅವನಲ್ಲಿರುವ ಶಕ್ತಿಯು ಸರ್ವರಿಗೂ ಸಾಧಾರಣವಾಗಿ ಗೊತ್ತಾಗಲಾರದು. ಅವನಲ್ಲಿ ನಿಜವಾದ ಪರಾಕ್ರಮವಿರುವುದನ್ನು ನಾನು ಚೆನ್ನಾಗಿ ಬಲ್ಲೆನು; ಮಹಾತೇಜಸ್ವಿಯಾದ ಈ ವಸಿಷ್ಠಮುನಿಯೂ ಬಲ್ಲನು; ಇನ್ನೂ ಇತರರಾದ ತಪೋನಿಷ್ಠರೂ ಬಲ್ಲರು. ಇಷ್ಟೇಕೊರತು, ಸಾಮಾನ್ಯರು ಇವನ ಸ್ವರೂಪವನ್ನು ತಿಳಿದುಕೊಳ್ಳಲಾರರು॥

ಅಯ್ಯಾ! ರಾಜನೆ! ನಿನಗೆ ಲೋಕದಲ್ಲಿ ಯಶಸ್ಸೂ ಧರ್ಮಲಾಭವೂ ಮುಖ್ಯವಾಗಿದ್ದಪಕ್ಷದಲ್ಲಿ, ಪುತ್ರಸ್ನೇಹಕ್ಕೆ ಪರವಶನಾಗಿ ಈಗ ನನ್ನ ಪ್ರಾರ್ಥನೆಯನ್ನು ನಿರಾಕರಿಸದಿರುವುದು ನಿನಗೆ ಯುಕ್ತವಾಗಲಾರದು ॥೭॥

ಈರೀತಿಯಾಗಿ ಹೇಳಿದ ವಿಶ್ವಾಮಿತ್ರಮುನಿಯ ಮಾತನ್ನು ಕೇಳಿ, ದಶರಥಮಹಾರಾಜನು ಒಂದು ಮುಹೂರ್ತಕಾಲ ಕೇವಲ ಸಂಜ್ಞಾಹೀನನಾಗಿದ್ದುಬಿಟ್ಟು, ಅನಂತರ ಜ್ಞಾನವಡೆದವನಾಗಿ ಈ ಮಾತನ್ನು ಹೇಳಿದನು ॥೮॥

ಪೂಜ್ಯರಾದ ವಿಶ್ವಾಮಿತ್ರರೆ! ಕಮಲಲೋಚನನಾದ ನಮ್ಮ ರಾಮನಿಗೆ, ಇನ್ನೂ ಹದಿನಾರುವರ್ಷವೂ ತುಂಬಿಲ್ಲ. ರಾಕ್ಷಸರೊಡನೆ ಯುದ್ಧಮಾಡುವುದಕ್ಕೆ ಇವನಿಗಿನ್ನೂ ಸಾಮರ್ಥ್ಯವಿರುವಂತೆಯೇ ನನಗೆ ತೋರುವುದಿಲ್ಲ ॥೯॥

ಇದಲ್ಲದೆ, ನೀವು ಅಪ್ಪಣೆಕೊಡಿಸಿದ ರಾಕ್ಷಸರು ಸಾಮಾನ್ಯರಲ್ಲ; ರಾವಣನ ಭೃತ್ಯರೆಂದು ಅಪ್ಪಣೆಕೊಟ್ಟರುವಿರಿ. ದೇವತೆಗಳೂ ದಾನವರೂ ಗಂಧರ್ವರೂ ಯಕ್ಷರೂ ಪತಗರೂ (ಪಕ್ಷಿ) ಪನ್ನಗರೂ—ಇವರು ಯಾರೂ ರಾವಣನನ್ನು ಯುದ್ಧದಲ್ಲಿ ಎದುರಿಸುವುದಕ್ಕೆ ಸಮರ್ಥರಾಗಲಾರರು; ಹೀಗಿರುವಾಗ ಇನ್ನು ಮನುಷ್ಯರ ವಾಡೇನು? ॥೧೦॥

ಎಲೈ ಬ್ರಹ್ಮರ್ಷಿವರ್ಯರೆ! ಹೆಚ್ಚೇನು ಹೇಳುವುದು? ದೇವಪುತ್ರಸದೃಶನಾಗಿಯೂ ಇನ್ನೂ ಯುದ್ಧದಲ್ಲಿ ವ್ಯಾವೀರ್ಯಪಡೆಯದವನಾಗಿಯೂ ಕೇವಲ ಬಾಲಕನಾಗಿಯೂ ಇರುವ ನನ್ನ ಪ್ರಿಯಪುತ್ರನಾದ ರಾಮನನ್ನು, ಹೇಗಾದರೂ ನಾನು ತಮ್ಮ ವಶಕ್ಕೆ ಈಗ ಸಮರ್ಪಿಸಲೇಆರೆನು ॥೧೧॥

ತಚ್ಛ್ರುತ್ವಾ ವಚನಂ ತಸ್ಯ ಸ್ನೇಹಪರ್ಯಾಕುಲಾಕ್ಷರಮ್ ।
ಸಮನ್ಯುಃ ಕೌಶಿಕೋ ವಾಕ್ಯಂ ಪ್ರತ್ಯುವಾಚ ಮಹೀಪತಿಮ್ ॥೧೦॥

ಯದೀದಂ ತೇ ಕ್ಷಮಂ ರಾಜನ್ ಗಮಿಷ್ಯಾಮಿ ಯಥಾಗತಮ್ ।
ಮಿಥ್ಯಾಪ್ರತಿಜ್ಞಃ ಕಾಕುತ್ಸ್ಥ ಸುಖೀ ಭವ ಸಬಾನ್ಧವಃ ॥೧೩॥

ಏವಮುಕ್ತಃ ಸ ಮುನಿನಾ ರಾಜಾ ಧ್ಯಾತ್ವಾ ಕ್ಷಣಂ ತತಃ ।
ಪಪ್ರಚ್ಛ ಗುರುಮೇಕಾನ್ತೇ ಸರ್ವಜ್ಞಂ ದೀರ್ಘದರ್ಶಿನಮ್ ॥೧೪॥

ಕಿಂ ಕರೋಮಿ ಗುರೋ ರಾಮಂ ತ್ಯಕ್ತುಂ ನೋತ್ಸಹತೇ ಮನಃ ।
ಬಹುವರ್ಷಸಹಸ್ರಾನ್ತೇ ಕಷ್ಟೇನೋತ್ಪಾದಿತಾಃ ಸುತಾಃ ॥೧೫॥

ಚತ್ವಾರೋಮರತುಲ್ಯಾಸ್ತೇ ತೇಷಾಂ ರಾಮೋತಿವಲ್ಲಭಃ ।
ರಾಮೋ ಯದಾ ಗಚ್ಛತಿ ಚೇತ್ ನ ಜೀವಾಮಿ ಕಥಞ್ಚನ ॥೧೬॥

ಪ್ರತ್ಯಾಖ್ಯಾತೋ ಯದಿ ಮುನಿಃ ಶಾಪಂ ದಾಸ್ಯತಿ ನಿಶ್ಚಯಃ ।
ಕಥಂ ಶ್ರೇಯೋ ಭವೇನ್ಮಹ್ಯಂ ಅಸತ್ಯಂ ಚಾಪಿ ನ ಸ್ಪೃಶೇತ್ ॥೧೭॥

ಹೀಗೆಂದು ಪುತ್ರಸ್ನೇಹದಿಂದ ಅಕ್ಷರಗಳನ್ನು ಸರಿಯಾಗಿ ಉಚ್ಚರಿಸದೆ ದಶರಥನು ಹೇಳಿದ ಮಾತನ್ನು ಕೇಳಿ, ಮಹಾಕೋಪಯುಕ್ತನಾದ ವಿಶ್ವಾಮಿತ್ರನು, ರಾಜನನ್ನು ಕುರಿತು ಹೀಗೆ ಹೇಳಿದನು ॥೧೨॥

ಅಯ್ಯಾ! ರಾಜನೆ! ಮೊದಲು ಒಪ್ಪಿಕೊಂಡು ಈಗ ಆಗುವುದಿಲ್ಲವೆಂದು ಹೇಳುವುದು ನಿನಗೆ ಯುಕ್ತವಾಗಿದ್ದಪಕ್ಷದಲ್ಲಿ, ನಾನು ಬಂದದಾರಿಯನ್ನು ಹಿಡಿದುಕೊಂಡು ಹೊರಡುವೆನು; ಮಹಾತ್ಮನಾದ ಕಕುತ್ಸ್ಥನ ವಂಶದಲ್ಲಿ ಹುಟ್ಟಿರುವ ಎಲೈ ದಶರಥನೆ! ನೀನು ನಿನ್ನ ಪ್ರತಿಜ್ಞೆಯನ್ನು ಸುಳ್ಳು ಮಾಡಿಕೊಂಡು ಬಂಧುಬಳಗಗಳೊಡನೆ ಸುಖಿಯಾಗಿರು ॥೧೩॥

ಈರೀತಿಯಾಗಿ ವಿಶ್ವಾಮಿತ್ರಮುನಿಯಿಂದ ಹೇಳಲ್ಪಟ್ಟವನಾಗಿ, ಆ ದಶರಥಮಹಾರಾಜನು, ಒಂದು ಕ್ಷಣಕಾಲ ಸುಮ್ಮನೆ ಯೋಚನೆ ಮಾಡಿ ಬಳಿಕ, ಸರ್ವಜ್ಞನಾಗಿಯೂ ದೂರದೃಷ್ಟಿಯುಳ್ಳವನಾಗಿಯೂ ಇರುವ ಗುರುವಾದ ವಸಿಷ್ಠಮುನಿಯನ್ನು ಈರೀತಿಯಾಗಿ ಪ್ರಶ್ನೆಮಾಡಿದನು ॥೧೪॥

ಹೇ ಗುರೋ! ಈಗ ನಾನೇನು ಮಾಡಲಿ? ರಾಮನನ್ನು ಕಳುಹಿಸುವುದಕ್ಕೆ ಸ್ವಲ್ಪವೂ ಮನಸ್ಸು ಒಡಂಬಡುವುದಿಲ್ಲ. ಅನೇಕಸಾವಿರ ವರ್ಷಕಾಲ ಮಕ್ಕಳಿಲ್ಲದೆ ಸಂತಾಪಪಟ್ಟು, ಆಮೇಲೆ ನಾನಾವಿಧವಾದ ಕಷ್ಟಗಳನ್ನು ಅನುಭವಿಸಿ, ದೇವಸಮರಾದ ನಾಲ್ಕುಮಂದಿ ಮಕ್ಕಳನ್ನು ಪಡೆದಿರುವೆನು. ಅವರೆಲ್ಲರಲ್ಲಿ ರಾಮನು ನನಗೆ ಮಹಾಪ್ರೀತಿಪಾತ್ರನಾಗಿರುವನು. ಇಂತಹ ರಾಮನು ಈಗ ವಿಶ್ವಾಮಿತ್ರರೊಡನೆ ಹೊರಟುಹೋದರೆ, ತಾನು ಹೇಗೂ ಜೀವಿಸಲಾರೆನು ॥೧೫-೧೬॥

ಈ ಮಹರ್ಷಿಯ ಪ್ರಾರ್ಥನೆಯನ್ನು ನಡೆಯಿಸದೆ—ಅವನನ್ನು ತಿರಸ್ಕರಿಸಿಬಿಟ್ಟರೆ, ಆಗ ಇವನು ನನಗೆ ಕ್ರೂರವಾದ ಶಾಪವನ್ನು ಕೊಡುವನು; ಇದು ನಿಶ್ಚಯವು. ಈಗ ಹೇಗೆ ಮಾಡಿದರೆ ನನಗೆ ಶ್ರೇಯಸ್ಸುಂಟಾಗುವುದು?—ಅನೃತದೋಷವೂ ನನಗೆ ಬಾರದಿರುವುದು? ॥೧೭॥

ಶ್ರೀ ವಸಿಷ್ಠ ಉವಾಚ.

ಶೃಣು ರಾಜನ್ ಪರಂ ಗುಹ್ಯಂ ಗೋಪನೀಯಂ ಪ್ರಯತ್ನತಃ ।
ರಾಮೋ ನ ಮಾನುಷೋ ಜಾತಃ ಪರಮಾತ್ಮಾ ಸನಾತನಃ ॥೧೪॥

ಭೂಮೇರ್ಭಾರಾವತಾರಾಯ ಬ್ರಹ್ಮಣಾ ಪ್ರಾರ್ಥಿತಃ ಪುರಾ ।
ಸ ಏವ ಜಾತೋ ಭಗವಾನ್ ಕೌಸಲ್ಯಾಯಾಂ ತವಾನಘ ॥೧೫॥

ಶೇಷಸ್ತು ಲಕ್ಷ್ಮಣೋ ರಾಜನ್ ರಾಮಮೇವಾನ್ವವರ್ತತ ।
ಜಾತೌ ಭರತಶತ್ರುಘ್ನೌ ಶಙ್ಖಚಕ್ರೇ ಗದಾಭೃತಃ ॥೧೬॥

ಯೋಗಮಾಯಾ ಚ ಸೀತೇತಿ ಜಾತಾ ಜನಕನನ್ದಿನೀ ।
ವಿಶ್ವಾಮಿತ್ರೋಪಿ ರಾಮೇಣ ತಾಂ ಯೋಜಯಿತುಮಾಗತಃ ॥೧೭॥

ಏತದ್ಗುಹ್ಯತಮಂ ರಾಜನ್ ನ ವಕ್ತವ್ಯಂ ಕದಾಚನ ।
ಇಕ್ಷ್ವಾಕೂಣಾಂ ಕುಲೇ ಜಾತೋ ನ ಧರ್ಮಂ ಹಾತುಮರ್ಹಸಿ ॥೧೮॥

ಸಂಶ್ರುತ್ಯ ಚ ಕರಿಷ್ಯಾಮೀತ್ಯಕುರ್ವಾಣಸ್ಯ ರಾಘವ ।
ಏಷ್ಟಾಪೂರ್ತವಧೋ ಭೂಯಾತ್ ತಸ್ಮಾದ್ರಾಮಂ ವಿಸರ್ಜಯ ॥೧೯॥

ಇದನ್ನು ಕೇಳಿ ವಸಿಷ್ಠರು ಉತ್ತರ ಹೇಳುವರು :—

ಅಯ್ಯಾ! ರಾಜ! ಅತ್ಯಂತ ರಹಸ್ಯವಾದೊಂದು ವಿಷಯವನ್ನು ಹೇಳುವೆನು, ಕೇಳು. ಇದನ್ನು ಪ್ರಯತ್ನಪೂರ್ವಕವಾಗಿ ರಹಸ್ಯವೆಂದಿಕೊಂಡಿರು. ರಾಮನು ಸಾಮಾನ್ಯಮನುಷ್ಯನಲ್ಲ; ಸನಾತನನಾದ ಪರಮಾತ್ಮನೇ ಹೀಗೆ ಅವತರಿಸಿರುವನು ॥೧೪॥

ಪೂರ್ವದಲ್ಲಿ ಭೂಮಿಯ ಭಾರವನ್ನು ಇಳುಹಿಸುವುದಕ್ಕಾಗಿ ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟ ಆ ಪರಮಾತ್ಮನೇ, ಈಗ ಕೌಸಲ್ಯೆಯಲ್ಲಿ ನಿನ್ನ ಮಗನಾಗಿ ಹುಟ್ಟಿರುವನು ॥೧೫॥

ಆದಿಶೇಷನು ಲಕ್ಷ್ಮಣರೂಪದಲ್ಲಿ ಅವತರಿಸಿ ರಾಮನನ್ನೇ ಅನುವರ್ತಿಸಿಕೊಂಡಿರುವನು. ಆ ಪರಮಾತ್ಮನ ಶಂಖಚಕ್ರಗಳು ಭರತಶತ್ರುಘ್ನರಾಗಿ ಹುಟ್ಟಿರುವರು ॥೧೬॥

ಆ ಭಗವಂತನ ಆದಿಮಾಯೆಯೇ, ಸೀತೆಯೆಂಬ ನಾಮಧೇಯವಿಟ್ಟುಕೊಂಡು, ಜನಕರಾಜನ ಪುತ್ರಿಯಾಗಿ ಅವತರಿಸಿರುವಳು. ಈಗ ಈ ವಿಶ್ವಾಮಿತ್ರನು, ರಾಮನೊಡನೆ ಅವಳನ್ನು ಸೇರಿಸುವುದಕ್ಕೆ (ಇಬ್ಬರಿಗೂ ವಿವಾಹಮಾಡಿಸುವುದಕ್ಕೆ) ಇಲ್ಲಿಗೆ ಬಂದಿರುವನು ॥೧೭॥

ಅಯ್ಯಾ! ರಾಜ! ಇದು ಅತಿರಹಸ್ಯವಾದ ವಿಷಯವು; ಇದನ್ನು ನೀನೆಂದಿಗೂ ಹೊರಪಡಿಸಬೇಡ. ನೀನು ಪ್ರಸಿದ್ಧರಾದ ಇಕ್ಷ್ವಾಕುಕುಲದವರ ವಂಶದಲ್ಲಿ ಹುಟ್ಟಿದವನಾಗಿ, ಧರ್ಮವನ್ನು ಬಿಡುವುದು ಯುಕ್ತವಲ್ಲ ॥೧೮॥

ಎಲ್ಲೆ ರಘುಕುಲೋದ್ಭವನೆ! ಮಾಡಿಕೊಡುತ್ತೇನೆಂದು ಮೊದಲು ಪ್ರತಿಜ್ಞೆ ಮಾಡಿಕೊಟ್ಟು ಆಮೇಲೆ ಆ ರೀತಿ ನಡೆಯದೆ ತಪ್ಪಿದವನಿಗೆ, ಯಜ್ಞಾದಿಕರ್ಮಗಳನ್ನೂ ವಾಪೀಕೂಪಾದಿಗಳನ್ನೂ ಕೆಡಿಸಿದ ದೋಷವು ಒರುವುದು ॥೧೯॥

ಕೃತಾಸ್ತ್ರಮಕೃತಾಸ್ತ್ರಂ ವಾ ನೈನಂ ಶಕ್ಷ್ಯಂತಿ ರಾಕ್ಷಸಾಃ ।
ನ ರಾಮಗಮನೇ ರಾಜ್ಞ ಸಂಶಯುಂ ಕರ್ತುಮರ್ಹಸಿ ॥೨೪॥

ಇತಿಮುನಿವಚನಾತ್ ಪ್ರಸನ್ನಚೇತೋ
ರಘುವೃಷಭಸ್ತು ಮುವೋದ ಭಾಸ್ವರಾಬ್ಧಿಃ ।
ಗಮನಮಭಿರುರೋಚ ರಾಘವಸ್ಯ
ಪ್ರಥಿತಯಶಾಃ ಕುಶಿಕಾತ್ಮಜಾಯ ಬುದ್ಧ್ಯಾ ॥೨೫॥

ಇತಿ ಶ್ರೀ ಬಾಲಕಾಂಡೇ ವಸಿಷ್ಠೋಕ್ತ ರಾಮತತ್ತ್ವ ಶ್ರೀರಾಮ
ಪ್ರೇಷಣಾದಿಕಥನಂ ನಾಮ ಸಪ್ತದಶಃ ಸರ್ಗಃ.

ಅಯ್ಯಾ! ದಶರಥರಾಜನೆ! ರಾಮನಿಗಿನ್ನೂ ಶಸ್ತ್ರವಿದ್ಯೆಯಲ್ಲಿ ಸರಿಯಾದ ಸಾಮರ್ಥ್ಯವಿಲ್ಲ ವೆಂದು ನೀನು ಯೋಚಿಸಬೇಡ. ಇವನಿಗೆ ಶಸ್ತ್ರದಲ್ಲಿ ವ್ಯಾವೀಣ್ಯವಿದ್ದರೂ, ಅಥವಾ ಇಲ್ಲದಿದ್ದರೂ, ಇವನನ್ನು ರಾಕ್ಷಸರು ಪ್ರಭಟಿಸಲಾರರು. ಅದುಕಾರಣ, ರಾಮನು ವಿಶ್ವಾಮಿತ್ರರೊಡನೆ ಹೊರಡುವವಿಷಯದಲ್ಲಿ ನೀನು ಸಂಶಯಮಾಡುವುದು ಯುಕ್ತವಲ್ಲ ॥೨೪॥

ಈರೀತಿಯಾಗಿ ವಸಿಷ್ಠರು ಹೇಳಿದ ಮಾತನ್ನು ಕೇಳಿ ಪ್ರಸನ್ನಹೃದಯನಾದ ದಶರಥನು, ಹೃಷ್ಟಮುಖನಾಗಿ ಸಂತೋಷಪಟ್ಟನು. ಬಳಿಕ, ಪ್ರಸಿದ್ಧಕೀರ್ತಿಯಾದ ಆ ದಶರಥನು. ತನ್ನ ಮಗನಾದ ರಾಮನನ್ನು ಕರೆದುಕೊಂಡು ಹೋಗಬಹುದೆಂದು, ಬುದ್ಧಿಪೂರಸ್ಸರವಾಗಿ ವಿಶ್ವಾಮಿತ್ರನಿಗೆ ಸಂಮತಿಕೊಟ್ಟನು ॥೨೫॥

ಇದು ಬಾಲಕಾಂಡದಲ್ಲಿ ವಸಿಷ್ಠೋಕ್ತರಾಮತತ್ವ ರಾಮಪ್ರೇಷಣಾದಿ
ಕಥನವೆಂಬ ಹದಿನೇಳನೆಯ ಸರ್ಗವು.

ಅಥ ಶ್ರೀ ಬಾಲಕಾಣ್ಡೇ ಅಷ್ಟಾದಶಃ ಸರ್ಗಃ.

ಶ್ರೀ ಶಿವ ಉವಾಚ.

ತಥಾ ವಸಿಷ್ಠೇ ಬ್ರುವತಿ ರಾಜಾ ದಶರಥಃ ಸುತಮ್ ।
ಪ್ರಹೃಷ್ಟವದನೋ ರಾಮಂ ಆಜುಹಾವ ಸಲಕ್ಷ್ಮಣಮ್ ॥೧॥
ಸ ಸುತಂ ಮೂರ್ಧ್ನ್ಯವಘ್ರಾಯ ರಾಜಾ ದಶರಥಃ ಪ್ರಿಯಮ್ ।
ದದೌ ಕಾಶಿಕಪುತ್ರಾಯ ಸುಪ್ರೀತೇನಾನ್ತರಾತ್ಮನಾ ।
ಆದಾಯ ರಾಘವೌ ಯೋಗೀ ಪ್ರಯಯೌ ಸ್ವಾಶ್ರಮಂ ತತಃ ॥೨॥

ವಿಶ್ವಾಮಿತ್ರಗತಂ ದೃಷ್ಟ್ವಾ ರಾಮಂ ರಾಜೀವಲೋಚನಮ್ ।
ದೇವಸಙ್ಘಾಸ್ತದಾ ವ್ಯೋಮ್ನಿ ಕೃತಂ ಕಾರ್ಯಮಮನ್ಯತ ॥೩॥
ತತೋ ವಾಯುಃ ಸುಖಸ್ಪರ್ಶಃ ನೀರಜಸ್ಕೋ ವವೌ ತದಾ ॥೪॥

ಪುಷ್ಪವೃಷ್ಟಿರ್ಮಹತ್ಯಾಸೀತ್ ದೇವದುನ್ದುಭಿನಿಸ್ವನಃ ।
ಶಙ್ಖಮರ್ದನಿಘೋರ್ಘೋಷಃ ಪ್ರಯಾತೇ ತು ಮಹಾತ್ಮನಿ ॥೫॥

ಬಾಲಕಾಂಡದಲ್ಲಿ ಹದಿನೆಂಟನೆಯ ಸರ್ಗವು.

ಶ್ರೀ ಪರಮೇಶ್ವರನು ಪುನಃ ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಹೀಗೆ ವಸಿಷ್ಠರು ತತ್ವಕಥನೆ ಮಾಡಲಾಗಿ, ದಶರಥಮಹಾರಾಜನು ಹೃಷ್ಟವದನನಾಗಿ, ಲಕ್ಷ್ಮಣನೊಡನೆ ರಾಮನನ್ನು ಕರೆಯಿಸಿದನು ॥೧॥

ಅನಂತರ, ಸಮೀಪಕ್ಕೆ ಬಂದ ತನ್ನ ಪ್ರಿಯಪುತ್ರನನ್ನು, ದೊರೆಯಾದ ದಶರಥನು ಶಿರಸ್ಸಿನಲ್ಲಿ ಆಘ್ರಾಣಿಸಿ, ಸಂತುಷ್ಟವಾದ ಮನಸ್ಸಿನಿಂದ ವಿಶ್ವಾಮಿತ್ರಮುನಿಗೆ ಸಮರ್ಪಿಸಿದನು. ಆಬಳಿಕ, ಪರಮಯೋಗಿಯಾದ ವಿಶ್ವಾಮಿತ್ರಮುನಿಯು ರಾಮಲಕ್ಷ್ಮಣರನ್ನು ಕರೆದುಕೊಂಡು ತನ್ನ ಆಶ್ರಮಕ್ಕೆ ಹೊರಟುಬಿಟ್ಟನು ॥೨॥

ಆ ಸಮಯದಲ್ಲಿ, ಅಂತರಿಕ್ಷಮಾರ್ಗದೊಳಗಿದ್ದ ದೇವತೆಗಳ ಸಮೂಹವು, ಶ್ರೀರಾಮನು ವಿಶ್ವಾಮಿತ್ರರೊಡಗೂಡಿ ಹೊರಟಿರುವುದನ್ನು ಕಂಡು, ಇನ್ನು ತಮ್ಮ ಕಾರ್ಯವೆಲ್ಲವೂ ನೆರವೇರಿತೆಂದು ತಿಳಿದುಕೊಂಡಿತು ॥೩॥

ಆಗ ಮಹಾತ್ಮನಾದ ಶ್ರೀರಾಮನು ವಿಶ್ವಾಮಿತ್ರರೊಡನೆ ಹೊರಡಲಾಗಿ, ವಾಯುವು ಧೂಳಿಹೀನವಾಗಿ ಸುಖಸ್ಪರ್ಶವಾಗಿ ಬೀಸಿತು; ಅಂತರಿಕ್ಷದಲ್ಲಿ ದೊಡ್ಡದಾಗಿ ಪುಷ್ಪವೃಷ್ಟಿಯಾಯ್ತು; ದೇವದುಂದುಭಿಗಳ ಧ್ವನಿಯೂ, ಶಂಖಮದ್ದಲೆಗಳ ಘೋಷವೂ, ವಿಶೇಷವಾಗಿ ಆದುವು ॥೪-೫॥

ಪಥಿ ತಾರ್ಕ್ಷ್ಯೇಣ ಸಮಾಗಮ್ಯ ತೂಣೀ ಚಾಕ್ಷಯ್ಯಸಾಯಕೌ ।
ಸರ್ವಭೂತೈರದೃಶ್ಯಸ್ಸ ದತ್ವಾ ತಾಭ್ಯಾಂ ಪುನರ್ಯಯೌ ॥೬॥
ತದಾ ಕೌಶಿಕಪುತ್ರಂ ತು ಧನುಷ್ಪಾಣೀ ಸ್ವಲಙ್ಕೃತೌ
ಬದ್ಧಗೋಧಾಙ್ಗುಳಿತ್ರಾಣೌ ಖಡ್ಗವನ್ತೌ ಮಹಾದ್ಯುತೀ ॥೭॥
ಕುಮಾರೌ ಚಾರುವಪುಷ್ಮನ್ತೌ ಭ್ರಾತರೌ ರಾಮಲಕ್ಷ್ಮಣೌ ।
ಅನುಯಾತೌ ಶ್ರಿಯಾ ದೀಪ್ತೌ ಶೋಭಯೇತಾಮನುಸ್ಥಿತೌ ॥೮॥
ವಿಶ್ವಾಮಿತ್ರಂ ಮಹಾತ್ಮಾನಂ ತ್ರಿಶೀರ್ಷಾಣಮಿವೋರಗಂ
ಅನುಜಗ್ಮತುರಕ್ಷುದ್ರೌ ಪಿತಾಮಹಮಿವಾಶ್ವಿನೌ ॥೯॥
ಅಧ್ಯರ್ಧಯೋಜನಂ ಗತ್ವಾ ಸರಯ್ವಾಂ ದಕ್ಷಿಣೋ ತಟೇ ।
ರಾಮೇತಿ ಮಧುರಾಂ ವಾಣೀಂ ವಿಶ್ವಾಮಿತ್ರೋಭ್ಯಭಾಷತ ॥೧೦॥
ಮನ್ತ್ರಗ್ರಾಮಂ ಗೃಹಾಣ ತ್ವಂ ಬಲಾಮತಿಬಲಾಂ ತಥಾ ।
ಪಿತಾಮಹಸುತೇ ಹ್ಯೇತೇ ವಿದ್ಯೇ ತೇಜಸ್ವಿನಸ್ತವ ॥
ಬಲಾ ತ್ವತಿಬಲಾ ಚೈವ ಸರ್ವಜ್ಞಾನಸ್ಯ ಮಾತರೌ ॥೧೧॥

ಈಸಮಯದಲ್ಲಿ, ವಿಷ್ಣುವಾಹನಭೂತನಾದ ಗರುಡನು, ಸರ್ವಭೂತಗಳಿಗೂ ಅದೃಶ್ಯನಾಗಿ ಮಾರ್ಗದಲ್ಲಿ ಬಂದುಸೇರಿ, ಆ ರಾಮಲಕ್ಷ್ಮಣರಿಗೆ ಧನುಸ್ಸುಗಳನ್ನೂ ಅಕ್ಷಯತೂಣೀರಗಳನ್ನೂ ಸಮರ್ಪಿಸಿ, ಪುನಃ ಹೊರಟುಹೋದನು ॥೬॥

ಆಗ, ಎರಡುಕಡೆಯೂ ಎರಡು ಒತ್ತಳಿಕೆಗಳನ್ನು ಧರಿಸಿಕೊಂಡು ಮೂರುತಲೆಯು ಸರ್ಪರಾಜಗಳಂತೆ ಪ್ರಕಾಶಿಸುತಿರುವರಾಗಿಯೂ, ಧನುರ್ಧಾರಿಗಳಾಗಿಯೂ, ದಿವ್ಯಾಭರಣಧಾರಿಗಳಾಗಿಯೂ, ಕೈಗೆ ಗೋಧಾಂಗುಳಿತ್ರಾಣವನ್ನು (ಚರ್ಮದಲ್ಲಿ ಮಾಡಿದ ಬೆರಳಿಲ) ಕಟ್ಟಿಕೊಂಡಿರುವರಾಗಿಯೂ, ಖಡ್ಗಧಾರಿಗಳಾಗಿಯೂ, ಮಹಾತೇಜಸ್ಸಂಪನ್ನರಾಗಿಯೂ, ಪುಷ್ಪೋಹರ ಶೋಭಿತರಾಗಿಯೂ, ಸರ್ವಲಕ್ಷಣ ಲಕ್ಷಿತರಾಗಿಯೂ ಇರುವ, ಬಾಲಕರಾದ ಸಹೋದರರಾದ ರಾಮಲಕ್ಷ್ಮಣರು, ವಿಶ್ವಾಮಿತ್ರಮುನಿಯು ಹಿಂದುಗಡೆ ಹೋಗುತ್ತ, ಅವನಿಗೆ ವಿಶೇಷವಾಗಿ ಶೋಭೆಯನ್ನುಂಟುಮಾಡಿದರು; ಮತ್ತು, ಮಹಾತ್ಮರಾದ ಅವರಿಬ್ಬರೂ, ತ್ರಿಶೀರ್ಷಾಚ್ಛತುರ್ಮುಖನನ್ನು ಅಶ್ವಿನೀದೇವತೆಗಳು ಅನುಸರಿಸಿಕೊಂಡು ಹೋಗುವಂತೆ, ಆ ವಿಶ್ವಾಮಿತ್ರಮುನಿಯನ್ನು ಅನುಸರಿಸಿಕೊಂಡು ಹೋಗುತಿದ್ದರು ॥೭-೯॥

ಆಗ ವಿಶ್ವಾಮಿತ್ರಮುನಿಯು ಒಂದೂವರೆಯೋಜನದ ದೂರ ಹೋಗಿ, ಸರಯೂನದಿಯ ದಕ್ಷಿಣತೀರದಲ್ಲಿ 'ರಾಮ' ಎಂದು ಪ್ರೀತಿಯಿಂದ ಸಂಬೋಧಿಸಿ, ಈಗೆ ಮಧುರವಾದ ಮಾತನ್ನು ಹೇಳಿದನು ॥೧೦॥

ವತ್ಸ! ಈಗ ನೀನು ಅಸ್ತ್ರಮಂತ್ರಸಮುದಾಯವನ್ನು ನನ್ನಿಂದ ಸ್ವೀಕರಿಸುವನಾಗು. ಮತ್ತು ಬಲಾ ಅತಿಬಲಾ ಎಂಬ ಎರಡು ಉತ್ತಮ ಮಂತ್ರವಿದ್ಯೆಗಳನ್ನೂ ಸ್ವೀಕರಿಸು. ಈ ಬಲಾ ಅತಿಬಲಾ ಎಂಬ ಎರಡು ವಿದ್ಯೆಗಳು, ಬ್ರಹ್ಮನಿಗೆ ಮಾನಸಪುತ್ರಿಗಳು, ಮಹಾತೇಜಸ್ಸಮನ್ವಿತವಾದುವುಗಳು; ಸರ್ವಸ್ತವಾದ ಜ್ಞಾನಕ್ಕೂ ಮಾತೃಭೂತವಾದುವುಗಳು ॥೧೧॥

ನ ಬಾಹ್ವೋಃ ಸದೃಶೋ ವೀರ್ಯೇ ಪೃಥಿವ್ಯಾಮಸ್ತಿ ಕಶ್ಚನ ।
ತ್ರಿಷು ಲೋಕೇಷು ವಾ ರಾಮ ನ ಭವೇತ್ ಸದೃಶಸ್ತವ ॥೧೦॥
ತಸ್ಮಾದ್ವಿದ್ಯಾದ್ವಯಂ ದಾಸ್ಯೇ ಸದೃಶಸ್ತ್ವಂ ಹಿ ಧಾರ್ಮಿಕ ।
ಕಾಮಂ ಬಹುಗುಣಾಃ ಸರ್ವೇ ತ್ವಯ್ಯೇತೇ ನಾತ್ರ ಸಂಶಯಃ ॥೧೩॥
ತತೋ ಜಗ್ರಾಹ ತೌ ವಿದ್ಯೌ ಮಹರ್ಷೇರ್ಭಾವಿತಾತ್ಮನಃ ।
ವಿದ್ಯಾಸಮುದಿತೋ ರಾಮಃ ಶುಶುಭೇ ಭೂರಿವಿಕ್ರಮಃ ।
ಸಹಸ್ರರಶ್ಮಿರ್ಭಗವಾನ್ ಶರದೀವ ದಿವಾಕರಃ ॥೧೪॥

ಶ್ರೀ ಪಾರ್ವತ್ಯುವಾಚ.

ಭಗವನ್ ರಾಘವಃ ಕಿಂ ನು ಸರ್ವಜ್ಞಃ ಸ್ವಗುರುಂ ವಿನಾ ।
ವಿಶ್ವಾಮಿತ್ರಾತ್ ಕಥಂ ಮನ್ತ್ರಾನ್ ಜಗೃಹೇ ತದ್ವದಸ್ವ ಮೇ ॥೧೫॥

ಶ್ರೀ ಶಿವಉವಾಚ.

ಪುರಾ ತು ಕೌಶಿಕೋ ದೇವಿ ತಪಸಾರಾಧ್ಯ ಮಾಧವಮ್ ।
ಪ್ರೋವಾಚ ದೇವದೇವೇಶಂ ವರಂ ದಾತುಂ ತಮಾಗತಮ್ ॥೧೬॥

ಅಯ್ಯಾ! ರಾಮ! ಈಗಲೇ ಈ ಭೂಮಿಯೊಳಗಾಗಿ ಬಾಹುಪರಾಕ್ರಮದಲ್ಲಿ ನಿನಗೆ ಸಮಾನನಾದವನೊಬ್ಬನೂ ಇಲ್ಲ; ಈ ಮಂತ್ರವಿದ್ಯೆಗಳನ್ನು ನೀನು ಉಪದೇಶಮಾಡಿಕೊಂಡುಬಿಟ್ಟರೋ, ಆಗ ಮೂರುಲೋಕದಲ್ಲಿಯೂ ನಿನಗೆ ಸಮಾನನಾದವರು ಯಾರೂ ಇರಲಾರರು ॥೧೨॥

ಆದುಕಾರಣ, ಈಯೆರಡು ವಿದ್ಯೆಗಳನ್ನೂ ನಿನಗುಪದೇಶಿಸುವೆನು. ಅಯ್ಯಾ! ಧರ್ಮಾತ್ಮನೆ! ನೀನೇ ಇದಕ್ಕೆ ತಕ್ಕ ವಾತ್ರವು. ನಿನ್ನಲ್ಲಿ ಇದಕ್ಕೆ ಬೇಕಾದ ಗುಣಗಳೆಲ್ಲವೂ ಯಥೇಚ್ಛವಾಗಿರುವುವು. ಇದರಲ್ಲಿ ಸಂಶಯವಿಲ್ಲ ॥೧೩॥

ಹೀಗೆಂದು ವಿಶ್ವಾಮುನಿಯು ಹೇಳಿದಬಳಿಕ, ಶ್ರೀರಾಮನು, ಮಹಾತ್ಮನಾದ ವಿಶ್ವಾಮಿತ್ರ ಮುನಿಯ ದೆಸೆಯಿಂದ ಆ ವಿದ್ಯೆಗಳನ್ನು ಉಪದೇಶಪೂರ್ವಕವಾಗಿ ಸ್ವೀಕರಿಸಿದನು. ಈ ವಿದ್ಯೆಗಳ ಮಹಿಮೆಯಿಂದ ವಿಶೇಷ ತೇಜಸ್ಸಂಪನ್ನನಾಗಿರುವ ಮಹಾಪರಾಕ್ರಮಶಾಲಿಯಾದ ರಾಮನು, ಶರತ್ಕಾಲದಲ್ಲಿ ಸಾವಿರ ಕಿರಣಗಳೂ ಅಪ್ರತಿಹತವಾಗಿ ಪ್ರಕಾಶಿಸುತಿರುವ ಭಗವಂತನಾದ ಸೂರ್ಯನಂತೆ ಶೋಭಾಯುಕ್ತನಾದನು ॥೧೪॥

ಶ್ರೀ ಪಾರ್ವತಿಯು ಪ್ರಶ್ನೆಮಾಡುವಳು:—

ಪೂಜ್ಯರೆ! ಸರ್ವಜ್ಞನಾದ ಶ್ರೀರಾಮನು, ತಮ್ಮ ಗುರುವನ್ನು ಬಿಟ್ಟು ವಿಶ್ವಾಮಿತ್ರರ ಮುಖದಿಂದ ಮಂತ್ರಗಳನ್ನು ಹೇಗೆ ಸ್ವೀಕರಿಸಿದನು? ಇದಕ್ಕೆ ಕಾರಣವೇನು? ಆ ವಿಷಯವನ್ನು ನನಗೆ ಅಪ್ಪಣೆಕೊಡಿಸಬೇಕು ॥೧೫॥

ಶ್ರೀ ಪರಮೇಶ್ವರನು ಉತ್ತರಹೇಳುವನು:—

ಹೇ ದೇವಿ! ಪೂರ್ವದಲ್ಲಿ, ವಿಶ್ವಾಮಿತ್ರಮುನಿಯು, ತಪಸ್ಸಿನಿಂದ ಮಹಾವಿಷ್ಣುವನ್ನು ಆರಾಧಿಸಿ, ವರವನ್ನು ಕೊಡುವುದಕ್ಕಾಗಿ ಬಂದ ಆ ಮಹಾವಿಷ್ಣುವನ್ನು ಕುರಿತು 'ಹೇ ವಿಷ್ಣೋ!

ಪುತ್ರತ್ವಂ ಭಜ ಮೇ ವಿಷ್ಣೋ ಯದಿ ತ್ವಂ ವರದೋ ಹ್ಯಸಿ ।
ಇತ್ಯುಕ್ತೋ ಭಗವಾನಾಹ ಕೌಶಿಕಂ ಭಕ್ತವತ್ಸಲಃ ॥೧೭॥
ಬ್ರಹ್ಮಾದ್ಯೈಃ ಪ್ರಾರ್ಥಿತಃ ಪೂರ್ವಂ ಜನಿಷ್ಯೇಹಂ ರಘೋಃ ಕುಲೇ ।
ರಕ್ಷಸಾಂ ನಿಗ್ರಹಂ ಕರ್ತುಂ ಸ್ವಭಕ್ತಾನಾಂ ಚ ಮುಕ್ತಯೇ ॥೧೪॥
ತದಾಹಂ ಶಿಷ್ಯತಾಂ ಪ್ರಾಪ್ಯ ಪುತ್ರಪ್ರೀತಿಂ ಕರೋಮಿ ತೇ ।
ನ ಪುತ್ರಶಿಷ್ಯಯೋರ್ಭೇದಃ ಇತ್ಯೇವಂ ಶಾಸ್ತ್ರನಿಶ್ಚಯಃ ॥೧೯॥
ಸಹೋದರಶ್ಚ ತ್ವಜಶ್ಚ ಶಿಷ್ಯಶ್ಚ ಚಾರ್ಯಸಮ್ಮತಃ ।
ಏತೇ ಪುತ್ರಸಮಾಜ್ಞೇಯಾಃ ಧರ್ಮತೋ ಮುನಿಪುಙ್ಗವ ॥೨೦॥
ಗುಣಾಧಿಕಸ್ತು ಯಃ ಶಿಷ್ಯಃ ಸ ಪುತ್ರಾದಧಿಕಃ ಸ್ಮೃತಃ ।
ತಸ್ಮಾನ್ಮನೇ ತೇ ಶಿಷ್ಯಃ ಸ್ಯಾಂ ಇತ್ಯುಕ್ತ್ವಾನ್ತರ್ದಧೇ ಹರಿಃ ॥೨೧॥
ತಸ್ಮಾತ್ ಕೌಶಿಕಪುತ್ರಸ್ಯ ರಾಮಃ ಶಿಷ್ಯತ್ವಮಾಗತಃ ।
ಜನಯನ್ ಪುತ್ರವತ್ ಸ್ನೇಹಂ ಮನ್ತ್ರಜಾಲಂ ಗೃಹೀತವಾನ್ ॥೨೨॥
ರಾಮಲಕ್ಷ್ಮಣಸಮ್ಪರ್ಕಾತ್ ಮುನಿರ್ಜಜ್ವಾಲ ತೇಜಸಾ ।
ಸವಿತೂರಶ್ಮಿಪಾತೇನ ರಾತ್ರೌ ವಹ್ನಿರಿವ ಪ್ರಭುಃ ॥೨೩॥

ನೀನು ನನಗೆ ವರವನ್ನು ಕೊಡುವಪಕ್ಷದಲ್ಲಿ, ನನಗೆ ಮಗನಾಗಿ ಅವತರಿಸು' ಎಂದು ಪ್ರಾರ್ಥಿಸಿದನು ॥೧೬-೧೭॥

ಹೀಗೆ ಪ್ರಾರ್ಥಿಸಲ್ಪಟ್ಟು, ಭಕ್ತವತ್ಸಲನಾದ ಶ್ರೀ ಭಗವಂತನು, ವಿಶ್ವಾಮಿತ್ರನನ್ನು ಕುರಿತು ಹೀಗೆ ಹೇಳಿದನು :—ಅಯ್ಯಾ ವಿಶ್ವಾಮಿತ್ರ' ಪೂರ್ವದಲ್ಲಿಯೇ ಬ್ರಹ್ಮಾದಿಗಳು ನನ್ನನ್ನು ಪ್ರಾರ್ಥಿಸಿರುವರು. ಅದುಕಾರಣ, ರಾಕ್ಷಸನಿಗ್ರಹವನ್ನು ಮಾಡುವುದಕ್ಕಾಗಿಯೂ, ನನ್ನ ಭಕ್ತರಿಗೆ ಮುಕ್ತಿಯನ್ನು ಕೊಡುವುದಕ್ಕಾಗಿಯೂ, ನಾನು ರಘುಕುಲದಲ್ಲಿ ಹುಟ್ಟುವೆನು ॥೧೪॥

ಆಗ ನಾನು ನಿನಗೆ ಶಿಷ್ಯನಾಗಿ ಪುತ್ರಪ್ರೀತಿಯನ್ನುಂಟುಮಾಡುವೆನು. ಪುತ್ರನಿಗೂ ಶಿಷ್ಯನಿಗೂ ಭೇದವಿಲ್ಲವೆಂದು ಶಾಸ್ತ್ರನಿಶ್ಚಯವಿರುವುದು ॥೧೯॥

ಅಯ್ಯಾ ಮುನಿಶ್ರೇಷ್ಠ ! ಅನುಜ, ಪುತ್ರ, ಗುರುವಿಗೆ ಅಭಿಮತನಾದ ಶಿಷ್ಯ, ಈ ಮೂರು ಜನರೂ ಧರ್ಮತಃ ಸಮಾನರೆಂದು ತಿಳಿಯುವ್ಲಡಬೇಕು ॥೨೦॥

ಅದರಲ್ಲಿಯೂ, ಯಾವ ಶಿಷ್ಯನು ಗುಣಾಧಿಕನಾಗಿರುವನೋ, ಅವನು ಪುತ್ರನಿಗಿಂತ ಅಧಿಕನೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವನು. ಅದುಕಾರಣ, ಅಯ್ಯಾ ಮುನಿಯೆ' ನಾನು ನಿನಗೆ ಶಿಷ್ಯನಾಗುವೆನು. ಹೀಗೆಂದು ಹೇಳಿ, ಶ್ರೀಹರಿಯು ಅಂತರ್ಧಾನಹೊಂದಿದನು ॥೨೧॥

ಅದುಕಾರಣ, ಎಲೌ ಪಾರ್ವತಿ ! ಶ್ರೀರಾಮನು, ವಿಶ್ವಾಮಿತ್ರನಿಗೆ ಶಿಷ್ಯತ್ವವನ್ನು ಸ್ವೀಕರಿಸಿ, ಪುತ್ರನಂತೆಯೇ ಪ್ರೀತಿಯನ್ನುಂಟುಮಾಡಿ, ಮಂತ್ರಗ್ರಾಮವನ್ನು ಸ್ವೀಕರಿಸಿದನು ॥೨೨॥

ಹೀಗೆ ಈ ರಾಮಲಕ್ಷ್ಮಣರ ಸಂಪರ್ಕದಿಂದ, ಶ್ರೀ ವಿಶ್ವಾಮಿತ್ರನು, ರಾತ್ರಿಯಲ್ಲಿ ಸೂರ್ಯ ಕಿರಣ ಸಂಪರ್ಕದಿಂದ ಜ್ವಲಿಸುವ ಅಗ್ನಿಯಂತೆ, ತೇಜಸ್ಸಿನಿಂದ ವಿಶೇಷವಾಗಿ ಜ್ವಲಿಸುತಿದ್ದನು ॥

ತತಲುತ್ತೀರ್ಯ ಗಙ್ಗಾಂ ತೇ ತದೈಕಂ ವನಮಾಗಮನ್ ।
ಸ ವನಂ ಘೋರಸಙ್ಕಾಶಂ ದೃಷ್ಟ್ವಾ ನರವರಾತ್ಮಜಃ ।
ಅವಿಪ್ರಹತಮೈಕ್ಷ್ವಾಕಃ ಪಪ್ರಚ್ಛ ಮುನಿಪುಙ್ಗವಮ್ ॥೨೪॥
ಸಿಂಹವ್ಯಾಘ್ರವರಾಹೈಶ್ಚ ವಾರಣೈಶ್ಚೋಪಶೋಭಿತಮ್ ।
ಸಙ್ಕೀರ್ಣಂ ಬದರೀಭಿಶ್ಚ ಕಿಂ ಸ್ವಿತದ್ದಾರುಣಂ ವನಮ್ ॥೨೫॥
ತಮುವಾಚ ಮಹಾತೇಜಾಃ ವಿಶ್ವಾಮಿತ್ರೋ ಮಹಾಮುನಿಃ ॥೨೬॥
ತಾಟಕಾ ನಾಮ ಭದ್ರಂ ತೇ ಭಾರ್ಯಾ ಸುನ್ದಸ್ಯ ಧೀಮತಃ ।
ಮಾರೀಚೋ ರಾಕ್ಷಸಃ ಪುತ್ರೋ ಯಸ್ಯಾಃ ಶಕ್ರಪರಾಕ್ರಮಃ ॥೨೭॥
ಬಲಂ ನಾಗಸಹಸ್ರಸ್ಯ ಧಾರಯನ್ತ್ಯೇ ತದಾ ಹ್ಯಭೂತ್ ।
ದೇಶಮುತ್ಸಾದಯತ್ಯೇನಂ ಅಗಸ್ತ್ಯಚರಿತಂ ಶುಭಮ್ ॥೨೮॥
ಏನಾಂ ರಾಘವ ದುರ್ವೃತ್ತಾಂ ಯಕ್ಷೀಂ ಪರಮದಾರುಣಾಮ್ ।
ಗೋಬ್ರಾಹ್ಮಣಹಿತಾರ್ಥಾಯ ಜಹಿ ದುಷ್ಟಪರಾಕ್ರಮಾಮ್ ॥೨೯॥
ಮುನೇರ್ವಚನಮಕ್ಲೀಬಂ ಶ್ರುತ್ವಾ ನರವರಾತ್ಮಜಃ ।
ರಾಘವಃ ಪ್ರಾಞ್ಜಲಿರ್ಭೂತ್ವಾ ಪ್ರತ್ಯುವಾಚ ದೃಢವ್ರತಃ ॥೩೦॥

ಆಬಳಿಕ, ಅವರುಗಳು ಗಂಗಾನದಿಯನ್ನು ದಾಟಿ, ಒಂದು ದೊಡ್ಡ ಅರಣ್ಯವನ್ನು ಸೇರಿದರು. ಆಗ ಆ ರಾಜಪುತ್ರನಾದ ಶ್ರೀರಾಮನು, ಅತಿ ಘೋರವಾಗಿ ಕಾಣುತ್ತಿರುವ ಜನಸಂಚಾರರಹಿತವಾದ ಆ ಅರಣ್ಯವನ್ನು ಕಂಡು, ಮಹಾತ್ಮನಾದ ವಿಶ್ವಾಮಿತ್ರನನ್ನು ಕುರಿತು 'ಸ್ವಾಮಿ! ಸಿಂಹ ವ್ಯಾಘ್ರ ವರಾಹ ಗಜಗಳಿಂದ ಶೋಭಿತವಾಗಿಯೂ, ಬದರೀವೃಕ್ಷಗಳಿಂದ ವ್ಯಾಪ್ತವಾಗಿಯೂ ಇರುವ ಈ ಅರಣ್ಯವಾವುದು?' ಎಂದು ಪ್ರಶ್ನೆಮಾಡಿದನು ॥೨೪-೨೫॥

ಈರೀತಿಯಾಗಿ ಪ್ರಶ್ನೆಮಾಡಿದ ಆ ಶ್ರೀರಾಮನನ್ನು ಕುರಿತು, ವಿಶ್ವಾಮಿತ್ರಮುನಿಯು ಹೀಗೆ ಹೇಳಿದನು:--'ವತ್ಸ! ತಾಟಕೆಯೆಂಬ ಮಹಾರಾಕ್ಷಸಿಯೊಬ್ಬಳಿರುವಳು. ಇವಳಿಂದ ನೀನು ಹೆದರದೆ ಕ್ಷೇಮವಾಗಿರು. ಇವಳು ಸುಂದನೆಂಬವನ ಪತ್ನಿಯು; ಇಂದ್ರತುಲ್ಯಪರಾಕ್ರಮನಾದ ಮಾರೀಚನೆಂಬ ರಾಕ್ಷಸನು, ಇವಳ ಮಗನಾಗಿರುವನು ॥೨೬-೨೭॥

ಇವಳು ಪೂರ್ವದಲ್ಲಿಯೇ ವರದಿಂದ ಒಂದುಸಾವಿರ ಆನೆಯ ಬಲವನ್ನು ಸಂಪಾದಿಸಿಕೊಂಡಿರುವಳು. ಅದುಕಾರಣ, ಪೂರ್ವದಲ್ಲಿ ಅಗಸ್ತ್ಯಮುನಿಯು ಸಂಚರಿಸುತಿದ್ದ ಈ ಪ್ರದೇಶವನ್ನು ಹಾಳುಮಾಡುತ್ತಿರುವಳು ॥೨೮॥

ಅಯ್ಯಾ! ರಾಮ! ದುರಾಚಾರಸಂಪನ್ನಳಾಗಿಯೂ ಮಹಾಕ್ರೂರಳಾಗಿಯೂ ಕ್ರೂರ ಪರಾಕ್ರಮಳಾಗಿಯೂ ಇರುವ ಈ ರಾಕ್ಷಸಿಯನ್ನು, ಗೋಬ್ರಾಹ್ಮಣಹಿತಾರ್ಥವಾಗಿ ನೀನು ಈಗ ಕೊಲ್ಲಬೇಕು ॥೨೯॥

ಈರೀತಿಯಾಗಿ ಹೇಳಿದ ವೀರ್ಯಯುಕ್ತವಾದ ಶ್ರೀ ವಿಶ್ವಾಮಿತ್ರಮುನಿಯ ಮಾತನ್ನು ಕೇಳಿ, ದೃಢವ್ರತನಾದ ದಶರಥ ಪುತ್ರನಾದ ಶ್ರೀರಾಮನು, ಕೈಮುಗಿದುಕೊಂಡು ಹೀಗೆ ಉತ್ತರ ಹೇಳಿದನು ॥೩೦॥

ಗೋಬ್ರಾಹ್ಮಣಹಿತಾರ್ಥಾಯ ದೇಶಸ್ಯಾಸ್ಯ ಹಿತಾಯ ಚ ।
ತವ ಚೈವಾಪ್ರಮೇಯಸ್ಯ ವಚನಂ ಕರ್ತುಮುದ್ಯತಃ ॥೩೧॥
ಏವಮುಕ್ತ್ವಾ ಧನುರ್ಮಧ್ಯೇ ಬಧ್ವಾ ಮುಷ್ಟಿಮರಿನ್ದಮಃ ।
ಜ್ಯಾಶಬ್ದಮಕರೋತ್ತೀವ್ರಂ ದಿಶಃ ಶಬ್ದೇನ ನಾದಯನ್ ॥೩೨॥
ತಂ ಶಬ್ದಮಭಿಸಿಧ್ಯಾಯ ರಾಕ್ಷಸೀ ಕ್ರೋಧಮೂರ್ಛಿತಾ ।
ಶ್ರುತ್ವಾ ಚಾಭ್ಯದ್ರವದ್ವೇಗಾತ್ ಯತಃ ಶಬ್ದೋ ವಿನಿಸ್ಸೃತಃ ॥೩೩॥
ಉದ್ಧೂನ್ವಾನಾ ರಜೋ ಘೋರಂ ತಾಟಕಾ ರಾಘವಾವುಭೌ ।
ರಜೋವರ್ಷೇಣ ಮಹತಾ ಮುಹೂರ್ತಂ ಸಾ ತ್ವವೋಹಯತ್ ॥೩೪॥
ತತೋ ಮಾಯಾಂ ಸಮಾಸಾಯ ಶಿಲಾವರ್ಷೇಣ ರಾಘವೌ ।
ಅವಾಕಿರತ್ ಸಾ ಮಹತಾ ತತಶ್ಚಕ್ರೋಧ ರಾಘವಃ ॥೩೫॥
ಶಿಲಾವರ್ಷಂ ಮಹತ್ ತಸ್ಯಾಃ ಶರವರ್ಷೇಣ ರಾಘವಃ ।
ಪ್ರತಿಹತ್ಯೋರಸಧಾವನ್ತ್ಯಾಃ ಕರೌ ಜಹ್ರೇ ಪತತ್ರಿಭಿಃ ॥೩೬॥
ತತಶ್ಛಿನ್ನಭುಜಾಂ ಶಾನ್ತಾಂ ಆಭ್ಯಾಶೇ ಪರಿಗರ್ಜತೀಮ್ ।
ಸೌಮಿತ್ರಿರಕರೋತ್ ಕ್ರೋಧಾತ್ ಹೃತಕರ್ಣಾಗ್ರನಾಸಿಕಾಮ್ ॥೩೭॥

ಸ್ವಾಮಿ! ಗೋಬ್ರಾಹ್ಮಣರಿಗೆ ಹಿತವಾದ ಕೆಲಸವನ್ನು ಮಾಡುವುದಕ್ಕೂ, ಈ ದೇಶಕ್ಕೆ ಕ್ಷೇಮವುಂಟಾಗುವುದಕ್ಕೂ, ಮುಖ್ಯವಾಗಿ ಮಹಾಮಹಿಮರಾದ ತಮ್ಮ ಅಜ್ಜಿಯನ್ನು ನೆರವೇರಿಸುವುದಕ್ಕೂ, ನಾನು ಸಿದ್ಧನಾಗಿಯೇ ಇರುವೆನು ॥೩೧॥

ಹೀಗೆಂದು ಹೇಳಿ, ಶತ್ರುಸಂಹಾರಕನಾದ ಶ್ರೀರಾಮನು, ಧನುಸ್ಸಿನ ಮಧ್ಯವನ್ನು ಮುಷ್ಟಿಯಿಂದ ಹಿಡಿದುಕೊಂಡು, ದಿಕ್ಕುಗಳೆಲ್ಲ ಧ್ವನಿಯಿಂದ ತುಂಬಿಹೋಗುವಂತೆ ತೀವ್ರವಾದ ಮೌರ್ವೀ ಧ್ವನಿಯನ್ನು ಮಾಡಿದನು ॥೩೨॥

ಆ ಶಬ್ದವನ್ನು ಕೇಳಿ, ಆ ರಾಕ್ಷಸಿಯು ಕ್ರೋಧದಿಂದ ಮೂರ್ಛಿತಳಾಗಿ, ಆ ಧ್ವನಿ ಬಂದ ಕಡೆಗೆ ಅತಿ ವೇಗದಿಂದ ಓಡಿಬಂದಳು ॥೩೩॥

ಆಗ ಆ ತಾಟಕೆಯು, ಮಹಾಘೋರವಾದ ಧೂಳಿಯನ್ನೆರಚುತ, ಅತ್ಯಧಿಕವಾದ ಆ ಧೂಳಿ ಪ್ರಸರಣೆಯಿಂದ ರಾಮಲಕ್ಷ್ಮಣರಿಬ್ಬರಿಗೂ ಒಂದು ಮುಹೂರ್ತಕಾಲ ದಿಕ್ಕುತೋರದಂತೆ ಮಾಡಿದಳು ॥೩೪॥

ಅನಂತರ, ಆ ತಾಟಕೆಯು, ಮಾಯೆಯನ್ನಾಶ್ರಯಿಸಿ, ಅಧಿಕವಾದ ಶಿಲಾವೃಷ್ಟಿಯಿಂದ ಆ ರಾಮಲಕ್ಷ್ಮಣರಿಬ್ಬರನ್ನೂ ಮುಚ್ಚಿಬಿಟ್ಟಳು. ಬಳಿಕ ಶ್ರೀರಾಮನು ಮಹಾಕ್ರೋಧಯುಕ್ತನಾದನು ॥೩೫॥

ಹೀಗೆ ಕ್ರೋಧಸಮನ್ವಿತನಾದ ಶ್ರೀರಾಮನು, ಅತ್ಯಧಿಕವಾದ ಆ ಶಿಲಾವೃಷ್ಟಿಯನ್ನು ತನ್ನ ಬಾಣವೃಷ್ಟಿಯಿಂದ ಕತ್ತರಿಸಿ, ಕನ್ನ ಹತ್ತಿರಕ್ಕೆ ಓಡಿಬರುತಿರುವ ಅವಳ ಕೈಯ್ಗಳನ್ನೂ ಕತ್ತರಿಸಿಬಿಟ್ಟನು ॥೩೬॥

ಅನಂತರ, ಕೈಯಿಳಕತ್ತರಿಸಲ್ಪಟ್ಟವಳಾಗಿ ಆಯಾಸಪಟ್ಟು ಹತ್ತಿರದಲ್ಲಿಯೇ ಗರ್ಜಿಸುತ್ತಿರುವ ಆ ತಾಟಕೆಯು ಕಿವಿ ಮೂಗುಗಳನ್ನು, ಲಕ್ಷ್ಮಣನು ಕೋಪದಿಂದ ಕತ್ತರಿಸಿಬಿಟ್ಟನು ॥೩೭॥

ಕಾಮರೂಪಧರಾ ಸದ್ಯಃ ಕೃತ್ವಾ ರೂಪಾಣ್ಯನೇಕಶಃ ।
ಅಕ್ಷಣವೇ ವಿನುಞ್ಜಾನ್ತೀ ಭೈರವಂ ವಿಚಚಾರ ಹ ॥೪೪॥

ತತಸ್ತಾವಕ್ಷವೇ೯ೀಣ ಕೀರ್ಯಮಾಣೌ ಸಮನ್ತತಃ ।
ದರ್ಶಯನ್ತೌ ಶಬ್ದವೇಧಿತ್ವಂ ತಾಂ ರುರೋಧ ಸ ಸಾಯಕೈಃ ॥೪೫॥

ಸಾ ರುದ್ಧಾ ಶರಜಾಲೇನ ಮಾಯಾಬಲಸಮನ್ವಿತಾ ।
ಅಭಿದುದ್ರಾವ ಕಾಕುತ್ಸ್ಥಂ ಲಕ್ಷ್ಮಣಂ ಚ ವಿನೇದುಷೀ ॥೪೦॥

ತಾವಾಪತನ್ತೀಂ ವೇಗೇನ ನಿಷ್ಕ್ರಾನ್ತಾಮಶನೀಮಿವ ।
ಶರೇಣೋರಸಿ ವಿವ್ಯಾಧ ಸಾ ಪಪಾತ ಮಮಾರ ಚ ॥೪೧॥

ತಾಂ ಹತಾಂ ಭೀಮಸಙ್ಕಾಶಾಂ ದೃಷ್ಟ್ವಾ ಸುರಪತಿಸ್ತದಾ ।
ಸಾಧುಸಾಧ್ವಿತಿ ಕಾಕುತ್ಸ್ಥಂ ಸುರಾಶ್ಚ ಸಮಪೂಜಯನ್ ॥೪೨॥

ಸಾಪಿ ರಾಮಹತಾ ಭೂತ್ವಾ ತ್ಯಕ್ತ್ವಾ ಸ್ವತನುಮುಜ್ಜ್ವಲಾ ।
ಪ್ರಯಯೌ ವೈಷ್ಣವಂ ಲೋಕಂ ರಾಮಂ ನತ್ವಾ ತದಾಜ್ಞಯಾ ॥೪೩॥

ಕಾಮರೂಪಧಾರಣೆಯಲ್ಲಿ ಸಮರ್ಥಳಾದ ಆ ತಾಟಕೆಯು, ಅಕ್ಷಣವೇ ನಾನಾವಿಧ ರೂಪಗಳನ್ನು ಮಾಡಿಕೊಂಡು, ಕಲ್ಲುಮಳೆಯನ್ನು ಸುರಿಯಿಸುತ, ಅತಿ ಭಯಂಕರವಾಗಿ ಸಂಚರಿಸುತಿದ್ದಳು ॥೪೪॥

ಬಳಿಕ, ಆ ರಾಮಲಕ್ಷ್ಮಣರಿಬ್ಬರೂ ಶಿಲಾವೃಷ್ಟಿಯಿಂದ ಸಂಪೂರ್ಣವಾಗಿ ಮುಚ್ಚಿಹೋದರು. ಆಗ ಶ್ರೀರಾಮನು ತಾಟಕೆಯಿರುವ ಸ್ಥಳವನ್ನೇ ಕಾಣಲಾರದವನಾಗಿ, ತನ್ನ ಶಬ್ದವೇಧಿ (ಶಬ್ದವನ್ನು ಕೇಳಿ ಅದರಿಂದಲೇ ಗುರಿಹಿಟ್ಟಶಕ್ಯವನು)ತ್ವಶಕ್ತಿಯನ್ನು ತೋರಿಸುತ. ಬಾಣವೃಷ್ಟಿಯಿಂದ ಆ ತಾಟಕೆಯನ್ನು ತಡೆದುಬಿಟ್ಟನು ॥೪೫॥

ಹೀಗೆ ಬಾಣಪಂಜರದಿಂದ ತಡೆಯಲ್ಪಟ್ಟವಳಾದ ಆ ತಾಟಕೆಯು, ಮಾಯಾಶಕ್ತಿಯುಕ್ತಳಾಗಿ, ಮಹಾಗರ್ಜನೆಮಾಡುತ, ರಾಮಲಕ್ಷ್ಮಣರಿಗೆದುರಾಗಿ ಓಡಿಬಂದಳು ॥೪೦॥

ಮೇಘದಿಂದ ಹೊರಟುಬಂದ ಸಿಡಿಲಿನಂತೆ ವೇಗವಾಗಿ ಓಡಿಬರುತಿರುವ ಆ ತಾಟಕೆಯನ್ನು, ಶ್ರೀರಾಮನು ಬಾಣದಿಂದ ಎದೆಯಲ್ಲಿ ಹೊಡೆದುಬಿಟ್ಟನು. ಆಗ ಅವಳು ಕೆಳಗೆ ಬಿದ್ದುಬಿಟ್ಟಳು; ಮರಣವನ್ನೂ ಹೊಂದಿಬಿಟ್ಟಳು ॥೪೧॥

ಹೀಗೆ ಮಹಾಭಯಂಕರಳಾದ ಆ ತಾಟಕೆಯು ಹತಳಾದುದನ್ನು ಕಂಡು, ಆಗ ಮಹೇಂದ್ರನೂ ದೇವತೆಗಳೂ ಶ್ರೀರಾಮನನ್ನು 'ಸಾಧು ಸಾಧು' ಎಂದು ವಿಶೇಷವಾಗಿ ಪೂಜಿಸಿದರು ॥೪೨॥

ಅವಳೂ ಕೂಡ, ಶ್ರೀರಾಮನಿಂದ ಹತಳಾಗಿ, ತನ್ನ ಆ ರಾಕ್ಷಸಶರೀರವನ್ನು ಬಿಟ್ಟುಬಿಟ್ಟು, ಮಹಾಪ್ರಕಾಶವಾನಳಾಗಿ, ಶ್ರೀರಾಮನನ್ನು ನಮಸ್ಕರಿಸಿ, ಅವನ ಆಜ್ಞೆಯನ್ನು ಪಡೆದು ವಿಷ್ಣುಲೋಕವನ್ನು ಕುರಿತು ಹೊರಟುಹೋದಳು ॥೪೩॥

ತತೋತಿಹೃಷ್ಟಃ ಪರಿರಭ್ಯ ರಾಮಂ
ಮೂರ್ಧಾನಮಾಘ್ರಾಯ ವಿಚಿನ್ತ್ಯ ಕಿಞ್ಚಿತ್ ।
ಸರ್ವಾಸ್ತ್ರಜಾಲಂ ಸರಹಸ್ಯಮನ್ತ್ರಂ
ಪ್ರೀತ್ಯಾಭಿರಾಮಾಯ ದದೌ ಮುನೀನ್ದ್ರಃ ॥೪೪॥

ಇತಿ ಶ್ರೀಬಾಲಕಾಣ್ಡೇ ತಾಟಕಾಸಂಹಾರಕಥನಂ ನಾಮ
ಅಷ್ಟಾದಶಃ ಸರ್ಗಃ.

ಅನಂತರ, ಮಹಾಹರ್ಷಯುಕ್ತನಾದ ಶ್ರೀ ವಿಶ್ವಾಮಿತ್ರಮುನಿಯು, ರಾಮನನ್ನು ಆಲಿಂಗಿಸಿಕೊಂಡು, ಅವನ ತಲೆಯನ್ನು ಆಘ್ರಾಣಿಸಿ, ಸ್ವಲ್ಪ ವಿಚಾರಮಾಡಿದವನಾಗಿ, ಸರ್ವಲೋಕ ಮನೋಹರನಾದ ಆ ರಾಮನಿಗೆ, ರಹಸ್ಯಮಂತ್ರಯುಕ್ತವಾದ ಸಮಸ್ತವಾದ ಜೃಂಭಕಾದ್ಯಸ್ತ್ರಜಾಲವನ್ನೂ ಪ್ರೀತಿಯಿಂದ ಉಪದೇಶಿಸಿಕೊಟ್ಟನು॥೪೪॥

ಇದು ಬಾಲಕಾಂಡದಲ್ಲಿ ತಾಟಕಾಸಂಹಾರಕಥನವೆಂಬ
ಹದಿನೆಂಟನೆಯ ಸರ್ಗವು.

ಅಥ ಶ್ರೀ ಬಾಲಕಾಂಡೇ ಏಕೋನವಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ತತಃ ಸಿದ್ಧಾಶ್ರಮಂ ಪ್ರಾಪ್ಯ ಸಿದ್ಧಚಾರಣಸೇವಿತಮ್ ।
ತತ್ರತ್ಯಾ ಮುನಯಃ ಸರ್ವೇ ವಿಶ್ವಾಮಿತ್ರಂ ತದಾರ್ಚಯನ್ ॥೧॥
ತಥೈವ ರಾಜಪುತ್ರಾಭ್ಯಾಂ ಅಕುರ್ವನ್ನತಿಥಿಕ್ರಿಯಾಮ್ ।
ಪೂಜಯಾನಮಾಸುರರ್ಘ್ಯಾದ್ಯೈಃ ನಿವೇಶ್ಯ ಪರಮಾಸನೇ ॥೨॥
ಅಥ ತೌ ದೇಶಕಾಲಜ್ಞೌ ರಾಜಪುತ್ರಾವರಿಂದಮೌ ।
ದೇಶೇ ಕಾಲೇ ಚ ವಾಕ್ಯಜ್ಞೌ ಅಬ್ರೂತಾಂ ಕೌಶಿಕಂ ವಚಃ ॥೩॥
ಭಗವನ್ ಕೋ ನ್ವಮಿಚ್ಛಾವೋ ಯಸ್ಮಿನ್ ಕಾಲೇ ನಿಶಾಚರೌ ।
ಸಂಶಿಕ್ಷಣೀಯೌ ತೌ ಬ್ರಹ್ಮನ್ನಾತಿವರ್ತೇತ ತತ್ ಕ್ಷಣಮ್ ॥೪॥
ಏವಂ ಬ್ರುವಾಣೌ ಕಾಕುತ್ಸ್ಥೌ ತ್ವರಮಾಣೌ ಯಯುತ್ಸಯಾ ।
ಸರ್ವೇ ತೇ ಮುನಯಃ ಪ್ರೀತಾಃ ಪ್ರಶಶಂಸುರ್ನೃಪಾತ್ಮಜೌ ॥೫॥
ಅದ್ಯಪ್ರಭೃತಿ ಷಡ್ರಾತ್ರಂ ರಕ್ಷೇತಂ ರಾಘವೌ ಯುವಾಮ್ ।
ದೀಕ್ಷಾಂ ಗತೋ ಹ್ಯೇಷ ಮುನಿಃ ಮೌನಿತ್ವಂ ಚ ಗಮಿಷ್ಯತಿ ॥೬॥

ಬಾಲಕಾಂಡದಲ್ಲಿ ಹತ್ತೊಂಬತ್ತನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಅನಂತರ ಸಿದ್ಧರಿಂದಲೂ ಚಾರಣರಿಂದಲೂ ಸೇವಿತವಾದ ಆ ಸಿದ್ಧಾಶ್ರಮಕ್ಕೆ ಬಂದ ವಿಶ್ವಾಮಿತ್ರಮುನಿಯನ್ನು ಅಲ್ಲಿದ್ದ ಸಮಸ್ತಮುನಿಗಳೂ ಅಗ ಪೂಜಿಸಿದರು ॥೧॥

ಅದರಂತೆಯೇ, ರಾಮಲಕ್ಷ್ಮಣರನ್ನೂ ದಿವ್ಯವಾದ ಆಸನದಲ್ಲಿ ಕುಳ್ಳಿರಿಸಿ, ಅವರುಗಳಿಗೂ ಅರ್ಘ್ಯಪಾದ್ಯಾದಿಗಳಿಂದ ಅತಿಥ್ಯವನ್ನು ಮಾಡಿದರು ॥೨॥

ಅಬಳಿಕ, ದೇಶಕಾಲಗಳನ್ನು ಒಲ್ಲವರಾಗಿಯೂ ಶತ್ರುಸಂಹಾರಕರಾಗಿಯೂ ಸರಿಯಾಗಿ ಮಾತನಾಡಲು ಬಲ್ಲವರಾಗಿಯೂ ಇರುವ ಆ ರಾಜಪುತ್ರರು, ಸರಿಯಾದ ದೇಶಕಾಲಗಳನ್ನು ನೋಡಿಕೊಂಡು, ವಿಶ್ವಾಮಿತ್ರರನ್ನು ಕುರಿತು 'ಪೂಜ್ಯರೆ! ಆ ರಾಕ್ಷಸರನ್ನು ನಾವು ಯಾವ ಸಮಯದಲ್ಲಿ ಶಿಕ್ಷಿಸಬೇಕೋ, ಆ ಕ್ಷಣವು ಅತಿಕ್ರಮಿಸದಂತೆ ಅದನ್ನು ತಾವು ನಮಗೆ ಆಜ್ಞಾಪಿಸಬೇಕು. ನಾವು ಆ ಸಮಯವನ್ನು ಕೇಳಿ ತಿಳಿದುಕೊಳ್ಳಲು ಇಚ್ಛಿಸುತ್ತಿರುವೆವು' ಎಂದು ಹೇಳಿದರು॥೩॥

ಹೀಗೆ ಯುದ್ಧಾಪೇಕ್ಷೆಯಿಂದ ತ್ವರೆಪಟ್ಟು ಪ್ರಾರ್ಥಿಸುತ್ತಿರುವ ಆ ರಾಮಲಕ್ಷ್ಮಣರನ್ನು ಕುರಿತು, ಆ ಸಮಸ್ತಮುನಿಗಳೂ ಪ್ರೀತಿಯಿಂದ ಹೊಗಳುತ ಹೀಗೆ ಹೇಳಿದರು ॥೪॥

ಅಯ್ಯಾ ರಾಮಲಕ್ಷ್ಮಣರಿರಾ! ಇಂದು ಮೊದಲುಗೊಂಡು ಆರು ದಿವಸದವರೆಗೆ ನೀವು ಕಾಪಾಡಿಕೊಂಡಿರಬೇಕು. ಈಗ ಈ ವಿಶ್ವಾಮಿತ್ರಮುನಿಯು ದೀಕ್ಷೆ ಮಾಡಿಕೊಂಡಿರುವನು; ಮೌನವ್ರತವನ್ನೂ ಅವಲಂಬಿಸುವನು ॥೫॥

ತೌ ಚ ತದ್ವಚನಂ ಶ್ರುತ್ವಾ ರಾಜಪುತ್ರೌ ಯಶಸ್ವಿನೌ ।
ಆಸಿದ್ರೌ ಷಡಹೋರಾತ್ರಂ ತಪೋವನಮರಕ್ಷತಾಮ್ ॥೬॥
ಪೂರ್ವಾಪರಂ ಚ ಚರತೋ ಮಾಯಯೈತೌ ಶಿಖಂ ಪರಿ ।
ಕ್ರೀಡನ್ತಾವಧ್ವರಂ ಯಾತೌ ಇತಿ ಶ್ರುತ್ಯರ್ಥಮಾಶ್ರಿತೌ ॥೮॥
ಉಪಾಸನಾಜ್ಞಾಕ್ರತುವಿರ್ಗಂ ಯತ್ತೌ ಪರಮಧನ್ವಿನೌ ।
ರರಕ್ಷತುರ್ಮುನಿವರಂ ವಿಶ್ವಾಮಿತ್ರಮನಿನ್ದಿತೌ ॥೯॥
ಪ್ರಜಜ್ವಾಲ ತತೋ ವೇದಿಃ ಸೋಪಾಧ್ಯಾಯಪುರೋಹಿತಾ ।
ಮನ್ತ್ರವಚ್ಚ ಯಥಾನ್ಯಾಯಂ ಯಜ್ಞೋಽಸೌ ಸಮ್ಪ್ರವರ್ತತೇ ॥೧೦॥
ತದಾಕಾಶೇ ಮಹಾ ಶಬ್ದಃ ಪ್ರಾದುರಾಸೀದ್ಭಯಾನಕಃ ।
ಅವಾರ್ಯ ಗಗನಂ ಮೇಘೌ ಯಥಾ ಪ್ರಾವೃಷಿ ಸಿರ್ಗತೌ ॥೧೧॥
ಮಾರೀಚಶ್ಚ ಸುಬಾಹುಶ್ಚ ತಯೋರನುಚರಾಶ್ಚ ಯೇ ।
ತಥಾ ಮಾಯಾಂ ಪ್ರಕುರ್ವಾಣೌ ರಾಕ್ಷಸಾವಭ್ಯಧಾವತಾಮ್ ॥೧೨॥
ಉಭೌ ಕಕ್ರಸವೌ ಯುದ್ಧೇ ಹಸ್ತಿಲಕ್ಷಬಲಾನ್ವಿತೌ ।
ಅಕ್ಷೌಹಿಣೀಪರಿವೃತೌ ಅವಧ್ಯೌ ವರದಾನತಃ ॥೧೩॥

ಹೀಗೆ ಆ ಮುನಿಗಳು ಹೇಳಿದ ಮಾತನ್ನು ಕೇಳಿ, ಯಶಶ್ಶಾಲಿಗಳಾದ ಆ ರಾಜಪುತ್ರರು, ಆರು ದಿವಸ ನಿದ್ರೆಯನ್ನೂ ಬಿಟ್ಟು ತಪೋವನವನ್ನು ಸಂರಕ್ಷಿಸಿದರು ॥೭॥

'ಕಪಟಬಾಲಕರಾದ ಇವರಿಬ್ಬರೂ, ಅಲ್ಲಲ್ಲಿ ಸಂಚರಿಸುತ, ವಿಹಾರಶೀಲರಾಗಿ, ಯಜ್ಞಶಾಲೆಗೆ ಬಂದಿರುವರು.' ಎಂದು ಅಲ್ಲಿನ ಜನರು ಕರ್ಣಾಕರ್ಣಿಕೆಯಾಗಿ ಕೇಳಿದರು. (ಈ ಶ್ಲೋಕದಲ್ಲಿ ಸ್ವಲ್ಪ ಸಂಶಯವಿರುವಂತೆ ಕಾಣುತ್ತದೆ. ಆದರೆ ಮಾತೃಕಾಪುಸ್ತಕಗಳಲ್ಲೆಲ್ಲ ಏಕರೀತಿಯಾಗಿದ್ದಕಾರಣ, ಹಾಗೆಯೇ ಇಲ್ಲಿ ಸೇರಿಸಿದೆ) ॥೮॥

ಮಹಾ ಧನುರ್ಧರರಾದ ಪ್ರಶಸ್ತತಮರಾದ ಆ ವೀರರು, ವಿಶ್ವಾಮಿತ್ರಮುನಿಯನ್ನು ಸೇವಿಸುತ, ಜಾಗರೂಕರಾಗಿ ಆ ಮುನಿಯನ್ನು ಕಾಪಾಡಿಕೊಂಡಿದ್ದರು ॥೯॥

ಅನಂತರ, ಉಪಾಧ್ಯಾಯರೊಡನೆಯೂ ಪುರೋಹಿತರೊಡನೆಯೂ ಯುಕ್ತವಾಗಿರುವ ಆ ಯಜ್ಞವೇದಿಕೆಯಲ್ಲಿ, ಯಜ್ಞಪುರುಷನು ಜ್ವಲಿಸಲುಪಕ್ರಮಿಸಿದನು. ಮಂತ್ರವತ್ತಾಗಿಯೂ ನ್ಯಾಯಾನುಸಾರವಾಗಿಯೂ ಆ ಯಜ್ಞವು ಪ್ರವರ್ತಿಸುತ್ತಿದ್ದಿತು. ಹೀಗೆ ಯಜ್ಞವು ನಡೆಯುತ್ತಿರುವಾಗ, ಅಂತರಿಕ್ಷದಲ್ಲಿ, ಅತಿ ಭಯಂಕರವಾದ ದೊಡ್ಡ ಶಬ್ದವು ಪ್ರಾದುರ್ಭವಿಸಿತು ॥೧೦॥

ಅನಂತರ, ವರ್ಷಾಕಾಲದಲ್ಲಿ ದೊಡ್ಡವೆರಡು ಮೇಘಗಳು ಅಂತರಿಕ್ಷಪ್ರದೇಶದೊಳಗೆ ಕಾಣಿಸಿಕೊಳ್ಳುವಂತೆ, ಮಾರೀಚ ಸುಬಾಹುಗಳೆಂಬ ಇಬ್ಬರು ರಾಕ್ಷಸರು ಅಂತರಿಕ್ಷವನ್ನೆಲ್ಲ ಆವರಿಸುತ ಹೊರಟರು. ಅವರ ಹಿಂದೆಯೇ, ಅವರ ಅನುಚರರೂ ಅಸಂಖ್ಯಾಕವಾಗಿ ಹೊರಟರು. ಆಗ ಆ ರಾಕ್ಷಸರಿಬ್ಬರೂ ನಾನಾವಿಧವಾಗಿ ಮಾಯೆಯನ್ನು ತೋರಿಸುತ ಯಜ್ಞಶಾಲೆಗೆದುರಾಗಿ ಓಡಿಬಂದರು. ಅವರಿಬ್ಬರೂ ಯುದ್ಧದಲ್ಲಿ ಮಹೇಂದ್ರನಿಗೆ ಸವಾಸರಾದವರು. ಒಬ್ಬೊಬ್ಬರು ಒಂದೊಂದು ಲಕ್ಷ ಆನೆಗಳ ಬಲವುಳ್ಳವರು. ಅಕ್ಷೌಹಿಣೀ ಸೈನ್ಯವು ಅವರಿಗೆ ಪರಿವಾರವಾಗಿರುವುದು. ಬ್ರಹ್ಮನ ವರದಾನದಿಂದ ಅವರಿಬ್ಬರೂ ಅವಧ್ಯರಾಗಿದ್ದರು ॥೧೧-೧೩॥

ತಾವಾಪತನ್ತೌ ಸಹಸಾ ದೃಷ್ಟ್ವಾ ರಾಜೀವಲೋಚನಃ ।
ಜ್ಯಾಶಬ್ದಮಕರೋತ್ ತೀವ್ರಂ ಸಹಸಾಶನಿಸನ್ನಿಭಮ್ ॥೧೪॥

ಸಜ್ಜಂ ಹ್ಯಾಸ್ತ್ರಂ ತತೋ ರಾಮೋ ದಿವ್ಯಮಾಗ್ನೇಯಮದ್ಭುತಮ್ ।
ಸುಬಾಹೂರಸಿ ಚಿಕ್ಷೇಪ ಸ ವಿದ್ಧಃ ಪ್ರಾಪತದ್ಭುವಿ ॥೧೫॥

ಮಾನವಂ ಪರಮೋದಾರಂ ಅಸ್ತ್ರಂ ಪರಮಭಾಸ್ವರಮ್ ।
ಚಿಕ್ಷೇಪ ಸಮರೇ ಕ್ರುದ್ಧೋ ಮಾರೀಚೋರಸಿ ರಾಘವಃ ॥೧೬॥

ಸ ತೇನ ಪರಮಾಸ್ತ್ರೇಣ ಮಾನವೇನ ಸಮಾಹತಃ ।
ಸಮ್ಪೂರ್ಣಂ ಯೋಜನಶತಂ ಕ್ಷಿಪ್ತಃ ಸಾಗರಸಮ್ಪ್ಲವೇ ॥೧೭॥

ಹತ್ವಾ ಸುಬಾಹುಂ ದುಶ್ಶೀಲಂ ಮಾರೀಚಂ ನಾಹನತ್ ಪ್ರಭುಃ ।
ಸರ್ವಜ್ಞಃ ಪರಮಾತ್ಮಾ ಹಿ ಭಾವಿಕಾರ್ಯಾನ್ವವೇಕ್ಷ್ಯಯಾ ॥೧೮॥

ಶೇಷಾಂ ವಾಯವ್ಯಮಾದಾಯ ನಿಜಘಾನ ಮಹಾಯಶಾಃ ।
ಪುಷ್ಪವೃಷ್ಟಿಶ್ಚ ಮಹತೀ ದೇವೋತ್ಸಲ್ಪಾ ತದಾಪತತ್ ॥೧೯॥

ಅಥ ಯಜ್ಞೇ ಸಮಾಪ್ತೇ ತು ವಿಶ್ವಾಮಿತ್ರೋ ಮಹಾಮುನಿಃ ।
ಶಿರಸ್ಯಘ್ರಾಯ ಚಾಲಿಙ್ಗ್ಯ ಕಾಕುತ್ಸ್ಥಮಿದಮಬ್ರವೀತ್ ॥೨೦॥

ಹೀಗೆ ಜಾಗ್ರತೆಯಾಗಿ ಬರುತ್ತಿರುವ ಆ ರಾಕ್ಷಸರನ್ನು ಕಂಡು, ಕಮಲನಯನನಾದ ಶ್ರೀರಾಮನು, ಸಾವಿರ ಸಿಡಿಲಿಗೆ ಸಮಾನವಾಗಿ ತೀವ್ರವಾದ ಮೌರ್ವೀಧ್ವನಿಯನ್ನು ಮಾಡಿದನು॥

ಬಳಿಕ, ಶ್ರೀರಾಮನು, ಅತ್ಯದ್ಭುತವಾದ ದಿವ್ಯವಾದ ಆಗ್ನೇಯಾಸ್ತ್ರವನ್ನು ತೆಗೆದು ಕೊಂಡು, ಸುಬಾಹುವಿನ ಎದೆಯಲ್ಲಿ ಬಿಟ್ಟನು. ಅವನು ಅದರಿಂದ ಹೊಡೆಯಲ್ಪಟ್ಟವನಾಗಿ ಭೂಮಿಯಲ್ಲಿ ಬಿದ್ದುಬಿಟ್ಟನು ॥೧೫॥

ಅನಂತರ, ಯುದ್ಧದಲ್ಲಿ ಕುಪಿತನಾದ ರಾಮನು, ಮಹಾಪ್ರಕಾಶವಾಗಿ ಅತ್ಯುತ್ತಮವಾದ ಮಾನವಾಸ್ತ್ರವನ್ನು ಮಾರೀಚನ ಎದೆಯಲ್ಲಿ ಬಿಟ್ಟನು ॥೧೬॥

ದಿವ್ಯವಾದ ಆ ಮಾನವಾಸ್ತ್ರದಿಂದ ಹೊಡೆಯಲ್ಪಟ್ಟ ಆ ಮಾರೀಚನು, ಸಂಪೂರ್ಣವಾಗಿ ನೂರುಗಾವುದದೂರ ಸಮುದ್ರಪ್ರವಾಹದಲ್ಲಿ ಹೋಗಿ ಬಿದ್ದನು ॥೧೭॥

ಸರ್ವಜ್ಞನಾದ–ಪರಮಾತ್ಮನ ಅವತಾರರೂಪನಾದ–ಶ್ರೀರಾಮನು, ದುಷ್ಟನಾದ ಸುಬಾಹು ವನ್ನು ಕೊಂದು, ಮುಂದಣ ಕೆಲಸದಲ್ಲಿ ದೃಷ್ಟಿಯಿಂದ ಮಾರೀಚನನ್ನು ಕೊಲ್ಲದೆ ಬಿಟ್ಟುಬಿಟ್ಟನು॥

ಮಹಾಯಶಸ್ವಿಯಾದ ರಾಮಚಂದ್ರನು, ವಾಯವ್ಯಾಸ್ತ್ರವನ್ನು ತೆಗೆದುಕೊಂಡು, ಉಳಿದ ವರನ್ನೆಲ್ಲ ಅದರಿಂದ ಹೊಡೆದುಬಿಟ್ಟನು. ಆಗ, ದೇವತೆಗಳಿಂದ ವರ್ಷಿಸಲ್ಪಟ್ಟ ಮಹತ್ತಾದ ಪುಷ್ಪವೃಷ್ಟಿಯೂ ಸುರಿಯಿತು ॥೧೯॥

ಅನಂತರದಲ್ಲಿ, ಆ ಯಜ್ಞವು ಮುಗಿಯಲಾಗಿ, ವಿಶ್ವಾಮಿತ್ರಮಹರ್ಷಿಯು, ರಾಮನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ–ಆಲಿಂಗಿಸಿಕೊಂಡು–ಈ ಮಾತನ್ನು ಹೇಳಿದನು ॥೨೦॥

ಕೃತಾರ್ಥೋಸ್ಮಿ ಮಹಾಬಾಹೋ ಕೃತಂ ಗುರುವಚಸ್ತ್ವಯಾ ।
ಸಿದ್ಧಾಶ್ರಮಮಿದಂ ಸತ್ಯಂ ಕೃತಂ ರಾಮ ಮಹಾಯಶಃ ॥೨೧॥
ಇತ್ಯುಕ್ತ್ವಾ ಮುನಿಭಿಃ ಸಾಕಂ ರಾಘವಂ ಕಾಶಿಕಾತ್ಮಜಃ ।
ಸರ್ವೈರತಿಥಿಸತ್ಕಾರೈಃ ಪೂಜಯಾಮಾಸ ಭಕ್ತಿತಃ ॥೨೨॥
ತತಃ ಪರೇದ್ಯುಃ ಸರ್ವೇಪಿ ಸ್ನಾತ್ವಾ ಹುತಹುತಾಶನಾಃ ।
ರಾಮಂ ಹೃದಿ ಸಮಭ್ಯರ್ಚ್ಯ ಮಾನಸೈರುಪಚಾರಕೈಃ ॥೨೩॥
ತತೋ ಬಾಹ್ಯೇಪಿ ಷಟ್ಕ್ರೋಶಾಲಗ್ರಾಮಶಿಲಾಸ್ವಲಮ್ ।
ರಾಮಮೂರ್ತಿಷು ರಾಮಸ್ಯ ಪೂಜಾಂ ಕೃತ್ವಾ ಯಥಾವಿಧಿ ॥೨೪॥
ಯಜ್ಞಾರ್ಥಮಾಗತಾಶ್ಚೈವ ನಾನಾದೇಶನಿವಾಸಿನಃ ।
ಸಿದ್ಧಾಶ್ರಮಸ್ಥಾ ಋಷಯಃ ವೇದವೇದಾಂತಪಾರಗಾಃ ।
ರಾಮಭಕ್ತಿಪರಾಃ ಸರ್ವೇ ವಿಶ್ವಾಮಿತ್ರಮಥಾಬ್ರುವ ॥೨೫॥
ಮುನೇ ಕೌಶಿಕ ಭದ್ರಂ ತೇ ವದ ರಾಮಾರ್ಚನಂ ಹೃದಿ ।
ತತ್ಸಾಲಗ್ರಾಮಪೂಜಾಂ ಚ ಪೂಜಾತೀರ್ಥಾದಿವೈಭವಮ್ ॥೨೬॥

ವಿಶ್ವಾಮಿತ್ರ ಉವಾಚ.

ಅಹೋ ಧನ್ಯತಮಾ ಯೂಯಂ ಅಹಂ ಚ ಬ್ರಹ್ಮವಾದಿನಃ ।
ರಾಮಾರ್ಚನವಿಧೌ ಯಸ್ಮಾತ್ ಚೋದಿತೋ ರಾಮಸನ್ನಿಧೌ ॥೨೭॥

ಎಲೈ ಮಹಾಬಾಹುವಾದ ರಾಮನೆ! ನಾನು ಈಗ ಕೃತಕೃತ್ಯನಾದೆನು. ನೀನೂ ಈಗ ಗುರುವಾಕ್ಯವನ್ನು ನೆರವೇರಿಸಿದವನಾದೆ. ಎಲೈ ಮಹಾಯಶಸ್ವಿಯೆ! ಈಗ ಈ ಸಿದ್ಧಾಶ್ರಮವು ನಿನ್ನಿಂದ ಯಥಾರ್ಥವಾಗಿ ಮಾಡಲ್ಪಟ್ಟಿತು ॥೨೧॥

ಹೀಗೆಂದು ಹೇಳಿ, ವಿಶ್ವಾಮಿತ್ರ ಮುನಿಯು ಇತರ ಮುನಿಗಳೊಡಗೂಡಿದವನಾಗಿ, ಭಕ್ತಿ ಪುರಸ್ಸರವಾಗಿ, ಶ್ರೀರಾಮನನ್ನು ಸಮಸ್ತವಾದ ಅತಿಥಿಸತ್ಕಾರಗಳಿಂದಲೂ ಪೂಜಿಸಿದನು ॥೨೨॥

ಆ ಮಾರನೆಯ ದಿವಸ, ವೇದವೇದಾಂತ್ತಪಾರಗರಾಗಿ ರಾಮಭಕ್ತಿಯುಕ್ತರಾದ ಆ ಸಿದ್ಧಾಶ್ರಮದಲ್ಲಿದ್ದ ಮುನಿಗಳೂ, ನಾನಾದೇಶಗಳಲ್ಲಿದ್ದು ಆ ಯಜ್ಞಕ್ಕೋಸ್ಕರವಾಗಿ ಬಂದಿದ್ದ ಮುನಿಗಳೂ ಕೂಡ, ಶ್ರೀರಾಮಚಂದ್ರನನ್ನು ಹೃದಯದಲ್ಲಿ ಮಾನಸೋಪಚಾರಗಳಿಂದ ಪೂಜಿಸಿ, ಅನಂತರ ಹೊರಗೂಕೂಡ ಷಟ್ಕ್ರೋಶಾಲಗ್ರಾಮಗಳೆಂಬ ಶ್ರೀಸೀತಾರಾಮಮೂರ್ತಿಗಳಲ್ಲಿಯಥಾವಿಧಿಯಾಗಿ ಅರ್ಚನೆಮಾಡಿ, ಬಳಿಕ ವಿಶ್ವಾಮಿತ್ರಮುನಿಯನ್ನು ಕುರಿತು ' ಎಲೈ ಮಹರ್ಷಿಗಳೆ! ಶ್ರೀರಾಮನ ಮಾನಸಪೂಜಾಕ್ರಮವನ್ನೂ, ಅವನ ಸಾಲಗ್ರಾಮ ಪೂಜಾಕ್ರಮವನ್ನೂ, ಪೂಜೆ ತೀರ್ಥ ಮೊದಲಾದುವುಗಳ ಮಹಿಮೆಯನ್ನೂ ಕೂಡ, ತಾವು ದಯವಿಟ್ಟು ನಮಗೆ ವಿಸರಿಸಿ ಹೇಳಬೇಕು' ಎಂಬುದಾಗಿ ಪ್ರಾರ್ಥಿಸಿಕೊಂಡರು ॥೨೩—೨೬॥

ಶ್ರೀ ವಿಶ್ವಾಮಿತ್ರಮುನಿಯು ಹೇಳಿದುದೇನೆಂದರೆ :—

ಎಲೈ ಬ್ರಹ್ಮವಾದಿಗಳಾದ ಮಹರ್ಷಿಗಳಿರಾ! ಶ್ರೀರಾಮನ ಸನ್ನಿಧಿಯಲ್ಲಿಯೇ ಅವನ ಪೂಜಾಕ್ರಮವನ್ನು ಕುರಿತು ನೀವು ನನ್ನನ್ನು ಪ್ರಶ್ನೆ ಮಾಡಿದುದರಿಂದ, ಈಗ ನೀವೂ ನಾನೂ ಅತ್ಯಂತ ಧನ್ಯರಾದೆವು ॥೨೭॥

ಶ್ರೀರಾಮಂ ಕರುಣಾಸಿನ್ಧುಂ ಸೀತಯಾ ಸಹಿತಂ ವಿಭುಮ್ ।
ಯೋಚರ್ಚಯನ್ತಿ ಹೃದಯೇಬ್ಜೇ ತೇ ಹಿ ಪುಣ್ಯತಮಾದ್ವಿಜಾಃ ॥೨೪॥
ಯೋಷಾಂ ಹೃದಿಸ್ಥಃ ಶ್ರೀರಾಮಃ ಸೀತಯಾ ಸಹ ರಾಘವಃ ।
ದೀರ್ಘಬಾಹುರ್ವಿಶಾಲಾಕ್ಷಃ ಕೃತಕೃತ್ಯಾ ಹಿ ತೇ ದ್ವಿಜಾಃ ॥೨೫॥
ಶ್ರೀರಾಮೋಪಾಸನಂ ವಿಪ್ರಾಃ ಬಹುಧಾ ಶಾಸ್ತ್ರಚೋದಿತಮ್ ।
ತತ್ಪ್ರಾಧಿಕಾರಿಣಂ ಚಾದೌ ತತ್ಸ್ವರೂಪಂ ಬ್ರುವೇ ಸ್ಫುಟಮ್ ॥೨೬॥
ವಿರಕ್ತಸ್ಯೈವ ತತ್ ಸಿಧ್ಯೇತ್ ನಾನ್ಯಥಾ ತದುಪಾಸನಮ್ ।
ಧ್ಯಾನಂ ತಚ್ಚ ನ ಸಂಸಿಧ್ಯೇತ್ ಸ್ವಮನೋನಿಗ್ರಹಂ ವಿನಾ ॥೨೭॥
ನ ಸಮ್ಭವತಿ ಸೋಪ್ಯಸ್ಯ ವಿನಾ ಸ್ವೇನ್ದ್ರಿಯನಿಗ್ರಹಮ್ ।
ದೋಷದೃಷ್ಟ್ಯಮತಃ ಸೋಪಿ ಶುದ್ಧಚಿತ್ತಸ್ಯ ಸಾ ಭವೇತ್ ॥೨೮॥
ಯಃ ಸತ್ಸಙ್ಗೇನ ಸಮ್ಪ್ರಾಪ್ತೇ ಪ್ರೇಮಲಕ್ಷಣಭಕ್ತಿರ್ಮಾ ।
ಭಾರ್ಯಾದಾವಿವ ರಾಮೇ ಸ್ಯಾತ್ ಸುಸುಖಂ ಸಿಧ್ಯತಿ ತಸ್ಯ ಸಾ ॥೨೯॥
ಅಹಂಗ್ರಹಪ್ರತೀಕಾಖ್ಯಭೇದಾತ್ ತದ್ದ್ವಿವಿಧಂ ತಯೋಃ ।
ಸೋಹಂಭಾವನರೂಪ್ಯೇಕಂ ಅನ್ಯತ್ ಸ್ವಾಮ್ಯಾದಿಭೇದವತ್ ॥೩೪॥

ಕೃಪಾಸಾಗರನಾದ ಶ್ರೀರಾಮಚಂದ್ರವಿಭುವನ್ನು ಯಾರು ಹೃದಯದಲ್ಲಿ ಪೂಜಿಸುವರೋ, ಅಯ್ಯಾ! ಬ್ರಾಹ್ಮಣಶ್ರೇಷ್ಠರೆ! ಅವರು ಅತ್ಯಂತ ಪುಣ್ಯಾತ್ಮರೆಂದು ತಿಳಿಯಲ್ಪಡಬೇಕು ॥೨೪॥

ಶ್ರೀರಾಮನ ಉಪಾಸನಾಕ್ರಮವು, ಶಾಸ್ತ್ರಗಳಲ್ಲಿ ನಾನಾವಿಧವಾಗಿ ಉಕ್ತವಾಗಿರುವುದು ಅದರ ಸ್ವರೂಪವನ್ನೂ, ಮೊದಲು ಆ ಪೂಜೆಯಲ್ಲಿ ಅಧಿಕಾರಿಯಾದವನನ್ನೂ ಸ್ಪಷ್ಟವಾಗಿ ಹೇಳುವೆನು ॥೨೬॥

ಆ ಶ್ರೀರಾಮನ ಉಪಾಸನೆಯು, ವಿರಕ್ತನಾದವನಿಗೆ ಮಾತ್ರವೇ ಸಿದ್ಧಿಸುವುದು ; ಅನ್ಯಥಾ ಸಿದ್ಧಿಸಲಾರದು. ಆ ಧ್ಯಾನವೂಕೂಡ, ಮನೋನಿಗ್ರಹವಿಲ್ಲದೆ ಸಿದ್ಧಿಸಲಾರದು ಆ ಮನೋನಿಗ್ರಹವಾದರೋ,—ಇಂದ್ರಿಯನಿಗ್ರಹವಿಲ್ಲದೆ ಸಿದ್ಧಿಸಲಾರದು. ಈ ಇಂದ್ರಿಯನಿಗ್ರಹವೆಂಬುದು, ವಿಷಯಗಳಲ್ಲಿ ಸರ್ವದಾ ದೋಷವನ್ನು ಭಾವಿಸತಕ್ಕವನಿಗೇ ಸಿದ್ಧಿಸುವುದು. ಆ ದೋಷಭಾವನೆಯು, ಚಿತ್ತಶುದ್ಧಿಯುಳ್ಳವನಿಗೇ ಸಿದ್ಧಿಸುವುದು ಯಾವ ಪುರುಷನು, ಪ್ರಥಮತಃ ಸತ್ಸಹವಾಸವನ್ನು ಸಂಪಾದಿಸಿ, ಅದರ ಮಹಿಮೆಯಿಂದ ಶ್ರೀರಾಮನ ಸ್ವರೂಪವನ್ನು ತಿಳಿದು, ಬಳಿಕ ಅವನಲ್ಲಿ ಪತ್ನೀಪುತ್ರಾದಿಗಳಲ್ಲಿಡುವಂತೆ ಪ್ರೇಮರೂಪವಾದ ಭಕ್ತಿಯುಳ್ಳವನಾಗುವನೋ, ಅಂಥವನಿಗೆ ಈ ವಿಷಯದೋಷಭಾವನೆಯು ಸುಖವಾಗಿ ಸಿದ್ಧಿಸುವುದು ॥೨೭—೨೩॥

ಹೀಗೆ ಅಧಿಕಾರಿಲಕ್ಷಣಗೊತ್ತಾಯ್ತು ಸ್ವೇ ! ಇನ್ನು ಪೂಜಾಲಕ್ಷಣವನ್ನು ಕೇಳುವವರಾಗಿರಿ. ಅಹಂಗ್ರಹಪೂಜೆಯೆಂದೂ, ಪ್ರತೀಕಪೂಜೆಯೆಂದೂ, ಪೂಜೆಯೆರಡು ವಿಧವಾಗಿರುವುದು. ಸೋಹಂಭಾವ(ಅವನೇ ನಾನು ಎಂಬ ಭಾವನೆ)ದಿಂದ ಪೂಜಿಸುವುದೇ ಪ್ರಥಮವಾದುದು; ಅವನು ಸ್ವಾಮಿಯೆಂದೂ ತಾನು ಭೃತ್ಯನೆಂದೂ ತಿಳಿದುಕೊಂಡು ಮಾಡುವ ಪೂಜೆಯೇ, ದ್ವಿತೀಯವಾದ ಪ್ರತೀಕಪೂಜೆಯೆನ್ನಿಸುವುದು ॥೩೪॥

ತತಾದ್ಯಂ ನಿರ್ಗುಣಂ ಪ್ರಾಹುಃ ಪ್ರತೀಕಂ ಸಗುಣಂ ಬುಧಾಃ ।
ಸ್ವಸ್ವಾಧಿಕಾರತಃ ಕಾರ್ಯಂ ಅತ್ರೈವಂ ಗುರುಬೋಧಿತೈಃ ॥೩೫॥
ತಾರಪ್ರತೀಕನಿತ್ಯಾದ್ಯೈಃ ವಿಧೇಯೈರ್ಲಕ್ಷಿತಂ ಗುಣೈಃ ।
ಅಸೂಲಾದಿನಿಷೇಧೈಶ್ಚ ರಾಮೋಽಹಮಿತಿ ಚಿನ್ತಯೇತ್ ॥೩೬॥
ನಿರ್ಗುಣೋಪಾಸನಮಿದಂ ವೇದಾನ್ತೈರುಕ್ತಮಾಮೃತೇಃ ।
ಕುರ್ವತಾ ರಾಮೋ ಭವೇದನ್ತಕಾಲೇ ತಸ್ಯೋಪದೇಶತಃ ॥೩೭॥
ನಿರ್ವಿಕಲ್ಪಸಮಾಧಿಃ ಸ್ಯಾತ್ ಇದಮಭ್ಯಾಸಪಾಕತಃ ।
ವಿಕಲ್ಪಸ್ತ್ರಿಪುಟೀಭೇದಃ ತದಬೋಧಃ ಸಉಚ್ಯತೇ ॥೩೮॥
ಯಥಾ ಕ್ಷೀರಸ್ಯ ಮಧ್ವಾಭಾನಾತ್ ಕ್ಷೀರಮೇವ ಪ್ರತೀಯತೇ ।
ಏವಂ ವೃತ್ತ್ಯಾದ್ಯಪ್ರತೀತ್ಯಾ ಭಾತಿ ಬ್ರಹ್ಮೈವ ನೋ ಭಿದಾ ।
ನಿದ್ರಾದ್ಯನ್ತೇ ಸುಖಂ ಯಾದೃಕ್ ತಾದೃಕ್ ಸ್ಯಾತ್ ತತ್ಸಮಾಧಿಜಮ್ ॥೩೯॥
ವರೋ ವರೀಯಾರ್ ಶುದ್ಧಾತ್ಮಾ ವರಿಷ್ಠ ಇತಿ ತೇ ತ್ರಯಃ ।
ತೇಷಾಂ ಸ್ವರೂಪಂ ವಕ್ಷ್ಯಾಮಿ ಜೀವನ್ಮುಕ್ತೋ ಭವೇದ್ಯತಃ ॥೪೦॥

ಇವುಗಳಲ್ಲಿ, ಮೊದಲನೆಯದಾದ ಅಹಂಗ್ರಹವೂಜೆಯೆಂಬುದು ನಿರ್ಗುಣೋಪಾಸನೆಯೆಂದೂ, ಪ್ರತೀಕವೂಜೆಯು ಸಗುಣೋಪಾಸನೆಯೆಂದೂ ಪ್ರಾಜ್ಞರು ಹೇಳುವರು ಇವೆರಡರ ಮಧ್ಯದಲ್ಲಿ ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾದ ಉಪಾಸನೆಯನ್ನು, ಗುರುಗಳಿಂದ ಉಪದೇಶ ತೆಗೆದು ಕೊಂಡು ಮಾಡಬೇಕು ॥೩೫॥

ನಿರ್ಗುಣೋಪಾಸನೆ ಮಾಡತಕ್ಕವನು, ತಾರಪ್ರತೀಕ ನಿತ್ಯ ಮುಂತಾದ ಗುಣಗಳಿರುವಂತೆಯೂ, ಸೂಲಾದಿ ನಿಷೇಧಗಳಿಲ್ಲದಂತೆಯೂ, ತಾನೇ ರಾಮನೆಂದು ಭಾವಿಸಬೇಕು ॥೩೬॥

ಇದೇ ಮುಖ್ಯವಾದ ನಿರ್ಗುಣೋಪಾಸನೆಯೆಂದು ವೇದಾಂತಶಾಸ್ತ್ರಗಳು ಹೇಳುವುವು. ಇದನ್ನು ಯಾವಜ್ಜೀವವೂ ಮಾಡತಕ್ಕ ಪುರುಷನು, ಅಂತಕಾಲದಲ್ಲಿ ಶ್ರೀರಾಮನ ತಾರಕ ಮಂತ್ರೋಪದೇಶದಿಂದ ರಾಮಸಾಯುಜ್ಯವನ್ನು ಹೊಂದುವನು ॥೩೭॥

ಈ ನಿರ್ಗುಣೋಪಾಸನೆಯೇ, ಚಿರತರಾಭ್ಯಾಸಪರಿಪಾಕವುಂಟಾದಾಗ, ನಿರ್ವಿಕಲ್ಪಸಮಾಧಿಯೆನ್ನಿಸುವುದು. ಜ್ಞಾತೃ ಜ್ಞೇಯ ಜ್ಞಾನಗಳಿಗೆ ಪರಸ್ಪರಭೇದಜ್ಞಾನವೇ ವಿಕಲ್ಪವೆನ್ನಿಸುವುದು; ಈ ಭೇದಜ್ಞಾನರಾಹಿತ್ಯವೇ ನಿರ್ವಿಕಲ್ಪವೆನ್ನಿಸುವುದು ॥೩೮॥

ಹಾಲಿನೊಡನೆ ಸೇರಿರುವ ನೀರು ಪ್ರತ್ಯೇಕವಾಗಿ ಕಾಣದಿರುವಾಗ ಹಾಲುಮಾತ್ರವೇ ಹೇಗೆ ಬುದ್ಧಿಗೋಚರವಾಗುವುದೋ, ಹಾಗೆ ಬಾಹ್ಯವ್ಯಾಪಾರಗಳೊಂದೂ ತೋರದಿರುವಾಗ ಬ್ರಹ್ಮಮಾತ್ರವೇ ಸ್ಫುರಿಸುವುದು; ಇತರವಾದ ಭೇದವೊಂದೂ ನಿರ್ವಿಕಲ್ಪಸಮಾಧಿಯಲ್ಲಿ ಸ್ಫುರಿಸುವುದಿಲ್ಲ. ಗಾಢನಿದ್ರೆ ಮಾಡಿ ಎದ್ದವನಿಗೆ ಕೊನೆಯಲ್ಲಿ ಯಾವ ಸುಖವೋ, ಅಂತಹ ಸುಖವು ಸಮಾಧಿಯಲ್ಲಿ ಅವಿಚ್ಛಿನ್ನವಾಗಿರುವುದು ॥೩೯॥

ಈ ನಿರ್ಗುಣೋಪಾಸನೆಯನ್ನು ಮಾಡುವ ಪರಿಶುದ್ಧರಲ್ಲಿ, ವರ ವರೀಯಾರ್ ವರಿಷ್ಠ ಎಂದು ಮೂರು ಭೇದವುಂಟು. ಇವರ ಸ್ವರೂಪವನ್ನು ಈಗ ನಾನು ನಿಮಗೆ ವಿಸ್ತರಿಸಿ ಹೇಳುವೆನು. ಇದನ್ನು ತಿಳಿದುಕೊಂಡು ಇದರಂತೆ ಆಚರಿಸಶಕ್ಯವನು ಜೀವನ್ಮುಕ್ತನಾಗುವನು ॥೪೦॥

ಮನಸಾ ಚಿನ್ತಯೇದ್ರಾಮಂ ಸದಾಹಮಿತಿ ಧೀರಧೀಃ ।
ಸ್ವತಏವೋತ್ಥಿತೋ ಯೋನ್ನಪಾನಾರ್ಥಂ ಸ ವರಃ ಸ್ಮೃತಃ ॥೪೧॥
ರಾಮೋಹಮಿತಿ ಧೀಯೋಗಾತ್ ಬಾಹ್ಯಂ ವಿಸ್ಮೃತ್ಯ ಯಃ ಸ್ಥಿತಃ ।
ಪರೇಣೋತ್ಥಾಪಿತೋ ಧ್ಯಾತಾ ವರೀಯಾನಿತಿ ಕಥ್ಯತೇ ॥೪೨॥
ನ ಸ್ವತಃ ಪರತೋ ವಾಪಿ ವ್ಯುತ್ಥಾನಂ ಯಸ್ಯ ವಿದ್ಯತೇ ।
ರಾಮಧ್ಯಾನಬಲಾದಾರ್ಯಃ ಸ ವರೀಷ್ಠ ಇತೀರ್ಯತೇ ॥೪೩॥
ಯಮಾದಯೋ ಧಾರಣಾನ್ತಾಃ ಸಮಾಧೇರಸ್ಯ ಹೇತವಃ ।
ತಸ್ಮಾದೇತಾಂಸ್ಸಮಾಧ್ಯಾದೌ ಅವ್ಯಗ್ರಃ ಸಾಧಯೇತ್ ಕ್ರಮಾತ್ ॥೪೪॥
ಏವಮುಕ್ತಂ ಸಮಾಸೇನಾಹಂಗ್ರಹಾಖ್ಯಮುಪಾಸನಮ್ ।
ಇತಃಪರಂ ಪ್ರವಕ್ಷ್ಯಾಮಿ ಸಗುಣೋಪಾಸನಂ ಬುಧಾಃ ॥೪೫॥
ಸಗುಣೋಪಾಸನಂ ಯತ್ತತ್ ವಿಷ್ಣೋಶ್ಚಾರುಮೂರ್ತಿಚಿನ್ತನಮ್ ।
ತದ್ಭೇದಾಬಹವಃ ಸನ್ತಿ ರಾಮಕೃಷ್ಣಾದಿಭೇದತಃ ॥೪೬॥
ತದುಪಾಸ್ತೇಃ ಸಾಧನಾನಿ ಚತ್ವಾರಿ ಶ್ರವಣಾದಿ ಸದಾ ।
ಪೂಜಾ ಜಪಶ್ಚ ಧ್ಯಾನಂ ಚ ತೇಷಾಂ ತತ್ತ್ವಂ ವದಾಮಿ ವಃ ॥೪೭॥

ಯಾವನು ನಿಶ್ಚಲಚಿತ್ತನಾಗಿ ಸರ್ವದಾ ತಾನೇ ರಾಮನೆಂದು ಧ್ಯಾನಿಸುತ ಅನ್ನಪಾನಾದಿಗಳಲ್ಲಿ ಸ್ವತಏವ ಪ್ರವೃತ್ತಿಯುಳ್ಳವನಾಗಿರುವನೋ, ಅವನು ವರನೆಂದು ಹೇಳಲ್ಪಡುವನು ॥೪೧॥

ಯಾವನು ತಾನೇ ರಾಮನೆಂಬ ಭಾವನಾಬಲದಿಂದ ಬಾಹ್ಯವ್ಯಾಪಾರಗಳನ್ನೆಲ್ಲ ಮರೆತು ಇತರರ ಪ್ರೇರಣೆಯಿಂದ ಬಹಿರ್ಮುಖನಾಗುವನೋ, ಅಂತಹ ಧ್ಯಾತೃವು ವರೀಯಾರ್ ಎಂದು ಹೇಳಲ್ಪಡುವನು ॥೪೨॥

ಯಾವನು ಶ್ರೀರಾಮನ ಧ್ಯಾನಬಲದಿಂದ ತಾನಾಗಿಯಾಗಲಿ-ಇತರರ ಪ್ರೇರಣೆಯಿಂದ ಆಗಲಿ-ಬಹಿರ್ಮುಖನಾಗದೆಯೇ ಇರುವನೋ, ಅಂತಹ ಮಹಾತ್ಮನು ವರಿಷ್ಠನೆಂದು ಹೇಳಲ್ಪಡುವನು ॥೪೩॥

ಈ ಪೂರ್ವೋಕ್ತವಾದ ಸಮಾಧಿಗೆ, ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣೆಗಳು ಕ್ರಮವಾಗಿ ಕಾರಣಗಳೆಂದು ಯೋಗಶಾಸ್ತ್ರದಲ್ಲಿ ವಿವರಿಸಲ್ಪಟ್ಟಿರುವುವು. ಅದುಕಾರಣ, ಸಮಾಧಿಗೆ ಮೊದಲು ಇವುಗಳನ್ನು ಕ್ರಮವಾಗಿ ನಿಶ್ಚಿಂತತೆಯಿಂದ ಅಭ್ಯಸಿಸಬೇಕು॥

ಎಲೈ ಪ್ರಾಜ್ಞರಾ! ಈರೀತಿಯಾಗಿ ಅಹಂಗ್ರಹನಾಮಕವಾದ ಪೂಜೆಯನ್ನು ಸಂಕ್ಷೇಪವಾಗಿ ಹೇಳಿರುವೆನು. ಇನ್ನು ಮುಂದೆ ಸಗುಣೋಪಾಸನೆಯನ್ನು ಹೇಳುವೆನು ॥೪೫॥

ಶ್ರೀಮನ್ನಾರಾಯಣನ ದಿವ್ಯಮಂಗಳವಿಗ್ರಹವನ್ನು ಧ್ಯಾನಪೂರ್ವಕವಾಗಿ ಅರ್ಚಿಸುವುದೇ ಸಗುಣೋಪಾಸನೆಯೆನ್ನಲ್ಪಡುವುದು. ಆ ವಿಷ್ಣುವಿನ ವಿಗ್ರಹಗಳು, ರಾಮ ಕೃಷ್ಣ ಮುಂತಾದ ಭೇದಗಳಿಂದ ಅನೇಕವಾಗಿರುವುವು ॥೪೬॥

ಇಂತಹ ಸಗುಣೋಪಾಸನೆಗೆ, ಶ್ರವಣ ಪೂಜೆ ಜಪ ಧ್ಯಾನ ಎಂಬುದಾಗಿ ನಾಲ್ಕುಸಾಧನಗಳಿರುವುವು. ಇವುಗಳ ತತ್ವಗಳನ್ನು ನಿಮಗೆ ಹೇಳುವೆನು, ಕೇಳಿ ॥೪೭॥

ಶ್ರೀವಿಷ್ಣುಶೈವೈಷ್ಣವಸಂವಾದೇ ವೇದಶಾಸ್ತ್ರೋಕ್ತಯುಕ್ತಿಭಿಃ ।
ಸದಾಧಿಕ್ಯಪರಿಜ್ಞಾನಂ ಶ್ರವಣಂ ಮುನಿಪುಙ್ಗವಾಃ ॥೪೪॥
ವೈದಿಕೀ ತಾನ್ತ್ರಿಕೀ ಮಿಶ್ರಾ ತ್ರಿಧಾ ಪೂಜಾ ಚ ತಾನ್ತ್ರಿಕೀ ।
ಅಗವೋಕ್ತಾ ವೈದಿಕೀ ತು ವೇದೋಕ್ತಾನ್ಯೋಭಯಾತ್ಮಿಕಾ ॥೪೫॥
ತಿಸ್ರಃ ಪೂಜಾಃ ಕ್ರಮಾನ್ನಿತ್ಯಂ ಭೋಗವೋಕ್ಷ್ಮೋಭಯಪ್ರದಾಃ ।
ದ್ವಿಜಾದಿಭಿರ್ಯಥಾಕಾಮಂ ಕಾರ್ಯಾಸ್ತ್ರೈವರ್ಣಕಾರ್ಹಣಾ ಸದಾ ॥೪೬॥
ಗುರೋರ್ಲಬ್ಧಸ್ಯ ರಾಮಸ್ಯ ಮನ್ತ್ರಸ್ಯಾವರ್ತನಂ ಜಪಃ ।
ಮನೋ ಮನ್ತ್ರೀ ಮನ್ತ್ರಿತಾರ್ಥಾನಾದ್ವಾ ಮನನಾತ್ ತತ್ಪದಸ್ಯ ವಾ ॥೪೭॥
ಚತುರ್ಧಾ ತಜ್ಜಪಃ ಪ್ರೋಚ್ಚೈರುಪಾಂಶೂರಸನಾದಿಜಃ ।
ಮಾನಸಶ್ಚೇತಿ ತೇ ಶ್ರೇಷ್ಠಾಃ ಫಲದಾಲುತ್ತರೋತ್ತರಮ್ ॥೪೮॥
ಸ್ವರೈಶ್ಚತುರ್ಭಿರ್ಯೋ ಜಪ್ತಃ ಸ ಜಪೋ ವಾಚಕಃ ಸ್ಮೃತಃ ।
ಯಃ ಪ್ರಾಚಾಲನಂ ಜಪ್ತಃ ಸತೂಪಾಂಶುರಿತೀರ್ಯತೇ ॥೪೯॥

ಎಲೈ ಮುನಿಶ್ರೇಷ್ಠರಿರಾ! ವೇದಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಉಕ್ತವಾಗಿರುವ ಯುಕ್ತಿಗಳಿಂದ, ಶ್ರೀಮನ್ನಹಾವಿಷ್ಣುವೇ ಸರ್ವಶ್ರೇಷ್ಠನೆಂದು ತಿಳಿಯುವಿಕೆಯೇ ಶ್ರವಣವೆನ್ನಲ್ಪಡುವುದು ॥೪೪॥

ವೈದಿಕವೆಂದೂ ತಾಂತ್ರಿಕವೆಂದೂ ಮಿಶ್ರವೆಂದೂ ಪೂಜೆಯು ಮೂರುವಿಧವಾಗಿರುವುದು. ಕೇವಲ ಆಗಮೋಕ್ತವಾದ ಪೂಜೆಯು ತಾಂತ್ರಿಕವೆಂದೂ, ಕೇವಲ ವೇದಮಂತ್ರಗಳಿಂದ ಮಾಡುವ ಪೂಜೆಯು ವೈದಿಕವೆಂದೂ, ಇವೆರಡೂ ಸೇರಿರುವುದು ಮಿಶ್ರವೆಂದೂ ತಿಳಿಯಬೇಕು ॥

ಈ ಮೂರು ಪೂಜೆಗಳೂ ಕ್ರಮವಾಗಿ ಭೋಗವನ್ನೂ ಮೋಕ್ಷವನ್ನೂ ಈಯೆರಡನ್ನೂ ಕೊಡತಕ್ಕುವು. (ಅಂದರೆ,—) ತಾಂತ್ರಿಕ ಪೂಜೆಯಿಂದ ಐಹಿಕಭೋಗಸಮೃದ್ಧಿಯೂ, ವೈದಿಕ ಪೂಜೆಯಿಂದ ಮೋಕ್ಷಸಿದ್ಧಿಯೂ, ಮಿಶ್ರಪೂಜೆಯಿಂದ ಭೋಗ ಮೋಕ್ಷಗಳೆರಡೂ ಉಂಟಾಗುವುವೆಂದು ತಿಳಿಯಬೇಕು. ಈ ಮೂರರೊಳಗೆ ತಮಗಿಷ್ಟವಾದೊಂದನ್ನು ಬ್ರಾಹ್ಮಣಾದಿಗಳು ಆಚರಿಸಬೇಕು ॥೪೫॥

ಗುರೂಪದೇಶದಿಂದ ಲಬ್ಧವಾದ ಶ್ರೀರಾಮಮಂತ್ರವನ್ನು ಆವೃತ್ತಿಮಾಡುವುದೇ ಜಪವೆನ್ನಿಸುವುದು. ಮನನಮಾಡತಕ್ಕವನನ್ನು ಕಾಪಾಡತಕ್ಕುದಾದಕಾರಣದಿಂದಲಾಗಲಿ (ಮನ್ತ್ರಾರಂ ತ್ರಾಯತೇ ಇತಿ ಮನ್ತ್ರಃ), ಅಥವಾ ಪುನಃಪುನಃ ಆದರ ಪದಗಳು ಜಪಿಸಲ್ಪಡುವುದರಿಂದಲಾಗಲಿ (ಮನ್ತ್ರ್ಯತೇ ಇತಿಮನ್ತ್ರಃ) ಮಂತ್ರವೆಂಬ ಶಬ್ದ ಹುಟ್ಟಿರುವುದು ॥೪೬॥

ಆ ಮಂತ್ರಜಪವು, ಉಚ್ಚ ಉಪಾಂಶ ರಸನಾಮೂಲಜ ಮಾನಸ ಎಂದು ನಾಲ್ಕುವಿಧವಾಗಿರುವುದು. ಇದರಲ್ಲಿ, ಉತ್ತರೋತ್ತರವಾಗಿ ಪ್ರಾಶಸ್ತ್ಯವೂ ಫಲಾದಿಕ್ಯವೂ ಉಂಟು ॥೪೭॥

ಉದಾತ್ತ ಅನುದಾತ್ತ ಸ್ವರಿತ ಪ್ರಚಯಗಳೆಂಬ ನಾಲ್ಕು ಸ್ವರಗಳೊಡನೆ ಗಟ್ಟಿಯಾಗಿ ಜಪಿಸುವುದಕ್ಕೆ ವಾಚಕ (ಉಚ್ಚ) ಜಪವೆಂದು ಹೆಸರು. ತುಟಿಯನ್ನು ಅಲುಗಿಸದಂತೆ ಮಾಡುವ ಜಪಕ್ಕೆ ಉಪಾಂಶುವೆಂದು ಹೆಸರು. ನಾಲಿಗೆಯ ಬುಡದಲ್ಲಿಯೇ ಮಾಡುವ ಜಪವು ರಸನಾಮೂ

ಜಪೋ ಜಿಹ್ವಾಮೂಲಕೃತಃ ರಸನಾಮೂಲಜಃ ಸ್ಮೃತಃ ।
ದುಃಖಹಾ ಸ್ಯಾತ್ ಕೃತಃ ಸ್ವಾನ್ತೇ ಮಾನಸಃ ಶೀಘ್ರಸಿದ್ಧಿದಃ ॥೫೪॥
ಏವಂ ಜಪಾತ್ ಪ್ರಸನ್ನಃ ಸ್ಯಾತ್ ರಾಮೋ ರಾಮೇತಿ ನಾಮತಃ ।
ರಾಮೇ ಪ್ರಸನ್ನೇ ಸ್ವರ್ಗೋಽಸ್ತಿ ಮುಹಿಮಾಽಸನ್ತ ಏವ ಚ ॥೫೫॥
ಬ್ರಸೀಮಧ್ಯೇ ಸ್ಥಿತೋ ನಿತ್ಯಂ ನಿತ್ಯಕರ್ಮಾ ಸಮಾಪ್ಯ ಚ ।
ಪ್ರಾಣಾಯಾಮಾನ್ತ್ರಯಂ ಕೃತ್ವಾ ಸಿಮೀಲ್ಯ ನಯನೇ ಶುಭೇ ॥೫೬॥
ಹೃತ್ಪದ್ಮಜಿಹ್ಮಂ ಚ ಸಂಶೋಧ್ಯ ಸ್ಫುಟಂ ಕೃತ್ವಾ ಮನೀಷಯಾ ।
ತನ್ಮಧ್ಯೇಷ್ಟದಳಂ ಪದ್ಮಂ ನಾನಾರತ್ನವಿಭೂಷಿತಮ್ ॥೫೭॥
ತಸ್ಮಧ್ಯೇ ಮಣ್ಟಪಂ ದಿವ್ಯಂ ಸ್ರವಾಳಸ್ತಮ್ಭಶೋಭಿತಮ್ ।
ಮುಕ್ತಾ ಜಾಲವಿತಾನಾಢ್ಯಂ ರತ್ನವೇದಿಸಮನ್ವಿತಮ್ ॥೫೮॥
ಸ್ಮರೇತ್ ಕಲ್ಪತರೋರ್ಮೂಲೇ ರತ್ನಸಿಂಹಾಸನಂ ಶುಭಮ್ ।
ಪಿತುರಙ್ಕಗತಂ ರಾಮಂ ಇನ್ದ್ರನೀಲಸಮಪ್ರಭಮ್ ॥೫೯॥
ಕೋಮಲಾಙ್ಗಂ ವಿಶಾಲಾಕ್ಷಂ ಕೋಟಿಕನ್ದರ್ಪವಿಗ್ರಹಮ್ ।

ಲಜವೆನ್ನಲ್ಪಡುವುದು, ತನ್ನ ಹೃದಯದಲ್ಲಿಯೇ ಮಾಡಿಕೊಳ್ಳುವ ಜಪವು ಮಾನಸವೆಂದು ಹೇಳಲ್ಪಡುವುದು. ಈ ಮಾನಸಜಪವು, ದುಃಖನಾಶಕವಾಗಿಯೂ ಬೇಗನೆ ಸಿದ್ಧಿಪ್ರದವಾಗಿಯೂ ಇರುವುದು ॥೫೩—೫೪॥

ಹೀಗಿರುವುದರಿಂದ, ಕೇವಲವಾಗಿ 'ರಾಮ ರಾಮ' ಎಂದು ನಾಮಜಪವನ್ನು ಮಾಡುವುದರಿಂದಲೇ ಶ್ರೀರಾಮನು ಪ್ರಸನ್ನನಾಗುವನು. ಶ್ರೀರಾಮನು ಪ್ರಸನ್ನನಾದ ಬಳಿಕ, ಸ್ವರ್ಗಸುಖವೂ ಮೋಕ್ಷವೂ ಸುಲಭವಾಗಿಯೇ ಇರುವುವು ॥೫೫॥

ಎಲೈ ಋಷಿಗಳಿರಾ! ನಾನು ಹಿಂದೆ ಹೇಳಿದ ಶ್ರವಣ ಪೂಜೆ ಜಪ ಧ್ಯಾನಗಳೆಂಬ ನಾಲ್ಕು ಸಾಧನಗಳಲ್ಲಿ, ಈಗ ಮೂರು ಸಾಧನಗಳನ್ನು ವಿವರಿಸಿಯಾಯ್ತಲ್ಲವೆ! ಮುಂದೆ ನಾಲ್ಕನೆಯದಾದ ಧ್ಯಾನಕ್ರಮವನ್ನು ವಿವರಿಸುವೆನು. ಧ್ಯಾನಮಾಡತಕ್ಕವನು, ಪ್ರಥಮತಃ ಶುಚಿಯಾದ ಆಸನದಲ್ಲಿ ಕುಳಿತುಕೊಂಡು, ತನ್ನ ನಿತ್ಯಕರ್ಮಗಳನ್ನೆಲ್ಲ ಮುಗಿಸಿ, ಮೂರಾವೃತ್ತಿ ಪ್ರಾಣಾಯಾಮ ಮಾಡಿ, ಕಣ್ಣುಗಳನ್ನು ಮುಚ್ಚಿಕೊಂಡು, ತನ್ನ ಹೃದಯಕಮಲವನ್ನು ಚೆನ್ನಾಗಿ ಶೋಧನೆಮಾಡಿ, ಬಳಿಕ ಅದನ್ನು ವಿಕಸಿತವನ್ನಾಗಿ ಮಾಡಿ, ಆ ಹೃದಯಕಮಲದೊಳಗೆ, ಸ್ವಾಮಿಗು ಆಶ್ರಯಭೂತವಾದ ಮತ್ತೊಂದು ಅಷ್ಟದಳಪದ್ಮವಿರುವಂತೆಯೂ, ಅದು ನಾನಾರತ್ನಗಳಿಂದ ಅಲಂಕೃತವಾಗಿರುವಂತೆಯೂ ಧ್ಯಾನಮಾಡಬೇಕು. ಆ ಅಷ್ಟದಳಪದ್ಮದ ಮಧ್ಯದಲ್ಲಿ, ಒಂದು ಕಲ್ಪವೃಕ್ಷವಿರುವಂತೆ ಧ್ಯಾನಿಸಿ, ಅದರ ಕೆಳಗೆ ದಿವ್ಯವಾದ ಒಂದು ಮಂಟಪವಿರುವಂತೆಯೂ, ಅದಕ್ಕೆ ಹವಳದ ಕಾಲುಗಳಿರುವಂತೆಯೂ, ಮುಕ್ತಾಸರಗಳಿಂದ ಮೇಲುಕಟ್ಟು ಕಟ್ಟಿರುವಂತೆಯೂ, ಆ ಮಂಟಪದ ಮಧ್ಯದಲ್ಲಿ ರತ್ನಮಯವಾದ ವೇದಿಕೆಯಿರುವಂತೆಯೂ, ಅದರಮೇಲೆ ದಿವ್ಯವಾದ ಸಿಂಹಾಸನವಿರುವಂತೆಯೂ ಧ್ಯಾನಿಸಬೇಕು. ಆ ಸಿಂಹಾಸನದಲ್ಲಿ, ಇಂದ್ರನೀಲಮಣಿಗೆ ಸಮಾನವಾದ ಕಾಂತಿಯುಳ್ಳ ಶ್ರೀರಾಮನು ತಂದೆಯಸನ್ನಿಧಿಪದಲ್ಲಿ ಕುಳಿತಿರುವಂತೆ ಧ್ಯಾನಮಾಡಬೇಕು ॥೫೬-೫೯

ಹೀಗೆ ಧ್ಯಾನಮಾಡುವಾಗ ಆ ಶ್ರೀರಾಮಮೂರ್ತಿ ಹೇಗಿರಬೇಕೆಂದರೆ,—ಕೋಮಲಶರೀರ

ನೀಲಜೀಮೂತಸಙ್ಕಾಶಂ ನೀಲಾಳಕವೃತಾನನವ್ ॥೬೦॥
ಜಾನಕೀಲಕ್ಷ್ಮಣಾಭ್ಯಾಂ ಚ ವಾಮದಕ್ಷಿಣಶೋಭಿತವ್ ।
ಹನೂಮದ್ವಿಪುತ್ರಾದಿಹರಿಮುಖ್ಯೈಶ್ಚ ಕೋಭಿತವ್ ॥೬೧॥
ರಾಮಂ ರಘುವರಂ ವೀರಂ ಧನುರ್ಬಾಣಧರಂ ಹರಿವ್ ।
ಹಾರಕಙ್ಕಣಕೇಯೂರಕಟಿಸೂತ್ರೈರಲಙ್ಕೃತವ್ ॥೬೨॥
ಪೀತಾಮ್ಬರಧರಂ ಶೂರಂ ಧನುರ್ವೇದವಿಶಾರದವ್ ।
ಧೂಪಿತಂ ಚ ಮಹಾಧೂಪೈಃ ಯಕ್ಷಕರ್ದಮರೂಷಿತವ್ ॥೬೩॥
ಸೀತಾದೇವೀದೀಯಮಾನತಾಮ್ಬೂಲಾದಾನಸಮ್ಭ್ರಮವ್ ।
ಕಲ್ಪಪ್ರಸೂನಸನ್ನದ್ಧದಿವ್ಯಮಾಲ್ಯೋಪಶೋಭಿತವ್ ॥೬೪॥
ಏವಂ ಧ್ಯಾತ್ವಾ ತು ದೇವೇಶಂ ನೈವೇದ್ಯಂ ವಿನಿವೇದ್ಯ ಚ ।
ತಾಮ್ಬೂಲಾದ್ಯುಪಚಾರಾಂಶ್ಚ ಪರಿಕಲ್ಪ್ಯ ವಿಶುದ್ಧಧೀಃ ॥೬೫॥
ತತೋ ರಾಮಾತ್ಮಕಂ ಸರ್ವಂ ಬಾಹ್ಯಮಾಭ್ಯನ್ತರಂ ತಥಾ ।
ಚಿರಂ ಧ್ಯಾಯೇತ್ ಮಹಾಯೋಗೀ ಪ್ರೋನ್ಮೀಲ್ಯ ನಯನೇ ಶುಭೇ ॥೬೬॥
ತದಾಡ್ಯರ್ಥಂ ತಥೈಕೈಕಭೂಪಾದಿರಹಿತಂ ತತಃ ।

ನಾಗಿಯೂ, ವಿಶಾಲನೇತ್ರನಾಗಿಯೂ, ಕೋಟಿ ಮನ್ಮಥಸುಂದರನಾಗಿಯೂ, ನೀಲಮೇಘನಿಭ ನಾಗಿಯೂ, ನೀಲವಾದ ಮುಂಗುರುಳಿನಿಂದ ಅಲಂಕೃತವಾದ ಮುಖವುಳ್ಳವನಾಗಿಯೂ ಇರ ಬೇಕು. ಆ ಶ್ರೀರಾಮನಿಗೆ, ಎಡಭಾಗದಲ್ಲಿ ಸೀತಾದೇವಿಯೂ, ಬಲಭಾಗದಲ್ಲಿ ಲಕ್ಷ್ಮಣನೂ ಇರಬೇಕು. ಹನುಮಂತ ಸುಗ್ರೀವ ಮುಂತಾದವರೆಲ್ಲರೂ, ಆ ಶ್ರೀರಾಮನ ಸುತ್ತಲೂ ಆವರಿಸಿಕೊಂಡಿರುವಂತೆ ಧ್ಯಾನಮಾಡಬೇಕು. ರಘುವರನಾದ ಮಹಾವೀರನಾದ ಆ ಶ್ರೀರಾಮನು ಧನುರ್ಬಾಣಗಳನ್ನು ಧರಿಸಿರುವಂತೆಯೂ, ಹಾರ ಕಂಕಣ ಕೇಯೂರ ಕಟಿಸೂತ್ರಾದಿಗಳಿಂದ ಅಲಂಕೃತನಾಗಿರುವಂತೆಯೂ, ಪೀತಾಂಬರವನ್ನುಟ್ಟಿರುವಂತೆಯೂ ಧ್ಯಾನಮಾಡಬೇಕು. ಮಹಾ ಶೂರನಾದ ಧನುರ್ವೇದವಿಶಾರದನಾದ ಆ ಶ್ರೀರಾಮನು ದಿವ್ಯಧೂಪಗಳಿಂದ ಸುವಾಸಿತನಾಗಿಯೂ, ದಿವ್ಯಗಂಧ ವಿಲೇಪನಮಾಡಿಕೊಂಡವನಾಗಿಯೂ, ಸೀತಾದೇವಿಯಿಂದ ಕೊಡಲ್ಪಡುವ ತಾಂಬೂಲ ವನ್ನು ಸಂಭ್ರಮದೊಡನೆ ಸ್ವೀಕರಿಸುತ್ತಿರುವಂತೆಯೂ, ಕಲ್ಪವೃಕ್ಷ ಕುಸುಮಗಳಿಂದ ರಚಿತವಾದ ದಿವ್ಯಮಾಲಿಕೆಯಿಂದ ಅಲಂಕೃತನಾಗಿರುವಂತೆಯೂ ಧ್ಯಾನಮಾಡಬೇಕು ॥೬೦-೬೪॥

ಈರೀತಿಯಾಗಿ ಸರ್ವದೇವೇಶ್ವರನಾದ ಶ್ರೀರಾಮಚಂದ್ರನನ್ನು ಧ್ಯಾನಿಸಿ, ಮನದಲ್ಲಿಯೇ ನೈವೇದ್ಯವನ್ನೂ ಸಮರ್ಪಿಸಿ, ಶುದ್ಧಚಿತ್ತನಾಗಿ ತಾಂಬೂಲ ಮುಂತಾದ ಉಪಚಾರಗಳನ್ನು ಕಲ್ಪಿಸಿ, ಇದುವರೆಗೆ ಮುಚ್ಚಿಕೊಂಡಿದ್ದ ತನ್ನ ಕಣ್ಣುಗಳನ್ನು ಮೆಲ್ಲಗೆ ತೆರೆದು, ಚಿತ್ತವೃತ್ತಿಯನ್ನು ಚೆನ್ನಾಗಿ ನಿರೋಧಪಡಿಸಿಕೊಂಡು, ಹೊರಗೂ ಒಳಗೂ ಸರ್ವತ್ರ ಶ್ರೀರಾಮನೇ ಇರುವಂತೆ ಒಹಳಹೊತ್ತಿನವರೆಗೂ ಧ್ಯಾನಿಸುತ್ತಿರಬೇಕು ॥೬೫—೬೬॥

ಇದುವರೆಗೆ ಧ್ಯಾನಿಸಿದ ಶ್ರೀರಾಮಮೂರ್ತಿಯು ದೃಢವಾಗಿ ನಿಲ್ಲುವುದಕ್ಕೋಸ್ಕರವಾಗಿ, ಕ್ರಮೇಣ ಒಂದೊಂದು ಆಧರಣವಿಲ್ಲದಿರುವಂತೆ ಧ್ಯಾನಮಾಡುತ್ತ ಬರಬೇಕು. ಹೀಗೆ ಧ್ಯಾನ

ಧ್ಯಾಯೇತ್ ಕ್ರಮಾತ್ ತಚ್ಚಿತ್ತಲಯೋ ಭವತಿ ಯೋಗಿನಃ ॥೬೩॥
ವಿಧುರಸ್ಯ ಯಥಾ ಯೋಷಿತ್ಸಾಕ್ಷಾತ್ಕಾರೋ ಭವೇದಲಮ್ ।
ರಾಮಸಾಕ್ಷಾತ್ಕೃತಿಃ ಸ್ಯಾಚ್ಚೇತ್ ತದಾಪಕ್ವಮುಪಾಸನಮ್ ॥೬೪॥
ನಿಮಿಷಂ ನಿಮಿಷಾರ್ಧಂ ವಾ ಯಃ ಕುರ್ಯಾದ್ವಿಷ್ಣುಚಿಂತನಮ್ ।
ಕುಲಕೋಟಿಸಮಾಯುಕ್ತೋ ಲಭತೇ ಹರಿಮಂದಿರಮ್ ।
ರಾಮಾನುಗ್ರಹತಃ ಪಾಪಸಙ್ಘಾತೈರ್ಮುಚ್ಯತೇ ನರಃ ॥೬೫॥

ಇತಿಶ್ರೀ ಬಾಲಕಾಣ್ಡೇ ವಿಶ್ವಾಮಿತ್ರಯಾಗರಕ್ಷಣ ಶ್ರೀರಾಮಮಾನಸ
ಪೂಜಾದಿಕಥನಂ ನಾಮ ಏಕೋನವಿಂಶಃ ಸರ್ಗಃ.



ಮಾಡುತ ಬಂದರೆ, ಯೋಗಿಯಾದವನಿಗೆ ಕ್ರಮವಾಗಿ ಚಿತ್ತವು ಶ್ರೀರಾಮನಲ್ಲಿಯೇ ಲೀನವಾಗುವುದು ॥೬೨॥

ವಿರಹವ್ಯಥೆಯನ್ನನುಭವಿಸತಕ್ಕ ಪುರುಷನಿಗೆ ಸರ್ವದಾ ಅವಿಚ್ಛಿನ್ನವಾಗಿ ಕಾಂತೆಯು ದರ್ಶನವು ಹೇಗೆ ಆಗುತ್ತಿರುವುದೋ, ಹಾಗೆ ಅವಿಚ್ಛಿನ್ನವಾಗಿ—ಎಲ್ಲೆಲ್ಲಿ ಹೋದರೂ—ಏನೇ ನುವಾಡುತಿದ್ದರೂ—ಶ್ರೀರಾಮನ ಸಾಕ್ಷಾತ್ಕಾರವಾದರೆ, ಆಗ ಅವನ ಉಪಾಸನೆಯು ಪರಿಪಕ್ವವಾಯ್ತೆಂದು ತಿಳಿಯಬೇಕು ॥೬೪॥

ಯಾವ ಮನುಷ್ಯನು, ಒಂದು ನಿಮಿಷವಾದರೂ—ಅಥವಾ ನಿಮಿಷಾರ್ಧವಾದರೂ ಶ್ರೀಮನ್ನಾರಾಯಣನ ಧ್ಯಾನವನ್ನು ಮಾಡುವನೋ,—ಅವನು, ಶ್ರೀರಾಮನ ಅನುಗ್ರಹದಿಂದ ಸರ್ವಪಾಪವಿಮೋಚಿತನಾಗಿ, ತನ್ನ ಕುಲಕೋಟಿಗಳೊಡನೆ ವಿಷ್ಣುಸಾಲೋಕ್ಯವನ್ನು ಹೊಂದುವನು ॥೬೫॥

ಇದು ಬಾಲಕಾಂಡದಲ್ಲಿ ವಿಶ್ವಾಮಿತ್ರಯಜ್ಞರಕ್ಷಣ ಶ್ರೀರಾಮ ಮಾನಸಪೂಜಾದಿ
ಕಥನವೆಂಬ ಹತ್ತೊಂಬತ್ತನೆಯ ಸರ್ಗವು.



ಅಥ ಶ್ರೀ ಬಾಲಕಾಂಡೇ ವಿಂಶತಿತಮಃ ಸರ್ಗಃ.



ಶ್ರೀವಿಶ್ವಾಮಿತ್ರ ಉವಾಚ.

ಏವಂ ಮಾನಸಿಕೀಂ ಪೂಜಾಂ ಸಂಕ್ಷಿಪ್ಯೋಕ್ತ್ವಾಘನಾಶಿನೀಮ್ ।
ಸಾಲಗ್ರಾಮಶಿಲಾಪೂಜಾಫಲಂ ವಕ್ಷ್ಯೇ ನಿಬೋಧತ ॥೧॥
ಶ್ರೋತ್ರಿಯಂ ಬ್ರಹ್ಮನಿಷ್ಠಂ ಚ ಸಾಲಗ್ರಾಮಶಿಲಾಂ ತಥಾ ।
ಯಃ ಪೂಜಯತಿ ಧರ್ಮಾತ್ಮಾ ಸಿಲಯಾಃ ಸರ್ವಸಮ್ಪದಾಮ್ ॥೨॥
ಸಾಲಗ್ರಾಮಶಿಲಾ ಯಸ್ಯ ಗೃಹೇ ತಿಷ್ಠತಿ ಪಾವನೀ ।
ತದ್ಗೃಹಂ ಪಾವನಂ ಜ್ಞೇಯಂ ಸರ್ವಪಾಪವಿವರ್ಜಿತಮ್ ॥೩॥
ಸಾಲಗ್ರಾಮಾಃ ಸಮಾಃ ಪೂಜ್ಯಾಃ ವಿಷಮಾ ನ ಕದಾಚನ ।
ವಿಷಮೇಷು ತ್ರಯಂ ತ್ಯಾಜ್ಯಂ ಸಮೇಷು ದ್ವಯಮುಚ್ಯತೇ ॥೪॥
ಸಾಲಗ್ರಾಮದ್ವಿಷಟ್ಕಂ ಯಃ ಪೂಜಯೇದ್ಭುವಿ ಮತ್ತರಃ ।
ಸರ್ವಪಾಪವಿಶುದ್ಧಾತ್ಮಾ ಸ ವೈ ನಾರಾಯಣಃ ಸ್ಮೃತಃ ॥೫॥

ಬಾಲಕಾಂಡದಲ್ಲಿ ಇಪ್ಪತ್ತನೆಯ ಸರ್ಗವು.

ವಿಶ್ವಾಮಿತ್ರಮುನಿಯು ಪುನಃ ಆ ಋಷಿಗಳನ್ನು ಕುರಿತು ಹೇಳಲುಪಕ್ರಮಿಸುವರು :—

ಎಲೈ ಮಹರ್ಷಿಗಳಿರಾ! ಇದುವರೆಗೆ ಪಾಪಪರಿಹಾರಕವಾದ ಶ್ರೀರಾಮ ಪೂಜಾಕ್ರಮವನ್ನು ನಿಮಗೆ ಸಂಕ್ಷಿಪ್ತವಾಗಿ ಹೇಳಿದೆನಷ್ಟೆ! ಈಗ ಮುಂದೆ ಸಾಲಗ್ರಾಮಪೂಜಾಪ್ರಕ್ರಮವನ್ನೂ ಅದರ ಫಲವನ್ನೂ ಹೇಳುವೆನು, ಕೇಳಿ ತಿಳಿದುಕೊಳ್ಳಿರಿ ॥೧॥

ಯಾವ ಪುರುಷನು, ಶ್ರೋತ್ರಿಯನನ್ನೂ ಬ್ರಹ್ಮನಿಷ್ಠನನ್ನೂ ಸಾಲಗ್ರಾಮಶಿಲೆಯನ್ನೂ ಪೂಜಿಸುವನೋ, ಅವನೇ ಧರ್ಮಾತ್ಮನು; ಸರ್ವಸಂಪತ್ತುಗಳಿಗೂ ಅವನು ಆಶ್ರಯನಾಗುವನು ॥

ಯಾವನ ಮನೆಯಲ್ಲಿ ಪಾವನವಾದ ಸಾಲಗ್ರಾಮಶಿಲೆಯಿರುವುದೋ, ಅವನ ಮನೆಯು ಕೇವಲ ಪರಿಶುದ್ಧವಾದುದೆಂದೂ ಸಕಲಪಾಪ ವರ್ಜಿತವೆಂದೂ ತಿಳಿಯಲ್ಪಡಬೇಕು ॥೩॥

ಸಾಲಗ್ರಾಮಗಳನ್ನು ಸಮಸಂಖ್ಯೆಯಾಗಿಯೇ ಇಟ್ಟುಕೊಂಡು ಪೂಜಿಸಬೇಕು; ವಿಷಮ ಸಂಖ್ಯೆಯಾಗಿ ಎಂದಿಗೂ ಪೂಜಿಸಕೂಡದು. ಶತ್ರಾಪಿ ವಿಷಮಸಂಖ್ಯೆಯಲ್ಲಿಯೂ ಮೂರನ್ನು ಸುತರಾಂ ಬಿಟ್ಟುಬಿಡಬೇಕು. ಸಮಸಂಖ್ಯೆಯಲ್ಲಿ ಎರಡನ್ನು ಬಿಡಬೇಕೆಂದು ವಾಜ್ಞರು ಹೇಳುವರು ॥೪॥

ಯಾವ ವಾಜ್ಞನು ಹನ್ನೆರಡು ಸಾಲಗ್ರಾಮಶಿಲೆಗಳನ್ನಿಟ್ಟುಕೊಂಡು ಪೂಜಿಸುವನೋ, ಅವನು ಸಮಸ್ತಪಾಪಗಳನ್ನೂ ಕಳೆದುಕೊಂಡು ಪರಿಶುದ್ಧನಾಗುವನೆಂದೂ-ಅವನೇ ಸಾಕ್ಷಾನಾರಾಯಣನೆಂದೂ ಹೇಳಲ್ಪಡುವನು ॥೫॥

ಸೀತಾರಾಮದ್ವಿಪಟ್ಕಂ ಯಃ ಪೂಜಯೇಚ್ಛುಭಲಕ್ಷಣಮ್ ।
ಸೀತಾರಾಮಪ್ರಭಾವೇನ ರಾಮಸಾಯುಜ್ಯಮಾಪ್ನುಯಾತ್ ॥೬॥
ಮೂರ್ತಿದ್ವಾದಶಕಂ ಭಕ್ತ್ಯಾ ಯೋ ರಾಮಸ್ಯ ಸಮರ್ಚಯೇತ್ ।
ಸ ವ್ರಜೇದ್ರಾಮಸಾಮೀಪ್ಯಂ ಸಾಯುಜ್ಯಮಥವಾ ಪುನಃ ॥೭॥
ವಿಂಶತ್ಯಧಿಕಸಂಖ್ಯಾಕಶತಂ ವೈ ಗಣ್ಡಕೀಶಿಲಾಃ ।
ಯೇಷಾಂ ಪುಣ್ಯವತಾಂ ಗೇಹೇ ಸನ್ತಿ ಶುದ್ಧಗುಣಾನ್ವಿತಾಃ ॥೮॥
ದಿವ್ಯಕ್ಷೇತ್ರಂ ತು ತಜ್ಜ್ಞೇಯಂ ಸಮನ್ತಾದ್ದಶಯೋಜನಮ್ ।
ವೈಕುಣ್ಠಸದೃಶಂ ಗೇಹಂ ತತ್ರಾಸ್ತೇ ರಘುನನ್ದನಃ ॥೯॥
ತತ್ರ ವಿಷ್ಣುರ್ಮಹೇಶಶ್ಚ ಬ್ರಹ್ಮಾ ಚೈವ ಚತುರ್ಮುಖಃ ।
ವಿಶ್ವೇ ದೇವಾಶ್ಚ ದಿಕ್ಪಾಲಾಃ ತಿಷ್ಠನ್ತಿ ಮುನಯೋಖಿಲಾಃ ॥೧೦॥
ಸಾಲಗ್ರಾಮಶಿಲಾಯಾಂ ವೈ ರಾಮಮಭ್ಯರ್ಚ್ಯ ಸಾದರಮ್ ।
ಯಃ ಕರೋತ್ಯಗ್ರತೋ ನೃತ್ತಕೀರ್ತನಾದಿ ಸ ಮುಚ್ಯತೇ ॥೧೧॥
ರಾಮರಾಮೇತಿ ಯೇ ನಿತ್ಯಂ ಪ್ರವದನ್ತಿ ಮನಿಷಿಣಃ ।
ತದೇವ ಜೀವನಂ ತೇಷಾಂ ಸಾ ಜಿಹ್ವಾ ಸಾ ಚ ಭಾರತೀ ॥೧೨॥
ಸಾ ಚೇಷ್ಟಾ ರಾಘವಸ್ಯಾಗ್ರೇ ಯಾ ನೃತ್ತಾದಿಸ್ವರೂಪಿಣೀ ।

ಯಾವ ಪುರುಷನು, ಉತ್ತಮಲಕ್ಷಣಯುಕ್ತನಾದ ಹನ್ನೆರಡು ಸೀತಾರಾಮಶಿಲೆಗಳನ್ನಿಟ್ಟುಕೊಂಡು ಪೂಜಿಸುವನೋ, ಅವನು ಸೀತಾರಾಮನ ಅನುಗ್ರಹದಿಂದ ರಾಮಸಾಯುಜ್ಯವನ್ನು ಹೊಂದುವನು ॥೬॥

ಯಾವನು ಹನ್ನೆರಡು ಶ್ರೀರಾಮಮೂರ್ತಿಗಳನ್ನು ಭಕ್ತಿಯಿಂದ ಪೂಜಿಸುವನೋ, ಅವನು ಶ್ರೀರಾಮನ ಸಾನ್ನಿಧ್ಯವನ್ನಾಗಲಿ-ಸಾಯುಜ್ಯವನ್ನಾಗಲಿ ಪಡೆಯುವನು ॥೭॥

ಯಾವ ಪುಣ್ಯಾತ್ಮರ ಮನೆಯಲ್ಲಿ ಉತ್ತಮ ಲಕ್ಷಣಯುಕ್ತವಾದ ನೂರಿಪ್ಪತ್ತು ಸಾಲಗ್ರಾಮಶಿಲೆಗಳಿರುವುವೋ, ಅವರ ಮನೆಯು ಸುತ್ತಲೂ ಹತ್ತುಗಾವುದದವರೆಗೂ ದಿವ್ಯಕ್ಷೇತ್ರವೆಂದು ತಿಳಿಯಬೇಕು. ಆ ಮನೆಯು ವೈಕುಂಠಲೋಕಕ್ಕೆ ಸಮಾನವಾಗುವುದು; ಅಲ್ಲಿ ಶ್ರೀರಾಮನು ಸರ್ವದಾ ವಾಸವಮಾಡಿಕೊಂಡಿರುವನು. ಅಲ್ಲಿ, ವಿಷ್ಣುವೂ ಮಹೇಶ್ವರನೂ ಚತುರ್ಮುಖ ಬ್ರಹ್ಮನೂ ಸಮಸ್ತ ದೇವತೆಗಳೂ ಅಷ್ಟದಿಕ್ಪಾಲಕರೂ ಸಕಲ ಮುನಿಗಳೂ ವಾಸವಮಾಡಿಕೊಂಡಿರುವರು ॥೮-೧೦॥

ಯಾವ ಪುರುಷನು, ಸಾಲಗ್ರಾಮಶಿಲೆಯಲ್ಲಿ ಶ್ರೀರಾಮನನ್ನು ಭಕ್ತಿಪೂರ್ವಕವಾಗಿ ಪೂಜಿಸಿ—ಅವನ ಮುಂದುಗಡೆ ನೃತ್ತಗೀತಾದಿಗಳನ್ನು ಮಾಡುವನೋ, ಅವನು ಮುಕ್ತನಾಗುವನು ॥೧೧॥

ಯಾವ ಪ್ರಾಜ್ಞರು 'ರಾಮ ರಾಮ' ಎಂದು ಸರ್ವದಾ ಹೇಳುತ್ತಿರುವರೋ, ಅವರ ಬದುಕೇ ಬದುಕು; ಅವರ ನಾಲಿಗೆಯೇ ನಾಲಿಗೆ; ಅವರ ವಾಕ್ಯವೇ ವಾಕ್ಯ ॥೧೨॥

ಶ್ರೀರಾಮನ ಮುಂದುಗಡೆ ಮಾಡುವ ನೃತ್ತಾದಿಗಳು ಯಾವುವುಂಟೋ, ಅದೇ ಅವಯವ

ತೌ ಕರೌ ರಾಘವಂ ಶಾಸ್ತ್ರಂ ಸೀತಾನಾಥಂ ಜಗದ್ಗುರುಮ್ ॥೧೩॥
ಯೌ ಹಿ ಪೂಜಯತಃ ಸ್ವಚ್ಛೈಃ ಕೋಮಲೈಸ್ತುಲಸೀದಳೈಃ ।
ತೇ ನೇತ್ರೇ ಸಫಲೇ ಜ್ಞೇಯೇ ಯೇ ರಾಮಾಕೃತಿಗೋಚರೇ ॥೧೪॥
ಪಾದೌ ತೌ ರಾಮಕಾರ್ಯಾರ್ಥಂ ಚಲತಃ ಸರ್ವತೋದಿಶಮ್ ।
ತದುತ್ತಮಾಙ್ಗಂ ಯದ್ರಾಮತೀರ್ಥಸೇಚನಭಾಜನಮ್ ॥೧೫॥
ತದೇವ ಭೋಜನಂ ಶ್ರೇಷ್ಠಂ ಯದ್ರಾಮಾರ್ಪಿತಭೋಜನಮ್ ।
ತದೇವ ಹೃದಯಂ ಪ್ರೋಕ್ತಂ ಯದ್ರಾಮಧ್ಯಾನತತ್ಪರಮ್ ॥೧೬॥
ಕ್ಷಣಮಾತ್ರಂ ತು ಯೋ ರಾಮಮೂರ್ತಿತೀರ್ಥಯುತಂ ನರಃ ।
ಭುಙ್ಕ್ತೇ ತದರ್ಪಿತಂ ಚಾನ್ನಂ ಸ ಪಾಪಾತ್ಮಾಪಿ ಮುಚ್ಯತೇ ॥೧೭॥
ಅತ್ರೈವೋದಾಹರನ್ತೀಮಂ ಇತಿಹಾಸಂ ಪುರಾತನಮ್ ।
ಯಥಾ ತೀರ್ಥಪ್ರಸಾದಾಭ್ಯಾಂ ವಿಪ್ರಃ ಪ್ರಾಪ್ತೋ ಹರೇಃ ಪದಮ್ ॥೧೮॥
ಕಶ್ಚಿದ್ವಿಪ್ರೋಽಸ್ತಿ ವೇದಾವೀ ಸರ್ವಶಾಸ್ತ್ರವಿಶಾರದಃ ।
ಧರ್ಮಾತ್ಮಾ ನಿತ್ಯಕರ್ಮಸ್ಥಃ ಸತ್ಯವ್ರತಪರಾಯಣಃ ॥೧೯॥
ಯುವಾ ಪುಣ್ಯಕಥಾಭಿಜ್ಞಃ ಶ್ರುತಿಸ್ಮೃತಿನಿವಿಷ್ಟಧೀಃ ।
ವಿರಕ್ತಃ ಕಾಮಭೋಗೇಷು ಸರ್ವೇನ್ದ್ರಿಯವಶೀ ಶುಚಿಃ ॥೨೦॥

ವ್ಯಾಪಾರವು; ಯಾವ ಕಯ್ಗಳು, ಶಾಂತನಾಗಿ ಸೀತಾಪತಿಯಾಗಿ ಜಗನ್ನಾಯಕನಾಯಕನಾಗಿರುವ ಶ್ರೀರಾಮನನ್ನು, ಸ್ವಚ್ಛವಾಗಿಯೂ ಕೋಮಲವಾಗಿಯೂ ಇರುವ ತುಲಸೀದಳಗಳಿಂದ ಪೂಜಿಸುವುವೋ, ಅವೇ ಕಯ್ಗಳು. ಯಾವ ನೇತ್ರಗಳು ಶ್ರೀರಾಮನ ಆಕೃತಿಯನ್ನು ನೋಡುತಿರುವುವೋ, ಅವುಗಳೇ ಸಫಲಗಳೆಂದು ತಿಳಿಯಬೇಕು. ಶ್ರೀರಾಮಸೇವೆಗಾಗಿ ಎಲ್ಲಾ ದಿಕ್ಕುಗಳಲ್ಲಿಯೂ ಓಡಾಡುವ ಕಾಲುಗಳೇ ಕಾಲುಗಳು ರಾಮನಿಗೆ ಅಭಿಷೇಕಮಾಡಿದ ತೀರ್ಥದಿಂದ ಯಾವ ತಲೆಯು ನನೆಯುವುದೋ, ಅದೇ ತಲೆಯು. ಶ್ರೀರಾಮನಿಗೆ ನಿವೇದಿತವಾದುದನ್ನು ಭುಜಿಸುವುದಾವುದುಂಟೋ, ಅದೇ ಭೋಜನವು. ಯಾವ ಹೃದಯವು ಒಂದು ಕ್ಷಣಮಾತ್ರವಾದರೂ ಶ್ರೀರಾಮ ಧ್ಯಾನದಲ್ಲಿ ನಿರತವಾಗಿರುವುದೋ, ಅದೇ ಹೃದಯವೆಂದು ತಿಳಿಯಬೇಕು. ಯಾವನು ಶ್ರೀರಾಮಮೂರ್ತಿಯ ತೀರ್ಥದೊಡನೆ ಶ್ರೀರಾಮನಿಗೆ ನಿವೇದಿತವಾದ ಅನ್ನವನ್ನು ಭುಜಿಸುವನೋ, ಅವನು ಎಂತಹ ಪಾಪಾತ್ಮನಾಗಿದ್ದರೂ ಮುಕ್ತನಾಗುವನು ॥೧೩—೧೭॥

ಇದೇ ವಿಷಯದಲ್ಲಿ, ಈವೊಂದು ಪುರಾತನವಾದ ಇತಿಹಾಸವನ್ನು ನಿದರ್ಶನವಾಗಿ ಹೇಳುವರು. ಶ್ರೀರಾಮನ ತೀರ್ಥಪ್ರಸಾದಗಳಿಂದ ಒಬ್ಬ ಬ್ರಾಹ್ಮಣನು ವಿಷ್ಣುಲೋಕವನ್ನು ಹೊಂದಿದನೆಂಬ ವಿಷಯವು ಈ ಇತಿಹಾಸದಿಂದ ಸ್ಪಷ್ಟವಾಗುವುದು ॥೧೮॥

ಆಯಿತಿಹಾಸವೇನೆಂದರೆ,—ಸರ್ವಶಾಸ್ತ್ರವಿಶಾರದನೂ ಮಹಾಬುದ್ಧಿಶಾಲಿಯೂ ಆದ ಒಬ್ಬ ಬ್ರಾಹ್ಮಣನಿದ್ದನು. ಅವನು, ಕೇವಲ ಧರ್ಮಾತ್ಮನಾಗಿ, ತನ್ನ ನಿತ್ಯಕರ್ಮಗಳನ್ನು ತಪ್ಪದೆ ಮಾಡುತ, ಸತ್ಯವ್ರತಪರಾಯಣನಾಗಿದ್ದನು. ಅನೇಕವಾದ ಪುಣ್ಯಕಥೆಗಳನ್ನು ಅವನು ತಿಳಿದಿದ್ದನು. ಅವನ ಬುದ್ಧಿಯು ಶ್ರುತಿಸ್ಮೃತಿಗಳಲ್ಲಿ ಚೆನ್ನಾಗಿ ಪರಿನಿಷ್ಠಿತವಾದುದು. ಅವನು ಇನ್ನೂ ಯೌವನವಂತನಾಗಿದ್ದರೂ, ಕಾಮಭೋಗಗಳಲ್ಲಿ ವಿರಕ್ತನಾಗಿ, ಸಮಸ್ತವಾದ ಇಂದ್ರಿಯಗಳನ್ನೂ ಜಯಿಸಿಕೊಂಡು, ಪರಿಶುದ್ಧನಾಗಿರುತಿದ್ದನು ॥೧೯—೨೦॥

ಸ ಕದಾಚಿನ್ಮಹಾವೀಥ್ಯಾಂ ಗಚ್ಛನ್ ಮಾರ್ಗೇ ದದರ್ಶ ಹ ।
ವಾರಾಙ್ಗನಾಂ ಕೃತಾಕಲ್ಪಾಂ ಸರ್ವಾಭರಣಭೂಷಿತಾಮ್ ॥೨೧॥
ಸುಸ್ತನೀಂ ಸುದತೀಂ ರಮ್ಯಾಂ ಸರ್ವಾವಯವಸುನ್ದರೀಮ್ ।
ಹಾವಭಾವವಿಲಾಸೈಶ್ಚ ಮದಕಾಮವಿವರ್ಧಿನೀಮ್ ॥೨೨॥
ತಾಂ ದೃಷ್ಟ್ವಾ ಚಾರುಸರ್ವಾಙ್ಗೀಂ ಮನೋನಯನನನ್ದಿನೀಮ್ ।
ಕಾಮರಾಗಪರೀತಾತ್ಮಾ ಮನಸ್ಯೇವಮಚಿನ್ತಯತ್ ॥೨೩॥
ನ ಶಾಸ್ತ್ರಂ ನ ಶ್ರುತಿರ್ಧರ್ಮೋ ನ ತಪೋ ನ ವ್ರತಂ ತಥಾ ।
ನ ಭೀರ್ನ ಲಜ್ಜಾ ನೋ ದೋಷಃ ಕಾಮವೇಗಹತಸ್ಯ ಹಿ ॥೨೪॥
ಮಾತ್ರಾ ಸ್ವಸ್ರಾ ದುಹಿತ್ರಾ ವಾ ನೈಕತ್ರ ಸಹ ಸಂವಸೇತ್ ।
ಬಲವಾನಿನ್ದ್ರಿಯಗ್ರಾಮಃ ವಿದ್ವಾಂಸಮಪಿ ಕರ್ಷತಿ ॥೨೫॥
ಕಿಂ ಪುನಸ್ತ್ವನ್ಯಕಾಂತಾಯಾಃ ಸನ್ನಿಧಾನಂ ವಿಕಾರಕೃತ್ ।
ದರ್ಶನಂ ಚಾಪಿ ರೂಪಿಣ್ಯಾಃ ಸ್ತ್ರಿಯೋಹಂ ತನ್ನಿದರ್ಶನಮ್ ॥೨೬॥
ಕುಲಂ ಭ್ರಷ್ಟಂ ಶ್ರುತಂ ನಷ್ಟಂ ಆಚಾರಶ್ಚ ವಿಲೋಪಿತಃ ।
ನಿನ್ದಿಷ್ಯನ್ತಿ ಹಿ ಮಾಂ ವೃದ್ಧಾಃ ಪರಲೋಕೋ ಹಿ ದೂರತಃ ॥೨೭॥

ಆ ಬ್ರಾಹ್ಮಣನು, ಒಂದು ಸಮಯದಲ್ಲಿ ರಾಜಬೀದಿಯಲ್ಲಿ ಹೋಗುತ, ಮಾರ್ಗಮಧ್ಯದಲ್ಲಿ, ಸರ್ವಾಭರಣಭೂಷಿತಳಾಗಿ—ಸರ್ವಾವಯವಸುಂದರಿಯಾಗಿ—ತನ್ನ ವಿಲಾಸಗಳಿಂದ ಸರ್ವರಿಗೂ ಕಾಮೋದ್ರೇಕವುಂಟುಮಾಡುತಿರುವ—ಒಬ್ಬ ವಾರಾಂಗನೆಯನ್ನು ಕಂಡನು ॥೨೧-೨೨॥

ಲೋಕೋತ್ತರ ಸುಂದರಿಯಾಗಿ ಮನಸ್ಸಿಗೂ ನೇತ್ರಕ್ಕೂ ವಿಶೇಷವಾಗಿ ಆನಂದವನ್ನು ಕೊಡುತ್ತಿರುವ ಆ ವಾರಾಂಗನೆಯನ್ನು ನೋಡಿ, ಆ ಬ್ರಾಹ್ಮಣನು ಕಾಮವ್ಯಾಪ್ತವಾದ ಮನಸ್ಸುಳ್ಳವನಾಗಿ ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು ॥೨೩॥

ಕಾಮವೇಗದಿಂದ ಹತನಾದವನಿಗೆ, ಶಾಸ್ತ್ರಜ್ಞಾನವೂ ಇಲ್ಲ; ವೇದಾಭ್ಯಾಸವೂ ಇಲ್ಲ; ಧರ್ಮವೂ ಇಲ್ಲ; ತಪಸ್ಸೂ ಇಲ್ಲ; ವ್ರತವೂ ಇಲ್ಲ; ಭಯವೂ ಇಲ್ಲ; ಲಜ್ಜೆಯೂ ಇಲ್ಲ; ದೋಷಜ್ಞಾನವೂ ಇಲ್ಲವೇ ಇಲ್ಲ ॥೨೪॥

ಇತರಸ್ತ್ರೀಯರೊಡನೆ ಏಕತ್ರ ವಾಸಾದಿಗಳು ವ್ಯಾಯಶಃ ಅಸಂಭವವಾಗಿರುವುವು. ತಾಯಿಯೊಡನೆಯೂ, ಸಹೋದರಿಯೊಡನೆಯೂ, ಪುತ್ರಿಯೊಡನೆಯೂ ಸಹವಾಸಾದಿಗಳು ಸರ್ವರಿಗೂ ಸಂಭವಿಸುವುವು. ಆದರೆ, ಇವರೊಡನೆಯೂ ಕೂಡ, ಒಟ್ಟಾಗಿ ಒಂದೇಕಡೆ ಕೂಡಲೂ ಬಾರದು; ಇರಲೂಬಾರದು. ಏಕೆಂದರೆ,—ಇಂದ್ರಿಯಗ್ರಾಮವು ಮಹಾಪ್ರಬಲವಾದುದು. ಇದು ಎಂತಹ ಪ್ರಾಜ್ಞನನ್ನೂ ಸೆಳೆದುಬಿಡುವುದು ॥೨೫॥

ಹೀಗಿರುವಾಗ, ಇನ್ನು ಸುಂದರಿಯಾದ ಇತರ ಸ್ತ್ರೀಯ ಸಾನ್ನಿಧ್ಯವೂ—ಕೊನೆಗೆ ಅವಳ ದರ್ಶನವೂ—ಮನೋವಿಕಾರವುಂಟುಮಾಡುವುವೆಂಬ ವಿಷಯವನ್ನು ಹೇಳಬೇಕಾದುದೇನಿರುವುದು? ಇದಕ್ಕೆ ನಾನೇ ಈಗ ನಿದರ್ಶನಭೂತನಾದೆನು ॥೨೬॥

ಈಗ ನನ್ನ ಗತಿಯನ್ನು ಏನೆಂದು ಹೇಳಲಿ! ಕುಲಭ್ರಂಶವಾಯ್ತು; ಶಾಸ್ತ್ರಜ್ಞಾನ ನಷ್ಟವಾಯ್ತು; ಆಚಾರವೆಲ್ಲ ಲುಪ್ತವಾಯ್ತು; ವೃದ್ಧರೆಲ್ಲರೂ ನನ್ನನ್ನು ದೂಷಿಸುವರು; ಪರಲೋಕವಂತು ಸುತರಾಂ ದೂರವೇ ಆಗಿಬಿಟ್ಟಿತು ॥೨೭॥

ವಿವಂ ಸಂಚಿತಯನ್ನೇವ ತಸ್ಯಾಗೃಹಮುಪಾಗತಃ ।
ವಯಸ್ಯೈಃ ಸಹ ಸಾ ಯತ್ರ ಯಾ ದೃಷ್ಟಾ ವರವರ್ಣಿನೀ ॥೨೪॥
ವಿಪ್ರಸ್ತದ್ಗೃಹಮಾಗತ್ಯ ದೃಷ್ಟ್ವಾ ತಾಂ ಪ್ರಮದೋತ್ತಮಾಮ್ ।
ಮದನಾಗ್ನಿಪರೀತಾಙ್ಗಃ ಪ್ರಣನಾಮ ಪದದ್ವಯಮ್ ॥೨೫॥
ವಿಪ್ರೋಹಂ ಕುಲಜಃ ಶ್ರೇಷ್ಠಃ ತವ ಕಾಮಾಗ್ನಿಪೀಡಿತಃ ।
ತ್ವತ್ಪಾದಕಮಲಂ ಮೇದ್ಯ ಮಸ್ತಕೇ ದಾತುಮರ್ಹಸಿ ॥೨೬॥

ವೇಶ್ಯೋವಾಚ.

ಬ್ರಾಹ್ಮಣೋಸಿ ವಿಶೇಷೇಣ ಶ್ರುತಾಧ್ಯಯನಪೂರಿತಃ ।
ಕ್ವ ತೇ ಮತಿಃ ಕ್ವ ವಾ ಪ್ರಜ್ಞಾ ಶ್ರುತಂ ಚ ಕ್ವನು ತೇ ಗತಮ್ ॥೨೭॥
ಕ್ಷಣಮೇತತ್ ಸುಖಂ ವಿಪ್ರ ವೇಶ್ಯಾಸ್ತ್ರೀಸಙ್ಗಸಮ್ಭವಮ್ ।
ಅಸುಭೂಯ ಕ್ಷಣಸುಖಂ ಕಥಂ ಹಾಸ್ಯಸಿ ಸದ್ಗತಿಮ್ ॥೨೮॥
ಧನನಾಶಃ ಕುಲತ್ಯಾಗಃ ಹಾನಿರಾಚಾರಸಮ್ಪದಾಮ್ ।
ಜಾತಿಭ್ರಂಶಃ ಕೀರ್ತಿಹಾನಿಃ ಲೋಕನಿನ್ದಾ ತ್ರಪಾಕ್ಷಯಃ ॥೨೯॥

ಹೀಗೆಂದು ಯೋಚಿಸುತ್ತಲೇ, ತಾನು ನೋಡಿದ ಆ ವಾರಸ್ತ್ರೀಯಿರುವ ಮನೆಗೆ ತನ್ನ ಮಿತ್ರರೊಡನೆ ಆ ಬ್ರಾಹ್ಮಣನು ಬಂದು ಸೇರಿದನು ॥೨೪॥

ಅವಳ ಮನೆಗೆ ಬಂದು ಆ ಬ್ರಾಹ್ಮಣನು ಆ ಪರಮಸುಂದರಿಯನ್ನು ಕಂಡು ಕಾಮಾಗ್ನಿಪರೀತನಾಗಿ, ಅವಳ ಎರಡುಕಾಲುಗಳಿಗೂ ನಮಸ್ಕಾರಮಾಡಿದನು ॥೨೫॥

ಆನಂತರ 'ಎಲೌ ಸುಂದರಿ! ನಾನು ಸತ್ಕುಲಪ್ರಸೂತನಾದ ಉತ್ತಮಬ್ರಾಹ್ಮಣನು. ನಿನ್ನ ಕಾಮಾಗ್ನಿಯಿಂದ ಪೀಡಿತನಾಗಿ ಬಂದಿರುವೆನು. ಈಗ ನೀನು ನಿನ್ನ ಪಾದಕಮಲವನ್ನು ನನ್ನ ತಲೆಯಮೇಲೆ ಇರಿಸಬೇಕೆಂದು ಪ್ರಾರ್ಥಿಸುವೆನು' ಎಂಬುದಾಗಿ ಹೇಳಿದನು ॥೨೬॥

ಇದನ್ನು ಕೇಳಿ ಆ ವೇಶ್ಯೆ ಹೇಳುವಳು:—

ತಾವು ಜಾತ್ಯಾ ಬ್ರಾಹ್ಮಣರಾಗಿರುವಿರಿ. ತತ್ರಾಪಿ ವೇದಾಧ್ಯಯನಪರಿಪೂರ್ಣರಾಗಿರುವಿರಿ. ನಿಮ್ಮ ಶಾಸ್ತ್ರಜ್ಞಾನವೆಲ್ಲಿ ಹೋಯ್ತು? ನಿಮ್ಮ ಬುದ್ಧಿಯೆಲ್ಲಿ ಹೋಯ್ತು? ನಿಮ್ಮ ವೇದಾಭ್ಯಾಸವೆಲ್ಲವೂ ಎಲ್ಲಿ ಹೋಯ್ತು? ॥೨೭॥

ಬ್ರಾಹ್ಮಣೋತ್ತಮರೆ! ವೇಶ್ಯಾಸ್ತ್ರೀಸಂಗದಿಂದುಂಟಾಗುವ ಈ ಸುಖವು ಒಂದುಕ್ಷಣ ಮಾತ್ರವಿರತಕ್ಕದ್ದು. ಈ ಕ್ಷಣಿಕವಾದ ಸುಖವನ್ನನುಭವಿಸಿ, ಶಾಶ್ವತವಾದ ಸದ್ಗತಿಯನ್ನು ಹೇಗೆ ಹಾಳುಮಾಡಿಕೊಳ್ಳುವಿರಿ? ॥೨೮॥

ಪರಸ್ತ್ರೀಸಂಗಮದಿಂದ, ಧನನಾಶವಾಗುವುದು; ಕುಲವು ಬಿಟ್ಟುಹೋಗುವುದು; ಆಚಾರ ಸಂಪತ್ತಿಗೆಲ್ಲ ಹಾನಿಯುಂಟಾಗುವುದು; ಜಾತಿಭ್ರಂಶವಾಗುವುದು; ಕೀರ್ತಿಗೆ ಲೋಪಬರುವುದು; ಲೋಕದಲ್ಲಿ ನಿಂದೆಯುಂಟಾಗುವುದು; ಲಜ್ಜೆಯನ್ನು ಬಿಟ್ಟುಬಿಡಬೇಕಾಗುವುದು. ಇದಲ್ಲದೆ, ಮಾನ

ಮಾನಹಾನಿರ್ಧರ್ಮಲೋಪಃ ನರಕೇ ವ್ಯಾಧಿಸಂಭವಃ ।
ಸಂಭವನ್ತಿ ಪರಸ್ತ್ರೀಣಾಂ ಸಙ್ಗಮಾತ್ ಕಿಮತೋಽವರಮ್ ॥೩೪॥
ಅಮೇಧ್ಯಪೂರ್ಣಂ ಕ್ರಿಮಿಪೂಯಸಙ್ಕುಲಂ ।
ಸ್ವಭಾವದುರ್ಗನ್ಧಮಶೌಚಮಧ್ರುವಮ್ ;
ಕಳೇಬರಂ ಮೂತ್ರಪುರೀಷಭಾಜನಂ
ರಮನ್ತಿ ಮೂಢಾ ನ ರಮನ್ತಿ ಪಣ್ಡಿತಾಃ ॥೩೫॥
ನಿವರ್ತಸ್ವ ಮಹಾಬುದ್ಧೇ ಕಶ್ಮಲಾತ್ ಪ್ರಜುಗುಪ್ಸಿತಾತ್ ।
ಪರಸ್ತ್ರೀಜನವಕ್ತ್ರೋಜಸಙ್ಗಮಾತ್ ಪಾಪಕಾರಣಾತ್ ॥೩೬॥

ವಿಶ್ವಾಮಿತ್ರ ಉವಾಚ.

ತಯಾ ಸಮ್ಬೋಧಿತೋಪ್ಯೇವಂ ನ ನ್ಯವರ್ತತ ಮೋಹಿತಃ ।
ತತ್ಸ್ವರಾಕರ್ಣನಾದ್ಭೃಶೋ ಮದನಾಗ್ನಿವಿವರ್ಧಿತಃ ॥೩೭॥
ಹಿರಣ್ಯಾನಾಂ ಸಹಸ್ರಾಣಿ ದತ್ತ್ವಾ ಕಾಮಸಿಪೀಡಿತಃ ।
ತಯಾ ಕಾಮಗೃಹಂ ಪ್ರಾಪ್ಯ ವಿಜಹಾರ ಯಥಾಸುಖಮ್ ॥೩೮॥
ತತಃ ಸರ್ವಸ್ವಹರಣೇ ತತ್ಪ್ರವೇಶೇಪಿ ವರ್ಜಿತೇ ।
ಯತ್ರಕುತ್ರಾಪಿ ಚಾಯೋರ್ಣಿ ಧನಮಾದಾಯ ಗಚ್ಛತಿ ॥೩೯॥

ಹಾನಿಯೂ ಧರ್ಮಕ್ಕೆ ಲೋಪವೂ ಪರದಲ್ಲಿ ನರಕವೂ ಇಹದಲ್ಲಿ ನಾನಾವಿಧ ರೋಗಗಳೂ ಉಂಟಾಗುವುವು. ಇನ್ನು ಇದಕ್ಕಿಂತಲೂ ನೀಚವಾದುದಾವುದುಂಟು? ॥೩೩—೩೪॥

ಸ್ತ್ರೀಯರ ಶರೀರವೆಂಬುದು, ಅಮೇಧ್ಯದಿಂದ ಪರಿಪೂರ್ಣವಾದುದು; ಕ್ರಿಮಿಗಳಿಂದಲೂ ಕೀವಿನಿಂದಲೂ ತುಂಬಿರುವುದು; ಸ್ವಭಾವತಃ ದುರ್ಗಂಧಭರಿತವಾದುದು; ಸುತರಾಂ ಅಪರಿಶುದ್ಧವಾದುದು. ಇಂತಹುದಾದರೂ ಸ್ಥಿರವಾಗಿಯಾದರೂ ಇರುವುದೋ ಎಂದರೆ, ಅದೂ ಇಲ್ಲ. ಇದಲ್ಲದೆ ಮಲಮೂತ್ರಗಳಿಗೆ ಮುಖ್ಯಾಶ್ರಯವಾಗಿರುವುದು. ಇಂತಹ ಈ ಸ್ತ್ರೀದೇಹದಲ್ಲಿ, ಮೂರ್ಖರಾದವರು ಆಸಕ್ತರಾಗುವರಲ್ಲದೆ, ಪಂಡಿತರಾದವರಿಂದಿಗೂ ಆಸಕ್ತರಾಗುವುದಿಲ್ಲ॥

ಎಲೈ ಮಹಾಪ್ರಾಜ್ಞನೆ! ಅತಿ ಕಶ್ಮಲವಾಗಿಯೂ ಸರ್ವಲೋಕಜುಗುಪ್ಸಿತವಾಗಿಯೂ ಕೇವಲ ಪಾಪಹೇತುವಾಗಿಯೂ ಇರುವ ಈ ಪರಸ್ತ್ರೀಸಂಗಮಾಭಿಲಾಷೆಯನ್ನು ಬಿಟ್ಟು ತಾವು ಹಿಂದಿರುಗಿ. ಎಂದು ಆವೇಶ್ಯೆ ಹೇಳಿದಳು ॥೩೬॥

ವಿಶ್ವಾಮಿತ್ರರು ಮುನಿಗಳನ್ನು ಕುರಿತು ಹೇಳುವರು:—

ಈರೀತಿಯಾಗಿ ಆ ವೇಶ್ಯೆಯಿಂದ ಬೋಧಿಸಲ್ಪಟ್ಟವನಾದರೂ, ಆ ಬ್ರಾಹ್ಮಣನು, ಮಧುರವಾದ ಅವಳ ಕಂಠರವವನ್ನು ಕೇಳಿದುದರಿಂದ ಮತ್ತೂ ಹೆಚ್ಚಾಗಿ ಕಾಮಾಗ್ನಿಜ್ವಲಿಸಿದವನಾಗಿ, ಆ ವೇಶ್ಯೆಯ ಮನೆಯಿಂದ ಹಿಂದಿರುಗಲೇ ಇಲ್ಲ ॥೩೭॥

ಅವಳಿಗೆ ಅಸಂಖ್ಯಾಕವಾಗಿ ಧನವನ್ನು ಕೊಟ್ಟು, ಕಾಮಬಾಣಹತನಾಗಿ ಅವಳೊಡನೆ ಕ್ರೀಡಾಗೃಹವನ್ನು ಪ್ರವೇಶಿಸಿ, ಸುಖವಾಗಿ ವಿಹರಿಸಿಕೊಂಡಿದ್ದನು ॥೩೮॥

ಹೀಗೆ ಕೆಲವುದಿವಸ ಕಳೆದಬಳಿಕ, ಇವನ ಸರ್ವಸ್ವವನ್ನೂ ಆ ವೇಶ್ಯೆಯು ಅಪಹರಿಸಿಬಿಟ್ಟಳು; ಅಮೇಲೆ ಅವನಿಗೆ ಅವಳ ಮನೆಯೊಳಕ್ಕೆ ಪ್ರವೇಶವೂ ತಪ್ಪಿಹೋಯ್ತು. ಹೀಗಾದಬಳಿಕ, ಆ ಬ್ರಾಹ್ಮಣನು ಎಲ್ಲೆಲ್ಲಿಯಾದರೂ ಕಳ್ಳತನಮಾಡಿ ಅವಳ ಮನೆಗೆ ಹೋಗಲುಪಕ್ರಮಿಸಿದನು॥೩೯

ಚೋರಕರ್ಮರತೋ ನಿತ್ಯಂ ನಿರ್ಮರ್ಯಾದೋ ಗತತ್ರಪಃ ।
ಚೋರೋಯಮಿತಿ ಸರ್ವತ್ರ ತಾಡಿತೋ ಬಹುಧಾ ಜನೈಃ ॥೪೦॥
ತದ್ಗರ್ಹೋಚ್ಛಿಷ್ಟಭುಙ್ನಿತ್ಯಂ ಪಾದಸಂವಾಹನೇ ರತಃ ।
ತದ್ಗೃಹೇಪಿ ಸ ಚೌರ್ಯೇಣ ತಯಾ ನಿಷ್ಕಾಸಿತೋ ಬಹಿಃ ॥೪೧॥
ತತಃ ಪುಲ್ಕಸಚಣ್ಡಾಲಮ್ಲೇಚ್ಛ ವರ್ಣಾಙ್ಗನಾರತಃ ।
ನಿನಾಯ ರಾತ್ರಿಂ ಚೌರ್ಯೇಣ ದಿವಾ ಮೈಥುನಕರ್ಮಣಾ ॥೪೨॥
ಭಕ್ಷಣಂ ಸರ್ವಮಾಂಸಾನಾಂ ಶ್ವನಾದೀನಾಂ ಚಕಾರ ಸಃ ।
ಮದ್ಯಪಾನಂ ಕಳಞ್ಜಸ್ಯ ಸರ್ವೋಚ್ಛಿಷ್ಟಸ್ಯ ಭಕ್ಷಣಮ್ ॥೪೩॥
ಈದೃಶಂ ನಾಗರಾ ದೃಷ್ಟ್ವಾ ದುರಾಚಾರಂ ಕೃತಾಗಸಮ್ ।
ಪುರಾನ್ನಿಷ್ಕಾಸಯಾಮಾಸುಃ ತಸ್ಮಾಚ್ಛ್ವಾದ್ವಿಜಾಧಮಾತ್ ॥೪೪॥
ಸ ತು ನಿಷ್ಕಾಸಿತೋ ವಿಪ್ರಃ ಪೌರೈರ್ಜಾನಪದೈರಪಿ ।
ಅಲಬ್ಧ್ವಾಸೋ ದುರಾತ್ಮಾ ವನಮೇವ ಜಗಾಮ ಸಃ ॥೪೫॥
ಸಹ ಚಣ್ಡಾಲಕಾಮಿನ್ಯಾ ತದನ್ನಕೃತಭೋಜನಃ ।
ವನೇಽಚರನ್ಮೃಗಾ ಹತ್ವಾ ಕಾಲಾನ್ತಕಯಮೋಪಮಃ ॥೪೬॥

ಅವನು ನಿತ್ಯವೂ ಕಳ್ಳತನಮಾಡುತ ಮರ್ಯಾದೆಯೂ ಲಜ್ಜೆಯೂ ಇಲ್ಲದೆ ತಿರುಗಲುಪಕ್ರಮಿಸಿದನು. ಆಗ ಅವನ ಕಳ್ಳತನವು ಚೆನ್ನಾಗಿ ಪ್ರಕಟವಾದಮೇಲೆ, ಎಲ್ಲೆಲ್ಲಿ ಹೋದರೂ ಜನರು ಇವನನ್ನು ಕಳ್ಳನೆಂದು ಹೇಳುತ ಹೊಡೆಯುತ ಬಂದರು. ಆಮೇಲೆ ಮತ್ತೇನೂ ಗತಿಯಿಲ್ಲದೆ, ಅವನು ಆ ವೇಶ್ಯಾಗೃಹದಲ್ಲಿ ಎಂಜಲನ್ನು ತಿಂದು ಹೊಟ್ಟೆಹೊರೆಯುತ, ಅವಳ ಕಾಲೊತ್ತಿಕೊಂಡಿದ್ದನು. ಅಲ್ಲಿಯೂ ಕದ್ದು, ಅವಳಿಂದಲೂ ಮನೆಯಿಂದ ಹೊರಗೆ ಹೊರಡಿಸಲ್ಪಟ್ಟನು ॥೪೦-೪೧॥

ಆಬಳಿಕ, ಹೊಲೆಯರು ಮಾದಿಗರು ಮ್ಲೇಚ್ಛರು ಮುಂತಾದವರ ಸ್ತ್ರೀಯರಲ್ಲಿ ಆಸಕ್ತನಾಗಿ, ಹಗಲೆಲ್ಲ ಆ ಸ್ತ್ರೀಯರೊಡನೆ ಕಾಲಕಳೆಯುತ, ರಾತ್ರಿಯನ್ನೆಲ್ಲ ಚೌರ್ಯದಲ್ಲಿ ಕಳೆಯುತಿದ್ದನು ॥೪೨॥

ಆವನು, ನಾಯಿ ಮೊದಲಾದ ಸಮಸ್ತಪ್ರಾಣಿಗಳ ಮಾಂಸವನ್ನೂ ಇನ್ನೂ ಇತರವಾದ ನಿಸಿದ್ಧಪದಾರ್ಥಗಳನ್ನೂ ಭಕ್ಷಿಸುತ, ಸರ್ವರ ಉಚ್ಛಿಷ್ಟವನ್ನೂ ತಿನ್ನುತ, ಮದ್ಯಪಾನವನ್ನೂ ಮಾಡುತಲಿದ್ದನು ॥೪೩॥

ಹೀಗೆ ದುರಾಚಾರಪರನಾಗಿಯೂ-ಸರ್ವರಿಗೂ ಚೌರ್ಯಾದಿಗಳಿಂದ ತೊಂದರೆಕೊಡುತಲೂ ಇರುವ ಆ ಬ್ರಾಹ್ಮಣನನ್ನು ನೋಡಿ, ಅಧಮನಾದ ಆ ಬ್ರಾಹ್ಮಣನಿಗೆ ಹೆದರಿದವರಾಗಿ, ಆ ಊರಿನವರು ಅವನನ್ನು ತಮ್ಮೂರಿನಿಂದ ಆಚೆಗೆ ಹೊರಡಿಸಿಬಿಟ್ಟರು ॥೪೪॥

ಹೀಗೆ ಆ ಊರಿನವರು ಹೊರಡಿಸಿದನಂತರ, ಆ ದೇಶದವರೊಬ್ಬರೂ ಅವನನ್ನು ತಮ್ಮ ದೇಶದಲ್ಲಿ ಇರಗೊಡಿಸದೆಹೋದರು. ಆಗ ದುಷ್ಟನಾದ ಅವನು ಎಲ್ಲಿಯೂ ವಾಸಕ್ಕೆ ಸ್ಥಳ ದೊರೆಯದೆ ಕಾಡಿಗೆ ಹೊರಟುಹೋದನು ॥೪೫॥

ಅಲ್ಲಿಯೂ ಒಬ್ಬ ಚಂಡಾಲಸ್ತ್ರೀಯನ್ನು ಇಟ್ಟುಕೊಂಡು, ಅವಳು ಮಾಡಿದ ಅನ್ನವನ್ನು ಆಹಾರಮಾಡುತ, ಪ್ರಳಯಕಾಲದ ಯಮನಂತೆ ಮಹಾಕ್ರೂರನಾಗಿ ಮೃಗಗಳನ್ನು ಕೊಲ್ಲುತ, ಅರಣ್ಯದಲ್ಲಿ ಸಂಚರಿಸುತಿದ್ದನು ॥೪೬॥

ತತೋ ಬಹುತಿಥೇ ಕಾಲೇ ವ್ಯತೀತೇ ವನಗಹ್ವರೇ ।
ವೃದ್ಧೋಭೂದ್ಬ್ರಾಹ್ಮಣಸ್ತತ್ರ ವಯಸಾ ಶತವಾರ್ಷಿಕಃ ॥೪೬॥
ತತಃ ಕ್ಷೀಣಬಲೋ ವಿಪ್ರೋ ವಾತಪಿತ್ತಕಫಾನ್ವಿತಃ ।
ವನಾಚ್ಛನೈರುಪಾಗಮ್ಯ ತಟಾಕಂ ಸಮುಪಾಶ್ರಿತಃ ।
ಗ್ರಾಮಾದ್ದೂರಸ್ಥಿತಂ ರಮ್ಯಂ ಪದ್ಮೋತ್ಪಲನಿಷೇವಿತಮ್ ॥೪೮॥
ಜೋರಸ್ತದಾ ಸಮಾಗಮ್ಯ ವೃಕ್ಷಮೂಲಮುಪಾಶ್ರಿತಃ ॥೪೯॥
ತತ್ರ ಸ್ಥಿತಃ ಪಿಪಾಸಾರ್ತಃ ಜಲಮಾದಾತುಮಕ್ಷಮಃ ।
ಪ್ರಾಣೋತ್ಕ್ರಮಣವೇಳಾಯಾಂ ಮುಖಂ ವ್ಯಾದಾಯ ತಿಷ್ಠತಿ ॥೪೧॥
ಏತಸ್ಮಿನ್ನೇವ ಸಮಯೇ ವಿಪ್ರಃ ಕಶ್ಚಿನ್ಮಹಾಮತಿಃ ।
ತತ್ಸರೋವರಮಾಗತ್ಯ ಪಾಕಂ ಕರ್ತುಂ ಮನೋ ದಧೇ ॥೪೨॥
ಸ್ನಾತ್ವಾ ಸರೋವರೇ ರಾಮಮನ್ತ್ರಂ ಜಪ್ತ್ವಾ ಕೃತಾಹ್ನಿಕಃ ।
ಕೃತ್ವಾ ಪಾಕಂ ಯಥಾಯೋಗಂ ಸೂಪಶಾಕಸಮನ್ವಿತಮ್ ॥೪೩॥
ಪ್ರಕ್ಷಾಳ್ಯ ಪಾಣೀ ಪಾದೌ ಚ ಪುನರ್ಮಾಸೋ ವಿಧಾಯ ಚ ।
ಆಚಮ್ಯ ಸಮ್ಯಗ್ರಾಮಸ್ಯ ಪೂಜಾರ್ಥಮುಪವಿಷ್ಟವಾ ॥೪೪॥

ಆಮೇಲೆ ಬಹುಕಾಲ ಕಳೆದನಂತರ, ಆ ಬ್ರಾಹ್ಮಣನು, ಆ ಅರಣ್ಯದಲ್ಲಿಯೇ ನೂರುವರ್ಷದ ಮುದುಕನಾಗಿಬಿಟ್ಟನು ॥೪೬॥

ಅನಂತರ, ಈ ಬ್ರಾಹ್ಮಣನಿಗೆ ದೇಹದಲ್ಲಿ ಬಲವೆಲ್ಲ ಕುಗ್ಗಿಹೋಯ್ತು; ವಾತ ಪಿತ್ತ ಕಫಗಳು ಹೆಚ್ಚಿಬಿಟ್ಟುವು. ಆಗ ಇವನು ಆ ಅರಣ್ಯದಿಂದ ಮೆಲ್ಲಗೆ ಹೊರಟು, ಊರಿಗಿಂತ ದೂರದಲ್ಲಿ ಮನೋಹರವಾಗಿರುವ ಪದ್ಮೋತ್ಪಲವಿಭೂಷಿತವಾದ ಒಂದು ತಟಾಕದ ತೀರವನ್ನು ಆಶ್ರಯಿಸಿದನು ॥೪೭॥

ಜೋರಬ್ರಾಹ್ಮಣನು, ಆಗ ಅಲ್ಲಿ ಒಂದು ಒಂದು ಆಲದಮರದ ಬುಡವನ್ನು ಆಶ್ರಯಿಸಿ, ಅಲ್ಲಿ ಮಲಗಿಕೊಂಡು, ಬಾಯಾರಿಕೆಯಿಂದ ಪೀಡಿತನಾಗಿ, ಆ ತಟಾಕದಲ್ಲಿರುವ ನೀರನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿಯಿಲ್ಲದೆ, ಪ್ರಾಣೋತ್ಕ್ರಮಣಕಾಲ ಬರಲಾಗಿ, ಬಾಯಿಬಿಟ್ಟುಕೊಂಡು ಮಲಗಿದ್ದನು ॥೪೯—೫೦॥

ಅದೇ ಸಮಯದಲ್ಲಿ, ಮತ್ತೊಬ್ಬ ಮಹಾವಿಜ್ಞಾನಿಯಾದ ಬ್ರಾಹ್ಮಣನು, ಆ ಸರೋವರತೀರಕ್ಕೆ ಬಂದು, ಪಾಕವನ್ನು ಮಾಡಬೇಕೆಂದು ಪ್ರಯತ್ನಪಟ್ಟನು ॥೫೧॥

ಅನಂತರ, ಅವನು ಆ ಸರೋವರದಲ್ಲಿ ಸ್ನಾನಮಾಡಿ, ರಾಮಮಂತ್ರವನ್ನು ಜಪಿಸಿ, ತನ್ನ ಆಹ್ನಿಕಕರ್ಮವನ್ನೆಲ್ಲ ಮುಗಿಯಿಸಿಕೊಂಡು, ಯಥಾನುಕೂಲವಾಗಿ ಸೂಪಶಾಕಸಮನ್ವಿತವಾದ ಅಡಿಗೆಯನ್ನು ಮಾಡಿ, ಕಯ್ಯಾಲುಗಳನ್ನು ತೊಳೆದುಕೊಂಡು, ಮತ್ತೆ ಮಡಿಬಟ್ಟೆಯನ್ನುಟ್ಟು, ಆಚಮನಮಾಡಿ, ಶ್ರೀರಾಮನನ್ನು ಚೆನ್ನಾಗಿ ಪೂಜಿಮಾಡುವುದಕ್ಕೋಸ್ಕರ ಕುಳಿತುಕೊಂಡನು ॥

ಅನಂತರ, ಶ್ರೀರಾಮಮೂರ್ತಿಗೆ ಅಭಿಷೇಕಮಾಡಿ, ಯಥಾವಿಧಿಯಾಗಿ ಪೂಜೆಮಾಡಿ, ನೈವೇದ್ಯವನ್ನೂ ತಾಂಬೂಲವನ್ನೂ ಸಮರ್ಪಿಸಿ, ಶಾಸ್ತ್ರೋಕ್ತರೀತಿಯಾಗಿ ಪೂಜೆಯನ್ನೆಲ್ಲ

ಅಭಿಷಿಚ್ಯ ತತೋ ರಾಮಂ ಪೂಜಾಂ ಕೃತ್ವಾ ಯಥಾವಿಧಿ ।
ದತ್ವಾ ನೈವೇದ್ಯತಾಮ್ಬೂಲೇ ಪೂಜಾಂ ನಿರ್ವರ್ತ್ಯ ಶಾಸ್ತ್ರತಃ ॥೫೪॥
ಧ್ಯಾತ್ವಾ ರಾಮಂ ಮಹಾಬಾಹುಂ ಸಸೀತಂ ಸಹಲಕ್ಷ್ಮಣಮ್ ।
ಬಲಿಂ ಚ ವಿಷ್ಣುಭಕ್ತಾನಾಂ ನೈವೇದ್ಯೇನಾಕರೋದ್ದ್ವಿಜಃ ॥೫೫॥
ಶಿಷ್ಯಾತಿಥಿಯುತೋ ಭುಕ್ತ್ವಾ ಸಮಾಚಮ್ಯ ಯಥಾವಿಧಿ ।
ರಾಮಾಯಣಂ ಪರಿತ್ಯಾಥ ಪ್ರಯಯೌ ಸ ಯಥಾಗತಮ್ ॥೫೬॥
ಕಶ್ಚಿತ್ ಕಾಕಃ ಸಮಾಗತ್ಯ ವಟಶಾಖಾಕೃತಾಲಯಃ ।
ಕೃತಾಂ ಬಲಿಂ ಪ್ರಸಾದೇನ ಬಲ್ಯಾದಿಭ್ಯೋ ದ್ವಿಜನ್ಮನಾ ॥೫೭॥
ಗೃಹೀತ್ವಾ ಗಸ್ತಮುಮ್ಮುಕ್ತಃ ತಮನ್ಯಃ ಸಮತಾಡಯತ್ ।
ತಾಡಿತಸ್ತುಣ್ಡಘಾತೇನ ತೀರ್ಥಗರ್ತೇ ಪಪಾತ ಸಃ ॥೫೮॥
ಪತಿತ್ವಾ ಪುನರುತ್ಥಾಯ ಪ್ರಾಪ್ಯ ಶಾಖಾಲಯಂ ಸ್ವಕಮ್ ।
ಪ್ರಸಾದಂ ಬುಭುಜೇ ತತ್ರ ನಾಯಸಃ ಪತತಾಂ ವರಃ ॥೫೯॥
ತಸ್ಯ ವಕ್ತ್ರಾತ್ ಪರಿಭ್ರಷ್ಟಂ ಸಿಕ್ಥಮೇಕಂ ಪಪಾತ ಹ ।
ವಿತ್ರಾಸಿತಖಗಾತ್ ತತ್ರ ವ್ಯಾದಿತಾಸ್ಯೇ ತರೋರಧಃ ।
ಪಕ್ಷವಾತಪರಿಭ್ರಷ್ಟಃ ತೀರ್ಥಬಿನ್ದುಕಣೋಪಿ ಚ ॥೬೦॥

ನೆರವೇರಿಸಿ, ಮಹಾಭುಜನಾದ ರಾಮಚಂದ್ರನನ್ನು ಸೀತಾದೇವಿಯೊಡನೆಯೂ ಲಕ್ಷ್ಮಣನೊಡನೆಯೂ ಧ್ಯಾನಮಾಡಿ, ಅನಂತರ ಆ ಬ್ರಾಹ್ಮಣನು ನೈವೇದ್ಯವನ್ನು ತೆಗೆದುಕೊಂಡು ವಿಷ್ಣುಭಕ್ತರಿಗೆ ಒಲಿಹರಣವನ್ನು ಇಟ್ಟನು ॥೫೪—೫೫॥

ಆಮೇಲೆ ಬ್ರಾಹ್ಮಣನು ಶಿಷ್ಯರೊಡನೆಯೂ ಅತಿಥಿಗಳೊಡನೆಯೂ ಭೋಜನಮಾಡಿ, ಯಥಾವಿಧಿಯಾಗಿ ಆಚಮನಮಾಡಿ, ರಾಮಾಯಣ ವಾರಾಯಣಮಾಡಿ, ಅನಂತರ ತಾನು ಬಂದ ದಾರಿಯಲ್ಲಿಯೇ ಹೊರಟುಹೋದನು ॥೫೬॥

ಆವನು ಹೊರಟುಹೋದನಂತರ, ಆ ಆಲದಮರದ ಕೊಂಬೆಯನ್ನು ಗೂಡುಮಾಡಿಕೊಂಡಿದ್ದ ಒಂದು ಕಾಗೆಯು, ಅಲ್ಲಿಂದ ಹಾರಿಬಂದು, ಆ ಬ್ರಾಹ್ಮಣನು ಒಲಿಯನ್ನು ತಿನ್ನುವವರಿಗೋಸ್ಕರವಾಗಿ ಹಾಕಿದ್ದ ಆ ಒಲಿಯನ್ನು ಬಾಯಲ್ಲಿ ಕಚ್ಚಿಕೊಂಡು, ಹೋಗುವುದಕ್ಕುಪಕ್ರಮಿಸಿತು. ಆಗ ಮತ್ತೊಂದು ಕಾಗೆ ಬಂದು ಅದನ್ನು ಹೊಡೆಯಿತು. ಅದರ ಬಾಯಿನ ಏಟಿನಿಂದ ಪೆಟ್ಟುತಿಂದು, ಆ ಮೊದಲಿನ ಕಾಗೆಯು, ಅಲ್ಲಿ ತೀರ್ಥೋದಕಮಿಶ್ರವಾಗಿದ್ದ ಗುಂಡಿಯಲ್ಲಿ ಬಿದ್ದುಬಿಟ್ಟಿತು. ಅಲ್ಲಿ ಬಿದ್ದು, ಮತ್ತೆ ಎದ್ದು, ಮರದ ಕೊಂಬೆಯಲ್ಲಿದ್ದ ತನ್ನ ಗೂಡಿಗೆ ಹೋಗಿ, ಅಲ್ಲಿ ಉತ್ತಮವಾಯಸವು ತಾನು ಮೊದಲು ಬಾಯಲ್ಲಿ ಕಚ್ಚಿಕೊಂಡು ತಂದಿದ್ದ ಶ್ರೀರಾಮನ ಪ್ರಸಾದವನ್ನು ಭಕ್ಷಿಸಿತು ॥೫೭ — ೫೯॥

ಅದು ಪ್ರಸಾದವನ್ನು ತಿನ್ನುವಾಗ, ಇತರ ಪಕ್ಷಿಗಳನ್ನು ಹೆದರಿಸುವ ಸಮಯದಲ್ಲಿ, ಅದರ ಬಾಯಿಂದ ಒಂದು ಅಗುಳು ಕೆಳಕ್ಕೆ ಜಾರಿಬಿದ್ದಿತು. ಅದು, ಆ ಮರದ ಕೆಳಗೆ ಮೊದಲೇ ಪ್ರಾಣೋತ್ಕ್ರಮಣದಶೆಯಲ್ಲಿ ಬಾಯಿಬಿಟ್ಟುಕೊಂಡು ಬಿದ್ದಿದ್ದ ಬ್ರಾಹ್ಮಣನ ಬಾಯೊಳಕ್ಕೆ ಸರಿಯಾಗಿ ಬಿದ್ದಿತು. ಮತ್ತು, ಆ ಕಾಗೆಯು ತನ್ನ ರಕ್ಕೆಯನ್ನು ಕೊಡಹುವಾಗ, ಅದು ಪೂರ್ವದಲ್ಲಿ ತೀರ್ಥದೊಳಗೆ ಬಿದ್ದಾಗ ಮೈಯಲ್ಲಿ ಸೇರಿಕೊಂಡಿದ್ದ ತೀರ್ಥದ ಹನಿಯೂ ಇವನ ಬಾಯೊಳಗೆ ಬಿದ್ದಿತು ॥೬೦॥

ತೀರ್ಥಪ್ರಸಾದಶುದ್ಧಾತ್ಮಾ ಸದ್ಯಃ ಪಞ್ಚತ್ವಮಾಗತಃ ।
ತತೋ ವಿಮಾನಮಾರುಹ್ಯ ಶಙ್ಖಚಕ್ರಗದಾಧರಃ ॥೬೧॥
ಪೀತವಾಸಾಶ್ಚತುರ್ಬಾಹುಃ ಕಣ್ಠಕೌಸ್ತುಭಶೋಭಿತಃ ।
ವಿಷ್ಣೋಃ ಸರೂಪತಾಂ ಪ್ರಾಪ್ತಃ ಚನ್ದ್ರಕೋಟಿಸುಶೀತಲಮ್ ॥೬೨॥
ಸೂರ್ಯಕೋಟಿಪ್ರತೀಕಾಶಂ ಪ್ರಯಯೌ ಹರಿಮನ್ದಿರಮ್ ॥೬೩॥
ದುರಾಚಾರೋಪಿ ದುಷ್ಟಾತ್ಮಾ ಮ್ಲೇಚ್ಛ ಚಣ್ಡಾಲತಾಂ ಗತಃ ।
ತೀರ್ಥಪ್ರಸಾದಶುದ್ಧಾತ್ಮಾ ಸೋಗಚ್ಛತ್ಪರಮಾಂ ಗತಿಮ್ ॥೬೪॥
ತಸ್ಮಾಚ್ಛ್ರೀರಾಮತೀರ್ಥಸ್ಯ ವಿಶಿಷ್ಯ ತುಲಸೀಯುಜಃ ।
ತತ್ಪ್ರಸಾದಸ್ಯ ಮಾಹಾತ್ಮ್ಯಂ ಕೋ ವಾ ವರ್ಣಯಿತುಂ ಕ್ಷಮಃ ॥೬೪॥

ಇತಿ ಶ್ರೀ ಬಾಲಕಾಣ್ಡೇ ಸಾಲಗ್ರಾಮಪೂಜಾ ತೀರ್ಥಪ್ರಸಾದವೈಭವ
ಕಥನಂ ನಾಮ ವಿಂಶತಿತಮಃ ಸರ್ಗಃ.



ಆಕ್ಷಣವೇ ಆ ಬ್ರಾಹ್ಮಣನು ತೀರ್ಥದಿಂದಲೂ ಪ್ರಸಾದದಿಂದಲೂ ಪರಿಶುದ್ಧನಾಗಿ ಮೃತಿಹೊಂದಿದನು. ಆಬಳಿಕ, ದಿವ್ಯವಿಮಾನವನ್ನು ಹತ್ತಿಕೊಂಡು, ಶಂಖ ಚಕ್ರ ಗದೆಗಳನ್ನು ಧರಿಸಿದವನಾಗಿ, ಪೀತಾಂಬರವನ್ನುಟ್ಟುಕೊಂಡು, ಚತುರ್ಭುಜನಾಗಿ, ಕಂಠದಲ್ಲಿ ದಿವ್ಯವಾದ ಕೌಸ್ತುಭಮಣಿಯಿಂದ ಅಲಂಕೃತನಾಗಿ, ವಿಷ್ಣುಸಾರೂಪ್ಯವನ್ನು ಪಡೆದು, ಚಂದ್ರಕೋಟಿಶೀತಲವಾಗಿಯೂ ಸೂರ್ಯಕೋಟಿಸಮಪ್ರಭಾವವಾಗಿಯೂ ಇರುವ ವೈಕುಂಠವನ್ನು ಪ್ರವೇಶಿಸಿದನು ॥೬೧-೬೩॥

ಹೀಗೆ ಆ ಬ್ರಾಹ್ಮಣನು, ದುರಾಚಾರನಾಗಿದ್ದರೂ—ದುಷ್ಟಾತ್ಮನಾಗಿದ್ದರೂ—ಮ್ಲೇಚ್ಛ ಜಾತಿ ಚಾಂಡಾಲಜಾತಿಗಳಿಗೆ ಸೇರಿಬಿಟ್ಟವನಾಗಿದ್ದರೂ, ತೀರ್ಥಪ್ರಸಾದಗಳಿಂದ ಪರಿಶುದ್ಧನಾಗಿ ಸದ್ಗತಿಯನ್ನು ಪಡೆದನು ॥೬೪॥

ಆದುಕಾರಣ, ಅಯ್ಯಾ ಬ್ರಾಹ್ಮಣರಾ! ಶ್ರೀರಾಮತೀರ್ಥದ—ತತ್ಸಾಪಿ ತುಳಸೀಯುಕ್ತವಾದ ತೀರ್ಥದ—ಮಹಿಮೆಯನ್ನೂ, ಅವನ ಪ್ರಸಾದದ ಮಹಿಮೆಯನ್ನೂ ಕೂಡ, ಈ ಲೋಕದಲ್ಲಿ ಯಾರುತಾನೆ ವಿವರಿಸಬಲ್ಲರು? ॥೬೫॥

ಇದು ಬಾಲಕಾಂಡದಲ್ಲಿ ಸಾಲಗ್ರಾಮಪೂಜಾತೀರ್ಥಪ್ರಸಾದ
ವೈಭವಕಥನವೆಂಬ ಇಪ್ಪತ್ತನೆಯ ಸರ್ಗವು.



ಅಥ ಶ್ರೀಬಾಲಕಾಣ್ಡೇ ಏಕವಿಂಶಃ ಸರ್ಗಃ.

ಮುನಯಊಚುಃ.

ವದ ಕೌಶಿಕ ಭದ್ರಂ ತೇ ತುಲಸ್ಯಾವೈಭವಂ ಶುಭಮ್ |
ಯಯಾ ಸಮ್ಪೂಜಿತೋ ರಾಮೋ ವಾಞ್ಛಿತಾರ್ಥಾನ್ ಪ್ರಯಚ್ಛತಿ ॥೧॥

ವಿಶ್ವಾಮಿತ್ರಉವಾಚ.

ಶೃಣುಧ್ವಮೃಷಯಃ ಶ್ರೀಮತ್ತುಲಸ್ಯಾವೈಭವಂ ಶುಭಮ್ |
ಪೂರ್ವಮುಗ್ರಂ ತಪಃ ಕೃತ್ವಾ ತುಲಸೀ ವರದಂ ಹರಿಮ್ ॥೨॥
ಸಮಸ್ತಪತ್ರಪುಷ್ಪೇಭ್ಯಃ ಶ್ರೈಷ್ಠ್ಯಂ ಮೇ ದೇಹಿ ಕೇಶವ |
ತ್ವತ್ಪ್ರಿಯಾತ್ವಂ ಚ ದೇಹೀತಿ ವರಂ ವವ್ರೇ ತಪಸ್ವಿನೀ ॥೩॥
ತುಲಸೀ ಸರ್ವಪುಷ್ಪೇಭ್ಯಃ ಪತ್ರೇಭ್ಯೋ ವಲ್ಲಭಾ ತತಃ |
ವಿಷ್ಣೋಸ್ತ್ರೈಲೋಕ್ಯನಾಥಸ್ಯ ರಾಘವಸ್ಯೇವ ಜಾನಕೀ ॥೪॥
ತುಲಸೀಪತ್ರಮಾತ್ರೇಣ ಯೋರ್ಚಯೇದಾತ್ಮಮನ್ವಹಮ್ |
ಸ ಯಾತಿ ಶಾಶ್ವತಂ ಬ್ರಹ್ಮಾಪುನರಾವೃತ್ತಿ ದುರ್ಲಭಮ್ ॥೫॥

ಬಾಲಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗವು

ಮುನಿಗಳು ವಿಶ್ವಾಮಿತ್ರಋಷಿಯನ್ನು ಕೇಳುವರು :—

ಎಲೈ ವಿಶ್ವಾಮಿತ್ರಮುನಿಯೆ! ನಿನಗೆ ಮಂಗಳವಾಗಲಿ. ತುಲಸಿಯಿಂದ ಪೂಜಿತನಾಗಿ ಶ್ರೀರಾಮನು ಸಕಲವಾದ ಇಷ್ಟಾರ್ಥಗಳನ್ನೂ ಕೊಡುವನೆಂದು ನೀನು ಹೇಳಿದೆಯಲ್ಲವೆ! ಅಂತಹ ತುಲಸಿಯ ಶುಭವಾದ ಮಹಿಮೆಯನ್ನು ಈಗ ನಮಗೆ ವಿಸ್ತರಿಸುವನಾಗು ॥೧॥

ವಿಶ್ವಾಮಿತ್ರಮುನಿಯು ಹೇಳುವನು :—

ಆಯ್ಯಾ ಋಷಿಗಳಿರಾ! ಸರ್ವೋತ್ತಮವಾದ ಈ ತುಲಸಿಯ ಮಹಿಮೆಯನ್ನು ಈಗ ನೀವು ಕೇಳುವರಾಗಿರಿ. ಪೂರ್ವದಲ್ಲಿ, ತುಲಸಿಯು ಅತ್ಯುಗ್ರವಾದ ತಪಸ್ಸನ್ನು ಮಾಡಿ, ವರವನ್ನು ಕೊಡುವುದಕ್ಕೆ ಒಂದ ಶ್ರೀಹರಿಯನ್ನು ಕುರಿತು 'ಎಲೈ ಕೇಶವನೆ! ಸಮಸ್ತವಾದ ಪತ್ರಪುಷ್ಪಗಳಲ್ಲಿಯೂ ನನಗೆ ಶ್ರೇಷ್ಠತ್ವವನ್ನನುಗ್ರಹಿಸು ನಾನು ನಿನಗೆ ಪ್ರಿಯೆಯಾಗಿರುವಂತೆಯೂ ವರವನ್ನು ಕೊಡು' ಎಂದು ವರವನ್ನು ಕೇಳಿಕೊಂಡಳು ॥೨-೩॥

ಅದುದರಿಂದ ತುಲಸಿಯು ಸಮಸ್ತ ಪತ್ರಗಳಲ್ಲಿಯೂ ಪುಷ್ಪಗಳಲ್ಲಿಯೂ ಶ್ರೇಷ್ಠಳಾಗಿರುವಳು. ಮತ್ತು, ಶ್ರೀರಾಮನಿಗೆ ಸೀತೆಯು ಪ್ರೀತಿಪಾತ್ರಳಾಗಿರುವಂತೆ, ತ್ರಿಲೋಕಪತಿಯಾದ ವಿಷ್ಣುವಿಗೆ ಈ ತುಲಸಿಯು ಪ್ರೀತಿಪಾತ್ರಳಾಗಿರುವಳು ॥೪॥

ಯಾವ ಮನುಷ್ಯನು, ಪ್ರತಿದಿವಸವೂ ಒಂದೇ ಒಂದು ತುಲಸಿಯ ಎಲೆಯಿಂದಲಾದರೂ ಶ್ರೀರಾಮನನ್ನು ಪೂಜಿಸುವನೋ, ಅವನು ಸಾಮಾನ್ಯರಿಗೆ ದುರ್ಲಭವಾದ ಪುನರಾವೃತ್ತಿ ರಹಿತವಾದ ಬ್ರಹ್ಮಪದವಿಯನ್ನು ಹೊಂದುವನು ॥೫॥

ನೀಲೋತ್ಪಲೈರ್ವರ್ಷಶತಂ ತ್ರಿಸನ್ಧ್ಯಂ ಹರಿಪೂಜನಾತ್ ।
ಯತ್ಫಲಂ ತ್ವೇಕತುಲಸೀದಳಾರ್ಪಣಸಮಂ ತತಃ ॥೬॥

ಯೋಗ್ಯಪುಷ್ಪೇಷು ಸರ್ವೇಷು ಪಙ್ಕಜಂ ಶ್ರೇಷ್ಠಮುಚ್ಯತೇ ।
ತತ್ಪುಷ್ಪೈಃ ಪ್ಯಪಿ ತನ್ನಾಲ್ಯಂ ಲಕ್ಷಕೋಟಿಗುಣಂ ಭವೇತ್ ॥೭॥

ವಿಷ್ಣೋಃ ಶಿರಸಿ ವಿನ್ಯಸ್ತಂ ಏಕಂ ಶ್ರೀತುಲಸೀದಳಮ್ ।
ಅನನ್ತಫಲದಂ ತಸ್ಮಾತ್ ಮನೋ್ತ್ಪೀಚ್ಚಾರಣಪೂರ್ವಕಮ್ ॥೮॥

ಪುಷ್ಪಾನ್ತರೈರನ್ತರಿತಂ ನಿರ್ಮಲಂ ತುಲಸೀದಳೈಃ ।
ಮೂಲ್ಯಂ ಮಲಯಜಾಲಿಪ್ತಂ ದದ್ಯಾಚ್ಛ್ರೀರಾಮಮೂರ್ಧನಿ ॥೯॥

ಕಿಂ ತಸ್ಯ ಬಹುಭಿರ್ಯಜ್ಞೈಃ ಸಮ್ಪೂರ್ಣವರದಕ್ಷಿಣೈಃ ।
ಕಿಂ ತೀರ್ಥಸೇವಯಾ ದಾನೈಃ ಉಗ್ರೈಃ ತಪಸಾಪಿ ವಾ ॥೧೦॥

ಕಾಲೇ ನಿಯಮ್ಯ ಚಾತ್ಮಾನಂ ಮನೋ ಹೃದಿ ನಿಧಾಯ ಚ ।
ಯೋರ್ಚಯೇತ್ ತುಲಸೀಮಾಲ್ಯೈಃ ಯಜ್ಞಕೋಟಿಫಲಂ ಲಭೇತ್ ॥೧೧॥

ಒಂದುನೂರು ವರ್ಷದವರೆಗೂ ಮೂರುಕಾಲದಲ್ಲೂ ನೀಲೋತ್ಪಲಪುಷ್ಪಗಳಿಂದ ವಿಷ್ಣುವನ್ನು ಪೂಜಿಸಿದರೆ ಯಾವ ಫಲವು ಬರುವುದೋ, ಅದು-ಭಕ್ತಿಯಿಂದ ಒಂದು ತುಲಸೀದಳವನ್ನು ಸಮರ್ಪಿಸುವುದರ ಫಲಕ್ಕೆ ಸಮಾನವಾಗಬಹುದು ॥೬॥

ಈ ಲೋಕದಲ್ಲಿ ನಾನಾವಿಧ ಪುಷ್ಪಗಳಿರುವುವಷ್ಟೆ! ಅವುಗಳೆಲ್ಲವೂ ಶ್ರೀ ವಿಷ್ಣುವಿನ ಪೂಜೆಗೆ ಯೋಗ್ಯವಾಗಲಾರವು. ಮಲ್ಲಿಕಾ ಜಾತೀ ಸೇವಂತಿಕಾದಿಗಳಾದ ಕೆಲವು ಪುಷ್ಪಗಳು ಮಾತ್ರವೇ ಶ್ರೀವಿಷ್ಣುಪೂಜೆಗೆ ಯೋಗ್ಯವಾಗಿರುವುವು. ಹೀಗೆ ಯೋಗ್ಯವೆನ್ನಿಸುವ ಪುಷ್ಪಗಳಲ್ಲೆಲ್ಲ, ಕಮಲಪುಷ್ಪವು ಶ್ರೇಷ್ಠವೆನ್ನಿಸುವುದು. ಅದರೊಳಗೂ, ಕಮಲಪುಷ್ಪದಲ್ಲಿ ಮಾಡಿದ ಮಾಲಿಕೆಯು ಲಕ್ಷಕೋಟಿ ಗುಣವಾಗುವುದು ವಿಷ್ಣುವಿನ ಶಿರಸ್ಸಿನಲ್ಲಿ ಭಕ್ತಿಯಿಂದ ಸಮರ್ಪಿಸಲ್ಪಟ್ಟ ಒಂದು ತುಲಸೀದಳದ ಫಲಕ್ಕೆ ಕೊನೆಯೇ ಇಲ್ಲವಾಗಿರುವುದು. ಅದುಕಾರಣ, ಶ್ರೀರಾಮ ಮಂತ್ರೋಚ್ಚಾರಣಪುರಸ್ಸರವಾಗಿ, ಮಧ್ಯಮಧ್ಯದಲ್ಲಿ ಇತರ ಪುಷ್ಪಗಳನ್ನು ಸೇರಿಸಿ ತುಲಸೀದಳದಿಂದ ಮಾಡಿದ ಉತ್ತಮವಾದ ಮಾಲಿಕೆಯನ್ನು, ಗಂಧದಲ್ಲಿ ಅದ್ದಿ ಶ್ರೀರಾಮಚಂದ್ರನ ಶಿರಸ್ಸಿನಲ್ಲಿ ಸಮರ್ಪಿಸಬೇಕು ॥೭-೯॥

ಈರೀತಿಯಾಗಿ ಸಮರ್ಪಿಸತಕ್ಕವನಿಗೆ, ಯಥಾವಿಧಿಯಾಗಿ ಸಮಗ್ರವಾದ ದಕ್ಷಿಣೆಯನ್ನು ಕೊಟ್ಟು ಮಾಡಿದ ಅನೇಕವಿಧ ಯಾಗಗಳೂ, ತೀರ್ಥಸೇವೆಯೂ, ನಾನಾವಿಧ ಮಹಾದಾನಗಳೂ, ಉಗ್ರವಾದ ತಪಸ್ಸೂ ಏತಕ್ಕೆ? ॥೧೦॥

ಆದುಕಾರಣ, ಸರಿಯಾದ ಕಾಲದಲ್ಲಿ, ಆತ್ಮನಿಯಮನಮಾಡಿಕೊಂಡು, ಮನಸ್ಸನ್ನು ಹೊರಕ್ಕೆ ಬಿಡದೆ ಹಿಡಿದು, ಯಾವನು ತುಲಸೀಮಾಲಿಕೆಗಳಿಂದ ಶ್ರೀ ವಿಷ್ಣುವನ್ನು ಅರ್ಚಿಸುವನೋ, ಅವನು ಕೋಟಿಯಜ್ಞಗಳ ಫಲವನ್ನು ಹೊಂದುವನು ॥೧೧॥

ಭವಾನ್ಧಕೂಪಮಗ್ನಾನಾಂ ವಿತರುದ್ಧಾರಕಂ ಶುಭಮ್ ।
ಪತ್ರಂ ಪುಷ್ಪಂ ಚ ಗೋವಿನ್ದೇ ಶ್ರೀತುಲಸ್ಯಾ ಸಮರ್ಪಿತಮ್ ॥೧೦॥
ತುಲಸೀವಾಟಿಕಾ ಯತ್ರ ಪುಷ್ಪವಲ್ಲೀಶತಾವೃತಾ ।
ಶೋಭತೇ ರಾಘವಸ್ತತ್ರ ಸೀತಯಾ ಸಹಿತಃ ಸ್ವಯಮ್ ॥೧೧॥
ಅರೋಪಯನ್ತಿ ಯೇ ಭಕ್ತ್ಯಾ ಸ್ವಯಂ ಚ ತುಲಸೀತರೂನ್ ।
ಅಯನಾಯ ತದೇವಾಲಂ ನಾನ್ಯದಭ್ಯರ್ಹಿತಂ ತತಃ ॥೧೨॥
ಸಾಲಗ್ರಾಮಶಿಲಾತೀರ್ಥಂ ತುಲಸೀದಳವಾಸಿತಮ್ ।
ಯೇ ಪಿಬನ್ತಿ ಪುನಸ್ತೇಷಾಂ ಸತ್ಯಂ ಪಾಪಂ ನ ವಿದ್ಯತೇ ॥೧೩॥
ಗಾಙ್ಗೀಯಮಿವ ತೋಯೇಷು ಪೂಜ್ಯೇಷ್ವಿವ ರಘೂತ್ತಮಃ ।
ಸರೋಜಮಿವ ಪುಷ್ಪೇಷು ಶಸ್ಯತೇ ತುಲಸೀದಳಮ್ ॥೧೪॥
ಸಮ್ಪೂಜ್ಯ ಭಕ್ತ್ಯಾ ವಿಧಿವತ್ ರಾಮಂ ಶ್ರೀತುಲಸೀದಳೈಃ ।
ಭವಾನ್ತರಸಹಸ್ರೇಷು ದುಃಖಗ್ರಾಮೈರ್ವಿಮುಚ್ಯತೇ ॥೧೫॥
ವರ್ಣಾಶ್ರಮೇತರಾಣಾಂ ಚ ಪೂಜನಂ ಜ್ಯೈವ ಸಾಧನಮ್ ।
ಅಪೇಕ್ಷಿತಾರ್ಥದಂ ನಾನ್ಯತ್ ಜಗತ್ಸ್ವಸ್ತಿ ತಪೋಧನಾಃ ॥೧೬॥

ಸಂಸಾರವೆಂಬ ಹಾಳುಬಾವಿಯಲ್ಲಿ ಬಿದ್ದಿರುವವರಿಗೆ, ಶ್ರೀತುಲಸಿಯೊಡನೆ ಸೇರಿಸಿ ಶ್ರೀಮನ್ನಾರಾಯಣನಿಗೆ ಪತ್ರಪುಷ್ಪಗಳು ಸಮರ್ಪಿಸಲ್ಪಡುವುದು ಯಾವುದುಂಟೋ, ಅದೇ ಪರಮೋದ್ಧಾರಕವಾದುದು ॥೧೨॥

ಯಾವ ಸ್ಥಳದಲ್ಲಿ, ನಾನಾವಿಧವಾದ ಹೂವಿನ ಗಿಡಗಳೊಡನೆ ತುಲಸೀವನವಿರುವುದೋ, ಅಲ್ಲಿ ಶ್ರೀರಾಮನು ಸೀತೆಯೊಡನೆ ಸ್ವಯಂ ಸನ್ನಿಹಿತನಾಗಿರುವನು ॥೧೩॥

ಯಾರು ಭಕ್ತಿಯಿಂದ ತುಲಸಿಗಿಡಗಳನ್ನು ಹಾಕಿ ಬೆಳೆಯಿಸುವರೋ, ಅವರಿಗೆ ಅದೇ ಮೋಕ್ಷಪ್ರಾಪ್ತಿಗೆ ಸಾಕಾದ ಸಾಮಗ್ರಿಯಾಗಿರುವುದು; ಅದಕ್ಕಿಂತಲೂ ಅಧಿಕವಾದ ಮೋಕ್ಷ ಸಾಧನವಾವುದೂ ಇಲ್ಲ ॥೧೪॥

ಯಾರು ತುಲಸೀದಳದಿಂದ ಸುವಾಸನಾಯುಕ್ತವಾದ ಸಾಲಗ್ರಾಮತೀರ್ಥವನ್ನು ಪ್ರಾಶನಮಾಡುವರೋ, ಅವರಿಗೆ ಪುನಃ ಪಾಪಸಂಬಂಧವಿರುವುದೇ ಇಲ್ಲ. ಇದು ಸತ್ಯವಾದ ಮಾತು॥

ನೀರಿನಲ್ಲೆಲ್ಲ ಗಂಗಾಜಲದಂತೆಯೂ, ಪೂಜಾರ್ಹರಾದವರಲ್ಲೆಲ್ಲ ಶ್ರೀರಾಮಚಂದ್ರಮೂರ್ತಿಯಂತೆಯೂ, ಪುಷ್ಪಗಳಲ್ಲೆಲ್ಲ ಕಮಲದಂತೆಯೂ, ತುಲಸೀದಳವು ವಿಷ್ಣುಪೂಜಾಸಾಮಗ್ರಿಗಳಲ್ಲೆಲ್ಲ ಪ್ರಶಸ್ತವಾಗಿರುವುದು ॥೧೫॥

ಶ್ರೀ ತುಲಸೀದಳಗಳಿಂದ ಶ್ರೀರಾಮನನ್ನು ಯಥಾವಿಧಿಯಾಗಿ ಪೂಜೆಮಾಡಿದವನು, ಹಿಂದೆ ಸಾವಿರಾರು ಜನ್ಮಗಳಲ್ಲಿ ಮಾಡಿರುವ ಪಾಪದಿಂದಲೂ ಉಂಟಾದ ದುಃಖಗಳೆಂದೆಲ್ಲ ಮುಕ್ತನಾಗುವನು ॥೧೬॥

ಅಪಾಪ್ಯಾ! ತಪೋಧನರೆ! ಬ್ರಾಹ್ಮಣಾದಿ ವರ್ಣಗಳಲ್ಲಿರುವವರಿಗೂ, ಬ್ರಹ್ಮಚರ್ಯಾದ್ಯಾಶ್ರಮಗಳಲ್ಲಿರತಕ್ಕವರಿಗೂ, ಇತರರಿಗೂ ಕೂಡ, ಈ ತುಲಸೀಪೂಜನೆಯೇ ಮುಖ್ಯಸಾಧನವು. ಇದನ್ನು ಬಿಟ್ಟಿರೆ, ಇಷ್ಟಾರ್ಥವನ್ನು ಕೊಡುವ ಸಾಧನವು ಈ ಜಗತ್ತಿನಲ್ಲಿ ಮತ್ತಾವುದೂ ಇಲ್ಲ ॥೧೪॥

ಪೂಜಾಯೋಗ್ಯೈರ್ದಳೈಃ ಪತ್ರೈಃ ಪುಷ್ಪೈರ್ವಾ ಯೋರ್ಚಯೇದ್ಧರಿಮ್ ।
ಯಾನಿ ನ್ಯೂನಾನಿ ತಾನೀಹ ತುಲಸ್ಯಾ ಸಫಲಾನ್ಯಹೋ ॥೧೯॥
ನ ತಸ್ಯ ನರಕಕ್ಲೇಶಃ ಯೋರ್ಚಯೇತ್ ತುಲಸೀದಳೈಃ ।
ಪಾಪಿಷ್ಠೋ ವಾಪ್ಯಪಾಪಿಷ್ಠಃ ಸತ್ಯಂಸತ್ಯಂ ನ ಸಂಶಯಃ ॥೨೦॥
ಗಙ್ಗಾತೋಯೇನ ತುಲಸೀದಳಯುಕ್ತೇನ ಯೋರ್ಚಯೇತ್ ।
ರಾಮಂ ನಿಕ್ಷಿಪ್ಯ ಮನಸಿ ರಾಮಮನ್ತ್ರೇಣ ಸೇಚಯೇತ್ ॥೨೧॥
ಅಸಕೃದ್ವಾ ಸಕೃದ್ವಾಪಿ ಯಏತದನುತಿಷ್ಠತಿ ।
ಧ್ಯೇಯೋ ಭವತಿ ಸರ್ವೇಷಾಂ ಅಯಮೇವ ವಿಮುಕ್ತಯೇ ॥೨೨॥
ನ ಸನ್ತಿ ಗುರವೋ ಯಸ್ಯ ನೈವ ದೀಕ್ಷಾವಿಧಿಕ್ರಮಃ ।
ರಾಮರಕ್ಷಾಂ ವದನ್ನೇವ ತುಲಸೀದಳಮರ್ಪಯೇತ್ ॥೨೩॥
ದೀಕ್ಷಾನ್ತರಶತೇನಾಪಿ ನೈತತ್ ಫಲಮವಾಪ್ಯತೇ ।
ದೀಕ್ಷಿತೇಷ್ವಪಿ ಸರ್ವೇಷು ರಾಮದೀಕ್ಷಿತಉತ್ತಮಃ ॥೨೪॥
ನ ಗುರುಂ ನೈವ ಕಾಲಂ ಚ ನ ದೇವಾನ್ತರಸೇವನಮ್ ।
ತುಲಸೀದಳಯುಕ್ತಂ ಹಿ ರಾಮೋರ್ಚನಮಪೇಕ್ಷತೇ ॥೨೫॥

ಪೂಜೆಮಾಡುವುದಕ್ಕೆ ಯೋಗ್ಯವಾದ ದಳಗಳಿಂದಾಗಲಿ – ಎಲೆಗಳಿಂದಾಗಲಿ— ಪುಷ್ಪಗಳಿಂದಾಗಲಿ—ಯಾವನು ಶ್ರೀಹರಿಯನ್ನು ಪೂಜಿಸುವನೋ, ಅವನು ಮಾಡಿದ ಪೂಜೆಯಲ್ಲಿ ಏನಾದರೂ ಲೋಪವಿದ್ದರೆ, ಅದು ಈ ತುಲಸೀಪೂಜೆಯಿಂದ ಪರಿಪೂರ್ಣವಾಗಿ, ಅವನ ಪೂಜೆಯೆಲ್ಲವೂ ಸಫಲವಾಗುವುದು ॥೧೯॥

ಯಾವನು ತುಲಸೀದಳಗಳಿಂದ ಶ್ರೀರಾಮನನ್ನು ಅರ್ಚಿಸುವನೋ, ಅವನು— ಪಾಪಯುಕ್ತನಾಗಿದ್ದರೂ—ಅಥವಾ ಪಾಪರಹಿತನಾಗಿದ್ದರೂ—ನರಕಯಾತನೆಯನ್ನೆಂದಿಗೂ ಅನುಭವಿಸುವುದಿಲ್ಲ ॥೨೦॥

ಶ್ರೀರಾಮಚಂದ್ರನನ್ನು ಮನಸ್ಸಿನಲ್ಲಿ ಧ್ಯಾನಮಾಡುತ, ಯಾವನು ತುಲಸೀದಳಮಿಶ್ರವಾದ ಗಂಗಾಜಲದಿಂದ ಶ್ರೀ ವಿಷ್ಣುಪ್ರತಿಮೆಗೆ ಅಭಿಷೇಕಮಾಡಿ ಪೂಜಿಸುವನೋ, ಇದನ್ನು ಅನೇಕವೇಳೆಯಾದರೂ—ಅಥವಾ ಒಂದೇಸಲವಾದರೂ ಮಾಡಿದರೂಕೂಡ, ಎಲ್ಲರೂ ಇವನನ್ನೇ ಮುಕ್ತಿಗೋಸ್ಕರ ಧ್ಯಾನಿಸಬೇಕಾಗುವುದು ॥೨೧–೨೨॥

ಯಾವನಿಗೆ ಉತ್ತಮರಾದ ಗುರುಗಳು ಸಿಕ್ಕುವುದಿಲ್ಲವೋ, ದೀಕ್ಷಾವಿಧಿಗಳು ಉಪದೇಶದಿಂದ ಯಾವನಿಗೆ ಲಬ್ಧವಾಗುವುದಿಲ್ಲವೋ, ಅವನು ರಾಮರಕ್ಷಾಮಂತ್ರವೊಂದನ್ನೇ ಪಾರಾಯಣಮಾಡುತ, ತುಲಸೀದಳವನ್ನು ಶ್ರೀರಾಮನಲ್ಲಿ ಸಮರ್ಪಿಸುವುದೇ ಸಾಕಾಗಿರುವುದು ॥೨೩॥

ಇತರವಿಧವಾದ ನೂರಾರುಮಂತ್ರದೀಕ್ಷೆಗಳನ್ನು ಮಾಡಿದರೂ ಈ ಫಲವು ಲಭ್ಯವಾಗುವುದಿಲ್ಲ. ಇತರವಿಧವಾದ ದೀಕ್ಷೆಯನ್ನು ಮಾಡಿರತಕ್ಕವರಲ್ಲೆಲ್ಲ, ಶ್ರೀರಾಮಮಂತ್ರದೀಕ್ಷೆಯನ್ನು ಮಾಡತಕ್ಕವನೇ ಉತ್ತಮನು ॥೨೪॥

ತುಲಸೀದಳದಿಂದ ಶ್ರೀರಾಮನನ್ನು ಪೂಜಿಸುವಿಕೆಯು, ಗುರುವನ್ನೂ ಕಾಲನಿಯಮವನ್ನೂ ಇತರ ದೇವತಾಸೇವೆ ಮುಂತಾದುದೊಂದನ್ನೂ ಅಪೇಕ್ಷಿಸುವುದಿಲ್ಲ ॥೨೫॥

ನಿರ್ಮಾಲ್ಯತುಲಸೀಮಾಲಾಯುಕ್ತೋ ಯದ್ಯರ್ಚಯೇದ್ಧರಿಮ್ ।
ಯದ್ಯತ್ ಕರೋತಿ ತತ್ ಸರ್ವಂ ಅನನ್ತಫಲದಂ ಭವೇತ್ ॥೨೬॥
ಯದ್ಯನ್ಯೂನಂ ಭವತ್ಯೇವ ರಾಮಾರಾಧನಸಾಧನೇ ।
ತುಲಸೀದಳಮಾತ್ರೇಣ ಯುಕ್ತಂ ತತ್ ಪರಿಪೂರ್ಯತೇ ॥೨೭॥
ಸಾಲಗ್ರಾಮಶಿಲಾಯಾಶ್ಚ ಗಙ್ಗಾಯಾಶ್ಚ ತಪೋಧನಾಃ ।
ತುಲಸ್ಯಾಶ್ಚೈವ ಮಾಹಾತ್ಮ್ಯಂ ವಕ್ತುಂ ಶಕ್ತೋ ನ ವಿಶ್ವಕೃತ್ ॥೨೮॥
ಭವಭಞ್ಜನಮೇತದ್ವಃ ಸರ್ವಾಭೀಷ್ಟಂ ಪ್ರಯಚ್ಛತಿ ।
ನಾತಃ ಪರತರಂ ಕಿಂಚಿತ್ ಪಾವನಂ ವಿದ್ಯತೇ ಭುವಿ ॥೨೯॥
ಯಃ ಕುರ್ಯಾತ್ ತುಲಸೀಕಾಷ್ಠೈಃ ಅಕ್ಷ್ನಮಾಲಾಂ ಸುರೂಪಿಣೀಮ್ ।
ಕಣ್ಠಮಾಲಾಂ ಚ ಯತ್ನೇನ ಕೃತಂ ತಸ್ಯಾಕ್ಷ್ಣಯಂ ಭವೇತ್ ॥೩೦॥
ಸಙ್ಗೃಹ್ಯ ತುಲಸೀಕಾಷ್ಠಂ ಯದ್ದದ್ಯಾದ್ರಾಮಮೂರ್ಧನಿ ।
ಕರ್ಪೂರಾಗರುಕಸ್ತೂರೀಚನ್ದನಾದಿ ನ ತತ್ಸಮಮ್ ॥೩೧॥
ತುಲಸೀವಿಪಿನಸ್ಯಾಪಿ ಸಮನ್ತಾತ್ ಪಾವನಂ ಸ್ಥಲಮ್ ।
ಕ್ರೋಶಮಾತ್ರಂ ಭವತ್ಯೇವ ಗಾಙ್ಗೇಯಸ್ಯೇವ ಪಾವನಮ್ ॥೩೨॥

ನಿರ್ಮಾಲ್ಯವಾದ ತುಲಸೀಮಾಲಿಕೆಯನ್ನು ತಾನು ಧರಿಸಿಕೊಂಡು ಶ್ರೀಹರಿಯನ್ನು ಪೂಜಿಸಿದರೆ, ಆಗ ಇವನು ಏನೇನುಮಾಡುವನೋ—ಅದೆಲ್ಲವೂ ಅನಂತವಾದ ಫಲವನ್ನು ಕೊಡತಕ್ಕುದಾಗುವುದು ॥೨೬॥

ಶ್ರೀರಾಮ ಪೂಜಾಸಾಮಗ್ರಿಯೊಳಗೆ ಯಾವಯಾವುದು ನ್ಯೂನವಾಗಿರುತ್ತದೆಯೋ, ಒಂದು ತುಲಸೀದಳಮಾತ್ರದಿಂದ ಯುಕ್ತವಾದರೆ—ಅದೆಲ್ಲವೂ ಪರಿಪೂರ್ಣವಾಗುವುದು ॥೨೭॥

ಅಯ್ಯಾ ತಪೋಧನರಾ! ಸಾಲಗ್ರಾಮಶಿಲೆಯ ಮಹಿಮೆಯನ್ನೂ, ಗಂಗೆಯ ಮಹಿಮೆಯನ್ನೂ, ತುಲಸಿಯ ಮಹಿಮೆಯನ್ನೂ ಕೂಡ, ಸಾಕ್ಷಾಚ್ಚತುರ್ಮುಖನೂ ಹೇಳಲಸಮರ್ಥನಾಗಿರುವನು ॥೨೮॥

ನಿಮ್ಮಗಳಿಗೆ ಇದೇ ಸಂಸಾರಪಾಶಚ್ಛೇದಕವಾದುದು; ಸಮಸ್ತವಾದ ಇಷ್ಟಾರ್ಥವನ್ನೂ ಇದೇ ಕೊಡುವುದು. ಇದಕ್ಕಿಂತಲೂ ಮೇಲಾಗಿ ಪಾಪಪರಿಶೋಧಕವಾದ ಮತ್ತೊವುದೂ ಈ ಭೂಮಿಯಲ್ಲಿಲ್ಲ ॥೨೯॥

ಯಾವ ಮನುಜನು, ತುಲಸೀಕಾಷ್ಠದಿಂದ ಸುಂದರವಾದ ಜಪಸರವನ್ನೂ ಕಂಠಸರವನ್ನೂ ಮಾಡಿಕೊಂಡು ಧರಿಸುವನೋ, ಅವನು ಮಾಡಿದ ಕರ್ಮವೆಲ್ಲವೂ ಅಕ್ಷಯವಾಗುವುದು ॥೩೦॥

ತುಲಸೀಕಾಷ್ಠವನ್ನು ತೆಗ್ದು ಶ್ರೀರಾಮಚಂದ್ರನಿಗೆ ಸಮರ್ಪಿಸಿದರೆ, ಪಚ್ಚಕರ್ಪೂರ ಅಗಿಲು ಚಂದನ ಮುಂತಾದುವುಗಳಿಂದ ಮಾಡಿದ ದಿವ್ಯಗಂಧವೂ ಅದಕ್ಕೆ ಸರಿಬರಲಾರದು ॥೩೧॥

ಗಂಗಾನದಿಯು ಪ್ರವಹಿಸುವ ಮಾರ್ಗದಲ್ಲಿ ಅದರ ಉಭಯತೀರಗಳೂ ಪರಿಶುದ್ಧವಾಗಿರುವಂತೆ, ತುಲಸೀತೋಟದ ಸುತ್ತಲೂ ಒಂದು ಕ್ರೋಶ(ಹರಿದಾರಿ)ದಷ್ಟು ಪ್ರದೇಶವು ಕೇವಲ ಪಾವನವಾಗಿರುವುದು ॥೩೨॥

ತುಲಸ್ಯಾರೋಪಿತಾ ಸಿಕ್ತಾ ದೃಷ್ಟಾ ಸ್ಪೃಷ್ಟಾ ಚ ಪಾವಯೇತ್ ।
ಆರಾಧಿತಾ ಪ್ರಯತ್ನೇನ ಸರ್ವಕಾಮಫಲಪ್ರದಾ ॥೩೩॥
ಚತುರ್ಣಾಮಪಿ ವರ್ಣಾನಾಂ ಅಶ್ರಮಾಣಾಂ ವಿಶೇಷತಃ ।
ಸ್ತ್ರೀಣಾಂ ಚ ಪುರುಷಾಣಾಂ ಚ ಪೂಜಿತೇಷ್ಟಂ ದದಾತಿ ಹಿ ॥೩೪॥
ಪ್ರದಕ್ಷಿಣಂ ಭ್ರಮಿತ್ವಾ ಯೇ ನಮಸ್ಕುರ್ವಂತಿ ನಿತ್ಯಶಃ ।
ನ ತೇಷಾಂ ದುರಿತಂ ಕಿಂಚಿತ್ ಪ್ರಕ್ಷೀಣಮವಶಿಷ್ಯತೇ ॥೩೫॥
ಅನನ್ಯದರ್ಶನಾಃ ಪ್ರಾತಃ ಯೇ ಪಶ್ಯಂತಿ ತಪೋಧನಾಃ ।
ಅಹೋರಾತ್ರಕೃತಂ ಪಾಪಂ ತತ್ಕ್ಷಣಾತ್ ಪ್ರಹರಂತಿ ತೇ ॥೩೬॥
ತುಲಸೀಸನ್ನಿಧೌ ಪ್ರಾಣಾನ್ ಯೇ ತ್ಯಜಂತಿ ಮುನೀಶ್ವರಾಃ ।
ನ ತೇಷಾಂ ನರಕಕ್ಲೇಶಃ ಪ್ರಯಾಂತಿ ಪರಮಂ ಪದಮ್ ॥೩೭॥
ವಿಧೇಯಮವಿಧೇಯಂ ವಾ ನೂನಮಪ್ಯಥವಾಧಿಕಮ್ ।
ತುಲಸೀದಳಮಾತ್ರೇಣ ಸಮ್ಪೂರ್ಣಂ ರಾಘವಾರ್ಚನಮ್ ॥೩೮॥
ತುಲಸೀಮೂಲಮಾಶ್ರಿತ್ಯ ಶ್ರೀರಾಮಸ್ಯ ಷಡಕ್ಷರಮ್ ।
ಯೇ ಜಪಂತಿ ಸಕೃದ್ವಾಪಿ ಮಂತ್ರಸಿದ್ಧಿರ್ಭವೇದ್ಧ್ರುವಮ್ ॥೩೯॥

ತುಲಸೀಗಿಡವನ್ನು ಬೆಳೆಯಿಸಿದರೂ, ಅದಕ್ಕೆ ನೀರು ಹಾಕಿದರೂ, ಅದರ ದರ್ಶನಮಾಡಿದರೂ, ಅದರ ಸ್ಪರ್ಶನಮಾಡಿದರೂ, ಅದು ನಮ್ಮನ್ನು ಪಾವನಮಾಡುತ್ತದೆ. ಪ್ರಯತ್ನಪೂರಸ್ಸರವಾಗಿ ಅದನ್ನು ಪೂಜಿಸಿದರೆ, ಸಕಲವಾದ ಇಷ್ಟಾರ್ಥಗಳನ್ನೂ ಕೊಡುವುದು ॥೩೩॥

ಈ ತುಲಸಿಯು, ನಾಲ್ಕು ವರ್ಣದವರಿಗೂ ನಾಲ್ಕಾಶ್ರಮದವರಿಗೂ ಸ್ತ್ರೀಯರಿಗೂ ಪುರುಷರಿಗೂ ಎಲ್ಲರಿಗೂ ಪೂಜಾಮಾತ್ರದಿಂದಲೇ ವಿಶೇಷವಾಗಿ ಫಲವನ್ನು ಕೊಡುವುದು ॥೩೪॥

ಯಾರು ಪ್ರತಿದಿನವೂ ಈ ತುಲಸಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡುವರೋ, ಅವರಿಗೆ-ಕ್ಷಯಹೊಂದದೆ ಉಳಿದಿರುವ ಪಾಪವೊಂದೂ ಇರುವುದಿಲ್ಲ ॥೩೫॥

ಅಯ್ಯಾ ಮಹರ್ಷಿಗಳಿರಾ! ಯಾರು ಪ್ರಾತಃಕಾಲದಲ್ಲಿ ಎದ್ದೊಡನೆಯೇ ಮತ್ತಾವುದನ್ನೂ ನೋಡದೆಯೇ ಮೊದಲು ತುಲಸೀದರ್ಶನವನ್ನು ಮಾಡುವರೋ, ಅವರು ಆ ಅಹೋರಾತ್ರಿಯಲ್ಲಿ ಮಾಡಿದ್ದ ಪಾಪಗಳನ್ನು ಅಕ್ಷಣವೇ ಕಳೆದುಕೊಳ್ಳುವರು ॥೩೬॥

ಅಯ್ಯಾ ಮುನಿಶ್ರೇಷ್ಠರೆ! ಯಾವ ಪುರುಷರು ತುಲಸೀಸವಿಾಪದಲ್ಲಿ ಪ್ರಾಣವನ್ನು ಬಿಡುವರೋ, ಅವರಿಗೆಂದಿಗೂ ನರಕಯಾತನೆಯಾಗುವುದಿಲ್ಲ. ಅವರು ಸಾಕ್ಷಾತ್ ಪರಮಪದವನ್ನೇ ಹೊಂದುವರು ॥೩೭॥

ಶ್ರೀರಾಮನ ಪೂಜೆಯು, ವಿಧಿಯನ್ನನುಸರಿಸಿದುದಾದರೂ—ವಿಧಿಯಿಲ್ಲದುದಾದರೂ—ನ್ಯೂನವಾಗಿದ್ದರೂ—ಅಥವಾ ಅಧಿಕವಾಗಿದ್ದರೂ, ಒಂದು ತುಲಸೀದಳಮಾತ್ರದಿಂದಲೇ ಯಥಾವತ್ತಾಗಿ ಸಂಪೂರ್ಣವಾಗುವುದು ॥೩೮॥

ಯಾವ ಪುರುಷರು ತುಲಸೀವೃಕ್ಷದ ಕೆಳಗೆ ಕುಳಿತುಕೊಂಡು ಒಂದಾವೃತ್ತಿಯಾದರೂ ಶ್ರೀರಾಮಷಡಕ್ಷರೀಮಂತ್ರವನ್ನು ಜಪಿಸುವರೋ, ಅವರಿಗೆ ಅಕ್ಷಣವೇ ಮಂತ್ರಸಿದ್ಧಿಯುಂಟಾಗುವುದರಲ್ಲಿ ಸಂಶಯವಿಲ್ಲ ॥೩೯॥

ಮನ್ತ್ರಸಿದ್ಧಿಕರಾಣ್ಯತ್ರ ಸನ್ತಿ ಸ್ಥಾನಾನ್ಯನೇಕಶಃ ।
ನಾಮಮನ್ತ್ರಸ್ಯ ಸಿದ್ಧ್ಯರ್ಥಂ ತುಲಸ್ಯಾಂ ತು ವಿಶಿಷ್ಯತೇ ॥೪೦॥
ತುಲಸ್ಯಾವೈಭವಂ ಜೈವಂ ಉಕ್ತಂ ರಾಮಾರ್ಚನಂ ಚ ತತ್ ।
ಸಮಾಸೇನ ದ್ವಿಜಶ್ರೇಷ್ಠಾಃ ಕಿಂ ಭೂಯಃ ಶ್ರೋತುಮಿಚ್ಛಥ ॥೪೧॥

ಇತಿ ಶ್ರೀಬಾಲಕಾಣ್ಡೇ ತುಲಸ್ಯಾ ಶ್ರೀರಾಮಪೂಜಾವೈಭವಕಥನಂ
ನಾಮಮೈಕವಿಂಶಃ ಸರ್ಗಃ.



ಈಲೋಕದಲ್ಲಿ, ಮಂತ್ರಸಿದ್ಧಿಯುಂಟುಮಾಡುವ ಸ್ಥಳಗಳು ಅನೇಕವಾಗಿರುವುವು. ಆದರೆ, ಶ್ರೀರಾಮಮಂತ್ರಸಿದ್ಧಿಗೆ ತುಲಸೀಮೂಲವೇ ಅತಿ ಪ್ರಶಸ್ತವಾದುದು ॥೪೦॥

ಎಲ್ಲೆ ಬ್ರಾಹ್ಮಣೋತ್ತಮರೆ! ಹೀಗೆ ನಾನು ಶ್ರೀ ತುಲಸೀಮಹಿಮೆಯನ್ನೂ ಶ್ರೀರಾಮ ಪೂಜಾಕ್ರಮವನ್ನೂ ಸಂಕ್ಷೇಪಿಸಿ ನಿಮಗೆ ಹೇಳಿರುವೆನು. ಇನ್ನೇನು ಕೇಳಬೇಕೆಂದು ನೀವು ಇಚ್ಛಿಸುವಿರಿ? ॥೪೧॥

ಇದು ಬಾಲಕಾಂಡದಲ್ಲಿ ತುಲಸಿಯಿಂದ ಶ್ರೀರಾಮಪೂಜೆಯ
ಮಹಿಮಾದಿಕಥನವೆಂಬ ಇಪ್ಪತ್ತೊಂದನೆಯಸರ್ಗವು.



ಅಥ ಶ್ರೀ ಬಾಲಕಾಣ್ಡೇ ದ್ವಾವಿಂಶಃ ಸರ್ಗಃ.

ಋಷಯಊಚುಃ.

ಮುನೇ ಕೌಶಿಕ ಭದ್ರಂ ತೇ ರಾಮಭಕ್ತಿಪರಾಯಣ ।
ಶ್ರೀರಾಮಮನ್ತ್ರವೀಮಾಹಾತ್ಮ್ಯಂ ವದ ನಃ ಸರ್ವಸಙ್ಗ್ರಹಾತ್ ॥೧॥

ವಿಶ್ವಾಮಿತ್ರ ಉವಾಚ.

ಅಹೋ ಭಾಗ್ಯಮಹೋಭಾಗ್ಯಂ ಫಲಿತಂ ಸುಕೃತಂ ಮಮ ।
ಯಸ್ಮಾದ್ಭವದ್ಭಿಃ ಶ್ರೀರಾಮಮಾಹಾತ್ಮ್ಯೇ ಚೋದಿತೋಽಸ್ಮ್ಯಹಮ್ ॥೨॥
ಶ್ರೀರಾಮನಾಮಮಾಹಾತ್ಮ್ಯಂ ಮನ್ತ್ರಮಾಹಾತ್ಮ್ಯಮೇವ ಚ ।
ರಾಮಪಿನಾಖಿಲಂ ವೇತ್ತಿ ಶಙ್ಕರೋ ವೇತ್ತಿ ವಾ ನ ವಾ ॥೩॥
ಜಾನತಾಽಜಾನತಾ ವಾಪಿ ಮಾಯಯಾ ಪರಿಹಾಸತಃ ।
ಶ್ರೀರಾಮನಾಮಗ್ರಹಣಂ ಅಶೇಷಾಘಹರಂ ವಿದುಃ ॥೪॥
ಶಬರಃ ಪಾಪಕೃದ್ವಾಪಿ ರಾಮನಾಮಪ್ರಸಙ್ಗತಃ ।
ಜಪನ್ ಸಿದ್ಧಿಮವಾಪೋಚ್ಚೈಃ ಕಿಂ ಪುನಃ ಸಜ್ಜನೋ ದ್ವಿಜಃ ॥೫॥

ಬಾಲಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗವು.

ಋಷಿಗಳು ಪುನಃ ಪ್ರಾರ್ಥಿಸುವರು :—

ಶ್ರೀರಾಮಭಕ್ತಿಯಲ್ಲಿ ಆಸಕ್ತನಾದ ಎಲೈ ವಿಶ್ವಾಮಿತ್ರಮಹರ್ಷಿಯೆ ! ನಿನಗೆ ಮಂಗಳವಾಗಲಿ. ಶ್ರೀರಾಮಮಂತ್ರದ ಮಹಿಮೆಯನ್ನೆಲ್ಲ ಸಂಗ್ರಹಿಸಿ ನಮಗೆ ಹೇಳುವವನಾಗು ॥೧॥

ಶ್ರೀ ವಿಶ್ವಾಮಿತ್ರಮುನಿಯು ಹೇಳುವನು : —

ಅಹಹ ! ನನ್ನ ಅದೃಷ್ಟವೊಳ್ಳೆಯದು ! ನನ್ನ ಸುಕೃತವೀದಿವಸ ಫಲಿಸಿತು. ಶ್ರೀರಾಮನ ಮಹಿಮೆಯನ್ನು ಹೇಳುವುದಕ್ಕಾಗಿ ಈ ದಿವಸ ನೀವು ನನ್ನನ್ನು ಪ್ರೇರಿಸಿದಕಾರಣ ನನ್ನ ಭಾಗ್ಯವೇ ಭಾಗ್ಯವು ! ॥೨॥

ಶ್ರೀರಾಮನ ನಾಮಮಹಿಮೆಯನ್ನೂ ಮಂತ್ರಮಹಿಮೆಯನ್ನೂ ರಾಮನೇ ಸಂಪೂರ್ಣವಾಗಿ ಬಲ್ಲವನು. ಈಶ್ವರನಿಗೂ ಈ ವಿಷಯ ಸಮಗ್ರವಾಗಿ ತಿಳಿಯುವುದೋ ಇಲ್ಲವೋ ತಾನರಿಯೆನು ॥೩॥

ಬುದ್ಧಿಪೂರ್ವಕವಾಗಲಿ—ಅಜ್ಞಾನದಲ್ಲಿಯಾಗಲಿ —ಕಾಪಟ್ಯದಿಂದಾಗಲಿ— ಪರಿಹಾಸರೂಪವಾಗಿಯಾಗಲಿ —ಶ್ರೀರಾಮನಾಮಸ್ಮರಣೆಮಾಡಿದರೆ, ಸಮಸ್ತಪಾಪವೂ ಪರಿಕ್ಷಯವಾಗುವುದೆಂದು ಪ್ರಾಜ್ಞರು ಹೇಳುವರು ॥೪॥

ಮಹಾಪಾಪಕಾರಿಯಾದ ಬೇಡನೂ ಕೂಡ, ಶ್ರೀರಾಮನಾಮವನ್ನು ಜಪಿಸಿ ಉತ್ತಮವಾದ ಸಿದ್ಧಿಯನ್ನು ಪಡೆದನು; ಹೀಗಿರುವಾಗ, ಸಾಧುವಾದ ಬ್ರಾಹ್ಮಣನ ವಿಷಯವನ್ನು ಹೇಳುವುದೇನಿದೆ ! ॥೫॥

ಏವಮೇವ ಪುರಾಗಸ್ತ್ಯಂ ಸುತೀಕ್ಷ್ಣೋಽಪಿ ಪ್ರಶ್ನಮುತ್ತಮಮ್ ।
ಚಕಾರ ಕುಮ್ಭಜೋನಾಪಿ ಯದುಕ್ತಂ ತದ್ಬ್ರವೀಮಿ ವಃ ॥೬॥

ಅಗಸ್ತ್ಯಉವಾಚ.

ಸುತೀಕ್ಷ್ಣೋ ಮುನ್ಯಮುಖ್ಯೇಷು ಶ್ರೇಷ್ಠೋ ವೈಷ್ಣವಉಚ್ಯತೇ ।
ಗಾಣಾಪತ್ಯೇಷು ಶೈವೇಷು ಶಾಕ್ತಸೌರೇಷ್ವಭೀಷ್ಟದಃ ॥೭॥
ವೈಷ್ಣವೇಷ್ವಪಿ ಸರ್ವೇಷು ರಾಮಮನ್ತ್ರಃ ಫಲಾಧಿಕಃ ।
ಗಾಣಾಪತ್ಯಾದಿಮನ್ತ್ರೇಭ್ಯಃ ಕೋಟಿಕೋಟಿಗುಣಾಧಿಕಃ ।
ಮನ್ತ್ರಸ್ತೇಷ್ವನ್ಯನಾಯಾಸಫಲದೋಯಂ ಷಡಕ್ಷರಃ ॥೮॥
ಷಡಕ್ಷರೋಯಂ ಮನ್ತ್ರಸ್ತು ಸರ್ವಾಘೌಘಾನಾಂ ವಿನಾಶಕಃ ।
ಮನ್ತ್ರರಾಜಇತಿ ಪ್ರೋಕ್ತಃ ಸರ್ವೇಷಾಮುತ್ತಮೋತ್ತಮಃ ॥೯॥
ದೈನನ್ದಿನಂ ತು ದುರಿತಂ ಪಕ್ಷಮಾಸರ್ತುವರ್ಷಜಮ್ ।
ಸರ್ವಂ ದಹತಿ ನಿಶ್ಶೇಷಂ ತೂಲಾಚಲಮಿವಾನಲಃ ॥೧೦॥
ಜನ್ಮಜನ್ಮಾನ್ತರೇ ಯದ್ಯತ್ ತತ್ತತ್ ಪಾಪಂ ವಿನಶ್ಯತಿ ॥೧೧॥

ಅಯ್ಯಾ ಮುನಿಗಳಿರಾ! ಪೂರ್ವದಲ್ಲಿ, ನಿಮ್ಮಂತೆಯೇ ಸುತೀಕ್ಷ್ಣನೆಂಬ ಮುನಿಯೂ ಅಗಸ್ತ್ಯ ಮಹರ್ಷಿಯನ್ನು ಕುರಿತು ಪ್ರಶ್ನೆಮಾಡಿದನು. ಅದಕ್ಕೆ ಅಗಸ್ತ್ಯಮುನಿಯಿಂದ ಯಾವ ಉತ್ತರ ಹೇಳಲ್ಪಟ್ಟಿತೋ, ಅದನ್ನು ಈಗ ನಿಮಗೆ ನಾನು ಹೇಳುವೆನು ॥೬॥

ಅಗಸ್ತ್ಯರು ಹೇಳಿದುದೇನೆಂದರೆ: -

ಅಯ್ಯಾ ಸುತೀಕ್ಷ್ಣಮುನಿಯೆ! ಈ ಲೋಕದಲ್ಲಿರುವ ಸಮಸ್ತ ಮಹಾಮಂತ್ರಗಳಲ್ಲಿಯೂ ವೈಷ್ಣವಮಂತ್ರವೇ ಶ್ರೇಷ್ಠವೆನ್ನಿಸಿಕೊಂಡಿರುವುದು. ಗಾಣಾಪತ್ಯ ಶೈವ ಶಾಕ್ತ ಸೌರ ವೈಷ್ಣವ ವೆಂಬ ಪಂಚವಿಧವಾದ ಮಂತ್ರಗಳಲ್ಲಿಯೂ, ವೈಷ್ಣವಮಂತ್ರವೇ ಇಷ್ಟಾರ್ಥಸಿದ್ಧಿಯನ್ನುಂಟು ಮಾಡುವುದರಲ್ಲಿ ಮೊದಲನೆಯದು ॥೭॥

ಈ ವೈಷ್ಣವ ಮಂತ್ರಗಳಲ್ಲಿಯೂ, ರಾಮಮಂತ್ರವೇ ಎಲ್ಲಕ್ಕಿಂತಲೂ ಫಲಾಧಿಕವಾದುದು. ಇದು, ಗಾಣಾಪತ್ಯಾದಿ ಮಂತ್ರಗಳಿಗಿಂತ ಅನೇಕಕೋಟಿ ಗುಣಾಧಿಕವಾದುದು. ಅವುಗಳಲ್ಲಿಯೂ (ಶ್ರೀರಾಮಮನುಮಂತ್ರದಲ್ಲಿಯೂ), ಈ ಷಡಕ್ಷರಮಂತ್ರವು ಅನಾಯಾಸವಾಗಿ ಫಲವನ್ನು ಕೊಡತಕ್ಕುದಾಗಿರುವುದು ॥೮॥

ಈ ಷಡಕ್ಷರಮಂತ್ರವು, ಸಮಸ್ತ ಪಾಪಗಳನ್ನೂ ನಾಶಪಡಿಸತಕ್ಕುದು. ಸಮಸ್ತ ಮಂತ್ರಗಳಲ್ಲಿಯೂ ಅತ್ಯುತ್ತಮವಾಗಿರುವಕಾರಣ, ಇದು ಮಂತ್ರರಾಜನೆಂದು ಹೇಳಲ್ಪಡುವುದು ॥೯॥

ಆಯಾ ದಿನಗಳಲ್ಲಿ ಮಾಡಿದ ಪಾಪವನ್ನೂ, ಆಯಾ ಪಕ್ಷ ಮಾಸ ಋತು ಸಂವತ್ಸರಗಳಲ್ಲಿ ಮಾಡಿದ ಪಾಪವನ್ನೂ ಕೂಡ, ಅಗ್ನಿಯು ತೂಲರಾಶಿಯನ್ನು ಸುಟ್ಟುಬಿಡುವಂತೆ, ಈ ಷಡಕ್ಷರ ಮಂತ್ರವು ನಿಶ್ಶೇಷವಾಗಿ ಸುಟ್ಟುಬಿಡುವುದು ॥೧೦॥

ಈ ಜನ್ಮದಲ್ಲಿಯೂ ಹಿಂದೆ ನೂರಾರು ಜನ್ಮಗಳಲ್ಲಿಯೂ ಯಾವಯಾವ ಪಾಪವು ಮಾಡಲ್ಪಟ್ಟಿರುವುದೋ, ಆಯಾ ಪಾಪವೆಲ್ಲವೂ ಈ ರಾಮಷಡಕ್ಷರೀ ಜಪದಿಂದ ನಾಶಹೊಂದುವುದು.

ಬ್ರಹ್ಮಹತ್ಯಾಸಹಸ್ರಾಣಿ ಜ್ಞಾನಾಜ್ಞಾನಕೃತಾನಿ ಚ ।
ಸ್ವರ್ಣಸ್ತೇಯಸುರಾಪಾನಗುರುತಲ್ಪಾಯುತಾನಿ ಚ ॥೧೦॥

ಕೋಟಿಕೋಟಿಸಹಸ್ರಾಣಿ ಹ್ಯುಪಪಾತಕಜಾನ್ಯಪಿ ।
ಸರ್ವಾಣ್ಯಪಿ ಪ್ರಣಶ್ಯನ್ತಿ ರಾಮಮನ್ತ್ರಾನುಕೀರ್ತನಾತ್ ॥೧೨॥

ಭೂತಪ್ರೇತಪಿಶಾಚಾದ್ಯಾಃ ಕೂಶ್ಮಾಣ್ಡಗ್ರಹರಾಕ್ಷಸಾಃ ।
ದೂರಾದೇವ ಪ್ರಧಾವನ್ತಿ ರಾಮಮನ್ತ್ರಪ್ರಭಾವತಃ ॥೧೪॥

ಮೂಲಿನ್ಯಮಪಿ ಸಾಜ್ಯರ್ಮಂ ಸತತಂ ಯಚ್ಚ ದೂಷಿತಮ್ ।
ಸರ್ವಂ ವಿಲಯಮಾಪ್ನೋತಿ ರಾಮಮನ್ತ್ರಾನುಕೀರ್ತನಾತ್ ॥೧೫॥

ಆಬ್ರಹ್ಮಬೀಜದೋಷಾಶ್ಚ ನಿಯಮಾತಿಕ್ರಮೋದ್ಭವಾಃ ।
ಸ್ತ್ರೀಣಾಂ ಚ ಪುರುಷಾಣಾಂ ಸ್ಯುಃ ಮನ್ತ್ರೀಣಾನೇನ ನಾಶಿತಾಃ ॥೧೬॥

ಯೇಷುಯೇಷ್ವಪಿ ದೇಶೇಷು ರಾಮಃ ಪರಮುಪಾಸ್ಯತೇ ।
ದುರ್ಭಿಕ್ಷಾದಿಭಯಂ ತೇಷು ನ ಭವೇತ ಕದಾಚನ ॥೧೭॥

ಶಾನ್ತಃ ಪ್ರಸನ್ನೋ ವರದೋಕ್ರೋಧನೋ ಭಕ್ತವತ್ಸಲಃ ।
ಅನೇನ ಸದೃಶೋ ಮನ್ತ್ರಃ ಜಗತ್ಸ್ವಪಿ ನ ವಿದ್ಯತೇ ॥೧೮॥

ಜ್ಞಾನಕೃತವಾಗಿಯೂ ಅಜ್ಞಾನಕೃತವಾಗಿಯೂ ಇರುವ—ಸಾವಿರಾರು ಬ್ರಹ್ಮಹತ್ಯೆಗಳೂ, ದಶ ಸಹಸ್ರಸಂಖ್ಯಾಕವಾದ—ಸ್ವರ್ಣಸ್ತೇಯ ಸುರಾಪಾನ ಗುರುತಲ್ಪಗಮನಗಳೂ, ಅನೇಕಕೋಟಿ ಸಹಸ್ರಸಂಖ್ಯಾಕವಾದ ಉಪಪಾತಕಗಳೂಕೂಡ, ಶ್ರೀರಾಮಮಂತ್ರಜಪದಿಂದಲೇ ಸರ್ವವೂ ನಾಶಹೊಂದಿಬಿಡುವುವು ॥೧೧-೧೩॥

ಭೂತ ಪ್ರೇತ ಪಿಶಾಚ ಮುಂತಾದುವೂ, ಕೂಶ್ಮಾಂಡ ಗ್ರಹ ರಾಕ್ಷಸ ಮೊದಲಾದುವೂ, ರಾಮಮಂತ್ರಮಹಿಮೆಯಿಂದ ದೂರವಾಗಿ ಓಡಿಹೋಗುವುವು ॥೧೪॥

ಧರ್ಮಶಾಸ್ತ್ರಪ್ರಸಿದ್ಧವಾದ ಮಲಿನೀಕರಣ ಸಂಕರೀಕರಣ ಮುಂತಾದ ಪಾಪಗಳಿಂದ ಉಂಟಾದ ಸಕಲ ದೋಷವೂ, ಈ ರಾಮಮಂತ್ರಜಪದಿಂದಲೇ ಲಯಹೊಂದುವುದು ॥೧೫॥

ಬ್ರಹ್ಮಸೃಷ್ಟಿಯಿಂದ ಮೊದಲುಮಾಡಿಕೊಂಡು ಅನುಸರಿಸಿಬಂದಿರುವ ಬೀಜದೋಷಗಳೂ, ಶಾಸ್ತ್ರನಿಯಮವನ್ನು ಅತಿಕ್ರಮಿಸಿ ನಡೆಯುವುದರಿಂದುಂಟಾಗುವ ಸಮಸ್ತ ಪಾಪಗಳೂ, ಹೆಂಗ ಸರಿಗಾಗಲಿ-ಗಂಡಸರಿಗಾಗಲಿ—ಈ ಮಂತ್ರದಿಂದಲೇ ನಾಶಗೊಳಿಸಲ್ಪಡುವುವು ॥೧೬॥

ಯಾವಯಾವ ದೇಶಗಳಲ್ಲಿ ಶ್ರೀರಾಮಚಂದ್ರನ ಉಪಾಸನೆಯು ವಿಶೇಷವಾಗಿ ನಡೆಯುವುದೋ, ಆ ದೇಶಗಳಲ್ಲಿ ದುರ್ಭಿಕ್ಷಾದಿಭಯವೆಂದಿಗೂ ಉಂಟಾಗುವುದಿಲ್ಲ ॥೧೭॥

ಶಾಂತವಾಗಿಯೂ ಪ್ರಸನ್ನವಾಗಿಯೂ ವರವನ್ನು ಕೊಡಶಕ್ಯವಾಗಿಯೂ ಕ್ರೋಧರಹಿತವಾಗಿಯೂ ಭಕ್ತರಲ್ಲಿ ಪ್ರೀತಿಯುಳ್ಳದಾಗಿಯೂ ಇರುವ ಮಂತ್ರವು, ಈ ರಾಮಷಡಕ್ಷರಿಗೆ ಸಮಾನವಾದುದು ಮೂರುಲೋಕದಲ್ಲಿಯೂ ಇಲ್ಲ ॥೧೮॥

ಅನೇನಾರಾಧಿತೋ ರಾಮಃ ಪ್ರಸೀದತ್ಯೇವ ಸತ್ವರಮ್ ।
ದದಾತ್ಯಾಯುಷ್ಯಮೈಶ್ವರ್ಯಂ ಸಮಾನೋತ್ತಮತಾಮಪಿ ॥೧೯॥
ಯಏವಮುಕ್ತಮಾರ್ಗೇಣ ಮನ್ತ್ರರಾಧನತತ್ಪರಃ ।
ಶಾಸ್ತ್ರೋಕ್ತಾಚಾರನಿರತಃ ಗುರೌ ಮನ್ತ್ರೇ ಚ ಭಕ್ತಿಮಾನ್ ॥೨೦॥
ಸಕಾಮೋ ಭುಕ್ತಿಮಾಪ್ನೋತಿ ನಿಷ್ಕಾಮೋ ಮುಕ್ತಿಮೇವ ಚ ।
ಪ್ರಾಪ್ನೋತ್ಯುಭಯಕಾಮಸ್ತು ಭುಕ್ತಿಂ ಮುಕ್ತಿಂ ನ ಸಂಶಯಃ ॥೨೧॥

ಸುತೀಕ್ಷ್ಣ ಉವಾಚ.

ಶ್ರುತಿಸ್ಮೃತಿಪುರಾಣಾರ್ಥನಿಶ್ಚಯಜ್ಞಾನವಿತ್ತಮ ।
ಸಂಶಯಂ ಛಿನ್ಧಿ ಪೃಚ್ಛಾಮಿ ತ್ವಾತಾ ಮೇಽನುಗ್ರಹಂ ಕುರು ॥೨೨॥
ಆತ್ಮಾನುಭವರೂಪೇಣ ಸಾಕ್ಷಾತ್ಕಾರೇಣ ಕೇವಲಮ್ ।
ಪುನರಾವೃತ್ತಿರಹಿತಂ ಶಾಶ್ವತಂ ಬ್ರಹ್ಮ ಗಚ್ಛತಿ ॥೨೩॥
ಅನ್ಯಃ ಪನ್ಥಾ ಮುಮುಕ್ಷೂಣಾಂ ಅಯನಾಯ ನ ವಿದ್ಯತೇ ।
ಇತಿ ಶ್ರುತ್ಯಾದಿತತ್ತ್ವಜ್ಞಾಃ ಪ್ರವದನ್ತಿ ಮನೀಷಿಣಃ ॥೨೪॥
ಶ್ರೀಮನ್ತೋಭಿಮತಾಂ ರಾಮಮನ್ತ್ರಾನುಷ್ಠಾನತತ್ಪರಾಃ ।
ಭುಕ್ತಿಂ ಮುಕ್ತಿಂ ಚ ವಿನ್ದನ್ತಿ ಕಥಮೇತತ್ ಪ್ರಬೋಧಯ ॥೨೫॥

ಈ ಷಡಕ್ಷರಿಯಿಂದ ಆರಾಧಿಸಲ್ಪಟ್ಟವನಾಗಿ, ಶ್ರೀರಾಮನು ಶೀಘ್ರವೇ ಪ್ರಸನ್ನನಾಗುವನು; ಆಯುಸ್ಸನ್ನೂ ಐಶ್ವರ್ಯವನ್ನೂ ತಮ್ಮ ಸಮಾನರಲ್ಲಿ ಪ್ರಾಶಸ್ತ್ಯವನ್ನೂ ಅನುಗ್ರಹಿಸುವನು॥೧೯॥

ಯಾವ ಮನುಷ್ಯನು, ಶಾಸ್ತ್ರೋಕ್ತವಾದ ಆಚಾರಗಳನ್ನು ತಪ್ಪದೆ ನಡೆಯಿಸುತ, ಗುರು ವಿನಲ್ಲಿಯೂ ಮಂತ್ರದಲ್ಲಿಯೂ ಭಕ್ತಿಯನ್ನಿಟ್ಟುಕೊಂಡು, ಈರೀತಿಯಾಗಿ ಉಕ್ತಮಾರ್ಗದಿಂದ ಮಂತ್ರೋಪಾಸನನಿರತನಾಗುವನೋ, ಅವನು— ಸಕಾಮನಾಗಿ ಉಪಾಸನೆ ಮಾಡಿದರೆ—ಐಹಿಕ ಭೋಗವನ್ನು ಪಡೆಯುವನು; ನಿಷ್ಕಾಮನಾಗಿ ಮಾಡಿದರೆ ಮೋಕ್ಷವನ್ನೇ ಪಡೆಯುವನು; ಭುಕ್ತಿ ಮುಕ್ತಿಗಳೆರಡನ್ನೂ ಅಪೇಕ್ಷಿಸಿಕೊಂಡು ಉಪಾಸನೆ ಮಾಡಿದಪಕ್ಷದಲ್ಲಿ, ಇವೆರಡನ್ನೂ ಹೊಂದುವನು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ ॥೨೦—೨೧॥

ಮತ್ತೆ ಸುತೀಕ್ಷ್ಣನು ಪ್ರಶ್ನೆಮಾಡುವನು:—

ಶ್ರುತಿ ಸ್ಮೃತಿ ಪುರಾಣಗಳ ಅರ್ಥದಲ್ಲಿ ನಿಶ್ಚಯಜ್ಞಾನವನ್ನು ಪಡೆದಿರತಕ್ಕವರೊಳಗೆ ಅತ್ಯುತ್ತಮನಾದ ಅಗಸ್ತ್ಯಮುನಿಯೆ! ನಾನು ಈಗ ತಮ್ಮನ್ನು ಮತ್ತೊಂದು ಪ್ರಶ್ನೆ ಕೇಳುವೆನು. ತಾವು ನನ್ನ ಸಂಶಯವನ್ನು ಪರಿಹರಿಸಬೇಕು. ಈ ಭವಭಯದಿಂದ ನನ್ನನ್ನು ರಕ್ಷಿಸಿ ಅನುಗ್ರಹಿಸಬೇಕು ॥೨೨॥

ಪ್ರಪಂಚದಲ್ಲಿ ಮುಮುಕ್ಷುವಾದವನು, ಆತ್ಮಾನುಭವರೂಪವಾದ ಸಾಕ್ಷಾತ್ಕಾರದಿಂದಲೇ, ಪುನರಾವೃತ್ತಿರಹಿತವಾದ ಶಾಶ್ವತವಾದ ಬ್ರಹ್ಮಪದವನ್ನು ಹೊಂದುವನು. ಇದನ್ನು ಬಿಟ್ಟರೆ, ಮುಮುಕ್ಷುಗಳಿಗೆ ಬೇರೆ ಯಾವುದೂ ಮಾರ್ಗವೇ ಇಲ್ಲ. ಇತ್ಯಾದಿರೀತಿಯಾಗಿ, ಶ್ರುತಿ ಸ್ಮೃತಿ ಮುಂತಾದುವುಗಳ ತತ್ವವನ್ನು ತಿಳಿದಿರುವ ಪ್ರಾಜ್ಞರು ಸ್ಪಷ್ಟವಾಗಿ ಹೇಳುತ್ತಿರುವರು ॥೨೩-೨೪॥

ಹೀಗಿರುವಾಗ, ರಾಮಮಂತ್ರೋಪಾಸನಾಸಕ್ತರಾದ ಮಹಾತ್ಮರು, ತಮಗಿಷ್ಟವಾದ ಭುಕ್ತಿಮುಕ್ತಿಗಳೆರಡನ್ನೂ ಹೊಂದುವರೆಂಬುದು ಹೇಗೆ? ಇದನ್ನು ನನಗೆ ತಿಳಿಯಹೇಳಬೇಕು ॥

ನಿವೃತ್ತಿರತ್ರ ಮುಕ್ತಿಸ್ತು ಪ್ರವೃತ್ತಿರ್ಭುಕ್ತಿರುಚ್ಯತೇ ।
ಉಭಯೋರಪ್ಯೇಕವಿನ ಕಥಂ ಮಾರ್ಗೋ ಭವೇದ್ವಿದ ॥೨೬॥

ಅಗಸ್ತ್ಯ ಉವಾಚ.

ತ್ವಯಾರ್ಯೇಣ ಯದುಕ್ತಂ ತತ್ ಸತ್ಯಂ ತತ್ತ್ವವಿದಾಂ ವರ ।
ಸರ್ವಜನ್ತೋಃ ಸುಖೋತ್ಪತ್ತಿಃ ದುಃಖೋತ್ಪತ್ತಿಶ್ಚ ಜಾಯತೇ ॥೨೭॥
ವಿಷಯೇಭ್ಯಃ ಸಮುತ್ಥೇಷು ದುಃಖೇಷ್ವಪಿ ಸುಖೇಷ್ವಪಿ ।
ನಿವೃತ್ತಿರ್ಲಕ್ಷಣಾ ಹ್ಯೇಷಾ ಮುಕ್ತಿರಿತ್ಯಭಿಧೀಯತೇ ॥೨೮॥
ವಿಷಯಾತ್ಯನ್ತಸಂಸರ್ಗಂ ಕರಣಾನಾಂ ಹೃದಾ ಸಹ ।
ಭುಕ್ತಿಂ ಪ್ರಚಕ್ಷತೇ ಲೋಕೇ ವೈಷಮ್ಯಮುಭಯೋರಪಿ ॥೨೯॥
ತಥಾಪ್ಯಾತ್ಮಾನುಸನ್ಧಾನಂ ಉಭಯೋರಪಿ ದೃಶ್ಯತೇ ।
ಭುಕ್ತ್ವಾ ವಾತ್ಮಾನುಸನ್ಧಾನೇ ನಾತ್ಮನಃ ಸನ್ನಿಮೇವ ಹಿ ॥೩೦॥
ಮುಕ್ತ್ವಾ ವೇವಂ ನಿಜಾತ್ಮಾನುಸನ್ಧಾನೇಪ್ಯಾತ್ಮಮುಖ್ಯತಾ ।
ಏವಮಾತ್ಮಾಸ್ವಯಂಭೂತ್ವಾಭಯತಾಪ್ಯಸ್ತು ತಪೋಧನ ॥೩೧॥
ಪ್ರವೃತ್ತೌ ಚ ನಿವೃತ್ತೌ ಚ ಸರ್ವದಾತ್ಮಾನುಭಾವಿನಾಮ್ ।
ಏತದಸ್ತ್ಯೇವೋಭಯತ್ರ ಚಾಕಾಂಕ್ಷಿನ್ಯಾಯತಃ ಸತಾಮ್ ॥೩೨॥

ಮುಕ್ತಿಯೆಂಬುದು ನಿವೃತ್ತಿಯು; ಭುಕ್ತಿಯೆಂಬುದು ಪ್ರವೃತ್ತಿಯು. ಹೀಗಿರುವಾಗ, ಪರಸ್ಪರವಿರುದ್ಧಗಳಾದ ಇವೆರಡಕ್ಕೂ ಒಂದೇ ಮಾರ್ಗವು ಹೇಗೆ ಸಂಭವಿಸುವುದು? ಇದನ್ನು ಹೇಳಬೇಕು ॥೨೬॥

ಅಗಸ್ತ್ಯರು ಉತ್ತರ ಹೇಳುವರು:—

ತತ್ವಜ್ಞಾನಿಗಳಲ್ಲಿ ಉತ್ತಮನಾದ ಎಲೈ ಸುತೀಕ್ಷ್ಣಕ್ಷನೆ! ಪೂಜ್ಯನಾದ ನೀನು ಹೇಳಿದುದು ಸತ್ಯವೇ ಸರಿ. ಸಮಸ್ತ ಜಂತುಗಳಿಗೂ, ಈ ಪ್ರಪಂಚದಲ್ಲಿ ವಿಷಯಗಳಿಂದ ಸುಖದುಃಖಗಳು ಉದಯಿಸುವುವು. ಈ ವಿಷಯಜನ್ಯವಾದ ಸುಖದುಃಖಗಳೆರಡರಲ್ಲಿಯೂ ನಿವೃತ್ತಿಹೊಂದುವಿಕೆಯೇ ಮುಕ್ತಿಯೆನ್ನಿಸಲ್ಪಡುವುದು. ಮನಸ್ಸಿನೊಡನೆ ಇಂದ್ರಿಯಗಳು ವಿಷಯಗಳಲ್ಲಿ ಅತ್ಯಂತವಾಗಿ ಸೇರಿಕೊಂಡಿರುವಿಕೆಯೇ ಭುಕ್ತಿಯೆನ್ನಿಸಲ್ಪಡುವುದು. ಇವೆರಡಕ್ಕೂ ಪರಸ್ಪರ ವಿರೋಧವೇ ಸ್ಪಷ್ಟವಾಗಿರುವುದು ॥೨೭—೨೯॥

ಹೀಗಿದ್ದರೂ, ಈ ಭುಕ್ತಿಮುಕ್ತಿಗಳೆರಡರಲ್ಲಿಯೂ ಆತ್ಮಾನುಸಂಧಾನವಿದ್ದೇ ಇರುವುದು. ಹೇಗೆಂದರೆ,—ಭುಕ್ತಿಕಾಲದಲ್ಲಿ, ಆತ್ಮನೇ ಭೋಗಾದಿಕರ್ತೃತ್ವವೆಂದು ಆತ್ಮನನ್ನೇ ಅನುಸಂಧಾನ ಮಾಡಿಕೊಂಡಿದ್ದರೆ ಆತ್ಮನಿದ್ದಂತೆಯೇ ಆಗುವುದು. ಮುಕ್ತಿಯಲ್ಲಿಯೂ ಹೀಗೆಯೇ ತನ್ನನ್ನೇ ಆತ್ಮನೆಂದು ಅನುಸಂಧಾನ ಮಾಡಿಕೊಳ್ಳುವುದರಿಂದ, ಅಲ್ಲಿಯೂ ಆತ್ಮನಿಗೇ ಮುಖ್ಯತ್ವವುಂಟಾಗುವುದು. ಎಲೈ ತಪೋಧನನೆ! ಹೀಗೆ ಭುಕ್ತಿಮುಕ್ತಿಗಳೆರಡುಕಡೆಯಲ್ಲಿಯೂ ಆತ್ಮಸಂಬಂಧವಿದ್ದೇ ಇರುವುದು ॥೩೦—೩೧॥

ಈರೀತಿಯಾಗಿ, ಪ್ರವೃತ್ತಿನಿವೃತ್ತಿಗಳೆರಡರಲ್ಲಿಯೂ ಸರ್ವದಾ ಆತ್ಮಾನುಭವ ಮಾಡತಕ್ಕ ಮಹನೀಯರಿಗೆ, ಆತ್ಮಪದಾರ್ಥವಿಲ್ಲದಿದ್ದರೆ ಅನುಸಂಧಾನವೇ ಸಿದ್ಧಿಸಲಾರದಾದಕಾರಣ, ಈ ಆತ್ಮಾನುಸಂಧಾನವು ಎರಡುಕಡೆಯಲ್ಲಿಯೂ ಇದ್ದೇ ಇರುವುದೆಂದು ತಿಳಿಯುವೇಕು ॥೩೨॥

ಕಿಂ ಚ ರಾಮೋಹಮಿತ್ಯೇವ ಸರ್ವದಾನುಸ್ಮರನ್ತಿ ಯೇ ।
ನ ತೇ ಸಂಸಾರಿಣೋ ನೂನಂ ರಾಮುಪಿವ ನ ಸಂಶಯಃ ॥೩೩॥
ರಾಮುಪಿವಾತ್ರ ಭೋಕ್ತಾ ಚ ಭೋಜ್ಯಶ್ಚೈವ ಭುಜಿಕ್ರಿಯಾ ।
ಏವಂ ಸರ್ವಂ ರಾಮೆಇತಿ ಜ್ಞಾತೇ ರಾಮೋವಶಿಷ್ಯತೇ ॥೩೪॥
ಏಕಸ್ಮಿನ್ನವಶಿಷ್ಟೇ ತು ಕಿಂ ನಾಮಾಸತ್ಸು ರಜ್ಜುಸರ್ಪ ।
ಅತೋ ನ ಮುಕ್ತಿಮಾರ್ಗಸ್ಯ ರೋಧಿನೀ ಭುಕ್ತಿರಿಷ್ಯತೇ ॥೩೫॥
ಅನೇನ ವಿಧಿನಾ ರಾಮುಂ ಯಪಿವಮನುತಿಷ್ಠತಿ ।
ಸ ಭುಕ್ತಿಮುಪಿ ಮುಕ್ತಿಂ ಚ ಲಭತೇ ನಾತ್ರ ಸಂಶಯಃ ॥೩೬॥
ಯೌ ದ್ವೌ ವಿಧಿನಿಷೇಧೌ ತು ಭಕ್ತಿಮೇವೋಪಸರ್ಪತಃ ।
ತಥಾ ನ ಸ್ಪೃಶತೋ ರಾಮುಂ ಶಾಸ್ತ್ರೀರ್ಥವಿಧಿಪೂರ್ವಕಮ್ ॥೩೭॥
ಸದಾ ರಾಮೋಹಮಿತ್ಯೇವಂ ಚಿನ್ತಯೇದಪ್ಯನನ್ಯಧೀಃ ।
ನ ತಸ್ಯ ವಿಹಿತಂ ಲೋಕೇ ನಿಷಿದ್ಧಂ ಚ ನ ವಿದ್ಯತೇ ॥೩೮॥
ಯಥಾ ಘಟಶ್ಚ ಕಲಶಂ ಏಕಾರ್ಥಸ್ಯಾಭಿಧಾಯಕೌ ।
ತಥಾ ಬ್ರಹ್ಮ ಚ ರಾಮಶ್ಚ ನೂಸಮೇಕಾರ್ಥಲಕ್ಷಣೌ ॥೩೯॥

ಇದೂ ಅಲ್ಲದೆ, ಇನ್ನೊಂದು ಮುಖ್ಯತತ್ವವನ್ನು ಕೇಳುವನಾಗು. ಯಾವ ಪುಣ್ಯಾತ್ಮರು ಸರ್ವದಾ 'ರಾಮೋಹಂ' ಎಂಬುದಾಗಿಯೇ ಸ್ಮರಿಸುತ್ತಿರುವರೋ, ಅವರು ನಿಶ್ಚಯವಾಗಿಯೂ ಸಂಸಾರಿಗಳಲ್ಲ; ಅವರು ಸಾಕ್ಷಾದಾತ್ಮರೂಪರಾದವರೇಯೆ ॥೩೩॥

'ಈ ಪ್ರಪಂಚದಲ್ಲಿ, ಭೋಕ್ತೃವೂ ಭೋಜನೀಯವೂ ಭೋಜನವೂ ಕೂಡ ರಾಮನೆಯೇ' ಎಂಬುದಾಗಿ ಸಮಸ್ತವೂ ರಾಮನೇಯೆಂದು ತಿಳಿಯಲ್ಪಟ್ಟ ಬಳಿಕ, ರಾಮಪದಾರ್ಥವೊಂದೇ ಅವಶಿಷ್ಟವಾಗುವುದಲ್ಲವೆ' ॥೩೪॥

ಹೀಗೆ ಒಂದೇವೊಂದು ವಸ್ತುವು ಅವಶಿಷ್ಟವಾದ ಬಳಿಕ, ಅಸತ್ಯಭೂತವಾದ ಇತರ ಪದಾರ್ಥಗಳಲ್ಲಿ ಆಸಕ್ತಿಯೆಂಬುದೆಲ್ಲಿ ಬಂದಿತು? ಅದುಕಾರಣ, ಭುಕ್ತಿಯು ಮುಕ್ತಿಮಾರ್ಗಕ್ಕೆ ವಿರೋಧಿಯಾಗದುದೆಂದು ನಾನು ಒಪ್ಪುವುದಿಲ್ಲ ॥೩೫॥

ಈ ವಿಧಿಯಿಂದ ಯಾವನು ಹೀಗೆ ಶ್ರೀರಾಮಮಂತ್ರೋಪಾಸನೆ ಮಾಡುವನೋ, ಅವನು ಭುಕ್ತಿಮುಕ್ತಿಗಳೆರಡನ್ನೂ ಹೊಂದುವುದರಲ್ಲಿ ಸಂಶಯವಿಲ್ಲ ॥೩೬॥

ಪ್ರಪಂಚದಲ್ಲಿ, ವಿಧಿನಿಷೇಧಗಳೆಂಬ ಯಾವ ಎರಡು ಪದಾರ್ಥಗಳುಂಟೋ, ಅವು ಭಕ್ತಿಯೊಂದಕ್ಕೇ ಅಧೀನವಾಗಿರುವುವು. ಹೀಗಿರುವುದರಿಂದ, ಶಾಸ್ತ್ರೀತ್ಯಾ ಇವುಗಳು ಶ್ರೀರಾಮನಲ್ಲಿ ಪ್ರವರ್ತಿಸಲಾರವು ॥೩೭॥

ಯಾವನು ಅನನ್ಯಚಿತ್ತನಾಗಿ ಸರ್ವದಾ 'ರಾಮೋಹಂ' ಎಂಬುದೊಂದನ್ನೇ ಚಿಂತಿಸುತ್ತಿರುವನೋ, ಅವನಿಗೆ ಈ ಲೋಕದಲ್ಲಿ ವಿಧಿನಿಷೇಧಗಳೊಂದೂ ಇಲ್ಲ ॥೩೮॥

ಪ್ರಪಂಚದಲ್ಲಿ, 'ಘಟ-ಕಲಶ' ಎಂಬ ಶಬ್ದಗಳೆರಡೂ ಒಂದೇ ಅರ್ಥವನ್ನು ಹೇಗೆ ಹೇಳುವುವೋ, ಹಾಗೆ 'ಬ್ರಹ್ಮ—ರಾಮ' ಎಂಬ ಎರಡು ಶಬ್ದಗಳೂ ಒಂದೇ ಅರ್ಥವನ್ನು ಹೇಳತಕ್ಕುವು ॥೩೯॥

ಅತೋ ರಾಮೋಹಮಿತ್ಯೇತತ್ ತಾತ್ಪರ್ಯೇಣ ವದನ್ತಿ ಯೇ ।
ರಾಮೋ ನಾಮ ತವಿವ ಸ್ಯುಃ ನ ತೇಷಾಂ ವಿಹತಾದಿಕವ್ ॥೪೦॥
ದಾತವ್ಯಮಸ್ಮೈ ದದತಿ ಯಥಾ ಯತ್ಕಿಞ್ಚಿದನ್ನಹವ್ ।
ಉದಕೋದನವಸ್ತ್ರಾದಿ ರಾಮಾಯೈವ ನ ಸಂಶಯಃ ॥೪೧॥
ಯೇ ದ್ವಿಷನ್ತ್ಯಪಿ ನಿನ್ದನ್ತಿ ತತ್ಪಾಪಫಲಭಾಜನಾಃ ।
ಕುಟುಮ್ಬಿನೋ ದರಿದ್ರಾಶ್ಚ ದುಃಖಿನಃ ಸ್ಯುರ್ನ ಸಂಶಯಃ ॥೪೨॥
ಪಿತಾ ಸುತಾನ್ ಸೇವಮುತ್ಪಾದ್ಯ ಸ್ವಯಮೇವ ದಹೇಚ್ಚ ತಾನ್ ।
ಕಾರಾಗೃಹೇಷು ಸರ್ವತ್ರ ನಿನಿರ್ಮಿತ್ತಂ ನಿಗೃಹ್ಯತೇ ॥೪೩॥
ಅಹೋಸ್ಯ ಮನ್ದಭಾಗ್ಯಸ್ಯ ಯಥಾ ವೈತತ್ಕೃಪಯೋ ಭವೇತ್ ।
ಅತೋ ಬ್ರಹ್ಮವಿದಾಂ ದ್ವೇಷಃ ನ ನಿನ್ದಾ ಚ ಶುಭೈಷ್ಸುಭಿಃ ॥೪೪॥
ಯೇ ಸ್ತುವನ್ತ್ಯನುಮೋದನ್ತಿ ದದತ್ಯಸ್ಮೈ ಮುನೀಷಿಣಃ ।
ತತ್ಪುಣ್ಯಮಖಿಲಂ ಲಬ್ಧ್ವಾ ರಾಮಸಾಯುಜ್ಯಮಾಪ್ನುಯುಃ ॥೪೫॥

ಅದುಕಾರಣ, ಯಾವ ಮನುಜರು 'ರಾಮೋಹಂ' ಎಂಬ ಶಬ್ದವನ್ನು ತದೇಕಾಯತ್ತಚಿತ್ತರಾಗಿ ಜಪಿಸುವರೋ, ಅವರೇ ಸಾಹ್ಲಾದಾತ್ಮಭೂತರಾಗುವರು. ಅವರಿಗೆ ವಿಧಿನಿಷೇಧಗಳೊಂದೂ ಇಲ್ಲ ॥೪೦॥

ಹೀಗೆ ಜಪಮಾಡುತಿರುವ ಮನುಷ್ಯರಿಗೆ, ಅನ್ನ ನೀರು ವಸ್ತ್ರ ಮುಂತಾದ ಯಾವ ವಸ್ತುವನ್ನು ನಿತ್ಯವೂ ಕೊಡುವರೋ, ಅದನ್ನು ಶ್ರೀರಾಮನಿಗೆ ಕೊಟ್ಟಂತೆ ತಿಳಿಯುವೇಕು. ಇದರಲ್ಲಿ ಸಂಶಯವಿಲ್ಲ ॥೪೧॥

ಇಂತಹ ರಾಮನಾಮ ಜಪತತ್ಪರರಾದವರನ್ನು ಯಾರು ದ್ವೇಷಿಸುತಲೂ ನಿಂದಿಸುತಲೂ ಇರುವರೋ, ಅವರು ಆ ಜಪಪರರ ಪಾಪಕ್ಕೆ ಭಾಗಿಗಳಾಗುವರು; ಮತ್ತು, ಬಹುಕುಟುಂಬಯುಕ್ತರಾಗಿ ಕೇವಲ ದರಿದ್ರರಾಗಿ ಮಹಾದುಃಖಿಗಳಾಗುವುದರಲ್ಲಿ ಸಂಶಯಲೇಶವೂ ಇಲ್ಲ ॥೪೨॥

ಇಂತಹ ನೀಚಪುರುಷನು, ತಾನೇ ತಂದೆಯಾಗಿ ಮಕ್ಕಳನ್ನು ಹೆತ್ತು ತಾನೇ ಅವರನ್ನು ಸುಟ್ಟುಬಿಡುವ ಪಾಪಕ್ಕೆ ಗುರಿಯಾಗುವನು. ಇಂಥವನು, ಸರ್ವಸ್ಥಳದಲ್ಲಿಯೂ ನಿಷ್ಕಾರಣವಾಗಿ ಕಾರಾಗೃಹದಲ್ಲಿ ನಿಗ್ರಹಿಸಲ್ಪಡುವನು. ಇಂತಹ ಹತಭಾಗ್ಯನಿಗೆ ಎಷ್ಟು ಹಾನಿಯಾಗುವುದೋ, ಅಷ್ಟು ಹಾನಿಯೂ ರಾಮಭಕ್ತರನ್ನು ದ್ವೇಷಿಸತಕ್ಕವರಿಗೂ ನಿಂದಿಸತಕ್ಕವರಿಗೂ ಉಂಟಾಗುವುದು. ಅದುಕಾರಣ, ತಮಗೆ ಕಲ್ಯಾಣವನ್ನು ಬಯಸತಕ್ಕವರು, ಬ್ರಹ್ಮವೇತ್ತರುಗಳಲ್ಲಿ ದ್ವೇಷವನ್ನೂ ನಿಂದೆಯನ್ನೂ ಸುತರಾಂ ಪರಿಹರಿಸಬೇಕು ॥೪೩—೪೪॥

ಯಾವ ಪುಣ್ಯಾತ್ಮರಾದರೋ, ಈ ರಾಮಭಕ್ತರನ್ನು ಸ್ತುತಿಸುತಲೂ—ಅವರ ಕೃತ್ಯವನ್ನು ಅನುಮೋದಿಸುತಲೂ—ಅವರಿಗೆ ಯಥಾಯೋಗ್ಯವಾಗಿ ದಾನಮಾಡುತಲೂ ಇರುವರೋ, ಅವರು—ಆ ಭಕ್ತರಿಗೆ ಮುಕ್ತಿಯಾಗುವಕಾಲದಲ್ಲಿ ಅವರ ಪುಣ್ಯವೆಲ್ಲವನ್ನೂ ಪಡೆದು—ತಾವೂ ಸಾಯುಜ್ಯವನ್ನು ಹೊಂದುವರು ॥೪೫॥

ಜ್ಞಾತ್ವಾ ತಮೇವಮಾತ್ಮಾನಂ ಕೃತ್ಯಂ ಕುರು ನಿರಂತರಮ್ ।
ಏತೇನೈವ ತವಾಭೀಷ್ಟಂ ಭವಿಷ್ಯತಿ ನ ಸಂಶಯಃ ॥೬೬॥
ಅಯಮೇವ ಪರೋ ಮಾರ್ಗಃ ಕರ್ಮಾಪ್ಯೇತತ್ ಪರಂ ಸ್ಮೃತಮ್ ।
ರಾಮಏವ ಪರಂ ಜ್ಯೋತಿಃ ಸಚ್ಚಿದಾನಂದಲಕ್ಷಣಃ ॥೬೭॥

ಇತಿ ಶ್ರೀ ಬಾಲಕಾಂಡೇ ರಾಮಮಂತ್ರಮಹಿಮಾನುವರ್ಣನಂ
ನಾಮ ದ್ವಾವಿಂಶಃ ಸರ್ಗಃ.



ಅದುಕಾರಣ, ಆಯುಷ್ಮಾ ಸುತೀಕ್ಷ್ಣಮುನಿಯೆ! ನೀನು ಈ ಪರಮಾತ್ಮನಾದ ಶ್ರೀರಾಮಚಂದ್ರನ ಸ್ವರೂಪವನ್ನು ತಿಳಿದುಕೊಂಡು, ಕೃತ್ಯಕರ್ಮಗಳನ್ನು ಸರ್ವದಾ ಮಾಡುತಿರು. ಇದರಿಂದಲೇ ನಿನಗೆ ಸಮಸ್ತವಾದ ಇಷ್ಟವೂ ಸಿದ್ಧಿಸುವುದರಲ್ಲಿ ಸಂಶಯವಿಲ್ಲ ॥೬೬॥

ಇದೇ ಉತ್ತಮವಾದ ಜ್ಞಾನಮಾರ್ಗವು; ಉತ್ತಮವಾದ ಕರ್ಮಮಾರ್ಗವೂ ಇದೇಯೆ. ಶ್ರೀರಾಮನೇ ಸಚ್ಚಿದಾನಂದವಿಗ್ರಹವಾದ ಪರಾತ್ಪರವಾದ ತೇಜಸ್ಸೆಂದು ದೃಢವಾಗಿ ನಂಬುವನಾಗು ॥೬೭॥

ಇದು ಬಾಲಕಾಂಡದಲ್ಲಿ ಶ್ರೀರಾಮಮಂತ್ರಮಹಿಮಾನುವರ್ಣನೆಯೆಂಬ
ಇಪ್ಪತ್ತೆರಡನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ತ್ರಯೋವಿಂಶಃ ಸರ್ಗಃ.

ಅಗಸ್ತ್ಯ ಉವಾಚ.

ತತ್ಪ್ರಾಪ್ತಿಸಾಧನಾನ್ಯಷ್ಟೌ ತಾನಿ ವಕ್ಷ್ಯಾಮಿ ತೇ ಶೃಣು ।
ಯಮೋ ನಿಯಮಸಂಜ್ಞಶ್ಚ ಹ್ಯಾಸನಂ ಸ್ಯಾತ್ ತೃತೀಯಕಮ್ ॥೧॥

ಪ್ರಾಣಾಯಾಮಶ್ಚತುರ್ಥಃ ಸ್ಯಾತ್ ಪ್ರತ್ಯಾಹಾರಸ್ತು ಪಞ್ಚಮಃ ।
ಧಾರಣಾ ಚ ತಥಾ ಧ್ಯಾನಂ ಸಮಾಧಿರಿತಿ ಸತ್ತಮ ॥೨॥

ಪ್ರತ್ಯೇಕಮೇಷಾಂ ವಕ್ಷ್ಯಾಮಿ ಲಕ್ಷಣಾನ್ಯಪಿ ಸುವ್ರತ ।
ಸರ್ವೇಷಾಂ ಸುಖಬೋಧಾರ್ಥಂ ತಚ್ಛೃಣುಷ್ವ ತಪೋಧನ ॥೩॥

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾರ್ಜವಮ್ ।
ಕ್ಷಮಾ ಧೃತಿರ್ಮಿತಾಹಾರಃ ಶೌಚಂ ಚೇತಿ ಯಮೋದಶ ॥೪॥

ತಪಶ್ಚ ತುಷ್ಟಿರಾಸ್ತಿಕ್ಯಂ ಈಶ್ವರಾರಾಧನಂ ತಥಾ ।
ಸಿದ್ಧಾನ್ತವೀಕ್ಷಣಂ ಚೈವ ಲಜ್ಜಾ ದಾನಂ ಮತಿಸ್ತಥಾ ।
ಜಪೋ ವ್ರತಂ ದಶೈತಾನಿ ಸುತೀಕ್ಷ್ಣ ನಿಯಮಾಃ ಸ್ಮೃತಾಃ ॥೫॥

ಬಾಲಕಾಂಡದಲ್ಲಿ ಇಪ್ಪತ್ತ್ಮೂರನೆಯ ಸರ್ಗವು.

ಪುನಃ ಅಗಸ್ತ್ಯರು ಸುತೀಕ್ಷ್ಣಮುನಿಗೆ ಹೇಳುವರು :—

ಅಯ್ಯಾ! ಸುತೀಕ್ಷ್ಣಮುನಿಯೆ! ನಾನು ಈಗ ಶ್ರೀರಾಮನುಂತ್ರ ಮಹಿಮೆಯನ್ನೂ ಅದರ ಪುನಶ್ಚರಣೆಯಿಂದ ಶ್ರೀರಾಮಸಾಯುಜ್ಯ ಪ್ರಾಪ್ತಿಯಾಗುವುದೆಂಬುದನ್ನೂ ಹೇಳಿದೆನಷ್ಟೆ! ಆ ರಾಮಸಾಯುಜ್ಯ ಪ್ರಾಪ್ತಿಗೆ ಎಂಟುಸಾಧನಗಳಿರುವುವು. ಅವುಗಳನ್ನು ನಿನಗೆ ಹೇಳುವೆನು, ಕೇಳು. ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣೆ ಸಮಾಧಿಯೆಂಬುವೇ ಈ ಅಷ್ಟಾಂಗಗಳು ॥೧—೨॥

ನಿನಗೆ ಚೆನ್ನಾಗಿ ತಿಳಿಯುವುದಕ್ಕೋಸ್ಕರ, ಇವೆಲ್ಲಕ್ಕೂ ಬೇರೆಬೇರೆಯಾಗಿ ಲಕ್ಷಣವನ್ನು ಈಗ ಹೇಳುವೆನು; ಎಲೈ ತಪೋಧನನೆ! ಕೇಳುವನಾಗು ॥೩॥

ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ದಯೆ ಆರ್ಜವ ಕ್ಷಮೆ ಧೃತಿ ಮಿತಾಹಾರ ಶೌಚ—ಈ ಹತ್ತಕ್ಕೂ ಯಮವೆಂದು ಹೆಸರು ॥೪॥

ಆಯ್ಯಾ! ಸುತೀಕ್ಷ್ಣ! ತಪಸ್ಸು ಸಂತೋಷ ಆಸ್ತಿಕ್ಯ ಈಶ್ವರಾರಾಧನ ಶಾಸ್ತ್ರಸಿದ್ಧಾಂತ ಪರ್ಯಾಲೋಚನ ಲಜ್ಜೆ ದಾನ ಸದ್ಬುದ್ಧಿ ಜಪ ವ್ರತ—ಈ ಹತ್ತೂ ನಿಯಮಗಳೆಂದು ಹೇಳಲ್ಪಟ್ಟಿರುವುವು ॥೫॥

ಆಸನಂ ಚಾಥ ವಕ್ಷ್ಯೇಹಂ ಮನ್ತ್ರಸಿದ್ಧಿರ್ನ ಯದ್ವಿನಾ ॥೬॥
ವಿಕರ್ತ್ರೈವ ಸಮಾವೇಶಃ ಪೂರ್ವೋಕ್ತನಿಯಮೈಃ ಸಹ ।
ಶೂಲಾರ್ಪಿತಶರೀರಸ್ಯೇವೈತದಾಸನಮುಚ್ಯತೇ ॥೭॥
ಪ್ರಾಣಾಯಾಮಾನಥೋ ವಕ್ಷ್ಯೇ ಮುಮುಕ್ಷೋರುಪಕಾರಕಾನ್ ।
ಯೈಃ ಕೃತೈರ್ದಹ್ಯತೇಘೌಘಃ ಕುಮ್ಭೇನ್ಧನಗಿರಿರ್ಯಥಾ ॥೮॥
ಇಡಯಾ ಪೂರಯೇದ್ವಾಯುಂ ತ್ಯಜೇತ್ ಪಿಙ್ಗಳಯಾ ಶನೈಃ ।
ಯಾವಚ್ಛಕ್ತಿ ನಿಯಮ್ಯಾಸೌ ಮನಸ್ಯೇವ ಜಪೇನ್ಮನುಮ್ ॥೯॥
ರಾಮಂ ಮುಹುರ್ಮುಹುರ್ಧ್ಯಾಯನ್ ಇನ್ದ್ರಿಯಾಣಿ ನಿಗೃಹ್ಯ ಚ ।
ಏವಂ ತ್ರಿವಾರಂ ಯತ್ ಕುರ್ಯಾತ್ ಪ್ರಾಣಾಯಾಮಃ ಸಉಚ್ಯತೇ ॥೧೦॥
ಸಮ್ಯಙ್ನಿರುಧ್ಯ ಚ ಪ್ರಾಣಾನ್ ಅನ್ತಃಕರಣಮಾತ್ಮನಿ ।
ಸ್ವಯಂ ಚೈವ ವಿಶೇದ್ಯಃ ಸ ಬ್ರಹ್ಮಭೂಯಾಯ ಕಲ್ಪತೇ ॥೧೧॥
ಪ್ರಾಣಾಯಾಮೈಃ ಕೃತೈಃ ಶಶ್ವತ್ ನಿತ್ಯಂ ಷೋಡಶಭಿರ್ಮುನೇ ।
ದೈನನ್ದಿನಂ ಚ ಯತ್ ಪಾಪಂ ತತ್ ಸರ್ವಂ ನಶ್ಯತಿ ಧ್ರುವಮ್ ॥೧೨॥
ಪ್ರಾಣಾಯಾಮೈರ್ವಿನಾಯಾಃ ಸ್ಯುಃ ಜಪಹೋಮಾರ್ಚನಾದಿಕಾಃ ।
ನ ಫಲನ್ತ್ಯೇವ ತಾಃ ಸರ್ವಾಃ ಯತ್ನೇನಾಪಿ ಕೃತಾಃ ಕ್ರಿಯಾಃ ॥೧೩॥

ಇನ್ನು ಮುಂದೆ ಆಸನಸ್ವರೂಪವನ್ನು ಹೇಳುವೆನು. ಆಸನವಿಲ್ಲದಿದ್ದರೆ, ಮಂತ್ರಸಿದ್ಧಿಯೇ ಉಂಟಾಗುವುದಿಲ್ಲ. ಹಿಂದೆ ಹೇಳಿದ ನಿಯಮಗಳೊಡನೆ ದೇಹವನ್ನು ಶೂಲಕ್ಕೇರಿಸಿದಂತೆ ನಿಶ್ಚಲವಾಡಿಕೊಂಡು ಒಂದೇಕಡೆಯಲ್ಲಿರುವುದಾವುದುಂಟೋ, ಅದಕ್ಕೇ ಆಸನವೆಂದು ಹೆಸರು ॥೬-೭॥

ಅಬಳಿಕ, ಮುಮುಕ್ಷುವಾದವನಿಗೆ ಅತ್ಯುಪಕಾರಕವಾಗಿರುವ ಪ್ರಾಣಾಯಾಮಸ್ವರೂಪವನ್ನು ಹೇಳುವೆನು. ಈ ಪ್ರಾಣಾಯಾಮವನ್ನು ಮಾಡಿದರೆ, ಸಮಸ್ತಪಾಪರಾಶಿಯೂ—ಒಣಗಿದ ಸೌದೆಯ ರಾಶಿಯಂತೆ ಭಸ್ಮೀಭೂತವಾಗುವುದು ॥೮॥

ಇಡಾ ಎಂಬ ನಾಡಿಯಿಂದ ಶ್ವಾಸನವಾಯುವನ್ನು ಮೇಲಕ್ಕೆಳೆದು, ಪಿಂಗಳೆಯೆಂಬ ನಾಡಿಯಿಂದ ವಾಯುವನ್ನು ಮೆಲ್ಲಗೆ ಬಿಡಬೇಕು. ಈ ಮಧ್ಯದಲ್ಲಿ, ಶಕ್ತ್ಯನುರೂಪವಾಗಿ ಪ್ರಾಣವಾಯುವನ್ನು ಸ್ತಬ್ಧವಾಡಿಕೊಂಡು (ಕುಂಭಕವಾಡಿಕೊಂಡು), ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಶ್ರೀರಾಮನನ್ನು ಪದೇಪದೇ ಧ್ಯಾನಿಸುತ, ಮನಸ್ಸಿನಲ್ಲಿಯೇ ಶ್ರೀರಾಮಮಂತ್ರವನ್ನು ಜಪಿಸಬೇಕು. ಹೀಗೆ ಮೂರಾವೃತ್ತಿ ಮಾಡಿದರೆ, ಅದಕ್ಕೇ ಪ್ರಾಣಾಯಾಮವೆಂದು ಹೆಸರು ॥೯—೧೦॥

ಪ್ರಾಣವಾಯುಗಳನ್ನು ಚೆನ್ನಾಗಿ ನಿರೋಧಪಡಿಸಿಕೊಂಡು, ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಿ, ಸ್ವಯಂ ಶಕ್ತವಾಗಿನ್ನಿಸಿದ ಪುರುಷನು, ಬ್ರಹ್ಮಸಾಯುಜ್ಯಕ್ಕೆ ಅರ್ಹನಾಗುವನು ॥೧೧॥

ಅಯ್ಯಾ ಸುತೀಕ್ಷ್ಣಮುನಿಯೆ! ಪ್ರತಿದಿನವೂ ಹದಿನಾರು ಪ್ರಾಣಾಯಾಮಗಳನ್ನು ಮಾಡಿದರೆ, ಅಯಾದಿವಸ ಮಾಡಿದ ಪಾಪವೆಲ್ಲವೂ ನಾಶಹೊಂದುವುದು. ಇದು ನಿಶ್ಚಯವು ॥೧೨॥

ಪ್ರಾಣಾಯಾಮವಿಲ್ಲದೆ ಎಷ್ಟು ಪ್ರಯಾಸದಿಂದ ಜಪಹೋಮಾರ್ಚನಾದಿ ಕರ್ಮಗಳನ್ನು ಮಾಡಿದರೂ, ಅವೆಲ್ಲವೂ ನಿಷ್ಫಲಗಳೇ ಆಗುವುವು ॥೧೩॥

ಇನ್ದ್ರಿಯಾಣಾಂ ಹೃದಾ ಸಾರ್ಧಂ ವಿಷಯೇಭ್ಯೋ ನಿವರ್ತನಮ್ ।
ಪ್ರತ್ಯಾಹಾರೋ ಭವೇದೇಷಃ ಸಮ್ಯಗಿನ್ದ್ರಿಯನಿಗ್ರಹಃ ॥೧೩॥
ಶ್ರೀರಾಮಮೂರ್ತಿಧೀವೃತ್ತಿಃ ಧಾರಣಾರೂಪವಸ್ತುತಿಃ ।
ಧ್ಯಾನಂ ಸ್ಯಾದನ್ಯವಹಿತಾ ವಿಷಯಾನ್ತರವೃತ್ತಿಭಿಃ ॥೧೪॥
ಧ್ಯಾನೇ ತ್ಯಕ್ತೇಪ್ಯಪ್ರಯತ್ನಾತ್ ರಾಮಶ್ರೀಮೂರ್ತಿದರ್ಶನಮ್ ।
ಯತ್ ತದ್ಧಾರಣಮಿತ್ಯಾಹುಃ ಸ್ವಪ್ನಾದಾವಪಿ ಸರ್ವದಾ ॥೧೫॥
ಧಾರಣಾಭ್ಯಾಸವಶತಃ ತ್ಯಕ್ತ್ವಾ ಜೀವತ್ವವಿಭ್ರಮಮ್ ।
ರಾಮರೂಪೇಣಾವಭಾನಂ ಸಮಾಧಿರಭಿಧೀಯತೇ ॥೧೬॥
ಏವಮಷ್ಟಾಙ್ಗಸಮ್ಪನ್ನೋ ಯೋಗಯುಕ್ತಃ ಸುಸಂಯತಃ ।
ಸೂರ್ಯಸ್ಯ ಮಣ್ಡಲಂ ಭಿತ್ವಾ ಯಾತಿ ಬ್ರಹ್ಮ ಸನಾತನಮ್ ॥೧೭॥
ನಿರಸ್ತ ಕ್ಲೇಶದುರಿತಃ ಕಾಮಕ್ರೋಧಾದಿವರ್ಜಿತಃ ।
ಏವಮಭ್ಯಾಸಯೋಗೇನ ಸ ರಾಮಪದಮಾಪ್ನುಯಾತ್ ॥೧೮॥
ವ್ರತೋಪವಾಸನಿಯಮೈಃ ಜನ್ಮಕೋಟ್ಯಾ ಹ್ಯನುಷ್ಠಿತೈಃ ।
ಯಜ್ಞೈಶ್ಚ ವಿವಿಧೈಃ ಸಮ್ಯಕ್ ಭಕ್ತಿರ್ಭವತಿ ರಾಘವೇ ॥೧೯॥

ಇಂದ್ರಿಯಗಳನ್ನು ಮನಸ್ಸಿನೊಡನೆ ವಿಷಯಗಳಿಂದ ಹಿಂದಿರುಗಿಸುವುದೇ ಪ್ರತ್ಯಾಹಾರವು. ಅಂತು, ಚೆನ್ನಾಗಿ ಇಂದ್ರಿಯನಿಗ್ರಹವಾಡುವುದಕ್ಕೆ ಪ್ರತ್ಯಾಹಾರವೆಂದು ಹೆಸರಾಗುವುದು॥

ತೈಲಧಾರೆಯಂತೆ ಅವಿಚ್ಛಿನ್ನವಾಗಿ ಸರ್ವದಾ ಶ್ರೀರಾಮನ ಆಕಾರದಲ್ಲಿಯೇ ಸ್ಥಿರವಾಗಿರುವ ಚಿತ್ತವೃತ್ತಿಯೇ ಧ್ಯಾನವೆನ್ನಿಸುವುದು. ಆದರೆ, ಮಧ್ಯಮಧ್ಯದಲ್ಲಿ ವಿಷಯಾಂತರವೃತ್ತಿಗಳು ಉದಯಿಸದಿರುವಂತೆ ನೋಡಿಕೊಳ್ಳಬೇಕು ॥೧೪॥

ಧ್ಯಾನವನ್ನು ಬಿಟ್ಟಬಿಟ್ಟರೂ, ಪ್ರಯತ್ನಲೇಶವೂ ಇಲ್ಲದೆಯೇ ಸ್ವಪ್ನಾದಿಗಳಲ್ಲಿಯೂ ಶ್ರೀರಾಮನ ದಿವ್ಯಮಂಗಳ ವಿಗ್ರಹವೇ ಗೋಚರವಾಗುತ್ತಿರುವುದಾವುದುಂಟೋ, ಅದನ್ನೇ ಧಾರಣೆಯೆಂದು ಪ್ರಾಜ್ಞರು ಹೇಳುವರು ॥೧೫॥

ಈ ಧಾರಣೆಯ ಅಭ್ಯಾಸವಿಶೇಷದಿಂದ, ಜೀವನೆಂಬ ಭ್ರಾಂತಿಯನ್ನೇ ಬಿಟ್ಟು ಬಿಟ್ಟು—ಶ್ರೀರಾಮರೂಪನಾಗಿಯೇ ಪ್ರತ್ಯಯಪಡೆಯುವಿಕೆಯಾವುದುಂಟೋ, ಅದೇ ಸಮಾಧಿಯೆಂದು ಹೇಳಲ್ಪಡುವುದು ॥೧೬॥

ಹೀಗೆ ಅಷ್ಟಾಂಗಸಂಪನ್ನನಾಗಿ ಯೋಗ (ಚಿತ್ತವೃತ್ತಿನಿರೋಧ)ಯುಕ್ತನಾಗಿ ಜಿತೇಂದ್ರಿಯನಾದವನು, ಸೂರ್ಯಮಂಡಲವನ್ನು ಭೇದಿಸಿಕೊಂಡು, ಸನಾತನನಾದ ಬ್ರಹ್ಮನಲ್ಲಿ ಸಾಯುಜ್ಯವನ್ನು ಹೊಂದುವನು ॥೧೭॥

ಹೀಗೆ ಅಭ್ಯಾಸಾತಿಶಯದಿಂದ, ಕಾಮಕ್ರೋಧಾದಿಗಳನ್ನು ಬಿಟ್ಟುರಹಿತನಾದವನು, ಸಮಸ್ತಪಾಪಗಳನ್ನೂ ಕಳೆದುಕೊಂಡು, ಶ್ರೀರಾಮನ ಸಾನ್ನಿಧ್ಯವನ್ನು ಪಡೆಯುವನು ॥೧೮॥

ಶ್ರೀರಾಮನಲ್ಲಿ ಭಕ್ತಿಯು ಸಾಮಾನ್ಯವಾಗಿ ಹುಟ್ಟುವುದೆಂದು ತಿಳಿಯಬಾರದು. ಹಿಂದೆ ಅನೇಕಕೋಟಿ ಜನ್ಮಗಳಲ್ಲಿ ವ್ರತೋಪವಾಸಾದಿ ನಿಯಮಗಳನ್ನೂ ನಾನಾವಿಧಯಜ್ಞಗಳನ್ನೂ ಮಾಡಿದ್ದರೆ ಮಾತ್ರವೇ ಶ್ರೀರಾಮನಲ್ಲಿ ಉತ್ತಮವಾದ ಭಕ್ತಿಯುಂಟಾಗುವುದು ॥೧೯॥

ಸಂಸಾರಸಾಗರಸ್ಯಾಸ್ಯ ಪಾರಂ ಪ್ರಾಪ್ತುಂ ಯದೀಚ್ಛಸಿ ।
ಭಕ್ತಿಯೋಗೇಥ ವಾ ಜ್ಞಾನಯೋಗೇ ಪ್ರವಿಶ ಸತ್ತಮ ॥೦೧॥

ಸರ್ವದುಃಖಾಭಿಭೂತಾನಾಂ ಭ್ರಾನ್ತಾನಾಂ ಹತಚೇತಸಾಮ್ ।
ತ್ರಾತಾ ಸಕಲವಿತ್ರ ಸಂಸಾರೇ ರಾಘವಃ ಸ್ವಯಮ್ ॥೦೦॥

ಪ್ರಕ್ಷೀಣಾಶೇಷಪಾಪಾನಾಂ ಜ್ಞಾನಯೋಗಃ ಪ್ರಕಸ್ಯತೇ ।
ಭಕ್ತಿಯೋಗಸ್ತು ಸರ್ವೇಷಾಂ ಭವೇನ್ನಿರ್ವಾಣಸಾಧನಮ್ ॥೦೧॥

ಜ್ಞಾನೇನ ಕರ್ಮಣಾ ವಾಪಿ ರಾಮಂ ಸಮ್ಯಗಿಹಾರ್ಚಯ ।
ರಾಮಜ್ಞಾನಾತ್ ಪರಂ ನಾಸ್ತಿ ಸತ್ಯಂಸತ್ಯಂ ಶಿವೋದಿತಮ್ ॥೦೪॥

ಶ್ರೀ ವಿಶ್ವಾಮಿತ್ರ ಉವಾಚ.

ಏವಂ ಶ್ರೀರಾಮಚನ್ದ್ರಸ್ಯ ತತ್ತ್ವಂ ಮನ್ತ್ರಸ್ಯ ವೈಭವಮ್ ।
ತಜ್ಜ್ಞಾನಸಾಧನಾನ್ಯಷ್ಟೌ ಕುಮ್ಭಜೇನ ಸಮಾಸತಃ ॥೦೫॥

ಸುತೀಕ್ಷ್ಣಾಯ ಪುರಾ ಪ್ರೋಕ್ತಾನ್ಯಾತ್ಮಜ್ಞಾನವಿದಾಂ ವರಾಃ ।
ಮಯಾ ತದೇವ ಭವತಾಂ ಸಮ್ಯಗುಕ್ತಂ ಯಥಾಶ್ರುತಮ್ ॥೦೬॥

ಅಯ್ಯಾ ಮುನಿಶ್ರೇಷ್ಠನಾದ ಸುತೀಕ್ಷ್ಣನೆ! ಈ ಸಂಸಾರವೆಂಬ ಸಮುದ್ರದ ವಾರವನ್ನು ಹೊಂದಬೇಕೆಂದು ನೀನು ಇಚ್ಛಿಸುವಪಕ್ಷದಲ್ಲಿ, ಭಕ್ತಿಯೋಗದಲ್ಲಿಯಾಗಲಿ—ಅಥವಾ ಜ್ಞಾನಯೋಗದಲ್ಲಿಯಾಗಲಿ ಅವಶ್ಯವಾಗಿ ಪ್ರವೇಶಮಾಡು ॥೨೧॥

ಸಕಲವಿಧ ದುಃಖಗಳಿಂದಲೂ ಸಂಕಟಪಡುತ ಸಂಸಾರವೆಂಬ ಸಾಗರದಲ್ಲಿ ಸುತ್ತುತ-ದೀನರಾಗಿರತಕ್ಕವರಿಗೆ, ಈ ಸಮಸ್ತ ಸಂಸಾರ ಸಂಕಟಗಳಲ್ಲಿಯೂ ಶ್ರೀರಾಮನೇ ರಕ್ಷಕನು ॥೨೨॥

ಸಕಲವಿಧ ಪಾಪಗಳನ್ನೂ ಕಳೆದುಕೊಂಡಿರತಕ್ಕವರಿಗೆ ಜ್ಞಾನಯೋಗವು ಪ್ರಶಸ್ತವಾಗಿರುವುದು. ಭಕ್ತಿಯೋಗವಾದರೋ, ಸಮಸ್ತರಿಗೂ ಮೋಕ್ಷಸಾಧನವಾಗುವುದು ॥೨೩॥

ಅಯ್ಯಾ! ಸುತೀಕ್ಷ್ಣಮುನಿಯೆ! ಜ್ಞಾನಯೋಗದಿಂದಲಾಗಲಿ—ಅಥವಾ ಕರ್ಮಯೋಗದಿಂದಲಾಗಲಿ—ನೀನು ಚೆನ್ನಾಗಿ ಶ್ರೀರಾಮನನ್ನು ಪೂಜಿಸು. ರಾಮಜ್ಞಾನಕ್ಕಿಂತಲೂ ಮೇಲಾದುದು ಯಾವುದೂ ಇಲ್ಲ. ಇದು ಸಂಪೂರ್ಣವಾಗಿ ಸತ್ಯವೆಂದು ನಂಬುವನಾಗು. ಇದು ನನ್ನ ವಾಕಲ್ಲ; ಸಾಕ್ಷಾತ್ ಪರಮೇಶ್ವರನೇ ಹೀಗೆ ಹೇಳಿರುವನು ॥೨೪॥

ವಿಶ್ವಾಮಿತ್ರಮುನಿಯು ಋಷಿಗಳನ್ನು ಕುರಿತು ಹೇಳುವನು:—

ಆತ್ಮಜ್ಞಾನಸ್ವರೂಪಜ್ಞರಲ್ಲಿ ಅಗ್ರಗಣ್ಯರಾದ ಎಲೈ ಮುನಿಗಳಿರಾ! ಈಗೀತಿಯಾಗಿ ಪೂರ್ವದಲ್ಲಿ ಅಗಸ್ತ್ಯಮುನಿಯು, ಶ್ರೀರಾಮಚಂದ್ರನ ತತ್ವವನ್ನೂ ಅವನ ಮಂತ್ರದ ಮಹಿಮೆಯನ್ನೂ, ಅವನ ಜ್ಞಾನಕ್ಕೆ ಅವಶ್ಯಕಗಳಾದ ಎಂಟು ಸಾಧನಗಳನ್ನೂ, ಸುತೀಕ್ಷ್ಣನಿಗೆ ಸಂಕ್ಷೇಪವಾಗಿ ಹೇಳಿರುವನು. ಈಗ ಅದನ್ನೇ ನಿಮಗೆ, ನಾನು ಹೇಗೆ ಕೇಳಿದೆನೋ ಹಾಗೆ ಹೇಳಿರುವೆನು ॥೨೫-೨೬॥

ಶ್ರೀಶಿವಉವಾಚ.

ಏವಂ ಗಿರೀಂದ್ರಜೇ ರಾಮತತ್ತ್ವಂ ಶ್ರುತ್ವಾ ಮಹರ್ಷಯಃ ।
ಸನೋತ್ಪಷಂ ಪರಮಂ ಪ್ರಾಪ್ಯ ವಿಶ್ವಾಮಿತ್ರಮಪೂಜಯನ್ ॥೨೬॥
ತತೋ ರಾಮಂ ಚ ಸಮ್ಪೂಜ್ಯ ಚಕ್ರುರುತ್ಸವಮುತ್ತಮಮ್ । ।
ತಾಣ್ಡವಂ ಪರಮಂ ಚಕ್ರುಃ ರಾಮರಾಮೇತ್ಯಕೀರ್ತಯನ್ ॥೨೪॥
ಭಕ್ತ್ಯಾಗದ್ಗದಕಣ್ಠಾಸ್ತೇ ಹರ್ಷಜಾಶ್ರುಪರಿಪ್ಲುತಾಃ ।
ತದಾ ರಾಮಾತ್ಮಕಂ ಸರ್ವಂ ದದೃಶುರ್ಜಗದೇವ ಸಾ ॥೨೫॥

ಇತಿ ಶ್ರೀ ಬಾಲಕಾಣ್ಡೇ ಅಷ್ಟಾಙ್ಗಯೋಗನಿರೂಪಣಂ ನಾಮ
ತ್ರಯೋವಿಂಶಃ ಸರ್ಗಃ.



ಶ್ರೀ ಪರಮೇಶ್ವರನು ವಾರ್ವತಿಗೆ ಹೇಳುವನು:- –

ಎಲೌ ವಾರ್ವತಿ! ಈರೀತಿಯಾಗಿ ಆ ಮುನಿಗಳು ಶ್ರೀರಾಮನ ತತ್ವವನ್ನು ಕೇಳಿದವರಾಗಿ, ಅತ್ಯಧಿಕವಾದ ಸಂತೋಷವನ್ನು ಹೊಂದಿ, ವಿಶ್ವಾಮಿತ್ರಮುನಿಯನ್ನು ಒಹಳವಾಗಿ ಪೂಜಿಸಿದರು ॥೨೩॥

ಆನಂತರದಲ್ಲಿ, ಅವರು ಶ್ರೀರಾಮನನ್ನೂ ಪೂಜಿಸಿ ವಿಶೇಷವಾಗಿ ಉತ್ಸವವಾಡಿದರು; ಹೆಚ್ಚಾಗಿ ನರ್ತನವಾಡಿದರು; ರಾಮ ರಾಮ ಎಂದು ಕೀರ್ತನೆಯನ್ನೂ ಮಾಡುತಿದ್ದರು ॥೨೪॥

ಆಗ ಆ ಸಮಸ್ತ ಮುನಿಗಳೂ, ಭಕ್ತ್ಯಾಯಿಂದ ಗದ್ಗದಕಂಠರಾಗಿ, ಆನಂದಬಾಷ್ಪವ್ಯಾಪ್ತರಾಗಿ, ಅಕ್ಷಣವೇ ಸಮಸ್ತ ಜಗತ್ತೂ ಶ್ರೀರಾಮಮಯವಾಗಿರುವಂತೆ ನೋಡುತಿದ್ದರು ॥೨೫॥

ಇದು ಬಾಲಕಾಂಡದಲ್ಲಿ ಅಷ್ಟಾಂಗಯೋಗನಿರೂಪಣವೆಂಬ
ಇಪ್ಪತ್ತಮೂರನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಚತುರ್ವಿಂಶಃ ಸರ್ಗಃ.

ಶ್ರೀ ಶಿವಉವಾಚ

ಅಥ ತಾಂ ರಜನೀಂ ತತ್ರ ಕೃತಾರ್ಥೌ ರಾಮಲಕ್ಷ್ಮಣೌ ।
ಊಷತುರ್ಮುದಿತೌ ವೀರೌ ಪೂಜಿತೌ ಮುನಿಪುಙ್ಗವೈಃ ॥೧॥

ಪ್ರಭಾತಾಯಾಂ ತು ಶರ್ವರ್ಯಾಂ ಕೃತಪೌರ್ವಾಹ್ಣಿಕಕ್ರಿಯೌ ।
ಅಭಿವಾದ್ಯ ಮುನಿಶ್ರೇಷ್ಠಂ ಮಧುರಂ ವಾಕ್ಯಮೂಚತುಃ ॥೨॥

ಇಮೌ ಸ್ಮ ಮುನಿಶಾರ್ದೂಲ ಯುವಾಮ್ಭತ್ಕಾರ್ಯಾರ್ಥಮಾಗತೌ ।
ಆಜ್ಞಾಪಯ ಯಥೇಷ್ಟಂ ವೈ ಶಾಸನಂ ಕರವಾವ ಕಿಮ್ ॥೩॥

ಏವಮುಕ್ತೌ ತತಸ್ತಾಭ್ಯಾಂ ಸರ್ವಏವ ಮಹರ್ಷಯಃ !
ವಿಶ್ವಾಮಿತ್ರಂ ಪುರಸ್ಕೃತ್ಯ ರಾಮಂ ವಚನಮಬ್ರುವ ॥೪॥

ರಾಮರಾಮ ಮಹಾಯಜ್ಞಂ ದ್ರಷ್ಟುಮಿಚ್ಛಾ ಮಹೇ ವಯಮ್ ।
ವಿದೇಹರಾಜನಗರೇ ಜನಕಸ್ಯ ಮಹಾತ್ಮನಃ ॥೫॥

ಬಾಲಕಾಂಡದಲ್ಲಿ ಇಪ್ಪತ್ತನಾಲ್ಕನೆಯ ಸರ್ಗವು.

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಆ ಒಳಕ, ಮಹಾವೀರರಾದ ರಾಮಲಕ್ಷ್ಮಣರು, ತಾವು ಮಾಡಬೇಕಾಗಿದ್ದ ಯಜ್ಞರಕ್ಷಣೆಯನ್ನು ಮಾಡಿದುದರಿಂದ ಕೃತಕೃತ್ಯರಾಗಿ, ಆ ಮುನಿಶ್ರೇಷ್ಠರಿಂದ ಪೂಜಿಸಲ್ಪಟ್ಟು, ಆ ರಾತ್ರಿ ಅಲ್ಲಿಯೇ ಹರ್ಷದಿಂದ ವಾಸಮಾಡಿದರು ॥೧॥

ಆ ರಾತ್ರಿಯು ಬೆಳಕುಹರಿಯಲಾಗಿ, ಪ್ರಾತಃಕಾಲದಲ್ಲಿ ಮಾಡಬೇಕಾದ ಕರ್ಮಗಳನ್ನೆಲ್ಲ ಮುಗಿಯಿಸಿಕೊಂಡು, ವಿಶ್ವಾಮಿತ್ರಮಹರ್ಷಿಯನ್ನು ನಮಸ್ಕರಿಸಿ, 'ಮುನಿಶ್ರೇಷ್ಠರೆ! ಇದೋ—ನಿಮ್ಮ ಕಾರ್ಯಕ್ಕೋಸ್ಕರವಾಗಿ ಇಲ್ಲಿಗೆ ಒಂದಿರುವ ನಾವಿಬ್ಬರೂ ಸಿದ್ಧರಾಗಿರುವೆವು ಈಗ ನಾವು ಯಾವ ಆಜ್ಞೆಯನ್ನು ನೆರವೇರಿಸಬೇಕಾಗಿರುವುದು? ತಮ್ಮ ಇಚ್ಛಾನುಗುಣವಾಗಿ ಆಜ್ಞಾಪಿಸಬೇಕು' ಎಂದು, ಮನೋಹರವಾಗಿರುವ ಮಾತನ್ನು ಹೇಳಿಕೊಂಡರು ॥೨—೩॥

ಹೀಗೆ ಆ ರಾಮಲಕ್ಷ್ಮಣರು ಹೇಳಲಾಗಿ, ಆ ಸಮಸ್ತ ಮುನಿಗಳೂ ವಿಶ್ವಾಮಿತ್ರಮುನಿಯನ್ನು ಮುಂದಿಟ್ಟುಕೊಂಡು, ಶ್ರೀರಾಮನನ್ನು ಕುರಿತು ಹೀಗೆ ಹೇಳಿದರು ॥೪॥

ರಾಮ! ರಾಮ! ವಿದೇಹರಾಜನಗರಿಯಲ್ಲಿ ಮಹಾತ್ಮನಾದ ಜನಕರಾಜನು ಮಾಡುವ ದೊಡ್ಡ ಯಜ್ಞವನ್ನು ನಾವುಗಳು ನೋಡಲಪೇಕ್ಷಿಸುತ್ತಿರುವೆವು ॥೫॥

ತತ್ರ ಮಾಹೇಶ್ವರಶ್ಚಾಪಃ ಅಸ್ಮೇ ನ್ಯಸ್ತಃ ಪಿನಾಕಿನಾ ।
ದ್ರಕ್ಷ್ಯಸಿ ತ್ವಂ ಮಹಾಸತ್ವಂ ಪೂಜ್ಯಸೇ ಜನಕೇನ ಚ ॥೬॥
ನಾಸ್ಯ ದೇವಾನ ಗನ್ಧರ್ವಾಃ ನಾಸುರಾ ನ ಚ ರಾಕ್ಷಸಾಃ ।
ಕರ್ತುಮಾರೋಪಣಂ ಶಕ್ತಾಃ ನ ಕಥಂಚನ ಮಾನುಷಾಃ ॥೭॥
ಏವಮುಕ್ತ್ವಾ ಮುನಿವರಾಃ ಪ್ರಸ್ಥಾನಂ ಚಕ್ರಿರೇ ತದಾ ।
ರಾಮಶ್ಚಾಪಿ ಮಹಾಯಜ್ಞಂ ದ್ರಷ್ಟುಂ ಜನಕಭೂಪತೇಃ ॥೮॥
ಮುನಿಪತ್ನ್ಯಶ್ಚ ತತ್ಕನ್ಯಾಃ ಗಾಯನ್ಯೋ ರಾಘವಂ ತದಾ ।
ಅನುಯಾನ್ತ್ಯೋಕ್ಷವಾಸ್ತ್ಯಕ್ತುಂ ಕೃಛ್ರಾಜ್ಜಗ್ಮುಃ ಪುನರ್ಗೃಹಾನ್ ॥೯॥
ರಾಮಂ ಶಕಟಮಾರೋಪ್ಯ ವಿಶ್ವಾಮಿತ್ರಃ ಸಲಕ್ಷ್ಮಣಮ್ ।
ಲಾಲಯನ್ ಮಧುರೈರ್ವಾಕ್ಯೈಃ ಸರ್ಪಿಸಜ್ಯಸ್ತತೋ ಯಯೌ ॥೧೦॥
ತಂ ಪ್ರಯಾನ್ತಂ ಮುನಿವರಂ ಅನ್ವಯಾದನುಸಾರಿಣಾಮ್ ।
ಶಕಟೀಶತಮಾತ್ರಂ ತು ಪ್ರಯಾಣೇ ಬ್ರಹ್ಮವಾದಿನಾಮ್ ॥೧೧॥
ಸರ್ವಭೂತಸ್ಥಿತಂ ರಾಮಂ ದೃಷ್ಟ್ವಾ ಪ್ರತ್ಯಕ್ಷತೋ ಮುದಾ ।
ಪೂಜಯನ್ತೋ ಯಯುಃ ಸರ್ವೇ ರಾಮೇ ಸಂನ್ಯಸ್ತಮಾನಸಾಃ ॥೧೨॥

ಆ ಜನಕರಾಜನ ಪಟ್ಟಣದಲ್ಲಿ, ಶ್ರೀ ಪರಮೇಶ್ವರನಿಂದ ಇರಿಸಲ್ಪಟ್ಟ ಶೈವಧನುಸ್ಸು ಇರುವುದು. ಮಹಾಸತ್ವನಾದ ಆ ಧನುಸ್ಸನ್ನು ನೀನು ಅಲ್ಲಿ ನೋಡಬಹುದು; ಮತ್ತು, ಜನಕರಾಜನಿಂದ ಸಂಮಾನವನ್ನೂ ಪಡೆಯಬಹುದು ॥೬॥

ಆ ಧನುಸ್ಸು ಸಾಮಾನ್ಯನಾದುದೆಂದು ತಿಳಿಯುಬಾರದು. ಆ ಧನುಸ್ಸನ್ನು ಹೆದೆಯೇರಿಸುವುದಕ್ಕೆ, ದೇವತೆಗಳೂ ಶಕ್ತರಲ್ಲ; ಗಂಧರ್ವರೂ ಶಕ್ತರಲ್ಲ; ಅಸುರರೂ ಶಕ್ತರಲ್ಲ; ರಾಕ್ಷಸರೂ ಶಕ್ತರಲ್ಲ. ಮನುಷ್ಯರಂತು, ಹೇಗೂ ಶಕ್ತರಾಗುವುದೇ ಇಲ್ಲ ॥೭॥

ಹೀಗೆಂದು ಹೇಳಿ, ಆ ಮುನಿಶ್ರೇಷ್ಠರು ಜನಕರಾಜನ ಯಜ್ಞವನ್ನು ನೋಡುವುದಕ್ಕಾಗಿ ಪ್ರಯಾಣ ಮಾಡಿದರು. ಆಗ ಅವರೊಡನೆ ಶ್ರೀರಾಮನೂ ಪ್ರಯಾಣಮಾಡಿದನು ॥೮॥

ಆಗ, ಮುನಿಗಳ ಪತ್ನಿಯರೂ ಕನ್ಯೆಯರೂ ರಾಮನನ್ನು ಬಿಟ್ಟಿರಲಾರದೆ, ರಾಮ ರಾಮ ಎಂದು ಬಾಯಲ್ಲಿ ಗಾನಮಾಡುತ, ಸ್ವಲ್ಪದೂರ ಅನುಸರಿಸಿ ಬಂದವರಾದರು. ಬಳಿಕ, ಬಹುಕಷ್ಟದಿಂದ ಮನೆಗೆ ಹಿಂದಿರುಗಿ ಹೋದರು ॥೯॥

ಅನಂತರ, ವಿಶ್ವಾಮಿತ್ರಮುನಿಯು, ಶ್ರೀರಾಮನನ್ನು ಲಕ್ಷ್ಮಣನೊಡನೆ ಬಂಡಿಯಮೇಲೆ ಹತ್ತಿಸಿ, ಮಧುರವಾದ ವಚನಗಳಿಂದ ಲಾಲನೆ ಮಾಡುತ, ಮುನಿಸಂಘಸಹಿತನಾಗಿ ಹೊರಟನು ॥

ಆ ಪ್ರಯಾಣಕಾಲದಲ್ಲಿ, ಜನಕನಗರಕ್ಕೆ ಹೊರಟಿರುವ ವಿಶ್ವಾಮಿತ್ರಮುನಿಯನ್ನು ಅನುಸರಿಸಿಕೊಂಡು ಹೋಗುತಿರುವ ಬ್ರಹ್ಮವಾದಿಗಳಾದ ಮಹರ್ಷಿಗಳ ಒಂದುನೂರು ಬಂಡಿಗಳು ಹಿಂದುಗಡೆ ಹೊರಟುವು ॥೧೧॥

ಆಗ ಸಮಸ್ತ ಮುನಿಗಳೂ, ಸರ್ವಭೂತಗಳಲ್ಲಿಯೂ, ಅಂತರ್ಯಾಮಿಯಾಗಿರುವ ಶ್ರೀರಾಮನನ್ನು ಪ್ರತ್ಯಕ್ಷವಾಗಿ ಕಂಡು, ಸಂತೋಷಾತಿಶಯದಿಂದ ರಾಮನಲ್ಲಿಯೇ ಮನಸ್ಸಿಟ್ಟುಕೊಂಡು ಹೋಗುತಿದ್ದರು ॥೧೨॥

ಏವಂ ಕತಿಪಯಾಹಸ್ಸು ಗತೇಷು ಮುನಿಪುಙ್ಗವಾಃ ॥೧೩॥
ಶೋಣಂ ಸಮುತ್ತೀರ್ಯ ತತೋ ಗಙ್ಗಾಂ ತೀತ್ವಾ ಯಯುರ್ಮುದಾ ॥೧೪॥
ತತಃ ಪೃಷ್ಟೋ ರಾಘವಾಯ ಗಙ್ಗಾಗಾಧಾದಿಕಂ ವದನ್ ।
ಮುನಿರ್ಮಾರ್ಗವಶಾದ್ದೇವಿ ವಿಶಾಲಾಮಗಮತ್ ಪುರೀಮ್ ॥೧೫॥
ವಿಶಾಲಾಧಿಪತಿಃ ಶ್ರೀಮಾನ್ ಸುಮತಿರ್ಮುನಿಮಾಗತಮ್ ।
ಶ್ರುತ್ವಾ ನರವರಶ್ರೇಷ್ಠಃ ಪ್ರತ್ಯುದ್ಗಚ್ಛನ್ ಮಹಾಯಶಾಃ ॥೧೬॥
ಪೂಜಾಂ ಚ ಪರಮಾಂ ಕೃತ್ವಾ ಸೋಪಾಧ್ಯಾಯಃ ಸಬಾನ್ಧವಃ ।
ಪ್ರಾಞ್ಜಲಿಃ ಕುಶಲಂ ಪೃಷ್ಟ್ವಾ ವಿಶ್ವಾಮಿತ್ರಮಥಾಬ್ರವೀತ್ ॥೧೭॥
ಇಮೌ ಕುಮಾರೌ ಭದ್ರಂ ತೇ ದೇವತುಲ್ಯಪರಾಕ್ರಮೌ ।
ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ॥೧೮॥
ಪದ್ಮಪತ್ರವಿಶಾಲಾಕ್ಷೌ ಖಡ್ಗತೂಣೀಧನುರ್ಧರೌ ।
ಅಶ್ವಿನಾವಿವ ರೂಪೇಣ ಸಮುಪಸ್ಥಿತಯೌವನೌ ॥೧೯॥

ಹೀಗೆ ಕೆಲವು ದಿವಸಗಳು ಕಳೆಯಲಾಗಿ, ಆ ಸಮಸ್ತ ಮುನಿಗಳೂ ಶೋಣವೆಂಬ ನದವನ್ನು ದಾಟದವರಾಗಿ, ಅಮೇಲೆ ಗಂಗಾನದಿಯನ್ನೂ ದಾಟಿ, ಸಂತೋಷದಿಂದ ಮುಂದಕ್ಕೆ ಹೋದರು॥

ಎಲೌ ಪಾರ್ವತಿ! ಬಳಿಕ, ಶ್ರೀವಿಶ್ವಾಮಿತ್ರಮುನಿಯು, ರಾಮನಿಂ ಪ್ರಾರ್ಥಿಸಲ್ಪಟ್ಟು ಗಂಗಾವತರಣಾದಿಕಥೆಗಳನ್ನು ಹೇಳುತ, ಮಾರ್ಗವಶದಿಂದ ವಿಶಾಲೆಯೆಂಬ ಪಟ್ಟಣಕ್ಕೆ ಹೋದನು।

ಆಗ, ವಿಶಾಲಾನಗರಕ್ಕೆ ಅಧಿಪತಿಯಾದ, ಶ್ರೀಮಂತನಾಗಿಯೂ ಮಹಾತ್ಮನಾಗಿಯೂ ಕೀರ್ತಿವಂತನಾಗಿಯೂ ಇರುವ ಸುಮತಿಯೆಂಬ ರಾಜನು, ವಿಶ್ವಾಮಿತ್ರಮುನಿ ಬಂದುದನ್ನು ಕೇಳಿ, ತನ್ನ ಪುರೋಹಿತರೊಡನೆಯೂ ಬಂಧುಗಳೊಡನೆಯೂ ಅವನನ್ನು ಎದುರುಗೊಂಡು ಬಂದು, ಅವನಿಗೆ ಅತ್ಯುತ್ತಮವಾದ ಪೂಜೆಯನ್ನು ಮಾಡಿ, ಅವನನ್ನು ಕುರಿತು ಕುಶಲಪ್ರಶ್ನೆಯನ್ನೂ ಮಾಡಿ, ಬಳಿಕ, ಕೈಮುಗಿದುಕೊಂಡು ಹೀಗೆ ಹೇಳಿದನು ॥೧೫—೧೬॥

ಎಲೈ ವಿಶ್ವಾಮಿತ್ರಮುನಿಗಳೆ! ನಿಮಗೆ ಕುಶಲವಾಗಲಿ. ತಮ್ಮೊಡನೆ ಬಂದಿರುವ ಈ ಇಬ್ಬರು ಬಾಲಕರು ಯಾರು? ಇವರನ್ನು ನೋಡಿದರೆ, ಇವರು ಪರಾಕ್ರಮದಲ್ಲಿ ದೇವತೆಗಳಿಗೆ ಸಮಾನರಾಗಿರುವರೆಂದು ತೋರುವುದು ; ಇವರ ನಡಿಗೆಯು, ಗಾಂಭೀರ್ಯದಲ್ಲಿ ಆನೆಯನ್ನೂ, ಇತರರನ್ನು ತಿರಸ್ಕರಿಸಬೇಕಾದಾಗ ಸಿಂಹವನ್ನೂ, ಭಯಂಕರತ್ವದಲ್ಲಿ ಹುಲಿಯನ್ನೂ, ಗರ್ವದಲ್ಲಿ ಗೂಳಿಯನ್ನೂ ಅನುಸರಿಸುತ್ತಿರುವುದು ॥೧೭॥

ಇವರ ನೇತ್ರಗಳು ಪದ್ಮಪತ್ರದಂತೆ ಅತಿವಿಶಾಲವಾಗಿರುವುವು. ಇವರು ಧರಿಸಿರುವ ಈ ಖಡ್ಗ ತೂಣೀರಧನುಸ್ಸುಗಳು ಅತ್ಯುತ್ತಮಗಳಾಗಿರುವುವು. ಸನ್ನಿಹಿತಯೌವನರಾಗಿರುವ ಈ ಬಾಲಕರು, ತಮ್ಮ ಸೌಂದರ್ಯದಿಂದ ಅಶ್ವಿನೀದೇವತೆಗಳಂತೆ ಪ್ರಕಾಶಿಸುತ್ತಿರುವರು ॥೧೮॥

ಇವರನ್ನು ನೋಡಿದರೆ, ಅಕಸ್ಮಿಕವಾಗಿ ದೇವಲೋಕದಿಂದ ಭೂಮಿಗೆ ಬಂದಿರುವ ದೇವತೆಗಳೋ ಎಂಬಂತೆ ಬುದ್ಧಿಯುಂಟಾಗುವುದು. ಹೇ ಮುನೇ! ಇಂತಹ ಈ ಲೋಕೋತ್ತರಬಾಲಕರು, ಕಾಲುನಡಿಗೆಯಲ್ಲಿ ಇಲ್ಲಿಗೆ ಹೇಗೆ ಬಂದರು? ಇವರು ಯಾವ ಕಾರ್ಯಕ್ಕಾಗಿ ಬಂದಿರುವರು? ಇವರು ಯಾರ ಮಕ್ಕಳು? ॥೧೯॥

ಯದೃಚ್ಛಯೈವ ಗಾಂ ಪ್ರಾಪ್ತೌ ದೇವಲೋಕಾದಿವಾವುರೌ ।
ಕಥಂ ಪದ್ಭ್ಯಾಮಿಹ ಪ್ರಾಪ್ತೌ ಕಿಮರ್ಥಂ ಕಸ್ಯ ವಾ ಮುನೇ ॥೨೦॥

ಭೂಷಯನ್ತಾವಿಮಂ ದೇಶಂ ಚನ್ದ್ರಸೂರ್ಯಾವಿವಾಮ್ಬರಮ್ ।
ಪರಸ್ಪರಸ್ಯ ಸದೃಶೌ ಪ್ರಮಾಣೇಙ್ಗಿತಚೇಷ್ಟಿತೈಃ ॥೨೧॥

ಕಿಮರ್ಥಂ ಚ ಮುನಿಶ್ರೇಷ್ಠ ಸಮ್ಪ್ರಾಪ್ತೌ ದುರ್ಗಮೇ ಪಥಿ ।
ವರಾಯುಧಧರೌ ವೀರೌ ಕೌತುಮಿಚ್ಛಾಮಿ ತತ್ತ್ವತಃ ॥೨೨॥

ಏವಮುಕ್ತಃ ಸುಮತಿನಾ ಕೌಶಿಕೋ ಮುನಿಪುಙ್ಗವಃ ।
ಶ್ರೀರಾಮಪ್ರಶ್ನತೋ ಹೃಷ್ಟೋ ರಾಘವೌ ವಕ್ತುಮಾರಭತ್ ॥೨೩॥

ಬ್ರಹ್ಮಾದಿಭಿಃ ಪುರಾ ದೇವೈಃ ಪ್ರಾರ್ಥಿತೋ ವಿಷ್ಣುರವ್ಯಯಃ ।
ದುಷ್ಟಾನಾಂ ನಿಗ್ರಹಾರ್ಥಾಯ ಭಕ್ತಾನಾಂ ರಕ್ಷಣಾಯ ಚ ॥೨೪॥

ಜಾತೋ ದಶರಥೇನೋರ್ವ್ಯಾಂ ಕೌಸಲ್ಯಾಯಾಂ ಪರಃ ಪುಮಾನ್ ।
ಸಶೇಷಃ ಶಙ್ಖಚಕ್ರಾಭ್ಯಾಂ ದೇವೈರ್ವಾನರರೂಪಿಭಿಃ ॥೨೫॥

ಚಂದ್ರಸೂರ್ಯರು ಆಂತರಿಕ್ಷವನ್ನು ಅಲಂಕರಿಸುವಂತೆ, ಇವರಿಬ್ಬರೂ ಈ ನಮ್ಮ ದೇಶವನ್ನೇ ಅಲಂಕರಿಸುತ್ತಿರುವರಲ್ಲ! ಆಕಾರ ಇಂಗಿತ ವ್ಯಾಪಾರಗಳಲ್ಲಿ, ಇವರಿಬ್ಬರೂ ಪರಸ್ಪರಸಮಾನರಾಗಿರುವರು ॥೨೦॥

ಹೇಮುನಿಶ್ರೇಷ್ಠ! ಇಂತಹ ಮಹಾವೀರರಾಗಿಯೂ ಉತ್ತಮವಾದ ಆಯುಧಗಳನ್ನು ಧರಿಸಿಯೂ ಇರುವ ಈ ಬಾಲಕರು, ಜನರ ಸಂಚಾರಕ್ಕೆ ಕಷ್ಟವಾಗಿರುವ ಈ ಮಾರ್ಗದಲ್ಲಿ, ಏತಕ್ಕೆ ಒಂದಿರುವರು? ಇದನ್ನು ತಮ್ಮ ಮುಖದಿಂದ ಯಥಾವತ್ತಾಗಿ ಕೇಳಲಪೇಕ್ಷಿಸುತ್ತಿರುವೆನು. ಎಂದು ಆ ಸುಮತಿಯು ವಿಶ್ವಾಮಿತ್ರಮುನಿಯನ್ನು ಪ್ರಾರ್ಥಿಸಿದನು ॥೨೧॥

ಎಲೌ ವಾರ್ಷ್ಣೇಯ! ಹೀಗೆ ಸುಮತಿಯಿಂದ ಪ್ರಾರ್ಥಿಸಲ್ಪಟ್ಟ ವಿಶ್ವಾಮಿತ್ರ ಮಹರ್ಷಿಯು, ಶ್ರೀರಾಮನ ವಿಷಯವನ್ನು ಕೇಳಿದುದರಿಂದ ಕೇವಲ ಹರ್ಷಯುಕ್ತನಾಗಿ, ಆ ರಾಮಲಕ್ಷ್ಮಣರ ವಿಷಯವನ್ನು ಹೇಳಲಾರಂಭಿಸಿದನು ॥೨೨॥

ಅಯ್ಯಾ! ಸುಮತಿ! ಪೂರ್ವದಲ್ಲಿ, ಬ್ರಹ್ಮಾದಿ ದೇವತೆಗಳು, ದುಷ್ಟನಿಗ್ರಹಕ್ಕಾಗಿಯೂ, ಭಕ್ತರರಕ್ಷಣೆಗಾಗಿಯೂ, ಸನಾತನಮೂರ್ತಿಯಾದ ಶ್ರೀಮನ್ಮಹಾವಿಷ್ಣುವನ್ನು ಪ್ರಾರ್ಥಿಸಿದರು॥

ಬಳಿಕ, ಪರಮಪುರುಷನಾದ ಆ ಮಹಾವಿಷ್ಣುವು, ಆದಿಶೇಷನೊಡನೆಯೂ, ಶಂಖಚಕ್ರಗಳೊಡನೆಯೂ, ಕಪಿರೂಪಧಾರಿಗಳಾದ ದೇವತೆಗಳೊಡನೆಯೂ, ಈ ಭೂಲೋಕದಲ್ಲಿ ದಶರಥನಿಂದ ಕೌಸಲ್ಯೆಯ ಹೊಟ್ಟೆಯೊಳಗೆ ಜನಿಸಿದನು ॥೨೪॥

ಅವನೇ ಇವನು; ಇವನ ಹೆಸರು ರಾಮನೆಂದು; ಇವನು, ವಿಶ್ವಾತ್ಮನಾಗಿಯೂ—ಸರ್ವಕಾರಣಗಳಿಗೂ ಮೂಲಕಾರಣನಾಗಿಯೂ ಇರುವ ಪರಮಾತ್ಮನು; ನನ್ನ ಯಾಗವನ್ನು ಸಂರಕ್ಷಿಸುವುದಕ್ಕೋಸ್ಕರ, ನನ್ನಿಂದ ಪ್ರಾರ್ಥಿಸಲ್ಪಟ್ಟನಾಗಿ, ಇವನು ಇಲ್ಲಿಗೆ ಬಂದಿರುವನು ॥೨೫॥

ಸವಿಪ ರಾವೋ ವಿಶ್ವಾಮಿತ್ರೋ ಸರ್ವತಾರಣಕಾರಣಃ ।
ಮದ್ಯಾಗರಕ್ಷಣಾರ್ಥಾಯ ಪ್ರಾರ್ಥಿತಸ್ಸನ್ಮಹಾಗತಃ ॥೨೬॥
ಯಾಗವಿಘ್ನಕರಾ ದುಷ್ಟಾ ವಿನಿಹತ್ಯ ಸಮನ್ತತಃ ।
ದಯಾಂ ಮಯಿ ವಿಧಾಯಾಸ್ಮೈ ಮುನಿಸಙ್ಘಮಪಾಲಯತ್ ॥೨೭॥
ಇದಾನೀಂ ಮಿಥಿಲಾಂ ಗನ್ತುಂ ಮಯಾ ಸಾರ್ಧಮಿಹಾಗತಃ ।
ಪ್ರಸಙ್ಗಾದಪಿ ಯನ್ನಾಮ ಸಕೃಚ್ಛ್ರುತ್ವಾಘನಾಶನಮ್ ॥೨೮॥
ಯನ್ನಾಮಕೀರ್ತನಾತ್ ಸದ್ಯೋ ವಿನಾಯಾಸೇನ ಮಾನವಃ ।
ಮಹಾಪಾತಕಜಾಲೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥೨೯॥

ಸುಮತಿರುವಾಚ

ಭಗವನ್ ಸರ್ವತತ್ತ್ವಜ್ಞ ದಯಾ ಮಯ್ಯಸ್ತಿ ತೇ ಯದಿ ।
ಕಿಂಚಿತ್ ಪೃಚ್ಛಾಮಿ ತದ್ಬ್ರೂಹಿ ಶ್ರೋತುಂ ಮೇ ಯೋಗ್ಯತಾಸ್ತಿ ಚೇತ್ ॥೩೦॥
ಸರ್ವಪಾಪಹರಂ ರಾಮನಾಮೇತ್ಯುಕ್ತಂ ತ್ವಯಾಧುನಾ ।
ತತ್ತತ್ತ್ವಮಖಿಲಂ ಬ್ರೂಹಿ ಯೇನ ಮುಚ್ಯೇತ ಪಾತಕೀ ॥೩೧॥

ಇವನು ಈಗ ನನ್ನಲ್ಲಿ ಕರುಣೆಯಿಟ್ಟು, ಯಜ್ಞಕ್ಕೆ ವಿಘ್ನವಾಡುತಿದ್ದ ದುಷ್ಟರನ್ನು ಎಲ್ಲಾಕಡೆಯಲ್ಲಿಯೂ ಕೊಂದು, ಋಷಿಸಮೂಹವನ್ನು ಸಂರಕ್ಷಿಸಿದನು ॥೨೬॥

ಈಗ ಮಿಥಿಲಾಪಟ್ಟಣಕ್ಕೆ ಹೋಗುವುದಕ್ಕಾಗಿ, ನನ್ನೊಡನೆ ಇಲ್ಲಿಗೆ ಬಂದಿರುವನು. ಈ ಶ್ರೀರಾಮನ ದಿವ್ಯನಾಮವು, ಬಂದಾವೃತ್ತಿ ಕೇಳಲ್ಪಟ್ಟುದಾದರೂ ಸರ್ವಪಾಪಗಳನ್ನೂ ನಾಶಗೊಳಿಸುವುದು ॥೨೭॥

ಈ ರಾಮನ ನಾಮವನ್ನು ಕೀರ್ತಿಸಿದಮಾತ್ರದಿಂದಲೇ, ಪುರುಷನು ಅನಾಯಾಸವಾಗಿ ಅಕ್ಷಣವೇ ಸಮಸ್ತ ಪಾಪಗಳಿಂದಲೂ ಮುಕ್ತನಾಗುವನು. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿಲ್ಲ ॥೨೮॥

ಸುಮತಿಯೆಂಬ ರಾಜನು ಕೇಳುವನು :—

ಸಕಲ ತತ್ವಗಳನ್ನೂ ಬಲ್ಲವರಾಗಿರುವ ಪೂಜ್ಯರಾದ ವಿಶ್ವಾಮಿತ್ರರೇ! ನಾನು ಈಗ ತಮ್ಮಲ್ಲಿ ಒಂದು ವಿಷಯವನ್ನು ಕೇಳುವೆನು. ನನ್ನಲ್ಲಿ ತಮಗೆ ದಯೆಯೂ, ಅದನ್ನು ಕೇಳುವುದಕ್ಕೆ ನನಗೆ ಯೋಗ್ಯತೆಯೂ ಇದ್ದಪಕ್ಷದಲ್ಲಿ, ಅದನ್ನು ಅಪ್ಪಣೆ ಕೊಡಿಸಬೇಕು ॥೨೯॥

ನಾನು ಕೇಳುವುದೇನೆಂದರೆ,—ತಾವು ಈಗ 'ರಾಮನಾಮವು ಸಮಸ್ತ ಪಾಪವನ್ನೂ ಪರಿಹರಿಸುವುದು' ಎಂದು ಹೇಳಿದಿರಲ್ಲವೆ! ಪಾಪಿಷ್ಠರನ್ನೆಲ್ಲ ಪಾಪದಿಂದ ಬಿಡಿಸತಕ್ಕುದಾಗಿರುವ ಆ ರಾಮತತ್ವವನ್ನೆಲ್ಲ ವಿಸ್ತರಿಸಿ ನನಗೋಸ್ಕರ ಹೇಳುವರಾಗಿರಿ ॥೩೦॥

ಎಲೈ ಬ್ರಾಹ್ಮಣೋತ್ತಮರೇ! ನೂರಾರು ದುಷ್ಕಾರ್ಯಗಳನ್ನು ಮಾಡಿರುವ ಮಹಾಪಾಪಿಗಳಿಗೂ ಕೂಡ, ಇವನ ಪ್ರಾಯಶ್ಚಿತ್ತವೂ ಇಲ್ಲದೆಯೇ ಆ ಪಾಪಪರಿಹಾರವು ಹೇಗೆ ಆಗುವುದು? ॥೩೧॥

ಅಕೃತ್ಯಶತಕರ್ತ್ರಾಣಾಂ ಮಹಾಪಾತಕಿನಾಮಪಿ ।
ಪ್ರಾಯಶ್ಚಿತ್ತಂ ವಿನಾ ಬ್ರಹ್ಮ ಕಥಂ ತನ್ನಿಷ್ಕೃತಿರ್ಭವೇತ್ ॥೩೦॥

ವಿಶ್ವಾಮಿತ್ರ ಉವಾಚ

ಅಹೋ ಕೃತಾರ್ಥತಾ ರಾಜ್ಞ ತವ ನಕ್ತುಂ ನ ಶಕ್ಯತೇ ।
ಯಸ್ಮಾತ್ ತೇ ರಾಮಚನ್ದ್ರಸ್ಯ ಸಾನ್ನಿಧ್ಯಾದ್ಭಕ್ತಿರೀದೃಶೀ ॥೩೩॥
ಕಾಶ್ಯಾಮೃಷಿಸಭಾಮಧ್ಯೇ ಪುರಾ ನಿರ್ಣೀತಮುತ್ತಮಮ್ ।
ಯಚ್ಛ್ರುತಂ ತದ್ವದಿಷ್ಯಾಮಿ ಗುಹ್ಯಾದ್ಗುಹ್ಯತಮಂ ನೃಪ ॥೩೪॥
ಸತ್ಯಂ ವಚ್ಮಿ ಹಿತಂ ವಚ್ಮಿ ಸಾರಂ ವಚ್ಮಿ ಪುನಃಪುನಃ ।
ಸರ್ವೇಷಾಮಪಿ ಪಾಪಾನಾಂ ಅನಾಯಾಸೇನ ನಿಷ್ಕೃತಿಮ್ ॥೩೫॥
ನ ಮನ್ತ್ರೋ ನಾರ್ಥಹಾನಿಶ್ಚ ನ ಶರೀರಸ್ಯ ಶೋಷಣಮ್ ।
ನ ಲೋಪಃ ಪ್ರತ್ಯವಾಯೋ ವಾ ನ ಚಾಙ್ಗಪ್ರತಿಪೀಡನಮ್ ॥೩೬॥
ಶ್ರೀಶಬ್ದಪೂರ್ವಂ ಜಯಶಬ್ದಮಧ್ಯಂ ಜಯೂದ್ವಯಾದುತ್ತರತಸ್ತದೇವ ।
ತ್ರಿಸ್ಸಪ್ತಕೃತ್ವೋ ರಘುನಾಥನಾಮ ಜಪ್ತಂ ವಿಹನ್ಯಾದಪಿ ವಿಪ್ರಹತ್ಯಾಃ ॥

ವಿಶ್ವಾಮಿತ್ರರು ಹೇಳುವರು :—

ಅಯ್ಯಾ! ರಾಜನೆ! ಶ್ರೀರಾಮಚಂದ್ರನ ಸಾನ್ನಿಧ್ಯಮಹಿಮೆಯಿಂದ ನಿನಗೆ ಇಂತಹ ಭಕ್ತಿ ಹುಟ್ಟಿತಲ್ಲ. ನಿನ್ನ ಕೃತಕೃತ್ಯತ್ವವನ್ನು ಹೇಳುವುದೇ ಅಸಾಧ್ಯವಾಗಿರುವುದು ॥೩೨॥

ಅಯ್ಯಾ ರಾಜನೆ! ಪೂರ್ವದಲ್ಲಿ ಕಾಶಿಯೊಳಗೆ ಋಷಿಸಭಾಮಧ್ಯದಲ್ಲಿ ನಿರ್ಣಯಿಸಲ್ಪಟ್ಟ ಯಾವ ಉತ್ತಮ ವಿಷಯವು ನನ್ನಿಂದ ಕೇಳಲ್ಪಟ್ಟಿತೋ, ಅಂತಹ ಪರಮಗೋಪ್ಯವಾದ ವಿಷಯವನ್ನು ಈಗ ನಿನಗೆ ಹೇಳುವೆನು ॥೩೩॥

ನಾನು ಹೇಳತಕ್ಕ ವಿಷಯವು ಸಾವಾನ್ಯವೆಂದು ತಿಳಿಯುಬೇಡ. ಸತ್ಯವಾದುದನ್ನೇ ಹೇಳುವೆನು; ಹಿತವಾದುದನ್ನೇ ಹೇಳುವೆನು; ಮತ್ತೆ ಮತ್ತೆ ಎಷ್ಟು ವಿಚಾರಮಾಡಿದರೂ ಸಾರವಾಗಿ ರತಕ್ಕುದನ್ನೇ ಹೇಳುವೆನು ನಾನು ಹೇಳತಕ್ಕುದು, ಸರ್ವಪಾಪಗಳಿಗೂ ಅನಾಯಾಸವಾಗಿ ಪ್ರಾಯಶ್ಚಿತ್ತರೂಪವಾದುದು ॥೩೪॥

ನಾನು ಹೇಳುವ ಪ್ರಾಯಶ್ಚಿತ್ತದಲ್ಲಿ, ಮಂತ್ರಾಭ್ಯಾಸಾದಿಗಳು ಬೇಕಾಗಿಲ್ಲ; ಅರ್ಥಹಾನಿಯೂ ಇಲ್ಲ; ಶರೀರಶೋಷಣೆಯೂ ಇಲ್ಲ; ಮಧ್ಯದಲ್ಲಿ ಲೋಪವೆಂಬುದೂ ಇಲ್ಲ; ಇದರಿಂದುಂಟಾಗುವ ಪ್ರತ್ಯವಾಯವೂ ಇಲ್ಲ; ಕಾಯಕ್ಲೇಶವೂ ಇಲ್ಲ ॥೩೫॥

ಅದಾವುದೆಂದರೆ,—ಶ್ರೀ ಶಬ್ದವು ಮೊದಲಲ್ಲಿರತಕ್ಕುದಾಗಿಯೂ, ಮಧ್ಯದಲ್ಲಿ ಜಯಶಬ್ದ ವುಳ್ಳುದಾಗಿಯೂ, ಅಮೇಲೆ ಜಯಶಬ್ದದ್ವಯದ ಆಚೆ ಉಚ್ಚರಿಸಲ್ಪಡತಕ್ಕುದಾಗಿಯೂ ಇರುವ (ಶ್ರೀರಾಮ ಜಯರಾಮ ಜಯಜಯರಾಮ) ಶ್ರೀರಾಮನಾಮವನ್ನು, ಇಪ್ಪತ್ತೊಂದುಸಲ ಜಪಿಸಿದ ಮನುಷ್ಯನು, ಬ್ರಹ್ಮಹತ್ಯೆಗಳನ್ನೂ ಕೂಡ ಕಳೆದುಕೊಳ್ಳುವನು ॥೩೬॥

'ರಾಮ' ಎಂಬ ಎರಡಕ್ಷರವನ್ನು ಸರ್ವದಾ ಆದರದಿಂದ ಜಪಿಸುವ ಜಂತುವು ಮುಕ್ತಿಭಾಗಿಯಾಗುವನು. ಕಲಿಯುಗದಲ್ಲಿ ಮನುಷ್ಯರು ಕಲ್ಮಷಚಿತ್ತರಾಗಿರುವುದರಿಂದ, ಅವರಿಗೆ ಮತ್ತಾವ ಧರ್ಮದಲ್ಲಿಯೂ ಅಧಿಕಾರವಿಲ್ಲ ॥೩೭॥

ರಾಮೇತಿ ವರ್ಣದ್ವಯಮಾದರೇಣ ಸದಾ ಸ್ಮರ ಮುಕ್ತಿಮುಪೈತಿ ಜನ್ತುಃ।
ಕಲೌ ಯುಗೇ ಕಲ್ಮಷಮಾಸಸಾನಾಂ ಅನ್ಯತ್ರ ಧರ್ಮೇ ಬಲು ನಾಧಿಕಾರಃ॥

ನಾಮ್ನೋಸ್ತಿ ಯಾವತೀ ಶಕ್ತಿಃ ಪಾಪನಿರ್ಹರಣೇ ಹರೇಃ।
ತಾವತ್ ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ಜನಃ ॥೫೯॥

ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಙ್ಗನಾಗಮಃ।
ಸದ್ಯೋ ವಿಲಯಮಾಯಾನ್ತಿ ರಾಮರಾಮೇತಿ ಕೀರ್ತನಾತ್ ॥೬೦॥

ಚಣ್ಡಾಲಬನ್ಧಕೀವೇಶ್ಯಾಯವನಾನ್ನಾನಿ ಭುಞ್ಜತಾಮ್।
ಪಾಪಿನಾಂ ಯೋಗಿನಾಂ ವಾಪಿ ಶರಣಂ ಸ್ಮರಣಂ ಹರೇಃ ॥೬೧॥

ಬ್ರಹ್ಮಹತ್ಯಾಸಹಸ್ರಾಣಿ ಸ್ವರ್ಣಸ್ತೇಯಶತಾನಿ ಚ।
ಪಾನಂ ಗುರ್ವಙ್ಗನಾಸಙ್ಗೋ ನಶ್ಯನ್ತಿ ಹರಿಕೀರ್ತನಾತ್ ॥೬೨॥

ಭ್ರಷ್ಟಸ್ಯ ಕಿಂಕರಸ್ಯಾಪಿ ದುರನ್ನಾನಿ ಚ ಭುಞ್ಜತಾಮ್।
ರಾಮರಾಮೇತಿ ರಾಮಸ್ಯ ಸ್ಮರಣಂ ಶರಣಂ ಪರಮ್ ॥೬೩॥

ಮ್ಲೇಚ್ಛವಾಟೀಗತಸ್ಯಾಪಿ ಮ್ಲೇಚ್ಛಸೇವಾನ್ನಭೋಜಿನಃ।
ರಾಮನಾಮ ಪರಂ ಜ್ಞೇಯಂ ಪ್ರಾಯಶ್ಚಿತ್ತಂ ದುರಾತ್ಮನಃ ॥೬೪॥

ಜಾತಿಭ್ರಷ್ಟಸ್ಯ ಪಾಪಸ್ಯ ಪಶ್ಚಾತ್ತಾಪಮುಪೇಯುಷಃ।
ರಾಮನಾವಾಧಿಕಂ ಪ್ರಾಹುಃ ಪ್ರಾಯಶ್ಚಿತ್ತಂ ಬುಧೋತ್ತಮಾಃ ॥೬೫॥

ರಾಮನಾಮಕ್ಕೆ ಎಷ್ಟಮಟ್ಟಿಗೆ ಪಾಪಪರಿಹಾರದಲ್ಲಿ ಶಕ್ತಿಯಿರುವುದೋ, ಅಷ್ಟು ಪಾಪಗಳನ್ನು ಪಾಪಿಯಾದವನು ಮಾಡಲಾರನು ॥೫೯॥

ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣಸ್ತೇಯ, ಗುರುದಾರಾಗಮನ—ಇವುಗಳೂ ಕೂಡ ರಾಮ ರಾಮ ಎಂದು ಜಪಿಸಿದಮಾತ್ರದಲ್ಲಿಯೇ ಲಯಹೊಂದುವವು ॥೬೨॥

ಚಂಡಾಲ ವ್ಯಭಿಚಾರಿಣಿ ವೇಶ್ಯೆ—ಇವರ ಅನ್ನವನ್ನು ತಿನ್ನುವ ಮಹಾಪಾಪಿಗಳಿಗೂ, ಮಹಾಯೋಗಿಗಳಿಗೂ ಕೂಡ, ಶ್ರೀ ಹರಿಸ್ಮರಣೆಯೇ ಮುಖ್ಯಗತಿಯು ॥೬೩॥

ಸಾವಿರಾರು ಬ್ರಹ್ಮಹತ್ಯೆಗಳೂ, ನೂರಾರು ಸ್ವರ್ಣಸ್ತೇಯಗಳೂ, ಸುರಾಪಾನವೂ, ಗುರುಪತ್ನೀಸಮಾಗಮವೂ ಕೂಡ, ಶ್ರೀಹರಿಯ ಕೀರ್ತನದಿಂದ ನಾಶಹೊಂದುವುವು ॥೬೨॥

ಜಾತಿಭ್ರಷ್ಟನಾದವನಿಗೂ, ನೀಚಸೇವೆ ಮಾಡಶಕ್ಯವನಿಗೂ, ದುಷ್ಟಾನ್ನ ಭೋಜನ ಮಾಡಶಕ್ಯವನಿಗೂ, ರಾಮ ರಾಮ ಎಂದು ಶ್ರೀರಾಮನ ಸ್ಮರಣೆಯೇ ಮುಖ್ಯವಾದ ಗತಿಯು ॥೬೪॥

ಮ್ಲೇಚ್ಛಸಹವಾಸದಲ್ಲಿದ್ದುಗೊಂಡು-ಮ್ಲೇಚ್ಛಸೇವೆ ಮಾಡುತ್ತ ಮ್ಲೇಚ್ಛಾನ್ನವನ್ನು ತಿಂದು ಬದುಕುತಿರುವ-ಮಹಾದುರಾತ್ಮನಿಗೂ ಕೂಡ, ಶ್ರೀರಾಮನಾಮಸ್ಮೃತಿಯೇ ಉತ್ತಮವಾದ ಪ್ರಾಯಶ್ಚಿತ್ತವೆಂದು ತಿಳಿಯಲ್ಪಡಬೇಕು ॥೬೫॥

ಜಾತಿಭ್ರಷ್ಟನಾಗಿ ಪಶ್ಚಾತ್ತಾಪಹೊಂದಿದ ವಾಪಿಷ್ಠನಿಗೆ, ಶ್ರೀರಾಮನಾಮವು ಸ್ಮರಣೆಯೇ ದೊಡ್ಡ ಪ್ರಾಯಶ್ಚಿತ್ತವೆಂದು ಮಹಾಪ್ರಾಜ್ಞರಾದವರೆಲ್ಲರೂ ಹೇಳುತ್ತಿರುವರು ॥೬೬॥

ಸ್ವಕರ್ಮಾನುಷ್ಠಾನಹೀನನಾದವನಿಗೂ, ಸತ್ಕರ್ಮರಹಿತನಾದವನಿಗೂ, ಪಿಶುನ(ಚಾಡಿಕೋರ)ನಾದವನಿಗೂ, ಜಾರನಾದವನಿಗೂ ಕೂಡ, ಶ್ರೀರಾಮನಾಮಸ್ಮೃತಿಯೇ ಶ್ರೇಷ್ಠವಾದ ಗತಿಯು॥

ಅನುಷ್ಠಾನವಿಹೀನಸ್ಯ ಸತ್ಕರ್ಮರಹಿತಸ್ಯ ಚ ।
ಪಿಶುನಸ್ಯಾಪಿ ಜಾರಸ್ಯ ರಾಮನಾಮ ಪರಾ ಗತಿಃ ॥೪೬॥

ಪ್ರಮಾದಾತ್ ಕುರ್ವತಾಂ ಕರ್ಮ ಪ್ರಚ್ಯವತ್ಯಧ್ವರೇ ಯದಿ ।
ಸ್ಮರಣಾದೇವ ತದ್ವಿಷ್ಣೋಃ ಸಮ್ಪೂರ್ಣಂ ಸ್ಯಾದಿತಿ ಶ್ರುತಿಃ ॥೪೭॥

ಯೋಗಿನಾಂ ಕರ್ಮಿಣಾಂ ಚೈವ ಯತೀನಾಂ ಯೋಗಶಾಲಿನಾಮ್ ।
ಏಕಾನ್ತಿನಾಂ ಶುಕಾದೀನಾಂ ಮುನೀನಾಮೂರ್ಧ್ವರೇತಸಾಮ್ ॥೪೮॥

ಧರ್ಮಾತ್ಮನಾಂ ಚ ವಿಪ್ರಾಣಾಂ ನಿತ್ಯಮೇಕಾನ್ತಭಾಜಿನಾಮ್ ।
ಜಾಪಕಾನಾಂ ಚ ಸರ್ವೇಷಾಂ ಸರ್ವಧರ್ಮಾಂಶ್ಚ ಕುರ್ವತಾಮ್ ॥೪೯॥

ಮಹಾಪಾತಕಯುಕ್ತಾನಾಂ ಯುಕ್ತಾನಾಮುಪಪಾತಕೈಃ ।
ರಹಸ್ಯಕೃತಪಾಪಾನಾಂ ಪ್ರಕಾಶಕೃತಪಾಪ್ಮನಾಮ್ ॥೫೦॥

ಅಚಾರೇಣ ವಿಹೀನಾನಾಂ ಅನಾಚಾರವತಾಮಪಿ।
ದುರನ್ನಭೋಜಿನಾಂ ಚೈವ ದುಷ್ಪ್ರತಿಗ್ರಹಜೀವಿನಾಮ್ ॥೫೧॥

ವ್ರಾತ್ಯಪ್ರಾಯದ್ವಿಜಾನಾಂ ಚ ವ್ರಾತ್ಯಾನಾಂ ಕರ್ಮವರ್ಜಿನಾಮ್ ।
ರಾಮನಾಮಜಪಾತ್ಶುದ್ಧಿಃ ಭವತ್ಯೇವೇತಿ ನಿಶ್ಚಿತಮ್ ॥೫೨॥

ದೊಡ್ಡ ದೊಡ್ಡ ಕ್ರತುಗಳಲ್ಲಿಯೂ ಕೂಡ, ಕರ್ತವ್ಯಾಡತಕ್ಕವರಿಗೆ ಪ್ರಮಾದವಶಾತ್ ಲೋಪಸಂಭವಿಸುವುದು. ಅದು, ಶ್ರೀ ಮಹಾವಿಷ್ಣುವಿನ ಸ್ಮರಣೆಯಿಂದಲೇ ಸಂಪೂರ್ಣವಾಗುವುದೆಂದು ವೇದವು ಸಾರುತ್ತಿರುವುದು ॥೪೬॥

ಯೋಗಿಗಳಿಗೂ, ಕರ್ಮಿಗಳಿಗೂ, ಯತಿಗಳಿಗೂ, ಸನಾಧಿನಿಷ್ಠರಿಗೂ, ಶುಕಸೇ ಮೊದಲಾದ ಪರಮೈಕಾಂತಿಗಳಿಗೂ, ಊರ್ಧ್ವರೇತಸ್ಕ(ಜಿತೇಂದ್ರಿಯ)ರಾದ ಮುನಿಗಳಿಗೂ, ನಿತ್ಯವೂ ಏಕಾಂತತತ್ಪರರಾಗಿರುವ ಧರ್ಮಾತ್ಮರಾದ ಬ್ರಾಹ್ಮಣರಿಗೂ, ಸಮಸ್ತರಾದ ಮಂತ್ರಜಪತತ್ಪರರಿಗೂ, ಸರ್ವ ಧರ್ಮಾಚರಣೆಗಳನ್ನು ಮಾಡತಕ್ಕವರಿಗೂ, ಮಹಾಪಾತಕಯುಕ್ತರಾದವರಿಗೂ, ಉಪಪಾತಕಯುಕ್ತರಾದವರಿಗೂ, ರಹಸ್ಯವಾಗಿ ಪಾಪಮಾಡಿದವರಿಗೂ, ಪ್ರಕಾಶವಾಗಿ ಪಾಪಮಾಡಿದವರಿಗೂ, ಸದಾಚಾರಹೀನರಾದವರಿಗೂ, ದುರಾಚಾರಶಾಲಿಗಳಾಗಿರತಕ್ಕವರಿಗೂ, ದುರನ್ನಭೋಜನ ಮಾಡತಕ್ಕವರಿಗೂ, ದುಷ್ಪ್ರತಿಗ್ರಹದಿಂದಲೇ ಜೀವಿಸತಕ್ಕವರಿಗೂ, ವ್ರಾತ್ಯರಿಗೆ ಸಮಾನರಾಗಿರುವ ಬ್ರಾಹ್ಮಣರಿಗೂ, ಸಂಪೂರ್ಣವಾಗಿ ವ್ರಾತ್ಯರಾಗಿ ಕರ್ಮಭ್ರಷ್ಟರಾದವರಿಗೂ ಕೂಡ, ಶ್ರೀರಾಮನಾಮಜಪದಿಂದ ಶುದ್ಧಿಯಾಗಿಯೇ ಆಗುವುದೆಂದು, ಆಗ ಕಾತಿಯುಳ್ಳ ಸೇರಿದ್ದ ಋಷಿಗಳ ಸಭೆಯುಳ್ಳಿ ನಿಶ್ಚಯಿಸಲ್ಪಟ್ಟಿತು ॥೪೭-೫೧॥

ಸಕಲವಿಧ ಪಾಪಮಾಡಿದವರಿಗೂ, ಶ್ರೀರಾಮನಾಮವು ಮುಖ್ಯವಾಗಿ ಜಪಿಸಲ್ಪಡತಕ್ಕುದಾಗಿಯೂ ಪಾಪಪರಿಶೋಧಕವಾಗಿಯೂ ಇರುವುದು. ಈ ರಾಮನಾಮವನ್ನು ಜಪಿಸಿದವರು, ಸಕಲ ಪಾಪಗಳನ್ನೂ ಕಳೆದುಕೊಂಡು, ಆ ಮಹಾವಿಷ್ಣುವಿನ ಪರಮಪದವನ್ನು ಹೊಂದುವರು॥

ರಾಮನಾಮ ಪರಂ ಜಪ್ಯಂ ಪಾವನಂ ಪಾಪಕಾರಿಣಾಮ್ ।
ವಿಧೂಯ ಸರ್ವಪಾಪಾನಿ ಯಾನ್ತಿ ವಿಷ್ಣೋಃ ಪರಂ ಪದಮ್ ॥೫೩॥
ಅಹಃಪಾಪಮಹನ್ಯೇವ ವಿಲಯಂ ಯಾತಿ ದೇಹಿನಾಮ್ ।
ರಾಮರಾಮೇತಿ ಜಪತಾಂ ರಾತ್ರ್ಯಾವಪಿ ಕೃತಂ ತದಾ ॥೫೪॥
ಸ್ಮರಣಂ ರಾಮರಾಮೇತಿ ಪರಣಂ ಸರ್ವದೈನಸಾಮ್ ।
ಸನಕಾದಿಮುನೀನ್ದ್ರಾಣಾಂ ಅಸ್ವಹಂ ಶಙ್ಕರಪ್ರಿಯಮ್ ॥೫೫॥
ಕಾಶ್ಯಾಂ ವಿವಮುಖಾದ್ಯಾನಾಮ ಶ್ರುತ್ವೈವ ಮುಚ್ಯತೇ
ಸಹಸ್ರನಾಮತತ್ತುಲ್ಯಂ ರಾಮನಾಮ ವರೋಶ್ವರ ॥೫೬॥
ಪಾಯಂಪಾಯಂ ಶ್ರುತಿಚುಳುಕಿತಂ ರಾಮನಾಮಾಮೃತಂ ಯೋ
ಧ್ಯಾಯಂಧ್ಯಾಯಂ ಮನಸಿ ಸತತಂ ಬ್ರಹ್ಮ ತತ್ ತಾರಕಾಖ್ಯಮ್ ।
ಜಾಪಂಜಾಪಂ ಪ್ರಕೃತಿವಿಕೃತೌ ಪ್ರಾಣಿನಾಂ ಕರ್ಣಮೂಲೇ
ವೀಧ್ಯಾಂವೀಧ್ಯಾಮಟತಿ ಜಟಿಲಃ ಕೋಪಿ ಕಾಶೀಸಿವಾಸೀ ॥೫೭॥
ಏತದ್ರಹಸ್ಯಂ ಪರಮಂ ಯಸ್ಮೈಕಸ್ಮೈ ಕದಾಚನ ।
ನ ವಕ್ತವ್ಯಂ ನ ವಕ್ತವ್ಯಂ ಭಕ್ತಿಹೀನಾಯ ಪಾರ್ಥಿವ ॥೫೮॥

'ರಾಮ ರಾಮ' ಎಂದು ಸ್ಮರಣೆ ಮಾಡುವಿಕೆಯು, ಸನಕಾದಿ ಮುನಿಶ್ರೇಷ್ಠರಿಗೂ ಕೂಡ ಸರ್ವದಾ ಪಾಪಪರಿಹಾರಕವಾಗಿರುವುದು; ಇದು ಪರಮೇಶ್ವರನಿಗೆ ಅತಿ ಪ್ರಿಯವಾದುದು॥೫೫॥

ಅಯ್ಯಾ! ಸುಮತಿರಾಜ! ಶ್ರೀ ಕಾಶಿಯೊಳಗೆ ಪ್ರಾಣಿಯು ಈಶ್ವರನ ಮುಖದಿಂದ ರಾಮ ನಾಮವನ್ನು ಕೇಳಿದಮಾತ್ರದಲ್ಲಿಯೇ ಮುಕ್ತಿಹೊಂದುವುದು. ಈ ಒಂದು ರಾಮನಾಮವು, ಸಹಸ್ರನಾಮಕ್ಕೆ ಸಮಾನವಾದುದು ॥೫೬॥

ಯಾವ ಮಹಾಪುರುಷ(ಈಶ್ವರ)ನು, ಶ್ರೋತ್ರವೆಂಬ ಚುಳುಕ(ಆಂಗೈಯ)ದಲ್ಲಿ ಇರಿಸಿ ಕೊಂಡು ರಾಮನಾಮವೆಂಬ ಅಮೃತವನ್ನು ಪದೇಪದೇ ಮಾಡುತ, ಮನಸ್ಸಿನಲ್ಲಿ ಸರ್ವದಾ ಆ ತಾರಕಬ್ರಹ್ಮವನ್ನು ಪುನಃ ಪುನಃ ಧ್ಯಾನಮಾಡುತ, ಪ್ರಾಣಿಗಳಿಗೆ ಮರಣಕಾಲ ಒದಗಿದಾಗ ಕಿವಿಯಲ್ಲಿ ಆ ತಾರಕಮಂತ್ರವನ್ನು ಜಪಿಸುತಿರುವನೋ, ಅಂತಹ ಕಾಶೀನಿವಾಸಿಯಾದ ಯಾವನೋ ಮಹಾತ್ಮ (ಈಶ್ವರ) ನು, ಜಟೆಯುನ್ನು ಬೆಳೆಯಿಸಿಕೊಂಡು, ಮುಮೂರ್ಷುಗಳನ್ನು ಹುಡುಕುತ ಬೀದಿಬೀದಿಯಲ್ಲೂ ಅಲೆಯುತ್ತಿರುವನು ॥೫೭॥

ಅಯ್ಯಾ ಪಾರ್ಥಿವ! ಈಗ ನಾನು ನಿನಗೆ ಹೇಳಿದ ಈ ವಿಷಯವು ಪರಮರಹಸ್ಯವಾದುದು. ಇದನ್ನು, ಭಕ್ತಿಹೀನನಾದ ಯಾವನೊಬ್ಬನಿಗೂ ಯಾವಾಗಲೂ ಖಂಡಿತವಾಗಿ ಹೇಳಲೇ ಕೂಡದು ॥೫೮॥

ಈ ವಿಷಯದಲ್ಲಿ ಯಾವನೊಬ್ಬ ನರಾಧಮನು ಸಂಶಯಪಡುವನೋ, ಅವನ ಜನ್ಮದಲ್ಲಿ ಸಾಂಕರ್ಯವುಂಟಾಗಿರುವುದೆಂದು ಶಾಸ್ತ್ರಜ್ಞರಾದವರು ತಿಳಿಯಬೇಕು ॥೫೯॥

ಶ್ರೀ ಪರಮೇಶ್ವರನು ಹೇಳುವನು:—

ಅತ್ರ ಸಂಶಯಮಾಪನ್ನೋ ಯೋಽವಾಕೋವಾ ನರಾಧಮಃ ।
ತಸ್ಯ ಜನ್ಮನಿ ಸಾಜ್ಯರ್ಯಂ ಜ್ಞಾತವ್ಯಂ ಶಾಸ್ತ್ರವಿತ್ತಮೈಃ ॥೪೯॥

ಶ್ರೀ ಶಿವಉವಾಚ.

ಏವಂ ಸಮೊಬ್ಧಿತೋ ರಾಜಾ ರಾಮತತ್ವಂ ಮಹಾತ್ಮನಾ ।
ಕೌಶಿಕಂ ಪೂಜಯಾಮಾಸ ಪಾದ್ಯಾರ್ಘ್ಯಾಸನವಂದನೈಃ ॥೫೦॥

ರಾಮಂ ಚಾಪಿ ಪರಾತ್ಮಾನಂ ಮತ್ವಾ ಸಿಂಹಾಸನೇ ಶುಭೇ ।
ಸನ್ನಿವೇಶ್ಯ ಯಥಾನ್ಯಾಯಂ ಪೂಜಯಾಮಾಸ ಭಕ್ತಿತಃ ॥೫೧॥

ದಿವ್ಯಸ್ರಗ್ಭೂಷಣೈರ್ವಸ್ತ್ರೈಃ ದಿವ್ಯಮಾಲ್ಯೈಃ ಸುಚಂದನೈಃ ।
ಮಹಾಧನೈರ್ಹಯೈ ಮಣಿಭಿಃ ವರಾಶ್ವರಥಕುಂಜರೈಃ ॥೫೨॥

ಸಮ್ಪೂಜ್ಯ ಸರ್ವಾಂ ರಾಮಾಯ ನಿವೇದ್ಯ ಸಹ ಭಾರ್ಯಯಾ ।
ಭೂಯೋಭೂಯಃ ಪರಿಕ್ರಮ್ಯ ಸ್ತುತಿಂ ಚಕ್ರೇ ವರಾನನೇ ॥೫೩॥

ಸುಮತಿರುವಾಚ.

ನಮಸ್ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇ ಸರ್ವತಸ್ಸಾಕ್ಷಿನ್ ಸರ್ವಭೂತಗುಹಾಶಯ ॥೫೪॥

ಎಲ್ಲಾ ವಾರ್ತೆಯನ್ನು ಈರೀತಿಯಾಗಿ ಮಹಾತ್ಮನಾದ ವಿಶ್ವಾಮಿತ್ರನಿಂದ ಶ್ರೀರಾಮನ ತತ್ವವನ್ನು ಚೆನ್ನಾಗಿ ಬೋಧಿಸಲ್ಪಟ್ಟ ಆ ಸುಮತಿರಾಜನು, ಪಾದ್ಯ ಅರ್ಘ್ಯ ಆಸನ ವಂದನಗಳಿಂದ ಆ ವಿಶ್ವಾಮಿತ್ರನನ್ನು ಪೂಜಿಸಿದನು ॥೪೯॥

ಶ್ರೀರಾಮನನ್ನೂ ಕೂಡ, ಸಾಕ್ಷಾತ್ ಪರಮಾತ್ಮನೆಂದು ತಿಳಿದು, ದಿವ್ಯವಾದ ಸಿಂಹಾಸನದಲ್ಲಿ ಕುಳ್ಳಿರಿಸಿ, ಭಕ್ತಿಯಿಂದ ಯಥಾನ್ಯಾಯವಾಗಿ ಪೂಜಿಸಿದನು ॥೫೦॥

ಎಲ್ಲಾ ವಾರ್ತೆಯ ಅಗ ಆ ಸುಮತಿರಾಜನು, ಪತ್ನೀಸಹಿತನಾಗಿ, ದಿವ್ಯವಾದ ರತ್ನಹಾರಗಳಿಂದಲೂ ಆಭರಣಗಳಿಂದಲೂ ವಸ್ತ್ರಗಳಿಂದಲೂ ದಿವ್ಯವಾದ ಪುಷ್ಪಮಾಲಿಕೆಗಳಿಂದಲೂ ಉತ್ತಮವಾದ ಗಂಧದಿಂದಲೂ ಬಹು ಮೂಲ್ಯವಾದ ರತ್ನಗಳಿಂದಲೂ ಶ್ರೇಷ್ಠವಾದ ಅಶ್ವ ರಥ ಗಜಗಳಿಂದಲೂ ಶ್ರೀರಾಮನನ್ನು ಪೂಜಿಸಿ, ಅವೆಲ್ಲವನ್ನೂ ಶ್ರೀರಾಮನಿಗೇ ಸಮರ್ಪಿಸಿ, ಪುನಃ ಪುನಃ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಈಗೆ ಸ್ತೋತ್ರಮಾಡಿದನು ॥೫೧-೫೫॥

ಸುಮತಿರಾಜನು ಸ್ತೋತ್ರಮಾಡಿದುದು ಹೇಗೆಂದರೆ.—

ಎಲೈ ಪುಂಡರೀಕಾಕ್ಷನೆ! ನಿನಗೆ ನಮಸ್ಕಾರವು. ಪ್ರಪಂಚದ ಸೃಷ್ಟಿ ಸ್ಥಿತಿಗಳಿಗೆ ಕಾರಣಭೂತನಾದವನೆ! ನಿನಗೆ ನಮಸ್ಕಾರವು. ಸರ್ವತ್ರ ಸಾಕ್ಷಿಯಾದವನೆ! ನಿನಗೆ ನಮಸ್ಕಾರವು ॥

ಯಾವನು, ಸರ್ವತೋಮುಖವಾದ ಕೈಕಾಲುಳ್ಳವನಾಗಿಯೂ, ಸರ್ವತೋಮುಖವಾದ ನೇತ್ರ ಶಿರಸ್ಸು ಮುಖಗಳುಳ್ಳವನಾಗಿಯೂ, ಸರ್ವತೋಮುಖವಾದ ಶ್ರೋತ್ರವುಳ್ಳವನಾಗಿಯೂ ಇರುವನೋ, ಅಂತಹ ಪರಮಾತ್ಮರೂಪನಾದ ರಘುಶ್ರೇಷ್ಠನನ್ನು ನಾನು ಶರಣಾಗತನಾಗಿರುವೆನು!

ಸರ್ವತಃಪಾಣಿಪಾದೋ ಯಃ ಸರ್ವತೋಕ್ಷಿಶಿರೋಮುಖಃ ।
ಸರ್ವತಃಶ್ರೋತ್ರಯುಕ್ತೋ ಯಃ ತಂ ಪ್ರಪದ್ಯೇ ರಘೂತ್ತಮಮ್ ॥೬೫॥

ಯಃ ಸರ್ವಕರ್ತಾ ಸರ್ವಾತ್ಮಾ ಯಸ್ಮಿನ್ ಪ್ರೋತಮಿದಂ ಜಗತ್ ।
ಓತಂ ಚ ಸರ್ವತಃ ಸೂತ್ರಂ ಪಟವತ್ ಸಚರಾಚರಮ್ ॥೬೬॥

ಯೋ ಬ್ರಹ್ಮಾಣಂ ವಿಧಾಯಾದೌ ತಸ್ಮೈ ವೇದಾನ್ ದದಾತಿ ಯಃ ।
ತಂ ದೇವಮಾತ್ಮಬುದ್ಧ್ಯಾದಿಭಾಸಕಂ ಶರಣಂ ವ್ರಜೇ ॥೬೭॥

ಅಜೋಪಿ ನಾಶಹೀನೋಪಿ ಸ್ವತಂತ್ರೋಪಿ ಸ್ವಮಾಯಯಾ ।
ಜಾತಃ ಸ್ವಭಕ್ತರಕ್ಷಾರ್ಥಂ ತಂ ಪ್ರಪದ್ಯೇ ಕೃಪಾನಿಧಿಮ್ ॥೬೮॥

ಶ್ರೀ ಶಿವವುವಾಚ.

ಇತಿ ಸ್ತುತಸ್ತದಾ ದೇವಿ ರಾಘವೋ ಭಕ್ತವತ್ಸಲಃ ।
ವರದೋಸ್ಮೀತಿ ತಂ ಪ್ರಾಹ ರಾಜಾನಂ ಗತಕಲ್ಮಷಮ್ ॥೬೯॥

ಸುಮತಿರುವಾಚ.

ಯಾ ಪ್ರೀತಿರ್ಮಮ ದೇಹಾದೌ ಸಾ ಭೂಯಾತ್ ತೇ ಪದಾಬ್ಜಯೋಃ ।
ತಾಮೇವ ಭಕ್ತಿಂ ಮೇ ದೇಹಿ ವೃಣೇ ನಾತೋ ವರಾನ್ತರಮ್ ॥೭೦॥

ಯಾವನು ಸರ್ವಕರ್ತೃವಾಗಿಯೂ ಸರ್ವಾತ್ಮನಾಗಿಯೂ ಇರುವನೋ, ಒಟ್ಟಿಯಲ್ಲಿ ದಾರ ಗಳಿರುವಂತೆ-ಯಾವನಲ್ಲಿ ಈ ಚರಾಚರಾತ್ಮಕವಾದ ಸಮಸ್ತ ಜಗತ್ತೂ ಓತಪ್ರೋತ(ಹಾಸು ಹೊಕ್ಕು)ವಾಗಿರುವುದೋ, ಯಾವನು ಸೃಷ್ಟ್ಯಾದಿಯಲ್ಲಿ ಚತುರ್ಮುಖನನ್ನು ಸೃಷ್ಟಿಮಾಡಿ-ಅವನಿಗೆ ಸಮಸ್ತ ವೇದಗಳನ್ನೂ ಉಪದೇಶಿಸಿದನೋ, ಅಂತಹ-ಆತ್ಮಬುದ್ಧ್ಯಾದಿ ಪ್ರಕಾಶಕನಾದ-ಪರ ಮಾತ್ಮನನ್ನು, ನಾನು ಶರಣಾಗತನಾಗಿರುವೆನು ॥೬೫-೬೯॥

ಯಾವನು, ಜನ್ಮರಹಿತನಾಗಿದ್ದರೂ-ನಾಶರಹಿತನಾಗಿದ್ದರೂ-ಸ್ವತಂತ್ರನಾಗಿದ್ದರೂ-ತನ್ನ ಭಕ್ತರ ರಕ್ಷಣೆಗೋಸ್ಕರವಾಗಿ ತನ್ನ ಮಾಯೆಯಿಂದ ಮನುಷ್ಯಯೋನಿಯಲ್ಲಿ ಅವತರಿಸುವನೋ, ಅಂತಹ ಕೃಪಾನಿಧಿಯಾದ ಪರಮಾತ್ಮನನ್ನು ನಾನು ಶರಣುಹೊಂದುವೆನು ॥೬೭॥

ಶ್ರೀ ಶಿವನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ದೇವಿ! ಆಗ ಈರೀತಿಯಾಗಿ ಸ್ತುತಿಸಲ್ಪಟ್ಟ ಭಕ್ತವತ್ಸಲನಾದ ಶ್ರೀರಾಮನು, ಕಲ್ಮಷವನ್ನು ಕಳೆದುಕೊಂಡಿರುವ ಆ ಸುಮತಿರಾಜನನ್ನು ಕುರಿತು 'ನಾನು ನಿನಗೆ ವರವನ್ನು ಕೊಡುವೆನು; ನಿನಗಿಷ್ಟವಾದುದನ್ನು ಕೇಳಿಕೋ.' ಎಂದು ಹೇಳಿದನು ॥೬೯॥

ಆಗ ಸುಮತಿಯು ಹೀಗೆ ವಾರ್ಥಿಸಿದನು :—

ಸ್ವಾಮಿ! ನನಗೆ ನನ್ನ ದೇಹಾದಿಗಳಲ್ಲಿ ಯಾವ ಪ್ರೀತಿಯಿರುವುದೋ, ಅದು ಸರ್ವದಾ ನಿನ್ನ ಪಾದಕಮಲದಲ್ಲಿರುವಂತೆ ಅನುಗ್ರಹಿಸು. ನನಗೆ ಈ ಭಕ್ತಿಯೊಂದು ಮಾತ್ರವನ್ನೇ ದಯಪಾಲಿಸು. ನಾನು ಇದನ್ನು ಬಿಟ್ಟು ಮತ್ತಾವ ವರವನ್ನೂ ವಾರ್ಥಿಸುವುದಿಲ್ಲ ॥೭೦॥

ಶ್ರೀ ಶಿವವುವಾಚ.

ಇತ್ಯುಕ್ತೋ ರಾಘವಃ ಪ್ರಾಹ ತಥಾಸ್ತ್ವಿತಿ ಮಹೀಪತಿಮ್ ।
ತತಸ್ತತ್ಪ್ರೇಷಿತೋ ರಾಮೋ ಮಿಥಿಲಾಮಭ್ಯಯಾತ್ ಪ್ರಭುಃ ॥೨೧॥

ಇತಿ ಶ್ರೀ ಬಾಲಕಾಣ್ಡೇ ಶ್ರೀರಾಮಸ್ಮರಣಮಹೀಮಾನುವರ್ಣನಂ ನಾಮ
ಚತುರ್ವಿಂಶಃ ಸರ್ಗಃ.



ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಈ ರೀತಿಯಾಗಿ ಸುಮತಿಯಿಂದ ಪ್ರಾರ್ಥಿಸಲ್ಪಟ್ಟ ಶ್ರೀರಾಮನು, ನಿನ್ನ ಇಷ್ಟಾರ್ಥವು ನೆರವೇರಲೆಂದು ಆ ಸುಮತಿಯನ್ನು ಅನುಗ್ರಹಿಸಿದನು. ಅನಂತರ, ಅವನಿಂದ ಸಾಗಿಕಳುಹಿಸಲ್ಪಟ್ಟವನಾಗಿ, ಸರ್ವಜಗತ್ಪ್ರಭುವಾದ ಆ ರಾಮನು, ಮಿಥಿಲಾನಗರವನ್ನು ಕುರಿತು ಪ್ರಯಾಣಮಾಡಿದನು ॥೨೦॥

ಇದು ಬಾಲಕಾಂಡದಲ್ಲಿ ಶ್ರೀರಾಮನಾಮ ಸ್ಮರಣಮಹಿಮಾನುವರ್ಣನೆಯೆಂಬ
ಇಪ್ಪತ್ತನಾಲ್ಕನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಪಞ್ಚವಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ಮಿಥಿಲೋಪವನೇ ತತ್ರ ನಾನಾಪುಷ್ಪದ್ರುಮಾಞ್ಚಿತಮ್ ।
ನಾನಾವಿಧಫಲೋಪೇತಂ ದದೃಶುರ್ವನಮುತ್ತಮಮ್ ॥೧॥
ಶ್ರಮಹಾರಿ ಮಹಾರಮ್ಯಂ ಪುಟಕೇಪುಟಕೇ ಮಧು ।
ಕನ್ದಮೂಲಾದಿಸನ್ಪೂರ್ಣಂ ನದೀತೀರಮುಪಾಶ್ರಿತಮ್ ॥೨॥
ತಾದೃಶಂ ವನಮಾಸಾದ್ಯ ರಾಮಃ ಪರಪುರಞ್ಜಯಃ ।
ವಿಶ್ವಾಮಿತ್ರಮಿದಂ ವಾಕ್ಯಂ ಉವಾಚ ಸಹಲಕ್ಷ್ಮಣಃ ॥೩॥
ಕಸ್ಯೇದಮಾಶ್ರಮಪದಂ ರಮ್ಯಂ ಮುನಿವಿವರ್ಜಿತಮ್ ।
ಕೋ ಹೇತುರ್ವದ ಮೇ ಬ್ರಹ್ಮನ್ ಪರಂ ಕೌತೂಹಲಂ ಹಿ ನಃ ॥೪॥
ಇತಿ ಪೃಷ್ಟೋ ರಾಘುವೇಣ ವಿಶ್ವಾಮಿತ್ರೋ ಮಹಾತ್ಮನಾ ।
ತದಾಶ್ರಮಕಥಾಂ ಪುಣ್ಯಾಂ ವಕ್ತುಮೈಚ್ಛತ್ಸುಜೆನ್ಮತೇ ॥೫॥
ಶೃಣು ರಾಮ ಪ್ರವಕ್ಷ್ಯಾಮಿ ಕಥಾಂ ಕಥಯತೋ ಮಮ ।
ವಿಜೆತ್ರಾಂ ಸರ್ವಪಾಪಘ್ನೀಂ ಗೌತಮಸ್ಯಮಹಾತ್ಮನಃ ॥೬॥

ಬಾಲಕಾಂಡದಲ್ಲಿ ಇಪ್ಪತ್ತೈದನೆಯ ಸರ್ಗವು.

ಶ್ರೀ ಪರಮೇಶ್ವರನು ಪುನಃ ಪಾರ್ವತೀದೇವಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಹಿಂದೆ ಹೇಳಿದಂತೆ, ಮಿಥಿಲಾಪಟ್ಟಣಕ್ಕೆ ಹೋದ ಆ ರಾಮಲಕ್ಷ್ಮಣಾದಿಗಳು, ಆ ಉಪವನದೊಳಗೆ, ನಾನಾವಿಧ ಪುಷ್ಪಗಳಿಂದಲೂ ಫಲಗಳಿಂದಲೂ ಭರಿತವಾಗಿರುವ ವೃಕ್ಷವಾಟಿಕೆಯನ್ನು ಕಂಡರು ॥೧॥

ಆ ವನವು, ತಾವಾರ್ತ್ರರಾದವರಿಗೆ ಶ್ರಮಪರಿಹಾರಕವಾಗಿಯೂ, ಅತಿ ಮನೋಹರವಾಗಿಯೂ ಇದ್ದಿತು; ಅದರೊಳಗಿರುವ ಪ್ರತಿಯೊಂದು ಪುಷ್ಪಪುಟದಲ್ಲಿಯೂ ಮಕರಂದವು ಭರಿತವಾಗಿದ್ದಿತು; ನದಿಯ ತೀರದಲ್ಲಿರುವ ಆ ಉದ್ಯಾನದೊಳಗೆ, ಕಂದಮೂಲಾದಿಗಳು ಯಥೇಚ್ಛವಾಗಿ ತುಂಬಿದ್ದುವು ॥೨॥

ಅಂತಹ ಉದ್ಯಾನವನ್ನು ಲಕ್ಷ್ಮಣನೊಡನೆ ಹೊಂದಿ, ಶತ್ರುಪುರವಿಜಯಿಯಾದ ಶ್ರೀರಾಮನು, ವಿಶ್ವಾಮಿತ್ರಮುನಿಯನ್ನು ಕುರಿತು ಹೀಗೆ ಹೇಳಿದನು ॥೩॥

ಬ್ರಹ್ಮರ್ಷಿವರ್ಯರೆ! ಅತಿ ರಮಣೀಯವಾಗಿಯೂ ಮುನಿವರ್ಜಿತವಾಗಿಯೂ ಇರುವ ಈ ಆಶ್ರಮವಾರದು? ಇದು ಹೀಗೆ ಜನವರ್ಜಿತವಾಗಿರುವುದಕ್ಕೆ ಕಾರಣವೇನು? ಇದನ್ನು ಅಪ್ಪಣೆಕೊಡಿಸಬೇಕು. ಇದನ್ನು ತಿಳಿದುಕೊಳ್ಳಬೇಕೆಂದು ನನ್ನಂತೆಯೇ ಈ ಸಮಸ್ತರಿಗೂ ಅತಿಯಾಗಿ ಕುತೂಹಲವುಂಟಾಗಿರುವುದು ॥೪॥

ಎಲೌ! ಪಾರ್ವತಿ! ಈರೀತಿಯಾಗಿ ಮಹಾತ್ಮನಾದ ರಾಮನಿಂದ ಪ್ರಾರ್ಥಿಸಲ್ಪಟ್ಟ ವಿಶ್ವಾಮಿತ್ರಮುನಿಯು, ಅತಿ ಪವಿತ್ರವಾದ ಆ ಆಶ್ರಮದ ಕಥೆಯನ್ನು ಹೇಳಲುಪಕ್ರಮಿಸಿದನು ॥೫॥

ಬ್ರಹ್ಮಾದ್ಯಸೃಷ್ಟಿಕಾಲೇ ತು ಸ್ತ್ರೀಸೃಷ್ಟಿಮಕರೋತ್ ಪ್ರಭುಃ ।
ಸೌನ್ದರ್ಯಂ ತಿಲಶೋ ಧೃತ್ವಾ ಸರ್ವಭೂತೇಷು ಸಂಸ್ಥಿತಮ್ ॥೬॥
ಅಹಲ್ಯಾಂ ಹಲ್ಯರಹಿತಾಂ ಸರ್ವಾವಯವಸುನ್ದರೀಮ್ ।
ಸ್ವಯಂ ವಿಸ್ಮಯಮಾಪನ್ನಃ ತಾಂ ದೃಷ್ಟ್ವಾ ಪ್ರಮದೋತ್ತಮಾಮ್ ॥೮॥
ಚಿನ್ತಯಾಮಾಸ ಮನಸಾ ಕಸ್ಯೈ ದೇವಾ ಮಯಾ ಹ್ಯಲಮ್ ।
ಉತ್ಕೃಷ್ಟಗುಣಸಮ್ಪನ್ನಾ, ಸ್ತ್ರೀರತ್ನಮತುಲಪ್ರಭಾ ॥೯॥
ಏತಸ್ಮಿನ್ನೇವ ಕಮಯೇ ದೇವೇನ್ದ್ರಃ ಪಾಕಶಾಸನಃ ।
ಬ್ರಹ್ಮಣಾ ನಿರ್ಮಿತಾಂ ಜ್ಞಾತ್ವಾ ಸ್ತ್ರಿಯಮೇಕಾಗ್ರಚೇತಸಾ ॥೧೦॥
ಗತ್ವಾತಿವೇಗಂ ತತ್ಸದ್ಮ ಕಥಯೈವ ವಿಮೋಹಿತಃ ।
ದದರ್ಶ ವಿಶ್ವಸೃಷ್ಟಸ್ತದ್ಮ ಸರ್ವತಃ ಸುಮನೋಹರಮ್ ॥೧೧॥
ತಸ್ಮಾನ್ನಿಷ್ಕ್ರಮ್ಯ ಚರನ್ತೀಂ ತಾಂ ಬ್ರಹ್ಮಣಾ ನಿರ್ಮಿತಾಂ ಸತೀಮ್ !
ವೈಷ್ಣವೀ ಕಾಮಮಪರೀತಾಙ್ಗಃ ಕಾಮಬಾಣೈಪೀಡಿತಃ ॥೧೨॥
ಅತಾಸ್ಯರ್ಥಕರಂ ತಸ್ಯಾಂ ಮನೋನಯನನನ್ದನಮ್ ।

ಅಯ್ಯಾ! ರಾಮ! ಅತಿ ವಿಚಿತ್ರವಾಗಿಯೂ ಸರ್ವಪಾಪಹರವಾಗಿಯೂ ಇರುವ ಮಹಾತ್ಮನಾದ ಗೌತಮಮುನಿಯ ಕಥೆಯನ್ನು ಹೇಳುವೆನು, ಕೇಳು. ಇದರಿಂದಲೇ ನಿನ್ನ ಪ್ರಶ್ನೆಗೆ ಉತ್ತರ ಉಕ್ತವಾಗುವುದು ॥೬॥

ಸಾಕ್ಷಾಚ್ಛತುರ್ಮುಖಬ್ರಹ್ಮನು, ಆದಿಸೃಷ್ಟಿಯ ಸಮಯದಲ್ಲಿ, ಸಮಸ್ತ ಭೂತಗಳಲ್ಲಿಯೂ ಇರುವ ಸೌಂದರ್ಯಸಾರವನ್ನು ಸ್ವಲ್ಪಸ್ವಲ್ಪವಾಗಿ ತೆಗೆದುಕೊಂಡು, ಬಂದು ಸ್ತ್ರೀರತ್ನವನ್ನು ಸೃಷ್ಟಿ ಮಾಡಿದನು ಇವಳ ಹೆಸರು ಅಹಲ್ಯೆಯೆಂದು ಹೀಗೆ ಸರ್ವಾವಯವ ಸುಂದರಿಯೂ ಯಾವ ವಿಧವಾದ ವೈರೂಪ್ಯವೂ ಇಲ್ಲದವಳೂ ಆಗಿರುವ ಆ ಅಹಲ್ಯೆಯನ್ನು ನೋಡಿ, ತನ್ನ ಮನಸ್ಸಿನಲ್ಲಿ 'ಅತ್ಯುತ್ಕೃಷ್ಟ ಗುಣಸಂಪನ್ನಳಾಗಿಯೂ ಮಹಾಕಾಂತಿಮತಿಯಾಗಿಯೂ ಇರುವ ಸ್ತ್ರೀರತ್ನಭೂತಳಾದ ಈ ಅಹಲ್ಯೆಯಾರನ್ನ ನಾನು ಈಗ ಯಾರಿಗೆ ಕೊಡಲಿ? ಇವಳಿಗನುರೂಪನಾದ ವರನು ಯಾವನಿರುವನು?' ಎಂದು, ಆ ಬ್ರಹ್ಮನು ಯೋಚಿಸುತಿದ್ದನು ॥೭-೯॥

ಈರೀತಿಯಾಗಿ ಬ್ರಹ್ಮನು ಯೋಚಿಸುತ್ತಿರುವಾಗಲೇ, ಬ್ರಹ್ಮನಿಂದ ಇಂತಹುದೊಂದು ಸ್ತ್ರೀರತ್ನವು ಸೃಜಿಸಲ್ಪಟ್ಟಿರುವುದೆಂದು ಕರ್ಣಾಕರ್ಣಿಕೆಯಾಗಿ ತಿಳಿದುಕೊಂಡ ಮಹೇಂದ್ರನು, ಅವಳ ವಿಷಯವನ್ನು ಕೇಳಿದ್ದರಿಂದಲೇ ಮೋಹಿತನಾಗಿ, ತದೇಕಾಯತ್ತಚಿತ್ತನಾಗಿ, ಅತಿವೇಗದಿಂದ ಬ್ರಹ್ಮಲೋಕಕ್ಕೆ ಹೋಗಿ, ಸರ್ವತಃ ಮನೋಹರವಾಗಿರುವ ಆ ಬ್ರಹ್ಮಭವನವನು ಕಂಡನು ॥೧೦-೧೧॥

ಅವನ ಹತ್ತಿರದಲ್ಲಿಯೇ ಸಂಚರಿಸುತ್ತಿರುವ ಬ್ರಹ್ಮಮಾನಸನಿರ್ಮಿತಳಾದ ಆ ಸುಂದರಿಯನ್ನು ನೋಡಿ, ಕಾಮಪೀಡಿತನಾದ ಆ ಇಂದ್ರನು, ಮನ್ಮಥಶರಕ್ಕೆ ಗುರಿಯಾಗಿ ಸಂಕಟಪಡುತಿದ್ದನು ॥೧೨॥

ಆ ಅಹಲ್ಯೆಯ ರೂಪವು ಸಾಮಾನ್ಯವಾಗಿರಲಿಲ್ಲ; ಅದು, ಸರ್ವರಿಗೂ ಆತ್ಚರ್ಯವುಂಟು ಮಾಡತಕ್ಕುದಾಗಿಯೂ, ಮನಸ್ಸಿಗೂ ನೇತ್ರಕ್ಕೂ ಆನಂದಪ್ರದವಾಗಿಯೂ, ಅಸದೃಶವಾಗಿಯೂ

ಸೌಂದರ್ಯಮತುಲಂ ಚಿತ್ರಂ ನ ಶ್ರುತಂ ದೃಷ್ಟಮೇವ ವಾ ॥೧೩॥
ಮೋಹಿತೋ ನಾಭಿಜಾನಾತಿ ಭ್ರಾನ್ತಚಿತ್ತೋ ವಿಬುದ್ಧಿವಾನ್ ।
ತತ್ಸನ್ನಿಧಿವಿಕಾರೇಣ ಬ್ರಹ್ಮಾಣಮಿದಮಬ್ರವೀತ್ ॥೧೪॥
ಅಪೂರ್ವಮನವದ್ಯಾಙ್ಗೀಂ ಅದೃಷ್ಟಾಂ ನ ಚ ಸಂಶ್ರುತಾಮ್ ।
ಗಾಢಾನುರಾಗಚಿತ್ತೋ ಯಂ ಸ್ತ್ರೀಯುಂ ಮೇ ದಾತುಮರ್ಹಸಿ ॥೧೫॥

ಬ್ರಹ್ಮೋವಾಚ.

ನ ಹ್ಯೇನಾಂ ರಕ್ಷಿತುಂ ಶಕ್ತಃ ತ್ವಮಿನ್ದ್ರಾಸ್ಯಲ್ಪಶಕ್ತಿಮಾನ್ ।
ರಾಕ್ಷಸಾಬಲವನ್ತೋ ಹಿ ತದಗ್ರೇ ಸ್ಥಾತುಮಕ್ಷಮಃ ॥೧೬॥
ತಪೋಬಲವತೇ ದೇಯಾ ಕನ್ಯೇಯಂ ಸರ್ವಮೋಹಿನೀ ।
ನಾನ್ಯತೋ ರಕ್ಷಣಂ ಚಾಸ್ಯಾಃ ತಪೋಬಲವತಾ ವಿನಾ ॥೧೭॥
ಇತ್ಯುಕ್ತ್ವಾ ತಂ ಶಚೀನಾಥಂ ಅಹಲ್ಯಾಸಕ್ತಮಾನಸಮ್ ।
ಆಹೂಯ ಗೌತಮಂ ವೇಧಾಃ ತಪೋಬಲಸಮನ್ವಿತಮ್ ॥೧೮॥

ಇದ್ದಿತು. ಇಂತಹ ಲೋಕೋತ್ತರವಾದ ಸೌಂದರ್ಯವು, ಇದುವರೆಗೆ ಎಲ್ಲಿಯೂ ನೋಡಲ್ಪಟ್ಟೂ ಇಲ್ಲ; ಕಾಣಲ್ಪಟ್ಟೂ ಇಲ್ಲ ॥೧೩॥

ಇಂತಹ ಲೋಕೋತ್ತರಸುಂದರಿಯಾದ ಅಹಲ್ಯೆಯು ಸಾನ್ನಿಧ್ಯದಿಂದುಂಟಾದ ಚಿತ್ತವಿಕಾರದಿಂದ, ಇಂದ್ರನು, ಮೋಹಿತನಾಗಿ, ಭ್ರಾಂತಿಹೃದಯನಾಗಿ, ಬುದ್ಧಿಶೂನ್ಯನಾಗಿ, ಬ್ರಹ್ಮನನ್ನು ಕುರಿತು ಈರೀತಿಯಾಗಿ ಹೇಳಿದನು ॥೧೪॥

ಹೇ ಸ್ವಾಮಿ! ನಿನ್ನ ಸನ್ನಿಧಿಯಲ್ಲಿರುವ ಅಪೂರ್ವಳಾದ ಈ ಸ್ತ್ರೀಯು, ಸರ್ವಾವಯವ ಸುಂದರಿಯಾಗಿರುವಳು. ಇಂತಹ ಸುಂದರಿಯನ್ನು, ನಾನು ಇದುವರೆಗೆ ನೋಡಿಯೂ ಇಲ್ಲ; ಕೇಳಿಯೂ ಇಲ್ಲ. ನನ್ನ ಮನಸ್ಸು ಇವಳಲ್ಲಿ ಗಾಢವಾಗಿ ಅನುರಕ್ತವಾಗಿರುವುದು. ಅದುಕಾರಣ, ಇವಳನ್ನು ನೀನು ನನಗೆ ಅನುಗ್ರಹಿಸಿ ಕೊಡಬೇಕೆಂದು ಪ್ರಾರ್ಥಿಸುವೆನು ॥೧೫॥

ಇದನ್ನು ಕೇಳಿ ಬ್ರಹ್ಮದೇವನು ಉತ್ತರ ಹೇಳುವನು:—

ಅಯ್ಯಾ ಇಂದ್ರ! ನೀನು ಇವಳನ್ನು ಕಾಪಾಡಲಾರೆ; ನಿನ್ನ ಶಕ್ತಿಯು ಅಲ್ಪವಾಗಿರುವುದು. ರಾಕ್ಷಸರಾದರೋ, ಮಹಾಬಲಿಷ್ಠರಾಗಿರುವರು ಅವರೆದುರಿಗೆ ನಿಲ್ಲಲು ನೀನು ಸುತರಾಂ ಸಮರ್ಥನಲ್ಲ ॥೧೬॥

ಅದುಕಾರಣ, ಸರ್ವಲೋಕವಿಮೋಹಿನಿಯಾದ ಈ ಕನ್ಯೆಯನ್ನು ತಪಶ್ಶಕ್ತಿಯುಳ್ಳವನಿಗೆ ಕೊಡತಕ್ಕುದೇ ಯುಕ್ತವಾಗಿರುವುದು. ತಪೋಬಲಸಮನ್ವಿತನಾದವನನ್ನು ಬಿಟ್ಟರೆ, ಮತ್ತಾರಿಂದಲೂ ಇವಳನ್ನು ಕಾಪಾಡಿಕೊಳ್ಳುವುದು ಸಾಧ್ಯವಲ್ಲ ॥೧೭॥

ಎಲೌ ವಾರ್ತಿ! ಆ ಬ್ರಹ್ಮನು, ಅಹಲ್ಯಾಸಕ್ತಹೃದಯನಾದ ಇಂದ್ರನಿಗೆ ಈರೀತಿಯಾಗಿ ಹೇಳಿ, ತಪೋಬಲಸಮನ್ವಿತನಾದ ಬ್ರಹ್ಮಾಂಡವನ್ನೆಲ್ಲ ತಲೆಕೆಳಗು ಮಾಡುವುದಕ್ಕೂ ಪುನಃ ಸೃಜಿ

ಬ್ರಹ್ಮಾಣ್ಣಮನ್ಯೇಥಾಕರ್ತುಂ ವಸಃ ಕರ್ತುಮಪಿ ಪ್ರಭುಮ್ ।
ತಸ್ಮೈ ದದೌ ಸುರಶ್ರೇಷ್ಠಃ ಕನ್ಯಾಂ ತಾಂ ಕಾಮರೂಪಿಣೀಮ್ ॥೧೯॥
ವಿಷಯೂಭಿನಿವೃತ್ತಸ್ಯ ಗೌತಮಸ್ಯ ಮಹಾತ್ಮನಃ ।
ನಾಲಂ ಚಿತ್ತಂ ವಿಮಥಿತುಂ ಸುಸ್ತ್ರೀ ಸಾ ಸುಮಧ್ಯಮಾ ॥೨೦॥
ನಿಸ್ಪೃಹಂ ಚ ವಿರಕ್ತಂ ಚ ಜ್ಞಾತ್ವಾ ತಂ ಗೌತಮಂ ಮುನಿಮ್ ।
ತದ್ವಶೇ ಸಾ ಪ್ರಯಾಮಾಸ ಕನ್ಯಾಮೇನಾಂ ನಿರಾಪದಿ ॥೨೧॥
ಗತೇ ಬಹುತಿಥೇ ಕಾಲೇ ಸೇವಯಾ ಗೌತಮಸ್ಯ ವೈ ।
ಮನಃ ಸಂರಜ್ಞಯಾಮಾಸ ರೂಪಿಣೀ ಸಾ ಮನೋರಮಾ ॥೨೨॥
ಸಾನ್ನಿಧ್ಯಂ ಖಲು ನಾರೀಣಾಂ ರೂಪಿಣೀನಾಂ ಮಯೋಚ್ಯತಾಮ್ ।
ವಿರಕ್ತಾನಾಮಪಿ ದೃಢಂ ಮನಶ್ಚಾಞ್ಚಲ್ಯಕಾರಣಮ್ ॥೨೩॥
ಸ್ತ್ರೀಸಾನ್ನಿಧ್ಯಂ ವಿರಕ್ತಾನಾಂ ಸತಾಂ ದುರ್ಜನಸನ್ನಿಧಿಃ ।
ಮನಕ್ಷೋಭಕರಂ ತಸ್ಮಾತ್ ತತ್ಸಾನ್ನಿಧ್ಯಂ ವಿವರ್ಜಯೇತ್ ॥೨೪॥
ಗೌತಮಾಶ್ರಮಮಾಗಮ್ಯ ಕದಾಚಿತ್ ಪದ್ಮಸಮ್ಭವಃ ।
ಗೌತಮಸ್ಯ ಮನೋ ಜ್ಞಾತ್ವಾ ವಿವಾಹಮಕರೋದ್ವಿಧಿಃ ॥೨೫॥
ಇನ್ದ್ರಾಸ್ತತೋ ನಿರಾಶಃ ಸನ್ ವಿಘ್ನಾಯ ಯತತೇ ಪ್ರಭುಃ ।

ಸುವ್ರತಕ್ಕೂ ಸಮರ್ಥನಾದ-ಗೌತಮನೆಂಬ ಮುನಿಯನ್ನು ಕರೆದು, ಕಾಮರೂಪಿಣಿಯಾದ ಆ ಕನ್ಯೆಯನ್ನು ಅವನಿಗೆ ಕೊಟ್ಟನು ॥೧೪-೧೯॥

ವಿಷಯಾನುರಾಗರಹಿತನಾಗಿರುವ ಮಹಾತ್ಮನಾದ ಆ ಗೌತಮಮುನಿಯು ಚಿತ್ತವನ್ನು, ಆ ಲೋಕೋತ್ತರಸುಂದರಿಯಾದ ಅಹಲ್ಯೆಯು ವಿಕಾರಪಡಿಸಲಾರದವಳಾಗಿದ್ದಳು ॥೨೦॥

ಬ್ರಹ್ಮನೂ ಕೂಡ, ಹೀಗೆ ಗೌತಮನು ನಿಸ್ಪೃಹನಾಗಿಯೂ ವಿರಕ್ತನಾಗಿಯೂ ಇರುವುದನ್ನು ತಿಳಿದುಕೊಂಡೇ, ಯಾವ ತೊಂದರೆಯೂ ಇಲ್ಲದ ಅವನ ವಶದಲ್ಲಿ ಅವಳನ್ನು ಇಟ್ಟನು॥೨೧॥

ಬಳಿಕ, ಬಹುಕಾಲ ಕಳೆದುಹೋಗಲಾಗಿ, ಮಹಾರೂಪಶಾಲಿನಿಯಾದ ಆ ಸುಂದರಿಯು, ತನ್ನ ಸೇವಾಚಾತುರ್ಯದಿಂದ, ಗೌತಮನ ಮನಸ್ಸನ್ನು ತನ್ನಲ್ಲಿ ಅನುರಾಗಪಡುವಂತೆ ಮಾಡಿಕೊಂಡಳು॥

ಸುಂದರಿಯರಾಗಿಯೂ ಯೌವನವತಿಯರಾಗಿಯೂ ಇರುವ ಸ್ತ್ರೀಯರ ಸಾನ್ನಿಧ್ಯವು, ಎಂತಹ ವಿರಕ್ತರಾದವರಿಗೂ ಕೂಡ, ಮನಶ್ಚಾಂಚಲ್ಯಕ್ಕೆ ಕಾರಣವಾದುದು ॥೨೩॥

ವಿರಕ್ತರಾದವರಿಗೆ ಸ್ತ್ರೀಸಾನ್ನಿಧ್ಯವೂ, ಸಜ್ಜನರಿಗೆ ದುರ್ಜನಸಾನ್ನಿಧ್ಯವೂ, ಚಿತ್ತಕ್ಷೋಭೆಯನ್ನುಂಟುಮಾಡುವುವು. ಆದಕಾರಣ, ಇವರುಗಳ ಸಾನ್ನಿಧ್ಯವನ್ನು ಸುತರಾಂ ಪರಿಹರಿಸಬೇಕು ॥೨೪॥

ಹೀಗಿರುವಾಗ, ಒಂದು ಸಮಯದಲ್ಲಿ ಬ್ರಹ್ಮದೇವನು ಗೌತಮನ ಆಶ್ರಮಕ್ಕೆ ಬಂದು, ಗೌತಮನ ಮನಸ್ಸಿನ ಸ್ಥಿತಿಯನ್ನು ತಿಳಿದುಕೊಂಡು, ಅವರಿಬ್ಬರಿಗೂ ವಿವಾಹವನ್ನು ಮಾಡಿಬಿಟ್ಟನು ॥೨೫॥

ಅನಂತರ, ಇಂದ್ರನು ನಿರಾಶನಾಗಿಬಿಟ್ಟು, ಅವರಿಬ್ಬರನ್ನೂ ಅಗಲಿಸಬೇಕೆಂದು ವಿಶೇಷವಾಗಿ ಪ್ರಯತ್ನಮಾಡುತಿದ್ದನು ಅವನು ಎಷ್ಟು ಸಮರ್ಥನಾಗಿದ್ದರೂಕೂಡ, ಅವನಿಗೆ ಅವ

ಕದಾಪ್ಯಲಬ್ಧಾವಸರಃ ಜೋರವಾರ್ಗಮುಪಾಶ್ರಿತಃ ॥೨೬॥
ಗೌತಮಸ್ಯಾಶ್ರಮಗತಃ ಕುಕ್ಕುಟೋಽಭೂಚ್ಛತಕ್ರತುಃ
ರುರಾವಾಸಮಯೇ ಮೂಢೋ ವಜ್ಞಾ ನಾಯ ತಪಸ್ವಿನಃ ॥೨೭॥
ತತಉತ್ಥಾಯ ಶಯನಾತ್ ಕಾಲಲೋಪಭಯಾನ್ಮುನಿಃ
ದ್ರುತಂ ಚ ಪ್ರಯಯೌ ರಾಮ ಸ್ನಾನಾರ್ಥಂ ಸಜಲಾಶಯಮ್ ॥೨೮॥
ತಸ್ಯಾಸ್ತರಂ ವಿದಿತ್ವಾ ತು ಸಹಸ್ರಾಕ್ಷಃ ಶಚೀಪತಿಃ
ಮುನಿವೇಷಧರೋಽಹಲ್ಯಾಂ ಇದಂ ವಚನಮಬ್ರವೀತ್ ॥೨೯॥
ಭೋಭೋಸ್ತ್ರ ನಾಗತಂ ವಿದ್ಧಿ ತವ ಸೌಂದರ್ಯಮೋಹಿತಮ್
ಪಾಹಿ ಮಾಂ ಕೃಪಯಾ ದೃಷ್ಟ್ಯಾ ತನಸಙ್ಗಮಲೋಲುಪಮ್ ॥೩೦
ಋತುಕಾಲಂ ಪ್ರತೀಕ್ಷನ್ತೇ ನಾರ್ಥಿನಃ ಸುಸಮಾಹಿತೇ
ಸಙ್ಗಮಂ ತ್ವಹಮಿಚ್ಛಾಮಿ ತ್ವಯಾ ಸಹ ಸುಮಧ್ಯಮೇ ॥೩೧॥

ಕಾಶವೇ ಸಿಕ್ಕಲಿಲ್ಲ. ಆಗ ಜ್ಞಾನಹೀನನಾದ ಆ ಶತಮುಖನು, ಜೋರವಮಾರ್ಗವನ್ನವಲಂಬಿಸಿ, ಗೌತಮನ ಆಶ್ರಮಕ್ಕೆ ಒಂದು, ಆ ತಪಸ್ವಿಯನ್ನು ವಂಚಿಸುವುದಕ್ಕಾಗಿ, ಕೋಳಿಯ ರೂಪವನ್ನು ಧರಿಸಿಕೊಂಡು, ಅಕಾಲದಲ್ಲಿ (ಇನ್ನೂ ಸ್ನಾನಕಾಲ ಬರದಿರುವಾಗಲೇ-ಮಧ್ಯರಾತ್ರಿಯಲ್ಲಿ) ಕೂಗಿಕೊಂಡನು ॥೨೬-೨೯॥

ಅಯ್ಯಾ! ರಾಮ! ಅನಂತರ, ಆ ಗೌತಮಮುನಿಯು ಕರ್ಮಕಾಲ ಲೋಪವಾದೀತೆಂಬ ಭಯದಿಂದ, ಹಾಸಿಗೆಯನ್ನು ಬಿಟ್ಟು ಎದ್ದು, ಸ್ನಾನಕ್ಕೋಸ್ಕರ ತನ್ನ ಆಶ್ರಮದಿಂದ ಜಲಾಶಯವನ್ನು ಕುರಿತು ಬೇಗನೆ ಹೊರಟುಹೋದನು. ॥೨೭॥

ಆಗ ಶಚೀಪತಿಯಾದ ಮಹೇಂದ್ರನು, ಆ ಅವಕಾಶವನ್ನು ಕಂಡವನಾಗಿ, ಗೌತಮ ಮುನಿಯ ವೇಷವನ್ನು ಧರಿಸಿಕೊಂಡು ಆಶ್ರಮದೊಳಕ್ಕೆ ಒಂದು, ಅಹಲ್ಯೆಯನ್ನು ಕುರಿತು ಹೀಗೆ ಹೇಳಿದನು ॥೨೯॥

ಹೇ ಸುಂದರಿ! ನಾನು ಮಹೇಂದ್ರನು. ನಿನ್ನ ಸೌಂದರ್ಯದಿಂದ ಮೋಹಿತನಾಗಿ ಇಲ್ಲಿಗೆ ಬಂದಿರುವೆನೆಂದು ತಿಳಿ. ನಿನ್ನ ಸಮಾಗಮದಲ್ಲಿ ಅಸಕ್ತನಾಗಿ ಕಳವಳಪಡುತಿರುವ ನನ್ನನ್ನು, ಕೃಪಾಪೂರ್ವಕವಾದ ದರ್ಶನದಿಂದ ರಕ್ಷಿಸು ॥೩೦॥

ಎಲೌ ಅಹಲ್ಯೆ! ನೀನು ಮಹಾನಿಯಮಶೀಲಳೆಂದು ನಾನು ಬಲ್ಲೆನು. (೧) ಋತುಕಾಲದಲ್ಲಿಯೇ ಸ್ತ್ರೀಪುರುಷರು ಸಮಾಗಮವನ್ನನುಭವಿಸಬೇಕೆಂಬ ಶಾಸ್ತ್ರವಿಧಿಯನ್ನೂ, ನಿನಗೆ ಈಗ ಆ ಋತುಕಾಲವಿಲ್ಲವೆಂಬುದನ್ನೂ ನಾನು ಬಲ್ಲೆನು ಆದರೆ, ಕಾಮಿಗಳಾದವರು ಋತುಕಾಲವನ್ನು ನಿರೀಕ್ಷಿಸಲಾರರು. ಅದುಕಾರಣ, ಎಲೌ ಮಸೋರವೆ! ನಾನು ಈಗಲೇ ನಿನ್ನೊಡನೆ ಸಮಾಗಮವನ್ನು ಬಯಸುತ್ತಿರುವೆನು ॥೩೧॥

---

(೧) ಸ್ತ್ರೀಯರು ಬಹಿಷ್ಠೆಯಾರಾದ ಹದಿನಾರು ದಿವಸಗಳು ಮಾತ್ರವೇ **ಋತುಕಾಲವೆಂದೂ**, ಅದು ರಿಗೆ ಮಾತ್ರ ವೇ ಅವರು ಭೋಗಕ್ಕೆ ಅರ್ಹರೆಂದೂ ವಿಧಿಯಿರುವುದು. ಆದರಲ್ಲಿಯೂ ಮೊದಲು ನಾಲ್ಕು ದಿವಸಗಳು ರಿಷ್ಠಗಳು. ಅವೇಲೆ ಉಳಿದ ೧೦ ದಿವಸಗಳಲ್ಲಿ ನಿಷಿದ್ಧ ತಿಥಿ ನಕ್ಷತ್ರಾದಿಗಳನ್ನು ಬಿಟ್ಟು, ಮಿಕ್ಕ ದಿವಸಗಳಲ್ಲಿ ಅವರು ಪುರುಷರ ಭೋಗಕ್ಕೆ ಅರ್ಹರೆಂದು ಶಾಸ್ತ್ರವಿರುವುದು.

ಮುನಿವೇಷಂ ಸಹಸ್ರಾಕ್ಷಂ ವಿಜ್ಞಾಯ ರಘುನನ್ದನ ।
ಮತಿಂ ಚಕಾರ ದುರ್ಮೇಧಾಃ ದೇವರಾಜಕುತೂಹಲಾತ್ ॥೨೦॥

ಅಥಾಬ್ರವಿತ್ ಸಹಸ್ರಾಕ್ಷಂ ಕೃತಾರ್ಥೋಽನಾನ್ತರಾತ್ಮನಾ ।
ಕೃತಾರ್ಥೋಽಸಿ ಸುರಶ್ರೇಷ್ಠ ಗಚ್ಛ ಶೀಘ್ರಮಿತಃ ಪ್ರಭೋ ॥೨೧॥

ಏವಂ ಸಙ್ಗಮ್ಯ ತಂ ತಯಾ ನಿಶ್ಚಕ್ರಾಮೋಟಜಾತ್ ಪುನಃ ।
ಸ ಸಮ್ಭ್ರಮಾತ್ ಪರಂ ರಾಮ ಶಙ್ಕಿತೋ ಗೌತಮಂ ಪ್ರತಿ ॥೨೪॥

ಗೌತಮಂ ಸಂದದರ್ಶಾಥ ಪ್ರವಿಶನ್ತಂ ಮಹಾಮುನಿಮ್ ।
ದೃಷ್ಟ್ವಾ ಸುರಪತಿಸ್ತ್ರಸ್ತೋ ವಿಷಣ್ಣವದನೋಽಭವತ್ ॥೨೫॥

ಅಥ ದೃಷ್ಟ್ವಾ ಸಹಸ್ರಾಕ್ಷಂ ಮುನಿವೇಷಧರಂ ಮುನಿಃ ।
ದುರ್ವೃತ್ತಂ ವೃತ್ತಸಮ್ಪನ್ನೋ ರೋಷಾದ್ವಚನಮಬ್ರವೀತ್ ॥೨೬॥

ಅಗಮ್ಯಾಗಮನಾದಿನ್ದ್ರ ಮುನಿಪತ್ನ್ಯಾಶ್ಚ ದರ್ಷಣಾತ್ ।
ವಿಚಿತ್ತೋ ನಪುಂಸೋ ಭೂತ್ವಾ ಸಹಸ್ರಭಗಚಿಹ್ನಿತಃ ॥೨೭॥

ತಸ್ಮಾತ್ ತ್ವಂ ಸಮರೇ ಶಕ್ರ ಶತ್ರೂಣಾಂ ಗಮಿಷ್ಯಸಿ ।
ಚರಸ್ವ ದುರ್ಭಗೋ ಭೂತ್ವಾ ಮಮ ಕೋಪಾಗ್ನಿದಾಹಿತಃ ॥೨೮॥

ಅಯ್ಯಾ! ರಾಮ! ಈರೀತಿಯಾಗಿ ಹೇಳುತಿರುವ ಇಂದ ನನ್ನು ನೋಡಿ, ಮುನಿಯ ವೇಷವನ್ನು ಧರಿಸಿಕೊಂಡು ಇಂದ್ರನೇ ಬಂದಿರುವನೆಂದು ತಿಳಿದರೂ ಕೂಡ, ದುರ್ಬುದ್ಧಿಯಾದ ಅಹಲ್ಯೆಯು, ದೇವರಾಜನೆಂಬ ಕುತೂಹಲದಿಂದ, ಸಮ್ಮತಿಯನ್ನು ಕೊಟ್ಟುಬಿಟ್ಟಳು ॥೨೨॥

ಬಳಿಕ, ಸಮಾಗಮಾನಂತರದಲ್ಲಿ, ಅವಳು ತನ್ನನ್ನು ಕೃತಾರ್ಥಳನ್ನಾಗಿ ತಿಳಿದುಕೊಂಡು, ಇಂದ್ರನನ್ನು ಕುರಿತು 'ಪ್ರಭೋ! ಸುರಶ್ರೇಷ್ಠ! ಈಗ ನೀನು ಕೃತಕೃತ್ಯನಾದೆ. ಇನ್ನು ಇಲ್ಲಿ ನಿಲ್ಲದೇಡ. ಬೇಗನೆ ಇಲ್ಲಿಂದ ಹೊರಟುಹೋಗು' ಎಂದು ಹೇಳಿದಳು ॥೨೩॥

ಅಯ್ಯಾ! ರಾಮ! ಈರೀತಿಯಾಗಿ ಆ ಮಹೇಂದ್ರನು ಅವಳೊಡನೆ ಸಮಾಗಮ ಮಾಡಿ, ಗೌತಮನಿಗೆ ವಿಶೇಷವಾಗಿ ಹೆದರಿಕೊಂಡು, ಮಹಾಸಂಭ್ರಮಯುಕ್ತನಾಗಿ, ಆ ಪರ್ಣಶಾಲೆಯಿಂದ ಹೊರಕ್ಕೆ ಹೊರಟನು ॥೨೪॥

ಇಷ್ಟರೊಳಗಾಗಿ, ಸ್ನಾನಕ್ಕೆಂದು ಹೋಗಿದ್ದ ಗೌತಮ ಮುನಿಯು ಆಶ್ರಮಕ್ಕೆ ಹಿಂದಿರುಗಿ ಬಂದನು. ಆಗ ಇಂದ್ರನು ಆಶ್ರಮದೊಳಕ್ಕೆ ಪ್ರವೇಶಿಸುತಿರುವ ಗೌತಮ ಮುನಿಯನ್ನು ಕಂಡು, ಮಹಾಭಯಗ್ರಸ್ತನಾಗಿ, ಮುಖವನ್ನು ಜೋಲುಬಿಟ್ಟುಕೊಂಡನು ॥೨೫॥

ಬಳಿಕ, ಮಹಾತ್ಮನಾದ ಆ ಗೌತಮನು, ಮುನಿವೇಷಧರನಾಗಿ ಬಂದಿರುವ ದುರ್ವೃತ್ತನಾದ ಮಹೇಂದ್ರನನ್ನು ನೋಡಿ, ಕೋಪವಿಂದ ಈ ಮಾತನ್ನು ಹೇಳಿದನು ॥೨೬॥

ಎಲೈ ಇಂದ್ರ! ನೀನು, ಅಗಮ್ಯಾಗಮನಮಾಡಿದುದರಿಂದಲೂ, ಋಷಿಪತ್ನಿಯನ್ನು ಕೆಡಿಸಿದುದರಿಂದಲೂ, ಛಿನ್ನವೃಷಣನಾಗಿ-ಸಹಸ್ರಯೋನಿಚಿಹ್ನಿತನಾಗುವೆ ॥೨೭॥

ಎಲಾ ಶಕ್ರ! ಈ ದೋಷದಿಂದಲೇ, ನೀನು ಯುದ್ಧರಂಗದಲ್ಲಿ ಶತ್ರುಗಳ ಕೈಗೆ ಸಿಕ್ಕಿಕೊಂಡು ನೆರಳುವೆ. ನೀನು, ನನ್ನ ಕೋಪಾಗ್ನಿಯಿಂದ ಸುಡಲ್ಪಟ್ಟವನಾಗಿ, ಮಹಾಸಂಕಟಯುಕ್ತನಾಗಿ ಅಲ್ಲಲ್ಲೆ ಅಲೆದಾಡುತಿರು ॥೨೮॥

ಇತಿ ಶಪ್ತ್ವಾ ಚ ದೇವೇಂದ್ರಂ ಭಾರ್ಯಾಮೆಪಿ ಚ ಶಪ್ತವಾನ್ ।
ದಶ ವರ್ಷಸಹಸ್ರಾಣಿ ಪಾಷಾಣತ್ವಮುಪಾಗತಾ ॥೫೯॥
ವಾಯುಭಕ್ಷಾ ನಿರಾಹಾರಾ ತಪ್ಯಸ್ತೀ ಭಸ್ಮಶಾಯಿನೀ ।
ಅದೃಶ್ಯಾ ಸರ್ವಭೂತಾನಾಂ ಆಶ್ರಮೇಸ್ಮಿನ್ ನಿವತ್ಸ್ಯಸಿ ॥೪೦॥
ಆತಪಾನಿಲವರ್ಷಾದಿಸಹಿಷ್ಣುಃ ಪರಮೇಶ್ವರಮ್ ।
ಧ್ಯಾಯನ್ತೀ ರಾಮಮೇಕಾಗ್ರಮನಸಾ ಹೃದಿ ಸಂಸ್ಥಿತಮ್ ॥೪೧॥
ಏವಂ ವರ್ಷಸಹಸ್ರೇಷು ಗತೇಷು ರಘುನನ್ದನಃ ।
ಆಗಮಿಷ್ಯತಿ ತತ್ಪಾದರಜಸಾ ಶುದ್ಧಾ ಮೇಷ್ಯಸಿ ॥೪೨॥
ತಸ್ಯಾತಿಥ್ಯೇನ ದುರ್ವೃತ್ತೇ ಲೋಭಮೋಹವಿವರ್ಜಿತಾ ।
ತತ್ಪ್ರಸಾದಾತ್ ಪೂರ್ವವನ್ಮೇ ಶುಶ್ರೂಷಣಪರಾ ಭವ ॥೪೩॥
ಇತ್ಯುಕ್ತ್ವಾ ಗೌತಮಃ ಪ್ರಾಗಾತ್ ತಪಃ ಕರ್ತುಂ ಹಿಮಾಚಲಮ್ ।
ತಸ್ಮಾದ್ರಾಘವ ತಾಂ ನಾರೀಂ ಪಾವಯಸ್ವ ವಿಧೇಃ ಸುತಾಮ್ ॥೪೪॥

ಇತಿ ಶ್ರೀ ಬಾಲಕಾಣ್ಡೇ ಇನ್ದ್ರಾಹಲ್ಯಯೋಃ ಶಾಪಪ್ರದಾನವರ್ಣನಂ ನಾಮ
ಪಞ್ಚವಿಂಶಃ ಸರ್ಗಃ.

ಅಯ್ಯಾ! ರಾಮ! ಆ ಮುನೀಂದ್ರನು ಇಂದ್ರನಿಗೆ ಈರೀತಿಯಾಗಿ ಶಾಪವನ್ನು ಕೊಟ್ಟು, ತನ್ನ ಹೆಂಡತಿಗೂ ಹೀಗೆ ಶಾಪಕೊಟ್ಟನು:—ಎಲೌ ದುಷ್ಟೆ! ನೀನು ಹತ್ತುಸಾವಿರವರ್ಷಕಾಲ ಶಿಲಾವಸ್ಥೆಯನ್ನು ಹೊಂದಿ, ವಾಯುಭಕ್ಷಳಾಗಿಯೂ ನಿರಾಹಾರಳಾಗಿಯೂ ಸಂತಾಪಪಡುತ, ಬೂದಿಯಲ್ಲಿ ಬಿದ್ದು ಹೊರಳುತ, ಯಾವ ಪ್ರಾಣಿಗೂ ಕಾಣಿಸಿಕೊಳ್ಳದೆ, ಈ ಆಶ್ರಮದಲ್ಲಿ ವಾಸ ಮಾಡಿಕೊಂಡಿರು ॥೩೯-೪೦॥

ಬಿಸಿಲು ಗಾಳಿ ಮಳೆಗಳನ್ನು ಸಹಿಸಿಕೊಂಡು, ಮನಸ್ಸಿನಲ್ಲಿ ವಾಸಮಾಡುತಿರುವ ಪರಮೇಶ್ವರನಾದ ಶ್ರೀರಾಮಚಂದ್ರನನ್ನು ಧ್ಯಾನಮಾಡುತಿರು ॥೪೧॥

ಹೀಗೆ ಸಾವಿರಾರು ವರ್ಷಗಳು ಕಳೆದನಂತರ, ಶ್ರೀರಾಮನು ಇಲ್ಲಿಗೆ ಬರುವನು; ಆಗ ಅವನ ಪಾದಧೂಳಿಯಿಂದ ನೀನು ಪರಿಶುದ್ಧಳಾಗುವೆ ॥೪೨॥

ಎಲೌ ದುರ್ವೃತ್ತೆ! ನೀನು, ಆ ಶ್ರೀರಾಮನಿಗೆ ಅತಿಥಿಸತ್ಕಾರ ಮಾಡಿ, ಅದರ ಮಹಿಮೆಯಿಂದ ಲೋಭ ಮೋಹಗಳನ್ನು ಬಿಟ್ಟವಳಾಗಿ, ಆ ಶ್ರೀರಾಮನ ಅನುಗ್ರಹದಿಂದ ಮತ್ತೆ ಮೊದಲಿನಂತೆ ನನ್ನ ಸೇವೆಯಲ್ಲಿ ನಿರತಳಾಗುವೆ ॥೪೩॥

ಅಯ್ಯಾ! ರಾಘವ! ಹೀಗೆಂದು ಹೇಳಿಬಿಟ್ಟು, ಆ ಗೌತಮನು ತಪಸ್ಸಿಗೋಸ್ಕರವಾಗಿ ಹಿಮವತ್ಪರ್ವತಕ್ಕೆ ಹೊರಟುಹೋದನು. ಆದುದರಿಂದ, ಬ್ರಹ್ಮವೃತ್ತಿಯಾದ ಅಹಲ್ಯೆಯನ್ನು ನೀನು ಈಗ ಪರಿಶುದ್ಧ ಮಾಡಬೇಕಾಗಿರುವುದು.—ಎಂದು ಶ್ರೀ ವಿಶ್ವಾಮಿತ್ರಮುನಿಯು ಶ್ರೀರಾಮನಿಗೆ ಹೇಳಿದನು ॥೪೪॥

ಇದು ಬಾಲಕಾಂಡದಲ್ಲಿ ಇಂದ್ರಾಹಲ್ಯೆಯರ ಶಾಪಪ್ರದಾನವರ್ಣನೆಯೆಂಬ
ಇಪ್ಪತ್ತೈದನೆಯ ಸರ್ಗವು.

ಅಥ ಶ್ರೀ ಬಾಲಕಾಣ್ಡೇ ಷಡ್ವಿಂಶಃ ಸರ್ಗಃ

ಶ್ರೀ ಶಿವ ಉವಾಚ.

ತತೋ ನಿಶ್ಚಿತ್ಯ ಶಾಪಾನ್ತಂ ರಾಮಃ ಕಮಲಲೋಚನಃ ।
ಸ್ವಪಾದರಜಸಾ ನಾರೀಂ ಚಕಾರ ರಘುನನ್ದನಃ ॥೧॥
ರಾಘವೌ ಚ ತತಸ್ತಸ್ಯಾಃ ಪಾದೌ ಜಗೃಹತುರ್ಮುದಾ ।
ಸ್ಮರನ್ತೀ ಗೌತಮವಚಃ ಪ್ರತಿಜಗ್ರಾಹ ಸಾ ಚ ತೌ ॥೨॥
ಪಾದ್ಯಮರ್ಘ್ಯಂ ತಥಾತಿಥ್ಯಂ ಚಕಾರ ಸುಸಮಾಹಿತಾ ।
ಪುಷ್ಪವೃಷ್ಟಿರ್ಮಹತ್ಯಾಸೀತ್ ದೇವದುನ್ದುಭಿನಿಸ್ವನಃ ॥೩॥
ತತೋ ದೃಷ್ಟ್ವಾ ರಘುಶ್ರೇಷ್ಠಂ ಪೀತಕೌಶೇಯವಾಸಸಮ್ ।
ಧನುರ್ಬಾಣಧರಂ ರಾಮಂ ಸೌಮಿತ್ರಿಣಾಭಿಸೇವಿತಮ್ ॥೪॥
ಸ್ಮಿತವಕ್ತ್ರಂ ಪದ್ಮನೇತ್ರಂ ಶ್ರೀವತ್ಸಾಙ್ಕಿತವಕ್ಷಸಮ್ ।
ಭಾಸ್ವತ್ಕಿರೀಟಸಂಜುಷ್ಟಂ ಕಟಿಸೂತ್ರೋಪಶೋಭಿತಮ್ ॥೫॥
ಸರ್ವಾಙ್ಗಸುನ್ದರಂ ದೇವಂ ಯೋಗಿಧ್ಯೇಯಂ ಸನಾತನಮ್ ।
ನೀಲಮಾಣಿಕ್ಯಸಙ್ಕಾಶಂ ದ್ಯೋತಯನ್ತಂ ದಿಶೋ ದಶ ॥೬॥

ಬಾಲಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸುವನು: –

ಎಲೌ ಪಾರ್ವತಿ! ಈರೀತಿಯಾಗಿ ವಿಶ್ವಾಮಿತ್ರನಿಂದ ಉಕ್ತವಾದ ಮಾತನ್ನು ಕೇಳಿದ ಒಳಿಕ, ಆ ಶ್ರೀರಾಮನು, ಅಹಲ್ಯೆಗೆ ಶಾಪವಿಮೋಚನ ಮಾಡಬೇಕೆಂದು ನಿಶ್ಚಯಿಸಿಕೊಂಡು, ಶಿಲಾರೂಪದಲ್ಲಿದ್ದ ಅವಳನ್ನು ತನ್ನ ಪಾದಧೂಳಿಯಿಂದ ಪುನಃ ಸ್ತ್ರೀರೂಪಧಾರಿಣಿಯನ್ನಾಗಿ ಮಾಡಿದನು ॥೧॥

ಅನಂತರ, ಆ ರಾಮಲಕ್ಷ್ಮಣರಿಬ್ಬರೂ ಸಂತೋಷದಿಂದ ಅವಳಿಗೆ ನಮಸ್ಕಾರ ಮಾಡಿದರು. ಅವಳೂ ಕೂಡ, ಗೌತಮಮುನಿಯು ಮಾತನ್ನು ಸ್ಮರಿಸಿಕೊಂಡು, ಅವರಿಬ್ಬರನ್ನೂ ಆದರದಿಂದ ಸತ್ಕರಿಸಿದಳು. ಮಹಾನಿಯಮಯುಕ್ತಳಾಗಿ, ಅವರಿಬ್ಬರಿಗೂ ಪಾದ್ಯವನ್ನೂ ಅರ್ಘ್ಯವನ್ನೂ ಆತಿಥ್ಯವನ್ನೂ ಸಮರ್ಪಿಸಿದಳು ಆಗ, ಅಧಿಕವಾದ ಪುಷ್ಪವೃಷ್ಟಿಯೂ ದೇವದುಂದುಭಿಧ್ವನಿಯೂ ಆದುವು ॥೨—೩॥

ಆ ಒಳಿಕ, ಪೀತಾಂಬರಧರನಾಗಿಯೂ, ಧನುರ್ಬಾಣಧರನಾಗಿಯೂ, ಲಕ್ಷ್ಮಣನಿಂದಲೂ ಮುನಿಗಳಿಂದಲೂ ಸೇವಿತನಾಗಿಯೂ, ಮುಖದಲ್ಲಿ ಮಂದಹಾಸಯುತನಾಗಿಯೂ, ಕಮಲನೇತ್ರನಾಗಿಯೂ, ಶ್ರೀವತ್ಸದಿಂದ ವಿರಾಜಿಸುವ ವಕ್ಷಸ್ಥಳವುಳ್ಳವನಾಗಿಯೂ, ದಿವ್ಯವಾದ ಕಿರೀಟವನ್ನು ಧರಿಸಿದವನಾಗಿಯೂ, ಕಟಿಸೂತ್ರದಿಂದ ಶೋಭಿತನಾಗಿಯೂ, ಸರ್ವಾವಯವಸುಂದರನಾಗಿಯೂ, ಯೋಗಿಗಳಿಗೆ ಧ್ಯೇಯನಾಗಿಯೂ, ಸನಾತನನಾಗಿಯೂ, ಇಂದ್ರನೀಲಮಣಿಸದೃಶನಾ

ತಪಸಾ ರಾಘವಂ ಸ್ವಸ್ಯಃ ಜ್ಞಾತ್ವಾ ನಾರಾಯಣಂ ವಿಭುಮ್ ॥
ಹರ್ಷಾಶ್ರುಜಲನೇತ್ರಾಸ್ತಾ ಸ್ತೋತುಂ ಸಮುಪಚಕ್ರಮೆ ॥೩॥

ಅಹಲ್ಯೋವಾಚ.

ಅಹೋ ಕೃತಾರ್ಥಾಸ್ಮಿ ಜಗನ್ನಿವಾಸ ತೇ
ಪದಾಬ್ಜಸಂಲಗ್ನರಜಃಕಣಾದಹಮ್ ।
ಸ್ಪೃಶಾಮಿ ಯತ್ ಪದ್ಮಜಶಕ್ರರಾದಿಭಿಃ
ವಿಮೃಗ್ಯತೇ ರಜ್ಞಾ ತವಾನಸೈಃ ಸದಾ ॥೪॥
ಅಹೋ ವಿಚಿತ್ರಂ ತವ ರಾಮ ಚೇಷ್ಟಿತಂ
ಮನುಷ್ಯಭಾವೇನ ವಿಮೋಹಿತಂ ಜಗತ್ ।
ಚಲಸ್ವಜಸ್ರಂ ಚಲನಾದಿವರ್ಜಿತಃ
ಸಮ್ಪೂರ್ಣಆನನ್ದಮಯೋತಿಮಾಯಕಃ ॥೫॥
ಯತ್ಪಾದಪದ್ಮಜಪರಾಗಪವಿತ್ರಗಾತ್ರಾ
ಭಾಗೀರಥೀ ಭವವಿರಿಞ್ಚಿ ಮುಖ್ಯಾ ಪುನಾತಿ ।
ಸಾಕ್ಷಾತ್ ಸವಿವ ಮಮ ದೃಗ್ವಿಷಯೋ ಯದಾಸ್ತೇ
ಕಿಂ ವರ್ಣ್ಯತೇ ಮನು ಪುರಾಕೃತಭಾಗಧೇಯಮ್ ॥೦॥

ಗಿಯೂ, ತನ್ನ ತೇಜಸ್ಸಿನಿಂದ ದಶದಿಕ್ಕುಗಳನ್ನೂ ಬೆಳಗತಕ್ಕವನಾಗಿಯೂ ಇರುವ ಆ ಶ್ರೀರಾ ಮನನ್ನು ನೋಡಿ, ಅಹಲ್ಯೆಯು. ತನ್ನ ತಪೋಮಹಿಮೆಯಿಂದ, ಆ ಶ್ರೀರಾಮನನ್ನು ಸಾಕ್ಷಾನಾ ರಾಯಣನೆಂದು ತಿಳಿದುಕೊಂಡು, ಆನಂದಬಾಷ್ಪಪರಿಪೂರಿತನೇತ್ರಳಾಗಿ, ಆ ರಾಘವನನ್ನು ಸ್ತೋತ್ರಮಾಡಲುಪಕ್ರಮಿಸಿದಳು ॥೪—೭॥

ಅಹಲ್ಯೆ ಮಾಡಿದ ಸ್ತೋತ್ರವೇನೆಂದರೆ:—

ಸಮಸ್ತ ಲೋಕಕ್ಕೂ ಅಶ್ರಯಭೂತನಾದ ಶ್ರೀರಾಮನೆ! ನಿನ್ನ ಪಾದಕಮಲದಧೂಳಿ ಯಿಂದ ನಾನು ಕೃತಕೃತ್ಯಳಾದೆನು. ಯಾವ ಪಾದಧೂಳಿಯನ್ನು, ಬ್ರಹ್ಮಮಹೇಶ್ವರಾದಿಗಳೆಲ್ಲರೂ ಸರ್ವದಾ ಏಕಾಗ್ರಚಿತ್ತರಾಗಿ ಹುಡುಕುವರೋ, ಅಂತವನಪಾದಧೂಳಿಯ ಸಂದರ್ಶನವನ್ನು ನಾನು ಪಡೆದವಳಾದೆನು ॥೪॥

ಹೇ ರಾಮ! ಅಹಹ! ನಿನ್ನ ವಿಲಾಸವು ಅತಿ ವಿಚಿತ್ರವಾಗಿರುವುದು! ನೀನು ಮನುಷ್ಯಾ ವತಾರವಾಡಿ ಪ್ರಪಂಚವನ್ನೆಲ್ಲ ಮೋಹಗೊಳ್ಳಿಸುತಿರುವೆಯಲ್ಲ! ನೀನು, ಸರ್ವದಾ ಚಲನಾದಿ ಶೂನ್ಯನಾಗಿ ಚಿದ್ಘನನಾಗಿ ಆನಂದಮಯನಾಗಿ ಮಾಯಾತೀತನಾಗಿದ್ದರೂ, ಚಲನವನ್ನನುಭವಿ ಸುತಿರುವಂತೆ ಕಾಣುವೆಯಲ್ಲವೆ ॥೫॥

ಯಾವ ಶ್ರೀಮನ್ಮಹಾವಿಷ್ಣುವಿನ ಪಾದಕಮಲಧೂಳಿಯಿಂದ ಪವಿತ್ರಳಾಗಿ ಗಂಗೆಯು ಬ್ರಹ್ಮ ಶಿವ ಮೊದಲಾದವರನ್ನೆಲ್ಲ ಪವಿತ್ರಗೊಳ್ಳಿಸುತ್ತಿರುವುದೋ, ಅಂತಹ ಶ್ರೀ ಮಹಾವಿಷ್ಣುವೇ ನನಗೆ ಪ್ರತ್ಯಕ್ಷವಾಗಿ ದರ್ಶನಕೊಡುತ್ತಿರುವಾಗ, ನನ್ನ ಪೂರ್ವಜನ್ಮದ ಸುಕೃತ ವಿಶೇಷವನ್ನು ಎಷ್ಟೆಂದು ವರ್ಣಿಸುವುದು? ॥೧೦॥

ಮತ್ಸ್ಯಾವತಾರೇ ಮನುಜಾಕೃತಿಂ ಹರಿಂ ರಾಮಾವತಾರಂ ರಮಣೀಯದೇಹಿನಮ್ ।
ಧನುರ್ಧರಂ ಪದ್ಮವಿಶಾಲಲೋಚನಂ ಭಜಾಮಿ ನಿತ್ಯಂ ನ ಪರಾಂ ಭಜಿಷ್ಯೇ ॥ ೧೧ ॥
ಯತ್ಪಾದಪದ್ಮಜರಜಃ ಶ್ರುತಿಭಿರ್ವಿಮೃಗ್ಯಂ ಯನ್ನಾಭಿಪದ್ಮಜಭವಃ ಕಮಲಾಸನಶ್ಚ ।
ಯನ್ನಾಮಸಾರರಸಿಕೋಽಭಗವಾನ್ಪುರಾರಿಸ್ತಂರಾಮಚಂದ್ರಮನಿಶಂ ಹೃದಿಜಿಹ್ನಯಾಮಿ ॥ ೧೨ ॥
ಯಸ್ಯಾವತಾರಚರಿತಾನಿ ವಿರಿಞ್ಚಿಲೋಕೇ ಗಾಯಂತಿ ನಾರದಮುಖಾಭವಪದ್ಮಜಾದ್ಯಾಃ
ಆನಂದಜಾಶ್ರುಪರಿಷಿಕ್ತ ಕುಚಾಗ್ರಸೀಮಾ ವಾಗೀಶ್ವರೀ ಚ ತಮಹಂ ಶರಣಂ ಪ್ರಪದ್ಯೇ ॥ ೧೩
ಸೋಯಂ ಪರಾತ್ಮಾ ಪುರುಷಃ ಪುರಾಣಃ ಏಕಃ ಸ್ವಯಂಜ್ಯೋತಿರನಂತ ಆದ್ಯಃ ।
ಮಾಯಾತನುಂ ಲೋಕವಿಮೋಹನೀಂ ಯೋಽಧತ್ತೇ ಪರಾನುಗ್ರಹಏಷ ರಾಮಃ ॥ ೧೪ ॥
ಅಯಂ ಹಿ ವಿಶ್ವೋದ್ಭವಸಂಯಮಾನಾಂ ಹೇತುಃ ಸ್ವಮಾಯಾಗುಣಬಿಂಬಿತೋಜಃ ।
ವಿರಿಞ್ಚಿವಿಷ್ಣ್ವೀಶ್ವರನಾಮಭೇದಾಂ ಧತ್ತೇ ಸ್ವತನ್ತ್ರಃ ಪರಿಪೂರ್ಣಆತ್ಮಾ ॥ ೧೫ ॥

ಶ್ರೀ ಪರಮಾತ್ಮನು ಮಾಡಿದ ಮನುಷ್ಯಾವತಾರಗಳಲ್ಲೆಲ್ಲ ಅತಿ ಪ್ರಶಸ್ತವೆನ್ನಿಸಿಕೊಂಡು ಮನುಜಕ್ರವರ್ತಿಯ ವಂಶಕ್ಕೆ ಅಲಂಕಾರಪ್ರಾಯನಾಗಿ ಅವತರಿಸಿರುವ-ಧನುರ್ಧರನಾದ-ಪುಂಡರೀಕಾಕ್ಷನಾದ-ರಾಮರೂಪನಾಗಿ ಬಂದಿರುವ ಶ್ರೀಹರಿಯೊಬ್ಬನನ್ನೇ ನಾನು ಭಜಿಸುವೆನಲ್ಲದೆ, ಮತ್ತಾರನ್ನೂ ಭಜಿಸುವುದಿಲ್ಲ ॥೧೧॥

ಯಾವನ ಪಾದಕಮಲಧೂಳಿಯನ್ನು ಸಮಸ್ತ ವೇದಗಳೂ ಹುಡುಕುತ್ತಿರುವುವೋ, ಸಾಕ್ಷಾಚ್ಛತುರ್ಮುಖನು ಯಾವನ ನಾಭಿಕಮಲದಿಂದ ಉದಯಿಸಿದವನೋ, ಯಾವನ ನಾಮಕೀರ್ತನದಲ್ಲಿರುವ ರುಚಿಯನ್ನು ಆ ಭಗವಂತನಾದ ಪರಮೇಶ್ವರನೊಬ್ಬನೇ ಬಲ್ಲವನೋ, ಅಂತಹ ರಾಮಚಂದ್ರನನ್ನು ನಾನು ಸರ್ವದಾ ಹೃದಯದಲ್ಲಿ ಧ್ಯಾನಿಸುವೆನು ॥೧೨॥

ಬ್ರಹ್ಮಲೋಕದಲ್ಲಿ, ನಾರದ ತುಂಬುರು ಮೊದಲಾದ ದೇವರ್ಷಿಗಳೂ-ಬ್ರಹ್ಮರುದ್ರ ಮೊದಲಾದ ದೇವತೆಗಳೂ-ಆನಂದಬಾಷ್ಪದಿಂದ ಸ್ತನಾಗ್ರವನ್ನು ನೆನೆಯಿಸಿಕೊಂಡಿರುವ ಶ್ರೀ ಸರಸ್ವತಿಯೂ ಕೂಡ ಸರ್ವದಾ ಗಾನಮಾಡುತ್ತಿರುವರೋ, ಅಂತಹ ಶ್ರೀರಾಮನನ್ನು ನಾನು ಶರಣುಹೊಕ್ಕಿರುವೆನು ॥೧೩॥

ನನ್ನೆದುರಿಗೆ ಇಲ್ಲಿ ಪ್ರತ್ಯಕ್ಷನಾಗಿ ಬಂದಿರುವ ಈ ಮಹಾತ್ಮನು, ಸಾಕ್ಷಾತ್ ಪುರಾಣ ಪುರುಷನು; ಅದ್ವಿತೀಯನಾದವನು; ಸ್ವಯಂಪ್ರಕಾಶನು; ಅನಂತನು; ಆದ್ಯನು: ಯಾವ ಮಹಾನುಭಾವನು, ಲೋಕಾನುಗ್ರಹಾರ್ಥವಾಗಿ ವಿಶ್ವಮೋಹಿನಿಯಾದ ಮಾಯಾಶರೀರವನ್ನು ಧರಿಸುವನೋ, ಅಂತಹ ಪರಾತ್ಪರ ಪುರುಷನು ಈ ಶ್ರೀರಾಮನೇಯೆ ॥೧೪॥

ಪ್ರಪಂಚದ ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಇವನೇ ಕಾರಣಭೂತನು, ಸ್ವಯಂಜ್ಯೋತಿಸ್ವರೂಪನಾದವನು; ತನ್ನ ಮಾಯೆಯಲ್ಲಿ ಪ್ರತಿಬಿಂಬಿಸಿ, ಸತ್ವಾದಿ ಗುಣತ್ರಯಸಂಬಂಧದಿಂದ ವಿಷ್ಣು ಬ್ರಹ್ಮ ರುದ್ರರೆಂಬ ನಾಮಧೇಯವನ್ನು ಪಡೆಯುವನು. ವಸ್ತುತಃ ಇವನು ಪರಿಪೂರ್ಣನಾದ ಪರಮಾತ್ಮನು ॥೧೫॥

ನಮಾಮಿ ಹೇ ರಾಮ ತವಾಬ್ಜಿ ಪಬ್ಜಿಜಂ ಶ್ರಿಯಾ ಧೃತಂ ವಕ್ಷಸಿ ದೇವತಾಪ್ರಿಯಮ್,
ಅಕಾಶವತ್ತ್ವಮೇಕೇನ ಜಗತ್ತ್ರಯಂ ಪುರಾ ಧ್ಯೇಯಮಂ ಮುನೀಂದ್ರೈರಭಿಮಾನವರ್ಜಿತೈಃ॥

ಜಗತಾಮಾದಿಭೂತಸ್ತ್ವಂ ಜಗತ್ ತ್ವಂ ಜಗದಾಶ್ರಯಃ
ಸರ್ವಭೂತೇಷ್ವಸಂಸಕ್ತಃ ಏಕೋ ಭಾತಿ ಭವಾನ್ ಪರಃ ।೧೫।
ಓಂಕಾರವಾಚ್ಯಸ್ತ್ವಂ ರಾಮ ವಾಚಾಮವಿಷಯಃ ಪುರ್ಮಾನ್ ।
ವಾಚ್ಯವಾಚಕಭೇದೇನ ಭವಾನೇವ ಜಗನ್ಮಯಃ ।೧೪।
ಕಾರ್ಯಕಾರಣಕರ್ತೃತ್ವಫಲಸಾಧನಭೇದತಃ ।
ಏಕೋಽಪಿ ರಾಮ ಭಾಸಿ ತ್ವಂ ಮಾಯಯಾ ಬಹುರೂಪಯಾ ।೧೫॥
ತ್ವನ್ಮಾಯಾಮೋಹಿತಧಿಯಃ ತ್ವಾಂ ನ ಜಾನಂತಿ ತತ್ತ್ವತಃ
ಮಾನುಷಂ ತ್ವಾಭಿಮನ್ಯಂತೇ ಮಾಯಿನಂ ಪರಮೇಶ್ವರಮ್ ॥೨೦॥
ಅಕಾಶವತ್ ತ್ವಂ ಸರ್ವತ್ರ ಬಹಿರಂತರ್ಗತೋಽಮಲಃ
ಅಸಜ್ಜಿರ್ಗ್ಯ ಹ್ಯಚಲೋ ನಿತ್ಯಃ ಶುದ್ಧೋ ಜ್ಞೋಧಮಯೋಽವ್ಯಯಃ ।೨೧॥

ಹೇ ರಾಮಚಂದ್ರ! ಯಾವ ನಿನ್ನ ದೊಂದು ಪಾದವು ಪೂರ್ವದಲ್ಲಿ ಮೂರು ಲೋಕವನೂ ಆಕ್ರಮಿಸಿಕೊಂಡು ಜಿಟ್ಟಿತೋ, ಅಂತಹದಾದ-ಲಕ್ಷ್ಮಿಯಿಂದ ಹೃದಯದಲ್ಲಿ ಧರಿಸಲ್ಪಟ್ಟಿರುವ-ಸರ್ವ ದೇವತೆಗಳಿಗೂ ಪ್ರಿಯವಾದ-ಅಭಿಮಾನಶೂನ್ಯರಾದ ಸರ್ವಮುನಿಗಳಿಂದಲೂ ಧ್ಯಾನಿಸಲ್ಪಡುವ-ನಿನ್ನ ವಾದಕಮಲವನ್ನು ನಾನು ನಮಸ್ಕರಿಸುವೆನು ॥೧೩॥

ಹೇ ಸ್ವಾಮಿ! ನೀನೇ ಜಗತ್ತಿಗೆಲ್ಲ ಆದಿಭೂತನಾದವನು, ಜಗತ್ತೂ ನೀನೇ; ಜಗತ್ತಿಗೆಲ್ಲ ಆಧಾರಭೂತನಾದವನೂ ನೀನೇ ಪರಾತ್ಪರನಾದ ನೀನು, ಸರ್ವಭೂತಗಳೊಳಗೂ ಇದ್ದುಗೊಂಡು, ಸಂಬಂಧಶೂನ್ಯವಾಗಿ ಪ್ರಕಾಶಿಸುತ್ತಿರುವೆ ॥೧೪॥

ಹೇ ರಾಮ! ಓಂಕಾರಕ್ಕೆ ವಾಚ್ಯ(ಅರ್ಥ)ನಾದವನು ನೀನೇ. ವಾಕ್ಕಿಗೆ ಗೋಚರನಲ್ಲದ ಪರಮಪುರುಷನೂ ನೀನೇ. ನೀನೊಬ್ಬನೇ, ವಾಚ್ಯ(ಅರ್ಥ) ವಾಚಕ(ಶಬ್ದ)ಗಳೆಂಬ ಭೇದದಿಂದ ಜಗತ್ಸ್ವರೂಪನಾಗಿರುವೆ ॥೧೫॥

ಸ್ವಾಮಿ! ಶ್ರೀರಾಮನೆ! ನೀನು ವಸ್ತುತಃ ಒಬ್ಬನೇ ಆಗಿದ್ದರೂ, ಅನೇಕ ರೂಪಗಳುಳ್ಳ ದಾದ ನಿನ್ನ ಮಾಯೆಯಿಂದ, ಕಾರ್ಯ ಕಾರಣ ಕರ್ತೃ ಫಲ ಸಾಧನ-ಇತ್ಯಾದಿ ಭೇದಗಳಿಂದ ನಾನಾ ರೂಪನಾಗಿ ಕಾಣಿಸಿಕೊಳ್ಳುವೆ ॥೧೬॥

ನಿನ್ನ ಮಾಯೆಯಿಂದ ಮೋಹಗೊಳ್ಳಿಸಲ್ಪಟ್ಟ ಬುದ್ಧಿಯುಳ್ಳವರು, ನಿನ್ನನ್ನು ಯಥಾವತ್ತಾಗಿ ತಿಳಿಯದಿರುವರು; ಅವರು ಮಾಯಾಯುಕ್ತನಾಗಿರುವ ನಿನ್ನನ್ನು ಸಾಧಾರಣ ಮನುಷ್ಯನೆಂದು ತಿಳಿದುಕೊಂಡಿರುವರು ॥೨೦॥

ನೀನು, ಆಕಾಶದಂತೆ, ಹೊರಗೂ ಒಳಗೂ ವ್ಯಾಪಿಸಿಕೊಂಡಿದ್ದರೂ, ನಿರ್ಮಲನಾಗಿರುವೆ. ಮತ್ತು, ಅಸಂಗನಾಗಿಯೂ-ಅಚಲನಾಗಿಯೂ-ನಿತ್ಯನಾಗಿಯೂ-ಶುದ್ಧನಾಗಿಯೂ-ಕೇವಲಜ್ಞಾನಮಯನಾಗಿಯೂ ಇರುವೆ ॥೨೧॥

ಸ್ತ್ರೀ ವಿಮೂಢಾಹಮಜ್ಞಾನಾತ್ ಜಾನಾಮಿ ತ್ವಾಂ ಕಥಂ ಪ್ರಭೋ ।
ತಸ್ಮಾತ್ತೇ ಕಥಕೋ ರಾಮ ನಮಸ್ಕುರ್ಯಾಮನನ್ಯಧೀಃ ॥೨೦॥
ನಮಸ್ತೇ ಪುರುಷಾಧ್ಯಕ್ಷ ನಮಸ್ತೇ ಭಕ್ತವತ್ಸಲ ।
ನಮಸ್ತೇಸ್ತು ಹೃಷೀಕೇಶ ನಾರಾಯಣ ನಮೋಸ್ತುತೇ ॥೨೧॥
ಭವಭಯಹರಮೇಕಂ ಭಾನುಕೋಟಿಪ್ರಕಾಶಂ
ಕರಧೃತಶರಚಾಪಂ ಕಾಲಮೇಘಾವಭಾಸಮ್ ।
ಕನಕರುಚಿರವಸ್ತ್ರಂ ರತ್ನವತ್ಕುಂಡಲಾಢ್ಯಂ
ಕಮಲವಿಶದನೇತ್ರಂ ಸಾನುಜಂ ರಾಮಮೀಡೇ ॥೨೨॥

ಶ್ರೀ ಶಿವ ಉವಾಚ.

ಏವಂ ಸ್ತುತಸ್ತದಾ ರಾಮೋಽಹಲ್ಯಯಾ ಪ್ರತ್ಯುವಾಚ ತಾಮ್
ಕಂ ತೇ ಕಾಮಂ ಕರೋಮ್ಯಾರ್ಯೇ ಪರಿತುಷ್ಟೋಸ್ಮಿ ತೇ ಸ್ತವಾತ್ ॥೨೩॥

ಅಹಲ್ಯೋವಾಚ

ದೇವ ಮೇ ಯತ್ರಕುತ್ರಾಪಿ ಸ್ಥಿತಾಯಾಪಿ ರಾಘುವ ।
ತ್ವತ್ಪಾದಕಮಲೇ ಭೂಯಾತ್ ಭಕ್ತಿರೇವಾನಪಾಯಿನೀ ॥೨೬॥

ಹೇ ಪ್ರಭೋ! ಸ್ವಭಾವತಃ ಸ್ತ್ರೀಯಾಗಿಯೂ-ತತ್ಪಾಪಿ ಈಗ ಅಜ್ಞಾನದಿಂದ ಮೂಢಳಾಗಿಯೂ ಇರುವ ನಾನು, ನಿನ್ನನ್ನು ಹೇಗೆ ತಿಳಿದುಕೊಳ್ಳಬಲ್ಲೆನು? ಅದುಕಾರಣ, ಸ್ವಾಮಿ! ಶ್ರೀರಾಮ! ಈಗ ನಾನು ಮತ್ತೊಂದರಲ್ಲಿಯೂ ಬುದ್ಧಿಯನ್ನಿಡದೆ ನಿನಗೆ ಬಾರಿಬಾರಿಗೂ ನಮಸ್ಕಾರ ಮಾಡುವೆನು ॥೨೨॥

ಪುರುಷೋತ್ತಮನೆ! ನಿನಗೆ ನಮಸ್ಕಾರವು ಭಕ್ತವತ್ಸಲನೆ ನಿನಗೆ ನಮಸ್ಕಾರವು. ಹೃಷೀಕೇಶನೆ! ನಿನಗೆ ನಮಸ್ಕಾರವು. ನಾರಾಯಣನೆ! ನಿನಗೆ ನಮಸ್ಕಾರವು ॥೨೩॥

ಸಂಸಾರಭಯವನ್ನು ಪರಿಹರಿಸತಕ್ಕವನಾದ ಅದ್ವಿತೀಯನಾದ ಸೂರ್ಯಕೋಟಿಪ್ರಕಾಶನಾದ ಕೈಯಲ್ಲಿ ಧನುರ್ಬಾಣಗಳನ್ನು ಧರಿಸಿರುವ ನೀಲಮೇಘಾಭರಾಮನಾದ ಪೀತಾಂಬರಧರನಾದ ರತ್ನಮಯಕುಂಡಲಗಳಿಂದ ಶೋಭಿತನಾದ ಕಮಲನಯನನಾದ ಅನುಜಸಹಿತನಾದ ಶ್ರೀರಾಮನನ್ನು ನಾನು ಸ್ತುತಿಸುವೆನು—ಎಂದು ಅಹಲ್ಯೆಯು ಸ್ತುತಿಸಿದಳು ॥೨೪॥

ಶ್ರೀ ಶಿವನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ! ಪಾರ್ವತಿ! ಈ ರೀತಿಯಾಗಿ ಅಹಲ್ಯೆಯಿಂದ ಸ್ತುತಿಸಲ್ಪಟ್ಟವಳಿಕ, ಶ್ರೀರಾಮನು ಅಹಲ್ಯೆಯನ್ನು ಕುರಿತು 'ಎಲೌ ಪೂಜ್ಯಳೆ! ನಿನ್ನ ಸ್ತೋತ್ರದಿಂದ ನಾನು ಸಂತುಷ್ಟನಾದೆನು. ನಿನಗೆ ಯಾವ ಇಷ್ಟಾರ್ಥವನ್ನು ನಾನು ಪೂರ್ತಿಮಾಡಿಕೊಡಲಿ?' ಎಂದು ಹೇಳಿದನು ॥೨೫॥

ಇದಕ್ಕೆ ಅಹಲ್ಯೆಯು ಉತ್ತರ ಹೇಳಿದಳು:—

ಹೇ ದೇವ! ರಾಘವ! ನಾನು ಎಲ್ಲಿದ್ದುಗೊಂಡಿದ್ದರೂ, ನನಗೆ ನಿನ್ನ ಪಾದಕಮಲದಲ್ಲಿ ನಿಶ್ಚಲವಾದ ಭಕ್ತಿಯೊಂದೇ ಉಂಟಾಗಬೇಕಾಗಿರುವುದು. ಮತ್ತಾವುದನ್ನೂ ನಾನು ಅಪೇಕ್ಷಿಸುವುದಿಲ್ಲ ॥೨೬॥

ಶ್ರೀರಾಮ ಉವಾಚ.

ಮದ್ಭಕ್ತಿರ್ದುರ್ಲಭಾ ಲೋಕೇ ಮರ್ತ್ಯಾನಾಂ ಮುಕ್ತ್ಯಪೇಕ್ಷಯಾ ।
ತಥಾಪಿ ತವ ಭಕ್ತಿಸ್ತು ಮಯಿ ಧೂಯಾದ್ದೃಢವ್ರತೇ ॥೨೬॥

ಶ್ರೀ ಶಿವಉವಾಚ.

ಇತಿ ದತ್ವಾ ವರಂ ರಾಮೋಽಹಲ್ಯಾಯೈ ತುಷ್ಟಮಾನಸಃ ।
ತದಾಶ್ರಮಸಮೃದ್ಧಿಮಖಿಲಾಂ ಪಶ್ಯನ್ನಾಸ್ತ ಕ್ಷಣಂ ತದಾ ॥೨೭॥

ಇತಿ ಶ್ರೀ ಬಾಲಕಾಂಡೇ ಅಹಲ್ಯಾಶಾಪವಿಮೋಚನಕಥನಂ ನಾಮ

ಷಡ್ವಿಂಶಃ ಸರ್ಗಃ



ಶ್ರೀರಾಮನು ಹೇಳುವನು —

ಎಲೌ! ಸ್ಥಿರವ್ರತಳಾದವಳೆ! ಪ್ರಪಂಚದಲ್ಲಿ, ಮುಕ್ತಿಯಾದರೂ ಸುಲಭವಾಗಬಹುದು ನನ್ನಲ್ಲಿ ಭಕ್ತಿಯೂ ಅದಕ್ಕಿಂತಲೂ ದುರ್ಲಭವಾದುದು ಹೀಗಿದ್ದರೂ, ನಿನಗೆ ನನ್ನಲ್ಲಿ ಸ್ಥಿರವಾದ ಭಕ್ತಿಯುಂಟಾಗಲೆಂದು ನಾನು ಅನುಗ್ರಹಿಸಿರುವೆನು ॥೨೬॥

ಶ್ರೀ ಪರಮೇಶ್ವರನು ಹೇಳುವನು —

ಎಲೌ ಪಾರ್ವತಿ! ಈರೀತಿಯಾಗಿ ಅಹಲ್ಯೆಗೆ ವರವನ್ನು ಕೊಟ್ಟು, ಸಂತುಷ್ಟಹೃದಯನಾದ ಶ್ರೀರಾಮನು, ಆಗ ಆಶ್ರಮದ ಸೊಬಗನ್ನೆಲ್ಲ ನೋಡುತ, ಒಂದು ಕ್ಷಣಕಾಲ ಅಲ್ಲಿಯೇ ಇದ್ದನು॥

ಇದು ಬಾಲಕಾಂಡದಲ್ಲಿ ಅಹಲ್ಯಾಶಾಪವಿಮೋಚನಕಥನವೆಂಬ

ಇಪ್ಪತ್ತಾರನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಸಪ್ತವಿಂಶಃ ಸರ್ಗಃ.

ಶ್ರೀ ಶಿವಉವಾಚ.

ಏತಸ್ಮಿನ್ನೇವ ಸಮಯೇ ಗೌತಮೋ ಮುನಿರಾಗಮತ್ ।
ರಾಮಂ ಸಮ್ಪೂಜಯಾಮಾಸ ಪತ್ನ್ಯಾ ಸಹ ಮಹಾರ್ಹಣೈಃ ॥೧॥
ರಾಮಪಾದದ್ವಯಂ ಗೃಹ್ಯ ಪಾತ್ರಮಾದಾಯ ಹಸ್ತಯೋಃ ।
ಗೌತಮಃ ಕ್ಷಾಲಯಾಮಾಸ ಪತ್ನೀದತ್ತೇನ ವಾರಿಣಾ ॥೨॥
ಪಾದೌ ಪ್ರಕ್ಷಾಲ್ಯ ರಾಮಸ್ಯ ತತ್ ತೀರ್ಥಂ ಸರ್ವಪಾಪಹಮ್ ।
ಸ್ವಾತ್ಮನಿ ಪ್ರೋಕ್ಷಯಾಮಾಸ ಪತ್ನ್ಯಾಂ ಶಿಷ್ಯೇಷು ಚಾಶ್ರಮೇ ॥೩॥
ಶಿಷ್ಟಾನುಮುನಿಗಣಾಃ ಸರ್ವೇ ಪವಿತ್ರಮಿತಿ ತತ್ ಪಪುಃ ।
ರಾಮಂ ಸಾಕ್ಷಾತ್ ಪರಾತ್ಮಾನಂ ದದೃಶುಸ್ತೇ ತಪೋಧನಾಃ ॥೪॥
ಷೋಡಶೈರುಪಚಾರೈಶ್ಚ ಪೂಜಾಂ ಕೃತ್ವಾಥ ಗೌತಮಃ ।
ಮತ್ವಾ ಕೃತಾರ್ಥಮಾತ್ಮಾನಂ ತುಷ್ಟಾವ ರಘುನನ್ದನಮ್ ॥೫॥

ಬಾಲಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗವು.

ಮತ್ತೆ ಶ್ರೀ ಪರಮೇಶ್ವರನು ಹೇಳುವನು —

ಎಲೌ ವಾರ್ವತಿ! ಹೀಗೆ ಅಹಲ್ಯೆಯಿಂದ ಪೂಜಿತನಾಗಿ ಶ್ರೀರಾಮನು ಆ ಆಶ್ರಮಪ್ರದೇಶದಲ್ಲಿರುವಾಗಲೇ, ಗೌತಮಮುನಿಯೂ ಅಲ್ಲಿಗೆ ಬಂದನು; ಒಳಕ, ಪತ್ನಿಯೊಡಗೂಡಿದವನಾಗಿ, ಮಹಾರ್ಘವಾದ ಪೂಜೆಗಳಿಂದ ಶ್ರೀರಾಮನನ್ನು ಪೂಜಿಸಿದನು ॥೧॥

ಆಗ ಗೌತಮಮುನಿಯು, ಶ್ರೀರಾಮನ ಪಾದಯುಗ್ಮವನ್ನು ತಾನು ಹಿಡಿದುಕೊಂಡು, ತನ್ನ ಪತ್ನಿಯಾದ ಅಹಲ್ಯೆಯ ಕೈಯಲ್ಲಿ ಪಾತ್ರೆಯನ್ನು ಹಿಡಿದುಕೊಂಡು ಸಮರ್ಪಿಸಿದ ನೀರಿನಿಂದ, ಆ ಪಾದಯುಗ್ಮವನ್ನು ತೊಳೆದನು ॥೨॥

ಹೀಗೆ ಶ್ರೀರಾಮನ ಪಾದಗಳನ್ನು ತೊಳೆದು, ಸಮಸ್ತ ಪಾಪಪರಿಹಾರಕವಾದ ಆ ತೀರ್ಥವನ್ನು, ತನ್ನ ತಲೆಯಮೇಲೂ-ಹೆಂಡತಿಯ ತಲೆಯಮೇಲೂ-ಶಿಷ್ಯರ ತಲೆಯಮೇಲೂ-ತನ್ನ ಆಶ್ರಮ ಪ್ರದೇಶದಲ್ಲೂ ಪ್ರೋಕ್ಷಣೆಮಾಡಿದನು ॥೩॥

ಆಗ, ಸಮಸ್ತರಾದ ಶಿಷ್ಯರೂ ಮುನಿಸಮೂಹಗಳೂ ಕೂಡ, ಪಾಪಪರಿಶೋಧಕವೆಂದು ಆ ಪಾದತೀರ್ಥವನ್ನು ಪ್ರಾಶನಮಾಡಿದರು. ಒಳಕ, ಆ ತಪೋಧನರೆಲ್ಲರೂ, ಶ್ರೀರಾಮನನ್ನು ಸಾಕ್ಷಾತ್ ಪರಮಾತ್ಮನನ್ನಾಗಿ ದರ್ಶನಮಾಡಿದರು ॥೪॥

ಅನಂತರ, ಆ ಗೌತಮಮುನಿಯು, ಷೋಡಶೋಪಚಾರಗಳಿಂದ ಶ್ರೀರಾಮನಿಗೆ ಪೂಜೆಯನ್ನು ಮಾಡಿ, ತಾನು ಕೃತಕೃತ್ಯನಾದನೆಂದು ತಿಳಿದುಕೊಂಡು, ಹೀಗೆ ಸ್ತೋತ್ರಮಾಡಿದನು ॥

ಗೌತಮ ಉವಾಚ.

ನಮೋ ವೇದಾನ್ತವೇದ್ಯಾಯ ನಮೋ ಬ್ರಹ್ಮೈಕರೂಪಿಣೇ ।
ಶಬ್ದಬ್ರಹ್ಮಸ್ವರೂಪಾಯ ಕರ್ಮಬ್ರಹ್ಮೈಕರೂಪಿಣೇ ॥೬॥
ನಮೋ ಮೂಲಪ್ರಕೃತಯೇ ಸ್ಥಿತ್ಯುತ್ಪತ್ತ್ಯನ್ತಹೇತವೇ ।
ಬ್ರಹ್ಮವಿಷ್ಣುಮಹೇಶಾನರೂಪಿಣೇ ಜಗದಾತ್ಮನೇ ॥೭॥
ಯಸ್ಯಾವತಾರಾನೇವಾತ್ರ ಪೂಜಯನ್ತಿ ಸುರಾಸುರಾಃ ।
ಅಜಾನನ್ತಃ ಪರಂ ತತ್ತ್ವಂ ತಸ್ಮೈ ಬ್ರಹ್ಮಾತ್ಮನೇ ನಮಃ ॥೮॥
ಯದೇಕಂ ನಿಷ್ಕಲಂ ವ್ಯೋಮ ನಿರ್ವಿಕಾರಮನಸ್ತಕಮ್ ।
ನಿತ್ಯಂ ಶುದ್ಧಂ ನಿರಾಭಾಸಂ ತಸ್ಮೈ ಸತ್ಯಾತ್ಮನೇ ನಮಃ ॥೯॥
ಯದಾಜ್ಞಯಾ ಸ್ಪರ್ವನ್ತೇ ವಾಯ್ವಗ್ನ್ಯರ್ಕೇನ್ದ್ವಮೃತ್ಯವಃ ।
ಸರ್ವಪ್ರಾಣಿನಿಯನ್ತಾರಂ ತಮನ್ತರ್ಯಾಮಿಣಂ ಭಜೇ ॥೧೦॥
ಯಸ್ಯ ಕುಕ್ಷೌ ಸಮುದ್ಯಾಶ್ಚ ಕೇಶಾ ಯಸ್ಯಾಮ್ಬುವಾಹಕಾಃ ।

ಆ ಗೌತಮಮುನಿ ಮಾಡಿದ ಸ್ತೋತ್ರಕ್ರಮವೇನೆಂದರೆ:—

ಸಕಲ ವೇದಾಂತಗಳಿಂದಲೂ ತಿಳಿಯಲ್ಪಡಬೇಕಾದ ಶ್ರೀರಾಮನಿಗೆ ನಮಸ್ಕಾರವು; ವೇದ ಯಜ್ಞಾದಿಗಳನ್ನು ಕಾಪಾಡುವುದಕ್ಕೋಸ್ಕರ ಅವತರಿಸಿರುವನಿಗೆ ನಮಸ್ಕಾರವು; ವ್ಯಾಕರಣ ಶಾಸ್ತ್ರಜ್ಞರಿಂದ ಶಬ್ದಬ್ರಹ್ಮವೆಂದೂ, ಪೂರ್ವಮೀಮಾಂಸಕರಿಂದ ಕರ್ಮಬ್ರಹ್ಮವೆಂದೂ ತಿಳಿಯಲ್ಪಡತಕ್ಕವನಿಗೆ ನಮಸ್ಕಾರವು ॥೬॥

ಮೂಲಪ್ರಕೃತಿರೂಪನಾದವನಿಗೋಸ್ಕರ ನಮಸ್ಕಾರವು; ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣಭೂತನಾಗಿ, ಬ್ರಹ್ಮ ವಿಷ್ಣು ಮಹೇಶ್ವರರೆಂದು ನಾಮಧೇಯ ಪಡೆಯುತಕ್ಕವನಾಗಿಯೂ, ಸ್ವಯಂ ಜಗದೂಪನಾಗಿಯೂ ಇರುವ ಪರಮಾತ್ಮನಿಗೆ ನಮಸ್ಕಾರವು ॥೭॥

ಸಮಸ್ತ ಸುರಾಸುರರೂ, ಯಾರನ್ನ ವಾಸ್ತವ್ಯವಾದ ತತ್ವವನ್ನು ತಿಳಿಯದೆ, ಈ ಲೋಕದಲ್ಲಿ ಅವತಾರಗಳನ್ನು ಮಾತ್ರವೇ ಪೂಜಿಸುತ್ತಿರುವರೋ, ಅಂತಹ ಪರಬ್ರಹ್ಮಸ್ವರೂಪನಿಗೆ ನಮಸ್ಕಾರವು ॥೮॥

ಯಾವ ವಸ್ತುವು, ಅದ್ವಿತೀಯವೂ—ನಿಷ್ಕಲವೂ—ಆಕಾಶಮಾತ್ರವೂ—ನಿರ್ವಿಕಾರವೂ-ಅನಂತವೂ—ನಿತ್ಯವೂ – ಶುದ್ಧವೂ – ನಿರಾಭಾಸವೂ ಆಗಿರುವುದೋ, ಅಂತಹ ಸತ್ಯಸ್ವರೂಪವಾದ ವಸ್ತುವಿಗೆ ನಮಸ್ಕಾರವು ॥೯॥

ಯಾವನ ಆಜ್ಞೆಯಿಂದ, ವಾಯು ಅಗ್ನಿ ಸೂರ್ಯ ಚಂದ್ರ ಮೃತ್ಯು ಮೊದಲಾದವರೂ ತಂತಮ್ಮ ಕೆಲಸವನ್ನು ನಡೆಯಿಸುತ್ತಿರುವರೋ, ಅಂತಹ ಸಕಲಲೋಕನಿಯಾಮಕನಾದ ಅಂತರ್ಯಾಮಿಯನ್ನು ನಾನು ಭಜಿಸುವೆನು ॥೧೦॥

ಯಾವನ ಉದರದಲ್ಲಿ ಸಮಸ್ತ ವೇಳೆಗಳೂ ಇರುವವೋ, ಮೇಘಗಳೇ ಯಾವನಿಗೆ ಕೇಶ

ಯಸ್ಯ ನಾಡೀಷು ಸರಿತಃ ತಂ ವನ್ದೇ ನೀರರೂಪಿಣಮ್ ॥೧೧॥

ದ್ಯುಲೋಕೋ ಯಸ್ಯ ಮೂರ್ಧಾ ಸ್ಯಾತ್ ನಾಭೌ ಯಸ್ಯ ಸ್ಥಿತಂ ವಿಯತ್ ।

ಯತ್ಪಾದಾಃ ಸಪ್ತಪಾತಾಳಾಃ ತಸ್ಮೈ ಲೋಕಾತ್ಮನೇ ನಮಃ ॥೧೨॥

ಯನ್ನೇತ್ರಯೋರ್ಚನ್ದ್ರಸೂರ್ಯೌ ನಾಸಾಯಾಂ ವೇದರಾಶಯಃ ।

ಯಸ್ತಿಷ್ಠತಿ ಜಗದ್ವ್ಯಾಪ್ಯ ತಸ್ಮೈ ಸರ್ವಾತ್ಮನೇ ನಮಃ ॥೧೩॥

ಶ್ರೀ ಶಿವಉವಾಚ.

ಇತಿ ವೇದಾನ್ತತತ್ತ್ವಾರ್ಥಸ್ತುತ್ಯೈತ್ಯನ್ತಪ್ರಹರ್ಷಿತಃ ।

ಶ್ರೀರಾಮೋ ಗೌತಮಂ ಪ್ರಾಹ ವರಂ ವರಯ ಮೇ ಶುಭಮ್ ॥೧೪॥

ಗೌತಮ ಉವಾಚ.

ಕಿಮನ್ಯೈಃ ವರೈಃ ಶೇಷ ನಾಮ ತುಚ್ಛಫಲೈರ್ನ ಚ ।

ತ್ವದ್ರೂಪಮೇತನ್ಮೇ ನಿತ್ಯಂ ಹೃದಿಭೂತ್ವಪ್ರಯತ್ನತಃ ॥೧೫॥

ಶ್ರೀರಾಮ ಉವಾಚ

ಏವಮಸ್ತು ಮುನಿಶ್ರೇಷ್ಠ ಪೂರ್ವಂ ಚ ಮಯಿ ಭಕ್ತಿರ್ಮಾ ।

ಗಳಾಗಿರುವವೋ, ಯಾವನ ನಾಡಿಗಳಲ್ಲಿ ಸಮಸ್ತ ನದಿಗಳೂ ಇರುವವೋ, ಅಂತಹ ಜಲರೂಪಿಯಾದ ಪರಮಾತ್ಮನನ್ನು ವಂದಿಸುವೆನು ॥೧೧॥

ಸ್ವರ್ಗಲೋಕವು ಯಾವನಿಗೆ ಶಿರಸ್ಸಾಗಿರುವುದೋ ಯಾವನ ನಾಭಿಯಲ್ಲಿ ಅಂತರಿಕ್ಷವು ದೇಶವಿರುವುದೋ, ಸಪ್ತ ಪಾತಾಳಗಳೂ ಯಾವನಿಗೆ ಪಾದಗಳಾಗಿರುವವೋ, ಅಂತಹ ಲೋಕರೂಪನಾದವನಿಗೆ ನಮಸ್ಕಾರವು ॥೧೨॥

ಯಾವನ ನೇತ್ರದ್ವಯದಲ್ಲಿ ಚಂದ್ರಸೂರ್ಯರಿರುವರೋ, ನಾಸಿಕೆಯಲ್ಲಿ ನಿಶ್ವಾಸರೂಪದಿಂದ ಸಮಸ್ತ ವೇದರಾಶಿಗಳೂ ಇರುವವೋ, ಯಾವನು ಸಮಸ್ತ ಪ್ರಪಂಚವನ್ನೂ ವ್ಯಾಪಿಸಿಕೊಂಡು ನಿಂತಿರುವನೋ, ಅಂತಹ ಸರ್ವಾತ್ಮನಾದವನಿಗೆ ನಮಸ್ಕಾರವು (ಎಂದು ಗೌತಮನು ಸ್ತೋತ್ರ ಮಾಡಿದನು) ॥೧೩॥

ಶ್ರೀ ಪರಮೇಶ್ವರನು ಹೇಳುವನು:—

ಎಲೌ! ಪಾರ್ವತಿ! ಹೀಗೆ ವೇದಾಂತತತ್ವಮಯವಾದ ಗೌತಮನ ಸ್ತುತಿಯಿಂದ ಅತ್ಯಂತ ಹರ್ಷಯುಕ್ತನಾದ ಶ್ರೀರಾಮನು, ಗೌತಮಮುನಿಯನ್ನು ಕುರಿತು 'ನಿನಗೆ ಇಷ್ಟವಾಗಿರುವ ಉತ್ತಮವಾದ ವರವನ್ನು ಬೇಡಿಕೊ' ಎಂದು ಹೇಳಿದನು ॥೧೪॥

ಆಬಳಿಕ ಗೌತಮನು ಹೇಳುವನು:—

ಸರ್ವಲೋಕ ಮಹೇಶ್ವರನಾದ ರಾಮಚಂದ್ರನೆ! ತುಚ್ಛಫಲವಾದ ಇತರ ವರದಿಂದ ನನಗೇನುಪ್ರಯೋಜನವು? ನಿನ್ನ ಈ ದಿವ್ಯರೂಪವು, ಪ್ರಯತ್ನವಿಲ್ಲದೆಯೇ ಸರ್ವದಾ ನನ್ನ ಹೃದಯದಲ್ಲಿ ಸ್ಫುರಿಸುತ್ತಿರಲಿ ॥೧೫॥

ಶ್ರೀರಾಮನು ಹೇಳುವನು:—

ಅಯ್ಯಾ! ಮುನಿವರ್ಯನೆ! ನಿನ್ನ ಇಷ್ಟವಿದ್ದಂತೆಯೇ ಆಗಲಿ. ನೀನು ಪೂರ್ವದಲ್ಲಿಯೂ

ಇತಃಪರಂ ಚ ತೇ ಭಕ್ತಿಃ ಮಯಿ ನಿತ್ಯಂ ದೃಢಾ ಭವೇತ್ ॥೧೬॥
ರಾಮಚಂದ್ರಃ ಪುನಃ ಪ್ರಾಹ ಗೌತಮಂ ಪುರತಃ ಸ್ಥಿತಮ್ ।
ಶೃಣು ತತ್ತ್ವಂ ಪ್ರವಕ್ಷ್ಯಾಮಿ ಹ್ಯಾತ್ಮಾನಾತ್ಮ ಪರಾತ್ಮನಾಮ್ ॥೧೭॥
ಆಕಾಶಸ್ಯ ಯಥಾ ಭೇದಃ ತ್ರಿವಿಧೋ ದೃಶ್ಯತೇ ಮಹಾ ।
ಜಲಾಶಯೇ ಮಹಾಕಾಶಃ ತದವಚ್ಛಿನ್ನ ಏವ ಚ
ಪ್ರತಿಬಿಂಬಾಭ್ರಮಪರಂ ದೃಶ್ಯತೇ ತ್ರಿವಿಧಂ ನಭಃ ೧೮।
ಬುದ್ಧ್ಯವಚ್ಛಿನ್ನಚೈತನ್ಯಂ ಏಕಂ ಪೂರ್ಣಂ ತಥಾ ಪರಮ್ ।
ಅಭಾಸಸ್ತ್ವಪರಂ ಬ್ರಹ್ಮ ಏವಮ್ ಭೂತಸ್ತ್ರಿಧಾ ಚಿತಿಃ ॥೧೯॥
ಸಾಭಾಸಬುದ್ಧೀಃ ಕರ್ತೃತ್ವಂ ಅವಿಚ್ಛಿನ್ನೇಽವಿಕಾರಿಣಿ ।
ಸಾಕ್ಷಿಣ್ಯಾರೋಪಿತಂ ಭ್ರಾನ್ತ್ಯಾ ಜೀವತ್ವಂ ಚ ತಥಾಽಬುಧೈಃ ॥೨೦॥
ಅಭಾಸಸ್ತು ಮೃಷಾ ಬುದ್ಧಿಃ ಅವಿದ್ಯಾಕಾರ್ಯಮುಚ್ಯತೇ ॥೨೧॥
ಅವಿಚ್ಛಿನ್ನಂ ತು ತದ್ವಸ್ತು ವಿಚ್ಛಿನ್ನಮಿವ ಪ್ರಕಲ್ಪಿತಃ ।
ಅವಿಚ್ಛಿನ್ನಸ್ತು ಪೂರ್ಣೇನ ಹ್ಯೇಕತ್ವಂ ಪ್ರತಿಪದ್ಯತೇ ॥೨೨॥

ನನ್ನಲ್ಲಿ ಭಕ್ತಿಯುಳ್ಳವನಾಗಿಯೇ ಇದ್ದೆ : ಇಲ್ಲಿಂದ ಮುಂದಕ್ಕೂ, ನಿನಗೆ ನನ್ನಲ್ಲಿ ಸರ್ವದಾ ಧೃಢವಾದ ಭಕ್ತಿಯುಂಟಾಗಿರಲಿ ॥೧೬॥

ಹೀಗೆಂದು ವರಪ್ರದಾನಮಾಡಿದುದಲ್ಲದೆ, ಶ್ರೀರಾಮಚಂದ್ರನು, ಮುಂದುಗಡೆ ನಿಂತಿರುವ ಗೌತಮಮುನಿಯನ್ನು ಕುರಿತು ಪುನಃ ಹೇಳಿದನು ಅಯ್ಯಾ! ಗೌತಮ! ಆತ್ಮ ಅನಾತ್ಮ ಪರಾತ್ಮ-ಎಂಬ ವಸ್ತುಗಳ ತತ್ವವನ್ನು ನಿನಗುಪದೇಶಿಸುವೆನು. ಕೇಳು ॥೧೭॥

ಪ್ರಪಂಚದಲ್ಲಿ, ಆಕಾಶಕ್ಕೆ ದೊಡ್ಡದಾಗಿ ಮೂರುಭೇದವು ಕಾಣಿಸುವುದಲ್ಲವೆ? ಜಲಾಶಯದಲ್ಲಿ ನೋಡಿದರೆ, ಅದರಲ್ಲಿರುವ ಆಕಾಶವೊಂದು-ಮಹಾಕಾಶವೊಂದು-ಪ್ರತಿಬಿಂಬ ಭೂತವಾದುದೊಂದು,-ಹೇಗೆ ಮೂರುವಿಧವಾದ ಆಕಾಶವು ಕಾಣಿಸುವುದಲ್ಲವೆ? ॥೧೮॥

ಇದರಂತೆಯೇ, ಚಿತ್ತೂ ಮೂರುವಿಧವಾಗಿರುವುದು ಬುದ್ಧ್ಯವಚ್ಛಿನ್ನವಾದ ಚೈತನ್ಯವೊಂದು-ಪರಮಾತ್ಮಚೈತನ್ಯವೊಂದು-ಆಭಾಸರೂಪವಾದುದೊಂದು,—ಹೀಗೆ ಚಿತ್ತೂ ಮೂರುವಿಧವಾಗಿರುವುದು. (ಜೀವಾತ್ಮ, ಪರಮಾತ್ಮ, ಜಗತ್ತು, ಎಂದು ಮೂರು ಭೇದವುಳ್ಳುದಾಗಿರುವುದೆಂದು ಭಾವವು) ॥೧೯॥

ಆಭಾಸಯುಕ್ತವಾದ ಬುದ್ಧಿಯುಳ್ಳವನು, ಅವಿಚ್ಛಿನ್ನನಾಗಿಯೂ ನಿರ್ವಿಕಾರನಾಗಿಯೂ ಸರ್ವಸಾಕ್ಷಿಯಾಗಿಯೂ ಇರುವ ಪರಮಾತ್ಮನಲ್ಲಿ, ಅಜ್ಞಾನದಿಂದ ಕರ್ತೃತ್ವವನ್ನು ಆರೋಪಿಸುವನು; ಹೀಗೆಯೇ, ಅಜ್ಞಾನಿಗಳು ಜೀವತ್ವವನ್ನೂ ಆರೋಪಿಸುವರು. ಆಭಾಸವೆಂದರೆ,—ಮಿಥ್ಯಾಜ್ಞಾನವು; ಅವಿದ್ಯೆಯ ಕಾರ್ಯವೇ ಆಭಾಸಶಬ್ದದಿಂದ ಹೇಳಲ್ಪಡುವುದು ॥೨೦-೨೧॥

ಆ ಪರಮಾತ್ಮವಸ್ತುವಾದರೋ, ಅವಿಚ್ಛಿನ್ನ(ಅಖಂಡ)ವಾಗಿರುವುದು. ವಿಚ್ಛಿನ್ನವೆಂಬುದು ಭ್ರಾಂತಿಕಲ್ಪಿತವು. ಭ್ರಾಂತಿಯಿಂದ ವಿಚ್ಛಿನ್ನನಾಗಿರುವೆನೆಂದು ತಿಳಿದುಕೊಂಡಿರುವ ಆ ಪರಮಾತ್ಮನು, ಅಖಂಡಾಕಾರಜ್ಞಾನದಿಂದ ಪುನಃ ಅದ್ವಿತೀಯತ್ವವನ್ನು ಪಡೆಯುವನು ॥೨೨॥

ತತ್ತ್ವಮಸ್ಯಾದಿವಾಕ್ಯೈಶ್ಚ ಸಾಭೂಸಸ್ಯಾಹಮಸ್ತಥಾ ।
ಐಕ್ಯಜ್ಞಾನಂ ಯದೋತ್ಪನ್ನಂ ಮಹಾವಾಕ್ಯೇನ ಚಾತ್ಮನೋಃ ।
ತದಾಽವಿದ್ಯಾಸ್ವಕಾರ್ಯೈಶ್ಚ ನಶ್ಯತ್ಯೇವ ನ ಸಂಶಯಃ ॥೨೩॥

ಏತದ್ವಿಜ್ಞಾಯ ಮುದ್ಗಲೋ ಮದ್ಭಾವಾಯೋಪಕಲ್ಪತೇ
ಮದ್ಭಕ್ತಿವಿಮುಖಾನಾಂ ಹಿ ಶಾಸ್ತ್ರಗರ್ತೇಷು ಮುಹ್ಯತಾಮ್ ।
ನ ಜ್ಞಾನಂ ನ ಚ ಮೋಕ್ಷಃ ಸ್ಯಾತ್ ತೇಷಾಂ ಜನ್ಮಶತೈರಪಿ ॥೨೪॥

ಇದಂ ರಹಸ್ಯಂ ಹೃದಯಂ ಪರಾತ್ಮನೋ
ಮಯೈವ ಸಾಕ್ಷಾತ್ ಕಥಿತಂ ತನಾನಘ ।
ಮದ್ಭಕ್ತಿಹೀನಾಯ ನರಾಯ ನ ತ್ವಯಾ
ದಾತವ್ಯಮೈನ್ದ್ರಾದಪಿ ರಾಜ್ಯತೋಽಧಿಕಮ್ ॥೨೫॥

ಶ್ರೀ ಶಿವ ಉವಾಚ.

ಬೋಧಿತೋ ರಾಘವೇಣೈವಂ ಗೌತಮೋಽಥ ತದಾಜ್ಞಯಾ ।
ನ್ಯವಸದ್ಭಾರ್ಯಯಾ ಸಾರ್ಧಂ ತದಾಶ್ರಮಪದೇ ಸುಖಮ್ ॥೨೬

'ತತ್ತ್ವಮಸಿ' ಇತ್ಯಾದಿ ವೇದಾಂತವಾಕ್ಯಾರ್ಥಜ್ಞಾನದಿಂದ, ಜೀವನಾಗಿ ಉಳಿಯುವಿಕೆಯ ಧರ್ಮಕ್ಕೂ ಜೀವನಿಗೂ ಐಕ್ಯಜ್ಞಾನವುಂಟಾಗಿ—ಅಖಂಡವಾಕ್ಯಾರ್ಥಜ್ಞಾನಾನಂತರ ಬ್ರಾಹ್ಮಣರಿಗೆ ಐಕ್ಯಜ್ಞಾನವುದಯಿಸುವುದೋ, ಆಗ ಅವಿದ್ಯೆಯು ತನ್ನ ಕಾರ್ಯವನ್ನು ಹುಟ್ಟಿಸಲಾರದೆ ನಾಶ ಹೊಂದಿಯೇ ಹೋಹುದುವುದು; ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ ॥೨೩॥

ಅಯ್ಯಾ! ಗೌತಮಮುನಿಯೇ! ಈ ತತ್ತ್ವವನ್ನು ತಿಳಿದು, ನನ್ನ ಭಕ್ತನಾದವನು, ನನ್ನ ಸಾರೂಪ್ಯವನ್ನು ಹೊಂದುವನು ನನ್ನಲ್ಲಿ ಭಕ್ತಿಯಿಲ್ಲದೆ ಶಾಸ್ತ್ರಗಳೆಂಬ ಗುಂಡಿಗಳ ಮೋಹದಿಂದ ಹೊರಳಾಡುತಿರುವ ಮೂಢರಿಗೆ, ನೂರಾರು ಜನ್ಮಗಳು ಕಳೆದರೂ, ಜ್ಞಾನವೂ ಮೋಕ್ಷವೂ ಸಿದ್ಧಿಸುವುದಿಲ್ಲ; ಮೋಕ್ಷವೂ ಸಿದ್ಧಿಸುವುದಿಲ್ಲ ॥೨೪॥


ಅಜ್ಞಾನಶೂನ್ಯನಾಗಿರುವ ಎಲೈ ಗೌತಮಮುನಿಯೆ! ಇದು, ಪರಮಾತ್ಮನ ಹೃದಯಂಗಮವಾದ ರಹಸ್ಯವು; ಇದನ್ನು ನಾನೇ ನಿನಗೆ ಸಾಕ್ಷಾತ್ತಾಗಿ ಹೇಳಿರುವೆನು ಈ ಉಪದೇಶವು, ಇಂದ್ರಪದವಿಗಿಂತಲೂ ಅತ್ಯಧಿಕವಾದುದು. ನನ್ನಲ್ಲಿ ಭಕ್ತಿಯಿಲ್ಲದ ಮನುಷ್ಯನಿಗೆ ನೀನು ಇದನ್ನು ಸರ್ವಥಾ ಕೊಡಕೂಡದು. (ಎಂದು ಶ್ರೀರಾಮನು ಹೇಳಿದನು) ॥೨೫॥

ಶ್ರೀ ಪರಮೇಶ್ವರನು ಹೇಳುವನು —

ಎಲೌ ವಾರ್ವತಿ! ಅನಂತರ, ಹೀಗೆ ಶ್ರೀರಾಮನಿಂದ ಬೀಳ್ಕೊಂಡ ಆ ಗೌತಮಮುನಿಯು, ಆ ಶ್ರೀರಾಮನ ಅಪ್ಪಣೆಯನ್ನು ಪಡೆದು, ಆ ಆಶ್ರಮದಲ್ಲಿ, ತನ್ನ ಪತಿವ್ರತೆಯೊಡನೆ ಸುಖವಾಗಿ ವಾಸವಾಡಿಕೊಂಡಿದ್ದನು ॥೨೬॥

ಗೌತಮಸ್ಯ ಮಹೇನ್ದ್ರಸ್ಯ ಸದೃಶಾವಾಕೃತಿಂ ತಥಾ ।
ಶಾಪದಾನಂ ಚ ಭಾರ್ಯಾಯಾಃ ಮುನಿನಾಕೃತಮಿಜ್ಞಿತಾ ॥೨೩॥
ಶ್ರುತ್ವಾ ಮುಚ್ಯೇತ ಮನುಜೋ ನಾರೀ ವಾ ವ್ಯಭಿಚಾರಿಣೀ ।
ಮುಚ್ಯತೇ ಸರ್ವಪಾಪೇಭ್ಯೋ ವ್ಯಭಿಚಾರಕೃತಾನ್ನಿಜಾತ್ ॥೨೪॥

ಇತಿ ಶ್ರೀ ಬಾಲಕಾಣ್ಡೇ ಗೌತಮಸ್ಯ ರಾಮೇಣ ತತ್ಪ್ರೋಪದೇಶಕಥನಂ
ನಾಮ ಸಪ್ತವಿಂಶಃ ಸರ್ಗಃ.



ಮಹೇಂದ್ರನು ಗೌತಮಮುನಿಯ ವೇಷವನ್ನು ಧರಿಸಿದುದನ್ನೂ, ಗೌತಮಮುನಿಯು ತಟ್ಟನೆ ತನ್ನ ಹೆಂಡತಿಗೆ ಕೊಟ್ಟ ಶಾಪವನ್ನೂ ಭಕ್ತಿಯಿಂದ ಕೇಳಿದರೆ, ವ್ಯಭಿಚಾರದೋಷವು ಕ್ರೂರವಾದ ಪುರುಷರಾಗಲಿ-ಸ್ತ್ರೀಯರಾಗಲಿ-ತಮ್ಮ ವ್ಯಭಿಚಾರದೋಷದಿಂದಲೂ ಇತರವಾದ ಸಮಸ್ತ ಪಾಪಸಮುದಾಯದಿಂದಲೂ ಮುಕ್ತರಾಗುವರು ॥೨೩-೨೪॥

ಇದು ಬಾಲಕಾಂಡದಲ್ಲಿ ಗೌತಮಮುನಿಗೆ ಶ್ರೀರಾಮನು ಮಾಡಿದ ತತ್ಪ್ರೋಪದೇಶ
ಕಥನವೆಂಬ ಇಪ್ಪತ್ತೇಳನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಅಷ್ಟಾವಿಂಶಃ ಸರ್ಗಃ.

ಶ್ರೀ ಶಿವಉವಾಚ.

ರಾಮೋಪಿ ಪರಮಾಂ ಪೂಜಾಂ ಗೌತಮಸ್ಯ ಮಹಾತ್ಮನಃ ।
ಸಕಾಶಾದ್ವಿಧಿವತ್ ಪ್ರಾಪ್ಯ ಜಗಾಮ ಮಿಥಿಲಾಂ ತತಃ ॥೧॥
ತತಃ ಪ್ರಾಗುತ್ತರಂ ಗತ್ವಾ ರಾಮಃ ಸೌಮಿತ್ರಿಣಾ ಸಹ ।
ವಿಶ್ವಾಮಿತ್ರಂ ಪುರಸ್ಕೃತ್ಯ ಯಜ್ಞವಾಟಮುಪಾವಿಶತ್ ॥೨॥
ಶ್ರುತ್ವಾ ತದಾಗಮಂ ರಾಜಾ ಪ್ರತ್ಯುದ್ಯಾತಃ ಸ್ವಬನ್ಧುಭಿಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ರಾಘವಾಭ್ಯಾಂ ಮಹಾಯಶಾಃ ॥೩॥
ಸ್ವಗೃಹಂ ಸಮ್ಪ್ರವಿಶ್ಯಾಶು ಬಹುಮಾನಪುರಸ್ಸರಮ್ ।
ಯಥಾಯೋಗಂ ಯಥಾನ್ಯಾಯ್ಯಂ ತಾ೯ ಮುನೀನಭ್ಯಪೂಜಯತ್ ॥೪॥
ತಾ೯ ಪೂಜಯಿತ್ವಾ ಧರ್ಮಾತ್ಮಾ ಜನಕೋ ರಾಜಸತ್ತಮಃ ।
ಮೇನೇ ಕೃತಾರ್ಥಮಾತ್ಮಾನಂ ಮುನಿರಾಮಸಮೀಕ್ಷಣಾತ್ ॥೫॥

ಬಾಲಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು:—

ಎಲೌ ಪಾರ್ವತಿ! ಆ ಒಳಿಕ, ಶ್ರೀರಾಮನೂ ಕೂಡ, ಮಹಾತ್ಮನಾದ ಗೌತಮಮುನಿಯು ದೆಸೆಯಿಂದ ಯಥಾವತ್ತಾಗಿ ಉತ್ತಮವಾದ ಸತ್ಕಾರವನ್ನು ಸ್ವೀಕರಿಸಿ, ಅಲ್ಲಿಂದ ಮಿಥಿಲಾಪಟ್ಟಣವನ್ನು ಕುರಿತು ಹೊರಟನು ॥೧॥

ಅನಂತರ, ಲಕ್ಷ್ಮಣಸಹಿತನಾಗಿ ಈಶಾನ್ಯದಿಗ್ಭಾಗಕ್ಕೆ ಹೋಗಿ, ವಿಶ್ವಾಮಿತ್ರಮುನಿಯನ್ನು ಮುಂದಿಟ್ಟುಕೊಂಡು, ಜನಕರಾಜನ ಯಜ್ಞಶಾಲೆಗೆ ಹೋದನು ॥೨॥

ಆಗ ಮಹಾಯಶಸ್ವಿಯಾದ ಆ ಜನಕರಾಜನು, ರಾಮಲಕ್ಷ್ಮಣಾದಿಗಳು ಅಲ್ಲಿಗೆ ಬಂದುದನ್ನು ಕೇಳಿ, ತನ್ನ ಬಂಧುಗಳೊಡನೆ ಅವರನ್ನು ಇದಿರುಗೊಂಡು ಬಂದು, ರಾಮಲಕ್ಷ್ಮಣರೊಡನೆ ವಿಶ್ವಾಮಿತ್ರರನ್ನು ಮುಂದಿಟ್ಟುಕೊಂಡು ತನ್ನ ಅರಮನೆಗೆ ಪ್ರವೇಶಿಸಿ, ಆ ವಿಶ್ವಾಮಿತ್ರಾದಿ ಸಮಸ್ತ ಮುನಿಗಳನ್ನೂ, ಯಥಾಯೋಗ್ಯವಾಗಿಯೂ ಯಥಾನ್ಯಾಯವಾಗಿಯೂ ಬಹುಮಾನಪೂರ್ವಕವಾಗಿ ಪೂಜಿಸಿದನು ॥೩-೪॥

ಆ ಧರ್ಮಾತ್ಮನಾದ ಜನಕಚಕ್ರವರ್ತಿಯು, ಅವರೆಲ್ಲರನ್ನೂ ಪೂಜಿಸಿ, ಮುನಿಗಳೂ ರಾಮನೂ ತನ್ನ ಮನೆಗೆ ಪ್ರವೇಶವಾಡಿದುದರಿಂದ ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು ॥೫॥

ಅಥ ರಾಜಾ ಮುನಿಶ್ರೇಷ್ಠಂ ಕೃತಾಞ್ಜಲಿರುಪಸ್ಥಿತಃ ।
ಹರ್ಷಗದ್ಗದಯಾ ವಾಚಾ ಸ್ತುವನ್ನಿದಮುವಾಚ ತ ॥೬॥
ಅದ್ಯ ಯಜ್ಞಃ ಸಮೃದ್ಧೋ ಮೇ ಸಫಲಾ ದೈವತೈಃ ಕೃತಾ ।
ಧನ್ಯೋಽಹಂ ಕೃತಕೃತ್ಯೋಽಸ್ಮಿ ಯಸ್ಯ ಮೇ ಮುನಿಪುಙ್ಗವ
ದುರ್ಲಕ್ಷಾವಸದಸಂ ಬ್ರಹ್ಮನ್ ಪ್ರಾಪ್ತೋಽಸಿ ಮುನಿಭಿಃ ಸಹ ॥೭॥
ಇತಿ ಕಾ ಮುನಿಶಾರ್ದೂಲಂ ಪ್ರಶ್ರಯಪ್ರವದನಸ್ತಥಾ ।
ಪ್ರಸಾದ್ಯ ಪುನರಪ್ಯಾಹ ಪ್ರಾಞ್ಜಲಿಃ ಪ್ರಯತೋ ನೃಪಃ ॥೮॥
ಇಮೌ ಕುಮಾರೌ ಭದ್ರಂ ತೇ ದೇವತುಲ್ಯಪರಾಕ್ರಮೌ
ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ॥೯॥
ಪದ್ಮಪತ್ರವಿಶಾಲಾಕ್ಷೌ ಖಡ್ಗತೂಣೀಧನುರ್ಧರೌ
ಅಶ್ವಿನಾವಿವ ರೂಪೇಣ ಸಮುಪಸ್ಥಿತಯೌವನೌ ॥೧೦॥
ಪದ್ಭ್ಯಾಮಿಹ ಪ್ರಯಾತೌ ಕಿಂ ದೇವಲೋಕಾದಿವಾಮರೌ ।
ಕಥಂ ಹಿ ಪದ್ಭ್ಯಾಮಿಹ ಪ್ರಾಪ್ತೌ ಕಿಮಿರ್ಥಂ ಕಸ್ಯ ವಾ ಮುನೇ ॥೧೧॥
ಹರಂ ಪ್ರೀತಿಕರೌ ವೀಕ್ಷ್ಯ ನರನಾರಾಯಣಾವಿವ

ಅನಂತರ, ಆ ಜನಕರಾಜನು, ಕೈಮುಗಿದುಕೊಂಡು ವಿಶ್ವಾಮಿತ್ರಮುನಿಯ ಹತ್ತಿರ ನಿಂತುಕೊಂಡವನಾಗಿ, ಹರ್ಷದಿಂದ ಗದ್ಗದವಾಣಿಯುಳ್ಳವನಾಗಿ, ಅವರನ್ನು ಸ್ತೋತ್ರಮಾಡುತ ಹೀಗೆ ಹೇಳಿದನು ॥೬

ಎಲ್ಲೆ ಮುನಿಪುಂಗವನೆ! ಈಗ ಸಮಸ್ತ ದೇವತೆಗಳೂ ನನ್ನ ಈ ಯಜ್ಞಸಂಪತ್ತನ್ನು ಸಾಧ್ಯಮಾಡಿಸಿದರು. ಎಲ್ಲೆ ಬ್ರಾಹ್ಮಣೋತ್ತಮನೆ! ನೀನು ಸಮಸ್ತ ಮಹರ್ಷಿಪರಿವೃತನಾಗಿ ನನ್ನ ಯಜ್ಞಶಾಲೆಗೆ ಬಂದಿರುವುದರಿಂದ ಈಗ ನಾನು ಧನ್ಯನಾದೆನು, ಅನುಗೃಹೀತನಾದೆನು ।

ಹೀಗೆಂದು ಆ ವಿಶ್ವಾಮಿತ್ರಮುನಿಗೆ ಹೇಳಿ, ಆಗ, ಆ ಜನಕರಾಜನು, ಹರ್ಷಪೂರಿತವಾದ ಮುಖವುಳ್ಳವನಾಗಿ, ಒಳ್ಳೆ ಫಲಭರಿತವೃಕ್ಷವನ್ನಾಗಿ, ಪುನಃ ಕೈ ಕೈಮುಗಿದುಕೊಂಡು ಆ ವಿಶ್ವಾಮಿತ್ರಮುನಿಯನ್ನು ಪ್ರಾರ್ಥಿಸಲಾರಂಭಿಸಿದನು ॥೮॥

ಸ್ವಾಮಿಗೆ! ಮಹರ್ಷಿವರ್ಯನೆ! ತಮಗೆ ಕುಶಲವಾಗಲಿ. ದೇವಸದೃಶಪರಾಕ್ರಮರೂ ಗಜಸಿಂಹ ಶಾರ್ದೂಲ ವೃಷಭಗಳಂತೆ ಗಮನವುಳ್ಳವರೂ ಆದ ಈ ಕುಮಾರರು ಯಾರು? ಕಮಲನೇತ್ರರಾಗಿಯೂ, ಖಡ್ಗತೂಣೀರ ಧನುಸ್ಸುಗಳನ್ನು ಧರಿಸಿದವರಾಗಿಯೂ, ರೂಪದಲ್ಲಿ ಅಶ್ವಿನಿದೇವತೆಗಳಿಗೆ ಸಮಾನರಾಗಿಯೂ, ವ್ಯಾವೃತ್ತಯೌವನರಾಗಿಯೂ, ಅಕಸ್ಮಾತ್ತಾಗಿ ದೇವಲೋಕದಿಂದ ಭೂಲೋಕಕ್ಕೆ ಒಂದಿರುವ ದೇವಕುಮಾರರೋ ಎಂಬಂತೆ ಶೋಭಿಸತಕ್ಕವರಾಗಿಯೂ ಇರುವ ಈ ಬಾಲಕರು, ಕಾಲುನಡಿಗೆಯಿಂದ ಇಲ್ಲಿಗೆ ಹೇಗೆ ಬಂದರು? ಇಲ್ಲಿಗೇಕಕ್ಕೆ ಬಂದರು? ಎಲ್ಲೆ ಮುನಿಪೇ! ಇವರು ಯಾರ ಮಕ್ಕಳು? ॥೯-೧೧॥

ಎಲ್ಲೆ ಮಹಾಮುನಿಯೆ! ನರನಾರಾಯಣರಂತೆ ಶೋಭಿಸುತಿರುವ ಇವರು, ನನಗೆ ವಿಶೇಷನಾಗಿ ಆನಂದವುಂಟುಮಾಡುತಿರುವರು. ಚಂದ್ರಸೂರ್ಯರು ಅಂತರಿಕ್ಷಪ್ರದೇಶವನ್ನಲಂಕರಿಸು

ನರಾಯುಧಧರೌ ವೀರೌ ಕಸ್ಯ ಪುತ್ರೌ ಮಹಾಮುನೇ ॥೧೦॥
ಭೂಷಯನ್ತಾವಿಮಂ ದೇಶಂ ಚನ್ದ್ರಸೂರ್ಯಾವಿವಾಮ್ಬರಮ್ ॥೧೩॥
ಪರಸ್ಪರಸ್ಯ ಸದೃಶೌ ಪ್ರಮಾಣೇಙ್ಗಿತಚೇಷ್ಟಿತೈಃ
ಕಾಕಪಕ್ಷಧರೌ ವೀರೌ ಶ್ರೋತುಮಿಚ್ಛಾಮಿ ತತ್ತ್ವತಃ ೧೪॥

ವಿಶ್ವಾಮಿತ್ರ ಉವಾಚ.

ಅಯಂ ದಶರಥಾಜ್ಜಾತೋ ರಾಮಃ ಶತ್ರುನಿಬರ್ಹಣಃ
ಅಪ್ರಮೇಯಮನುಜ್ಞೋ ಭ್ರಾತಾ ಲಕ್ಷ್ಮಣಃ ಸಮಿತಿಞ್ಜಯಃ ॥೧೫॥
ತತ್ರಾಪಿ ಭಗವಾನ್ ರಾಮಃ ಸರ್ವಾತ್ಮಾ ಹರಿರಾತ್ಮವಾನ್
ಸೂರ್ಯವಂಶೇ ಸಮುದ್ಭೂತಃ ಪ್ರಾರ್ಥಿತೋ ದೇವತಾಗಣೈಃ
ಮಖಸಂರಕ್ಷಣಾರ್ಥಾಯ ಮಮಾಯಂ ಸೀತಃ ಪಿತುಃ ಪುರಾತ್ ೧೬॥
ಅಗಚ್ಛಚ್ಚ ರಾಘವೋ ಮಾರ್ಗೇ ತಾಟಕಾಂ ಘೋರದರ್ಶನಾಮಿಮಾಮ್
ಶರೇಣೈಕೇನ ತಾಂ ರಾಮೋ ಜಘಾನಾತಿಬಲೋ ಬಲೀ ೧೭॥
ತತೋ ಮಯಾಶ್ರಮಂ ಗತ್ವಾ ಮಮಯುಷ್ಣಾ ವಿಮಂಸಕಾ
ಸುಬಾಹುಪ್ರಮುಖಾ ಹತ್ವಾ ಮಖವೀಘಾತಕಾ ಸರ್ವೇ ರಾಕ್ಷಸಾ ಹತಾ ೧೮॥

ವಂತೆ, ಈ ನನ್ನ ಯಜ್ಞಶಾಲೆಯನ್ನೆಲ್ಲ ಅಲಂಕರಿಸುತಿರುವ, ವಿನ್ಯಾಯುಧಧಾರಿಗಳಾದ, ಮಹಾವೀರರಾದ ಈ ಕುಮಾರಕರು ಯಾರ ಮಕ್ಕಳು?" ॥೧೨-೧೩॥

ಕಾಕಪಕ್ಷ ಶಿಖಂಡ-ಜುಟ್ಟುಗಳನ್ನು ಧರಿಸಿಕೊಂಡಿರುವ ಮಹಾವೀರರಾದ ಈ ಬಾಲಕರು, ಆಕಾರ ಇಂಗಿತ ಕೇಶ್ಚಿತ್ತಗಳಲ್ಲಿಯಾಗಲಿ ಒಬ್ಬರಿಗೊಬ್ಬರು ಸದೃಶರಾಗಿರುವರಲ್ಲ! ಇವರ ಸ್ವರೂಪವನ್ನು ಯಥಾವತ್ತಾಗಿ ಕೇಳಲಿಚ್ಛಿಸುತ್ತಿರುವೆನು ॥೧೪॥

ಈ ವಾಕ್ಯವನ್ನು ಕೇಳಿ ವಿಶ್ವಾಮಿತ್ರಮುನಿಯು ಹೇಳುವನು --

ಅಯ್ಯಾ! ಜನಕಭೂಪಾಲನ! ಇವನು, ದಶರಥಪುತ್ರನಾದ ರಾಮನು, ಸಮಸ್ತ ಶತ್ರುಗಳನ್ನೂ ಧ್ವಂಸಮಾಡತಕ್ಕವನು. ಇವನ ಮಗ್ಗುಲಲ್ಲಿರುವ ಈ ಕುಮಾರನು, ಇವನ ತಮ್ಮನಾದ ಲಕ್ಷ್ಮಣನೆಂಬವನು. ಇವನೂ ಯುದ್ಧದಲ್ಲಿ ಕೇಸರಿಯಂತಹವನು ॥೧೫॥

ಇವನಿಬ್ಬರೊಳಗೂ, ಈ ರಾಮನು, ಪರಮಾತ್ಮನಾದ ಸಾಕ್ಷಾಜ್ಜಗದೀಶ್ವರನ ಅವತಾರಭೂತನು. ಆ ಭಗವಂತನು, ಸಮಸ್ತ ದೇವತೆಗಳೆಂದಿಲೂ ಪ್ರಾರ್ಥಿತನಾಗಿ, ಸೂರ್ಯವಂಶದಲ್ಲಿ ಈ ರಾಮನ ರೂಪದಿಂದ ಅವತರಿಸಿರುವನು. ನಾನು, ನನ್ನ ಯಜ್ಞದ ರಕ್ಷಣೆಗೋಸ್ಕರ ಇವನನ್ನು ಕಂದೆಯ ಮನೆಯಿಂದ ಕರೆತಂದಿರುವೆನು ॥೧೬॥

ಈ ಮಹಾವಿಕ್ರಮನಾದ ರಘುವೀರನು, ಒರುವಾಗ ಮಾರ್ಗಮಧ್ಯದಲ್ಲಿ, ನನ್ನಿಂದ ಪ್ರೇರಿಸಲ್ಪಟ್ಟು, ಶೋಕಹಿಂಸಕಳಾಗಿದ್ದ ತಾಟಕೆಯನ್ನು ಒಂದೇ ಬಾಣದಿಂದ ಸಂಹರಿಸಿದನು ॥

ಆ ಒಳಿಕ, ನನ್ನ ಆಶ್ರಮಕ್ಕೆ ಬಂದು, ನನ್ನ ಯಜ್ಞಕ್ಕೆ ವಿಘ್ನವಾಡುತ್ತಿದ್ದ ಸುಬಾಹು ಪ್ರಮುಖರನ್ನು ಕೊಂದು, ಮಖವೀಘಾತನನ್ನು ಸಮುದ್ರದಲ್ಲಿ ಹಾಕಿಬಿಟ್ಟನು ॥೧೮॥

ತತೋ ಗಙ್ಗಾತಟೇ ಪುಣ್ಯೇ ಗೌತಮಸ್ಯಾಶ್ರಮೇ ಶುಭೇ ।
ದೃಷ್ಟ್ವಾಹಲ್ಯಾಂ ನಮಸ್ಕೃತ್ಯ ತಯಾ ಸಮ್ಯಕ್ ಪ್ರಪೂಜಿತಃ ॥೧೯॥
ಪಾದಾಮ್ಬುಜರಜಸ್ಪರ್ಶಾತ್ ಸಾಪಿ ಶಾಪಾದ್ವಿಮೋಚಿತಾ ।
ಇದಾನೀಂ ದ್ರಷ್ಟುಕಾಮಸ್ತೇ ಗೃಹೇ ಮಾಹೇಶ್ವರಂ ಧನುಃ ॥೨೦॥

ಶ್ರೀ ಶಿವಉವಾಚ.

ಇತ್ಯುಕ್ತೋ ಮುನಿನಾ ರಾಜಾ ಪೂಜಾರ್ಹಾವಭಿಪೂಜಯಾ ।
ಪೂಜಯಾಮಾಸ ಧರ್ಮಾತ್ಮಾ ವಿಧಿದೃಷ್ಟೇನ ಕರ್ಮಣಾ ॥೨೧॥
ರಾಮಂ ಪದ್ಮಪಲಾಶಾಕ್ಷಂ ಪೀತಕೌಶೇಯವಾಸಸಮ್ ।
ಇನ್ದೀವರದಳಶ್ಯಾಮಂ ಕೋಟಿಮನ್ಮಥಮೋಹನಮ್ ॥೨೨
ಸರ್ವಲಕ್ಷಣಸಮ್ಪನ್ನಂ ಸರ್ವಭೂಷಣಭೂಷಿತಮ್ ।
ಪರೇಶಮೇವ ತಂ ಮೇನೇ ಸ್ವಯಂ ಚ ಮುನಿವಾಕ್ಯತಃ ॥೨೩॥
ಪೂಜಯಾಮಾಸ ಕಾಕುತ್ಸ್ಥಂ ಧನ್ಯೋಽಸ್ಮೀತಿ ವದನ್ ಮುಹುಃ
ಪ್ರಸಾದಂ ವಾಸುದೇವಸ್ಯ ನಿಶ್ಚಿತ್ಯೈವ ನನರ್ತ ಸಃ ॥೨೪

ಅನಂತರ, ಪುಣ್ಯವಾದ ಗಂಗಾತೀರದಲ್ಲಿ, ಶುಭವಾದ ಗೌತಮನ ಆಶ್ರಮದೊಳಗೆ ಅಹಲ್ಯೆಯನ್ನು ನಮಸ್ಕರಿಸಿ, ಅವಳಿಂದ ಚೆನ್ನಾಗಿ ಪೂಜಿಸಲ್ಪಟ್ಟನು ॥೧೯॥

ತನ್ನ ಪಾದಧೂಳಿಸಂಪರ್ಕದಿಂದ ಅವಳಿಗೂ ಶಾಪವಿಮೋಚನೆ ಮಾಡಿದನು. ಈಗ, ನಿನ್ನ ಮನೆಯಲ್ಲಿರುವ ಪರಮೇಶ್ವರನ ಧನುಸ್ಸನ್ನು ನೋಡಬೇಕೆಂದು ಒಂದಿರುವನು ॥೨೦॥

ಶ್ರೀ ಪರಮೇಶ್ವರನು ಹೇಳುವನು :

ಎಲೌ ವಾರ್ವತಿ! ಈರೀತಿಯಾಗಿ ಆ ಗೌತಮ ಮುನಿಯಿಂದ ಹೇಳಲ್ಪಟ್ಟ ಆ ಜನಕಭೂಪಾಲಕನು, ಕೇವಲ ಪೂಜಾಯೋಗ್ಯರಾದ ಆ ರಾಮಲಕ್ಷ್ಮಣರನ್ನು, ಯುಕ್ತಶಾಸ್ತ್ರವಿಧಿಯಾಗಿ ಮಧುಪರ್ಕಾದಿಗಳಿಂದ ಪೂಜಿಸಿದನು ॥೨೧॥

ಪುಂಡರೀಕಾಕ್ಷನೂ ಪೀತಾಂಬರಧರನೂ ಇಂದೀವರದಳಶ್ಯಾಮಲಾಂಗನೂ ಕೋಟಿಮನ್ಮಥ ಸುಂದರನೂ ಆಗಿರುವ-ಸರ್ವಲಕ್ಷಣಸಂಪನ್ನನಾದ-ಸರ್ವಾಭರಣಭೂಷಿತನಾದ ಆ ಶ್ರೀರಾಮನನ್ನು, ಸಾಕ್ಷಾತ್ ಪರಮಾತ್ಮನೆಂದೇ ತಾನೇ ತಿಳಿದುಕೊಂಡಿದ್ದನು. ಆ ವಿಶ್ವಾಮಿತ್ರಮುನಿಯ ವಾಕ್ಯದಿಂದ ಮತ್ತೂ ದೃಢವಾಗಿ ನಿಶ್ಚಯಿಸಿಕೊಂಡನು ॥೨೨-೨೩॥

ಆಗ ಆ ಜನಕನು, ತಾನು ಧನ್ಯನಾದೆನೆಂದು ಪುನಃ ಪುನಃ ಹೇಳುತ, ಇದು ಶ್ರೀ ವಾಸುದೇವನ ಅನುಗ್ರಹವೇ ಸರಿಯೆಂದು ನಿಶ್ಚಯಿಸಿಕೊಂಡು, ಹರ್ಷಾತಿಶಯದಿಂದ ನರ್ತನಮಾಡಲುಪಕ್ರಮಿಸಿದನು ॥೨೪॥

ಪ್ರದಾನಂ ದುಹಿತುಸ್ತಸ್ಮೈ ಮನಸಾ ಚಿನ್ತಯತ್ ಪ್ರಭುಃ ।
ರಘುವಂಶೇ ಸ್ವತುಲ್ಯೇ ತಂ ಜ್ಞಾತ್ವಾ ದಶರಥಾತ್ಮಜಮ್ ॥೨೫॥
ಸೌನ್ದರ್ಯನಿಲಯಸ್ಯಾಸ್ಯ ಬಲಸಾರೋ ಭವಿಷ್ಯತಿ
ಬಲಸಾರಯುತಸ್ಯಾಸ್ಯ ಸೌನ್ದರ್ಯಮಪಿ ದೃಶ್ಯತೇ ॥೨೬॥
ಅನೇಕಗುಣವಾನೇಷಃ ಸರ್ವಜ್ಞೋ ಭವತೀದೃಶಃ ।
ಧನುರ್ಭಙ್ಗಃ ಕೃತೋವಾಸ್ತು ಮಾಸ್ತು ವಾ ರಾಜಸೂನುನಾ ॥೨೭॥
ಪ್ರತಿಜ್ಞಾಭಙ್ಗಸಂ ವಾಸ್ತು ಹಸನ್ತು ಸಕಲಾಜನಾಃ ।
ಅನುರೂಪಾಯ ರಾಮಾಯ ಸದೃಶೀ ಮೇ ಸುತಾರ್ಪಿತಾ ॥೨೮॥
ಯದಿ ಸೀತಾ ದೀಯತೇಸ್ಯ ಧನ್ಯಾಪ್ಯನುಗುಣಾಹ್ಯಲಮ್ ।
ಸೀತಾ ಭರ್ತಾರಮಾಸಾದ್ಯ ರಾಮಂ ದಶರಥಾತ್ಮಜಮ್ ॥೨೯॥
ಸ್ವಾನುರೂಪಂ ಮಹಾಬಾಹುಂ ಭವಿಷ್ಯತಿ ಸುಖೋಜಿತಾ ।
ವಿನೈನಂ ಪುರುಷಶ್ರೇಷ್ಠಂ ನಾಸ್ತ್ಯಸ್ಯಾಃ ಸದೃಶಃ ಪತಿಃ ॥೩೦॥

ಆಗ ಆ ಜನಕಮಹಾರಾಜನು, ತನಗೆ ಅನುಗುಣವಾದ ರಘುವಂಶದಲ್ಲಿ ದಶರಥಪುತ್ರನಾಗಿ ಶ್ರೀಹರಿಯು ಅವತರಿಸುವುದನ್ನು ತಿಳಿದು, ಅವನಿಗೆ ತನ್ನ ಮಗಳನ್ನು ಕೊಟ್ಟುಬಿಡುವುದಾಗಿ ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡನು ॥೨೫॥

ಆಗ ಅವನು ಮನಸ್ಸಿನಲ್ಲಿ ಹೀಗೆ ಯೋಚಿಸಿದನು.—ಸೌಂದರ್ಯಕ್ಕೆ ಖನಿಯಾಗಿರುವ ಇವನಿಗೆ, ಇದಕ್ಕೆ ತಕ್ಕಂತೆ ವೀರ್ಯವೂ ಇದ್ದೇ ಇರುವುದು. ಮಹಾವೀರ್ಯಸಮನ್ವಿತನಾಗಿರುವ ಇವನಿಗೆ, ಈ ಉತ್ತಮವಾದ ಸೌಂದರ್ಯವೂ ಪ್ರತ್ಯಕ್ಷವಾಗಿರುವುದು ॥೨೬॥

ಹೀಗೆ ಲಕ್ಷಣಸಂಪನ್ನನಾಗಿರುವ ಇವನು, ಸರ್ವಗುಣಸಂಪನ್ನನಾಗಿಯೂ ಸರ್ವಜ್ಞನಾಗಿಯೂ ಇದ್ದೇ ಇರುವನು. ಈ ರಾಜಪುತ್ರನು, ಧನುರ್ಭಂಗವನ್ನು ಮಾಡಿದರೆ ಮಾಡಲಿ,—ಅಥವಾ ಇಲ್ಲದಿದ್ದರೂ ಬೇಡ. ನನಗೆ ಪ್ರತಿಜ್ಞಾಭಂಗದೋಷವೇಕಾದರೂ ಬರಲಿ. ಸಮಸ್ತ ಜನರೂ ನನ್ನನ್ನು ಬೇಕಾದರೆ ಪರಿಹಾಸಮಾಡಲಿ. ಸಕಲ ವಿಷಯದಲ್ಲಿಯೂ ಅನುಗುಣನಾಗಿರುವ ಈ ರಾಮನಿಗೆ, ಸಕಲಭಾಗದಲ್ಲಿಯೂ ಇವನಿಗೆ ಅನುಗುಣಳಾಗಿರುವ ನನ್ನ ಮಗಳನ್ನು ಕೊಟ್ಟುಬಿಟ್ಟುದೇ ನಿಶ್ಚಿತವು ॥೨೭-೨೯॥

ಇವನಿಗೆ ಸೀತೆಯನ್ನು ಕೊಟ್ಟಪಕ್ಷದಲ್ಲಿ, ಅವಳು ಕೃತಾರ್ಥಳಾಗುವಳು; ಅವಳು ಇವನೊಬ್ಬನಿಗೇ ಸದೃಶಳಾಗಿರುವಳು. ಅವಳೂ ಕೂಡ, ತನಗನುಗುಣನಾಗಿಯೂ ಮಹಾಭುಜನಾಗಿಯೂ ಇರುವ-ದಶರಥಪುತ್ರನಾದ ಈ ಶ್ರೀರಾಮನನ್ನು ಪತಿಯನ್ನಾಗಿ ಪಡೆದರೆ, ಕೇವಲ ಸುಖಭಾಗಿನಿಯಾಗುವಳು. ಈ ಪುರುಷೋತ್ತಮನನ್ನು ಬಿಟ್ಟರೆ, ಈ ಮೂರು ಲೋಕದಲ್ಲಿಯೂ ಇವಳಿಗೆ ಅನುಗುಣನಾದ ವರನೇ ಸಿಕ್ಕುವುದಿಲ್ಲ ॥೨೯-೩೦॥

ಪ್ರಹಸ್ತೋ ಮೇಘನಾದಶ್ಚ ದೇವಾನ್ತಕನರಾನ್ತಕೌ ।
ಅತಿಕಾಯಾದಯೋ ವೀರಾಃ ಯೇ ಚ ಲಙ್ಕಾನಿವಾಸಿನಃ ॥೪॥
ಸರ್ವೇ ತೇ ಸನ್ನಿರೀಕ್ಷನ್ತೇ ರಾಮಮೇವಾಖಿಲೇಶ್ವರಮ್ ।
ವಿಸ್ಮಿತಾ ಭೂವಿನಾಸನ್ನಾಃ ತತ್ಸ್ಪನ್ದಾರ್ಯವಿಮೋಹಿತಾಃ ॥೫॥

ಶ್ರೀ ಸೂತಉವಾಚ.

ತದಾ ರಾಮಂ ದ್ರಷ್ಟುಕಾಮಃ ಶಙ್ಕರಃ ಪರಮೇಶ್ವರಃ ।
ಗೌರೀಸಹಾಯೋ ದೇವೇಶಃ ಸಮಾಯಾಜ್ಜನಕಾಲಯಮ್ ॥೧೦॥
ಸಮಾಗತೇ ಶಿವೇ ಸಾಕ್ಷಾತ್ ಗೌರ್ಯಾ ಸಹ ಮಹೇಶ್ವರೇ ।
ಸಮುತ್ಥಸ್ಥೌ ಸಭಾ ಸರ್ವಾ ಹರಂ ದೃಷ್ಟ್ವಾ ಮಹೇಶ್ವರಮ್ ॥೧೧॥
ತದಾ ದ್ಯೌಃ ಪೃಥಿವೀ ಜ್ಯೈವ ಕೋಟಿಸೂರ್ಯಪ್ರಭಾನ್ವಿತೈಃ ।
ಸಜ್ಜ್ಯತೀತವಿಮಾನೈಶ್ಚ ವಾಹನೈಶ್ಚ ರಥೈರ್ವೃತಾ ॥೧೨
ನಮಶ್ಚಕಾರ ರಾಮೋಪಿ ಲಕ್ಷ್ಮಣೇನ ಯುತೋಮುನಾ ।
ರಾಮೋಹಂ ಲಕ್ಷ್ಮಣಾಖ್ಯೋಪಿ ಭವನ್ತಮಭಿವಾದಯೇ ॥೧೩॥

ಅತಿಕಾಯ ಮೊದಲಾದ ಮಹಾವೀರರಾದ ಲಂಕಾನಿವಾಸಿಗಳೂ ಕೂಡ, ಮಹಾಸಂಭ್ರಮಯುಕ್ತರಾಗಿ ಆ ಜನಕರಾಜಧಾನಿಗೆ ಬಂದುಸೇರಿದರು ॥೧--೪॥

ಆ ಸಮಸ್ತರೂ ಕೂಡ, ತಮತಮಗೆ ಉಚಿತವಾದ ತೆರದಲ್ಲಿ ಭೂಮಿಯುಮೇಲೂ ವಿಮಾನಗಳಲ್ಲೂ ನಿಂತುಕೊಂಡವರಾಗಿ, ಆ ರಾಮನ ಸೌಂದರ್ಯದಿಂದ ಮೋಹಗೊಂಡು, ಸರ್ವಲೋಕಪತಿಯಾದ ಶ್ರೀರಾಮನನ್ನೇ, ಆತ್ಮಾಶ್ಚರ್ಯಯುಕ್ತರಾಗಿ ನೋಡುತಿದ್ದರು ॥೫॥

ಹೀಗೆಂದು ಶ್ರೀಪರಮೇಶ್ವರನು ವಾರ್ತಿಕಗೆ ಹೇಳಿದನೆಂಬ ವಿಷಯವನ್ನು ಶೌನಕಾದಿಮುನಿಗಳಿಗೆ ಹೇಳುತಿರುವ ಶ್ರೀಸೂತಮುನಿಯು ಮುಂದಕ್ಕೆ ಹೇಳುವನ :—

ಎಲ್ಲೆ ಮಹಾಮುನಿಗಳಿರಾ! ಹೀಗೆ ಆ ಜನಕರಾಜಧಾನಿಯೊಳಗೆ ಸರ್ವರೂ ನೋಡುತಿರುವ ಸಮಯದಲ್ಲಿ, ಆ ಶ್ರೀರಾಮನನ್ನು ನೋಡಬೇಕೆಂಬ ಕುತೂಹಲದಿಂದ, ಸರ್ವಲೋಕ ಮಹೇಶ್ವರನೂ ಸರ್ವದೇವದೇವನೂ ಆದ ಶ್ರೀಶಂಕರನ, ಶ್ರೀಪಾರ್ವತಿಯೊಡನೆ, ಆ ಜನಕರಾಜಧಾನಿಗೆ ಬಂದವನಾದನು ॥೧೦॥

ಹೀಗೆ ಮಹೇಶ್ವರನಾದ ತಿನನು ಗೌರೀದೇವಿಯೊಡನೆ ಅಲ್ಲಿ ಹೋಗಲಾಗಿ ಆ ಪರಮೇಶ್ವರನನ್ನ ಕಂಡೊಡನೆಯೇ ಸಭೆಯೆಲ್ಲವೂ ಎದ್ದುನಿಂತಿತು ॥೧೧

ಆ ಸಮಯದಲ್ಲಿ, ಕೋಟಿಸೂರ್ಯಪ್ರಕಾಶವಾದ ವಿಮಾನಗಳಿಂದ ಅಂತರಿಕ್ಷವೂ, ಅಸಂಖ್ಯಾತವಾದ ವಾಹನಗಳಿಂದ ಭೂಮಿಯೂ ನಿಬಿಡವಾಗಿಹೋಯ್ತು ॥೧೨॥

ಆಗ ಸಮಸ್ತಸಭೆಯುವರೂ ಪರಮೇಶ್ವರನಿಗೆ ನಮಸ್ಕಾರಮಾಡಲಾಗಿ, ರಾಮನೂಕೂಡ ಲಕ್ಷ್ಮಣನೊಡನೆ ಬಂದು,—'ರಾಮನಾದ ನಾನೂ ಲಕ್ಷ್ಮಣನೂ ನಿನಗೆ ನಮಸ್ಕಾರಮಾಡುವೆವು' ಎಂದು ಹೇಳುತ, ಆ ಪಾರ್ವತೀಪತಿಗೆ ನಮಸ್ಕಾರಮಾಡಿದನು ॥೧೩॥

ತತಃ ಶಿವಃ ಸಮುತ್ಥಾಪ್ಯ ಸ್ವಾಙ್ಕಮಾರೋಪ್ಯ ಸತ್ವರಮ್ ।
ಪರಿಷ್ವಜ್ಯ ಪರಿಷ್ವಜ್ಯ ಮಧುರಂ ವಾಕ್ಯಮಬ್ರವೀತ್ ॥೧೫॥

ಶ್ರೀ ಶಿವ ಉವಾಚ.

ದುಷ್ಟನಿಗ್ರಹಣಂ ಕೃತ್ವಾ ಶಿಷ್ಟಾನಾಂ ಪಾಲನಂ ಕುರು ।
ಗುಣಾಸ್ತೇ ಸ್ವತಉತ್ಪನ್ನಾಃ ಕೇನ ವರ್ಣಯಿತುಂ ಕ್ಷಮಾಃ ॥೧೬॥
ಚಾಪಶಬ್ದಂ ಕುರು ಕ್ಷಿಪ್ರಂ ಯಜ್ಞೇ ಕೃತ್ವಾ ಲವತ್ತ್ರಯಮ್
ಸೀತಾಂ ವಹಸ್ವ ಕಲ್ಯಾಣೀಂ ಜಗತಾಂ ಹಿತಕಾರಿಣೀಮ್ ॥೧೭॥
ಅಯೋನಿಜಾಂ ಧರಾಜಾತಾಂ ಭಾಯೇವಾಸುಗತಾ ಹಿ ಸಾ ।
ಲಕ್ಷ್ಮೀಃ ಸೀತಾ ಭವಾಕ್ಷ ವಿಷ್ಣೋಃ ಜಾತೋ ದೇವಗಣಾರ್ಥಿತಃ ॥೧೮॥
ತ್ವಮನಾದಿರಸಿರ್ದೇಶ್ಯೋ ಗುಣಾತೀತಃ ಪರಾತ್ಪರಃ ।
ಯೋಗವಾಯಾವೃತೋ ಮೂಢೋ ನ ತ್ವಾಂ ಜಾನಾತಿ ಮೂರ್ತಧೀಃ ॥೧೯॥
ಅಯಂ ಶಬ್ದೋಹರಿಸ್ತ್ವಂ ಹಿ ಶಬ್ದಯೋರ್ನ ಭಿದಾ ತಯೋಃ ।
ವಸ್ತುಸ್ವರೂಪಮೇಕಂ ಹಿ ಭೇದಕೃದ್ಭ್ರಮಮೇವ ತತ್ ॥೨೦॥

ಅನಂತರ, ಶ್ರೀ ಶಿವನು, ತಟ್ಟನೆ ಅವನನ್ನು ಎಬ್ಬಿಸಿ ತನ್ನ ತೊಡೆಯಮೇಲೆ ಕೂರ್ಚಿಸಿಕೊಂಡು, ಮತ್ತೆ ಮತ್ತೆ ಅವನನ್ನು ಆಲಿಂಗಿಸಿಕೊಳ್ಳುತ, ಹೀಗೆ ಮಧುರವಾದ ವಾಕ್ಯವನ್ನು ಹೇಳಿದನು ॥೧೪॥

ಶ್ರೀಶಿವನು ಹೇಳಿದುದೇನೆಂದರೆ -

ಅಯ್ಯಾ! ರಾಮ! ನೀನು, ದುಷ್ಟನಿಗ್ರಹವನ್ನು ಮಾಡಿ, ಶಿಷ್ಟಸಂರಕ್ಷಣೆಯನ್ನೂ ಮಾಡುವನಾಗು. ನಿನ್ನಲ್ಲಿ ಸ್ವಭಾವಸಿದ್ಧವಾಗಿರುವ ಸದ್ಗುಣಗಳು, ಯಾವನಿಂದತಾನೇ ವರ್ಣಿಸಲ್ಪಡುವುದಕ್ಕೆ ಸಾಧ್ಯವಾಗುವುದು? ॥೧೬॥

ಅತಿಬಲಿಷ್ಠವಾಗಿರುವ ಈ ಧನುಸ್ಸನ್ನು ದೀಘ್ರವಾಗಿ ಭಂಜಿಸುವನಾಗು. ಸರ್ವಲೋಕಹಿತಪ್ರದಳೂ ಮಂಗಳಾತ್ಮಕಳಳೂ ಅಯೋನಿಜಳೂ ಭೂಗರ್ಭಸಂಭವಳೂ ಆದ ಈ ಸೀತೆಯನ್ನು ವಿವಾಹ ಮಾಡಿಕೋ. ಇವಳು ನಿನ್ನನ್ನು ನಿನ್ನ ನೆಳಲಂತೆ ಅನುಸರಿಸಿ ಒಂದಿರುವ ಸಾಕ್ಷಾಲ್ಲಕ್ಷ್ಮಿಯು. ಸಾಕ್ಷಾನ್ನಹಾವಿಷ್ಣುವಾದ ನೀನು, ದೇವಬೃಂದದಿಂದ ಪ್ರಾರ್ಥಿಸಲ್ಪಟ್ಟು, ಈ ರಾಮರೂಪದಲ್ಲಿ ಅವತರಿಸಿರುವೆ ॥೧೭ -೧೮॥

ನೀನು ಅನಾದಿಯಾದವನು; ಅನಿರ್ದೇಶ್ಯನಾದವನು; ಗುಣಾತೀತನೂ ಪರಾತ್ಪರನೂ ಆಗಿರುವೆ. ಇಂತಹ ನಿನ್ನನ್ನು, ಯೋಗವಾಯಾವೃತನಾಗಿ ಮೂಢಬುದ್ಧಿಯಾದ ಮೂಢಜಂತುವು ಸುತರಾಂ ಅರಿಯಲಾರನು ॥೧೯॥

ನಾನು ಶಂಭುವೆಂದು ಕರೆಯಿಲ್ಪಡುವೆನು; ನೀನು ಹರಿಯೆಂದು ಕರೆಯಿಲ್ಪಡುವೆ. ಹೀಗಿದ್ದರೂ, ಆಯೆರಡು ಶಬ್ದಗಳಿಗೂ ಸ್ವಲ್ಪವೂ ಭೇದವಿಲ್ಲ. ಏಕೆಂದರೆ, —ವಸ್ತುಸ್ವರೂಪವೊಂದೇ ಆಗಿರುವುದು, ನಮ್ಮಿಬ್ಬರಿಗೂ ಯಾವನು ಭೇದವನ್ನು ಕಲ್ಪಿಸುವನೋ, ಅವನು ಭ್ರಮಿತನಾಗಿ ಯಾಗುವನು ॥೨೦॥

ಈಷದನ್ತರಬುದ್ಧೀನಾಂ ಅಹಙ್ಕಾರಃ ಪ್ರವರ್ತತೇ ।
ಅಹಙ್ಕಾರಬಲಾಜ್ಜೀವೋ ದೂಷಣಾಯು ಪ್ರವರ್ತತೇ ॥೦೦॥
ಅಯಂ ದೇವೋ ಮಮ ಸ್ವಾಮೀ ದಾಸೋಽಹಂ ತಸ್ಯ ಭಕ್ತಿತಃ ।
ಪ್ರವರ್ತತೇ ಹಿ ಪೂಜಾಯಾಂ ತಸ್ಯಾರಾಧನಮಿಷ್ಯತೇ ॥೦೧॥
ಅನಾಧನಾತ್ ಸುಖಪ್ರಾಪ್ತಿಃ ದೂಷಣಾದ್ದುಃಖಸಙ್ಗಮಃ
ಪುನಃ ಸಂಸಾರಜಲಧೌ ಪತನಂ ನ ವಿನಿರ್ಗಮಃ ॥೦೨॥
ಆರಾಧನಾದ್ಯಥಾ ಸ್ವರ್ಗೇ ದೂಷಣಾನ್ನರಕಸ್ತಥಾ
ಸುಖದುಃಖೇ ಸಮೇ ನ ಸ್ತೋ ಯತ್ರಾಧಿಕ್ಯಂ ತದಾಧಿಕಮ್ ॥೦೩॥
ಪುಣ್ಯಪಾಪೇ ಹಿ ಸಂಸಾರಕಾರಣೇ ಇತ್ಯುದೀರಿತೇ
ತಸ್ಮಾದ್ಭೇದೋ ನ ಕರ್ತವ್ಯಃ ಸಂಸಾರಂ ತರ್ತುಮಿಚ್ಛತಾ ॥೦೪॥
ಭೇದಜ್ಞಾನಾದ್ಬಹೂನ್ ದೋಷಾನ್ ಪ್ರಾಪ್ನೋತಿ ಪ್ರಾಜ್ಞೋ ಧರ್ಮಾತ್ಮಾಕಃ ।
ಈಷದಪ್ಯನ್ತರಂ ಕುರ್ವನ್ ಭಯಮಾಪ್ನೋತಿ ಮಾನವಃ ॥೦೫॥

ಮನಸ್ಸಿನಲ್ಲಿ ಸ್ವಲ್ಪಭೇದಬುದ್ಧಿಯುದಯಿಸಿದಮಾತ್ರದಿಂದಲೇ, ಪುರುಷರಿಗೆ ಅಹಂಕಾರಪ್ರವೃತ್ತಿಯುಂಟಾಗುವುದು. ಈ ಅಹಂಕಾರಬಲದಿಂದ, ಜೀವನು ಪರದೂಷಣೆಯಲ್ಲಿ ಪ್ರವರ್ತಿಸುವನು ॥೨೦॥

ಪ್ರಥಮತಃ ' ಈ ದೇವರು ನನಗೆ ಸ್ವಾಮಿಯು; ನಾನು ಇವನಿಗೆ ಭಕ್ತಿಪೂರ್ವಕವಾಗಿ ದಾಸನಾಗಿರುವೆನು ' ಎಂದು ಭಾವನೆಮಾಡುತ, ತನಗೆ ಇಷ್ಟವಾದ ದೇವರ ಪೂಜೆಯಲ್ಲಿ ಪುರುಷನು ಪ್ರವರ್ತಿಸುವನು; ಆ ದೇವರ ಆರಾಧನೆಯನ್ನೂ ಅಪೇಕ್ಷಿಸುವನು ॥೨೧॥

ಹೀಗೆ ಆರಾಧನಮಾತ್ರದಲ್ಲಿಯೇ ಪರ್ಯವಸಾನವಾದರೆ, ಅದರಿಂದ ಯಾವ ಹಾನಿಯೂ ಇಲ್ಲ: ಕೇವಲ ಸುಖಪ್ರಾಪ್ತಿಯೇ ಆಗುವುದು. ಆದರೆ, ಪುರುಷನು ಅಷ್ಟರಲ್ಲಿಯೇ ನಿಲ್ಲುವುದಿಲ್ಲ; ದೇವತಾಂತರದೂಷಣೆಗೂಪಕ್ರಮಿಸುವನು ಈ ದೂಷಣೆಯಿಂದ ದುಃಖಸಂಗ್ರಹವಾಗುವುದು; ಮತ್ತೆ ಸಂಸಾರಸಮುದ್ರದಲ್ಲಿ ಪತನವುಂಟಾಗುವುದು; ಅಲ್ಲಿಂದೀಚೆಗೆ ಬರುವುದಕ್ಕೂ ಆಗುವುದಿಲ್ಲ ॥೨೨॥

ಇಷ್ಟದೇವತೆಯು ಆರಾಧನೆಯಿಂದ ಸ್ವರ್ಗಸುಖವು ಹೇಗೆ ಸಂಭವಿಸುವುದೋ, ಹಾಗೆ ದೇವತಾಂತರದೂಷಣೆಯಿಂದ ನರಕವೂ ನಿಯತವಾಗಿ ಸಂಭವಿಸುವುದು. ಆದರೆ, ಈ ಸುಖದುಃಖಗಳೆರಡೂ ಎಂದಿಗೂ ಒಂದೇ ಸಮವಾಗಿರುವುವೆಂದೂ ತಿಳಿಯಬಾರದು; ಆರಾಧನೆಯಧಿಕವಾದರೆ ಸುಖವೂ, ದೂಷಣೆಯಧಿಕವಾದರೆ ದುಃಖವೂ ಹೆಚ್ಚಾಗುವುವು ॥೨೩॥

' ತಾವನ್ಮಾತ್ರೇಣ ಹಾನಿಯೇನು? ' ಎಂದು ಕೇಳಿದರೆ,—ಪುಣ್ಯಪಾಪಗಳು ಸಂಸಾರಕ್ಕೆ ಕಾರಣಭೂತಗಳೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುವು. ಭೇದಬುದ್ಧಿಯಿಂದ ಈ ಪುಣ್ಯಪಾಪಗಳುದಯಿಸುವುವು. ಅದುಕಾರಣ, ಸಂಸಾರಸಾಗರವನ್ನು ದಾಟಬೇಕೆಂದಪೇಕ್ಷಿಸತಕ್ಕವನು, ಭೇದಬುದ್ಧಿಯನ್ನೆಂದಿಗೂ ಮಾಡಬಾರದು ॥೨೪॥

ಅಯ್ಯಾ! ಪ್ರಾಜ್ಞಶಿರೋಮಣಿಯಾದ ಶ್ರೀರಾಮನೆ! ಎಂತಹ ಧರ್ಮನಿಷ್ಠನಾಗಿದ್ದರೂ, ಭೇದಜ್ಞಾನದಿಂದ ಅನೇಕ ದೋಷಗಳನ್ನು ಹೊಂದುವನು. ಸ್ವಲ್ಪ ಭೇದವನ್ನು ಕಲ್ಪಿಸಿದರೂ, ಮನುಷ್ಯನು ಕೇವಲ ಭಯಭಾಜನನಾಗುವನು ॥೨೫॥

ಧನುರ್ಭಙ್ಗಂ ಕುರು ಕ್ಷಿಪ್ರಂ ಪಶ್ಯತೋ ಮಮ ರಾಘವ ।
ಸೀತಾಸಮೇತಸ್ತ್ವಂ ರಾಮ ಜಹಿ ರಕ್ಷೋಗಣಾನ್ ಬಹೂನ್ ॥೨೬॥

ಶ್ರೀ ಸೂತಉವಾಚ.

ಏತಸ್ಮಿನ್ನೇವ ಸಮಯೇ ಧನುರಾನೀತಮುತ್ತಮಮ್ ।
ಶಿವಹಸ್ತಗತಂ ಪೂರ್ವಂ ಮಹಾಸಾರಂ ಮಹೋನ್ನತಮ್ ॥೨೭॥
ಸರ್ವರತ್ನವಿಜೆತ್ರಾಙ್ಗಂ ಕಿಙ್ಕಿಣೀಶತಶೋಭಿತಮ್ ।
ದ್ರಷ್ಟುಂ ತೋಲಯಿತುಂ ವಾಪಿ ನ ಶಕ್ಯಂ ಧರಣೀತಲೇ ॥೨೮॥
ರಾಜಭಿಃ ಸ್ಪರ್ಧಿತಸ್ತ್ಯಕ್ತಂ ತೋಲನೇ ಕಾ ಕಥಾ ಪುನಃ ।
ಅಷ್ಟೌ ಭೃತ್ಯಸಹಸ್ರಾಣಿ ಸಮೂಹುಸ್ತೇ ಕಥಞ್ಚನ ॥೨೯॥
ಪೇಟಿಕಾಂ ಧನುಷಃ ಸ್ಥಾನಂ ನೇತ್ರಜಾರ್ಘ್ಯಪ್ರದಾಯಿನಃ ।
ವಿದಾರಯನ್ತಿ ವೀರಾಘ್ನಾ ದ್ರವ್ಯೈಃ ಸಜ್ಞಾನನೇಕಶಃ ॥೩೦॥
ಶಬ್ದಃ ಸಮಭವತ್ ತತ್ರ ಪರ್ವಣೀವ ಸಮುದ್ರಗಃ ।
ಭೂಚರಾಃ ಖೇಚರಾಃ ಸರ್ವೇ ನಿರೀಕ್ಷನ್ತೇ ಪರಸ್ಪರಮ್ ॥೩೧॥

ಅಯ್ಯಾ ರಾಘವ! ನೀನು ನೋಡುತಿರುವಾಗಲೇ ನೀನು ಬೇಗನೆ ಧನುರ್ಭಂಗವನ್ನು ಮಾಡು. ಅಯ್ಯಾ! ರಾಮ! ಒಳಕ ನೀನು ಸೀತಾದೇವಿಯನ್ನು ವಿವಾಹವಾಡಿಕೊಂಡವನಾಗಿ, ಅನೇಕರಾದ ರಾಕ್ಷಸರನ್ನು ಸಂಹರಿಸುವನಾಗು. (ಎಂದು ಶ್ರೀಪರಮೇಶ್ವರನು ಹೇಳಿದನು) ॥೨೬॥

ಶ್ರೀ ಸೂತಮುನಿಯು ಶೌನಕಾದಿಗಳನ್ನು ಕುರಿತು ಹೇಳುವರು :—

ಎಲ್ಲೆ ಶೌನಕಾದಿ ಮುನಿಗಳಿರಾ! ಈರೀತಿಯಾಗಿ ಶ್ರೀಪರಮೇಶ್ವರನು ರಾಮಚಂದ್ರನಿಗೆ ಹೇಳುತಿರುವಾಗಲೇ, ಪೂರ್ವದಲ್ಲಿ ಶಿವಹಸ್ತಗತವಾಗಿದ್ದ—ಮಹಾಸಾರವಾಗಿಯೂ ಮಹೋನ್ನತವಾಗಿಯೂ ಇರುವ—ಧನುಸ್ಸು ಅಲ್ಲಿಗೆ ತರಲ್ಪಟ್ಟಿತು ॥೨೭॥

ಆ ಧನುಸ್ಸು, ಸಮಸ್ತ ರತ್ನಗಳಿಂದಲೂ ವಿಚಿತ್ರವಾಗಿಯೂ, ಸಾವಿರಾರು ಕಿರುಗಂಟೆಗಳಿಂದ ಶೋಭಿತವಾಗಿಯೂ ಇದ್ದಿತು. ಆ ಧನುಸ್ಸು, ನೋಡಲ್ಪಡುವುದಕ್ಕಾಗಲಿ-ಹಿಡಿಯೋರಿಸಲ್ಪಡುವುದಕ್ಕಾಗಲಿ ಭೂಮಂಡಲದೊಳಗಾಗಿ ಯಾರಿಗೂ ಸಾಧ್ಯವಲ್ಲ. ಅನೇಕರಾದ ರಾಜರುಗಳು ಅದನ್ನು ಮುಟ್ಟುವುದಕ್ಕೂ ಶಕ್ತರಾಗಿಲ್ಲದೆ ಬಿಟ್ಟುಬಿಟ್ಟು ಓಡಿಹೋಗಿರುವರು; ಹೀಗಿರುವಾಗ, ಅದನ್ನು ಎತ್ತುವುದರಲ್ಲಿಯೂ ಹಿಡಿಯೋರಿಸುವುದರಲ್ಲಿಯೂ ಹೇಳುವುದೇನು? ಇಂತಹ ಅಗಾಧವಾದ ಧನುಸ್ಸನ್ನು ಇಟ್ಟಿದ್ದ ಪೆಟ್ಟಿಗೆಯನ್ನು, ಎಂಟುಸಾವಿರಮಂದಿ ಭೃತ್ಯರು ಅತಿಪ್ರಯಾಸದಿಂದ ಅಲ್ಲಿಗೆ ಹೊತ್ತುಕೊಂಡು ಒಂದರು. ಆಗ ಅದನ್ನು ನೋಡುವುದಕ್ಕೆ ಅನೇಕವಾಗಿ ಗುಂಪುಕೂಡಿದ್ದ ವೀರಸಮೂಹಗಳನ್ನು, ವೇತ್ರಲತೆ (ಬೆತ್ತ)ಯನ್ನು ಹಿಡಿದು ಕೈಯೆಲ್ಲ ಜರ್ಝರವಾಗಿರುವ ಕಟ್ಟಾಳುಗಳವರು, ಮಧ್ಯದಲ್ಲಿ ದಾರಿದೀಪಿಸಿಕೊಂಡು ಬರುತಿದ್ದರು ॥೨೪—೩೦॥

ಆ ಸಮಯದಲ್ಲಿ, ಪರ್ವಕಾಲವಲ್ಲಿ ಸಮುದ್ರದೊಳಗುಂಟಾಗುವಂತೆ, ಅತಿಗಂಭೀರವಾದ ಧ್ವನಿಯುಂಟಾಯ್ತು; ಭೂಚರರೂ ಖೇಚರರೂ ಪರಸ್ಪರವಾಗಿ ನೋಡಲುಪಕ್ರಮಿಸಿದರು ॥೩೧॥

ಕ್ವ ರಾಮಃ ಕ್ವ ಧನುರ್ಬಾಲಃ ಕಾಕಪಕ್ಷಧರೋ ನರಃ ।
ಇತೀರಯನ್ತಿ ಸರ್ವತ್ರ ನ ಜಾನನ್ತಿ ಹರಿಂ ಪರಮ್ ॥೩೦॥

ಇನ್ದ್ರಾದಿಲೋಕಪಾಲಾನಾಂ ಮುನೀನಾಮಪಿ ವಿಸ್ಮಯಃ ।
ಅಭೂತ್ ತದಾ ಧನುರ್ದೃಷ್ಟ್ವಾ ತನ್ಮಹಾದ್ಭುತದರ್ಶನಮ್ ॥೩೧॥

ಯಥಾಕಥಞ್ಚಿದಾನೀತಂ ಸಭಾಭ್ಯಾಶಂ ಧನುಃ ಪರಮ್ ।
ರಾಜ್ಞಾಂ ಯದ್ದರ್ಶನಾದೇವ ಸರ್ವಗರ್ವವಿನಿರ್ಗಮಃ ॥೩೪॥

ಇತಿ ಶ್ರೀ ಬಾಲಕಾಣ್ಡೇ ಸೀತಾವಿವಾಹಾಯ ಸರ್ವದೇವಾಗಮನಂ
ನಾಮ ಏಕೋನತ್ರಿಂಶಃ ಸರ್ಗಃ.




'ಇನ್ನೂ ಕಾಕಪಕ್ಷಧರನಾಗಿರುವ ಮನುಷ್ಯಬಾಲಕನಾದ ಈ ರಾಮನೆಲ್ಲಿ! ಈ ದಿವ್ಯವಾದ ಶೈವಧನುಸ್ಸೆಲ್ಲಿ!! ಇದನ್ನು ಇವನು ಹೆದೆಯೇರಿಸುವುದೆಂದರೇನು!!!' ಎಂದು, ಎಲ್ಲಾಕಡೆಯಲ್ಲಿಯೂ ಜನರು ಹೇಳಲುಪಕ್ರಮಿಸಿದರು. ಆದರೆ, ಅವರೊಬ್ಬರೂ ಇವನು ಪರಮಾತ್ಮನೆಂಬುದನ್ನು ಅರಿಯರು ॥೨೨॥

ನೋಡುವುದಕ್ಕತ್ಯಾಶ್ಚರ್ಯಕರವಾಗಿರುವ ಆ ಶಿವಧನುಸ್ಸನ್ನು ನೋಡಿ, ಇಂದ್ರಾದಿಲೋಕಪಾಲಕರಿಗೂ ಮಹರ್ಷಿಗಳಿಗೂ ಕೂಡ ಅತಿಯಾಗಿ ಆಶ್ಚರ್ಯವುಂಟಾಯ್ತು ॥೨೩॥

ಇಂತಹ ಲೋಕೋತ್ತರವಾದ ಧನುಸ್ಸು, ಅಲ್ಲಿಗೆ ಅತಿಪ್ರಯಾಸದಿಂದ ತರಲ್ಪಟ್ಟಿತು. ಅದನ್ನು ನೋಡಿದಮಾತ್ರದಿಂದಲೇ, ಅಲ್ಲಿದ್ದ ದೊರೆಗಳಿಗೆಲ್ಲ, ಗರ್ವಸರ್ವಸ್ವವೂ ನಿಶ್ಶೇಷವಾಗಿ ತೊಲಗಿಹೋಯ್ತು ॥೨೪॥

ಇದು ಬಾಲಕಾಂಡದಲ್ಲಿ ಸೀತಾವಿವಾಹಕ್ಕಾಗಿ ಸಮಸ್ತ ದೇವತಾಸಮಾಗಮ
ವರ್ಣನವೆಂಬ ಇಪ್ಪತ್ತೊಂಬತ್ತನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ತ್ರಿಂಶಃ ಸರ್ಗಃ.

ಶ್ರೀ ಸೂತ ಉವಾಚ.

ವಿಶ್ವಾಮಿತ್ರಾಭ್ಯನುಜ್ಞಾತೋ ರಾಮಃ ಪರಪುರಂಜಯಃ ।
ದೃಢಂ ಬದ್ಧ್ವಾ ಪರಿಕರಂ ಸಮುತ್ಥಾಯ ಸಭಾನ್ತರಾತ್ ॥೧॥
ಭುಜಾವಾಸ್ಫಾಲಯಾಮಾಸ ಕನ್ದರ್ಪಸದೃಶಃ ಪ್ರಭುಃ ।
ತದಾಸೀನ್ಮೋಹನಾಕಾರಃ ಸರ್ವೇಷಾಮಪಿ ದೇಹಿನಾಮ್ ॥೨॥
ಸ್ತ್ರೀಣಾಮಾಸೀತ್ತದಾ ರಾಮಂ ದೃಷ್ಟ್ವೈತ್ಯನ್ತಂ ಸುವಿಸ್ಮಯಃ ॥೩॥
ಈದೃಶೀ ಬ್ರಹ್ಮಣಾ ಸೃಷ್ಟಿಃ ಅಸ್ತಿ ಕಿಂ ಭೂತಳೇಪ್ಯಹೋ ।
ಕೋಟಿಕನ್ದರ್ಪಸದೃಶೋ ಹ್ಯವಾಙ್ಮನಸಗೋಚರಃ ।
ಅತಿನೀಲಘನಶ್ಯಾಮಃ ಪುಣ್ಡರೀಕಾಯತೇಕ್ಷಣಃ ॥೪॥
ನೀಲಾಳಕಾವಸಞ್ಛನ್ನಮುಖಪದ್ಮಮನೋಹರಃ ।
ಸರ್ವಾಙ್ಗಸುನ್ದರಃ ಶ್ರೀಮಾನ್ ಮತ್ತೇಭಗತಿರುನ್ನತಃ ।
ಸರ್ವೇ ಪಶ್ಯನ್ತಿ ಸೌನ್ದರ್ಯಂ ಕೃತಾರ್ಥಾನಿಮಿಷೇಕ್ಷಣಾಃ ॥೫॥

ಬಾಲಕಾಂಡದಲ್ಲಿ ಮುನ್ನೂತ್ತನೆಯ ಸರ್ಗವು.

ಪುನಃ ಶ್ರೀಸೂತರು ಶೌನಕಾದಿಮುನಿಗಳನ್ನು ಕುರಿತು ಹೇಳುವರು :—

ಎಲೈ ಶೌನಕಾದಿಮುನಿಗಳಿರಾ! ಪೂರ್ವೋಕ್ತರೀತಿಯಾಗಿ ವಿಶ್ವಾಮಿತ್ರಮುನಿಯಿಂದ ಆಜ್ಞಪ್ತನಾಗಿ, ಶತ್ರುಸಂಹಾರಕನಾದ ಶ್ರೀರಾಮನು, ಸಭಾಮಧ್ಯದಿಂದ ಎದ್ದು, ಸೊಂಟಕ್ಕೆ ದೃಢವಾಗಿ ನಡುಕಟ್ಟು ಕಟ್ಟಿಕೊಂಡು, ತನ್ನ ಭುಜವನ್ನು ಒಂದಾವೃತ್ತಿ ತಟ್ಟಿದನು. ಆಗ, ಮನ್ಮಥ ಸಮನಾಗಿದ್ದ ಆ ರಾಮನು, ಸಮಸ್ತ ವಾಙ್ಮನಗಳಿಗೂ ಮೋಹವನ್ನುಂಟುಮಾಡುತಿದ್ದನು. ಆ ಸಮಯದಲ್ಲಿ, ಇಂತಹ ಶ್ರೀರಾಮನನ್ನು ಕಂಡ, ಆ ಸಭೆಯಲ್ಲಿದ್ದ ಸಮಸ್ತ ಸ್ತ್ರೀಯರಿಗೂ ಅತ್ಯಂತವಾಗಿ ಆಶ್ಚರ್ಯವುಂಟಾಯ್ತು ॥೧—೩॥

ಆಗ ಆ ಸಭಾಮಧ್ಯದಲ್ಲಿ ಜನರು ಹೀಗೆ ಮಾತಾಡಿಕೊಂಡರು :—ಅಹಹ! ಭೂಮಿಯಲ್ಲಿ ಇಂತಹ ವಸ್ತುವನ್ನೂ ಬ್ರಹ್ಮನು ಸೃಜಿಸಿರುವನೆ! ಈ ಲೋಕೋತ್ತರಮೂರ್ತಿಯಾದ ಶ್ರೀರಾಮನು, ಕೋಟಿಮನ್ಮಥಕುಲ್ಯನಾಗಿರುವನು! ಇವನ ರೂಪವು, ಅವಾಙ್ಮನಸಗೋಚರವಾಗಿರುವುದು! ನೀಲಮೇಘಶ್ಯಾಮಲನೂ ಕಮಲನೇತ್ರನೂ ಆದ ಇವನ ಮುಖಕಮಲವನ್ನು, ಕಪಿಗಿರುವ ಮುಂಗುರುಳುಗಳೆಂಬ ದುಂಬಿಗಳು ಆವರಿಸಿಕೊಂಡು ಶೋಭಾತಿಶಯವನ್ನುಂಟುಮಾಡುತಿರುವುವು! ಇವನ ಸಮಸ್ತವಾದ ಅವಯವಗಳೂ ಅತಿಸುಂದರವಾಗಿರುವುವು! ಮಹಾಶಾಂತಿಯುಕ್ತನಾದ ಇವನು, ಮತ್ತಗಜಗಮನನಾಗಿಯೂ, ಬೆನ್ನುಶಾಲಿಯಾಗಿಯೂ ಇರುವನು! ಸಮಸ್ತ ಜನರೂ, ತಮ್ಮ ಕಣ್ಣುಗಳನ್ನು ಸಾರ್ಥಕಪಡಿಸಿಕೊಳ್ಳುತ, ರೆಪ್ಪೆಯನ್ನು ಮುಚ್ಚದೆ ಇವನ ಸೌಂದರ್ಯವನ್ನು ನೋಡುತಿರುವರು! ॥೪—೫॥

ವದತ್ಸ್ವೇವಂ ಸಭಾಮಧ್ಯೇ ಸರ್ವಪ್ರಾಣಿಷು ಸಾದರಮ್ ।
ಋಷೀನ್ ನತ್ವಾ ಮುನಿಗಣಾನ್ ದೇವಾನ್ ವಿಪ್ರಾನ್ ಮಹೇಶ್ವರಮ್ ॥೬॥
ಸ್ವಯಂ ವಿಸ್ರಸ್ಯ ತಾಂ ಪೇಟೀಂ ಧನುಃ ಸಂಸ್ಪೃಶ್ಯ ರಾಘವಃ ।
ತೋಲನಂ ತೃಣವತ್ ಕೃತ್ವಾ ಧನುರಾಸ್ಫಾಲ್ಯ ಯತ್ನತಃ ॥೭॥
ಸಜ್ಯಂ ಚಕಾರ ಬಲವಾನ್ ಬಭಞ್ಜ ಮಧ್ಯೇ ಲಕ್ಷ್ಮಂ ಗಜೋ ಯಥಾ ॥೮॥
ತಸ್ಯ ಶಬ್ದೋ ಮಹಾನಾಸೀತ್ ನಿರ್ಘಾತಸಮನಿಸ್ವನಃ ।
ಭೂಮಿಶ್ಚನ್ಪ್ರಚ್ಛ ಸುಮಹಾನ್ ಪರ್ವತಸ್ಯೇವ ದೀರ್ಯತಃ ॥೯॥
ನಿಪೇತುಶ್ಚ ಜನಾಃ ಸರ್ವೇ ತೇನ ಶಬ್ದೇನ ಮೋಹಿತಾಃ ।
ವರ್ಜಯಿತ್ವಾ ಮುನಿವರಂ ರಾಜಾನಂ ತೌ ಚ ರಾಘವೌ ॥೧೦॥
ಜಯೇತಿ ಬ್ರಾಹ್ಮಣಾನಾಂ ಹಿ ಮುನೀನಾಂ ಚಾಭವದ್ಧ್ವನಿಃ ।
ಪುಷ್ಪವೃಷ್ಟಿಃ ಪಪಾತೋಚ್ಚೈಃ ದೇವದುನ್ದುಭಿನಿಸ್ವನಃ ।
ದೇವಾನಾಮಭವತ್ ತೋಷಃ ಸ್ವಸ್ಯ ಕಾರ್ಯಸ್ಯ ನಿರ್ಜಯಾತ್ ॥೧೧॥
ಶಿವಃ ಶ್ರೀರಾಮಮಾಲಿಙ್ಗ್ಯ ಮೂರ್ಧ್ನ್ಯವಘ್ರಾಯ ಸಾದರಮ್ ।
ಪ್ರೋವಾಚ ವಚನಂ ಬಾಲಂ ಸ್ವಜ್ಯಮೂರೋಸ್ಯ ರಾಘವಮ್ ॥೧೨॥

ಹೀಗೆಂದು ಆ ಸಭಾಮಧ್ಯದಲ್ಲಿ ಸಮಸ್ತ ಪ್ರಾಣಿಗಳೂ ಆದರದೊಡನೆ ಹೇಳುತಿರಲಾಗಿ, ಮಹಾಬಲನಾದ ಶ್ರೀರಾಮನು, ಅಲ್ಲಿದ್ದ ದೇವರ್ಷಿಗಳನ್ನೂ ಬ್ರಹ್ಮರ್ಷಿಗಳನ್ನೂ ದೇವತೆಗಳನ್ನೂ ಬ್ರಾಹ್ಮಣರನ್ನೂ ಶ್ರೀಪರಮೇಶ್ವರನನ್ನೂ ನಮಸ್ಕರಿಸಿ, ತಾನೇ ಸಾಕ್ಷಾತ್ತಾಗಿ ಆ ಪೆಟ್ಟಿಗೆಯನ್ನು ಬಿಚ್ಚಿ, ಧನುಸ್ಸನ್ನು ಸ್ಪರ್ಶಿಸಿ, ಅದನ್ನು ಸಣ್ಣ ಹುಲ್ಲುಕಡ್ಡಿಯಂತೆ ಮೇಲಕ್ಕೆತ್ತಿ, ಹೆದೆ ಹೇರಿಸಿದನು; ಅನಂತರ, ಅನೆಯು ಕಬ್ಬಿನ ಜಲ್ಲೆಯನ್ನು ಮುರಿಯುವಂತೆ, ಆ ಧನುಸ್ಸನ್ನು ಮುರಿದುಬಿಟ್ಟನು ॥೬ — ೮॥

ಆ ಸಮಯದಲ್ಲಿ, ದೊಡ್ಡ ಸಿಡಿಲು ಹೊಡೆದಂತೆ, ಮಹಾಶಬ್ದವುಂಟಾಯ್ತು; ಪರ್ವತವು ಸೀಳಿದಂತೆ ಆ ಧನುಸ್ಸು ಸೀಳಿ ಬಿದ್ದುಬಿಡಲಾಗಿ, ವಿಶೇಷವಾದ ಭೂಕಂಪವೂ ಉಂಟಾಯ್ತು ॥೯॥

ಆಗ, ವಿಶ್ವಾಮಿತ್ರಮುನಿಯನ್ನೂ ಜನಕರಾಜನನ್ನೂ ರಾಮಲಕ್ಷ್ಮಣರನ್ನೂ ಬಿಟ್ಟು — ಉಳಿದ ಸಮಸ್ತ ಜನರೂ, ಆ ಮಹಾಶಬ್ದದಿಂದ ಮೂರ್ಛಿತರಾಗಿ ಬಿದ್ದುಬಿಟ್ಟರು ॥೧೦॥

ಆ ಕಾಲದಲ್ಲಿ, ಬ್ರಾಹ್ಮಣರೂ ಮುನಿಗಳೂ "ಜಯ ಜಯ" ಎಂದು ಧ್ವನಿಮಾಡಿದರು; ಪುಷ್ಪವೃಷ್ಟಿಯೂ, ವಿಶೇಷವಾಗಿ ದೇವದುಂದುಭಿಧ್ವನಿಯೂ ಆದುವು. ದೇವತೆಗಳಿಗೆಲ್ಲ, ತಮ್ಮ ಕಾರ್ಯವು ನಿರ್ವಿಘ್ನವಾಗಿ ನೆರವೇರುವುದೆಂಬ ಸಂಭ್ರಮೆಯಿಂದ, ಅತ್ಯಂತವಾಗಿ ಸಂತೋಷವುಂಟಾಯ್ತು ॥೧೧॥

ಆ ಬಳಿಕ, ಶ್ರೀಪರಮೇಶ್ವರನು, ಬಾಲಕನಾದ ಶ್ರೀರಾಮನನ್ನು ಆಲಿಂಗಿಸಿಕೊಂಡು, ಅದರದೊಡನೆ ತಲೆಯಲ್ಲಿ ಆಘ್ರಾಣಿಸಿ, ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಈರೀತಿಯಾಗಿ ಹೇಳಿದನು ॥೧೨॥

ಜ್ಞಾತಸಾರೋಸಿ ರಾಮ ತ್ವಂ ಕಾರ್ಯಸಿದ್ಧಿಃ ಕರೇ ತವ ।
ಜನಕಸ್ಯ ಸುತಾಂ ಕನ್ಯಾಂ ಸೀತಾಮುದ್ವೋಢುಮರ್ಹಸಿ ॥೨೩॥
ಸರ್ವೇ ಪಶ್ಯಂತಿ ರಾಜಾನಃ ತವ ವೀರ್ಯಂ ಪರಾಕ್ರಮವ್ ।
ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ ॥೨೪॥
ಮನು ಹಸ್ತಗತಂ ಚಾಪಂ ಕೋ ವಾ ತಂ ಭಙ್ಕ್ತುಮರ್ಹತಿ ।
ನಾಸಾರಇತಿ ವಿಜ್ಞೇಯೋ ವಂತ್ವಾಣೀಗ್ರಹಣಾನ್ವಿತಃ ॥೨೫॥
ರಾಮು ತ್ವಯಾ ವಿನಾ ಕೋ ವಾ ಧನುಸ್ತೋಲಯಿತುಂ ಕ್ಷಮಃ ॥೨೬॥
ನ ಹಿ ದೇವೇಷು ಮರ್ತ್ಯೇಷು ನ ಹಿ ಪನ್ನಗಯಾತುಷು ।
ವೀರ್ಯವಾ೯ ಬಲವಾ೯ ವಾಥ ತ್ವಾದೃಶೋ ರಘುನನ್ದನ ॥೨೭॥
ಇತ್ಯುಕ್ತ್ವಾ ಜನಕಂ ಪ್ರಾಹ ಮುನೀನನ್ಯಾಂಶ್ಚ ಸಾದರಮ್ ।
ಸ್ವಯಂ ತಸ್ಯ ಗುಣೈಃ ಪ್ರೀತಃ ಪುನರ್ಬೋಧಯಿತುಂ ಪ್ರಭುಃ ॥೨೮॥
ವಿದಿತಂ ಭವತಾ ಪೂರ್ವಂ ರಾಮವೃತ್ತಾನ್ತವೂದಿತಃ ।
ಪ್ರತ್ಯಕ್ಷಕಲಿತೋ ಹ್ಯರ್ಥೋ ವಕ್ತವ್ಯೋ ನ ಪುನರ್ಭವೇತ್ ॥೨೯॥

ಅಯ್ಯಾ! ರಾಮ! ಈಗ ನಿನ್ನ ಶಕ್ತಿಸಾರವು ಸರ್ವರಿಗೂ ಪ್ರತ್ಯಕ್ಷವಾಯ್ತು. ಸಮಸ್ತ ಕಾರ್ಯಸಿದ್ಧಿಯೂ ನಿನ್ನ ಹಸ್ತಗತವಾಗಿರುವುದು. ಇನ್ನು ನೀನು ಜನಕರಾಜಪುತ್ರಿಯಾದ ಬಾಲಿಕೆಯಾದ ಸೀತೆಯನ್ನು ವಿವಾಹವಾಡಿಕೊಳ್ಳಬೇಕು ॥೨೩॥

ನಿನ್ನ ವೀರ್ಯವನ್ನೂ ಪರಾಕ್ರಮವನ್ನೂ ಸಮಸ್ತರಾದ ರಾಜರೂ ನೋಡುತ್ತಿರುವರು. ನೀನು ಮಾಡಿದ ಈ ಧನುರ್ಭಂಗವನ್ನು, ಈ ಭೂಮಿಯಲ್ಲಿ ಮತ್ತೊಬ್ಬರೂ ಮನಸ್ಸಿನಲ್ಲಿಯೂ ಮಾಡಲಾರರು ॥೨೪॥

ಅಯ್ಯಾ! ರಾಮ! ನನ್ನ ಕೈಲಿದ್ದ ಆ ಧನುಸ್ಸನ್ನು ಮುರಿಯದೇಕಾದರೆ ಯಾರಿಗೆತಾನೆ ಸಾಮರ್ಥ್ಯವಿರುವುದು. ನನ್ನ ಕೈಯಲ್ಲಿ ಅನೇಕ ದಿವಸ ನೆಲೆಸಿದ್ದ ಆ ಧನುಸ್ಸು ನಿಸ್ಸಾರವಾದುದೆಂದು ಎಂದಿಗೂ ತಿಳಿಯಬಾರದು. ಇಂತಹ ಧನುಸ್ಸನ್ನು, ನೀನು ಹೊರತು ಮತ್ತಾರೂ ಎತ್ತಲೂ ಆರರು ॥೨೫—೨೬॥

ಅಯ್ಯಾ ರಾಘವ! ದೇವತೆಗಳಲ್ಲಾಗಲಿ, ಮನುಷ್ಯರಲ್ಲಾಗಲಿ, ಪನ್ನಗರಲ್ಲಾಗಲಿ, ರಾಕ್ಷಸರಲ್ಲಾಗಲಿ,—ನಿನ್ನಂತಹ ವೀರ್ಯವಂತನೂ ಬಲಿಷ್ಠನೂ ಸಿಕ್ಕುವುದಿಲ್ಲ ॥೨೭॥

ಹೀಗೆಂದು ರಾಮನಿಗೆ ಹೇಳಿ, ಆ ಪರಮೇಶ್ವರನು, ಜನಕರಾಜನ ಗುಣಗಳಿಂದ ಸಂತೋಷಪಟ್ಟವನಾಗಿ, ಅವನಿಗೆ ಮತ್ತೆ ಸ್ಮೃತಿಯುಂಟಾಗುವುದಕ್ಕೋಸ್ಕರ, ಅವನನ್ನೂ ಇತರರಾದ ಯತಿಗಳನ್ನೂ ಕುರಿತು, ಆದರದೊಡನೆ ಈರೀತಿಯಾಗಿ ಹೇಳಿದನು ॥೨೮॥

ಅಯ್ಯಾ' ಜನಕಭೂಪಾಲಕನೆ! ನೀನು ರಾಮನ ವೃತ್ತಾಂತವನ್ನು ಅದ್ಯಂತಸಹಿತವಾಗಿ ಮೊದಲೇ ತಿಳಿದುಕೊಂಡಿರುವೆ. ಪ್ರತ್ಯಕ್ಷವಾಗಿ ಕಂಡಿರುವ ವಿಷಯವು ಮತ್ತೆ ಹೇಳಲ್ಪಡದೇ ಕಾದುದಿಲ್ಲವಷ್ಟೆ! ॥೨೯॥

ಸೀತಾ ದೇಯಾ ರಾಘವಾಯ ಯದರ್ಥಮಹಮಾಗತಃ ।
ದೃಷ್ಟವೀರ್ಯೋ ಭವದ್ಭಿರ್ಯೋ ಮಮ ಕಾರ್ಮುಕಭಞ್ಜನಾತ್ ॥೦೦॥
ಸೀತಾಸಹಾಯೋ ರಾಮಶ್ಚ ಕರಿಷ್ಯತಿ ಮಹಾಬಲಃ ।
ಭಜತಾಮಪಿ ಸರ್ವೇಷಾಂ ಸರ್ವಾಭೀಷ್ಟಫಲಾನ್ಯಯಮ್ ॥೦೧॥
ದಳಂ ಪರ್ಣಂ ಫಲಂ ಪುಷ್ಪಂ ಚುಳುಕಪ್ಲುಂ ಜಲಂ ಹರಿಃ ।
ಶಾಕಂ ದಧಿ ಘೃತಂ ಭಕ್ಷ್ಯಂ ಸುವರ್ಣಂ ಚೇಲಮುತ್ತಮಮ್ ॥೦೨॥
ಭಕ್ತ್ಯಾ ಯಃ ಸಜ್ಜಗೃಹ್ಯ ತದ್ಭಕ್ತೇ ಯೋ ದದಾತಿ ಮಹಾತ್ಮನೇ ।
ತಸ್ಮೈ ದದಾತಿ ವೈಕುಣ್ಠಂ ಪರಾತ್ಪರತರಃ ಪ್ರಭುಃ ॥೦೩॥
ಸ್ವತನ್ತ್ರಃ ಪರಮೇಶಾನಃ ಸರ್ವಜ್ಞಾಶ್ಚ ನಿರಞ್ಜನಃ ।
ಸರ್ವಾತ್ಮಾ ಸರ್ವಭುಕ್ ಸಾಕ್ಷೀ ಸರ್ವಗಃ ಸರ್ವಗೋಚರಃ ॥೦೪॥
ನಿತ್ಯಾನನ್ದಃ ಸರ್ವಸಮಃ ಸರ್ವಕಾರಣಕಾರಣಮ್ ।
ಸರ್ವವೇದಾನ್ತವೇದ್ಯಂ ಯತ್ ರಾಮಪಿಷ್ಟ ನ ಸಂಶಯಃ ॥೦೫॥
ಅಹಂ ರಾಮಃ ಸಪಿಷ್ಟಾಹಂ ನಾವಯೋರಸ್ತಿ ಭೇದನಮ್ ।
ಭೇದಕೃನ್ನರಕಂ ಯಾತಿ ಸಂಸಾರಾಬ್ಧೌ ನಿಮಜ್ಜತಿ ॥೦೬॥

ಈ ರಾಘವನಿಗೆ ಸೀತೆಯನ್ನು ಕೊಟ್ಟು ಮದುವೆ ಮಾಡುವನಾಗು. ನಾನು ಇದಕ್ಕಾಗಿಯೇ ಇಲ್ಲಿಗೆ ಬಂದಿರುವೆನು. ನನ್ನ ಧನುಸ್ಸನ್ನು ಮುರಿದುದರಿಂದಲೇ ಇವನ ವೀರ್ಯಶಕ್ತಿಯು ನಿಮಗೆಲ್ಲರಿಗೂ ಗೋಚರವಾಗಿರುವುದಷ್ಟೆ ! ॥೨೦॥

ಈ ಮಹಾಬಲನಾದ ರಾಮನು, ಸೀತಾಸಹಿತನಾಗಿ, ಸಮಸ್ತರಾದ ಭಕ್ತರಿಗೂ ಸಕಲವಾದ ಇಷ್ಟಾರ್ಥಗಳನ್ನೂ ನೆರವೇರಿಸುವನು ॥೨೧॥

ಚಿಗುರನ್ನಾಗಲಿ, ಎಲೆಯನ್ನಾಗಲಿ, ಫಲವನ್ನಾಗಲಿ, ಪುಷ್ಪವನ್ನಾಗಲಿ, ಒಂದಾಪೋಶನಕ್ಕಾಗುವಷ್ಟು ಜಲವನ್ನಾಗಲಿ, ಶಾಕವನ್ನಾಗಲಿ, ದಧಿ(ಮೊಸರು)ಯನ್ನಾಗಲಿ, ಘೃತವನ್ನಾಗಲಿ, ಭಕ್ಷ್ಯವನ್ನಾಗಲಿ, ಸುವರ್ಣವನ್ನಾಗಲಿ, ವಸ್ತ್ರವನ್ನಾಗಲಿ, ಸಂಗಹಿಸಿ, ಯಾವನು ಭಕ್ತಿಯುಕ್ತನಾಗಿ, ಪರಮಾತ್ಮನಿಗೆ ಸಮರ್ಪಿಸುವನೋ, ಅವನಿಗೆ-ಪರಾತ್ಪರನಾದ ಪರಮಾತ್ಮನು-ದಿವ್ಯವಾದ ವೈಕುಂಠವಾಸವನ್ನನುಗ್ರಹಿಸುವನು ॥೨೨-೨೩॥

ಈ ರಾಮನು, ಸ್ವತಂತ್ರನೂ ಪರಮೇಶ್ವರನೂ ಸರ್ವಜ್ಞನೂ ನಿರಂಜನನೂ ಸರ್ವಾತ್ಮನೂ ಸರ್ವಫಲಭೋಕ್ತೃವೂ ಸರ್ವಸಾಕ್ಷಿಯೂ ಸರ್ವಾಂತರ್ಯಾಮಿಯೂ ಸರ್ವಗೋಚರನೂ ನಿತ್ಯಾನಂದನೂ ಸರ್ವಸಮನೂ ಆದವನು. ಸರ್ವಕಾರಣಕಾರಣವೂ ಸರ್ವವೇದಾಂತವೇದ್ಯವೂ ಆದ ವಸ್ತುವಾವುದುಂಟೋ, ಅದೇ ಈ ರಾಮನು; ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ ॥೨೪-೨೫॥

ನಾನೇ ರಾಮನು; ಅವನೇ ನಾನು. ನಮ್ಮಿಬ್ಬರಿಗೂ ಸ್ವಲ್ಪವೂ ಭೇದವಿಲ್ಲ. ಭೇದವನ್ನು ಕಲ್ಪಿಸತಕ್ಕವನು ನರಕಭಾಗಿಯಾಗುವನು; ಸಂಸಾರವೆಂಬ ಸಮುದ್ರದಲ್ಲಿಯೂ ಮುಣುಗುವನು॥

ರಾಮಃ ಶಿವಃ ಶಿವೋ ರಾಮಃ ನ ಭೇದೋಸ್ತ್ಯನಯೋರ್ದ್ವಯೋಃ ।
ಇತಿ ವಿಜ್ಞಾತವಾ೯ ಧೀರಃ ಸಕಲಂ ಭದ್ರಮಶ್ನುತೇ ॥೨೭॥
ಮಹಾದೇವವಚಃ ಶ್ರುತ್ವಾ ಮುನಯಸ್ತತ್ತ್ವದರ್ಶಿನಃ ।
ಶಿವರಾಮಾರ್ಥಯೋರೈಕ್ಯೇ ನಿಸ್ಸಂದೇಹಾಬಭೂವಿರೇ ॥೨೮॥
ವಿವಾಹಃ ಕ್ರಿಯತಾಂ ಶೀಘ್ರಂ ರಾಘವಾಯ ಮಹಾತ್ಮನೇ ।
ಇತಿ ಶ್ರುತ್ವಾ ನಿಯೋಗಂ ಸಃ ಜನಕೋ ವಾಕ್ಯಮಬ್ರವೀತ್ ॥೨೯॥
ಭಗವನ್ ದೃಷ್ಟವೀರ್ಯೋ ಮೇ ರಾಮೋ ದಶರಥಾತ್ಮಜಃ ।
ಸೀತಾ ಪ್ರಾಣೈರ್ಬಹುಮತಾ ದೇಯಾ ರಾಮಾಯ ಮೇ ಸುತಾ ॥೩೦॥
ಇತ್ಯುಕ್ತ್ವಾಹ ಮುನಿಂ ರಾಜಾ ಪತ್ರಂ ಪ್ರೇಷಯ ಸತ್ವರಮ್ ।
ರಾಜಾ ದಶರಥಃ ಶೀಘ್ರಂ ಆಗಚ್ಛತು ಸಪುತ್ರಕಃ ।
ವಿವಾಹಾರ್ಥಂ ಕುಮಾರಾಣಾಂ ಸದಾರಃ ಸಹ ಬನ್ಧುಭಿಃ ॥೩೧॥
ತಥೇತಿ ಪ್ರೇಷಯಾಮಾಸ ದೂತಾಂಸ್ತ್ವರಿತವಿಕ್ರಮಾನ್ ।
ತೇ ಗತ್ವಾ ರಾಜಶಾರ್ದೂಲಂ ರಾಮಶ್ರೇಯೋ ನ್ಯವೇದಯನ್ ॥೩೨॥

'ರಾಮನೇ ಶಿವನು; ಶಿವನೇ ರಾಮನು. ಇವರಿಬ್ಬರಿಗೂ ಭೇದವಿಲ್ಲ.' ಎಂದು ಚೆನ್ನಾಗಿ ತಿಳಿದುಕೊಂಡಿರುವ ಪ್ರಾಜ್ಞನು, ಸಕಲವಾದ ಮಂಗಳವನ್ನೂ ಅನುಭವಿಸುವನು. (ಎಂದು ಪರಮೇಶ್ವರನು ಹೇಳಿದನು) ॥೨೭॥

ಎಲೈ ಶೌನಕಾದಿಗಳಿರಾ! ಈರೀತಿಯಾಗಿ ಹೇಳಿದ ಶ್ರೀ ಮಹೇಶ್ವರನ ವಚನವನ್ನು ಕೇಳಿ, ತತ್ವಜ್ಞರಾದ ಆ ಮಹರ್ಷಿಗಳೆಲ್ಲರೂ, ಶಿವನಿಗೂ ರಾಮನಿಗೂ ಭೇದವಿಲ್ಲವೆಂಬ ವಿಷಯದಲ್ಲಿ ಸಂದೇಹವನ್ನು ಬಿಟ್ಟುಬಿಟ್ಟರು ॥೨೮॥

ಆ ಬಳಿಕ-'ಮಹಾತ್ಮನಾದ ರಾಮನಿಗೆ ಬೇಗನೆ ವಿವಾಹವು ಮಾಡಲ್ಪಡಬೇಕು' ಎಂಬುದಾಗಿ ಶ್ರೀ ಪರಮೇಶ್ವರನ ಆಜ್ಞೆಯನ್ನು ಕೇಳಿ, ಜನಕನು ಹೀಗೆ ಹೇಳಿದನು ॥೨೯॥

ಹೇ ಭಗವನ್! ದಶರಥಪುತ್ರನಾದ ಶ್ರೀರಾಮನ ವೀರ್ಯವನ್ನು ನಾನು ಚೆನ್ನಾಗಿ ತಿಳಿದುಕೊಂಡೆನು. ನನ್ನ ಪ್ರಾಣಕ್ಕಿಂತಲೂ ಅಧಿಕಳಾದ ನನ್ನ ಮಗಳಾದ ಸೀತೆಯನ್ನು ಈ ರಾಮನಿಗೆ ಕೊಡತಕ್ಕುದೇ ಸರಿ ॥೩೦॥

ಎಂದು ಪರಮೇಶ್ವರನನ್ನು ಕುರಿತು ವಿಜ್ಞಾಪಿಸಿ, ವಿಶ್ವಾಮಿತ್ರ ಮುನಿಯನ್ನು ಕುರಿತು 'ಪೂಜ್ಯರೇ! ತಾವು ದಶರಥನಿಗೆ ಬೇಗನೆ ಪತ್ರವನ್ನು ಕಳುಹಿಸಿರಿ; ದಶರಥಮಹಾರಾಜನು, ತನ್ನ ಮಕ್ಕಳ ವಿವಾಹಕ್ಕೋಸ್ಕರ, ಪುತ್ರರನ್ನೂ ಪತ್ನಿಯರನ್ನೂ ಒಂದುಗೂಡಿಸಿಕೊಂಡು ಇಲ್ಲಿಗೆ ಬೇಗನೆ ಬರಲಿ' ಎಂದು ಪ್ರಾರ್ಥಿಸಿದನು ॥೩೧॥

ಬಳಿಕ, ಆ ವಿಶ್ವಾಮಿತ್ರಮುನಿಯು, ಹಾಗೆಯೇ ಆಗಲೆಂದು ಹೇಳಿ, ಮಹಾವೇಗಶಾಲಿಗಳಾದ ದೂತರನ್ನು ಅಯೋಧ್ಯಾಪಟ್ಟಣಕ್ಕೆ ಕಳುಹಿಸಿದನು. ಆ ದೂತರು ಹೋಗಿ, ದಶರಥ ಮಹಾರಾಜನನ್ನು ಕುರಿತು, ಶ್ರೀರಾಮನಿಗುಂಟಾಗಿರುವ ಅಭ್ಯುದಯವನ್ನು ವಿಜ್ಞಾಪಿಸಿದರು ॥೩೨॥

ಶ್ರುತ್ವಾ ರಾಮಕೃತಂ ರಾಜಾ ಹರ್ಷೇಣ ಮಹತಾ ಪ್ಲುತಃ ।
ಮಿಥಿಲಾಗಮನಾರ್ಥಾಯ ತ್ವರಯಾಮಾಸ ಮನ್ತ್ರಿಣಃ ॥೩೩॥
ಗಚ್ಛನ್ತು ಮಿಥಿಲಾಂ ಸರ್ವೇ ಗಜಾಶ್ವರಥಪತ್ತಯಃ ।
ಏವಂ ಪ್ರಸ್ಥಾಪ್ಯ ಸಕಲಂ ರಾಜಾಪಿ ವಿಪುಲಂ ರಥಮ್ ॥೩೪॥
ಮಹತ್ಯಾ ಸೇನಯಾ ಸಾರ್ಧಂ ಅರುಹ್ಯ ತ್ವರಿತೋ ಯಯೌ ॥೩೫॥
ಆಗತಂ ರಾಘವಂ ಶ್ರುತ್ವಾ ರಾಜಾ ಹರ್ಷಸಮಾಕುಲಃ ।
ಪ್ರತ್ಯುಜ್ಜಗಾಮ ಜನಕಃ ಶತಾನನ್ದಪುರೋಧಸಾ ॥೩೬॥
ಯಥೋಕ್ತಂ ಪೂಜಯಾ ಪೂಜ್ಯಂ ಪೂಜಯಾಮಾಸ ಸತ್ಕೃತಮ್ ।
ರಾಮಸ್ತು ಲಕ್ಷ್ಮಣೇನಾಪಿ ವವನ್ದೇ ಚರಣೌ ಪಿತುಃ ॥೩೭॥
ತತೋ ಜನಕರಾಜೇನ ಮನ್ದಿರೇ ಸನ್ನಿವೇಶಿತಃ ।
ಶೋಭನೇ ಸರ್ವಶೋಭಾಢ್ಯೇ ಸದಾರಃ ಸಸುತಃ ಸುಖೀ ॥೩೮॥
ಅಲಙ್ಕೃತಾ ಚ ನಗರೀ ಗಜಾಶ್ವರಥಸಙ್ಕುಲಾ ।

ಬಳಿಕ ಆ ದಶರಥನು ರಾಮನಿಂದ ಮಾಡಲ್ಪಟ್ಟ ಧನುರ್ಭಂಗಾದಿ ಕಾರ್ಯಗಳನ್ನು ಕೇಳಿದವನಾಗಿ, ಅತ್ಯಧಿಕವಾದ ಹರ್ಷಸಾಗರದಲ್ಲಿ ಕೇಲಿಹೋಗುತ, ಮಿಥಿಲಾನಗರಕ್ಕೆ ಹೋಗುವುದಕ್ಕಾಗಿ ಮಂತ್ರಿಗಳನ್ನು ತ್ವರೆಪಡಿಸಿದನು ॥೩೩॥

'ಸಮಸ್ತವಾದ ಗಜ ತುರಗ ರಥ ಪದಾತಿಗಳೂ ಈಕ್ಷಣವೇ ಮಿಥಿಲಾನಗರಕ್ಕೆ ಹೊರಡಬೇಕು' ಎಂದು ಸಮಸ್ತ ಚತುರಂಗವನ್ನೂ ಪ್ರಯಾಣಮಾಡಿಸಿ, ತಾನೂ ದಿವ್ಯವಾದ ರಥವನ್ನು ಹತ್ತಿಕೊಂಡು, ದೊಡ್ಡ ಸೇನೆಯೊಡನೆ ಬೇಗಬೇಗನೆ ಹೊರಟನು ॥೩೪॥

ಹೀಗೆ ಹೊರಟು ಮಿಥಿಲಾನಗರಸಮೀಪವನ್ನು ಸೇರಿದಬಳಿಕ, ಜನಕಮಹಾರಾಜನು, ದಶರಥನು ಬಂದುದನ್ನು ಕೇಳಿ, ಮಹಾಹರ್ಷಾಕುಲಿತನಾಗಿ, ತನ್ನ ಪುರೋಹಿತನಾದ ಶತಾನಂದ ಮುನಿಯೊಡನೆ ಎದುರುಗೊಂಡು ಬಂದನು ॥೩೫॥

ಮತ್ತು, ಪೂಜಾರ್ಹನಾದ ಆ ದಶರಥನನ್ನು, ಯಥಾವಿಧಿಯಾಗಿ ಪೂಜಿಸಿದನು; ಹೀಗೆ ಪೂಜಿಸಲ್ಪಟ್ಟಬಳಿಕ, ಶ್ರೀರಾಮನು ಲಕ್ಷ್ಮಣನೊಡನೆ ತನ್ನ ತಂದೆಯ ಪಾದಗಳಿಗೆ ನಮಸ್ಕಾರ ಮಾಡಿದನು ॥೩೬॥

ಅನಂತರ, ಜನಕಮಹಾರಾಜನು, ಅತಿ ಮಂಗಳಕರವಾಗಿಯೂ ಸರ್ವಾಲಂಕಾರಯುಕ್ತವಾಗಿಯೂ ಇರುವ ರಾಜಯೋಗ್ಯವಾದ ಭವನದಲ್ಲಿ ಆ ದಶರಥನನ್ನು ಇಳುಹಿಸಿದನು; ಅಲ್ಲಿ ಅವನು ತನ್ನ ಮಕ್ಕಳೊಡನೆಯೂ ಹೆಂಡರೊಡನೆಯೂ, ಸುಖವಾಗಿ ವಿಹಾರಮಾಡಿಕೊಂಡಿದ್ದನು॥

ಅನಂತರ, ಆ ಮಿಥಿಲಾನಗರವನ್ನೆಲ್ಲ ದಿವ್ಯವಾಗಿ ಅಲಂಕರಿಸಿದರು; ಗಜ ತುರಗ ರಥಗಳು ಎಲ್ಲೆಲ್ಲಿಯೂ ತುಂಬಿಹೋದುವು; ಅಬಾಲವೃದ್ಧರಾಗಿ ಸಮಸ್ತ ಜನರೂ ಸರ್ವಸ್ವಧಲ್ಲಿಯೂ ರತ್ನಾಭರಣಗಳಿಂದ ಅಲಂಕರಿಸಿಕೊಂಡರು ॥೩೭॥

ಅನೇಕರಾದ ನರ್ತಕಿಯರು, ನರ್ತನಯೋಗ್ಯವಾದ ವೇಷಗಳಿಂದ ಅಲಂಕೃತರಾದರು. ಪ್ರತಿಯೊಂದು ಮನೆಯೂ, ಪ್ರತಿಯೊಬ್ಬ ಸಾಮಂತರಾಜರ ಅರಮನೆಯೂ ಕೂಡ, ವಿಚಿತ್ರ

ಆಬಾಲವೃದ್ಧಂ ಸರ್ವತ್ರ ರತ್ನಭೂಷಣಭೂಷಿತಾ ॥೩೯॥
ವೇಶ್ಯಾಸ್ತ್ರಿಯಶ್ಚ ಬಹುಶೋ ನೃತ್ತವೇಷ್ಯೈರಲಙ್ಕೃತಾಃ ।
ಪ್ರತ್ಯಾಪಣಂ ಪ್ರತಿಗೃಹಂ ಪ್ರತಿಸಾಮನ್ತಮನ್ದಿರಮ್ ॥೪೦॥
ವಿಜೆತ್ರವಸ್ತ್ರರತ್ನೈಶ್ಚ ತೋರಣೈಶ್ಚಾಪಿ ಭೂಷಿತಮ್ ।
ನಗರೇ ಸರ್ವಸೌಖ್ಯಾನಿ ಸರ್ವೇಷಾಂ ಸಮತಾಂ ಯಯುಃ ॥೪೧॥
ತತೋ ನೃಪತಿಕಾರ್ದೂಲಂ ವಿಶ್ವಾಮಿತ್ರೋ ಮಹಾಮುನಿಃ ।
ಉವಾಚ ವಚನಂ ವೀರಂ ವಸಿಷ್ಠಂ ಸದೃಶೋ ನೃಪಮ್ ॥೪೨॥
ರಾಮಲಕ್ಷ್ಮಣಯೋರಾಜನ್ ಸೀತಾಂ ಚೋರ್ಮಿಳಯಾ ಸಹ ।
ದಾಸ್ಯಸ್ಯೇವ ಸ್ವಯಂ ಭೂಯೋ ವಕ್ತವ್ಯಂ ಕ್ರಿಯತಾಂ ಚ ತತ್ ॥೪೩॥
ಭ್ರಾತಾ ಯವೀಯಾನ್ ಧರ್ಮಜ್ಞಃ ಏಷ ರಾಜಾ ಕುಶಧ್ವಜಃ ।
ಅಸ್ಯ ಧರ್ಮಾತ್ಮನೋ ರಾಜನ್ ರೂಪೇಣಾಪ್ರತಿಮಂ ಭುವಿ ॥೪೪॥
ಸುತಾದ್ವಯಂ ನರಶ್ರೇಷ್ಠ ಪತ್ನ್ಯರ್ಥಂ ವರಯಾಮಹೇ ।
ಭರತಸ್ಯ ಕುಮಾರಸ್ಯ ಶತ್ರುಘ್ನಸ್ಯ ಚ ಧೀಮತಃ ॥೪೫॥
ಪುತ್ರೌ ದಶರಥಸ್ಯೇಮೌ ರೂಪಯೌವನಶಾಲಿನಃ ।

ವಾದ ವಸ್ತ್ರಗಳಿಂದಲೂ ರತ್ನಗಳಿಂದಲೂ ತೋರಣಗಳಿಂದಲೂ ಭೂಷಿಸಲ್ಪಟ್ಟಿವೆ. ಆಗ, ಆ ಮಿಥಿಲಾನಗರದಲ್ಲಿ, ಸಮಸ್ತ ಸುಖಗಳೂ ಸಮಸ್ತರಿಗೂ ಸಾಮಾನ್ಯವಾಗಿ ವಿಳರೀತಿಯಾಗಿದ್ದುವು ॥೩೯-೪೧॥

ಆ ಬಳಿಕ, ವಸಿಷ್ಠರಿಗೆ ಸಮಾನನಾದ ವಿಶ್ವಾಮಿತ್ರಮುನಿಯು, ನೃಪಶ್ರೇಷ್ಠನಾದ ಜನಕ ಚಕ್ರವರ್ತಿಯನ್ನು ಕುರಿತು ಹೀಗೆ ಹೇಳಿದನು ॥೪೨॥

ಅಯ್ಯಾ! ಜನಕ! ರಾಮಲಕ್ಷ್ಮಣರಿಗೆ ನೀನು ಸೀತೆಯನ್ನೂ ಊರ್ಮಿಳೆಯನ್ನೂ ಕೊಟ್ಟೇ ಕೊಡುವೆ. ಆದರೆ, ಈಗ ಮತ್ತೆ ಹೇಳಬೇಕಾದ ವಿಷಯವೊಂದಿರುವುದು; ಅದನ್ನು ಕೇಳುವನಾಗು ॥೪೩॥

ನಿನ್ನ ಅನುಜನಾದ ಧರ್ಮಜ್ಞನಾದ ಈ ಕುಶಧ್ವಜನಿರುವನಷ್ಟೆ! ಇವನಿಗೆ ಭೂಮಿಯಲ್ಲೆಲ್ಲ ನಿರುಪಮಸೌಂದರ್ಯವತಿಯರಾದ ಇಬ್ಬರು ಪುತ್ರಿಯರೂ ಇರುವರಷ್ಟೆ! ಅವರಿಬ್ಬರನ್ನೂ, ನಮ್ಮ ಆಯುಷ್ಮಂತನಾದ ಭರತನಿಗೂ ಶತ್ರುಘ್ನನಿಗೂ ಭಾರ್ಯೆಯರಾಗುವುದಕ್ಕೋಸ್ಕರ ಕೊಡಬೇಕೆಂದು ಈಗ ನಾವು ಪ್ರಾರ್ಥಿಸುತ್ತೇವೆ ॥೪೪-೪೫॥

ಈ ಭರತಶತ್ರುಘ್ನರ ವಿಷಯದಲ್ಲಿಯೂ ನೀನು ನಿಶ್ಶಂಕನಾಗಿರಬಹುದು. ಈ ನಮ್ಮ ದಶರಥನ ನಾಲ್ಕುಮಂದಿ ಮಕ್ಕಳೂ ರೂಪ ಯೌವನಶಾಲಿಗಳಾಗಿರುವರು; ಎಲ್ಲರೂ ಲೋಕಪಾಲಸದೃಶರಾಗಿಯೂ, ದೇವತುಲ್ಯಪರಾಕ್ರಮರಾಗಿಯೂ ಇರುವರು ॥೪೫॥

ಹೀಗೆಂದು ಹೇಳುತಿರುವ ವಿಶ್ವಾಮಿತ್ರಮುನಿಯ ಮಾತನ್ನು ಕೇಳಿ, ವಸಿಷ್ಠಮಹರ್ಷಿಯು

ಲೋಕಪಾಲೋಪಮಾಃ ಸರ್ವೇ ದೇವತುಲ್ಯಪರಾಕ್ರಮಾಃ ॥೪೬॥
ವಿಶ್ವಾಮಿತ್ರವಚಃ ಶ್ರುತ್ವಾ ವಸಿಷ್ಠಸ್ಯ ಮತೇ ತದಾ ।
ಜನಕಃ ಪ್ರಾಞ್ಜಲಿರ್ವಾಕ್ಯಂ ಉವಾಚ ಮುನಿಪುಙ್ಗವೌ ॥೪೭॥
ಏವಂ ಭವತು ಭದ್ರಂ ವಃ ಕುಶಧ್ವಜಸುತೇ ಇಮೇ ।
ಪತ್ನ್ಯೌ ಭಜೇತಾಂ ಸಹಿತೌ ಶತ್ರುಘ್ನಭರತಾವುಭೌ ॥೪೮॥
ವಿಕಾಹ್ಯಾ ರಾಜಪುತ್ರೀಣಾಂ ಚತಸ್ರ್ಣಾಂ ಮಹಾಮುನೇ ।
ಪಾಣೀ ಗೃಹ್ಣನ್ತು ಚತ್ವಾರೋ ರಾಜಪುತ್ರಾಮಹಾಬಲಾಃ ॥೪೯॥

ಇತಿ ಶ್ರೀ ಬಾಲಕಾಣ್ಡೇ ಧನುರ್ಭಙ್ಗಾದಿಕಥನಂ ನಾಮ
ತ್ರಿಂಶಃ ಸರ್ಗಃ.



ಅನುಜ್ಞೆಯನ್ನು ಪಡೆದು, ಜನಕಮಹಾರಾಜನು, ಅಂಜಲಿಬಂಧವಮಾಡಿಕೊಂಡು, ಅವರಿಬ್ಬರನ್ನೂ ಕುರಿತು ಹೀಗೆ ಹೇಳಿದನು ॥೪೬॥

ಮಹಾತ್ಮರೆ! ತಮ್ಮ ಅಪ್ಪಣೆಯುಂತೆಯೇ ಆಗಲಿ; ತಮ್ಮವರಿಗೆಲ್ಲ ಮಂಗಳವಾಗಲಿ. ನನ್ನ ತಮ್ಮನಾದ ಕುಶಧ್ವಜನ ಮಕ್ಕಳನ್ನು ಶತ್ರುಘ್ನ ಭರತರಿಬ್ಬರೂ ವಿವಾಹಮಾಡಿಕೊಳ್ಳಲಿ ॥೪೭॥

ಹೇ ಮಹಾಮುನೆ! ಈ ನಾಲ್ಕುಮಂದಿ ರಾಜಪುತ್ರರೂ, ಒಂದೇ ದಿವಸದಲ್ಲಿ, ನಾಲ್ಕುಮಂದಿ ಕನ್ಯೆಯರ ಪಾಣಿಗ್ರಹಣ ಮಾಡಿಕೊಳ್ಳಲಿ. (ಎಂದು ಜನಕನು ಹೇಳಿದನು) ॥೪೯॥

ಇದು ಬಾಲಕಾಂಡದಲ್ಲಿ ಧನುರ್ಭಂಗಾದಿಕಥನವೆಂಬ ಮುವ್ವತ್ತನೆಯ ಸರ್ಗವು.



ಅಥ ಶ್ರೀ ಬಾಲಕಾಣ್ಡೇ ಏಕತ್ರಿಂಶಃ ಸರ್ಗಃ.

ಶ್ರೀ ಸೂತಉವಾಚ.

ತತಃ ಶುಭದಿನೇ ಸ್ವರ್ಕ್ಷೇ ಸುಮುಹೂರ್ತೇ ವಿದೇಹರಾಟ್ ।
ವಿವಾಹಮಣ್ಟಪಂ ದಿವ್ಯಂ ಕಾರಯಾಮಾಸ ಸುನ್ದರಮ್ ॥೧॥
ರತ್ನಸ್ತಮ್ಭೈ ಸುವಿಸ್ತಾರೈ ಸುವಿತಾನೈ ಸುತೋರಣೈ ।
ವೇದವಿದ್ಭಿಃ ಸಸಮ್ಭಾರೈಃ ಬ್ರಾಹ್ಮಣೈಃ ಸ್ವರ್ಣಭೂಷಿತೈಃ ॥೨॥
ಸುವಾಸಿನೀಭಿಃ ಸರ್ವತ್ರ ನಿಷ್ಕಕಣ್ಠೀಭಿರಾವೃತೈ ।
ಮಣ್ಟಪೈ ಸರ್ವಶೋಭಾಢ್ಯೈ ಮುಕ್ತಾಪುಷ್ಪಸಮನ್ವಿತೈ ॥೩॥
ಶತಾನನ್ದಪ್ರಭೃತಯೋ ವಸಿಷ್ಠಾನುಮತೇ ಸ್ಥಿತಾಃ ।
ಪ್ರವಾಳಕೃತಸೋಪಾನಾಂ ಮಣಿಜೈತ್ರಭಿತ್ತಿಕಾಮ್ ।
ವಿವಾಹವೇದಿಕಾಂ ಸರ್ವಾಂ ಅಲಞ್ಚಕ್ರುರನೇಕಶಃ ॥೪॥

ಬಾಲಕಾಂಡದಲ್ಲಿ ಮುವ್ವತ್ತೊಂದನೆಯ ಸರ್ಗವು.

ಪುನಃ ಶ್ರೀ ಸೂತಪೌರಾಣೀಕರು ಶೌನಕಾದಿಮುನಿಗಳನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ಶೌನಕಾದಿಮುನಿಗಳಿರಾ! ಮೊದಲೇಕ್ರಮವಾಗಿ ಕುಶಧ್ವಜನ ಮಕ್ಕಳನ್ನು ಭರತ ಶತ್ರುಘ್ನರಿಗೆ ಕೊಡುವುದಾಗಿ ವಾಗ್ದಾನಮಾಡಿದ ಒಳಿಕ, ಜನಕಮಹಾರಾಜನು, ಶುಭವಾದ ದಿವಸದಲ್ಲಿ, ಉತ್ತಮವಾದ ನಕ್ಷತ್ರದಲ್ಲಿ, ಪ್ರಶಸ್ತವಾದ ಮುಹೂರ್ತದೊಳಗೆ, ದಿವ್ಯವೂ ಸುಂದರವೂ ಆದ ವಿವಾಹಮಂಟಪವನ್ನು ಮಾಡಿಸಿದನು ॥೧॥

ಆ ಅತಿವಿಶಾಲವಾದ ಮಂಟಪಕ್ಕೆ, ರತ್ನಮಯವಾದ ಸ್ತಂಭಗಳನ್ನೂ ಪ್ರಶಸ್ತವಾದ ಮೇಲುಕಟ್ಟನ್ನೂ, ದಿವ್ಯವಾದ ತೋರಣಗಳನ್ನೂ ಕಲ್ಪಿಸಿದ್ದರು. ವೇದಾಭ್ಯಾಸಸಂಪನ್ನರಾಗಿಯೂ ಸ್ವರ್ಣಾಭರಣಭೂಷಿತರಾಗಿಯೂ ಇದ್ದ ಬ್ರಾಹ್ಮಣರು, ವಿವಾಹಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿಕೊಂಡು, ಆ ವಿವಾಹಮಂಟಪದಲ್ಲಿ ತುಂಬಿದ್ದರು; ದಿವ್ಯವಾದ ಹಾರಗಳನ್ನು ಧರಿಸಿರುವ ಸುವಾಸಿನಿಯರು, ಸುತ್ತಲೂ ಕುಳಿತಿದ್ದರು. ಹೀಗೆ ಸರ್ವಾಲಂಕಾರಯುಕ್ತವಾಗಿ ಶೋಭಿಸುತ-ಮುಕ್ತಾಫಲಗಳಿಂದಲೂ ದಿವ್ಯಪುಷ್ಪಗಳಿಂದಲೂ ವ್ಯಾಪ್ತವಾಗಿರುವ ಆ ಮಂಟಪದಲ್ಲಿ ವಸಿಷ್ಠರ ಅಪ್ಪಣೆಯಂತೆ ನಡೆಯುತ್ತಿರುವ ಶತಾನಂದ ಮೊದಲಾದವರನೇಕರು, ಹವಳದ ಮೆಟ್ಟಿಲುಗಳೂ ರತ್ನಮಯವಾದ ಭಿತ್ತಿಗಳೂ ಉಳ್ಳ ವಿವಾಹವೇದಿಕೆಯನ್ನು, ಅಲಂಕರಿಸಿದರು ॥೨-೪॥

ರತ್ನಕುಮ್ಭಾಶ್ಚ ತುರ್ದಿಕ್ಷು ಸ್ಥಾಪಿತಾ ರತ್ನಪಾಳಿಕಾಃ ।
ಸ್ವರ್ಣಸ್ತಮ್ಭಾಹಿ ಸರ್ವತ್ರ ರತ್ನೈರ್ದನ್ತೈಶ್ಚ ದೀಪಿತಾಃ ॥೫॥
ರತ್ನಪೀಠಂ ವೇದಿಮಧ್ಯೇ ಸ್ಥಾಪಿತಂ ಮುನಿಸತ್ತಮೈಃ ।
ಕಲಶಾರಞ್ಜಿತಾಃ ಸ್ವರ್ಣಾಃ ಹರಿದಾಶ್ಚ ತಪೂರಿತಾಃ ॥೬॥
ಕಾಶ್ಮೀರಕುಙ್ಕುಮಾಕ್ತಾನಿ ಕಸ್ತೂರ್ಯಗರುವನ್ತಿ ಚ ।
ಪಾತ್ರಾಣಿ ರತ್ನಯುಕ್ತಾನಿ ರಮ್ಭಾಸ್ತಮ್ಭಾನಮೋಹರಾಃ ॥೭॥
ಫಲಾನ್ಯಮೃತಗನ್ಧೀನಿ ಪಲ್ಲವಾಃ ಸಹಬರ್ಹಿಷಃ ।
ವಾಸಾಂಸಿ ಚ ಸುಸೂಕ್ಷ್ಮಾಣಿ ದರ್ಪಣಾದೀನಿ ಸರ್ವತಃ ।
ಸಮಿದಾಜ್ಯಾದಿ ತೈಃ ಸರ್ವಂ ವೇದಿಮಧ್ಯಂ ಪ್ರವೇಶಿತಮ್ ॥೮॥
ಬಹ್ಮಾಣಂ ಶಙ್ಕರಂ ಚಾಥ ಪುರಸ್ಕೃತ್ಯ ಮಹರ್ಷಯಃ ।
ವಸಿಷ್ಠೋ ವಾಮದೇವಶ್ಚ ಶತಾನನ್ದಶ್ಚ ಗೌತಮಃ ॥೯॥
ಜಮದಗ್ನಿರ್ಭರದ್ವಾಜಃ ಕಶ್ಯಪೋತ್ರಿಶ್ಚ ಗಾಧಿಜಃ ।
ಏತೇ ಶಿಷ್ಯಪ್ರಶಿಷ್ಯೈಶ್ಚ ವೇದಿಕಾಯಾಮುಪಸ್ಥಿತಾಃ ॥೧೦॥
ತತೋ ದಶರಥೋ ರಾಜಾ ಜನಕಶ್ಚ ಸಭಾತಲಮ್ ।
ಕೂರಪ್ರತಿಬಲೋಪೇತೌ ಸಮಿತ್ರಜ್ಞಾತಿಬಾನ್ಧವೌ ॥೧೧॥
ಸಂಪ್ರವಿಷ್ಟೌ ಮಹಾತ್ಮಾನೌ ಅನ್ಯೋನ್ಯಸ್ನೇಹಸಂಯುತೌ ॥೧೨॥

ನಾಲ್ಕು ದಿಕ್ಕುಗಳಲ್ಲಿಯೂ, ರತ್ನಮಯವಾದ ಕುಂಭಗಳನ್ನೂ ವಾಲಿಕೆ(ಅಂಕುರಾರ್ಪಣ ಮಾಡುವ ಪಾತ್ರೆ)ಗಳನ್ನೂ ಇಟ್ಟಿದ್ದರು. ಸುವರ್ಣಮಯವಾದ ಸ್ತಂಭಗಳನ್ನು, ರತ್ನಗಳಿಂದಲೂ ದಂತಗಳಿಂದಲೂ ವಿಶೇಷವಾಗಿ ಅಲಂಕರಿಸಿದರು ॥೫॥

ಮತ್ತು, ಆ ಮಹಾಮುನಿಗಳು, ವಿವಾಹ ವೇದಿಕೆಯ ಮಧ್ಯದಲ್ಲಿ, ದಿವ್ಯವಾದ ರತ್ನಪೀಠವನ್ನು ಹಾಕಿ, ಅದರ ಮೇಲೆ, ದಿವ್ಯವಾದ ಹರಿದ್ರಾಕ್ಷತಗಳಿಂದ ಪೂರಿತವಾದ ಸುವರ್ಣಕುಂಭಗಳನ್ನಿಟ್ಟರು ॥೬॥

ಕೇಸರ ಕಸ್ತೂರಿ ಅಗಿಲು ಮುಂತಾದುವುಗಳಿಂದ ಸುವಾಸಿತವಾದ ಗಂಧವನ್ನು ರತ್ನದ ಬಟ್ಟಲುಗಳಲ್ಲಿ ತುಂಬಿಟ್ಟರು; ಮನೋಹರವಾದ ಬಾಳೆಯಕಂಬಗಳನ್ನು ಕಟ್ಟಿದರು. ಅಮೃತ ಸಮವಾದ ಫಲಗಳನ್ನೂ ಪಂಚಪಲ್ಲವಗಳನ್ನೂ, ದರ್ಭೆಗಳನ್ನೂ ಸೂಕ್ಷ್ಮತಮವಾದ ವಸ್ತ್ರಗಳನ್ನೂ ದರ್ಪಣ ಮುಂತಾದುವುಗಳನ್ನೂ, ಸಮಿತ್ತು ಆಜ್ಯ ಮುಂತಾದ ಸಕಲ ಸಾಮಗ್ರಿಗಳನ್ನೂ, ಆ ಶತಾನಂದಾದಿ ಮಹರ್ಷಿಗಳು ವಿವಾಹ ವೇದಿಕೆಯ ಮಧ್ಯದಲ್ಲಿ ಸಿದ್ಧಪಡಿಸಿದರು ॥೭-೮॥

ಆ ಬಳಿಕ, ವಸಿಷ್ಠ ವಾಮದೇವ ಶತಾನಂದ ಗೌತಮ ಜಮದಗ್ನಿ ಭರದ್ವಾಜ ಕಶ್ಯಪ ಅತ್ರಿ ವಿಶ್ವಾಮಿತ್ರ ಮೊದಲಾದ ಮಹರ್ಷಿಗಳು, ತಮ್ಮ ಶಿಷ್ಯ ಪ್ರಶಿಷ್ಯರೊಡಗೂಡಿದವರಾಗಿ, ಬ್ರಹ್ಮದೇವನನ್ನೂ ಪರಮೇಶ್ವರನನ್ನೂ ಮುಂದಿಟ್ಟುಕೊಂಡು, ಆ ವಿವಾಹ ವೇದಿಕೆಯನ್ನು ಸೇರಿದರು ॥೯-೧೦॥

ಅನಂತರ, ಮಹಾತ್ಮರಾದ ಜನಕರಾಜನೂ ದಶರಥರಾಜನೂ ಕೂಡ, ಮಹಾ ಶೂರರಾದ ಅಂಗರಕ್ಷಕರೊಡಗೂಡಿ, ಮಿತ್ರರನ್ನೂ ಜ್ಞಾತಿಗಳನ್ನೂ ಬಂಧುಗಳನ್ನೂ ಕರೆದುಕೊಂಡು, ಪರಸ್ಪರ ಸ್ನೇಹಯುಕ್ತರಾಗಿ, ವಿವಾಹ ಮಂಟಪವನ್ನು ಪ್ರವೇಶಿಸಿದರು ॥೧೧-೧೨॥

ರಾಜಾನಶ್ಚ ಮಹಾತ್ಮಾನಃ ಶತಶಶ್ಚಾಗತಾಃ ಸಭಾಮ್ ।
ತತೋ ಯಕ್ಷಾಶ್ಚ ಗನ್ಧರ್ವಾಃ ದೇವಾಃ ಸಿದ್ಧಾಶ್ಚ ರಾಕ್ಷಸಾಃ ।
ವಿವಾಹಪ್ರೇಕ್ಷಣಾಶ್ಚಾನ್ಯೇ ಸಭಾಂ ವಿವಿಶುರಾಶು ತಾಮ್ ॥೧೩॥

ತತೋ ಮಙ್ಗಳವಾದ್ಯಾನಿ ಭೇರೀಶಙ್ಖಾಃ ಸಮೈಣವಾಃ ।
ಮೃದಙ್ಗಕಾಹಳಾದ್ಯಾಶ್ಚ ತದಾ ಸಮ್ಯಕ್ ಪ್ರಣಾದಿತಾಃ ॥೧೪॥

ಶತಾನನ್ದಉವಾಚಾಥ ನಿಮಾನಾಂ ಕುಲಸತ್ತಮಮ್ ।
ರಾಜ್ಞಾಂ ಶುದ್ಧಾನ್ವಯಾನಾಂ ಚ ಸ್ವಾಚಾರಗುಣಸಮ್ಪದಾಮ್ ॥೧೫॥

ವಸಿಷ್ಠೋ ಜ್ಞಾಪಯಾಮಾಸ ರಘೂಣಾಂ ಕುಲಸತ್ತಮಮ್ ।
ಅಜನ್ಮಶುದ್ಧವಂಶ್ಯಾನಾಂ ರಾಜ್ಞಾಂ ಸದ್ಗುಣಶಾಲಿನಾಮ್ ॥೧೬॥

ಕುಲಾನ್ಯಪರಿಮೇಯಾನಿ ವಂಶಯೋರುಭಯೋರಪಿ ।
ವರವಧ್ವೋರ್ಗುಣಾಶ್ಚಾಪಿ ಸರ್ವಶ್ರುತಿಮನೋಹರಾಃ ॥೧೭॥

ತತಃ ಶುಭತಮೇ ಕಾಲೇ ದೇವಬ್ರಹ್ಮರ್ಷಿಯೋಷಿತಃ ।
ರಾಘವಸ್ಯಾಪಿ ಸೀತಾಯಾಃ ಮಙ್ಗಳಸ್ನಪನೋದ್ಯತಾಃ ॥೧೮॥

ಮಧ್ಯೇ ಮಙ್ಗಳಮಣ್ಟಪಸ್ಯ ವಿಲಸದ್ವೇದ್ಯಾಂ ಚ ಗಾರುತ್ಮತೇ
ಪೀಠೇ ತಪ್ತಸುವರ್ಣಪೂರ್ಣಕಲಶೇ ಮಾಙ್ಗಲ್ಯವರ್ಣಾನ್ವಿತೇ ।

ಇನ್ನೂ ಮಹಾತ್ಮರಾದ ನೂರಾರು ಮಂದಿ ರಾಜರುಗಳು ಆ ಸಭೇಯಲ್ಲಿ ಸೇರಿದರು. ಆ ಬಳಿಕ, ಯಕ್ಷರೂ, ಗಂಧರ್ವರೂ, ದೇವತೆಗಳೂ, ಸಿದ್ಧರೂ, ರಾಕ್ಷಸರೂ, ಇನ್ನೂ ವಿವಾಹವನ್ನು ನೋಡಬೇಕೆಂದಪೇಕ್ಷಿಸುವ ಇತರ ಜನಗಳೂ ಕೂಡ, ಬೇಗನೆ ಆ ಸಭೆಯನ್ನು ಪ್ರವೇಶಿಸಿದರು ॥೧೩॥

ಅನಂತರದಲ್ಲಿ, ಭೇರಿ ಶಂಖ ವೇಣು ಮೃದಂಗ ಕಾಹಳೆ ಮೊದಲಾದ ಅನೇಕ ಮಂಗಳವಾದ್ಯಗಳು, ಚೆನ್ನಾಗಿ ಧ್ವನಿಮಾಡಲ್ಪಡಲ್ಪಟ್ಟವು ॥೧೪॥

ಆಮೇಲೆ, ಶತಾನಂದಮುನಿಯೂ, ಮಹಾಪರಿಶುದ್ಧ ವಂಶಸಂಭೂತರೂ ಉತ್ತಮವಾದ ಆಚಾರ ಗುಣ ಸಂಪತ್ತುಗಳುಳ್ಳವರೂ ಆದ ನಿಮಿವಂಶದವರ ವಂಶಪರಂಪರೆಯನ್ನೆಲ್ಲಾ (ಪ್ರವರ) ಕ್ರಮವಾಗಿ ಹೇಳಿದನು ॥೧೫॥

ವಸಿಷ್ಠಮುನಿಯೂ ಕೂಡ, ಅಜನ್ಮಶುದ್ಧರಾದ ಸದ್ಗುಣಶಾಲಿಗಳಾದ ರಘುವಂಶದ ದೊರೆಗಳ ವಂಶಪರಂಪರೆಯನ್ನೆಲ್ಲ ಕ್ರಮವಾಗಿ ಉಚ್ಚರಿಸಿದನು ॥೧೬॥

ಆ ವಧೂವರರಿಬ್ಬರ ವಂಶಗಳೂ ಮಹಾ ಪ್ರಶಸ್ತವಾದವುಗಳು; ಅವರ ಗುಣಗಳೂ ಕೂಡ ಅತಿ ಮನೋಹರಗಳಾಗಿದ್ದವು ॥೧೭॥

ಅಬಳೆಕ, ಶುಭತಮವಾದ ಮುಹೂರ್ತದಲ್ಲಿ ದೇವರ್ಷಿ ಬ್ರಹ್ಮರ್ಷಿ ಸ್ತ್ರೀಯರುಗಳು, ಶ್ರೀ ರಾಮನಿಗೂ ಸೀತೆಗೂ ಮಂಗಳಸ್ನಾನವಾಡಿಸುವುದಕ್ಕೆ ಉದ್ಯುಕ್ತರಾದರು ॥೧೮॥

ಆಗ, ದಿವ್ಯವಾದ ಮಜ್ಜನಗೃಹದ ಮಧ್ಯದಲ್ಲಿ, ಶೋಭಿಸುತ್ತಿರುವ ವೇದಿಕೆಯಮೇಲೆ, ಪಚ್ಚೆಯ ಮನೆಯನ್ನು ಹಾಕಿ, ಪುಟಪಾಕಶೋಭಿತವಾದ ಸುವರ್ಣದಿಂದ ಮಾಡಲ್ಪಟ್ಟ ಮಂಗ

ತತ್ರಾಭ್ಯಜ್ಯಮಕಾರಯ್ಯ ಪ್ರತಿದೃಶಃ ಪುಣ್ಯಾಙ್ಗನಾಶ್ಚಾದರಾತ್
ಆಶೀರ್ವಾದಪುರಸ್ಸರಂ ಜನಕಜಾಂ ಚಾಮ್ಪೇಯತೈಲೇನ ತಾಮ್ ॥೧೯॥
ಅರುನ್ಧತೀ ಚ ಸಾವಿತ್ರೀ ದಿಕ್ಪಾಲಾನಾಂ ಚ ಯಾಃ ಸ್ತ್ರಿಯಃ।
ಅಲಙ್ಕೃರ್ಜನಕಜಾಂ ಮಙ್ಗಳಸ್ನಾನಪೂರ್ವಕಮ್ ॥೨೦॥
ಚೂರ್ಣಂ ಕುನ್ತಳಕೇ ಕಪೋಲಫಲಕೇ ಪತ್ರಾಣಿ ಕಾಳಾಞ್ಜನಂ
ದೃಷ್ಟ್ಯೋಃ ಕರ್ಣಯುಗೇ ಚಕುಣ್ಡಲಯುಗಂ ರತ್ನಪ್ರಭಾರಞ್ಜಿತಮ್।
ವೈದೇಹ್ಯಾಸ್ತಿಲಕಂ ಮನೋಜ್ಞಮಳಕೇ ನಾಸಾಞ್ಜಲೇ ಮೌಕ್ತಿಕಂ
ಚಕ್ರುಶ್ಚೈವಮಲಙ್ಕ್ರಿಯಾಃ ಸುರುಚಿರಾಬಿಮ್ಬಾಧರೇ ಯಾವಕಮ್ ॥೨೧॥
ಮುಕ್ತಾಹಾರವರಾ ಸುಧಾಂಶುಧವಳಾ ಕಣ್ಠೇ ಚ ಹಾರಾವಳೀಃ
ನಾನಾರತ್ನವಿಭೂಷಣಂ ಚ ರುಚಿರಂ ವಕ್ಷೋಜಮಧ್ಯೇ ನ್ಯಧುಃ
ಕೇಯೂರೇ ಭುಜಯೋಸ್ತತಃ ಕರಯುಗೇ ಸತ್ಕಙ್ಕಣೇ ಕಾಞ್ಚೀಮ್
ಕಾಞ್ಚೀಂ ಕಾಞ್ಚನರತ್ನಪಾದಕಟಕೇ ತತ್ಪಾದಯೋರಾರ್ಪಯತ್ ॥೨೨॥
ರಾಮಾಯಾಪಿ ತತಃ ಸ್ನಾನಂ ಕಾರಯಾಮಾಸುರಞ್ಜಸಾ।
ಅಲಙ್ಕೃಃ ಪರಾತ್ಮಾನಂ ಕನಕೋತ್ತಮಭೂಷಣೈಃ ॥೨೩॥

ಯೋಗ್ಯವಾದ ಪೂರ್ಣಕಲಶವನ್ನಿಟ್ಟು, ಆ ಮಣೆಯಮೇಲೆ ಸೀತಾದೇವಿಯನ್ನು ಕುಳ್ಳಿರಿಸಿ, ಮಹಾ ಪುಣ್ಯಯುಕ್ತರಾದ ಆ ಸ್ತ್ರೀಯರು, ಅತೀವಾಶೀರ್ವಾದಪೂರ್ವಕವಾಗಿ, ಸಂಪಗೆಯೆಣ್ಣೆಯಿಂದ ಸೀತಾ ದೇವಿಗೆ ಅಭ್ಯಂಗನವನ್ನು ಮಾಡಿಸಿದರು ॥೧೯॥

ಹೀಗೆ ಮಂಗಳಸ್ನಾನಪೂರ್ವಕವಾಗಿ, ಅರುಂಧತಿಯೂ ಸಾವಿತ್ರಿಯೂ ದಿಕ್ಪಾಲಕರ ಪತ್ನಿಯರೂ ಸೀತೆಯನ್ನು ಅಲಂಕಾರಮಾಡಿದರು ॥೨೦॥

ಆಗ, ಆ ಸೀತಾದೇವಿಯು ಮುಂಗುರುಳಿನಲ್ಲಿ ದಿವ್ಯವಾದ ಸುಗಂಧಚೂರ್ಣವನ್ನೂ, ಕಪೋಲದಲ್ಲಿ ಮಕರಿಕಾದಿ ಪತ್ರರೇಖೆಗಳನ್ನೂ ನೇತ್ರದಲ್ಲಿ ಕಾಡಿಗೆಯನ್ನೂ, ಕಿವಿಗಳಲ್ಲಿ ರತ್ನಕುಂಡಲಗಳನ್ನೂ, ಹಣೆಯಲ್ಲಿ ಮನೋಹರವಾದ ತಿಲಕವನ್ನೂ, ಮೂಗಿಗೆ ಮೂಗುತಿಯನ್ನೂ, ಬಿಂಬಫಲಸದೃಶವಾದ ಅಧರದಲ್ಲಿ ಅರಗಿನ ರಸವನ್ನೂ, ಹೀಗೆಯೇ ಇನ್ನೂ ಅತಿಸುಂದರವಾದ ಅಲಂಕಾರಗಳನ್ನೂ ರಚಿಸಿದರು ॥೨೧॥

ಮತ್ತು, ಕುತ್ತಿಗೆಯಲ್ಲಿ ಚಂದ್ರನಂತೆ ವಿರಾಜಿಸುವ ಮುಕ್ತಾಸರ ರತ್ನಹಾರಗಳನ್ನೂ ಹೃದಯಪ್ರದೇಶದಲ್ಲಿ ನಾನಾವಿಧವಾದ ರತ್ನಾಭರಣಗಳನ್ನೂ, ಬಾಹುಗಳಲ್ಲಿ ಅಂಗದಗಳನ್ನೂ, ಕೈಯಲ್ಲಿ ದಿವ್ಯವಾದ ಕಂಕಣಗಳನ್ನೂ ಸೊಂಟದಲ್ಲಿ ಸುವರ್ಣರತ್ನಮಯವಾದ ಒಡ್ಯಾಣವನ್ನೂ, ಕಾಲಿನಲ್ಲಿ ರತ್ನಮಯವಾದ ಕಡಗಗಳನ್ನೂ ಧರಿಸಿದರು ॥೨೨॥

ಇದಾದಮೇಲೆ, ಶ್ರೀರಾಮನಿಗೂ ಬೇಗನೆ ಮಂಗಳಸ್ನಾನವನ್ನು ಮಾಡಿಸಿದರು. ಆ ಪರಮಾತ್ಮನನ್ನು ನಾನಾವಿಧವಾದ ಸುವರ್ಣಾಭರಣಗಳಿಂದ ಅಲಂಕರಿಸಿದರು ॥೨೩॥

ಧೂಪವಾಸಿತತತ್ಕೇಶಬನ್ಧಂ ಕೃತ್ವಾ ಸ್ರಗಞ್ಚಿತಮ್ ।
ಗಾತ್ರಂ ಸಂಲಿಪ್ಯ ಗನ್ಧೇನ ಪೀತಾಮ್ಬರಯುಗಂ ದಧುಃ ॥೨೮॥
ರತ್ನಕಙ್ಕಣಕೇಯೂರಕಿರೀಟಸ್ವರ್ಣಮಾಲಿಕಾಃ ।
ಮುಕ್ತಾಹಾರಾಶ್ಚ ಕುಣ್ಡಲೇ ಚ ಕಟಿಸೂತ್ರಂ ಮನೋಹರಮ್ ॥೨೯॥
ರತ್ನಾಙ್ಗುಳೀಯಕಾನ್ಯಾಭ್ಯೋ ಕರ್ಣಪತ್ರೇ ಸುಚಿತ್ರಿತೇ ।
ರತ್ನಜಿತ್ರಾಂಶ್ಚ ಸನ್ನಿಪಾತ್ಯ ತೂಲಾಕೋಟಿವ್ಯಯಂ ತಥಾ ॥೩೦॥
ಶುಬಿಕಾಂ ಮಣಿಮಞ್ಜರೀಂ ಶುಭಾನಕ್ಷತ್ರಮಾಲಿಕಾಃ ।
ಯಥಾರ್ಹಂ ರಾಮಗಾತ್ರೇಷು ಯೋಜಯಾಮಾಸುರಙ್ಗನಾಃ ॥೩೧॥
ಏವಂ ಸ್ವಲಙ್ಕೃತಂ ರಾಮಂ ಸಾನುಜಂ ದಿವ್ಯಭೂಷಣೈಃ
ಸಭಾಮಾನೀಯ ಮುನಯಃ ಸಾ ಪಯಾಮಾಸುರಾಸನೇ ॥೩೨॥
ಉಪವಿಷ್ಟೇ ರಾಮಚನ್ದ್ರೇ ರತ್ನಸಿಂಹಾಸನೇ ಶುಭೇ ।
ಸ್ತುತಿವಾದಿತ್ರಶಬ್ದೋಭೂತ್ ಸರ್ವತಸ್ತುಮುಲಸ್ತದಾ ॥೩೩॥
ತತಃ ಪ್ರಚೋದಯಾಮಾಸ ವಸಿಷ್ಠಂ ಕಙ್ಕರಃ ಸ್ವಯಮ್ ।
ಶೀಘ್ರಮೇವ ವಿಧೀಯನ್ತಾಂ ರಾಮವೈವಾಹಿಕಕ್ರಿಯಾಃ ॥೩೪॥

ಧೂಪದಿಂದ ಪರಿಮಳ ಹಾಕಲ್ಪಟ್ಟ ಅವನ ಕೇಶಬಂಧಕ್ಕೆ ದಿವ್ಯವಾದ ಪುಷ್ಪಮಾಲಿಕೆಯನ್ನು ಸುತ್ತಿ; ಶರೀರಕ್ಕೆಲ್ಲ ಸುಗಂಧವನ್ನು ಲೇಪಿಸಿ, ಉತ್ತಮವಾದ ಎರಡು ಪೀತಾಂಬರಗಳನ್ನು ಧರಿಸಿದರು ॥೨೮॥

ಮತ್ತು, ರತ್ನಮಯವಾದ ಕಂಕಣಗಳನ್ನೂ, ಅಂಗದಗಳನ್ನೂ ಕಿರೀಟವನ್ನೂ ಸುವರ್ಣಮಾಲಿಕೆಯನ್ನೂ, ಮುಕ್ತಾಹಾರಗಳನ್ನೂ, ಕರ್ಣಕುಂಡಲಗಳನ್ನೂ, ಮನೋಹರವಾದ ಕಟಿಸೂತ್ರವನ್ನೂ, ರತ್ನಮಯವಾದ ಅಂಗುಳೀಯಕಗಳನ್ನೂ, ಪ್ರಶಸ್ತವಾದ ವಿಚಿತ್ರವಾಗಿರುವ ಕರ್ಣಪತ್ರಗಳನ್ನೂ ರತ್ನವಿಚಿತ್ರವಾದ ದಿವ್ಯಾಭರಣಗಳನ್ನೂ, ಕಾಲುಕಡಗಗಳನ್ನೂ, ವಾಗನ್ನೂ ರತ್ನಖಚಿತವಾದ ಕಾಲುರಕಗಳನ್ನೂ, ದಿವ್ಯವಾದ ನಕ್ಷತ್ರಮಾಲಿಕೆ (ಇಪ್ಪತ್ತೇಳು ಮುತ್ತುಗಳುಳ್ಳ ಹಾರ) ಗಳನ್ನೂ ಕೂಡ ಉತ್ತಮಸ್ತ್ರೀಯರು, ಶ್ರೀರಾಮನ ಅವಯವಗಳಲ್ಲಿ ಯಥಾಯೋಗ್ಯವಾಗಿ ಸಮರ್ಪಿಸಿದರು ॥೨೯—೩೪॥

ಹೀಗೆ ತಮ್ಮಂದಿರೊಡನೆ ದಿವ್ಯಾಭರಣಗಳಿಂದ ಚೆನ್ನಾಗಿ ಅಲಂಕರಿಸಲ್ಪಟ್ಟಿರುವ ಶ್ರೀರಾಮನನ್ನು ಸಭೆಗೆ ಕರೆದುಕೊಂಡು ಒಂದು, ಆ ಮುನಿಗಳೆಲ್ಲರೂ ವಿವಾಹಪೀಠದಲ್ಲಿ ಕೂಳ್ರಿಸಿದರು ॥

ಆಗ, ಶ್ರೀರಾಮನು ಶುಭವಾದ ರತ್ನಸಿಂಹಾಸನದಮೇಲೆ ಕುಳಿತುಕೊಳ್ಳಲಾಗಿ, ಎಲ್ಲಾಕಡೆಯಲ್ಲಿಯೂ ಸ್ತುತಿನಾದವೂ ವಾದ್ಯಘೋಷವೂ ನಿಬಿಡವಾಗಿ ಪ್ರಾದುರ್ಭವಿಸಿದವು ॥೩೫॥

ಆಬಳಿಕ, ಶ್ರೀಪರಮೇಶ್ವರನು 'ರಾಮನ ವಿವಾಹಕರ್ಮಗಳೆಲ್ಲವೂ ಬೇಗಬೇಗನೆ ನಡೆಯಿಸಲ್ಪಡಲಿ' ಎಂದು ವಸಿಷ್ಠಮುನಿಗೆ ಆಜ್ಞೆಯಿತ್ತನು ॥೩೬॥

ನಿಶಮ್ಯ ವಚನಂ ತಸ್ಯೋ ವಸಿಷ್ಠೋ ಭಗವಾನೃಷಿಃ ।
ಚಕಾರ ಸಕಲಂ ತತ್ರ ಯಥಾಜ್ಞಾಪ್ತಂ ಮಹಾತ್ಮನಾ ॥೩೧॥
ಕುಶೈಃ ಪಲ್ಲವಸಂಮಿಶ್ರೈಃ ಹೇಮಪಾತ್ರೈಶ್ಚ ಕಾಞ್ಚನೈಃ ।
ಸಮಿದ್ಭಿರಕ್ಷತೈಃ ಪುಷ್ಪೈಃಜಲೈರ್ಗನ್ಧೈರ್ಮನೋಹರೈಃ ॥೩೨॥
ಕಲಶೈಸ್ತೀರ್ಥಸಮ್ಪೂರ್ಣೈಃ ಕುಮ್ಭೈರಪಿ ಚ ಕಾಞ್ಚನೈಃ ।
ಘೃತೇನ ದಧ್ನಾ ಪೂತೇನ ಲಾಜೈರಪಿ ಗುಡೇನ ಚ ॥೩೩॥
ಅರುನ್ಧತ್ಯಾದಿಭಿಸ್ತತ್ರ ಸ್ತ್ರೀಕರ್ತವ್ಯಂ ಕೃತಂ ಶುಭಮ್ ॥೩೪॥
ವೇದ್ಯಾಮಲಙ್ಕೃತಾಃ ಸಮ್ಯಕ್ ಪ್ರದೀಪಾಶ್ಚ ಪ್ರದೀಪಿತಾಃ ।
ಮಙ್ಗಳಂ ವಾಚಯನ್ತಿ ಸ್ಮ ಸರ್ವಾಸ್ತಾ ದೇವತಾಸ್ತ್ರಿಯಃ ॥೩೫॥
ಭೇರೀಶಬ್ದಮೃದಙ್ಗಾನಾಂ ವೇಣುವಾನಾಂ ಚ ಸರ್ವತಃ ।
ತೂರ್ಯಘೋಷಾಃ ಪುಣ್ಯಶಬ್ದಾಃ ಪ್ರವೃತ್ತಾಃ ಸರ್ವತೋ ನೃಣಾಮ್ ॥
ಸಭಾಯೋಗೇ ಜನಕಃ ಪ್ರಾಪ್ಯ ರಾಮಂ ರಾಜೀವಲೋಚನಮ್ ।
ಪಾದೌ ಪ್ರಕ್ಷಾಳ್ಯ ವಿಧಿವತ್ ತದಪೋ ಮೂರ್ಧ್ನ್ಯಧಾರಯತ್ ।
ಯಾ ಧೃತಾ ಮೂರ್ಧ್ನಿ ಶರ್ವೇಣ ಬ್ರಹ್ಮಣಾ ಮುನಿಭಿಃ ಪುರಾ ॥೩೭॥

ಹೀಗೆ ಶ್ರೀಪರಮೇಶ್ವರನ ಅಪ್ಪಣೆಯನ್ನು ಲಾಲಿಸಿ, ಪೂಜ್ಯನಾದ ವಸಿಷ್ಠಮಹರ್ಷಿಯು, ಆ ಪರಮೇಶ್ವರನಿಂದ ಆಜ್ಞಾಪಿಸಲ್ಪಟ್ಟಂತೆಯೇ, ಅಲ್ಲಿ ನಡೆಯಬೇಕಾದ ಸಮಸ್ತಕರ್ಮಗಳನ್ನೂ ನೆರವೇರಿಸಿದನು ॥೩೧॥

ಆ ಸಮಯದಲ್ಲಿ, ಅರುಂಧತಿ ಮೊದಲಾದ ಸ್ತ್ರೀಯರು ಪಲ್ಲವಮಿಶ್ರವಾದ ಕುಶಗಳಿಂದಲೂ, ಸುವರ್ಣಮಯವಾದ ಹೋಮಪಾತ್ರಗಳಿಂದಲೂ, ಸಮಿತ್ತು ಅಕ್ಷತೆ ಪುಷ್ಪ ಫಲ ಗಂಧಗಳಿಂದಲೂ, ತೀರ್ಥಪೂರಿತವಾದ ಕಲಶಗಳಿಂದಲೂ, ಸುವರ್ಣಮಯವಾದ ಪೂರ್ಣಕುಂಭಗಳಿಂದಲೂ, ಘೃತ ದಧಿ ಲಾಜ (ಅರಳು) ಗುಡಗಳಿಂದಲೂ ಕೂಡ, ಸ್ತ್ರೀಯರು ನಡೆಯಿಸಬೇಕಾದ ಮಂಗಳಕರ್ಮಗಳನ್ನೆಲ್ಲ ನೆರವೇರಿಸಿದರು ॥೩೨-೩೪॥

ಆ ವಿವಾಹವೇದಿಕೆಯ ಹತ್ತಿರ ಅಲಂಕೃತವಾಗಿದ್ದ ಮಂಗಳದೀಪಗಳನ್ನು ಹಚ್ಚಿಸಿದರು. ಆ ಸಮಸ್ತ ದೇವತಾಸ್ತ್ರೀಯರೂ ಮಂಗಳಾರ್ಥವಾದ ಹಾಡುಗಳನ್ನು ಹೇಳುತಿದ್ದರು ॥೩೫॥

ಭೇರಿ ಶಂಖ ಮೃದಂಗ ವೇಣು ತೂರ್ಯಗಳ ಶಬ್ದಗಳೂ, ಮನುಷ್ಯರು ಮಾಡುವ ಪುಣ್ಯಾಹ ಘೋಷಗಳೂ, ಸುತ್ತಲೂ ವ್ಯಾಪಿಸಿದುವು ॥೩೬॥

ಆ ಸಮಯದಲ್ಲಿ, ಜನಕರಾಜನು ತನ್ನ ಪತ್ನಿಯೊಡನೆ ಶ್ರೀರಾಮನ ಸನ್ನಿಧಿಗೆ ಬಂದು, ಯಥಾವಿಧಿಯಾಗಿ ಅವನ ಕಾಲುಗಳನ್ನು ತೊಳೆದು, ಆ ನೀರನ್ನು ತನ್ನಮೇಲೆ ಧರಿಸಿಗೊಂಡನು. ಆ ಪಾದತೀರ್ಥವು ಸಾಮಾನ್ಯವಾದುದಲ್ಲ; ಅದನ್ನು, ಪೂರ್ವದಲ್ಲಿ ಈಶ್ವರನೂ ಬ್ರಹ್ಮನೂ ಸಮಸ್ತರಾದ ಮುನಿಗಳೂ ತಮ್ಮ ತಲೆಯಮೇಲೆ ಧರಿಸಿಕೊಂಡಿದ್ದರು ॥೩೭॥

ತತಃ ಪದ್ಮಪಲಾಶಾಕ್ಷೀಂ ಸುಕೇಶೀಂ ತನುಮಧ್ಯಮಾಮ್ ।
ಪೀನವೃತ್ತಸ್ತನಭರಾಂ ಪೃಥುಶ್ರೋಣೀಭರಾಲಸಾಮ್ ॥೩೪॥
ಮಣಿಮುಞ್ಜರಪಾದಾಭ್ಯಾಂ ಬಿಭ್ರತೀಂ ಕಮ್ಬುಕನ್ಧರಾಮ್ ।
ಬಾಲಾರ್ಕವಸನೋಪೇತಾಂ ಸಾಕ್ಷಾಜ್ಜ್ಯೋತಿರಿವ ರೂಪಿಣೀಮ್ ॥೩೫॥
ಏವಂ ತ್ವಲಙ್ಕೃತಾಂ ಸೀತಾಂ ಸರ್ವಾವಯವಸುನ್ದರೀಮ್ ।
ಸಮಕ್ಷಮಗ್ನೇಃ ಸಂಸ್ಥಾಪ್ಯ ಜನಕೋ ವಾಕ್ಯಮಬ್ರವೀತ್ ॥೩೬॥
ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥೩೭॥
ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ತವ ।
ದೀಯತೇ ಮೇ ಸುತಾ ತುಭ್ಯಂ ಪ್ರೀತೋ ಭವ ರಘೂತ್ತಮ ॥೩೮॥
ಇತಿ ಪ್ರೀತೇನ ಮನಸಾ ಸೀತಾಂ ರಾಮಕರೇ ದದೌ ।
ಮುದೋದ ಜನಕೋ ಲಕ್ಷ್ಮ್ಯಾಂ ಕ್ಷೀರಾಬ್ಧಿರಿವ ವಿಷ್ಣವೇ ॥೩೯॥

ಆ ಬಳಿಕ, ಸೀತಾದೇವಿಯೂ ಅಲ್ಲಿಗೆ ಬಂದವಳಾದಳು. ಆಗ ಅವಳು ಹೇಗಿದ್ದಳೆಂದರೆ,– ಕಮಲಲೋಚನೆಯಾಗಿಯೂ, ಸೊಗಸಾದ ಕೇಶವಾಶವುಳ್ಳವಳಾಗಿಯೂ, ಸೂಕ್ಷ್ಮವಾದ ಮಧ್ಯ ಭಾಗವುಳ್ಳವಳಾಗಿಯೂ, ಸ್ಥೂಲವೂ ವರ್ತುಲವೂ ಆದ ಸ್ತನಯುಗ್ಮವುಳ್ಳವಳಾಗಿಯೂ, ಸ್ಥೂಲವಾದ ಕಟಿಪಶ್ಚಾದ್ಭಾಗದಿಂದ ಮಂದಗಮನೆಯಾಗಿಯೂ, ಮಣಿಮಯವಾದ ಕಾಲುಸರಗಳನ್ನು ಧರಿಸಿದವಳಾಗಿಯೂ, ಜಿಂಬಫಲದಂತೆ ಅಧರವುಳ್ಳವಳಾಗಿಯೂ, ಶಂಖದಂತೆ ವಿರಾಜಿಸುವ ಕಂಠವುಳ್ಳವಳಾಗಿಯೂ, ಬಾಲಸೂರ್ಯನಂತೆ ದೇದೀಪ್ಯಮಾನವಾದ ವಸ್ತ್ರಗಳನ್ನು ಧರಿಸಿದವಳಾಗಿಯೂ, ಪ್ರತ್ಯಕ್ಷವಾಗಿ ಬಂದಿರುವ ಸಾಹ್ಲಾಲ್ಲಕ್ಷ್ಮ್ಯೋ ಎಂಬಂತೆಯೂ ಶೋಭಿಸುತ್ತಿದ್ದಳು. ಈರೀತಿಯಾಗಿ ಅಲಂಕೃತಳಾಗಿರುವ ಸರ್ವಾವಯವಸುಂದರಿಯಾದ ಶ್ರೀ ಸೀತಾದೇವಿಯನ್ನು ಅಗ್ನಿಯ ಮುಂಭಾಗದಲ್ಲಿ ನಿಲ್ಲಿಸಿಕೊಂಡು, ಜನಕಮಹಾರಾಜನು ರಾಮನನ್ನು ಕುರಿತು ಹೀಗೆ ಹೇಳಿದನು ॥೩೪—೩೯॥

ಹೇ ರಾಮ! ಇದೋ, ನನ್ನ ಮಗಳಾದ ಈ ಸೀತೆಯು, ಇಲ್ಲಿಂದ ಮುಂದಕ್ಕೆ ನಿನಗೆ ಸಹಧರ್ಮಚಾರಿಣಿಯಾಗಿರುವಳು; ಇವಳನ್ನು ನೀನು ಪರಿಗ್ರಹಿಸು; ಇವಳ ಹಸ್ತವನ್ನು ನಿನ್ನ ಹಸ್ತದಿಂದ ಗ್ರಹಿಸುವನಾಗು. ನಿನಗೆ ಸರ್ವತ್ರ ಮಂಗಳವೃದ್ಧಿಯುಂಟಾಗಲಿ ॥೩೭॥

ಹೇ ರಘೂತ್ತಮ! ಪತಿವ್ರತೆಯಾಗಿ ಛಾಯೆಯಂತೆ ನಿನ್ನನ್ನು ಅನುಸರಿಸಿ ನಡೆಯುವ ಮಹಾಮಹಿಮಳಾದ ಈ ನನ್ನ ಮಗಳನ್ನು ನಿನಗೆ ಸಮರ್ಪಿಸಿರುವೆನು. ನೀನು ಈಗ ಪ್ರೀತಿಪಡುವನಾಗದೇಕೆಂದು ನಾನು ಪ್ರಾರ್ಥಿಸುವೆನು ॥೩೮॥

ಈರೀತಿಯಾಗಿ, ಮಹಾಪ್ರೀತಿಯುಕ್ತವಾದ ಮನಸ್ಸಿನಿಂದ, ಕ್ಷೀರಸಮುದ್ರನು ಮಹಾವಿಷ್ಣುವಿಗೆ ಶ್ರೀಲಕ್ಷ್ಮೀದೇವಿಯನ್ನೊಪ್ಪಿಸಿದಾಗೆಯಲ್ಲಿ, ಸೀತೆಯನ್ನು ರಾಮನ ಹಸ್ತದಲ್ಲಿ ಸಮರ್ಪಿಸಿದವನಾಗಿ, ಜನಕಮಹಾರಾಜನು, ವಿಶೇಷವಾಗಿ ಆನಂದಭರಿತನಾದನು ॥೩೯॥

ಕನ್ಯಾದಾನಂ ರಾಮಹಸ್ತೇ ದತ್ವಾ ಜನಕಭೂಪತಿಃ ।
ಕೃತಕೃತ್ಯಮಿವಾತ್ಮಾನಂ ಮೇನೇ ರಾಮಪ್ರತಿಗ್ರಹಾತ್ ॥೪೪॥
ಸಾಧುಸಾಧ್ವಿತಿ ದೇವಾನಾಂ ಋಷೀಣಾಂ ವದತಾಂ ತದಾ ।
ದೇವದುನ್ದುಭಿನಿರ್ಘೋಷಃ ಪುಷ್ಪವೃಷ್ಟಿರ್ಮಹತ್ಯಭೂತ್ ॥೪೫॥
ದಿಷ್ಟ್ಯಾ ಮುಹೂರ್ತೇತಿಗತೇ ಕಿಞ್ಚಿದ್ಗರ್ಗಾದಿಭಿಃ ಸಹ ।
ವ್ಯತ್ಯೋರಾಸಹಸ್ರಾಬ್ದಂ ವಿಯೋಗ ಇತಿ ನಿಶ್ಚಿತವತ್ ॥೪೬॥
ದವಿವಂ ದತ್ವಾ ತದಾ ಸೀತಾಂ ಮನ್ತ್ರೋದಕಪುರಸ್ಕೃತಾಮ್ ।
ಅಬ್ರವೀಜ್ಜನಕೋ ರಾಜಾ ಹರ್ಷೇಣಾಭಿಪರಿಪ್ಲುತಃ ॥೪೭॥
ಲಕ್ಷ್ಮಣಾಗಚ್ಛ ಭದ್ರಂ ತೇ ಊರ್ಮಿಳಾಮುದ್ಯತಾಂ ಮಮ ।
ಪ್ರತೀಚ್ಛ ಪಾಣಿಂ ಗೃಹ್ಣೀಷ್ವ ಮಾಭೂತ್ ಕಾಲಸ್ಯ ಪರ್ಯಯಃ ॥೪೮॥
ತಮೇವಮುಕ್ತ್ವಾ ಜನಕೋ ಭರತಂ ಚಾಭ್ಯಭಾಷತ ।
ಗೃಹಾಣ ಪಾಣಿಂ ಮಾಣ್ಡವ್ಯಾಃ ಪಾಣಿನಾ ರಘುನನ್ದನ ॥೪೯॥
ಶತ್ರುಘ್ನಂ ಚಾಪಿ ಧರ್ಮಾತ್ಮಾ ಅಬ್ರವೀಜ್ಜನಕೇಶ್ವರಃ ।
ಶ್ರುತಕೀರ್ತ್ಯಾಮಹಾಬಾಹೋ ಪಾಣಿಂ ಗೃಹ್ಣೀಷ್ವ ಪಾಣಿನಾ ॥೫೦॥

ಈರೀತಿಯಾಗಿ ಜನಕಮಹಾರಾಜನು ಶ್ರೀರಾಮನ ಹಸ್ತದಲ್ಲಿ ಕನ್ಯಾದಾನವನ್ನು ಕೊಟ್ಟವನಾಗಿ, ಶ್ರೀರಾಮನು ತನ್ನ ಮಗಳನ್ನು ಸ್ವೀಕರಿಸಿದುದರಿಂದ ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು ॥೪೪॥

ಆಗ, ದೇವತೆಗಳೂ ಋಷಿಗಳೂ 'ಸಾಧು ಸಾಧು' ಎಂದು ಕೇಳುತ್ತಿರಲಾಗಿ, ದೇವದುಂದುಭಧ್ವನಿಯೂ ವಿಶೇಷವಾಗಿ ಪುಷ್ಪವೃಷ್ಟಿಯೂ ಆದುವು ॥೪೫॥

ಆಗ, ದೈವಯೋಗವಿಂದ ಮುಹೂರ್ತಕಾಲವು ಸ್ವಲ್ಪ ವಿಚಾರಲಾಗಿ, ಗರ್ಗಾದಿಮುನಿಗಳೆಲ್ಲರೂ ಹೋಚಿಸಿ, ದಂಪತಿಗಳಿಗೆ ಸಾವಿರವರ್ಷದವರೆಗೂ ವಿಯೋಗವುಂಟಾಗುವುದೆಂದು ನಿಶ್ಚಯಿಸಿದರು ॥೪೬॥

ಹೀಗೆ ಮಂತ್ರೋದಕಪೂರ್ವಕವಾಗಿ ಸೀತೆಯನ್ನು ರಾಮನಿಗೆ ದಾನಮಾಡಿ, ಮಹಾಹರ್ಷಸಮನ್ವಿತನಾದ ಜನಕರಾಜನು, ಲಕ್ಷ್ಮಣನನ್ನು ಕುರಿತು ಈರೀತಿಯಾಗಿ ಹೇಳಿದನು ॥೪೭॥

ವತ್ಸ! ಲಕ್ಷ್ಮಣ! ಈಗ ನೀನು ವಿವಾಹಾರ್ಥವಾಗಿ ಬರುವನಾಗು; ನಿನಗೆ ಸರ್ವತ್ರ ಕುಶಲವಾಗಲಿ. ವಿವಾಹಕ್ಕಾಗಿ ಸಿದ್ಧವಾಗಿರುವ ಊರ್ಮಿಳೆಯನ್ನು ನನ್ನಿಂದ ಪರಿಗ್ರಹಿಸು. ಇವಳ ಪಾಣಿಗ್ರಹಣ ಮಾಡುವನಾಗು. ಕಾಲ ವಿಚಾರಿಹೋಗಬಾರದು ॥೪೮॥

ಹೀಗೆಂದು ಲಕ್ಷ್ಮಣನಿಗೆ ಹೇಳಿ, ಆ ಜನಕನು ಭರತನನ್ನು ಕುರಿತು 'ಹೇ ರಘುನಂದನ! ಭರತ! ನೀನು ಮಾಂಡವಿಯ ಪಾಣಿಗ್ರಹಣ ಮಾಡು' ಎಂದು ಹೇಳಿದನು ॥೪೯॥

ಆ ಬಳಿಕ, ಧರ್ಮಾತ್ಮನಾದ ಜನಕಭೂಪತಿಯು, ಶತ್ರುಘ್ನನನ್ನು ಕುರಿತು 'ಎಲ್ಲೆ ಮಹಾಭುಜನೇ! ನೀನು ಶ್ರುತಕೀರ್ತಿಯ ಪಾಣಿಗ್ರಹಣಮಾಡುವನಾಗು' ಎಂದು ಹೇಳಿದನು ॥೫೦॥

ಜನಕಸ್ಯ ವಚಃ ಶ್ರುತ್ವಾ ಪಾಣೀ ಪಾಣಿಭಿರಸ್ಪೃಶನ್ ।
ಚತ್ವಾರಸ್ತೇ ಚತಸೃಣಾಂ ವಸಿಷ್ಠಸ್ಯ ಮತೇ ಸ್ಥಿತಾಃ ॥೫೧॥
ಅಗ್ನಿಂ ಪ್ರದಕ್ಷಿಣಂ ಕೃತ್ವಾ ವೇದಿಂ ರಾಜಾನಮೇವ ಚ ।
ಋಷೀಂಶ್ಚೈವ ಮಹಾತ್ಮಾನಃ ಸಭಾಯ್ಯಾರಘುಸತ್ತಮಾಃ ।
ಯಥೋಕ್ತೇನ ತದಾ ಚಕ್ರುಃ ವಿವಾಹಂ ವಿಧಿಪೂರ್ವಕಮ್ ॥೫೨॥
ಕಾತುತೈಸ್ಥಲಜಾಶ್ಚ ಗೃಹೀತೇಷು ಲಲಿತೇಷು ಚ ಪಾಣಿಷು ।
ಪುಷ್ಪವೃಷ್ಟಿರ್ಮಹತ್ಯಾಸೀತ್ ಅನ್ತರಿಕ್ಷಾತ್ ಸುಭಾಸ್ವರಾ ॥೫೩॥
ದಿವ್ಯದುನ್ದುಭಿನಿರ್ಘೋಷೈಃ ಗೀತವಾದಿತ್ರನಿಸ್ವನೈಃ
ನನೃತುಶ್ಚಾಪ್ಸರಸ್ಸಙ್ಘಾಃ ಗನ್ಧರ್ವಾಶ್ಚ ಜಗುಃ ಕಲಮ್ ॥೫೪॥
ವಿವಾಹೇ ರಘುಮುಖ್ಯಾನಾಂ ತದದ್ಭುತಮದೃಶ್ಯತ ॥೫೫॥

ಇತಿ ಶ್ರೀಬಾಲಕಾಣ್ಡೇ ಶ್ರೀಸೀತಾವಿವಾಹಮಹೋತ್ಸವವರ್ಣನಂ
ನಾಮ ಏಕತ್ರಿಂಶಃ ಸರ್ಗಃ.

ಹೀಗೆ ಹೇಳುತ್ತಿರುವ ಜನಕರಾಜನ ಮಾತನ್ನು ಕೇಳಿ, ಆ ನಾಲ್ಕುಮಂದಿ ದಶರಥರು ಕ್ರಮವಾಗಿ, ವಸಿಷ್ಠಮುನಿಯ ಆಜ್ಞೆಯನ್ನು ಅನುಸರಿಸಿ, ಸೀತಾದಿಗಳ ಪಾಣಿಗಳನ್ನು ತಮ್ಮ ಪಾಣಿಗಳಿಂದ ಗ್ರಹಿಸಿದವರಾದರು ॥೫೧॥

ಆಗ, ಪತ್ನೀಸಹಿತರಾಗಿರುವ ಮಹಾತ್ಮರಾದ ರಾಮಾದಿಗಳು, ಅಗ್ನಿಯನ್ನೂ ವಿವಾಹವೇದಿಕೆಯನ್ನೂ ದಶರಥರಾಜನನ್ನೂ, ವಸಿಷ್ಠಾದಿ ಋಷಿಗಳನ್ನೂ ಕ್ರಮವಾಗಿ ಪ್ರದಕ್ಷಿಣಮಾಡಿ ವಿಧಿಪೂರ್ವಕವಾಗಿ ವಿವಾಹವನ್ನು ಮಾಡಿಕೊಂಡರು ॥೫೨॥

ಈರೀತಿಯಾಗಿ ಕಕುತ್ಸ್ಥವಂಶಪ್ರಭವರಾದ ರಾಮಾದಿಗಳಿಂದ ಮೃದುಳವಾದ ಸೀತಾದಿಗಳ ಪಾಣಿಗಳು ಗ್ರಹಿಸಲ್ಪಡಲಾಗಿ ಅಂತರಿಕ್ಷದಿಂದ ಅಧಿಕವಾಗಿ ಅತಿಪ್ರಕಾಶವಾದ ಪುಷ್ಪವೃಷ್ಟಿ ಸುರಿಯಿತು ॥೫೩॥

ದೇವದುಂದುಭಿಧ್ವನಿಯೊಡನೆಯೂ ಗೀತವಾದ್ಯಶಬ್ದಗಳೊಡನೆಯೂ ಕೂಡಿಕೊಂಡು, ಅಪ್ಸರಸ್ತ್ರೀಯರು ಗುಂಪುಗುಂಪಾಗಿ ನರ್ತನಮಾಡುತಿದ್ದರು; ಗಂಧರ್ವರು ಅತಿಮಧುರವಾಗಿ ಗಾನಮಾಡುತಿದ್ದರು. ಆ ರಘುಶ್ರೇಷ್ಠರಾದ ರಾಮಾದಿಗಳ ವಿವಾಹಕಾಲದಲ್ಲಿ, ಇಂತಹ ಆಶ್ಚರ್ಯವೆಲ್ಲವೂ ನಡೆಯಿತು ॥೫೪—೫೫॥

ಇದು ಬಾಲಕಾಂಡದಲ್ಲಿ ಶ್ರೀ ಸೀತಾವಿವಾಹ ಮಹೋತ್ಸವ ವರ್ಣನೆಯೆಂಬ
ಮೂವತ್ತೊಂದನೆಯ ಸರ್ಗವು.

ಅಥ ಶ್ರೀಬಾಲಕಾಂಡೇ ದ್ವಾತ್ರಿಂಶಃ ಸರ್ಗಃ.

ಶ್ರೀ ಶಿವಉವಾಚ.

ಏವಂ ವಿವಾಹೇ ನಿರ್ವೃತ್ತೇ ಬ್ರಹ್ಮಾ ಸನ್ತುಷ್ಟಮಾನಸಃ ।
ಭಕ್ತ್ಯಾನನ್ದಾಶ್ರುಕಲಿತಃ ಸ್ತೋತುಂ ಸಮುಪಚಕ್ರಮೇ ॥೧॥

ಬ್ರಹ್ಮೋವಾಚ.

ಓಂ ನಮೋ ಭಗವತೇ ಶ್ರೀರಾಮಾಯ ಪರಮಾತ್ಮನೇ ।
ಸಹಸ್ರಶಿರಸೇ ತುಭ್ಯಂ ಸಹಸ್ರಾಕ್ಷಾಯ ತೇ ನಮಃ ॥೨॥
ನಮೋ ವಿದ್ಯಾಧಿರಾಜಾಯ ಪಞ್ಚಾಶದ್ವರ್ಣರೂಪಿಣೇ ।
ನಮಃ ಸಹಸ್ರಹಸ್ತಾಯ ಸಹಸ್ರಚರಣಾಯ ಚ ॥೩॥
ನಮೋ ಜೀಮೂತವರ್ಣಾಯ ನಮಸ್ತೇ ವಿಶ್ವತೋಮುಖ ।
ಅನನ್ತಾಯ ನಮಸ್ತುಭ್ಯಂ ನಮಸ್ತೇ ಶೇಷಶಾಯಿನೇ ॥೪॥
ನಮೋ ಹಿರಣ್ಯಗರ್ಭಾಯ ಪಞ್ಚಭೂತಾತ್ಮನೇ ನಮಃ ।
ನಮೋ ಮೂಲಪ್ರಕೃತಯೇ ದೇವಾನಾಂ ಹಿತಕಾರಿಣೇ ॥೫॥

ಬಾಲಕಾಂಡದಲ್ಲಿ ಮುವ್ವತ್ತ್ತೆರಡನೆಯೆ ಸರ್ಗವ್ರು.

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಈರೀತಿಯಾಗಿ ಸೀತೆಗೂ ರಾಮನಿಗೂ ವಿವಾಹ ನಡೆದ ಒಳಿಕ, ಸಂತುಷ್ಟಹೃದಯನಾದ ಚತುರ್ಮುಖಬ್ರಹ್ಮನು ಆನಂದಬಾಷ್ಪ ಪರಿಪೂರ್ಣಲೋಚನನಾಗಿ, ಭಕ್ತಿಯಿಂದ ಸ್ತೋತ್ರಮಾಡಲುಪಕ್ರಮಿಸಿದನು ॥೧॥

ಬ್ರಹ್ಮನು ಮಾಡಿದ ಸ್ತೋತ್ರಪ್ರಕ್ರಮವೇನಂದರೆ,—

ಓಮ್. ಭಗವಂತನಾದ ಶ್ರೀರಾಮರೂಪನಾದ ಪರಮಾತ್ಮನಿಗೆ ನಮಸ್ಕಾರವು; ಸಹಸ್ರಶಿರಸ್ಕನಾದ ನಿನಗೆ ನಮಸ್ಕಾರವು; ಸಹಸ್ರನೇತ್ರನಾದ ನಿನಗೆ ನಮಸ್ಕಾರವು ॥೨॥

ವಿದ್ಯೆಗಳಿಗೆಲ್ಲಧಿದೇವತೆಯಾಗಿ ಪಂಚಾಶದ್ವರ್ಣ (೫೦ ಅಕ್ಷರ) ರೂಪಿಯಾಗಿರುವನಿನಿಗೆ ನಮಸ್ಕಾರವು; ಸಹಸ್ರಕರನಾಗಿಯೂ ಸಹಸ್ರಪಾದನಾಗಿಯೂ ಇರುವ ನಿನಗೆ ನಮಸ್ಕಾರವು ॥೩॥

ನೀಲಮೇಘಶ್ಯಾಮನಾದ ನಿನಗೆ ನಮಸ್ಕಾರವು: ವಿಶ್ವತೋಮುಖನಾದವನೇ! ನಿನಗೆ ನಮಸ್ಕಾರವು; ಅನಂತರೂಪನಾದ ನಿನಗೆ ನಮಸ್ಕಾರವು; ಶೇಷಶಾಯಿಯಾದ ನಿನಗೆ ನಮಸ್ಕಾರವು ॥೪॥

ಹಿರಣ್ಯಗರ್ಭರೂಪನಾದ ನಿನಗೆ ನಮಸ್ಕಾರವು; ಪಂಚಭೂತಸ್ವರೂಪನಾದ ನಿನಗೆ ನಮಸ್ಕಾರವು; ಮೂಲಪ್ರಕೃತಿಭೂತನಾದ ನಿನಗೆ ನಮಸ್ಕಾರವು; ದೇವತೆಗಳಿಗೆಲ್ಲ ಹಿತವನ್ನುಂಟುಮಾಡುವುದಕ್ಕಾಗಿ ಅವತರಿಸಿರುವ ನಿನಗೋಸ್ಕರ ನಮಸ್ಕಾರವು ॥೫॥

ನಮಸ್ತೇ ಸರ್ವದೇವೇಶ ಸರ್ವದುಃಖನಿಷೂದನ ।
ಶಙ್ಖಚಕ್ರಗದಾಪದ್ಮಜಟಾಮುಕುಟಧಾರಿಣೇ ॥೬॥
ನಮೋ ಭರ್ಗಾಯ ತತ್ತ್ವಾಯ ಜ್ಯೋತಿಷಾಂ ಪತಯೇ ನಮಃ ।
ಓಂ ನಮೋ ವಾಸುದೇವಾಯ ನಮೋ ದಶರಥಾತ್ಮಜ ॥೭॥
ನಮೋ ನಮಸ್ತೇ ರಾಜೇನ್ದ್ರ ಸರ್ವಸಮ್ಪತ್ಪ್ರದಾಯಕ ।
ನಮಃ ಕಾರಣರೂಪಾಯ ಕೈಕೇಯ್ಯಾಃ ಪ್ರಿಯಕಾರಿಣೇ ॥೮॥
ನಮಃ ಶಾನ್ತಾಯ ದಾನ್ತಾಯ ವಿಶ್ವಾಮಿತ್ರಪ್ರಿಯಾಯ ತೇ ।
ಯಜ್ಞೇಶಾಯ ನಮಸ್ತುಭ್ಯಂ ನಮಸ್ತೇ ಕ್ರತುಪಾಲಕ ॥೯॥
ನಮೋನಮಃ ಕೇಶವಾಯ ನಮೋ ರಾಮಾಯ ಶಾರ್ಙ್ಗಿಣೇ ।
ನಮಸ್ತೇ ರಾಮಭದ್ರಾಯ ನಮೋ ನಾರಾಯಣಾಯ ಚ ॥೧೦॥
ಓಂ ನಮೋ ರಾಮಚನ್ದ್ರಾಯ ವಾಧವಾಯ ನಮೋನಮಃ ।
ಗೋವಿನ್ದಾಯ ನಮಸ್ತುಭ್ಯಂ ವೇಧಸೇ ಪರಮಾತ್ಮನೇ ॥೧೧॥

ಸಮಸ್ತದೇವತೆಗಳಿಗೂ ಅಧಿಪತಿಯಾದವನೆ! ಸಮಸ್ತರ ದುಃಖವನ್ನೂ ನಾಶಪಡಿಸಶಕ್ಯವನೆ! ಶಂಖ ಚಕ್ರ ಗದಾ ಪದ್ಮ ಜಟಾಮುಕುಟಗಳನ್ನು ಧರಿಸಿರುವ ನಿನಗೋಸ್ಕರ ನಮಸ್ಕಾರವು ॥೬॥

ಪರತತ್ವಸ್ವರೂಪನಾಗಿಯೂ ಪರಜ್ಯೋತಿಸ್ಸ್ವರೂಪನಾಗಿಯೂ ಇರುವ ನಿನಗೆ ನಮಸ್ಕಾರವು. ಸೂರ್ಯಚಂದ್ರಾದಿ ಜ್ಯೋತಿಸ್ಸುಗಳಿಗೆಲ್ಲ ಅಧಿಪತಿಯಾದ ನಿನಗೆ ನಮಸ್ಕಾರವು. ವಸುದೇವಪುತ್ರನಾದ ನಿನಗೆ ನಮಸ್ಕಾರವು. ದಶರಥಪುತ್ರನಾದವನೆ! ನಿನಗೆ ನಮಸ್ಕಾರವು ॥೭॥

ನಮಸ್ತ್ರಾಜರಿಗೂ ಅಧಿಪತಿಯಾದವನೇ ನಿನಗೆ ನಮಸ್ಕಾರವು ಸಕಲಸಂಪತ್ತನ್ನೂ ಕೊಡತಕ್ಕವನೇ! ನಿನಗೆ ನಮಸ್ಕಾರವು. ಆದಿಕಾರಣರೂಪನಾದ ನಿನಗೆ ನಮಸ್ಕಾರವು. ಕೈಕೇಯಿಗೆ ಪ್ರೀತಿಯನ್ನುಂಟುಮಾಡತಕ್ಕವನೇ ನಿನಗೆ ನಮಸ್ಕಾರವು ॥೮॥

ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು ನಿಯಮನಮಾಡಿರತಕ್ಕ ನಿನಗೆ ನಮಸ್ಕಾರವು. ವಿಶ್ವಾಮಿತ್ರಮುನಿಗೆ ಪ್ರೀತಿಪಾತ್ರನಾದ ನಿನಗೆ ನಮಸ್ಕಾರವು. ಸಾಕ್ಷಾದ್ಯಜ್ಞಪುರುಷಸ್ವರೂಪನಾದ ನಿನಗೆ ನಮಸ್ಕಾರವು. ವಿಶ್ವಾಮಿತ್ರರ ಯಜ್ಞವನ್ನು ಪರಿಪಾಲಿಸಿದವನೆ! ನಿನಗೆ ನಮಸ್ಕಾರವು ॥೯॥

ಪ್ರಳಯಕಾಲದಲ್ಲಿ ಕ್ಷೀರಸಮುದ್ರಶಾಯಿಯಾಗಿರುವ ನಿನಗೆ ನಮಸ್ಕಾರವು. ಶಾರ್ಙ್ಗವೆಂಬ ದಿವ್ಯಧನುಸ್ಸನ್ನು ಧರಿಸಿರುವ ಶ್ರೀರಾಮನಿಗೆ ನಮಸ್ಕಾರವು. ರಾಮಭದ್ರನಾದ ನಿನಗೆ ನಮಸ್ಕಾರವು. ಶ್ರೀಮನ್ನಾರಾಯಣರೂಪನಾದ ನಿನಗೆ ನಮಸ್ಕಾರವು ॥೧೦॥

ರಾಮಚಂದ್ರನಿಗೆ ನಮಸ್ಕಾರ; ಲಕ್ಷ್ಮೀಪತಿಗೆ ಪುನಃಪುನಃ ನಮಸ್ಕಾರವು. ಸರ್ವವೇದವಚನಗಳಿಗೂ ಗೋಚರನಾದವನಿಗೆ ನಮಸ್ಕಾರವು. ಜಗದುದ್ಭವಬ್ರಹ್ಮರೂಪನಾಗಿ ಸೃಷ್ಟಿಕರ್ತನಾದ ಪರಮಾತ್ಮನಿಗೆ ನಮಸ್ಕಾರವು ॥೧೧॥

ನಮಸ್ತೇ ರಘುನಾಥಾಯ ನಮೋ ವಿಷ್ಣ್ವಸ್ವರೂಪಿಣೇ ।
ನಮೋನಮಸ್ತೇ ನಾಥಾಯ ನಮಸ್ತೇ ಮಧುಸೂದನ ॥೧೦॥
ತ್ರಿವಿಕ್ರಮ ನಮಸ್ತೇಸ್ತು ಸೀತಾಯಾಃ ಪತಯೇ ನಮಃ ।
ವಾಮದೇವ ನಮಸ್ತುಭ್ಯಂ ನಮಸ್ತೇ ರಾಘವಾಯ ಚ ॥೧೧॥
ನಮೋನಮಃ ಶ್ರೀಧರಾಯ ಜಾನಕೀವಲ್ಲಭಾಯ ಚ ।
ನಮಸ್ತೇಸ್ತು ಹೃಷೀಕೇಶ ಕಾಕುತ್ಸ್ಥಾಯ ನಮೋನಮಃ ॥೧೨॥
ನಮಸ್ತೇ ಪದ್ಮನಾಭಾಯ ನಮೋ ದಾಮೋದರಾಯ ಚ ।
ವಿಭೀಷಣಪರಿತ್ರಾತ್ರೇ ನಮಃ ಸಙ್ಕರ್ಷಣಾಯ ಚ ॥೧೩॥
ವಾಸುದೇವ ನಮಸ್ತೇಸ್ತು ನಮಸ್ತೇ ರಾವಣಾನ್ತಕ ।
ಪ್ರದ್ಯುಮ್ನಾಯ ನಮಸ್ತುಭ್ಯಂ ಹರಕೋದಣ್ಡಖಣ್ಡನ ॥೧೪॥
ಅನಿರುದ್ಧ ನಮಸ್ತೇಸ್ತು ನಮಸ್ತೇ ಶಙ್ಕರಪ್ರಿಯ ।
ಸದಸದ್ವ್ಯಕ್ತಿರೂಪಾಯ ನಮಸ್ತೇ ಪುರುಷೋತ್ತಮ ॥೧೫॥
ಅಧೋಕ್ಷಜ ನಮಸ್ತೇಸ್ತು ಸಪ್ತತಾಳಹರಾಯ ಚ ।
ಖರದೂಷಣಸಂಹರ್ತ್ರೇ ನೃಸಿಂಹಾಯ ನಮೋನಮಃ ॥೧೬॥

ರಘುನಾಥನಾದ ನಿನಗೆ ನಮಸ್ಕಾರವು; ಮಹಾವಿಷ್ಣುಸ್ವರೂಪನಾದ ನಿನಗೆ ನಮಸ್ಕಾರವು. ಸರ್ವಲೋಕಮಹೇಶ್ವರನಾದ ನಿನಗೆ ಪದೇಪದೇ ನಮಸ್ಕಾರವು. ಎಲೈ ಮಧುಸೂದನನೆ! ನಿನಗೆ ನಮಸ್ಕಾರವು ॥೧೦॥

ಎಲೈ ತ್ರಿವಿಕ್ರಮನೆ! ನಿನಗೆ ನಮಸ್ಕಾರವಾಗಲಿ ಸೀತಾಪತಿಯಾದ ನಿನಗೆ ನಮಸ್ಕಾರವಾಗಲಿ. ವಾಮನದೇವನೆ! ನಿನಗೆ ನಮಸ್ಕಾರವು. ರಘುಕುಲೋತ್ಪನ್ನನಾದ ನಿನಗೆ ನಮಸ್ಕಾರವು ॥೧೧॥

ಹೃದಯಕಮಲದಲ್ಲಿ ಲಕ್ಷ್ಮೀದೇವಿಯನ್ನು ಧರಿಸಿರತಕ್ಕ ನಿನಗೆ ನಮಸ್ಕಾರವು. ಜಾನಕೀವಲ್ಲಭನಾದ ನಿನಗೆ ನಮಸ್ಕಾರವು. ಸಕಲೇಂದ್ರಿಯಗಳಿಗೂ ಅಧಿಷ್ಠಾತೃದೇವನಾದವನೆ! ನಿನಗೆ ನಮಸ್ಕಾರವು. ಕಕುತ್ಸ್ಥನೆಂಬ ಚಕ್ರವರ್ತಿಯ ವಂಶದಲ್ಲಿ ಅವತರಿಸಿರುವ ನಿನಗೆ ಪದೇಪದೇ ನಮಸ್ಕಾರವು ॥೧೨॥

ಪದ್ಮನಾಭನಾದ ನಿನಗೆ ನಮಸ್ಕಾರವು. ದಾಮೋದರನಾದ ನಿನಗೆ ನಮಸ್ಕಾರವು. ವಿಭೀಷಣನನ್ನು ಸಂರಕ್ಷಿಸತಕ್ಕ ನಿನಗೆ ನಮಸ್ಕಾರವು. ಸಂಕರ್ಷಣಸ್ವರೂಪನಾದ ನಿನಗೆ ನಮಸ್ಕಾರವು ॥೧೩॥

ಹೇ ವಾಸುದೇವ! ನಿನಗೆ ನಮಸ್ಕಾರವಿರಲಿ. ಹೇ ರಾವಣಾಂತಕ! ನಿನಗೆ ನಮಸ್ಕಾರವಿರಲಿ. ಹೇ ಪ್ರದ್ಯುಮ್ನ! ನಿನಗೆ ನಮಸ್ಕಾರವಿರಲಿ. ಶಿವಧನುರ್ಭಂಗಮಾಡಿದವನೆ! ನಿನಗೆ ನಮಸ್ಕಾರವಿರಲಿ ॥೧೪॥

ಅನಿರುದ್ಧನೆ! ನಿನಗೆ ನಮಸ್ಕಾರವು. ಶಂಕರನಿಗೆ ಪ್ರೀತಿಪಾತ್ರನಾದವನೆ! ನಿನಗೆ ನಮಸ್ಕಾರವು. ಹೇ ಪುರುಷೋತ್ತಮ! ಸದಸದ್ವ್ಯಕ್ತಸ್ವರೂಪನಾದ ನಿನಗೆ ನಮಸ್ಕಾರವು ॥೧೫॥

ಅಧೋಕ್ಷಜನೆ ನಿನಗೆ ನಮಸ್ಕಾರವು. ಸಪ್ತತಾಳವೃಕ್ಷಗಳನ್ನು ಭೇದಿಸತಕ್ಕ ನಿನಗೆ ನಮಸ್ಕಾರವು. ಖರದೂಷಣ ಸಂಹಾರಕರ್ತೃವಾದ ನರಸಿಂಹನಿಗೆ ಪುನಃಪುನಃ ನಮಸ್ಕಾರವು ॥೧೬॥

ಅಚ್ಯುತಾಯ ನಮಸ್ತುಭ್ಯಂ ನಮಸ್ತೇ ಸೇತುಬನ್ಧನ ।
ಜನಾರ್ದನ ನಮಸ್ತೇಸ್ತು ನಮೋ ಹನುಮದಾಶ್ರಯ ॥೧೯॥
ಉಪೇನ್ದ್ರಾಯ ನಮಸ್ತುಭ್ಯಂ ವಾರೀಚಮಥನಾಯ ಚ ।
ನಮೋ ವಾಲಿಪ್ರಮಥನ ನಮಃ ಸುಗ್ರೀವರಾಜ್ಯದ ॥೨೦॥
ಜಾಮದಗ್ನ್ಯಮಹಾದರ್ಪಹರಾಯ ಹರಯೇ ನಮಃ ।
ನಮೋನಮಸ್ತೇ ಕೃಷ್ಣಾಯ ನಮಸ್ತೇ ಭರತಾಗ್ರಜ ॥೨೧॥
ನಮಸ್ತೇ ಪಿತೃಭಕ್ತಾಯ ನಮಃ ಸೌಮಿತ್ರಿಪೂರ್ವಜ ।
ಅಯೋಧ್ಯಾಧಿಪತೇ ತುಭ್ಯಂ ನಮಃ ಶತ್ರುಘ್ನಸೇವಿತ ॥೨೨॥
ನಮೋ ವೇದರಹಸ್ಯಾಯ ನಮಸ್ತೇ ವೇದಯೋನಯೇ ।
ನಮೋ ವೇದಾನ್ತಸಾರಾಯ ಬ್ರಹ್ಮಾದಿಮುನಿಪೂಜಿತ ॥೨೩॥
ನಮೋ ನಿತ್ಯಾಯ ಶುದ್ಧಾಯ ಬುದ್ಧಾಯ ಜ್ಞಾನರೂಪಿಣೇ ।
ನಮೋ ಮುಕ್ತಾಯ ಸತ್ಯಾಯ ಪರಮಾನನ್ದರೂಪಿಣೇ ॥೨೪॥
ಅದ್ವೈತಬ್ರಹ್ಮರೂಪಾಯ ಜ್ಞಾನಗಮ್ಯಾಯ ತೇ ನಮಃ ।
ನಮೋ ಯೋಗರಹಸ್ಯಾಯ ಸಹಸ್ರಜ್ಯೋತಿಷೇ ನಮಃ ।

ಅಚ್ಯುತನಾದ ನಿನಗೆ ನಮಸ್ಕಾರವು. ಸೇತುಬಂಧಮಾಡಿದವನೆ! ನಿನಗೆ ನಮಸ್ಕಾರವು. ಎಲೈ ಜನಾರ್ದನನೆ! ನಿನಗೆ ನಮಸ್ಕಾರವು. ಹನುಮಂತನಿಗೆ ಆಶ್ರಯಭೂತನಾದವನೆ! ನಿನಗೆ ನಮಸ್ಕಾರವು ॥೧೯॥

ಉಪೇಂದ್ರ (ಇಂದ್ರನಿಗೆ ಅನುಜ) ನಾದ ನಿನಗೆ ನಮಸ್ಕಾರವು. ವಾರೀಚರಾಕ್ಷಸನನ್ನು ಕೊಂದ ನಿನಗೋಸ್ಕರ ನಮಸ್ಕಾರವು. ವಾಲಿಯನ್ನು ಸಂಹರಿಸತಕ್ಕವನೆ! ನಿನಗೆ ನಮಸ್ಕಾರವು. ಸುಗ್ರೀವನಿಗೆ ರಾಜ್ಯದಾನವಾಡಿದವನೆ! ನಿನಗೆ ನಮಸ್ಕಾರವು ॥೨೦॥

ಪರಶುರಾಮನ ಮಹಾಗರ್ವವನ್ನು ಮುರಿಯುವಂತಹ ಶ್ರೀಹರಿಗೆ ನಮಸ್ಕಾರವು. ಶ್ರೀ ಕೃಷ್ಣನಾದ ನಿನಗೆ ಪುನಃಪುನಃ ನಮಸ್ಕಾರವು. ಎಲೈ ಭರತಾಗ್ರಜನೆ! ನಿನಗೆ ನಮಸ್ಕಾರವು।

ಪಿತೃಭಕ್ತನಾದ ನಿನಗೆ ನಮಸ್ಕಾರವು. ಲಕ್ಷ್ಮಣನಿಗೆ ಅಗ್ರಜನಾದವನೆ! ನಿನಗೆ ನಮಸ್ಕಾರವು. ಅಯೋಧ್ಯಾಧಿಪತಿಯೇ! ನಿನಗೆ ನಮಸ್ಕಾರವು. ಶತ್ರುಘ್ನನಿಂದ ಸೇವಿತನಾದವನೆ ನಿನಗೆ ನಮಸ್ಕಾರವು ॥೨೨॥

ವೇದಗಳ ರಹಸ್ಯಭೂತನಾದ ನಿನಗೆ ನಮಸ್ಕಾರವು. ವೇದಗಳಿಗೆಲ್ಲ ಜನ್ಮಭೂಮಿಯಾದ ನಿನಗೆ ನಮಸ್ಕಾರವು. ವೇದಾಂತವಜ್ಞನಗಳಿಗೆಲ್ಲ ಸಾರಭೂತನಾದ ನಿನಗೆ ನಮಸ್ಕಾರವು. ಬ್ರಹ್ಮರ್ಷಿ ದೇವರ್ಷಿ ರಾಜರ್ಷಿಗಳಿಂದ ಪೂಜಿತನಾದವನೆ! ನಿನಗೆ ನಮಸ್ಕಾರವು ॥೨೩॥

ನಿತ್ಯವೂ ಶುದ್ಧನೂ ಬುದ್ಧನೂ ಜ್ಞಾನರೂಪನೂ ಆದ ನಿನಗೆ ನಮಸ್ಕಾರವು. ಮುಕ್ತನೂ ಸತ್ಯನೂ ಪರಮಾನಂದರೂಪನೂ ಆದ ನಿನಗೆ ನಮಸ್ಕಾರವು ॥೨೪॥

ಕೇವಲಜ್ಞಾನವಾತ್ರದಿಂದಲೇ ತಿಳಿಯಲ್ಪಡದೇಕಾದ ಅದ್ವೈತಬ್ರಹ್ಮಸ್ವರೂಪನಾದ ನಿನಗೆ ನಮಸ್ಕಾರವು. ಯೋಗಶಾಸ್ತ್ರದ ರಹಸ್ಯಭೂತನಾಗಿಯೂ ಸಹಸ್ರ ಕಿರಣರೂಪನಾಗಿಯೂ

ನಮಃ ಸಾಂಖ್ಯಾತ್ಮನೇ ತುಭ್ಯಂ ಮೂರ್ತಿತ್ರಯಪರಾತ್ಮನೇ ॥೨೫॥

ಶ್ರೀ ಶಿವ ಉವಾಚ.

ಬ್ರಹ್ಮಣೈವಂ ಸ್ತುತೋ ರಾಮಃ ಪ್ರಸನ್ನಮುಖಪಙ್ಕಜಃ ।
ಪ್ರಸಾದಪ್ರವಣೋ ಭೂತ್ವಾ ವಚನಂ ಚೇದಮಬ್ರವೀತ್ ॥೨೬॥

ಶ್ರೀರಾಮ ಉವಾಚ.

ಸ್ತೋತ್ರೇಣಾನೇನ ತೇ ಬ್ರಹ್ಮ್ ಪ್ರಸನ್ನೋಽಸ್ಮಿ ಪಿತಾಮಹ ।
ವರಂ ವರಯ ಭದ್ರಂ ತೇ ಯತ್ ತೇ ಮನಸಿ ಕಾಙ್ಕ್ಷಿತಮ್ ॥೨೭॥

ಶ್ರೀ ಬ್ರಹ್ಮೋವಾಚ.

ಕಲ್ಯಾಣವೇದ್ಯಾಮಧುನಾ ಕೃತಕೌತುಕಮಣ್ಡನಮ್ ।
ಸ್ವರೂಪಂ ತೇ ಸ್ಫುರತು ಮೇ ಸದಾ ಮಾನಸಸನ್ನಿಧೇ ॥೨೮॥
ವರಂ ಪರಮಿದಂ ಯಾಚೇ ವೃಣೇ ನಾನ್ಯಮಿತೋಧಿಕಮ್ ॥೨೯॥

ಶ್ರೀ ಶಿವಉವಾಚ.

ಇತಿ ಸಮ್ಪ್ರಾರ್ಥ್ಯ ನತ್ವಾ ಚ ಶ್ರೀರಾಮಂ ವಿರರಾಮ ಸಃ ।
ಏವಂ ಸಮ್ಪ್ರಾರ್ಥಿತೋ ಧಾತ್ರಾ ತಥೇತ್ಯುಕ್ತ್ವದದದ್ಧರಿಃ ।
ತತಃ ಸಭಾಸದಾಂ ತತ್ರ ಸಾಧುಕಾರೋ ಮಹಾನಭೂತ್ ॥೩೦॥

ಇರುವ ನಿನಗೆ ನಮಸ್ಕಾರವು. ಸಾಂಖ್ಯರೂಪನಾಗಿಯೂ ತ್ರಿಮೂರ್ತ್ಯತೀತನಾಗಿಯೂ ಇರುವ ನಿನಗೋಸ್ಕರ ನಮಸ್ಕಾರವು ॥೨೫॥

ಶ್ರೀ ಪರಮೇಶ್ವರನು ಹೇಳುವನು —

ಎಲೌ ! ಪಾರ್ವತಿ ! ಈರೀತಿಯಾಗಿ ಬ್ರಹ್ಮನಿಂದ ಸ್ತುತಿಸಲ್ಪಟ್ಟ ಶ್ರೀರಾಮಚಂದ್ರನು, ಪ್ರಸನ್ನಮುಖಕಮಲನಾಗಿ, ಅನುಗ್ರಹವಾಡಲುದ್ಯುಕ್ತನಾಗಿ, ಈ ವಾಕ್ಯವನ್ನು ಹೇಳಿದನು ।

ಶ್ರೀರಾಮನು ಹೇಳುವುದೇನಂದರೆ:—

ಸರ್ವಲೋಕಪಿತಾಮಹನಾದ ಎಲೈ ಬ್ರಹ್ಮನೆ! ನೀನು ಮಾಡಿದ ಈ ಸ್ತೋತ್ರದಿಂದ ನಾನು ಪ್ರಸನ್ನನಾದೆನು. ನಿನಗೆ ಮಂಗಳವುಂಟಾಗಲಿ. ನಿನ್ನ ಮನಸ್ಸಿನಲ್ಲಿರುವ ವರವನ್ನು ಕೇಳಿಕೋ॥

ಅನಂತರ ಬ್ರಹ್ಮನು ಹೇಳುವನು:—

ಸ್ವಾಮಿ! ರಘುನಂದನನೆ! ಈಗ ಈ ಕಲ್ಯಾಣವೇದಿಕೆಯಲ್ಲಿ ವಿವಾಹೋಚಿತವಾದ ಅಲಂಕಾರವನ್ನು ಮಾಡಿಕೊಂಡಿರುವ ಈ ನಿನ್ನ ರೂಪವು ಸರ್ವದಾ ನನ್ನ ಮನಸ್ಸಿನೊಳಗೆ ಸ್ಫುರಿಸುತ್ತಿರಲಿ. ಇದೇ ನನಗೆ ಮುಖ್ಯವಾಗಿ ಬೇಕಾಗಿರುವ ವರವು; ಇದನ್ನೇನಾನು ಕೇಳಿಕೊಳ್ಳುವೆನು. ಇದಕ್ಕಿಂತ ಹೆಚ್ಚಾದ ಮತ್ತಾವ ವರವನ್ನೂ ನಾನು ಕೇಳಿಕೊಳ್ಳುವುದಿಲ್ಲ ॥೨೪—೨೯॥

ಶ್ರೀ ಶಿವನು ಪಾರ್ವತಿಯೊಡನೆ ಹೇಳುವನು :—

ಎಲೌ ಪಾರ್ವತಿ! ಹೀಗೆಂದು ಶ್ರೀರಾಮನನ್ನು ಪ್ರಾರ್ಥಿಸಿಕೊಂಡು, ಬಳಿಕ ನಮಸ್ಕಾರವನ್ನೂ ಮಾಡಿ, ಆ ಬ್ರಹ್ಮನು ಸುಮ್ಮನಾದನು. ಆ ಬ್ರಹ್ಮನಿಂದ ಈರೀತಿಯಾಗಿ ಪ್ರಾರ್ಥಿಸಲ್ಪಟ್ಟ ಶ್ರೀಹರಿಯು, ಹಾಗೆಯೇ ಆಗಲೆಂದು ಅಪ್ಪಣೆ ಕೊಟ್ಟನು. ಆ ಬಳಿಕ, ಆ ಸಭೆಯೊಳಗಿದ್ದವರೆಲ್ಲ 'ಸಾನು ಸಾಧು' ಎಂದು ಬಹಳವಾಗಿ ಶ್ಲಾಘಿಸಿದರು ॥೩೦॥

ಅತಿಗುಹ್ಯತಮಂ ದಿವ್ಯಂ ರಹಸ್ಯಂ ಬ್ರಹ್ಮಣೋದಿತಮ್ ।
ಪುಣ್ಯಕಾಲೇಷು ಸರ್ವೇಷು ಪ್ರಪಠೇದುತ್ತಮಂ ಸ್ತವಮ್ ॥೩೧॥
ಸರ್ವಬಾಧಾಪ್ರಶಮನಂ ಸರ್ವಕಾಮಫಲಪ್ರದಮ್ ।
ಸರ್ವಸೌಭಾಗ್ಯಜನನಂ ಸರ್ವೈಶ್ವರ್ಯಪ್ರದಾಯಕಮ್ ॥೩೨॥
ಅಭೀಷ್ಟಫಲದಂ ದಿವ್ಯಂ ಸರ್ವಲೋಕೈಕವಶ್ಯದಮ್ ।
ವಿಜ್ಞಾನದಂ ಸದಾ ನೃಣಾಂ ಅಜ್ಞಾನತಿಮಿರಾಪಹಮ್ ॥೩೩॥
ಯಃ ಪಠೇತ್ ಪ್ರಯತೋ ನಿತ್ಯಂ ಶ್ರಾವಯೇದ್ವಾ ಸಮಾಹಿತಃ ।
ಸರ್ವದೇಶೇಷು ತೀರ್ಥೇಷು ದಾನೇಷು ಚ ತಪಸ್ಸು ಚ ॥೩೪॥
ಯತ್ ಫಲಂ ಮುನಿಭಿಃ ಪ್ರೋಕ್ತಂ ತತ್ ಫಲಂ ಸಮವಾಪ್ನುಯಾತ್ ।
ಪುನರಾವೃತ್ತಿರಹಿತಂ ವೈಕುಂಠಂ ಸಮವಾಪ್ನುಯಾತ್ ॥೩೫॥
ತತೋಬ್ರವೀದ್ವಸಿಷ್ಠಾಯ ವಿಶ್ವಾಮಿತ್ರಾಯ ಮೈಥಿಲಃ ।
ಪುರಾ ಶ್ರುತಂ ಮಯಾ ಬ್ರಹ್ಮ ನಾರದೇನ ಮಹಾತ್ಮನಾ ॥೩೬॥

ಎಲೌ ಪಾರ್ವತಿ! ಬ್ರಹ್ಮನಿಂದ ಮಾಡಲ್ಪಟ್ಟ ಈ ಸ್ತೋತ್ರವು, ಅತಿ ಗೋಪ್ಯವಾದುದು; ದಿವ್ಯವಾದುದು; ರಹಸ್ಯವಾದುದು ಈ ಉತ್ತಮಸ್ತೋತ್ರವನ್ನು ಸಕಲ ಪುಣ್ಯಕಾಲಗಳಲ್ಲಿಯೂ ಅವಶ್ಯವಾಗಿ ಪಾರಾಯಣ ಮಾಡಬೇಕು ॥೩೧॥

ಈ ಸ್ತೋತ್ರವು, ಸಕಲ ಬಾಧೆಯನ್ನೂ ಶಾಂತಿಗೊಳಿಸತಕ್ಕುದು; ಸಮಸ್ತವಾದ ಇಷ್ಟಾರ್ಥವನ್ನೂ ಕೊಡತಕ್ಕುದು; ಸಕಲ ಸೌಭಾಗ್ಯವನ್ನೂ ಉಂಟುಮಾಡತಕ್ಕುದು; ಸಕಲವಿಧವಾದ ಐಶ್ವರ್ಯವನ್ನೂ ಕೊಡತಕ್ಕುದು ॥೩೨॥

ಮತ್ತು, ಈ ದಿವ್ಯವಾದ ಸ್ತೋತ್ರವು, ಇಷ್ಟವಾದ ಫಲಗಳನ್ನೆಲ್ಲ ಕೊಡುವುದು; ಸರ್ವಲೋಕವನ್ನೂ ವಶವಾಡಿಕೊಡುವುದು; ಪುರುಷರಿಗೆ ಸರ್ವದಾ ಜ್ಞಾನವನ್ನು ಕೊಡತಕ್ಕುದಾಗಿಯೂ ಅಜ್ಞಾನವನ್ನು ಪರಿಹರಿಸತಕ್ಕುದಾಗಿಯೂ ಇರುವುದು ॥೩೩॥

ಇಂತಹ ಈ ಸ್ತೋತ್ರವನ್ನು ಯಾವನು ನಿತ್ಯವೂ ಪಠನಮಾಡುವನೋ, ಅಥವಾ ಇತರರಿಗೆ ಹೇಳುವನೋ, ಅವನು, ಸಕಲವಾದ ದಿವ್ಯಕ್ಷೇತ್ರಗಳಲ್ಲಿಯೂ ತೀರ್ಥಗಳಲ್ಲಿಯೂ ದಳಗಳಲ್ಲಿಯೂ ತಪಸ್ಸುಗಳಲ್ಲಿಯೂ ಯಾವ ಫಲವು ಬರುವುದೆಂದು ಋಷಿಗಳಿಂದ ಹೇಳಲ್ಪಟ್ಟಿರುವುದೋ-ಅಂತಹ ಫಲವನ್ನು ಹೊಂದುವನು; ಮತ್ತು, ಪುನರಾವೃತ್ತಿರಹಿತವಾದ ಶ್ರೀ ವೈಕುಂಠವಾಸವನ್ನೂ ಪಡೆಯುವನು ॥೩೪-೩೫॥

ಎಲೌ ಪಾರ್ವತಿ! ಈರೀತಿಯಾಗಿ ಬ್ರಹ್ಮನಿಗೆ ಶ್ರೀರಾಮನು ವರಪ್ರದಾನವಾಡಿದ ಬಳಿಕ, ಜನಕರಾಜನು, ವಸಿಷ್ಠರನ್ನೂ ವಿಶ್ವಾಮಿತ್ರರನ್ನೂ ಕುರಿತು ಹೀಗೆ ಹೇಳಿದನು:—ಪೂಜ್ಯರೆ! ಎಲ್ಲೆ ಬ್ರಾಹ್ಮಣೋತ್ತಮರೆ! ಪೂರ್ವದಲ್ಲಿ ಮಹಾತ್ಮರಾದ ನಾರದರ ಮುಖದಿಂದ ನಾನು ಕೇಳಿರುವ ವಿಷಯವನ್ನು ತಮ್ಮ ಸನ್ನಿಧಿಯಲ್ಲಿ ಅರಿಕೆಮಾಡುವೆನು ॥೩೬॥

ಏಳದಾ ನಾರದೋಭ್ಯಾಗಾತ್ ವಿವಿಕ್ತೇ ಮಯಿ ಸಂಸ್ಥಿತೇ ।
ರಣಯಂ ಮಹತೀಂ ವೀಣಾಂ ಗಾಯಂ ನಾರಾಯಣಂ ಪ್ರಭುಮ್ ।
ಅರ್ಚಿತಃ ಸುಖಮಾಸೀನೋ ಮಾಮುವಾಚ ಕೃಪಾನಿಧಿಃ ॥೩೭॥

ಶೃಣುಷ್ವ ವಚನಂ ಗುಹ್ಯಂ ತವಾಭ್ಯುದಯಕಾರಣಮ್ ।
ಪರಮಾತ್ಮಾ ಹೃಷೀಕೇಶೋ ಭಕ್ತಾನಾಂ ಹಿತಕಾಮ್ಯಯಾ ॥೩೮॥

ದೇವಕಾರ್ಯಾರ್ಥಸಿದ್ಧ್ಯರ್ಥಂ ರಾವಣಸ್ಯ ವಧಾಯ ಚ ।
ಜಾತೋ ರಾಮಇತಿ ಖ್ಯಾತೋ ಮಾಯಾಮಾನುಷವೇಷಧೃತ್ ॥೩೯॥

ಅಸ್ತೇ ದಾಶರಥಿರ್ಭೂತ್ವಾ ಚತುರ್ಧಾ ಪರಮೇಶ್ವರಃ ।
ಯೋಗಮಾಯಾ ಚ ಸೀತೇತಿ ಜಾತಾಸ್ತೇ ತವ ವೇಶ್ಮನಿ ॥೪೦॥

ಅತಸ್ತ್ವಂ ರಾಘವಾಯೈವ ದೇಹಿ ಸೀತಾಂ ಪ್ರಯತ್ನತಃ ।
ನಾನ್ಯೇಷಾಂ ಪೂರ್ವಭಾಯೈರ್ಯಾ ರಾಮಸ್ಯ ಪರಮಾತ್ಮನಃ ॥೪೧॥

ಇತ್ಯುಕ್ತ್ವಾ ಪ್ರಯಯೌ ದೇವಗತಿರ್ದೇವಮುನಿಸ್ತದಾ ।
ತದಾರಭ್ಯ ಮಯಾ ಸೀತಾ ಲಕ್ಷ್ಮೀರಿತಿ ವಿಭಾವ್ಯತೇ ॥೪೨॥

ಹಿಂದೆ ಒಂದುವೇಳೆ, ನಾನು ವಿಜನವಾದ ಸ್ಥಳದಲ್ಲಿ ಕುಳಿತಿರಲಾಗಿ, ಮಹತಿಯೆಂಬ ವೀಣೆಯನ್ನು ಬಾರಿಸುತ-ಶ್ರೀಮನ್ನಾರಾಯಣನ ನಾಮಗಳನ್ನು ಗಾನವಾಡುತಿರುವ ನಾರದಮುನಿಯು ನನ್ನ ಹತ್ತಿರಕ್ಕೆ ಬಂದನು. ಬಳಿಕ ನನ್ನಿಂದ ಪೂಜಿಸಲ್ಪಟ್ಟವನಾಗಿ, ಸುಖವಾಗಿ ಕುಳಿತುಕೊಂಡು, ದಯಾನಿಧಿಯಾದ ಆ ನಾರದಮುನಿಯು, ನನ್ನನ್ನು ಕುರಿತು ಹೀಗೆ ಹೇಳಿದನು ॥೩೭

ಅಯ್ಯಾ! ಜನಕ! ನಿನ್ನ ಅಭ್ಯುದಯಕ್ಕೆ ಮುಖ್ಯಕಾರಣವಾದ ಅತಿ ರಹಸ್ಯವಾಗಿರುವ ಈ ಮಾತನ್ನು ಕೇಳುವನಾಗು. ಪರಮಾತ್ಮನಾದ ಹೃಷೀಕೇಶನು, ಭಕ್ತರಿಗೆ ಹಿತವನ್ನುಂಟುಮಾಡಬೇಕೆಂಬ ಇಚ್ಛೆಯಿಂದಲೂ, ದೇವತೆಗಳ ಕಾರ್ಯಸಿದ್ಧಿಯಾಗುವುದಕ್ಕೂ, ರಾವಣನ ವಧೆಗೋಸ್ಕರವೂ ಕೂಡ, ರಾಮನೆಂದು ಪ್ರಸಿದ್ಧನಾಗಿ, ಮಾಯಾಮಾನುಷರೂಪವನ್ನು ಧರಿಸಿಕೊಂಡು, ದಶರಥಪುತ್ರನಾಗಿ ಅವತರಿಸಿರುವನು. ಆ ಪರಮೇಶ್ವರನು, ಈಗ ನಾಲ್ಕುಪ್ರಕಾರವಾಗಿ ರೂಪವನ್ನು ವಿಭಾಗಿಸಿಕೊಂಡಿರುವನು. ಆ ಪರಮಾತ್ಮನ ಯೋಗಮಾಯೆಯೂ ಕೂಡ, ಸೀತೆಯೆಂಬ ಹೆಸರಿನಿಂದ ನಿನ್ನ ಮನೆಯಲ್ಲಿ ಅವತರಿಸಿರುವಳು. ಅದುಕಾರಣ, ನೀನು ಪ್ರಯತ್ನಪೂರ್ವಕವಾಗಿ ಆ ರಾಮನಿಗೇ ಸೀತೆಯನ್ನು ಕೊಡುವನಾಗು. ಇವಳು ಮತ್ತೊಬ್ಬರಿಗೂ ಪೂರ್ವದಲ್ಲಿ ಪತ್ನಿಯಾದವಳಲ್ಲ. ಪರಮಾತ್ಮನಾದ ಶ್ರೀರಾಮನಿಗೇ ಪತ್ನಿಯಾಗತಕ್ಕವಳು. ಎಂದು ನಾರದಮುನಿ ಹೇಳಿದನು ॥೩೮-೪೧॥

ಪೂಜ್ಯರಾದ ವಸಿಷ್ಠ ವಿಶ್ವಾಮಿತ್ರರೇ! ಆ ದೇವಮುನಿಯು ಹೀಗೆಂದು ಹೇಳಿದಿಟ್ಟು, ಆಗ ಸ್ವೇಚ್ಛಾಗಮನನಾಗಿ ಹೊರಟುಹೋದನು. ಆ ಕಾಲಮೊದಲುಗೊಂಡು, ನಾನು ಸೀತೆಯನ್ನು ಸಾಕ್ಷಾಲ್ಲಕ್ಷ್ಮಿಯೆಂದು ಭಾವನೆಮಾಡುತ್ತಿರುವೆನು ॥೪೨॥

ಕಥಂ ಮಯಾ ರಾಘವಾಯ ದೀಯತೇ ಜಾನಕೀ ಶುಭಾ ।
ಇತಿ ಚಿನ್ತಾಸಮಾವಿಷ್ಟಃ ಕಾಲಮೇತಮಚಿನ್ತಯಮ್ ॥೪೩॥

ಮತ್ಪಿತಾಮಹಗೇಹೇಮು ನ್ಯಾಸಭೂತಮಿದಂ ಧನುಃ ।
ಈಶ್ವರೇಣ ಪುರಾ ಕ್ಷಿಪ್ತಂ ಪುರದಾಹಾದನನ್ತರಮ್ ॥೪೪॥

ಧನುರೇತತ್ ಪಣಂ ಕಾರ್ಯಮಿತ್ಯಾಲೋಚ್ಯ ತಥಾ ಕೃತಮ್ ।
ಸೀತಾಪಾಣಿಗ್ರಹಾರ್ಥಾಯ ಸರ್ವೇಷಾಂ ಮಾನನಾಶನಮ್ ॥೪೫॥

ತ್ವತ್ಪ್ರಸಾದಾನ್ಮುನಿಶ್ರೇಷ್ಠ ರಾಮೋ ರಾಜೀವಲೋಚನಃ ।
ಅನೀತೋಽತ್ರ ಧನುರ್ದರ್ಶ್ಯಂ ಫಲಿತೋ ಮೇ ಮನೋರಥಃ ॥೪೬॥

ಅದ್ಯ ಮೇ ಸಫಲಂ ಜನ್ಮ ರಾಮ ತ್ವಾಂ ಸಹ ಸೀತಯಾ ।
ಏಕಾಸನಸ್ಥಂ ಪಶ್ಯಾಮಿ ಭಾಸ್ಕರಮಾನಂ ರವಿಂ ಯಥಾ ॥೪೭॥

ತ್ವತ್ಪಾದಾಮ್ಬುಧರೋ ಬ್ರಹ್ಮಾ ಸೃಷ್ಟಿಚಕ್ರಪ್ರವರ್ತಕಃ ।
ಬಲಿಸ್ತ್ವತ್ಪಾದಸಲಿಲಂ ಧೃತ್ವಾಭೂದ್ದಿತಿಜಾಧಿಪಃ ॥೪೮॥

'ಇಂತಹ ಮಂಗಳಾತ್ಮಕಳಾದ ಸೀತೆಯನ್ನು ರಾಮನಿಗೆ ನಾನು ಸಮರ್ಪಿಸುವ ಮಾರ್ಗವಾ ವುದು?' ಎಂದು ಚಿಂತಾಕ್ರಾಂತನಾಗಿ, ಇಷ್ಟು ದಿವಸದವರೆಗೂ ಚಿಂತಿಸುತ್ತಿದ್ದೆನು ॥೪೩॥

ಈಚೆಗೆ ನನಗೊಂದು ಉಪಾಯವು ತೋರಿತು. ಅದೇನೆಂದರೆ,—ಪೂರ್ವದಲ್ಲಿ ಪರಮೇ ಶ್ವರನು, ತ್ರಿಪುರಸಂಹಾರಾನಂತರ, ಈ ಧನುಸ್ಸನ್ನು ನಮ್ಮ ಪಿತಾಮಹರ (ಹಿಂದಿನವರ) ಮನೆ ಯಲ್ಲಿ ನ್ಯಾಸವಾಗಿ ಇಟ್ಟಿದ್ದನು ॥೪೪॥

'ಈ ಧನುಸ್ಸಿನ ಆರೋಪಣೆಯನ್ನು ಸೀತಾವಿವಾಹದಲ್ಲಿ ಪಣವನ್ನಾಗಿ ಏರ್ಪಡಿಸಬೇಕು' ಎಂದು ಮನಸ್ಸಿನಲ್ಲಿ ಆಲೋಚಿಸಿಕೊಂಡು ಅದರಂತೆಯೇ, ಇತರರಾದ ಸಮಸ್ತ ರಾಜರಿಗೂ ಮಾನ ಹಾನಿಕರವಾದ ಈ ಕೆಲಸವನ್ನು ಮಾಡಿದೆನು ॥೪೫॥

ಎಲೈ ಮುನಿಶ್ರೇಷ್ಠರಾದ ವಿಶ್ವಾಮಿತ್ರರೇ! ತಮ್ಮ ಅನುಗ್ರಹದಿಂದ, ರಾಜೀವಲೋಚನ ನಾದ ಈ ರಾಮನು ಧನುಸ್ಸನ್ನು ನೋಡುವುದಕ್ಕಾಗಿ ಇಲ್ಲಿಗೆ ಕರೆತರಲ್ಪಟ್ಟನು. ಈಗ ನನ್ನ ಮನೋರಥವು ಸಫಲವಾಯ್ತು ॥೪೬॥

ಹೀಗೆಂದು ವಸಿಷ್ಠ ವಿಶ್ವಾಮಿತ್ರರನ್ನು ಕುರಿತು ಹೇಳಿ, ಅನಂತರ ಶ್ರೀರಾಮನನ್ನು ಕುರಿತು ಹೇಳುವನು. ಅಯ್ಯಾ! ರಾಮ! ಈಗ ನನ್ನ ಜನ್ಮವು ಸಫಲವಾಯ್ತು. ಸೀತೆಯೊಡನೆ ಏಕಾ ಸನದಲ್ಲಿ ಕುಳಿತುಕೊಂಡು ಸೂರ್ಯನಂತೆ ಪ್ರಕಾಶಿಸುತ್ತಿರುವ ನಿನ್ನನ್ನು ಕಣ್ಣುತುಂಬ ನೋಡುತ್ತಿ ರುವೆನಲ್ಲವೆ! ॥೪೭॥

ನಿನ್ನ ಪಾದೋದಕವನ್ನು ಧರಿಸಿಕೊಂಡಿರುವ ಬ್ರಹ್ಮನವರಿಂದ, ಜಗತ್ತುಸೃಷ್ಟಿಚಕ್ರವನ್ನು ನಡೆಸುವಷ್ಟು ಶಕ್ತಿಯುಳ್ಳವನಾಗಿರುವನು. ಬಲಿಚಕ್ರವರ್ತಿಯು ನಿನ್ನ ಪಾದೋದಕವನ್ನು ಧರಿಸಿದಮಾತ್ರದಿಂದಲೇ, ರಾಕ್ಷಸರಿಗೆಲ್ಲ ಅಧಿಪತಿಯಾದನು ॥೪೮॥

ತ್ವತ್ಪಾದಪಾಂಸುಸಂಸ್ಪರ್ಶಾತ್ ಅಹಲ್ಯಾ ಭರ್ತೃಶಾಪತಃ ।
ಸದ್ಯಏವ ವಿನಿರ್ಮುಕ್ತಾ ಕೋನ್ಯಸ್ತ್ವತ್ತೋಧಿಕಃ ಕ್ಷಿತೌ ॥೪೯॥

ಯತ್ಪಾದಪದ್ಮಜಪರಾಗಸುರಾಗಯೋಗಿ-
ಬೃನ್ದೈರ್ಜಿತಂ ಭವಭಯಂ ಜಿತಕಾಲಚಕ್ರೈಃ ।
ಯನ್ನಾಮಕೀರ್ತನಪರಾಜಿತದುಃಖಶೋಕಾಃ
ದೇವಾಸ್ತಮೇವ ಶರಣಂ ಸತತಂ ಪ್ರಪದ್ಯೇ ॥೫೦॥

ಶ್ರೀಸೂತ ಉವಾಚ.

ಕನ್ಯಾದಾನಂ ಮಹಾದಾನಂ ಕೃತ್ವಾ ಜನಕಭೂಪತಿಃ ।
ಪಿತೄನಕ್ಷಯಲೋಕೇಷು ಸ್ಥಾಪಯಾಮಾಸ ದುರ್ಗತಾನ್ ॥೫೧॥
ಕನ್ಯಾದಾನಾತ್ ಪರಂ ದಾನಂ ನ ಭೂತಂ ನ ಭವಿಷ್ಯತಿ ।
ಮಹಾದಾನಾಸಮರ್ಥಶ್ಚೇತ್ ಕನ್ಯಾದಾನಂ ಸಮಾಚರೇತ್ ॥೫೨॥
ಕನ್ಯಾದಾನಫಲಂ ವಕ್ತುಂ ಬ್ರಹ್ಮಣೋಪಿ ನ ಸಾಮ್ಪ್ರತಮ್ ।
ಸರ್ವೇ ಲೋಕಾಹಿ ಸಂಕ್ಲಪ್ತಾಃ ಕನ್ಯಾದಾನಸ್ಯ ಗೌರವಾತ್ ॥೫೩॥

ನಿನ್ನ ಪಾದಧೂಳಿಯ ಸ್ಪರ್ಶಮಹಿಮೆಯಿಂದ, ಅಹಲ್ಯೆಯು ಆ ಕ್ಷಣವೇ ಪತಿಶಾಪದಿಂದ ಮುಕ್ತಳಾದಳು. ಆಯ್ಯಾ! ರಾಮ! ಇಂತಹ ಮಹಾಮಹಿಮನಾದ ನಿನಗಿಂತ ಅಧಿಕನಾದ ವನು ಈ ಭೂಮಿಯಲ್ಲಿ ಯಾವನಿರುವನು? ॥೪೯॥

ಯಾವ ಶ್ರೀರಾಮಚಂದ್ರನ ಪಾದಕಮಲಧೂಳಿಯಲ್ಲಿ ಆಸಕ್ತರಾಗಿ, ಮಹಾ ಯೋಗನಿಷ್ಠರಾದವರು, ಕಾಲಚಕ್ರವನ್ನು ಜಯಿಸಿ, ಸಂಸಾರಭಯದಿಂದ ಮುಕ್ತರಾಗುವರೋ,— ಯಾವನ ನಾಮಕೀರ್ತನದಿಂದ ದೇವತೆಗಳೆಲ್ಲರೂ ದುಃಖಶೋಕಗಳನ್ನು ಪರಿಹರಿಸಿಕೊಂಡಿರುವರೋ,— ಅಂತಹ ಮಹಾತ್ಮನಾದ ಶ್ರೀರಾಮನನ್ನೇ ನಾನು ಸರ್ವದಾ ಶರಣಾಗತನಾಗಿರುವೆನು. ಎಂದು, ಜನಕಮಹಾರಾಜನು ಶ್ರೀರಾಮನನ್ನು ಕುರಿತು ಪ್ರಾರ್ಥಿಸಿದನು ॥೫೦॥

ಶ್ರೀಸೂತಪುರಾಣೀಕರು ಶೌನಕಾದಿ ಮುನಿಗಳನ್ನು ಕುರಿತು ಹೇಳುವರು:—

ಆಯ್ಯಾ! ಶೌನಕಾದಿಗಳಿರಾ! ಈರೀತಿಯಾಗಿ, ಷೋಡಶಮಹಾದಾನಗಳಲ್ಲೆಲ್ಲ ಪ್ರಶಸ್ತವಾದ ಕನ್ಯಾದಾನವನ್ನು ಮಾಡಿ, ಜನಕಮಹಾರಾಜನು, ಮಹಾ ದುರವಸ್ಥೆಯನ್ನನುಭವಿಸುತ್ತಿದ್ದ ಪಿತೃಗಳನ್ನೆಲ್ಲ, ಅಕ್ಷಯವಾದ ಪುಣ್ಯಲೋಕಗಳಲ್ಲಿ ಶಾಶ್ವತವಾಗಿರುವಂತೆ ಮಾಡಿದನು ॥೫೧॥

ಲೋಕದಲ್ಲಿ, ಕನ್ಯಾದಾನಕ್ಕಿಂತ ಹೆಚ್ಚಾದ ದಾನವೂ, ಹಿಂದೆಯೂ ಇರಲಿಲ್ಲ; ಮುಂದೆಯೂ ಇರಲಿಲ್ಲ. ಅದುಕಾರಣ, ಪುರುಷನು, ಇತರವಾದ ದಾನಗಳನ್ನು ಮಾಡಲು ಅಸಮರ್ಥನಾಗಿದ್ದ ಪಕ್ಷದಲ್ಲಿ, ಈ ಕನ್ಯಾದಾನವೊಂದನ್ನಾದರೂ ಮಾಡಬೇಕು ॥೫೨॥

ಕನ್ಯಾದಾನದ ಫಲವನ್ನು ನಿಃಶೇಷವಾಗಿ ಹೇಳುವುದಕ್ಕೆ ಚತುರ್ಮುಖನಿಗೂ ಶಕ್ತಿಯಿಲ್ಲ. ಕನ್ಯಾದಾನದ ಮಹಿಮೆಯಿಂದ, ಪುರುಷನಿಗೆ, ಸಮಸ್ತ ಪುಣ್ಯಲೋಕಗಳೂ ಸಾಧ್ಯವಾಗುವುವು ॥

ಸ್ವರ್ಗದ್ವಾರೇ ಸತ್ಯಲೋಕೇ ವೈಕುಣ್ಠೇ ಕಙ್ಕರಾಲಯೇ ।
ನ ನಿವಾರಣಮಸ್ತ್ಯಸ್ಯ ಯೇನ ಕನ್ಯಾ ಪ್ರದೀಯತೇ ॥೫೪॥
ಪಿತೃತೋ ಮಾತೃತಶ್ಚೈವ ಭಾರ್ಯಾತಶ್ಚೈಕವಿಂಶತಿಃ ।
ಕುಲಾನಿ ಸ್ವರ್ಗಮೇಷ್ಯನ್ತಿ ಕನ್ಯಾದಾನಕೃತಾಂ ಸತಾಮ್ ॥೫೫॥

ಇತಿ ಶ್ರೀಬಾಲಕಾಣ್ಡೇ ಬ್ರಹ್ಮಸ್ತುತ್ಯಾದಿಕಥನಂ ನಾಮ
ದ್ವಾತ್ರಿಂಶಃ ಸರ್ಗಃ.




ಯಾವನು ಕನ್ಯಾದಾನವಾಡುವನೋ, ಅವನಿಗೆ—ಸ್ವರ್ಗಲೋಕದಲ್ಲಿಯೂ ವೈಕುಂಠದಲ್ಲಿಯೂ ಕೈಲಾಸದಲ್ಲಿಯೂ ತಡೆಯಾಗುವುದಿಲ್ಲ ॥೫೪॥

ಕನ್ಯಾದಾನವಾಡತಕ್ಕ ಮಹಾತ್ಮರಿಗೆ,—ತಂದೆಯ ಕಡೆಯಲ್ಲಿ ಏಳು ತಲೆಗಳೂ, ತಾಯಿಯ ಕಡೆಯಲ್ಲಿ ಏಳುತಲೆಗಳೂ, ಹೆಂಡತಿಯ ಕಡೆಯಲ್ಲಿ ಏಳುತಲೆಗಳೂ, ಅಂತು ಇಪ್ಪತ್ತೊಂದು ಕುಲ (ತಲೆ) ಗಳು ಶಾಶ್ವತವಾಗಿ ಸ್ವರ್ಗಸುಖವನ್ನನುಭವಿಸುವುವು ॥೫೫॥

ಇದು ಬಾಲಕಾಂಡದಲ್ಲಿ ಬ್ರಹ್ಮಸ್ತೋತ್ರಾದಿಕಥನವೆಂಬ
ಮೂವತ್ತೆರಡನೆಯ ಸರ್ಗವು.




ಅಥ ಶ್ರೀಬಾಲಕಾಣ್ಡೇ ತ್ರಯಸ್ತ್ರಿಂಶಃ ಸರ್ಗಃ.



ಶ್ರೀಸೂತ ಉವಾಚ.

ತತಃ ಶಮ್ಭುರ್ಮಹಾತೇಜಾಃ ಕೈಲಾಸಮಗಮತ್ ಪ್ರಭುಃ ।
ಸರ್ವೈರಪಿ ಸ್ತ್ರುಯಮಾನಃ ಸರ್ವದೇವನಮಸ್ಕೃತಃ ।೧।
ಬ್ರಹ್ಮಾದ್ಯಾಲೋಕಪಾಲಾಶ್ಚ ಪ್ರಯಯುಃ ಸ್ವಸ್ವಮನ್ದಿರಮ್ ।
ಮಹೋತ್ಸವಂ ದೃಷ್ಟವನ್ತಃ ಸರ್ವಪ್ರಾಣಿಮನೋಹರಮ್ ।೨।
ರಾಮವಾಮನ್ಯ ತೇಜಸ್ವೀ ವಿಶ್ವಾಮಿತ್ರೋ ಮಹಾಮುನಿಃ ।
ಜಗಾಮ ಮುನಿಭಿಃ ಸಾಕಂ ಭಗಿನೀಂ ಕೌಶಿಕೀಂ ನದೀಮ್ ।೩।
ಜನಕಸ್ತು ಮಹಾತೇಜಾಃ ಪ್ರೇಷಯಿತ್ವಾ ಸುರಾಸುರಾನ್ ।
ದೀಕ್ಷಾಂ ಕೃತ್ವಾ ಪಞ್ಚರಾತ್ರಂ ಭೋಜನೈಃ ಷಡ್ರಸಾನ್ವಿತೈಃ ।೪।
ಅಗತಾನತಿಥೀನ್ ವಿಪ್ರಾನ್ ಋಷೀನ್ ಬನ್ಧೂಂಶ್ಚ ಪಾರ್ಥಿವಾನ್ ।
ವಿವಾಹೇ ರಾಮಚನ್ದ್ರಸ್ಯ ಭೋಜಯಾಮಾಸ ಹರ್ಷತಃ ।೫।

ಬಾಲಕಾಂಡದಲ್ಲಿ ಮುವ್ವತ್ತ್ಮೂರನೆಯ ಸರ್ಗವು



ಶ್ರೀ ಸೂತರು ಶೌನಕಾದಿಗಳನ್ನು ಕುರಿತು ಹೇಳುವರು :—

ಎಲೈ ಶೌನಕಾದಿಮುನಿಗಳಿರಾ ! ಪೂರ್ವೋಕ್ತರೀತಿಯಾಗಿ ಶ್ರೀರಾಮನಿಗೂ ಸೀತೆಗೂ ವಿವಾಹನಡೆದನಂತರ, ಮಹಾತೇಜಶ್ಶಾಲಿಯಾದ ಸರ್ವಲೋಕಪ್ರಭುವಾದ ಶ್ರೀ ಪರಮೇಶ್ವರನು, ಆ ಸಭೆಯಲ್ಲಿದ್ದ ಸಮಸ್ತರಿಂದಲೂ ಸ್ತುತಿಸಲ್ಪಡುತ, ಸಮಸ್ತದೇವತೆಗಳಿಂದಲೂ ನಮಸ್ಕರಿಸಲ್ಪಟ್ಟವನಾಗಿ, ಕೈಲಾಸಕ್ಕೆ ಹೊರಟುಹೋದನು ॥೧॥

ಆ ಒಳಿಕ, ಬ್ರಹ್ಮನೇ ಮೊದಲಾದ ದೇವತೆಗಳೂ, ಸಮಸ್ತರಾದ ಲೋಕಪಾಲಕರೂ ಕೂಡ, ಸರ್ವಪ್ರಾಣಿಗಳಿಗೂ ಮನೋಹರವಾಗಿದ್ದ ಆ ವಿವಾಹಮಹೋತ್ಸವವನ್ನು ನೋಡಿದವರಾಗಿ, ತಂತಮ್ಮ ಮನೆಗೆ ಹೊರಟುಹೋದರು ॥೨॥

ಮಹಾತೇಜಶ್ಶಾಲಿಯಾದ ವಿಶ್ವಾಮಿತ್ರಮಹರ್ಷಿಯು, ಶ್ರೀರಾಮನನ್ನು ಕೇಳಿಕೊಂಡು, ತನ್ನನ್ನು ಅನುಸರಿಸಿಬಂದ ಮುನಿಗಳೊಡನೆ, ತನ್ನ ಸಹೋದರಿಯಾದ ಕೌಶಿಕಿಯೆಂಬ ನದಿಯ ತೀರಕ್ಕೆ ಹೊರಟುಹೋದನು ॥೩॥

ಮಹಾತೇಜಸ್ವಿಯಾದ ಜನಕಮಹಾರಾಜನು, ವಿವಾಹಕ್ಕಾಗಿ ಬಂದಿದ್ದ ದೇವತೆಗಳನ್ನೂ ರಾಕ್ಷಸರನ್ನೂ ಬಹುಮಾನಪೂರ್ವಕವಾಗಿ ಕಳುಹಿಸಿಕೊಟ್ಟು, ಆ ರಾಮಚಂದ್ರನ ವಿವಾಹದಲ್ಲಿ, ಕ್ರಮವಾಗಿ ಆಯ್ದುದಿವಸ ದೀಕ್ಷೆಯನ್ನು ನಡೆಯಿಸಿ, ಕೇವಲ ಹರ್ಷಯುಕ್ತನಾಗಿ, ಮದುವೆಗೆ ಬಂದಿದ್ದ ಅತಿಥಿಗಳಿಗೂ ಬ್ರಾಹ್ಮಣರಿಗೂ ಋಷಿಗಳಿಗೂ ಬಂಧುಗಳಿಗೂ ದೊರೆಗಳಿಗೂ ಕೂಡ, ಷಡ್ರಸೋಪೇತವಾದ ಭಕ್ಷ್ಯಾದಿಗಳಿಂದ ಭೋಜನವಾಡಿಸಿ ತೃಪ್ತಿಪಡಿಸಿದನು ॥೪-೫॥

ಸೇವಾಯೂಃ ಸಮಯೋ ಮಮೇತಿ ಸಹಸಾ ನಿಶ್ಚಿತ್ಯ ದೇವಾಧಿಪಃ
ಸ್ವಸ್ಯೈರಾವತಮುಕ್ತಲಕ್ಷಣಯುತಂ ಸಮ್ಪ್ರೇಷಯಾಮಾಸ ಸಃ ।
ಗನ್ಧರ್ವಾಪ್ಸರಸೋ ಮೃದಙ್ಗಸಹಿತಾ ದಿವ್ಯಾಂಸ್ತಥಾ ದುನ್ದುಭೀ-
ಕಲ್ಪದ್ರೂನಥ ಕಾಮಧೇನುಸಹಿತಂ ಚಿನ್ತಾಮಣಿಂ ಸತ್ವರಮ್ ॥೬॥

ರಾಮಕ್ಷ್ಮಾಭೃತ್ತಮಮಾರುರೋಹ ಭಗವಾನ್ಸೈರಾವತಂ ಸಾನುಜಃ
ಪಕ್ಷತ್ಸು ತ್ರಿದಶೇಷ್ವಚಿನ್ತ್ಯಮಹಿಮಾ ಭೂಮಣ್ಡಲಾಖಣ್ಡಲಃ ।
ನೇದುರ್ದುನ್ದುಭಯೋಽಗ್ರನಾಶ್ಚ ನನೃತುರ್ದಿವ್ಯಾಸ್ತಥಾ ತತ್ಪುರಃ
ರಕ್ಷಾರ್ಥಂ ಸ್ಮ ಪಠನ್ತಿ ತತ್ರ ಮುನಯೋ ಮನ್ತ್ರಾಂಶ್ಚ ಮಾಙ್ಗಲ್ಯಕಾನ್ ॥೭॥

ಸರ್ವೈಶ್ವರ್ಯಸಮನ್ವಿತೋ ದಶರಥಃ ಸಭ್ಯಾರ್ಥಿಸಮ್ಭಾವನೇ
ಕಲ್ಪಾನೋಕಹಕಾಮಧೇನುಸಹಿತಂ ಚಿನ್ತಾಮಣಿಂ ಚೈಕ್ಷತ ।
ತೇ ದಿವ್ಯಾಮ್ಬರರತ್ನರಾಶಿಕನಕಾನದ್ರೀಂಸ್ತಥಾಽಕಲ್ಪ್ಯಕ-
ಅರ್ಥಿಭ್ಯೋಽಪ್ಯಮೃತಾನ್ನಷಡ್ರಸಯುತಂ ಭೋಜ್ಯಂ ಯಥೇಷ್ಟಂ ದದುಃ ॥೮॥

ರಙ್ಕೋ ವಾ ರಾಜಪುತ್ರೋ ವಾ ಸಾನುನೋ ವಾ ಬಹುಶ್ರುತಃ ।
ದುಸ್ಥಃ ಸಮರ್ಥಃ ಸರ್ವೇಷಾಂ ಸಮ್ಯಗಾಸೀಚ್ಚ ಭೋಜನಮ್ ॥೯॥

ಆ ಸಮಯದಲ್ಲಿ, ಮಹೇಂದ್ರನು, ಶ್ರೀರಾಮನನ್ನು ಸೇವಿಸುವುದಕ್ಕೆ ನನಗಿದು ಸರಿಯಾದ ಸಮಯವೆಂದು ನಿಶ್ಚಯಿಸಿಕೊಂಡು, ತನ್ನ-ಸರ್ವಲಕ್ಷಣಸಂಪನ್ನವಾದ ಐರಾವತವನ್ನೂ, ಗಂಧರ್ವರನ್ನೂ, ಅಪ್ಸರಸ್ತ್ರೀಯರನ್ನೂ, ಮೃದಂಗಗಳನ್ನೂ, ದೇವದುಂದುಭಿಗಳನ್ನೂ, ಕಲ್ಪವೃಕ್ಷಗಳನ್ನೂ, ಕಾಮಧೇನುವನ್ನೂ, ಚಿಂತಾಮಣಿಯನ್ನೂ ಕೂಡ, ಬೇಗನೆ ಆ ಜನಕರಾಜಧಾನಿಗೆ ಕಳುಹಿಸಿದನು ॥೬॥

ಆ ಬಳಿಕ, ಭೂಮಂಡಲಾಖಂಡಲನಾದ ಭಗವಂತನಾದ ಅಗಾಧಮಹಿಮನಾದ ಶ್ರೀರಾಮನು, ಸಮಸ್ತದೇವತೆಗಳೂ ನೋಡುತಿರಲಾಗಿ, ತನ್ನ ತಮ್ಮಂದಿರೊಡನೆ ಆ ಐರಾವತವನ್ನು ಹತ್ತಿದನು. ಆ ಕ್ಷಣವೇ, ದೇವದುಂದುಭಿಗಳೆಲ್ಲ ಮೊಳಗಿದುವು; ಅಪ್ಸರಸ್ತ್ರೀಯರು ಅವನ ಮುಂದೆ ನರ್ತನವಾಡಲುಪಕ್ರಮಿಸಿದರು; ಸಮಸ್ತರಾದ ಮಹರ್ಷಿಗಳೂ ದಂಪತಿಗಳಿಗೆ ರಕ್ಷಾರ್ಥವಾಗಿ ಮಾಂಗಲ್ಯಕಗಳಾದ ಮಂತ್ರಗಳನ್ನು ಪಾರಾಯಣಮಾಡುತಿದ್ದರು ॥೭॥

ಆಗ, ಸರ್ವಸಂಪತ್ಸಮನ್ವಿತನಾದ ದಶರಥಮಹಾರಾಜನು, ಸಭೆಯಲ್ಲಿ ಸೇರಿದ್ದ ಮಹಾಜನಗಳಿಗೂ ಯಾಚಕರಿಗೂ ಸಂಭಾವನೆಮಾಡುವುದಕ್ಕೋಸ್ಕರ, ಕಲ್ಪವೃಕ್ಷ ಕಾಮಧೇನು ಚಿಂತಾಮಣಿಗಳ ಕಡೆಗೆ ದೃಷ್ಟಿಯನ್ನಿಟ್ಟನು. ಅವುಗಳು, ದಿವ್ಯವಾದ ವಸ್ತ್ರಗಳನ್ನೂ ರತ್ನಗಳನ್ನೂ ಸುವರ್ಣಗಳನ್ನೂ ಪರ್ವತದಂತೆ ರಾಶಿರಾಶಿಯಾಗಿ ಸೃಜಿಸಿದುವು; ಅರ್ಥಿಗಳಿಗೆ, ಅಮೃತಸದೃಶವಾದ ಅನ್ನವನ್ನೂ ಷಡ್ರಸೋಪೇತವಾದ ದಿವ್ಯಭೋಜನವನ್ನೂ ಯಥೇಚ್ಛವಾಗಿ ಕೊಟ್ಟುವು.

ಆ ಸಮಯದಲ್ಲಿ, ರಾಜನಾಗಿರಲಿ-ರಾಜಪುತ್ರನಾಗಿರಲಿ-ಸಾಮಂತಭೂಪಾಲಕನಾಗಿರಲಿ-ಬಹುಶ್ರುತನಾದ ಪಂಡಿತನಾಗಿರಲಿ-ಕೇವಲ ದೀನನಾಗಿರಲಿ-ಮಹಾಶಕ್ತನಾಗಿರಲಿ,-ಯಾರಿಗೂ ಯಾವ ಭೇದವೂ ಇಲ್ಲದಂತೆ, ಸರ್ವರಿಗೂ ಸಮವಾಗಿ, ದಿವ್ಯವಾದ ಭೋಜನವು ಯಥೇಚ್ಛವಾಗಿ ನಡೆಯಿತು ॥೮॥

ಜನಕಸ್ತು ಮಹಾತೇಜಾಃ ಕೃತವೈವಾಹಿಕಕ್ರಿಯಃ ।
ಸ್ವಸುವ್ರದನುಸಾರೇಣ ದೇಯಾನ್ಯಾನಾಯ್ಯ ಭೂರಿಶಃ ॥೧೦॥
ಸೂತವಾಗಧವನ್ದಿಭ್ಯೋ ಬ್ರಾಹ್ಮಣೇಭ್ಯೋ ದದೌ ತದಾ ।
ರತ್ನಾಭರಣವಸ್ತ್ರಾಣಿ ಗಜಸ್ವರ್ಣಾಶ್ವರೌಪ್ಯಕಮ್ ॥೧೧॥
ರಾಜಾ ಕೋಟಿಂ ಸುವರ್ಣಸ್ಯ ರಜತಸ್ಯ ಚ ಷಡ್ಗುಣಮ್ ।
ದದೌ ದೇಯಾನಿ ಸರ್ವಾಣಿ ತತ್ತದ್ವಾಙ್ಮಾನುಸಾರತಃ ॥೧೨॥
ಅಥ ರಾಜಾ ದಶರಥಂ ಸಮ್ಪೂಜ್ಯಾಭರಣಾದಿಭಿಃ ।
ಜಾನಾಮಾತರಂ ರಾಮಚನ್ದ್ರಂ ಸ್ವತಪೋಜನ್ಮನಃ ಫಲಮ್ ॥೧೩॥
ವಸಿಷ್ಠಾದಿಮುನೀಂಶ್ಚಾರ್ಚ್ಯ ಸತ್ಕೃತ್ಯ ಸಮ್ಮಾನಪೂರ್ವಕಮ್ ।
ತಥಾ ಬನ್ಧೂಂಶ್ಚ ನೃಪತೀ ಪ್ರೀಣಯಾಮಾಸ ಭೂಪತಿಃ ॥೧೪॥
ಅಥ ರಾಜಾ ವಿದೇಹಾನಾಂ ದದೌ ಕನ್ಯಾಧನಂ ಬಹು ।
ಗವಾಂ ಶತಸಹಸ್ರಾಣಿ ಬಹೂನಿ ಮಿಥಿಲೇಶ್ವರಃ ॥೧೫॥
ಕಮ್ಬಳಾನಿ ಚ ಮುಖ್ಯಾನಿ ಕ್ಷೌಮಕೋಟ್ಯಮ್ಬರಾಣಿ ಚ ।
ಹಸ್ತ್ಯಶ್ವರಥಪಾದಾತಂ ದಿವ್ಯರೂಪಂ ಸ್ವಲಙ್ಕೃತಮ್ ॥೧೬॥
ದದೌ ಕನ್ಯಾಪಿತಾ ತಾಸಾಂ ದಾಸೀದಾಸಮನುತ್ತಮಮ್ ।

ಆಗ, ಮಹಾತೇಜಸ್ಸಂಪನ್ನನಾದ ಜನಕನಾದರೋ, ಹೀಗೆ ತನ್ನ ಮಗಳ ಮದುವೆಯನ್ನು ನೆರವೇರಿಸಿದವನಾಗಿ, ತನ್ನ ಸಮ್ಪತ್ತಿಗನುಗುಣವಾಗಿ ಬೇಕಾದಷ್ಟು ವಸ್ತ್ರಾಭರಣಾದಿಗಳನ್ನು ತರಿಸಿ, ಸೂತ ಮಾಗಧ ವನ್ದಿಗಳಿಗೂ, ಬ್ರಾಹ್ಮಣರಿಗೂ ರತ್ನ ಆಭರಣ ವಸ್ತ್ರಗಳನ್ನೂ ಗಜ ಸುವರ್ಣ ಅಶ್ವ ರಜತಗಳನ್ನೂ ಯಥೇಚ್ಛವಾಗಿ ಕೊಟ್ಟನು ॥೧೦-೧೧॥

ಆಗ, ಆ ಜನಕರಾಜನು, ಒಂದುಕೋಟಿ ಸುವರ್ಣವನ್ನೂ ಅರುಕೋಟಿ ರಜತವನ್ನೂ ದಾನಮಾಡಿದುದಲ್ಲದೆ, ಅವರವರ ಇಚ್ಛಾನುಸಾರವಾಗಿ ಕೊಡಬೇಕಾದುದನ್ನೆಲ್ಲ ಕೊಟ್ಟುಬಿಟ್ಟನು ॥೧೨॥

ಆ ಒಳಿಕ, ಆ ಜನಕರಾಜನು, ದಶರಥರಾಜನನ್ನು ವಸ್ತ್ರಾಭರಣಾದಿಗಳಿಂದ ಚೆನ್ನಾಗಿ ಪೂಜಿಸಿ, ತನ್ನ ತಪಸ್ಸಿಗೂ ಜನ್ಮಕ್ಕೂ ಫಲರೂಪನಾದ ಅಳಿಯನಾದ ಶ್ರೀರಾಮನನ್ನೂ-ವಸಿಷ್ಠ ಮೊದಲಾದ ಸಮಸ್ತ ಮಹರ್ಷಿಗಳನ್ನೂ ಸತ್ಕರಿಸಿ, ಅವರುಗಳನ್ನೂ ಇತರರಾದ ಬಂಧುಗಳನ್ನೂ ದೊರೆಗಳನ್ನೂ ಯಥಾಯೋಗ್ಯವಾಗಿ ಕಳುಹಿಸಿಕೊಟ್ಟನು ॥೧೩-೧೪॥

ಆ ಒಳಿಕ, ವಿದೇಹರಾಜನಾದ ಜನಕಭೂಪತಿಯು, ತನ್ನ ಮಕ್ಕಳುಗಳಿಗೆ, ಒಂದು ಲಕ್ಷ ಗೋವ್ರಜಗಳನ್ನೂ, ದಿವ್ಯವಾದ ಕಂಬಳ(ಶಾಲು)ಗಳನ್ನೂ, ಶುದ್ಧವಾದ ಕ್ಷೌಮವಸ್ತ್ರ (ಪಟ್ಟೆಯ ಸೀರೆ)ಗಳನ್ನೂ, ಅತಿ ಸುಂದರವಾಗಿಯೂ ಚೆನ್ನಾಗಿ ಅಲಂಕೃತವಾಗಿಯೂ ಇರುವ-ಹಸ್ತಿ ಅಶ್ವ ರಥ ಪದಾತಿಗಳೆಂಬ-ಚತುರಂಗ ಸೈನ್ಯವನ್ನೂ, ಅತಿ ಪ್ರಶಸ್ತರಾದ ದಾಸಿಯರನ್ನೂ, ಯೋಗ್ಯ

ಹಿರಣ್ಯಸ್ಯ ಸುವರ್ಣಸ್ಯ ಮುಕ್ತಾನಾಂ ವಿದ್ರುಮಸ್ಯ ಚ ॥೧೩॥
ಏವಂ ಬಹುಧನಂ ದತ್ತ್ವಾ ತಮನುಜ್ಞಾಪ್ಯ ಪಾರ್ಥಿವಮ್ ।
ಪ್ರವಿವೇಶ ಸ್ವನಿಲಯಂ ಮಿಥಿಲಾಂ ಮಿಥಿಲೇಶ್ವರಃ ॥೧೪॥
ಸೀತಾಮಾಲಿಙ್ಗ್ಯ ಸುದತೀಂ ಮಾತರಸ್ತ್ವಶ್ರುಲೋಚನಾಃ ।
ದುಹಿತೃಸ್ನೇಹವಿವಶಾಃ ಪ್ರೋಚುರ್ವಾಕ್ಯಮನುತ್ತಮಮ್ ॥೧೫॥
ಭರ್ತೃಶುಶ್ರೂಷಣಪರಾ ನಿತ್ಯಂ ರಾಮಮನುವ್ರತಾ ।
ಪಾತಿವ್ರತ್ಯಮುಪಾಲಮ್ಭ್ಯ ತಿಷ್ಠ ವತ್ಸೇ ಯಥಾಸುಖಮ್ ॥೧೬॥
ಉಕ್ತ್ವೈವಂ ಮಾತರಃ ಸೀತಾಂ ಪ್ರೇಷಯಿತ್ವಾ ಗೃಹಾನ್ ಯಯುಃ ।
ರಾಮೋಪಿ ಭ್ರಾತೃಭಿಃ ಸಾರ್ಧಂ ಸಾಕೇತಾಭಿಮುಖೋ ಯಯೌ ॥೧೭॥
ಪ್ರಯಾಣಕಾಲೇ ರಘುಪುಙ್ಗವಸ್ಯ ಭೇರೀಮೃದಙ್ಗಾನಕತೂರ್ಯಘೋಷಾಃ ।
ರಥಾಶ್ವಸೈನ್ಯಾಗಜಶಬ್ದಮಿಶ್ರಾಃ ಶಬ್ದಾಃ ಸಮೂರ್ಛಿತೋ ಭೂತಭಯಙ್ಕರೋಭೂತ್ ॥
ರಾಜಾ ತ್ವಯೋಧ್ಯಾಧಿಪತಿಃ ಸಹ ಪುತ್ರೈರ್ಮಹಾತ್ಮಭಿಃ ।
ಋಷೀನ್ ಸರ್ವಾನ್ ಸಮಸ್ಕೃತ್ಯ ಜಗಾಮ ಸಬಲಾನುಗಃ ॥೨೦॥

ರಾದ ಭೃತ್ಯರನ್ನೂ, ಹಿರಣ್ಯ ಸುವರ್ಣ(ನಾಣ್ಯ) ಮುತ್ತು ಹವಳಗಳನ್ನೂ ಕೂಡ, ಕನ್ಯಾಧನ (ಬಳವಳಿ)ವಾಗಿ ಕೊಟ್ಟನು ॥೧೫-೧೩॥

ಹೀಗೆ ಆ ಮಿಥಿಲೇಶ್ವರನು ಒಹಳವಾದ ಧನವನ್ನು ಕೊಟ್ಟು, ಸ್ವಲ್ಪದೂರ ಸಾಗಕಳುಹಿಸಿ, ಆ ದಶರಥಮಹಾರಾಜನ ಅನುಜ್ಞೆಯನ್ನು ಪಡೆದು, ತನ್ನ ಪಟ್ಟಣಕ್ಕೆ ಹಿಂದಿರುಗಿ ಹೊರಟು ಹೋದನು ॥೧೪॥

ಆ ಸಮಯದಲ್ಲಿ, ಜನಕರಾಜನ ಪತ್ನಿಯರು, ಮಗಳಲ್ಲಿ ಮಹಾಸ್ನೇಹಪರವಶರಾಗಿ ಸೀತೆಯನ್ನು ತಬ್ಬಿಕೊಂಡು, ಕಣ್ಣೀರು ಸುರಿಸುತ್ತ 'ವತ್ಸೆ! ನೀನು, ನಿತ್ಯವೂ ರಾಮನನ್ನು ಅನುಸರಿಸಿಕೊಂಡು, ಪತಿಸೇವೆಯಲ್ಲಿ ನಿರತಳಾಗಿ, ಪಾತಿವ್ರತ್ಯವನ್ನವಲಂಬಿಸಿಕೊಂಡು ಸುಖವಾಗಿರು' ಎಂದು ಅತ್ಯುತ್ತಮವಾದ ಮಾತನ್ನು ಹೇಳಿದರು ॥೧೫-೨೦॥

ಹೀಗೆ ಹೇಳಿಬಿಟ್ಟು, ಆ ಸಮಸ್ತ ಸ್ತ್ರೀಯರೂ ಸೀತೆಯನ್ನು ಗಂಡನ ಮನೆಗೆ ಸಾಗಕಳುಹಿಸಿ, ತಮ್ಮ ಮನೆಗೆ ಹೊರಟುಹೋದರು. ಒಳಿಕ, ಶ್ರೀರಾಮನೂ ಕೂಡ, ತನ್ನ ತಮ್ಮಂದಿರೊಡನೆ, ಅಯೋಧ್ಯಾಪಟ್ಟಣಕ್ಕೆ ಅಭಿಮುಖನಾಗಿ ಪ್ರಯಾಣಮಾಡಿದನು ॥೨೧॥

ಆ ಶ್ರೀರಾಮಚಂದ್ರನ ಪ್ರಯಾಣಸಮಯದಲ್ಲಿ, ಭೇರೀ ಮೃದಂಗ ಪಟಹಾದಿ ವಾದ್ಯಗಳ ಘೋಷವೂ, ರಥ ಅಶ್ವ ಪದಾತಿ ಗಜ ಶಂಖಗಳ ಶಬ್ದವೂ ಕೂಡ, ಸಮಸ್ತ ಪ್ರಾಣಿಗಳಿಗೂ ಭಯಹುಟ್ಟುವಂತೆ ಅಭಿವೃದ್ಧಿಹೊಂದಿತು ॥೨೨॥

ಆಗ, ಅಯೋಧ್ಯಾಧಿಪತಿಯಾದ ದಶರಥಮಹಾರಾಜನು, ಮಹಾತ್ಮರಾದ ತನ್ನ ಮಕ್ಕಳೊಡನೆ, ಸಮಸ್ತರಾದ ಋಷಿಗಳಿಗೂ ನಮಸ್ಕಾರಮಾಡಿ, ಸೈನ್ಯದನ್ನೂ ಅನುಚರರನ್ನೂ ಕರೆದುಕೊಂಡು ಹೊರಟನು ॥೨೩॥

ಗಚ್ಛನ್ತಂ ತಂ ನರವ್ಯಾಘ್ರಂ ಸರ್ಷಿಸಙ್ಘಂ ಸರಾಘವಮ್ ।
ಘೋರಾಃ ಸ್ಮ ಪಕ್ಷಿಣೋ ವಾಚೋ ವ್ಯಾಹರನ್ತಿ ತತಸ್ತತಃ ॥೬೪॥
ಜಙ್ಘಾನಿಲೋ ಮಹಾವೇಗೋ ಘೋರಸ್ಪರ್ಶೋ ದುರಾಸದಃ ।
ಕರ್ಷಯನ್ ಮೇದಿನೀಂ ಸರ್ವಾಂ ಪಾತಯಂಶ್ಚ ದ್ರುಮಾನ್ ವವೌ ॥೬೫॥
ತಮಸಾ ಸಂವೃತಃ ಸೂರ್ಯಃ ಸರ್ವಾನ ಪ್ರಬಭುರ್ದಿಶಃ ।
ರಜಸಾ ಸಂವೃತಂ ಸರ್ವಂ ಸಂಮೂಢಮಿವ ತದ್ ಬಲಮ್ ॥೬೬॥
ವಸಿಷ್ಠಮುಪಯಾಚನ್ತೋ ರಾಜಾ ಚ ಸಸುತಸ್ತದಾ ।
ಸಸಂಜ್ಞಾ ಇವ ತತ್ರಾಸನ್ ಸರ್ವಮನ್ಯದ್ವಿಚೇತನಮ್ ॥೬೭॥
ಉಗ್ರಸಂದರ್ಶನಾಸ್ತತ್ರ ನಿರ್ಘಾತಾವಿದ್ಯುತೋಭವನ್ ।
ನಿರ್ಮೇಘಾಶನಿಸಙ್ಘಾತಾಃ ಮಹಾದಾರುಣನಿಸ್ಸ್ವನಾಃ ॥೬೮॥
ದೃಷ್ಟ್ವೈವಂವಿಧಾನ್ ದಾರುಣೋತ್ಪಾತಾನ್ ಸರ್ವಜ್ಞೋ ರಘುನನ್ದನಃ ।
ನಿಶ್ಚಿತ್ಯಾಪಿ ಸ್ವಯಂ ವೀರೋ ವಸಿಷ್ಠಮಿದಮಬ್ರವೀತ್ ॥೬೯॥
ದೃಷ್ಟಾಸ್ತ್ವಯಾ ಮುನಿಶ್ರೇಷ್ಠ ಸರ್ವೈರಪಿ ಚ ಸೈನಿಕೈಃ ।
ಪಿತ್ರಾ ಮಯಾ ಚ ಸ್ತ್ರೀಸಙ್ಘೈಃ ಉತ್ಪಾತಾಘೋರದರ್ಶನಾಃ ॥೭೦॥

ಹೀಗೆ ಋಷಿಗಳೊಡನೆಯೂ ರಾಮಾದಿಗಳೊಡನೆಯೂ ಹೋಗುತ್ತಿರುವ ಆ ದಶರಥನ ಸವಿಾಪದಲ್ಲಿ, ಪಕ್ಷಿಗಳು ಮಹಾಘೋರವಾಗಿ ಶಬ್ದಮಾಡಲುಪಕ್ರಮಿಸಿದುವು ॥೨೪॥

ಮಹಾವೇಗವಾಗಿಯೂ ಕ್ರೂರಸ್ಪರ್ಶವಾಗಿಯೂ ಹತ್ತಿರ ಹೋಗುವುದಕ್ಕೆ ಅಸಾಧ್ಯವಾಗಿಯೂ ಇರುವ ಜಂಘಾವಾತವು, ಭೂಮಿಯನ್ನೆಲ್ಲ ನಡುಗಿಸುತಲೂ, ಮರಗಳನ್ನೆಲ್ಲ ಕೆಡವುತಲೂ ಬೀಸಲುಪಕ್ರಮಿಸಿತು ॥೨೫॥

ಸೂರ್ಯನಿಗೆ ಕತ್ತಲೆ ಕವಿದುಕೊಂಡಿತು; ಸಮಸ್ತ ದಿಕ್ಕುಗಳೂ ಪ್ರಕಾಶಹೀನವಾದುವು; ಆ ಸಮಸ್ತ ಸೈನ್ಯವೂ, ರಜಸ್ಸಿನಿಂದ ಆವರಿಸಲ್ಪಟ್ಟುದಾಗಿ, ಮೈಮೇಲೆ ಪ್ರಜ್ಞೆಯೇ ಇಲ್ಲದಂತಾಯ್ತು ॥೨೬॥

ಆ ಕಾಲದಲ್ಲಿ, ವಸಿಷ್ಠನು ಇತರರಾದ ಋಷಿಗಳು ಪುತ್ರಸಹಿತನಾದ ದಶರಥನು–ಇವರಿಷ್ಟು ಜನರು ಮಾತ್ರವೇ ಸಚೇತನರಾಗಿದ್ದರು. ಮಿಕ್ಕುದೆಲ್ಲವೂ ಚೈತನ್ಯಶೂನ್ಯವಾಗಿಬಿಟ್ಟಿತು ॥೨೭॥

ಆ ಸಮಯದಲ್ಲಿ, ನೋಡುವುದಕ್ಕೆ ಮಹಾಕ್ರೂರವಾಗಿರುವ ಮಿಂಚುಗಳೂ, ಗುಡುಗುಗಳೂ, ಬರಸಿಡಿಲುಗಳೂ, ಅಸಂಖ್ಯಾಕವಾಗಿ ಆಗಲುಪಕ್ರಮಿಸಿದುವು ॥೨೮॥

ಆಗ, ಮಹಾವೀರನಾದ ಸರ್ವಜ್ಞನಾದ ಶ್ರೀರಾಮನು, ಈ ಕ್ರೂರವಾದ ಉತ್ಪಾತಗಳನ್ನು ನೋಡಿ, ತನ್ನ ಮನಸ್ಸಿನಲ್ಲಿ ವಿಷಯವನ್ನು ನಿಶ್ಚಯಿಸಿಕೊಂಡವನಾಗಿದ್ದರೂ, ವಸಿಷ್ಠರನ್ನು ಕುರಿತು ಹೀಗೆ ಹೇಳಿದನು ॥೨೯॥

ಹೇ ಮುನಿಶ್ರೇಷ್ಠ! ಮಹಾಘೋರಗಳಾಗಿರುವ ಈ ಉತ್ಪಾತಗಳು, ತಮಗೂ ಸಮಸ್ತರಾದ ಸೈನಿಕರಿಗೂ ನಮ್ಮ ತಂದೆಗೂ ನನಗೂ ಸ್ತ್ರೀಯರಿಗೂ ಕೂಡ ವಿಶೇಷವಾಗಿ ಕಾಣಿಸಿಕೊಳ್ಳುತಿರುವುವಲ್ಲ! ॥೩೦॥

ಕಿಂ ವಾ ತೇಷಾಂ ಫಲಂ ಬ್ರಹ್ಮನ್ ಕಿಂ ನೋದ್ಯ ಪ್ರಭವಿಷ್ಯತಿ ।
ಭೂತಂ ಭವ್ಯಂ ಭವಿಷ್ಯಚ್ಚ ಕರಾಮಲಕವತ್ ತವ ॥೩೧॥

ವಸಿಷ್ಠ ಉವಾಚ.

ಕಿಂ ನೂಂ ಮೋಹಯಸೇ ರಾಮ ಪರಮಾತ್ಮಾಸಿ ರಾಘವ ।
ದೇವೈಃ ಸಂಪ್ರಾರ್ಥಿತೋ ವಿಷ್ಣುಃ ಜಾತೋ ದಾಶರಥೇ ಗೃಹೇ ॥೩೨॥
ರಾಕ್ಷಸಾನಾಮನೇಕಾನಾಂ ವಿನಾಶಾಯ ಜಗದ್ಧಿತಮ್ ।
ಸಂಹರ್ತುಂ ರಾವಣಾನೀಕಂ ರಾವಣಂ ಪಾಪಕಾರಿಣಮ್ ॥೩೩॥
ದಶಾನನಂ ತತೋ ಹತ್ವಾ ಸೀತಯಾ ಸಹ ರಾಘವ ।
ಪ್ರಜಾಃ ಸಮ್ಯಕ್ ಪಾಲಯಿತ್ವಾ ತತೋ ವೈಕುಂಠಮೇಷ್ಯಸಿ ॥೩೪॥
ಬ್ರಹ್ಮಾಂಡಲಯಸೃಷ್ಟ್ಯಾದಿ ವರ್ತಮಾನಾನಿ ರಾಘವ ।
ಅಗಾಮೀನಿ ಚ ಕಾರ್ಯಾಣಿ ಕರಾಮಲಕವತ್ ತವ ॥೩೫॥
ಸರ್ವಲೋಕಹಿತಾರ್ಥಾಯ ಪ್ರವೃತ್ತಿರ್ಭವತೋ ಮತಾ ।
ತವಾವತಾರೋ ಭೂತಾನಾಂ ಕ್ಷೇಮಾಯ ವಿಭವಾಯ ಚ ॥೩೬॥
ಸರ್ವಂ ಜಾನಾಸಿ ಸರ್ವಜ್ಞ ಮುನೀನಾಂ ಗುರುರಸ್ಯಲಮ್ ।

ಎಲೈ ಬ್ರಾಹ್ಮಣೋತ್ತಮನೆ! ಇವುಗಳಿಗೆ ಈಗ ಏನು ಫಲವು? ನಮಗೆ ಈಗ ಯಾವ ವಿಷಯ ಉಂಟಾಗುವುದು? ಭೂತಭವಿಷ್ಯದ್ವರ್ತಮಾನಗಳೆಲ್ಲವೂ ತಮಗೆ ಕರತಲಾಮಲಕವಾಗಿರುವುದಲ್ಲವೆ! ॥೩೧॥

ಹೀಗೆಂದು ಹೇಳುತಿರುವ ಶ್ರೀರಾಮನನ್ನು ಕುರಿತು ವಸಿಷ್ಠರು ಹೇಳುವರು:—

ಹೇ! ರಾಮ! ನನ್ನನ್ನು ನೀನು ಹೀಗೇಕೆ ಮೋಹಪಡಿಸುವೆ? ಹೇ ರಾಘವ! ನೀನು ಸಾಕ್ಷಾತ್ ಪರಮಾತ್ಮನು. ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ, ಪ್ರಪಂಚಕ್ಕೆಲ್ಲ ಹಿಂಸಕರಾಗಿರುವ ಅನೇಕ ರಾಕ್ಷಸರನ್ನೂ ರಾವಣನ ಸೈನ್ಯವನ್ನೂ ಮಹಾಪಾಪಾತ್ಮನಾದ ರಾವಣನನ್ನೂ ಸಂಹರಿಸುವುದಕ್ಕೋಸ್ಕರ, ದಶರಥನ ಮನೆಯಲ್ಲಿ ಅವತರಿಸಿರುವೆ ॥೩೨-೩೩॥

ನೀನು ಮುಂದೆ ರಾವಣನನ್ನು ಸಂಹರಿಸಿ, ಸೀತೆಯೊಡನೆ ಒಹುಕಾಲ ಚೆನ್ನಾಗಿ ಪ್ರಜಾಪರಿಪಾಲನೆಯನ್ನು ಮಾಡಿ, ಅನಂತರ ವೈಕುಂಠಲೋಕಕ್ಕೆ ಹೋಗುವೆ ॥೩೪॥

ಹೇ ರಾಘವ! ಈ ಬ್ರಹ್ಮಾಂಡದ ಸೃಷ್ಟಿ ಸ್ಥಿತಿ ಲಯಾದಿಗಳೂ, ಈಗ ನಡೆಯುತಲೂ ಮುಂದೆ ಬರತಕ್ಕುವುಗಳಾಗಿಯೂ ಇರುವ ಸಮಸ್ತಕಾರ್ಯಗಳೂ ಕೂಡ, ನಿನಗೆ ಕರತಲಾಮಲಕದಂತಿರುವುವು ॥೩೫॥

ಸರ್ವಲೋಕಹಿತಾರ್ಥವಾಗಿ ನೀನು ಪ್ರವರ್ತಿಸಿರುವೆಯೆಂದು ಸರ್ವರೂ ನಂಬಿರುವರು. ನಿನ್ನ ಅವತಾರವು, ಸಮಸ್ತ ಪ್ರಾಣಿಗಳಿಗೂ ಕ್ಷೇಮವನ್ನೂ ವಿಭವವನ್ನೂ ಉಂಟುಮಾಡತಕ್ಕುದಾಗಿರುವುದು ॥೩೬॥

ಎಲೈ ಸರ್ವಜ್ಞನೆ! ನೀನು ಸರ್ವವನ್ನೂ ಅರಿತಿರುವೆ; ಮುನಿಗಳಿಗೆಲ್ಲ ವಿಶೇಷವಾಗಿ ಗುರು

ತ್ವನ್ಮಾಯಾಮೋಹಿತಧಿಯಃ ತ್ವಾಂ ನ ಜಾನಂತಿ ತತ್ತ್ವತಃ ॥೩೭॥
ತಥಾಪಿ ವಕ್ಷ್ಯೇ ಸರ್ವಜ್ಞ ದುರ್ನಿಮಿತ್ತಸ್ಯ ಕಾರಣಮ್ ।
ಯೇನ ಸರ್ವಂ ಪರಿತ್ರಸ್ತಂ ಸೈನ್ಯಂ ತೇ ರಘುನಂದನ ॥೩೮॥
ಶ್ರುತ್ವಾ ಶಿವಧನುರ್ಭಂಗಂ ಕ್ಷತ್ರಿಯಾಜ್ಜಾರಸಮುದ್ಭವಮ್ ।
ರಾಮಃ ಕ್ಷತ್ರಕುಲದ್ವೇಷೀ ತವಾನ್ತಿಕಮಿಹೈಷ್ಯತಿ ॥೩೯॥
ಏವಂ ವದತಿ ವಿಪ್ರೇಂದ್ರೇ ಮಹಾವೀರಃ ಪ್ರತಾಪವಾನ್ ।
ಸ್ಕಂಧೇ ಚಾಸಜ್ಯ ಪರಶುಂ ವಿದ್ಯುತ್ಕೋಟಿಸಮಪ್ರಭಮ್ ॥೪೦॥
ಕೈಲಾಸಇವ ದುರ್ಧರ್ಷೋ ಹಿಮವಾನಿವ ಧೈರ್ಯವಾನ್ ।
ವೈಷ್ಣವಂ ಧನುರಾದಾಯ ಭಾರ್ಗವಯಂಭರಮುತ್ತಮಮ್ ॥೪೧॥
ಆರಕ್ತಸಯನೋಪಾಂತಃ ಪ್ರಳಯಾನಲದುಸ್ಸಹಃ ।
ಪ್ರಳಯಾಸಿಲವೇಗೇನ ಚಾವಿರಾಸೀದ್ಭೃಗೂತ್ತಮಃ ॥೪೨॥
ತಂ ದೃಷ್ಟ್ವಾ ಘೋರಸಜ್ಜಾಕಂ ಜ್ವಲಂತಮಿವ ಪಾವಕಮ್ ।
ಆರ್ಘ್ಯಾದ್ಯೈಃ ಪೂಜಯಾಮಾಸುಃ ವಸಿಷ್ಠಾದ್ಯಾಮಹರ್ಷಯಃ ॥೪೩॥
ಪ್ರತಿಗೃಹ್ಯ ಚ ತಾಂ ಪೂಜಾಂ ಋಷಿದತ್ತಾಂ ಪ್ರತಾಪವಾನ್ ।
ರಾಮಂ ದಾಶರಥಿಂ ರಾಮೋ ಜಾಮದಗ್ನ್ಯೋಭ್ಯಭಾಷತ ॥೪೪॥

ವಾಗಿರುವೆ. ನಿನ್ನ ಮಾಯೆಯಿಂದ ಮೋಹಿತವಾದ ಬುದ್ಧಿಯುಳ್ಳವರು, ನಿನ್ನನ್ನು ಯಥಾವತ್ತಾಗಿ ತಿಳಿಯುದಿರುವರು ॥೩೭॥

ಹೀಗಿದ್ದರೂ, ಎಲೈ ಸರ್ವಜ್ಞನಾದ ರಘುನಂದನನೆ! ನಿನ್ನ ಈ ಸಮಸ್ತವಾದ ಸೈನ್ಯವೂ ಯಾವ್ದರಿಂದ ಇಷ್ಟು ದಿಗುಲುಪಡುತ್ತಿದೆಯೋ, ಅಂತಹ ದುರ್ನಿಮಿತ್ತಕ್ಕೆ ಕಾರಣವನ್ನು ಹೇಳುವೆನು ॥೩೮॥

ಕ್ಷತ್ರಿಯಬಾಲಕನಿಂದ ಶಿವಧನುಸ್ಸಿಗೆ ಭಂಗವುಂಟಾಯೆಂದು ಕೇಳಿ, ಕ್ಷತ್ರಿಯಕುಲದ್ವೇಷಿಯಾದ ಪರಶುರಾಮನು, ಈಗ ನಿನ್ನ ಹತ್ತಿರಕ್ಕೆ ಒರುತ್ತಿರುವನು ॥೩೯॥

ಹೀಗೆಂದು ಆ ಬ್ರಾಹ್ಮಣೋತ್ತಮರಾದ ವಸಿಷ್ಠರು ಹೇಳುತ್ತಿರುವಾಗಲೇ, ಮಹಾವೀರನಾಗಿಯೂ, ಮಹಾಪ್ರತಾಪಶಾಲಿಯಾಗಿಯೂ, ಕೈಲಾಸದಂತೆ ದುರ್ಧರ್ಷನಾಗಿಯೂ, ಹಿಮವಂತನಂತೆ ಧೈರ್ಯಶಾಲಿಯಾಗಿಯೂ ಇರುವ ಪರಶುರಾಮನು, ಕೋಟಿ ವಿದ್ಯುಲ್ಲತೆಗಳು ಒಂದೇ ಸಲ ಹೊಳೆದಂತೆ ಪ್ರಕಾಶಿಸುತ್ತಿರುವ ಪರಶು(ಕೊಡಲಿ)ವನ್ನು ಹೆಗಲಿನಮೇಲೆ ಇಟ್ಟುಕೊಂಡು, ಕೈಯಲ್ಲಿ ವೈಷ್ಣವಧನುಸ್ಸನ್ನು ಹಿಡಿದುಕೊಂಡು, ದಿವ್ಯವಾದ ಬಾಣವನ್ನು ತಿರುಗಿಸುತ, ಕಡೆಗಣ್ಣನ್ನು ಕೆಂಪಗೆ ಮಾಡಿಕೊಂಡು, ಪ್ರಳಯಾಗ್ನಿಯಂತೆ ದುಸ್ಸಹನಾಗಿ, ಪ್ರಳಯಮಾರುತದಂತೆ ಅತಿವೇಗದಿಂದ ಅಲ್ಲಿಗೆ ಬಂದನು ॥೪೦-೪೩॥

ಉರಿಯುತ್ತಿರುವ ಅಗ್ನಿಯಂತೆ ಮಹಾಘೋರನಾಗಿರುವ ಅವನನ್ನು ಕಂಡು, ವಸಿಷ್ಠ ಮೊದಲಾದ ಮಹರ್ಷಿಗಳೆಲ್ಲರೂ, ಅರ್ಘ್ಯ ಮೊದಲಾದುವುಗಳಿಂದ ಅವನನ್ನು ಪೂಜಿಸಿದರು॥೪೩॥

ಹೀಗೆ ವಸಿಷ್ಠಾದಿಗಳಿಂದ ಕೊಡಲ್ಪಟ್ಟ ಸತ್ಕಾರವನ್ನು ಸ್ವೀಕರಿಸಿ, ಮಹಾಪ್ರತಾಪವಂತನಾದ ಪರಶುರಾಮನು, ದಶರಥಪುತ್ರನಾದ ರಾಮನನ್ನು ಕುರಿತು ಹೀಗೆ ಹೇಳಿದನು ॥೪೪॥

ರಾಮರಾಮ ಮಹಾಬಾಹೋ ಶೃಣು ವೀರ ವಚೋ ಮಮ ।
ಬಹುಶಃ ಪಾರ್ಥಿವಾ ಹತ್ವಾ ಹ್ಯೇಕವಿಂಶತಿಪೌರುಷಾ ॥೪೫॥
ಮಹೀಂ ದತ್ತಾ ಬ್ರಾಹ್ಮಣೇಭ್ಯಃ ತಪಸ್ತಪ್ತುಮಹಂ ಗತಃ ।
ತವ ವೀರ್ಯಬಲಂ ಶ್ರುತ್ವಾ ತ್ವಯಾ ಯೋದ್ಧುಮಿಹಾಗತಃ ॥೪೬॥
ಇಕ್ಷ್ವಾಕವೋ ನ ವಧ್ಯಾಮೇ ಮಾತಾಮಹಕುಲೋದ್ಭವಾಃ ।
ತಥಾಪಿ ತ್ವದ್ಬಲಂ ಶ್ರುತ್ವಾ ನ ಶಕ್ಯಂ ಸಹಿತುಂ ಮಮ ॥೪೭॥
ರಾಜ್ಯೇ ಸ್ಥಿತಿಂ ವಿಪ್ರದತ್ತೇ ರಾಜ್ಯದಾನಂ ಚ ಮದ್ವಿಧಾಮಂ ।
ಸೀತೋದ್ವಾಹಂ ಧನುರ್ಭಙ್ಗಂ ಶ್ರುತ್ವೈತಾನಿ ಕಥಂ ಸಹೇ ॥೪೮॥
ಇಮಂ ತು ವೈಷ್ಣವಂ ಚಾಪಂ ಅಧಿಕಂ ಶೈವಕಾರ್ಮುಕಾತ್ ।
ಆರೋಪಯಸ್ವ ಶಕ್ತಶ್ಚೇತ್ ನೋ ಚೇತ್ ತ್ವಾಂ ಹನ್ಮಿ ರಾಘವ ॥೪೯॥
ಕದಾಜಿದ್ದೇವತಾಃ ಸರ್ವಾಃ ಪೃಚ್ಛನ್ತಿ ಸ್ಮ ಪಿತಾಮಹಮ್ ।
ತ್ರಿತಿಕಣ್ಠಸ್ಯ ವಿಷ್ಣೋಶ್ಚ ಬಲಾಬಲಪರೀಕ್ಷಯಾ ॥೫೦॥
ಅಭಿಪ್ರಾಯಂ ತು ವಿಜ್ಞಾಯ ದೇವತಾನಾಂ ಪಿತಾಮಹಃ ।
ವಿರೋಧಂ ಜನಯಾಮಾಸ ತಯೋಃ ಸತ್ಯವತಾಂ ವರಃ ॥೫೧॥

ರಾಮ! ರಾಮ! ಮಹಾಬಾಹೋ! ಮಹಾವೀರ! ನನ್ನ ಮಾತನ್ನು ಕೇಳು. ನಾನು, ಅನೇಕವೇಳೆ ಇಪ್ಪತ್ತೊಂದು ತಲೆಮಾರಿಗೂ ರಾಜರುಗಳನ್ನು ಕೊಂದು, ಸಮಸ್ತವಾದ ಭೂಮಿಯನ್ನೂ ಬ್ರಾಹ್ಮಣರಿಗೆ ದಾನಮಾಡಿ, ತಪಸ್ಸಿಗೋಸ್ಕರ ಹೊರಟುಹೋಗಿದ್ದೆನು; ಈಗ, ನಿನ್ನ ವೀರ್ಯವನ್ನು ಕೇಳಿ, ನಿನ್ನೊಡನೆ ಯುದ್ಧಮಾಡುವುದಕ್ಕಾಗಿ ಇಲ್ಲಿಗೆ ಬಂದಿರುವೆನು ॥೪೫-೪೬॥

ವಸ್ತುತಃ, ಇಕ್ಷ್ವಾಕುವಂಶದವರು ನನಗೆ ಮಾತಾಮಹಕುಲಕ್ಕೆ ಸೇರಿದವರಾದಕಾರಣ, ಅವರನ್ನು ನಾನು ಹೊಡೆಯಕೂಡದು; ಆದರೂ, ನಿನ್ನ ಬಲವನ್ನು ಕೇಳಿ, ನನ್ನಿಂದ ಸಹಿಸುವುದಕ್ಕೆ ಅಸಾಧ್ಯವಾಯ್ತು ॥೪೭॥

ನಾನು ಬ್ರಾಹ್ಮಣರಿಗೆ ದಾನಮಾಡಿದ ರಾಜ್ಯಪದವಿಯಲ್ಲಿ ನೀನು ಇರುವುದನ್ನೂ, ನನ್ನ ಶತ್ರುಗಳಿಗೆ ರಾಜ್ಯವು ಕೊಡಲ್ಪಟ್ಟಿರುವುದನ್ನೂ, ನೀನು ಸೀತೆಯೊಡನೆ ವಿವಾಹ ಮಾಡಿಕೊಂಡುದುದನ್ನೂ, ಶೈವಧನುಸ್ಸಿಗೆ ಭಂಗವುಂಟಾದುದನ್ನೂ, ಇವುಗಳನ್ನೆಲ್ಲ ಕೇಳಿ ನಾನು ಹೇಗೆ ಸಹಿಸಬಲ್ಲೆನು? ॥೪೮॥

ಎಲೈ ರಾಘವನೆ! ನಿನಗೆ ಶಕ್ತಿಯಿರುವ ಪಕ್ಷದಲ್ಲಿ, ಶೈವಧನುಸ್ಸಿಗಿಂತಲೂ ಅಧಿಕವಾಗಿರುವ ಈ ವೈಷ್ಣವಧನುಸ್ಸನ್ನು ಹೆದೆಯೇರಿಸು ಇಲ್ಲದಿದ್ದರೆ, ನಿನ್ನನ್ನು ಈಗಲೇ ಕೊಂದುಬಿಡುವೆನು ॥

ಈ ವೈಷ್ಣವಧನುಸ್ಸು ಶೈವಧನುಸ್ಸಿಗಿಂತ ಹೇಗೆ ಹೆಚ್ಚೆಂಬುದನ್ನು ತಿಳಿಯುವನಾಗು. ಹಿಂದೆ ಒಂದಾನೊಂದು ಸಮಯದಲ್ಲಿ, ಸಮಸ್ತ ದೇವತೆಗಳೂ ಒಟ್ಟಾಗಿ ಸೇರಿ, ಈಶ್ವರನಿಗೂ ವಿಷ್ಣುವಿಗೂ ಇರಬಹುದಾದ ಬಲಾಬಲಗಳನ್ನು ಪರೀಕ್ಷಿಸುವುದಕ್ಕೋಸ್ಕರ, ಬ್ರಹ್ಮನನ್ನು ಕುರಿತು ಕೇಳಿಕೊಂಡರು ॥೪೯-೫೦॥

ಆ ಬ್ರಹ್ಮನಾದರೋ, ದೇವತೆಗಳ ಅಭಿಪ್ರಾಯವನ್ನು ತಿಳಿದವನಾಗಿ, ಶಿವನಿಗೂ ವಿಷ್ಣುವಿಗೂ ಪರಸ್ಪರ ವಿರೋಧವನ್ನುಂಟುಮಾಡಿದನು ॥೫೧॥

ವಿರೋಧೇ ಚ ಮಹದ್ಯುದ್ಧಂ ಆಭವದ್ರೋಮಹರ್ಷಣಮ್ ।
ಶಿತಿಕಣ್ಠಸ್ಯ ವಿಷ್ಣೋಶ್ಚ ಪರಸ್ಪರಜಯೈಷಿಣೋಃ ॥೫೦॥
ತದಾ ತಜ್ಜ್ಯಮ್ಭಿತಂ ಶೈವಂ ಧನುಭೀರ್ಮಪರಾಕ್ರಮಮ್ ।
ಹುಂಕಾರೇಣ ಮಹಾದೇವಃ ಸ್ತಮ್ಭಿತೋ ಥ ತ್ರಿಲೋಚನಃ ॥೫೧॥
ದೇವೈಸ್ತದಾ ಸಮಾಗಮ್ಯ ಸರ್ಷಿಸಙ್ಘೈಃ ಸಚಾರಣೈಃ ।
ಯಾಚಿತೌ ಪ್ರಶಮಂ ತಸ್ಯ ಜಗ್ಮತುಸ್ತೌ ಸುರೋತ್ತಮೌ ॥೫೨॥
ಜೃಮ್ಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ ।
ಅಧಿಕಂ ಮೇನಿರೇ ವಿಷ್ಣುಂ ದೇವಾಃ ಸರ್ಷಿಗಣಾಸ್ತದಾ ॥೫೩॥
ಧನೂರುದ್ರಸ್ತು ಸಂಕ್ರುದ್ಧೋ ವಿದೇಹೇಷು ಮಹಾಯಶಾಃ ।
ದೇವರಾತಸ್ಯ ರಾಜರ್ಷೇಃ ದದೌ ಹಸ್ತೇ ಸಸಾಯಕಮ್ ॥೫೪॥
ಇದಂ ಚ ವೈಷ್ಣವಂ ರಾಮ ಧನುಃ ಪರಪುರಞ್ಜಯಮ್ ।
ಋಚೀಕೇ ಭಾರ್ಗವೇ ಪ್ರಾದಾತ್ ವಿಷ್ಣುಃ ಸನ್ಯಾಸಮುತ್ತಮಮ್ ॥೫೫॥
ಋಚೀಕಸ್ತು ಮಹಾತೇಜಾಃ ಪುತ್ರಸ್ಯಾಪ್ರತಿಕರ್ಮಣಃ ।
ಪಿತುರ್ಮಮ ದದೌ ದಿವ್ಯಂ ಜಮದಗ್ನೇರ್ಮಹಾತ್ಮನಃ ॥೫೬॥
ತದಿದಂ ವೈಷ್ಣವಂ ರಾಮ ಪಿತೃಪೈತಾಮಹಂ ಮಹತ್ ।

ಹೀಗೆ ಅವರಿಬ್ಬರಿಗೂ ವಿರೋಧ ಹುಟ್ಟಿದಬಳಿಕ, ಈಶ್ವರನಿಗೂ ವಿಷ್ಣುವಿಗೂ ಪರಸ್ಪರ ಜಯಾಕಾಂಕ್ಷೆಯಿಂದ ಅತ್ಯದ್ಭುತವಾದ ಯುದ್ಧವಾಯ್ತು ॥೫೨॥

ಆಗ, ಮಹಾಭಯಂಕರವಾಗಿದ್ದ ಆ ಶಿವಧನುಸ್ಸು, ಸ್ವಲ್ಪ ಬೊಗ್ಗಿಹೋಯ್ತು. ಒಳಿಕ, ವಿಷ್ಣುವಿನ ಹುಂಕಾರದಿಂದ, ಮಹೇಶ್ವರನಾದ ತ್ರಿಲೋಚನನು ಸ್ತಬ್ಧನಾಗಿ ಬಿಟ್ಟನು ॥೫೩॥

ಈ ಸಮಯದಲ್ಲಿ, ಋಷಿಸಮೂಹಗಳೊಡನೆಯೂ ಗಂಧರ್ವರೊಡನೆಯೂ ಕೂಡಿರುವ ದೇವತೆಗಳೆಲ್ಲರೂ ಬಂದು ವಾ್ಗರ್ಥಿಸಿಕೊಂಡಬಳಿಕ, ಆ ಶಿವ ವಿಷ್ಣುಗಳಿಬ್ಬರೂ ಶಾಂತರಾದರು ॥

ಅನಂತರ, ವಿಷ್ಣುವಿನ ಪರಾಕ್ರಮದಿಂದ ಶಿವಧನುಸ್ಸು ಬೊಗ್ಗಿದುದನ್ನು ಕಂಡು, ಸಮಸ್ತ ಋಷಿಗಳೂ ದೇವತೆಗಳೂ ವಿಷ್ಣುವೇ ಒಲಾಧಿಕನೆಂದು ತಿಳಿದುಕೊಂಡರು ॥೫೫॥

ಆಗ, ಪರಮೇಶ್ವರನು, ಮಹಾಕೋಪಸಮನ್ವಿತನಾಗಿ, ತನ್ನ ಧನುಸ್ಸನ್ನು, ವಿದೇಹದೇಶದಲ್ಲಿ ದೊರೆಯಾಗಿದ್ದ ದೇವರಾತನೆಂಬ ರಾಜರ್ಷಿಯ ವಶದಲ್ಲಿ ಬಾಣಸಹಿತವಾಗಿ ಕೊಟ್ಟು ಬಿಟ್ಟನು ॥೫೬॥

ಅಯ್ಯಾ! ರಾಮ! ಶತ್ರುಪುರದಾಹಕವಾದ ಈ ವೈಷ್ಣವ ಧನುಸ್ಸನ್ನು, ವಿಷ್ಣುವು, ಭೃಗು ಕುಲೋತ್ಪನ್ನನಾದ ಋಚೀಕನೆಂಬವನಲ್ಲಿ ನ್ಯಾಸವಾಗಿ ಇಟ್ಟಿದ್ದನು ॥೫೭॥

ಮಹಾತೇಜಸ್ವಿಯಾದ ಋಚೀಕನಾದರೋ, ತನ್ನ ಮಗನಾದ-ಅಪ್ರತಿಹತನಾದ-ನನ್ನ ತಂದೆಯಾದ-ಮಹಾತ್ಮನಾದ ಜಮದಗ್ನಿಮುನಿಗೆ, ಆ ಧನುಸ್ಸನ್ನು ಕೊಟ್ಟನು ॥೫೮॥

ಅಯ್ಯಾ! ರಾಮ! ಹೀಗೆ ಈ ವೈಷ್ಣವಧನುಸ್ಸು, ನನಗೆ ತಂದೆತಾತಂದಿರಿಂದಲೂ ಬಂದಿದ್ದು

ಕ್ಷತ್ರಧರ್ಮಂ ಪುರಸ್ಕೃತ್ಯ ಗೃಹೀಷ್ವ ಧನುರುತ್ತಮಮ್ ॥೫೯॥
ಯೋಜಯಸ್ವ ಧನುಶ್ಚೈತ್ಯೇ ಶರಂ ಪರಪುರಞ್ಜಯ ।
ಯದಿ ಕಕ್ಷ್ಯೋಽಸಿ ಕಾಕುತ್ಸ್ಥ ದ್ವಂದ್ವಂ ದಾಸ್ಯಾಮಿ ತೇ ತತಃ ॥೬೦॥
ಅಥವಾ ನ್ಯಸ್ತಶಸ್ತ್ರಸ್ತ್ವಂ ಕಾತರೋಽಸಿ ಯದಾ ಶೃಣು ।
ಶರಣಂ ವ್ರಜ ಮಾಂ ರಾಮ ನಮಸ್ಕೃತ್ಯ ಕೃತಾಞ್ಜಲಿಃ ॥೬೧॥
ಶ್ರುತ್ವಾ ತಜ್ಜಾಮದಗ್ನ್ಯಸ್ಯ ವಾಕ್ಯಂ ದಾಶರಥಿಸ್ತದಾ ।
ಗೌರವಾದ್ಯನ್ತ್ರಿತಕಥಃ ಪಿತೂರಾಮಮಥಾಬ್ರವೀತ್ ॥೬೨॥
ಕೋಽನರ್ಥಸ್ತ್ವನ್ನಮಸ್ಕಾರಾತ್ ಪೂಜ್ಯೋ ವಿಪ್ರೋಽಸ್ಯಹಂ ನೃಪಃ ।
ಆಜ್ಞಾಪಯಸಿ ಚ ಬ್ರಹ್ಮರ್ಷೇ ಗೃಹ್ಣೀಷ್ವೇ ವೈಷ್ಣವಂ ಧನುಃ ॥೬೩॥
ಶ್ರುತವಾನಸ್ಮಿ ಯತ್ ಕರ್ಮ ಕೃತವಾನಸಿ ಭಾರ್ಗವ ।
ಅನುರುಧ್ಯಾಮಹೇ ಬ್ರಹ್ಮರ್ಷೇ ಪಿತುರಾನೃಣ್ಯಮಾಸ್ಥಿತವಾನ್ ॥೬೪॥
ವೀರ್ಯಹೀನಮವಿಜ್ಞಾಯ ಕ್ಷತ್ರಧರ್ಮೇಣ ಭಾರ್ಗವ ।
ಅವಜಾನಾಸಿ ಮೇ ತೇಜಃ ಪಶ್ಯ ಮೇಽದ್ಯ ಪರಾಕ್ರಮಮ್ ॥೬೫॥

ವುದು. ನೀನು, ಕ್ಷತ್ರಿಯಧರ್ಮವನ್ನು ಮುರ್ಯಾದಿಸುತ, ಈ ಉತ್ತಮ ಧನುಸ್ಸನ್ನು ಗ್ರಹಿಸುವನಾಗು ॥೫೯॥

ಎಲೈ ಶತ್ರುಕುಲಸಂಹಾರಕನೆಂದು ಹೊಗಳಿಸಿಕೊಳ್ಳುವ ಶ್ರೀರಾಮನೆ! ಈ ಶ್ರೇಷ್ಠವಾದ ವೈಷ್ಣವಧನುಸ್ಸಿನಲ್ಲಿ ಬಾಣವನ್ನು ಹೂಡುವನಾಗು. ನೀನು ಸಮರ್ಥನಾಗಿದ್ದ ಪಕ್ಷದಲ್ಲಿ, ಆಮೇಲೆ ನಾನು ನಿನಗೆ ದ್ವಂದ್ವಯುದ್ಧವನ್ನು ಕೊಡುವೆನು ॥೬೦॥

ಅಥವಾ, ನೀನು ಭಯಗ್ರಸ್ತನಾಗಿದ್ದ ಪಕ್ಷದಲ್ಲಿ, ನನ್ನ ಹಿತವಚನವನ್ನು ಕೇಳುವನಾಗು; ಶಸ್ತ್ರವನ್ನು ಕೆಳಗಿಟ್ಟುಬಿಟ್ಟು, ಕೈಮುಗಿದುಕೊಂಡು, ನನಗೆ ಶರಣಾಗತನಾಗು ॥೬೧॥

ಹೀಗೆ ಹೇಳುತಿರುವ ಪರಶುರಾಮನ ಮಾತನ್ನು ಕೇಳಿದವನಾಗಿ, ಇದುವರೆಗೂ ತಂದೆಗುಲ್ಲಿ ಗೌರವದಿಂದ ವಿಶೇಷವಾಗಿ ಮಾತನಾಡದಿದ್ದ ಶ್ರೀರಾಮಚಂದ್ರನು, ಆ ಭಾರ್ಗವನನ್ನು ಕುರಿತು ಹೀಗೆ ಹೇಳಿದನು ॥೬೨॥

ಎಲೈ ಬ್ರಾಹ್ಮಣಶ್ರೇಷ್ಠರೆ! ತಮಗೆ ನಾನು ನಮಸ್ಕಾರ ಮಾಡಿದುದರಿಂದ ಬಾಧಕವೇನು? ತಾವು ಸ್ವಭಾವತಃ ಬ್ರಾಹ್ಮಣರು; ನಾನು ಕ್ಷತ್ರಿಯನು. ಕ್ಷತ್ರಿಯನು ಬ್ರಾಹ್ಮಣರಿಗೆ ನಮಸ್ಕರಿಸುವುದು ನ್ಯಾಯವೇ ಅಲ್ಲವೆ! ಆದರೂ, ತಾವು ಆಜ್ಞೆಮಾಡುತ್ತೀರಾದಕಾರಣ, ಈ ವೈಷ್ಣವ ಧನುಸ್ಸನ್ನು ಗ್ರಹಿಸುವೆನು ॥೬೩॥

ಎಲೈ ಭಾರ್ಗವನೆ! ನೀನು ಯಾವಯಾವ ಕೆಲಸವನ್ನು ಮಾಡಿರುವೆಯೋ, ಅದನ್ನೆಲ್ಲ ನಾನು ಕೇಳಿರುವೆನು. ನೀನು ತಂದೆಯ ಆಜ್ಞೆಯನ್ನು ನೆರವೇರಿಸಿ ಪಿತೃಋಣಮುಕ್ತನಾದುದನ್ನು ನೋಡಿ, ನಾನು ಬಹಳವಾಗಿ ಅಭಿನಂದಿಸುವೆನು ॥೬೪॥

ಎಲೈ ಭಾರ್ಗವನೆ! ನನ್ನನ್ನು, ಕ್ಷತ್ರಿಯ ಸಾಮಾನ್ಯ ಬುದ್ಧಿಯಿಂದ ವೀರ್ಯಹೀನನೆಂದೂ ಅಶಕ್ತನೆಂದೂ ತಿಳಿದು, ನನ್ನ ತೇಜಸ್ಸನ್ನು ನೀನು ತಿರಸ್ಕರಿಸುತಿರುವೆಯಲ್ಲವೆ! ಈಗ ನನ್ನ ಪರಾಕ್ರಮವನ್ನು ನೋಡುವನಾಗು. (ಎಂದು, ಶ್ರೀರಾಮನು ಪರಶುರಾಮನಿಗೆ ಹೇಳಿದನು) ॥೬೫॥

ಇತ್ಯುಕ್ತ್ವಾ ದೇವಿ ವೈಷ್ಣವ್ಯಾ ಶಕ್ತ್ಯಾ ತದ್ಧನುಷಾ ಸಹ ।
ಜಗ್ರಾಹ ವೈಷ್ಣವಂ ಚಾಪಂ ವಿನಯೇನ ಚ ಲೀಲಯಾ ॥೬೬॥
ತಂ ಗೃಹೀತ್ವಾ ಸ್ವಕಂ ಚಾಪಂ ರಾಮಃ ಸಾಕಂ ಸ್ವತೇಜಸಾ ।
ಪರಿಕ್ರಮ್ಯ ನಮಸ್ಕೃತ್ಯ ಪ್ರಾಞ್ಜಲಿಃ ಪ್ರಾಹ ಭಾರ್ಗವಮ್ ॥೬೭॥
ಬ್ರಾಹ್ಮಣೋಽಸೀತಿ ಮೇ ಪೂಜ್ಯೋ ವಿಶ್ವಾಮಿತ್ರಕೃತೇನ ಚ ।
ತಸ್ಮಾಚ್ಚ ಕ್ಷಂತುಂ ನ ತೇ ರಾಮ ಮೋಕ್ತುಂ ಪ್ರಾಣಹರಂ ಶರಮ್ ॥೬೮॥
ಅಪರಾಧಂ ಕ್ಷಮೇ ಬ್ರಹ್ಮನ್ ಅಮೋಘೋಽಯಂ ಶರೋ ಮಮ ।
ತ್ವತ್ಪಾದಕಮಲಂ ಹನ್ಯಾಂ ಉತ ಬ್ರೂಹ್ಯಥವಾ ವೃಷಮ್ ॥೬೯॥

ಇತಿ ಶ್ರೀಬಾಲಕಾಣ್ಡೇ ಶ್ರೀರಾಮಪರಶುರಾಮಸಂವಾದ
ಕಥನಂ ನಾಮ ತ್ರಯಸ್ತ್ರಿಂಶಃ ಸರ್ಗಃ



ಎಲೌ ಪಾರ್ವತಿ! ಹೀಗೆಂದು ಹೇಳಿ, ಆ ಶ್ರೀರಾಮನು, ಮಹಾವಿನಯ ಯುಕ್ತನಾಗಿ, ಆ ಪರಶುರಾಮನು ಹಿಡಿದುಕೊಂಡಿದ್ದ ವಿಷ್ಣುಧನುಸ್ಸನ್ನು, ಅವನಲ್ಲಿದ್ದ ವೈಷ್ಣವ ಶಕ್ತಿಸಹಿತವಾಗಿ, ಲೀಲಾಸದಿಂದ ಸ್ವೀಕರಿಸಿ ಬಿಟ್ಟನು ॥೬೬॥

ಹೀಗೆ ಆ ಶ್ರೀರಾಮನು, ತನ್ನ ತೇಜಸ್ಸಿನೊಡನೆ ತನ್ನ ಧನುಸ್ಸನ್ನು ಸ್ವೀಕರಿಸಿಕೊಂಡವನಾಗಿ, ಕೈಮುಗಿದುಕೊಂಡು ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಆ ಪರಶುರಾಮನನ್ನು ಕುರಿತು ಹೀಗೆ ಹೇಳಿದನು ॥೬೭॥

ಎಲೈ ಪರಶುರಾಮನೆ! ನೀನು ಬ್ರಾಹ್ಮಣನಾಗಿರುವೆಯೆಂದು ನಾನು ನಿನ್ನನ್ನು ಪೂಜಿಸಬೇಕಾಗಿರುವುದು. ಇದಲ್ಲದೆ, ವಿಶ್ವಾಮಿತ್ರನಿಗೋಸ್ಕರವಾಗಿಯೂ ನಿನ್ನನ್ನು ನಾನು ಮರ್ಯಾದಿಸಬೇಕಾಗಿರುವುದು. ಆದುಕಾರಣ, ನಿನ್ನ ಮೇಲೆ ಪ್ರಾಣಾಪಹಾರಕವಾದ ಬಾಣವನ್ನು ಬಿಡಲು ನಾನು ಅಸಮರ್ಥನಾಗಿರುವೆನು ॥೬೮॥

ಎಲೈ ಬ್ರಾಹ್ಮಣೋತ್ತಮನೆ! ನಾನು ನಿನ್ನ ಅಪರಾಧವನ್ನು ಕ್ಷಮಿಸಿರುವೆನು. ಆದರೆ, ನಾನು ಸಂಧಾನಮಾಡಿರುವ ಈ ಬಾಣವು ಅಮೋಘವಾದುದು; ಇದಕ್ಕೆ ಯಾವುದಾದರೊಂದು ಗುರಿಯನ್ನು ತೋರಿಸಿಯೇ ತೀರಬೇಕಾಗಿರುವುದು. ಆದುಕಾರಣ, ಈ ಬಾಣದಿಂದ, ನಿನ್ನ ವಾದ ಕಮಲವನ್ನು ಕತ್ತರಿಸಿ ಬಿಡಲೋ? ಅಥವಾ, ನೀನು ಸಂಪಾದಿಸಿರುವ ಪುಣ್ಯಲೋಕಗಳನ್ನು ನಾಶಪಡಿಸಲೋ? ಬೇಗನೆ ಹೇಳುವನಾಗು ॥೬೯॥

ಇದು ಬಾಲಕಾಂಡದಲ್ಲಿ ಶ್ರೀರಾಮ ಪರಶುರಾಮ ಸಂವಾದ ಕಥನವೆಂಬ
ಮುವ್ವತ್ತು ಮೂರನೆಯ ಸರ್ಗವು.



ಅಥ ಶ್ರೀಬಾಲಕಾಣ್ಡೇ ಚತುಸ್ತ್ರಿಂಶಃ ಸರ್ಗಃ.

ಶ್ರೀಶಿವ ಉವಾಚ.

ತದೈವ ದೇವಿ ತಂ ರಾಮಂ ದ್ರಷ್ಟುಂ ಸರ್ಷಿಗಣಾಃ ಸುರಾಃ ।
ಪಿತಾಮಹಂ ಪುರಸ್ಕೃತ್ಯ ಸಮೇತಾಸ್ತತ್ರ ಸಜ್ಜಿಶಃ ।೧॥
ಗನ್ಧರ್ವಾಪ್ಸರಸಶ್ಚೈವ ಸಿದ್ಧಚಾರಣಕಿನ್ನರಾಃ ।
ಯಕ್ಷರಾಕ್ಷಸನಾಗಾಶ್ಚ ದ್ರಷ್ಟುಂ ತನ್ಮಹದದ್ಭುತಮ್ ॥೨॥
ಜಡೀಕೃತೇ ತದಾ ಲೋಕೇ ರಾಮೇ ವರಧನುರ್ಧರೇ ।
ನಿರ್ವೀರ್ಯೋ ಜಾಮದಗ್ನ್ಯೋಸೌ ರಾಮೋ ರಾಮಮುಭಾಷತ ॥೩॥
ಅಕ್ಷಯ್ಯಂ ಮಧುಹನ್ತಾರಂ ಜಾನಾಮಿ ತ್ವಾಂ ಸುರೇಶ್ವರಮ್ ।
ಧನುಷೋಸ್ಯ ಪರಾಮರ್ಜಾತ್ ಸ್ವಸ್ತಿ ತೇಸ್ತು ಪರನ್ತಪ ॥೪॥
ತ್ವಮಾದಿಪುರುಷಃ ಸಾಕ್ಷಾತ್ ಪರಬ್ರಹ್ಮಾಚ್ಯುತೋವ್ಯಯಃ ।
ಹನ್ತುಂ ರಕ್ಷಾಂಸಿ ಮಚ್ಛಕ್ತಿಂ ಆದಾತುಂ ಚ ರಘೋಃ ಕುಲೇ ।
ಜಾತೋಸಿ ಕೇಶವ ಸ್ವಾಮಿನ್ ಪೂರ್ವೋಕ್ತಂ ತೇ ವಚಃ ಸ್ಮೃತಮ್ ॥೫॥

ಬಾಲಕಾಂಡದಲ್ಲಿ ಮುವ್ವತ್ತ್ನಾಲ್ಕನೆಯೆ ಸರ್ಗವು.

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಹೀಗೆ ಶ್ರೀರಾಮನು ಪರಶುರಾಮನನ್ನು ಕೇಳುತ್ತಿರುವ ಸಮಯದಲ್ಲಿಯೇ, ಆ ರಾಮನನ್ನು ನೋಡುವುದಕ್ಕೊಸ್ಕರ, ಪಿತಾಮಹನನ್ನು ಮುಂದಿಟ್ಟುಕೊಂಡು, ಸಮಸ್ತರಾದ ದೇವತೆಗಳೂ ಋಷಿಗಳೂ ಅಲ್ಲಿ ಗುಂಪುಗುಂಪಾಗಿ ಬಂದು ಸೇರಿದರು ॥೧॥

ಆ ಅತ್ಯಾಶ್ಚರ್ಯಕರವಾದ ವಿಷಯವನ್ನು ನೋಡುವುದಕ್ಕಾಗಿ, ಗಂಧರ್ವರೂ, ಅಪ್ಸರಸ್ತ್ರೀಯರೂ, ಸಿದ್ಧರೂ, ಚಾರಣರೂ, ಕಿನ್ನರರೂ, ಯಕ್ಷರೂ, ರಾಕ್ಷಸರೂ, ಪನ್ನಗರೂ ಬಂದು ಸೇರಿದರು ॥೨॥

ಆ ಸಮಯದಲ್ಲಿ, ಸಮಸ್ತಲೋಕವೂ ಸ್ತಬ್ಧವಾಗಿ ನಿಂತುಕೊಂಡಿರಲಾಗಿ, ಶ್ರೀರಾಮನು ದಿವ್ಯವಾದ ಆ ವೈಷ್ಣವ ಧನುಸ್ಸನ್ನು ಕೈಯಲ್ಲಿ ಹಿಡಿದು ನಿಂತಿರುವಾಗ, ಕೇವಲನಿರ್ವೀರ್ಯನಾಗಿ ಬಿಟ್ಟಿರುವ ಆ ಪರಶುರಾಮನು, ಶ್ರೀರಾಮನನ್ನು ಹೀಗೆ ಪ್ರಾರ್ಥಿಸಿದನು ॥೩॥

ಎಲೈ ಅರಿವಿನಾತಕನೆ! ನೀನು ಈ ವೈಷ್ಣವ ಧನುಸ್ಸನ್ನು ಕೈಯಲ್ಲಿ ಹಿಡಿದುಕೊಂಡುದರಿಂದ, ನಾನು ನಿನ್ನನ್ನು ಸಕಲ ದೇವಾಧೀಶನಾದ ಅಕ್ಷಯ್ಯನಾದ ಮಧುಸೂದನನೆಂದು ತಿಳಿದುಕೊಂಡೆನು ॥೪॥

ಹೇ ಕೇಶವ! ಹೇ ಸ್ವಾಮಿ! ನೀರು ಸಾಕ್ಷಾತ್ ಪರಮಪುರುಷನು; ಪರಬ್ರಹ್ಮನು; ಅಚ್ಯುತನು; ಅವ್ಯಯನು; ರಾಕ್ಷಸರನ್ನು ಹೊಡೆಯುವುದಕ್ಕಾಗಿಯೂ, ನನ್ನಲ್ಲಿದ್ದ ವಿಷ್ಣುಶಕ್ತಿಯನ್ನು ಸ್ವೀಕರಿಸಿ ಬಿಡುವುದಕ್ಕಾಗಿಯೂ, ನೀನು ಈ ರಘುಕುಲದಲ್ಲಿ ಅವತರಿಸಿರುವೆ. ಪೂರ್ವದಲ್ಲಿ ನೀನು ನನಗೆ ಹೇಳಿದ್ದ ಮಾತು, ಈಗ ನನ್ನ ಸ್ಮರಣೆಗೆ ಬಂದಿತು ॥೫॥

ತ್ವಂ ಕಾಲಸ್ತ್ವಂ ಜಗತ್ ಸರ್ವಂ ತ್ವಮೇವ ಬ್ರಹ್ಮಶಙ್ಕರೌ ।
ತ್ವಂ ಯಜ್ಞಸ್ತ್ವಂ ವಷಟ್ಕಾರಃ ತ್ವಮೋಙ್ಕಾರಸ್ತ್ರಯಸ್ತ್ರಯೀ ॥೬॥
ತ್ವಮೇವ ಸತ್ಯಂ ಮಿಥ್ಯಾ ಚ ಚಿನ್ಮಾತ್ರಂ ಬ್ರಹ್ಮ ನಿರ್ಗುಣಮ್ ।
ಸ್ತೋತುಂ ಕೋಽಹಮಶಕ್ತಸ್ತ್ವಾಂ ವೇದಾನಾಮಪ್ಯಗೋಚರಮ್ ॥೭॥
ಯಚ್ಚಾಹಮೇವಂ ಕೃತವಾ ಪೂರ್ವಂ ತ್ವಾಂ ತತ್ ಕ್ಷಮಸ್ವ ಮೇ ॥೮॥
ತವ ಶಕ್ತ್ಯಾ ನೃಪಾ ಸರ್ವಾ ಹತ್ವಾ ದತ್ವಾ ಮಹೀಂ ದ್ವಿಜೇ ।
ತ್ವತ್ಪ್ರಸಾದವಶೇನೈವ ಶಾನ್ತಿಂ ಪ್ರಾಪ್ನೋಮಿ ನೈಷ್ಠಿಕೀಮ್ ॥೯॥
ರಾಮರಾಮ ಮಹಾಬಾಹೋ ವೇದ್ಮಿ ತ್ವಾಂ ಪರಮೇಶ್ವರಮ್ ।
ಪುರಾಣಪುರುಷಂ ವಿಷ್ಣುಂ ಜಗತ್ಸರ್ಗಲಯೋದ್ಭವಮ್ ॥೧೦॥
ಬಾಲ್ಯೇ ಹಿ ತಪಸಾ ವಿಷ್ಣುಂ ಆರಾಧಯಿತುಮಿಚ್ಛಸಾ ।
ಚಕ್ರತೀರ್ಥಮಹಂ ಗತ್ವಾ ತಪಸಾ ವಿಷ್ಣುಮನ್ವಹಮ್ ॥೧೧॥
ಅತೋಷಯಂ ಮಹಾತ್ಮಾನಂ ನಾರಾಯಣಮನನ್ಯಧೀಃ ॥೧೨॥
ತತಃ ಪ್ರಸನ್ನೋ ದೇವೇಶಃ ಶಙ್ಖಚಕ್ರಗದಾಧರಃ ।
ಶ್ರೀವತ್ಸವಕ್ಷಾಲಕ್ಷ್ಮೀಶಃ ಕರುಣಾವರುಣಾಲಯಃ ।

ನೀನೇ ಸಾಕ್ಷಾತ್ ಕಾಲರೂಪನು; ಸಮಸ್ತ ಜಗತ್ತೂ ನೀನೇ; ಬ್ರಹ್ಮನೂ ಶಿವನೂ ನೀನೇ; ಯಜ್ಞಪುರುಷನೂ ನೀನೇ; ವಷಟ್ಕಾರವೂ ನೀನೇ; ಓಂಕಾರವೂ ನೀನೇ; ಓಂಕಾರದಲ್ಲಿರುವ-ಅಕಾರ ಉಕಾರ ಮಕಾರಗಳೆಂಬ-ವರ್ಣತ್ರಯವೂ ನೀನೇ; ವೇದತ್ರಯವೂ ನೀನೇ॥

ಸತ್ಯವೂ ನೀನೇ; ಮಿಥ್ಯವೂ ನೀನೇ; ಕೇವಲ ಚಿನ್ಮಾತ್ರವಾದ ನಿರ್ಗುಣವಾದ ಬ್ರಹ್ಮವೂ ನೀನೇ. ವೇದಗಳಿಗೂ ಗೋಚರನಾಗದಿರುವ ನಿನ್ನನ್ನು ಸ್ತೋತ್ರಮಾಡುವುದಕ್ಕೆ, ಸ್ವಭಾವತಃ ಶಕ್ತಿಹೀನನಾದ ನಾನು ಎಷ್ಟರವನು? ನಿನ್ನ ತತ್ವವು ಗೊತ್ತಾಗುವುದಕ್ಕಿಂತ ಮುಂಚೆ, ನಾನು ನಿನ್ನ ವಿಷಯದಲ್ಲಿ ಹೀಗೆ ಅಪರಾಧವಾಡಿದುದಾವುದುಂಟೋ, ಅದನ್ನು ನೀನು ಕ್ಷಮಿಸಬೇಕು॥

ನಾನು ಇದುವರೆಗೂ ನಿನ್ನ ಶಕ್ತಿಯಿಂದಲೇ ಸಕಲರಾದ ಕ್ಷತ್ರಿಯರನ್ನೂ ಕೊಂದು, ಸಮಸ್ತ ಭೂಮಿಯನ್ನೂ ಬ್ರಾಹ್ಮಣರಿಗೆ ಸಮರ್ಪಿಸಿ, ನಿನ್ನ ಅನುಗ್ರಹಬಲದಿಂದಲೇ ಈಗ ಶಾಶ್ವತವಾದ ಶಾಂತಿಯನ್ನು ಸ್ವೀಕರಿಸುವೆನು॥೯॥

ಹೇ ರಾಮ! ರಾಮ! ಮಹಾಬಾಹೋ! ನಾನು, ನಿನ್ನನ್ನು, ಸಾಕ್ಷಾತ್ ಪರಮೇಶ್ವರನೆಂದೂ, ಪುರಾಣಪುರುಷನೆಂದೂ, ಶ್ರೀಮನ್ಮಹಾವಿಷ್ಣುವೆಂದೂ, ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಮುಖ್ಯಕಾರಣಭೂತನೆಂದೂ ತಿಳಿದಿರುವೆನು॥೧೦॥

ಪೂರ್ವದಲ್ಲಿ ನೀನು ನನಗೆ ಹೇಳಿದ್ದ ಮಾತನ್ನು ಈಗ ವಿಜ್ಞಾಪಿಸುವೆನು;—ನಾನು, ನನ್ನ ಬಾಲ್ಯದಲ್ಲಿಯೇ, ತಪಸ್ಸಿನಿಂದ ಶ್ರೀ ಮಹಾವಿಷ್ಣುವನ್ನು ಆರಾಧಿಸುವುದಕ್ಕೋಸ್ಕರ, ಚಕ್ರತೀರ್ಥಕ್ಕೆ ಹೋಗಿ ಪ್ರತಿ ದಿನವೂ ಅನನ್ಯಮನಸ್ಕನಾಗಿ ತಪಸ್ಸುಮಾಡಿ, ಭಗವಂತನಾದ ಶ್ರೀಮನ್ನಾರಾಯಣನನ್ನು ಆರಾಧಿಸಿದೆನು॥೧೧-೧೨॥

ಆರ್ಯಾ! ರಘುಶ್ರೇಷ್ಠ! ಬಳಿಕ, ಕೃಪಾಸಾಗರನಾದ ಆ ಲಕ್ಷ್ಮೀಪತಿಯು, ನನ್ನಲ್ಲಿ ಅನುಗ್ರಹವಿಟ್ಟು, ಶಂಖಚಕ್ರಗದಾಧರನಾಗಿಯೂ ಶ್ರೀವತ್ಸಾಂಕಿತವಕ್ಷಸ್ಥಲನಾಗಿಯೂ ಮುಖದಲ್ಲಿ

ಉವಾಚ ಮಾಂ ರಘುಶ್ರೇಷ್ಠ ಪ್ರಸನ್ನಮುಖಪಙ್ಕಜಃ ॥೧೩॥
ಉತ್ತಿಷ್ಠ ತಪಸೋ ಬ್ರಹ್ಮನ್ ಫಲಿತಂ ತೇ ತಪೋ ಮಹತ್ ।
ಮದಂಶೇನ ಚ ಯುಕ್ತಸ್ತ್ವಂ ಜಹಿ ಹೈಹಯಪುಙ್ಗವಮ್ ॥೧೪॥
ಕಾರ್ತವೀರ್ಯಂ ಪಿತೃಹಣಂ ಯದರ್ಥಂ ತಪಸಃ ಶ್ರಮಃ ॥೧೫॥
ತತಸ್ತ್ರಿಸ್ಸಪ್ತಕೃತ್ವಸ್ತ್ವಂ ಹತ್ವಾ ಕ್ಷತ್ರಿಯಮಣ್ಡಲಮ್ ।
ಕೃತ್ವಾ ಮಾಂ ಭೂಮಿಂ ಕಶ್ಯಪಾಯ ದತ್ವಾ ಶಾನ್ತಿಮುಪಾವಹ ॥೧೬॥
ತ್ರೇತಾಯುಗೇ ದಾಶರಥಿಃ ಭೂತ್ವಾ ರಾಮೋ ಮಹಾಯಶಾಃ ।
ಉತ್ಪತ್ಸ್ಯೇ ಪೂರ್ಣಯಾ ಶಕ್ತ್ಯಾ ತದಾ ದ್ರಕ್ಷ್ಯಸಿ ಮಾಂ ಪುನಃ ॥೧೭॥
ತತ್ ತೇಜಃ ಪುನರಾದಾಸ್ಯೇ ತ್ವಯಿ ದತ್ತಂ ಮಯಾಧುನಾ ।
ತದಾ ತಪಶ್ಚರ್ಯ ಲೋಕೇ ತಿಷ್ಠ ತ್ವಂ ಬ್ರಹ್ಮಣೋ ದಿನಮ್ ॥೧೮॥
ಇತ್ಯುಕ್ತ್ವಾನ್ತರ್ದಧೇ ದೇವಃ ತಥಾ ಸರ್ವಂ ಕೃತಂ ಮಯಾ ।
ಸೋಽಯಂ ವಿಷ್ಣುಸ್ತ್ವಂ ರಾಮ ಜಾತೋಽಸಿ ಬ್ರಹ್ಮಣಾರ್ಥಿತಃ ॥೧೯॥
ಮಯಿ ಸ್ಥಿತಂ ತು ತ್ವತ್ತೇಜಃ ತ್ವಯ್ಯೇವ ಪುನರಾಹೃತಮ್ ;
ಅದ್ಯ ಮೇ ಸಫಲಂ ಜನ್ಮ ಪ್ರಸನ್ನೋಽಸಿ ಮಮ ಪ್ರಭೋ ॥೨೦॥

ವಿಶೇಷವಾಗಿ ಉಲ್ಲಾಸವನ್ನು ತೋರಿಸತಕ್ಕವನಾಗಿಯೂ ನನಗೆ ದರ್ಶನಕೊಟ್ಟು, ನನ್ನನು ಕುರಿತು ಹೀಗೆ ಹೇಳಿದನು ॥೧೩॥

ಎಲೈ ಬ್ರಾಹ್ಮಣನೆ! ತಪಸ್ಸನ್ನು ಬಿಟ್ಟು ಏಳುವನಾಗು; ನಿನ್ನ ಅತಿಶಯಿತವಾದ ತಪಸ್ಸು ಈಗ ಫಲೋನ್ಮುಖವಾಯಿತು. ನೀನು ನನ್ನ ಅಂಶದಿಂದ ಯುಕ್ತನಾಗಿ, ನಿನ್ನ ತಂದೆಯನ್ನು ಕೊಂದಿರುವ ಹೈಹಯಕುಲಶ್ರೇಷ್ಠನಾದ ಕಾರ್ತವೀರ್ಯನನ್ನು ಸಂಹರಿಸು. ಇದಕ್ಕೊಸ್ಕರವೇ ಅಲ್ಲವೆ ನೀನು ತಪಸ್ಸುಮಾಡುತ ಇಷ್ಟು ಶ್ರಮಪಡತಿರುವುದು ! ॥೧೪–೧೫॥

ಕಾರ್ತವೀರ್ಯನನ್ನು ಸಂಹರಿಸಿದ ಬಳಿಕ, ನೀನು ಇಪ್ಪತ್ತೊಂದು ಸಲ ಭೂಮಿಯಲ್ಲಿರುವ ಕ್ಷತ್ರಿಯರನ್ನೆಲ್ಲ ಕೊಂದು, ಬಳಿಕ ಸಮಸ್ತವಾದ ಭೂಮಿಯನ್ನೂ ಕಶ್ಯಪನಿಗೆ ದಾನಮಾಡಿ, ಅನಂತರ ಶಾಂತನಾಗಿರು ॥೧೬॥

ಮುಂದೆ ತ್ರೇತಾಯುಗದಲ್ಲಿ ನಾನು ದಶರಥಪುತ್ರನಾದ ರಾಮ ರೂಪದಲ್ಲಿ ಮಹಾಯಶಸ್ವಿಯಾಗಿ ಪೂರ್ಣವಾದ ಶಕ್ತಿಯಿಂದ ಅವತರಿಸುವೆನು. ಆಗ ನೀನು ನನ್ನನ್ನು ಪುನಃ ನೋಡುವೆ!

ಈಗ ನಾನು ನಿನ್ನಲ್ಲಿ ಇಟ್ಟಿರುವ ಈ ತೇಜಸ್ಸನ್ನು, ಆಗ ಪುನಃ ತೆಗೆದುಕೊಳ್ಳುವೆನು. ಆಗ ನೀನು ತಪಸ್ಸುಮಾಡುತ ಒಂದು ಸಹಸ್ರಚತುರ್ಯುಗಕಾಲ ಈ ಲೋಕದಲ್ಲಿ ವಾಸವಾಗಿರು ॥೧೭॥

ಎಂದು, ಇಷ್ಟುವರೆಗೂ ಹೇಳಿಬಿಟ್ಟು, ಆ ಭಗವಂತನು ಅಂತರ್ಧಾನಹೊಂದಿದನು. ಆ ಬಳಿಕ, ಅವನ ಆಜ್ಞೆಯಂತೆಯೇ ನಾನು ಸಮಸ್ತವನ್ನೂ ನೆರವೇರಿಸಿದೆನು. ಹೇ ರಾಮ! ಆ ಮಹಾವಿಷ್ಣುವೇ, ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟು ಈಗ ಶ್ರೀರಾಮನಾಗಿ ಅವತರಿಸಿರುವೆ ॥೧೯॥

ನನ್ನಲ್ಲಿ ಇದುವರೆಗೂ ಇದ್ದ ನಿನ್ನ ತೇಜಸ್ಸು, ಈಗ ನಿನ್ನಿಂದಲೇ ಪುನಃ ತೆಗೆದುಕೊಳ್ಳಲ್ಪಟ್ಟಿತು. ಹೇ ಪ್ರಭೋ! ನೀನು ನನ್ನಲ್ಲಿ ಅನುಗ್ರಹವಿಟ್ಟಕಾರಣ, ನನ್ನ ಜನ್ಮವು ಈಗ ಸಫಲವಾಯ್ತು ॥೨೦॥

ಬ್ರಹ್ಮಾದಿಭಿರಲಭ್ಯಸ್ತ್ವಂ ಪ್ರಕೃತೇಃ ಪರಮೋಽನುಲಃ ।
ತ್ವಯಿ ಜನ್ಮಾದಿಷಡ್ಭಾವಾಃ ನ ಸನ್ತ್ಯಜ್ಞಾನಸಮ್ಭವಾಃ ॥೨೧॥
ನಿರ್ವಿಕಾರೋಽಸಿ ಪೂರ್ಣಸ್ತ್ವಂ ಗಮಾಗಮವಿವರ್ಜಿತಃ ॥೨೨॥

ಯಥಾ ಜಲೇ ಫೇನಜಾಲಂ ಧೂಮೋ ವಹ್ನೌ ತಥಾ ತ್ವಯಿ ।
ತ್ವದಾಧಾರಾ ತ್ವದ್ವಿಷಯಾ ಮಾಯಾ ಕಾರ್ಯಂ ಸೃಜತ್ಯಹೋ ॥೨೩॥

ಯಾವನ್ಮಾಯಾವೃತಾಲೋಕಾಃ ತಾವತ್ ತ್ವಾಂ ನ ವಿಜಾನತೇ ।
ಅವಿಚಾರಿತಸಿದ್ಧೈಷಾಽವಿದ್ಯಾ ವಿದ್ಯಾವಿರೋಧಿನೀ ॥೨೪॥

ಅವಿದ್ಯಾಕೃತದೇಹಾದಿಸಙ್ಘಾತೇ ಪ್ರತಿಬಿಮ್ಬಿತಾ ।
ಚಿಚ್ಛಕ್ತಿಃ ಸರ್ವಲೋಕೇಷ್ವಿಹ ಜೀವಇತ್ಯಭಿಧೀಯತೇ ॥೨೫॥

ಯಾವದ್ದೇಹಮನಃಪ್ರಾಣಬುದ್ಧ್ಯಾದಿಷ್ವಭಿಮಾನವಾನ್ ।
ತಾವತ್ ಕರ್ತೃತ್ವಭೋಕ್ತೃತ್ವಸುಖದುಃಖಾದಿಭಾಗ್ಭವೇತ್ ॥೨೬॥

ಆತ್ಮನಃ ಸಂಸೃತಿರ್ನಾಸ್ತಿ ಬುದ್ಧೇರಜ್ಞಾನಂ ನ ಜೀವತ್ಯಪಿ ।
ಅವಿವೇಕಾದ್ದ್ವಯಂ ಯುಕ್ತ್ವಾ ಸಂಸಾರೀವ ಪ್ರವರ್ತತೇ ॥೨೭॥

ಜಡಸ್ಯ ಚಿತ್ಸಮಾಯೋಗಾತ್ ಚಿತಿರ್ಭೂಯಾಚ್ಚಿತೋಸ್ತಥಾ ।
ಜಡಸಙ್ಗಾಜ್ಜಡತ್ವಂ ಹಿ ಜಲಾಗ್ನ್ಯೋರ್ಮಿಳನಂ ಯಥಾ ॥೨೮॥

ಪ್ರಕೃತಿಗಿಂತ ಭಿನ್ನನಾಗಿಯೂ ನಿರ್ಮಲನಾಗಿಯೂ ಇರುವ ನೀನು, ಬ್ರಹ್ಮಾದಿಗಳಿಂದಲೂ ಅಲಭ್ಯನಾಗಿರುವೆ. ಅಜ್ಞಾನಜನ್ಯಗಳಾದ ಜನನ ಮರಣಾದಿ ಷಡ್ಭಾವವಿಕಾರಗಳು ನಿನ್ನಲ್ಲಿರುವುದಿಲ್ಲ. ನೀನು ನಿರ್ವಿಕಾರನಾಗಿಯೂ ಪರಿಪೂರ್ಣನಾಗಿಯೂ ಗಮನಾಗಮನವಿವರ್ಜಿತನಾಗಿಯೂ ಇರುವೆ ॥೨೧-೨೨॥

ನೀರಿನಲ್ಲಿ ನೊರೆ ಹೀಗಿರುವುದೋ, ಅಗ್ನಿಯಲ್ಲಿ ಹೊಗೆ ಹೇಗಿರುವುದೋ, ಹಾಗೆ ನಿನ್ನನ್ನೇ ಆಶ್ರಯಿಸಿಕೊಂಡಿರುವ ಮಾಯೆಯು, ನಿನ್ನನ್ನೇ ವಿಷಯ ಮಾಡಿಕೊಂಡು, ನಾನಾವಿಧ ಕಾರ್ಯಗಳನ್ನು ಸೃಜಿಸುತ್ತಿರುವುದು. ಇದು ಆಶ್ಚರ್ಯಕರವಾಗಿರುವುದು ॥೨೩॥

ಎಲ್ಲಿಯವರೆಗೆ ಜನರು ಈ ಮಾಯೆಯಿಂದ ಆವರಿಸಲ್ಪಟ್ಟಿರುವರೋ, ಅಲ್ಲಿಯ ವರೆಗೂ ನಿನ್ನ ಸ್ವರೂಪವನ್ನು ತಿಳಿಯದಿರುವರು. ಜ್ಞಾನವಿರೋಧಿಯಾದ ಈ ಅವಿದ್ಯೆಯು, ಅವಿಚಾರ ಸಿದ್ಧವಾಗಿರುವುದು ॥೨೪॥

ಈ ಅವಿದ್ಯೆಯಿಂದ ಕಲ್ಪಿತವಾದ ದೇಹಾದಿ ಸಂಘಾತದಲ್ಲಿ ಪ್ರತಿಫಲಿಸುವ ಚಿಚ್ಛಕ್ತಿಯು, ಈ ಸಮಸ್ತ ಲೋಕದಲ್ಲಿಯೂ ಜೀವನೆಂಬ ಶಬ್ದದಿಂದ ಕರೆಯಲ್ಪಡುವುದು ॥೨೫॥

ಈ ಜೀವನು, ಎಲ್ಲಿಯವರೆಗೆ ದೇಹ ಮನಸ್ಸು ಪ್ರಾಣ ಬುದ್ಧಿ ಮುಂತಾದುವುಗಳಲ್ಲಿ ಅಭಿಮಾನವುಳ್ಳವನಾಗಿರುವನೋ, ಅಲ್ಲಿಯ ವರೆಗೂ-ಕರ್ತೃತ್ವ ಭೋಕ್ತೃತ್ವ ಸುಖ ದುಃಖ ಮುಂತಾದುವುಗಳಿಗೆಲ್ಲ ಗುರಿಯಾಗುವನು ॥೨೬॥

ಜ್ಞಾನೋದಯವಾದ ಬಳಿಕ, ಆತ್ಮನಿಗೆ, ಸಂಸಾರವೂ ಅಜ್ಞಾನವೂ ಎಂದಿಗೂ ಇರುವುದಿಲ್ಲ. ಅವಿಚಾರದಿಂದ ಇವೆರಡನ್ನೂ ಹೊಂದಿ, ಸಂಸಾರಿಯಂತೆ ಸುತ್ತುತಿರುವನು ॥೨೭॥

ಜಡಪದಾರ್ಥಕ್ಕೆ ಚಿತ್ತಿನ ಯೋಗವುಂಟಾದಪಕ್ಷದಲ್ಲಿ, ಅದೂ ಚಿತ್ತೇ ಆಗುವುದು; ಹಾಗೆಯೇ, ಚಿತ್ತಿಗೆ ಜಡದ ಯೋಗವಾದರೆ, ಅದೂ ಜಡವೇ ಆಗುವುದು. ಅಗ್ನಿ ಜಲಗಳ ಸಂಯೋಗವೇ ಇದಕ್ಕೆ ನಿದರ್ಶನವು ॥೨೮॥

ಯಾವತ್ ತ್ವತ್ಪಾದಭಕ್ತಾನಾಂ ಸಙ್ಗಸೌಖ್ಯಂ ನ ವಿನ್ದತಿ ।
ತಾವತ್ ಸಂಸಾರದುಃಖಾತ್ ನ ನಿವರ್ತೇನ್ನರಃ ಸದಾ ॥೨೯॥

ಸತ್ಸಙ್ಗಲಬ್ಧಯಾ ಭಕ್ತ್ಯಾ ಯದಾ ತ್ವಾಂ ಸಮುಪಾಸತೇ ।
ತದಾ ಮಾಯಾ ಶನೈರ್ಯಾತಿ ತಾನವಂ ಪ್ರತಿಪದ್ಯತೇ ॥೩೦॥

ತತಸ್ತ್ವಜ್ಜ್ಞಾನಸಮ್ಪನ್ನಃ ಸದ್ಗುರುಸ್ತಸ್ಯ ಲಭ್ಯತೇ ।
ಐಕ್ಯಜ್ಞಾನಂ ಗುರೋರ್ಲಬ್ಧ್ವಾ ತ್ವೇತತ್ಪ್ರಸಾದಾದ್ವಿಮುಚ್ಯತೇ ॥೩೧॥

ತಸ್ಮಾತ್ ತ್ವದ್ಭಕ್ತಿಹೀನಾನಾಂ ಕಲ್ಪಕೋಟಿಶತೈರಪಿ ।
ನ ಮುಕ್ತಿಶಙ್ಕಾ ನ ಜ್ಞಾನಶಙ್ಕಾಪಿ ಚ ಸುಖಂ ನ ಚ ॥೩೨॥

ಶ್ರೀರಾಮ ಉವಾಚ.

ಸತ್ಯಮುಕ್ತಂ ತ್ವಯಾ ತತ್ತ್ವಂ ಮದ್ಭಕ್ತೋಸಿ ದೃಢಂ ಮುನೇ ।
ಪುನರ್ಮದ್ಭಕ್ತಿದಾಢ್ರ್ಯಾಯ ವಿಭೂತಿಂ ಕಥಯಾಮಿ ತೇ ॥೩೩॥

ಅಹಂ ಬ್ರಹ್ಮಾ ಚ ವಿಷ್ಣುಶ್ಚ ರುದ್ರಶ್ಚಾಹಂ ಪುರನ್ದರಃ ।
ವಸವೋ ಲೋಕಪಾಲಾಶ್ಚ ಮನವಶ್ಚಾಪ್ಸರೋಗಣಾಃ ॥೩೪॥

ಪ್ರಪಂಚದಲ್ಲಿ, ಮನುಷ್ಯನು, ನಿನ್ನ ಪಾದಭಕ್ತರ ಸಂಗಸುಖವನ್ನು ಎಲ್ಲಿಯ ವರೆಗೆ ಹೊಂದುವುದಿಲ್ಲವೋ, ಅಲ್ಲಿಯ ವರೆಗೂ ಸಂಸಾರದುಃಖವನ್ನು ಬಿಟ್ಟು ಹಿಂದಿರುಗಲಾರನು ॥೨೯॥

ಯಾವಾಗ ಸಾಧುಸಮಾಗಮಜನ್ಯವಾದ ಭಕ್ತಿಯಿಂದ ಮನುಷ್ಯರು ನಿನ್ನನ್ನು ಉಪಾಸಿಸುವರೋ, ಆಗ ಮಾಯೆಯು ಮೆಲ್ಲಗೆ ಹಿಂದಿರುಗುತ ಒರುವುದು; ಕ್ರಮೇಣ ಕಾರ್ಶ್ಯವನ್ನೂ ಹೊಂದಿಬಿಡುವುದು ॥೩೦॥

ಆ ಬಳಿಕ, ನಿನ್ನ ಜ್ಞಾನವುಳ್ಳ(ಆತ್ಮಜ್ಞಾನಸಂಪನ್ನ)ವನಾದ ಸದ್ಗುರುವು ಅವನಿಗೆ ಸಿಕ್ಕುವನು. ಆ ಗುರುವಿನ ಉಪದೇಶದಿಂದ, ಪುರುಷನು ಬ್ರಹ್ಮಾತ್ಮೈಕ್ಯಜ್ಞಾನವನ್ನು ಪಡೆದವನಾಗಿ, ನಿನ್ನ ಅನುಗ್ರಹದಿಂದ ಮುಕ್ತನಾಗುವನು ॥೩೧॥

ಹೀಗಿರುವಕಾರಣ, ನಿನ್ನಲ್ಲಿ ಭಕ್ತಿಯಿಲ್ಲದವರಿಗೆ, ನೂರಾರುಕೋಟಿ ಕಲ್ಪಗಳು ಕಳೆದಾಗ್ಲೂ, ಮುಕ್ತಿಯುಂಟಾಗುವುದೆಂಬ ಶಂಕೆಯೂ ಇಲ್ಲ; ಜ್ಞಾನವುಂಟಾಗುವುದೆಂಬ ಶಂಕೆಯೂ ಇಲ್ಲ; ಆತ್ಮಾನಂದವಂತು ಇಲ್ಲವೇ ಇಲ್ಲ ॥೩೨॥

ಹೀಗೆ ಹೇಳುತ್ತಿರುವ ಪರಶುರಾಮನನ್ನು ಕುರಿತು ಶ್ರೀರಾಮನು ಹೇಳುವನು:—

ಅಯ್ಯಾ! ಪರಶುರಾಮನೆ! ನೀನು ಹೇಳಿದುದು ಸತ್ಯವು. ಎಲೈ ಮಹಾಮುನಿಯೆ! ನೀನು ನನ್ನಲ್ಲಿ ದೃಢವಾಗಿ ಭಕ್ತಿಯಿಟ್ಟಿರುವೆ. ಆದರೂ, ನನ್ನಲ್ಲಿ ಇನ್ನೂ ಭಕ್ತಿ ಹೆಚ್ಚಾಗಿ ದೃಢಪಡುವುದಕ್ಕೋಸ್ಕರ, ನನ್ನ ವಿಭೂತಿಯನ್ನು ನಿನಗೆ ಹೇಳುವೆನು ॥೩೩॥

ಬ್ರಹ್ಮನೂ ನಾನೇ; ವಿಷ್ಣುವೂ ನಾನೇ; ರುದ್ರನೂ ನಾನೇ; ದೇವೇಂದ್ರನೂ ನಾನೇ; ಅಷ್ಟವಸುಗಳೂ, ಅಷ್ಟದಿಕ್ಪಾಲಕರೂ, ಚತುರ್ದಶಮನುಗಳೂ, ಅಪ್ಸರಸ್ತ್ರೀ ಸಮೂಹವೂ ನಾನೇ ॥೩೪॥

ಅಹಂ ಪ್ರವೃತ್ತಿರ್ಭೂತಾನಾಂ ನಿವೃತ್ತಿಶ್ಚ ಸುಖೋದಯಾ ।
ಮನೋ೭ಹಮೃತ್ವಿಜಶ್ಚಾಹಂ ಹವಿರಾಜ್ಯಂ ಪಶುಸ್ತಥಾ ॥೩೫॥
ಯಜ್ಞೋ೭ಹಂ ಯಜ್ಞಭೋಕ್ತಾಹಂ ಯಜ್ಞಾನಾಂ ಫಲದೋ೭ಸ್ಮ್ಯಹಮ್ ।
ಕರ್ತಾ ಕಾರಯಿತಾ ಚಾಹಂ ಕಾರಣಂ ಚಾಹಮವ್ಯಯಮ್ ॥೩೬॥
ಮತ್ತಃ ಸ್ಮೃತಿಶ್ಚ ವಿಜ್ಞಾನಂ ಅಜ್ಞಾನಂ ಚಾಪಿ ಭಾರ್ಗವ ।
ಮೋಕ್ಷೋ೭ಹಂ ಮೋಕ್ಷಮಾರ್ಗೋ೭ಹಂ ಸರ್ವಂ ಚಾಹಂ ದ್ವಿಜೋತ್ತಮ॥೩೭
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ।
ಅಹಮಾದಿಶ್ಚ ಮಧ್ಯಂ ಚ ನಾಶಶ್ಚಾಹಂ ಹಿ ದೇಹಿನಾಮ್ ॥೩೮॥
ಅದಾವನ್ತೇ ಚ ಸರ್ಗಸ್ಯ ಯೋ೭ವಶಿಷ್ಯತಿ ಸೋ೭ಸ್ಮ್ಯಹಮ್ ॥೩೯॥
ಭೂಮೌ ಸ್ಥೈರ್ಯಮಹಂ ವಾಯೌ ಅಸಙ್ಗತ್ವಮಹಂ ದ್ವಿಜ ।
ವಿಯತ್ಯಲೇಪಶಕ್ತಿಶ್ಚ ಪ್ರಕೃತಿಶ್ಚಾಸ್ಮಿ ಕಾರಣಮ್ ।
ಕ್ಷೇತ್ರಜ್ಞೋ೭ಸ್ಮಿ ತಥಾ ಸಾಕ್ಷೀ ಗುಣೋ ಗುಣವತಾಮಹಮ್ ॥೪೦॥

ಭೂತಗಳಿಗೆ ಪ್ರವೃತ್ತಿಯೂ ನಾನೇ; ಕೇವಲಸುಖೋದರ್ಕವಾದ ನಿವೃತ್ತಿಯೂ ನಾನೇ; ಮಂತ್ರವೂ ನಾನೇ; ಮಂತ್ರವನ್ನು ಹೇಳತಕ್ಕ ಋತ್ವಿಜರೂ ನಾನೇ; ಹವಿಸ್ಸು ಆಜ್ಯ ಪಶುಗಳೂ ನಾನೇ ॥೩೫॥

ಯಜ್ಞವೂ ನಾನೇ; ಯಜ್ಞಹವಿರ್ಭೋಕ್ತೃವೂ ನಾನೇ; ಯಜ್ಞಗಳ ಫಲವನ್ನು ಕೊಡತಕ್ಕವನೂ ನಾನೇ; ಕರ್ತೃವೂ ಕಾರಯಿತೃವೂ (ಮಾಡಿಸತಕ್ಕವನು) ನಾನೇ; ಅನಾದಿಯಾದ ಕಾರಣವೂ ನಾನೇ ॥೩೬॥

ಅಯ್ಯಾ! ಭಾರ್ಗವ! ಸ್ಮರಣೆಯೂ, ಅಜ್ಞಾನವೂ, ವಿಜ್ಞಾನವೂ ಕೂಡ, ನನ್ನಿಂದಲೇ ಉದಯಿಸಿರುವುವು. ಎಲೈ ಬ್ರಾಹ್ಮಣೋತ್ತಮನೆ! ಮೋಕ್ಷವೂ ನಾನೇ; ಮೋಕ್ಷಕ್ಕೆ ಮಾರ್ಗವೂ ನಾನೇ; ಸಮಸ್ತವೂ ನಾನೇಯೆಂದು ತಿಳಿ ॥೩೭॥

ದಾರದಲ್ಲಿ ಮುತ್ತುಗಳು ಪಣಿಸಲ್ಪಟ್ಟಿರುವಂತೆ, ಈ ಸಮಸ್ತವೂ ನನ್ನಲ್ಲಿಯೇ ಪಣಿಸಲ್ಪಟ್ಟಿರುವುದು. ಪ್ರಾಣಿಗಳಿಗೆ ಆದಿಯೂ ನಾನೇ; ಮಧ್ಯವೂ ನಾನೇ; ಅಂತವೂ ನಾನೇ. ಈ ಪ್ರಪಂಚಸೃಷ್ಟಿಯು ಆದ್ಯಂತಗಳಲ್ಲಿ ಯಾವನೊಬ್ಬನು ಅವಶಿಷ್ಟನಾಗಿರುವನೋ, ಅವನೇ ನಾನೆಂದು ತಿಳಿಯುವನಾಗು ॥೩೮-೩೯॥

ಅಯ್ಯಾ! ಬ್ರಾಹ್ಮಣಶ್ರೇಷ್ಠನೆ! ಭೂಮಿಯಲ್ಲಿರುವ ಸ್ಥೈರ್ಯಗುಣವೂ ನಾನೇ; ವಾಯುವಿನಲ್ಲಿರುವ ಅಸಂಗತ್ವಗುಣವೂ ನಾನೇ; ಆಕಾಶದಲ್ಲಿರುವ ಅಲೇಪ(ಅಂಟಿಕೊಳ್ಳದಿರುವಿಕೆ)ಶಕ್ತಿಯೂ ನಾನೇ; ಪ್ರಕೃತಿಯೂ ಮೂಲಕಾರಣವೂ ನಾನೇ; ಕ್ಷೇತ್ರಜ್ಞನೂ ನಾನೇ; ಸರ್ವಸಾಕ್ಷಿಯಾದ ವನೂ ನಾನೇ; ಗುಣವುಳ್ಳ ಪದಾರ್ಥಗಳಲ್ಲಿರುವ ಗುಣವೆಲ್ಲವೂ ನಾನೇ ॥೪೦॥

ಭೂತಂ ಭವ್ಯಂ ಭವಿಷ್ಯಚ್ಚ ದೃಶ್ಯಾದೃಶ್ಯಾದಿ ವಸ್ತು ಯತ್ ।
ಅಸ್ತಿ ನಾಸ್ತೀತಿ ಯದ್ವಸ್ತು ತದಹಂ ಪ್ರೋಜ್ಯತೇ ಬುಧೈಃ ॥೪೧॥
ಅಹಂ ತು ವೇದ್ಮಿ ಸಕಲಂ ನ ಮಾಂ ವೇತ್ತ್ಯತ್ರ ಕಶ್ಚನ ।
ನಾಹಂ ಪ್ರಕಾಶಃ ಸರ್ವೇಷಾಂ ಆತ್ಮಮಾಯಾಸಮಾವೃತಃ ॥೪೨॥
ನ ಹಿ ಮೇ ಸೃಜತೋಽಣ್ಡಾನಿ ವಿಭೂತೀನಾಂ ಹಿ ಭೂರಿಶಃ ।
ತತ್ತ್ವತೋ ಗಣನಾಂ ಕರ್ತುಂ ಶಕ್ತಾಃ ಬ್ರಹ್ಮಶಿವಾದಯಃ ॥೪೩॥
ಇತ್ಯುಕ್ತ್ವಾ ಸ್ವವಿಭೂತೀಸ್ತಂ ಪುನಃ ಪ್ರೋವಾಚ ರಾಘವಃ ।
ಪ್ರಸನ್ನೋಽಸ್ಮಿ ತವ ಬ್ರಹ್ಮನ್ ಯತ್ ತೇ ಮನಸಿ ವರ್ತತೇ ।
ದಾಸ್ಯೇ ತದಖಿಲಂ ಸತ್ಯಂ ಮಾಕುರುಷ್ವಾತ್ರ ಸಂಶಯಮ್ ॥೪೪॥
ತತಃ ಪ್ರೀತೇನ ಮನಸಾ ಭಾರ್ಗವೋ ರಾಮಮಬ್ರವೀತ್ ॥೪೫॥
ನಮೋಸ್ತು ಜಗತಾಂ ನಾಥ ನಮಸ್ತೇ ಭಕ್ತಿಭಾವನ ।
ನಮಃ ಕಾರುಣಿಕಾನನ್ತ ರಾಮಚನ್ದ್ರ ನಮೋಸ್ತು ತೇ ॥೪೬॥
ಕ್ಷೀರಾಬ್ಧಿನಿಲಯಸ್ತ್ವಂ ಹಿ ಶಙ್ಖಚಕ್ರಗದಾಧರಃ ।
ಪುರಾಣಪುರುಷಸ್ತ್ವಂ ಹಿ ಸಾಕ್ಷಾನ್ನಾನುಷತಾಂ ಗತಃ ॥೪೭॥

ಭೂತ ಭವಿಷ್ಯತ್ ವರ್ತಮಾನಗಳಾತ್ಮವುಂಟೋ, ದೃಶ್ಯ ಅದೃಶ್ಯ ಮುಂತಾದುದಾವು ದುಂಟೋ, 'ಅಸ್ತಿ' 'ನಾಸ್ತಿ' ಎಂಬ ವ್ಯವಹಾರಕ್ಕೆ ಗೋಚರವಾದುದಾವುದುಂಟೋ, ಅದೆಲ್ಲವೂ ನಾನೇಯೆಂದು ತತ್ವಜ್ಞಾನಿಗಳು ಹೇಳುವರು ॥೪೧॥

ನಾನು ಎಲ್ಲವನ್ನೂ ಅರಿಯುವೆನು; ನನ್ನನ್ನು ಯಾವನೂ ಅರಿಯಲಾರನು. ಆತ್ಮಮಾಯೆಯಿಂದ ಆಚ್ಛಾದಿತನಾಗಿರುವ ನಾನು, ಸರ್ವರಿಗೂ ಸಾಮಾನ್ಯನಾಗಿ ಗೋಚರನಾಗುವುದಿಲ್ಲ ॥

ಲೆಕ್ಕವಿಲ್ಲದಷ್ಟು ಬ್ರಹ್ಮಾಂಡಗಳನ್ನು ಸೃಜಿಸುತಿರುವ ನನ್ನ ವಿಭೂತಿಗಳನ್ನು ಯಥಾವತ್ತಾಗಿ ಲೆಕ್ಕಮಾಡಲು, ಬ್ರಹ್ಮ ರುದ್ರ ಮೊದಲಾದವರೂ ಶಕ್ತರಲ್ಲ ॥೪೩॥

ಹೀಗೆಂದು ಇದುವರೆಗೂ ತನ್ನ ವಿಭೂತಿಗಳನ್ನೆಲ್ಲ ಹೇಳಿ, ಪುನಃ ಆ ರಾಮಚಂದ್ರನು ಪರಶುರಾಮನನ್ನು ಕುರಿತು 'ಎಲೈ ಬ್ರಾಹ್ಮಣೋತ್ತಮನೆ! ನಿನ್ನಲ್ಲಿ ಈಗ ನಾನು ಅನುಗ್ರಹವುಳ್ಳವನಾಗಿರುವೆನು. ನಿನ್ನ ಮನಸ್ಸಿನಲ್ಲಿ ಏನಿರುವುದೋ, ಅದೆಲ್ಲವನ್ನೂ ನಿನಗೆ ಕೊಡುವೆನು. ಇದು ನಿಶ್ಚಯವು; ಇದರಲ್ಲಿ ಸಂಶಯಮಾಡಬೇಡ' ಎಂದು ಹೇಳಿದನು ॥೪೪॥

ಹೀಗೆ ಶ್ರೀರಾಮನು ಹೇಳಿದಬಳಿಕ, ಪರಶುರಾಮನು ಸಂತುಷ್ಟಹೃದಯನಾಗಿ ಶ್ರೀರಾಮನನ್ನು ಕುರಿತು ಹೇಳುವನು:— ಜಗತ್ತಿಗೆಲ್ಲ ಒಡೆಯನಾದವನೆ! ನಿನಗೆ ನಮಸ್ಕಾರವು; ಭಕ್ತಿಗಮ್ಯನಾದವನೆ! ನಿನಗೆ ನಮಸ್ಕಾರವು; ಕೃಪಾನಿಧಿಯೆ! ಅನಂತನೆ! ನಿನಗೆ ನಮಸ್ಕಾರವು; ಹೇ ರಾಮಚಂದ್ರ! ನಿನಗೆ ನಮಸ್ಕಾರವು ॥೪೫-೪೬॥

ನೀನು, ಕ್ಷೀರಸಾಗರವಾಸನಾದ ಶಂಖಚಕ್ರಗದಾಧರನಲ್ಲವೆ! ನೀನೇ ಸಾಕ್ಷಾತ್ ಪರಮಪುರುಷನು; ಈಗ ಮನುಷ್ಯರೂಪವನ್ನು ಧರಿಸಿರುವೆ ॥೪೭॥

ನಾರಾಯಣಾರವಿನ್ದಾಕ್ಷ ನಮಸ್ತೇ ಪರಮಾತ್ಮನೇ ।
ತ್ರಾಹಿ ಮಾಂ ಜಗದಾಧಾರ ಸರ್ವಲೋಕನಮಸ್ಕೃತ ॥೪೪॥
ಬ್ರಹ್ಮಾಣ್ಡಾನಾಂ ಸಹಸ್ರಾಣಿ ಭ್ರಾಮಯಸ್ಯನಿಶಂ ಪ್ರಭೋ ।
ಬ್ರಹ್ಮಾಣ್ಡಕೋಟಯೋ ರಾಮ ತವಾಬ್ಜೀಷು ಕೃತಾಲಯಾಃ ।
ವಿಜ್ಞಾತಸಾರೋ ರಾಮ ತ್ವಂ ಪರತತ್ತ್ವಂ ತ್ವಮೇವ ಹಿ ॥೪೫॥
ಬಾಲೋಸಿ ಕ್ಷತ್ರವಂಶ್ಯೋಸಿ ಮಾನುಷೋಸೀತಿ ಕೀರ್ತನಮ್ ।
ಕ್ಷಮಸ್ವ ತನ್ಮೇ ದೌರಾತ್ಮ್ಯಂ ಭೂಯೋಭೂಯೋ ನಮೋಸ್ತು ತೇ ॥೪೦॥
ಯದಿ ಮೇನುಗ್ರಹೋ ರಾಮ ತವಾಸ್ತು ಮಧುಸೂದನ ।
ತ್ವದ್ಭಕ್ತಸಂಗಸ್ತ್ವತ್ಪಾದಭಕ್ತಿರೇವ ಸದಾಸ್ತು ಮೇ ॥೪೧॥
ತ್ವಯಾ ತ್ರೈಲೋಕ್ಯನಾಥೇನ ಯದಹಂ ವಿಮುಖೀಕೃತಃ ।
ನ ಚೇಯಂ ಮಮ ಕಾಕುತ್ಸ್ಥ ವ್ರೀಡಾ ಭವಿತುಮರ್ಹತಿ ॥೪೨॥
ತಪಸಾ ನಿರ್ಜಿತಂ ಸರ್ವಂ ತವ ತೇಜಸ್ಸಂಭಾಜನಮ್ ।
ಪುಣ್ಯಲೋಕಂ ವಿಧಾಯಾಶು ರಾಮ ಬಾಣಂ ವಿಮೋಚಯ ॥೪೩॥
ಶರಮೋಕ್ಷೇ ಗಮಿಷ್ಯಾಮಿ ಮಹೇನ್ದ್ರಂ ಪರ್ವತೋತ್ತಮಮ್ ॥೪೪॥

ನಾರಾಯಣ! ಪುಂಡರೀಕಾಕ್ಷ! ಪರಮಾತ್ಮನಾದ ನಿನಗೆ ನಮಸ್ಕಾರವು. ಸಮಸ್ತ ಜಗತ್ತಿಗೂ ಆಶ್ರಯಭೂತನೆ! ಸರ್ವಲೋಕನಮಸ್ಕೃತನಾದವನೆ! ನನ್ನನ್ನು ಸಂರಕ್ಷಿಸು ॥೪೪॥

ಹೇ ಪ್ರಭೋ! ನೀನು ಅನೇಕಕೋಟಿ ಬ್ರಹ್ಮಾಂಡಗಳನ್ನು ಸರ್ವದಾ ಸುತ್ತಿಸುತಿರುವೆ. ಶ್ರೀರಾಮಚಂದ್ರ! ಅನೇಕಕೋಟಿ ಬ್ರಹ್ಮಾಂಡಗಳು ನಿನ್ನ ಅಂಗಗಳಲ್ಲಿ ಆಶ್ರಯಮಾಡಿಕೊಂಡಿರುವುವು. ಸ್ವಾಮಿ! ರಾಮಭದ್ರ! ಈಗ ನಿನ್ನ ಯಾಥಾರ್ಥ್ಯವು ನನಗೆ ಗೊತ್ತಾಯ್ತು; ನೀನೇ ಆ ಪರತತ್ವವಲ್ಲವೆ! ॥೪೫॥

'ನೀನು ಬಾಲಕನು; ಕ್ಷತ್ರಿಯಕುಲದವನು; ಮನುಷ್ಯಮಾತ್ರನು.' ಎಂದು ಸ್ವೇಚ್ಛೆಯಾಗಿ ನಾನು ಹೇಳಿದುದಾವುದುಂಟೋ, ನನ್ನ ಆ ದೌರಾತ್ಮ್ಯವನ್ನು ನೀನು ಕ್ಷಮಿಸಬೇಕು. ನಿನಗೆ ಪದೇಪದೇ ನಮಸ್ಕಾರ ಮಾಡುವೆನು ॥೪೦॥

ಹೇ ಮಧುಸೂದನ! ರಾಮ! ನನ್ನ ವಿಷಯದಲ್ಲಿ ನಿನಗೆ ವಿಶೇಷವಾಗಿ ಅನುಗ್ರಹವಿರುವ ಪಕ್ಷದಲ್ಲಿ, ನನಗೆ ಸರ್ವದಾ ನಿನ್ನ ಭಕ್ತರ ಸಹವಾಸವೂ ನಿನ್ನ ಪಾದದಲ್ಲಿ ಭಕ್ತಿಯೂ ಇವೆರಡು ಮಾತ್ರವೇ ಇರಲೆಂದು ಅನುಗ್ರಹಿಸುವನಾಗು ॥೪೧॥

ಎಲೈ ಕಾಕುತ್ಸ್ಥನೆ! ಮೂರು ಲೋಕಕ್ಕೂ ಒಡೆಯನಾದ ನೀನು ನನ್ನನ್ನು ಈಗ ಭಂಗ ಪಡಿಸಿದೆಯಲ್ಲವೆ! ಇದು ನನಗೆ ಸ್ವಲ್ಪವೂ ಲಜ್ಜಾವಹವಲ್ಲ ॥೪೨॥

ಹೇ ರಾಮ! 'ನನ್ನ ಬಾಣಕ್ಕೆ ಗುರಿಯಾವುದು?' ಎಂದು ಕೇಳಿದೆಯಲ್ಲವೆ! ನಾನು ತಪಸ್ಸಿನಿಂದ ಸಂಪಾದಿಸಿರುವ ಸಮಸ್ತ ಪುಣ್ಯಲೋಕವನ್ನೂ ನಿನ್ನ ತೇಜಸ್ಸಿಗೆ ಗುರಿಯಾಗಿಮಾಡಿ, ನಿನ್ನ ಅಮೋಘವಾದ ಬಾಣವನ್ನು ಬೇಗನೆ ಬಿಟ್ಟುಬಿಡು. ನೀನು ಅದನ್ನು ಬಿಟ್ಟಬಳಿಕ, ನಾನು ಮಹೇಂದ್ರವೆಂಬ ಪರ್ವತಕ್ಕೆ ತಪಸ್ಸಿಗಾಗಿ ಹೊರಟುಹೋಗುವೆನು. (ಎಂದು ಪರಶುರಾಮನು ಹೇಳಿದನು ॥೪೩-೪೪॥

ಇತ್ಯುಕ್ತೋ ಭೃಗುರಾಮೇಣ ರಾಘವಃ ಕರುಣಾನಿಧಿಃ ।
ಶರಂ ತ್ಯಕ್ತ್ವಾತಿದುರ್ಧರ್ಷಂ ಭೃಗುರಾಮಂ ವ್ಯಸರ್ಜಯತ್ ॥೫೫॥
ಸ ಹತಾ೯ ದೃಶ್ಯ ರಾಮೇಣ ಸ್ವಾ೯ ಲೋಕಾಂಸ್ತಪಸಾರ್ಜಿತಾ೯ ।
ಜಾಮದಗ್ನ್ಯೋ ಜಗಾಮಾಶು ಮಹೇಂದ್ರಂ ಪರ್ವತೋತ್ತಮಮ್ ॥೫೬॥

ಇತಿ ಶ್ರೀ ಬಾಲಕಾಣ್ಡೇ ಪರಶುರಾಮಪ್ರೇಷಣಾದಿ ಕಥನಂ
ನಾಮ ಚತುಸ್ತ್ರಿಂಶಃ ಸರ್ಗಃ.

ಎಲೌ! ಪಾರ್ವತಿ' ಹೀಗೆಂದು ಪರಶುರಾಮನಿಂದ ಪ್ರಾರ್ಥಿಸಲ್ಪಟ್ಟ ಕರುಣಾನಿಧಿಯಾದ ಶ್ರೀರಾಮನು, ಅತಿ ದುರ್ಧರ್ಷವಾದ ಆ ಬಾಣವನ್ನು ಬಿಟ್ಟುಬಿಟ್ಟು, ಪರಶುರಾಮನನ್ನು ಕಳುಹಿಸಿಕೊಟ್ಟನು ॥೫೫॥

ಆ ಪರಶುರಾಮನು, ತಪಸ್ಸಿನಿಂದ ಸಂಪಾದಿಸಲ್ಪಟ್ಟಿದ್ದ ಪುಣ್ಯಲೋಕಗಳೆಲ್ಲವೂ ರಾಮನಿಂದ ಹತವಾದುದನ್ನು ನೋಡಿ, ಬೇಗನೆ ಮಹೇಂದ್ರಪರ್ವತವನ್ನು ಕುರಿತು ಹೊರಟುಹೋದನು॥೫೬

ಇದು ಬಾಲಕಾಂಡದಲ್ಲಿ ಪರಶುರಾಮಪ್ರೇಷಣಾದಿಕಥನವೆಂಬ
ಮುವ್ವತ್ತ್ನಾಲ್ಕನೆಯ ಸರ್ಗವ.

ಅಥ ಶ್ರೀ ಬಾಲಕಾಣ್ಡೇ ಪಞ್ಚತ್ರಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ತತೋ ವಿತಿಮಿರಾಃ ಸರ್ವಾಃ ದಿಶಶ್ಚೋಪದಿಶಶ್ಚ ತಾಃ ।
ಸುರಾಃ ಸರ್ಷಿಗಣಾರಾಮಂ ಪ್ರಶಶಂಸುರುದಾಯುಧವತ್ ॥೧॥
ವರುಣಾಯ ಧನುರ್ದತ್ವಾ ರಾಮಃ ಕಾರ್ಯಂ ವಿಚಿನ್ತ್ಯ ಚ ।
ತವಾಮನ್ತ್ರ್ಯ ಪ್ರಸನ್ನಾತ್ಮಾ ಪುನರ್ದೇಯಮಿತಿ ಪ್ರಭುಃ ॥೨॥
ಸ್ವಬನ್ಧುಭಿಃ ಪರಿವೃತಃ ಸ್ವಸೈನ್ಯಗಣಸಂವೃತಃ ।
ವಸಿಷ್ಠಾದಿಮುನೀನ್ ಸರ್ವಾನ್ ಪುರಸ್ಕೃತ್ಯ ಪುರಂ ಯಯೌ ॥೩॥

ಶ್ರೀ ಪಾರ್ವತ್ಯುವಾಚ.

ಪುರಾ ಸರ್ವಾವತಾರೇಷು ವಿಷ್ಣೋಂ ಪ್ರಾಪ್ತೇಷು ಕಾರಣಮ್ ।

ಬಾಲಕಾಂಡದಲ್ಲಿ ಮುವ್ವತ್ತೈದ್ನನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತೀದೇವಿಯನ್ನು ಕುರಿತು ಹೇಳಲುಪಕ್ರಮಿಸಿದನು:—

ಎಲೌ ಪಾರ್ವತಿ! ಹೀಗೆ ಪರಶುರಾಮನು ಹೊರಟುಹೋದಬಳಿಕ, ಸಮಸ್ತದಿಕ್ಕುಗಳೂ ವಿದಿಕ್ಕುಗಳೂ ಅಂಧಕಾರರಹಿತಗಳಾಗಿ ಪ್ರಕಾಶಿಸಿದುವು; ಸಮಸ್ತರಾದ ದೇವತೆಗಳೂ, ಋಷಿ ಬೃಂದಪರಿವೃತರಾಗಿ, ಉದ್ಯತಾಯುಧನಾದ ಶ್ರೀರಾಮನನ್ನು ಸ್ತುತಿಸಿದರು ॥೧॥

ಸರ್ವಲೋಕಪ್ರಭುವಾದ ಶ್ರೀರಾಮನು, ಪ್ರಸನ್ನಮನಸ್ಕನಾಗಿ, ಮುಂದಿನ ಕಾರ್ಯವನ್ನು ಮನದಲ್ಲಿ ಹೋಚಿಸಿಕೊಂಡು, ತನ್ನ ಕೈಲಿದ್ದ ವೈಷ್ಣವಧನುಸ್ಸನ್ನು ವರುಣನಕೈಲಿ ಕೊಟ್ಟು, ನಾನು ಕೇಳಿದಾಗ ಇದನ್ನು ಕೊಡಬೇಕೆಂದು ಅವನಿಗೆ ತಿಳುಹಿಸಿ, ತನ್ನ ಬಂಧುಗಳಿಂದಲೂ ಸೈನ್ಯದಿಂದಲೂ ಪರಿವೃತನಾಗಿ, ವಸಿಷ್ಠಾದಿ ಸಮಸ್ತಮುನಿಗಳನ್ನೂ ಮುಂದಿಟ್ಟುಕೊಂಡು ಅಯೋಧ್ಯಾಭಿಮುಖನಾಗಿ ಹೊರಟನು ॥೨-೩॥

ಶ್ರೀ ಪಾರ್ವತಿಯು ಪ್ರಶ್ನೆಮಾಡುವಳು:—

ಹೇ ಪರಮೇಶ್ವರ! ಈಗ ನನಗೊಂದು ಸಂಶಯವುಂಟಾಗಿರುವುದು. ಪೂರ್ವದಲ್ಲಿ ಮತ್ಸ್ಯಾದ್ಯನೇಕಾವತಾರಗಳಾದುವಲ್ಲವೆ! ಆ ಸಮಸ್ತವಾದ ಅವತಾರಗಳಲ್ಲಿಯೂ, ವಿಷ್ಣುವಿನ ಅಂಶವು ಪುನಃ ಕಾರಣಮೂರ್ತಿಯಾದ ವಿಷ್ಣುವನ್ನೇ ಸೇರಿತೆಂದು ಸ್ಪಷ್ಟವಾಗಿರುವುದಲ್ಲವೆ! ಹೀಗಿರುವಾಗ,

ರಾಮತೇಜಸ್ತು ಕಾಕುತ್ಸ್ಥಂ ಕಿಮರ್ಥಮಗಮಚ್ಛಿವ ॥೪॥

ಶ್ರೀ ಶಿವಉವಾಚ.

ಉಮೇ ಸರ್ವಾವತಾರಾಹಿ ಸಮ್ಭೂತಾಅಂಶತೋ ಹರೇಃ ।
ರಾಮಸ್ತು ವಿಷ್ಣುಃ ಸಮ್ಪೂರ್ಣಃ ಇತ್ಯುಕ್ತಂ ಖಲು ತೇ ಮಯಾ ॥೫॥
ತಸ್ಮಾತ್ ಸ್ವಪೂರ್ಣರೂಪತ್ವಂ ಲೋಕೇ ದರ್ಶಯಿತುಂ ಪ್ರಭುಃ ।
ರಾಮೋ ರಾಮಗತಂ ತೇಜೋ ಹೃತವಾನಿತಿ ನಿಶ್ಚಿತಮ್ ॥೬॥

ಋಷಯ ಊಚುಃ.

ಜಾಮದಗ್ನ್ಯೇ ಗತೇ ರಾಮೇ ಹೃತ್ವಾ ತತ್ತೇಜಉತ್ತಮಮ್ ।
ತತಃ ಕಿಮಕರೋದ್ರಾಮೋ ವದ ಸೂತ ಮಹಾಮತೇ ॥೭॥

ಶ್ರೀ ಸೂತ ಉವಾಚ.

ಅಭಿವಾದ್ಯ ತತೋ ರಾಮೋ ವಸಿಷ್ಠಪ್ರಮುಖಾನ್ ಋಷೀನ್ ।
ಪಿತರಂ ವಿಹ್ವಲಂ ದೃಷ್ಟ್ವಾ ಪ್ರೋವಾಚ ರಘುನನ್ದನಃ ॥೮॥

ಪರಶುರಾಮನಲ್ಲಿದ್ದ ವೈಷ್ಣವಾಂಶವೂ ವಿಷ್ಣುವನ್ನೇ ಸೇರಬೇಕಾದುದು ನ್ಯಾಯವಾಗಿರುವಲ್ಲಿ, ಅದು ಬಿಟ್ಟು ಶ್ರೀರಾಮನಲ್ಲಿ ಸೇರುವುದಕ್ಕೆ ಕಾರಣವೇನು? ॥೪॥

ಇದಕ್ಕೆ ಶ್ರೀ ಪರಮೇಶ್ವರನು ಉತ್ತರ ಹೇಳುವನು:—

ಎಲೌ ಪಾರ್ವತಿ! ನೀನು ಕೇಳಿದ ಪ್ರಶ್ನೆಯು ಯುಕ್ತವೇ ಆಹುದು. ಆದಕ್ಕೆ ತಕ್ಕ ಸಮಾಧಾನವನ್ನೂ ಕೇಳುವಳಾಗು. ನೀನು ಹೇಳಿದ ಮತ್ಸ್ಯಾದ್ಯವತಾರಗಳೆಲ್ಲವೂ, ಶ್ರೀಹರಿಯು ಅಂಶದಿಂದ ಉದ್ಭವಿಸಿದುವುಗಳು; ಶ್ರೀರಾಮನಾದರೋ, ಸಂಪೂರ್ಣವಾದ ವಿಷ್ಣುವೇಯೆ. ಈ ವಿಷಯವನ್ನು ನಾನು ನಿನಗೆ ಹಿಂದೆಯೇ ಹೇಳಿರುವೆನಲ್ಲವೆ! ॥೫॥

ಹೀಗಿರುವುದರಿಂದ, ಸರ್ವಲೋಕೇಶ್ವರನಾದ ಶ್ರೀರಾಮನು, ತನ್ನ ಪೂರ್ಣರೂಪತ್ವವನ್ನು ಪ್ರಪಂಚದಲ್ಲಿ ಪ್ರಕಟಪಡಿಸುವುದಕ್ಕೋಸ್ಕರ, ಪರಶುರಾಮನಲ್ಲಿದ್ದ ತನ್ನ ತೇಜಸ್ಸನ್ನು ತೆಗೆದುಕೊಂಡುಬಿಟ್ಟನೆಂಬುದೇ ನಿಶ್ಚಿತವಾದ ವಿಷಯವು. (ಎಂದು ಶ್ರೀ ಪರಮೇಶ್ವರನು ಹೇಳಿದನು) ॥೬॥

ಶೌನಕಾದಿಮುನಿಗಳು ಸೂತಪೌರಾಣಿಕರನ್ನು ಕುರಿತು ಪ್ರಶ್ನೆಮಾಡುವರು:—

ಸ್ವಾಮಿ! ಸೂತರೆ! ಜಾಮದಗ್ನ್ಯರಾಮನು ಮಹೇಂದ್ರಪರ್ವತಕ್ಕೆ ಹೊರಟುಹೋಗಲಾಗಿ, ಅವನಲ್ಲಿದ್ದ ದಿವ್ಯತೇಜಸ್ಸನ್ನು ತೆಗೆದುಕೊಂಡ ಶ್ರೀರಾಮನು, ಆಮೇಲೆ ಏನುಮಾಡಿದನು? ಅನುಗ್ರಹಿಸಿ ಅಪ್ಪಣೆಯಾಗಬೇಕು ॥೭॥

ಶ್ರೀ ಸೂತರು ಹೇಳುವರು:—

ಎಲೈ ಶೌನಕಾದಿಮುನಿಗಳಿರಾ! ಆ ಪರಶುರಾಮನು ಹೊರಟುಹೋದ ಬಳಿಕ, ರಘುಕುಲ ಶ್ರೇಷ್ಠನಾದ ಶ್ರೀರಾಮನು, ವಸಿಷ್ಠ ಮೊದಲಾದ ಮಹರ್ಷಿಗಳಿಗೆ ನಮಸ್ಕಾರಮಾಡಿ ಬಳು

ಜಾಮದಗ್ನ್ಯೇ ಗತೋ ರಾಮಃ ಪ್ರಯಾತು ಚತುರಙ್ಗಿಣೀ ।
ಅಯೋಧ್ಯಾಭಿಮುಖೀ ಸೇನಾ ತ್ವಯಾ ನಾಥೇನ ಪಾಲಿತಾ ॥೯॥
ಸನ್ದಿಶಸ್ವ ಮಹಾರಾಜ ಸೇನಾಂ ತ್ವಚ್ಚಾಸನೇ ಸ್ಥಿತಾಮ್ ॥೧೦॥
ರಾಮಸ್ಯ ವಚನಂ ಶ್ರುತ್ವಾ ರಾಜಾ ದಶರಥಸ್ತದಾ ।
ಚೋದಯಾಮಾಸ ತಾಂ ಸೇನಾಂ ಜಗಾಮಾಶು ತತಃ ಪುರೀಮ್ ॥೧೧॥
ಪತಾಕಾಧ್ವಜಿನೀಂ ರಮ್ಯಾಂ ತೂರ್ಯೋದ್ಘುಷ್ಟನಿನಾದಿತಾಮ್ ।
ಸಿಕ್ತರಾಜಪಥಾಂ ಚೈವ ಪ್ರಕೀರ್ಣಕುಸುಮೋತ್ಕರಾಮ್ ॥೧೨॥
ರಾಜಪ್ರವೇಶಸುಮುಖೈಃ ಪೌರೈರ್ಮಙ್ಗಳವಾದಿಭಿಃ ।
ಸಮ್ಪೂರ್ಣಾಂ ಪ್ರಾವಿಶದ್ರಾಜಾ ಜನೌಘೈಃ ಸಮುಪಬೃಂಹಿತಾಮ್ ॥೧೩॥
ಪೌರೈಃ ಪ್ರತ್ಯುದ್ಗತೋ ದೂರಂ ದ್ವಿಜೈಶ್ಚ ಪುರವಾಸಿಭಿಃ ।
ಪುತ್ರೈರನುಗತಃ ಶ್ರೀಮಾ ಶ್ರೀಮದ್ಭಿಶ್ಚ ಮಹಾಯಶಾಃ ॥೧೪॥

ಕಳವಳಪಡುತಿರುವ ತಂದೆಯನ್ನು ನೋಡಿ, ಅವನನ್ನು ಕುರಿತು 'ಮಹಾರಾಜ! ತಾತ! ಜಮದಗ್ನಿಪುತ್ರನಾದ ಪರಶುರಾಮನು ಹೊರಟುಹೋದನು; ನಮ್ಮ ಚತುರಂಗಸೈನ್ಯವು, ಒಡೆಯನಾದ ನಿನ್ನಿಂದ ಪರಿಪಾಲಿಸಲ್ಪಡುತ, ಅಯೋಧ್ಯಾನಗರಕ್ಕೆ ಅಭಿಮುಖವಾಗಿ ಹೊರಡಲಿ. ಹೇ ಪ್ರಭೋ! ತಮ್ಮ ಆಜ್ಞಾಪರವಶವಾಗಿರುವ ಈ ಸೈನ್ಯಕ್ಕೆ ಆಜ್ಞೆಯಾಗಬೇಕು' ಎಂದು ವಿಜ್ಞಾಪಿಸಿದನು ॥೪-೧೦॥

ಹೀಗೆ ವಿಜ್ಞಾಪಿಸುತಿರುವ ರಾಮನ ವಚನವನ್ನು ಕೇಳಿ, ದಶರಥಮಹಾರಾಜನು, ತನ್ನ ಸೈನ್ಯವೆಲ್ಲ ಹೊರಡುವಂತೆ ಆಜ್ಞೆಯಿತ್ತನು; ಆ ಬಳಿಕ, ಸ್ವಲ್ಪಕಾಲದೊಳಗಾಗಿ ತನ್ನ ಪಟ್ಟಣವನ್ನೂ ತಲಪಿದನು ॥೧೧॥

ಆಗ, ಆ ಅಯೋಧ್ಯಾನಗರಿಯಲ್ಲಿ, ಪತಾಕೆಗಳನ್ನೂ ಧ್ವಜಗಳನ್ನೂ ವಿಶೇಷವಾಗಿ ಕಟ್ಟ ಅಲಂಕರಿಸಿದ್ದರು; ಸಮಸ್ತ ಮಂಗಳವಾದ್ಯಗಳೂ ಮೊಳಗುತಿದ್ದುವು; ರಾಜಮಾರ್ಗಗಳಿಗೆಲ್ಲ ನೀರುಚಿಮುಕಿಸಿ, ಹೂವುಹರಡಿದ್ದರು. ದೊರೆಯು ಬರುವನೆಂಬ ಹರ್ಷದಿಂದ ವಿಕಸಿತಮುಖರಾದ ಪಟ್ಟಣಿಗರು, ಶುಭವಚನಗಳನ್ನು ಹೇಳುತ, ಎಲ್ಲೆಲ್ಲಿಯೂ ತುಂಬಿದ್ದರು. ರಾಜನನ್ನೂ ವಧೂಸಹಿತರಾದ ರಾಜಪುತ್ರರನ್ನೂ ನೋಡಬೇಕೆಂಬ ಕುತೂಹಲದಿಂದ, ಹೊರಗಿನ ಜನರೂ ಬಂದುಸೇರಿ, ಪಟ್ಟಣಕ್ಕೆ ವಿಶೇಷವಾಗಿ ಅಲಂಕಾರವುಂಟುಮಾಡುತಿದ್ದರು. ಇಂತಹ ಮಂಗಳ ಸಮನ್ವಿತವಾದ ಅಯೋಧ್ಯಾನಗರವನ್ನು, ದಶರಥನು ಸರ್ವರೊಡನೆಯೂ ಪ್ರವೇಶಿಸಿದನು ॥೧೨-೧೪॥

ಆ ಸಮಯದಲ್ಲಿ, ಶ್ರೀಮಂತನೂ ಮಹಾಕೀರ್ತಿವಂತನೂ ಆದ ದಶರಥ ಮಹಾರಾಜನು, ಮುಖ್ಯರಾದ ಪಟ್ಟಣಿಗರಿಂದಲೂ ಅಲ್ಲಿರುವ ಬ್ರಾಹ್ಮಣೋತ್ತಮರಿಂದಲೂ ಬಹುದೂರದಲ್ಲಿ

ಪ್ರವಿವೇಶ ಗೃಹಂ ರಾಜಾ ಹಿಮವತ್ಸದೃಶಂ ಪುನಃ ॥೧೫॥
ತತಃ ಸೀತಾಂ ಮಹಾಭಾಗಾಂ ಊರ್ಮಿಳಾಂ ಚ ಯಶಸ್ವಿನೀಮ್ ।
ಕುಶಧ್ವಜಸುತೇ ಚೋಭೇ ಜಗೃಹುರ್ನೃಪಪತ್ನಯಃ ॥೧೬॥
ಅಭಿವಾದ್ಯಾಭಿವಾದ್ಯಾಂಶ್ಚ ಸರ್ವಾ ರಾಜಸುತಾಸ್ತದಾ ।
ಸ್ವಂಸ್ವಂ ಗೃಹಂ ಸಮಾಸಾದ್ಯ ಕುಬೇರಭವನೋಪಮಮ್ ॥೧೭॥
ಗೋಭಿರ್ಧನೈಶ್ಚ ಧಾನ್ಯೈಶ್ಚ ತರ್ಪಯಿತ್ವಾ ದ್ವಿಜೋತ್ತಮಾನ್ ।
ರೇಮಿರೇ ಮುದಿತಾಃ ಕಾಲೇ ಭರ್ತೃಭಿಃ ಸಹಿತಾರಹಃ ॥೧೮॥
ಕಸ್ಯಚಿತ್ತ್ವಥ ಕಾಲಸ್ಯ ರಾಜಾ ದಶರಥಃ ಸುತಮ್ ।
ಭರತಂ ಕೈಕಯೀಪುತ್ರಂ ಅಬ್ರವೀದ್ರಘುನಂದನಃ ॥೧೯॥
ಅಯಂ ಕೇಕಯರಾಜಸ್ಯ ಪುತ್ರೋ ವಸತಿ ಪುತ್ರಕ ।
ತ್ವಾಂ ನೇತುಮಾಗತೋ ವೀರ ಯುಧಾಜಿನ್ಮಾತುಳಸ್ತವ ॥೨೦॥
ಪ್ರಾರ್ಥಿತಸ್ತೇನ ಸರ್ವಜ್ಞ ಮಿಥಿಲಾಯಾಮಹಂ ತದಾ ।
ಋಷಿಮಧ್ಯೇ ತು ತಸ್ಯ ತ್ವಂ ಪ್ರೀತಿಂ ಕರ್ತುಮಿಹಾರ್ಹಸಿ ॥೨೧॥

ಎದುರುಗೊಳ್ಳಲ್ಪಟ್ಟವನಾಗಿ, ಮಹಾಕಾಂತಿಮಂತರಾದ ಪುತ್ರರಿಂದ ಹಿಂಬಾಲಿಸಲ್ಪಡುತ, ಹಿಮವತ್ಪರ್ವತಸದೃಶವಾದ ತನ್ನ ಅರಮನೆಯನ್ನು ಪ್ರವೇಶಿಸಿದನು ॥೧೫-೧೫॥

ಆ ಬಳಿಕ, ಅಂತಃಪುರಕ್ಕೆ ಬಂದ ಸೀತೆಯನ್ನೂ, ಊರ್ಮಿಳೆಯನ್ನೂ, ಮಾಂಡವೀಶ್ರುತಕೀರ್ತಿಯರನ್ನೂ ಕೂಡ, ಆ ದಶರಥನ ಪತ್ನಿಯರೆಲ್ಲರೂ ಒಹಳವಾಗಿ ಆದರಿಸಿದರು ॥೧೬॥

ಆಗ, ಆ ಸಮಸ್ತರಾದ ರಾಜಪುತ್ರಿಯರೂ, ನಮಸ್ಕರಿಸಬೇಕಾದವರನ್ನೆಲ್ಲ ನಮಸ್ಕರಿಸಿ, ಕುಬೇರಭವನಸದೃಶವಾಗಿರುವ ತಂತಮ್ಮ ಮನೆಗಳನ್ನು ಸೇರಿ, ಗೋವು ಧನ ಧಾನ್ಯಗಳಿಂದ ಬ್ರಾಹ್ಮಣೋತ್ತಮರನ್ನು ತೃಪ್ತಿಪಡಿಸಿ, ಅಯಾಕಾಲಗಳಲ್ಲಿ, ಏಕಾಂತವಾಗಿ ತಂತಮ್ಮ ಪತಿಯೊಡಗೂಡಿ ವಿಹರಿಸಿಕೊಂಡಿದ್ದರು ॥೧೭-೧೯॥

ಆ ಬಳಿಕ, ಕೆಲವ್ಯಕಾಲ ಕಳೆದಮೇಲೆ, ದಶರಥಮಹಾರಾಜನು, ಕೈಕಯೀಸುತನಾದ ಭರತನನ್ನು ಕುರಿತು 'ವತ್ಸ! ಭರತ! ಇದೋ, ನಿನ್ನನ್ನು ಕರೆದುಕೊಂಡು ಹೋಗಬೇಕೆಂದು ಬಂದಿರುವ ನಿನ್ನ ಸೋದರಮಾವನಾದ ಈ ಯುಧಾಜಿತುವು ನಮ್ಮ ಅರಮನೆಯಲ್ಲಿ ವಾಸಮಾಡಿಕೊಂಡಿರುವನು. ಇವನು, ಮಿಥಿಲಾಪಟ್ಟಣದಲ್ಲಿ ಮದುವೆಗೆ ಹೋಗಿದ್ದಾಗಲೇ ಋಷಿಮಧ್ಯದಲ್ಲಿ ನನ್ನನ್ನು ಪ್ರಾರ್ಥಿಸಿದನು. ಆಗ ನಾನು ನಿನ್ನನ್ನು ಕಳುಹಿಸಿಕೊಡುತ್ತೇನೆಂದು ವಾಗ್ದಾನಮಾಡಿರುವೆನು. ಆದುಕಾರಣ, ಈಗ ನೀನು ಅವನೊಡನೆ ಹೋಗಿ ಅವನ ಆಶೆಯನ್ನು ಪೂರ್ತಿಗೊಳಿಸಬೇಕಾಗಿರುವುದು' ಎಂದು ಹೇಳಿದನು ॥೧೯-೨೧॥

ಶ್ರುತ್ವಾ ದಶರಥಸ್ಯೈತತ್ ಭರತಃ ಪಿತರಂ ಗುರೂ ।
ಪ್ರಣಮ್ಯ ರಾಮಂ ಮಾತ್ರೇಶ್ಚ ಶತ್ರುಘ್ನಸಹಿತೋ ಯಯೌ ॥೨೦॥
ಗತೇ ತು ಭರತೇ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ಪಿತರಂ ದೇವಸಙ್ಕಾಶಂ ತೋಷಯಾಮಾಸತುರ್ಗುಣೈಃ ॥೨೧॥
ಪ್ರಾತಃಪ್ರಾತಃ ಸಮುತ್ಥಾಯ ಕರ್ಮ ಕೃತ್ವಾ ಯಥಾವಿಧಿ ।
ಪ್ರತ್ಯಹಂ ಶತಸಾಹಸ್ರಂ ಗವಾಂ ದಾನಮಕಲ್ಪಯತ್ ॥೨೨॥
ಬ್ರಾಹ್ಮಣಾನಾಂ ವಿಶಿಷ್ಟಾನಾಂ ಪ್ರತ್ಯಹಂ ಕೋಟಿಸಙ್ಖ್ಯಯಾ ।
ಸುವರ್ಣಮದದಾದ್ರಾಮೋ ಬ್ರಹ್ಮಾರ್ಪಣಧಿಯಾದರಾತ್ ॥೨೩॥
ಸಾಕೇತೇ ಲೋಕನಾಥಃ ಪ್ರಥಿತಗುಣಗಣೋ ಲೋಕಸಙ್ಗೀತಕೀರ್ತಿಃ
ಶ್ರೀರಾಮಃ ಸೀತಯಾಸ್ತೇಽಖಿಲಮುನಿನಿಕರಾನನ್ದಸನ್ದೋಹಮೂರ್ತಿಃ ।

ಹೀಗೆ ಹೇಳಿದ ದಶರಥನ ವಚನವನ್ನು ಕೇಳಿ, ಆ ಭರತನು, ತಂದೆಯನ್ನೂ ಗುರುಗಳನ್ನೂ ರಾಮನನ್ನೂ ತಾಯಿಯರನ್ನೂ ನಮಸ್ಕರಿಸಿ, ಶತ್ರುಘ್ನನೊಡನೆ ಮಾತುಳಗೃಹಕ್ಕೆ ಪ್ರಯಾಣ ಮಾಡಿದನು ॥೨೨॥

ಭರತನು ಸೋದರಮಾವನ ಮನೆಗೆ ಹೊರಟುಹೋದ ಬಳಿಕ, ರಾಮನೂ ಮಹಾಬಲನಾದ ಲಕ್ಷ್ಮಣನೂ, ತಮ್ಮ ಸದ್ಗುಣಗಳಿಂದ ತಂದೆಯನ್ನು ವಿಶೇಷವಾಗಿ ಆನಂದಪಡಿಸುತಿದ್ದರು ॥೨೩॥

ಶ್ರೀರಾಮನು, ಪ್ರತಿದಿನವೂ ಪ್ರಾತಃಕಾಲದಲ್ಲಿ ಎದ್ದೊಡನೆಯೇ, ಯಥಾವಿಧಿಯಾಗಿ ತನ್ನ ನಿತ್ಯಕರ್ಮಗಳನ್ನೆಲ್ಲ ಮಾಡಿಕೊಂಡು, ನೂರುಸಾವಿರ ಗೋವುಗಳನ್ನು ದಾನವಾಡುತಿದ್ದನು ॥೨೪॥

ಮತ್ತು, ಪ್ರತಿದಿನವೂ, ಗುಣಾಢ್ಯರಾದ ಬ್ರಾಹ್ಮಣರಿಗೆ, ಕೋಟಿಸಂಖ್ಯಾಕವಾದ ಸುವರ್ಣವನ್ನು, ಬ್ರಹ್ಮಾರ್ಪಣಬುದ್ಧಿಯಿಂದ, ಅತ್ಯಾದರಪೂರ್ವಕವಾಗಿ ದಾನವಾಡುತಿದ್ದನು ॥೨೫॥

ಇಂತಹ ವಿಖ್ಯಾತವಾದ ಸದ್ಗುಣಗಳಿಂದ ಪರಿಪೂರ್ಣನಾಗಿಯೂ, ಸರ್ವಲೋಕೈಕನಾಥನಾಗಿಯೂ, ಸಮಸ್ತರಿಂದಲೂ ಹೊಗಳಲ್ಪಡುವ ಕೀರ್ತಿಯುಳ್ಳವನಾಗಿಯೂ, ಸಮಸ್ತ ಮುನಿಗಳಿಗೂ ಆನಂದಸಂದೋಹಪ್ರದವಾದ ದಿವ್ಯಮಂಗಳವಿಗ್ರಹವುಳ್ಳವನಾಗಿಯೂ, ನಿಶ್ಶೈಶ್ವರ್ಯನಾಗಿಯೂ, ನಿರ್ವಿಕಾರನಾಗಿಯೂ, ನಿರವಧಿವಿಭವನಾಗಿಯೂ ನಿತ್ಯವೂ ಮಾಯೆಯನ್ನು ಬಿಟ್ಟುರ ತಕ್ಕವನಾಗಿಯೂ, ಮಾನವಕಾರ್ಯಗಳನ್ನು ಅನುಸರಿಸಕ್ಕವನಾಗಿಯೂ ಇರುವ, ಅಖಿಲೇಶ್ವ

ನಿತ್ಯಶ್ರೀರ್ನಿರ್ವಿಕಾರೋ ನಿರವಧಿವಿಭವೋ ನಿತ್ಯಮಾಯಾನಿರಾಸೋ
ಮಾಯಾಕಾರ್ಯಾನುಸಾರೀ ಮನುಜಇವ ಸದಾ ಭಾತಿ ದೇವೋಽಖಿಲೇಶಃ ॥೬೬॥

ಇತಿ ಶ್ರೀನಾನಾಪುರಾಣಾಗಮಾದಿನಿಷ್ಕೃತತತ್ತ್ವಸಙ್ಗ್ರಹಭೂತೇ
ಶ್ರೀ ತತ್ತ್ವಸಙ್ಗ್ರಹರಾಮಾಯಣೇ ಬಾಲಕಾಣ್ಡೇ
ಅಯೋಧ್ಯಾಪ್ರವೇಶಾದಿಕಥನಂ ನಾಮ
ಪಞ್ಚತ್ರಿಂಶಃ ಸರ್ಗಃ

ಬಾಲಕಾಣ್ಡಃ ಸಮಾಪ್ತಃ.

ಓಮ್ ತತ್ ಸತ್.



ರನಾದ ಶ್ರೀರಾಮನು, ಆ ಅಯೋಧ್ಯಾಪಟ್ಟಣದಲ್ಲಿ, ಮನುಷ್ಯನಾಕೃತಿಯಂತೆ, ಸೀತಾಸಹಿತನಾಗಿ ಸರ್ವದಾ ವಿರಾಜಿಸುತಿದ್ದನು ॥೫೬॥

ಇದು ಶ್ರೀ ತತ್ವಸಂಗ್ರಹರಾಮಾಯಣದ ಬಾಲಕಾಂಡದೊಳಗೆ ಅಯೋಧ್ಯಾ
ಪ್ರವೇಶಾದಿಕಥನವೆಂಬ ಮುವ್ವತ್ತೈದನೆಯ ಸರ್ಗವು.

ಇಂತು ಶ್ರೀಮದಖಿಲಮಹೀಮಂಡಲಮಂಡನಾಯಮಾನ ಕರ್ಣಾಟಕಜನಪದಾಧೀಶ್ವರ
ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಜೆ ಸಿ. ಐಸ್. ಐ. ಯವರ
ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿವಿರಚಿತವಾದ
ತತ್ವಪ್ರಕಾಶವೆಂಬ
ಶ್ರೀ ತತ್ವಸಂಗ್ರಹರಾಮಾಯಣ ಟೀಕಿನೊಳಗೆ
ಬಾಲಕಾಂಡವು ಸಂಪೂರ್ಣವು.



॥ ಶ್ರೀಃ ॥

ಶ್ರೀ ತತ್ತ್ವಸಂಗ್ರಹ ರಾಮಾಯಣಂ

ಅಯೋಧ್ಯಾ ಕಾಂಡಂ.

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್
ಬಹದ್ದೂರ್ ಜಿ. ಸಿ. ಎಸ್. ಐ.
ಯುವರ ಅಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ
ಗುಂಡಶಾಸ್ತ್ರಿಕೃತ

ತತ್ತ್ವಪ್ರಕಾಶನಾಮಕ ಟೀಕಾಸಹಿತಂ

ಪರಿಧಾವಿ ಸಂ॥ ಆಷಾಢ ಶುಕ್ಲ ದ್ವಾದಶೀ.

೧೯೧೨

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್,
ಮೈಸೂರು.

ಶ್ರೀ.

ಶ್ರೀ ತತ್ವಸಂಗ್ರಹ ರಾಮಾಯಣಂ.

ಅಯೋಧ್ಯಾಕಾಂಡಂ.

ವಿಷಯಸೂಚಿಕೆ.

ಸರ್ಗ	ವಿಷಯ			ಪುಟ
೧	ಶ್ರೀರಾಮ ಗುಣಕಥನ	...	...	೧
೨	ಶ್ರೀರಾಮ ಪಟ್ಟಾಭಿಷೇಕ ಸನ್ನಹನ	...	...	೯
,,	ವಸಿಷ್ಠಕೃತ ರಾಮತತ್ವಕಥನ	...	...	೧೪
೩	ದೇವಕೃತ ರಾಮಾಭಿಷೇಕವಿಘ್ನ ಪರ್ಯಾಲೋಚನೆ	...	...	೧೭
,,	ಸೋಮಕಾಸುರ ಕಥಾಪ್ರಸ್ತಾವ	...	...	೨೦
೪	ದೇವತೆಗಳು ಬ್ರಹ್ಮದೇವನನ್ನು ಪ್ರಾರ್ಥಿಸುವಿಕೆ	...	...	೨೪
,,	ನಾರದರು ಶ್ರೀರಾಮನ ಸನ್ನಿಧಿಗೆ ಬರುವಿಕೆ	...	...	೨೭
೫	ನಾರದ ಸ್ತವರಾಜಕಥನ	...	...	೩೧
,,	ರಾಮಕೃತ ರಾವಣಾದಿ ವಧಪ್ರತಿಜ್ಞೆ	...	...	೩೯
೬	ದೇವತೆಗಳು ಸರಸ್ವತಿಯನ್ನು ಪ್ರೇರಿಸುವಿಕೆ	...	...	೪೦
,,	ಮಂಥರಾಕೃತ ರಾಮಾಭಿಷೇಕವಿಘ್ನ ಪರ್ಯಾಲೋಚನೆ	...		೪೧
,,	ಕೈಕೇಯಿಪ್ರಾರ್ಥನೆ	...	...	೪೬
೭	ಶ್ರೀರಾಮನು ದಶರಥನ ಅರಮನೆಗೆ ಬರುವಿಕೆ	...	...	೪೯
,,	ಕೈಕೇಯಿಪ್ರಾರ್ಥನೆ ಶ್ರೀರಾಮವನವಾಸನಿರ್ದೇಶ	...	...	೫೩
೮	ಕೌಸಲ್ಯಾಗೃಹಕ್ಕೆ ಶ್ರೀರಾಮನ ಆಗಮನ; ಕೌಸಲ್ಯಾವಾಕ್ಯ	...		೫೬
,,	ಲಕ್ಷ್ಮಣನಿಗೆ ಶ್ರೀರಾಮನು ಮಾಡಿದ ತತ್ತ್ವೋಪದೇಶ	...		೫೮
೯	ರಾಮಕೃತ ವನವಾಸಪ್ರತಿಜ್ಞೆ; ಅರಣ್ಯವಾಸ ಪ್ರಯೋಜನಕಥನ	...		೬೫
,,	ಸೀತೆಯು ತಾನೂ ಅರಣ್ಯಕ್ಕೆ ಹೊರಡಬೇಕೆಂದು ಪ್ರಾರ್ಥಿಸುವಿಕೆ	...		೬೮
೧೦	ಅರಣ್ಯವಾಸಾರ್ಥವಾಗಿ ಪ್ರಸ್ಥಾನ	...	...	೭೩
,,	ಪೌರವಾಕ್ಯನಿರೂಪಣ	...	...	೭೪
೧೧	ಸುಮಿತ್ರಾಕೃತ ಲಕ್ಷ್ಮಣಾದೇಶ	...	...	೭೯
,,	ಶ್ರೀರಾಮ ವನಗಮನ	...	...	೮೩
,,	ಶ್ರೀರಾಮಭಕ್ತ ಪ್ರದರ್ಶನ	...	...	೮೪
೧೨	ಸುಮಂತ್ರ ಪ್ರಾರ್ಥನೆ	...	...	೯೦
,,	ಸುಮಂತ್ರನಿಗೆ ಶ್ರೀರಾಮನು ಮಾಡಿದ ನವವಿಧ ಭಕ್ತಿಭೇದೋಪದೇಶ			೯೫
,,	,,	ತತ್ತ್ವೋಪದೇಶ		೧೦೦
೧೩	ಸುಮಂತ್ರನಿವರ್ತನ	...	...	೧೦೯
,,	ಗುಹಪ್ರಾರ್ಥನ	...	...	೧೧೦
,,	ಭಕ್ತಿಪ್ರಾಧಾನ್ಯ ಕಥನ	...	...	೧೧೪
,,	ಭರದ್ವಾಜ ದರ್ಶನ	...	...	೧೧೫

ಸರ್ಗ	ವಿಷಯ			ಪುಟ
೧೩	ಚಿತ್ರಕೂಟಗಮನ	...	...	೧೧೯
೧೪	ಸುಮಂತ್ರನಿವರ್ತನ	...	...	೧೨೦
,,	ಕೌಸಲ್ಯಾಶ್ವಾಸನ	...	...	೧೨೨
೧೫	ದಶರಥ ವಿಲಾಪ; ದಶರಥ ಸ್ವರ್ಗಪ್ರಾಪ್ತಿ	...	...	೧೨೬
,,	ಭರತ ಶಪಥವಾಕ್ಯ	...	...	೧೩೨
೧೬	ಭರತಸಮಾಶ್ವಾಸನ; ಭರತನಿಗೆ ವಸಿಷ್ಠರು ಮಾಡಿದ ತತ್ತ್ವೋಪದೇಶ			೧೩೫
,,	ದಶರಥ ಸಂಸ್ಕಾರಾದಿ ನಿರೂಪಣ	...	...	೧೩೭
,,	ಭರತಕೃತ ರಾಮಾಶ್ರಮ ಗಮನ	...	...	೧೩೯
,,	ಭರದ್ವಾಜಾತಿಥ್ಯ	...	...	೧೪೧
,,	ರಾಮಾಶ್ರಮ ದರ್ಶನ	...	...	೧೪೩
೧೭	ಶ್ರೀರಾಮಭರತಸಮಾಗಮ	...	...	೧೪೭
೧೮	ಭರತವಾಗ್ದರ್ಪನೆ	...	...	೧೪೮
,,	ಶ್ರೀರಾಮನು ಭರತನಿಗೆ ಮಾಡಿದ ತತ್ತ್ವೋಪದೇಶ		...	೧೫೦
೧೯	ಭರತಪ್ರತಿಜ್ಞೆ	...	...	೧೫೬
,,	ಶ್ರೀರಾಮನು ಭರತನಿಗೆ ಮಾಡಿದ ಭಕ್ತಿಮಾರ್ಗ ನಿರೂಪಣೆ		...	೧೬೧
೨೦	ಕಾಶೀಕ್ಷೇತ್ರ ಮಾಹಾತ್ಮ್ಯ ವರ್ಣನೆ	...	...	೧೬೬
,,	ತಾರಕೋಪದೇಶನಿರೂಪಣೆ	...	...	೧೭೪
೨೧	ಗಯಾಕ್ಷೇತ್ರಗಮನ	...	...	೧೭೭
,,	ರಾಮಗಯಾ ನಿರ್ಮಾಣ; ಗಯಾಶ್ರಾದ್ಧಾದಿ ನಿರೂಪಣ		...	೧೭೯
೨೨	ವಾಲ್ಮೀಕಿ ದರ್ಶನ	...	...	೧೮೫
,,	ವಾಲ್ಮೀಕಿಚರಿತ್ರ ನಿರೂಪಣಾರಂಭ	...	...	೧೯೦
,,	ಸಪ್ತರ್ಷಿ ಚೋರಸಂವಾದ	...	...	೧೯೩
೨೩	ಸಪ್ತರ್ಷಿಶಪಥಕಥನ	...	...	೨೦೩
,,	ಚೋರಭಾರ್ಯಾಪುತ್ರಾದಿ ವಾಕ್ಯಕಥನ	...	...	೨೦೩
೨೪	ಸಪ್ತರ್ಷಿಕೃತ ರಾಮಸ್ತುತಿ	...	...	೨೦೭
,,	ಸಪ್ತರ್ಷಿ ಚೋರಸಂವಾದ	...	...	೨೧೭
೨೫	ಚೋರೋಪದೇಶಾದಿಕಥನ	...	...	೨೨೫
೨೬	ಚೋರತಪಶ್ಚರ್ಯಾದಿ ನಿರೂಪಣೆ	...	...	೨೩೧
೨೭	ಚೋರತಪೋವಿಘ್ನಾಚರಣ ವರ್ಣನೆ	...	...	೨೩೧
೨೮	ಚೋರನ ಆಶ್ರಮಕ್ಕೆ ಸಪ್ತರ್ಷಿ ನಾರದಾದಿಗಳ ಆಗಮನ		...	೨೪೧
೨೯	ಬ್ರಹ್ಮಾದಿದೇವಾಗಮನ; ಚೋರವರಪ್ರದಾನ	...	...	೨೪೪
೩೦	ವಾಲ್ಮೀಕಿಕೃತ ರಾಮಸ್ತುತಿ	...	...	೨೫೬
೩೧	ಅತ್ರಿಮುನಿ ದರ್ಶನ	...	...	೨೬೪
,,	ಪಾತಿವ್ರತ್ಯಮಾಹಾತ್ಮ್ಯಕಥನ	...	...	೨೬೫
೩೨	ಪತಿವ್ರತೋಪಾಖ್ಯಾನ	...	...	೨೭೩

ಶ್ರೀ ತತ್ವಸಂಗ್ರಹ ರಾಮಾಯಣಂ.

ಅಯೋಧ್ಯಾಕಾಂಡ.

ಶುದ್ಧಾಶುದ್ಧ ಪತ್ರಿಕೆ.

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೧೫	೪	ಸಮ್ಬನ್ಧ	ಸಮ್ಬನ್ಧ
೧೪	೧೭	ಪಬಲ	ಪ್ರಬಲ
೩೪	೨೩	ರೂಪಮಾ	ರೂಪನೂ
೫೭	೨೪	ಲಕ್ಷಣನೂ	ಲಕ್ಷ್ಮಣನೂ
,,	೩೨	ಇಷ	ಇಷ್ಟ
೫೪	೨೧	ತಶ್ರು	ಶತ್ರು
೬೧	೨೦	ಬೆಳ್ಳಗಾಗುಗು	ಬೆಳ್ಳಗಾಗು
೬೭	೬	ಯತ್‌ರಾ	ಯತ್‌ಪುರಾ
೭೫	೩೧	ನಾವ	ನಾದ
೧೦೭	೧೯	ಸಿದ	ಸಿದ್ಧ
,,	೩೪	ಮಾತನ್ಮ	ಮಾತ್ಮನ
೧೧೬	೩೨	ಶಿಷ	ಶಿಷ್ಟ
೧೨೧	೩೩	ರಾಮಾ	ರಾಮ
೧೨೬	೨೫	ಸುತಲೂ	ಸುತಲೂ
೧೨೪	೧೯	ತಮ್ಮ	ತಮ್ಮ
,,	೨೦	ಲಕ್ಷ್ಮಣ	ಲಕ್ಷಣ
೧೩೦	೨೩	ಶ್ವರ	ಶ್ವರರ
೧೩೧	೩೩	ಸಿದ	ಸಿದ್ಧ
೧೩೨	೨೯	ದ್ವೀಶ	ದ್ವೇಶ
೧೪೪	೯	ಒಬನ	ಒಬ್ಬನ
೧೩೭	೧೯	ಬುದಿ	ಬುದ್ಧಿ
,,	೩೩	ಶತ್ರುಘ	ಶತ್ರುಘ್ನ
೧೫೪	೨೩	ಶ್ವೇತಶತ್ರ	ಶ್ವೇತಚ್ಛತ್ರ
೧೬೬	೨೭	ಸಳ	ಸ್ಥಳ
೧೫೪	೧	ಅಯೋ	ಅಹೋ
೧೭೩	೩೧	ಇಷ	ಇಷ್ಟ
೧೪೬	೩೧	ಕಣುಳ್ಳ	'ಕಣ್ಣುಳ್ಳ
೧೯೦	೪	ವೃತ್ತೀಹೀನೇ	ವೃತ್ತಿಹೀನೇ
,,	೧೪	ದುರ್ಭೀಧ್ಯೇ	ದುರ್ಭೀದ್ಯೆ

ಪುಟ	ಪಂಕ್ತಿ	ತಪ್ಪು	ಶುದ್ಧ
೧೯೨	೩೧	ಸುಪ್ರಸಿದ್ಧ	ಸುಪ್ರಸಿದ್ಧ
೨೦೦	೩೩	ವಿಶಯ	ನಿಶ್ಚಯ
೨೦೫	೧೭	ಅತ್ಯೀತ	ಅತ್ಯಂತ
೨೨೫	೨೪	ಕೃವಾಜಿನ	ಕೃವಾ ಜಿನ
೨೨೭	೨	ಕೈಚಿತ್	ಕ್ವಚಿತ್
೨೪೫	೨೨	ಸಸಮೇತ	ಸಮೇತ
೨೫೧	೨೧	ವಹೇೀದ್ರ	ಮಹೇಂದ್ರ
೨೫೬	೨೪	ವಿಶಾಮಿತ್ರ	ವಿಶ್ವಾಮಿತ್ರ
೨೫೭	೨೭	ಜೇದ	ಭೇದ
೨೬೩	೨೧	ವಿಶರೂಪ	ವಿಶ್ವರೂಪ
,,	೨೩	ಅನಾರ್ಥಿ	ಅನ್ನಾರ್ಥಿ

ಓಂ

ಶ್ರೀರಸ್ತು

ಶ್ರೀ ತತ್ತ್ವಸಂಗ್ರಹ ರಾಮಾಯಣಂ

ಅಯೋಧ್ಯಾಕಾಂಡಃ.

ಶ್ರೀರಾಮಚಂದ್ರಾಯ ಪರಮಾತ್ಮನೇ ನಮೋನಮಃ

ಶ್ರೀ ಶಿವಉವಾಚ.

ತತೋ ಬಹುತಿಥೇ ಕಾಲೇ ಗತೇ ಚ ರಘುನಂದನಃ ।
ರಾಜ್ಯಭಾರನಿಯೋಗಾರ್ಹಂ ಕರ್ಮ ಚಕ್ರೇ ಮಹಾಮತಿಃ ॥೧॥
ಸ ಹಿ ದೇವೈರುದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ ।
ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಃ ಸನಾತನಃ ॥೨॥
ಸ ಹಿ ರೂಪೋಪಪನ್ನಶ್ಚ ವೀರ್ಯವಾನನಸೂಯಕಃ ।

ಅಯೋಧ್ಯಾಕಾಂಡ

ಶ್ರೀ ಪರಮೇಶ್ವರನು ಮತ್ತೆ ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸಿದನು:—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಸುಖದಿಂದ ಬಹುಕಾಲವನ್ನು ಕಳೆದನಂತರ, ಮಹಾಮತಿಯಾದ ಶ್ರೀರಾಮನು, ರಾಜ್ಯಭಾರನಿಯೋಗಕ್ಕೆ ಯೋಗ್ಯವಾದ (ರಾಜ್ಯಕ್ಕೆ ಸಂಬಂಧಪಟ್ಟ) ಕೆಲಸವನ್ನೆಲ್ಲ ಮಾಡಲುಪಕ್ರಮಿಸಿದನು ॥೧॥

ಅವನು ಸಾಮಾನ್ಯಮನುಷ್ಯನಲ್ಲ; ಅಕ್ಷಯದುಃಖನಾದ ರಾವಣನ ಸಂಹಾರವನ್ನು ಅಪೇಕ್ಷಿಸಿದ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಶ್ರೀ ಮಹಾವಿಷ್ಣುವೇ, ಆ ರಾಮರೂಪದಲ್ಲಿ ಅವತರಿಸಿದ್ದನು ॥೨॥

ಅವನ ಗುಣಗಳನ್ನು ವರ್ಣಿಸುವುದು ಸಾಮಾನ್ಯವಾಗಿ ಸಾಧ್ಯವಲ್ಲ; ಅವನು ಮಹಾರೂಪ ಸಂಪನ್ನನು; ವೀರ್ಯಸಂಪನ್ನನು; ಅಸೂಯಾರಹಿತನು; ಸಮಸ್ತ ಸದ್ಗುಣಗಳಲ್ಲಿಯೂ ದಶ

ಭೂಮಾವನುಪಮಃ ಸೂನುಃ ಗುಣೈರ್ದಶರಥೋಪಮಃ ॥೩॥
ಸ ತು ನಿತ್ಯಂ ಪ್ರಶಾನ್ತಾತ್ಮಾ ಮೃದುಪೂರ್ವಂ ಚ ಭಾಷತೇ ।
ಉಚ್ಯಮಾನೋಪಿ ಪರುಷಂ ನೋತ್ತರಂ ಪ್ರತಿಪದ್ಯತೇ ॥೪॥
ಕಥಞ್ಚಿದುಪಕಾರೇಣ ಕೃತೇನೈಕೇನ ತುಷ್ಯತಿ ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ ॥೫॥
ಶೀಲವೃದ್ಧೈರ್ವಯೋವೃದ್ಧೈಃ ಜ್ಞಾನವೃದ್ಧೈಶ್ಚ ಸಜ್ಜನೈಃ ।
ಕಥಯನ್ನಾಸ್ತ ವೈ ನಿತ್ಯಂ ಅಸ್ತ್ರಯೋಗ್ಯಾನ್ತರೇಷ್ವಪಿ ॥೬॥
ಶೀತಾಂಶುರಿವ ಸರ್ವೇಷಾಂ ಮನೋನಯನನನ್ದನಃ ।
ಸರ್ವರಾಷ್ಟ್ರಹಿತಾಕಾಂಕ್ಷೀ ಸರ್ವವೇದಾನ್ತಪಾರಗಃ ॥೭॥
ಬುದ್ಧಿಮಾನ್ ಮಧುರಾಭಾಷೀ ಪೂರ್ವಭಾಷೀ ಪ್ರಿಯಂವದಃ ।
ವೀರ್ಯವಾನ್ ನ ತು ವೀರ್ಯೇಣ ಮಹತಾ ಸ್ವೇನ ವಿಸ್ಮಿತಃ ॥೮॥
ನ ಚಾನೃತಕಥೋ ವಿದ್ವಾನ್ ವೃದ್ಧಾನಾಂ ಪ್ರತಿಪೂಜಕಃ ।

ರಥನಿಗೆ ಸಮಾನನಾಗಿ, ಭೂಲೋಕದಲ್ಲೆಲ್ಲ ಅಸದೃಶನಾಗಿ, ದಶರಥನ ಮಗನಾಗಿ ಅವತರಿಸಿದ್ದನು ॥೩॥

ಅವನು, ಪ್ರತಿದಿನವೂ ಕೇವಲ ಶಾಂತಾತ್ಮನಾಗಿದ್ದುಗೊಂಡು, ಮೃದುಮಧುರವಾಗಿಯೂ, ಮತ್ತೊಬ್ಬರು ಮಾತನಾಡಿಸುವುದಕ್ಕಿಂತ ಮೊದಲಾಗಿಯೂ ಮಾತನಾಡುವನು. ಮತ್ತೊಬ್ಬರು ತನ್ನನ್ನು ಕ್ರೂರವಾಗಿ ಮಾತನಾಡಿಸಿದರೂ, ತಾನು ಅದಕ್ಕೆ ತಕ್ಕಹಾಗೆ ಪರುಷವಾದ ಉತ್ತರವನ್ನು ಕೊಡುತಿರಲಿಲ್ಲ ॥೪॥

ಅವನು, ಸುಸ್ವಭಾವಶಾಲಿಯಾಗಿರುವಕಾರಣ, ಇತರರು ಅತ್ಯಲ್ಪವಾಗಿ ಒಂದು ಉಪಕಾರವನ್ನು ಮಾಡಿದರೂ, ಅಷ್ಟರಿಂದಲೇ ಸಂತೋಷಪಡುತಿದ್ದನು; ನೂರಾರು ಅಪಕಾರಗಳನ್ನು ಮಾಡಿದರೂ, ಅದನ್ನು ಸ್ಮರಿಸುತಲೇ ಇರಲಿಲ್ಲ ॥೫॥

ಅಸ್ತ್ರವನ್ನು ಪಯೋಗಿಸಬೇಕಾದ ಸಂದರ್ಭಗಳಲ್ಲಿಯೂಕೂಡ, ಶೀಲವೃದ್ಧರಾಗಿಯೂ ವಯೋವೃದ್ಧರಾಗಿಯೂ ಜ್ಞಾನವೃದ್ಧರಾಗಿಯೂ ಇರುವ ಸಜ್ಜನರೊಡನೆಯೇ ಸರ್ವದಾ ವಿಚಾರಮಾಡುತಿದ್ದನು ॥೬॥

ಚಂದ್ರನಂತೆ, ಸರ್ವರಿಗೂ ಮನಸ್ಸನ್ನೂ ನೇತ್ರವನ್ನೂ ಆನಂದಪಡಿಸುತಿದ್ದನು. ಸಮಸ್ತ ರಾಷ್ಟ್ರಕ್ಕೂ ಹಿತವನ್ನು ಬಯಸುತಿದ್ದನು. ಸಕಲ ವೇದಾಂತಗಳಲ್ಲಿಯೂ ಪಾರಂಗತನಾಗಿದ್ದನು ॥೭॥

ಮಹಾಬುದ್ಧಿಶಾಲಿಯಾಗಿಯೂ, ಮಧುರಭಾಷಿಯಾಗಿಯೂ ಇದ್ದನು. ಯಾರನ್ನಾದರೂ ಕಂಡರೆ, ಅವರು ಮಾತಾಡುವುದಕ್ಕೆ ಮೊದಲೇ ತಾನು ಅವರನ್ನು ಮಾತಾಡಿಸುತಿದ್ದನು. ಎಲ್ಲರಿಗೂ ಪ್ರಿಯವಾದ ಮಾತನ್ನೇ ಆಡುತಿದ್ದನು. ಮಹಾವೀರ್ಯಶಾಲಿಯಾಗಿದ್ದನು; ಆದರೆ, ತನಗಿರುವ ಅತಿಶಯವಾದ ವೀರ್ಯದಿಂದ ಗರ್ವಪಡುತ್ತಿರಲಿಲ್ಲ ॥೮॥

ಆ ಶ್ರೀರಾಮನು, ಸುತರಾಂ ಅಸತ್ಯವನ್ನು ಹೇಳುತಿರಲಿಲ್ಲ; ಸಕಲ ವಿಷಯಗಳನ್ನೂ ತಿಳಿದವನಾಗಿದ್ದನು; ಗುರುಹಿರಿಯರನ್ನು ವಿಶೇಷವಾಗಿ ಬಹುಮಾನಿಸುತಿದ್ದನು; ದೀನರಲ್ಲಿ ದಯೆ

ದೀನಾನುಕಮ್ಪೀ ಧರ್ಮಜ್ಞೋ ನಿತ್ಯಂ ಪ್ರಗ್ರಹವಾಂಶ್ಚುಚಿಃ ॥೯॥
ಉತ್ತರೋತ್ತರಯುಕ್ತೀನಾಂ ವಕ್ತಾ ವಾಚಸ್ಪತಿರ್ಯಥಾ ।
ಅರೋಗಸ್ತರುಣೋ ವಾಗ್ಮೀ ವಪುಷ್ಮಾಂಶ್ಚ ದೇಶಕಾಲವಿತ್ ॥೧೦॥
ಲೋಕೇ ಪುರುಷಸಾರಜ್ಞಃ ಸಾಧುರೇಕೋ ವಿನಿರ್ಮಿತಃ ।
ಅಪ್ರಧೃಷ್ಯಶ್ಚ ಸಙ್ಗ್ರಾಮೇ ಕ್ರೂರೈರಪಿ ಸುರಾಸುರೈಃ ॥೧೧॥
ಅವೋಘಕ್ರೋಧಹರ್ಷಶ್ಚ ತ್ಯಾಗಸಙ್ಗ್ರಹಕಾಲವಿತ್ ।
ಶಾಸ್ತ್ರಜ್ಞಶ್ಚ ಕೃತಜ್ಞಶ್ಚ ಪುರುಷಾನ್ತರಕೋವಿದಃ ॥೧೨॥
ಧನುರ್ವೇದವಿದಾಂ ಶ್ರೇಷ್ಠಃ ಲೋಕೇತಿರಥಸಮ್ಮತಃ ।
ನ ಚಾವಮನ್ತಾ ಭೂತಾನಾಂ ನ ಚ ಕಾಲವಶಾನುಗಃ ॥೧೩॥
ಸರ್ವಸಿದ್ಧಿಕರೋ ನೃಣಾಂ ಕ್ಷೇಮಾರೋಗ್ಯಸುಖಪ್ರದಃ ।
ಸಮ್ಮತಸ್ತ್ರಿಷು ಲೋಕೇಷು ವಸುಧಾಯಾಃ ಕ್ಷಮಾಗುಣೈಃ ॥೧೪॥
ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇ ಸಾಕ್ಷಾಚ್ಚ ವಜ್ರಿಣಃ ॥೧೫॥

ಯನ್ನು ತೋರಿಸುತಿದ್ದನು; ಸಕಲವಾದ ಧರ್ಮಮರ್ಮಗಳನ್ನೂ ತಿಳಿದಿದ್ದನು; ಸರ್ವದಾ ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ಪರಿಶುದ್ಧನಾಗಿರುತಿದ್ದನು ॥೯॥

ಸಾಕ್ಷಾತ್ ಬೃಹಸ್ಪತಿಯಂತೆ, ಉತ್ತರೋತ್ತರ ಯುಕ್ತಿಯುಕ್ತವಾಗಿ ಮಾತನಾಡಬಲ್ಲನು. ಅರೋಗನಾಗಿಯೂ, ತರುಣನಾಗಿಯೂ, ವಾಗ್ಮಿಯಾಗಿಯೂ, ಸುಂದರವಿಗ್ರಹನಾಗಿಯೂ, ದೇಶ ಕಾಲಗಳನ್ನು ಬಲ್ಲವನಾಗಿಯೂ ಇದ್ದನು ॥೧೦॥

ಪ್ರಪಂಚದಲ್ಲೆಲ್ಲ ಮನುಷ್ಯರ ಸಾರಗಳನ್ನು ಒಲ್ಲನನಾಗಿ ಮಹಾಸಾಧುವಾಗಿ ನಿರ್ಮಿಸಲ್ಪಟ್ಟವನು ಇವನೊಬ್ಬನೇ ಆಗಿದ್ದನು. ಇವನಿಗೆ ಸಮಾನರಾದವರು ಯಾರೂ ಇರಲಿಲ್ಲ. ಮಹಾ ಕ್ರೂರರಾದ ದೇವಾಸುರರೂ ಕೂಡ, ಇವನನ್ನು ಯುದ್ಧದಲ್ಲಿ ಗೆಲ್ಲಲು ಸಮರ್ಥರಾಗುತಿರಲಿಲ್ಲ ॥

ಆ ಶ್ರೀರಾಮನ ಕ್ರೋಧಹರ್ಷಗಳು, ಎಂದಿಗೂ ವ್ಯರ್ಥವಾಗುತಿರಲಿಲ್ಲ. ದಾನಮಾಡುವ ಕಾಲವನ್ನೂ ಸಂಗ್ರಹಮಾಡುವ ಕಾಲವನ್ನೂ ಚೆನ್ನಾಗಿ ಬಲ್ಲವನಾಗಿದ್ದನು. ಸಕಲ ಶಾಸ್ತ್ರಗಳನ್ನೂ ಅರಿತವನಾಗಿದ್ದನು; ಇತರರಿಂದ ಮಾಡಲ್ಪಟ್ಟ ಉಪಕಾರವನ್ನು ಎಂದಿಗೂ ಮರೆಯುತ್ತಿರಲಿಲ್ಲ. ಮನುಷ್ಯರಲ್ಲಿರುವ ತಾರತಮ್ಯವನ್ನು ಬಹು ಚೆನ್ನಾಗಿ ತಿಳಿದುಕೊಳ್ಳುತಿದ್ದನು ॥೧೨॥

ಧನುರ್ವೇದವನ್ನು ಬಲ್ಲವರಲ್ಲೆಲ್ಲ ಇವನು ಶ್ರೇಷ್ಠನೆನ್ನಿಸಿಕೊಂಡಿದ್ದನು; ಲೋಕದಲ್ಲಿರುವ ಅತಿರಥರೆಲ್ಲ ಇವನನ್ನು ಬಹುಮಾನಿಸುತಿದ್ದರು. ಯಾವ ಪ್ರಾಣಿಯನ್ನೂ ಅವಮಾನಪಡಿಸುತಿರಲಿಲ್ಲ; ಕಾಲಕ್ಕೆ ತಾನು ಅಧೀನನೆನ್ನಿಸಿಕೊಳ್ಳದೆ, ಕಾಲವೇ ತನ್ನ ಅಧೀನದಲ್ಲಿರುವಂತೆ ಮಾಡಿಕೊಂಡಿದ್ದನು ॥೧೩॥

ಜನಗಳಿಗೆ-ಸಕಲಸಿದ್ಧಿಗಳನ್ನೂ ಕ್ಷೇಮವನ್ನೂ ಆರೋಗ್ಯವನ್ನೂ ಸುಖವನ್ನೂ ಉಂಟುಮಾಡುತಿದ್ದನು. ಮೂರು ಲೋಕದಲ್ಲಿಯೂ ಸರ್ವರಿಗೂ ಸಮ್ಮತನಾಗಿದ್ದನು. ಕ್ಷಮೆಯಲ್ಲಿ ಭೂಮಿಗೂ, ಬುದ್ಧಿಯಲ್ಲಿ ಬೃಹಸ್ಪತಿಗೂ, ವೀರ್ಯದಲ್ಲಿ ಸಾಕ್ಷಾದ್ದೇವೇಂದ್ರನಿಗೂ ಸದೃಶನಾಗಿದ್ದನು ॥೧೪-೧೫॥

ತಥಾ ಸರ್ವಪ್ರಜಾಕಾಂತೈಃ ಪ್ರೀತಿಸಂಜನನೈಃ ಪಿತುಃ ।
ಗುಣೈರ್ವಿರುರುಚೇ ರಾಮೋ ದೀಪ್ತಃ ಸೂರ್ಯ ಇವಾಂಶುಭಿಃ ॥೧೬॥
ತಮೇವಂ ವೃತ್ತಸಮ್ಪನ್ನಂ ಅಪ್ರಧೃಷ್ಯಂ ಪರಾಕ್ರಮಮ್ ।
ಲೋಕಪಾಲೋಪಮಂ ನಾಥಂ ಆಕಾಮಯತ ಮೇದಿನೀ ॥೧೭॥
ಏತೈಶ್ಚ ಬಹುಭಿರ್ಯುಕ್ತಂ ಗುಣೈರನುಪಮೈಃ ಸುತಮ್ ।
ದೃಷ್ಟ್ವಾ ದಶರಥೋ ರಾಜಾ ಚಕ್ರೇ ಜೀವಾಂತಂ ಪರಂತಪಃ ॥೧೮॥
ಮಹೀಮಹಮಿಮಾಂ ಕೃತ್ಸ್ನಾಂ ಅಧಿತಿಷ್ಠಂತಮಾತ್ಮಜಮ್ ।
ಅನೇನ ವಪುಷಾ ದೃಷ್ಟ್ವಾ ಯಥಾ ಸ್ವರ್ಗಮವಾಪ್ನುಯಾಮ್ ॥೧೯॥
ಇತ್ಯೇತೈರ್ವಿವಿಧೈಸ್ತೈಸ್ತೈಃ ಅನ್ಯಪಾರ್ಥಿವದುರ್ಲಭೈಃ ।
ಶಿಷ್ಟೈರಪರಿಮೇಯೈಶ್ಚ ಲೋಕೇ ಲೋಕೋತ್ತರೈರ್ಗುಣೈಃ ॥೨೦॥
ತಂ ಸಮಿಕ್ಷ್ಯಾ ಮಹಾರಾಜೋ ಯುಕ್ತಂ ಸಮುದಿತೈರ್ಗುಣೈಃ ।
ನಿಶ್ಚಿತ್ಯ ಸಚಿವೈಃ ಸಾರ್ಧಂ ಯುವರಾಜಮಮನ್ಯತ ॥೨೧॥
ತತಃ ಕಾಲೇ ಸ ಧರ್ಮಾತ್ಮಾ ಭಕ್ತ್ಯಾ ತ್ವರಿತವಾ ನೃಪಃ ।
ನಾನಾನಗರವಾಸ್ತವ್ಯಾ ಪೃಥಗ್ಜಾನಪದಾನಪಿ ।
ಸಮಾನಿನಾಯ ಮೇದಿನ್ಯಾಃ ಪ್ರಧಾನಾನ್ ಪೃಥಿವೀಪತೀನ್ ॥೨೨॥

ಈರೀತಿಯಾಗಿ, ಶ್ರೀರಾಮನು, ಸಕಲಪ್ರಜೆಗಳಿಗೂ ಮನೋಹರವಾಗಿಯೂ-ತಂದೆಗೆ ಪ್ರೀತಿಜನಕವಾಗಿಯೂ ಇರುವ ಸದ್ಗುಣಗಳಿಂದ, ಸೂರ್ಯನು ಕಿರಣಗಳಿಂದ ಉದ್ದೀಪಿತನಾಗುವಂತೆ, ವಿಶೇಷವಾಗಿ ಪ್ರಕಾಶಿಸುತ್ತಿದ್ದನು ॥೧೬॥

ಹೀಗೆ ಸದ್ವೃತ್ತಸಂಪನ್ನನೂ ಅಪ್ರಧೃಷ್ಯನಾದ ಪರಾಕ್ರಮವುಳ್ಳವನೂ ಲೋಕಪಾಲ ಸದೃಶನೂ ಆಗಿರುವ ಆ ಶ್ರೀರಾಮನನ್ನು, ಭೂಮಿಯೆಲ್ಲವೂ ತನಗೆ ಪಾಲಕನಾಗಬೇಕೆಂದು ಅಪೇಕ್ಷಿಸಿತು ॥೧೭॥

ಈಗ ಮೇಲೆ ಹೇಳಲ್ಪಟ್ಟಿರುವ ಸದ್ಗುಣಗಳಿಂದಲೂ ಇನ್ನೂ ಇತರವಾದ ಅನೇಕ ಸದ್ಗುಣಗಳಿಂದಲೂ ಭರಿತನಾಗಿರುವ ಶ್ರೀರಾಮನನ್ನು ನೋಡಿ, ಮಹಾಶೂರನಾದ ದಶರಥನು 'ಈ ನನ್ನ ಮಗನು ಸಮಸ್ತ ಭೂಮಂಡಲಕ್ಕೂ ಅಧಿಪತಿಯಾಗಿ ರಾಜ್ಯಭಾರ ಮಾಡುತಿರುವುದನ್ನು, ನಾನು ಈ ದೇಹದಲ್ಲಿಯೇ ನೋಡಿ, ಸ್ವರ್ಗವನ್ನು ಹೊಂದಿಯೇನೇ!' ಎಂದು ಯೋಚನೆಮಾಡಲುಪಕ್ರಮಿಸಿದನು ॥೧೪-೧೮॥

ಆ ಬಳಿಕ, ಇತರರಾದ ರಾಜರಿಗೆ ದುರ್ಲಭವಾಗಿರುವ ಲೋಕೋತ್ತರವಾದ ನಾನಾವಿಧ ಸದ್ಗುಣಗಳಿಂದ ಪರಿಪೂರ್ಣನಾಗಿರುವ ತನ್ನ ಮಗನನ್ನು ನೋಡಿ, ಮಂತ್ರಿಗಳೊಡನೆ ಆಲೋಚನೆಮಾಡಿ ನಿಶ್ಚಯಿಸಿಕೊಂಡು, ಅವನಿಗೆ ಯುವರಾಜಪದವಿಯನ್ನು ಕೊಡುವುದಾಗಿ ನಿರ್ಣಯಿಸಿದನು ॥೧೦-೨೧॥

ಅನಂತರ, ಧರ್ಮಾತ್ಮನಾದ ಆ ದಶರಥನು, ಪುತ್ರಪ್ರೀತಿಯಿಂದ ವಿಶೇಷವಾಗಿ ತ್ವರೆಪಟ್ಟು, ಸರಿಯಾದ ಸಮಯದಲ್ಲಿ, ಅನೇಕ ನಗರಗಳಲ್ಲಿಯೂ ದೇಶಗಳಲ್ಲಿಯೂ ಇರುವ ಮುಖ್ಯ ಮುಖ್ಯರಾದ ದೊರೆಗಳನ್ನೆಲ್ಲ ಕರೆಯಿಸಿದನು ॥೨೨॥

ತಾಶ್ಚ ವೇಶ್ಮ ನಾನಾಭರಣೈಃ ಯಥಾರ್ಹಂ ಪ್ರತಿಪೂಜಿತಾಶ್ಚ ।
ದದರ್ಶಾಲಙ್ಕೃತೋ ರಾಜಾ ಪ್ರಜಾಪತಿರಿವ ಪ್ರಜಾಃ ॥೨೩॥

ಅಥೋಪವಿಷ್ಟೇ ನೃಪತೌ ತಸ್ಮಿನ್ ಪರಬಲಾರ್ದನೇ ।
ತತಃ ಪ್ರವಿವಿಶುಃ ಶೇಷಾಃ ರಾಜಾನೋ ಲೋಕಸಮ್ಮತಾಃ ॥೨೪॥

ಅಥ ರಾಜವಿತೀರ್ಣೇಷು ವಿವಿಧೇಷ್ವಾಸನೇಷು ಚ ।
ರಾಜಾನಮೇವಾಭಿಮುಖಾಃ ನಿಷೇದುರ್ನಿಯತಾನೃಪಾಃ ॥೨೫॥

ತತಃ ಪರಿಷದಃ ಸರ್ವಾಃ ಅಮನ್ತ್ರ್ಯ ವಸುಧಾಧಿಪಃ ।
ಉವಾಚ ರಸಯುಕ್ತೇನ ಸ್ವರೇಣ ನೃಪತಿರ್ನೃಪಾಃ ॥೨೬॥

ಸೋಹಂ ವಿಶ್ರಮಮಿಚ್ಛಾಮಿ ಪುತ್ರಂ ಕೃತ್ವಾ ಪ್ರಜಾಹಿತೇ ।
ಸನ್ನಿಕೃಷ್ಟಾನಿವೃತ್ತಾಃ ಸರ್ವಾಃ ಅನುಮಾನ್ಯ ದ್ವಿಜರ್ಷಭಾಃ ॥೨೭॥

ಅನುರೂಪಃ ಸ ವೈ ನಾಥೋ ಲಕ್ಷ್ಮ್ಯಾ ವಾ ಲಕ್ಷ್ಮಣಾಗ್ರಜಃ ।
ತ್ರೈಲೋಕ್ಯಮಪಿ ನಾಥೇನ ಯೇನ ಸ್ಯಾನ್ನಾಥವತ್ತರಮ್ ॥೨೮॥

ಅವರುಗಳಿಗೆಲ್ಲ ಯಥಾಯೋಗ್ಯವಾಗಿ ಮನೆಗಳನ್ನು ಏರ್ಪಡಿಸಿಕೊಟ್ಟು, ಆಭರಣಾದಿಗಳಿಂದ ಯಥಾರ್ಹವಾಗಿ ಮರ್ಯಾದೆಮಾಡಿ, ತಾನೂ ಅಲಂಕಾರಮಾಡಿಕೊಂಡು ಸಭೆಗೆ ಬಂದು, ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಪ್ರಜೆಗಳನ್ನು ನೋಡುವಂತೆ, ಅವರುಗಳನ್ನೆಲ್ಲ ನೋಡಲು ಸಿದ್ಧನಾದನು ॥೨೩॥

ಅನಂತರ, ಶತ್ರುಬಲಹಿಂಸಕನಾದ ಆ ದಶರಥನು ಸಭೆಯಲ್ಲಿ ಸಿಂಹಾಸನದಮೇಲೆ ಕುಳಿತುಕೊಳ್ಳಲಾಗಿ, ಲೋಕಮಾನ್ಯರಾದ ಉಳಿದ ರಾಜರುಗಳೆಲ್ಲರೂ ಸಭೆಗೆ ಪ್ರವೇಶಮಾಡಿದರು ॥೨೪॥

ಅಮೇಲೆ, ದಶರಥರಾಜನಿಂದ ನಿರ್ದೇಶಿಸಲ್ಪಟ್ಟ ಆಸನಗಳಲ್ಲಿ, ಆ ಸಮಸ್ತರಾಜರೂ, ಮಹಾಭಯಭಕ್ತಿಯುಕ್ತರಾಗಿ, ದಶರಥನಿಗೆ ಅಭಿಮುಖವಾಗಿ ಕುಳಿತುಕೊಂಡರು ॥೨೫॥

ಅವರೆಲ್ಲರೂ ಕುಳಿತುಕೊಂಡ ಬಳಿಕ, ದಶರಥ ಮಹಾರಾಜನು, ಸಮಸ್ತವಾದ ಸಭೆಯನ್ನೂ ಕೇಳಿಕೊಂಡು, ಕೇವಲ ರಸಮಿಶ್ರವಾದ ಸ್ವರದಿಂದ, ಆ ದೊರೆಗಳನ್ನು ಕುರಿತು ಹೀಗೆ ಹೇಳಿದನು ॥೨೬॥

ಎಲೈ ಸಭಾಸದರೆ! ಸಾಮಂತರಾಜಮುಖ್ಯರೆ! ನಾನು ಇದುವರೆಗೂ ಸಾಧ್ಯವಾದಮಟ್ಟಿಗೆ ಸರ್ವರಿಗೂ ಅನುಕೂಲವಾಗಿ ರಾಜ್ಯಭಾರಮಾಡಿರುವುದು ನಿಮಗೆಲ್ಲರಿಗೂ ಗೊತ್ತಾಗಿಯೆಯಿದೆಯಲ್ಲವೆ! ಈಗ, ಇಲ್ಲಿ ಹತ್ತಿರವಾಗಿ ನೆರೆದಿರುವ ಸಮಸ್ತ ಬ್ರಾಹ್ಮಣೋತ್ತಮರಿಂದಲೂ ಅನುಜ್ಞೆಪಡೆದು, ಪ್ರಜೆಗಳ ಹಿತಾಚರಣೆಯನ್ನು ಮಾಡುವದರಲ್ಲಿ ನನ್ನ ಜ್ಯೇಷ್ಠಪುತ್ರನಾದ ರಾಮನನ್ನು ನಿಯಮಿಸಿ, ಸ್ವಲ್ಪ ವಿಶ್ರಾಂತಿಯನ್ನನುಭವಿಸಬೇಕೆಂದು ಇಚ್ಛಿಸುತ್ತಿರುವೆನು ॥೨೭॥

ಮಹಾ ಶ್ರೀಮಂತನಾದ, ಆ ರಾಮನು, ಈ ಭೂಮಿಗೆ ಅನುರೂಪನಾದ ನಾಥನಾಗುವನೆಂದು, ನಾನು ದೃಢವಾಗಿ ನಂಬಿರುವೆನು. ಇವನು ನಾಥನಾದರೆ, ಈ ಭೂಲೋಕಮಾತ್ರವಲ್ಲದೆ, ಲೋಕತ್ರಯವೂ ಪ್ರಶಸ್ತನಾದ ನಾಥನನ್ನು ಪಡೆದಂತಾಗುವುದರಲ್ಲಿ ಸಂಶಯವಿಲ್ಲ ॥

ಅನೇನ ಶ್ರೇಯಸಾ ಸದ್ಯಃ ಸಂಯೋಜ್ಯೈವಂ ಮಹೀಮಿಮಾಮ್ ।
ಗತಕ್ಲೇಶೋ ಭವಿಷ್ಯಾಮಿ ಸುತೇ ತಸ್ಮಿನ್ ನಿವೇಶ್ಯ ವೈ ॥೨೯॥
ಯದೀದಂ ಮೇನುರೂಪಾರ್ಥಂ ಮಯಾ ಸಾಧು ಸುಮನ್ತ್ರಿತಮ್ ।
ಭವನೈಸ್ತೇ ಮೇನುಮನ್ಯನ್ತಾಂ ಕಥಂ ವಾ ಕರವಾಣ್ಯಹಮ್ ॥೩೦॥
ಇತಿ ಬ್ರುವನ್ತಂ ಮುದಿತಾಃ ಪ್ರತ್ಯಸನ್ದ್ಯ ನೃಪಾನೃಪಮ್ ।
ಇಚ್ಛಾಮೋ ಹಿ ಮಹಾಬಾಹುಂ ರಘುವೀರಂ ಮಹಾಬಲಮ್ ॥೩೧॥
ಗಜೇನ ಮಹತಾ ಯಾನ್ತಂ ರಾಮಂ ಛತ್ರಾವೃತಾನನಮ್ ॥೩೨॥
ಬಹವೋ ನೃಪ ಕಲ್ಯಾಣಗುಣಾಃ ಪುತ್ರಸ್ಯ ಸನ್ತಿ ತೇ ।
ಪ್ರಿಯಾನಾನನ್ದನಾನ್ ಕೃಚ್ಛ್ರಾತ್ ಪ್ರವಕ್ಷ್ಯಾಮೋದ್ಯ ತಾನ್ ಶೃಣು ॥೩೩॥
ರಾಮಃ ಸತ್ಪುರುಷೋ ಲೋಕೇ ಸತ್ಯಧರ್ಮಪರಾಯಣಃ ।
ಸಾಕ್ಷಾದ್ಧರ್ಮಾದಿವೋದ್ವಿನಿರ್ವೃತ್ತಃ ಧರ್ಮಶ್ಚಾಪಿ ಶ್ರಿಯಾ ಸಹ ॥೩೪॥

ಹೀಗೆ ಪ್ರಪಂಚಕ್ಕೆಲ್ಲ ಶ್ರೇಯಸ್ಸುಂಟಾಗುವ ಸಂಭವವಿರುವಕಾರಣ, ಈಗಲೇ ಯುವರಾಜ ಪದವಿಯನ್ನು ಕೊಟ್ಟು, ನನ್ನ ಮಗನಾದ ರಾಮನಲ್ಲಿ ಈ ಭೂಭಾರವನ್ನಿರಿಸಿ, ಕ್ಲೇಶವನ್ನು ಕಳೆದುಕೊಳ್ಳುವೆನು ॥೨೯॥

ನಾನು ಈ ವಿಷಯವನ್ನು ಚೆನ್ನಾಗಿ ಆಲೋಚಿಸಿರುವೆನು. ನಿಮಗೂ ಇದು ಯುಕ್ತವಾಗಿ ಕಂಡುಬಂದರೆ, ನೀವೆಲ್ಲರೂ ಇದನ್ನು ಒಪ್ಪಬಹುದು; ಇಲ್ಲವಾದರೆ, ನಾನು ಹೇಗೆ ಮಾಡಬೇಕೆಂಬುದನ್ನು ತಿಳಿಯಿಸಬೇಕು. (ಎಂದು ದಶರಥನು ಹೇಳಿದನು) ॥೩೦॥

ಹೀಗೆಂದು ಹೇಳುತಿರುವ ಆ ದಶರಥನ ಮಾತನ್ನು ಸಮಸ್ತರಾದ ದೊರೆಗಳೂ ಶ್ಲಾಘಿಸುತ ಹೀಗೆ ಹೇಳಿದರು. ಮಹಾಪ್ರಭೋ! ದಶರಥ! ನಿನ್ನ ಮಾತು ನಮಗೆ ಅತ್ಯಾನಂದಕರವಾಗಿರುವುದು. ಮಹಾಬಾಹುವೂ ಮಹಾಬಲನೂ ಆದ ಈ ರಘುವೀರನು–ದಿವ್ಯವಾದ ಗಜಶ್ರೇಷ್ಠದ ಮೇಲೆ ಕುಳಿತುಕೊಂಡು–ಪ್ರಶಸ್ತವಾದ ಶ್ವೇತಚ್ಛತ್ರವನ್ನು ಹಿಡಿಯಿಸಿಕೊಂಡು—ರಾಜಬೀದಿಯಲ್ಲಿ ಮೆರವಣಿಗೆಯಾಗಿ ಬರುತಿರುವುದನ್ನು ನೋಡಬೇಕೆಂದು ನಾವು ಬಹಳವಾಗಿ ಅಪೇಕ್ಷಿಸುತಿರುವೆವು ॥೩೧–೩೩॥

ಎಲೈ ರಾಜಾಧಿರಾಜನೆ! ನಿನ್ನ ಮಗನಲ್ಲಿ ಅನೇಕವಾದ ಸದ್ಗುಣಗಳಿರುವುವು. ಅವು ಸರ್ವರಿಗೂ ಪ್ರಿಯವಾಗಿಯೂ ಆನಂದಜನಕವಾಗಿಯೂ ಇರುವುವು; ಅವುಗಳನ್ನು ಸಂವಾದಿಸುವುದು ಸುಖಸಾಧ್ಯವಲ್ಲ. ಅವುಗಳಲ್ಲಿ ಕೆಲವನ್ನು ಈಗ ನಾವು ಹೇಳುವೆವು, ಕೇಳು ॥೩೪॥

ನಿನ್ನ ಮಗನಾದ ರಾಮನು—ಪ್ರಪಂಚದಲ್ಲೆಲ್ಲ ಸತ್ಪುರುಷನು; ಸತ್ಯದಲ್ಲಿಯೂ ಧರ್ಮದಲ್ಲಿಯೂ ಸರ್ವದಾ ನಿರತನಾಗಿರುವನು. ಈ ರಾಮನ ದೆಸೆಯಿಂದಲೇ, ಸಾಕ್ಷಾತ್ ಧರ್ಮವೂ ಲಕ್ಷ್ಮಿಯೂ ಉದಯಿಸಿರುವುವು ॥೩೪॥

ಸತ್ಯೇನ ಲೋಕಾ೯ ಜಯತಿ ದೀನಾ೯ ದಾನೇನ ರಾಘವಃ ।
ಗುರೂಣಾಂ ಶುಶ್ರೂಷಯಾ ವೀರೋ ಧನುಷಾ ಯುಧಿ ಶಾತ್ರವಾ೯ ॥೩೫॥

ಪ್ರಿಯವಾದೀ ಚ ಭೂತಾನಾಂ ಸತ್ಯವಾದೀ ಚ ರಾಘವಃ ।
ದೇವಾಸುರಮನುಷ್ಯಾಣಾಂ ಸರ್ವಾಸ್ತ್ರೇಷು ವಿಕಾರದಃ ।

ಗಾನ್ಧರ್ವೇ ಚ ಭುವಿ ಶ್ರೇಷ್ಠಃ ಬಭೂವ ಭರತಾಗ್ರಜಃ ॥೩೬॥

ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ।
ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ ॥೩೭॥

ಸುಭ್ರೂರಾಯತತಾಮ್ರಾಕ್ಷಃ ಸಾಕ್ಷಾದ್ವಿಷ್ಣುರಿವ ಸ್ವಯಮ್ ।
ಶಕ್ತಸ್ತ್ರೈಲೋಕ್ಯಮಪ್ಯೇಷಃ ಭೋಕ್ತುಂ ಕಿಂ ನು ಮಹೀಮಿಮಾಮ್ ॥೩೮॥

ಹನ್ತ್ಯೇಷ ನಿಯಮಾದ್ವಧ್ಯಾ೯ ಯಜ್ಯೇಷು ಶಬಲಾ ಕುಪ್ಯತಿ ।
ಯುನಕ್ತ್ಯರ್ಥೇನ ಹೃಷ್ಟಶ್ಚ ತಮಸೌ ಯತ್ರ ತುಷ್ಯತಿ ॥೩೯॥

ಮಹಾವೀರನಾದ ಈ ರಾಘವನು, ಲೋಕಗಳನ್ನು ಸತ್ಯದಿಂದಲೂ, ದೀನರನ್ನು ದಾನದಿಂದಲೂ, ಗುರುಗಳನ್ನು ಶುಶ್ರೂಷೆಯಿಂದಲೂ, ಯುದ್ಧದಲ್ಲಿ ಶತ್ರುಗಳನ್ನು ಧನುಸ್ಸಿನಿಂದಲೂ ವಶಪಡಿಸಿಕೊಳ್ಳುವನು ॥೩೫॥

ಭರತಾಗ್ರಜನಾದ ರಾಮನು, ಸರ್ವಭೂತಗಳಿಗೂ ದೇವ ಅಸುರ ಮನುಷ್ಯರಿಗೂ ಪ್ರಿಯವಾಗಿಯೂ ಸತ್ಯವಾಗಿಯೂ ಮಾತನಾಡುವನು. ಸರ್ವವಿಧವಾದ ಅಸ್ತ್ರಗಳಲ್ಲಿಯೂ ನಿಪುಣನಾಗಿರುವನು. ಗಾಂಧರ್ವವಿದ್ಯೆಯಲ್ಲಿಯೂ ಇವನು ಭೂಮಿಯಲ್ಲೆಲ್ಲ ಶ್ರೇಷ್ಠನೆನ್ನಿಸಿಕೊಂಡಿರುವನು ॥೩೬॥

ಮನುಷ್ಯರಿಗೆ ವ್ಯಸನಬಂದಕಾಲದಲ್ಲಿ, ಅವರಿಗಿಂತಲೂ ಹೆಚ್ಚಾಗಿ ಇವನು ದುಃಖಪಡುವನು; ಅವರಿಗೆ ಉತ್ಸವಕಾಲ ಸಂಭವಿಸಿದಾಗಲೆಲ್ಲ, ಅವರುಗಳ ತಂದೆಯೋಪಾದಿಯಲ್ಲಿ ವಿಶೇಷವಾಗಿ ಹರ್ಷಪಡುವನು ॥೩೭॥

ಇದಲ್ಲದೆ, ಇವನಲ್ಲಿ ದಿವ್ಯವಾದ ಲಕ್ಷಣಗಳೆಲ್ಲ ಇರುವುವು. ಇವನ ಹುಬ್ಬುಗಳು, ಬಹಳ ಸೊಂಪಾಗಿರುವುವು; ನೇತ್ರಗಳು, ಆರಕ್ತವಾಗಿಯೂ ವಿಶಾಲವಾಗಿಯೂ ಇರುವುವು; ಇವನನ್ನು ನೋಡಿದರೆ, ಸಾಕ್ಷಾತ್ತಾಗಿ ಮಹಾವಿಷ್ಣುವನ್ನು ನೋಡಿದಂತೆ ಆಗುವುದು. ಇಂತಹ ಈ ರಾಮನು, ಮೂರು ಲೋಕವನ್ನೂ ಪರಿಪಾಲಿಸುವುದಕ್ಕೆ ಸಮರ್ಥನಾಗಿರುವನು; ಇನ್ನು ಭೂಮಿಯ ವಿಷಯದಲ್ಲಿ ಹೇಳುವುದೇನು? ॥೩೮॥

ಇದೂ ಅಲ್ಲದೆ, ರಾಜನಲ್ಲಿರಬೇಕಾದ ಗುಣಗಳೂ ಇವನಲ್ಲಿರುವುವು. ಯಾವನಾದರೊಬ್ಬನಮೇಲೆ ಇವನು ಕೋಪಿಸಿಕೊಂಡರೆ, ಅವನ ತಪ್ಪಿಗೆ ತಕ್ಕಂತೆ ಯಥಾವಿಧಿಯಾಗಿ ಶಿಕ್ಷಿಸುವನು; ಸಂತೋಷವುಂಟಾದರೋ, ಯಾವನಿಂದ ಹರ್ಷವುಂಟಾಗುವುದೋ—ಅವನಿಗೆ ಯಥೇಚ್ಛವಾಗಿ ಪ್ರಯೋಜನವನ್ನಾಡುವನು ॥೩೯॥

ಅಭ್ಯನ್ತರಞ್ಚ ಬಾಹ್ಯಞ್ಚ ಪೌರಜಾನಪದಾಜನಾಃ ।
ಸರ್ವಾ೯ ದೇವಾ೯ ನಮಸ್ಯನ್ತಿ ರಾಮಸ್ಯಾರ್ಥೇ ಯಶಸ್ವಿನಃ ॥೪೦॥

ತಂ ದೇವದೇವೋಪಮಮಾತ್ಮಜಂ ತೇ
ಸರ್ವಸ್ಯ ಲೋಕಸ್ಯ ಹಿತೇ ನಿವಿಷ್ಟಮ್ ।
ಹಿತಾಯ ನಃ ಕ್ಷಿಪ್ರಮುದಾರಬುದ್ಧಿಂ
ಮುದಾಭಿಷೇಕ್ತುಂ ವರದ ತ್ವಮರ್ಹಸಿ ॥೪೧॥

ಇತಿ ಶ್ರೀಮದಯೋಧ್ಯಾಕಾಣ್ಡೇ ಶ್ರೀರಾಮಗುಣಕಥನಂ ನಾಮ
ಪ್ರಥಮಃ ಸರ್ಗಃ.



ಹೆಚ್ಚು ಹೇಳುವುದೇನು? ಈ ಮಹಾಯಶಸ್ವಿಯಾದ ರಾಮನಿಗೆ ಶ್ರೇಯಸ್ಸುಂಟಾಗಬೇಕೆಂದು, ಇವನ ಅಂತರಂಗಕ್ಕೆ ಸೇರಿದವರೂ, ಹೊರಗಿನವರೂ, ಪಟ್ಟಣದಲ್ಲಿರುವವರೂ, ದೇಶದಲ್ಲಿರುವವರೂ ಕೂಡ, ಸಮಸ್ತ ದೇವತೆಗಳನ್ನೂ ನಮಸ್ಕರಿಸುತಿರುವರು ॥೪೦॥

ಸರ್ವರಿಗೂ ವರವನ್ನು ಕೊಡಶಕ್ಯವನಾಗಿರುವ ದಶರಥನೆ! ಹೀಗೆ ಮಹೇಂದ್ರತುಲ್ಯನಾಗಿಯೂ, ಸಕಲಲೋಕಕ್ಕೂ ಹಿತವಾಡುವುದರಲ್ಲಿಯೇ ಸರ್ವದಾ ಉದ್ಯುಕ್ತನಾಗಿಯೂ, ಮಹನೀಯರ ಸಹವಾಸದಲ್ಲಿರಶಕ್ಯವನಾಗಿಯೂ ಇರುವ–ನಿನ್ನ ಮಗನಾದ–ಶ್ರೀರಾಮನನ್ನು, ನಮ್ಮಗಳ ಹಿತಕ್ಕೋಸ್ಕರವಾಗಿ, ನೀನು ಸಂತೋಷದಿಂದ ಬೇಗನೆ ಯುವರಾಜಪದವಿಯಲ್ಲಿ ಅಭಿಷೇಕ ಮಾಡಬೇಕೆಂದು ನಾವು ಪ್ರಾರ್ಥಿಸುವೆವು.–ಎಂದು, ಸಮಸ್ತರಾಜರೂ ದಶರಥನನ್ನು ಕುರಿತು ವಿಜ್ಞಾಪಿಸಿದರು ॥೪೧॥

ಇದು ಶ್ರೀ ತತ್ವಸಂಗ್ರಹರಾಮಾಯಣದ ಅಯೋಧ್ಯಾಕಾಂಡದಲ್ಲಿ
ಶ್ರೀರಾಮಗುಣಕಥನವೆಂಬ ಮೊದಲನೆಯ ಸರ್ಗವು.

ಇಂತು ಶ್ರೀಮದಖಿಲ ಮಹೀಮಂಡಲಮಂಡನಾಯಮಾನ ಕರ್ಣಾಟಕಜನಪದಾಧೀಶ್ವರ
ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜೀ. ಸಿ. ಎಸ್. ಐ. ಯವರ
ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿವಿರಚಿತವಾದ
ತತ್ವಪ್ರಕಾಶವೆಂಬ
ಶ್ರೀ ತತ್ವಸಂಗ್ರಹರಾಮಾಯಣದ ಟೀಕಿನೊಳಗೆ
ಅಯೋಧ್ಯಾಕಾಂಡದ ಪ್ರಥಮಸರ್ಗವು.



ಅಥ ಶ್ರೀಮಯೋಧ್ಯಾಕಾಣ್ಡೇ ದ್ವಿತೀಯೇಃ ಸರ್ಗಃ.

ಶ್ರೀ ಶಿವ ಉವಾಚ.

ಅಥ ರಾಜಾ ದಶರಥಃ ಕದಾಚಿದ್ರಹಸಿ ಸ್ಥಿತಃ ।
ವಸಿಷ್ಠಂ ಸ್ವಕುಲಾಚಾರ್ಯಂ ಅಭಿವಾದ್ಯೇದಮಬ್ರವೀತ್ ॥೧॥
ಭಗವಞ್ ರಾಮಮಖಿಲಾಃ ಪ್ರಶಂಸನ್ತಿ ಮುಹುರ್ಮುಹುಃ !
ಪೌರಾಶ್ಚ ನೈಗಮಾವೃದ್ಧಾಃ ಮನ್ತ್ರಿಣಶ್ಚ ವಿಶೇಷತಃ ॥೨॥
ಅತಃ ಸರ್ವಗುಣೋಪೇತಂ ರಾಮಂ ರಾಜೀವಲೋಚನಮ್ ।
ಜ್ಯೇಷ್ಠಂ ರಾಜ್ಯೇಭಿಷೇಕ್ಷ್ಯಾಮಿ ವೃದ್ಧೋಹಂ ಮುನಿಪುಙ್ಗವ ॥೩॥
ಅಭಿಷೇಕ್ಷ್ಯೇ ಶ್ವಏವಾಶು ಭವಾಂಸ್ತತ್ರಾನುಮೋದತಾಮ್ ।
ಸಮ್ಭಾರಾಃ ಸಮ್ಭ್ರಿಯನ್ತಾಂ ತು ಗಚ್ಛಾಮನ್ತ್ರಯ ರಾಘವಮ್ ॥೪॥
ತಮುವಾಚ ಮಹಾತೇಜಾಃ ವಸಿಷ್ಠೋ ಜ್ಞಾನಿನಾಂ ವರಃ ॥೫॥

ಅಯೋಧ್ಯಾಕಾಂಡದಲ್ಲಿ ಎರಡನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಹೀಗೆ ಸಮಸ್ತರಾಜರೂ, ಜನಗಳೂ ಶ್ರೀರಾಮನ ಪಟ್ಟಾಭಿಷೇಕದಲ್ಲಿ ವಿಶೇಷ ಕುತೂಹಲವನ್ನು ತೋರಿಸಿದಬಳಿಕ, ದಶರಥಮಹಾರಾಜನು, ಒಂದಾನೊಂದು ಸಮಯದಲ್ಲಿ ಏಕಾಂತದಲ್ಲಿ ಕುಳಿತುಕೊಂಡು, ತನ್ನ ಕುಲಗುರುವಾದ ವಸಿಷ್ಠಮಹರ್ಷಿಗಳನ್ನು ಕರೆಯಿಸಿ, ಅವರಿಗೆ ನಮಸ್ಕಾರಮಾಡಿ, ಈ ಮಾತನ್ನು ವಿಜ್ಞಾಪಿಸಿಕೊಂಡನು ॥೧॥

ಹೇ ಭಗವನ್! ನಮ್ಮ ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ನಾನು ಪ್ರಸ್ತಾವ ಮಾಡಿದೊಡನೆಯೇ, ಅವನನ್ನು, ಸಮಸ್ತರಾದ ಪೌರರೂ ಬ್ರಾಹ್ಮಣೋತ್ತಮರೂ ವೃದ್ಧರಾದ ವರೂ ಮಂತ್ರಿಗಳೂ ಕೂಡ ವಿಶೇಷವಾಗಿ ಪ್ರಶಂಸಿಸುತ್ತಿರುವರು ॥೨॥

ಆದುಕಾರಣ, ಎಲೈ ಮುನಿಶ್ರೇಷ್ಠರೆ! ನನ್ನ ಜ್ಯೇಷ್ಠಪುತ್ರನಾದ ಕಮಲನೇತ್ರನಾದ ರಾಮನನ್ನು, ರಾಜ್ಯದಲ್ಲಿ ಅಭಿಷೇಕಮಾಡುವುದಾಗಿ ನಿಶ್ಚಯಿಸಿರುವೆನು. ನಾನು ಮುದುಕನಾಗಿ ರಾಜ್ಯಭಾರನಿರ್ವಹಿಸುವುದರಲ್ಲಿ ಅಸಮರ್ಥನಾಗಿಬಿಟ್ಟಿರುವೆನೆಂಬುದು ತಮಗೆ ಗೊತ್ತಾಗಿದೆ ॥೩॥

ಹೀಗಿರುವುದರಿಂದ, ನಾಳೆಯೇ ಶೀಘ್ರವಾಗಿ ಶ್ರೀರಾಮನಿಗೆ ಅಭಿಷೇಕಮಾಡಿಬಿಡುವೆನು. ತಾವು ಆ ವಿಷಯದಲ್ಲಿ ಸಮ್ಮತಿಸಬೇಕು. ಅದಕ್ಕೆ ಬೇಕಾದ ಸಂಭಾರಗಳನ್ನೆಲ್ಲ ಸಿದ್ಧಪಡಿಸುವಂತೆ ಏರ್ಪಡಿಸಿರಿ. ಇನ್ನು ತಾವು ದಯೆಮಾಡಿಸಿ, ನಮ್ಮ ರಾಮನಿಗೆ ಈ ವಿಷಯವನ್ನು ತಿಳಿಯಿಸಿರಿ ॥೪॥

ಹೀಗೆ ಹೇಳುತಿರುವ ದಶರಥನನ್ನು, ಮಹಾತೇಜಸ್ವಿಗಳೂ ಜ್ಞಾನಿಗಳಲ್ಲಿ ಶ್ರೇಷ್ಠರೂ ಆದ ಶ್ರೀ ವಸಿಷ್ಠರು, ವಿಶೇಷವಾಗಿ ಅಭಿನಂದಿಸಿ, ಅನಂತರ ಸುಮಂತ್ರನನ್ನು ಕುರಿತು ಹೇಳುವರು.

ಉಚ್ಛ್ರಾಯನ್ತಾಂ ಪತಾಕಾಶ್ಚ ನಾನಾವರ್ಣಾಃ ಸಮನ್ತತಃ ।
ತೋರಣಾನಿ ವಿಚಿತ್ರಾಣಿ ಸ್ವರ್ಣರತ್ನಮಯಾನಿ ಚ ॥೬॥

ಕ್ಷಿಪ್ರಮಾಜ್ಞಾಪ್ಯತಾಂ ಹ್ಯದ್ಯೈಕಕ್ಷ್ಯಾಯಾಂ ಕನ್ಯಕಾಃ ಸ್ವರ್ಣಭೂಷಿತಾಃ ।
ಚತುರ್ದನ್ತಾಃ ಸಮಾಯಾನ್ತು ಐರಾವತಕುಲೋದ್ಭವಾಃ ॥೭॥

ನಾನಾತೀರ್ಥೋದಕೈಃ ಪೂರ್ಣಾಃ ಸ್ವರ್ಣಕುಮ್ಭೈಃ ಸಹಸ್ರಶಃ ।
ಚತುರಙ್ಗಬಲಂ ಸರ್ವಂ ವಿಪ್ರಾನೇಶ್ಯಾಃ ಪುರೇ ಜನಾಃ ।
ಇತ್ಯಾದಿನಾನಾಸಮ್ಭಾರಾಃ ಸಮ್ಭ್ರಿಯನ್ತಾಂ ಯಥಾವಿಧಿ ॥೮॥

ಇತ್ಯಾದಿಶ್ಯ ಮುನಿಃ ಶ್ರೀಮಾನ್ ಸುಮನ್ತ್ರಂ ರಾಜಮನ್ತ್ರಿಣಮ್ ।
ಸ್ವಯಂ ಜಗಾಮ ಭವನಂ ರಾಘವಸ್ಯಾತಿಭಾಸ್ವರಮ್ ॥೯॥
ಮಹಾಕವಾಟವಿತತಂ ವಿತರ್ದಿಶತಶೋಭಿತಮ್ ।
ಕಾಞ್ಚನಪ್ರತಿಮೈರ್ದ್ವಾರಂ ಮಣಿವಿದ್ರುಮತೋರಣಮ್ ॥೧೦॥
ಶಾರದಾಭ್ರಘನಪ್ರಖ್ಯಂ ದೀಪ್ತಂ ಮೇರುಗುಹೋಪಮಮ್ ।
ಮಣಿಭಿರ್ವರಮಾಲ್ಯಾನಾಂ ಸುಮಹದ್ಭಿರಲಙ್ಕೃತಮ್ ॥೧೧॥

ನಾಳೆಯ ಬೆಳಗಾಗುವ ಹೊತ್ತಿಗೆ, ಅನೇಕವರ್ಣಗಳಾದ ಪತಾಕೆಗಳು ಪಟ್ಟಣದಲ್ಲೆಲ್ಲ ಎತ್ತಿ ಕಟ್ಟಲ್ಪಡಲಿ; ಸುವರ್ಣರತ್ನಮಯಗಳಾದ ವಿಚಿತ್ರತೋರಣಗಳು, ಎಲ್ಲಾ ಕಡೆಯಲ್ಲಿಯೂ ಕಟ್ಟಲ್ಪಡಲಿ ॥೫-೬॥

ನಾಳೆಯ ಪ್ರಾತಃಕಾಲಕ್ಕೆ, ಅರಮನೆಯ ಮೊದಲನೆಯ ತೊಟ್ಟಿಯಲ್ಲಿ, ಸುವರ್ಣಭೂಷಿತರಾದ ಕನ್ಯೆಯರೂ, ಐರಾವತಕುಲದಲ್ಲಿ ಹುಟ್ಟಿದ ನಾಲ್ಕು ಕೊಂಬುಳ್ಳ ಆನೆಗಳೂ, ಸಿದ್ಧವಾಗಿ ಬಂದು ನಿಂತಿರಬೇಕು ॥೭॥

ಸಮಸ್ತ ತೀರ್ಥೋದಕಗಳಿಂದ ಪರಿಪೂರ್ಣಗಳಾದ ಸಾವಿರ ಸುವರ್ಣಕಲಶಗಳೂ, ಸನ್ನದ್ಧವಾದ ಚತುರಂಗಸೈನ್ಯವೂ, ಬ್ರಾಹ್ಮಣಶ್ರೇಷ್ಠರೂ, ವೇಶ್ಯಾಂಗನೆಯರೂ, ಪಟ್ಟಣದಲ್ಲಿರುವ ಮುಖ್ಯಜನಗಳೂ, ಇತ್ಯಾದಿಗಳಾದ ನಾನಾವಿಧಸಂಭಾರಗಳೆಲ್ಲವೂ, ಯಥಾವಿಧಿಯಾಗಿ ಸಜ್ಜುಗೊಳಿಸಲ್ಪಡಲಿ ॥೮॥

ಹೀಗೆಂಬುದಾಗಿ, ರಾಜಮಂತ್ರಿಯಾದ ಸುಮಂತ್ರನಿಗೆ ಆಜ್ಞಾಪಿಸಿ, ಮಹಾತ್ಮನಾದ ವಸಿಷ್ಠಮುನಿಯು, ಅತಿಪ್ರಕಾಶವಾದ ಶ್ರೀರಾಮನ ಮನೆಗೆ ತಾನೇ ಹೋದವನಾದನು ॥೯॥

ಆ ರಾಮಚಂದ್ರನ ಅರಮನೆಯು, ವಿಶಾಲವಾದ ಬಾಗಿಲುಳ್ಳದಾಗಿಯೂ, ನೂರಾರು ಜಗುಲಿಗಳಿಂದ ಅಲಂಕೃತವಾಗಿಯೂ, ಸುವರ್ಣಮಯವಾದ ಪುತ್ಥಳಿಗಳುಳ್ಳದಾಗಿಯೂ, ರತ್ನಗಳಿಂದಲೂ ಹವಳಗಳಿಂದಲೂ ಮಾಡಲ್ಪಟ್ಟ ತೋರಣವುಳ್ಳದಾಗಿಯೂ ಇದ್ದಿತು ॥೧೦॥

ಮತ್ತು, ಆ ರಾಮಚಂದ್ರನ ಅರಮನೆಯು, ಶರತ್ಕಾಲದ ಮೇಘದಂತೆ ನಿರ್ಮಲವಾಗಿ ಪ್ರಕಾಶಿಸುತ್ತಿದ್ದಿತು; ಮೇರುಪರ್ವತದ ಗುಹೆಯಂತೆ ಅತಿ ಗಂಭೀರವಾಗಿದ್ದಿತು; ಶ್ರೇಷ್ಠವಾದ ಹಾರಗಳಲ್ಲಿರುವ ದೊಡ್ಡದೊಡ್ಡ ರತ್ನಗಳಿಂದ ಅಲಂಕೃತವಾಗಿದ್ದಿತು ॥೧೧॥

ಮುಕ್ತಾಮಣಿಭಿರಾಕೀರ್ಣಂ ಚನ್ದನಾಗರುಧೂಪಿತಮ್ ।
ಗನ್ಧಾಢ್ಯಮತುಲಂ ಭೂಮೌ ವಿಸೃಜನ್ತಂ ದಾರ್ದುರಂ ಶಿಖರಂ ಯಥಾ ॥೧೨॥

ಸಾರಸೈಶ್ಚ ಮಯೂರೈಶ್ಚ ವಿನದದ್ಭಿರಲಙ್ಕೃತಮ್ ।
ಸುಕೃತೈರಾಹರಣೈಃ ಕೀರ್ಣಂ ಸೂತ್ಕೀರ್ಣಂ ಶುಕ್ತಿಭಿಸ್ತಥಾ ॥೧೩॥

ಮನಶ್ಚಕ್ಷುಶ್ಚ ಭೂತಾನಾಂ ಆದದತ್ ತೀಕ್ಷ್ಣತೇಜಸಾ ।
ಚನ್ದ್ರಭಾಸ್ಕರಸಙ್ಕಾಶಂ ಕುಬೇರಭವನೋಪಮಮ್ ॥೧೪॥

ಮಹೇನ್ದ್ರಧಾಮಪ್ರತಿಮಂ ನಾನಾಪಕ್ಷಿಸಮಾಕುಲಮ್ ।
ಧ್ವಜಯಷ್ಟಿಭಿರಾಕೀರ್ಣಂ ದದರ್ಶ ಭವನೋತ್ತಮಮ್ ॥೧೫॥

ಜಾಮೂನದಮಯೈರ್ಮುಖ್ಯೈರ್ವ ಶಯನೈರನ್ಯೈಶ್ಚ ॥೧೬॥

ಮಧ್ವಾಸವಕೃತಕ್ಲೇದಂ ಮಣಿಭಾಜನಸಜ್ಜುಲಮ್ ।
ಮಸೂರಮಮಸವ್ಯೂಢಂ ಪ್ರಾಸಾದಶತಸಙ್ಕುಲಮ್ ॥೧೭॥

ನೂಪುರಾಣಾಂ ಚ ಘೋಷೇಣ ಕಾಞ್ಚೀನಾಂ ನಿನದೇನ ಚ ।
ಮೃದಙ್ಗತಲನಿರ್ಘೋಷೈಃ ಘೋಷವದ್ಭಿರ್ವಿರಾಜಿತಮ್ ॥೧೮॥

ಆ ಅರಮನೆಯಲ್ಲೆಲ್ಲ ಮುತ್ತುಗಳನ್ನು ಎರಚಿದ್ದರು; ಗಂಧವನ್ನೂ ಅಗಿಲನ್ನೂ ಧೂಪ ಹಾಕಿದ್ದರು; ದರ್ದುರವೆಂಬ ಪರ್ವತದ ಶಿಖರದಂತೆ, ಅಲ್ಲಿ ಅತಿ ಮನೋಹರವಾದ ಸುಗಂಧಗಳು ಹೊರಡುತಿದ್ದುವು ॥೧೨॥

ಸಾರಸಪಕ್ಷಿಗಳೂ ನವಿಲುಗಳೂ ಧ್ವನಿಮಾಡುತ ಆ ಅರಮನೆಗೆಲ್ಲ ಅಲಂಕಾರವುಂಟುಮಾಡುತಿದ್ದುವು; ಅತಿ ರಮ್ಯವಾದ ಈಹಾಮೃಗಳು ಅಲ್ಲೆಲ್ಲ ವ್ಯಾಪಿಸಿಕೊಂಡಿದ್ದುವು; ನೆಲಕ್ಕೆಲ್ಲ ಮುತ್ತಿನ ಚಿಪ್ಪನ್ನು ಕೆತ್ತಿದ್ದರು ॥೧೩॥

ತನ್ನ ಅತ್ಯಧಿಕವಾದ ತೇಜಸ್ಸಿನಿಂದ, ಪ್ರಾಣಿಗಳ ಮನಸ್ಸನ್ನೂ ನೇತ್ರವನ್ನೂ ಆಕರ್ಷಿಸುತಿದ್ದಿತು; ಚಂದ್ರಸೂರ್ಯರಿಗೆ ಸಮಾನವಾಗಿಯೂ, ಕುಬೇರನ ಅರಮನೆಗೆ ಸದೃಶವಾಗಿಯೂ ಪ್ರಕಾಶಿಸುತಿದ್ದಿತು ॥೧೪॥

ಮತ್ತು, ಆ ಅರಮನೆಯು, ಸ್ವರ್ಗಕ್ಕೆ ಸಮಾನವಾಗಿಯೂ, ನಾನಾವಿಧವಾದ ಪಕ್ಷಿಗಳಿಂದ ಪರ್ಯಾಕುಲವಾಗಿಯೂ, ಧ್ವಜಪತಾಕೆಗಳಿಂದ ಶೋಭಿತವಾಗಿಯೂ ಇದ್ದಿತು. ಇಂತಹ ದಿವ್ಯ ಭವನವನ್ನು, ಆ ವಸಿಷ್ಠಮುನಿಯು ನೋಡಿದನು ॥೧೫॥

ಅಲ್ಲಿದ್ದ ಶಯನಾಸನಗಳೆಲ್ಲವೂ, ಕೇವಲ ಸುವರ್ಣಮಯವಾಗಿಯೇ ಇದ್ದುವು; ಮಧು ಮದ್ಯಗಳು ಸುರಿದು, ಅಲ್ಲಿನ ಕೆಲವು ಪ್ರದೇಶಗಳು ನೆನೆದುಹೋಗಿದ್ದುವು; ರಕ್ಷಮಯವಾದ ಪಾತ್ರೆಗಳು ಅಲ್ಲಲ್ಲಿ ಇಡಲ್ಪಟ್ಟಿದ್ದುವು. ವಿಶಾಲವಾಗಿದ್ದಕಾರಣ, ಜನಗಳ ಸಮ್ಮರ್ದವಿಲ್ಲದೆ, ಅತಿ ರಮ್ಯವಾಗಿದ್ದಿತು; ಅಲ್ಲಿ ನೂರಾರು ಉಪ್ಪರಿಗೆಗಳಿದ್ದುವು ॥೧೬-೧೭॥

ಸ್ತ್ರೀಯರು ಧರಿಸಿರುವ ಕಾಲುಸರಗಳ ಧ್ವನಿಯೂ, ಒಡ್ಯಾಣಗಳಲ್ಲಿರುವ ಕಿರುಗಂಟೆಗಳ ಶಬ್ದವೂ, ಪ್ರತಿಧ್ವನಿಯುಕ್ತವಾದ ಮೃದಂಗಧ್ವನಿಯೂ, ಆ ಅರಮನೆಯನ್ನು ಅಲಂಕರಿಸುತಿದ್ದುವು ॥೧೮॥

ನ ತತ್ರ ಕಿಞ್ಚಿನ್ನಕೃತಂ ಪ್ರಯತ್ನತೋ
ನ ತತ್ರ ಕಿಞ್ಚಿನ್ನಮಹಾರ್ಹರತ್ನವತ್ ।
ನ ತೇ ವಿಶೇಷಾ ಹಿ ಕೃತಾಃ ಸುರೇಷ್ವಪಿ
ನ ತತ್ರ ಕಿಞ್ಚಿನ್ನಮಹಾವಿಶೇಷವತ್ ॥೧೯॥
ತದಪ್ರಮೇಯಾಪ್ರತಿಕಾರಕೃತ್ರಿಮಂ
ಕೃತಂ ಸ್ವಯಂ ಸಾಧ್ವಿತಿ ವಿಶ್ವಕರ್ಮಣಾ ।
ದಿವಂ ಗತಂ ವಾಯುಪಥೇ ಪ್ರತಿಷ್ಠಿತಂ
ವ್ಯರಾಜತಾದಿತ್ಯಪಥಸ್ಯ ಲಕ್ಷ್ಮವತ್ ॥೨೦॥
ರಥಮೊರುಹ್ಯ ಭಗವಾ೯ ರಾಮವೇಶ್ಮಾವಲೋಕಯ೯ ।
ತ್ರೀಣಿ ಕಕ್ಷ್ಯಾಣ್ಯತಿಕ್ರಮ್ಯ ರಥಾತ್ ಕ್ಷಿತಿಮವಾತರತ್ ॥೨೧॥
ಸ ತತ್ರ ಕೈಲಾಸನಿಭಾಃ ಸ್ವಲಙ್ಕೃತಾಃ
ಪ್ರವಿಶ್ಯ ಕಕ್ಷ್ಯಾಸ್ತ್ರಿದಶಾಲಯೋಪಮಾಃ ।
ಪ್ರಿಯಾ೯ ನರಾ೯ ರಾಮಮತೇ ಸ್ಥಿತಾ೯ ಬಹೂ೯
ಉಪೇತ್ಯ ಶುದ್ಧಾನ್ತಮುಪಸ್ಥಿತೋ ವಶೀ ॥೨೨॥
ಸ ತದನ್ತಃಪುರದ್ವಾರಂ ಸಮತೀತ್ಯ ಜನಾಕುಲಮ್ ।
ಪ್ರವಿವಿಕ್ಷಾಂ ತತಃ ಕಕ್ಷ್ಯಾಂ ಆಸಸಾದ ಪುರಾಣವಿತ್ ॥೨೩॥

ಆ ರಾಮಚಂದ್ರನ ಅರಮನೆಯಲ್ಲಿ, ಪ್ರಯತ್ನಪೂರ್ವಕವಾಗಿ ರಚಿಸಲ್ಪಡದ ಪದಾರ್ಥವೊಂದೂ ಇರಲಿಲ್ಲ; ಮಹಾಮೂಲ್ಯವಾದ ರತ್ನಗಳಿಲ್ಲದ ವಸ್ತುವೊಂದೂ ಇರಲಿಲ್ಲ; ಅಲ್ಲಿರುವ ಆಶ್ಚರ್ಯಗಳು ದೇವತೆಗಳಲ್ಲಿಯೂ ಸಿಕ್ಕುತಿರಲಿಲ್ಲ; ಅತಿವಿಶೇಷವಿಲ್ಲದ ವಸ್ತುವೊಂದೂ ಅಲ್ಲಿರಲಿಲ್ಲ।

ಆ ಅರಮನೆಯಲ್ಲಿರುವ ಸೊಬಗನ್ನು ಊಹಿಸುವುದಕ್ಕೂ ಅಸಾಧ್ಯವಾಗಿದ್ದಿತು; ಇದಕ್ಕೆ ಬದುಲಾಗಿ ಮತ್ತೊಂದನ್ನು ಮಾಡುವುದಕ್ಕೆ ಆಗುತಿರಲಿಲ್ಲ. ವಿಶ್ವಕರ್ಮನು, ಬಹುಪ್ರಶಸ್ತವಾದುದೆಂದು ತಾನೇ ಇದನ್ನು ರಚಿಸಿದ್ದನು. ಅಂತರಿಕ್ಷವನ್ನೂ ವಾಯುಮಾರ್ಗವನ್ನೂ ವ್ಯಾಪಿಸಿಕೊಂಡು, ಆ ಅರಮನೆಯು, ಸೂರ್ಯಮಂಡಲಕ್ಕೂ ಒಂದು ಚಿಹ್ನೆಯಂತೆ ವಿರಾಜಿಸುತಿದ್ದಿತು ॥೨೦॥

ಇಂತಹ ಅರಮನೆಯನ್ನು ನೋಡುತ, ಮಹಾತ್ಮನಾದ ಆ ವಸಿಷ್ಠಮುನಿಯು, ರಥದ ಮೇಲೆ ಕುಳಿತುಕೊಂಡೇ ಮೂರು ಕಕ್ಷ್ಯೆಗಳನ್ನು ದಾಟಿಕೊಂಡು ಹೋಗಿ, ಬಳಿಕ ರಥದಿಂದ ಭೂಮಿಗೆ ಇಳಿದನು ॥೨೧॥

ಜಿತೇಂದ್ರಿಯನಾದ ಆ ವಸಿಷ್ಠಮಹರ್ಷಿಯು, ಆ ಅರಮನೆಯಲ್ಲಿ, ಕೈಲಾಸದಂತೆಯೂ ಸ್ವರ್ಗದಂತೆಯೂ ಚೆನ್ನಾಗಿ ಅಲಂಕರಿಸಲ್ಪಟ್ಟು ವಿರಾಜಿಸುತಿರುವ ಕಕ್ಷ್ಯೆಗಳನ್ನೆಲ್ಲ ಪ್ರವೇಶಿಸಿ, ಅಲ್ಲಿ ರಾಮನ ಆಜ್ಞಾನುವರ್ತಿಗಳಾದ ಇಷ್ಟಪುರುಷರೊಡನೆ ಸೇರಿಕೊಂಡು, ರಾಮನಿರುವ ಅಂತಃಪುರದೊಳಕ್ಕೆ ಪ್ರವೇಶಮಾಡಿದನು ॥೨೨॥

ಆತ್ಮತತ್ವಜ್ಞಾನಿಯಾದ ಆ ವಸಿಷ್ಠಮುನಿಯು, ಬಹುಜನಪರಿವೃತವಾಗಿದ್ದ ಆ ಅಂತಃಪುರದ ದ್ವಾರವನ್ನು ದಾಟಹೋಗಿ, ಏಕಾಂತವಾಗಿದ್ದ ಅಂತಃಪುರವನ್ನು ಸೇರಿದನು ॥೨೩॥

ಪ್ರಾಸಕಾರ್ಮುಕಬಿಭ್ರದ್ಭಿಃ ಯುವಭಿರ್ಮೃಷ್ಟಕುಂಡಲೈಃ ।
ಅಪ್ರಮಾದಿಭಿರೇಕಾಗ್ರೈಃ ಸ್ವನುರಕ್ತೈರಧಿಷ್ಠಿತಾಮ್ ॥೨೪॥
ತತ್ರ ಕಾಷಾಯಿಣೋ ವೃದ್ಧಾ ವೇತ್ರಪಾಣೇಃ ಸ್ವಲಙ್ಕೃತಾಃ ।
ದದರ್ಶ ನಿಷ್ಠಿತಾ ದ್ವಾರೇ ಹ್ಯಧ್ಯಕ್ಷಾಃ ಸುಸಮಾಹಿತಾಃ ।
ತತೋ ವಿವೇಶ ಶುದ್ಧಾನ್ತಂ ಆಚಾರ್ಯತ್ವಾದವಾರಿತಃ ॥೨೫॥
ತತ್ರ ರತ್ನಮಯೇ ಗೇಹೇ ನಾನಾರತ್ನವಿಚಿತ್ರಿತೇ ॥೨೬॥
ವರಾಹರುಧಿರಾಭೇಣ ಶುಚಿನಾ ಚ ಸುಗನ್ಧಿನಾ ।
ಅನುಲಿಪ್ತಂ ಪರಾಶ್ಯೇನ ಚನ್ದನೇನ ಪರನ್ತಪಮ್ ॥೨೭॥
ಸ್ಥಿತಯಾ ಪಾರ್ಶ್ವತಶ್ಚಾಪಿ ವಾಲವ್ಯಜನಹಸ್ತಯಾ ।
ಉಪೇತಂ ಸೀತಯಾ ಭೂಯಃ ಜೀತ್ಯಯಾ ಶಶಿನಂ ಯಥಾ ॥೨೮॥
ತಂ ವೈಶ್ರವಣಸಙ್ಕಾಶಂ ಉಪವಿಷ್ಟಂ ಸ್ವಲಙ್ಕೃತಮ್ ।
ದದರ್ಶ ರಾಮಂ ಪರ್ಯಙ್ಕೇ ಸೌವರ್ಣೇ ಸೋತ್ತರಚ್ಛದೇ ॥೨೯॥
ಗುರುಮಾಗತಮಾಜ್ಞಾಯ ರಾಮಸೂರ್ಣಂ ಕೃತಾಞ್ಜಲಿಃ ।
ಪ್ರತ್ಯುದ್ಗಮ್ಯ ನಮಶ್ಚಕ್ರೇ ದಣ್ಡವದ್ಭಕ್ತಿಸಂಯುತಃ ॥೩೦॥

ಅಲ್ಲಿ, ಪ್ರಾಸವನ್ನೂ ಧನುಸ್ಸನ್ನೂ ಹಿಡಿದುಕೊಂಡು- ದಿವ್ಯವಾದ ಕುಂತಲಗಳನ್ನು ಧರಿಸಿರುವ-ಯೌವನವಂತರಾದ-ಅನುರಕ್ತರಾಗಿರುವ-ರಕ್ಷಾಪುರುಷರು, ಸ್ವಲ್ಪವೂ ಅಜಾಗರೂಕತೆಯಿಲ್ಲದೆ, ಏಕಾಗ್ರಚಿತ್ತರಾಗಿ ಕಾಯ್ದುಕೊಂಡಿದ್ದರು ॥೨೪॥

ಆ ಬಾಗಿಲಿನಲ್ಲಿ, ಕಾಷಾಯವಸ್ತ್ರವನ್ನು ಧರಿಸಿ, ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು, ಮಹಾಜಾಗರೂಕತೆಯಿಂದಿರುವ ವೃದ್ಧರಾದ ದ್ವಾರಾಧ್ಯಕ್ಷರನ್ನೂ ಆ ವಸಿಷ್ಠಮುನಿಯು ಕಂಡನು. ಆ ಒಳಿಕ, ತಾನು ರಾಮನಿಗೆ ಆಚಾರ್ಯನಾದಕಾರಣ ಯಾರಿಂದಲೂ ತಡೆಯಲ್ಪಡದವನಾಗಿ, ಅಂತಃಪುರದೊಳಕ್ಕೆ ಪ್ರವೇಶಮಾಡಿದನು ॥೨೫॥

ಅಲ್ಲಿ ನಾನಾವಿಧರತ್ನಗಳಿಂದ ವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದ ಆ ರತ್ನಮಯವಾದ ಮನೆಯೊಳಗೆ, ದಿವ್ಯವಾದ ಮೇಲುಹಾಸಿಗೆಹಾಸಲ್ಪಟ್ಟಿರುವ ಸುವರ್ಣಮಯವಾದ ಮಂಚದ ಮೇಲೆ ಕುಳಿತಿರುವ—ಮಹಾವೀರನಾದ ಶ್ರೀರಾಮನನ್ನು ಕಂಡನು. ಆಗ, ಆ ರಾಮನು ವರಾಹರಕ್ತಸವರ್ಣವಾಗಿ ಶುದ್ಧವಾಗಿರುವ ದಿವ್ಯಪರಿಮಳ ಗಂಧದಿಂದ ಲಿಪ್ತನಾಗಿದ್ದನು, ಪಾರ್ಶ್ವದಲ್ಲಿ, ಸೀತಾದೇವಿಯು, ಕೈಯಲ್ಲಿ ವಾಲವ್ಯಜನ(ಚಾಮರ)ವನ್ನು ಹಿಡಿದುಕೊಂಡು ಬೀಸುತ ಕುಳಿತಿದ್ದಳು. ಹೀಗೆ ಸೀತೆಯೊಡಗೂಡಿರುವ ಶ್ರೀರಾಮನನ್ನು ನೋಡಿದರೆ, ಚಿತ್ರಾನಕ್ಷತ್ರಯುಕ್ತನಾದ ಚಂದ್ರನನ್ನು ನೋಡಿದಷ್ಟು ಆನಂದವುಂಟಾಗುತಿದ್ದಿತು. ಈರೀತಿಯಾಗಿ ಅಲಂಕಾರ ಮಾಡಿಕೊಂಡು ಕುಳಿತಿರುವ ಕುಬೇರಸಮನಾದ ಶ್ರೀರಾಮನನ್ನು, ಆ ವಸಿಷ್ಠ ಮಹರ್ಷಿಯು ಕಂಡನು ॥೨೬—೨೯॥

ಆಗ, ಶ್ರೀರಾಮನು, ಗುರುಗಳು ದಯೆಮಾಡಿದುದನ್ನು ಕಂಡು, ಬೇಗನೆ ಅಂಜಲಿಬಂಧ ಮಾಡಿಕೊಂಡು ಪ್ರತ್ಯುತ್ಥಾನ ಮಾಡಿ, ಕೇವಲ ಭಕ್ತಿಯುಕ್ತನಾಗಿ, ದೀರ್ಘದಂಡಪ್ರಣಾಮ ಮಾಡಿದನು ॥೩೦॥

ಸ್ವರ್ಣಪಾತ್ರೇಣ ಪಾನೀಯಂ ಆನಿನಾಯಾಶು ಜಾನಕೀ ॥೩೧॥
ರತ್ನಾಸನೇ ಸಮಾವೇಶ್ಯ ಪಾದೌ ಪ್ರಕ್ಷಾಲ್ಯ ಭಕ್ತಿತಃ ।
ತದಪಃ ಶಿರಸಾ ಧೃತ್ವಾ ಸೀತಯಾ ಸಹ ರಾಘವಃ ॥೩೨॥
ಧನ್ಯೋಸ್ಮೀತ್ಯಬ್ರವೀದ್ರಾಮಃ ತವ ಪಾದಾಮ್ಬು ಧಾರಣಾತ್ ।
ಶ್ರೀರಾಮೇಣೈವಮುಕ್ತಃ ಸ ಪ್ರಹಸ್ಯ ಮುನಿರಬ್ರವೀತ್ ॥೩೩॥
ತ್ವತ್ಪಾದಸಲಿಲಂ ಧೃತ್ವಾ ಧನ್ಯೋಭೂದ್ಗಿರಿಜಾಪತಿಃ ।
ಬ್ರಹ್ಮಾಪಿ ಮತ್ಪಿತಾ ತೇ ಹಿ ಪಾದತೀರ್ಥಹತಾಶುಭಃ ॥೩೪॥
ಇದಾನೀಂ ಭಾವಸೇ ಯತ್ ತ್ವಂ ಲೋಕಾನಾಮುಪದೇಶಕೃತ್ ।
ಜಾನಾಮಿ ತ್ವಾಂ ಪರಾತ್ಮಾನಂ ಲಕ್ಷ್ಮೀಕೃತ್ಯೆ ಸಜ್ಜಾತಮೀಶ್ವರಮ್ ॥೩೫॥
ದೇವಕಾರ್ಯಾರ್ಥಸಿದ್ಧ್ಯರ್ಥಂ ಭಕ್ತಾನಾಂ ಮುಕ್ತಿಸಿದ್ಧಯೇ ।
ರಾವಣಸ್ಯ ವಧಾರ್ಥಾಯ ಜಾತಂ ಜಾನಾಮಿ ರಾಘವ ।
ತಥಾಪಿ ದೇವಕಾರ್ಯಾರ್ಥಂ ಗುಹ್ಯಂ ನೋದ್ಘಾಟಯಾಮ್ಯಹಮ್ ॥೩೬॥
ಯಥಾ ತ್ವಂ ಮಾಯಯಾ ಸರ್ವಂ ಕರೋಷಿ ರಘುನನ್ದನ ।
ತಥೈವಾನುವಿಧಾಸ್ಯೇಹಂ ಶಿಷ್ಯಸ್ತ್ವಂ ಗುರುರಿತ್ಯಹಮ್ ॥೩೭॥

ಆ ಕ್ಷಣವೇ, ಸೀತೆಯು, ಸುವರ್ಣಪಾತ್ರದಲ್ಲಿ ನೀರುತುಂಬಿ ತಂದಳು. ಆ ಬಳಿಕ, ರಾಮ ಚಂದ್ರನು, ವಸಿಷ್ಠರನ್ನು ರತ್ನಮಯವಾದ ಆಸನದಲ್ಲಿ ಕುಳ್ಳಿರಿಸಿ, ಭಕ್ತಿಯಿಂದ ಅವರ ಪಾದಗಳನ್ನು ತೊಳೆದು, ಆ ಪಾದೋದಕವನ್ನು ಸೀತೆಯೊಡನೆ ತನ್ನ ತಲೆಯಮೇಲೆ ಪ್ರೋಕ್ಷಿಸಿಕೊಂಡು, ಆ ವಸಿಷ್ಠರನ್ನು ಕುರಿತು 'ಪೂಜ್ಯರೆ! ತಮ್ಮ ಪಾದೋದಕವನ್ನು ಧರಿಸಿದುದರಿಂದ ನಾನು ಈಗ ಕೃತಾರ್ಥನಾದೆನು' ಎಂದು ಹೇಳಿದನು ಇದನ್ನು ಕೇಳಿ, ವಸಿಷ್ಠಮಹರ್ಷಿಯು ಮಂದಹಾಸ ಮಾಡುತ ಹೀಗೆ ಹೇಳಿದನು ॥೩೧—೩೩॥

ಅಯ್ಯಾ! ರಾಮ! ನೀನು ಹೇಳುವುದನ್ನು ಕೇಳಿದರೆ ಬಹು ಆಶ್ಚರ್ಯವಾಗುವುದು. ನಿನ್ನ ಪಾದೋದಕವನ್ನು (ಗಂಗೆ) ತಲೆಯಮೇಲೆ ಧರಿಸಿಕೊಂಡುದುದರಿಂದ, ಸಾಕ್ಷಾತ್ ಪಾರ್ವತೀನಾಥನೂ ಧನ್ಯನಾದನು. ನನ್ನ ತಂದೆಯಾದ ಬ್ರಹ್ಮನೂ ಕೂಡ, ನಿನ್ನ ಪಾದೋದಕದಿಂದ ಪಾಪವನ್ನು ಕಳೆದುಕೊಂಡಿರುವನು ॥೩೪॥

ನೀನು ಈಗ ಹೇಳುವ ಮಾತು ಯಾವುದುಂಟೋ, ಇದು ಪ್ರಪಂಚಕ್ಕೆಲ್ಲ ಸನ್ಮಾರ್ಗವನ್ನು ಉಪದೇಶಿಸುವುದಕ್ಕೋಸ್ಕರ ಹೇಳಲ್ಪಟ್ಟುದೇ ಹೊರತು ಮತ್ತೆ ಬೇರೆಯಲ್ಲ. ನಾನು ನಿನ್ನನ್ನು ಲಕ್ಷ್ಮಿಯೊಡನೆ ಅವತರಿಸಿರುವ ಪರಮಾತ್ಮನೆಂದು ಚೆನ್ನಾಗಿ ತಿಳಿದುಕೊಂಡಿರುವೆನು ॥೩೫॥

ಅಯ್ಯಾ! ರಾಘವ! ದೇವತೆಗಳ ಕಾರ್ಯವೂ ಭಕ್ತರಿಗೆ ಮುಕ್ತಿಯೂ ಸಿದ್ಧಿಸುವುದಕ್ಕಾಗಿಯೂ, ರಾವಣನ ವಧಕ್ಕಾಗಿಯೂ, ನೀನು ಅವತರಿಸಿರುವೆಯೆಂದು ನಾನು ಚೆನ್ನಾಗಿ ಬಲ್ಲೆನು. ಆದರೂ, ದೇವತೆಗಳ ಕಾರ್ಯಸಿದ್ಧಿಗಾಗಿ, ರಹಸ್ಯಗಳನ್ನು ಪ್ರಕಾಶಪಡಿಸದಿರುವೆನು ॥೩೬॥

ಎಲೈ ರಘುನಂದನನೆ! ನೀನು ಹೇಗೆ ಎಲ್ಲವನ್ನೂ ಮಾಯೆಯಿಂದ ನಡೆಯಿಸುತ್ತಿರುವೆಯೋ, ನಾನೂ ಹಾಗೆಯೇ ನಿನ್ನ ಮಾರ್ಗವನ್ನನುಸರಿಸಿ, ನೀನು ಶಿಷ್ಯನೆಂದೂ ನಾನು ಗುರುವೆಂದೂ ವ್ಯವಹಾರವನ್ನು ನಡೆಯಿಸುತ್ತಿರುವೆನು ॥೩೭॥

ಗುರುರ್ಗುರೂಣಾಂ ತ್ವಂ ದೇವ ಪಿತೄಣಾಂ ತ್ವಂ ಪಿತಾಮಹಃ ।
ಅನ್ತರ್ಯಾಮೀ ಜಗದ್ಯನ್ತ್ರವಾಹಕಸ್ತ್ವಮಗೋಚರಃ ॥೩೪॥

ಶುದ್ಧಸತ್ವಮಿಮಂ ದೇಹಂ ಧೃತ್ವಾ ಸ್ವಾಧೀನಸಮ್ಭವಮ್ ।
ಮನುಷ್ಯ ಇವ ಲೋಕೇಸ್ಮಿನ್ ಭಾಸಿ ತ್ವಂ ಯೋಗಮಾಯಯಾ ॥೩೫॥

ಪೌರೋಹಿತ್ಯಮಹಂ ಜಾನೇ ವಿಗರ್ಹ್ಯಂ ದೂಷ್ಯಜೀವನಮ್ ।
ಇಕ್ಷ್ವಾಕೂಣಾಂ ಕುಲೇ ರಾಮಃ ಪರಮಾತ್ಮಾ ಜನಿಷ್ಯತಿ ।
ಇತಿ ಜ್ಞಾತಂ ಮಯಾ ಪೂರ್ವಂ ಬ್ರಹ್ಮಣಾ ಕಥಿತಂ ಪುರಾ ॥೪೦॥

ತತೋಹಮಾಶಯಾ ರಾಮ ತವ ಸಮ್ಬನ್ಧಕಾಂಕ್ಷಯಾ ।
ಅಕಾರ್ಷಂ ಗರ್ಹಿತಮಪಿ ತವಾಚಾರ್ಯತ್ವಸಿದ್ಧಯೇ ॥೪೧॥
ಅತೋ ಮನೋರಥೋ ಮೇದ್ಯ ಫಲಿತೋ ರಘುನನ್ದನ ॥೪೨॥

ತ್ವದಧೀನಾ ಮಹಾಮಾಯಾ ಸರ್ವಲೋಕೈಕಮೋಹಿನೀ ।
ಮಾಂ ಯಥಾ ಮೋಹಯೇನ್ನೈವ ತಥಾ ಕುರು ರಘೂತ್ತಮ !
ಗುರುನಿಷ್ಕೃತಿಕಾಮಸ್ತ್ವಂ ಯದಿ ದೇಹ್ಯೇತದೇವ ಮೇ ॥೪೩॥

ನೀನು, ಗುರುಗಳಿಗೆಲ್ಲ ಗುರುವಾಗಿಯೂ, ಪಿತೃಗಳಿಗೆಲ್ಲ ಪಿತಾಮಹನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ಜಗಚ್ಚಿತ್ರನ ಯಂತ್ರವನ್ನು ನಡೆಯಿಸತಕ್ಕವನಾಗಿಯೂ, ಸಕಲೇಂದ್ರಿಯಗಳಿಗೂ ಅಗೋಚರನಾಗಿಯೂ ಇರುವೆ ॥೩೪॥

ಕೇವಲ ಶುದ್ಧಸತ್ವಮಯವಾಗಿ ಸ್ವಯಂಭುವಾಗಿರುವ ಈ ದೇಹವನ್ನು ಧರಿಸಿಕೊಂಡು, ನೀನು ನಿನ್ನ ಯೋಗಮಾಯಾಪ್ರಭಾವದಿಂದ ಈ ಲೋಕದಲ್ಲಿ ಮನುಷ್ಯಾಕಾರನಂತೆ ಕಾಣಿಸಿಕೊಳ್ಳುತಿರುವೆ ॥೩೫॥


ನಾನಾದರೋ, ಪೌರೋಹಿತ್ಯವು ನಿಂದಿತವೆಂದೂ ದೋಷಾವಹವಾದ ಜೀವನವೆಂದೂ ತಿಳಿದಿರುವೆನು. ಆದರೂ, ಪೂರ್ವದಲ್ಲಿ 'ಪರಮಾತ್ಮನು ಇಕ್ಷ್ವಾಕುವಂಶದಲ್ಲಿ ಜನಿಸುವನು' ಎಂದು ಬ್ರಹ್ಮನಿಂದ ಹೇಳಲ್ಪಟ್ಟಿದ್ದ ಮಾತನ್ನು ಬಲ್ಲೆನು ॥೪೦॥

ಆದುಕಾರಣ, ಅಯ್ಯಾ! ರಾಮ! ನಿನ್ನೊಡನೆ ಸಹವಾಸ ಸಿದ್ಧಿಸಬೇಕೆಂದೂ, ನಿನಗೆ ಆಚಾರ್ಯನೆನ್ನಿಸಿಕೊಳ್ಳಬೇಕೆಂದೂ ಆಶೆಯಿಂದ, ನಿಂದಿತವಾಗಿದ್ದರೂ-ಈ ಪೌರೋಹಿತ್ಯವನ್ನು ನಾನು ಇದುವರೆಗೂ ವಹಿಸಿಕೊಂಡು ಬಂದಿರುವೆನು. ಹೇ ರಘುನಂದನ! ಈಗ ನನ್ನ ಮನೋರಥವು ಫಲಿಸಿತು ॥೪೧—೪೨॥

ಹೇ ರಘುಶ್ರೇಷ್ಠ! ಸರ್ವಲೋಕವಿಮೋಹಕವಾದ-ನಿನ್ನ ಆಧೀನವಾಗಿರುವ ಮಹಾಮಾಯೆಯು ನನಗೆ ಸ್ವಲ್ಪವೂ ಮೋಹವುಂಟುಮಾಡದಂತೆ ನೀನು ಅನುಗ್ರಹಿಸುವನಾಗು. ಗುರುದಕ್ಷಿಣೆಯನ್ನು ಕೊಡಬೇಕೆಂದು ನೀನು ಅಪೇಕ್ಷಿಸುವನಾಗಿದ್ದಪಕ್ಷದಲ್ಲಿ, ನನಗೆ ಇದಿಷ್ಟುಮಾತ್ರವನ್ನೇ ಕೊಡುವವನಾಗು ॥೪೩॥

ಇತ್ಯುಕ್ತಃ ಪ್ರಾಹ ತಂ ರಾಮಃ ಸ್ವಭಕ್ತಂ ಬ್ರಹ್ಮವಿತ್ತಮಮ್ ।
ರಹಸ್ಯಜ್ಞೋಸಿ ಮೇ ಬ್ರಹ್ಮನ್ ತತ್ತ್ವಂ ಸ್ಮರತು ತೇ ಸದಾ ॥೪೪॥
ಇತ್ಯುಕ್ತಃ ಪರಿಹೃಷ್ಟಾತ್ಮಾ ವಸಿಷ್ಠಃ ಪ್ರಾಹ ತಂ ಪುನಃ ॥೪೫॥
ರಾಜ್ಞಾ ದಶರಥೇನಾಹಂ ಪ್ರೇಷಿತೋಸ್ಮಿ ರಘೂತ್ತಮ ।
ತ್ವಾಮಾನಯ್ತುಂ ರಾಜ್ಯೇ ಶ್ವೋಭಿಷೇಕ್ಷ್ಯತಿರಾಘವಃ ॥೪೬॥
ಅದ್ಯ ತ್ವಂ ಸೀತಯಾ ಸಾರ್ಧಂ ದೀಕ್ಷಾಂ ವಹ ಯಥಾವಿಧಿ ।
ಇತ್ಯುಕ್ತ್ವಾ ರಥಮಾರುಹ್ಯ ಯಯೌ ರಾಜಗುರುರ್ಗೃಹಮ್ ॥೪೭॥

ಇತಿ ಶ್ರೀಮದಯೋಧ್ಯಾಕಾಣ್ಡೇ ಶ್ರೀರಾಮಪಟ್ಟಾಭಿಷೇಕಸನ್ನಹನಂ
ನಾಮ ದ್ವಿತೀಯಃ ಸರ್ಗಃ.




ಹೀಗೆಂದು ಶ್ರೀವಸಿಷ್ಠರಿಂದ ಹೇಳಲ್ಪಟ್ಟ ಶ್ರೀರಾಮಚಂದ್ರನು, ತನ್ನಲ್ಲಿ ಭಕ್ತನಾಗಿಯೂ ಬ್ರಹ್ಮಜ್ಞಾನಿಗಳ ಮಧ್ಯದಲ್ಲಿ ಶ್ರೇಷ್ಠನಾಗಿಯೂ ಇರುವ ವಸಿಷ್ಠಮುನಿಯನ್ನು ಕುರಿತು 'ಎಲೈ ಬ್ರಾಹ್ಮಣೋತ್ತಮರೆ! ತಾವು ನನ್ನ ರಹಸ್ಯವನ್ನು ಬಲ್ಲವರಾಗಿರುವಿರಿ; ತಮಗೆ ಸರ್ವದಾ ತತ್ವವು ಸ್ಫುರಿಸುತ್ತಲೇ ಇರಲಿ' ಎಂದು ಹೇಳಿದನು ॥೪೪॥

ಈರೀತಿಯಾಗಿ ಅನುಗ್ರಹಿಸಲ್ಪಟ್ಟ ಶ್ರೀವಸಿಷ್ಠಮುನಿಯು, ಮಹಾಹರ್ಷಯುಕ್ತನಾಗಿ, ಪುನಃ ಆ ರಾಮನನ್ನು ಕುರಿತು 'ಅಯ್ಯಾ! ರಘೂತ್ತಮನೆ, ನಾನು ನಿನ್ನನ್ನು ಮಾತನಾಡಿಸಿಕೊಂಡು ಬರುವುದಕ್ಕೋಸ್ಕರ ನಿಮ್ಮ ತಂದೆಯಿಂದ ಕಳುಹಿಸಲ್ಪಟ್ಟಿರುವೆನು. ನಾಳೆಯದಿವಸವೇ ನಿಮ್ಮ ತಂದೆಯು ನಿನಗೆ ರಾಜ್ಯಾಭಿಷೇಕಮಾಡುವನು. ಅದುಕಾರಣ, ನೀನು ಈ ದಿವಸ ಸೀತೆಯೊಡನೆ ಯಥಾಶಾಸ್ತ್ರವಾಗಿ ದೀಕ್ಷೆಯನ್ನು ಧರಿಸಿರಬೇಕು' ಎಂದು ಹೇಳಿದನು. ರಾಜಗುರುವಾದ ಆ ವಸಿಷ್ಠಮಹರ್ಷಿಯು, ರಾಮನಿಗೆ ಈರೀತಿಯಾಗಿ ಹೇಳಿಬಿಟ್ಟು, ರಥವನ್ನು ಹತ್ತಿಕೊಂಡು, ತನ್ನ ವಾಸಸ್ಥಾನವನ್ನು ಕುರಿತು ಹೊರಟುಹೋದನು ॥೪೫—೪೭॥

ಇದು ಅಯೋಧ್ಯಾಕಾಂಡದಲ್ಲಿ ಶ್ರೀರಾಮಪಟ್ಟಾಭಿಷೇಕ ಸನ್ನಾಹವೆಂಬ
ಎರಡನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ತೃತೀಯಃ ಸರ್ಗಃ.



ಶ್ರೀ ಸೂತ ಉವಾಚ.

ಏತಸ್ಮಿನ್ನೇವ ಸಮಯೇ ಬ್ರಹ್ಮರುದ್ರಪುರೋಗಮಾಃ ।
ದೇವಾಃ ಸೇನ್ದ್ರಾಲೋಕಪಾಲಾಃ ರುದ್ರಾದಿತ್ಯಾಮರುದ್ಗಣಾಃ ॥೧॥
ಮುನಯಶ್ಚಾರಣಾಃ ಸಿದ್ಧಾಃ ಗನ್ಧರ್ವಾಪ್ಸರಸಾಂ ಗಣಾಃ ।
ಪಿತರೋ ವಸವೋ ನಾಗಾಃ ಯೇ ಚಾನ್ಯೇ ದೇವತಾಗಣಾಃ ।
ಮೇರೂತ್ತರೇ ಸಭಾಂ ಕೃತ್ವಾ ವಿಜನೇ ಸಮುಪಾವಿಶನ್ ॥೨॥
ದಿವ್ಯಗನ್ಧವಹೋ ವಾಯುಃ ಶೀತಳೋ ಮನ್ದವೇಗವಾನ್ ।
ತವೌ ಸರ್ವಮನೋರಮ್ಯಃ ಸುಖಸ್ಪರ್ಶಃ ಸುಖಾವಹಃ ॥೩॥
ಸಾ ಸಭಾ ಸುಖಮಾಸೀನಾ ನಿರ್ಭಯಂ ದೇಶಮಾಶ್ರಿತಾ ।
ರಾವಣಂ ಪಾಪಕರ್ಮಾಣಂ ಸ್ಮೃತ್ವಾ ಭಯಮವಾಪ ಸಾ ॥೪॥
ತತಸ್ತೇ ಮನ್ತ್ರಯಾಮಾಸುಃ ದೇವಾಃ ಪ್ರದ್ಯುತಮಾನಸಾಃ ॥೫॥

ದೇವಾಊಚುಃ

ಬಾಧಿತಾವಯಮತ್ಯನ್ತಂ ರಾವಣೇನ ದುರಾತ್ಮನಾ ।

ಅಯೋಧ್ಯಾಕಾಂಡದಲ್ಲಿ ಮೂರನೆಯ ಸರ್ಗವು.

ಪುನಃ ಶ್ರೀ ಸೂತರು ಶೌನಕಾದಿಗಳನ್ನು ಕುರಿತು ಹೇಳುವರು :—

ಎಲೈ ಮುನಿಗಳಿರಾ! ಹೀಗೆ ಶ್ರೀರಾಮನಿಗೆ ಪಟ್ಟಾಭಿಷೇಕಸನ್ನಾಹವಾಡುತಿರುವಾಗಲೇ, ಬ್ರಹ್ಮ ರುದ್ರ ಮೊದಲಾದ ಸಮಸ್ತ ದೇವತೆಗಳೂ, ಇಂದ್ರ ಮೊದಲಾದ ದಿಕ್ಪಾಲಕರೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ, ಸಪ್ತಮರುತ್ತುಗಳೂ, ಮುನಿಗಳೂ, ಚಾರಣರೂ, ಸಿದ್ಧರೂ, ಗಂಧರ್ವರೂ, ಅಪ್ಸರಸ್ಸುಗಳೂ, ಪಿತೃದೇವತೆಗಳೂ, ಅಷ್ಟವಸುಗಳೂ, ನಾಗ(ಸರ್ಪದೇವತೆ)ರೂ, ಇನ್ನುಳಿದ ಇತರರಾದ ಸಮಸ್ತ ದೇವತೆಗಳೂ ಕೂಡ, ನಿರ್ಜನವಾದ ಮೇರುಪರ್ವತದ ಉತ್ತರ ಭಾಗದಲ್ಲಿ ಸಭೆಯನ್ನು ಮಾಡಿ ಕುಳಿತುಕೊಂಡರು ॥೧-೨॥

ಆಗ, ದಿವ್ಯವಾದ ಗಂಧವನ್ನು ವಹಿಸಿಕೊಂಡು ಶೀತಳವಾಗಿರುವ ಮಂದವಾಯುವು, ಸರ್ವರಿಗೂ ಮನೋಹರವಾಗಿಯೂ ಸುಖಸ್ಪರ್ಶವಾಗಿಯೂ ಸುಖಕರವಾಗಿಯೂ ಬೀಸಿತು ॥೩॥

ಆಗ, ನಿರ್ಭಯವಾದ ಪ್ರದೇಶವನ್ನು ಆಶ್ರಯಿಸಿ ಕುಳಿತುಕೊಂಡಿದ್ದ ಆ ದೇವಸಭೆಯು, ಕೇವಲ ಪಾಪಕೃತ್ಯನಿಷ್ಠನಾದ ರಾವಣನನ್ನು ಸ್ಮರಿಸಿಕೊಂಡು, ವಿಶೇಷವಾಗಿ ಭಯಪಟ್ಟಿತು. ಬಳಿಕ, ಮಹಾವಿಷ್ಣುಹೃದಯರಾದ ಆ ದೇವತೆಗಳೆಲ್ಲರೂ ಈರೀತಿಯಾಗಿ ಆಲೋಚನೆಮಾಡಲು ಪ್ರಕ್ರಮಿಸಿದರು ॥೪—೫॥

ದೇವತೆಗಳು ಹೇಳಿದುದೇನೆಂದರೆ :—

ನಾವು, ಪೂರ್ವದಲ್ಲಿ ದುರಾತ್ಮನಾದ ರಾವಣನಿಂದಲೂ—ಕ್ರೂರನಾದ ಕುಂಭಕರ್ಣನಿಂ

ಕುಮ್ಭಕರ್ಣೇನ ಘೋರೇಣ ಮೇಘನಾದೇನ ಪಾಪಿನಾ ॥೬॥
ವಿಷ್ಣುಂ ಶರಣಮಾಪನ್ನಾಃ ಶಙ್ಖಚಕ್ರಗದಾಧರಮ್ ।
ಸರ್ವಾಪದ್ವಿನಿಹನ್ತಾರಂ ಮಹಾಬಲಮರಿನ್ದಮಮ್ ॥೭॥
ಸ ನೋ ವರಂ ಪ್ರದಾಯೈವ ರಾವಣಂ ಹನ್ತುಮುದ್ಯತಃ ।
ಜಜ್ಞೇ ದಾಶರಥೇ ಗೇಹೇ ಪುತ್ರೇಷ್ಟ್ಯಾಂ ಹವಿಷಿ ಪ್ರಭುಃ ॥೮॥
ಸ ರಾಮಃ ಪ್ರಭುರಸ್ಮಾಕಂ ವರ್ಧತೇ ಪಿತೃವೇಶ್ಮನಿ ।
ವೃದ್ಧಿಂ ಗತೋ ಮಹಾತೇಜಾಃ ಯುವರಾಜಾರ್ಹತಾಂ ಗತಃ ॥೯॥
ತಾದೃಶಂ ತನಯಂ ದೃಷ್ಟ್ವಾ ಸ್ನೇಹಸನ್ಪ್ಲುತಮಾನಸಃ ।
ಕರ್ತುಮೈಚ್ಛದ್ದಶರಥಃ ರಾಜ್ಯಭಾರಧುರನ್ಧರಮ್ ॥೧೦॥
ಯದಿ ರಾಜಾ ಭವೇದ್ರಾಮಃ ಪ್ರಜಾಪಾಲನದೀಕ್ಷಿತಃ ।
ತದೇವ ಕಾರ್ಯಂ ಭೂಪಾನಾಂ ನಾನ್ಯತ್ ಕಾರ್ಯಂ ವಿಶಿಷ್ಯತೇ ॥೧೧॥
ರಾವಣಾಸುರಸಂಹಾರಂ ನ ಕರಿಷ್ಯತಿ ರಾಘವಃ ।
ಅವತಾರಫಲಾಭಾವಾತ್ ಪ್ರಾರ್ಥನಾ ವಿಫಲಾ ಹಿ ನಃ ।
ಅಭಿಷೇಕಸ್ಯ ವಿಘ್ನಾಯ ಯತ್ನಂ ಕುರ್ವನ್ತು ದೇವತಾಃ ॥೧೨॥
ತತ್ರ ಕೇಚಿತ್ ಸುರಾರ್ಜಾಃ ರಾಮಭಕ್ತಿಪರಾಯಣಾಃ ।

ದಲೂ—ಮಹಾಪಾಪಾತ್ಮನಾದ ಇಂದ್ರಜಿತುವಿನಿಂದಲೂ ಬಾಧಿತರಾಗಿ, ಶಂಖಚಕ್ರಗದಾಧರ ನಾಗಿಯೂ—ಸಕಲ ವಿಪತ್ಪರಿಹಾರಕನಾಗಿಯೂ—ಮಹಾಬಲಯುಕ್ತನಾಗಿಯೂ—ಶತ್ರುಸಂ ಹಾರಕನಾಗಿಯೂ ಇರುವ ಶ್ರೀವನ್ಮಹಾವಿಷ್ಣುವನ್ನು ಮರೆಹೊಕ್ಕೆವು ॥೬—೭॥

ಆ ಮಹಾಪ್ರಭುವು, ನಮಗೆ ವರಪ್ರದಾನಮಾಡಿ, ಒಡನೆಯೇ ರಾವಣನನ್ನು ಕೊಲ್ಲುವು ದಕ್ಕುದ್ಯುಕ್ತನಾಗಿ, ದಶರಥನ ಮನೆಯಲ್ಲಿ, ಪುತ್ರಕಾಮೇಷ್ಟಿಯ ಹವಿಸ್ಸಿನೊಳಗೆ ಅವತರಿಸಿದನು॥

ಆ ನಮ್ಮ ಒಡೆಯನಾದ ಶ್ರೀರಾಮನು, ತಂದೆಯ ಮನೆಯಲ್ಲಿ ಬೆಳೆಯುತ್ತಿರುವನು. ಈಗ ಚೆನ್ನಾಗಿ ಬೆಳೆದು, ಮಹಾ ತೇಜಸ್ಸಂಪನ್ನನಾಗಿ, ಯುವರಾಜಪದವಿಗೆ ಯೋಗ್ಯನಾಗಿರುವನು ॥

ಇಂತಹ ಪುತ್ರನನ್ನು ಕಂಡು, ಸ್ನೇಹಾವಿಷ್ಟಹೃದಯನಾದ ದಶರಥನು, ತನ್ನ ಮಗನನ್ನು ರಾಜ್ಯಭಾರಧುರಂಧರನನ್ನಾಗಿ ಮಾಡಲೆಳಸಿರುವನು ॥೧೦॥

ಹೀಗೆ ಶ್ರೀರಾಮನು ದೊರೆಯಾಗಿಬಿಟ್ಟಪಕ್ಷದಲ್ಲಿ, ಆಗ ಅವನು ಕೇವಲ ಪ್ರಜಾಪರಿಪಾಲ ನೆಯಲ್ಲಿಯೇ ನಿರತನಾಗಿಬಿಡುವನು. ದೊರೆಗಳಿಗೆ ಪ್ರಜಾಪರಿಪಾಲನೆಯೇ ಮುಖ್ಯಕಾರ್ಯವಲ್ಲದೆ, ಮತ್ತಾವ ಕಾರ್ಯವೂ ಪ ಬಲವಾಗಿ ಕಾಣುವುದಿಲ್ಲ ॥೧೧॥

ಹೀಗಾಗಿಬಿಟ್ಟಬಳಿಕ, ಶ್ರೀರಾಮನು ರಾವಣಾಸುರನ ಸಂಹಾರವನ್ನು ಮಾಡುವುದೇ ಇಲ್ಲ. ಹೀಗೆ ಅವನ ಅವತಾರಕ್ಕೆ ಮುಖ್ಯಫಲವೇ ನೆರವೇರದೆಹೋದಬಳಿಕ, ನಮ್ಮ ಪ್ರಾರ್ಥನೆಯೆಲ್ಲವೂ ವ್ಯರ್ಥವೇ ಆದಂತಾಯ್ತು. ಆದುಕಾರಣ, ಸಮಸ್ತ ದೇವತೆಗಳೂ ಈಗ ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನವುಂಟಾಗುವಂತೆ ಪ್ರಯತ್ನಮಾಡಬೇಕಾಗಿರುವುದು. (ಎಂದು ಹೇಳುತಿದ್ದರು)॥

ಆ ಸಮಯದಲ್ಲಿ, ರಾಮಭಕ್ತಿಪರಾಯಣರಾದ ಕೆಲವುಮಂದಿ ದೇವತೆಗಳು, ಪಟ್ಟಾಭಿ

ವಚನಂ ಪ್ರವದನ್ತಿ ಸ್ಮ ವಿಘ್ನವಾಚಾ ನಿಬೀಡಿತಾಃ ॥೧೩॥
ರಾಮಾಭಿಷೇಕವಿಘ್ನಾಯ ಮಾಸ್ತು ಯತ್ನಃ ಸುರರ್ಷಯಃ ।
ಸರ್ವೇ ವಯಂ ತತ್ರ ಗತ್ವಾ ದ್ರಕ್ಷ್ಯಾಮಸ್ತಂ ಮಹೋತ್ಸವಮ್ ॥೧೪॥
ಅಭಿಷೇಕಾರ್ದ್ರಶಿರಸಂ ಮಙ್ಗಳಕ್ಷೌಮವಾಸಸಮ್ ।
ಚಾಮರೈರ್ವೀಜ್ಯಮಾನಂ ಚ ಶ್ವೇತಚ್ಛತ್ರಾವೃತಾನನಮ್ ॥೧೫॥
ಜಾನಕೀಸಹಿತಂ ದೇವಂ ರತ್ನಸಿಂಹಾಸನೇ ಸ್ಥಿತಮ್ ।
ಸರ್ವಮಙ್ಗಳಸಮ್ಪೂರ್ಣಂ ದಿವ್ಯಭೂಷಣಭೂಷಿತಮ್ ॥೧೬॥
ಅನನ್ತಾದಿತ್ಯಸಙ್ಕಾಶಂ ಸುರಾಸುರನಮಸ್ಕೃತಮ್ ।
ದ್ರಕ್ಷ್ಯಾಮೋ ರಾಘವಂ ದೇವಾಃ ತನ್ನೋ ನೇತ್ರಫಲಂ ಮಹತ್ ॥೧೭॥
ಶರೀರಭಾಜಾಂ ಸರ್ವೇಷಾಂ ತತಃ ಕಿಮುಧಿಕಂ ಪರಮ್ ।
ಜನ್ಮಜನ್ಮಾನ್ತರೇ ಪುಣ್ಯಂ ಯದಿ ತದ್ದರ್ಶನಂ ಭವೇತ್ ॥೧೮॥
ಧ್ಯಾತ್ವಾ ತಥಾವಿಧಂ ರಾಮಂ ಸನಕಾದ್ಯಾಃಪೀಶ್ವರಮ್ ।
ಪುಲಕಾಙ್ಕಿತಸರ್ವಾಙ್ಗಾಃ ಘನಾನನ್ದಾಶ್ರುಭಿರ್ವೃತಾಃ ॥೧೯॥
ಬ್ರಹ್ಮಾನನ್ದೇನ ಸಮ್ಪನ್ನಾಃ ಬಾಹ್ಯಂ ವಿಸ್ಮೃತ್ಯ ಪಣ್ಡಿತಾಃ ।

ಷೇಕಕ್ಕೆ ವಿಘ್ನವುಂಟುಮಾಡಬೇಕೆಂಬ ಮಾತಿನಿಂದ ಸಂಕಟಪಟ್ಟವರಾಗಿ, ಹೀಗೆ ಮಾತನಾಡಿದರು ॥೧೩॥

ಅಯ್ಯಾ ದೇವತೆಗಳಿರಾ! ಎಲೈ ಮಹರ್ಷಿಗಳಿರಾ! ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನವುಂಟುಮಾಡುವುದಕ್ಕಾಗಿ ಪ್ರಯತ್ನಪಡಬೇಡಿರಿ. ನಾವೆಲ್ಲರೂ ಅಲ್ಲಿಗೆ ಹೋಗಿ ಆ ಮಹೋತ್ಸವವನ್ನು ನೋಡೋಣ ॥೧೪॥

ಪಟ್ಟಾಭಿಷೇಕಮಾಡಿಕೊಂಡು ಅದರಿಂದ ಆರ್ದ್ರಶಿರಸ್ಕನಾಗಿಯೂ, ಮಂಗಳಾರ್ಹವಾದ ಪಟ್ಟವಸ್ತ್ರವನ್ನು ಧರಿಸಿದವನಾಗಿಯೂ, ಚಾಮರಗಳಿಂದ ಬೀಸಲ್ಪಡುತಿರುವನಾಗಿಯೂ, ಶ್ವೇತ ಚ್ಛತ್ರದಿಂದ ಆವೃತವಾದ ಮುಖವುಳ್ಳವನಾಗಿಯೂ, ಜಾನಕೀಸಹಿತನಾಗಿ ದಿವ್ಯವಾದ ರತ್ನಸಿಂಹಾಸನದಲ್ಲಿ ಕುಳಿತವನಾಗಿಯೂ, ಸರ್ವಮಂಗಳ ಸಂಪೂರ್ಣನಾಗಿಯೂ, ದಿವ್ಯಾಲಂಕಾರಭೂಷಿತನಾಗಿಯೂ, ಕೋಟಿಸೂರ್ಯಪ್ರಕಾಶನಾಗಿಯೂ, ಸುರ ಅಸುರ ಮುನಿಗಳಿಂದ ಸ್ತುತಿಸಲ್ಪಡುತಿರುವನಾಗಿಯೂ ಇರುವ, ಆ ಶ್ರೀರಾಮನನ್ನು, ನಾವುಗಳು ಪಟ್ಟಾಭಿಷೇಕಸಮಯದಲ್ಲಿ ನೋಡೋಣ. ಎಲೈ ದೇವತೆಗಳಿರಾ! ಅದೇ ನಮ್ಮ ಕಣ್ಣುಗಳಿಗೆ ವಿಶೇಷವಾದ ಫಲವೆಂದು ಭಾವಿಸುವೆವು ॥೧೫-೧೭॥

ಜನ್ಮಜನ್ಮಾಂತರಗಳಲ್ಲಿಯೂ ಅತಿಪವಿತ್ರವಾದ ಆ ಶ್ರೀರಾಮನ ದರ್ಶನವುಂಟಾಗುತಿದ್ದ ಪಕ್ಷದಲ್ಲಿ, ಸಮಸ್ತಪ್ರಾಣಿಗಳಿಗೂ ಅದಕ್ಕಿಂತ ಅಧಿಕವಾದ ಪರಮಾರ್ಥವಾವುದಿರುವುದು? ॥

ಮಹಾ ಜ್ಞಾನಿಗಳಾದ ಸನಕಾದಿ ಮುನಿಗಳೂ ಕೂಡ, ಅಂತಹ ಸರ್ವಲೋಕೇಶ್ವರನಾದ ಶ್ರೀರಾಮನನ್ನು ಧ್ಯಾನಮಾಡಿ, ಸರ್ವಾಂಗಗಳಲ್ಲಿಯೂ ರೋಮಾಂಚವುಂಟಾದವರಾಗಿ, ನಿಬಿಡವಾದ ಆನಂದಬಾಷ್ಪದಿಂದ ಪರಿಪೂರ್ಣರಾಗಿ, ಬಾಹ್ಯವಿಷಯಗಳನ್ನೆಲ್ಲ ಮರೆತು, ಕೇವಲ ಬ್ರಹ್ಮ

ಮನ್ವಾನಾಜನ್ಮಸಾಫಲ್ಯಂ ಯೇನ ಖ್ಯಾತಾಭವನ್ತಿ ತೇ ॥೧೦॥
ವಯಂ ಗಚ್ಛಾಮಹೇ ತಸ್ಮಾತ್ ಮಹೋತ್ಸವದಿದೃಕ್ಷವಃ ।
ಕರುಣಾದ್ರ್ರಮನಾರಾಮಃ ಸ ನಃ ಕಾರ್ಯಂ ವಿಧಾಸ್ಯತಿ ॥೧೧॥
ಕೇಷುಚಿದ್ವಿಬುಧೇಷ್ವೇವಂ ಉಕ್ತ್ವೇವ್ವಥ ಬೃಹಸ್ಪತಿಃ ।
ಸಞ್ಚಿನ್ತ್ಯ ಮನಸಾ ಸರ್ವಂ ಏವಮಾಹ ಸುರಾ ಪುನಃ ॥೧೨॥
ಪುರಾಽಸುರಃ ಸೋಮಕೋಭೂತ್ ದೇವಾನಾಮಪಿ ಬಾಧಕಃ ।
ಪಾಪಾತ್ಮಾ ಧರ್ಮನಾಶಾರ್ಥಂ ಮನಸ್ಯೇವಮಚಿನ್ತಯತ್ ॥೧೩॥
ವೇದಮೂಲೋ ಹಿ ಸರ್ವೇಷಾಂ ಧರ್ಮೋ ಭವತಿ ಧರ್ಮಿಣಾಮ್ ।
ವೇದವೇದ್ಯೋ ಹಿ ಸದ್ಧರ್ಮಃ ತದನ್ಯಸ್ತಮಸೋ ಭವೇತ್ ॥೧೪॥
ವೇದೇ ನಷ್ಟೇ ಹಿ ಧರ್ಮಾಣಾಂ ನಾಶೋ ಭವತಿ ಸರ್ವತಃ ।
ಧರ್ಮನಾಶೇ ತತಃ ಸರ್ವೇ ಪಾಷಣ್ಡಾಃ ಸ್ಯುರ್ನ ಸಂಶಯಃ ॥೧೫॥
ಇತಿ ಸಞ್ಚಿನ್ತ್ಯ ಪಾಪಿಷ್ಠೋ ವೇದಾಹರಣಕೌತುಕಃ ।
ಬ್ರಹ್ಮಲೋಕಮನುಪ್ರಾಪ್ಯ ಬ್ರಹ್ಮಣೋಪ್ಯನ್ತಿಕಂ ಯಯೌ ॥೧೬॥

ನಂದಸಂಪನ್ನರಾಗಿರುವರು. ಇದರಿಂದಲೇ, ಅವರು ತಮ್ಮ ಜನ್ಮಸಾರ್ಥಕವಾಯ್ತೆಂದು ತಿಳಿದುಕೊಳ್ಳುವರಲ್ಲದೆ, ಪ್ರಪಂಚದಲ್ಲೆಲ್ಲ ವಿಶೇಷವಾಗಿ ಪ್ರಖ್ಯಾತಿಯನ್ನೂ ಪಡೆದವರಾಗಿರುವರು ॥

ಹೀಗಿರುವುದರಿಂದ, ನಾವು ಆ ಮಹೋತ್ಸವವನ್ನು ನೋಡುವುದಕ್ಕೆ ಹೋಗೋಣ. ಆ ಶ್ರೀರಾಮನು ಕೇವಲ ಕರುಣಾರ್ದ್ರಹೃದಯನಾಗಿರುವುದರಿಂದ, ಅವನೇ ನಮ್ಮ ಕಾರ್ಯಗಳನ್ನೆಲ್ಲ ನೆರವೇರಿಸುವನು ॥೧೧॥

ಹೀಗೆಂದು ಕೆಲವುಮಂದಿ ದೇವತೆಗಳು ಹೇಳುತ್ತಿರಲಾಗಿ, ಬೃಹಸ್ಪತಿಯು ತನ್ನ ಮನಸ್ಸಿನಲ್ಲಿ ಆಲೋಚನೆಮಾಡಿಕೊಂಡು, ದೇವತೆಗಳನ್ನು ಕುರಿತು ಹೀಗೆ ಹೇಳಿದನು ॥೧೨॥

ಆರ್ಯಾ ದೇವತೆಗಳಿರಾ! ಪೂರ್ವದಲ್ಲಿ, ಮಹಾಪಾಪಾತ್ಮನಾದ ಸೋಮಕನೆಂಬ ರಾಕ್ಷಸನೊಬ್ಬನಿದ್ದನು. ಅವನು ದೇವತೆಗಳಿಗೂ ಬಾಧಕನಾಗಿರುತ, ಒಂದಾನೊಂದು ಸಮಯದಲ್ಲಿ, ತನ್ನ ಮನಸ್ಸಿನೊಳಗೆಯೇ ಹೀಗೆ ಯೋಚನೆಮಾಡಿದನು ॥೧೩॥

ಲೋಕದಲ್ಲಿ, ಧರ್ಮಾನುಷ್ಠಾನಪರರಿಗೆಲ್ಲ ವೇದಮೂಲಕವಾಗಿಯೇ ಸಕಲಧರ್ಮಗಳೂ ಇರುವುವು. ವೇದದಿಂದ ತಿಳಿಯಲ್ಪಡತಕ್ಕುದೇ ಉತ್ತಮವಾದ ಧರ್ಮವೆನ್ನಿಸಲ್ಪಡುವುದು; ತದ್ಭಿನ್ನವಾದುದು ತಾಮಸವೆನ್ನಿಸಲ್ಪಡುವುದು ॥೧೪॥

ವೇದವು ನಷ್ಟವಾದರೆ, ಎಲ್ಲಾಕಡೆಯಲ್ಲಿಯೂ ಧರ್ಮಗಳಿಗೆ ನಾಶವೇ ಸಂಭವಿಸುವುದು. ಧರ್ಮನಾಶವಾದರೆ, ಅಮೇಲೆ ಸರ್ವರೂ ಪಾಷಂಡರೇ ಆಗಿಬಿಡುವರು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ ॥೧೫॥

ಹೀಗೆಂದು ಯೋಚನೆಮಾಡಿ, ಮಹಾ ಪಾಪಿಷ್ಠನಾದ ಆ ಸೋಮಕಾಸುರನು, ವೇದಗಳನ್ನು ಅಪಹರಿಸಬೇಕೆಂದು ಕುತೂಹಲಪಟ್ಟವನಾಗಿ, ಬ್ರಹ್ಮಲೋಕಕ್ಕೆ ಹೋಗಿ, ಬ್ರಹ್ಮನ ಸವಿಾಪವನ್ನು ಸೇರಿದನು ॥೧೬॥

ವಞ್ಚಯಿತ್ವಾ ಪದ್ಮಯೋನಿಂ ವೇದಾಶ್ಚ ಮೂರ್ತಿಮತೋಹರತ್ ।
ವೇದಾಶ್ಚ ಹೃತ್ವಾ ಹರೇರ್ಭೀತಃ ಸಮುದ್ರಜಲಮಾವಿಶತ್ ॥೨೬॥
ಬ್ರಹ್ಮಣಾ ಪ್ರಾರ್ಥಿತೋ ದೇವಃ ಸೋಮಕಾಸುರಹಿಂಸಕಃ ।
ತ್ರಿಸಪ್ತಸ್ಯಂ ಯೋಜನಾನಾಂ ಮತ್ಸ್ಯರೂಪಧರೋಭವತ್ ॥೨೭॥
ಸಪ್ತ ಸಂಕ್ಷೋಭಯಾಮಾಸ ಸಾಗರಾಞ್ಜಲವಾಸಿನಃ ।
ದೃಷ್ಟ್ವಾ ಮತ್ಸ್ಯವಪುಃ ಸರ್ವೇ ವಿಸ್ಮಿತಾಭಯಕಮ್ಪಿತಾಃ ॥೨೮॥
ಜಲಮಧ್ಯೇ ಮಹಾದೇಹೋ ಬಭ್ರಾಮು ಪರಿತೋ ಹರಿಃ ।
ಸೋಮಕಾಸುರಸಂಹಾರಂ ಕರ್ತುಮಿಚ್ಛ ನ್ ಮಹಾಮತಿಃ ॥೨೯॥
ಧರ್ಮಹಾನಿಂ ನ ಸಹತೇ ಹರಿರ್ಮತ್ಸ್ಯಸ್ವರೂಪಧೃತ್ ।
ಜಗದ್ವೇದವಿಹೀನತ್ವಾತ್ ಅನ್ಧಕಾರಪರಿಪ್ಲುತಮ್ ॥೩೦॥
ಮಹೋಗ್ರವಪುಷಾ ವಿಷ್ಣುಃ ಹತ್ವಾ ಸೋಮಕದಾನವಮ್ ।
ಆದದಾದ್ ಬ್ರಹ್ಮಣೇ ವೇದಾಞ್ ಲೋಕಸಂರಕ್ಷಣೋದ್ಯತಃ ॥೩೧॥
ಸೋಮಕಾಸುರಗರ್ಭಸ್ಥಾಃ ವ್ಯತ್ಯಸ್ತಾ ವೇದರಾಶಯಃ ॥೩೨॥
ದೃಷ್ಟ್ವಾ ಬ್ರಹ್ಮಾ ವೇದರಾಶೀಃ ವ್ಯತ್ಯಸ್ತ ಇತಿ ಚಿನ್ತಯನ್ ।

ಅಲ್ಲಿ ಬ್ರಹ್ಮದೇವನನ್ನು ವಂಚಿಸಿ, ಮೂರ್ತಿಮತ್ತಾಗಿರುವ ವೇದಗಳನ್ನೂ ಅಪಹರಿಸಿದನು. ವೇದಗಳನ್ನು ಅಪಹರಿಸಿ, ವಿಷ್ಣುವಿಗೆ ಹೆದರಿಕೊಂಡು, ಸಮುದ್ರದ ನೀರಿನೊಳಗೆ ಮುಳುಗಿಕೊಂಡನು ॥೨೬॥

ಆಬಳಿಕ, ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟ ಮಹಾವಿಷ್ಣುವು, ಸೋಮಕಾಸುರನನ್ನು ಕೊಲ್ಲುವುದಕ್ಕಾಗಿ, ಮೂರುಸಾವಿರಯೋಜನ ವುದ್ದವುಳ್ಳ ಮತ್ಸ್ಯರೂಪವನ್ನು ಧರಿಸಿದವನಾದನು ॥೨೭॥

ಆಗ, ಸಪ್ತಸಮುದ್ರಗಳನ್ನೂ ಕಲಕಿಬಿಟ್ಟನು. ಇಂತಹ ಮತ್ಸ್ಯಮೂರ್ತಿಯನ್ನು ಕಂಡು, ಸಮಸ್ತರಾದ ಜಲಚರರೂ ಆಶ್ಚರ್ಯಪಟ್ಟು ಭಯದಿಂದ ನಡುಗಲುಪಕ್ರಮಿಸಿದರು ॥೨೮॥

ಆ ಸಮಯದಲ್ಲಿ, ಆ ಶ್ರೀಮಹಾವಿಷ್ಣುವು, ಸೋಮಕಾಸುರಸಂಹಾರವನ್ನು ಮಾಡಬೇಕೆಂದು ಇಚ್ಛಿಸಿ ನೀರಿನೊಳಗೆ ಸುತ್ತಲೂ ಸಂಚರಿಸುತಿದ್ದನು ॥೨೯॥

ಮತ್ಸ್ಯರೂಪಧರನಾಗಿರುವ ಆ ಮಹಾವಿಷ್ಣುವು, ಲೋಕದಲ್ಲಿ ಧರ್ಮಹಾನಿಯುಂಟಾಗುತಿರುವುದನ್ನು ಸಹಿಸಲಾರದವನಾದನು. ಪ್ರಪಂಚವೆಲ್ಲವೂ, ವೇದವಿಹೀನವಾಗಿ ಅಂಧಕಾರಮಯವಾಗಿಬಿಟ್ಟಿತು ॥೩೧॥

ಹೀಗೆ, ಲೋಕರಕ್ಷಣೆಯಲ್ಲಿ ಉದ್ಯುಕ್ತನಾದ ಆ ಶ್ರೀ ಮಹಾವಿಷ್ಣುವು, ಅತ್ಯುಗ್ರವಾದ ಮತ್ಸ್ಯಾವತಾರದಿಂದ ಸೋಮಕಾಸುರನನ್ನು ಸಂಹರಿಸಿ, ಬ್ರಹ್ಮನಿಗೆ ವೇದಗಳನ್ನು ತಂದುಕೊಟ್ಟನು. ಆಗ ಸೋಮಕಾಸುರನ ಗರ್ಭದಲ್ಲಿ ನೆಲೆಸಿಬಿಟ್ಟಿದ್ದಕಾರಣ, ವೇದರಾಶಿಗಳೆಲ್ಲವೂ ಸ್ವಲ್ಪ ವ್ಯತ್ಯಸ್ತಗಳಾಗಿಹೋದುವು ॥೩೨–೩೩॥

ಇದನ್ನು ನೋಡಿದ ಚತುರ್ಮುಖಬ್ರಹ್ಮನು, ವೇದರಾಶಿಯೆಲ್ಲವೂ ವ್ಯತ್ಯಸ್ತವಾಯ್ತೆಂದು ಚಿಂತೆಪಟ್ಟವನಾಗಿ, ಮಹಾಬುದ್ಧಿಶಾಲಿಯಾದ ತನ್ನ ಮೊಮ್ಮಗನಾದ ರಾವಣನನ್ನು ಕರೆದು,

ಆಹೂಯ ರಾವಣಂ ಬ್ರಹ್ಮಾ ಸಪುತ್ರಂ ಬುದ್ಧಿಮತ್ತರಮ್ ।
ಬುದ್ಧಿಮಾನಸಿ ಸಪ್ತಸ್ತ್ವಂ ವೇದರಾಶೀ೯ ಸಮಾಕುರು ॥೩೪॥
ಇತಿ ಬ್ರಹ್ಮವಚಃ ಶ್ರುತ್ವಾ ರಾವಣೋ ಬುದ್ಧಿಮತ್ತರಃ ।
ಸರ್ವಾ೯ ವೇದಾ೯ ಸಮಾಚಕ್ರೇ ಯಥಾಪೂರ್ವಂ ವ್ಯವಸ್ಥಿತಾ೯ ॥೩೫॥
ವೈದಿಕಂ ಕರ್ಮ ಕುರುತೇ ವೇದಾಧ್ಯಯನವಾನಪಿ ।
ಶ್ರದ್ಧಯಾ ಪರಯೋಪೇತಃ ಶಿವಪೂಜಾಧುರನ್ಧರಃ ।
ಪೌಲಸ್ತ್ಯತನಯಃ ಸಾಕ್ಷಾತ್ ಬ್ರಹ್ಮತೇಜಸ್ಸಮನ್ವಿತಃ ॥೩೬॥
ತಾದೃಶಂ ರಾಘವೋ ಹನ್ಯಾತ್ ಕಥಂ ಬ್ರಾಹ್ಮಣವತ್ಸಲಃ ॥೩೭॥
ಬ್ರಹ್ಮಣ್ಯಃ ಸತ್ಯಸನ್ಧಶ್ಚ ಪ್ರಜಾನಾಂ ಚ ಹಿತೇ ರತಃ ।
ವಿನಾಪರಾಧಂ ಧರ್ಮಜ್ಞೋ ರಾವಣಂ ನ ಹನಿಷ್ಯತಿ ॥೩೮॥
ರಾಮೋಯೋಧ್ಯಾಪುರೀಮಧ್ಯೇ ಯದಿ ರಾಜಾ ಭವಿಷ್ಯತಿ ।
ದಣ್ಡಕಾರಣ್ಯಸಂಸ್ಥಾನಾಂ ರಾಕ್ಷಸಾನಾಂ ಕಥಂ ವಧಃ ॥೩೯॥
ರಾಕ್ಷಸಾನಾಂ ವಧಾರ್ಥಾಯ ರಾಮಾವತರಣಂ ಕೃತಮ್ ।
ಸ್ವಕಾರ್ಯವಿಘ್ನಂ ರಾಮೋಪಿ ಮನ್ಯತೇ ಸೋಭಿಷೇಚನಮ್ ॥೪೦॥

ಅವನನ್ನು ಕುರಿತು 'ವತ್ಸ! ನೀನು ಕೇವಲ ಬುದ್ಧಿಶಾಲಿಯಾಗಿರುವೆ; ವೇದರಾಶಿಗಳನ್ನೆಲ್ಲ ಕ್ರಮಪಡಿಸುವನಾಗು' ಎಂದು ಆಜ್ಞಾಪಿಸಿದನು ॥೩೪॥

ಹೀಗೆಂದು ಹೇಳುತ್ತಿರುವ ಬ್ರಹ್ಮನ ಮಾತನ್ನು ಕೇಳಿದವನಾಗಿ, ಮಹಾವಾಜ್ಞಾನಾದ ರಾವಣನು, ಸಮಸ್ತ ವೇದಗಳನ್ನೂ ಪೂರ್ವದಂತೆ ವ್ಯವಸ್ಥೆಮಾಡಿ ಕ್ರಮಪಡಿಸಿದನು ॥೩೫॥

ಇದಿಷ್ಟು ಮಾತ್ರವೇ ಅಲ್ಲ; ಆ ರಾವಣನು, ಮಹಾಶ್ರದ್ಧಾಯುಕ್ತನಾಗಿಯೂ ವೇದಾಧ್ಯಯನಸಂಪನ್ನನಾಗಿಯೂ ಶಿವಪೂಜಾಧುರಂಧರನಾಗಿಯೂ ಇದ್ದುಗೊಂಡು, ವೇದೋಕ್ತವಾದ ಕರ್ಮಗಳನ್ನೆಲ್ಲ ಮಾಡುತ್ತಿರುವನು. ಇದೂ ಅಲ್ಲದೆ, ಆತನು ಸಾಕ್ಷಾತ್ ಪುಲಸ್ತ್ಯಬ್ರಹ್ಮನ ಮಗನು; ಬ್ರಹ್ಮತೇಜಸ್ಸಿನಿಂದ ಯುಕ್ತನಾಗಿರುವನು' ॥೩೬॥

ಇಂತಹ ರಾವಣನನ್ನು, ಬ್ರಾಹ್ಮಣವತ್ಸಲನಾಗಿರತಕ್ಕ ಶ್ರೀರಾಮನು ಹೇಗೆತಾನೆ ಹೊಡೆಯುವನು? ಬ್ರಾಹ್ಮಣಹಿತನೂ ಸತ್ಯಸಂಧನೂ ಪ್ರಜಾಹಿತತತ್ಪರನೂ ಧರ್ಮಸೂಕ್ಷ್ಮವನ್ನು ತಿಳಿದವನೂ ಆಗಿರುವ ಶ್ರೀರಾಮನು, ಅಪರಾಧವಾವುದೂ ಇಲ್ಲದೆ ರಾವಣನನ್ನು ಎಂದಿಗೂ ಕೊಲ್ಲುವುದಿಲ್ಲ ॥೩೭—೩೮॥

ಹೀಗಿರುವಾಗ, ಶ್ರೀರಾಮನು ಅಯೋಧ್ಯಾಪಟ್ಟಣದೊಳಗೆ ರಾಜನಾಗಿ ವಾಸಮಾಡಿಕೊಂಡಿರುವನಾದರೆ, ದಂಡಕಾರಣ್ಯದಲ್ಲಿರುವ ರಾಕ್ಷಸರಿಗೆ ವಧವು ಹೇಗೆ ಉಂಟಾಗುವುದು? ॥೩೯॥

ಮುಖ್ಯವಾಗಿ ರಾಕ್ಷಸರ ಕೊಲೆಗಾಗಿಯೇ ಶ್ರೀರಾಮನ ಅವತಾರವು ಮಾಡಲ್ಪಟ್ಟಿರುವುದು. ಹೀಗಿರುವುದರಿಂದ, ಆ ಶ್ರೀರಾಮನೂ ಕೂಡ, ಪಟ್ಟಾಭಿಷೇಕವನ್ನು ತನ್ನ ಕಾರ್ಯಕ್ಕೆ ವಿಘ್ನವೆಂದೇ ಭಾವಿಸುವನು ॥೪೦॥

ಅತೋಭಿಷೇಕವಿಘ್ನಾಯ ಯತಧ್ವಂ ಸುರಸತ್ತಮಾಃ ।
ವಃ ಸರ್ವಕಾರ್ಯನಿಷ್ಪತ್ತಿಃ ಭವಿಷ್ಯತಿ ನ ಸಂಶಯಃ ॥೪೧॥

ಶ್ರೀ ಸೂತಉವಾಚ.

ಶ್ರುತ್ವಾ ದೇವಗುರೋರ್ವಾಕ್ಯಂ ಸರ್ವದೇವಸಭಾನ್ತರೇ ।
ಶಙ್ಕಿತೋಪಿ ತದಾ ದೇವಾ ಇದಮೂಹ ಶುಭಂ ವಚಃ ॥೪೨॥

ಶೃಣುಧ್ವಂ ಸಕಲಾದೇವಾಃ ಹಿತಂ ವಃ ಪ್ರವದಾಮ್ಯಹಮ್ ।
ಬೃಹಸ್ಪತಿಃ ಸುರಾಚಾರ್ಯೋ ಯದವೋಚನ್ಮಹಾಮತಿಃ ।
ತದೇವ ಕಾರ್ಯಂ ಯುಷ್ಮಾಭಿಃ ತೇನ ವಃ ಶ್ರೇಯಸಾಂ ಪದಮ್ ॥೪೩॥
ಬ್ರಹ್ಮಣ್ಯಂ ರಾಘವೋ ದೇವಾಃ ವೇದಾರ್ಥಜ್ಞಂ ದ್ವಿಜಾಗ್ರಣಿಮ್ ।
ಯದುಕ್ತಂ ನ ಹಿನಸ್ತೀತಿ ತತ್ತತ್ವಂ ಚ ವದಾಮ್ಯಹಮ್ ॥೪೪॥
ಅಗ್ನಿಹೋತ್ರಾಶ್ಚ ವೇದಾಶ್ಚ ರಾಕ್ಷಸಾನಾಂ ಗೃಹೇಗೃಹೇ ।
ದಯಾ ಸತ್ಯಂ ಚ ಶೌಚಂ ಚ ರಾಕ್ಷಸಾನಾಂ ನ ವಿದ್ಯತೇ ॥೪೫॥
ಶಿವಭಕ್ತೋಪಿ ವೇದೋಕ್ತಕರ್ಮಠೋಪಿ ದಶಾನನಃ ।
ಧರ್ಮಸತ್ಯದಯಾಶೌಚಾಭಾವಾದ್ವಧ್ಯೋ ಹಿ ರಾಘವಾತ್ ॥೪೬॥

ಅದುಕಾರಣ, ಎಲ್ಲೆ ಸುರಶ್ರೇಷ್ಠರಾ! ಈಗ ನೀವೆಲ್ಲರೂ ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನವುಂಟಾಗುವಂತೆ ಪ್ರಯತ್ನಪಡಿರಿ. ಇದರಿಂದ, ನಿಮಗೆ ಸಕಲಕಾರ್ಯಸಿದ್ಧಿಯೂ ಆಗುವುದು; ಸ್ವಲ್ಪವೂ ಸಂಶಯವಿಲ್ಲ. (ಎಂದು ಬೃಹಸ್ಪತಿಯು ಹೇಳಿದನು) ॥೪೧॥

ಶ್ರೀಸೂತರು ಶೌನಕಾದಿಗಳಿಗೆ ಹೇಳುವರು :—

ಎಲ್ಲೆ ಶೌನಕಾದಿಗಳಿರಾ! ಹೀಗೆಂದು ಹೇಳುತಿರುವ ಬೃಹಸ್ಪತಿಯ ಮಾತನ್ನು ಕೇಳಿ, ಆ ಸಮಸ್ತ ದೇವತೆಗಳ ಸಭೆಯ ಮಧ್ಯದಲ್ಲಿ, ಸಾಕ್ಷಾನ್ಮಹೇಶನೂ ಕೂಡ ದೇವತೆಗಳನ್ನು ಕುರಿತು, ಈ ಶುಭವಾದ ಮಾತನ್ನು ಹೇಳಿದನು ॥೪೨॥

ಎಲ್ಲೆ ಸಮಸ್ತರಾದ ದೇವತೆಗಳಿರಾ! ಕೇಳಿರಿ; ನಾನು ನಿಮಗೆ ಹಿತವಾದ ಮಾತನ್ನು ಹೇಳುವೆನು. ಸಕಲದೇವತೆಗಳಿಗೂ ಆಚಾರ್ಯನಾಗಿಯೂ ಮಹಾಪ್ರಾಜ್ಞನಾಗಿಯೂ ಇರುವ ಈ ಬೃಹಸ್ಪತಿಯು ಯಾವುದನ್ನು ಹೇಳಿದನೋ, ಅದನ್ನೇ ನೀವು ಈಗ ಮಾಡಬೇಕು; ಅದರಿಂದಲೇ ನಿಮಗೆ ಸಕಲ ಶ್ರೇಯಸ್ಸೂ ಉಂಟಾಗುವುದು ॥೪೩॥

ಎಲ್ಲೆ ದೇವತೆಗಳಿರಾ! ಬ್ರಾಹ್ಮಣೋತ್ತಮನೂ ಬ್ರಹ್ಮನಿಷ್ಠನೂ ವೇದಾರ್ಥಜ್ಞಾನಿಯೂ ಆಗಿರುವ ರಾವಣನನ್ನು ಶ್ರೀರಾಮನು ಕೊಲ್ಲುವುದಿಲ್ಲವೆಂಬುದಾಗಿ ಬೃಹಸ್ಪತಿ ಹೇಳಿದುದಾವುದುಂಟೋ, ಅದರ ತತ್ವವನ್ನು ನಾನು ಹೇಳುವೆನು, ಕೇಳಿರಿ ॥೪೪॥

ಪ್ರತಿಯೊಂದು ರಾಕ್ಷಸರ ಮನೆಯಲ್ಲಿಯೂ, ಅಗ್ನಿಹೋತ್ರಗಳೂ ವೇದಘೋಷಗಳೂ ತುಂಬಿರುವುವು; ಆದರೆ, ದಯೆಯೂ ಸತ್ಯವೂ ಶೌಚವೂ ಆ ರಾಕ್ಷಸರಿಗಿರುವುದಿಲ್ಲ ॥೪೫॥

ಅದುಕಾರಣ, ರಾವಣನು ಶಿವಭಕ್ತಶ್ರೇಷ್ಠನಾಗಿದ್ದರೂ, ವೇದೋಕ್ತಕರ್ಮಾನುಷ್ಠಾನತತ್ಪರನಾಗಿದ್ದರೂ, ಅವನಲ್ಲಿ ಧರ್ಮ ಸತ್ಯ ದಯೆ ಶೌಚಗಳಿಲ್ಲದಿರುವಕಾರಣ, ಅವನು ಶ್ರೀರಾಮನಿಗೆ ವಧ್ಯನೇ ಆಗುವನು ॥೪೬॥

ಮುನಿಭಿಶ್ಚ ತಪಸ್ತಪ್ತಂ ರಾಮದರ್ಶನಕಾಂಕ್ಷಿಭಿಃ ।
ಶೀರ್ಣಪರ್ಣಾನಿಲಾಹಾರೈಃ ಕನ್ದಮೂಲಫಲಾಶನೈಃ ॥೪೬॥
ತ್ರಿಮೂರ್ತ್ಯಾದಿಸ್ವರೂಪೇಣ ತಂ ದ್ರಷ್ಟುಂ ಚ ಪರಾತ್ಪರಮ್ ॥೪೮॥
ತದೇವಾಕರ್ಷಕಂ ತಸ್ಯ ರಾಘವಸ್ಯ ಮಹಾತ್ಮನಃ ।
ತಸ್ಮಾದ್ರಾಮಾಭಿಷೇಕಾಯ ವಿಘ್ನಂ ಕುರ್ವನ್ತು ದೇವತಾಃ ।೪೯॥
ಇತ್ಯುಕ್ತ್ವಾ ಭಗವಾ ಶಮ್ಭುಃ ಜಗಾಮ ಸ್ವನಿವೇಶನಮ್ ।
ದೇವದಾನವಗನ್ಧರ್ವೈಃ ಸ್ತೂಯಮಾನೋ ಮಹರ್ಷಿಭಿಃ ॥೫೦॥

ಇತಿ ಶ್ರೀಮದಯೋಧ್ಯಾಕಾಣ್ಡೇ ಶ್ರೀರಾಮಾಭಿಷೇಕವಿಘ್ನಾಲೋಚನಂ
ನಾಮ ತೃತೀಯಃ ಸರ್ಗಃ.



ಇದಲ್ಲದೆ, ಶ್ರೀರಾಮನ ದರ್ಶನವನ್ನು ಅಪೇಕ್ಷಿಸುತ್ತಿರುವ ಮುನಿಗಳು, ಪರಾತ್ಪರನಾದ ಆ ಶ್ರೀರಾಮನನ್ನು ತ್ರಿಮೂರ್ತ್ಯಾದಿರೂಪದಲ್ಲಿ ನೋಡುವುದಕ್ಕೋಸ್ಕರ, ಒಣಗಿದ ಎಲೆಗಳನ್ನೂ ಕಂದಮೂಲಗಳನ್ನೂ ಆಹಾರಮಾಡಿಕೊಂಡು, ಅತಿಘೋರವಾಗಿ ತಪಸ್ಸು ಮಾಡಿರುವರು॥೪೭-೪೮

ಅವರ ತಪಸ್ಸೇ, ಮಹಾತ್ಮನಾದ ಆ ಶ್ರೀರಾಮನನ್ನು ಅಕರ್ಷಿಸತಕ್ಕುದಾಗಿರುವುದು. ಅದುಕಾರಣ, ಈಗ ಸಮಸ್ತದೇವತೆಗಳೂ ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನವನ್ನುಂಟು ಮಾಡಬೇಕು ॥೪೯॥

ಎಂಬುದಾಗಿ ಹೇಳಿ, ಶ್ರೀಪರಮೇಶ್ವರನು, ದೇವ ದಾನವ ಗಂಧರ್ವರಿಂದಲೂ ಮಹರ್ಷಿಗಳಿಂದಲೂ ಸ್ತುತಿಸಲ್ಪಡುತ, ತನ್ನ ನಿವಾಸಸ್ಥಾನಕ್ಕೆ ಹೊರಟುಹೋದನು ॥೫೦॥

ಇದು ಅಯೋಧ್ಯಾಕಾಂಡದಲ್ಲಿ ಶ್ರೀರಾಮಪಟ್ಟಾಭಿಷೇಕ
ವಿಘ್ನಾಲೋಚನವೆಂಬ ಮೂರನೆಯ ಸರ್ಗವು.

ಅಥ ಶ್ರೀಮದಯೋಧ್ಯಾಕಾಣ್ಡೇ ಚತುರ್ಥಃ ಸರ್ಗಃ.

ಶ್ರೀ ಸೂತ ಉವಾಚ.

ತತೋ ದೇವಾಃ ಸಗನ್ಧರ್ವಾಃ ಯಕ್ಷರಾಕ್ಷಸಪನ್ನಗಾಃ ।
ದಿಕ್ಪಾಲಸಹಿತಾಃ ಸರ್ವೇ ಬ್ರಹ್ಮಾಣಮಿದಮಬ್ರುವ ॥೧॥

ಶಿವೋದಿತಂ ವಚೋ ದೇವ ಶ್ರುತಂ ತೇ ಮಧುರಾಕ್ಷರಮ್ ।
ರಮಣೀಯಂ ನ ಜಾನೀಮಃ ಉಪದೇಷ್ಟುಂ ತ್ವಮರ್ಹಸಿ ॥೨॥

ರಾಮಾಭಿಷೇಕವಿಘ್ನಾಯ ಕಥಂ ಯತ್ನೋ ಭವೇದ್ವಿಧೇ ।
ಸರ್ವಂ ಕರತಲಸ್ಥಂ ತೇ ತನ್ನೋ ವಕ್ತುಮಿಹಾರ್ಹಸಿ ॥೩॥

ಬ್ರಹ್ಮೋವಾಚ.

ಸಾಕೇತನಗರೇ ಸರ್ವೇ ರಾಮಭಕ್ತಿಪರಾಯಣಾಃ ।
ರಾಮಾಭಿಷೇಕವಿಘ್ನಾಯ ನ ಯತನ್ತೇ ಮನೀಷಿಣಃ ॥೪॥

ಅಯೋಧ್ಯಾಕಾಂಡದಲ್ಲಿ ನಾಲ್ಕನೆಯ ಸರ್ಗವು.

ಮತ್ತೆ ಶ್ರೀಸೂತರು ಶೌನಕಾದಿಗಳನ್ನು ಕುರಿತು ಹೇಳುವರು:—

ಎಲೈ ಶೌನಕಾದಿಗಳಿರಾ! ಹೀಗೆ ಶ್ರೀಪರಮೇಶ್ವರನು ಹೇಳಿದಬಳಿಕ, ಸಮಸ್ತರಾದ ದೇವತೆಗಳೂ ಗಂಧರ್ವರೂ ಯಕ್ಷ ರಾಕ್ಷಸ ಪನ್ನಗರೂ, ಅಷ್ಟದಿಕ್ಪಾಲಕರೊಡಗೂಡಿದವರಾಗಿ, ಬ್ರಹ್ಮದೇವನನ್ನು ಕುರಿತು ಹೀಗೆ ಹೇಳಿದರು ॥೧॥

ಹೇ ಬ್ರಹ್ಮದೇವ! ಶ್ರೀಪರಮೇಶ್ವರನಿಂದ ಹೇಳಲ್ಪಟ್ಟ ಮಧುರವಾದ ಮಾತನ್ನು ನೀನೂ ಕೇಳಿದೆಯಷ್ಟೆ! ಈಗ ಯಾವುದು ಯುಕ್ತವೆಂಬುದನ್ನು ನಾವರಿಯೆವು; ಅದನ್ನು ನೀನೇ ನಮಗೆ ಹೇಳಿಕೊಡಬೇಕಾಗಿರುವುದು ॥೨॥

ಶ್ರೀರಾಮನ ಅಭಿಷೇಕಕ್ಕೆ ವಿಘ್ನವುಂಟಾಗಲು ಹೇಗೆ ಯತ್ನನಡೆಯಬೇಕು? ನಿನಗೆ ಸಮಸ್ತವೂ ಕರತಲಾಮಲಕವಾಗಿರುವುದಲ್ಲವೆ! ಅದುಕಾರಣ, ಅದನ್ನು ನೀನೇ ನಮಗೆ ಹೇಳಿಕೊಡಬೇಕಾಗಿರುವುದು ॥೩॥

ಈ ಮಾತನ್ನು ಕೇಳಿದ ಬ್ರಹ್ಮದೇವನು ಈಶ್ವರ ಹೇಳುವನು:—

ಎಲೈ ದೇವತೆಗಳಿರಾ! ಅಯೋಧ್ಯಾಪಟ್ಟಣದಲ್ಲಿರುವ ಜನರೆಲ್ಲರೂ ರಾಮನಲ್ಲಿ ಮಹಾಭಕ್ತಿಯುಕ್ತರಾಗಿರುವರು; ಮತ್ತು, ಅವರು ಕೇವಲ ವಿವೇಕಿಗಳಾಗಿಯೂ ಇರುವರು. ಹೀಗಿರುವುದರಿಂದ, ಅವರು ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನಮಾಡಲು ಪ್ರಯತ್ನಪಡುವುದಿಲ್ಲ ॥೪॥

ರಾಮಸಂದರ್ಶನಂ ತೇಷಾಂ ನಿತ್ಯಮೌನಸ್ಸಕಾರಕಮ್ ।
ವಿನಾ ತದ್ದರ್ಶನಂ ತೇಷಾಂ ಕಿಮನ್ಯತ್ ಪ್ರಯೋಜನಮ್ ॥೫॥
ಮಯಾ ಸೃಷ್ಟಾಧರ್ಮರತಾಃ ತ್ರೇತಾಯಾಂ ತೇ ರಾಮಸನ್ನಿಧೌ ।
ಸುಶೀಲಾಶ್ಚ ಸುವೇಷಾಶ್ಚ ನಿತ್ಯಂ ಧರ್ಮಪರಾಯಣಾಃ ॥೬॥
ನ ಹ್ಯಾಕೃತಿರ್ಗುಣೈರ್ಹೀನಾ ನ ಗುಣಾವಾ ವಿನಾಕೃತಿಮ್ ।
ಯತ್ರಾಕೃತಿರ್ಗುಣಾಃ ಸನ್ತಿ ನ ತತ್ರಾಧರ್ಮವರ್ತನಮ್ ॥೭॥
ಕುರೂಪತಾ ದುರ್ಗುಣಾಶ್ಚ ತತ್ರಾಧರ್ಮಃ ಪ್ರವರ್ತತೇ ॥೮॥
ಸಾಕೇತನಿಲಯಾಃ ಸರ್ವೇ ಸದ್ಗುಣಾರೂಪಶಾಲಿನಃ ।
ಅಯೋಧ್ಯಾವಾಸಿನಃ ಸೃಷ್ಟ್ವಾ ತದಾಹಂ ಸಮಚಿನ್ತಯಮ್ ॥೯॥
ರಾಮೋಭಿಷೇಕವಿಘ್ನಾಯ ನಾಲಮೇತೇ ಮನೀಷಿಣಃ ।
ತದಾನೀಮೇವ ಮೇ ಸೃಷ್ಟಾ ವಿರೂಪಾ ಗುಣವರ್ಜಿತಾ ।
ಉಗ್ರಚಿತ್ತಾತಿಪರುಷಾ ನಿಷ್ಕರಾ ಸ್ವಾರ್ಥಕಾರಿಣೀ ॥೧೦॥
ಏತಾದೃಶಃ ಪರಶ್ರೇಯಃ ನ ಸಹನ್ತೇ ಸ್ವಭಾವತಃ ।
ದುರ್ಜನಾನಾಂ ಸ್ವಭಾವೋ ಹಿ ಸದ್ಭಾನ್ಧ್ರನ್ವೇಷಣಂ ಪರಮ್ ।

ಅವರುಗಳಿಗೆ, ಪ್ರತಿದಿನವೂ ಶ್ರೀರಾಮನ ದರ್ಶನವೇ ಕೇವಲ ಸಂತೋಷಪ್ರದವಾಗಿರುವುದು. ಆದುಕಾರಣ, ಅವರಿಗೆ ಶ್ರೀರಾಮನ ದರ್ಶನವನ್ನು ಬಿಟ್ಟು ಮತ್ತಾವ ಪ್ರಯೋಜನ ವಿರುವುದು? ॥೫॥

ನಾನು, ತ್ರೇತಾಯುಗದ ಕೊನೆಯಲ್ಲಿ, ಶ್ರೀರಾಮನಹತ್ತಿರ ಮಹಾಧರ್ಮನಿರತರಾಗಿರುವ ವರನ್ನೇ ಸೃಜಿಸಿರುವೆನು. ಅವರು, ಸುಶೀಲರಾಗಿಯೂ ಸುವೇಷರಾಗಿಯೂ ನಿತ್ಯವೂ ಧರ್ಮತತ್ಪರರಾಗಿಯೂ ಇರುವರು ॥೬॥

ಪ್ರಪಂಚದಲ್ಲಿ, ಸದ್ಗುಣವಿಲ್ಲದೆ ಸದೂಪವೂ ಇರುವುದಿಲ್ಲ; ಸದೂಪವಿಲ್ಲದೆ ಸದ್ಗುಣವೂ ಇರುವುದಿಲ್ಲ. ಯಾವನಲ್ಲಿ ಸದೂಪವೂ ಸದ್ಗುಣವೂ ಇರುವುವೋ, ಅವನಲ್ಲಿ ಅಧರ್ಮಪ್ರವೃತ್ತಿಯೆಂದಿಗೂ ಉದಯಿಸುವುದಿಲ್ಲ; ಯಾವನಲ್ಲಿ ಕುರೂಪವೂ ದುರ್ಗುಣಗಳೂ ಇರುವುವೋ, ಅವನಲ್ಲಿ ಅಧರ್ಮಪ್ರವೃತ್ತಿಯೂ ಉಂಟಾಗುವುದು ॥೭—೮॥

ಅಯೋಧ್ಯಾಪಟ್ಟಣದಲ್ಲಿರುವವರೆಲ್ಲರೂ, ಗುಣಶಾಲಿಗಳೂ ರೂಪಶಾಲಿಗಳೂ ಆಗಿರುವರು. ಇಂತಹ ಅಯೋಧ್ಯಾವಾಸಿಗಳನ್ನು ಸೃಜಿಸಿ, ಆಗಲೇ ನಾನು 'ಕೇವಲ ಬುದ್ಧಿಪಂತರಾಗಿರುವ ಇವರೊಬ್ಬರೂ ರಾಮನ ಪಟ್ಟಾಭಿಷೇಕವಿಘ್ನಕ್ಕೆ ಸಮರ್ಥರಲ್ಲ' ಎಂದು ಯೋಚಿಸಿದೆನು. ಹೀಗೆ ಯೋಚಿಸಿದ ಉತ್ತರಕ್ಷಣವೇ, ನಾನು, ವಿರೂಪಳಾಗಿಯೂ ಗುಣವರ್ಜಿತಳಾಗಿಯೂ ಕ್ರೂರಹೃದಯಳಾಗಿಯೂ ಅತಿಕಠಿಣಳಾಗಿಯೂ ಅತಿ ನಿಷ್ಕರುಣಳಾಗಿಯೂ ಕೇವಲ ಸ್ವಪ್ರಯೋಜನತತ್ಪರಳಾಗಿಯೂ ಇರುವ ಒಬ್ಬ ಸ್ತ್ರೀಯನ್ನು ನಿರ್ಮಿಸಿರುವೆನು ॥೯-೧೦॥

ಇಂತಹರು, ಸ್ವಭಾವತಃ ಪರರ ಶ್ರೇಯಸ್ಸನ್ನು ಸಹಿಸುವುದಿಲ್ಲ. ಸತ್ಪುರುಷರ ರಂಧ್ರಾನ್ವೇಷಣವಾಡುವುದೇ, ದುರ್ಜನರಿಗೆ ಮುಖ್ಯಸ್ವಭಾವವಲ್ಲವೆ! ಅಯ್ಯಾ ದೇವತೆಗಳಿರಾ! ನೀವೆ

ತಾಂ ಪ್ರೇರಯಧ್ವಂ ದಿವಿಜಾಃ ಸಾ ವಃ ಕಾರ್ಯಂ ಕರಿಷ್ಯತಿ ॥೧೧॥
ಇತ್ಯಾದಿಶ್ಯ ಜಗತ್ಸ್ರಷ್ಟಾ ದೇವಾ೯ ವಾಣೀಮಥಾಬ್ರವೀತ್ ।
ಕುರು ದೇವಿ ಸಹಾಯಂ ತ್ವಂ ದೇವತಾನಾಂ ಹಿತೈಷಿಣೀ ॥೧೨॥
ತತಃ ಪುತ್ರಂ ಸಮಾಹೂಯ ನಾರದಂ ಚೇದಮಬ್ರವೀತ್ ।
ಗತ್ವಾ ತ್ವಂ ರಾಮಸಾನ್ನಿಧ್ಯಂ ಮದ್ವಿಜ್ಞಪ್ತಿಮಿತೀರಯ ॥೧೩॥
ಶ್ವೋಭಿಷೇಕ್ಷ್ಯತಿ ರಾಮಂ ತ್ವಾಂ ರಾಜಾ ದಶರಥಸ್ತವ ।
ನೋಪೇಕ್ಷಣೀಯಂ ದೇವಾನಾಂ ಕಾರ್ಯಂ ಭರ್ಕಾರ್ತಿನಾಶನ ॥೧೪॥
ಇತಿ ಸಂದಿಶ್ಯ ದೇವಾಂಸ್ತಾ೯ ಬ್ರಹ್ಮಾ ಸ್ವಭವನಂ ಯಯೌ ॥೧೫॥
ಇತ್ಯುಕ್ತೋ ನಾರದಃ ಪಿತ್ರಾ ರಣಯ೯ ಮಹತೀಮುಮೇ ।
ರಾಮರಾಮೇತಿ ರಾಮೇತಿ ಸಾಕೇತನಗರಂ ಯಯೌ ॥೧೬॥
ತತಸ್ತಂ ಸುಖಮಾಸೀನಂ ರಾಮಂ ಸ್ವಾನ್ತಃಪುರೋತ್ತಮೇ ।
ಸರ್ವಾಭರಣಸಮ್ಪನ್ನಂ ರತ್ನಸಿಂಹಾಸನೇ ಸ್ಥಿತಮ್ ॥೧೭॥
ನೀಲೋತ್ಪಲದಳಶ್ಯಾಮಂ ಕೌಸ್ತುಭಾಮುಕ್ತಕನ್ಧರಮ್ ।
ನವಜೀಮೂತಸಙ್ಕಾಶಂ ವಿದ್ಯುದ್ವರ್ಣಾಮ್ಬರಾವೃತಮ್ ॥೧೮॥

ಲ್ಲರೂ ಅವಳನ್ನು ಪ್ರೇರಿಸಿರಿ. ಅವಳು ನಿಮ್ಮ ಕಾರ್ಯವನ್ನು ಮಾಡಿಕೊಡುವಳು. (ಎಂದು ಬ್ರಹ್ಮ ದೇವನು ಹೇಳಿದನು) ॥೧೧॥

ಈ ರೀತಿಯಾಗಿ ದೇವತೆಗಳಿಗೆ ಆಜ್ಞೆಯಿತ್ತು, ಜಗತ್ಸೃಷ್ಟಿಕರ್ತನಾದ ಆ ಚತುರ್ಮುಖನು, ಅನಂತರ ಶ್ರೀಸರಸ್ವತಿಯನ್ನು ಕುರಿತು 'ಎಲೌ ದೇವಿ! ನೀನು ದೇವತೆಗಳಿಗೆ ಹಿತವನ್ನು ಬಯಸಿ ಸ್ವಲ್ಪ ಸಹಾಯವಾಡು' ಎಂದು ಹೇಳಿದನು ॥೧೨॥

ಅನಂತರ, ತನ್ನ ಪುತ್ರನಾದ ನಾರದನನ್ನು ಕರೆದು "ವತ್ಸ! ನಾರದ! ನೀನು ಶ್ರೀರಾಮನ ಸನ್ನಿಧಿಗೆ ಹೋಗಿ 'ಭರ್ಕಾಪದ್ವಿನಿವಾರಕನಾದ ಶ್ರೀರಾಮನೆ! ನಾಳೆಯ ದಿನ ದಶರಥ ರಾಜನು ನಿನಗೆ ಅಭಿಷೇಕವಾಡುವನು. ಆದರೆ, ನೀನು ದೇವತೆಗಳ ಕಾರ್ಯವನ್ನು ಉಪೇಕ್ಷಿಸ ಕೂಡದು' ಎಂದು ನಾನು ವಿಜ್ಞಾಪಿಸಿದೆನೆಂಬುದಾಗಿ ಹೇಳು" ಎಂದು ಆಜ್ಞಾಪಿಸಿದನು. ಹೀಗೆಂದು ದೇವತೆಗಳನ್ನು ಆಜ್ಞಾಪಿಸಿ, ಬ್ರಹ್ಮದೇವನು ತನ್ನ ಲೋಕಕ್ಕೆ ಹೊರಟುಹೋದನು ॥೧೩-೧೫॥

ಎಲೌ! ಪಾರ್ವತಿ! ಈರೀತಿಯಾಗಿ ತಂದೆಯಿಂದ ಆಜ್ಞಾಪಿಸಲ್ಪಟ್ಟ ಆ ನಾರದಮುನಿಯು, ಮಹತಿಯೆಂಬ ವೀಣೆಯನ್ನು ಧ್ವನಿಮಾಡುತ, ರಾಮ ರಾಮ ರಾಮ-ಎಂದು ಕೀರ್ತನೆಮಾಡುತ, ಅಯೋಧ್ಯಾಪಟ್ಟಣಕ್ಕೆ ಹೋದನು ॥೧೬॥

ಅನಂತರ, ಆ ಅಯೋಧ್ಯಾಪಟ್ಟಣದಲ್ಲಿ ತನ್ನ ದಿವ್ಯವಾದ ಅಂತಃಪುರದೊಳಗೆ ಸರ್ವಾಭರಣ ಸಂಪನ್ನನಾಗಿ ರತ್ನಸಿಂಹಾಸನದ ಮೇಲೆ ಕುಳಿತುಕೊಂಡಿರುವ ಶ್ರೀರಾಮಚಂದ್ರನನ್ನು ಕಂಡನು॥

ಆಗ ಆ ರಾಮನು, ನೀಲೋತ್ಪಲಶ್ಯಾಮಲನಾಗಿಯೂ, ನೀಲಮೇಘಸದೃಶನಾಗಿಯೂ, ಕತ್ತಿನಲ್ಲಿ ದಿವ್ಯವಾದ ಕೌಸ್ತುಭಮಣಿಯನ್ನು ಧರಿಸಿದವನಾಗಿಯೂ, ಮಿಂಚಿನಂತೆ ಹೊಳೆಯುವ ಪೀತಾಂಬರದಿಂದ ಆವೃತನಾಗಿಯೂ ಇದ್ದನು ॥೧೮॥

ಸನ್ತಪ್ತಕಾಞ್ಚನಪ್ರಖ್ಯಾಂ ಸೀತಾಮಬ್ಜಗತಾಂ ಪುನಃ ।
ಅನ್ಯೋನ್ಯಾಶ್ಲಿಷ್ಟಹೃದ್ಬಾಹುನೇತ್ರಂ ಪಶ್ಯನ್ತಮಾದರಾತ್ ॥೧೯॥
ದಕ್ಷಿಣೇನ ಕರಾಗ್ರೇಣ ಚುಬುಕಂ ಚಞ್ಚಲಾಳಕಮ್ ।
ಸ್ಪೃಶನ್ತಂ ತತ್ಸನಾಥೋತ್ಸಙ್ಗಂ ಪರಿಹಾಸೈರ್ಮುಹುರ್ಮುಹುಃ ।
ವಿನೋದಯನ್ತಂ ತಾಮೂಲಚರ್ವಣಾದಿಭಿರಾದರಾತ್ ॥೨೦॥
ನಿತ್ಯಮೇಕಾನ್ತಭಕ್ತಾನಾಂ ಧ್ಯಾತೃಣಾಂ ಸಕೃದೇವ ವಾ ।
ಶ್ರೀಸೀತಾರಾಮಯೋರ್ದ್ವನ್ದ್ವಂ ಸಮ್ಪನ್ಮುಕ್ತಿಫಲಪ್ರದಮ್ ॥೨೧॥
ದದರ್ಶ ನಾರದೋ ರಾಮಂ ಅವತೀರ್ಯಾಮ್ಬರಾತ್ ತದಾ ॥೨೨॥
ಶುದ್ಧಸ್ಫಟಿಕಸಙ್ಕಾಶಃ ಶರಚ್ಚನ್ದ್ರಇವಾಮಲಃ ।
ಅತರ್ಕಿತಮುಪಾಯಾತೋ ನಾರದೋ ದಿವ್ಯದರ್ಶನಃ ॥೨೩॥
ತಂ ದೃಷ್ಟ್ವಾ ಸಹಸೋತ್ಥಾಯ ರಾಮೋ ಹೃಷ್ಟಃ ಕೃತಾಞ್ಜಲಿಃ ।
ನನಾಮ ಶಿರಸಾ ಭೂಮೌ ಸೀತಯಾ ಸಹ ಭಕ್ತ್ಯಾ ॥೨೪॥
ಉವಾಚ ನಾರದಂ ರಾಮಃ ಪ್ರೀತ್ಯಾ ಪರಮಯಾ ವೃತಃ ।

ಪುಟಪಾಕಶೋಧಿತವಾದ ಸುವರ್ಣದಂತೆ ಪ್ರಕಾಶಿಸುತ ತನ್ನ ತೊಡೆಯಮೇಲೆ ಕುಳಿತಿರುವ ಸೀತಾದೇವಿಯನ್ನು ಪರಸ್ಪರವಾಗಿ ಆಲಿಂಗಿಸಿಕೊಳ್ಳುತ, ಅತ್ಯಾದರದಿಂದ ನೋಡುತಿದ್ದನು ॥೧೯॥

ತನ್ನ ಬಲಗೈಯಿಂದ ಅವಳ ಗಲ್ಲವನ್ನೂ ಕೇಶಪಾಶವನ್ನೂ ಸ್ತನಭಾಗವನ್ನೂ ಸ್ಪರ್ಶಮಾಡುತ, ಪರಿಹಾಸವಚನಗಳಿಂದಲೂ ತಾಂಬೂಲಚರ್ವಣಾದಿಗಳಿಂದಲೂ ಆದರಪೂರ್ವಕವಾಗಿ ವಿನೋದಪಡಿಸುತ್ತಿದ್ದನು ॥೨೦॥

ಇಂತಹ ಸ್ಥಿತಿಯಲ್ಲಿರುವ ಶ್ರೀರಾಮಮೂರ್ತಿಯ ದರ್ಶನವು ಸಾಮಾನ್ಯವಾದುದೆಂದು ತಿಳಿಯಬಾರದು. ಸರ್ವದಾ ಏಕಾಂತಭಕ್ತಿಯಿಂದ ನಡೆಯುತಕ್ಕವರಿಗಾಗಲಿ, ಮೇಲೆ ಹೇಳಿರುವಂತಹ ಸ್ಥಿತಿಯಲ್ಲಿ ಧ್ಯಾನಮಾಡತಕ್ಕವರಿಗಾಗಲಿ, ಶ್ರೀ ಸೀತಾರಾಮರ ದ್ವಂದ್ವವು, ಸಂಪತ್ತನ್ನೂ ಮುಕ್ತಿಯನ್ನೂ ಏಕವಿಧವಾಗಿ ಕೊಡತಕ್ಕದು. ಇಂತಹ ಶ್ರೀರಾಮಮೂರ್ತಿಯನ್ನು, ಆಗ ಆಕಾಶದಿಂದ ಭೂಮಿಗಿಳಿದುಬಂದ ನಾರದಮುನಿಯು ದರ್ಶನಮಾಡಿದನು ॥೨೧-೨೨॥

ಹೀಗೆ ಮಹಾದಿವ್ಯದೃಷ್ಟಿಯುಳ್ಳ ನಾರದಮುನಿಯು, ಶುದ್ಧವಾದ ಸ್ಫಟಿಕಮಣಿಯಂತೆ ಪ್ರಕಾಶಿಸುತಲೂ, ಶರತ್ಕಾಲದ ಚಂದ್ರನಂತೆ ನಿರ್ಮಲನಾಗಿಯೂ, ಆಕಸ್ಮಿಕವಾಗಿ ಶ್ರೀರಾಮನ ಅಂತಃಪುರಕ್ಕೆ ಬಂದವನಾದನು ॥೨೩॥

ಇಂತಹ ನಾರದಮುನಿಯನ್ನು ಕಂಡು, ಮಹಾಹರ್ಷಯುಕ್ತನಾದ ಶ್ರೀರಾಮನು, ತಟ್ಟನೆ ಆಸನದಿಂದೆದ್ದು, ಅಂಜಲಿಬಂಧವಾಡಿಕೊಂಡು, ಭಕ್ತಿಯುಕ್ತನಾಗಿ, ಸೀತೆಯೊಡನೆ ತಲೆಯನ್ನು ಬೊಗ್ಗಿಸಿ ನಮಸ್ಕಾರ ಮಾಡಿದನು ॥೨೪॥

ಆನಂತರ, ಶ್ರೀರಾಮನು, ಮಹಾಪ್ರೀತಿಸಮನ್ವಿತನಾಗಿ, ನಾರದಮುನಿಯನ್ನು ಕುರಿತು ಎಲೈ ಮುನಿಶ್ರೇಷ್ಠನೆ! ಸಾಮಾನ್ಯವಾಗಿ ಸಂಸಾರಿಗಳಿಗೆ ನಿನ್ನ ದರ್ಶನವು ದುರ್ಲಭವಾಗಿರು

ಸಂಸಾರಿಣಾಂ ಮುನಿಶ್ರೇಷ್ಠ ದುರ್ಲಭಂ ತವ ದರ್ಶನಮ್ ।
ತಥಾಪಿ ವಿಷಯಾಸಕ್ತಚೇತಸಾಂ ನಿತರಾಂ ಮುನೇ ॥೫೫॥
ಅತಸ್ತ್ವದ್ದರ್ಶನಾದೇವ ಕೃತಾರ್ಥೋಽಸ್ಮಿ ಮುನೀಶ್ವರ ।
ಕಿಂ ಕಾರ್ಯಂ ತೇ ಮಯಾ ಕಾರ್ಯಂ ಬ್ರೂಹಿ ತತ್ ಕರವಾಣಿ ಭೋಃ ॥
ಅಥ ತಂ ನಾರದೋಽಪ್ಯಾಹ ರಾಘವಂ ಭಕ್ತವತ್ಸಲಮ್ ॥೫೭॥
ಕಿಂ ಮಾಂ ಮೋಹಯಸೇ ರಾಮ ವಾಕ್ಯೈರ್ಲೋಕಾನುಸಾರಿಭಿಃ ।
ಸಂಸಾರ್ಯಹಮಿತಿ ಪ್ರೋಕ್ತಂ ಸತ್ಯಮೇವ ತ್ವಯೋದಿತಮ್ ॥೫೮॥
ಜಗತಾಮಾದಿಭೂತಾ ಯಾ ಸೀತಾ ತೇ ಗೃಹಿಣೀ ಸತೀ ।
ತ್ವತ್ಸನ್ನಿಕರ್ಷಾಜ್ಜಾಯಂತೇ ತಸ್ಯಾಂ ಬ್ರಹ್ಮಾದಯಃ ಸುತಾಃ ॥೫೯॥
ತ್ವದಾಶ್ರಯಾ ಸದಾ ಭಾತಿ ಮಾಯಾ ಸಾ ತ್ರಿಗುಣಾತ್ಮಿಕಾ ।
ಸೂತೇಜಸ್ರಂ ಶುಕ್ಲಕೃಷ್ಣಲೋಹಿತಾಃ ಸರ್ವದಾ ಪ್ರಜಾಃ ॥೬೦॥
ಲೋಕತ್ರಯಾತ್ಮಕೇ ಗೇಹೇ ಗೃಹಸ್ಥ ತ್ವಮುದಾಹೃತಃ ।
ಮನುಷ್ಯ ಇವ ಲೋಕೇಽಸ್ಮಿನ್ ದೃಶ್ಯಸೇ ಸೀತಯಾ ಸಹ ॥೬೧॥

ವೈದು; ತಥಾಪಿ, ವಿಷಯಾಸಕ್ತಚಿತ್ತರಿಗಂತು ಸುತರಾಂ ದುರ್ಲಭವು. ಹೀಗಿರುವುದರಿಂದ, ಹೇ ಮುನೀಶ್ವರ! ನಾನು ನಿನ್ನ ದರ್ಶನದಿಂದಲೇ ಕೃತಕೃತ್ಯನಾದೆನು. ನನ್ನಿಂದ ನಿನಗೆ ಆಗ ಬೇಕಾದ ಕೆಲಸವಾವುದಿರುವುದು?–ಹೇಳು. ಸ್ವಾಮಿ! ಅದನ್ನು ಈ ಕ್ಷಣವೇ ಮಾಡಿಕೊಡುವೆನು' ಎಂದು ಹೇಳಿದನು. ಆ ಬಳಿಕ, ನಾರದಮುನಿಯೂ ಕೂಡ, ಭಕ್ತವತ್ಸಲನಾದ ಶ್ರೀ ರಾಮನನ್ನು ಕುರಿತು ಹೀಗೆ ಹೇಳಿದನು ॥೫೫-೫೭॥

ಹೇ ರಾಮ! ಪ್ರಾಕೃತಲೋಕಸಾಧಾರಣವಾದ ಮಾತುಗಳಿಂದ ನನ್ನನ್ನೇಕೆ ಮೋಹ ಪಡಿಸುವೆ? ನಾನು ಸಂಸಾರಿಯೆಂದು ನೀನು ಹೇಳಿಕೊಂಡ ಮಾತು ಸತ್ಯವೇ ಆಹುದು ॥೫೮॥


ಹೇಗೆಂದರೆ,—ಸಮಸ್ತ ಜಗತ್ತಿಗೂ ಆದಿಭೂತಳಾದ ಈ ಸೀತಾದೇವಿಯ ರೂಪದಲ್ಲಿ ಅವತರಿಸಿರುವ ಆದಿಮಾಯೆಯೇ ನಿನಗೆ ಗೃಹಿಣಿಯು. ನಿನ್ನ ಸಾನ್ನಿಧ್ಯಮಾತ್ರದಿಂದಲೇ, ಅವಳಲ್ಲಿ ಬ್ರಹ್ಮ ರುದ್ರ ಮೊದಲಾದ ಪುತ್ರರು ಉದಯಿಸುವರು ॥೫೯॥

ಆ ಗುಣತ್ರಯಾತ್ಮಕಳಾಗಿರುವ ಮಾಯೆಯು, ಸರ್ವದಾ ನಿನ್ನನ್ನು ಆಶ್ರಯಿಸಿಕೊಂಡೇ ಪ್ರಕಾಶಿಸುತ್ತಿರುವಳು. ಇವಳು, ಸರ್ವದಾ ಶುಕ್ಲ (ಸಾತ್ವಿಕ) ಕೃಷ್ಣ (ತಾಮಸ) ರಕ್ತ (ರಾಜಸ) ಗಳಾಗಿರುವ ಪ್ರಜೆಗಳನ್ನು ಪ್ರಸವಿಸುತ್ತಿರುವಳು ॥೬೦॥

ಈ ಲೋಕತ್ರಯವೆಂಬ ಮನೆಯೊಳಗೆ ನೀನು ಕುಟುಂಬಿಯಾಗಿರುವೆಯೆಂದು ಪ್ರಾಜ್ಞರು ಹೇಳುವರು. ಆದರೆ,ಈ ಲೋಕದಲ್ಲಿ ನೀನು ಪ್ರಾಕೃತಮನುಷ್ಯನೆಂತೆ ಸೀತೆಯೊಡನೆ ಕಾಣಿಸಿಕೊಳ್ಳುತಿರುವೆ ॥೬೧॥

ಭಾರ್ಯಾಭೂಜ್ಜನಕಾತ್ಮಜಾ ದಿವಿಷದೋ ಭೃತ್ಯಾಸ್ತ್ವಜಾಣ್ಡಂ ಗೃಹಂ
ಬ್ರಹ್ಮಾ ಸೂನುರುಮಾಪತಿಃ ಸ್ವಸುತಜೋ ಭಾಗೀರಥೀ ಪುತ್ರಿಕಾ ।
ದೀಪೌ ಸೂರ್ಯವಿಧೂ ಶ್ರುತಿಃ ಕೃತಿರಪಾಂ ರಾಶಿಸ್ತು ಸದ್ದೀರ್ಘಿಕಾ
ಯಸ್ಯಾಸೀದ್ರಘುನಾಯಕಂ ತಮನಿಶಂ ಸೇವೇ ಮಹಾಸತ್ರಿಣಮ್ ॥೩೦॥
ಇತಿ ಸ್ತುತ್ವಾ ತದಾ ರಾಮಂ ಮಹಾಭಾಗವತೋತ್ತಮಃ ।
ಸ್ತವರಾಜೇನ ತುಷ್ಟಾವ ನಾರದೋ ರಾಘವಂ ಪುನಃ ॥೩೧॥

ಇತಿ ಶ್ರೀಮದಯೋಧ್ಯಾಕಾಣ್ಡೇ ನಾರದಾಗಮನಂ
ನಾಮ ಚತುರ್ಥಃ ಸರ್ಗಃ.



ಯಾವ ಮಹಾನುಭಾವನಿಗೆ,–ಶ್ರೀ ಸೀತಾದೇವಿಯು ಭಾರ್ಯೆಯಾಗಿರುವಳೋ, ಸಮಸ್ತ ದೇವತೆಗಳೂ ಭೃತ್ಯರೋ, ಬ್ರಹ್ಮಾಂಡವೇ ಮನೆಯೋ, ಬ್ರಹ್ಮನೇ ಮಗನೋ, ಶ್ರೀ ಪಾರ್ವತೀ ಪತಿಯಾದ ಪರಮೇಶ್ವರನೇ ಪೌತ್ರನೋ, ಗಂಗಾನದಿಯು ಪಾದದಿಂದ ಉದಯಿಸಿದ ಪುತ್ರಿಯೋ, ಸೂರ್ಯಚಂದ್ರರಿಬ್ಬರೂ ಎರಡು ದೀಪಗಳಾಗಿರುವುದೋ, ಸಮಸ್ತ ವೇದಸಮೂಹವೇ ಯಾವನಿಂದ ರಚಿತವಾದ ಗ್ರಂಥವಾಗಿರುವುದೋ, ಸಮುದ್ರವೇ ಬಾವಿಯಾಗಿರುವುದೋ, ಇಂತಹ–ದೊಡ್ಡ ಕುಟುಂಬಿಯಾದ–ಶ್ರೀ ರಘುಪತಿಯನ್ನು ನಾನು ಸರ್ವದಾ ಸೇವಿಸುವೆನು ॥೩೦॥

ಈರೀತಿಯಾಗಿ ಸ್ತೋತ್ರವಾಡಿ, ಮಹಾಭಾಗವತೋತ್ತಮನಾಗಿರುವ ನಾರದಮುನಿಯು ಪುನಃ ಶ್ರೀರಾಮನನ್ನು 'ಸ್ತವರಾಜ' ಎಂಬ ಸ್ತೋತ್ರದಿಂದ ಸ್ತುತಿಸಲುಪಕ್ರಮಿಸಿದನು ।

ಇದು ಅಯೋಧ್ಯಾಕಾಂಡದಲ್ಲಿ ನಾರದಾಗಮನವೆಂಬ
ನಾಲ್ಕನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಪಞ್ಚಮಃ ಸರ್ಗಃ.

ಶ್ರೀ ನಾರದ ಉವಾಚ.

ಯದೇಕಂ ಯತ್ ಪರಂ ನಿತ್ಯಂ ಯದನನ್ತಂ ಚಿದಾತ್ಮಕಮ್ ।
ತದೇವ ವ್ಯಾಪಕಂ ಲೋಕೇ ತದ್ರೂಪಂ ಜೀವ್ತಯಾವ್ಯಹಮ್ ॥೧॥
ವಿಜ್ಞಾನಹೇತುಂ ವಿಮಲಾಯತಾಕ್ಷಂ ಪ್ರಜ್ಞಾನಸದ್ದಿವ್ಯಸುಖೈಕರೂಪಮ್
ಶ್ರೀರಾಮಚನ್ದ್ರಂ ಹರಿಮಾದಿದೇವಂ ಪರಾತ್ಪರಂ ರಾಮನುಮಂ ನಮಾಮಿ ॥೨॥
ನಾರಾಯಣಂ ಜಗನ್ನಾಥಂ ಅಖಿರಾಮಂ ಜಗತ್ಪತಿಮ್ ।
ಕವಿಂ ಪುರಾಣಂ ವಾಗೀಶಂ ರಾಮಂ ದಶರಥಾತ್ಮಜಮ್ ॥೩॥
ರಾಜರಾಜಂ ರಘುವರಂ ಧನುರ್ವೇದವಿಶಾರದಮ್ ।
ಭರ್ಗಂ ವರೇಣ್ಯಂ ವಿಶ್ವೇಶಂ ರಘುನಾಥಂ ಜಗತ್ಪತಿಮ್ ॥೪॥
ಸತ್ಯಂ ಸತ್ಯಪ್ರಿಯಂ ಶ್ರೇಷ್ಠಂ ಜಾನಕೀವಲ್ಲಭಂ ವಿಭುಮ್ ।
ಸೌಮಿತ್ರಿಪೂರ್ವಜಂ ಶಾನ್ತಂ ಕಾಮದಂ ಕಮಲೇಕ್ಷಣಮ್ ॥೫॥

ಅಯೋಧ್ಯಾಕಾಂಡದಲ್ಲಿ ಅಯ್ದನೆಯ ಸರ್ಗವು.

ಶ್ರೀ ನಾರದಮುನಿಯು ಮಾಡಿದ ಸ್ತವರಾಜವೆಂಬ ಸ್ತುತಿಯು ಪ್ರಕ್ರಮವೇನೆಂದರೆ :—

ಯಾವ ವಸ್ತುವು ಅದ್ವಿತೀಯವಾದುದೋ, ಯಾವ ಪರಾತ್ಪರವಸ್ತುವು ನಿತ್ಯವಾದುದೋ, ಯಾವುದು ಅನಂತವಾಗಿಯೂ ಕೇವಲ ಚಿದ್ರೂಪವಾಗಿಯೂ ಇರುವುದೋ, ಅದೇ ಸಮಸ್ತ ಲೋಕದಲ್ಲಿಯೂ ವ್ಯಾಪಿಸಿಕೊಂಡಿರುವುದು. ಅದರ ರೂಪವನ್ನೇ ನಾನು ಸರ್ವದಾ ಧ್ಯಾನ ಮಾಡುವೆನು ॥೧॥

ವಿಜ್ಞಾನಹೇತುವಾಗಿಯೂ, ವಿಮಲ ವಿಶಾಲ ವಿಲೋಚನನಾಗಿಯೂ, ಸತ್ಯಜ್ಞಾನಾನಂದ ರೂಪನಾಗಿಯೂ, ಆದಿದೇವನಾಗಿಯೂ, ಪರಾತ್ಪರನಾಗಿಯೂ ಇರುವ, ಶ್ರೀರಾಮರೂಪನಾದ ಶ್ರೀಹರಿಯನ್ನು, ನಾನು ನಮಸ್ಕರಿಸುವೆನು ॥೨॥

ನಾರಾಯಣಶಬ್ದವಾಚ್ಯನಾಗಿಯೂ, ಜಗತ್ತಿಗೆಲ್ಲ ಒಡೆಯನಾಗಿಯೂ, ಸರ್ವಲೋಕಮನೋಹರನಾಗಿಯೂ, ಸರ್ವಜಗದ್ರಕ್ಷಕನಾಗಿಯೂ, ಆದಿಕವಿಯಾಗಿಯೂ, ಸಮಸ್ತ ವಾಕ್ಪತಿಯಾಗಿಯೂ ಇರುವ, ದಶರಥಪುತ್ರನಾದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೩॥

ರಾಜರಾಜನೂ ಧನುರ್ವೇದವಿಶಾರದನೂ ಸ್ವಯಂಪ್ರಕಾಶನೂ ವಿಶ್ವೇಶ್ವರನೂ ಜಗತ್ಪತಿಯೂ ಆದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೪॥

ಸತ್ಯನೂ ಸತ್ಯಪ್ರಿಯನೂ ಶ್ರೇಷ್ಠನೂ ಜಾನಕೀವಲ್ಲಭನೂ ಸರ್ವವ್ಯಾಪಕನೂ ಲಕ್ಷ್ಮಣಾಗ್ರಜನೂ ಮಹಾಶಾಂತನೂ ಸರ್ವಕಾಮಪ್ರದನೂ ಕಮಲನೇತ್ರನೂ ಆದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೫॥

ಆದಿತ್ಯಂ ರವಿಮೀಶಾನಂ ಘೃಣಿಂ ಸೂರ್ಯಮನಾಮಯಮ್ ।
ಆನಂದರೂಪಿಣಂ ಸೌಮ್ಯಂ ರಾಘವಂ ಕರುಣಾಕರಮ್ ॥೬॥
ಜಾಮದಗ್ನ್ಯಂ ತಪೋಮೂರ್ತಿಂ ರಾಮಂ ಪರಶುಧಾರಿಣಮ್ ।
ಪಾರ್ವತೀವರದಂ ವಾಚ್ಯಂ ಶ್ರೀಪತಿಂ ಪಕ್ಷಿವಾಹನಮ್ ॥೭॥
ಶ್ರೀಶಾರ್ಙ್ಗಧಾರಿಣಂ ರಾಮಂ ಚಿನ್ಮಯಾನನ್ದವಿಗ್ರಹಮ್ ।
ಹಲಧೃಗ್ವಿಷ್ಣುಮೀಶಾನಂ ಬಲರಾಮಂ ಕೃಪಾನಿಧಿಮ್ ॥೮॥
ಶ್ರೀವಲ್ಲಭಂ ಕಲಾನಾಥಂ ಜಗನ್ಮೋಹನಮಚ್ಯುತಮ್ ।
ಮತ್ಸ್ಯಕೂರ್ಮವರಾಹಾದಿರೂಪಧಾರಿಣಮವ್ಯಯಮ್ ॥೯॥
ವಾಸುದೇವಂ ಜಗದ್ಯೋನಿಂ ಅನಾದಿನಿಧನಂ ಹರಿಮ್ ।
ಗೋವಿನ್ದಂ ಗೋಪತಿಂ ಕೃಷ್ಣಂ ಗೋಪೀಜನಮನೋಹರಮ್ ॥೧೦॥
ಗೋಪಾಲಂ ಗೋಪರೀವಾರಂ ಗೋಪಕನ್ಯಾಸಮಾವೃತಮ್ ।
ವಿದ್ಯುತ್ಪುಞ್ಜಪ್ರತೀಕಾಶಂ ರಾಮಂ ಕೃಷ್ಣಮನಾಮಯಮ್ ॥೧೧॥
ಗೋಗೋಪಿಕಾಸಮಾಕೀರ್ಣಂ ವೇಣುನಾದನತತ್ಪರಮ್ ।
ಕಾಮರೂಪಂ ಕಲಾವನ್ತಂ ಕಾಮಿನಾಂ ಕಾಮದಂ ಪ್ರಭುಮ್ ।೧೨॥

ಆದಿತ್ಯ ರವಿ ಈಶ್ವರ ಘೃಣಿ ಸೂರ್ಯ ಮುಂತಾದ ಶಬ್ದಗಳಿಗೆಲ್ಲ ಗೋಚರನೂ ನಿರುಪಪ್ಲವನೂ ಆನಂದರೂಪನೂ ಸೌಮ್ಯನೂ ಕರುಣಾಕರನೂ ಆದ ಶ್ರೀರಾಘವನನ್ನು ನಾನು ನಮಸ್ಕರಿಸುವೆನು ॥೬॥

ಕೇವಲ ತಪೋಮೂರ್ತಿಯಾಗಿ ಪರಶುವನ್ನು ಧರಿಸಿರುವ ಶ್ರೀ ಜಾಮದಗ್ನ್ಯರೂಪನೂ ಪಾರ್ವತೀವರದನೂ ಸರ್ವಶಬ್ದಗೋಚರನೂ ಲಕ್ಷ್ಮೀವಲ್ಲಭನೂ ಗರುಡವಾಹನನೂ ಆದ ಶ್ರೀ ರಾಮನನ್ನು ನಾನು ನಮಸ್ಕರಿಸುವೆನು ॥೭॥

ಶ್ರೀ ಶಾರ್ಙ್ಗಚಾಪಧರನೂ ಜ್ಞಾನಾನಂದವಿಗ್ರಹನೂ ಹಲಾಯುಧನಾದ ಶ್ರೀ ಬಲರಾಮ ರೂಪನೂ ಬ್ರಹ್ಮ ರುದ್ರ ವಿಷ್ಣುಸ್ವರೂಪನೂ ಆದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥

ಶ್ರೀಪತಿಯೂ ಮಾಯಾಪತಿಯೂ ಲೋಕವೋಹಕನೂ ಅಚ್ಯುತನೂ ಮತ್ಸ್ಯ ಕೂರ್ಮ ವರಾಹಾದಿರೂಪಗಳನ್ನು ಧರಿಸಶಕ್ಯವನೂ ಅವ್ಯಯನೂ ಆದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೯॥

ಸ್ವಯಂ ಜಗದ್ಯೋನಿಯಾಗಿದ್ದರೂ ಅನಾದಿನಿಧನನಾಗಿದ್ದರೂ ವಸುದೇವಪುತ್ರರೂಪದಿಂದ ಅವತರಿಸಿ ಗೋಪಾಲಕನೂ ಗೋಪತಿಯೂ ಗೋಪೀಜನಮನೋಹರನೂ ಆಗಿ ಶ್ರೀಕೃಷ್ಣಾವತಾರವನ್ನನುಭವಿಸಿದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೦॥

ದನವನ್ನು ಕಾಯುತ, ಗೋವ್ರಗಳನ್ನೇ ಪರಿವಾರವಾಗಿ ಮಾಡಿಕೊಂಡು, ಗೋಪಕನ್ಯೆಯರಿಂದ ಸುತ್ತುವರಿಯಲ್ಪಟ್ಟು, ವಿದ್ಯುತ್ಪುಂಜಮೂಹದಂತೆ ಪ್ರಕಾಶಿಸುತ, ಕೃಷ್ಣಾವತಾರವನ್ನನುಭವಿಸಿದ ಅನಾಮಯನಾದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೧॥

ಗೋವ್ರಗಳಿಂದಲೂ ಗೋಪಿಕಾಸ್ತ್ರೀಯರಿಂದಲೂ ಪರಿವೃತನಾಗಿ, ವೇಣುನಾದವನ್ನು ಮಾಡುತ, ಕಾಮರೂಪನಾಗಿ, ಸಕಲಕಲಾಶಿಖರನಾಗಿ, ಕಾಮಿಗಳಿಗೆಲ್ಲ ಕಾಮವನ್ನು ದಾನ ಮಾಡಿದ ಮಹಾಪ್ರಭುವನ್ನು ನಾನು ನಮಸ್ಕರಿಸುವೆನು ॥೧೨॥

ಮನ್ಮಥಂ ಮಧುರಾನಾಥಂ ಮಾಧವಂ ಮುಕರಧ್ವಜಮ್ ।
ಶ್ರೀಧರಂ ಶ್ರೀಕರಂ ಶ್ರೀಕಂ ಶ್ರೀನಿವಾಸಂ ಪರಾತ್ಪರಮ್ ॥೧೩॥
ಭೂತೇಶಂ ಭೂತಿದಂ ಭದ್ರಂ ಭೂರಿದಂ ಭೂತಿಭೂಷಣಮ್ ।
ಸರ್ವದುಃಖಹರಂ ರಾಮಂ ದುಷ್ಟದಾನವವೈರಿಣಮ್ ॥೧೪॥
ಶ್ರೀನೃಸಿಂಹಂ ಮಹಾವಿಷ್ಣುಂ ಮಹಾನ್ತಂ ದೀಪ್ತತೇಜಸಮ್ ।
ಚಿದಾನನ್ದಮಯಂ ವಿಷ್ಣುಂ ಪ್ರಣವಜ್ಯೋತಿರೂಪಕಮ್ ॥೧೫॥
ಆದಿತ್ಯಮಣ್ಡಲಗತಂ ನಿಶ್ಚಿತಾರ್ಥಸ್ವರೂಪಿಣಮ್ ।
ಭಕ್ತಪ್ರಿಯಂ ಪದ್ಮನೇತ್ರಂ ಭಕ್ತಾನಾಮಿಷ್ಟದಪ್ರದಮ್ ॥೧೬॥
ಕೌಸಲೇಯಂ ಕಳಾಮೂರ್ತಿಂ ಕಾಸುತ್ಸ್ಥಂ ಕಮಲಾಪ್ರಿಯಮ್ ।
ಸಿಂಹಾಸನೇ ಸಮಾಸೀನಂ ಸತ್ಯವ್ರತಮಕಲ್ಮಷಮ್ ॥೧೭॥
ವಿಶ್ವಾಮಿತ್ರಪ್ರಿಯಂ ದಾನ್ತಂ ಸ್ವದಾರನಿಯತವ್ರತಮ್ ।
ಯಜ್ಞೇಶಂ ಯಜ್ಞಪುರುಷಂ ಯಜ್ಞಪಾಲನತತ್ಪರಮ್ ॥೧೮॥
ಸತ್ಯಸನ್ಧಂ ಜಿತಕ್ರೋಧಂ ಶರಣಾಗತವತ್ಸಲಮ್ ।
ಸರ್ವಕ್ಲೇಶಾಪಹರಣಂ ವಿಭೀಷಣವರಪ್ರದಮ್ ॥೧೯॥

ಸಕಲರಿಗೂ ಹೃದಯಗ್ರಂಥಿವಿಭೇದಕನಾಗಿಯೂ, ಮಧುರಾನಾಥನಾಗಿಯೂ, ಲಕ್ಷ್ಮೀಪತಿಯಾಗಿಯೂ, ಸಾಕ್ಷಾನ್ಮನ್ಮಥರೂಪನಾಗಿಯೂ, ಶ್ರೀಧರನೂ ಶ್ರೀಕರನೂ ಶ್ರೀಪತಿಯೂ ಶ್ರೀನಿವಾಸನೂ ಆಗಿಯೂ ಇರುವ, ಪರಾತ್ಪರನಾದ ಶ್ರೀರಾಮನನ್ನು ನಾನು ಸೇವಿಸುವೆನು ॥೧೩॥

ಸರ್ವಭೂತಪತಿಯೂ ಸಕಲಸಂಪತ್ಪದನೂ ಪರಮಮಂಗಳಸ್ವರೂಪನೂ ನಿಶ್ರೇಯಸದಾತನೂ ಭಸ್ಮಭೂಷಣನೂ ಸರ್ವದುಃಖಹರನೂ ದುಷ್ಟರಾಕ್ಷಸ ಸಂಹಾರಕನೂ ಆದ ಶ್ರೀರಾಮನನ್ನು ನಾನು ಭಜಿಸುವೆನು ॥೧೪॥

ಶ್ರೀಮನ್ನರಸಿಂಹರೂಪನೂ ಸಕಲವ್ಯಾಪಕನೂ ಪ್ರಣವತೇಜಸ್ವರೂಪನೂ ಮಹಾಪ್ರಕಾಶನೂ ಚಿದಾನಂದಮಯನೂ ಆಗಿರುವ ಶ್ರೀ ವಿಷ್ಣುರೂಪನಾದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೫॥

ಆದಿತ್ಯಮಂಡಲಗತನಾಗಿಯೂ, ಸತ್ಪದಾರ್ಥಸ್ವರೂಪನಾಗಿಯೂ, ಭಕ್ತಪ್ರಿಯನಾಗಿಯೂ ಕಮಲನೇತ್ರನಾಗಿಯೂ, ಭಕ್ತರಿಗೆಲ್ಲ ಇಷ್ಟಾರ್ಥಪ್ರದನಾಗಿಯೂ ಇರುವ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೬॥

ಕೌಸಲ್ಯಾಪುತ್ರನಾಗಿಯೂ, ಸಕಲಕಳಾಮೂರ್ತಿಯಾಗಿಯೂ, ಕಳುಷ್ಟಕುಲಪ್ರದೀಪನಾಗಿಯೂ, ಲಕ್ಷ್ಮೀಪತಿಯಾಗಿಯೂ, ಸಿಂಹಾಸನಸ್ಥನಾಗಿಯೂ, ಸತ್ಯವ್ರತನಾಗಿಯೂ, ನಿಷ್ಕಲ್ಮಷನಾಗಿಯೂ ಇರುವ ಶ್ರೀರಾಮನನ್ನು ನಮಸ್ಕರಿಸುವೆನು ॥೧೭॥

ವಿಶ್ವಾಮಿತ್ರರಿಗೆ ಪ್ರಿಯನಾಗಿಯೂ, ಇಂದ್ರಿಯನಿಗ್ರಹಶ್ವರನಾಗಿಯೂ, ಸ್ವದಾರನಿಯತನಾಗಿಯೂ, ಯಜ್ಞೇಶನಾಗಿಯೂ, ಯಜ್ಞಪುರುಷನಾಗಿಯೂ, ಯಜ್ಞರಕ್ಷಣತತ್ಪರನಾಗಿಯೂ ಇರುವ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೮॥

ಸತ್ಯಸಂಧನೂ ಜಿತಕ್ರೋಧನೂ ಶರಣಾಗತವತ್ಸಲನೂ ಸಕಲಕ್ಲೇಶನಿವಾರಕನೂ ವಿಭೀಷಣವರಪ್ರದನೂ ಆದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೯॥

ದಶಗ್ರೀವಹರಂ ರುದ್ರಂ ಕೇಶವಂ ಕೇಶಿಮರ್ದನಮ್ ।
ವಾಲಿಪ್ರಮಥನಂ ವೀರಂ ಸುಗ್ರೀವೇಪ್ಸಿತರಾಜ್ಯದಮ್ ॥೧೦॥
ನರವಾನರಸೈನ್ಯೈಶ್ಚ ಸೇವಿತಂ ಹನುಮತ್ಪ್ರಭುಮ್ ।
ಸೂಕ್ಷ್ಮಂ ಶುದ್ಧಂ ಪರಂ ಶಾಂತಂ ತಾರಕಬ್ರಹ್ಮರೂಪಿಣಮ್ ॥೧೧॥
ಸರ್ವಭೂತಾತ್ಮಭೂತಸ್ಥಂ ಸರ್ವಾಧಾರಂ ಸನಾತನಮ್ ।
ನಿತ್ಯಾನನ್ದಂ ನಿರಾಕಾರಂ ಅದ್ವೈತಂ ತಮಸಃ ಪರಮ್ ॥೧೨॥
ವೇದಾನ್ತವೇದ್ಯಂ ರವಿಮಾಶಿತಾರಂ ಅನಾದಿಮಧ್ಯಾನ್ತಮಚಿನ್ತ್ಯಮಾದ್ಯಮ್ ।
ಅಗೋಚರಂ ನಿರ್ಮಲಮೇಕರೂಪಂ ನಮಾಮಿರಾಮಂ ತಮಸಃಪರಸ್ತಾತ್ ॥೧೩॥
ಅಶೇಷವೇದಾತ್ಮಕಮಾದಿಸಂಜ್ಞಂ ಅಜಂ ಹರಂ ವಿಷ್ಣುಮನನ್ತಮೂರ್ತಿಮ್ ।
ಅಪಾರಸಚ್ಚಿತ್ಸುಖಮೇಕರೂಪಂ ಪರಾತ್ಪರಂ ರಾಮಮಹಂ ನಮಾಮಿ ॥೧೪॥
ತತ್ತ್ವಸ್ವರೂಪಂ ಪುರುಷಂ ಪುರಾಣಂ ಸ್ವತೇಜಸಾ ಪೂರಿತಲೋಕಭೇದಮ್ ।
ರಾಜಾಧಿರಾಜಂ ರವಿಮಣ್ಡಲಸ್ಥಂ ರಮೇಶ್ವರಂ ರಾಮಮಹಂ ನಮಾಮಿ ॥೧೫॥

ರಾವಣಸಂಹಾರಕನೂ ಶಕ್ರಾದುಃಖಪ್ರದನೂ ಕ್ಷೀರಾಬ್ಧಿಶಯನನೂ ಕೇಶಿದಾನವಮರ್ದನನೂ ವಾಲಿಪ್ರಮಥನನೂ ಮಹಾವೀರನೂ ಸುಗ್ರೀವರಾಜ್ಯಪ್ರದನೂ ಆಗಿರುವ ಶ್ರೀರಾಮನನ್ನು ನಮಸ್ಕರಿಸುವೆನು ॥೧೦॥

ಮನುಷ್ಯಸೈನ್ಯಗಳಿಂದಲೂ ಕಪಿಸೈನ್ಯದಿಂದಲೂ ಸೇವಿಸಲ್ಪಟ್ಟವನಾಗಿಯೂ, ಹನುಮಂತನಿಗೆ ಪ್ರಭುವಾಗಿಯೂ ಇರುವ, ಸೂಕ್ಷ್ಮನೂ ಶುದ್ಧನೂ ಪರಾತ್ಪರನೂ ಶಾಂತನೂ ತಾರಕಬ್ರಹ್ಮರೂಪನೂ ಆದ, ಶ್ರೀರಾಮನನ್ನು ನಮಸ್ಕರಿಸುವೆನು ॥೧೧॥

ಸರ್ವಭೂತಾತ್ಮನಾಗಿಯೂ, ಸರ್ವಭೂತಾಂತರ್ಗತನಾಗಿಯೂ, ಸರ್ವಾಧಾರನಾಗಿಯೂ, ಸನಾತನನಾಗಿಯೂ, ನಿತ್ಯಾನಂದರೂಪನಾಗಿಯೂ, ನಿರಾಕಾರನಾಗಿಯೂ, ಅದ್ವೈತರೂಪನಾಗಿಯೂ, ತಮಾಯಾತೀತನಾಗಿಯೂ ಇರುವ, ಶ್ರೀರಾಮನನ್ನು ನಮಿಸುವೆನು ॥೧೨॥

ವೇದಾಂತವೇದ್ಯನೂ ಆದಿತ್ಯರೂಪನೂ ಸರ್ವೇಶ್ವರನೂ ಆದಿಮಧ್ಯಾಂತರಹಿತನೂ ಅಚಿಂತ್ಯಮಹಿಮನೂ ಸಕಲಜಗದಾದಿಭೂತನೂ ಅಗೋಚರನೂ ನಿರ್ಮಲನೂ ಏಕರೂಪವೂ ತಮೋತೀತನೂ ಆದ ಶ್ರೀರಾಮನನ್ನು ನಮಸ್ಕರಿಸುವೆನು ॥೧೩॥

ಸಕಲವೇದರೂಪನೂ ಆದಿಸಂಜ್ಞಾಭೂತನೂ ಅಜನೂ ಹರನೂ ವಿಷ್ಣುವೂ ಅನಂತರೂಪನೂ ಅಪಾರಸಚ್ಚಿದಾನಂದ ವಿಗ್ರಹನೂ ಪರಾತ್ಪರನೂ ಆದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೪॥

ಪರತತ್ತ್ವಸ್ವರೂಪನಾಗಿಯೂ, ಪುರಾಣಪುರುಷನಾಗಿಯೂ, ತನ್ನ ತೇಜಸ್ಸಿನಿಂದ ಸಕಲಲೋಕಗಳನ್ನೂ ತುಂಬಿದವನಾಗಿಯೂ, ರಾಜಾಧಿರಾಜನಾಗಿಯೂ, ಸೂರ್ಯಮಂಡಲ ಮಧ್ಯಸ್ಥನಾಗಿಯೂ, ರಮಾಪತಿಯಾಗಿಯೂ ಇರುವ, ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೧೫॥

ಯೋಗೀನ್ದ್ರಸಭ್ಯೈರಭಿಸೇವ್ಯಮಾನಂನಾರಾಯಣಂನಿರ್ಮಲಮಾದಿದೇವಮ್ ।
ನತೋಸ್ಮಿ ನಿತ್ಯಂ ಜಗದೇಕನಾಥಂ ಆದಿತ್ಯವರ್ಣಂ ತಮಸಃ ಪರಸ್ತಾತ್ ॥೩೬॥
ಲೋಕಾಭಿರಾಮಂರಘುವಂಶನಾಥಂ ಹರಿಂಚಿದಾನನ್ದಮಯಂಮುಕುನ್ದಮ್ ।
ಅಶೇಷವಿದ್ಯಾಧಿಪತಿಂ ನಮಾಮಿ ರಾಮಂ ಪುರಾಣಂ ತಮಸಃಪರಸ್ತಾತ್ ॥೩೭॥
ವಿಭೂತಿದಂ ವಿಶ್ವಸೃಜಂ ವಿರಾಜಂ ರಾಜೇನ್ದ್ರವಿಶಂ ರವಿವಂಶನಾಥಮ್ ।
ಅಚಿನ್ತ್ಯಮವ್ಯಕ್ತಮನನ್ತಮೇಕಂಜ್ಯೋತಿರ್ಮಯಂರಾಮಮಹಂನಮಾಮಿ॥೩೮॥
ಅಶೇಷಸಂಸಾರವಿಕಾರಹೀನಂ ಆನನ್ದಸಮ್ಪೂರ್ಣಸುಖಾಭಿರಾಮಮ್ ।
ನಾರಾಯಣಂ ವಿಷ್ಣುಮಹಂ ನಮಾಮಿ ಸಮಸ್ತಸಿದ್ಧಿಂ ತಮಸಃಪರಸ್ತಾತ್॥೩೯॥
ಶಾನ್ತಂ ಸರ್ವಗತಂ ಸೂಕ್ಷ್ಮಂ ಪರಬ್ರಹ್ಮ ಸನಾತನಮ್ ।
ರಾಜೀವಲೋಚನಂ ನಿತ್ಯಂ ಪ್ರಣಮಾಮಿ ಜಗದ್ಗುರುಮ್ ॥೪೦॥
ಮುನೀನ್ದ್ರಗುಹ್ಯಂ ಪರಿಪೂರ್ಣಮೇಕಂ ಕಲಾನಿಧಿಂ ಕಲ್ಮಷನಾಶಹೇತುಮ್।
ಪರಾತ್ಪರಂಯತ್ಪರಮಂಪವಿತ್ರಂ ನಮಾಮಿನಿತ್ಯಂಮಹತೋಮಹಾನ್ತಮ್॥೪೧

ಸಕಲಯೋಗಿಗಳಿಂದಲೂ ಸೇವಿಸಲ್ಪಡತಕ್ಕವನಾಗಿಯೂ, ನಿರ್ಮಲನಾಗಿಯೂ, ಆದಿದೇವನಾಗಿಯೂ, ಜಗದೇಕನಾಥನಾಗಿಯೂ, ಆದಿತ್ಯವರ್ಣನಾಗಿಯೂ, ತಮಸಃಪರನಾಗಿಯೂ ಇರುವ, ಶ್ರೀಮನ್ನಾರಾಯಣಮೂರ್ತಿಯಾದ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೩೬॥

ಸರ್ವಲೋಕ ಮನೋಹರನಾಗಿಯೂ, ರಘುಕುಲನಾಥನಾಗಿಯೂ, ಸರ್ವಲೋಕ ಪ್ರಳಯಕರ್ತೃನಾಗಿಯೂ, ಜ್ಞಾನಾನಂದಮಯನಾಗಿಯೂ, ಸರ್ವವಿದ್ಯಾಧೀಶನಾಗಿಯೂ, ಪುರಾಣ ಪುರುಷನಾಗಿಯೂ, ತಮಸಃಪರನಾಗಿಯೂ ಇರುವ, ಶ್ರೀಮುಕುಂದರೂಪನಾದ ರಾಮನನ್ನು ನಾನು ನಮಸ್ಕರಿಸುವೆನು ॥೩೭॥

ಸಕಲರಿಗೂ ಸಂಪತ್ಪ್ರದನಾಗಿಯೂ, ವಿಶ್ವಸೃಷ್ಟಿಕರ್ತನಾಗಿಯೂ, ರಾಜರಾಜನಾಗಿಯೂ, ಈಶ್ವರರೂಪನಾಗಿಯೂ, ಸೂರ್ಯವಂಶನಾಥನಾಗಿಯೂ, ಅಚಿಂತ್ಯಮಹಿಮನಾಗಿಯೂ, ಅನಂತನಾಗಿಯೂ, ಅದ್ವಿತೀಯನಾಗಿಯೂ, ಜ್ಯೋತಿರ್ಮಯನಾಗಿಯೂ ಇರುವ ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೩೮॥

ಸಮಸ್ತವಾದ ಸಂಸಾರವಿಕಾರಗಳಿಂದ ಹೀನನಾಗಿಯೂ, ಆನಂದರೂಪನಾಗಿಯೂ, ಅಖಂಡಾನಂದರೂಪನಾಗಿಯೂ, ಸರ್ವಮನೋಹರನಾಗಿಯೂ, ನಾರಾಯಣನಾಗಿಯೂ, ಸಮಸ್ತ ಸಿದ್ಧಿರೂಪನಾಗಿಯೂ, ತಮಸಃಪರನಾಗಿಯೂ ಇರುವ, ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೩೯॥

ಶಾಂತವೂ ಸರ್ವಗತವೂ ಸೂಕ್ಷ್ಮವೂ ಸನಾತನವೂ ಆದ ಪರಬ್ರಹ್ಮರೂಪನಾದ–ರಾಜೀವ ನೇತ್ರನಾದ–ಜಗದ್ಗುರುವಾದ–ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೪೦॥

ಸಕಲ ಮುನಿಗಳಿಗೂ ಮೃಗ್ಯನಾದವನಾಗಿಯೂ, ಅಖಂಡರೂಪನಾಗಿಯೂ, ಅದ್ವಿತೀಯನಾಗಿಯೂ, ಕಲಾನಿಧಿಯಾಗಿಯೂ, ಕಲ್ಮಷನಾಶಹೇತುವಾಗಿಯೂ, ಪರಾತ್ಪರನಾಗಿಯೂ, ಪರಮಪವಿತ್ರನಾಗಿಯೂ, ನಿತ್ಯನಾಗಿಯೂ, ಮಹತ್ತಿಗಿಂತ ಮಹತ್ತಾಗಿಯೂ ಇರುವ, ಶ್ರೀರಾಮನನ್ನು ನಾನು ನಮಸ್ಕರಿಸುವೆನು ॥೪೧॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವೇನ್ದ್ರೋ ದೇವತಾಸ್ತಥಾ ।
ಆದಿತ್ಯಾದಿಗ್ರಹಾಶ್ಚೈವ ತ್ವಮೇವ ರಘುನನ್ದನ ॥೩೨॥
ತಾಪಸಾಶ್ಚಋಷಯಃ ಸಿದ್ಧಾಃ ಸಾಧ್ಯಾಶ್ಚ ಮರುತಸ್ತಥಾ ।
ವಿಪ್ರಾಯಜ್ಞಾಸ್ತಥಾ ವೇದಾಃ ಪುರಾಣಂ ಧರ್ಮಸಂಹಿತಾಃ ॥೩೩॥
ವರ್ಣಾಶ್ರಮಾಸ್ತಥಾ ಧರ್ಮಾಃ ವರ್ಣಧರ್ಮಾಸ್ತಥೈವ ಚ ।
ನಾಗಾಯಕ್ಷಾಶ್ಚ ಗನ್ಧರ್ವಾಃ ದಿಕ್ಪಾಲಾದಿಗ್ಜಾದಿಶಃ ॥೩೪॥
ಸನಕಾದಿಮುನಿಶ್ರೇಷ್ಠಾಃ ತ್ವಮೇವ ರಘುನನ್ದನ ।
ವಸವೋಷ್ಟೌ ತ್ರಯಃ ಕಾಲಾಃ ರುದ್ರಾಏಕಾದಶ ಸ್ಮೃತಾಃ ॥೩೫॥
ತಾರಕಾದ್ವಾದಶಾದಿತ್ಯಾಃ ತ್ವಮೇವ ರವಿವಂಶಜ ।
ಸಪ್ತ ದ್ವೀಪಾಃ ಸಮುದ್ರಾಶ್ಚ ನಗಾನದ್ಯಸ್ತಥಾ ದ್ರುಮಾಃ ॥೩೬॥
ಸ್ಥಾವರಾಜಙ್ಗಮಾಶ್ಚೈವ ತ್ವಮೇವ ಪುರುಷೋತ್ತಮ ॥೩೭॥
ದೇವತಿರ್ಯಙ್ಮನುಷ್ಯಾಣಾಂ ದಾನವಾನಾಂ ತಥೈವ ಚ ।
ಮಾತಾ ಪಿತಾ ತಥಾ ಭರ್ತಾ ತ್ವಮೇವ ನನು ಕೇಶವ ॥೩೮॥
ಸರ್ವಶಾಸ್ತ್ರಂ ಪರಂ ಬ್ರಹ್ಮ ತ್ವನ್ಮಯಂ ಸರ್ವಮೇವ ಹಿ ।
ತ್ವಮಕ್ಷರಂ ಪರಂ ಜ್ಯೋತಿಃ ತ್ವಮೇವ ರಘುನನ್ದನ ॥೩೯॥
ಇತಿ ಸ್ತುತಸ್ತದಾ ರಾಮಃ ಪ್ರಸನ್ನಃ ಪ್ರಾಹ ನಾರದಮ್ ।
ವರಂ ವರಯ ಭದ್ರಂ ತೇ ಮುನೇ ಯದಭಿಕಾಂಕ್ಷಿತಮ್ ॥೪೦॥

ಹೇ ರಘುನಂದನ! ಬ್ರಹ್ಮನೂ, ವಿಷ್ಣುವೂ, ರುದ್ರನೂ, ದೇವೇಂದ್ರನೂ, ದೇವತೆಗಳೂ, ಆದಿತ್ಯಾದಿ ಸಮಸ್ತಗ್ರಹಗಳೂ ನೀನೇಯೇ ॥೩೨॥

ತಾಪಸರೂ, ಋಷಿಗಳೂ, ಸಿದ್ಧರೂ, ಸಾಧ್ಯರೂ, ಮರುತ್ತುಗಳೂ, ವಿಪ್ರರೂ, ಯಜ್ಞಗಳೂ, ವೇದಗಳೂ, ಪುರಾಣವೂ, ಧರ್ಮಸಂಹಿತೆಗಳೂ ನೀನೇಯೇ ॥೩೩॥

ವರ್ಣಾಶ್ರಮಗಳೂ, ಆಶ್ರಮಧರ್ಮಗಳೂ, ವರ್ಣಧರ್ಮಗಳೂ, ನಾಗರೂ, ಯಕ್ಷರೂ, ಗಂಧರ್ವರೂ, ದಿಕ್ಪಾಲಕರೂ, ದಿಗ್ಗಜಗಳೂ, ದಿಕ್ಕುಗಳೂ ನೀನೇಯೇ ॥೩೪॥

ಹೇ ರಘುನಂದನ! ಸನಕಾದಿ ಮುನಿಗಳೂ ನೀನೇಯೇ. ಹೇ ರವಿಕುಲಭೂಷಣ! ಅಷ್ಟ ವಸುಗಳೂ, ಮೂರು ಕಾಲಗಳೂ, ಏಕಾದಶ ರುದ್ರರೂ, ಸಪ್ತವಿಂಶತಿ ಮುಖ್ಯ ನಕ್ಷತ್ರಗಳೂ ನೀನೇಯೇ. ಹೇ ಪುರುಷೋತ್ತಮ! ಸಪ್ತ ದ್ವೀಪಗಳೂ, ಸಪ್ತ ಸಮುದ್ರಗಳೂ, ಸಪ್ತ ಕುಲಪರ್ವತಗಳೂ, ಸಪ್ತ ಮಹಾನದಿಗಳೂ, ವೃಕ್ಷಗಳೂ, ಸ್ಥಾವರಗಳೂ, ಜಂಗಮಗಳೂ ಕೂಡ ನೀನೇಯೇ ॥೩೫-೩೭॥

ಹೇ ಕೇಶವ! ದೇವತಿರ್ಯಙ್ಮನುಷ್ಯರಿಗೂ, ದಾನವರಿಗೂ ಕೂಡ, ತಾಯಿಯೂ ತಂದೆಯೂ ಸ್ವಾಮಿಯೂ ನೀನೇಯೆ ॥೩೮॥

ಹೇ ರಘುನಂದನ! ಸರ್ವಶಾಂತವಾಗಿರುವ ಪರಬ್ರಹ್ಮವೂ ನೀನೇಯೇ ; ಸಮಸ್ತವೂ ನಿನ್ನ ರೂಪವೇ ಆದುದು. ನಾಶರಹಿತವಾದ ಆ ಪರಜ್ಯೋತಿಯೂ ನೀನೇಯೇ. (ಎಂದು ಶ್ರೀ ನಾರದಮುನಿಯು ಸ್ತೋತ್ರಮಾಡಿದನು) ॥೩೯॥

ಆಗ, ಈ ರೀತಿಯಾಗಿ ನಾರದಮುನಿಯಿಂದ ಸ್ತುತಿಸಲ್ಪಟ್ಟ ಶ್ರೀರಾಮಚಂದ್ರನು, ಮಂದ ಹಾಸಮುಖನಾಗಿ, ನಾರದಮುನಿಯನ್ನು ಕುರಿತು ' ಹೇ ನಾರದಮುನೇ! ನಿನಗೆ ಮಂಗಳವಾಗಲಿ.

ತತಃ ಪ್ರಸನ್ನಂ ಶ್ರೀರಾಮಂ ಪ್ರೋವಾಚ ಮುನಿಪುಙ್ಗವಃ ॥೪೦॥
ಯದಿ ತುಷ್ಟೋಽಸಿ ಸರ್ವಜ್ಞ ಶ್ರೀರಾಮ ಕರುಣಾನಿಧೇ ।
ತ್ವನ್ಮೂರ್ತಿದರ್ಶನೇನೈವ ಕೃತಾರ್ಥೋಽಸ್ಮಿ ರಘೂತ್ತಮ ॥೪೧॥
ಧನ್ಯೋಽಹಂ ಕೃತಕೃತ್ಯೋಽಹಂ ಪುಣ್ಯೋಽಹಂ ಪುರುಷೋತ್ತಮ ।
ಅದ್ಯ ಮೇ ಸಫಲಂ ಜನ್ಮ ಅದ್ಯ ಮೇ ಸಫಲಂ ತಪಃ ।
ಅದ್ಯ ಮೇ ಸಫಲಂ ಸರ್ವಂ ತ್ವತ್ಪಾದಾಮ್ಬುಜದರ್ಶನಾತ್ ॥೪೩॥
ತ್ವತ್ಪಾದಾಮ್ಬುರುಹದ್ವನ್ದ್ವೇ ಭಕ್ತಿಂ ಮೇ ದೇಹಿ ರಾಘವ ॥೪೪॥
ತತಃ ಪರಮಸಮ್ಪ್ರೀತಃ ಪ್ರೋವಾಚ ಮುನಿಪುಙ್ಗವಮ್ ।
ಮುನಿವರ್ಯ ಮಹಾಭಾಗ ಪುನರಿಷ್ಟಂ ದದಾಮ್ಯಹಮ್ ।
ತುಷ್ಟೋಽಸ್ಮಿ ಮುನಿಶಾರ್ದೂಲ ವೃಣೀಷ್ವ ವರಮುತ್ತಮಮ್ ॥೪೫॥

ಶ್ರೀ ನಾರದ ಉವಾಚ.

ವರಂ ನ ಯಾಚೇ ರಘುನಾಥ ಯುಷ್ಮತ್ಪಾದಾಬ್ಜಭಕ್ತಿಃಸತತಂಮಮಾಸ್ತು ।
ಇಮಂಪ್ರಿಯಂನಾಥವರಂಪ್ರಯಚ್ಛ ಪುನಃಪುನಸ್ತ್ವಾಮಿದಮೇವಯಾಚೇ ॥೪೬॥

ನಿನಗೆ ಇಷ್ಟವಾಗಿರುವ ವರವನ್ನು ಪ್ರಾರ್ಥಿಸುವನಾಗು' ಎಂದು ಹೇಳಿದನು. ಆ ಬಳಿಕ, ಪ್ರಸನ್ನನಾಗಿರುವ ಶ್ರೀರಾಮನನ್ನು ಕುರಿತು, ನಾರದಮುನಿಯು ಈರೀತಿಯಾಗಿ ವಿಜ್ಞಾಪಿಸಿದನು ॥೪೦-೪೧॥

ಹೇ ಕರುಣಾನಿಧೇ! ಸರ್ವಜ್ಞ! ಶ್ರೀರಾಮ! ನೀನು ಸಂತೋಷಪಟ್ಟಿಯಾದರೆ, ಈಗ ನಾನು ಧನ್ಯನಾದೆನು. ನಿನ್ನ ಈ ದಿವ್ಯಮಂಗಳ ವಿಗ್ರಹವನ್ನು ದರ್ಶನಮಾಡಿದುದರಿಂದಲೇ, ನಾನು ಈಗ ಕೃತಕೃತ್ಯನಾದೆನು ॥೪೨॥

ನಿನ್ನ ಪಾದಕಮಲ ದರ್ಶನವಾದುದರಿಂದ, ಈಗ ನನ್ನ ಜನ್ಮವು ಸಾರ್ಥಕವಾಯ್ತು; ಈಗ ನನ್ನ ತಪಸ್ಸು ಸಫಲವಾಯ್ತು; ಈಗ ನನ್ನ ಸರ್ವಸ್ವವೂ ಸಫಲವಾಯ್ತು. ಹೇ ರಾಘವ! ನನಗೆ ನಿನ್ನ ಪಾದಕಮಲದಲ್ಲಿ ನಿಶ್ಚಲವಾದ ಭಕ್ತಿಯನ್ನು ಅನುಗ್ರಹಿಸುವನಾಗು. (ಎಂದು ನಾರದಮುನಿಯು ಪ್ರಾರ್ಥಿಸಿದನು) ॥೪೩-೪೪॥

ಆ ಬಳಿಕ, ಮಹಾಪ್ರೀತಿಸಂಪನ್ನನಾದ ಶ್ರೀರಾಮನು, ನಾರದ ಮಹರ್ಷಿಯನ್ನು ಕುರಿತು 'ಮಹಾಭಾಗ! ಮುನಿಶ್ರೇಷ್ಠ! ನಿನಗೆ ಇನ್ನೂ ಬೇಕಾದ ವರವನ್ನು ನಾನು ಕೊಡುವೆನು. ಹೇ ಮುನಿಶಾರ್ದೂಲ! ನಾನು ನಿನ್ನ ವಿಷಯದಲ್ಲಿ ಸಂತುಷ್ಟನಾಗಿರುವೆನು. ಪ್ರಶಸ್ತವಾದ ವರವನ್ನು ವರಿಸುವನಾಗು' ಎಂದು ಹೇಳಿದನು ॥೪೫॥

ಇದನ್ನು ಕೇಳಿ ನಾರದಮುನಿಯು ಪ್ರಾರ್ಥಿಸುವನು:—

ಹೇ ರಘುನಾಥ! ನಾನು ಯಾವ ವರವನ್ನೂ ಯಾಚಿಸುವುದಿಲ್ಲ. ನನಗೆ ಸರ್ವದಾ ನಿನ್ನ ಪಾದಕಮಲದಲ್ಲಿ ಭಕ್ತಿಯೊಂದುವಾತ್ರವಿದ್ದರೆ ಸಾಕಾಗಿರುವುದು. ಹೇ ಸ್ವಾಮಿ! ನನಗೆ ಇಷ್ಟವಾದ ಇದೊಂದು ವರವನ್ನು ಕೊಡುವನಾಗು. ನಾನು ಪುನಃಪುನಃ ನಿನ್ನಲ್ಲಿ ಇದನ್ನೇ ಯಾಚಿಸುವೆನು ॥೪೬॥

ತ್ವತ್ಪಾದಭಕ್ತ್ಯಯುಕ್ತಾನಾಂ ವಿಜ್ಞಾನಂ ಭವತಿ ಕ್ರಮಾತ್ ।
ತಸ್ಮಾತ್ ತ್ವದ್ಭಕ್ತ್ಯಯುಕ್ತಾಯೇ ಮುಕ್ತಿ ಭಾಜಸ್ತ ಏವ ಹಿ ॥೪೭॥
ಅಹಂ ತ್ವದ್ಭಕ್ತಭಕ್ತಾನಾಂ ತದ್ಭಕ್ತಾನಾಂ ಚ ಕಿಙ್ಕರಃ ।
ಅತೋ ಮಾಮನುಗೃಹ್ಣೀಷ್ವ ಮೋಹಯಸ್ವ ನ ಮಾಂ ಪ್ರಭೋ ॥೪೮॥
ತ್ವನ್ನಾಭಿಕಮಲೋತ್ಪನ್ನೋ ಬ್ರಹ್ಮಾ ಮೇ ಜನಕಃ ಪಿತಾ ।
ಅತಸ್ತವಾಹಂ ಪೌತ್ರೋಸ್ಮಿ ಭಕ್ತಂ ಮಾಂ ಪಾಹಿ ರಾಘವ ॥೪೯॥
ಇತ್ಯುಕ್ತ್ವಾ ಬಹುಶೋ ನತ್ವಾ ಹ್ಯಾನನ್ದಾಶ್ರುಪರಿಪ್ಲುತಃ ।
ಉವಾಚ ವಚನಂ ರಾಮಂ ಬ್ರಹ್ಮಣಾ ಬೋಧಿತೋಸ್ಮ್ಯಹಮ್ ॥೫೦॥
ರಾವಣಸ್ಯ ವಧಾರ್ಥಾಯ ಜಾತೋಸಿ ರಘುನನ್ದನ ।
ಇದಾನೀಂ ರಾಜ್ಯರಕ್ಷಾರ್ಥಂ ಪಿತಾ ತ್ವಾಮಭಿಷೇಕ್ಷ್ಯತಿ ॥೫೧॥
ಪ್ರತಿಜ್ಞಾ ತೇ ಕೃತಾ ರಾಮ ಭೂಭಾರಹರಣಾಯ ವೈ ।
ತತ್ ಸತ್ಯಂ ಕುರು ರಾಜೇನ್ದ್ರ ಸತ್ಯಸನ್ಧೋಸಿ ರಾಘವ ॥೫೨॥
ಕೃತ್ವೈತತ್ಕಥಿತಂ ರಾಮೋ ಮುನಿಮಾಹಾಥ ಸಸ್ಮಿತಃ ।
ಶೃಣು ಮೇಽವಿದಿತಂ ಕಿಞ್ಚಿತ್ ನಾಸ್ತಿ ನಾರದ ಸರ್ವತಃ ॥೫೩॥

ನಿನ್ನ ಪಾದದಲ್ಲಿ ಭಕ್ತ್ಯಯುಕ್ತರಾದವರಿಗೆ, ಕ್ರಮವಾಗಿ ಜ್ಞಾನೋದಯವಾಗುವುದು. ಅದುಕಾರಣ, ಯಾರು ನಿನ್ನಲ್ಲಿ ಭಕ್ತ್ಯಯುಕ್ತರಾಗುವರೋ, ಅವರೇ ಮುಕ್ತ್ಯಯನ್ನು ಹೊಂದ ತಕ್ಕವರು ॥೪೭॥

ನಾನು, ನಿನ್ನ ಭಕ್ತರ ಭಕ್ತರಿಗೂ ಅವರ ಭಕ್ತರಿಗೂ ಕಿಂಕರನಾದವನು. ಅದುಕಾರಣ, ಹೇ ಪ್ರಭೋ! ನೀನು ನನ್ನನ್ನು ಅನುಗ್ರಹಿಸು; ಎಂದಿಗೂ ಮೋಹಪಡಿಸಬೇಡ ॥೪೮॥

ನನ್ನ ತಂದೆಯಾದ ಬ್ರಹ್ಮನು, ನಿನ್ನ ನಾಭಿಕಮಲದಲ್ಲಿ ಹುಟ್ಟಿದವನು. ಅದುಕಾರಣ, ನಾನು ನಿನಗೆ ಪೌತ್ರನಾದೆನು. ಹೇ ರಾಘವ! ನಿನ್ನ ಭಕ್ತನಾದ ನನ್ನನ್ನು ನೀನು ಕಾಪಾಡ ಬೇಕು ॥೪೯॥

ಎಂಬುದಾಗಿ ಹೇಳಿ, ಅನೇಕವೇಳೆ ನಮಸ್ಕರಿಸಿ, ಆನಂದಬಾಷ್ಪದಲ್ಲಿ ತೇಲಿಹೋಗುತ, ಮತ್ತೆ ರಾಮನನ್ನು ಕುರಿತು 'ಸ್ವಾಮಿ! ನಾನು ಬ್ರಹ್ಮನಿಂದ ಪ್ರೇರಿತನಾಗಿ ಇಲ್ಲಿಗೆ ಬಂದಿರುವೆನು. ಹೇ ರಘುನಂದನ! ನೀನು ರಾವಣನ ವಧಕ್ಕಾಗಿ ಅವತರಿಸಿರುವೆ. ಈಗಲಾದರೋ, ನಿನ್ನ ತಂದೆಯು ನಿನ್ನನ್ನು ರಾಜ್ಯಸಂರಕ್ಷಣೆಗಾಗಿ ಅಭಿಷೇಕಮಾಡಿಡುವನು. ಹೇ ರಾಮ! ನೀನು ಪೂರ್ವದಲ್ಲಿ ಭೂಭಾರಹರಣಾರ್ಥವಾಗಿ ಪ್ರತಿಜ್ಞೆಯನ್ನು ಮಾಡಿರುವೆಯಲ್ಲವೆ! ಹೇ ರಾಜೇಂದ್ರ! ಅದನ್ನು ಈಗ ಸತ್ಯವನ್ನಾಗಿ ಮಾಡು. ಹೇ ರಾಘವ! ನೀನು ಮಹಾ ಸತ್ಯಸಂಧ ನಾಗಿರುವೆಯಲ್ಲವೆ!' ಎಂದು ವಿಜ್ಞಾಪಿಸಿದನು ॥೫೦–೫೪॥

ಹೀಗೆ ನಾರದಮುನಿಯಿಂದ ಹೇಳಲ್ಪಟ್ಟ ಮಾತನ್ನು ಕೇಳಿದಬಳಿಕ, ಮಂದಹಾಸಯುಕ್ತ ನಾದ ಶ್ರೀರಾಮನು, ಅವನನ್ನು ಕುರಿತು 'ಎಲೈ ನಾರದಮುನಿಯೆ! ಕೇಳುವನಾಗು. ಈ ಲೋಕ ದಲ್ಲೆಲ್ಲ ನನಗೆ ತಿಳಿಯದಿರುವುದಾವುದೂ ಇಲ್ಲ. ನಾನು ಪೂರ್ವದಲ್ಲಿ ಯಾವುದನ್ನು ಪ್ರತಿಜ್ಞೆ

ಪ್ರತಿಜ್ಞಾತಂ ಚ ಯತ್ ಪೂರ್ವಂ ಕರಿಷ್ಯೇ ತನ್ನ ಸಂಶಯಃ ।
ರಾವಣಸ್ಯ ವಿನಾಶಾರ್ಥಂ ಶ್ವೋ ಯೋಸ್ಯೇ ದಂಡಕಾವನಮ್ ॥೫೪॥
ಸೀತಾಮಿಷೇಣ ದುಷ್ಟಂ ತಂ ಸಕುಲಂ ನಾಶಯಾಮ್ಯಹಮ್ ।
ಹರಿಷ್ಯೇ ಸರ್ವಭೂಭಾರಂ ಕ್ರಮೇಣಾಸುರಮಂಡಲಮ್ ॥೫೫॥
ಏವಂ ರಾಮೇ ಪ್ರತಿಜ್ಞಾತೇ ನಾರದಃ ಪ್ರಮುಮೋದ ಹ ।
ವಿಸೃಷ್ಟಶ್ಚಾಪಿ ರಾಮೇಣ ಸಯಯೌ ಬ್ರಹ್ಮಣೋನ್ತಿಕಮ್ ॥೫೬॥

ಇತಿ ಶ್ರೀಮದಯೋಧ್ಯಾಕಾಂಡೇ ನಾರದಸ್ತವರಾಜ ಕಥನಂ
ನಾಮ ಪಞ್ಚಮಃ ಸರ್ಗಃ.



ಮಾಡಿರುವೆನೋ, ಅದನ್ನು ಹಾಗೆಯೇ ನೆರವೇರಿಸುವೆನು; ಇದರಲ್ಲಿ ಸಂಶಯವಿಲ್ಲ ರಾವಣನ ವಿನಾಶಾರ್ಥವಾಗಿ ನಾಳೆಯೇ ದಂಡಕಾರಣ್ಯಕ್ಕೆ ಹೊರಡುವೆನು. ಸೀತೆಯನ್ನು ವ್ಯಾಜವಾಡಿ ಕೊಂಡು, ದುಷ್ಟನಾದ ಆ ರಾವಣನನ್ನು ಅವನ ವಂಶದೊಡನೆ ನಾಶಮಾಡುವೆನು. ಭೂಮಿಗೆ ಭಾರವಾಗಿರುವ ಆ ರಾಕ್ಷಸಸಮೂಹವನ್ನೆಲ್ಲ ಕ್ರಮವಾಗಿ ಪರಿಹರಿಸಿಬಿಡುವೆನು' ಎಂದು ಅಪ್ಪಣೆ ಕೊಟ್ಟನು ॥೫೩–೫೫॥

ಹೀಗೆ ಶ್ರೀರಾಮನಿಂದ ಪ್ರತಿಜ್ಞೆ ಮಾಡಲ್ಪಡಲಾಗಿ, ಆ ನಾರದನು ಮಹಾಸಂತೋಷ ಭರಿತನಾದನು. ಅನಂತರ, ಶ್ರೀರಾಮನಿಂದ ಕಳುಹಿಸಲ್ಪಟ್ಟು, ಬ್ರಹ್ಮನ ಸವಿಾಪಕ್ಕೆ ಹೊರಟು ಹೋದನು ॥೫೬॥

ಇದು ಅಯೋಧ್ಯಾಕಾಂಡದಲ್ಲಿ ನಾರದಸ್ತವರಾಜಕಥನವೆಂಬ
ಅಯ್ದನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಂಡೇ ಷಷ್ಠಃ ಸರ್ಗಃ.

ಶ್ರೀ ಶಿವ ಉವಾಚ.

ಏತಸ್ಮಿನ್ನನ್ತರೇ ದೇವಾಃ ದೇವೀಂ ವಾಣೀಮಚೋದಯನ್ ।
ರಾಮಾಭಿಷೇಕವಿಘ್ನಾಯ ಯತಸ್ವ ಬ್ರಹ್ಮವಾಕ್ಯತಃ ॥೧॥
ತಥೇತ್ಯುಕ್ತ್ವಾ ತಥಾ ಚಕ್ರೇ ಪ್ರವಿವೇಶಾಥ ಮನ್ಥರಾಮ್ ।
ತತೋ ಯದೃಚ್ಛಯಾ ಸೌಧಂ ಆರುರೋಹಾಥ ಮನ್ಥರಾ ॥೨॥
ದೃಷ್ಟ್ವಾಯೋಧ್ಯಾಲಙ್ಕರಣಂ ಶ್ರುತ್ವಾ ರಾಮಾಭಿಷೇಚನಮ್ ।
ಸನ್ದಹ್ಯಮಾನಾ ಕೋಪೇನ ಮನ್ಥರಾ ಪಾಪದರ್ಶಿನೀ ।
ಕಯಾನಾಮೇತ್ಯ ಕೈಕೇಯೀಂ ಇದಂ ವಚನಮಬ್ರವೀತ್ ॥೩॥
ಉತ್ತಿಷ್ಠ ಮೂಢೇ ಕಿಂ ಶೇಷೇ ಭಯಂ ತ್ವಾಮುಪವರ್ತತೇ ।
ಅವಪ್ಲುತಮಹೌಘೇನ ಕಿಮಾತ್ಮಾನಂ ನ ಬುಧ್ಯಸೇ ॥೪॥

ಅಯೋಧ್ಯಾಕಾಂಡದಲ್ಲಿ ಆರನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಹೀಗೆ ನಾರದಮುನಿಯು ಹೊರಟುಹೋಗಲಾಗಿ, ಆ ಸಮಯದಲ್ಲಿಯೇ ದೇವತೆಗಳು, ಸರಸ್ವತೀ ದೇವಿಯನ್ನು 'ಹೇ ದೇವಿ! ಬ್ರಹ್ಮನ ಆಜ್ಞಾನುಸಾರವಾಗಿ ನೀನು ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನವುಂಟಾಗಲು ಪ್ರಯತ್ನವಾಡಬೇಕು' ಎಂದು ಪ್ರೇರಿಸಿದರು ॥೧॥

ಆನಂತರ, ಸರಸ್ವತಿಯು ಹಾಗೆಯೇ ಆಗಲೆಂದು ಹೇಳಿ, ಅದರಂತೆಯೇ ಮಾಡಿದಳು; ಇದಕ್ಕಾಗಿ, ಮಂಥರೆಯೆಂಬ ದಾಸಿಯೊಳಗೆ ಪ್ರವೇಶವಾಡಿದಳು. ಆನಂತರ, ಹೀಗೆ ಸರಸ್ವತಿಯಿಂದ ಆನುಪ್ರವೇಶವಾಡಲ್ಪಟ್ಟಿರುವಕಾರಣ, ಆ ಮಂಥರೆಯು ಆಕಸ್ಮಿಕವಾಗಿ ಉಪ್ಪರಿಗೆಯ ಮೇಲಕ್ಕೆ ಹೋದಳು ॥೨॥

ಅಲ್ಲಿ ನಿಂತುಕೊಂಡು ನೋಡಿದ ಪಾಪಬುದ್ಧಿಯಾದ ಆ ಮಂಥರೆಯು, ಅಯೋಧ್ಯಾಪಟ್ಟಣದಲ್ಲಿ ಮಾಡಿರುವ ಅಲಂಕಾರವನ್ನು ಕಂಡು, ಶ್ರೀರಾಮನಿಗೆ ಯೌವರಾಜ್ಯಾಭಿಷೇಕವಾಗುವುದೆಂಬ ಮಾತನ್ನು ಕೇಳಿ, ಕೋಪದಿಂದ ಸುಡಲ್ಪಟ್ಟವಳಾಗಿ, ಮಲಗಿ ನಿದ್ರೆಮಾಡುತಿರುವ ಕೈಕೇಯಿಯ ಹತ್ತಿರಕ್ಕೆ ಬಂದು, ಅವಳಿಗೆ ಈ ಮಾತನ್ನು ಹೇಳಿದಳು ॥೩॥

ಎಲೌ ಮೂಢೇ! ಬೇಗನೆ ಏಳು; ಹೇಗೇಕೆ ಸುಖವಾಗಿ ಮಲಗಿರುವೆ? ದೊಡ್ಡ ಭಯವು ನಿನ್ನನ್ನು ಬೆನ್ನಟ್ಟಿ ಬರುತಿರುವುದು. ಮಹಾ ದುಃಖಸಮುದ್ರದಲ್ಲಿ ತೇಲಿಹೋಗುತಿರುವ ನಿನ್ನನ್ನು ನೀನೇ ಅರಿಯದಿರುವೆಯೇಕೆ? ॥೪॥

ಅನಿಷ್ಟೇ ಸುಭಗಾಕಾರೇ ಸೌಭಾಗ್ಯೇನ ವಿಕತ್ಥಸೇ ।
ಚಲಂ ಹಿ ತವ ಸೌಭಾಗ್ಯಂ ನದ್ಯಾಃ ಸ್ರೋತಇವೋತ್ಪಗೇ ॥೫॥
ಏವಮುಕ್ತಾ ತು ಕೈಕೇಯೀ ರುಷ್ಟಯಾ ಪರುಷಂ ವಚಃ ।
ಕುಬ್ಜಯಾ ಪಾಪದರ್ಶಿನ್ಯಾ ವಿಷಾದಮಗಮತ್ ಪರಮ್ ॥೬॥
ಕೈಕೇಯೀ ತ್ವಬ್ರವೀತ್ ಕುಬ್ಜಾಂ ಕಚ್ಚಿತ್ ಕ್ಷೇಮಂ ನು ಮನ್ಥರೇ ।
ವಿಷಣ್ಣವದನಾಂ ಹಿ ತ್ವಾಂ ಲಕ್ಷಯೇ ಭೃಶದುಃಖಿತಾಮ್ ॥೭॥
ಇತ್ಯುಕ್ತಾ ಸಾ ತದಾ ದೇವ್ಯಾ ಪುನಃ ಪ್ರೋವಾಚ ಕೈಕಯೀಮ್ ॥೮॥
ಅಕ್ಷಯ್ಯಂ ಸುಮಹದ್ದೇವಿ ಪ್ರವೃತ್ತಂ ತ್ವದ್ವಿನಾಶನಮ್ ।
ರಾಮಂ ದಶರಥೋ ರಾಜಾ ಯೌವರಾಜ್ಯೇಭಿಷೇಕ್ಷ್ಯತಿ ॥೯॥
ಅಪವಾಹ್ಯ ತು ದುಷ್ಟಾತ್ಮಾ ಭರತಂ ತವ ನನ್ದನಮ್ ।
ಕಾಲ್ಯೇ ಸ್ಥಾಪಯಿತಾ ರಾಮಂ ರಾಜ್ಯೇ ನಿಹತಕಣ್ಟಕೇ ॥೧೦॥
ಯದಿ ಸ್ಥಾಪಯಿತಾ ರಾಮಂ ಸಾನುಬನ್ಧಾ ಹತಾ ಹ್ಯಸಿ ।

ನೀನು ಅಂತರವಾಗಿ ರಾಜನಿಗೆ ಇಷ್ಟಳಾಗಿಲ್ಲ; ಹೊರಗೆ ವಾಶ್ರ ಮಹಾ ಪ್ರೀತಿವಾಶ್ರ ಳೆಂದು ತೋರುತ್ತಿರುವೆ. ಇಂತಹ ಕಪಟಸೌಭಾಗ್ಯದಿಂದ, ನೀನೇ ನಿನ್ನನ್ನು ಶ್ಲಾಘಿಸಿಕೊಳ್ಳುತಿರುವೆ. ನಿನ್ನ ಈ ಸೌಭಾಗ್ಯವು ಸ್ಥಿರವಾಗಿರುವುದೆಂದು ತಿಳಿಯಬೇಡ. ಗ್ರೀಷ್ಮಕಾಲದಲ್ಲಿ ನದೀಪ್ರವಾಹವು ಚಲಿಸಿಹೋಗಿಬಿಡುವಂತೆ, ನಿನ್ನ ಈ ಸೌಭಾಗ್ಯವೂ ಇನ್ನು ಸ್ವಲ್ಪ ದಿನದೊಳಗಾಗಿ ಚಲಿಸಿಹೋಗತಕ್ಕುದಾಗಿರುವುದು. (ಎಂದು ಮಂಥರೆಯು ಹೇಳಿದಳು) ॥೪॥

ಹೀಗೆ ಮಹಾಕೋಪಾವಿಷ್ಟಳಾದ ಕುಬ್ಜೆಯಾದ ಪಾಪಬುದ್ಧಿಯಾದ ಮಂಥರೆಯಿಂದ ಬಹು ಕ್ರೂರವಾಗಿ ಹೇಳಲ್ಪಟ್ಟ ಕೈಕೇಯಿಯು, ಅತಿಯಾಗಿ ವಿಷಾದವನ್ನು ಹೊಂದಿದವಳಾದಳು ॥೬॥

ಆ ಬಳಿಕ, ಮಂಥರೆಯನ್ನು ಕುರಿತು 'ಎಲೌ ಮಂಥರೇ! ಎಲ್ಲರೂ ಕ್ಷೇಮವಾಗಿರುವರೋ ಇಲ್ಲವೋ? ನಿನ್ನನ್ನು ನೋಡಿದರೆ, ಮುಖದಲ್ಲಿ ಬಹಳ ವಿಷಾದವೂ—ಹೃದಯದಲ್ಲಿ ಬಹಳ ದುಃಖವೂ ತೋರುತಿರುವುವಲ್ಲ!' ಎಂದು ಹೇಳಿದಳು. ಈರೀತಿಯಾಗಿ ಕೈಕೇಯಿಯಿಂದ ಹೇಳಲ್ಪಟ್ಟ ಮಂಥರೆಯು, ಪುನಃ ಅವಳನ್ನು ಕುರಿತು ಹೀಗೆ ಹೇಳಿದಳು ॥೭—೮॥

ಹೇ ದೇವಿ! ನಾನೇನು ಹೇಳಲಿ! ನಿನಗೆ ಶಾಶ್ವತವಾದ ದೊಡ್ಡ ಕೇಡು ಸಂಭವಿಸಿರುವುದು. ಏನೆಂದರೆ:—ನಾಳೆಯದಿವಸ, ದಶರಥಮಹಾರಾಜನು ರಾಮನಿಗೆ ಯೌವರಾಜ್ಯಾಭಿಷೇಕವಮಾಡಿಬಿಡುವನು ॥೯॥

ನಿನ್ನ ಗಂಡನ ದುಷ್ಟತನವನ್ನು ಎಷ್ಟೆಂದು ಹೇಳಲಿ! ಭರತನು ಇಲ್ಲಿಯೇ ಇದ್ದರೆ ರಾಮನ ಪಟ್ಟಾಭಿಷೇಕಕ್ಕೆ ವಿಘ್ನವಾಡಿಯಾನೆಂಬ ಯೋಚನೆಯಿಂದ ಅವನನ್ನು ನಿನ್ನ ತಂದೆಯ ಮನೆಗೆ ಸಾಗಿಸಿಬಿಟ್ಟು, ನಾಳೆಯು ಬೆಳಗಾಗಲೇ ರಾಮನನ್ನು ನಿಷ್ಕಂಟಕವಾದ ದೊರೆತನದಲ್ಲಿ ನೆಲೆಗೊಳಿಸಬೇಕೆಂದು ದುರಾತ್ಮನಾದ ನಿನ್ನ ಗಂಡನು ನಿಶ್ಚಯಿಸಿರುವನು ॥೧೦॥

'ಇದರಿಂದ ನನಗೇನು ಹಾನಿ?' ಎಂದು ಕೇಳುವೆಯೋ?—ರಾಮನನ್ನು ದೊರೆತನದಲ್ಲಿ ನಿಲ್ಲಿಸಿಬಿಟ್ಟಪಕ್ಷದಲ್ಲಿ, ನೀನು ನಿನ್ನ ಪರಿವಾರದೊಡನೆ ಹಾಳಾದಂತೆಯೇ ಸರಿ. ಅದುಕಾರಣ, ಎಲೌ

ಸಾ ಪ್ರಾಪ್ತಕಾಲಂ ಕೈಕೇಯಿ ಕ್ಷಿಪ್ರಂ ಕುರು ಹಿತಂ ತವ ॥೧೧॥

ತಸ್ಯಾಸ್ತದ್ವಚನಂ ಶ್ರುತ್ವಾ ಕೈಕೇಯೀ ಪ್ರಮದೋತ್ತಮಾ ।
ತಸ್ಯೈ ಸ್ವಹಸ್ತಾಭರಣಂ ದದೌ ಹಾರಂ ಚ ಸಾಂಶುಕಮ್ ॥೧೨॥

ಸ್ಮೃತ್ವಾ ರಾಮಂ ವಿಶಾಲಾಕ್ಷಂ ರಾಮಭಕ್ತಿಪರಾಯಣಾ ।
ಅಭಿಷಿಕ್ತಂ ವಸಿಷ್ಠಾದ್ಯೈಃ ಮನಸಾ ಪಶ್ಯತೀವ ಸಾ ॥೧೩॥

ಅದ್ಯೈವ ಸುದಿನಂ ಮನ್ಯೇ ಶ್ರುತಂ ರಾಮಾಭಿಷೇಚನಮ್ ।
ಅಟ್ಟಾಲಕಂ ಸಮಾರುಹ್ಯ ಶ್ವಃ ಪಶ್ಯಾಮೋ ರಘೂತ್ತಮಮ್ ॥೧೪॥

ಅಭಿಷೇಕಾರ್ದ್ರಶಿರಸಂ ನೀಲಾಳಕವೃತಾನನಮ್ ।
ಗಜೇನ ಮಹತಾ ಯಾನ್ತಂ ರಾಮಂ ಭರತಾವೃತಾಸನಮ್ ॥೧೫॥

ಧರ್ಮಾತ್ಮಾ ಸತ್ಯಸನ್ಧಶ್ಚ ರಾಘವಃ ಕರುಣಾನಿಧಿಃ ।
ಧರ್ಮಾರ್ಥಕಾಮಸಮ್ಪನ್ನೋ ಮಿತಭಾಷೀ ಜನಪ್ರಿಯಃ ೧೬॥

ಕೈಕೇಯಿ! ಈ ಸಮಯದಲ್ಲಿ ಮಾಡಬೇಕಾದ ನಿನ್ನ ಹಿತವನ್ನು ನೀನು ಮಾಡಿಕೋ. (ಎಂದು ಮಂಥರೆಯು ಹೇಳಿದಳು) ॥೧೧॥

ಹೀಗೆ ಹೇಳಿದ ಆ ಮಂಥರೆಯ ಮಾತನ್ನು ಕೇಳಿ, ವರಾಂಗನೆಯಾದ ಕೈಕೇಯಿಯು, ಅವಳಿಗೆ ತನ್ನ ಕೈಯಲ್ಲಿದ್ದ ಆಭರಣವನ್ನೂ ಕತ್ತಿನಲ್ಲಿದ್ದ ಹಾರವನ್ನೂ ದಿವ್ಯವಾದ ವಸ್ತ್ರವನ್ನೂ ಬಹುಮಾನವಾಗಿ ಕೊಟ್ಟಳು ॥೧೨॥

ರಾಮಭಕ್ತಿಪರಾಯಣಳಾದ ಆ ಕೈಕೇಯಿಯು, ವಿಶಾಲಲೋಚನನಾದ ಶ್ರೀರಾಮನನ್ನು ಸ್ಮರಿಸಿಕೊಂಡು, ಪರಮಾನಂದ ಪರಿಪೂರ್ಣಳಾಗಿ, ಆನಂದಬಾಷ್ಪಪೂರಿತ ನೇತ್ರಳಾಗಿ, ವಸಿಷ್ಠ ಮೊದಲಾದವರಿಂದ ಪಟ್ಟಾಭಿಷಿಕ್ತನಾದ ಶ್ರೀರಾಮನನ್ನು ತನ್ನ ಮನಸ್ಸಿನಲ್ಲಿ ನೋಡುತಿರುವಳಂತೆ ಸಂತೋಷಪಟ್ಟವಳಾಗಿ, ಮಂಥರೆಯನ್ನು ಕುರಿತು ಹೀಗೆ ಹೇಳಿದಳು ॥೧೩॥

ಎಲೌ ಮಂಥರೆ! ನೀನು ನನಗೆ ಪರಮೋಪಕಾರಿಣಿಯು. ನಮ್ಮ ರಾಮನಿಗೆ ಪಟ್ಟಾಭಿಷೇಕವಾಗುವುದೆಂಬ ಮಾತನ್ನು ಹೇಳುವೆಯಲ್ಲ' ಇದೇ ಸುದಿವಸವೆಂದು ನಾನು ತಿಳಿದಿರುವೆನು. ರಾಮನಿಗೆ ಅಭಿಷೇಕವಾಗುವುದೆಂಬ ಮಾತು ಈ ದಿವಸ ಕೇಳಲ್ಪಟ್ಟಿತಲ್ಲವೆ' ನಾಳೆಯ ದಿವಸ, ಉಪ್ಪರಿಗೆಯ ಮೇಲ್ಗಡೆ ಹೋಗಿ ನಿಂತುಕೊಂಡು, ಪಟ್ಟಾಭಿಷೇಕದಿಂದ ಆರ್ದ್ರಶಿರಸ್ಕನಾಗಿ–ನೀಲವರ್ಣವಾದ ಮುಂಗುರುಳುಗಳಿಂದ ಆವೃತವಾದ ಮುಖವುಳ್ಳವನಾಗಿ–ಪಟ್ಟದಾನೆಯಮೇಲೆ ಶ್ವೇತಚ್ಛತ್ರಿಯ ನೆಳಲಿನಲ್ಲಿ ಕುಳಿತುಕೊಂಡು–ಮೆರವಣಿಗೆ ಹೋಗುತಿರುವ ಶ್ರೀರಾಮನನ್ನು ನಾವೆಲ್ಲರೂ ಕಣ್ಣುತುಂಬ ನೋಡುವೆವಲ್ಲವೆ! ॥೧೪—೧೫॥

ನಮ್ಮ ರಾಮನ ಗುಣವನ್ನು ಎಷ್ಟೆಂದು ಹೇಳಲಿ! ನಮ್ಮ ರಾಘವನು, ಮಹಾಧರ್ಮಿಷ್ಠನು; ಸತ್ಯಸಂಧನು; ಕೃಪಾಸಾಗರನು; ಧರ್ಮಾರ್ಥಕಾಮಗಳಿಂದ ಪರಿಪೂರ್ಣನಾಗಿರುವನು; ಮಿತಭಾಷಿಯಾಗಿರುವನು; ಸಮಸ್ತ ಜನರಿಗೂ ಪ್ರಿಯನಾಗಿರುವನು ॥೧೬॥

ಸೋದರೇಷು ಚ ಸರ್ವೇಷು ಜನನೀಷು ಸುಹೃತ್ಸು ಚ ।
ಬನ್ಧುಸಾಮನ್ತವರ್ಗೇಷು ದೃಶ್ಯತೇ ಪೂರ್ಣಚನ್ದ್ರವತ್ ॥೧೬॥
ತಚ್ಛ್ರುತ್ವಾ ವಚನಂ ತಸ್ಯಾಃ ಉತ್ಸೃಜ್ಯಾಭರಣಂ ಚ ತತ್ ।
ಉವಾಚೇದಂ ತತೋ ವಾಕ್ಯಂ ಕೋಪದುಃಖಸಮನ್ವಿತಾ ॥೧೪॥
ಹರ್ಷಂ ಕಿಮಿದಮಸ್ಥಾನೇ ಕೃತವತ್ಯಸಿ ಬಾಲಿಶೇ ।
ಶೋಕಸಾಗರಮಧ್ಯಸ್ಥಂ ನಾತ್ಮಾನಮವಬುಧ್ಯಸೇ ॥೧೫॥
ಕೋಚಾಮಿ ದುರ್ಮತಿತ್ವಂ ತೇ ಕಾ ಹಿ ಪ್ರಾಜ್ಞಾ ಪ್ರಹರ್ಷಯೇತ್ ।
ಅರೇಃ ಸಪತ್ನೀಪುತ್ರಸ್ಯ ವೃದ್ಧಿಂ ಮೃತ್ಯೋರಿವಾಗತಾಮ್ ॥೧೦॥
ಸಾಹಂ ತ್ವದರ್ಥೇ ಸಮ್ಪ್ರಾಪ್ತಾ ತ್ವಂ ತು ಮಾಂ ನಾವಬುಧ್ಯಸೇ ।
ಸಪತ್ನಿವೃದ್ಧೌ ಯಾ ಮೇ ತ್ವಂ ಪ್ರದೇಯಂ ದಾತುಮಿಚ್ಛಸಿ ॥೧೧॥
ಇತ್ಯುಕ್ತಾ ಕುಬ್ಜಯಾ ದೇವೀ ಭಾರತ್ಯಾ ಚ ಪ್ರಚೋದಿತಾ ।
ಅನ್ಯಥಾ ಭಾವವೂಪನ್ನಾ ಮನ್ಥರಾಮಿದಮಬ್ರವೀತ್ ॥೧೨॥

ಅವನು, ತನ್ನ ಸಮಸ್ತ ಸಹೋದರರಲ್ಲಿಯೂ, ತಾಯಿಯರಲ್ಲಿಯೂ, ಬಂಧುವರ್ಗಗಳಲ್ಲಿಯೂ, ಸಾಮಂತವರ್ಗಗಳಲ್ಲಿಯೂ ಪೂರ್ಣಚಂದ್ರನಂತೆ ಕಾಣಿಸಿಕೊಳ್ಳುತಿರುವನು. ಇಂತಹ ರಾಮನಿಗೆ ಪಟ್ಟಾಭಿಷೇಕವಾಗುವುದೆಂಬುದಕ್ಕಿಂತಲೂ, ಇನ್ನು ಪ್ರಿಯತರವಾದ ಮಾತು ಯಾವುದಿರುವುದು? (ಎಂದು ಕೈಕೇಯಿಯು ಹೇಳಿದಳು) ॥೧೩॥

ಹೀಗೆ ಹೇಳಿದ ಆ ಕೈಕೇಯಿಯ ಮಾತನ್ನು ಕೇಳಿ, ಆ ಮಂಥರೆಯು ಕೋಪದಿಂದಲೂ ದುಃಖದಿಂದಲೂ ಕೂಡಿದವಳಾಗಿ, ಕೈಕೇಯಿಯಿಂದ ತನಗೆ ಕೊಡಲ್ಪಟ್ಟಿದ್ದ ಆಭರಣಗಳನ್ನೆಲ್ಲ ಆಚೆಗೆಸೆದು, ಕೈಕೇಯಿಯೊಡನೆ ಈರೀತಿಯಾಗಿ ಹೇಳಿದಳು ॥೧೪॥

ಎಲೌ ಬಾಲಿಶೆ! ಇದೇನು ಹೀಗೆ ವ್ಯಸನಪಡಬೇಕಾದ ಸಂದರ್ಭದಲ್ಲಿ ಹರ್ಷಪಡುವೆ? ನೀನು ಶೋಕಸಾಗರಮಧ್ಯದಲ್ಲಿ ಮುಳುಗಿರುವುದನ್ನು ಅರಿಯದಿರುವೆಯಲ್ಲ! ॥೧೫॥

ನೀನು ಇಷ್ಟು ಬುದ್ಧಿಹೀನೆಯಾಗಿರುವುದನ್ನು ಕುರಿತು ನಾನು ಒಹಳವಾಗಿ ವ್ಯಥೆಪಡುವೆನು. ತನ್ನ ಸವತಿಯ ಮಗನಾಗಿ ವಸ್ತುತಃ ಶತ್ರುಭೂತನಾದವನಿಗೆ ವೃದ್ಧಿಯುಂಟಾದರೆ, ಅದು-ಮೃತ್ಯುವಿಗೆ ವೃದ್ಧಿಯುಂಟಾದಂತಲ್ಲವೆ! ಇಂತಹ ವೃದ್ಧಿಯನ್ನು ಕಂಡು, ಪ್ರಪಂಚದಲ್ಲಿ ಪ್ರಾಜ್ಞಳಾದವಳು ಯಾವಳು ತಾನೆ ಹರ್ಷಪಟ್ಟಾಳು? ॥೧೦॥

ನಾನು ನಿನ್ನ ಅಭ್ಯುದಯಕ್ಕಾಗಿ ಈಗ ಇಲ್ಲಿಗೆ ಬಂದಿರುವೆನು. ನೀನಾದರೋ, ನನ್ನ ಸ್ವರೂಪವನ್ನೇ ಅರಿಯದಿರುವೆ. ತನ್ನ ಸವತಿಗೆ ಅಭ್ಯುದಯವುಂಟಾಗುವುದನ್ನು ಕೇಳಿ, ನೀನು ನನಗೆ ಒಹುಮಾನವನ್ನು ಕೊಡುವುದಕ್ಕೆ ಬರುವೆಯಲ್ಲ! ಇದೆಂತಹ ತಿಳಿಗೇಡಿತನವು! (ಎಂದು ಮಂಥರೆಯು ಹೇಳಿದಳು ॥೫೧॥

ಈರೀತಿಯಾಗಿ ಮಂಥರೆಯಿಂದ ಹೇಳಲ್ಪಟ್ಟ ಕೈಕೇಯಿಯು, ಸರಸ್ವತಿಯಿಂದಲೂ ಪ್ರೇರಿಸಲ್ಪಟ್ಟವಳಾಗಿ, ಬೇರೆಯಾದ ಭಾವನನ್ನು ಹೊಂದಿಬಿಟ್ಟು, ಮಂಥರೆಯನ್ನು ಕುರಿತು ಹೀಗೆ ಹೇಳಿದಳು ॥೨೨॥

ಕುಬ್ಜೇ ತ್ವಾಂ ನ ವಿಜಾನಾಮಿ ಶ್ರೇಷ್ಠಾಂ ಶ್ರೇಷ್ಠಾಭಿಧಾಯಿನೀಮ್ ।
ತ್ವಮೇವ ತು ಮಮಾರ್ಥೇಷು ನಿತ್ಯಯುಕ್ತಾ ಹಿತೈಷಿಣೀ ॥೨೩॥
ನಾಹಂ ಸಮವಬುಧ್ಯೇಯಂ ಕುಬ್ಜೇ ರಾಜ್ಞಾಶ್ಚಿಕೀರ್ಷಿತಮ್ ।
ಅಸ್ಮನ್ನರ್ಥೇ ಸಾಧನಂ ತೇ ಮನ್ಥರೇ ವಕ್ಷ್ಯೇ ತಚ್ಛೃಣು ॥೨೪॥
ವರದ್ವಯಂ ದಶರಥಾತ್ ಪ್ರಾಪ್ತಂ ದೇವಾಸುರೇ ರಣೇ ।
ಯುದ್ಧಕಾಲೇ ಶರೈರ್ಭಗ್ನೇ ರಥಕೀಲೇ ಮಹೀಪತೇಃ ।
ಕನಿಷ್ಠಿಕಾಪ್ರದಾನೇನ ಯಥಾರಥಮುಕಾರಿಷಮ್ ॥೨೫॥
ಪ್ರಸನ್ನೋ ಮೇ ದಶರಥೋ ವರದ್ವಯಮದಾತ್ ಪ್ರಭುಃ ॥೨೬॥
ಮಮಾಭಿಲಷಿತೇ ಕಾಲೇ ದೇಯಮೇತದ್ವರದ್ವಯಮ್ ।
ತಾವತ್ ತಿಷ್ಠತು ಮೇ ಭರ್ತಾ ಕೋಶಗೇಹೇ ವರದ್ವಯಮ್ ॥೨೭॥
ಇತಿ ಮೇ ಪ್ರಾರ್ಥಿತೋ ಭರ್ತಾ ತೇನಾಪ್ಯಙ್ಗೀಕೃತಂ ತಥಾ ।
ತತ್ ಸಾಧನದ್ವಯಂ ಮೇಸ್ತು ಸಿದ್ಧಮೇತತ್ಪ್ರಯೋಜನಮ್ ॥೨೮॥

ಎಲೌ ಮಂಥರೆ! ನೀನು ಇಷ್ಟು ಶ್ರೇಷ್ಠಳೆಂದೂ, ಇಷ್ಟು ಉತ್ತಮವಾದ ಮಾತನ್ನು ಹೇಳತಕ್ಕವಳೆಂದೂ ನಾನು ತಿಳಿದಿರಲಿಲ್ಲ. ನೀನೊಬ್ಬಳೇ–ನನಗೆ ಹಿತವನ್ನು ಬಯಸುತ–ನನ್ನ ಕಾರ್ಯಗಳಲ್ಲಿ ನಿತ್ಯವೂ ಆಸಕ್ತಳಾಗಿರುವೆಯೆಂಬುದು ಈಗ ಗೊತ್ತಾಯ್ತು ॥೨೩॥

ಎಲೌ ಕುಬ್ಜೆ! ನಮ್ಮ ದೊರೆಯು ಮಾಡಬೇಕೆಂದಿದ್ದ ಕೆಲಸವನ್ನು ನಾನು ಇದುವರೆಗೂ ತಿಳಿದಿರಲಿಲ್ಲ. ಎಲೌ ಮಂಥರೆ! ಈ ವಿಷಯದಲ್ಲಿ ನನಗಿರುವ ಸಾಧನಸಂಪತ್ತಿಯನ್ನು ನಿನಗೆ ಹೇಳುವೆನು; ಅದನ್ನು ಕೇಳು ॥೨೪॥

ಪೂರ್ವದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಯುದ್ಧ ನಡೆಯುತಿರುವಾಗ, ದಶರಥನಿಂದ ನನಗೆ ಎರಡುವರಗಳು ಬಂದಿರುವುವು. ಅದು ಹೇಗೆಂದರೆ,—ಯುದ್ಧಕಾಲದಲ್ಲಿ, ನಮ್ಮ ದಶರಥ ರಾಜನ ರಥದ ಗುಂಬವು ಶರಗಳಿಂದ ಭಗ್ನವಾಗಲಾಗಿ, ಆ ಸ್ಥಳಕ್ಕೆ ನನ್ನ ಕಿರುಬೆರಳನ್ನು ಕೊಟ್ಟುಕೊಂಡು, ಅವನು ರಥದಲ್ಲಿದ್ದಂತೆಯೇ ಇರುವಂತೆ ಮಾಡಿದೆನು. ಆಗ, ನನ್ನಲ್ಲಿ ಅನುಗ್ರಹಯುಕ್ತನಾಗಿ, ಪ್ರಭುವಾದ ದಶರಥನು ನನಗೆ ಎರಡು ವರಗಳನ್ನು ಕೊಟ್ಟನು ॥೨೫-೨೬॥

ಆಗ 'ಸ್ವಾಮಿ! ನನಗೆ ಇಷ್ಟವಾದ ಸಮಯದಲ್ಲಿ ಈ ಎರಡುವರಗಳೂ ಕೊಡಲ್ಪಡಬೇಕು. ಅದುವರೆಗೆ, ಇವೆರಡೂ ನನ್ನದಾಗಿ ತಮ್ಮ ಹೃದಯವೆಂಬ ಕೋಶಗೃಹದಲ್ಲಿ ಇರಲಿ' ಎಂದು ನನ್ನಿಂದ ದಶರಥರಾಜನು ಪ್ರಾರ್ಥಿಸಲ್ಪಟ್ಟನು. ಅವನೂ ಅದನ್ನು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ನನಗೆ ಆ ಎರಡು ಸಾಧನಗಳಿರುವುವು; ಅವುಗಳಿಗೆ ಈಗ ಪ್ರಯೋಜನವು ಸಿದ್ಧವಾಯ್ತು. ಅವುಗಳ ದ್ವಾರಾ ನನ್ನ ಇಷ್ಟಾರ್ಥವನ್ನು ಈಗ ನಾನು ನೆರವೇರಿಸಿಕೊಳ್ಳುವೆನು. (ಎಂದು ಕೈಕೇಯಿಯು ಹೇಳಿದಳು) ॥೨೭—೨೮॥

ಇತ್ಯುಕ್ತ್ವಾ ಕೋಪಭವನಂ ಪ್ರವಿಶ್ಯ ಸಹಸಾ ರುಷಾ ।
ವಿಮುಚ್ಯ ಸರ್ವಾಭರಣಾಂ ಪರಿಕೀರ್ಯ ಸಮಸ್ತತಃ ।
ಭೂಮೌ ಶಯಾನಾ ತತ್ರಾಭೂತ್ ಮಲಿನಾಮ್ಬರಧಾರಿಣೀ ॥೯॥
ಆಜ್ಞಾಪ್ಯ ತು ಮಹಾರಾಜೋ ರಾಘವಸ್ಯಾಭಿಷೇಚನಮ್ ।
ಸ ಕೈಕೇಯ್ಯಾಗೃಹಶ್ರೇಷ್ಠಂ ಪ್ರವಿವೇಶ ಮಹಾಯಶಾಃ ॥೨೦॥
ತತ್ ಪ್ರವಿಶ್ಯ ಮಹಾರಾಜಃ ಸ್ವಮನ್ತಃಪುರಮೃದ್ಧಿಮತ್ ।
ನ ದದರ್ಶ ಪ್ರಿಯಾಂ ಭಾರ್ಯಾಂ ಕೈಕೇಯೀಂ ಶಯನೋತ್ತಮೇ ॥೨೧॥
ತತೋ ಗೃಹಗತೋ ರಾಜಾ ಕೈಕೇಯೀಂ ಪರ್ಯಪೃಚ್ಛತ ।
ಪ್ರತಿಹಾರೀ ತ್ವಥೋವಾಚ ಸಂತ್ರಸ್ತಾ ಚ ಕೃತಾಞ್ಜಲಿಃ ।
ದೇವ ದೇವೀ ಭೃಶಂ ಕ್ರುದ್ಧಾ ಕೋಪಾಗಾರಮುಪಿದ್ರುತಾ ॥೨೩॥
ಇತ್ಯುಕ್ತ್ವಾ ಭಯಸಂತ್ರಸ್ತೋ ರಾಜಾ ತಸ್ಯಾಃ ಸಮಾಪಗಃ ।
ಉಪವಿಶ್ಯ ಕನೈರ್ದೇಹಂ ವಿಮೃಶ್ಯ ಪಾಣಿನಾಬ್ರವೀತ್ ॥೨೨॥
ಕಿಂ ಶೇಷೇ ವಸುಧಾಪೃಷ್ಠೇ ಪರ್ಯಙ್ಕಾದಿ ವಿಹಾಯ ಚ ।
ಅಲಙ್ಕಾರಂ ಪರಿತ್ಯಜ್ಯ ಭೂಮೌ ಮಲಿನವಾಸಸಾ ॥೨೪॥
ಕಿಮರ್ಥಂ ಬ್ರೂಹಿ ಸಕಲಂ ವಿಧಾಸ್ಯೇ ತವ ವಾಞ್ಛಿತಮ್ ॥೨೫॥

ಹೀಗೆಂದು ಹೇಳಿಬಿಟ್ಟು, ಆ ಕೈಕೇಯಿಯು, ಆ ಕ್ಷಣವೇ ಕೋಪದಿಂದ ಕೋಪಾಗಾರವನ್ನು ಪ್ರವೇಶಿಸಿ, ಸಮಸ್ತವಾದ ಆಭರಣವನ್ನೂ ತೆಗೆದು ಸುತ್ತಲೂ ಎಸೆದುಬಿಟ್ಟು, ಮಲಿನವಾದ ಬಟ್ಟೆಯನ್ನುಟ್ಟುಕೊಂಡು, ಆ ಕೋಪಾಗಾರದಲ್ಲಿ ನೆಲದ ಮೇಲೆ ಮಲಗಿಕೊಂಡವಳಾದಳು ॥೯॥

ಹೀಗಿರುವಾಗ, ಮಹಾಯಶಸ್ವಿಯಾದ ದಶರಥ ಮಹಾರಾಜನು, ಶ್ರೀರಾಮನ ಪಟ್ಟಾಭಿಷೇಕವನ್ನು ಆಜ್ಞಾಪಿಸಿ, ತನ್ನ ಪ್ರಿಯೆಯಾದ ಕೈಕೇಯಿಯ ಅರಮನೆಗೆ ಬಂದನು ॥೨೦॥

ಆಗ ಆ ದಶರಥನು, ಸಕಲಸಂಪತ್ಸಂಪೂರ್ಣವಾದ ಅರಮನೆಯೊಳಕ್ಕೆ ಪ್ರವೇಶಿಸಿ, ಅಲ್ಲಿ ಹಾಸಿಗೆಯಮೇಲೆ ತನ್ನ ಪ್ರಿಯಪತ್ನಿಯನ್ನು ಕಾಣಲಿಲ್ಲ ॥೨೧॥

ಆ ಬಳಿಕ, ಹೊರಗಿನ ಮನೆಗೆ ಬಂದು, ಕೈಕೇಯಿಯೆಲ್ಲಿಂದು ಪ್ರಶ್ನೆ ಮಾಡಿದನು. ಆಗ, ಪ್ರತೀಹಾರಿಯು, ಭಯಪಟ್ಟು ಕೈಮುಗಿದುಕೊಂಡು 'ದೇವ! ದೇವಿಯರು ಅತಿಯಾಗಿ ಕೋಪಿಸಿಕೊಂಡು ಕೋಪಾಗಾರಕ್ಕೆ ಹೋದರು' ಎಂದು ಹೇಳಿದಳು ॥೨೩॥

ಇದನ್ನು ಕೇಳಿ ಭಯಗ್ರಸ್ತನಾದ ದಶರಥಮಹಾರಾಜನು, ಆ ಕೈಕೇಯಿಯ ಹತ್ತಿರಕ್ಕೆ ಹೋಗಿ ಕುಳಿತುಕೊಂಡು, ಮೆಲ್ಲಗೆ ಕೈಯಿಂದ ಅವಳ ದೇಹವನ್ನು ತಡವರಿಸುತ–'ಹೇ ಪ್ರಿಯೇ! ಇದೇನು ಹೀಗೆ ಮಂಚ ಮುಂತಾದುದನ್ನೆಲ್ಲ ಬಿಟ್ಟುಬಿಟ್ಟು ಭೂಮಿಯಮೇಲೆ ಮಲಗಿರುವೆ? ಅಲಂಕಾರವನ್ನೆಲ್ಲ ಪರಿತ್ಯಜಿಸಿ ಮಲಿನವಸ್ತ್ರವನ್ನುಟ್ಟು ಭೂಮಿಯ ಮೇಲೆ ಹೀಗೆ ಮಲಗಲು ಕಾರಣವೇನು?—ಅದನ್ನು ಹೇಳು. ನಿನ್ನ ಇಷ್ಟಾರ್ಥವನ್ನೆಲ್ಲ ನಾನು ಸೆರವೇರಿಸಿಕೊಡುವೆನು' ಎಂದು ಹೇಳಿದನು ॥೨೨—೨೫॥

ತೇನ ವಾಕ್ಯೇನ ಸಂಹೃಷ್ಟಾ ತಮುಭಿಪ್ರಾಯಮಾತ್ಮನಃ ।
ವ್ಯಾಜಹಾರ ಮಹಾಘೋರಂ ಅಭ್ಯಾಗತಮಿವಾನ್ತಕಮ್ ॥೩೬॥
ಸ್ಮರ ರಾಜ್ಞ ಪುರಾವೃತ್ತಂ ತಸ್ಮಿನ್ ದೇವಾಸುರೇ ರಣೇ ।
ಯೌ ದ್ವೌ ವರೌ ಪುರಾ ದತ್ತೌ ತೌ ಪ್ರಯಚ್ಛಾದ್ಯ ಪಾರ್ಥಿವ ॥೩೭॥
ತಯೋರೇಕೇನ ಭರತಃ ಸುತೋ ಮೇ ಶ್ವೋಭಿಷಿಚ್ಯತಾಮ್ ।
ರಾಮಶ್ಚ ತುರ್ದಶ ಸಮಾಃ ಸ್ಯಾದ್ದ್ವಿತೀಯೇನ ತಾಪಸಃ ॥೩೮॥
ತತಃ ಶ್ರುತ್ವಾ ಮಹಾರಾಜಃ ಕೈಕೆಯ್ಯಾದಾರುಣಂ ವಚಃ ।
ಜೀನಾತಮಿವ ಸಂವೇದೇ ಮುಹೂರ್ತಂ ಪ್ರತತಾಪ ಚ ॥೩೯॥
ವಿಹ್ವಲಾಭ್ಯಾಂ ಚ ನೇತ್ರಾಭ್ಯಾಂ ಅಪಶ್ಯನ್ನಿವ ಭೂಮಿಪಃ ।
ಸಾನ್ತ್ವಯಿತ್ವಾ ಬಹುವಿಧಂ ಧಿಕ್ಕೃತ್ಯ ಚ ಮುಹುರ್ಮುಹುಃ ॥೪೦॥
ತಥಾಪ್ಯತ್ಯಕ್ತಸಙ್ಕಲ್ಪಾಂ ಮೋಹಿತಾಂ ದೇವಮಾಯಯಾ ।
ಕೃಚ್ಛ್ರಾದ್ಧೈರ್ಯಾಣಿ ಸಂಸ್ತಭ್ಯ ಕೈಕೇಯೀಮಿದಮಬ್ರವೀತ್ ॥೪೧॥
ಯಸ್ತೇ ಮನ್ತ್ರಕೃತಃ ಪಾಣಿಃ ಅಗ್ನೌ ಪಾಪೇ ಮಯಾಧೃತಃ ।
ತಂ ತ್ಯಜಾಮಿ ಸ್ವಜಂ ಚಾಪಿ ತವ ಪುತ್ರಂ ತ್ವಯಾ ಸಹ ॥೪೨॥

ಹೀಗೆ ಹೇಳುತಿರುವ ದಶರಥನ ಮಾತಿನಿಂದ ಹರ್ಷಪಟ್ಟ ಆ ಕೈಕೇಯಿಯು, ತನ್ನ ಹೃದಯದಲ್ಲಿದ್ದ ಮಹಾಘೋರವಾದ ಅಭಿಪ್ರಾಯವನ್ನು ಹೇಳಿಬಿಟ್ಟಳು. ಅದು, ದಶರಥನಿಗೆ ಸಾಕ್ಷಾತ್ ಯಮನೇ ಪ್ರತ್ಯಕ್ಷವಾಗಿ ಬಂದಿರುವಂತೆ ವ್ಯಥಾಕರವಾಗಿದ್ದಿತು ॥೩೬॥

ಅವಳು ಹೇಳಿದುದೇನೆಂದರೆ,—ಹೇ ರಾಜನ್! ಪೂರ್ವದಲ್ಲಿ ನಡೆದ ವೃತ್ತಾಂತವನ್ನು ನೀನು ಈಗ ಸ್ಮರಿಸಿಕೋ. ಹೇ ಪಾರ್ಥಿವ! ಆ ದೇವಾಸುರಯುದ್ಧದಲ್ಲಿ ನೀನು ನನಗೆ ಯಾವ ಎರಡು ವರಗಳನ್ನು ಕೊಟ್ಟಿದ್ದೆಯೋ, ಅವುಗಳನ್ನು ಈಗ ನನಗೆ ಕೊಡುವನಾಗು ॥೩೭॥

ಅವೆರಡರಲ್ಲಿ—ಒಂದು ವರದಿಂದ, ನನ್ನ ಮಗನಾದ ಭರತನು ನಾಳೆಯೇ ಪಟ್ಟಾಭಿಷೇಕ ಮಾಡಲ್ಪಡಬೇಕು; ಮತ್ತೊಂದರಿಂದ, ರಾಮನು ಹದಿನಾಲ್ಕು ವರ್ಷ ತಪಸ್ವಿಯಾಗಿ ಅರಣ್ಯದಲ್ಲಿರಬೇಕು. ಇದೇ ನನ್ನ ಪ್ರಾರ್ಥನೆಯು. (ಎಂದು ಹೇಳಿದಳು) ॥೩೮॥

ಅನಂತರ, ದಶರಥಮಹಾರಾಜನು, ಕೈಕೇಯಿಯು ಅತಿಕ್ರೂರವಾದ ಆ ಮಾತನ್ನು ಕೇಳಿ ದೊಡ್ಡ ಯೋಚನೆಗೆ ಒಳಗಾದನು; ಒಂದು ಮುಹೂರ್ತಕಾಲ ಬಹಳ ಸಂತಾಪವನ್ನೂ ಅನುಭವಿಸಿದನು ॥೩೯॥

ಕೇವಲ ಕಳವಳಪಡುತಿರುವ ಕಣ್ಣುಗಳಿಂದ ಯಾವುದನ್ನೂ ನೋಡದೆಯೇ ಇರುವನಂತೆ, ಅವಳನ್ನು ನಾನಾವಿಧವಾಗಿ ಸಮಾಧಾನಪಡಿಸಿ, ಮತ್ತೆಮತ್ತೆ ಧಿಕ್ಕಾರವನ್ನೂ ಮಾಡಿದನಾದನು ॥೪೦॥

ಇಷ್ಟಾದರೂ ದೇವಮಾಯೆಯಿಂದ ಮೋಹಿತಳಾಗಿ ತನ್ನ ಸಂಕಲ್ಪವನ್ನು ಬಿಡದಿರುವ ಕೈಕೇಯಿಯನ್ನು ನೋಡಿ, ಅತಿ ಬಲಾತ್ಕಾರದಿಂದ ಧೈರ್ಯವನ್ನವಲಂಬಿಸಿ, ಮತ್ತೆ ಹೀಗೆ ಹೇಳಿದನು ॥೪೧॥

ಎಲೌ ಪಾಪಾತ್ಮಳೆ! ಅಗ್ನಿಸಾಕ್ಷಿಯಾಗಿ ಮಂತ್ರಪೂರ್ವಕನಾಗಿ ನಿನ್ನಿಂದ ನಿನ್ನೆ ಯಾವ ಪಾಣಿಯು ಗೃಹಿಸಲ್ಪಟ್ಟತೋ, ಅದನ್ನೂ ನನ್ನ ಔರಸನಾಗಿ ನಿನ್ನಲ್ಲಿ ಹುಟ್ಟಿದ ಮಗನನ್ನೂ ಕೂಡ, ನಿನ್ನೊಡನೆಯೇ ಈಗ ಬಿಟ್ಟುಬಿಡುವೆನು ॥೪೨॥

ರಾಮಃ ಕಾರಯಿತವ್ಯೋ ಮೇ ಮೃತಸ್ಯ ಸಲಿಲಕ್ರಿಯಾಮ್ ।
ತ್ವಯಾ ಸಪುತ್ರಯಾ ನೈವ ಕರ್ತವ್ಯಾ ಸಲಿಲಕ್ರಿಯಾ ॥೪೩॥

ಇತಿ ಕಪ್ತ್ವಾ ಮಹಾರಾಜಃ ಕೈಕೇಯೀಂ ಭೃಶದಾರುಣಾಮ್ ।
ಧರ್ಮಪಾಶೇನ ಬದ್ಧಃ ಸ್ತಂ ನೋತ್ತರಂ ಪ್ರತ್ಯಪದ್ಯತ ॥೪೪॥

ತತಃ ಪ್ರಭಾತಸಮಯೇ ಋಷಿಭಿಃ ಸಹಪಾರ್ಥಿವೈಃ ।
ಸುಮನ್ತ್ರಃ ಶನಕೈಃ ಪ್ರಾಯಾತ್ ಯತ್ರ ರಾಜಾವತಿಷ್ಠತೇ ॥೪೫॥

ತದಾ ಸುಮನ್ತ್ರಂ ಮನ್ತ್ರಜ್ಞಾ ಕೈಕೇಯೀ ಪ್ರತ್ಯುವಾಚ ಹ ।
ಸುಮನ್ತ್ರ ರಾಜಾ ರಜನೀಂ ರಾಮಹರ್ಷಸಮುತ್ಸುಕಃ ।
ಪ್ರಜಾಗರಪರಿಶ್ರಾನ್ತಃ ಸಿದ್ರಾಯಾವಶಮೇಯಿವಾನ್ ॥೪೬॥

ತದ್ಗಚ್ಛ ತ್ವರಿತಂ ಸೂತ ರಾಜಪುತ್ರಂ ಯಶಸ್ವಿನಮ್ ।
ರಾಮಮಾನಯ ಭದ್ರಂ ತೇ ನಾತ್ರ ಕಾರ್ಯಾ ವಿಚಾರಣಾ ॥೪೭॥

ಇತ್ಯುಕ್ತಸ್ತ್ವರಿತಂ ಗತ್ವಾ ಸುಮನ್ತ್ರೋ ರಾಮಮನ್ದಿರಮ್ ।
ಅವಾರಿತಃ ಪ್ರವಿಷ್ಟಃ ಸ್ತಂ ತತ್ರ ರಾಮಂ ದದರ್ಶ ಸಃ ।
ವವನ್ದೇ ವರದಂ ವನ್ದ್ಯೋ ವಿನಯಜ್ಞೋ ವಿನೀತವತ್ ॥೪೮॥

ನಾನು ಸತ್ತ ಬಳಿಕ, ನಮ್ಮ ರಾಮನಿಂದಲೇ ನನಗೆ ಉತ್ತರಕ್ರಿಯೆಯನ್ನು ಮಾಡಿಸಬೇಕಲ್ಲದೆ, ನೀನೂ ನಿನ್ನ ಮಗನೂ ಸುತರಾಂ ಮಾಡಲೇಕೂಡದು ॥೪೩॥

ಹೀಗೆಂದು ದುರಾತ್ಮಳಾದ ಕೈಕೇಯಿಯನ್ನು ಶಪಿಸಿ, ಮಹಾರಾಜ ದಶರಥನು, ಧರ್ಮಪಾಶದಿಂದ ಬದ್ಧನಾದವನಾಗಿ, ಯಾವುದೊಂದುತ್ತರವನ್ನೂ ಹೇಳಲಾರದವನಾಗಿದ್ದನು ॥೪೪॥

ಅನಂತರ, ಪ್ರಾತಃಕಾಲದಲ್ಲಿ, ಋಷಿಗಳೊಡನೆಯೂ ದೊರೆಗಳೊಡನೆಯೂ ಸುಮಂತ್ರನು ದಶರಥನಿದ್ದ ಕಡೆಗೆ ಬಂದನು ॥೪೫॥

ಆಗ, ಮಂತ್ರ(ಆಲೋಚನೆ)ಜ್ಞಳಾದ ಕೈಕೇಯಿಯು, ಸುಮಂತ್ರನನ್ನು ಕುರಿತು 'ಸುಮಂತ್ರ! ರಾತ್ರಿಯೆಲ್ಲಾ ರಾಮನ ಪಟ್ಟಾಭಿಷೇಕೋತ್ಸವದ ಹರ್ಷದಿಂದ ಉತ್ಕಂಠಿತನಾಗಿ ಜಾಗರಣೆಯಿಂದ ಆಯಾಸಪಟ್ಟ ನಮ್ಮ ಮಹಾರಾಜನು, ಈಗತಾನೆ ನಿದ್ರೆಯನ್ನು ಅನುಭವಿಸುತ್ತಿರುವನು. ಅದುಕಾರಣ, ಹೇ ಸೂತ! ನೀನು ಬೇಗನೆ ಹೋಗು; ಮಹಾಯಶಸ್ವಿಯಾದ ನಮ್ಮ ರಾಮನನ್ನು ಇಲ್ಲಿಗೆ ಕರೆದುಕೊಂಡು ಬಾ. ಈ ವಿಷಯದಲ್ಲಿ ಸ್ವಲ್ಪವೂ ವಿಚಾರಮಾಡಕೂಡದು. ನಿನಗೆ ಮಂಗಳವಾಗಲಿ' ಎಂದು ಹೇಳಿದಳು ॥೪೬—೪೭॥

ಹೀಗೆಂದು ಹೇಳಲ್ಪಟ್ಟ ಆ ಸೂತನು, ತಟ್ಟನೆ ರಾಮನ ಅರಮನೆಗೆ ಹೋಗಿ, ತಡೆಯಿಲ್ಲದೆ ಒಳಕ್ಕೆ ಪ್ರವೇಶಿಸಿ, ಅಲ್ಲಿ ಆ ರಾಮನನ್ನು ಕಂಡವನಾದನು; ಬಳಿಕ, ವಿನಯಪ್ರಕ್ರಮವನ್ನು ಬಲ್ಲವನಾದ ಆ ಸುಮಂತ್ರನು, ಯಾಚಕರಿಗೆಲ್ಲ ಇಷ್ಟಾರ್ಥಪ್ರದನಾದ ಶ್ರೀರಾಮನನ್ನು ವಿನಯದಿಂದ ನಮಸ್ಕರಿಸಿದನು ॥೪೮॥

ಪ್ರಾಞ್ಜಲಿಸ್ತು ಸುಖಂ ಪೃಷ್ಟ್ವಾ ವಿಹಾರಶಯನಾಸನೇ ॥೪೯॥
ರಾಜಪುತ್ರಮುವಾಚೇದಂ ಸುಮನೋ ನಾಮ ರಾಜಸತ್ಕೃತಃ ।
ಕೌಸಲ್ಯಾ ಸುಷುವೇ ಪುತ್ರಂ ತ್ವಾಂ ದ್ರಷ್ಟುಮಿಚ್ಛತಿ ॥೫೦॥
ಮಹಿಷ್ಯಾ ಸಹ ಕೈಕೇಯ್ಯಾ ಗಮ್ಯತಾಂ ತತ್ರ ಮಾ ಚಿರಮ್ ॥೫೧॥
ಏವಮುಕ್ತಃ ಸುಸಂಹೃಷ್ಟೋ ನರಸಿಂಹೋ ಮಹಾದ್ಯುತಿಃ ।
ತತಃ ಸಮ್ಮಾನಯಾಮಾಸ ಸೀತಾಮಿದಮುವಾಚ ಹ ॥೫೨॥
ಅಹಂ ಶೀಘ್ರಮಿತೋ ಗತ್ವಾ ದ್ರಕ್ಷ್ಯಾಮಿ ಚ ಮಹೀಪತಿಮ್ ।
ಸಹ ತ್ವಂ ಪರಿವಾರೇಣ ಸುಖಮಾಸ್ವ ರಮಸ್ವ ಚ ॥೫೩॥
ಪತಿಸಮ್ಮಾನಿತಾ ಸೀತಾ ಭರ್ತಾರಮಸಿತೇಕ್ಷಣಾ ।
ಆದ್ವಾರಮನುವವ್ರಾಜ ಮಜ್ಜಿಳಾನ್ಯಭಿದಧ್ಯುಷೀ ॥೫೪॥

ಇತಿ ಶ್ರೀಮದಯೋಧ್ಯಾಕಾಣ್ಡೇ ರಾಮಾಭಿಷೇಕವಿಘ್ನಕಥನಂ

ನಾಮ ಷಷ್ಠಃ ಸರ್ಗಃ.

ಆ ಬಳಿಕ, ರಾಜಮಾನಿತನಾದ ಸುಮಂತ್ರನು, ಅಂಜಲಿಬಂಧವಾಡಿಕೊಂಡು, ವಿಹಾರ ಶಯನ ಆಸನಗಳಲ್ಲಿ ಕುಶಲಪ್ರಶ್ನೆಮಾಡಿ, ರಾಜಪುತ್ರನಾದ ರಾಮನನ್ನು ಕುರಿತು 'ಹೇ ರಾಮ ! ನಿನ್ನನ್ನು ಗರ್ಭದಲ್ಲಿ ಧರಿಸಿ ಪ್ರಸವಿಸಿದ ಕೌಸಲ್ಯೆಯು ಮಹಾಪುಣ್ಯಾತಳು. ಅವಳಿಗೆ ನಿನ್ನಂತಹ ಪುತ್ರನು ಉದಯಿಸಿದುದರಿಂದ ಪುತ್ರವತಿಯರಲ್ಲೆಲ್ಲ ಅವಳೇ ಶ್ಲಾಘ್ಯಳು. ಈಗ ಪ್ರಿಯಪತ್ನಿಯಾದ ಕೈಕೇಯಿಯೊಡನೆ ಕುಳಿತಿರುವ ದಶರಥಮಹಾರಾಜನು ನಿನ್ನನ್ನು ನೋಡಬೇಕೆಂದು ಇಚ್ಛಿಸುವನು. ಅಲ್ಲಿಗೆ ಹೊರಡು; ತಡವಾಡಬೇಡ' ಎಂದು ಹೇಳಿದನು ॥೪೯—೫೧॥

ಹೀಗೆ ಸುಮಂತ್ರನಿಂದ ಹೇಳಲ್ಪಟ್ಟವನಾಗಿ, ಮಹಾಪ್ರಕಾಶನಾಗಿಯೂ ಪುರುಷಶ್ರೇಷ್ಠನಾಗಿಯೂ ಇರುವ ಶ್ರೀರಾಮನು, ಆ ಸುಮಂತ್ರನನ್ನು ಸಮ್ಮಾನಿಸಿ, ಸೀತೆಯನ್ನು ಕುರಿತು 'ಎಲೌ ಸೀತೆ! ನಾನು ಬೇಗನೆ ಇಲ್ಲಿಂದ ಹೋಗಿ ಮಹಾರಾಜನನ್ನು ನೋಡುವೆನು. ನೀನು ಇಲ್ಲಿಯೇ ನಿನ್ನ ಪರಿವಾರದೊಡನೆ ಸುಖವಾಗಿ ಕುಳಿತುಕೊಂಡು ಆಟವಾಡುತಿರು' ಎಂದು ಹೇಳಿ, ಅಲ್ಲಿಂದ ಹೊರಟಿವನಾದನು ॥೫೨—೫೩॥

ಅನಂತರ, ನೀಲನೀರಜನಯನಳಾದ ಆ ಸೀತೆಯು, ತನ್ನ ಪತಿಯಿಂದ ಬಹುಮಾನಿಸಲ್ಪಟ್ಟವಳಾಗಿ, ಶ್ರೀರಾಮನಿಗೆ ಮಂಗಳವನ್ನು ಹಾರಯಿಸುತ, ತನ್ನ ಅಂತಃಪುರದ ಬಾಗಿಲವರೆಗೂ ಹಿಂಬಾಲಿಸಿ ಬಂದಳು ॥೫೪॥

ಇದು ಅಯೋಧ್ಯಾಕಾಂಡದಲ್ಲಿ ರಾಮಾಭಿಷೇಕ ವಿಘ್ನಕಥನವೆಂಬ

ಆರನೆಯ ಸರ್ಗವು.

ಅಥ ಶ್ರೀಮದಯೋಧ್ಯಾಕಾಣ್ಡೇ ಸಪ್ತಮಃ ಸರ್ಗಃ.

ಶ್ರೀಶಿವಉವಾಚ.

ಅಥ ಸೀತಾಮನುಪ್ರಾಪ್ಯ ಕೃತಕೌತುಕಮಙ್ಗಳಃ ।
ನಿಷ್ಕ್ರಾಮ ಸುಮನೈ್ರಣ ಸಹ ರಾಮೋ ನಿವೇಶನಾತ್ ॥೧॥
ಪರ್ವತಾದಿವ ನಿಷ್ಕ್ರಮ್ಯ ಸಿಂಹೋ ಗಿರಿಗುಹಾಶಯಃ ।
ಲಕ್ಷ್ಮಣಂ ದ್ವಾರಿ ಸೋಪಶ್ಯತ್ ಪ್ರಹ್ವಾಞ್ಜಲಿಪುಟಂ ಸ್ಥಿತಮ್ ॥೨॥
ಅಥ ಮಧ್ಯಮಕಕ್ಷ್ಯಾಯಾಂ ಸಮಾಗಚ್ಛತ್ ಸುಹೃಜ್ಜನೈಃ ।
ಸ ಸರ್ವಾನರ್ಥಿನೋ ದೃಷ್ಟ್ವಾ ಸಮೇತ್ಯ ಪ್ರತಿನನ್ದ್ಯ ಚ ॥೩॥
ತತಃ ಪಾವಕಸಙ್ಕಾಶಂ ಆರುರೋಹ ರಘೂತ್ತಮಃ ।
ವೈಯಾಘ್ರಂ ಪುರುಷವ್ಯಾಘ್ರೋ ರಾಜನ್ತಂ ರಾಜನನ್ದನಃ ॥೪॥
ಮೇಘನಾದಮಸಮ್ಬಾಧಂ ಮಣಿಹೇಮವಿಭೂಷಿತಮ್ ।
ಮುಷ್ಣನ್ತಮಿವ ಚಕ್ಷೂಂಷಿ ಪ್ರಭಯಾ ಹೇಮವರ್ಚಸಮ್ ॥೫॥

ಅಯೋಧ್ಯಾಕಾಂಡದಲ್ಲಿ ಏಳನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಆ ಬಳಿಕ, ಶ್ರೀರಾಮನು, ಪುನಃ ಸೀತೆಯ ಸವಿಾಪಕ್ಕೆ ಬಂದು, ಆವಳಿಂದ ಮಂಗಳಾಶಾಸನೆಮಾಡಲ್ಪಟ್ಟವನಾಗಿ, ಸುಮಂತ್ರನೊಡನೆ ತನ್ನ ಅರಮನೆಯಿಂದ ಹೊರಕ್ಕೆ ಹೊರಟನು ॥೧॥

ಆ ಬಳಿಕ, ಪರ್ವತದ ಗುಹೆಯುಲ್ಲಿ ಮಲಗಿದ್ದ ಸಿಂಹವು ಪರ್ವತವನ್ನು ಬಿಟ್ಟು ಹೊರಕ್ಕೆ ಬಂದಂತೆ–ತನ್ನ ಮನೆಯನ್ನು ಬಿಟ್ಟು ಹೊರಕ್ಕೆ ಬಂದವನಾದ ಶ್ರೀರಾಮನು, ಬಾಗಿಲಿನಲ್ಲಿ ನಮ್ರನಾಗಿ ಅಂಜಲಿಬಂಧವಾಡಿಕೊಂಡು ನಿಂತಿದ್ದ ಲಕ್ಷ್ಮಣನನ್ನು ಕಂಡನು ॥೨॥

ಆನಂತರ, ಮಧ್ಯಮಕಕ್ಷ್ಯೆಯಲ್ಲಿ ನಿಂತಿದ್ದ ಸಮಸ್ತರಾದ ಯಾಚಕರನ್ನೂ ನೋಡಿ, ಅವರೆಲ್ಲರ ಹತ್ತಿರಕ್ಕೂ ಹೋಗಿ, ಅವರನ್ನೆಲ್ಲ ಸಂತೋಷಪಡಿಸಿ, ತನ್ನ ಸ್ನೇಹಿತರೊಡನೆ ಬೆರೆದು ಹೊರಟವನಾದನು ॥೩॥

ಆಮೇಲೆ, ಪುರುಷವ್ಯಾಘ್ರನಾದ ಆ ರಘೂತ್ತಮನು, ವ್ಯಾಘ್ರಚರ್ಮಾವೃತವಾಗಿ ವಿರಾಜಿಸುತ್ತಿರುವುದಾಗಿಯೂ, ಮೇಘದಂತೆ ಧ್ವನಿಯುಳ್ಳದಾಗಿಯೂ, ರತ್ನದಿಂದಲೂ ಸುವರ್ಣದಿಂದಲೂ ಅಲಂಕೃತವಾಗಿಯೂ, ಸುವರ್ಣದಂತೆ ಹೊಳೆಯುತ–ತನ್ನ ಕಾಂತಿಯಿಂದ ಜನರ ಕಣ್ಣನ್ನು ಅಪಹರಿಸುವುದೋ ಎಂಬಂತೆ ಪ್ರಕಾಶವಾನವಾಗಿಯೂ, ಅನೆಯ ಮರಿಗಳಂತೆ ಕಾಣಿಸುತ್ತಿರುವ ಉತ್ತಮಾಶ್ವಗಳಿಂದ ಯುಕ್ತವಾಗಿಯೂ ಇರುವ ದಿವ್ಯರಥವನ್ನು ಹತ್ತಿಕೊಂಡವನಾಗಿ, ದಿವ್ಯ

ಕರೇಣುಶಿಶುಕಲ್ಪೈಶ್ಚ ಯುಕ್ತಂ ಪರಮವಾಜಿಭಿಃ ।
ಹರಿಯುಕ್ತಂ ಸಹಸ್ರಾಕ್ಷೋ ರಥಮಿನ್ದ್ರಾಇವಾಶುಗಮ್ ।
ಪ್ರಯಯೌ ತೂರ್ಣಮಾಸ್ಥಾಯ ರಾಘವೋ ಜ್ವಲಿತಃ ಶ್ರಿಯಾ ॥೬॥
ಛತ್ರಚಾಮರಪಾಣಿಸ್ತು ಲಕ್ಷ್ಮಣೋ ರಾಘವಾನುಜಃ ।
ಜುಗೋಪ ಭ್ರಾತರಂ ಭ್ರಾತಾ ರಥಮಾಸ್ಥಾಯ ಪೃಷ್ಠತಃ ॥೭॥
ತತೋ ಹಲಹಲಾಶಬ್ದಃ ತುಮುಲಃ ಸಮಜಾಯತ ।
ತಸ್ಯ ನಿಷ್ಕ್ರಮಮಾಣಸ್ಯ ಜನೌಘಸ್ಯ ಸಮನ್ತತಃ ॥೮॥
ತತೋ ಹಯರಥಾಮುಖ್ಯಾಃ ನಾಗಾಶ್ಚ ಗಿರಿಸನ್ನಿಭಾಃ ।
ಅನುಜಗ್ಮುಸ್ತದಾ ರಾಮಂ ಶತಶೋಽಥ ಸಹಸ್ರಶಃ ॥೯॥
ಅಥ ತಸ್ಯಾಸ್ಯ ಸನ್ನದ್ಧಾಃ ಚನ್ದನಾಗರುಭೂಷಿತಾಃ ।
ಖಡ್ಗಚಾಪಧರಾಃ ಶೂರಾಃ ಜಗ್ಮುರಾಶಂಸವೋ ಜನಾಃ ॥೧೦॥
ತತೋ ವಾದಿತ್ರಶಬ್ದಾಶ್ಚ ಸ್ತುತಿಶಬ್ದಾಶ್ಚ ವನ್ದಿನಾಮ್ ।
ಸಿಂಹನಾದಾಶ್ಚ ಶೂರಾಣಾಂ ತಥಾ ಶುಶ್ರುವಿರೇ ಪಥಿ ॥೧೧॥
ಹರ್ಮ್ಯವಾತಾಯನಸ್ಥಾಭಿಃ ಭೂಷಿತಾಭಿಃ ಸಮನ್ತತಃ ।
ಕೀರ್ಯಮಾಣಃ ಸ ಪುಷ್ಪೌಘೈಃ ಯಯೌ ಸ್ತ್ರೀಭಿರರಿನ್ದಮಃ ॥೧೨॥

ತುರಗಯುಕ್ತವಾಗಿ ಮಹಾವೇಗಸಂಪನ್ನವಾದ ರಥವನ್ನು ಹತ್ತಿಕೊಂಡಿರುವ ಮಹೇಂದ್ರನಂತೆ ವಿರಾಜಿಸುತ, ಮಹಾಕಾಂತಿಸಂಪನ್ನನಾಗಿ ಹೊರಟನು ॥೪-೬॥

ಶ್ರೀರಾಮನ ಅನುಜನಾದ ಲಕ್ಷ್ಮಣನೂ ಕೂಡ, ಆ ರಥದ ಮೇಲೆಯೇ ಕುಳಿತುಕೊಂಡು, ಛತ್ರಚಾಮರಗಳನ್ನು ಕೈಯಲ್ಲಿ ಹಿಡಿದುಕೊಂಡು, ಶ್ರೀರಾಮನಿಗೆ ಅಂಗರಕ್ಷಕನಾಗಿ ಹಿಂಭಾಗದಲ್ಲಿ ಕುಳಿತು ಹೋಗುತಿದ್ದನು ॥೭॥

ಅನಂತರ, ಸುತ್ತಲೂ ಹೊರಟ ಆ ಜನಸಮೂಹದ ದೆಸೆಯಿಂದ, ಅತಿ ಸಂಕುಲವಾದ ಹಲಹಲಧ್ವನಿಯುದಯಿಸಿತು ॥೮॥

ಆ ಬಳಿಕ, ಮುಖ್ಯಮುಖ್ಯವಾದ-ಕುದುರೆಗಳೂ, ರಥಗಳೂ, ಪರ್ವತಾಕಾರಗಳಾದ ಆನೆಗಳೂ ಕೂಡ, ನೂರುಗಟ್ಟಲೆಯಾಗಿಯೂ ಸಾವಿರಗಟ್ಟಲೆಯಾಗಿಯೂ ರಾಮನನ್ನು ಹಿಂಬಾಲಿಸಿ ಹೊರಟುವು॥೯॥

ಆಮೇಲೆ, ಆ ರಾಮಚಂದ್ರನಿಗೆ ಮಂಗಳಾಶಾಸನೆಮಾಡುವ ವಂದಿವಾಗಧರೂ, ಚಂದನಾಗರುಭೂಷಿತರಾಗಿ ಸನ್ನದ್ಧರಾಗಿ ಖಡ್ಗಚಾಪಗಳನ್ನು ಧರಿಸಿರುವ ಶೂರರೂ ಕೂಡ, ಅವನನ್ನು ಹಿಂಬಾಲಿಸಿ ಹೊರಟರು ॥೧೦॥

ಅನಂತರ, ವಾದ್ಯಗಳ ಧ್ವನಿಗಳೂ, ಸ್ತುತಿವಾಚಕರ ಸ್ತೋತ್ರಶಬ್ದಗಳೂ, ಶೂರರ ಸಿಂಹನಾದಗಳೂ ಕೂಡ, ಆ ಮಾರ್ಗದಲ್ಲಿ ಬಹಳವಾಗಿ ಕೇಳಿಸುತಿದ್ದುವು ॥೧೧॥

ಹೀಗಿರುವಾಗ, ಅರಿಂದಮನಾದ ಆ ರಾಮಚಂದ್ರನು, ಸುತ್ತಲೂ ಉಪ್ಪರಿಗೆಯ ಮೇಲೆ ಕಿಟಕಿಗಳಲ್ಲಿ ಅಲಂಕಾರಮಾಡಿಕೊಂಡು ನಿಂತಿರುವ ಸ್ತ್ರೀಯರು ಎರಚಿದ ಹೂವುಗಳಿಂದ ವ್ಯಾಪ್ತನಾಗಿ ಮುಂಚಕ್ಕೆ ಹೊರಟನು ॥೧೨॥

ಸರ್ವಸೀಮನ್ತಿನೀಭ್ಯಶ್ಚ ಸೀತಾಂ ಸೀಮನ್ತಿನೀಂ ವರಾಮ್ ।
ಅಮನ್ಯನ್ತ ತದಾ ನಾರ್ಯಃ ರಾಮಸ್ಯ ಹೃದಯಪ್ರಿಯಾಮ್ ॥೧೩॥
ತಯಾ ಸುರಜಿತಂ ದೇವ್ಯಾ ಪುರಾ ನೂನಂ ಮಹತ್ ತಪಃ ।
ರೋಹಿಣೀವ ಶಶಾಙ್ಕೇನ ರಾಮಸಂಯೋಗಮಾಪ ಯಾ ॥೧೪॥
ಇತಿ ಪೌರಾಙ್ಗನಾವಾಚಃ ಶೃಣ್ವನ್ ರಾಮೋ ಯಯೌ ಮುದಾ ॥೧೫॥
ಸ ಘೋಷವದ್ಭಿಶ್ಚ ಹಯೈಶ್ಚ ನಾಗೈಃ ಪುರಸ್ಸರಸ್ತೈಕವಾಗಧೈಶ್ಚ ।
ಮಹೀಯಮಾನಃಪ್ರವರೈಶ್ಚ ವಾದಕೈಃಅಭಿಷ್ಟುತೋವೈಶ್ರವಣೋಯಥಾಯಯೌ
ಅಶೀರ್ವಾದಾನ್ ಬಹೂನ್ ಶೃಣ್ವನ್ ಸುಹೃದ್ಭಿಃ ಸಮುದೀರಿತಾನ್ ।
ಯಥಾರ್ಹಂ ಚಾಪಿ ಸಮ್ಪೂಜ್ಯ ಸರ್ವಾನೇವ ನರಾನ್ ಯಯೌ ॥೧೭॥
ಪಿತಾಮಹೈರಾಚರಿತಂ ತಥೈವ ಪ್ರಪಿತಾಮಹೈಃ ।
ಅದ್ಯೋಪಾದಾಯ ತಂ ಮಾರ್ಗಂ ಅಭಿಷಿಕ್ತೋನುಪಾಲಯ ॥೧೮॥
ಯಥಾಸ್ಯ ಲಾಲಿತಾಃ ಪಿತ್ರಾ ಯಥೈವ ಪ್ರಪಿತಾಮಹೈಃ ।
ತತಃ ಸುಖತರಂ ಸರ್ವೇ ರಾಮೇ ವತ್ಸ್ಯಾಮ ರಾಜನಿ ॥೧೯॥

ಆ ಸಮಯದಲ್ಲಿ, ಆ ಸಮಸ್ತ ಸ್ತ್ರೀಯರೂ, ಇಂತಹ ಮಹಾನುಭಾವನಾದ ಶ್ರೀರಾಮನಿಗೆ ಹೃದಯದಯಿತೆಯಾಗಿರುವುದರಿಂದ, ಈ ಲೋಕದಲ್ಲಿರುವ ಸಮಸ್ತ ಸ್ತ್ರೀಯರಿಗಿಂತಲೂ ಸೀತೆಯೇ ಸರ್ವೋತ್ತಮಳೆಂದು ತಿಳಿದುಕೊಂಡರು ॥೧೩॥

'ಚಂದ್ರನೊಡನೆ ರೋಹಿಣಿಯು ಸೇರಿದಂತೆ, ಈ ಸೀತೆಯು ರಾಮನೊಡನೆ ಸಂಯೋಗವನ್ನು ಹೊಂದಿರುವಳಲ್ಲ! ಇವಳು ಜನ್ಮಾಂತರದಲ್ಲಿ ಅತ್ಯಧಿಕವಾದ ತಪಸ್ಸನ್ನು ಚೆನ್ನಾಗಿ ಮಾಡಿರುವಳು.' ಎಂದು ಆ ಪೌರಸ್ತ್ರೀಯರು ಹೇಳಿಕೊಳ್ಳುತಿರುವ ಮಾತುಗಳನ್ನು ಕೇಳುತ, ಆ ರಾಮನು ಸಂತೋಷದಿಂದ ಮುಂದಕ್ಕೆ ತೆರಳಿದನು ॥೧೪-೧೫॥

ಆಗ ಆ ರಾಮನು, ಶಬ್ದಾಯಮಾನವಾದ ಗಜತುರಗಗಳಿಂದಲೂ, ಮುಂದುಗಡೆ ನಡೆಯುತಿರುವ ಸ್ತುತಿವಾಚಕರಾದ ಸ್ತುತಿವಾಚಕರಿಂದಲೂ ಉತ್ತಮರಾದ ವಾದ್ಯಗಾರರಿಂದಲೂ ಪೂಜಿಸಲ್ಪಡುತ, ಸಾಕ್ಷಾತ್ ಕುಬೇರನಂತೆ ಹೋಗುತಿದ್ದನು ॥೧೬॥

ಆ ಸಮಯದಲ್ಲಿ, ತನ್ನ ಮಿತ್ರರಿಂದ ಹೇಳಲ್ಪಡುತಿರುವ ಅನೇಕವಾದ ಆಶೀರ್ವಾದಗಳನ್ನು ಕೇಳುತ, ಅಲ್ಲಿದ್ದ ಸಮಸ್ತ ಜನರನ್ನೂ ಯಥಾಯೋಗ್ಯವಾಗಿ ಮರ್ಯಾದೆಮಾಡುತ, ಅಲ್ಲಿಂದ ಮುಂದಕ್ಕೆ ಹೊರಡುತಿದ್ದನು ॥೧೭॥

ಆಗ ಅಲ್ಲಿದ್ದ ಜನಗಳು ಹೇಳುತಿದ್ದುದೇನೆಂದರೆ,—ಹೇ ರಾಮ! ನಿನ್ನ ಪಿತಾಮಹರೂ ಪ್ರಪಿತಾಮಹರೂ ಯಾವ ಮಾರ್ಗದಲ್ಲಿ ನಡೆಯುತಿದ್ದರೋ, ಅಂತಹ ಮಾರ್ಗವನ್ನೇ ಅವಲಂಬಿಸಿ, ಪಟ್ಟಾಭಿಷಿಕ್ತನಾದ ನೀನು ನಮ್ಮಗಳನ್ನು ಕಾಪಾಡು ॥೧೮॥

ಇವನ ತಂದೆಯಿಂದ ನಾವು ಹೇಗೆ ಆದರಿಸಲ್ಪಟ್ಟಿವೋ, ಇವನ ಪಿತಾಮಹ ಪ್ರಪಿತಾಮಹರಿಂದ ಹೇಗೆ ಲಾಲಿಸಲ್ಪಟ್ಟಿವೋ, ಅದಕ್ಕಿಂತಲೂ ಅತ್ಯಧಿಕಸುಖವಾಗಿ—ರಾಮನು ರಾಜನಾಗಿರಲಿಗ—ನಾವಿರುವೆವು ॥೧೯॥

ಅಲಮದ್ಯ ಹಿ ಭುಕ್ತೇನ ಪರಮಾರ್ಥೈರಲಂ ಚ ನಃ ।
ಯಥಾ ಪಶ್ಯೇಮ ರಾಜಾನಂ ರಾಮಂ ರಾಜ್ಯೇ ಪ್ರತಿಷ್ಠಿತಮ್ ॥೨೦॥

ಅತೋ ಹಿ ನಃ ಪ್ರಿಯತರಂ ನಾನ್ಯತ್ ಕಿಞ್ಚಿದ್ಭವಿಷ್ಯತಿ ।
ಯಥಾಭಿಷೇಕೋ ರಾಮಸ್ಯ ರಾಜ್ಯೇನಾಮಿತತೇಜಸಃ ॥೨೧॥

ಏತಾಶ್ಚಾನ್ಯಾಶ್ಚ ಸುಹೃದಾಂ ಉದಾಸೀನಃ ಕಥಾಃ ಶುಭಾಃ ।
ಆತ್ಮಸಮ್ಪೂಜನೀಃ ಶೃಣ್ವನ್ ಯಯೌ ರಾಮೋ ಮಹಾಪಥಮ್ ॥೨೨॥

ನ ಹಿ ತಸ್ಮಾನ್ಮನಃ ಕಶ್ಚಿತ್ ಚಕ್ಷುಷೀ ವಾ ನರೋತ್ತಮಾತ್ ।
ನರಃ ಶಕ್ನೋತ್ಯಪಾಕ್ರಷ್ಟುಂ ಅತಿಕಾನ್ತೇಪಿ ರಾಘವೇ ॥೨೩॥

ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ ।
ನಿನ್ದಿತಃ ಸ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ ॥೨೪॥

ಸರ್ವೇಷಾಂ ಹಿ ಸ ಧರ್ಮಾತ್ಮಾ ವರ್ಣಾನಾಂ ಕುರುತೇ ದಯಾಮ್ ।
ಚತುರ್ಣಾಂ ಹಿ ವಯಸ್ಥಾನಾಂ ತೇನ ತೇ ತಮನುವ್ರತಾಃ ॥೨೫॥

ನಮಗೆ ಈಗ ಭೋಜನದಿಂದಲೂ ಪ್ರಯೋಜನವಿಲ್ಲ; ಇತರವಾದ ಉತ್ತಮ ವಸ್ತುಗಳೂ ಬೇಕಾಗಿಲ್ಲ. ರಾಜ್ಯದಲ್ಲಿ ಪ್ರತಿಷ್ಠಿತನಾಗಿ ದೊರೆತನಮಾಡುತಿರುವ ಶ್ರೀರಾಮನನ್ನು ನೋಡುವುದೊಂದೇ ನಮಗೆ ಸಾಕಾಗಿರುವುದು ॥೨೦॥

ಈ ಅಪರಿಮಿತತೇಜಶ್ಶಾಲಿಯಾದ ರಾಮನಿಗೆ ಪಟ್ಟಾಭಿಷೇಕವಾಗುವುದು ನಮಗೆ ಎಷ್ಟು ಪ್ರಿಯವೋ, ಇದಕ್ಕಿಂತ ಪ್ರಿಯವಾದುದು ಮತ್ತಾವುದೂ ನಮಗೆಂದಿಗೂ ಉಂಟಾಗುವುದಿಲ್ಲ (ಎಂದು ಆ ಜನರು ಹೇಳುತಿದ್ದರು) ॥೨೧॥

ಈ ಮಾತುಗಳನ್ನೂ, ಇದೇರೀತಿಯಲ್ಲಿ ತನ್ನನ್ನು ಬಹುಮಾನಪಡಿಸುವ ಇತರವಾದ ಸ್ನೇಹಿತರ ಮಾತುಗಳನ್ನೂ ಕೂಡ, ತಟಸ್ಥನಾಗಿ ಕೇಳುತಿರುವ ಆ ರಾಮನು, ಈ ಸ್ತುತಿವಚನಗಳಿಂದ ಸ್ವಲ್ಪವೂ ಉಬ್ಬದೆ, ರಾಜಮಾರ್ಗವನ್ನು ಸೇರಿದನು ॥೨೨॥

ಹೀಗಿರುವ ಸಮಯದಲ್ಲಿ, ರಾಮನು ಕಣ್ಣುಮರೆಯಾಗಿ ಹೊರಟುಹೋದರೂಕೂಡ, ಯಾವನೊಬ್ಬ ಮನುಷ್ಯನಾದರೂ, ಆ ಪುರುಷೋತ್ತಮನಾದ ರಾಮನ ದೆಸೆಯಿಂದ-ತನ್ನ ವಸ್ತ್ರನ್ನಾಗಲಿ ಕಣ್ಣುಗಳನ್ನಾಗಲಿ ಹಿಂದಿರುಗಿಸುವುದಕ್ಕೆ ಸಮರ್ಥನಾಗಲಿಲ್ಲ ॥೨೩॥

ಪ್ರಪಂಚದಲ್ಲಿ, ಯಾವನು ರಾಮನನ್ನು ನೋಡುವುದಿಲ್ಲವೋ, ರಾಮನ ದೃಷ್ಟಿಗೆ ಯಾವನು ಪಾತ್ರನಾಗುವುದಿಲ್ಲವೋ, ಅವನು ಈ ಲೋಕದಲ್ಲಿ ಕೇವಲ ನಿಂದಿತನಾಗಿ ವಾಸಮಾಡಿಕೊಂಡಿರುವನು; ಅವನನ್ನು ಅವನ ಅಂತರಾತ್ಮವೂ ನಿಂದಿಸುವುದು ॥೨೪॥

ಮಹಾತ್ಮನಾದ ಆ ರಾಮನು, ಬ್ರಾಹ್ಮಣಾದಿ ನಾಲ್ಕು ವರ್ಣಗಳಲ್ಲಿಯೂ, ಸಮಸ್ತ ಜನರಿಗೂ ಅವರವರ ವಯೋನುಗುಣವಾಗಿ ಅನುಗ್ರಹವನ್ನು ಮಾಡುತಿರುವನು. ಅದರಿಂದ, ಅವರೆಲ್ಲರೂ ಅವನನ್ನು ಇಷ್ಟ ಹಚ್ಚಾಗಿ ಪ್ರೀತಿಸುತ ಅನುಸರಿಸಿಕೊಂಡು ಬಂದರು ॥೨೫॥

ಚತುಷ್ಪಥಾ೯ ದೇವಪಥಾ೯ ಚೈತ್ಯಾನ್ಯಾಯತನಾನಿ ಚ ।
ಪ್ರದಕ್ಷಿಣಂ ಪರಿವಹ೯ ಜಗಾಮ ನೃಪತೇಃ ಸುತಃ ॥೬೬॥
ಸ ರಾಜಕುಲಮಾಸಾದ್ಯ ಮಹೇಂದ್ರಭವನೋಪಮಮ್ ।
ರಾಜಪುತ್ರಃ ಪಿತುರ್ವೇಶ್ಮ ಪ್ರವಿವೇಶ ಶ್ರಿಯಾ ಜ್ವಲನ್ ॥೬೭॥
ತತಃ ಪ್ರವಿಷ್ಟೇ ಪಿತುರಂತಿಕಂ ತದಾ ಜನಃ ಸ ಸರ್ವೋ ಮುದಿತೋನ್ಯಪಾತ್ಮಜೇ।
ಪ್ರತೀಕ್ಷತೇ ತಸ್ಯ ಪುನರ್ವಿನಿರ್ಗಮಂಯಥೋದಯಂ ಚಂದ್ರಮಸಃ ಸರಿತ್ಪತಿಃ॥
ಸ ಪಿತುಶ್ಚರಣೌ ಪೂರ್ವಂ ಅಭಿವಾದ್ಯ ವಿನೀತವತ್ ।
ತತೋ ವವಂದೇ ಚರಣೌ ಕೈಕೇಯ್ಯಾಃ ಸುಸಮಾಹಿತಃ ॥೬೯॥
ರಾಮಮಾಲಿಜ್ಯ ತಂ ರಾಜಾ ಸಮುತ್ಥಾಯ ಸಸಂಭ್ರಮಮ್ ।
ಬಾಹೂ ಪ್ರಸಾರ್ಯ ರಾಮೇತಿ ದುಃಖಾನ್ನಧ್ಯೇ ಪಪಾತ ಹ ॥೭೦॥
ರಾಮಃ ಪಪ್ರಚ್ಛ ಕಿಮಿದಂ ರಾಜ್ಞೋ ದುಃಖಸ್ಯ ಕಾರಣಮ್ ।
ಏವಂ ಪೃಚ್ಛತಿ ರಾಮೇಸ್ಮಿನ್ ಕೈಕೇಯೀ ರಾಮಮಬ್ರವೀತ್ ॥೭೧॥
ಯದ್ಯೇತದ್ವಕ್ಷ್ಯತೇ ರಾಜಾ ಶುಭಂ ವಾ ಯದಿ ವಾಽಶುಭಮ್ ।
ಕರಿಷ್ಯಸಿ ತತಃ ಸರ್ವಂ ಅಖ್ಯಾಸ್ಯಾಮಿ ಪುನಸ್ತ್ವಹಮ್ ॥೭೨॥

ಹೀಗೆ ಸರ್ವರೊಡನೆಯೂ ಹೊರಟ ಆ ರಾಜಪುತ್ರನು, ಮಾರ್ಗಮಧ್ಯದಲ್ಲಿ ಸಿಕ್ಕಿದ ಚತುಷ್ಪಥಗಳನ್ನೂ ದೇವಸ್ಥಾನಗಳನ್ನೂ ಚೈತ್ಯಸ್ಥಾನಗಳನ್ನೂ ಸಭಾಸ್ಥಾನಗಳನ್ನೂ ಪ್ರದಕ್ಷಿಣ ಮಾಡಿಕೊಂಡು ಹೋದನು ॥೬೬॥

ಅನಂತರ, ಆ ರಾಮನು, ಅಮರಾವತಿಗೆ ಸದೃಶವಾದ ಅರಮನೆಯನ್ನು ಸೇರಿ, ಕಾಂತಿ ವಿಶೇಷದಿಂದ ಪ್ರಜ್ವಲಿಸುತಿರುವ-ತನ್ನ ತಂದೆಯ ಮನೆಯನ್ನು ಪ್ರವೇಶಿಸಿದನು ॥೬೭॥

ಆ ಸಮಯದಲ್ಲಿ, ಶ್ರೀರಾಮನು ತನ್ನ ತಂದೆಯ ಸಮೀಪಕ್ಕೆ ಹೋಗಲಾಗಿ, ಆ ಸಮಸ್ತ ಜನರೂ, ಕೇವಲ ಸಂತೋಷದಿಂದ, ಸಮುದ್ರವು ಚಂದ್ರೋದಯವನ್ನು ನಿರೀಕ್ಷಿಸುವಂತೆ, ಆ ರಾಮನು ಹಿಂದಿರುಗಿ ಬರುವುದನ್ನು ನಿರೀಕ್ಷಿಸುತ, ಹೊರಗಡೆಯೇ ನಿಂತುಗೊಂಡಿದ್ದರು ॥೬೮॥

ಹೀಗೆ ತಂದೆಯ ಸಮೀಪವನ್ನು ಸೇರಿದ ಶ್ರೀರಾಮನು, ಕೇವಲ ವಿನಯಾನ್ವಿತನಾಗಿ ಮೊದಲು ತಂದೆಯ ಪಾದಗಳಿಗೆ ನಮಸ್ಕಾರಮಾಡಿ, ಅನಂತರ ಭಯಭಕ್ತಿಯುಕ್ತನಾಗಿ ಕೈಕೇಯಿಯು ಪಾದಗಳನ್ನು ನಮಸ್ಕರಿಸಿದನು ॥೬೯॥

ಆಗ ಆ ದಶರಥಮಹಾರಾಜನು, ಸಂಭ್ರಮದೊಡನೆ ಎದ್ದು, ರಾಮನನ್ನು ತಬ್ಬಿಗೊಂಡು, ತೋಳುಗಳನ್ನು ನೀಡಿಕೊಂಡು, ಒಂದಾವೃತ್ತಿ 'ರಾಮ' ಎಂದು ಉಚ್ಚರಿಸಿ, ದುಃಖದಿಂದ ಮುಂದಕ್ಕೆ ಮಾತನಾಡಲಾರದೆ ಮಧ್ಯದಲ್ಲಿಯೇ ಬಿದ್ದುಬಿಟ್ಟನು ॥೭೦॥

ಇದನ್ನು ಕಂಡು ಶ್ರೀರಾಮನು 'ಇದೇನು? ನಮ್ಮ ಮಹಾರಾಜನು ಹೀಗೆ ದುಃಖಪಡುವುದಕ್ಕೆ ಕಾರಣವೇನು?' ಎಂದು ಪ್ರಶ್ನೆಮಾಡಿದನು. ಹೀಗೆ ರಾಮನು ಪ್ರಶ್ನೆಮಾಡುತಿರಲಾಗಿ, ಕೈಕೇಯಿಯು ಅವನನ್ನು ಕುರಿತು 'ವತ್ಸ! ನಿಮ್ಮ ತಂದೆಯು ಹೇಳುವ ಮಾತು-ಒಳ್ಳೆಯದಾಗಿರಲಿ-ಅಥವಾ ಕೆಟ್ಟದಾಗಿರಲಿ-ಅದನ್ನು ನೀನು ನಡೆಯಿಸುವಪಕ್ಷದಲ್ಲಿ, ನಾನೇ ಅದೆಲ್ಲವನ್ನೂ ನಿನಗೆ ಹೇಳುವೆನು' ಎಂದು ಹೇಳಿದಳು ॥೭೧-೭೨॥

ಏತತ್ ತು ವಚನಂ ಶ್ರುತ್ವಾ ಕೈಕೇಯ್ಯಾ ಸಮುದಾಹೃತಮ್ ।
ಉವಾಚ ವ್ಯಥಿತೋ ರಾಮಃ ತಾಂ ದೇವೀಂ ನೃಪಸನ್ನಿಧೌ ॥೩೩॥

ಪಿತ್ರರ್ಥಂ ಜೀವಿತಂ ತ್ಯಕ್ಷ್ಯೇ ಪಿಬೇಯಂ ವಿಷಮುಲ್ಬಣಮ್ ।
ಸೀತಾಂ ತ್ಯಕ್ಷ್ಯೇಥ ಕೌಸಲ್ಯಾಂ ರಾಜ್ಯಂ ವಾಪಿ ತ್ಯಜಾಮ್ಯಹಮ್ ॥೩೪॥

ತದ್ಬ್ರೂಹಿ ವಚನಂ ದೇವಿ ರಾಜ್ಞೋ ಯದಭಿಕಾಂಕ್ಷಿತಮ್ ।
ಕರಿಷ್ಯೇ ಪ್ರತಿಜಾನೇ ಚ ರಾಮೋ ದ್ವಿರ್ನಾಭಿಭಾಷತೇ ॥೩೫॥

ತಮಾರ್ಜವಸಮಾಯುಕ್ತಂ ಅನಾರ್ಯಾ ಸತ್ಯವಾದಿನಮ್ ।
ಉವಾಚ ರಾಮಂ ಕೈಕೇಯೀ ವಚನಂ ಭೃಶದಾರುಣಮ್ ॥೩೬॥

ಪುರಾ ದೇವಾಸುರೇ ಯುದ್ಧೇ ತವ ಪಿತ್ರಾ ವರದ್ವಯಮ್ ।
ಮಹ್ಯಂ ದತ್ತಂ ನರಶ್ರೇಷ್ಠ ಸಮ್ಪ್ರೀತ್ಯಾ ಕಾರಣಾನ್ತರಾತ್ ॥೩೭॥

ಭರ್ತ್ರಾಜ್ಞಪ್ತವರಯೋಃ ಅದ್ಯಾದಸ್ತು ಸುತೋ ಮಮ ।
ನೃಪಸ್ತ್ವಮನ್ಯತೋರಣ್ಯಂ ಗಚ್ಛ ಚಾಬ್ದಾಂಶ್ಚತುರ್ದಶ ॥೩೮॥

ಹೀಗೆ ಕೈಕೇಯಿಯಿಂದ ಹೇಳಲ್ಪಟ್ಟ ಮಾತನ್ನು ಕೇಳಿ ಬಹಳ ವ್ಯಥೆಪಟ್ಟ ಶ್ರೀರಾಮನು, ಮೊರೆಯ ಎದುರಾಗಿ ಅವಳನ್ನು ಕುರಿತು ಹೀಗೆ ಹೇಳಿದನು ॥೩೩॥

ಅಮ್ಮ! ಇದೇನು ನೀನು ಹೀಗೆ ಹೇಳುವೆ? ನಾನು ನಮ್ಮ ತಂದೆಗೋಸ್ಕರವಾಗಿ ಯಾವ ಕೆಲಸವನ್ನು ತಾನೆ ಮಾಡಲು ಹಿಂಜರಿಯುವೆನು! ನಮ್ಮ ತಂದೆಗೋಸ್ಕರವಾಗಿ, ನನ್ನ ಜೀವನವನ್ನಾದರೂ ಬಿಡುವೆನು; ಉಲ್ಬಣವಾದ ವಿಷವನ್ನಾದರೂ ಕುಡಿಯುವೆನು; ಸೀತೆಯನ್ನಾದರೂ-ಅಥವಾ ಕೌಸಲ್ಯೆಯನ್ನಾದರೂ ಬಿಟ್ಟುಬಿಡುವೆನು. ಕೊನೆಗೆ ಈ ರಾಜ್ಯವನ್ನೇ ಬೇಕಾದರೂ ಬಿಟ್ಟುಬಿಡುವೆನು ॥೩೪॥

ಹೀಗಿರುವುದರಿಂದ, ಹೇ ದೇವಿ! ನಮ್ಮ ದೊರೆಗೆ ಈಗ ಯಾವುದು ಇಷ್ಟವಾದುದೋ, ಅದನ್ನು ಹೇಳು. ಅದನ್ನು ಖಂಡಿತವಾಗಿ ನಡೆಯಿಸುವೆನು. ಆ ವಿಷಯದಲ್ಲಿ ನಿನ್ನೆದುರಾಗಿ ಈಗ ಪ್ರತಿಜ್ಞೆಮಾಡುವೆನು. ರಾಮನು ಎರಡು ಸಲ ಯಾವುದನ್ನೂ ಹೇಳುವುದಿಲ್ಲವೆಂದು ದೃಢವಾಗಿ ನಂಬು ॥೩೫॥

ಹೀಗೆಂದು ಹೇಳುತಿರುವ-ಆರ್ಜವಯುಕ್ತನಾದ-ಸತ್ಯವಾದಿಯಾದ ಶ್ರೀರಾಮನನ್ನು ಕುರಿತು, ಕೈಕೇಯಿಯು ಈರೀತಿಯಾಗಿ ಅತಿ ಕ್ರೂರವಾದ ಮಾತನ್ನು ಹೇಳಿದಳು ॥೩೬॥

ವತ್ಸ! ರಾಮ! ಹಾಗಾದರೆ ಹೇಳುವೆನು-ಕೇಳು. ಪೂರ್ವದಲ್ಲಿ ದೇವಾಸುರಯುದ್ಧ ನಡೆಯುತಿರುವಾಗ, ಯಾವುದೋ ಒಂದು ಕಾರಣದಿಂದ ನನ್ನಲ್ಲಿ ವಿಶೇಷವಾಗಿ ಪ್ರೀತಿಪಟ್ಟ ನಿಮ್ಮ ತಂದೆಯು, ಎರಡು ವರಗಳನ್ನು ಕೊಟ್ಟಿರುವನು ॥೩೭॥

ಹೀಗೆ ನಿಮ್ಮ ತಂದೆಯಿಂದ ಹಿಂದೆ ಕೊಡಲ್ಪಟ್ಟ ವರಗಳ ಮಧ್ಯದಲ್ಲಿ, ಮೊದಲನೆಯದರಿಂದ ನಿನ್ನ ಮಗನು ಯುವರಾಜನಾಗಬೇಕು; ಎರಡನೆಯದರಿಂದ-ನೀನು ಅರಣ್ಯದಲ್ಲಿ ಹದಿನಾಲ್ಕು ವರ್ಷ ತಾಪಸನಾಗಿರಬೇಕು. ಅಯೆರಡು ವರಗಳಿಗೂ ಇದೇ ಪ್ರಯೋಜನವು ॥೩೮॥

ಏತತ್ ಕುರು ನರೇಂದ್ರಸ್ಯ ವಚನಂ ರಘುನಂದನ ।
ಸತ್ಯೇನ ಮಹತಾ ರಾಮ ತಾರಯಸ್ವ ನರೇಶ್ವರಮ್ ॥೩೯॥
ತದಪ್ರಿಯಮಮಿತ್ರಘ್ನಃ ವಚನಂ ಮರಣೋಪಮಮ್ ।
ಶ್ರುತ್ವಾ ನ ವಿವ್ಯಥೇ ರಾಮಃ ಕೈಕೇಯೀಮಿದಮಬ್ರವೀತ್ ॥೪೦॥
ಏವಮಸ್ತು ಗಮಿಷ್ಯಾಮಿ ವನೇ ವಸ್ತುಮಹಂ ತ್ವಿತಃ ।
ಜಟಾಜಿನಧರೋ ರಾಜ್ಞಃ ಪ್ರತಿಜ್ಞಾಮನುಪಾಲಯನ್ ॥೪೧॥
ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಶ್ರಿತಮ್ ॥೪೨॥
ಇತೀರಯಿತ್ವಾ ಪಿತರಂ ರಾಮೋ ಸತ್ಯವತೀದುಃಖಿತಮ್ ।
ಕೈಕೇಯ್ಯಾಶ್ಚ ಪ್ರನಾಮ್ಯಾಯಾಃ ನಿಶ್ಚಕ್ರಾಮ ಮಹಾದ್ಯುತಿಃ ॥೪೩॥

ಇತಿ ಶ್ರೀಮದಯೋಧ್ಯಾಕಾಣ್ಡೇ ಶ್ರೀರಾಮಚನ್ದ್ರಸ್ಯ
ದಣ್ಡಕಾರಣ್ಯನಿರ್ಗಮನಪ್ರತಿಜ್ಞಾಕಥನಂ ನಾಮ
ಸಪ್ತಮಃ ಸರ್ಗಃ.

ಎಲೈ ರಘುನಂದನನೆ! ಇದೇ ನಿಮ್ಮ ತಂದೆಯು ಹೇಳಬೇಕಾಗಿರುವ ಮಾತು; ಇದನ್ನು ನೀನು ನಡೆಯಿಸುವನಾಗು. ಈ ದೊಡ್ಡ ಸತ್ಯವಾಕ್ಯದಿಂದ, ನಮ್ಮ ಮಹಾರಾಜನನ್ನು ಉತ್ತಾರಣೆಮಾಡುವನಾಗು. (ಎಂದು ಕೈಕೇಯಿಯು ಹೇಳಿದಳು) ॥೩೯॥

ಹೀಗೆ ಕೈಕೇಯಿಯಿಂದ ಹೇಳಲ್ಪಟ್ಟ ಮರಣಸದೃಶವಾದ ಅಪ್ರಿಯವಚನವನ್ನು ಕೇಳಿ, ರಾಮನು ಸ್ವಲ್ಪವೂ ವ್ಯಥೆಪಡಲಿಲ್ಲ; ಅವೈರಿ ಕೈಕೇಯಿಯನ್ನು ಕುರಿತು ಹೀಗೆ ಹೇಳಿದನು॥೪೦॥

ಅಂಬ! ಹಾಗೆಯೇ ಆಗಲಿ; ನಾನು ದೊರೆಯು ಪ್ರತಿಜ್ಞೆಯನ್ನು ಪರಿಪಾಲಿಸುತ, ಜಟೆಯನ್ನೂ ಅಜಿನವನ್ನೂ ಧರಿಸಿಕೊಂಡು, ಅರಣ್ಯವಾಸಕ್ಕಾಗಿ ಇಲ್ಲಿಂದ ಹೊರಟುಬಿಡುವೆನು ॥೪೧॥

ಹೇ ಕೈಕೇಯಿದೇವಿ! ನಾನು ಕೇವಲ ಅರ್ಥಪರನಾಗಿ ಈ ಲೋಕದಲ್ಲಿ ವಾಸಮಾಡಬೇಕೆಂದು ಇಚ್ಛಿಸತಕ್ಕವನಾಗಿಲ್ಲ. ನನ್ನನ್ನು, ಕೇವಲ ಧರ್ಮತತ್ಪರನೆಂದೂ ಋಷಿಸದೃಶನೆಂದೂ ತಿಳಿಯುವಳಾಗು ॥೪೨॥

ಹೀಗೆಂದು ಕೈಕೇಯಿಯೊಡನೆ ಹೇಳಿ, ಅತಿ ದುಃಖಯುಕ್ತನಾಗಿರುವ ತಂದೆಯನ್ನೂ-ಪರಮನೀಚಳಾದ ಕೈಕೇಯಿಯನ್ನೂ ನಮಸ್ಕರಿಸಿ, ಮಹಾಕಾಂತಿಶಾಲಿಯಾದ ಶ್ರೀರಾಮನು ಆ ಕೈಕೇಯಿಯ ಮನೆಯಿಂದ ಹೊರಟುಬಂದನು ॥೪೩॥

ಇದು ಅಯೋಧ್ಯಾಕಾಂಡದಲ್ಲಿ ಶ್ರೀರಾಮಚಂದ್ರನ ದಂಡಕಾರಣ್ಯಗಮನ
ಪ್ರತಿಜ್ಞೆಯೆಂಬ ಏಳನೆಯ ಸರ್ಗವು.

ಅಥ ಶ್ರೀಮದಯೋಧ್ಯಾಕಾಣ್ಡೇ ಅಷ್ಟಮಃ ಸರ್ಗಃ.

ಶ್ರೀಶಿವಉವಾಚ.

ತತೋ ರಾಜಗೃಹಾತ್ ತೂರ್ಣಂ ವಿನಿಷ್ಕ್ರಮ್ಯ ಮಹಾದ್ಯುತಿಃ ।
ರಾಘವೋ ಮಾತರಂ ದ್ರಷ್ಟುಂ ಮಾತುರನ್ತಃಪುರಂ ಯಯೌ ॥೧॥
ಕೌಸಲ್ಯಾಪಿ ಹರೇಃ ಪೂಜಾಂ ಕುರುತೇ ರಾಮಕಾರಣಾತ್ ।
ಹೋಮಂ ಚ ಕಾರಯಾಮಾಸ ಬ್ರಾಹ್ಮಣೇಭ್ಯೋ ಧನಂ ದದೌ ॥೨॥
ಸಾ ಚಿರಸ್ಯಾತ್ಮಜಂ ದೃಷ್ಟ್ವಾ ಮಾತೃನನ್ದನವಾಗತಮ್ ।
ಅಭಿಚಕ್ರಾಮ ಸಂಹೃಷ್ಟಾ ಕಿಶೋರಂ ಬಡಬಾ ಯಥಾ ॥೩॥
ಸ ಮಾತರಮಭಿಕ್ರಾನ್ತಾಂ ಉಪಸಙ್ಗೃಹ್ಯ ರಾಘವಃ ।
ಪರಿಷ್ವಕ್ತಶ್ಚ ಬಾಹುಭ್ಯಾಂ ಇದಂ ವಚನಮಬ್ರವೀತ್ ॥೪॥
ಭರತಾಯ ಮಹಾರಾಜಃ ಯೌವರಾಜ್ಯಂ ಪ್ರಯಚ್ಛತಿ ।
ಮಾಂ ಪುನರ್ದಣ್ಡಕಾರಣ್ಯೇ ವಿವಾಸಯತಿ ತಾಪಸಮ್ ॥೫॥
ಚತುರ್ದಶಸಮಾಸ್ತತ್ರ ಹ್ಯುಷಿತ್ವಾ ಮುನಿಭಿಃ ಸಹ ।
ಆಗಮಿಷ್ಯೇ ತತಃ ಶೀಘ್ರಂ ಮಾ ವಿಘ್ನಂ ಕರ್ತುಮರ್ಹಸಿ ॥೬॥

ಅಯೋಧ್ಯಾಕಾಂಡದಲ್ಲಿ ಎಂಟನೆಯ ಸರ್ಗವು.

ಶ್ರೀ ಪರಮೇಶ್ವರನು ಪುನಃ ಹೇಳಲುಪಕ್ರಮಿಸಿದನು :—

ಎಲೌ ಪಾರ್ವತಿ! ಆ ಬಳಿಕ, ಮಹಾಪ್ರಕಾಶನಾದ ಶ್ರೀರಾಮನು, ದಶರಥನ ಮನೆಯಿಂದ ತಟ್ಟನೆ ಹೊರಟವನಾಗಿ, ತನ್ನ ತಾಯಿಯಾದ ಕೌಸಲ್ಯೆಯನ್ನು ನೋಡುವುದಕ್ಕೋಸ್ಕರ, ತಾಯಿಯ ಅಂತಃಪುರಕ್ಕೆ ಹೋದನು ॥೧॥

ಅಲ್ಲಿ ಕೌಸಲ್ಯೆಯೂ ಕೂಡ ಶ್ರೀರಾಮನ ಅಭ್ಯುದಯಕ್ಕಾಗಿ ಶ್ರೀ ಪರಮಾತ್ಮನ ಪೂಜೆಯನ್ನು ಮಾಡುತಿದ್ದಳು; ವಿಶೇಷವಾಗಿ ಹೋಮವನ್ನೂ ಮಾಡಿಸುತಿದ್ದಳು; ಬ್ರಾಹ್ಮಣರಿಗೆ ಧನವನ್ನೂ ಕೊಡುತಿದ್ದಳು ॥೨॥

ಅವಳು, ಮಾತೃಪ್ರೀತಿಕರನಾದ ಮಗನು ಬಹುಕಾಲಕ್ಕೆ ಬಂದುದನ್ನು ಕಂಡು, ತನ್ನ ಮರಿಯನ್ನು ಕಂಡ ಹೆಣ್ಣುಗುದುರೆಯಂತೆ, ಮಹಾಹರ್ಷಯುಕ್ತಳಾಗಿ ಹತ್ತಿರಕ್ಕೆ ಹೋದಳು ॥೩॥

ಹೀಗೆ ತನ್ನ ಹತ್ತಿರಕ್ಕೆ ಬರುತಿರುವ ತಾಯಿಗೆ ನಮಸ್ಕಾರವಾಡಿ, ಶ್ರೀರಾಮನು ಅವಳಿಂದ ಆಲಿಂಗಿಸಲ್ಪಟ್ಟವನಾಗಿ, ಅವಳನ್ನು ಕುರಿತು ಈ ಮಾತನ್ನು ಹೇಳಿದನು ॥೪॥

ಅಂಬ! ಈಗ ನಮ್ಮ ಮಹಾರಾಜನು ಭರತನಿಗೆ ಯೌವರಾಜ್ಯವನ್ನು ಕೊಡುವನು; ನನ್ನನ್ನು ದಂಡಕಾರಣ್ಯದಲ್ಲಿ ತಾಪಸನನ್ನಾಗಿ ಕಳುಹಿಸುವನು ॥೫॥

ನಾನು ಅಲ್ಲಿ ಮುನಿಗಳೊಡನೆ ಹದಿನಾಲ್ಕುವರ್ಷ ವಾಸಮಾಡಿ, ಬಳಿಕ ಬೇಗನೆ ಇಲ್ಲಿಗೆ ಬಂದುಬಿಡುವೆನು. ನೀನು ಇದಕ್ಕೆ ಸರ್ವಥಾ ವಿಘ್ನಮಾಡಕೂಡದೆಂದು ಪ್ರಾರ್ಥಿಸುವೆನು ॥೬॥

ತಚ್ಛ್ರುತ್ವಾ ಸಹಸೋದ್ವಿಗ್ನಾ ಮೂರ್ಛಿತಾ ಪುನರುತ್ಥಿತಾ ।
ಪಪ್ರಚ್ಛ ರಾಮಂ ಸುದುಃಖಾರ್ತಾ ದುಃಖಸಮ್ಪ್ಲುತಯಾ ಗಿರಾ ॥೬॥
ಯದಿ ರಾಮ ವನಂ ಸತ್ಯಂ ಯಾಸಿ ತ್ವಂ ನಯ ಮಾಮಪಿ ।
ತ್ವದ್ವಿಹೀನಾ ಕ್ಷಣಾರ್ಧಂ ವಾ ಜೀವಿತಂ ಧಾರಯೇ ಕಥಮ್ ॥೪॥
ಕೈಕೇಯ್ಯೈ ವರದೋ ರಾಜಾ ಸರ್ವಸ್ವಂ ವಾ ಪ್ರಯಚ್ಛತು ।
ತ್ವಯಾ ಕಿಮಸರಾದ್ಧಂ ವೈ ಕೈಕೇಯ್ಯಾಶ್ಚ ನೃಪಸ್ಯ ವಾ ॥೮॥
ಪಿತಾ ಗುರುರ್ಮಮ ತ್ವಂ ವೈ ನಾನು ತವಾಪಿ ಸಮಧಿಕಾ ತಥಾ ।
ಪಿತುರಾಜ್ಞಾಪ್ತೋ ವನಂ ಗನ್ತುಂ ವಾರಯೇ ತ್ವಾಮಹಂ ಸುತ ॥೧೦॥
ಲಕ್ಷ್ಮಣೋಪಿ ತತಃ ಶ್ರುತ್ವಾ ಕೈಕೇಯ್ಯಾವಚನಂ ರುಷಾ ।
ಉವಾಚ ರಾಘವಂ ವೀಕ್ಷ್ಯ ದಹನ್ನಿವ ಜಗತ್ತ್ರಯಮ್ ॥೧೧॥
ನ ರೋಚತೇ ಮಮಾಪ್ಯೇತತ್ ಆರ್ಯೇ ಯದ್ರಾಘವೋ ವನಮ್ ।
ತ್ಯಕ್ತ್ವಾ ರಾಜ್ಯಶ್ರಿಯಂ ಗಚ್ಛೇತ್ ಸ್ತ್ರಿಯೋ ವಾಕ್ಯವಶಂ ಗತಃ ॥೧೨॥

ಎಂಬುದಾಗಿ ಶ್ರೀರಾಮನು ಹೇಳಿದ ಮಾತನ್ನು ಕೇಳಿ, ಆ ಕೌಸಲ್ಯೆಯು ತಟ್ಟನೆ ಕಳವಳ ಪಟ್ಟು ಮೂರ್ಛೆಹೊಂದಿ ಬಿದ್ದವಳಾಗಿ, ಮತ್ತೆ ಎದ್ದು, ಮಹಾದುಃಖಸಮನ್ವಿತಳಾಗಿ, ರಾಮ ನನ್ನು ಕುರಿತು ದುಃಖಪರಿವೃತವಾದ ಈ ಮಾತನ್ನು ಹೇಳಿದಳು ॥೬॥

ವತ್ಸ! ರಾಮ! ನಾನು ಹೆಚ್ಚು ಮಾತನ್ನು ಹೇಳುವುದಿಲ್ಲ. ನೀನು ಸತ್ಯವಾಗಿಯೂ ಅರ ಣ್ಯಕ್ಕೆ ಹೋಗುವುದೇ ಸಿದ್ಧವಾಗಿದ್ದು ಪಕ್ಷದಲ್ಲಿ, ನನ್ನನ್ನೂ ಅಲ್ಲಿಗೆ ಕರೆದುಕೊಂಡುಹೋಗು. ನಾನು ನಿನ್ನನ್ನು ಬಿಟ್ಟು ಒಂದು ಅರ್ಧಕ್ಷಣವಾದರೂ ಹೇಗೆ ಪ್ರಾಣವನ್ನು ಧರಿಸಿಕೊಂ ಡಿರಲಿ? ॥೪॥

ಕೈಕೇಯಿಗೆ ವರವನ್ನು ಕೊಡುವುದಕ್ಕಾಗಿ ನಮ್ಮ ರಾಜನು ತನ್ನ ಸರ್ವಸ್ವವನ್ನೂ ಕೊಟ್ಟು ಕೊಳ್ಳಲಿ;—ನಿನ್ನನ್ನು ಅರಣ್ಯಕ್ಕೆ ಕಳುಹಿಸುವುದಕ್ಕೆ, ನೀನು ಕೈಕೇಯಿಗಾಗಲಿ ದೊರೆಗಾಗಲಿ — ಏನಪರಾಧಮಾಡಿರುವೆ? ॥೮॥

ರಾಮ! ನಿನಗೆ ತಂದೆ ಹೇಗೆ ಗುರುವಾದವನೋ, ನಾನೂ ಹಾಗೆಯೇ ಗುರುವಾದವಳ ಲ್ಲವೆ! ನ್ಯಾಯವಾಗಿ ಅವನಿಗಿಂತಲೂ ನಾನು ಹೆಚ್ಚಲ್ಲವೆ! ಅದುಕಾರಣ, ಅವನ ಮಾತಿಗಿಂತಲೂ ನನ್ನ ಮಾತನ್ನು ಮುಖ್ಯವಾಗಿ ನಡೆಯಿಸಬೇಕಾಗಿರುವುದು. ನಿನ್ನನ್ನು ನಿನ್ನ ತಂದೆಯು ಅರ ಣ್ಯಕ್ಕೆ ಹೋಗಬೇಕೆಂದು ಆಜ್ಞಾಪಿಸಿರುವನು; ಎಲೈ ಮಗನೇ! ಹೋಗಕೂಡದೆಂದು ನಾನು ನಿನ್ನನ್ನು ನಿಷೇಧಿಸುವೆನು. (ಎಂದು ಕೌಸಲ್ಯೆಯು ಹೇಳಿದಳು) ॥೧೦॥

ಹೀಗೆ ಕೌಸಲ್ಯೆಯಿಂದ ಹೇಳಲ್ಪಟ್ಟ ಒಳಿಕೆ, ಲಕ್ಷಣನೂ ಕೂಡ, ಕೈಕೇಯಿಯ ಮಾತನ್ನು ಕೇಳಿದವನಾಗಿ ತನ್ನ ಕೋಪದಿಂದ ಮೂರು ಲೋಕವನ್ನೂ ಸುಡುವನಂತೆ ತೋರುತ, ರಾಮ ನನ್ನು ನೋಡಿ ಹೀಗೆ ಹೇಳಿದನು ॥೧೧॥

ಅಂಬ! ನಮ್ಮ ರಾಮನು ಸ್ತ್ರೀಯ ಮಾತಿಗೆ ಕಟ್ಟುಬಿದ್ದು ಅರಣ್ಯಕ್ಕೆ ಹೋಗುವುದು ನನಗೂ ಇಷ್ಟವಾಗಿಲ್ಲ ॥೧೨॥

ವಿಪರೀತಶ್ಚ ವೃದ್ಧಶ್ಚ ವಿಷಯೈಶ್ಚ ಪ್ರಧರ್ಷಿತಃ ।
ನೃಪಃ ಕಿಮಿವ ನೋ ಬ್ರೂಯಾತ್ ಚೋದ್ಯಮಾನಃ ಸಮನ್ಮಥಃ ॥೧೩॥
ನಾಸ್ಯಾಪರಾಧಂ ಪಶ್ಯಾಮಿ ನಾಪಿ ದೋಷಂ ತಥಾವಿಧಮ್ ।
ಯೇನ ನಿರ್ವಾಸ್ಯತೇ ರಾಷ್ಟ್ರಾತ್ ವನವಾಸಾಯ ರಾಘವಃ ॥೧೪॥
ನ ತಂ ಪಶ್ಯಾಮ್ಯಹಂ ಲೋಕೇ ಪರೋಕ್ಷಮಪಿ ಯೋ ನರಃ ।
ಸ್ವಾಮಿತೋ ವಾ ನಿರಸ್ತೋಪಿ ಯೋಸ್ಯ ದೋಷಮುದಾಹರೇತ್ ॥೧೫॥
ದೇವಕಲ್ಪಮೃಜುಂ ದಾಂತಂ ರಿಪೂಣಾಮಪಿ ವತ್ಸಲಮ್ ।
ಅವೇಕ್ಷ್ಯಮಾಣಃ ಕೋ ಧರ್ಮಂ ತ್ಯಜೇತ್ ಪುತ್ರಮನುಕಾರಣಾತ್ ॥೧೬॥
ಹರಾಮಿ ವೀರ್ಯಾದ್ದುಃಖಂ ತೇ ತಮಃ ಸೂರ್ಯ ಇವೋದಿತಃ ।
ದೇವೀ ಪಶ್ಯತು ಮೇ ವೀರ್ಯಂ ರಾಘವಶ್ಚೈವ ಪಶ್ಯತು ॥೧೭॥
ಇತಿ ಬ್ರುವಂತಂ ಸೌಮಿತ್ರಿಂ ಅಹೇದಂ ರಘುನಂದನಃ ॥೧೮॥
ಜಾನಾಮಿ ವಾಕ್ಯಂ ತೇ ಸತ್ಯಂ ಕಿಂ ತು ಮೇ ಸಮಯೋ ನ ಹಿ ।
ಯದಿದಂ ದೃಶ್ಯತೇ ವಿಶ್ವಂ ರಾಜ್ಯಂ ದೇಹಾದಿಕಂ ಚ ಯತ್ ।
ಯದಿ ಸತ್ಯಂ ಭವೇತ್ ತತ್ರ ಪ್ರಯಾಸಃ ಸಫಲಶ್ಚ ತೇ ॥೧೯॥

ನಮ್ಮ ಮಹಾರಾಜ ದಶರಥನು, ಮೊದಲೇ ಸ್ವಭಾವತಃ ವ್ಯತ್ಯಸ್ತಬುದ್ಧಿಯಾದವನು; ಈಗ ವೃದ್ಧನೂ ಆಗಿರುವನು; ಇದಲ್ಲದೆ ವಿಷಯಾಸಕ್ತಿಯೂ ಇವನನ್ನು ಹಿಮ್ಮೆಟ್ಟಿಬಿಟ್ಟಿರುವುದು. ಇಂತಹ ಕಾಮಾವಿಷ್ಟನಾದವನು, ಹೆಂಡತಿಯಿಂದ ಚೋದಿತನಾಗಿ ಏನನ್ನು ತಾನೆ ಹೇಳಲಾರನು! ॥

ನಮ್ಮ ರಾಮನು ಈ ರಾಷ್ಟ್ರದಿಂದ ಹೊರಕ್ಕೆ ಕಳುಹಿಸಲ್ಪಡಲು ಯಾವುದನ್ನು ಮಾಡಿರ ದೇಕೋ, ಅಂತಹ ಅಪರಾಧವೊಂದನ್ನೂ ಇವನಲ್ಲಿ ನಾನು ಕಾಣುವುದಿಲ್ಲ; ಮತ್ತೊಂದು ದೋಷವೂ ಇವನಲ್ಲಿಲ್ಲ ॥೧೪॥

ಇವನಿಗೆ ಶತ್ರು ವಾಗಿರಲಿ—ಅಥವಾ ಇವನಿಂದ ಓಡಿಸಲ್ಪಟ್ಟವನಾಗಿರಲಿ—ಯಾವನೊ ಬ್ಬನು ಇವನಲ್ಲಿ ದೋಷವನ್ನು ಹೇಳಬಹುದೋ, ಅಂಥವನೊಬ್ಬನನ್ನೂ ನಾನು ಇದುವರೆಗೂ ನೋಡಲಿಲ್ಲ ॥೧೫॥

ದೇವಸದೃಶನಾಗಿಯೂ ಋಜುವಾಗಿಯೂ ದಮಸಮನ್ವಿತನಾಗಿಯೂ ಶತ್ರುಗಳಿಗೂ ಪ್ರೀತಿವಾತ್ಸಲ್ಯ ನಾಗಿಯೂ ಇರುವ ಇಂತಹ ಮಗನನ್ನು, ಧರ್ಮದಲ್ಲಿ ದೃಷ್ಟಿಯುಳ್ಳ ಯಾವನು ತಾನೆ ನಿಷ್ಕಾರಣವಾಗಿ ಬಿಟ್ಟುಬಿಡುವನು? ॥೧೬॥

ಉದಯಿಸಿಹೊಂದಿದ ಸೂರ್ಯನು ಅಂಧಕಾರವನ್ನು ಅಪಹರಿಸುವಂತೆ, ನನ್ನ ವೀರ್ಯದಿಂದ ನಿನ್ನ ದುಃಖವನ್ನು ಈಗ ಅಪಹರಿಸುವೆನು. ನನ್ನ ವೀರ್ಯವನ್ನು ಈಗ ಕೈಕೇಯಿಯೂ ದಶರ ಥನೂ (ಅಥವಾ ರಾಮನೂ) ನೋಡುವರಾಗಲಿ. (ಎಂದು ಆ ಲಕ್ಷ್ಮಣನು ಹೇಳುವನು) ॥೧೭॥

ಹೀಗೆ ಹೇಳುತ್ತಿರುವ ಲಕ್ಷ್ಮಣನನ್ನು ಕುರಿತು, ಶ್ರೀರಾಮನು ಈ ಮಾತನ್ನು ಹೇಳಿದನು; ವತ್ಸ! ಲಕ್ಷ್ಮಣ! ನಿನ್ನ ಮಾತೆಲ್ಲವೂ ಸತ್ಯವೆಂದು ನಾನು ನಂಬಿರುವೆನು. ನಿನ್ನ ವೀರ್ಯವೂ ಅಂತ ಹುದೇ ಆಹುದು. ಆದರೆ, ನನಗೆ ಈಗ ಸಮಯವಲ್ಲ. ಈ ದೃಶ್ಯಮಾನನಾದ ವಿಶ್ವವೂ ರಾಜ್ಯ ವೂ ದೇಹಾದಿಗಳೂ ಸತ್ಯನಾಗಿದ್ದ ಪಕ್ಷದಲ್ಲಿ, ಆಗ ನಿನ್ನ ಪ್ರಯಾಸವೆಲ್ಲವೂ ಸಫಲವಾ ದೀತು ॥೧೮—೧೯॥

ಭೋಗಾಮೇಘವಿತಾನಸ್ಥ ವಿದ್ಯುಲ್ಲೇಖೇವ ಚಞ್ಚಲಾಃ ।
ಆಯುರಪ್ಯಗ್ನಿಸಂತಪ್ತ ಲೋಹಸ್ಥ ಜಲಬಿನ್ದುವತ್ ॥೨೦॥
ಯಥೇಹ ಕರ್ಮಜನ್ಯತ್ವಾತ್ ವಿಷಯಾಣಾಮನಿತ್ಯತಾ ।
ದೃಷ್ಟಾ ತಥಾನ್ಯಲೋಕೇಪಿ ತಜ್ಜನ್ಯತ್ವಾದನಿತ್ಯತಾ ॥೨೧॥
ಯಥಾ ವ್ಯಾಳಗಳಾನ್ತಸ್ಥೋ ಭೇಕೋ ದಂಶಾನಪೇಕ್ಷತೇ ।
ತಥಾ ಕಾಲಾಗ್ನಿನಾ ಗ್ರಸ್ತೋ ಲೋಕೋ ಭೋಗಾನಶಾಶ್ವತಾನ್ ॥೨೨॥
ಕರೋತಿದುಃಖೇನ ಹಿಕರ್ಮತನ್ತ್ರಂಶರೀರಭೋಗಾರ್ಥಮಹರ್ನಿಶಂನರಃ ।
ದೇಹಸ್ತು ಭಿನ್ನಃ ಪುರುಷಾತ್ ಸಮೀಕ್ಷ್ಯತೇ ಕೋವಾತ್ರ ಭೋಗಃ ಪುರು
[ಷೇಣ ಭುಜ್ಯತೇ ॥೨೩॥
ಪಿತೃಮಾತೃಸುತಭ್ರಾತೃದಾರಬನ್ಧ್ವಾದಿಸಙ್ಗಮಃ ।
ಸಂಯೋಗಮಾತ್ರಂ ಜನ್ತೂನಾಂ ನದ್ಯಾಂ ಕಾಷ್ಠೋಪಲಙ್ಗಲಃ ॥೨೪॥
ಛಾಯೇವ ಲಕ್ಷ್ಮೀಶ್ಚಲಾಪ್ರತೀತಾ ತಾರುಣ್ಯಮಮೂರ್ಬ್ಬವದಧ್ರುವಂಚ ।
ಸ್ವಪ್ನೋಪಮಂಸ್ತ್ರೀಸುಖಮಾಯುರಲ್ಪಂ ತಥಾಪಿಜನೋ ರಭಿಮಾನವಿಷಃ ॥೨೫

ಆದರೆ, ಇದೊಂದೂ ಸ್ಥಿರವಲ್ಲ, ಭೋಗಗಳು, ಮೇಘಮಂಡಲದಲ್ಲಿರುವ ವಿದ್ಯುಲ್ಲತೆಯಂತೆ ಚಂಚಲವಾದುವುಗಳು ; ಆಯುಸ್ಸೆಂಬುದು ಕಾಯ್ದು ಕಬ್ಬುಣದ ಮೇಲೆ ಹಾಕಿದ ನೀರುಹನಿಯಂತೆ ಕ್ಷಣಭಂಗುರವಾದುದು ॥೨೦॥

' ಈ ಲೋಕದಲ್ಲಿ ವಿಷಯಗಳು ಅನಿತ್ಯವಾಗಿದ್ದರೂ, ಪರಲೋಕದಲ್ಲಿ ನಿತ್ಯವಾಗಿರಬಾರದೆ ? ' ಎಂದು ಅಶಂಕೆಮಾಡಬೇಡ ಈವಿಷಯಗಳೆಲ್ಲವೂ ಇಲ್ಲಿ ಹೇಗೆ ಕರ್ಮಜನ್ಯಗಳೋ, ಹಾಗೆ ಪರಲೋಕದಲ್ಲಿಯೂ ಅನಿತ್ಯಗಳೆಂಬುದು ಸ್ಪಷ್ಟವಾಗಿಯೇ ಇರುವುದು ॥೨೧॥

ಹಾವಿನ ಗಂಟಲಿನಲ್ಲಿ ಸಿಕ್ಕಿಕೊಂಡಿರುವ ಕಪ್ಪೆಯು ತನ್ನ ಆಹಾರಾರ್ಥವಾಗಿ ಸೊಳ್ಳೆಗಳನ್ನು ಅಪೇಕ್ಷಿಸುವುದು ಹೇಗೋ, ಕಾಲಾಗ್ನಿಯಿಂದ ಗ್ರಾಸವಾಡಲ್ಪಟ್ಟಿರುವ ಜನರು ಅಸ್ಥಿರವಾದ ಭೋಗಗಳನ್ನು ಅಪೇಕ್ಷಿಸುವುದೂ ಹಾಗೆಯೇ ॥೨೨॥

ಪ್ರಪಂಚದಲ್ಲಿ ಪುರುಷನು ಶರೀರಭೋಗಕ್ಕಾಗಿ ರಾತ್ರಿಹಗಲೂ ಕಷ್ಟಪಟ್ಟು ಕೆಲಸಮಾಡುವನು; ಆದರೆ, ದೇಹವೆಂಬುದು ಪುರುಷನಿಗಿಂತ ಬೇರೆಯಾದುದೆಂಬುದು ಸ್ಪಷ್ಟವಾಗಿರುವುದು; ಹೀಗಿರುವಾಗ, ಈ ಲೋಕದಲ್ಲಿ ಪುರುಷನಿಂದ ಯಾವ ಭೋಗತಾನೆ ಅನುಭವಿಸಲ್ಪಡುವುದು ? ॥೨೩॥

ಲೋಕದಲ್ಲಿ, ತಂದೆ ತಾಯಿ ಮಗ ಅಣ ತಮ್ಮ ಹೆಂಡತಿ ನೆಂಟರು ಮೊದಲಾದವರ ಸೇರುವಿಕೆಯೆಂಬುದು, ಪ್ರಾಣಿಗಳಿಗೆ ಕೇವಲ ಸಂಯೋಗಮಾತ್ರವಾದುದು. ಇದು, ನದಿಯಲ್ಲಿ ಅಕಸ್ಮಿಕವಾಗಿ ಸೇರಿ ಮತ್ತೆ ಅಗಲಿಹೋಗುವ ಕಟ್ಟಿಗೆಗಳಂತೆ ಅತಿಚಂಚಲವಾದುದು ॥೨೪॥

ಮರದ ನೆಳಲಿನಂತೆ ಲಕ್ಷ್ಮಿಯು ಕೇವಲ ಚಂಚಲಳೆಂದು ಪ್ರಸಿದ್ಧವಾಗಿರುವುದು; ಯೌವನವೆಂಬುದು ನೀರಿನ ಅಲೆಯಂತೆ ಅಸ್ಥಿರವಾದುದು ; ಸ್ತ್ರೀಸುಖವು ಕೇವಲ ಸ್ವಪ್ನಸದೃಶವಾಗಿರುವುದು; ಆಯುಸ್ಸಂತು ಅತ್ಯಲ್ಪವಾಗಿರುವುದು. ಹೀಗಿದ್ದರೂ, ಪ್ರಾಣಿಗಳಿಗೆ ಇವುಗಳಲ್ಲಿ ಇಷ್ಟು ಅಭಿಮಾನವಿರುವುದಲ್ಲ ! ॥೨೫॥

ಯೋಷೇಯಂ ಮಾಂಸಮಜ್ಜಾಸೃಕ್ಪೂಯವಿಣ್ಮೂತ್ರಚರ್ಮಭಿಃ ।
ಮೇದೋಸ್ಥಿ ಲಾಲಾಶಿಙ್ಘಾಣನಾಡೀತ್ವಙ್ನಖರೋಮಭಿಃ ।
ವಾತಪಿತ್ತಕಫಸ್ನಾಯುದೂಷಿಕಾದ್ಯೈಶ್ಚ ನಿರ್ಮಿತಾ ॥೨೬॥

ಗನ್ಧಪುಷ್ಪಾದಿಜನ್ಯೋಲಙ್ಕಾರಃ ಸ್ವರ್ಣಾಂಶುಕಾದಿಜಃ ।
ವರ್ಣಃ ಪೀತಾಜ್ಜನಾದ್ಯುತ್ಥಃ ತತ್ತ್ಯಾಗೇತೀವ ಶೋಭನಮ್ ॥೨೭॥

ತಥಾಪಿ ಮೂತ್ರಸಂಕ್ಲಿನ್ನೇ ರನ್ಧ್ರೇ ಮುಹ್ಯನ್ತಿ ಮಾನವಾಃ ।
ಕೋ ಹೇತುರಿತಿ ಚೇತ್ ತತ್ರ ತತ್ಸ್ವರೂಪಾವಿವೇಚನಮ್ ॥೨೮॥

ಜರಾ ವ್ಯಾಘ್ರೀವ ಪುರತಃ ತರ್ಜಯನ್ತ್ಯವತಿಷ್ಠತೇ ।
ಮೃತ್ಯುಃ ಸಹೈವ ಯಾತ್ಯೇಷಃ ಸನುಯಂ ಸಮ್ಪ್ರತೀಕ್ಷತೇ ॥೨೯॥

ಸಂಸೃತಿಃ ಸ್ವಪ್ನಸದೃಶಾ ಸಾ ರೋಗಾದಿಸಮಾಕುಲಾ ।
ಗನ್ಧರ್ವನಗರಪ್ರಖ್ಯಾ ಮೂಢಸ್ತಾಮನುವರ್ತತೇ ॥೩೦॥

ದಿನಪಕ್ಷರ್ತುಮಾಸಾಬ್ದಾಃ ಗತಾಃ ಏವ ಗತಾಃ ಪುನಃ ।
ನಿವರ್ತನ್ತೇ ನ ಸಾಮುದ್ರಾಃ ತರಙ್ಗಾ ಇವ ಸರ್ವಥಾ ॥೩೧॥

ಈ ಹೆಂಗಸೆಂಬವಳು, ಮಾಂಸ ಮಜ್ಜೆ ರಕ್ತ ಕೀವು ಮಲ ಮೂತ್ರಗಳಿಂದಲೂ, ಮೇದಸ್ಸು ಮೂಳೆ ಜೊಲ್ಲು ಸಿಂಬಳ ನಾಡಿ ಚರ್ಮ ನಖ ರೋಮಗಳಿಂದಲೂ, ವಾತ ಪಿತ್ತ ಕಫ ಸ್ನಾಯು (ಕಾಲಜಿಂಡ) ದೂಷಿಕೆ (ಕಣ್ಣಿನ ಬಿನ್ನರು) ಮುಂತಾದವುಗಳಿಂದಲೂ ನಿರ್ಮಿಸಲ್ಪಟ್ಟಿರುವಳು ॥೨೬॥

ಇವಳಲ್ಲಿರುವ—ಗಂಧ ಪುಷ್ಪಾದಿಗಳಿಂದಲೂ ಸುವರ್ಣಾಭರಣ ವಸ್ತ್ರಾದಿಗಳಿಂದಲೂ ಜನ್ಯವಾದ ಅಲಂಕಾರವೆಂಬುದು ಯಾವುದುಂಟೋ, ಅದು ಹಳದಿ ಕಪ್ಪು ಮುಂತಾದುವುಗಳಿಂದ ಉತ್ಪನ್ನವಾಗುವ ಒಂದುಬಗೆಯು ಬಣ್ಣವಲ್ಲದೆ ಮತ್ತೇನೂ ಅಲ್ಲ. ಹೀಗಿರುವುದರಿಂದ, ಇಂತಹ ಅಲಂಕಾರಮಾಡಿಕೊಂಡು ಮರುಳುಮಾಡುತಿರುವ ಸ್ತ್ರೀಯನ್ನು ಬಿಟ್ಟುಬಿಟ್ಟು ಪಕ್ಷದಲ್ಲಿ, ಪುರುಷರಿಗೆ ಅತಿಯಾಗಿ ಶ್ರೇಯಸ್ಸುಂಟಾಗುವುದು ॥೨೭॥

ಹೀಗಿದ್ದರೂ, ಮೂತ್ರದಿಂದ ನೆನೆದಿರುವ ರಂಧ್ರದಲ್ಲಿ ಮನುಜರು ಮೋಹಪಡುವರಲ್ಲ! ಇದಕ್ಕೆ ಕಾರಣವೇನೆಂದರೆ,—ಅದರ ಸ್ವರೂಪವನ್ನು ಚೆನ್ನಾಗಿ ವಿವೇಚನೆಮಾಡದಿರುವುದೆಯೇ ॥೨೮॥

ಮುಪ್ಪು ಹುಲಿಯಹಾಗೆ ಹೆದರಿಸುತ, ಮುಂದುಗಡೆಯೇ ನಿಂತಿರುವುದು; ಮೃತ್ಯುವು, ನಮ್ಮ ಜತೆಯಲ್ಲಿಯೇ ಸಮಯವನ್ನು ನಿರೀಕ್ಷಿಸಿಕೊಂಡು ಬರುತಿರುವುದು ॥೨೯॥

ಸಂಸಾರವೆಂಬುದು, ಕೇವಲ ಸ್ವಪ್ನಸಮಾನವಾದುದು; ಇದರಮೇಲೆ, ಅದು ರೋಗಾದಿಗಳಿಂದಲೂ ವ್ಯಾಕುಲವಾಗಿರುವುದು; ಇದು ಕೇವಲ ಗಂಧರ್ವನಗರಾಕಾರವಾಗಿರುವುದು. ಇಂತಹ ಸಂಸಾರವನ್ನೂ ಮೂಢನಾದವನು ಅನುಸರಿಸಿಕೊಂಡು ಸಂಕಟಪಡುವನು ॥೩೦॥

ದಿನ ಪಕ್ಷ ಋತು ಮಾಸ ವರ್ಷಗಳು, ಕಳೆದುಹೋದುವು ಕಳೆದೇ ಹೊದುದಲ್ಲದೆ, ಸಮುದ್ರದ ತರಂಗಗಳಂತೆ—ಅವು ಸರ್ವಥಾ ಮತ್ತೆ ಹಿಂದಿರುಗುವುದಿಲ್ಲ ॥೩೧॥

ತೇಷ್ವತೀತೇಷು ಸರ್ವೇಷಾಂ ದೇಹಿನಾಂ ಜೀವನಕ್ಷಯಃ ।
ಪ್ರತಿಕ್ಷಣಂ ಭವೇದ್ಗ್ರೀಷ್ಮೇ ಜಲಸ್ಯಾರ್ಕಗತೇರಿವ ॥೩೦॥

ಏವಂ ಕತಿಪಯೇ ಕಾಲೇ ಜರಾವ್ಯಾಧ್ಯಾದಿಭಿರ್ವಪುಃ ।
ಜೀರ್ಣಮಾದೌ ದೃಢಮಿವಾಭಾತಿ ನೂತನವೇಶ್ಮವತ್ ॥೩೧॥

ಶ್ವೇತಾಃ ಕೇಶಾಸ್ತತಃ ಕಮ್ಪ್ರೇ ಲಲಾ ಚ ವಲಯಸ್ತನೌ ।
ಇನ್ದ್ರಿಯಾಪಾಟವಂ ಪಶ್ಚಾತ್ ಪುರಾಂ ಚ ಭವೇತ್ ತತಃ ॥೩೪॥

ಪ್ರಾಗೇವಮೇವ ಕಾಲೇನಾನನ್ತಾನಪ್ಯಾಶ್ಚ ತುರ್ಮುಖಾಃ ।
ಮನ್ವಿನ್ದ್ರದೇವಗನ್ಧರ್ವಮುನ್ಯಾದ್ಯಾಃ ಪಂಸುವದ್ಗತಾಃ ॥೩೫॥

ವಿರಾಡ್ಧಿರಣ್ಯಗರ್ಭೇಶಬ್ರಹ್ಮಾದೀನಾಂ ಶ್ರುತೌ ಶ್ರುತಃ ।
ನಾಶೋ ರಾಜ್ಞಾನುಸನ್ತಾನಾಂ ಕಿಂ ಧೈರ್ಯಂ ಮರ್ತ್ಯಜೀವನೇ ॥೩೬॥

ದೇಹೇಹಂಭಾವಮಾಪನ್ನೋ ರಾಜಾಹಂ ಲೋಕವಿಶ್ರುತಃ ।
ಇತ್ಯಸ್ಮಿನ್ ಮನುತೇ ಜನ್ತುಃ ಅನ್ತೇ ವಿಡ್ಭಸ್ಮಸಂಜ್ಞಕೇ ।
ಪ್ರಪತೇದವಶೋ ಘೋರೇ ನರಕೇ ಯಾತನಾನುಯೇ ॥೩೭॥

ಯಮಾಸಾದ್ಯ ಭವಾನ್ ಲೋಕಂ ದಗ್ಧುಮಿಚ್ಛತಿ ಲಕ್ಷ್ಮಣ ।
ದೇಹಾಭಿಮಾನಿನಃ ಸರ್ವೇ ದೋಷಾಃ ಪ್ರಾದುರ್ಭವನ್ತಿ ಹಿ ॥೩೮॥

ಇವು ಕಳೆದುಹೋದಹಾಗೆಲ್ಲ, ಗ್ರೀಷ್ಮಕಾಲದಲ್ಲಿ ಸೂರ್ಯಕಿರಣಗಳಿಂದ ಜಲಕ್ಕೆ ಕ್ಷಯವುಂಟಾಗುವಂತೆ, ಪ್ರತಿಕ್ಷಣವೂ ಸಮಸ್ತದೇಹಗಳಿಗೂ ಆಯುಸ್ಸು ಕ್ಷಯಿಸುತ್ತಿರುವುದು ॥

ಹೀಗೆ ಕೆಲವುಕಾಲ ಕಳೆದು ಹೋಗಲಾಗಿ, ಮೊದಲು ಹೊಸಮನೆಯಂತೆ ಗಟ್ಟಿಯಾಗಿ ಕಾಣುತ್ತಿದ್ದ ದೇಹವು, ಈಗ ಜರಾರೋಗಾದಿಗಳಿಂದ ಜೀರ್ಣವಾಗಿ ಹೋಗುವುದು ॥೩೩॥

ಅನಂತರ ಕೂದಲುಗಳೆಲ್ಲ ಬಿಳಿಗಾಗುವುವು; ಅಮೇಲೆ ಮೈಯೆಲ್ಲ ನಡುಗಲಾರಂಭಿಸುವುದು; ಒಳಿಕ ದೇಹದಲ್ಲೆಲ್ಲ ಸುಕ್ಕುಹಿಡಿದು ಜೊಲ್ಲು ಸುರಿಯಲಾರಂಭಿಸುವುದು; ಆಬಳಿಕ ಇಂದ್ರಿಯಗಳಿಗೆಲ್ಲ ಅಶಕ್ತಿಯುಂಟಾಗುವುದು. ಕೊನೆಗೆ ಮರಣವೂ ಉಂಟಾಗುವುದು ॥೩೪॥

ಹಿಂದೆಯೂ ಹೀಗೆಯೇ ಕಾಲಪರಿಣಾಮದಿಂದ ಅನೇಕರಾದ ಚತುರ್ಮುಖರು ನಷ್ಟರಾಗಿಬಿಟ್ಟರು; ಮನು ಇಂದ್ರ ದೇವ ಗಂಧರ್ವ ಮುನಿ ಪ್ರಮುಖರೂ ಅಸಂಖ್ಯಾಕವಾಗಿ ಧೂಳಿಯಂತೆ ಹೋಗಿಬಿಟ್ಟರು ॥೩೫॥

ವಿರಾಟ್ಪುರುಷ ಹಿರಣ್ಯಗರ್ಭ ಈಶ್ವರ ಬ್ರಹ್ಮಾದಿಗಳಿಗೂ ಅಸಂಖ್ಯಾಕರಾದ ರಾಜರಿಗೂ ಕೂಡ ವಿನಾಶವುಂಟೆಂಬುದು ಶ್ರುತಿಸಿದ್ಧವಾಗಿರುವುದು. ಹೀಗಿರುವಲ್ಲಿ, ಅಲ್ಪರಾದ ಮನುಷ್ಯರು ಸ್ಥಿರವಾಗಿ ಜೀವಿಸುವರೆಂಬುದರಲ್ಲಿ ಧೈರ್ಯವೇನು ? ॥೩೬॥

ದೇಹದಲ್ಲಿ ಆತ್ಮಜ್ಞಾನವಿಟ್ಟುಕೊಂಡಿರುವ ವ್ಯಾಣಿಯು, ನಾನು ಲೋಕಪ್ರಸಿದ್ಧನಾದ ರಾಜನೆಂದು ಅಹಂಕಾರಪಡುವನು; ಕೊನೆಗೆ ಅತಿ ಘೋರವಾದ ಯಾತನಾಮಯವಾದ ವಿಡ್ಭಸ್ಮನಾಮಕವಾದ ನರಕದಲ್ಲಿ ಅಸ್ವತಂತ್ರನಾಗಿ ಬಿದ್ದುಬಿಡುವನು ॥೩೭॥

ಅಯ್ಯಾ ಲಕ್ಷ್ಮಣ! ನೀನು ಯಾವ ದೇಹಾಭಿಮಾನವನ್ನಾಶ್ರಯಿಸಿಕೊಂಡು ಲೋಕವನ್ನೆಲ್ಲ ಸುಡಬೇಕೆಂದಪೇಕ್ಷಿಸುವೆಯೋ, ಈ ದೇಹಾಭಿಮಾನವುಳ್ಳವನಿಗೆ ಸಮಸ್ತ ದೋಷಗಳೂ ಪ್ರಾದುರ್ಭವಿಸುವುವು ॥೩೮॥

ದೇಹೋಽಹಮಿತಿ ಯಾ ಬುದ್ಧಿಃ ಅವಿದ್ಯಾ ಸಾ ಪ್ರಕೀರ್ತಿತಾ ।
ನಾಹಂ ದೇಹಶ್ಚಿದಾತ್ಮೇತಿ ಬುದ್ಧಿರ್ವಿದ್ಯೇತಿ ಗೀಯತೇ ॥೩೯॥
ಕಾಮಕ್ರೋಧಾದಯಸ್ತತ್ರ ಶತ್ರವಃ ಶತ್ರುಸೂದನ ।
ತತ್ರಾಪಿ ಕ್ರೋಧವೈವಾಲಂ ಮೋಕ್ಷವಿಘ್ನಾಯ ಸರ್ವದಾ ॥೪೦॥
ಕ್ರೋಧಮೂಲೋ ಮನಸ್ತಾಪಃ ಕ್ರೋಧಃ ಸಂಸಾರಬನ್ಧನಃ ।
ಧರ್ಮಕ್ಷಯಕರಃ ಕ್ರೋಧಃ ತಸ್ಮಾತ್ ಕ್ರೋಧಂ ಪರಿತ್ಯಜೇತ್ ॥೪೧॥
ಕ್ರೋಧವೈವ ಯಮಃ ಸಾಕ್ಷಾತ್ ತೃಷ್ಣಾ ವೈತರಣೀ ನದೀ ।
ಸಂತೋಷೋ ನನ್ದನವನಂ ಶಾನ್ತಿರೇವ ಹಿ ಕಾಮಧುಕ್ ॥೪೨॥
ಅಲಙ್ಕಾರೋ ಹಿ ನಾರೀಣಾಂ ಕ್ಷಮಾ ತು ಪುರುಷಸ್ಯ ವಾ ॥೪೩॥
ಕ್ಷಮಾ ದಾನಂ ಕ್ಷಮಾ ಯಜ್ಞಃ ಕ್ಷಮಾ ಸತ್ಯಂ ಹಿ ಪುತ್ರಕ ।
ಕ್ಷಮಾ ಯಶಃ ಕ್ಷಮಾ ಧರ್ಮಃ ಕ್ಷಮಾಯಾಂ ಹಿ ಸ್ಥಿತಂ ಜಗತ್ ।
ತಸ್ಮಾಚ್ಛಾನ್ತಿಂ ಭಜಸ್ವಾದ್ಯ ಶತ್ರುರೇವ ಭವೇನ್ನ ತೇ ॥೪೪॥
ಭುಞ್ಜ್ಞ ಪ್ರಾರಬ್ಧಮಖಿಲಂ ಸುಖಂ ವಾ ದುಃಖಮೇವ ವಾ ।
ಪ್ರವಾಹಪತಿತಂ ಕಾರ್ಯಂ ಕುರ್ವನ್ನಪಿ ನ ಲಿಪ್ಯಸೇ ॥೪೫॥

'ದೇಹವೇ ನಾನು' ಎಂಬ ಜ್ಞಾನವಾವುದುಂಟೋ, ಅದೇ ಅವಿದ್ಯೆಯೆನ್ನಲ್ಪಡುವುದ
'ನಾನು ದೇಹವಲ್ಲ; ನಾನೇ ಚಿದಾತ್ಮನು.' ಎಂಬ ಜ್ಞಾನವೇ ವಿದ್ಯೆಯೆನ್ನಲ್ಪಡುವುದು" ೩೯॥

ಅಯ್ಯಾ ಶತ್ರು ಸಂಹಾರಕನೆ! ಈ ವಿದ್ಯೆಯು ಪ್ರಾಪ್ತಿಯಲ್ಲಿ, ಕಾಮಕ್ರೋಧಾದಿಗ
ಶತ್ರುಗಳಾಗಿರುವುವು. ಅದರೊಳಗೂ, ಕ್ರೋಧವೊಂದೇ ಮೋಕ್ಷವಿಘ್ನಕ್ಕೆ ಸರ್ವದಾ ಸಾಕಾ
ರುವುದು ॥೪೦॥

ಲೋಕದಲ್ಲಿ, ಮನಸ್ಸಿನ ಸಂತಾಪವೆಲ್ಲವೂ ಕ್ರೋಧಮೂಲಕವಾದುದು; ಕ್ರೋಧಃ
ಸಂಸಾರಬಂಧವನ್ನುಂಟುಮಾಡತಕ್ಕುದು; ಕ್ಷೋಧವೇ ಧರ್ಮಹಾನಿಯನ್ನುಂಟುಮಾಡತಕ್ಕುದ
ಆದುಕಾರಣ, ಕ್ರೋಧವನ್ನು ಸರ್ವದಾ ಪರಿತ್ಯಜಿಸಬೇಕು ॥೪೧॥

ಕ್ರೋಧವೇ ಸಾಕ್ಷಾತ್ ಯಮನು; ತೃಷ್ಣೆಯೇ ವೈತರಣೀನದಿಯು; ಸಂತೋಷಃ
ನಂದನವನವು; ಶಾಂತಿಯೇ ಕಾಮಧೇನುವು ॥೪೨॥

ಲೋಕದಲ್ಲಿ, ಸ್ತ್ರೀಯರಿಗಾಗಲಿ–ಪುರುಷರಿಗಾಗಲಿ–ಕ್ಷಮೆಯೇ ಅಲಂಕಾರವು. ಹೆ
ವತ್ಸ! ಕ್ಷಮೆಯೇ ದಾನವು; ಕ್ಷಮೆಯೇ ಯಜ್ಞವು; ಕ್ಷಮೆಯೇ ಸತ್ಯವು: ಕ್ಷಮೆಯೇ ಯಶಸ್ಸು
ಕ್ಷಮೆಯೇ ಧರ್ಮವು; ಕ್ಷಮೆಯಲ್ಲಿಯೇ ಸಮಸ್ತ ಜಗತ್ತೂ ನೆಲೆಸಿರುವುದು, ಹೀಗಿರುವುದರಿಂ
ನೀನು ಈಗ ಶಾಂತಿಯನ್ನು ಹೊಂದುವನಾಗು. ಹೀಗೆ ಮಾಡಿದೆಯಾದರೆ, ಈ ಲೋಕದಲ್ಲೆ
ನಿನಗೆ ಶತ್ರುವೇ ಇರಲಾರನು ॥೪೩—೪೪॥

ಪ್ರಾರಬ್ಧಕರ್ಮವು ಸುಖವಾಗಲಿ–ಅಥವಾ ದುಃಖವಾಗಲಿ–ಅದನ್ನನುಭವಿಸುತ, ಪ್ರವ
ಹವಾಪ್ತವಾದ ಕರ್ಮಗಳನ್ನು ಮಾಡುತಿದ್ದರೂ, ನೀನು ಅದರಿಂದ ಲಿಪ್ತನಾಗದಿರುವೆ ॥೪೫

ಕೃತಾನ್ತಸ್ತ್ವೇವ ಸೌಮಿತ್ರೇ ದ್ರಷ್ಟವ್ಯೋ ಮತ್ಪ್ರವಾಸನೇ ।
ರಾಜ್ಯಸ್ಯ ಚ ವಿತೀರ್ಣಸ್ಯ ಪುನರೇವ ನಿವರ್ತನೇ ॥೪೬॥

ಕೈಕೇಯ್ಯಾಃ ಪ್ರತಿಪತ್ತಿರ್ಹಿ ಕಥಂ ಸ್ಯಾನ್ಮಮ ಪೀಡನೇ ।
ಯದಿ ಭಾವೋ ನ ದೈವೋಽಯಂ ಕೃತಾನ್ತವಿಹಿತೋ ಭವೇತ್ ॥೪೭॥

ಸೋಽಭಿಷೇಕನಿವೃತ್ತ್ಯರ್ಥೈಃ ಪ್ರವಾಸಾರ್ಥೈಶ್ಚ ದುರ್ವಚೈಃ ।
ಉಗ್ರೈರ್ವಾಕ್ಯೈರಹಂ ತಸ್ಯಾಃ ನಾನ್ಯದ್ದೈವಾತ್ ಸಮರ್ಥಯೇ ॥೪೮॥

ಯದಜೆನ್ತ್ಯಂ ಚ ತದ್ದೈವಂ ಭೂತೇಷ್ವಪಿ ನ ಹನ್ಯತೇ ।
ವ್ಯಕ್ತಂ ಮಯಿ ಚ ತಸ್ಯಾಂ ಚ ಪತಿತೋ ಹಿ ವಿಪರ್ಯಯಃ ॥೪೯॥

ಕಚ್ಚಿದ್ದೈವೇನ ಸೌಮಿತ್ರೇ ಯೋಽದ್ಯ ಮುತ್ಸಹತೇ ಪುಮಾನ್ ।
ಯಸ್ಯ ನ ಗ್ರಹಣಂ ಕಿಞ್ಚಿತ್ ಕರ್ಮಣೋಽನ್ಯತ್ರ ದೃಶ್ಯತೇ ॥೫೦॥

ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ ।
ಯಚ್ಚ ಕಿಞ್ಚಿತ್ ತದಾ ನೂನಂ ನನು ದೈವಸ್ಯ ಕರ್ಮ ತತ್ ॥೫೧॥

ಎಲೈ ಸುಮಿತ್ರಾಪುತ್ರನೆ! ನನ್ನನ್ನು ಅರಣ್ಯಕ್ಕೆ ಕಳುಹಿಸುವುದರಲ್ಲಿಯೂ ಕೂಡ, ವಿಧಿಯೇ ಮುಖ್ಯಕಾರಣವೆಂದು ತಿಳಿಯಲ್ಪಡಬೇಕು ॥೪೬॥

ಈ ಕೆಲಸವು ವಿಧಿವಿಹಿತವಾಗಿ ದೈವಿಕವಾಗಿಲ್ಲದಿದ್ದಪಕ್ಷದಲ್ಲಿ, ಕೈಕೇಯಿಯಾದೇವಿಗೆ ನನ್ನನ್ನು ಪೀಡಿಸುವುದರಲ್ಲಿ ಇಷ್ಟು ಶ್ರದ್ಧೆ ಹೇಗುಂಟಾಗುತಿದ್ದಿತು? ॥೪೭॥

ಹೀಗೆ ಅವಳಿಂದ ಅಭಿಷೇಕನಿವರ್ತನಾರ್ಥವಾಗಿಯೂ ಅರಣ್ಯವಾಸಾರ್ಥವಾಗಿಯೂ ಹೇಳಲ್ಪಟ್ಟ–ಎಂದಿಗೂ ಅವಳ ಬಾಯಲ್ಲಿ ಹೊರಡಬಾರದ–ಕ್ರೂರವಚನಗಳಿಂದ ಪೀಡಿತನಾದ ನಾನು, ಈವಿಷಯದಲ್ಲಿ ದೈವವನ್ನು ಬಿಟ್ಟರೆ ಮತ್ತೊಂದು ಕಾರಣವನ್ನೂ ಯೋಚಿಸಲಾರೆನು ॥೪೮॥

ಯಾವುದು ನಮ್ಮ ಆಲೋಚನಾಪಥಕ್ಕೆ ವಿಷಯವಾಗುವುದೋ, ಅದೇ ದೈವವು. ಇದು ಸಮಸ್ತ ಭೂತಗಳಲ್ಲಿಯೂ ತಡೆಯಿಲ್ಲದಿರುವುದು. ಈ ದೈವದಿಂದಲೇ, ನನ್ನಲ್ಲಿಯೂ ಕೈಕೇಯಿಯಲ್ಲಿಯೂ ಆಕಸ್ಮಿಕವಾಗಿ ಇಷ್ಟು ವ್ಯತ್ಯಾಸವುಂಟಾಗಿರುವುದು. ಇದರಿಂದಲೇ ನನ್ನ ಮಾತು ಸ್ಪಷ್ಟವಾಗುವುದಲ್ಲವೆ! ॥೪೯॥

ಹೇ ಸೌಮಿತ್ರೇ! ಯಾವ ದೈವಕ್ಕೆ–ಅದರ ಕರ್ಮ ಹೊರತು ಬೇರೆವಿಧದಲ್ಲಿ-ಗ್ರಹಣವೇ ಅಸಂಭವವೋ, ಅಂತಹ ದೈವದೊಡನೆ ಹೋರಾಡಲು ಯಾವ ಮನುಷ್ಯನಾದರೂ ಸಾಹಸ ಪಡುವನೆ? ॥೫೦॥

ಈ ಲೋಕದಲ್ಲಿ, ಸುಖದುಃಖಗಳಾಗಲಿ-ಭಯಕ್ರೋಧಗಳಾಗಲಿ-ಲಾಭನಷ್ಟಗಳಾಗಲಿ–ಉತ್ಪತ್ತಿ ಲಯಗಳಾಗಲಿ–ಯಾವುದುಂಟಾಗುವುದೋ, ಅದೆಲ್ಲವೂ ಆಗ ದೈವದಿಂದಲೇ ಉಂಟಾಗತಕ್ಕುದಲ್ಲವೆ! ॥೫೧॥

ಅಸಙ್ಕಲ್ಪಿತಮೇವೇಹ ಯದಕಸ್ಮಾತ್ ಪ್ರವರ್ತತೇ ।
ನಿವರ್ತ್ಯಾರಮ್ಭವಾರಬ್ಧಂ ನನು ದೈವಸ್ಯ ಕರ್ಮ ತತ್ ॥೫೦॥
ವತ್ಸ ಚ ಲಕ್ಷ್ಮಣ ಸನ್ತಾಪಂ ಕಾರ್ಷೀರ್ಲಕ್ಷ್ಮ್ಯಾವಿಪರ್ಯಯೇ ।
ರಾಜ್ಯಂ ವಾ ವನವಾಸೋ ವಾ ವನೇ ವಾಸೋ ಮಹೋದಯಃ ॥೫೧॥
ಯತ್ ತನ್ಮಯೋದಿತಂ ಸರ್ವಂ ಹೃದಿ ಭಾವಯ ಸರ್ವದಾ ।
ಸಂಸಾರದುಃಖೈರಖಿಲೈಃ ಬಾಧ್ಯಸೇ ನ ಕದಾಚನ ॥೫೨॥
ತ್ವಮಪ್ಯಮ್ಬ ಮಯಾದಿಷ್ಟಂ ಹೃದಿ ಭಾವಯ ನಿತ್ಯಶಃ ।
ಮದಾಗಮಂ ಪ್ರತೀಕ್ಷಸ್ವ ನ ದುಃಖೈಃ ಪೀಡ್ಯಸೇ ಚಿರಮ್ ॥೫೩॥
ಮಾತರಂ ಲಕ್ಷ್ಮಣಂ ಚೈವ ಸಮಾಶ್ವಾಸ್ಯ ಪುನಃಪುನಃ ।
ಸನ್ತೋಷೋತ್ಸಾಹಜನನಂ ಇದಂ ಚಾಹ ವಚಃ ಪುನಃ ॥೫೪॥

ಇತಿ ಶ್ರೀಮದಯೋಧ್ಯಾಕಾಣ್ಡೇ ಲಕ್ಷ್ಮಣಂ ಪ್ರತಿ ರಾಮೋಕ್ತ
ತತ್ತ್ವೋಪದೇಶಕಥನಂ ನಾಮ ಆಷ್ಟಮಃ ಸರ್ಗಃ.



ಈ ಪ್ರಪಂಚದಲ್ಲಿ, ಮನುಷ್ಯನು ತಾನು ಪ್ರಾರಂಭಿಸಿರುವ ಕೆಲಸವನ್ನು ಬಿಟ್ಟುಬಿಟ್ಟು ತನ್ನ ಮನಸ್ಸಿನಲ್ಲಿ ಸುತರಾಂ ಯೋಚಿಸಲ್ಪಡದಿರುವ ಕೆಲಸದಲ್ಲಿ ಪ್ರವರ್ತಿಸುವನೆಂಬುದಾವುದುಂಟೋ, ಇದು ದೈವದ ವ್ಯಾಪಾರವಲ್ಲವೆ! ॥೫೦॥


ವತ್ಸ! ಲಕ್ಷ್ಮಣ! ನನಗೆ ಈಗ ಪ್ರಾಪ್ತವಾಗಿದ್ದ ರಾಜ್ಯಲಕ್ಷ್ಮಿಯು ತಪ್ಪಿಹೋದ ವಿಷಯದಲ್ಲಿಯೂ ನೀನು ಸುತರಾಂ ವ್ಯಸನಪಡಬೇಡ. ನನಗೆ ರಾಜ್ಯವೂ ಒಂದೇ,—ವನವಾಸವೂ ಒಂದೇ. ಚೆನ್ನಾಗಿ ಯೋಚಿಸಿದರೆ, ವನವಾಸವೇ ದೊಡ್ಡ ಅಭ್ಯುದಯವೆಂದು ತೋರುವುದು॥೫೨॥

ಈಗ ನನ್ನಿಂದ ಹೇಳಲ್ಪಟ್ಟಿದಾವುದುಂಟೋ, ಅದೆಲ್ಲವನ್ನೂ ನೀನು ಸರ್ವದಾ ಹೃದಯದಲ್ಲಿ ಮನನಮಾಡುತ್ತಿರು. ಹೀಗೆ ಮಾಡಿದರೆ, ಈ ಸಮಸ್ತವಾದ ಸಂಸಾರದುಃಖಗಳಿಂದಲೂ ಯಾವಾಗಲೂ ನೀನು ಪೀಡಿಸಲ್ಪಡುವುದಿಲ್ಲ ॥೫೪॥


ಅಂಬ! ನೀನೂ ಕೂಡ, ನನ್ನಿಂದ ಹೇಳಲ್ಪಟ್ಟ ವಿಷಯಗಳನ್ನು ಸರ್ವದಾ ಹೃದಯದಲ್ಲಿ ಮನನಮಾಡುತ, ನನ್ನ ಆಗಮನವನ್ನು ನಿರೀಕ್ಷಿಸಿಕೊಂಡಿರು. ಹೀಗಿದ್ದರೆ, ನೀನು ಬಹಳಕಾಲ ಈ ವ್ಯಸನಕ್ಕೆ ಒಳಗಾಗದಿರುವೆ ॥೫೫॥

ಹೀಗೆಂದು ಹೇಳಿ, ಆ ರಾಮಚಂದ್ರನು, ತಾಯಿಯನ್ನೂ ಲಕ್ಷ್ಮಣನನ್ನೂ ಪುನಃಪುನಃ ಸಮಾಧಾನಪಡಿಸಿ, ಮತ್ತೆ ಸಂತೋಷವನ್ನೂ ಉತ್ಸಾಹವನ್ನೂ ಹುಟ್ಟಿಸುವ ಈ ಮಾತನ್ನು ಹೇಳಿದನು ॥೫೬॥

ಇದು ಅಯೋಧ್ಯಾಕಾಂಡದಲ್ಲಿ ಲಕ್ಷ್ಮಣನಿಗೆ ಶ್ರೀರಾಮನು ಮಾಡಿದ
ತತ್ತ್ವೋಪದೇಶಕಥನವೆಂಬ ಎಂಟನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ನವಮಃ ಸರ್ಗಃ.



ಶ್ರೀರಾಮ ಉವಾಚ.

ಚತುರ್ದಶ ಸಮಾನಮ್ಯಂ ಚತುರ್ದಶದಿನೋಪಮಾಃ ।
ಇತಿ ಜಾನಕ್ಷ ಪ್ರವಿಶ್ಯಾಶು ವರವ್ಯಾಜೇನ ತದ್ವನಮ್ ॥೧॥
ಹತ್ವಾ ರಾಕ್ಷಸಕೋಟೀಶ್ಚ ವನವಾಸಾದಿಕಣ್ಟಕಾನ್ ।
ಮುನೀನಾಮಭಯಂ ದತ್ವಾ ಭಯಹರ್ತಾಸ್ಮಿ ತದ್ವನೇ ॥೨॥
ಮಹಾಬಲಂ ಮಹಾವೀರಂ ಹತ್ವಾ ವಾಲಿನಮಾಹವೇ ।
ಲಬ್ಧ್ವಾ ಸಹಾಯಂ ಸುಗ್ರೀವಂ ತಸ್ಯ ರಾಜ್ಯೇಭಿಷಿಚ್ಯ ಚ ॥೩॥
ವಾನರೈಃ ಪರ್ವತಾಕಾರೈಃ ಅಮಾನುಷಪರಾಕ್ರಮೈಃ ।
ಹನೂಮತ್ಪ್ರಮುಖೈರ್ವೀರೈಃ ಸುಗ್ರೀವೇಣಾಪಿ ಸಙ್ಗತಃ ॥೪॥
ಸೇತುಂ ಬಧ್ವಾ ಸಮುದ್ರೇ ತು ಹತ್ವಾ ರಾವಣಮಾಹವೇ ।
ಕುಮ್ಭಕರ್ಣಂ ಚ ದುರ್ಧರ್ಷಂ ಸಪುತ್ರಾಮಾತ್ಯಬಾನ್ಧವಮ್ ॥೫॥
ವಿಭೀಷಣಾಯ ತದ್ರಾಜ್ಯಂ ದತ್ವಾ ಭಕ್ತ್ಯಾ ಮಯ್ಯಲಮ್ ।
ಸ್ಥಾಪಯಿತ್ವಾ ನೃಲೋಕೇಸ್ಮಿನ್ ಕೀರ್ತಿಮಾಚನ್ದ್ರತಾರಕಮ್ ॥೬॥

ಅಯೋಧ್ಯಾಕಾಂಡದಲ್ಲಿ ಒಂಭತ್ತನೆಯ ಸರ್ಗವು.

ಶ್ರೀರಾಮನು ಪುನಃ ಲಕ್ಷ್ಮಣನನ್ನು ಕುರಿತು ಹೇಳಿದುದೇನೆಂದರೆ:—

ವತ್ಸ! ಲಕ್ಷ್ಮಣ!—ಅಂಬ! ಕೌಸಲ್ಯೆ! ನನಗೆ ನಮ್ಮಪ್ಪನು ವಿಧಿಸಿರುವ ವನವಾಸವು, ಅಷ್ಟೇನೂ ಕಷ್ಟತರವಾಗಿಲ್ಲ. ಹದಿನಾಲ್ಕುವರ್ಷಗಳು ಮಾತ್ರವೇ ವಿಧಿಸಲ್ಪಟ್ಟಿರುವುವು. ಈ ಹದಿನಾಲ್ಕು ವರ್ಷಗಳೂ ನನಗೆ ಹದಿನಾಲ್ಕುದಿವಸಗಳ ಹಾಗೆಂದು ತಿಳಿದು, ಕೈಕೇಯಿಯು ವರವನ್ನು ನಿಮಿತ್ತಮಾಡಿಕೊಂಡು ಅರಣ್ಯಕ್ಕೆ ಪ್ರವೇಶಿಸಿ, ವನವಾಸಾದಿಗಳಿಗೆ ಕಂಟಕಭೂತರಾದ ರಾಕ್ಷಸಕೋಟಿಗಳನ್ನು ಸಂಹರಿಸಿ, ಮುನಿಗಳಿಗೆಲ್ಲ ಅಭಯಪ್ರದಾನಮಾಡಿ, ಆ ಅರಣ್ಯದಲ್ಲಿರುವ ಭಯವನ್ನು ಹೋಗಲಾಡಿಸುವೆನು ॥೧—೨॥

ಮಹಾಬಲನೂ ಮಹಾವೀರನೂ ಆದ ವಾಲಿಯನ್ನು ಯುದ್ಧದಲ್ಲಿ ಕೊಂದು, ಸುಗ್ರೀವನನ್ನು ಸಹಾಯುವನ್ನಾಗಿ ಪಡೆದು, ಅವನನ್ನು ವಾಲಿಯ ರಾಜ್ಯದಲ್ಲಿ ಅಭಿಷೇಕಮಾಡಿ, ಪರ್ವತಸಮಾನಾಕಾರನಾಗಿಯೂ ಅಮಾನುಷಪರಾಕ್ರಮನಾಗಿಯೂ ಮಹಾವೀರನಾಗಿಯೂ ಇರುವ ಹನುಮಂತ ಮೊದಲಾದ ವಾನರರೊಡನೆಯೂ ಸುಗ್ರೀವನೊಡನೆಯೂ ಕೂಡಿಕೊಂಡವನಾಗಿ, ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿ, ಯುದ್ಧದಲ್ಲಿ ರಾವಣನನ್ನು ಕೊಂದು, ದುರ್ಧರ್ಷನಾದ ಕುಂಭಕರ್ಣನನ್ನೂ ಪುತ್ರ ಮಂತ್ರಿ ಬಂಧುಸಹಿತವಾಗಿ ಸಂಹರಿಸಿ, ನನ್ನಲ್ಲಿ ವಿಶೇಷ ಭಕ್ತಿಯುಕ್ತನಾದ ವಿಭೀಷಣನಿಗೆ ಆ ರಾವಣನ ರಾಜ್ಯವನ್ನು ಕೊಟ್ಟು, ಈ ಭೂಲೋಕದಲ್ಲಿ ಆಚಂದ್ರತಾರಕವಾಗಿ ಕೀರ್ತಿಯನ್ನು ಸ್ಥಿರಗೊಳಿಸಿ, ನನಗೆ ಭೃತ್ಯನಂತಿರುವ ವಿಭೀಷಣನೊಡನೆಯೂ-ಕಾಮ್ಯ

ವಿಭೀಷಣೇನ ಭೃತ್ಯೇನ ರಾಕ್ಷಸೈಃ ಕಾಮರೂಪಿಭಿಃ ।
ಸುಗ್ರೀವೇಣ ಚ ಮಾನ್ಯೇನ ವಾನರೈಃ ಪರ್ವತೋಪಮೈಃ ॥೬॥
ಪುಷ್ಪಕಂ ತತ್ ಸಮಾರುಹ್ಯ ಭರತಸ್ಯಾನ್ತಿಕಂ ಗತಃ ।
ನನ್ದಿಗ್ರಾಮೇ ಜಟಾಂ ಹಿತ್ವಾ ಪುನರ್ದ್ರಕ್ಷ್ಯಾಮಿ ವೋ ದೃಢಮ್ ।
ಸರ್ವಥಾ ವನವಾಸಾಯ ಗನ್ತವ್ಯಂ ಪಿತುರಾಜ್ಞಯಾ ॥೮॥
ಅತ್ಯನ್ತಂ ಮಯಿ ಭಕ್ತೇಭ್ಯೋ ಯದವೋಚನುಹಂ ಪರಮ್ ।
ಸುಗೋಪ್ಯಮಪಿ ತತ್ ಸತ್ಯಂ ಜೈತ್ರೇ ನಾಸ್ಯ ವ್ಯತಿಕ್ರಮಃ ॥೯॥

ಶ್ರೀ ಶಿವ ಉವಾಚ.

ಇತಿ ರಾಮವಚಃ ಶ್ರುತ್ವಾ ನಿಶ್ಚಯಂ ಚಕ್ರಿರೇ ಪ್ರಜಾಃ ॥೧೦॥
ಯದ್ವಕ್ತ್ರ ವಚನಂ ರಾಮೋ ಧರ್ಮಜ್ಞಃ ಸತ್ಯಸಙ್ಗರಃ ।
ಸತ್ಯಂ ತದ್ವಚನಂ ಸರ್ವಂ ರಾಮೋ ದ್ವಿರ್ನಾಭಿಭಾಷತೇ ॥೧೧॥
ತದಾ ಹಿ ರಾಮಂ ವನವಾಸನಿಶ್ಚಿತಂ ಸಮೀಕ್ಷ್ಯ ದೇವೀ ಪರಮೇಣ ಚೇತಸಾ ।
ಉವಾಚ ರಾಮಂ ಶುಭಲಕ್ಷಣಂ ವಚಃಬಭೂವ ಚ ಸ್ವಸ್ತ್ಯಯನಾಭಿಕಾಂಕ್ಷಿಣೀ ॥
ನ ಶಕ್ಯಸೇ ವಾರಯಿತುಂ ಗಚ್ಛೇದಾನೀಂ ರಘೂತ್ತಮ ।
ಶೀಘ್ರಂ ಚ ವಿನಿವರ್ತಸ್ವ ವರ್ತಸ್ವ ಚ ಸತಾಂ ಕ್ರಮೇ ॥೧೩॥

ರೂಪರಾದ ರಾಕ್ಷಸರೊಡನೆಯೂ-ಮಹಾಮಾನ್ಯನಾದ ಸುಗ್ರೀವನೊಡನೆಯೂ-ಪರ್ವತಾಕಾರರಾದ ವಾನರರೊಡನೆಯೂ- ಆ ಕುಬೇರನ ಪುಷ್ಪಕವನ್ನು ಹತ್ತಿಕೊಂಡು, ಭರತನ ಸಮೀಪಕ್ಕೆ ಬಂದವನಾಗಿ, ಆ ನಂದಿಗ್ರಾಮದಲ್ಲಿ ಜಟೆಯನ್ನು ತೆಗೆದುಬಿಟ್ಟು, ಪುನಃ ನಿಮ್ಮೆಲ್ಲರನ್ನೂ ನೋಡುವೆನು; ಇದು ನಿಶ್ಚಯವು. ಆದರೆ, ಈಗ ತಂದೆಯ ಆಜ್ಞೆಯನ್ನನುಸರಿಸಿ ನಾನು ಸರ್ವಥಾ ಅರಣ್ಯವಾಸಕ್ಕೆ ಹೋಗಿಯೇ ತೀರಬೇಕು ॥೩—೮॥

ನಾನು ನನ್ನಲ್ಲಿ ಅತಿಯಾಗಿ ಭಕ್ತಿಯುಳ್ಳವರಿಗೆ ಯಾವುದೊಂದು ಮುಖ್ಯರಹಸ್ಯವನ್ನು ಹೇಳಿರುವೆನೋ, ಅದನ್ನು ಎಂದಿಗೂ ಮನಸ್ಸಿನಲ್ಲಿಯೇ ಗೋಪ್ಯವಾಗಿಟ್ಟಿರಬೇಕು; ಇದನ್ನು ವಿಚಾರಬಾರದು ॥೯॥

ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು:—

ಎಲೌ ಪಾರ್ವತಿ! ಈರೀತಿಯಾಗಿ ಹೇಳಿದ ಶ್ರೀರಾಮನ ಮಾತನ್ನು ಕೇಳಿ, ಆಗ ಸಮಸ್ತ ಪ್ರಜೆಗಳೂ 'ಧರ್ಮಾತ್ಮನೂ ಸತ್ಯಸಂಗರನೂ ಆದ ಶ್ರೀರಾಮನು ಯಾವ ಮಾತನ್ನು ಹೇಳುವನೋ ಅದೆಲ್ಲವೂ ಸತ್ಯವೇ ಆಹುದು. ರಾಮನು ಎಂದಿಗೂ ಎರಡುಮಾತನ್ನು ಹೇಳುವುದಿಲ್ಲ' ಎಂದು ನಿಶ್ಚಯಮಾಡಿಕೊಂಡರು ॥೧೦—೧೧॥

ಆಗ ವನವಾಸದಲ್ಲಿ ದೃಢನಿಶ್ಚಯಮಾಡಿಕೊಂಡಿರುವ ಶ್ರೀರಾಮನನ್ನು ನೋಡಿ, ಕೌಸಲ್ಯಾದೇವಿಯು, ಅತಿ ಶ್ರೇಷ್ಠವಾದ ಹೃದಯದಿಂದ, ರಾಮನನ್ನು ಕುರಿತು ಮಂಗಳಕರವಾದ ಈ ಮಾತನ್ನು ಹೇಳಿದಳು; ಮತ್ತು, ಅವನಿಗೆ ಸ್ವಸ್ತ್ಯಯನವನ್ನೂ ಹರಸಿದವಳಾದಳು ॥೧೨॥

ಆಗ ಕೌಸಲ್ಯೆ ಹೇಳಿದುದೇನೆಂದರೆ,—ಎಲೈ ರಘೂತ್ತಮನೆ! ನಿನ್ನನ್ನು ತಡೆಯುವುದು ಅಸಾಧ್ಯವಾಗಿರುವುದು. ಈಗ ನೀನು ಸುಖವಾಗಿ ಹೋಗಿಬಾ; ಬೇಗನೆ ಹಿಂದಿರುಗಿ ಬರುವನಾಗು. ಮತ್ತು, ಸತ್ಪುರುಷರ ಮಾರ್ಗದಲ್ಲಿಯೇ ನೀನು ಇದ್ದುಗೊಂಡಿರು ॥೧೩॥

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ ।
ಸ ವೈ ರಾಘವಶಾರ್ದೂಲ ಧರ್ಮಸ್ತ್ವಮಭಿರಕ್ಷತು ॥೧೪॥

ಪಿತೃಶುಶ್ರೂಷಯಾ ಪುತ್ರ ಮಾತೃಶುಶ್ರೂಷಯಾ ತಥಾ ।
ಸತ್ಯೇನ ಚ ಮಹಾಬಾಹೋ ಚಿರಂ ಜೀವಾಭಿರಕ್ಷಿತಃ ॥೧೫॥

ಯನ್ಮಙ್ಗಳಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ ।
ವೃತ್ರನಾಶೇ ಸಮಭವತ್ ತತ್ ತೇ ಭವತು ಮಙ್ಗಳಮ್ ॥೧೬॥

ಯನ್ಮಙ್ಗಳಂ ಸುಪರ್ಣಸ್ಯ ವಿನತಾಕಲ್ಪಯತ್ ರಾ ।
ಅಮೃತಂ ಪ್ರಾರ್ಥಯಾನಸ್ಯ ತತ್ ತೇ ಭವತು ಮಙ್ಗಳಮ್ ॥೧೭॥

ತ್ರೀಣ್ ವಿಕ್ರಮಾನ್ ಪ್ರಕ್ರಮತೋ ವಿಷ್ಣೋರಮಿತತೇಜಸಃ ।
ಯದಾಸ್ಮೀನ್ಮಙ್ಗಳಂ ರಾಮ ತತ್ ತೇ ಭವತು ಮಙ್ಗಳಮ್ ॥೧೮॥

ಇತೀವಚಾಕ್ಯಪ್ರತಿಪೂರ್ಣಲೋಚನಾಸವಮಾಪ್ಯಚಸ್ವಸ್ತ್ಯಯನಂಯಥಾವಿಧಿ ।
ಪ್ರದಕ್ಷಿಣಂ ಚಾಪಿ ಚಕಾರ ರಾಘವಂ ಪುನಃಪುನಶ್ಚಾಪಿ ನಿಪೀಡ್ಯ ಸಸ್ವಜೇ ॥೧೯॥
ತಥಾ ತು ದೇವ್ಯಾ ಸ ಕೃತಪ್ರದಕ್ಷಿಣೋ ನಿಪೀಡ್ಯ ಮಾತುಶ್ಚರಣೌ ಪುನಃಪುನಃ ।
ಜಗಾಮ ಸೀತಾನಿಲಯಂಮಹಾಯಶಾಃ ಸರಾಘವಃಪ್ರಜ್ವಲಿತಃ ಸ್ವಯಾಶ್ರಿಯಾ॥

ಹೇ ರಾಘವಶಾರ್ದೂಲ! ನೀನು ಸಂತೋಷದಿಂದಲೂ ನಿಯಮದಿಂದಲೂ ಯಾವ ಧರ್ಮವನ್ನು ಕಾಪಾಡಿಕೊಂಡು ಬರುತ್ತಿರುವೆಯೋ, ಆ ಧರ್ಮವೇ ನಿನ್ನನ್ನು ರಕ್ಷಿಸಲಿ ॥೧೪॥

ಹೇ ಪುತ್ರ! ಪಿತೃಶುಶ್ರೂಷೆಯಿಂದಲೂ, ಮಾತೃಶುಶ್ರೂಷೆಯಿಂದಲೂ, ಸತ್ಯದಿಂದಲೂ ಕಾಪಾಡಲ್ಪಟ್ಟವನಾಗಿ, ನೀನು ಬಹುಕಾಲ ಬಾಳು ॥೧೫॥

ವೃತ್ರಾಸುರನ ಸಂಹಾರಕಾಲದಲ್ಲಿ, ಸರ್ವದೇವನಮಸ್ಕೃತನಾದ ಸಹಸ್ರಾಕ್ಷನಿಗೆ ಯಾವ ಮಂಗಳವುಂಟಾಯಿತೋ, ಈಗ ನನಗೆ ಆ ಮಂಗಳವುಂಟಾಗಲಿ ॥೧೬॥

ಪೂರ್ವದಲ್ಲಿ ಅಮೃತಾಹರಣಮಾಡಲು ಹೊರಟ ಗರುಡನಿಗೆ ವಿನತಾದೇವಿಯು ಯಾವ ಮಂಗಳವನ್ನು ವಿರಚಿಸಿದಳೋ, ಈಗ ನಿನಗೆ ಆ ಮಂಗಳವುಂಟಾಗಲಿ ॥೧೭॥

ಹೇ ರಾಮ! ತ್ರಿವಿಕ್ರಮಾವತಾರ ಮಾಡಿದಾಗ ಅಪರಿಮಿತತೇಜಶ್ಶಾಲಿಯಾದ ಶ್ರೀಮನ್ನಾರಾಯಣನಿಗೆ ಯಾವ ಮಂಗಳವುಂಟಾಯ್ತೋ, ಅಂತಹ ಮಂಗಳವು ಈಗ ನಿನಗೆ ಉಂಟಾಗಲಿ॥

ಈರೀತಿಯಾಗಿ ಆ ಕೌಸಲ್ಯೆಯು ಅಶ್ರುಪೂರಿತ ನೇತ್ರಳಾಗಿ, ಯಥಾವಿಧಿಯಾಗಿ ಸ್ವಸ್ತ್ಯಯನವನ್ನೆಲ್ಲ ಮುಗಿಯಿಸಿ, ಶ್ರೀರಾಮನನ್ನು ಪ್ರದಕ್ಷಿಣೆಮಾಡಿದಳು; ಮತ್ತು ಪುನಃಪುನಃ ಬಿಗಿದಪ್ಪಿಕೊಂಡಳು ॥೧೯॥

ಈರೀತಿಯಾಗಿ ತಾಯಿಯಿಂದ ಪ್ರದಕ್ಷಿಣೆಮಾಡಲ್ಪಟ್ಟ ಮಹಾಯಶಸ್ವಿಯಾದ ಆ ಶ್ರೀರಾಮಚಂದ್ರನು, ಮತ್ತೆಮತ್ತೆ ಅವಳ ಕಾಲುಗಳನ್ನು ಹಿಡಿದುಕೊಂಡು ನಮಸ್ಕರಿಸಿ, ಸ್ವಕೀಯವಾದ ಕಾಂತಿಯಿಂದ ಪ್ರಜ್ವಲಿಸುತ, ಸೀತೆಯ ಅಂತಃಪುರವನ್ನು ಕುರಿತು ಹೊರಟನು ॥

ಪ್ರವಿವೇಶಾಥ ರಾಮಸ್ತು ಸ್ವವೇಶ್ಮ ಸುವಿಭೂಷಿತಮ್ ।
ಪ್ರಹೃಷ್ಟಜನಸಂಪೂರ್ಣಂ ನಾನಾರತ್ನಪರಿಷ್ಕೃತಮ್ ।
ಪ್ರವಿಶ್ಯ ತು ಮಹದ್ವೇಶ್ಮ ಸೀತಾಂ ಪ್ರೋವಾಚ ರಾಘವಃ ॥೦೧॥

ರಾಜ್ಞಾ ಸತ್ಯಪ್ರತಿಜ್ಞೇನ ಪಿತ್ರಾ ದಶರಥೇನ ಮೇ ।
ಕೈಕೇಯ್ಯೈ ಪ್ರೀತಮನಸಾ ಪುರಾ ದತ್ತೌ ಮಹಾವರೌ ॥೦೨॥

ತಯಾದ್ಯ ಮಮ ಸಜ್ಜೇಽಸ್ಮಿನ್ ಅಭಿಷೇಕೇ ನೃಪೋದ್ಯತೇ ।
ಪ್ರಚೋದಿತಸ್ತು ಸಮಯೋ ಧರ್ಮೇಣ ಪ್ರತಿನಿರ್ಜಿತಃ ॥೦೩॥

ಚತುರ್ದಶ ಹಿ ವರ್ಷಾಣಿ ವಸ್ತವ್ಯಂ ದಂಡಕೇ ಮಯಾ ।
ಪಿತ್ರಾ ಮೇ ಭರತಶ್ಚಾಪಿ ಯೌವರಾಜ್ಯೇ ನಿಯೋಜಿತಃ ॥೦೪॥

ಸೋಹಂ ತ್ವಾಮಾಗತೋ ದ್ರಷ್ಟುಂ ಪ್ರಸ್ಥಿತೋ ವಿಜನಂ ವನಮ್ ॥೦೫॥

ಅಹಂ ಚಾಪಿ ಪ್ರತಿಜ್ಞಾಂ ತಾಂ ಗುರೋಃ ಸಮನುಪಾಲಯನ್ ।
ವನಮದ್ಯೈವ ಯಾಸ್ಯಾಮಿ ಸ್ಥಿರಾ ಭವ ಮನಸ್ವಿನಿ ॥೦೬॥

ಯಾತೇ ಚ ಮಯಿ ಕಲ್ಯಾಣಿ ವನಂ ಮುನಿನಿಷೇವಿತಮ್ ।
ವ್ರತೋಪವಾಸರತಯಾ ಭವಿತವ್ಯಂ ತ್ವಯಾನಘೇ ॥೦೭॥

ಬಳಿಕ, ಆ ರಾಮನು, ಚೆನ್ನಾಗಿ ಅಲಂಕರಿಸಲ್ಪಟ್ಟುದಾಗಿಯೂ-ಹರ್ಷಯುಕ್ತವಾದ ಜನರಿಂದ ಪರಿಪೂರ್ಣವಾಗಿಯೂ-ನಾನಾವಿಧ ರತ್ನಗಳಿಂದ ಪರಿಷ್ಕೃತವಾಗಿಯೂ ಇರುವ ತನ್ನ ಅರಮನೆಯನ್ನು ಪ್ರವೇಶಿಸಿದವನಾಗಿ, ಸೀತೆಯನ್ನು ಕುರಿತು ಹೀಗೆ ಹೇಳಿದನು ॥೦೧॥

ಎಲೌ! ಸೀತೆ! ಸತ್ಯಪ್ರತಿಜ್ಞನಾದ ನಮ್ಮ ತಂದೆಯಾದ ದಶರಥಮಹಾರಾಜನು, ಪೂರ್ವದಲ್ಲಿ ಸಂತುಷ್ಟಹೃದಯನಾಗಿ ಕೈಕೇಯಿಗೆ ಎರಡುವರಗಳನ್ನು ಕೊಟ್ಟಿದ್ದನು ॥೦೨॥

ಆ ಕೈಕೇಯಿಯು, ರಾಜನಿಂದ ಸಜ್ಜುಗೊಳಿಸಲ್ಪಟ್ಟಿದ್ದ ಈ ನನ್ನ ಪಟ್ಟಾಭಿಷೇಕವು ಸಿದ್ಧವಾಗಿರುವಾಗ, ಆ ಪೂರ್ವದ ಪ್ರತಿಜ್ಞೆಯನ್ನು ಪ್ರೇರಿಸಿ, ದಶರಥರಾಜನು ಧರ್ಮದಿಂದ ನಿರ್ಜಿತನಾಗುವಹಾಗೆ ಮಾಡಿಬಿಟ್ಟಳು ॥೦೩॥

ಆದುಕಾರಣ, ಈಗ ನನ್ನ ತಂದೆಯ ಆಜ್ಞೆಯನ್ನನುಸರಿಸಿ ನಾನು ಹದಿನಾಲ್ಕುವರ್ಷ ದಂಡಕಾರಣ್ಯದಲ್ಲಿ ವಾಸವಾಡಬೇಕಾಗಿರುವುದು. ನಮ್ಮ ತಂದೆಯಿಂದ ಭರತನು ಯುವರಾಜಪದವಿಯಲ್ಲಿ ನಿಯೋಗಿಸಲ್ಪಟ್ಟಿರುವನು. ಹೀಗೆ ತಂದೆಯಿಂದ ಆಜ್ಞಾಪಿತನಾಗಿರುವ ನಾನು, ನಿರ್ಜನವಾದ ಅರಣ್ಯಕ್ಕೆ ಹೊರಟವನಾಗಿ, ನಿನ್ನನ್ನು ನೋಡುವುದಕ್ಕೋಸ್ಕರ ಇಲ್ಲಿಗೆ ಬಂದಿರುವೆನು ॥೦೪-೦೫॥

ನಾನು ನಮ್ಮತಂದೆಯ ಪ್ರತಿಜ್ಞೆಯನ್ನು ಪರಿಪಾಲಿಸುತ ಈಗಲೇ ಅರಣ್ಯಕ್ಕೆ ಹೊರಡುವೆನು. ಹೇ ಮನಸ್ವಿನಿ! ನೀನು ಕಳವಳಪಡದೆ ಸ್ಥಿರಚಿತ್ತಳಾಗಿರು ॥೦೬॥

ಎಲೌ! ಮಂಗಳಾಂಗಿ! ನಿರ್ದೋಷೇ! ಮುನಿನಿಷೇವಿತವಾದ ಅರಣ್ಯಕ್ಕೆ ನಾನು ಹೊರಟುಹೋಗಲಾಗಿ, ನೀನು ವ್ರತೋಪವಾಸಗಳಲ್ಲಿ ನಿರತಳಾಗಿರತಕ್ಕುದು ॥೦೭॥

ಏವಮುಕ್ತಾ ತು ವೈದೇಹೀ ಪ್ರಿಯಾರ್ಹಾ ಪ್ರಿಯವಾದಿನೀ ।
ಪ್ರಣಯಾದೇವ ಸಙ್ಕ್ರುದ್ಧಾ ಭರ್ತಾರಮಿದಮಬ್ರವೀತ್ ॥೨೪॥

ಆದೌ ತ್ವಂ ಸೃಷ್ಟಿಕಾಲೇ ಮಾಂ ಈಕ್ಷಿತ್ವಾ ಸೃಷ್ಟಿಹೇತವೇ ।
ತ್ವತ್ತೇಜೋ ಮಯಿ ಸಂವೇಶ್ಯ ತ್ವಯೇದಂ ಮದ್ಗುಣೈಃ ಕೃತಮ್ ॥೨೫॥

ಬಹ್ಮಾ ಸೃ ಮದ್ರಜೋಯುಕ್ತಃ ಸೃಷ್ಟ್ವಾ ತ್ವಂ ಸಕಲಂ ಜಗತ್ ।
ಮತ್ಸತ್ವಗುಣತಃ ಪಶ್ಚಾತ್ ವಿಷ್ಣುಸ್ತ್ವಂ ಪಾಲ್ಯಸೇ ಜಗತ್ ॥೨೬॥

ಮತ್ತಮೋಗುಣಯೋಗೇನ ರುದ್ರಸ್ತ್ವಂ ಹಂಸ್ಯದೋ ಜಗತ್ ।
ಏವಂ ಮಯಾ ತ್ವಯಾ ರಾಮ ಜಗದೇತತ್ ಪ್ರಕಲ್ಪಿತಮ್ ॥೨೭॥

ಸೃಷ್ಟಿಸ್ಥಿತಿಲಯಾನೇವಂ ಮತ್ಸಹಾಯಾತ್ ಕರೋಷ್ಯತಃ ।
ನ ಮಾಂ ತ್ಯಕ್ತುಂ ಸಮರ್ಥಸ್ತ್ವಂ ಅಹಂ ಚ ತ್ವಾಂ ವಿನಾ ಕಥಮ್ ।
ತಸ್ಮಾನ್ನಯಾನಪಾಯಿನ್ಯಾ ಸಾಕಂ ಯಾಹಿ ವನಂ ಪ್ರಭೋ ॥೨೮॥

ಕಿಞ್ಚಾ ತೇ ರಾವಣವಧೇ ಮತ್ತೋಪಿ ಸ್ಯಾತ್ ಸಹಾಯತಾ ॥೨೯॥

ಹೀಗೆಂದು ರಾಮನಿಂದ ಹೇಳಲ್ಪಟ್ಟವಳಾಗಿ, ಪ್ರಿಯಾರ್ಹಳಾದ ಪ್ರಿಯವಾದಿನಿಯಾದ ಸೀತೆಯು, ಪ್ರಣಯಕೋಪವಮಾಡಿಕೊಂಡು, ಪತಿಯನ್ನು ಕುರಿತು ಈ ಮಾತನ್ನು ಹೇಳಿದಳು ॥೨೪॥

ಹೇ ಪ್ರಾಣನಾಥ! ನೀನು ಹೀಗೆ ಹೇಳಬಹುದೆ? ಪ್ರಥಮತಃ ಸೃಷ್ಟಿಕಾಲದಲ್ಲಿ, ಸೃಷ್ಟಿಗೋಸ್ಕರ ನೀನು ನನ್ನನ್ನು ನಿರೀಕ್ಷಿಸಿ, ನಿನ್ನ ತೇಜಸ್ಸನ್ನು ನನ್ನಲ್ಲಿ ಇರಿಸಿ, ನನ್ನ ಗುಣಗಳಿಂದಲೇ ಈ ಜಗತ್ತನ್ನು ಸೃಜಿಸಿರುವೆ ॥೨೫॥

ನೀನು ನನ್ನ ರಜೋಗುಣದಿಂದ ಯುಕ್ತನಾಗಿ, ಬ್ರಹ್ಮನೆಂದು ಹೆಸರಿಟ್ಟುಕೊಂಡು, ಈ ಸಕಲ ಜಗತ್ತನ್ನೂ ಸೃಜಿಸುವೆ, ಅನಂತರ ನನ್ನ ಸತ್ವಗುಣದಿಂದ ಯುಕ್ತನಾಗಿ, ವಿಷ್ಣುವೆಂಬ ಹೆಸರಿಟ್ಟುಕೊಂಡು, ಈ ಜಗತ್ತನ್ನು ಪಾಲಿಸುವೆ. ಆಮೇಲೆ ನನ್ನ ತಮೋಗುಣದ ಸಂಬಂಧದಿಂದ ರುದ್ರನೆಂಬ ಹೆಸರಿಟ್ಟುಕೊಂಡು, ಈ ಜಗತ್ತನ್ನು ಸಂಹರಿಸುವೆ. ಸ್ವಾಮಿ! ರಾಮಚಂದ್ರ! ಈರೀತಿಯಾಗಿ ನಾನೂ ನೀನೂ ಸೇರಿ ಈ ಜಗತ್ತನ್ನು ಕಲ್ಪಿಸಬೇಕಾಗಿರುವುದು ॥೨೦—೨೭॥

ಹೀಗೆ ನೀನೆ ನನ್ನ ಸಹಾಯದಿಂದಲೇ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುತಿರುವೆ. ಅದುಕಾರಣ, ನೀನು ನನ್ನನ್ನು ಬಿಟ್ಟಿರುವುದಕ್ಕೆ ಸಮರ್ಥನಾಗಲಾರೆ; ನಾನೂ ನಿನ್ನನ್ನು ಬಿಟ್ಟಿರಲು ಹೇಗೆ ಶಕ್ತಳಾದೇನು? ಹೀಗಿರುವುದರಿಂದ, ಹೇ ವಿಭೋ! ಎಂದಿಗೂ ನಿನ್ನನ್ನು ಬಿಡದೆಯೇ ಇರುವ ನನ್ನೊಡನೆಯೇ ಅರಣ್ಯಕ್ಕೆ ಹೋಗುವನಾಗು ॥೨೮॥

ಇದೂ ಅಲ್ಲದೆ, ರಾವಣನ ವಧೆಗೋಸ್ಕರವಲ್ಲವೆ ನೀನು ಈಗ ಅರಣ್ಯಕ್ಕೆ ಹೊರಟಿರುವುದು! ಈ ರಾವಣವಧದಲ್ಲಿಯೂ, ನನ್ನಿಂದ ನಿನಗೆ ಸಾಹ್ಯವಾಗುವುದು. ಹೀಗಿರುವುದರಿಂದ, ಎಲೈ

ತತ್ತ್ವದೃಷ್ಟ್ಯಾಪಿ ತೇ ರಾಮ ತ್ಯಕ್ತುಂ ನಾಸ್ಮ್ಯುಜಿತಾ ತವ ।
ಲೌಕಿಕೇನಾಪಿ ಮಾರ್ಗೇಣ ನ ಮಾಂ ತ್ಯಕ್ತುಮಿಹಾರ್ಹಸಿ ॥೨೪॥
ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರಸ್ತಥಾ ಸ್ನುಷಾ ।
ಸ್ವಾನಿ ಪುಣ್ಯಾನಿ ಭುಞ್ಜಾನಾಃ ಸ್ವಂಸ್ವಂ ಭಾಗ್ಯಮುಪಾಸತೇ ॥೨೫॥
ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ ।
ಅತಶ್ಚೈವಾಹಮಾದಿಷ್ಟಾ ವನೇ ವಸ್ತವ್ಯಮಿತ್ಯಪಿ ॥೨೬॥
ನ ಪಿತಾ ನಾತ್ಮಜೋ ನಾತ್ಮಾ ನ ಮಾತಾ ನ ಸಖೀಜನಃ ।
ಇಹ ಪ್ರೇತ್ಯ ಚ ನಾರೀಣಾಂ ಪತಿರೇಕೋ ಗತಿಃ ಸದಾ ॥೨೭॥
ಯದಿ ತ್ವಂ ಪ್ರಸ್ಥಿತೋ ದುರ್ಗಂ ವನಮದ್ಯೈವ ರಾಘವ ।
ಅಗ್ರತಸ್ತೇ ಗಮಿಷ್ಯಾಮಿ ಮೃದ್ನನ್ತೀ ಕುಶಕಣ್ಟಕಾನ್ ॥೨೮॥
ಇತಿ ತಂ ನಿಶ್ಚಯಂ ಜ್ಞಾತ್ವಾ ಸೀತಾಯಾರಘುನನ್ದನಃ ।
ಅಬ್ರವೀದ್ದೇವಿ ಗಚ್ಛ ತ್ವಂ ವನಂ ಶೀಘ್ರಂ ಮಯಾ ಸಹ ॥೨೯॥
ಏವಂ ಶ್ರುತ್ವಾ ತು ಸಂವಾದಂ ಲಕ್ಷ್ಮಣಃ ಪೂರ್ವಮಾಗತಃ ।
ವನವಾಸಾಯ ನಿಶ್ಚಿತ್ಯ ಸಾಕಂ ರಾಮೇಣ ಭಕ್ತಿಮಾನ್ ॥೩೦॥

ಪ್ರಾಣನಾಥನಾದ ರಾಮನೆ! ತತ್ವದೃಷ್ಟಿಯಿಂದಲೂ ನೀನು ನನ್ನನ್ನು ಬಿಡುವುದುಚಿತವಲ್ಲ; ಲೌಕಿಕಮಾರ್ಗದಲ್ಲಿಯೂ ನೀನು ನನ್ನನ್ನು ಬಿಟ್ಟುಹೋಗುವುದು ಸಮಂಜಸವಾಗಿ ಕಾಣುವುದಿಲ್ಲ ॥

ಆರ್ಯಪುತ್ರ! ಲೋಕದಲ್ಲಿ, ತಂದೆ ತಾಯಿ ಅಣ್ಣ ತಮ್ಮ ಮಗ ಸೊಸೆ–ಇವರೆಲ್ಲರೂ, ತಂತಮ್ಮ ಪುಣ್ಯಗಳನ್ನು ಭೋಗಿಸುತ, ತಂತಮ್ಮ ಭಾಗ್ಯವನ್ನು ಉಪಾಸನೆಮಾಡುವರು ॥೨೫॥

ಎಲೈ ಪುರುಷಶ್ರೇಷ್ಠನೆ! ಗಂಡನ ಭಾಗ್ಯವನ್ನು ಹೆಂಡತಿಯೊಬ್ಬಳೇ ಅನುಭವಿಸತಕ್ಕ ವಳು. ಇದರಿಂದಲೂ, ನಾನೂ ಅರಣ್ಯದಲ್ಲಿ ವಾಸಮಾಡಬೇಕೆಂದು ಆಜ್ಞಾಪಿಸಲ್ಪಟ್ಟಂತೆಯೇ ಆಯ್ತು ॥೨೬॥

ಹೆಂಗಸರಿಗೆ—ತಂದೆಯೂ ಇಲ್ಲ; ಮಗನೂ ಇಲ್ಲ; ತಾಯಿಯೂ ಇಲ್ಲ; ಸಖಿಯರೂ ಇಲ್ಲ. ಇವರಿಗೆ, ಇಹಪರಗಳೆರಡರಲ್ಲಿಯೂ ಪತಿಯೊಬ್ಬನೇ ಸರ್ವದಾ ಗತಿಯಾದವನು ॥೨೭॥

ಅದುಕಾರಣ, ಹೇ ರಾಘವ! ನೀನು ದುರ್ಗಮವಾದ ವನವನ್ನು ಕುರಿತು ಈಗಲೇ ಹೊರ ಟುಬಿಡುವೆಯಾದರೆ, ನಾನೂ ನಿನ್ನ ಮುಂದುಗಡೆ ದರ್ಭೆಗಳನ್ನೂ ಮುಳ್ಳುಗಳನ್ನೂ ನಿನ್ನ ಕಾಲಿಗೆ ಸಿಕ್ಕದಹಾಗೆ ತೆಗೆದುಹಾಕುತ ಹೊರಟುಬಿಡುವೆನು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. (ಎಂದು ಸೀತಾದೇವಿಯು ಹೇಳಿದಳು) ॥೨೮॥

ಹೀಗೆ ಹೇಳುತ್ತಿರುವ ಆ ಸೀತೆಯ ನಿಶ್ಚಯವನ್ನು ತಿಳಿದುಕೊಂಡವನಾದ ಶ್ರೀರಾಮನು, ಅವಳನ್ನು ಕುರಿತು, ‘ದೇವಿ! ಸೀತೇ! ಹಾಗಾದರೆ ನೀನೂ ನನ್ನೊಡನೆ ಬೇಗನೆ ಅರಣ್ಯಕ್ಕೆ ಹೊರ ಡುವಳಾಗು’ ಎಂದು ಹೇಳಿದನು ॥೨೯॥

ಇದೆಲ್ಲವೂ ನಡೆಯುವುದಕ್ಕಿಂತ ಮೊದಲೇ ರಾಮನೊಡನೆ ಅರಣ್ಯವಾಸಕ್ಕೆ ನಿಶ್ಚಯವಮಾ ಡಿಕೊಂಡು ಬಂದಿದ್ದ ಮಹಾಭಕ್ತಿಯುಕ್ತನಾದ ಮಹಾಯಶಸ್ವಿಯಾದ ಲಕ್ಷ್ಮಣನು, ಈ ಸೀತಾ

ಸ ಭ್ರಾತುಶ್ಚ ರಣೌ ಗಾಢಂ ನಿಪೀಡ್ಯ ರಘುನನ್ದನಃ ।
ಸೀತಾಮುವಾಚಾತಿಯಶಾಃ ರಾಘವಂ ಚ ಮಹಾಬಲಮ್ ॥೪೧॥

ಯದಿ ಗನ್ತುಂ ಕೃತಾ ಬುದ್ಧಿಃ ವನಂ ಗಜಮೃಗಾಯುತಮ್ ।
ಅಹಂ ತ್ವಾನುಗಮಿಷ್ಯಾಮಿ ವನಮಗ್ರೇ ಧನುರ್ಧರಃ ॥೪೨॥

ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ ।
ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾ ವಿನಾ ॥೪೩॥

ಕುರುಷ್ವ ಮಾಮನುಚರಂ ವೈಧರ್ಮ್ಯಂ ನೇಹ ವಿದ್ಯತೇ ।
ಕೃತಾರ್ಥೋಽಹಂ ಗಮಿಷ್ಯಾಮಿ ತವ ಚಾರ್ಥಃ ಪ್ರಕಲ್ಪ್ಯತೇ ॥೪೪॥

ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ ।
ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ ॥೪೫॥

ರಾಮಸ್ತ್ವನೇನ ವಾಕ್ಯೇನ ಸುಪ್ರೀತಃ ಪ್ರತ್ಯುವಾಚ ತಮ್ ।
ತ್ವಮಪ್ಯಾಗಚ್ಛ ಭದ್ರಂ ತೇ ಭಕ್ತಿವಾಂಸ್ತ್ವಾಂ ಯತೋ ಮಯಿ ॥೪೬॥

ರಾಮರ ಸಂವಾದವನ್ನು ಕೇಳಿದವನಾಗಿ, ತನ್ನ ಅಣ್ಣನ ಕಾಲುಗಳನ್ನು ಬಿಗಿಯಾಗಿ ಹಿಡಿದು ಕೊಂಡು, ಸೀತೆಯನ್ನೂ ಮಹಾಬಲನಾದ ರಾಮನನ್ನೂ ಕುರಿತು ಹೀಗೆ ಹೇಳಿದನು ॥೪೦—೪೧॥

ಸ್ವಾಮಿ! ರಾಮ! ದೇವಿ! ಸೀತೆ! ಗಜಗಳಿಂದಲೂ ಮೃಗಗಳಿಂದಲೂ ಪರಿಪೂರ್ಣವಾಗಿರುವ ಘೋರವಾದ ಅರಣ್ಯವನ್ನು ಕುರಿತು ಹೋಗುವುದಕ್ಕೆ ನೀವು ನಿಶ್ಚಯಮಾಡಿಬಿಟ್ಟಪಕ್ಷದಲ್ಲಿ, ನಾನು ನಿಮ್ಮ ಮುಂದುಗಡೆ ಧನುರ್ಧಾರಿಯಾಗಿ ಅನುಸರಿಸಿಕೊಂಡು ಬರುವೆನು ॥೪೨॥

ರಾಮಚಂದ್ರ! ನಾನು–ನಿನ್ನನ್ನು ಬಿಟ್ಟು–ಸ್ವರ್ಗಲೋಕವಾಪ್ತಿಯನ್ನೂ ದೇವಸಾಮ್ರಾಜ್ಯವನ್ನೂ ತ್ರಿಲೋಕೈಶ್ವರ್ಯವನ್ನೂ ಅಪೇಕ್ಷಿಸಶಕ್ಕವನಾಗಿಲ್ಲ ॥೪೩॥

ಆದುಕಾರಣ, ನೀನು ನನ್ನನ್ನು ಅನುಚರನನ್ನಾಗಿ ಮಾಡಿಕೋ; ಇದರಲ್ಲಿ ಯಾವ ದೊಂದು ಬಗೆಯ ಧರ್ಮವ್ಯತ್ಯಾಸವೂ ಇರುವುದಿಲ್ಲ. ನಾನೂ ಕೃತಾರ್ಥನಾಗಿ ನಿನ್ನ ಜೊತೆಯಲ್ಲಿ ಬರುವೆನು; ನಿನ್ನ ಕಾರ್ಯವೂ ಸಿದ್ಧಿಸುವುದು ॥೪೪॥

ನೀನು ಈ ಸೀತೆಯೊಡನೆ ಗಿರಿತಟಗಳಲ್ಲಿ ಸುಖವಾಗಿ ವಿಹರಿಸಿಕೊಂಡಿರಬಹುದು. ನೀನು ಮಲಗಿರುವಾಗಲೂ, ಎಚ್ಚರದಲ್ಲಿರುವಾಗಲೂ, ನಾನು ನಿನ್ನ ಕೆಲಸಗಳನ್ನೆಲ್ಲ ಅನಾಯಾಸವಾಗಿ ನೆರವೇರಿಸಿಕೊಂಡು ಬರುವೆನು ॥೪೫॥

ಹೀಗೆಂದು ಹೇಳುತಿರುವ ಲಕ್ಷ್ಮಣನ ವಚನದಿಂದ ಸುಪ್ರೀತನಾದ ಶ್ರೀರಾಮನು, ಆತನನ್ನು ಕುರಿತು 'ವತ್ಸ! ಲಕ್ಷ್ಮಣ! ನೀನು ನನ್ನಲ್ಲಿ ಅತಿಶಯಭಕ್ತಿಯುಳ್ಳವನಾಗಿರುವುದರಿಂದ, ನೀನೂ ನನ್ನೊಡನೆ ಬರುವನಾಗು; ನಿನಗೆ ಮಂಗಳವಾಗಲಿ. ನಾನು-ನನ್ನಿದಾಗಿ ಈ ಧನವಾವುದಿ

ಅಹಂ ಪ್ರದಾತುಮಿಚ್ಛಾಮಿ ಯದಿದಂ ಮಾಮಕಂ ಧನಮ್ ।
ಬ್ರಾಹ್ಮಣೇಭ್ಯಸ್ತಪಸ್ವಿಭ್ಯಃ ತ್ವಯಾ ಸಹ ಪರಂತಪ ॥೪೩॥
ಉಕ್ತ್ವೈವಂ ತ್ವರಯಾ ರಾಮೋ ಗೃಹೀತ್ವಾ ಧನಮುತ್ತಮಮ್ ।
ವಸಿಷ್ಠಾದೀ೯ ನಮಸ್ಕೃತ್ಯ ದದೌ ತೇಭ್ಯೋ ಧನಂ ಬಹು ॥೪೪॥

ಇತಿ ಶ್ರೀಮದಯೋಧ್ಯಾಕಾಣ್ಡೇ ರಾಮಸ್ಯ ವನವಾಸಪ್ರತಿಜ್ಞಾ
ನಾಮ ನವಮಃ ಸರ್ಗಃ.



ರುವುದೋ,–ಅದೆಲ್ಲವನ್ನೂ–ದೀನರಾದ ಬ್ರಾಹ್ಮಣರಿಗೆ ನಿನ್ನೊಡನೆ ದಾನಮಾಡಲಿಚ್ಛಿಸುವೆನು' ಎಂದು ಹೇಳಿ, ಜಾಗ್ರತೆಯಿಂದ ತನ್ನ ಧನವನ್ನೆಲ್ಲ ತರಿಸಿಕೊಂಡು, ವಸಿಷ್ಠಮೊದಲಾದ ಬ್ರಾಹ್ಮಣರನ್ನು ಕರೆಯಿಸಿ, ಅವರಿಗೆ ನಮಸ್ಕಾರಮಾಡಿ, ಅವರಿಗೆಲ್ಲ ಅತ್ಯಧಿಕವಾಗಿ ಧನವನ್ನು ದಾನ ಮಾಡಿದನು ॥೪೬—೪೮॥

ಇದು ಅಯೋಧ್ಯಾಕಾಂಡದಲ್ಲಿ ಶ್ರೀರಾಮನ ವನವಾಸಪ್ರತಿಜ್ಞೆಯೆಂಬ
ಒಂಭತ್ತನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ದಶಮಃ ಸರ್ಗಃ.

ಶ್ರೀ ಶಿವ ಉವಾಚ.

ವಿನಿಯುಜ್ಯ ಧನಂ ಸರ್ವಂ ಸತ್ಪಾತ್ರೇ ರಘುನನ್ದನಃ ।
ಪಿತೃವೇಶ್ಮ ಜಗಾವಾಥ ಸೀತಾಲಕ್ಷ್ಮಣಸಂಯುತಃ ॥೧॥
ಪದಾತಿಂ ವರ್ಜಿತಚ್ಛತ್ರಂ ದೃಷ್ಟ್ವಾ ರಾಮಂ ಜನಾಸ್ತದಾ ।
ಊಚುರ್ಬಹುವಿಧಾವಾಚಃ ಶೋಕೋಪಹತಚೇತಸಃ ॥೨॥
ಯಂ ಯಾನ್ತಮನುಯಾತಿ ಸ್ಮ ಚತುರಙ್ಗಬಲಂ ಮಹತ್ ।
ತಮೇಕಃ ಸೀತಯಾಸಾರ್ಧಂ ಅನುಯಾತಿಸ್ಮ ಲಕ್ಷ್ಮಣಃ ॥೩॥
ಐಶ್ವರ್ಯಸ್ಯ ರಸಜ್ಞಃ ಸ್ಯಾ ಕಾಮಿನಾಂ ಚೈವ ಕಾಮದಃ ।
ನೇಚ್ಛತ್ಯೇವಾನೃತಂ ಕರ್ತುಂ ಪಿತರಂ ಧರ್ಮಗೌರವಾತ್ ॥೪॥
ಯಾ ನ ಶಕ್ಯಾ ಪುರಾ ದ್ರಷ್ಟುಂ ಭೂತೈರಾಕಾಶಗೈರಪಿ ।
ತಾಮದ್ಯ ಸೀತಾಂ ಪಶ್ಯನ್ತಿ ರಾಜಮಾರ್ಗಗತಾಜನಾಃ ॥೫॥

ಅಯೋಧ್ಯಾಕಾಂಡದಲ್ಲಿ ಹತ್ತನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಪಾರ್ವತೀದೇವಿಯನ್ನು ಕುರಿತು ಹೇಳುವನು:—

ಎಲೌ ದೇವಿ! ಈರೀತಿಯಾಗಿ ಆ ರಘುನಾಥನು ತನ್ನ ಧನವನ್ನೆಲ್ಲ ಸತ್ಪಾತ್ರದಲ್ಲಿ ವಿನಿಯೋಗಿಸಿ, ಅನಂತರ ಸೀತೆಯನ್ನೂ ಲಕ್ಷ್ಮಣನನ್ನೂ ಜತೆಯಲ್ಲಿ ಕರೆದುಕೊಂಡು ತಂದೆಯ ಮನೆಗೆ ಹೋದನು ॥೧॥

ಆಗ, ಛತ್ರವನ್ನು ಬಿಟ್ಟು ಕಾಲುನಡಿಗೆಯಿಂದ ಹೋಗುತಿರುವ ರಾಮನನ್ನು ಕಂಡು, ಜನರೆಲ್ಲರೂ ಶೋಕಾಕ್ರಾಂತಚಿತ್ತರಾಗಿ ಹೀಗೆ ನಾನಾವಿಧನಾಗಿ ಮಾತನಾಡಿಕೊಂಡರು ॥೨॥

ಯಾವ ಮಹಾನುಭಾವನು ಪೂರ್ವದಲ್ಲಿ ಹೋಗುತಿದ್ದಾಗ ದೊಡ್ಡ ಚತುರಂಗಸೈನ್ಯವು ಅನುಸರಿಸಿಕೊಂಡು ಹೋಗುತಿದ್ದಿತೋ, ಅಂತಹ ಶ್ರೀರಾಮಚಂದ್ರನನ್ನು ಈಗ ಲಕ್ಷ್ಮಣನೊಬ್ಬನೇ ಸೀತೆಯೊಡನೆ ಅನುಸರಿಸಿಕೊಂಡು ಹೋಗುತಿರುವನಲ್ಲ! ॥೩॥

ಮಹಾತ್ಮನಾದ, ಈ ರಾಮನು, ಐಶ್ವರ್ಯದ ರುಚಿಯನ್ನು ಬಲ್ಲವನಾಗಿದ್ದರೂ, ಯಾಚಕರಿಗೆಲ್ಲ ಅವರವರ ಇಷ್ಟಾರ್ಥಗಳನ್ನು ನೆರವೇರಿಸತಕ್ಕವನಾಗಿದ್ದರೂ, ಧರ್ಮದಲ್ಲಿ ಗೌರವಬುದ್ಧಿಯಿಂದ, ತನ್ನ ತಂದೆಯನ್ನು ಮಿಥ್ಯಾವಾದಿಯನ್ನಾಗಿ ಮಾಡಲು ಸುತರಾಂ ಅಪೇಕ್ಷಿಸದಿರುವನು ॥೪॥

ಯಾವ ಪುಣ್ಯಾತ್ಮಳಾದ ಸೀತೆಯು ಪೂರ್ವದಲ್ಲಿ ಆಕಾಶಚಾರಿಗಳಾದ ಪ್ರಾಣಿಗಳಿಂದಲೂ ನೋಡಲು ಅಸಾಧ್ಯಳಾಗಿದ್ದಳೋ, ಅಂತಹ ಸೀತೆಯನ್ನು ಈಗ ರಾಜಮಾರ್ಗದಲ್ಲಿರುವ ಜನರೆಲ್ಲರೂ ಧಾರಾಳವಾಗಿ ನೋಡುತಿರುವರಲ್ಲ! ॥೫॥

ಆನೃಶಂಸ್ಯಮನುಕ್ರೋಶಃ ಶ್ರುತಂ ಶೀಲಂ ದಮಃ ಶಮಃ ।
ರಾಘವಂ ಶೋಭಯನ್ತ್ಯೇತೇ ಷಡ್ಗುಣಾಃ ಪುರುಷೋತ್ತಮಮ್ ॥೬॥
ತಸ್ಮಾತ್ ತಸ್ಯೋಪಘಾತೇನ ಪ್ರಜಾಃ ಪರಮಪೀಡಿತಾಃ ।
ಗ್ರೀದಕಾನೀವ ಸತ್ವಾನಿ ಗ್ರೀಷ್ಮೇ ಸಲಿಲಸಂಕ್ಷಯಾತ್ ॥೭॥
ಪೀಡಯಾ ಪೀಡಿತಂ ಸರ್ವಂ ಜಗದಸ್ಯ ಜಗತ್ಪತೇಃ ।
ಮೂಲಸ್ಯೇವೋಪಘಾತೇನ ವೃಕ್ಷಃ ಪುಷ್ಪಫಲೋಪಗಃ ॥೮॥
ಮೂಲಂ ಹ್ಯೇಷ ಮನುಷ್ಯಾಣಾಂ ಧರ್ಮಸಾರೋ ಮಹಾದ್ಯುತಿಃ ।
ಪುಷ್ಪಂ ಫಲಂ ಚ ಪತ್ರಂ ಚ ಶಾಖಾಶ್ಚಾಸ್ಯೇತರೇ ಜನಾಃ ॥೯॥
ತೇ ಲಕ್ಷ್ಮಣಾಇವ ಕ್ಷಿಪ್ರಂ ಸದಾರಾಃ ಸಹಬಾನ್ಧವಾಃ ।
ಗಚ್ಛನ್ತಮನುಗಚ್ಛಾಮ ಯೇನ ಗಚ್ಛತಿ ರಾಘವಃ ॥೧೦॥
ಇತಿ ದುಃಖಾಕುಲೇ ಬ್ರುವ್ದೇ ಸಾಧೂನಾಂ ಮುನಿಪುಙ್ಗವಃ ।
ಅಬ್ರವೀದ್ವಾಮದೇವೋಪಿ ಸಾಧೂನಾಂ ಸಙ್ಘಮಧ್ಯಗಃ ॥೧೧॥
ಮಾನುಶೋಚತ ರಾಮಂ ವಾ ಸೀತಾಂ ವಾ ವಜ್ಕೆ ತತ್ತ್ವತಃ ।
ಏಷ ರಾಮಃ ಪುರಾ ವಿಷ್ಣುಃ ಅದಿನಾರಾಯಣಃ ಪರಃ ।
ಏಷಾ ಸಾ ಜಾನಕೀ ಲಕ್ಷ್ಮೀಃ ಯೋಗಮಾಯೇತಿ ವಿಶ್ರುತಾ ॥೧೨॥

ಆನೃಶಂಸ್ಯ (ಕ್ರೂರನಲ್ಲದಿರುವಿಕೆ) ಕರುಣೆ ಶ್ರುತ ಶೀಲ ದಮ ಶಮ-ಇವಾರು ಗುಣಗಳೂ, ಪುರುಷಶ್ರೇಷ್ಠನಾದ ನಮ್ಮ ರಾಮನನ್ನು ಭೂಷಿಸುತಿರುವುವು ॥೬॥

ಅದುಕಾರಣ, ಗ್ರೀಷ್ಮಕಾಲದಲ್ಲಿ ಜಲವು ಶೋಷಿಸುವುದರಿಂದ ಜಲಚರಪ್ರಾಣಿಗಳು ಸಂಕಟಪಡುವಂತೆ, ಈಗ ಈ ಶ್ರೀರಾಮನಿಗೆ ಸಂಕಟವುಂಟಾಗಿರುವುದನ್ನು ನೋಡಿ ಸಕಲ ಪ್ರಜೆಗಳೂ ವಿಶೇಷವಾಗಿ ವ್ಯಥೆಪಡುತಿರುವರು ॥೭॥

ಬೇರಿಗೆ ಏಟುಬಿದ್ದರೆ ಪುಷ್ಪ ಫಲ ಸಹಿತವಾದ ವೃಕ್ಷವೆಲ್ಲವೂ ಕಂದಿಹೋಗುವಂತೆ, ಜಗತ್ಪತಿಯಾದ ಈ ಮಹಾನುಭಾವನ ದುಃಖದಿಂದ ಸಮಸ್ತ ಜಗತ್ತೂ ದುಃಖಪರವಶವಾಗಿರುವುದು ॥

ಧರ್ಮ ಪ್ರಧಾನನೂ ಮಹಾತೇಜಸನೂ ಆದ ಈ ರಾಮನು, ಸಕಲ ಮನುಷ್ಯರಿಗೂ ಮೂಲ ಭೂತನಾದವನು. ಇತರ ಜನರೆಲ್ಲರೂ, ಇವನಿಗೆ ಪುಷ್ಪವಾಗಿಯೂ ಫಲವಾಗಿಯೂ ಪತ್ರವಾಗಿಯೂ ಕೊಂಬೆಯಾಗಿಯೂ ಇರುವರು ॥೯॥

ಹೀಗೆ ಇವನಿಗೆ ಶಾಖಾಭೂತರಾದ ನಾವೆಲ್ಲರೂ, ಪತ್ನಿಯರೊಡನೆಯೂ ಬಂಧುಗಳೊಡನೆಯೂ ಕೂಡಿಕೊಂಡವರಾಗಿ, ಲಕ್ಷ್ಮಣನಂತೆ, ರಾಮನು ಹೋಗುವ ಮಾರ್ಗವನ್ನು ಹಿಡಿದು ಹೋಗೋಣ ॥೧೦॥

ಈರೀತಿಯಾಗಿ ಸಾಧುಜನರ ಸಮೂಹವೆಲ್ಲವೂ ದುಃಖಾಕುಲವಾಗಿರುವಾಗ, ಆ ಸಾಧು ಸಮೂಹ ಮಧ್ಯಗತನಾಗಿದ್ದ ವಾಮದೇವ ಮಹಾಮುನಿ ಈ ಮಾತನ್ನು ಹೇಳಿದನು ॥೧೧॥

ಎಲೈ ಮಹಾಜನರಿರಾ ! ರಾಮನ ವಿಷಯದಲ್ಲಾಗಲಿ-ಸೀತೆಯ ವಿಷಯದಲ್ಲಾಗಲಿ-ನೀವು ಹೀಗೆ ಶೋಕಪಡಬೇಡಿರಿ. ಈಗ ಇವರ ಸ್ವರೂಪವನ್ನು ಯಥಾರ್ಥವಾಗಿ ನಿಮಗೆ ಹೇಳುವೆನು. ಈ ಶ್ರೀರಾಮನು, ಮೊದಲು ಆದಿನಾರಾಯಣನೂ ಪರಮಾತ್ಮನೂ ಆಗಿದ್ದ ಶ್ರೀಮನ್ಮಹಾವಿ

ಅಸೌ ಶೇಷಸ್ತಮನ್ವೇತಿ ಲಕ್ಷ್ಮಣಾಖ್ಯೋ ಹಿ ಸಾಮ್ಪ್ರತಮ್ ।
ಏಷ ಮಾಯಾಗುಣೈರ್ಯುಕ್ತಃ ತತ್ತದಾಕಾರವಾನಿವ ॥೧೩॥
ಏಷವೇವ ರಜೋಯುಕ್ತಃ ಬ್ರಹ್ಮಾಭೂದ್ವಿಶ್ವಭಾವನಃ ।
ಸತ್ವಾವಿಷ್ಟಸ್ತಥಾವಿಷ್ಣುಃ ತ್ರಿಜಗತ್ಪರಿಪಾಲಕಃ ॥೧೪॥
ಏಷೋನ್ತೇ ತಮಸಾ ರುದ್ರೋ ಜಗತ್ಪ್ರಳಯಕಾರಣಮ್ ॥೧೫॥
ಏಷ ಮತ್ಸ್ಯಃ ಪುರಾ ಭೂತ್ವಾ ಭಕ್ತಂ ವೈವಸ್ವತಂ ಮನುಮ್ ।
ನಾವ್ಯಾರೋಪ್ಯ ಲಯಸ್ಯಾನ್ತೇ ಪಾಲಯಾನಾಸ ರಾಘವಃ ॥೧೬॥
ಸಮುದ್ರಮಥನೇ ಪೂರ್ವಂ ಮನ್ದರೇ ಸುತಲಂ ಗತೇ ।
ಅಧಾರಯತ್ಸ್ವಪೃಷ್ಠೇದ್ರಿಂ ಕೂರ್ಮರೂಪೀ ರಘೂತ್ತಮಃ ॥೧೭॥
ಮಹೀ ರಸಾತಲಂ ಯಾತಾ ಪ್ರಳಯೇ ಸೂಕರೋ ಭವತ್ ।
ತೋಲಯಾನಾಸ ದಂಷ್ಟ್ರಾನ್ತೇ ತಾಂ ಕ್ಷಿತಿಂ ರಘುನನ್ದನಃ ॥೧೮॥
ನರಸಿಂಹವಪುರ್ಭೂತ್ವಾ ಪ್ರಹ್ಲಾದವರದಃ ಪುರಾ ।
ತ್ರಿಲೋಕಕಣ್ಟಕಂ ರಕ್ಷಃ ಪಾಟಯಾಮಾಸ ತನ್ನಖೈಃ ॥೧೯॥

ಷ್ಣುವು. ಈ ಜಾನಕಿಯು, ಆ ವಿಷ್ಣುವಿನ ಯೋಗಮಾಯಾರೂಪಳಾದ ಮಹಾಲಕ್ಷ್ಮಿಯೆಂದು ಪ್ರಖ್ಯಾತಳಾಗಿರುವಳು. ಈ ಲಕ್ಷ್ಮಣನೆಂಬ ಹೆಸರುಳ್ಳ ಆದಿಶೇಷನು, ಈಗ ರಾಮರೂಪನಾದ ಮಹಾವಿಷ್ಣುವನ್ನನುಸರಿಸಿಕೊಂಡಿರುವನು. ಹೀಗೆ ಇವನು ಮಾಯಾಗುಣಗಳಿಂದ ಯುಕ್ತನಾಗಿ ಆಯಾರೂಪವುಳ್ಳವನಂತೆ ಕಾಣಿಸಿಕೊಳ್ಳುವನು ॥೧೨—೧೩॥

ಇವನೇ, ರಜೋಗುಣಯುಕ್ತನಾಗಿ, ವಿಶ್ವಸೃಷ್ಟಿಕರ್ತನಾದ ಬ್ರಹ್ಮನಾಗಿದ್ದನು; ಹಾಗೆಯೇ ಸತ್ವಗುಣಯುಕ್ತನಾಗಿ, ವಿಷ್ಣುರೂಪದಿಂದ ಮೂರುಲೋಕವನ್ನೂ ಪರಿಪಾಲಿಸುವನು; ಇವನು, ಕೊನೆಯಲ್ಲಿ ತಮೋಗುಣಸಮನ್ವಿತನಾಗಿ, ರುದ್ರರೂಪದಿಂದ ಜಗತ್ತಿನ ಪ್ರಳಯಕ್ಕೆ ಕಾರಣನಾಗುವನು ॥೧೪—೧೫॥

ಇವನು, ಪೂರ್ವದಲ್ಲಿ ಮತ್ಸ್ಯಾವತಾರವಾಡಿ, ಜಲಪ್ರಳಯಕಾಲದಲ್ಲಿ ತನ್ನ ಭಕ್ತನಾದ ವೈವಸ್ವತಮನುವನ್ನು ನಾವೆಯಲ್ಲಿ ಹತ್ತಿಸಿಕೊಂಡು ಕಾಪಾಡಿದನು ॥೧೬॥

ಈ ರಘುನಾಥನು, ಪೂರ್ವದಲ್ಲಿ ಸಮುದ್ರಮಥನಕಾಲದಲ್ಲಿ, ಮಂದರಪರ್ವತವು ಪಾತಾಳಲೋಕಕ್ಕೆ ಹೋಗಲಾಗಿ, ಕೂರ್ಮಾವತಾರವಾಡಿದವನಾಗಿ, ತನ್ನ ಬೆನ್ನಿನಮೇಲೆ ಆ ಮಂದರ ಪರ್ವತವನ್ನು ಹೊತ್ತುಕೊಂಡು ಬಂದನು ॥೧೭॥

ಹೀಗೆಯೇ, ಪೂರ್ವದಲ್ಲಿ ಬಂದಾವೃತ್ತಿ ಪ್ರಳಯವಾದಾಗ ಭೂಮಿಯೆಲ್ಲವೂ ಪಾತಾಳದಲ್ಲಿ ಮುಣುಗಿಹೋಗಿಬಿಟ್ಟಿತು; ಆಗ ಈ ರಘುನಾಯಕನು ವರಾಹಾವತಾರವಾಡಿದವನಾಗಿ, ಆ ಭೂಮಿಯನ್ನು ತನ್ನ ಕೋರೆದಾಡೆಯಮೇಲೆ ಎತ್ತಿಕೊಂಡು ಬಂದನು ॥೧೮॥

ಹಿಂದೆ ಒಂದುಸಲ, ಪ್ರಹ್ಲಾದನಿಗೆ ವರಪ್ರದಾನವಾಡುವುದಕ್ಕೋಸ್ಕರ, ನರಸಿಂಹಾವತಾರವಾಡಿ, ಮೂರುಲೋಕಕ್ಕೂ ಕಂಟಕಭೂತನಾವ ಆ ಹಿರಣ್ಯಕಶಿವುವೆಂಬ ರಾಕ್ಷಸನನ್ನು ಉಗುರುಗಳಿಂದ ಸೀಳಿಬಿಟ್ಟನು ॥೧೯॥

ಪುತ್ರರಾಜ್ಯಂ ಹೃತಂ ದೃಷ್ಟ್ವಾ ಹ್ಯದಿತ್ಯಾ ಯಾಚಿತಃ ಪುರಾ ।
ವಾಮನತ್ವಮುಪಾಗಮ್ಯ ಯಾಚ್ಞಾಯಾಚಾನಯತ್ ಪುನಃ ॥೧೦॥
ದುಷ್ಟಕ್ಷತ್ರಿಯಭೂಭಾರನಿವೃತ್ತ್ಯೈ ಭಾರ್ಗವೋಭವತ್ ।
ಸ ಏಷ ಜಗತಾಂ ನಾಥಃ ಇದಾನೀಂ ರಾಮತಾಂ ಗತಃ ॥೧೧॥
ರಾವಣಾದೀನಿ ರಕ್ಷಾಂಸಿ ಕೋಟಿಕೋ ನಿಹನಿಷ್ಯತಿ ।
ಮಾನುಷೇಣೈವ ಮರಣಂ ತಸ್ಯ ದೃಷ್ಟಂ ದುರಾತ್ಮನಃ ॥೧೨॥
ರಾಜ್ಞಾ ದಶರಥೇನಾಪಿ ತಪಸಾ ತೋಷಿತೋ ಹರಿಃ ।
ಪುತ್ರತ್ವಕಾಕ್ಷಯಾವಿಷ್ಣುಃ ತಥಾ ಪುತ್ರೋಭವದ್ಧರಿಃ ॥೧೩॥
ಸ ಏಷ ವಿಷ್ಣುಃ ಶ್ರೀರಾಮಃ ರಾವಣಾದಿವಧಾಯ ವೈ ।
ಆದ್ಯೈವ ಯಾಸ್ಯತಿ ವನಂ ಸೀತಯಾ ಲಕ್ಷ್ಮಣೇನ ಚ ॥೧೪॥
ಏಷಾ ಸೀತಾ ಹರೇರ್ಮಾಯಾ ಸೃಷ್ಟಿಸ್ಥಿತ್ಯಂತಕಾರಿಣೀ ।
ರಾಜಾ ವಾ ಕೈಕಯೀ ವಾಪಿ ನಾತ್ರ ಕಾರಣಮಣ್ವಪಿ ॥೧೫॥
ಪೂರ್ವೇದ್ಯುರ್ನಾರದಃ ಪ್ರಾಹ ಭೂಭಾರಹರಣಾಯ ಚ ।
ರಾಮೋವ್ಯಾಹ ಸ್ವಯಂ ಸಾಕ್ಷಾತ್ ಶ್ವೋ ಗಮಿಷ್ಯಾಮ್ಯಹಂ ವನಮ್ ॥೧೬॥

ಹೀಗೆಯೇ, ಮತ್ತೊಂದುಸಲ, ತನ್ನ ಮಗನಾದ ಮಹೇಂದ್ರನರಾಜ್ಯವು ಶತ್ರುಗಳಿಂದ ಅಪಹರಿಸಲ್ಪಟ್ಟುದನ್ನು ಕಂಡು–ಅದಿತಿದೇವಿಯು ಯಾಚಿಸಿಕೊಳ್ಳಲಾಗಿ, ಇವನು ವಾಮನಾವತಾರವೂಡಿ, ಭಿಕ್ಷೆಯನ್ನುವೂಡಿ, ಆ ದೇವರಾಜ್ಯವನ್ನು ಪುನಃ ತಂದುಕೊಟ್ಟನು ॥೧೦॥

ಹಾಗೆಯೇ, ದುಷ್ಟರಾದ ಕ್ಷತ್ರಿಯರಿಂದ ಉಂಟಾಗಿದ್ದ ಭೂಭಾರವನ್ನು ನಿವೃತ್ತಿಪಡಿಸುವುದಕ್ಕೋಸ್ಕರ, ಪರಶುರಾಮನಾಗಿ ಅವತರಿಸಿದನು. ಅಂತಹ ಈ ಜಗನ್ನಾಥನು, ಈಗ ರಾಮರೂಪದಲ್ಲಿ ಅವತರಿಸಿರುವನು ॥೧೧॥

ಈಗ ಇವನು ರಾವಣನೇ ಮೊದಲಾದ ಅನೇಕ ಕೋಟಿ ರಾಕ್ಷಸನ್ನು ಕೊಲ್ಲುವನು. ಆ ದುರಾತ್ಮನಾದ ರಾವಣನಿಗೆ, ಮನುಷ್ಯನಿಂದಲೇ ಮರಣವಾಗಬೇಕೆಂದು ಗೊತ್ತಾಗಿರುವುದು ।

ನಮ್ಮ ದಶರಥರಾಜನೂ ಕೂಡ, ಪೂರ್ವದಲ್ಲಿ, ಮಹಾವಿಷ್ಣುವು ತನಗೆ ಮಗನಾಗಬೇಕೆಂದು ಆಶೆಪಟ್ಟು, ತಪಸ್ಸಿನಿಂದ ಶ್ರೀಹರಿಯನ್ನು ಸಂತೋಷಪಡಿಸಿದ್ದನು. ಅದಕ್ಕನುಸಾರವಾಗಿ ಈಗ ಶ್ರೀಹರಿಯು ಅವನಿಗೆ ಪುತ್ರನಾಗಿ ಜನಿಸಿರುವನು ॥೧೩॥

ಹೀಗೆ ಆ ಸಾಕ್ಷಾನ್ಮಹಾವಿಷ್ಣುವಾದ ಶ್ರೀ ರಾಮಚಂದ್ರನು, ರಾವಣಾದಿಗಳ ವಧೆಗೋಸ್ಕರ, ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಈಗಲೇ ಅರಣ್ಯಕ್ಕೆ ಹೋಗುವನು ॥೧೪॥

ಈ ಸೀತೆಯೇ, ಜಗತ್ತಿಗೆ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವ ವಿಷ್ಣುಮಾಯೆಯು; ಇವಳಿಂದಲೇ ಸಮಸ್ತವೂ ನಡೆಯುತ್ತಿರುವುದು. ಈ ವಿಷಯದಲ್ಲಿ, ನಮ್ಮ ದಶರಥನಾಗಲಿ–ಕೈಕೇಯಿಯಾಗಲಿ–ಸ್ವಲ್ಪವೂ ಕಾರಣವಲ್ಲ ॥೧೫॥

ನಿನ್ನೆಯದಿವಸ, ನಾರದಮುನಿಯೂ ಕೂಡ, ಭೂಭಾರಹರಣಾರ್ಥವಾಗಿ ಶ್ರೀರಾಮನನ್ನು ಪ್ರಾರ್ಥಿಸಿದನು; ರಾಮನೂಕೂಡ, ನಾಳೆಯೇ ದಂಡಕಾರಣ್ಯಕ್ಕೆಹೊರಡುವೆನೆಂದು ತಾನೇ ಸಾಕ್ಷಾತ್ತಾಗಿ ಅವನಿಗೆ ಹೇಳಿರುವನು ॥೧೬॥

ಅತೋ ರಾಮಂ ಸಮುದ್ದಿಶ್ಯ ಚಿನ್ತಾಂ ತ್ಯಜತ ಬಾಲಿಶಾಃ ।
ರಾಮಪ್ರಯಾಣಂ ಲೋಕಾನಾಂ ಸುಖಾಯೈವ ಭವಿಷ್ಯತಿ ॥೨೭॥

ರಾಮರಾಮೇತಿ ಯೇ ನಿತ್ಯಂ ಜಪನ್ತಿ ಮನುಜಾಭುವಿ ।
ತೇಷಾಂ ಮೃತ್ಯ್ವಭಯಾದೀನಿ ನ ಭವನ್ತಿ ಕದಾಚನ ॥೨೮॥

ಕಿಂ ಪುನಸ್ತಸ್ಯ ರಾಮಸ್ಯ ದುಃಖಶಬ್ಕಾ ಮಹಾತ್ಮನಃ ॥೨೯॥

ರಾಮನಾಮ್ನೈವ ಮುಕ್ತಿಃ ಸ್ಯಾತ್ ಕಲೌ ನಾನ್ಯತ್ರ ಕುತ್ರಜಿತ್ ।
ಮಾಯಾಮಾನುಷರೂಪೇಣ ವಿಡಮ್ಬಯತಿ ಲೋಕಕೃತ್ ॥೩೦॥

ಭಕ್ತಾನಾಂ ರಕ್ಷಣಾರ್ಥಾಯ ರಾವಣಸ್ಯ ವಧಾಯ ಚ ।
ರಾಜ್ಞಶ್ಚ ಭೀಷ್ಟಸಿದ್ಧ್ಯರ್ಥಂ ಮಾನುಷಂ ವಪುರಾಸ್ಥಿತಃ ॥೩೧॥

ಇತ್ಯುಕ್ತ್ವಾ ವಿರರಾಮಾಥ ವಾಮದೇವೋ ಮಹಾಮುನಿಃ ।
ಶ್ರುತ್ವಾ ತೇಪಿ ದ್ವಿಜಾಃ ಸರ್ವೇ ರಾಮಂ ಜ್ಞಾತ್ವಾ ಹರಿಂ ವಿಭುಮ್ ।
ಜಹುರ್ಹೃತ್ಸಂಶಯಗ್ರನ್ಥಿಂ ರಾಮಮೇವಾನ್ವಚಿನ್ತಯನ್ ॥೩೨॥

ಯಇದಂ ಚಿನ್ತಯೇನ್ನಿತ್ಯಂ ರಹಸ್ಯಂ ರಾಘವಸ್ಯ ತು ।
ತಸ್ಯ ರಾಮೇ ದೃಢಾ ಭಕ್ತಿಃ ಭವೇದ್ವಿಜ್ಞಾನಪೂರ್ವಕಮ್ ॥೩೩॥

ಹೀಗಿರುವುದರಿಂದ, ಎಲೈ ಅಜ್ಞಾನಿಗಳಿರಾ ! ರಾಮನ ವಿಷಯದಲ್ಲಿ ನೀವು ಚಿಂತೆಯನ್ನು ಬಿಟ್ಟುಬಿಡಿರಿ. ಶ್ರೀರಾಮನ ಅರಣ್ಯಗಮನವು, ಜನರ ಸುಖಾರ್ಥವಾಗಿಯೇ ಆಗುವುದು ॥೨೭॥

ಈ ಲೋಕದಲ್ಲಿ 'ರಾಮ ರಾಮ' ಎಂದು ಯಾವ ಮನುಷ್ಯರು ನಿತ್ಯವೂ ಜಪಿಸುವರೋ ಅವರಿಗೂ ಕೂಡ ಮೃತ್ಯ್ವಭಯಾದಿಗಳಿಂದಿಗೂ ಸಂಭವಿಸುವುದಿಲ್ಲ; ಹೀಗಿರುವಾಗ, ಆ ಮಹಾನುಭಾವನಾದ ಶ್ರೀ ರಾಮನಿಗೆ ದುಃಖವೆಂಬ ಶಂಕೆಯೆಲ್ಲಿಯುದು? ॥೨೮—೨೯॥

ಕಲಿಯುಗದಲ್ಲಿ ರಾಮನಾಮದಿಂದಲೇ ಜನರಿಗೆ ಮುಕ್ತಿಯುಂಟಾಗುವುದಲ್ಲದೆ, ಮತ್ತಾವುದರಿಂದಲೂ ಆಗುವುದಿಲ್ಲ. ಈ ರಾಮನು ಸಾಮಾನ್ಯಮನುಷ್ಯನಲ್ಲ. ಲೋಕಕರ್ತನಾದ ಶ್ರೀಮನ್ನಾರಾಯಣನೇ, ಮಾಯಾಮಾನುಷ್ಯರೂಪದಿಂದ ಹೀಗೆ ವಿಡಂಬನೆಮಾಡುತ್ತಿರುವನು ॥೩೦॥

ಭಕ್ತರನ್ನು ರಕ್ಷಿಸುವುದಕ್ಕಾಗಿಯೂ, ರಾವಣನನ್ನು ಕೊಲ್ಲುವುದಕ್ಕಾಗಿಯೂ, ದಶರಥನ ಇಷ್ಟಾರ್ಥಸಿದ್ಧಿಗಾಗಿಯೂ ಕೂಡ, ಆ ಮಹಾವಿಷ್ಣುವೇ ಮನುಷ್ಯದೇಹವನ್ನಾಶ್ರಯಿಸಿರುವನು॥

ಹೀಗೆಂದು ಇದುವರೆಗೆ ಹೇಳಿ, ಅನಂತರ ಆ ವಾಮದೇವಮಹರ್ಷಿಯು ಸುಮ್ಮನಾದನು. ಇವನು ಹೇಳಿದ ಮಾತನ್ನು ಕೇಳಿ, ಆ ಸಮಸ್ತ ಬ್ರಾಹ್ಮಣರೂ, ರಾಮನನ್ನು ಸಾಕ್ಷಾದ್ಭಗವಂತನಾದ ಶ್ರೀಹರಿಯೆಂದು ತಿಳಿದವರಾಗಿ, ತಮ್ಮ ಮನಸ್ಸಿನ ಸಂಶಯಗ್ರಂಥಿಯನ್ನು ಪರಿಹರಿಸಿಕೊಂಡು, ರಾಮನನ್ನೇ ಧ್ಯಾನಿಸುತ್ತಿದ್ದರು ॥೩೨॥

ಆ ಬಳಿಕ, ಪುನಃ ಆ ವಾಮದೇವಮುನಿಯು, ಅವರನ್ನು ಕುರಿತು 'ಯಾವನು ಶ್ರೀರಾಮನ ಈ ರಹಸ್ಯವನ್ನು ನಿತ್ಯವೂ ಧ್ಯಾನಿಸುವನೋ, ಅವನಿಗೆ ಜ್ಞಾನಪೂರಸ್ಸರವಾಗಿ ಶ್ರೀರಾಮ

ರಹಸ್ಯಂ ಗೋಪನೀಯಂ ವಾ ಯೂಯಂ ವೈ ರಾಘವಪ್ರಿಯಾಃ ।
ಇತ್ಯುಕ್ತ್ವಾ ಪ್ರಯಯೌ ವಿಪ್ರಃ ತೇಪಿ ರಾಮಂ ಪರಂ ವಿದುಃ ॥೩೪॥
ಏವಂ ಸರ್ವಾಪವಾದೇಷು ಸ್ವಜನೇಷು ಪರಸ್ಪರಮ್ ।
ಸಸೀತಾಲಕ್ಷ್ಮಣೋ ರಾಮೋ ವಿವೇಶ ನೃಪತೇರ್ಗೃಹಮ್ ॥೩೫॥

ಇತಿ ಶ್ರೀಮದಯೋಧ್ಯಾಕಾಂಡೇ ಪೌರವಾಕ್ಯನಿರೂಪಣಂ ನಾಮ
ದಶಮಃ ಸರ್ಗಃ.



ನಲ್ಲಿ ದೃಢವಾದ ಭಕ್ತಿಯುಂಟಾಗುವುದು. ಅದುಕಾರಣ, ಈ ರಹಸ್ಯವನ್ನು ನೀವೆ ಚೆನ್ನಾಗಿ ಕಾಪಾಡಿಕೊಂಡಿರಿ. ನೀವು ನಮ್ಮ ರಾಮನಿಗೆ ಕೇವಲ ಪ್ರೀತಿಪಾತ್ರರಾದವರು.' ಎಂದು ಹೇಳಿ, ತನ್ನವಾಡಿಗೆ ತಾನು ಹೊರಟುಹೋದನು. ಅವರೂಕೂಡ, ಶ್ರೀರಾಮನನ್ನು ಪರಮಾತ್ಮ ನೆಂದು ತಿಳಿದು ಧ್ಯಾನಿಸುತಿದ್ದರು ॥೩೩—೩೪॥

ಎಲೌ ! ಪಾರ್ವತಿ ! ಈ ಪೂರ್ವೋಕ್ತರೀತಿಯಾಗಿ ತನ್ನ ಊರಿನ ಜನರೆಲ್ಲರೂ ಒಬ್ಬರಿಗೊ ಬ್ಬರು ಮಾತನಾಡುತ್ತಿರುವಾಗ, ಶ್ರೀರಾಮನು, ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಪುನಃ ದಶರಥನ ಅರಮನೆಯನ್ನು ಕುರಿತು ಹೊರಟುಹೋದನು ॥೩೫॥

ಇದು ಅಯೋಧ್ಯಾಕಾಂಡದಲ್ಲಿ ಪೌರವಾಕ್ಯನಿರೂಪಣವೆಂಬ
ಹತ್ತನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಏಕಾದಶಃ ಸರ್ಗಃ.

ಶ್ರೀ ಶಿವ ಉವಾಚ.

ಪ್ರವಿಶ್ಯ ತು ಮಹಾತೇಜಾಃ ದೃಷ್ಟ್ವಾ ರಾಜಾನಮಗ್ರತಃ ।
ಪರಿಕ್ರಮ್ಯ ನಮಸ್ಕೃತ್ಯ ವಚನಂ ಚೇದಮಬ್ರವೀತ್ ॥೧॥
ತಾತ ಲಕ್ಷ್ಮಣಸಂಯುಕ್ತಃ ಸೀತಯಾ ಚಾಪಿ ಭಾರ್ಯಯಾ ।
ವನಮದ್ಯೈವ ಗಚ್ಛಾಮಿ ಮಾಮನುಜ್ಞಾತುಮರ್ಹಸಿ ॥೨॥
ಇತ್ಯುಕ್ತ್ವಾ ಪಿತರಂ ನತ್ವಾ ಮಾತೃವೃದ್ಧಸುಹೃಜ್ಜನಾನ್ ।
ಪ್ರಯಯೌ ಮಾರ್ಗಮಾಸಾದ್ಯ ರಾಮಚನ್ದ್ರಃ ಪಿತುರ್ಗೃಹಾತ್ ॥೩॥
ಸುಮಿತ್ರಾ ಲಕ್ಷ್ಮಣಂ ಪ್ರಾಹ ವನವಾಸಾಯ ದೀಕ್ಷಿತವತ್ ।
ರಾಮಃ ಪಿತಾ ಜನಕಜಾ ಜನನೀ ವಿದ್ಧಿ ಮಾಂ ಗೃಹವತ್ ॥೪॥
ಏವಂ ತೇ ವರ್ತಮಾನಸ್ಯ ರಾಮಸೇವಾಂ ಪ್ರಕುರ್ವತಃ ।
ವನವಾಸಕೃತಾ ಪೀಡಾ ನ ತೇಽಯೋಧ್ಯಾವನಂ ಪರಮ್ ॥೫॥
ರಾಮಂ ವಿದ್ಧಿ ಪರಾತ್ಮಾನಂ ಸಾಕ್ಷಾನ್ನಾರಾಯಣಂ ಪರಮ್ ।
ತತ್ಸೇವಾತೋ ಭವೇತ್ ಕೀರ್ತಿಃ ಮುಕ್ತಿಶ್ಚಾಪಿ ಭವೇತ್ ತವ ॥೬॥

ಅಯೋಧ್ಯಾಕಾಂಡದಲ್ಲಿ ಹನ್ನೊಂದನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಹೇಳುವನು :—

ಎಲೌ! ಪಾರ್ವತಿ! ಹೀಗೆ ತಂದೆಯಮನೆಯನ್ನು ಪ್ರವೇಶಿಸಿದವನಾಗಿ, ಮಹಾತೇಜಸ್ವಿಯಾದ ಆ ರಾಮಚಂದ್ರನು, ಅವನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಅವನನ್ನು ಕುರಿತು 'ತಾತ! ಲಕ್ಷ್ಮಣನೊಡನೆಯೂ ಸೀತೆಯೊಡನೆಯೂ ಕೂಡಿದವನಾಗಿ, ನಾನು ಈಗಲೇ ಅರಣ್ಯಕ್ಕೆ ಹೊರಡುವೆನು. ನನಗೆ ಅನುಜ್ಞೆಯಾಗಬೇಕು' ಎಂದು ವಿಜ್ಞಾಪಿಸಿದನು ॥೧—೩॥

ಈರೀತಿಯಾಗಿ ವಿಜ್ಞಾಪಿಸಿ, ತನ್ನ ತಂದೆಯನ್ನೂ ತಾಯಿಯರನ್ನೂ ವೃದ್ಧರನ್ನೂ ಇನ್ನೂ ಇತರರಾದ ಮಹನೀಯರನ್ನೂ ನಮಸ್ಕರಿಸಿ, ತಂದೆಯ ಮನೆಯನ್ನು ಬಿಟ್ಟು, ದಾರಿಯನ್ನು ಹಿಡಿದು ಪ್ರಯಾಣಮಾಡಿದನು ॥೪॥

ಆ ಸಮಯದಲ್ಲಿ, ವನವಾಸದಲ್ಲಿ ಬದ್ಧಾದರನಾದ ತನ್ನ ಮಗನಾದ ಲಕ್ಷ್ಮಣನನ್ನು ಕುರಿತು, ಸುಮಿತ್ರೆಯು 'ವತ್ಸ! ಲಕ್ಷ್ಮಣ! ನಿನಗೆ—ರಾಮನೇ ತಂದೆಯು; ಸೀತೆಯೇ ತಾಯಿಯು; ಅರಣ್ಯವೇ ಅರಮನೆ. ಹೀಗೆಂದು ತಿಳಿದು ರಾಮನ ಸೇವೆಯನ್ನು ಮಾಡುತಿದ್ದರೆ, ನಿನಗೆ ವನವಾಸದಿಂದುಂಟಾಗುವ ಕಷ್ಟವೊಂದೂ ಸಂಭವಿಸುವುದಿಲ್ಲ. ಆ ಉತ್ತಮವಾದ ಅರಣ್ಯವೇ, ಅಯೋಧ್ಯೆಯಂತೆ ಸುಖಕರವಾಗಿರುವುದು. ಶ್ರೀರಾಮನನ್ನು, ಸಾಕ್ಷಾತ್ ಪರಮಾತ್ಮನಾದ ಪರಾತ್ಪರನಾದ ಶ್ರೀಮನ್ನಾರಾಯಣನೆಂದು ತಿಳಿಯುವನಾಗು. ಅವನ ಸೇವೆಯಿಂದ, ನಿನಗೆ ಇಹದಲ್ಲಿ ಕೀರ್ತಿಯೂ ಪರದಲ್ಲಿ ಮುಕ್ತಿಯೂ ಉಂಟಾಗುವುವು' ಎಂದು ಹೇಳಿದಳು ॥೪—೬॥

ತತೋ ದಶರಥಸ್ತ್ವಾಹ ಸುಮನ್ತ್ರಂ ರಥಮಾನಯ ।
ರಥಮಾರುಹ್ಯ ಗಚ್ಛನ್ತು ವನಂ ವನೇಚರಪ್ರಿಯಾಃ ॥೬॥
ತತಃ ಸುಮನ್ತ್ರಃ ಕಾಕುತ್ಸ್ಥಂ ಪ್ರಾಞ್ಜಲಿರ್ವಾಕ್ಯಮಬ್ರವೀತ್ ।
ರಥಮಾರೋಹ ಭದ್ರಂ ತೇ ರಾಜಪುತ್ರ ಮಹಾಯಶಃ ॥೪॥
ಆರುರೋಹ ರಥಂ ಸೀತಾ ಶೀಘ್ರಂ ರಾಮಸ್ಯ ಪಶ್ಯತಃ ।
ರಾಮಃ ಪ್ರದಕ್ಷಿಣಂ ಕೃತ್ವಾ ಪಿತರಂ ರಥಮಾರುಹತ್ ॥೯॥
ಲಕ್ಷ್ಮಣಃ ಖಡ್ಗಯುಗಳಂ ಧನುಸ್ತೂಣೀಯುಗಂ ತಥಾ ।
ಗೃಹೀತ್ವಾ ರಥಮಾರುಹ್ಯ ಚೋದಯಾಮಾಸ ಸಾರಥಿಮ್ ॥೧೦॥
ಪ್ರಯಾತೇ ತು ಮಹಾರಣ್ಯಂ ಚಿರರಾತ್ರಾಯ ರಾಘವೇ ।
ಬಭೂವ ನಗರೀಮೂರ್ಛಾ ಬತ ಮೂರ್ಛಾ ಜನಸ್ಯ ಚ ॥೧೧॥
ತತಃ ಸಬಾಲವೃದ್ಧಾ ಸಾ ಪುರೀ ಪರಮಪೀಡಿತಾ ।
ರಾಮಮೇವಾಭಿದುದ್ರಾವ ಘರ್ಮಾರ್ತಾಃ ಸಲಿಲಂ ಯಥಾ ॥೧೨॥
ಪಾರ್ಶ್ವತಃ ಪೃಷ್ಠತಶ್ಚಾಪಿ ಲಮ್ಬಮಾನಾಸ್ತದುನ್ಮುಖಾಃ ।
ಬಾಷ್ಪಪೂರ್ಣಮುಖಾಃ ಸರ್ವೇ ತಮೂಚುರ್ಭೃಶದುಃಖಿತಾಃ ॥೧೩॥

ಆ ಬಳಿಕ, ದಶರಥಮಹಾರಾಜನು, ಸುಮಂತ್ರನನ್ನು ನೋಡಿ 'ಸುಮಂತ್ರ! ಬೇಗನೆ ರಥವನ್ನು ತೆಗೆದುಕೊಂಡು ಬರುವನಾಗು. ಅರಣ್ಯಸಂಚಾರದಲ್ಲಿ ಆಸಕ್ತರಾದ ಈ ಸೀತಾರಾಮ ಲಕ್ಷ್ಮಣರು, ರಥವನ್ನು ಹತ್ತಿಕೊಂಡು ಅರಣ್ಯಕ್ಕೆ ಹೋಗಲಿ' ಎಂದು ಹೇಳಿದನು ॥೬॥

ಆ ಕ್ಷಣವೇ ರಥವನ್ನು ತೆಗೆದುಕೊಂಡು ಬಂದು, ಸುಮಿತ್ರನು, ಕೈಮುಗಿದುಕೊಂಡು 'ಮಹಾಕೀರ್ತೇ! ರಾಮಭದ್ರ! ನಿನಗೆ ಮಂಗಳವಾಗಲಿ. ಈ ರಥವನ್ನು ಹತ್ತುವನಾಗು' ಎಂದು ರಾಮನಿಗೆ ವಿಜ್ಞಾಪಿಸಿದನು ॥೪॥

ಆಗ, ರಾಮನೆದುರಾಗಿ ಸೀತೆಯು ಮೊದಲು ರಥವನ್ನು ಹತ್ತಿದಳು; ಅನಂತರ, ಶ್ರೀರಾಮನು ತಂದೆಯನ್ನು ಪ್ರದಕ್ಷಿಣ ನಮಸ್ಕಾರಮಾಡಿ ರಥವನ್ನು ಹತ್ತಿದನು; ಆಮೇಲೆ, ಲಕ್ಷ್ಮಣನು ಎರಡು ಖಡ್ಗಗಳನ್ನೂ ಧನುಸ್ಸುಗಳನ್ನೂ ಬತ್ತಳಿಕೆಗಳನ್ನೂ ತೆಗೆದುಕೊಂಡು ರಥಕ್ಕೆ ಬಂದವನಾಗಿ, ರಥವನ್ನು ಬಿಡುವಂತೆ ಸಾರಥಿಗೆ ಹೇಳಿದನು ॥೯—೧೦॥

ಹೀಗೆ ಶ್ರೀರಾಮನು ಅರಣ್ಯವನ್ನು ಕುರಿತು ಪ್ರಯಾಣಮಾಡಲಾಗಿ, ಆ ಪಟ್ಟಣಕ್ಕೂ ಪಟ್ಟಣದ ಜನರಿಗೂ ಬಹುಕಾಲ ಮೂರ್ಛೆಯುಂಟಾಗಿಬಿಟ್ಟಿತು ॥೧೧॥

ಆನಂತರ, ಹುಡುಗರು ಮುದುಕರು ಮೊದಲಾಗಿ ಸಮಸ್ತರೊಡನೆಯೂ ಕೂಡಿರುವ ಅಯೋಧ್ಯಾಪಟ್ಟಣವು, ಮಹಾವ್ಯಸನಯುಕ್ತವಾಗಿ, ಬೇಸಗೆಯಿಂದ ಬಳಲಿದವರು ನೀರಿರುವ ಕಡೆಗೆ ಓಡಿಹೋಗುವಂತೆ, ರಾಮನನ್ನೇ ಹಿಂಬಾಲಿಸಿ ಓಡಿಹೋಯ್ತು ॥೧೨॥

ಆ ರಾಮನ ಪಾರ್ಶ್ವಭಾಗದಲ್ಲಿಯೂ ಹಿಂಭಾಗದಲ್ಲಿಯೂ ಹೋಗುತಿರುವ ಆ ಜನರೆಲ್ಲರೂ, ಆವನನ್ನೇ ಕತ್ತೆತ್ತಿ ನೋಡುತ, ಮುಖದಲ್ಲಿ ಕಣ್ಣೀರುದುಂಬಿದವರಾಗಿ, ಮಹಾದುಃಖದಿಂದ, ರಾಮನನ್ನು ಉದ್ದೇಶಿಸಿಕೊಂಡು ಹೀಗೆ ಹೇಳಿಕೊಂಡರು ॥೧೩॥

ಸಂಯಚ್ಛ ವಾಜಿನಾಂ ರಶ್ಮೀ೯ ಸೂತ ಯಾಹಿ ಶನೈಶ್ಚನೈಃ ।
ಮುಖಂ ದ್ರಕ್ಷ್ಯಾಮಿ ರಾಮಸ್ಯ ದುರ್ದರ್ಶಂ ನೋ ಭವಿಷ್ಯತಿ ॥೧೪॥
ಕೃತಕೃತ್ಯಾ ಹಿ ವೈದೇಹೀ ಛಾಯೇವಾನುಗತಾ ಪತಿಮ್ ।
ನ ಜಹಾತಿ ಸ್ಥಿತಾ ಧರ್ಮೇ ಮೇರುಮರ್ಕಪ್ರಭಾ ಯಥಾ ॥೧೫॥
ಅಹೋ ಲಕ್ಷ್ಮಣ ಸಿದ್ಧಾರ್ಥಃ ಸತತಂ ಪ್ರಿಯವಾದಿನಮ್ ।
ಭ್ರಾತರಂ ದೇವಸಙ್ಕಾಶಂ ಯಸ್ತ್ವಂ ಪರಿಚರಿಷ್ಯಸಿ ॥೧೬॥
ಮಹತ್ಯೇಷಾ ಹಿ ತೇ ಸಿದ್ಧಿಃ ಏಷ ಚಾಭ್ಯುದಯೋ ಮಹಾನ್ ।
ಏಷ ಸ್ವರ್ಗಸ್ಯ ಮಾರ್ಗಶ್ಚ ಯದೇನಮನುಗಚ್ಛಸಿ ॥೧೭॥
ಅಥ ರಾಜಾ ವೃತಃ ಸ್ತ್ರೀಭಿಃ ದೀನಾಭಿರ್ದೀನಚೇತನಃ ।
ನಿರ್ಜಗಾಮ ಪ್ರಿಯಂ ಪುತ್ರಂ ದ್ರಕ್ಷ್ಯಾಮೀತಿ ಬ್ರುವನ್ ಗೃಹಾತ್ ॥೧೮॥
ಅಥ ರಾಜಾ ಚ ತತ್ಪತ್ನ್ಯಃ ಮಾರ್ಗೇ ಬಹುಜನಾಕುಲೇ ।
ಗಚ್ಛನ್ತಂ ರಾಘವಂ ದೃಷ್ಟ್ವಾ ಸಾನುಜಂ ವಾಕ್ಯಮಬ್ರುವನ್ ॥೧೯॥
ಅನಾಥಸ್ಯ ಜನಸ್ಯಾಸ್ಯ ದುರ್ಬಲಸ್ಯ ತಪಸ್ವಿನಃ ।
ಯೋ ಹಿತಃ ಶರಣಂ ಚಾಸೀತ್ ಸ ನಾಥಃ ಕ್ವನು ಗಚ್ಛತಿ ॥೨೦॥

ಆರ್ಯಾ! ಸಾರಥಿಯೇ! ಕುದುರೆಗಳ ಕಡಿವಾಣಗಳನ್ನು ಬಿಗಿದು ಎಳೆದುಕೋ; ಮೆಲ್ಲಮೆಲ್ಲಗೆ ರಥವನ್ನು ನಡೆಯಿಸಿಕೊಂಡು ಹೋಗು ನಾವು ಸ್ವಲ್ಪ ಹೊತ್ತಾದರೂ ನಮ್ಮ ರಾಮನ ಮುಖವನ್ನು ನೋಡುವೆವು. ಇನ್ನು ಮುಂದೆ ನಮಗದು ನೋಡಲಶಕ್ಯವಾಗಿಬಿಡುವುದು ॥೧೪॥

ನಮ್ಮ ಸೀತೆಯೇ ಕೃತಕೃತ್ಯಳು! ಧರ್ಮನಿಷ್ಠಳಾದ ಇವಳು, ಸೂರ್ಯಪ್ರಭೆಯು ಮೇರುಪರ್ವತವನ್ನು ಬಿಡದಿರುವಂತೆ, ತನ್ನ ಪತಿಯನ್ನು ಅವನ ನೆಳಲಿನಂತೆ ಅನುವರ್ತಿಸಿಹೋಗುತ, ಇಂತಹ ಕಷ್ಟಕಾಲದಲ್ಲಿಯೂ ಅವನನ್ನು ಬಿಡದೆಯೇ ಹೋಗುತಿರುವಳಲ್ಲ! ॥೧೫॥

ಆರ್ಯಾ! ಲಕ್ಷ್ಮಣ! ನೀನೇ ಕೃತಾರ್ಥನು!! ಸರ್ವದಾ ಪ್ರಿಯಭಾಷಿಯಾದ-ದೇವಸದೃಶನಾದ ಅಣ್ಣನನ್ನು ಸೇವಿಸಿಕೊಂಡಿರುವೆಯಲ್ಲ !!! ॥೧೬॥

ಆರ್ಯಾ! ಲಕ್ಷ್ಮಣ! ನೀನು ಈ ರಾಮನನ್ನು ಅನುಸರಿಸಿಕೊಂಡು ಹೋಗುವುದಾವುದುಂಟೋ, ಇದೇ ನಿನಗೆ ದೊಡ್ಡ ಸಿದ್ಧಿಯು; ಇದೇ ದೊಡ್ಡ ಅಭ್ಯುದಯವು; ಸ್ವರ್ಗಕ್ಕೆ ಮಾರ್ಗವೂ ಇದೇಯೆ ॥೧೭॥

ಹೀಗೆಂದು ಹೇಳುತ ಆ ಪೌರಜನರು ರಾಮನನ್ನು ಹಿಂಬಾಲಿಸಿ ಹೊರಟುಹೋದ ಬಳಿಕ, ದಶರಥ ಮಹಾರಾಜನು, ಮಹಾದೀನಚಿತ್ತನಾಗಿ, ಮತ್ತೊಂದು-ಸಲ ನನ್ನ ಪ್ರಿಯಪುತ್ರನನ್ನು ನೋಡುವೆನೆಂದು ಹೇಳುತ, ಮಹಾದೀನರಾದ ಸ್ತ್ರೀಯರೊಡಗೂಡಿದವನಾಗಿ, ತನ್ನ ಅರಮನೆಯಿಂದ ಹೊರಕ್ಕೆ ಹೊರಟನು ॥೧೮॥

ಆಬಳಿಕ, ಬಹುಜನಾಕುಲವಾಗಿರುವ ಮಾರ್ಗದಲ್ಲಿ ತಮ್ಮನೊಡನೆ ಪ್ರಯಾಣಮಾಡುತಿರುವ ಶ್ರೀರಾಮನನ್ನು ನೋಡಿ, ದಶರಥನೂ ಅವನ ಹೆಂಡತಿಯರೂ ಈರೀತಿಯಾಗಿ ಹೇಳಿದರು ॥೧೯॥

ನ ಕ್ರುಧ್ಯತ್ಯಭಿಶಪ್ತೋಪಿ ಕ್ರೋಧನೀಯಾನಿ ವರ್ಜಯನ್ ।
ಕ್ರುದ್ಧಾ ಪ್ರಸಾದಯನ್ ಸರ್ವಾನ್ ಸ ಇತೋದ್ಯ ಕ್ವ ಗಚ್ಛತಿ ॥೧೧॥
ಕೌಸಲ್ಯಾಯಾಂ ಮಹಾತೇಜಾಃ ಯಥಾ ಮಾತರಿ ವರ್ತತೇ ।
ತಥಾ ಯೋ ವರ್ತತೇಸ್ಮಾಸು ಮಹಾತ್ಮಾ ಕ್ವನು ಗಚ್ಛತಿ ॥೧೦॥
ಕೈಕೇಯ್ಯಾ ಕ್ಲಿಶ್ಯಮಾನೇನ ರಾಜ್ಞಾ ಸಂಚೋದಿತೋ ವನಮ್ ।
ಪರಿತ್ರಾತಾ ಜನಸ್ಯಾಸ್ಯ ಸ ದ್ರುತಂ ಕ್ವನು ಗಚ್ಛತಿ ॥೧೩॥
ಇತಿ ಪ್ರಲಪ್ಯ ಬಹುಶೋ ರಾಘವಂ ಸಾನುಜಂ ತದಾ ।
ವೃದ್ಧೋ ದಶರಥೋ ರಾಜಾ ಮೂರ್ಛಿತೋ ನ್ಯಪತದ್ಭುವಿ ॥೧೪॥
ನಾಗ್ನಿಹೋತ್ರಾಣ್ಯಹೂಯನ್ತ ನಾಪಚ್ಯ ಗೃಹಮೇಧಿನಃ ।
ವ್ಯಸೃಜ್ಯ ಕಲಶಾನ್ ನಾಗಾಃ ಗಾವೋ ವತ್ಸಾನ್ ನ ಪಾಯಯನ್ ॥೧೫॥
ಅನರ್ಥಿನಃ ಸುತಾಃ ಸ್ತ್ರೀಣಾಂ ಭರ್ತಾರೋ ಭ್ರಾತರಸ್ತಥಾ ।
ಸರ್ವೇ ಸರ್ವಂ ಪರಿತ್ಯಜ್ಯ ರಾಮಮೇವಾನ್ವಪದ್ಯನ್ತ ॥೧೬॥

ಅನಾಥರಾಗಿಯೂ ದುರ್ಬಲರಾಗಿಯೂ ದೀನರಾಗಿಯೂ ಇರುವ ಈ ಜನರಿಗೆಲ್ಲ, ಯಾವನು ಹಿತನಾಗಿಯೂ ರಕ್ಷಕನಾಗಿಯೂ ಇದ್ದನೋ, ಅಂತಹ ನಮ್ಮ ಒಡೆಯನು ಈಗ ಎಲ್ಲಿ ಹೊರಟು ಹೋಗುವನು? ॥೨೦॥

ಕ್ರೋಧಸ್ಥಾನಗಳನ್ನೆಲ್ಲ ಬಿಟ್ಟಿರುವ ಯಾವ ಮಹಾನುಭಾವನು, ಮತ್ತೊಬ್ಬರು ತನ್ನನ್ನು ಬಯ್ದರೂ ತಾನು ಅವರಮೇಲೆ ಕೋಪಮಾಡುವುದಿಲ್ಲವೋ, ಕೋಪಿಸಿಕೊಳ್ಳತಕ್ಕವರನ್ನೆಲ್ಲ ಯಾವನು ತಾನಾಗಿ ಸಮಾಧಾನಪಡಿಸುವನೋ, ಅಂತಹ ಶ್ರೀರಾಮನು ಈಗ ಇಲ್ಲಿಂದ ಎಲ್ಲಿಗೆ ಹೊರಟುಹೋಗುವನು? ॥೨೧॥

ಮಹಾತೇಜಸ್ವಿಯಾದ ಯಾವನು, ತನ್ನ ಜನನಿಯಾದ ಕೌಸಲ್ಯೆಯಲ್ಲಿರುವಂತೆಯೇ ನಮ್ಮ ಗಳಲ್ಲಿಯೂ ಭಕ್ತಿಯಿಂದ ನಡೆಯುತ್ತಲಿರುವನೋ, ಅಂತಹ ಮಹಾತ್ಮನು ಈಗ ಎಲ್ಲಿ ಹೋಗುವನು? ॥೨೨॥

ಕೈಕೇಯಿಯಿಂದ ಅತಿಯಾಗಿ ಕ್ಲೇಶಪಡಿಸಲ್ಪಟ್ಟ ದಶರಥನು ಅರಣ್ಯಕ್ಕೆ ಹೋಗಬೇಕೆಂದು ಹೇಳಿದ ಉತ್ತರಕ್ಷಣವೇ, ಇದುವರೆಗೂ ನಮ್ಮಗಳನ್ನು ನಾನಾವಿಧವಾಗಿ ಕಾಪಾಡುತ್ತಿದ್ದ ಆ ಮಹಾನುಭಾವನು ಎಲ್ಲಿಗೆ ಹೋಗುವನು? ॥೨೩॥

ಹೀಗೆಂದು ಅನುಜಸಹಿತನಾದ ಶ್ರೀರಾಮನನ್ನು ಉದ್ದೇಶಿಸಿಕೊಂಡು ಬಹಳವಾಗಿ ವಿಲಾಪ ಮಾಡಿ, ತನ್ನಂತೆಯೇ ವಿಲಾಪಮಾಡುತಿರುವ ಆ ಅಂತಃಪುರಸ್ತ್ರೀಯರೊಡಗೂಡಿದವನಾಗಿ, ವೃದ್ಧನಾದ ಮಹಾರಾಜ ದಶರಥನು, ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದುಬಿಟ್ಟನು ॥೨೪॥

ಆಗ ಶ್ರೀರಾಮನು ಅರಣ್ಯಕ್ಕೆ ಹೊರಟುಹೋದಬಳಿಕ, ಅಯೋಧ್ಯಾಪಟ್ಟಣದಲ್ಲಿ ಅಗ್ನಿಹೋತ್ರಹೋಮಗಳು ಮಾಡಲ್ಪಡಲಿಲ್ಲ; ಗೃಹಸ್ಥರು ಮನೆಯಲ್ಲಿ ಅಡಿಗೆ ಮಾಡಲಿಲ್ಲ; ಆನೆಗಳು ಹುಲ್ಲು ತಿನ್ನುವುದನ್ನು ಬಿಟ್ಟುಬಿಟ್ಟುವು; ಹಸುಗಳು ಕರುಗಳಿಗೆ ಹಾಲುಣ್ಣಗೊಡಿಸಲಿಲ್ಲ ॥೨೫॥

ಅಯೋಧ್ಯೆಯಲ್ಲಿನ ಸ್ತ್ರೀಯರಿಗೆ, ತಮ್ಮ ಮಕ್ಕಳೂ ಪತಿಗಳೂ ಸಹೋದರರೂ ಬೇಕಾಗಲಿಲ್ಲ. ಹೇಗೆಂದರೆ? ಎಲ್ಲರೂ ಎಲ್ಲವನ್ನೂ ಬಿಟ್ಟುಬಿಟ್ಟು ರಾಮನನ್ನೇ ಚಿಂತಿಸುತಿದ್ದರು ॥೨೬॥

ತತೋ ನಿವರ್ತಯಾಮಾಸ ಪ್ರಜಾಃ ಸರ್ವಾ ರಘೂತ್ತಮಃ ।
ರಾಜಾನಂ ರಾಜಪುತ್ರಾಂಶ್ಚ ಸಾಮನ್ತಾಂಶ್ಚಾಪಿ ಸರ್ವತಃ ॥೬೭॥
ವಿನಾ ಸುಮನ್ತ್ರಂ ಸರ್ವಾಂಶ್ಚ ಪ್ರೇಷಯಾಮಾಸ ರಾಘವಃ ।
ರಾಜಾ ಕಥಞ್ಚಿದ್ದಾಮೇನ ಸಾನ್ತ್ವಯಿತ್ವಾ ನಿವಾರಿತಃ ॥೬೮॥
ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಚಾಪಿ ಮಾತರಃ ।
ನಿವರ್ತಿತಾಶ್ಚ ರಾಮೇಣ ನಾನಾಸಾನ್ತ್ವಪ್ರಬೋಧನೈಃ ॥೬೯॥
ರಾಮೇ ವಿನಿರ್ಗತೇ ಶೂನ್ಯಂ ಪುರಮಾಲೋಕ್ಯ ಭೀತಿತಃ ।
ಕೈಕೇಯೀ ರಾಘವಂ ಪ್ರೇಕ್ಷ್ಯ ಪ್ರಾಹಾಶ್ರುನಯನಾ ಸತೀ ॥೭೦॥
ರಾಮಚನ್ದ್ರಾಖಿಲಾಧಾರ ಪರಮಾತ್ಮನಿ ರಾಘವ ।
ಸರ್ವಾತ್ಮಕ ಸರ್ವಭಾವಸ್ಥ ಸ್ವಭಾವಂ ವೇತ್ಸಿ ದೇಹಿನಾಮ್ ॥೭೧॥
ಈಶ್ವರಃ ಸರ್ವಭೂತಾನಾಂ ತ್ವಮೇವ ಹೃದಿ ಸಂಸ್ಥಿತಃ ।
ಭ್ರಾಮಯನ್ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ॥೭೨॥
ಸನ್ಮನೋ ದುಷ್ಟಹೃದಯಂ ತ್ವಂ ವೇತ್ಸಿ ಸಕಲಾತ್ಮಕ ।
ಮನ್ಥರಾಸಙ್ಗದೋಷೇಣ ಮಯಿ ಸರ್ವಂ ಪ್ರತಿಷ್ಠಿತಮ್ ।

ಆ ಬಳಿಕ, ಶ್ರೀರಾಮನು, ಸಮಸ್ತ ಪ್ರಜೆಗಳನ್ನೂ–ದಶರಥನನ್ನೂ–ರಾಜಪುತ್ರರನ್ನೂ–ಸುತ್ತಲೂ ಇದ್ದ ಸಾಮಂತರಾಜರನ್ನೂ ಕೂಡ ಹಿಂದಕ್ಕೆ ಕಳುಹಿಸಿದನು ॥೬೭॥

ಆಗ ಶ್ರೀರಾಮನು, ಸುಮಂತ್ರನೊಬ್ಬನನ್ನು ಬಿಟ್ಟು ಮಿಕ್ಕವರನ್ನೆಲ್ಲ ಹಿಂದಕ್ಕೆ ಕಳುಹಿಸಿದನು; ದಶರಥನನ್ನು ಅತಿ ಪ್ರಯಾಸದಿಂದ ಸಮಾಧಾನಪಡಿಸಿ, ತನ್ನ ಜತೆಯಲ್ಲಿ ಅರಣ್ಯಕ್ಕೆ ಬರದಂತೆ ತಡೆದನು; ಕೌಸಲ್ಯಾ ಕೈಕೇಯೀ ಸುಮಿತ್ರೆಯರನ್ನೂ ಇತರ ಮಾತೃವರ್ಗವನ್ನೂ ಕೂಡ, ನಾನಾವಿಧವಾದ ಸಮಾಧಾನೋಕ್ತಿಯಿಂದಲೂ ತತ್ತ್ವೋಪದೇಶಗಳಿಂದಲೂ ಹಿಂದಿರುಗಿಸಿದನು ॥೬೮-೭೯॥

ಆಗ ಶ್ರೀರಾಮನು ಹೊರಟುಹೋಗಲಾಗಿ ಪಟ್ಟಣವೆಲ್ಲವೂ ಸುತ್ತಲೂ ಶೂನ್ಯವಾದುದನ್ನು ಕಂಡು, ಭೀತಳಾದ ಕೈಕೇಯಿಯು, ಕಣ್ಣೀರುದುಂಬಿಕೊಂಡವಳಾಗಿ, ಶ್ರೀರಾಮನನ್ನು ನೋಡಿ ಹೀಗೆ ಹೇಳಿದಳು ॥೭೦॥

ರಾಮಚಂದ್ರ! ರಾಘವ! ಸರ್ವಲೋಕಶರಣ್ಯ! ನೀನೇ ಸಾಕ್ಷಾತ್ ಪರಮಾತ್ಮನಾಗಿರುವೆ ಎಲೈ ಸರ್ವಾತ್ಮಕನೆ! ಸರ್ವಭಾವಸ್ಥನೆ! ಪ್ರಾಣಿಗಳ ಸ್ವಭಾವವನ್ನೆಲ್ಲ ನೀನು ತಿಳಿದವನಾಗಿಯೇ ಇರುವೆ ॥೭೧॥

ಸಮಸ್ತ ಭೂತಗಳನ್ನೂ ಚಕ್ರದ ಮೇಲಿರುವಂತೆ ಸುತ್ತಿಸುತಿರುವ ನೀನೇ ಸರ್ವಭೂತಗಳಿಗೂ ಈಶ್ವರನಾಗಿಯೂ–ಸರ್ವಪ್ರಾಣಿಗಳ ಹೃದಯಸ್ಥಿತನಾಗಿಯೂ ಇರುವೆ ॥೭೨॥

ಎಲೈ ಸರ್ವಾತ್ಮಕನೆ! ಇದು ಒಳ್ಳೆಯ ಮನಸ್ಸೆಂದೂ, ಇದು ಕೆಟ್ಟ ಮನಸ್ಸೆಂದೂ ನೀನೇ ತಿಳಿದಿರುವೆ. ಆ ದುಷ್ಟಳಾದ ಮಂಥರೆಯ ಸಹವಾಸದೋಷದಿಂದ, ನನ್ನಲ್ಲಿ ಆ ನೀಚವರ್ತನ

ನ ಗ್ರಾಹ್ಯಂ ವಾಕ್ಯಮೇತದ್ಧಿ ಭ್ರಾನ್ತಸ್ಯ ವಚನಂ ಯಥಾ ॥೩೫॥
ಸ್ತ್ರೀಷು ಮೋಹವಶಾದ್ರಾಮ ಯತ್ ಕೃತಂ ತನ್ನ ಕಾರಣಮ್ ।
ಕಾಮುಕಾಃ ಕಿಂ ನ ಕುರ್ವನ್ತಿ ಯತ್ ಪರತ್ರೇಹ ದುಷ್ಯತಿ ॥೩೪॥
ಸ್ವಪ್ನೇನ್ದ್ರಿಯಸಮಂ ರಾಮ ಯದಿ ಸತ್ಯಂ ಪ್ರಮನ್ಯಸೇ ।
ನ ಹಿ ದೋಷೋಸ್ತಿ ತೇ ರಾಮ ಪ್ರಾಯಶ್ಚಿತ್ತವಿಧಾನತಃ ॥೩೫॥
ಶತ್ರುಘ್ನೋ ಭರತಶ್ಚೈವ ವನವಾಸಂ ಪ್ರಕುರ್ವತಃ ।
ತ್ವಯಾಜ್ಞಾ ದೀಯತಾಂ ರಾಮ ಭೃತ್ಯಾಸ್ತೇಪ್ಯಧಿಕಾರಿಣಃ ॥೩೬॥
ತ್ವಂ ರಾಜಾ ಭವ ಕಲ್ಯಾಣ ಧರಣೀಧರಣಕ್ಷಮಃ ।
ಶೇಷೋ ವಹತಿ ಭೂಭಾರಂ ರಾಜಲೇಷು ಕಥಂ ಕ್ಷಮಾ ॥೩೭॥
ನಿವರ್ತಸ್ವ ಮಹಾಬುದ್ಧೇ ಕಲ್ಯಾಣನಿಲಯೋ ಭವ ॥೩೮॥
ತಸ್ಯಾಸ್ತದ್ವಚನಂ ಶ್ರುತ್ವಾ ರಾಮಃ ಪ್ರಾಹ ಸ್ವತನ್ತ್ರಧೀಃ ।
ಸಾನ್ತ್ವಯನ್ ಕೈಕಯೀಮಮ್ಬಾಂ ಸ್ವಾಪರಾಧೇನ ದುಃಖಿತಾಮ್ ॥೩೯॥

ವೆಲ್ಲವೂ ನೆಲೆಸಿತು; ಇದು ನನ್ನ ಮನಃಪೂರ್ವಕವಾದ ಕೃತ್ಯವಲ್ಲ. ಅದಕಾರಣ, ಬುದ್ಧಿ ಭ್ರಮೆಯುಂಟಾಗಿರುವವನ ಮಾತಿನಂತೆಯೇ ಇದನ್ನೂ ತಿಳಿದು, ನನ್ನ ಮಾತೊಂದನ್ನೂ ನೀನು ಮನಸ್ಸಿನಲ್ಲಿಡಕೂಡದು ॥೩೩॥

ಅಯ್ಯಾ! ರಾಮ! ಸ್ತ್ರೀಯರಲ್ಲಿ ವ್ಯಾಮೋಹದಿಂದ ಯಾವ ಕೆಲಸವು ಮಾಡಲ್ಪಟ್ಟಿತೋ, ಅದು ದೊಡ್ಡ ಕಾರಣವಲ್ಲ. ಕಾಮುಕರಾದವರು, ಇಹಪರಗಳೆರಡರಲ್ಲಿಯೂ ದೋಷಾವಹವಾದ ಯಾವ ಕೆಲಸವನ್ನು ತಾನೆ ಮಾಡುವುದಿಲ್ಲ? ಅದುದರಿಂದ, ನಮ್ಮ ಮಹಾರಾಜರ ಆಜ್ಞೆಯನ್ನು ಈಗ ಪ್ರಬಲವೆಂದು ನೀನು ಎಣಿಸಕೂಡದು ॥೩೪॥

ವತ್ಸ! ರಾಮ! ಕಾಮುಕರ ವಚನವೆಲ್ಲವೂ, ಸ್ವಪ್ನದಲ್ಲಾಗುವ ಇಂದ್ರಿಯವ್ಯಾಪಾರಕ್ಕೆ ಸಮಾನವಾದುದು ಅಥವಾ, ನೀನು ದಶರಥನ ವಚನವನ್ನೇ ಪ್ರಮಾಣವಾಗಿ ಎಣಿಸುವಪಕ್ಷದಲ್ಲಿ, ಅರಣ್ಯವಾಸರೂಪವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾದ ದೋಷವಾವುದೂ ನಿನ್ನಲ್ಲಿಲ್ಲವೆಂದು ಸ್ಪಷ್ಟವಾಗಿರುವುದಲ್ಲವೆ! ॥೩೫॥

ದಶರಥನ ವಚನವು ಅಸತ್ಯವಾಗದಂತೆ ಅರಣ್ಯಕ್ಕೆ ಹೋಗಿಯೇ ತೀರಬೇಕೆಂದು ನೀನು ಹೇಳುವೆಯಾದರೆ, ನಿನಗೆ ಬದಲಾಗಿ ಭರತ ಶತ್ರುಘ್ನರೂ–ಅಥವಾ ಮತ್ತಾರಾದರೂ–ವನವಾಸವನ್ನು ಮಾಡುವರು. ನೀನು ಅವರಿಗೆ ಆಜ್ಞೆಯನ್ನು ಕೊಡುವನಾಗು. ವತ್ಸ! ರಾಮ! ಭೃತ್ಯರಾಗಿರುವುದರಿಂದ ಅವರೂ ಇದರಲ್ಲಿ ಅಧಿಕಾರಿಗಳೇ ಆಹುದು ॥೩೬॥

ಎಲೈ ಮಂಗಳಾತ್ಮಕನೆ! ನೀನು ಈಗ ದೊರೆಯಾಗಿ ರಾಜ್ಯವನ್ನು ವಹಿಸು. ಈ ಭೂಮಿಯನ್ನು ವಹಿಸಲು ನೀನೇ ಸಮರ್ಥನು. ಭೂಮಿಯ ಭಾರವನ್ನು ಆದಿಶೇಷನೊಬ್ಬನೇ ಹೊರಬಲ್ಲನಲ್ಲದೆ, ನೀಚಾಶ್ರಯಗಳಿಗೆ ಶಕ್ತಿಯೆಲ್ಲಿರುವುದು? ಹೀಗಿರುವುದರಿಂದ, ಎಲೈ ಮಹಾಬುದ್ಧಿಯೆ! ಈಗ ನೀನು ಹಿಂದಿರುಗುವನಾಗು; ಸಮಸ್ತ ಮಂಗಳಗಳಿಗೂ ಭಾಜನನಾಗು ॥೩೭–೩೮॥

ಎಂದು ಕೈಕೇಯಿಯು ಹೇಳುತ್ತಿರಲಾಗಿ, ಅವಳ ಮಾತನ್ನು ಕೇಳಿದ ಸ್ವತಂತ್ರಜ್ಞಾನನಾದ ಆ ರಾಮನು, ತಾನೇ ಸಾಕ್ಷಾತ್ತಾಗಿ ಅಪರಾಧವಮಾಡಿ ದುಃಖಪಡುತಿರುವ ಮಾತೆಯಾದ ಕೈಕೇಯಿಯನ್ನು ಸಮಾಧಾನಪಡಿಸುತ ಹೀಗೆ ಹೇಳಿದನು ॥೩೯॥

ಅಹಂ ಜಾನಾಮಿ ಸರ್ವೇಷಾಂ ಹೃದಯಂ ಪ್ರಕೃತಿಂ ಮನಃ ।
ಅಜ್ಞಾತಂ ನಾಸ್ತಿ ಮೇ ದೇವಿ ಭೂತಭವ್ಯಭವತ್ಸ್ವಪಿ ॥೪೦॥
ಮತ್ತಃ ಸರ್ವಮಿದಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಮ್ ।
ಲಾಭಾಲಾಭೌ ಸುಖಂ ದುಃಖಂ ಮತ್ತಃ ಸರ್ವಂ ಪ್ರವರ್ತತೇ ॥೪೧॥
ತವಾಪರಾಧೋ ನಾಸ್ತ್ಯತ್ರ ದೈವಾವಿಘ್ನಂ ಚ ಕುರ್ವತೇ ।
ದೈವಕೃತ್ಯೇ ಕೋಽಪರಾಧಃ ಕಾಂಚಿನ್ನಾ ಕಸ್ಯ ದೇಹಿನಃ ॥೪೨॥
ತ್ವಂ ಮೇ ಮಾತೃಸಮಾ ದೇವಿ ತ್ವಯಿ ಮೇ ನಾಸ್ತಿ ದುರ್ಮನಃ ।
ಮಯಾ ತ್ವಯಾ ಚ ಭರತಃ ಪಾಲನೀಯೋಽತಿಬಾಲಕಃ ।
ಶತ್ರುಘ್ನೋಽಪಿ ತಥಾ ಮಾತಃ ಸುಮಿತ್ರಾನನ್ದವರ್ಧನಃ ॥೪೩॥
ಇತಿ ಸಾನ್ತ್ವವಚೋಽಭಿಸ್ತಾಂ ಪ್ರೇಷಯಾಮಾಸ ಕೈಕಯೀಮ್ ॥೪೪॥
ತತೋ ರಾಮಃ ಪ್ರಸನ್ನಾತ್ಮಾ ಭೃತ್ಯಶೇಷಸಮನ್ವಿತಃ ।
ಸರ್ವಜ್ಞತ್ವಾದನಿರ್ವೇದಃ ಸುಮನ್ತ್ರಸಹಿತೋ ಯಯೌ ॥೪೫॥
ಅನುರಕ್ತಾ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅನುಜಗ್ಮುಃ ಪ್ರಯಾನ್ತಂ ತಂ ವನವಾಸಾಯ ಮಾನವಾಃ ॥೪೬॥

ಹೇ ದೇವಿ! ಕೈಕೇಯಿ! ನಾನು ಸಮಸ್ತರ ಹೃದಯವನ್ನೂ ಸ್ವಭಾವವನ್ನೂ ಮನಸ್ಸನ್ನೂ ಅರಿತೇ ಇರುವೆನು. ಭೂತಭವಿಷ್ಯದ್ವರ್ತಮಾನಗಳಲ್ಲಿ ನನಗೆ ತಿಳಿಯದಿರುವುದಾವುದೂ ಇಲ್ಲ ॥

ಈ ಸಮಸ್ತವೂ ನನ್ನಿಂದಲೇ ಹುಟ್ಟಿರುವುದು; ಸಮಸ್ತವೂ ನನ್ನಲ್ಲಿಯೇ ನೆಲೆಸಿರುವುದು. ಲಾಭ ನಷ್ಟಗಳೂ, ಸುಖದುಃಖಗಳೂ, ಸಮಸ್ತವೂ ನನ್ನಿಂದಲೇ ಪ್ರವರ್ತಿಸುವುದು ॥೪೧॥

ಅಂಬ! ಈ ವಿಷಯದಲ್ಲಿ ನಿನ್ನದೇನೂ ಅಪರಾಧವಿಲ್ಲ. ದೇವತೆಗಳೇ ನನ್ನ ಪಟ್ಟಾಭಿಷೇಕಕ್ಕೆ ವಿಘ್ನಮಾಡುತಿರುವರು. ದೈವಿಕವಾದ ವ್ಯಾಪಾರದಲ್ಲಿ, ಯಾರದೇನಪರಾಧವಿರುವುದು? ಯಾವ ಪ್ರಾಣಿಗೆತಾನೆ ಯಾವ ಚಿಂತೆಯುಂಟು? ॥೪೨॥

ಹೇ ದೇವಿ! ನೀನು ನನ್ನ ತಾಯಿಗೆ ಸಮಾನಳು; ನಿನ್ನ ವಿಷಯದಲ್ಲಿ ನನಗೆ ಕೆಟ್ಟ ಅಭಿಪ್ರಾಯವೇನೂ ಇಲ್ಲ. ಹೇ ಮಾತಃ! ಅತಿ ಬಾಲಕನಾದ ಭರತನನ್ನು, ನಾನೂ ನೀನೂ ಜೊತೆಗೂಡಿ ಸಂರಕ್ಷಿಸಬೇಕಾಗಿರುವುದು. ಹಾಗೆಯೇ, ಸುಮಿತ್ರಾಪುತ್ರನಾದ ಶತ್ರುಘ್ನನನ್ನೂ ನಾವಿಬ್ಬರೂ ಪರಿಪಾಲಿಸಬೇಕಾಗಿರುವುದು ॥೪೩॥

ಹೀಗೆಂದು ಸಮಾಧಾನೋಕ್ತಿಯಿಂದ ಕೈಕೇಯಿಯನ್ನು ಕಳುಹಿಸಿಬಿಟ್ಟು, ಬಳಿಕ, ಪ್ರಸನ್ನಹೃದಯನಾದ ಶ್ರೀರಾಮನು, ಉಳಿದ ಕೆಲವು ಮಂದಿ ಅಪ್ತಭೃತ್ಯರೊಡಗೂಡಿದವನಾಗಿ, ಸ್ವಯಂ ಸರ್ವಜ್ಞನಾದುದರಿಂದ ಸ್ವಲ್ಪವೂ ಬೇಸರವಿಲ್ಲದೆ, ಸುಮಂತ್ರನೊಡನೆ ಮುಂದಕ್ಕೆ ಪ್ರಯಾಣಮಾಡಿದನು ॥೪೪-೪೫॥

ಆಗ, ಮಹಾತ್ಮನಾದ ಸತ್ಯಪರಾಕ್ರಮನಾದ ರಾಮನಲ್ಲಿ ಅನುರಕ್ತರಾಗಿರುವ ಆ ಜನರೆಲ್ಲರೂ, ಪ್ರಯಾಣಮಾಡುತಿರುವ ಅವನನ್ನು ಅನುಸರಿಸಿಕೊಂಡು, ತಾವೂ ಅರಣ್ಯವಾಸಕ್ಕೆ ಹೊರಟವರಾದರು ॥೪೬॥

ನಿವರ್ತಿತೇಪಿ ಚ ಬಲಾತ್ ಸುಹೃದ್ವರ್ಗೇಪಿ ರಾಜನಿ ।
ನೈವ ತೇ ಸನ್ನ್ಯವರ್ತನ್ತ ರಾಮಸ್ಯಾನುಗತಾ ರಥಮ್ ॥೪೭॥
ಅಯೋಧ್ಯಾನಿಲಯಾನಾಂ ಹಿ ಪುರುಷಾಣಾಂ ಮಹಾಯಶಾಃ ।
ಬಭೂವ ಗುಣಸಮ್ಪನ್ನಃ ಪೂರ್ಣಚನ್ದ್ರ ಇವ ಪ್ರಿಯಃ ॥೪೮॥
ಬಾಷ್ಪೇಣ ಪಿಹಿತಂ ದೀನಂ ರಾಮಃ ಸೌಮಿತ್ರಿಣಾ ಸಹ ।
ಚಕರ್ಷೇವ ಗುಣೈರ್ಬದ್ಧ್ವಾ ಜನಂ ಪುರನಿವಾಸಿನಮ್ ॥೪೯॥
ತೇ ದ್ವಿಜಾಸ್ತ್ರಿವಿಧಂ ವೃದ್ಧಾಃ ಜ್ಞಾನೇನ ವಯಸೌಜಸಾ ।
ವಯಃಪ್ರಕರ್ಷಶಿರಸಃ ದೂರಾದೂಚುರಿದಂ ವಚಃ ॥೫೦॥
ಬ್ರಾಹ್ಮಣ್ಯಂ ಸರ್ವಮೇತತ್ ತ್ವಾಂ ಬ್ರಹ್ಮಣ್ಯಮನುಗಚ್ಛತಿ ।
ದ್ವಿಜಸ್ಯಾರ್ಧಾಧಿರೂಢಾಸ್ತ್ವಾಂ ಅಗ್ನಯೋಪ್ಯನುಯಾನ್ತ್ಯಮೀ ॥೫೧॥
ವಾಜಪೇಯಸಮುತ್ಥಾನಿ ಛತ್ರಾಣ್ಯೇತಾನಿ ಪಶ್ಯ ನಃ ।
ಪೃಷ್ಠತೋನುಪ್ರಯಾನ್ತ್ಯೇವ ಹಂಸಾ ಇವ ಜಲಾತ್ಯಯೇ ॥೫೨॥

ಮಿತ್ರವರ್ಗವನ್ನೂ ದಶರಥನನ್ನೂ ಆಗ ರಾಮನು ಬಲಾತ್ಕಾರದಿಂದ ಹಿಂದಿರುಗಿಸಿದಾಗ್ಯೂ, ರಾಮನ ರಥವನ್ನನುಸರಿಸಿಕೊಂಡು ಹೋಗುತಿರುವ ಆ ಪಟ್ಟಣಿಗರು ಮಾತ್ರ ಹಿಂದಿರುಗಲೇ ಇಲ್ಲ ॥೪೬॥

ಮಹಾಯಶಸ್ವಿಯೂ ಸರ್ವಗುಣಸಂಪನ್ನನೂ ಆದ ಶ್ರೀರಾಮನು, ಅಯೋಧ್ಯೆಯಲ್ಲಿ ವಾಸ ಮಾಡಿಕೊಂಡಿದ್ದ ಸಮಸ್ತ ಜನರಿಗೂ, ಪೂರ್ಣಚಂದ್ರನಂತೆ ಮಹಾಪ್ರೀತಿಕರನಾಗಿದ್ದನು ॥೪೮॥

ಆಗ, ಬಾಷ್ಪಪೂರಿತಲೋಚನರಾಗಿ ಅತಿ ದೈನ್ಯದಿಂದ ಹಿಂದೆ ಬರುತಿರುವ ಆ ಪುರಜನರೆಲ್ಲರನ್ನೂ, ಶ್ರೀರಾಮನು ಲಕ್ಷ್ಮಣನೊಡನೆ ತನ್ನ ಗುಣಗಳೆಂಬ ರಜ್ಜುಗಳಿಂದ ಬಂಧಿಸಿ ಸೆಳೆದುಕೊಂಡು ಹೋಗುತಿರುವಂತೆ ಕಾಣಿಸುತಿದ್ದನು ॥೪೯॥

ಜ್ಞಾನದಿಂದಲೂ ವಯಸ್ಸಿನಿಂದಲೂ ತೇಜಸ್ಸಿನಿಂದಲೂ-ಈ ಮೂರು ವಿಧವಾಗಿಯೂ ವೃದ್ಧರಾಗಿರುವ ಆ ಬ್ರಾಹ್ಮಣರು, ವಾರ್ಧಕ್ಯದಿಂದ ತಲೆಯನ್ನು ನಡುಗಿಸುತ, ದೂರದಲ್ಲಿಯೇ ಈ ಮಾತನ್ನು ಹೇಳಿದರು ॥೫೦॥

ಅಯ್ಯಾ! ರಾಮ! ಈ ಸಮಸ್ತ ಬ್ರಾಹ್ಮಣಸಮೂಹವೂ ಬ್ರಾಹ್ಮಣಹಿತನಾದ ನಿನ್ನನ್ನು ಅನುಸರಿಸಿ ಬರುತಿರುವುದು; ಈ ಬ್ರಾಹ್ಮಣರ ಹೆಗಲಮೇಲಿರುವ ಅಗ್ನಿಹೋತ್ರಾಗ್ನಿಗಳೂ ಕೂಡ ನಿನ್ನನ್ನು ವಿಶೇಷವಾಗಿ ಹಿಂಬಾಲಿಸುತಿರುವುವು ॥೫೧॥

ವಾಜಪೇಯಕ್ರತುವನ್ನು ಮಾಡಿದಾಗ ನಮಗೆ ಮರ್ಯಾದಾಲಬ್ಧವಾದ ಈ ಛತ್ರಿಗಳನ್ನು ನೋಡು; ಇವು ಶರತ್ಕಾಲದಲ್ಲಿ ಹಂಸಗಳು ಗುಂಪುಸೇರುವಂತೆ ಗುಂಪುಕೂಡಿಕೊಂಡು, ನಿನ್ನ ಬೆನ್ನುಹಿಂದುಗಡೆಯೇ ಅನುಸರಿಸಿಬರುತಿರುವುವು ॥೫೨॥

ಅನವಾಪ್ತತಪತ್ರಸ್ಯ ರಶ್ಮಿಸನ್ತಾಪಿತಸ್ಯ ತೇ ।
ಏಭಿಶಾ ಯಾಂ ಕರಿಷ್ಯಾಮಃ ಸ್ವೈಶ್ಚ ತ್ರೈರ್ವಾಜಿಪೇಯಿಕೈಃ ॥೫೩॥

ಯಾ ಹಿ ನಃ ಸತತಂ ಬುದ್ಧಿಃ ವೇದಮನ್ತ್ರಾನುಸಾರಿಣೀ ।
ತ್ವತ್ಕೃತೇ ಸಾ ಕೃತಾ ವತ್ಸ ವನವಾಸಾನುಸಾರಿಣೀ ॥೫೪॥

ಹೃದಯೇಷ್ವವತಿಷ್ಠನ್ತೇ ವೇದಾಯೇ ನಃ ಪರಂ ಧನಮ್ ।
ವಸನ್ತ್ಯಪಿ ಗೃಹೇಷ್ವೇವ ದಾರಾಶ್ಚಾರಿತ್ರರಕ್ಷಿತಾಃ ॥೫೫॥

ನ ಪುನರ್ನಿಶ್ಚಯಃ ಕಾರ್ಯಃ ತ್ವದ್ಗತೌ ಸುಕೃತಾ ಮತಿಃ ।
ತ್ವಯಿ ಧರ್ಮವ್ಯಪೇಕ್ಷೇ ತು ಕಿಂ ಸ್ಯಾದ್ಧರ್ಮಮಪೇಕ್ಷಿತುಮ್ ॥೫೬॥

ಯಾಜಿತೋ ನೋ ನಿವರ್ತಸ್ವ ಹಂಸಶುಕ್ಲಶಿರೋರುಹೈಃ ।
ಶಿರೋಭಿರ್ನಿಹೃತಾಚಾರಮುಹೀಪತನಪಾಂಸುಲೈಃ ॥೫೭॥

ಬಹೂನಾಂ ವಿತತಾಯಜ್ಞಾಃ ಸಿದ್ಧಾನಾಂ ಯಜ್ಞಹಾಗತಾಃ ।

ಕ್ಷತ್ರಿಯನ್ನು ಹಿಡಿಯಿಸಿಕೊಳ್ಳದೆ–ಬಿಸಿಲಿನಿಂದ ತಾಪಪಡುತಿರುವ ನಿನಗೆ, ನಮ್ಮ ಈ ವಾಜಪೇಯಿಕಗಳಾದ ಕ್ಷತ್ರಿಗಳಿಂದ ನೆಳಲನ್ನುಂಟುಸಾಡುವೆವು ॥೫೩॥

ವತ್ಸ! ರಾಮಭದ್ರ! ಯಾವ ನಮ್ಮ ಬುದ್ಧಿಯು ಸರ್ವದಾ ವೇದಮಂತ್ರಗಳನ್ನನುಸರಿಸತಕ್ಕುದಾಗಿರುವುದೋ, ಅದು ಈಗ ನಿನಗೋಸ್ಕರ ವನವಾಸವನ್ನನುಸರಿಸತಕ್ಕುದಾಗಿ ಮಾಡಲ್ಪಟ್ಟಿರುವುದು ॥೫೪॥

ನಮ್ಮ ಧನವನ್ನೂ ಪತ್ನಿಯರನ್ನೂ ರಕ್ಷಿಸಬೇಕಾದ ಭಾರವೇನೂ ನಮಗಿರುವುದಿಲ್ಲ. ನಮಗೆ ಮುಖ್ಯ ಧನವಾದ ವೇದಗಳು ಯಾವುವುಂಟೋ, ಅವು ಸರ್ವದಾ ನಮ್ಮ ಹೃದಯದಲ್ಲಿಯೇ ನೆಲೆಸಿರುವುವು; ನಮ್ಮ ಪತ್ನಿಯರೂ ಕೂಡ, ತಮ್ಮ ಪಾತಿವ್ರತ್ಯದಿಂದ ಸಂರಕ್ಷಿಸಲ್ಪಟ್ಟವರಾಗಿ, ನಮ್ಮ ನಮ್ಮ ಮನೆಯಲ್ಲಿಯೇ ವಾಸಮಾಡಿಕೊಂಡಿರುವರು. ಹೀಗಿರುವುದರಿಂದ, ನಾವು ನಿನ್ನೊಡನೆ ಅರಣ್ಯಕ್ಕೆ ಬರುವುದರಲ್ಲಿ ಬಾಧೆಯೇನೂ ಇಲ್ಲ ॥೫೫॥

ವತ್ಸ! ರಾಮ! ನಾವು ಹೀಗೆ ನಿನ್ನನ್ನು ಹಿಂಬಾಲಿಸಿ ಬರುವುದರಲ್ಲಿ ಮನಸ್ಸನ್ನು ಸ್ಥಿರಪಡಿಸಿಕೊಂಡಿರುವೆವು. ಅದುಕಾರಣ, ನೀನು ನಮ್ಮನ್ನು ಅರಣ್ಯವಾಸಕ್ಕೆ ಕರೆದುಕೊಂಡು ಹೋಗುವುದಿಲ್ಲವೆಂದು ನಿಶ್ಚಯಮಾಡಕೂಡದು. ಕೇವಲ ಧರ್ಮನಿಷ್ಠನಾದ ನೀನೇ–ಧರ್ಮದಲ್ಲಿ ಉಪೇಕ್ಷೆಮಾಡಿ-ಬಾ ಬ್ರಾಹ್ಮಣರಾದ ನಮ್ಮ ಪ್ರಾರ್ಥನೆಯನ್ನು ನಡೆಯಿಸದಿದ್ದರೆ, ಧರ್ಮವನ್ನು ಉಪೇಕ್ಷಿಸದಿರುವುದಕ್ಕೆ ಮತ್ತಾರಿಂದಾಗುವುದು? ॥೫೬॥

ಹಂಸದಂತೆ ಶುಭ್ರವಾದ ಕೇಶವುಳ್ಳವರಾಗಿ ಕೇವಲ ವೃದ್ಧರಾದ ನಾವು, ನಮ್ಮ ಶಿರಸ್ಸನ್ನು ಭೂಮಿಯು ಮೇಲೆ ಹೊರಳಾಡಿಸುತ ಧೂಳಿಧೂಸರವನ್ನಾಗಿ ಮಾಡಿಕೊಂಡು ನಿನ್ನನ್ನು ಪ್ರಾರ್ಥಿಸುವೆವು; ಈಗ ನೀನು ನಮಗೋಸ್ಕರ ಹಿಂದಿರುವನಾಗು ॥೫೭॥

ಇಲ್ಲಿ ಯಾರುಯಾರು ಬಂದಿರುವರೋ, ಈ ಸಮಸ್ತರೂ-ಮಹಾಸಿದ್ಧರಾಗಿಯೂ ಅನೇಕ ಯಜ್ಞ ಪ್ರಾರಂಭವಾಡಿದವರಾಗಿಯೂ ಇರುವರು. ಅವುಗಳ ಪರಿಪೂರ್ತಿಯೆಲ್ಲವೂ, ಈಗ ನಿನ್ನ

ತೇಷಾಂ ಸರ್ವಾಪ್ತರಾಯತ್ತಾ ತವ ವತ್ಸ ನಿವರ್ತನೇ ।।೫೪।।
ಭಕ್ತಿರ್ವನ್ತಿ ಹಿ ಭೂತಾನಿ ಜಙ್ಗಮಾಜಙ್ಗಮಾನಿ ಚ ।
ಯಾಚಮಾನೇಷು ರಾಮ ತ್ವಂ ಭಕ್ತಿಂ ಭಕ್ತೇಷು ದರ್ಶಯ ।।೫೫।।
ಅನುಗನ್ತುಮಶಕ್ತಾಸ್ತ್ವಾಂ ಮೂಲೈರುದ್ಧತವೇಗಿಭಿಃ ।
ಉನ್ನತಾವಾಯುವೇಗೇನ ವಿಕ್ರೋಶನ್ತೀವ ಪಾದಪಾಃ ।।೫೦।।
ನಿಶ್ಚೇಷ್ಟಾಹಾರಸಞ್ಚಾರಾಃ ವೃಕ್ಷೈಕಸ್ಥಾ ನಿಷಿದ್ಧತಾಃ ।
ಪಕ್ಷಿಣೋಪಿ ಪ್ರಯಾಚನ್ತೇ ಸರ್ವಭೂತಾನುಕಮ್ಪಿನಮ್ ।।೫೧।।
ಏವಂ ವಿಕ್ರೋಶತಾಂ ತೇಷಾಂ ದ್ವಿಜಾನಾಂ ವಿನಿವರ್ತನೇ ।
ದದೃಶೇ ತಮಸಾ ತತ್ರ ವಾರಯನ್ತೀವ ರಾಘವಮ್ ।।೫೨।।
ಅವಸತ್ ತತ್ರ ತಾಂ ರಾತ್ರಿಂ ರಾಮಃ ಪ್ರಕೃತಿಭಿಃ ಸಹ ।
ಉತ್ಥಾಯ ಚ ಮಹಾತೇಜಾಃ ಲಕ್ಷ್ಮಣಂ ವಾಕ್ಯಮಬ್ರವೀತ್ ।।೫೩।।
ಅಸ್ಮದ್ವ್ಯಪೇಕ್ಷಾಃ ಸೌಮಿತ್ರೇ ನಿರಪೇಕ್ಷಾಃ ಗೃಹೇಷ್ವಪಿ ।
ವೃಕ್ಷಮೂಲೇಷು ಸಂಸುಪ್ತಾಃ ಪಶ್ಯ ಲಕ್ಷ್ಮಣ ಸಾಮ್ಪ್ರತಮ್ ।।೫೪।।

ನಿವರ್ತನಕ್ಕೆ ಅಧೀನವಾಗಿರುವುದು. ನೀನು ಹಿಂದಿರುಗಿದರೆ, ಅದೆಲ್ಲವೂ ಪರಿಪೂರ್ತಿಹೊಂದುವುದು; ಇಲ್ಲದಿದ್ದರೆ, ಯಜ್ಞಗಳೆಲ್ಲವೂ ಅರ್ಧದಲ್ಲಿಯೇ ನಿಂತುಹೋಗುವುವು ।।೫೪।।

ಅಯ್ಯಾ! ರಾಮ! ನಾವು ಮಾತ್ರವೇ ನಿನ್ನನ್ನು ಹೀಗೆ ಪ್ರಾರ್ಥಿಸುತ್ತಿರುವೆವೆಂದು ತಿಳಿಯಕೂಡದು. ಸಮಸ್ತವಾದ ಸ್ಥಾವರಜಂಗಮಭೂತಗಳೂ, ನಿನ್ನಲ್ಲಿ ವಿಶೇಷವಾಗಿ ಭಕ್ತಿಯಿಟ್ಟುಕೊಂಡು ಪ್ರಾರ್ಥಿಸುತಿರುವುವು. ಹೀಗೆ ಪ್ರಾರ್ಥಿಸುತಿರುವ ಭಕ್ತರಲ್ಲಿ ನೀನು ಪ್ರೀತಿಯನ್ನು ತೋರಿಸುವನಾಗು ।।೫೫।।

ಅಯ್ಯಾ! ರಾಮ! ಇಲ್ಲಿ ನೋಡು. ಈ ವೃಕ್ಷಗಳು, ಪ್ರತಿಹತವೇಗವಾದ ತಮ್ಮ ಬೇರುಗಳೆಂಬ ಕಾಲುಗಳಿಂದ ನಿನ್ನನ್ನು ಹಿಂಬಾಲಿಸಿ ಬರಲು ಶಕ್ತಿಯಿಲ್ಲದುವುಗಳಾಗಿ, ವಾಯುವಿನ ವೇಗದಿಂದ ತಮ್ಮ ಶಾಖೆಗಳೆಂಬ ತೋಳುಗಳನ್ನು ಮೇಲಕ್ಕೆತ್ತಿಕೊಂಡು, ಪಕ್ಷಿಧ್ವನಿಯೆಂಬ ರೋದನಧ್ವನಿಯನ್ನು ಮಾಡುತಿರುವಂತೆ ಕಾಣಿಸುವುವು ।।೫೦।।

ಕೇವಲ ವೃಕ್ಷಮಾತ್ರನಿವಾಸಿಗಳಾದ ಈ ಪಕ್ಷಿಗಳೂ ಕೂಡ, ಸಮಸ್ತವಾದ ವ್ಯಾಪಾರವನ್ನೂ ಆಹಾರವನ್ನೂ ಸಂಚಾರವನ್ನೂ ತೊರೆದು, ಸರ್ವಭೂತಗಳಲ್ಲಿಯೂ ಕರುಣಾಶಾಲಿಯಾಗಿರುವ ನಿನ್ನನ್ನು ಯಾಚಿಸಿಕೊಳ್ಳುತಿರುವುವು ।।೫೧।।

ಹೀಗೆಂದು ಆ ಬ್ರಾಹ್ಮಣರು ರಾಮನನ್ನು ಹಿಂದಿರುಗಿಸಲು ಕೂಗಿಕೊಳ್ಳುತ್ತಿರುವಾಗಲೇ, ಶ್ರೀರಾಮನನ್ನು ಅರಣ್ಯವಾಸಕ್ಕೆ ಹೋಗದಂತೆ ತಡೆಯುತ್ತಿರುವುದೋ ಎಂಬಂತೆ ತಮಸಾನದಿಯು ಎದುರಾಗಿ ಸಿಕ್ಕಿತು ।।೫೨।।

ಆ ತಮಸಾನದಿಯ ತೀರದಲ್ಲಿ, ಮಹಾತೇಜಸ್ವಿಯಾದ ರಾಮನು ಪ್ರಜೆಗಳೊಡನೆ ಅರಾತ್ರಿವಾಸವಾಡಿದನು; ಅರ್ಧರಾತ್ರಿಯ ಸಮಯದಲ್ಲಿ ಎದ್ದವನಾಗಿ, ಲಕ್ಷ್ಮಣನನ್ನು ಕುರಿತು ಈ ಮಾತು ಹೇಳಿದನು ।।೫೩।।

ಎಲೈ ಸುಮಿತ್ರಾಪುತ್ರನಾದ ಲಕ್ಷ್ಮಣನೆ! ನಮ್ಮಲ್ಲಿ ಅಪೇಕ್ಷೆಯಿಂದ-ತಮ್ಮ ಮನೆಯನ್ನೂ ಅಪೇಕ್ಷಿಸದೆ ತೊರೆದುಬಂದು ಮರದಬುಡದಲ್ಲಿ ಮಲಗಿರುವ ಈ ಜನಗಳನ್ನು ನೋಡು ।।೫೪।।

ಯಚ್ಛೈತೇ ನಿಯತಂ ಪೌರಾಃ ಕುರ್ವನ್ತ್ಯಸ್ಮನ್ನಿವರ್ತನೇ ।
ಅಪಿ ಪ್ರಾಣಾನಶಿಷ್ಯನ್ತಿ ನ ತು ತ್ಯಕ್ಷ್ಯನ್ತಿ ನಿಶ್ಚಯಮ್ ॥೬೫॥
ಯಾವದೇವ ತು ಸಂಸುಪ್ತಾಃ ತಾವದೇವ ವಯಂ ಲಘು ।
ರಥಮಾರುಹ್ಯ ಗಚ್ಛಾಮ ಪನ್ಥಾನಮಕುತೋಭಯಮ್ ॥೬೬॥
ಭಕ್ತಾನಾಂ ಸುಖದೋ ನಿತ್ಯಂ ನಾಹಂ ಭಕ್ತಸ್ಯ ದುಃಖದಃ ।
ತಸ್ಮಾದಿಮೇ ಭಕ್ತಿಮನ್ತಃ ಸುಖಿನಃ ಸ್ಯುರ್ಗೃಹಾನ್ ಗತಾಃ ॥೬೭॥
ತತೋಬ್ರವೀಲ್ಲಕ್ಷ್ಮಣಸ್ತಂ ಸಾಕ್ಷಾದ್ಧರ್ಮಮಿವ ಸ್ಥಿತಮ್ ।
ರೋಚತೇ ಮೇ ತಥಾ ಪ್ರಾಜ್ಞ ಕ್ಷಿಪ್ರಮಾರುಹ್ಯತಾಂ ರಥಃ ॥೬೮॥
ತತಃ ಸ್ಯನ್ದನಮಾಸ್ಥಾಯ ರಾಘವಃ ಸಪರಿಚ್ಛದಃ ।
ಶೀಘ್ರಗಾಮಾಕುಲಾವರ್ತಾಂ ತತಾರ ತಮಸಾನದೀಮ್ ॥೬೯॥

ಇತಿ ಶ್ರೀಮದಯೋಧ್ಯಾಕಾಣ್ಡೇ ರಾಮವನಗಮನ ರಾಮಭಕ್ತಿಕಥನಂ

ನಾಮ ಏಕಾದಶಃ ಸರ್ಗಃ.



ಈ ಪೌರರು ನಮ್ಮನ್ನು ಹಿಂದಿರುಗಿಸುವುದರಲ್ಲಿ ಮಾಡುತಿರುವ ನಿಶ್ಚಯವನ್ನು ನೋಡಿದರೆ, ಇವರು ತಮ್ಮ ಪ್ರಾಣಗಳನ್ನಾದರೂ ಕಳೆದುಕೊಂಡಾರಲ್ಲದೆ-ತಮ್ಮ ನಿಶ್ಚಯವನ್ನು ಬಿಡಲಾರರೆಂದು ತೋರುವುದು ॥೬೫॥

ಅದುಕಾರಣ, ಇವರಿನ್ನೂ ಮಲಗಿರುವಾಗಲೇ, ನಾವು ರಥವನ್ನು ಹತ್ತಿಕೊಂಡು-ಮತ್ತೊಂದು ಮಾರ್ಗವನ್ನು ಹಿಡಿದು ಹೋಗೋಣ. ನಮಗೆ ಯಾವ ಮಾರ್ಗದಲ್ಲಿಯೂ ಎಷ್ಟು ಹೊತ್ತಿನಲ್ಲಿಯೂ ಯಾವ ಭಯವೂ ಉಂಟಾಗುವುದಿಲ್ಲ ॥೬೬॥

ನಾನು ಎಂದಿಗೂ ನನ್ನ ಭಕ್ತರಿಗೆ ಸುಖವನ್ನು ಕೊಡತಕ್ಕವನೇ ಹೊರತು, ದುಃಖವನ್ನು ಕೊಡತಕ್ಕವನಲ್ಲ. ಅದುಕಾರಣ, ನನ್ನಲ್ಲಿ ಭಕ್ತಿಯುಳ್ಳವರಾಗಿರುವ ಈ ಪಟ್ಟಣಿಗರೆಲ್ಲರೂ, ತಂತಮ್ಮ ಮನೆಗಳನ್ನು ಸೇರಿಕೊಂಡು ಸುಖವಾಗಿರಲಿ ॥೬೭॥

ಹೀಗೆಂದು ಶ್ರೀರಾಮನು ಹೇಳಿದಬಳಿಕ, ಸಾಕ್ಷಾದ್ಧರ್ಮವೋ ಎಂಬಂತಿರುವ ಶ್ರೀರಾಮನನ್ನು ಕುರಿತು, ಲಕ್ಷ್ಮಣನು 'ಪ್ರಾಜ್ಞಶಿರೋಮಣಿಯಾದ ರಾಮನೆ! ನೀನು ಹೇಳಿದ ಮಾತು ನನಗೂ ಇಷ್ಟವಾಗಿರುವುದು; ಬೇಗನೆ ರಥವನ್ನು ಹತ್ತುವನಾಗು.' ಎಂದು ವಿಜ್ಞಾಪಿಸಿದನು ॥

ಅನಂತರ, ಶ್ರೀರಾಮನು, ಸೀತಾಲಕ್ಷ್ಮಣರೊಡನೆ ತನ್ನ ಸಾಮಗ್ರಿಗಳನ್ನೆಲ್ಲ ತೆಗೆದುಕೊಂಡು ರಥವನ್ನು ಹತ್ತಿದವನಾಗಿ, ಮಹಾವೇಗದಿಂದ ಪ್ರವಹಿಸುತ ಬಹು ದುಸ್ತರವಾದ ಸುಳಿಗಳುಳ್ಳದಾಗಿರುವ ಆ ತಮಸಾನದಿಯನ್ನು ದಾಟಹೋದನು ॥೬೯॥

ಇದು ಅಯೋಧ್ಯಾಕಾಂಡದಲ್ಲಿ ರಾಮವನಗಮನ ರಾಮಭಕ್ತಿಕಥನವೆಂಬ
ಹನ್ನೊಂದನೆಯ ಸರ್ಗವು.




ಅಥ ಶ್ರೀಮದಯೋಧ್ಯಾಕಾಣ್ಡೇ ದ್ವಾದಶಃ ಸರ್ಗಃ.



ಶ್ರೀ ಶಿವ ಉವಾಚ.

ಪ್ರಭಾತಾಯಾಂ ತು ಶರ್ವರ್ಯಾಂ ಪೌರಾಸ್ತೇ ರಾಘವಂ ವಿನಾ ।
ಶೋಕೋಪಹತನಿಶ್ಚೇಷ್ಟಾಃ ವಚನಂ ತತ್ತದಬ್ರುವ॑ ॥೧॥
ಧಿಗಸ್ತು ಖಲು ನಿದ್ರಾಂ ತಾಂ ಯಯಾಪಹೃತಚೇತಸಃ ।
ನಾದ್ಯ ಪಶ್ಯಾಮಹೇ ರಾಮಂ ಪೃಥೂರಸ್ಕಂ ಮಹಾಭುಜಮ್ ॥೨॥
ಅತಸೀಗುಚ್ಛಸಙ್ಕಾಶಂ ಪುಣ್ಡರೀಕಾಯತೇಕ್ಷಣಮ್ ।
ಸರ್ವಾಙ್ಗಸುನ್ದರಂ ರಾಮಂ ಕದಾ ದ್ರಕ್ಷ್ಯಾಮಹೇ ವಯಮ್ ॥೩॥
ಕಥಂ ನಾಮ ಮಹಾಬಾಹುಃ ಸ ತಥಾಽವಿತಥಕ್ರಿಯಃ ।
ಭಕ್ತಂ ಜನಂ ಪರಿತ್ಯಜ್ಯ ಪ್ರವಾಸಂ ರಾಘವೋ ಗತಃ ॥೪॥
ಯೋ ನಃ ಸದಾ ಪಾಲಯತಿ ಪಿತಾ ಪುತ್ರಾನಿವೌರಸಾ॑ ।
ಕಥಂ ರಘೂಣಾಂ ಸ ಜ್ಯೇಷ್ಠಃ ತ್ಯಕ್ತ್ವಾಸ್ಮಾ॑ ವಿಪಿನಂ ಗತಃ ॥೫॥

ಅಯೋಧ್ಯಾಕಾಂಡದಲ್ಲಿ ಹನ್ನೆರಡನೆಯ ಸರ್ಗವು.



ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸಿದನು.—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಸೀತಾರಾಮಲಕ್ಷ್ಮಣರು ಹೊರಟುಹೋದ ಬಳಿಕ, ಆ ರಾತ್ರಿಯು ಬೆಳಕುಹರಿಯಲಾಗಿ, ಆ ಪಟ್ಟಣಿಗರೆಲ್ಲರೂ ರಾಮನನ್ನು ಕಾಣದೆ ಮಹಾ ಶೋಕಾಕ್ರಾಂತಹೃದಯರಾಗಿ, ತಂತಮ್ಮ ಮನಬಂದಂತೆ ಹೇಳಿಕೊಳ್ಳಲುಪಕ್ರಮಿಸಿದರು ॥೧॥

ಅಯ್ಯೋ! ಹಾಳುನಿದ್ರೆಯನ್ನು ಸುಡಬೇಕು! ಈ ನಿದ್ರೆಯಿಂದ ಅಪಹೃತಚಿತ್ತರಾಗಿಬಿಟ್ಟ ನಾವು, ಈಗ ಆ ವಿಶಾಲಹೃದಯನಾದ ಮಹಾಭುಜನಾದ ರಾಮನನ್ನು ನೋಡಲಾರದವರಾದೆವಲ್ಲ! ॥೨॥

ಆಗಸೆಯ ಹೂವಿನ ಗೊಂಚಲಿಗೆ ಸಮಾನವಾದ ದೇಹವರ್ಣವುಳ್ಳವನಾಗಿಯೂ, ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳವನಾಗಿಯೂ, ಸರ್ವಾವಯವಸುಂದರನಾಗಿಯೂ ಇರುವ ಆ ಶ್ರೀರಾಮನನ್ನು, ನಾವು ಇನ್ನು ಯಾವಾಗ ನೋಡುವೆವ! ॥೩॥

ಎಂದಿಗೂ ವ್ಯರ್ಥವಾದ ಕರ್ಮವನ್ನು ಮಾಡದಿರುವ ಆ ಮಹಾಭುಜನಾದ ರಾಮನು, ಭಕ್ತರಾದ ಈ ಜನರನ್ನೆಲ್ಲ ಬಿಟ್ಟುಬಿಟ್ಟು ಹೇಗೆ ಅರಣ್ಯಕ್ಕೆ ಹೊರಟುಹೋದನು! ॥೪॥

ತಂದೆಯು ತನ್ನ ಔರಸಪುತ್ರರನ್ನು ಪಾಲಿಸುವಂತೆ-ಯಾವನು ನಮ್ಮನ್ನು ಸರ್ವದಾ ಪರಿಪಾಲಿಸುತಿದ್ದನೋ, ಅಂತಹ ರಘುಶ್ರೇಷ್ಠನು ನಮ್ಮಗಳನ್ನು ಬಿಟ್ಟುಬಿಟ್ಟು ಅರಣ್ಯಕ್ಕೆ ಹೇಗೆ ಹೊರಟುಹೋದನು! ॥೫॥

ನ ಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ ।
ತದ್ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ ॥೬॥
ಇತಿ ಪ್ರಲಪ್ಯ ಬಹುಧಾ ಪುನರ್ಗತ್ವಾ ಪುರೀಂ ಜನಾಃ ।
ಸ್ವಂಸ್ವಂ ನಿಲಯಮಾಗಮ್ಯ ಪುತ್ರದಾರೈಃ ಸಮಾಗತಾಃ ॥೭॥
ಗೃಹೇಗೃಹೇ ರುದನ್ತ್ಯಶ್ಚ ಭರ್ತಾರಂ ಗೃಹಮಾಗತಮ್ ।
ವ್ಯಗರ್ಹಯನ್ತ ದುಃಖಾರ್ತಾಃ ವಾಗ್ಭಿಸ್ತೋತ್ರೈರಿವ ದ್ವಿಜಾಃ ॥೮॥
ಕಿಂನು ತೇಷಾಂ ಗೃಹೈಃ ಕಾರ್ಯಂ ಕಿಂ ದಾರೈಃ ಕಿಂ ಧನೇನ ಚ !
ಪುತ್ರೈರ್ವಾ ಕಿಂ ಸುಜೈರ್ವಾಪಿ ಯೇ ನ ಪಶ್ಯನ್ತಿ ರಾಘವಮ್ ॥೯॥
ಏಕಃ ಸತ್ಪುರುಷೋ ಲೋಕೇ ಲಕ್ಷ್ಮಣಃ ಸಹ ಸೀತಯಾ ।
ಯೇನ ಗಚ್ಛತಿ ಕಾಕುತ್ಸ್ಥಂ ರಾಮಂ ಪರಿಚರನ್ ವನೇ ॥೧೦॥
ಅಪಗಾಃ ಕೃತಪುಣ್ಯಾಸ್ತಾಃ ಪದ್ಮಿನ್ಯಶ್ಚ ಸರಾಂಸಿ ಚ ।
ಯೇಷು ಸ್ನಾಸ್ಯತಿ ಕಾಕುತ್ಸ್ಥಃ ವಿಗಾಹ್ಯ ಸಲಿಲಂ ಶುಚಿ ॥೧೧॥

ಎಲ್ಲಿ ಶ್ರೀರಾಮನು ದೊರೆಯಾಗಿರುವುದಿಲ್ಲವೋ, ಅದೆಂದಿಗೂ ರಾಷ್ಟ್ರವಾಗುವುದೇ ಇಲ್ಲ. ಎಲ್ಲಿ ನಮ್ಮ ರಾಮನು ವಾಸವಮಾಡಿಕೊಂಡಿರುವನೋ, ಆ ವನವೇ ರಾಷ್ಟ್ರವಾಗುವುದು ॥೬॥

ಹೀಗೆಂದು ಬಹುಪ್ರಕಾರವಾಗಿ ವಿಲಾಪಮಾಡಿ, ಆ ಜನರೆಲ್ಲರೂ ಮತ್ತೆ ಅಯೋಧ್ಯಾಪಟ್ಟಣಕ್ಕೆ ಹೋಗಿ, ತಂತಮ್ಮ ಮನೆಯನ್ನು ಹೊಂದಿ, ತಮ್ಮ ಹೆಂಡರುಮಕ್ಕಳೊಡನೆ ಸೇರಿದವರಾದರು ॥೭॥

ಆಗ, ಪ್ರತಿ ಮನೆಯಲ್ಲಿಯೂ ಅಳುತಿರುವ ಸ್ತ್ರೀಯರುಗಳು, ತಮ್ಮ ಗಂಡಂದಿರು ಮನೆಗೆ ಬಂದುದನ್ನು ಕಂಡು, ಮಹಾದುಃಖಪೀಡಿತರಾಗಿ, ಅಂಕುಶದಿಂದ ಆನೆಯನ್ನು ಪ್ರಹರಿಸುವಂತೆ, ತಮ್ಮ ವಾಕ್ಯುಗಳಿಂದ ಗಂಡಂದಿರನ್ನು ಹೀಗೆ ಅತಿಯಾಗಿ ನಿಂದಿಸಿದರು ॥೮॥

ಯಾರು ಶ್ರೀರಾಮನನ್ನು ನೋಡದಿರುವರೋ, ಅವರಿಗೆ–ಮನೆಯಿಂದ ಆಗಬೇಕಾದುದೇನು? ಹೆಂಡರಿಂದ ಕಾನೆ ಫಲವೇನು? ಧನದಿಂದ ಪ್ರಯೋಜನವೇನು? ಮಕ್ಕಳಿಂದಾಗಲಿ–ಆತ್ಮಸುಖದಿಂದಾಗಲಿ–ಅವರಿಗೆ ಯಾವ ಫಲವಿರುವುದು? ॥೯॥

ಈ ಪ್ರಪಂಚದಲ್ಲೆಲ್ಲ ಆ ಮಹಾನುಭಾವನಾದ ಲಕ್ಷ್ಮಣನೊಬ್ಬನೇ ಸತ್ಪುರುಷನು. ಅರಣ್ಯದಲ್ಲಿ, ಸೀತಾಸಹಿತನಾದ ರಾಮನನ್ನು ಶುಶ್ರೂಷೆಮಾಡುತ, ಅವನ ಜತೆಯಲ್ಲಿಯೇ ಸಂಚರಿಸುವನಲ್ಲವೆ! ॥೧೦॥

ಯಾವ ಕಡೆಯಲ್ಲಿ ನಮ್ಮ ಶ್ರೀರಾಮನು ಶುಚಿಯಾದ ಜಲವನ್ನು ಅವಗಾಹಿಸಿ ಸ್ನಾನಮಾಡುವನೋ, ಅಂತಹ ನದಿಗಳೂ ಕಮಲಾಕರಗಳೂ ಸರೋವರಗಳೂ ವಿಶೇಷವಾಗಿ ಪುಣ್ಯಮಾಡಿರುವುವು ॥೧೧॥

ತಪಸ್ವಿನೋ ಮಹಾತ್ಮಾನಃ ತಪಸಾಂ ಫಲಮಾಗತಮ್ ।
ಧ್ಯಾನದೃಷ್ಟಂ ಬಹಿರ್ದೃಷ್ಟ್ವಾ ಪೂಜಯಿಷ್ಯನ್ತಿ ಭಕ್ತಿತಃ ॥೧೦॥
ಯತ್ರ ರಾಮೋ ಭಯಂ ನಾತ್ರ ತತ್ರ ನಾಸ್ತಿ ಪರಾಭವಃ ।
ಸ ಹಿ ಶೂರೋ ಮಹಾಬಾಹುಃ ಪುತ್ರೋ ದಶರಥಸ್ಯ ಚ ।
ಪುರಾ ಭವತಿ ನೋ ದೂರಾತ್ ಅನುಗಚ್ಛಾನು ರಾಘವಮ್ ॥೧೩॥
ಪಾದಚ್ಛಾಯಾ ಸುಖಾ ಭರ್ತುಃ ತಾದೃಶಸ್ಯ ಮಹಾತ್ಮನಃ ।
ಸ ಹಿ ನಾಥೋ ಜನಸ್ಯಾಸ್ಯ ಸ ಗತಿಃ ಸ ಪರಾಯಣಮ್ ॥೧೪॥
ವಯಂ ಪರಿಚರಿಷ್ಯಾಮಃ ಸೀತಾಂ ಯೂಯಂ ಚ ರಾಘವಮ್ ।
ಯುಷ್ಮಾಕಂ ರಾಘವೋರಣ್ಯೇ ಯೋಗಕ್ಷೇಮಂ ವಿಧಾಸ್ಯತಿ ॥೧೫॥
ಏವಮುಕ್ತ್ವಾ ಸ್ತ್ರಿಯೋ ಭರ್ತೃ ರಾಮಭಕ್ತಿಪರಾಯಣಾಃ ।
ಹೃದಿ ರಾಮಂ ಸಸೀತಂ ಚ ಧ್ಯಾಯನ್ತ್ಯಸ್ತಸ್ಥುರನ್ವಹಮ್ ॥೧೬॥
ಪೌರಾ ಹಿತ್ವಾ ತತೋ ರಾಮಃ ಹೃಷ್ಟಪುಷ್ಟಜನಾಕುಲಾ ।
ಕೋಸಲಾ ಸಮತಿಕ್ರಮ್ಯ ಶೃಙ್ಗಿಬೇರಪುರಂ ಯಯೌ ॥೧೭॥

ನಮ್ಮ ರಾಘವನು ಅರಣ್ಯಕ್ಕೆ ಹೋದಾಗ, ಆ ಅರಣ್ಯದಲ್ಲಿರುವ ಮಹಾತ್ಮರಾದ ತಪಸ್ವಿಗಳೆಲ್ಲರೂ, ತಮ್ಮ ತಪಃಫಲವೇ ಪ್ರತ್ಯಕ್ಷವಾಗಿ ಬಂದಿರುವುದೆಂದು ತಿಳಿದು, ತಾವು ಧ್ಯಾನಕಾಲದಲ್ಲಿ ನೋಡಿದ ವಸ್ತುವನ್ನು(ರಾಮನನ್ನು) ಬಹಿರ್ಮುಖರಾದಾಗಲೂ ನೋಡಿದವರಾಗಿ, ಕೇವಲ ಭಕ್ತಿಯಿಂದ ಅವನನ್ನು ಪೂಜಿಸುವರು ॥೧೨॥

ಯಾವ ಕಡೆಯಲ್ಲಿ ಶ್ರೀರಾಮನು ಸನ್ನಿಹಿತನಾಗಿರುವನೋ, ಅಲ್ಲಿ ಯಾವ ಭಯವೂ ಇಲ್ಲ; ಯಾವ ಸಂಕಟವೂ ಇಲ್ಲ. ಮಹಾಶೂರನೂ ದೀರ್ಘಬಾಹುವೂ ಆದ ಆ ಶ್ರೀರಾಮನು, ಇನ್ನು ನಮಗೆ ದೂರವಾಗಿಬಿಡುವನು. ಅವನನ್ನು ಬೇಗನೆ ಹಿಂಬಾಲಿಸಿ ಹೋಗೋಣ-ನಡೆಯಿರಿ ॥

ಅಂತಹ ಮಹಾತ್ಮನಾದ ತ್ರಿಲೋಕನಾಥನ ಪಾದಚ್ಛಾಯೆಯು ಕೇವಲ ಸುಖವಾಗಿರುವುದು. ಅವನೇ ನಮ್ಮೆಲ್ಲರಿಗೂ ನಾಥನು; ಅವನೇ ಗತಿಯು; ಅವನೇ ಮುಖ್ಯಶರಣನು॥೧೪॥

ಎಲೈ ನಾಥರೆ! ನಾವು ಸೀತೆಯನ್ನು ಸೇವಿಸಿಕೊಂಡಿರುವೆವು; ನೀವೂಕೂಡ ಶ್ರೀರಾಮನನ್ನು ಸೇವಿಸಿಕೊಂಡಿರಿ. ಆ ಶ್ರೀರಾಮನು, ಅರಣ್ಯದಲ್ಲಿ ನಿಮ್ಮಗಳ ಸಕಲಯೋಗಕ್ಷೇಮವನ್ನೂ ಮಾಡುವನು ॥೧೫॥

ಹೀಗೆಂದು ತಮ್ಮ ಪತಿಗಳಿಗೆ ಹೇಳಿ, ರಾಮಭಕ್ತಿಪರಾಯಣೆಯರಾದ ಆ ಸ್ತ್ರೀಯರು, ಪ್ರತಿದಿನವೂ ತಮ್ಮ ಹೃದಯದಲ್ಲಿ ಸೀತಾಸಹಿತನಾದ ಶ್ರೀರಾಮನನ್ನು ಧ್ಯಾನಮಾಡುತ ಇದ್ದರು ॥೧೬॥

ಅತ್ತಕಡೆ, ಪಟ್ಟಣಿಗರನ್ನೆಲ್ಲ ಬಿಟ್ಟು ಹೊರಟುಹೋದ ಶ್ರೀರಾಮನು, ಆಮೇಲೆ-ಹೃಷ್ಟರಾಗಿಯೂ ಪುಷ್ಟರಾಗಿಯೂ ಇರುವ ಜನರಿಂದ ಪರಿಪೂರ್ಣವಾದ ಕೋಸಲದೇಶವನ್ನು ದಾಟಿ, ಶೃಂಗಿಬೇರವೆಂಬ ಪುರದ ಹತ್ತಿರಕ್ಕೆ ಹೋದನು ॥೧೭॥

ಅವರುಹ್ಯ ರಥಾದ್ರಾಮಃ ಸೀತಯಾ ಲಕ್ಷ್ಮಣೇನ ಚ ।
ಸುಖೋಪವಿಷ್ಟಂ ಶ್ರೀರಾಮಃ ಸುಮನ್ತ್ರಮಿದಮಬ್ರವೀತ್ ॥೧೪॥
ಸಾಕೇತನಗರಂ ಗಚ್ಛ ರಾಜಾ ದುಃಖಸಮನ್ವಿತಃ ।
ತತ್ತ್ವಪ್ರದರ್ಶನಾತ್ ಸೂತ ತದ್ದುಃಖಶಮನಂ ಕುರು ॥೧೫॥
ಇತಿ ರಾಮವಚಃ ಶ್ರುತ್ವಾ ಸೂತಃ ಶೋಕಸಮಾಕುಲಃ ।
ಪಶ್ಚಾದಗ್ರಂ ಚ ನಾಜಾನಾತ್ ರಾಮಸ್ಯ ವಿರಹಾತುರಃ ॥೧೦॥

ಸುಮನ್ತ್ರ ಉವಾಚ.

ಯತ್ರ ತ್ವಂ ವರ್ತಸೇ ರಾಮ ಸಾಯೋಧ್ಯಾ ನಗರೀ ಮಮ ।
ಅಯೋಧ್ಯಾ ಶೂನ್ಯಮೇವಾಸೀತ್ ಸರ್ವಪ್ರಾಣಭೃತಾಮಪಿ ॥೧೧॥
ರಾಜ್ಯಭಾರನಿಯುಕ್ತೋಪಿ ಭರತೋ ನೇಚ್ಛತಿ ಶ್ರಿಯಮ್ ।
ತವ ಭಕ್ತಾಗ್ರಗಣ್ಯೋ ಹಿ ಭರತಃ ಕೈಕಯೀಸುತಃ ॥೧೨॥
ತ್ವಮೇವ ಮಾತಾಪಿತರೌ ರಾಜ್ಯಂ ಸರ್ವಸ್ವಮೇವ ಚ ।
ತ್ವತ್ಸನ್ನಿಧೌ ಭಕ್ತವರ್ಗಃ ಪರಮಾನನ್ದಮೇತ್ಯಲಮ್ ॥೧೩॥
ಸನಕಾದಿಮುನೀನಾಂ ಚ ದುರ್ಲಭಂ ತವ ದರ್ಶನಮ್ ।
ಸದನುಷ್ಠಾನಸಮ್ಪತ್ತಿಃ ತ್ವದರ್ಶನನಿಮಿತ್ತತಃ ॥೧೪॥

ಅಲ್ಲಿ ಆ ಶ್ರೀರಾಮನು, ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ರಥದಿಂದ ಇಳಿದವನಾಗಿ, ಸುಖವಾಗಿ ಕುಳಿತುಕೊಂಡು, ಸುಮಂತ್ರನನ್ನು ಕುರಿತು 'ಅಯ್ಯಾ! ಸುಮಂತ್ರ! ನೀನು ಅಯೋಧ್ಯಾಪಟ್ಟಣಕ್ಕೆ ಹೋಗುವನಾಗು. ಅಲ್ಲಿ ನಮ್ಮ ಮಹಾರಾಜನು ಕೇವಲ ದುಃಖಯುಕ್ತನಾಗಿರುವನು; ಅವನಿಗೆ ನೀನು ತತ್ವಮಾರ್ಗವನ್ನು ಬೋಧಿಸಿ, ಅವನ ದುಃಖವನ್ನು ಶಾಂತಿಗೊಳಿಸು' ಎಂದು ಹೇಳಿದನು ॥೧೪-೧೫॥

ಹೀಗೆ ಹೇಳುತಿರುವ ಶ್ರೀರಾಮನ ಮಾತನ್ನು ಕೇಳಿ, ಶೋಕಾಕುಲನಾದ ಸುಮಂತ್ರನು, ರಾಮನ ವಿರಹದಿಂದ ಆತುರನಾಗಿ, ಹಿಂದುಮುಂದು ತೋಚದವನಾಗಿಬಿಟ್ಟನು ॥೧೦॥

ಆಗ ರಾಮನನ್ನು ಕುರಿತು ಸುಮಂತ್ರನು ಹೀಗೆ ಹೇಳಿದನು:—

ಸ್ವಾಮಿ! ರಾಮಚಂದ್ರ! ನೀನು ಎಲ್ಲಿರುವೆಯೋ, ಅದೇ ನನಗೆ ಅಯೋಧ್ಯಾನಗರಿಯು. ಈಗ ಅಯೋಧ್ಯೆಯು ಸಮಸ್ತ ಪ್ರಾಣಿಗಳಿಗೂ ಶೂನ್ಯವಾಗಿಯೇ ಇರುವುದು ॥೧೧॥

ಆ ಕೈಕಯೀಪುತ್ರನಾದ ಭರತನು, ನಿನ್ನ ಭಕ್ತರಲ್ಲೆಲ್ಲ ಅಗ್ರಗಣ್ಯನಾಗಿರುವುದರಿಂದ, ತಾನು ರಾಜ್ಯಭಾರದಲ್ಲಿ ನಿಯೋಗಿಸಲ್ಪಟ್ಟವನಾಗಿದ್ದರೂ-ರಾಜ್ಯಸಂಪತ್ತನ್ನು ಎಂದಿಗೂ ಅಪೇಕ್ಷಿಸತಕ್ಕವನಾಗಿಲ್ಲ ॥೧೨॥

ಸಮಸ್ತರಿಗೂ ನೀನೇ ತಾಯಿತಂದೆಯಾಗಿರುವೆ! ರಾಜ್ಯವೂ ನೀನೇ; ಸರ್ವಸ್ವವೂ ನೀನೇ. ನಿನ್ನ ಸನ್ನಿಧಿಯಲ್ಲಿ, ಭಕ್ತಸಮೂಹವೆಲ್ಲವೂ ಅತ್ಯಧಿಕವಾಗಿ ಪರಮಾನಂದಪಡೆಯುವುದು ॥೧೩॥

ಸನಕಾದಿ ಮಹಾಮುನಿಗಳಿಗೂ ಕೂಡ, ನಿನ್ನ ದರ್ಶನವು ದುರ್ಲಭವಾಗಿರುವುದು. ನಿನ ದರ್ಶನಮಾತ್ರದಿಂದಲೇ, ಸಕಲ ಸತ್ಕರ್ಮಾನುಷ್ಠಾನಸಂಪತ್ತೂ ಲಭಿಸುವುದು ॥೧೪॥

ಸಾಕ್ಷಾತ್ ತ್ವದ್ದರ್ಶನಂ ತ್ಯಕ್ತ್ವಾ ಯೋನ್ಯತ್ ಕರ್ಮ ಸಮಾಚರೇತ್ ।
ಪ್ರಾಪ್ತಂ ನಿಕ್ಷೇಪಮುತ್ಸೃಜ್ಯ ಸಉಪಾದಾನಮಾಚರೇತ್ ॥೨೫॥
ಸಾಕೇತನಗರಂ ಗನ್ತುಂ ನೋತ್ಸಹೇ ರಘುನನ್ದನ ।
ತವ ಸಂದರ್ಶನಂ ತ್ಯಕ್ತ್ವಾ ನೇತ್ರಜ್ಯೋತಿಸ್ಸಮನೋಹರಮ್ ॥೨೬॥
ಭಕ್ತವತ್ಸಲ ತಿಷ್ಠನ್ತಂ ಭರ್ತೃಪುತ್ರಗತೇ ಪಥಿ ।
ಭಕ್ತಂ ಭೃತ್ಯಂ ಸ್ಥಿತಂ ಸ ತ್ವಂ ನಮಾಂ ಹಾತುಮಿಹಾರ್ಹಸಿ ॥೨೭॥
ಯದಹಂ ನೋಪಚಾರೇಣ ಬ್ರೂಯಾಂ ಸ್ನೇಹಾದವಿಕ್ಲಬಃ ।
ಭಕ್ತಿಮಾನಿತಿ ತತ್ ತಾವತ್ ವಾಕ್ಯಂ ತ್ವಂ ಕ್ಷನ್ತುಮರ್ಹಸಿ ॥೨೮॥
ಏವಂ ಬ್ರುವಾಣಂ ತಂ ಸೂತಂ ಸ್ವಪಾದವಿರಹಾತುರಮ್ ।
ಭಕ್ತಂ ತತ್ತ್ವಪರೈರ್ವಾಕ್ಯೈಃ ಸಾನ್ತ್ವಯನ್ ರಾಘವೋಬ್ರವೀತ್ ॥೨೯॥
ಸೂತ ಸೂತ ಮಹಾಬುದ್ಧೇ ವೃಥಾ ದೈನ್ಯೇನ ಕಿಂ ತವ ।
ದೇಹಯೋಗವಿಯೋಗಾದ್ಯಾಃ ವಸ್ತುಮಾತ್ರೇ ಹ್ಯಶಾಶ್ವತಾಃ ॥೩೦॥

ಇಂತಹ ನಿನ್ನ ದರ್ಶನವು ಪ್ರತ್ಯಕ್ಷವಾಗಿರುವುದನ್ನು ಬಿಟ್ಟುಬಿಟ್ಟು-ಯಾವನು ಇತರವಾದ ಕರ್ಮವನ್ನು ಆಚರಿಸುವನೋ, ಅವನು-ತನ್ನ ಕೈಗೆ ಸಿಕ್ಕಿರುವ ನಿಧಿಯನ್ನು ಬಿಟ್ಟುಬಿಟ್ಟು ಉಪಾದಾನವನ್ನು ಮಾಡುವನೆಂದು ತಿಳಿಯಬೇಕು ॥೨೫॥

ಅಯ್ಯಾ! ರಘುನಂದನ! ಕಣ್ಣಿಗೆ ಬೆಳೆದಿಂಗಳಂತೆ ಅಪ್ಯಾಯಕವಾಗಿಯೂ-ಮನಸ್ಸಿಗೆ ಕೇವಲ ಹರ್ಷಜನಕವಾಗಿಯೂ ಇರುವ ನಿನ್ನ ದರ್ಶನವನ್ನು ಬಿಟ್ಟುಬಿಟ್ಟು–ಅಯೋಧ್ಯಾಪಟ್ಟಣಕ್ಕೆ ಹೋಗಲು ನಾನು ಸ್ವಲ್ಪವೂ ಮನಸ್ಸುಳ್ಳವನಾಗಿಲ್ಲ ॥೨೬॥

ಎಲೈ ಭಕ್ತವತ್ಸಲನಾದ ಶ್ರೀರಾಮನೆ! ನನ್ನ ಸ್ವಾಮಿಯ ಪುತ್ರನು (ನೀನು) ಹೊರಟಿರುವ ಮಾರ್ಗದಲ್ಲಿ ನಾನೂ ಹೊರಟಿರುವೆನು; ಇಂತಹ ಭಕ್ತನಾಗಿಯೂ ಭೃತ್ಯನಾಗಿಯೂ ಇರುವ ನನ್ನನ್ನು ಬಿಡುವುದು ನಿನಗೆ ಈಗ ಯೋಗ್ಯವಲ್ಲ ॥೨೭॥

ಅಯ್ಯಾ! ರಾಮಚಂದ್ರ! ನಾನು ಈಗ ಇಷ್ಟು ಧೈರ್ಯದಿಂದ ಹೇಳಿದ ಮಾತು ಯಾವುದುಂಟೋ, ಇದು ನಿನ್ನಲ್ಲಿ ಸ್ನೇಹವಿಶೇಷದಿಂದ ಹೇಳಿದುದೆಂದು ತಿಳಿ; ಇದು ಉಪಚಾರೋಕ್ತಿಯಲ್ಲವೆಂದು ನಂಬಿ, ನಾನು ಹೇಳಿದುದನ್ನು ಕ್ಷಮಿಸುವನಾಗು ॥೨೮॥

ಹೀಗೆಂದು ಹೇಳುತಿರುವ–ತನ್ನ ಪಾದವಿರಹವನ್ನು ಸಹಿಸಲಾರದವನಾದ-ಭಕ್ತನಾದ ಆ ಸುಮಂತ್ರನನ್ನು, ತತ್ವಬೋಧಕವಾದ ವಚನಗಳಿಂದ ಸಮಾಧಾನಪಡಿಸುತ, ಶ್ರೀರಾಮನು ಹೀಗೆ ಹೇಳಿದನು ॥೨೯॥

ಹೇ ಸೂತ! ಸೂತ! ಮಹಾಬುದ್ಧೇ! ಈ ವ್ಯರ್ಥವಾದ ದೈನ್ಯದಿಂದ ನಿನಗೇನು ಪ್ರಯೋಜನವು? ದೇಹದ ಯೋಗ ವಿಯೋಗ ಮುಂತಾದುವುಗಳು, ಯಾವ ವಸ್ತುವಿನಲ್ಲಿಯೂ ಸುತರಾಂ ಶಾಶ್ವತಗಳಲ್ಲ ॥೩೦॥

ಸಂಯೋಗೇ ಸತಿ ಹರ್ಷಂ ಚ ವಿಯೋಗೇ ದೈನ್ಯಮೇವ ಚ ।
ಯಃ ಪ್ರಾಪ್ನೋತಿ ಸ ಮೂಢಾತ್ಮಾ ಸೀದತ್ಯೇವ ಪತತ್ರಿವತ್ ॥೩೧॥
ಅಭವಸ್ಯಾವ್ಯಯಸ್ಯಾಪಿ ವಿಭೋರೀಶಸ್ಯ ಮೇ ವಪುಃ ।
ಉಪಾಸಕಾನಾಂ ಧ್ಯಾನಾರ್ಥಂ ಕಲ್ಪಿತಂ ನ ತು ವಸ್ತುತಃ ॥೩೨॥
ಕಲ್ಪಿತಸ್ಯಾಪಿ ದೇಹಸ್ಯ ಯೋಗಾದಪಿ ವಿಯೋಗತಃ ।
ಮಮ ಧ್ಯಾನಂ ಭವೇತ್ ತೇನ ಭಕ್ತಿಃ ಸ್ಯಾದನಪಾಯಿನೀ ॥೩೩॥
ಭಕ್ತ್ಯಾಂ ಸ್ಥಿರಾಯಾಂ ಮಜ್ಜ್ಞಾನಂ ಭಕ್ತ್ಯುಚ್ಚಾರಾನ್ಮದಾತ್ಮಕಾತ್ ।
ತತೋ ಮುಕ್ತಿರ್ಭವೇತ್ ತಸ್ಮಾತ್ ಮಾಂ ಭಕ್ತ್ಯಾ ಭಾವಯೇಶ್ವರಮ್ ॥

ಸುಮಂತ್ರ ಉವಾಚ.

ಭವದ್ಭಕ್ತಿಸ್ವರೂಪಂ ಮೇ ರಾಮ ತತ್ಸಾಧನಾನಿ ಚ ।
ಭಕ್ತ್ಯನುತ್ಪತ್ತಿಹೇತೂಂಶ್ಚ ಕೃಪಯಾ ವದ ಸಜ್ಜ್ಞಾತ್ ॥೩೪॥

ಶ್ರೀರಾಮ ಉವಾಚ.

ಶುದ್ಧಾಽಶುದ್ಧೇತಿ ಭೇದೇನ ಸಾ ಮದ್ಭಕ್ತಿರ್ದ್ವಿವಿಧಾ ತಯೋಃ ।
ಆಶುದ್ಧಾ ತು ಕ್ರಿಯಾಮಿಶ್ರಾ ಗುಣಮಿಶ್ರೇತಿ ಚ ದ್ವಿಧಾ ॥೩೬॥

ಪರಸ್ಪರ ಸಂಯೋಗವುಂಟಾದಾಗ ಹರ್ಷವನ್ನೂ, ವಿಯೋಗವುಂಟಾದಾಗ ದುಃಖವನ್ನೂ ಯಾವನು ಹೊಂದುವನೋ, ಅಂತಹ ಮೂಢಾತ್ಮನು, ಆಕಾಶದಲ್ಲಿ ಹಾರಾಡುವ ಹಕ್ಕಿಗಳಂತೆ, ಎಂದೆಂದಿಗೂ ವ್ಯಸನಕ್ಕೇ ಗುರಿಯಾಗಿರುವನು ॥೩೧॥

ಸರ್ವವ್ಯಾಪಿಯಾಗಿಯೂ ಸರ್ವೇಶ್ವರನಾಗಿಯೂ ಇರುವ ನಾನು, ಜನ್ಮರಹಿತನೂ ನಾಶರಹಿತನೂ ಆಗಿದ್ದರೂ, ಉಪಾಸಕರ ಧ್ಯಾನಸೌಕರ್ಯಾರ್ಥವಾಗಿ ಶರೀರವನ್ನು ಕಲ್ಪಿಸಿಕೊಂಡಿರುವೆನು; ಅಷ್ಟೇಹೊರತು, ವಾಸ್ತವ್ಯವಾಗಿ ನನಗೆ ಶರೀರವಿಲ್ಲ ॥೩೨॥

ಹೀಗೆ ಕಲ್ಪಿತವಾಗಿದ್ದರೂ ನನ್ನ ದೇಹವನ್ನು ಯೋಗವಿಯೋಗಗಳೆರಡರಲ್ಲಿಯೂ ಧ್ಯಾನಿಸುತಲೇ ಇರಬೇಕು. ಇದರಿಂದ, ಸ್ಥಿರವಾದ ಭಕ್ತಿಯುಂಟಾಗುವುದು ॥೩೩॥

ಭಕ್ತಿಯು ಸ್ಥಿರವಾಗಲಾಗಿ, ನನ್ನ ಸ್ವರೂಪಜ್ಞಾನವುಂಟಾಗುವುದು; ಬಳಿಕ ನನ್ನಲ್ಲಿ ಭಕ್ತಿಯ ಆಚರಣೆಯಿಂದ, ಮುಕ್ತಿಯು ಹಸ್ತಗತವಾಗುವುದು. ಆದುಕಾರಣ, ಭಕ್ತಿಯಿಂದ ನನ್ನನ್ನು ಪರಮೇಶ್ವರನನ್ನಾಗಿ ಭಾವನೆಮಾಡುತಿರುವನಾಗು ॥೩೪॥

ಇದನ್ನು ಕೇಳಿ ಸುಮಂತ್ರನು ಹೇಳುವನು :—

ಸ್ವಾಮಿ! ರಾಮಭದ್ರ! ನಿನ್ನಲ್ಲಿ ಭಕ್ತಿಯ ಸ್ವರೂಪವನ್ನೂ, ಈ ಭಕ್ತಿಗೆ ಸಾಧನಗಳನ್ನೂ, ಭಕ್ತಿ ಹುಟ್ಟದಿರುವುದಕ್ಕೆ ಕಾರಣಗಳನ್ನೂ ಕೂಡ, ಈಗ ನೀನು ನನಗೆ ಸಂಗ್ರಹಿಸಿ ಹೇಳುವನಾಗು ॥೩೫॥

ಶ್ರೀರಾಮನು ಉತ್ತರ ಹೇಳುವನು:—

ಆರ್ಯಾ! ಸುಮಂತ್ರ! ಆ ಭಕ್ತಿಯೆಂಬುದು, ಶುದ್ಧವೆಂದೂ ಅಶುದ್ಧವೆಂದೂ ಎರಡು ಬಗೆಯಾಗಿರುವುದು. ಅವುಗಳಲ್ಲಿ, ಅಶುದ್ಧವೆಂಬುದು, ಕ್ರಿಯಾಮಿಶ್ರವೆಂದೂ ಗುಣಮಿಶ್ರವೆಂದೂ ಎರಡುವಿಧವಾಗಿರುವುದು ॥೩೬॥

ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ವಿಶತ್ಯದಃ ।
ಇತಿ ಜ್ಞಾತ್ವಾ ಭಜೇದ್ಯೋ ಮಾಂ ಸಾ ಶುದ್ಧಾ ಭಕ್ತಿರುರ್ಜಿತಾ ॥೩೭॥
ಕ್ರಿಯಾಮಿಶ್ರಾಪಿ ಮದ್ಭಕ್ತಿಃ ಕ್ರಿಯಾಯೋಗಪ್ರಭೇದತಃ ।
ನವಧೇತ್ಯುದಿತಾ ಭಕ್ತಿಃ ಸೂತಾಹಂ ವಚ್ಮಿ ತಾಂ ಶೃಣು ॥೩೮॥
ಕಥಾಶ್ರದ್ಧಾ ನಾಮಗಾನಂ ಸ್ಮೃತಿರ್ಮೇ ಪಾದಸೇವನಮ್ ।
ಸದಾರ್ಚಾ ವನ್ದನಂ ದಾಸ್ಯಂ ಸಖ್ಯಂ ಶಶ್ವತ್ ಸ್ವವೇದನಮ್ ॥೩೯॥
ಮತ್ಕಥಾಶ್ರವಣೇ ಸಕ್ತಾಃ ಬ್ರಹ್ಮರುದ್ರಾದಯಃ ಸುರಾಃ ।
ವಾಲ್ಮೀಕಿನಾರ್ಮಿ ನಿರತಃ ಮಾರೀಚಾದ್ಯಾಃ ಸ್ಮೃತೌ ಮನು ॥೪೦॥
ಮತ್ಪಾದಭಜನೇ ಸೀತಾಭರತಾದ್ಯಾಃ ಪ್ರಕೀರ್ತಿತಾಃ ।
ಮದರ್ಚನೇ ತು ಶಬರೀ ಸುತೀಕ್ಷ್ಣಾದ್ಯಾಶ್ಚ ಸದ್ದ್ವಿಜಾಃ ॥೪೧॥
ಪೌಲಸ್ತ್ಯೇ ಮನ್ನಮಸ್ಕಾರೇ ಮದ್ದಾಸ್ಯೇ ಮಾರುತಿಃ ಸ್ಮೃತಃ ।
ಸಖ್ಯೇ ಸುಗ್ರೀವಃ ಜಟಾಯುಃ ಸಕಲಾರ್ಪಣೇ ॥೪೨॥

'ಈ ಸಮಸ್ತವೂ ನನ್ನಿಂದಲೇ (ರಾಮನಿಂದ) ಹುಟ್ಟಿತು; ಇದೆಲ್ಲವೂ ನನ್ನಲ್ಲಿಯೇ ಇರುವುದು; ಎಲ್ಲವೂ ನಾನೇ; ಎಲ್ಲವೂ ನನ್ನಲ್ಲಿಯೇ ಐಕ್ಯಹೊಂದುವುದು.' ಎಂದು ತಿಳಿದುಕೊಂಡು–ಯಾವನು ನನ್ನನ್ನು ಭಜಿಸುವನೋ, ಅವನ ಆ ಭಕ್ತಿಯು ಪ್ರಶಸ್ತವಾದ ಶುದ್ಧ ಭಕ್ತಿಯೆನ್ನಿಸುವುದು ॥೩೭॥

ಕ್ರಿಯಾಮಿಶ್ರವಾದ ಅಶುದ್ಧಭಕ್ತಿಯಾದರೋ, ಆಯಾ ಕರ್ಮಗಳ ಯೋಗಭೇದದಿಂದ ಒಂಭತ್ತುಬಗೆಯಾಗಿರುವುದೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದು. ಆಯ್ಯಾ! ಸುಮಂತ್ರ! ನಾನು ಅದನ್ನು ನಿನಗೆ ಹೇಳುವೆನು,—ಕೇಳು ॥೩೮॥

ನನ್ನ ಕಥೆಯನ್ನು ಕೇಳುವುದರಲ್ಲಿ ಶ್ರದ್ಧೆಯು, ನನ್ನ ನಾಮಸಂಕೀರ್ತನವು, ನನ್ನ ಸ್ಮರಣೆಯು, ನನ್ನ ಪಾದಸೇವನೆಯು, ಸರ್ವದಾ ನನ್ನ ಪೂಜೆಯು, ನನ್ನ ನಮಸ್ಕಾರವು, ನನ್ನಲ್ಲಿ ದಾಸ್ಯವು, ನನ್ನ ಮೈತ್ರಿಯು, ಪುನಃಪುನಃ ನನಗೆ ಆತ್ಮಸಮರ್ಪಣೆಯು;–ಹೀಗೆಂದು ಭಕ್ತಿಯು ನವವಿಧವಾಗಿರುವುದು ॥೩೯॥

ನನ್ನ ಕಥಾಶ್ರವಣದಲ್ಲಿ, ಬ್ರಹ್ಮರುದ್ರ ಮೊದಲಾದ ದೇವತೆಗಳು ಆಸಕ್ತರಾಗಿರುವರು; ವಾಲ್ಮೀಕಿಮುನಿಯು ನನ್ನ ನಾಮಕೀರ್ತನೆಯಲ್ಲಿ ನಿರತನಾದವನು; ಮಾರೀಚ ಮೊದಲಾದವರು ನನ್ನ ಸ್ಮರಣೆಯಲ್ಲಿ ನಿರತರಾದವರು ॥೪೦॥

ನನ್ನ ಪಾದಸೇವನೆಯಲ್ಲಿ ಸೀತೆ ಭರತ ಮುಂತಾದವರೆಲ್ಲರೂ ನಿರತರೆಂದು ಪ್ರಸಿದ್ಧರಾಗಿರುವರು; ನನ್ನ ಪೂಜೆಯಲ್ಲಿ, ಶಬರಿಯೂ–ಸುತೀಕ್ಷ್ಣ ಮೊದಲಾದ ಬ್ರಾಹ್ಮಣೋತ್ತಮರೂ ನಿರತರಾಗಿರುವರು ॥೪೧॥

ನನ್ನ ನಮಸ್ಕಾರದಲ್ಲಿ ವಿಭೀಷಣನು ನಿರತನಾದವನು; ನನ್ನ ದಾಸ್ಯದಲ್ಲಿ ಆಂಜನೇಯನು ಹೆಸರುಗೊಂಡಿರುವನು; ಸಖ್ಯದಲ್ಲಿ ಸುಗ್ರೀವನು ನಿರತನಾದವನು; ಸರ್ವಸ್ವಸಹಿತವಾಗಿ ಆತ್ಮಾರ್ಪಣೆ ಮಾಡುವುದರಲ್ಲಿ ಜಟಾಯುವು ನಿರತನಾದವನು ॥೪೨॥

ಏವಂ ಭಕ್ತಿಃ ಕ್ರಿಯಾಮಿಶ್ರಾ ನವಧೇತ್ಯುದಿತಾ ಮಯಿ ।
ಏಷಾ ನವಪ್ರಕಾರಾಪಿ ಕ್ರಮಾದ್ಭಕ್ತಿರ್ವಿಮುಕ್ತಿದಾ ॥೪೩॥
ತ್ರಿವಿಧಾ ಗುಣಮಿಶ್ರಾಪಿ ಸಾತ್ವಿಕೀ ಸೂತ ರಾಜಸೀ ।
ತಾಮಸೀ ಚೇತಿ ತಾಭೂಯಃ ಪ್ರತ್ಯೇಕಂ ತ್ರಿವಿಧಾಃ ಸ್ಮೃತಾಃ ॥೪೪॥
ಮದ್ಭಕ್ತಿಃ ಸಾತ್ವಿಕೀ ತ್ರೇಧಾ ತಮೋಯುಕ್ತಾ ರಜೋನ್ವಿತಾ ।
ಸತ್ವಯುಕ್ತೇತಿ ಸೂತೋಕ್ತಾಃ ತಾಸಾಂ ಲಕ್ಷಣಮುಚ್ಯತೇ ॥೪೫॥
ಯದ್ಭಕ್ತ್ಯಾ ಮಾಂ ವಿವಿತ್ಸನ್ತಿ ಸಾತ್ವಿಕೈಃ ಸರ್ವಸಾಧನೈಃ ।
ಮದೇಕನಿರತಾಃ ಶಶ್ವತ್ ಸಾ ತು ಸಾತ್ವಿಕಸಾತ್ವಿಕೀ ॥೪೬॥
ಸರ್ವಭೂತೇಷ್ವಹಮಿತಿ ಸ್ಥಿತಂ ಪ್ರತ್ಯಕ್ಷವತ್ ಸದಾ ।
ಪರೋಕ್ಷಂ ಭಜತೇ ಭಕ್ತ್ಯಾ ಸಾ ತು ರಾಜಸಸಾತ್ವಿಕೀ ॥೪೭॥
ಸರ್ವಭೂತೇಷು ಮಾಮೇಕಂ ಸಂಸ್ಥಿತಂ ತಾರತಮ್ಯತಃ ।
ಭಕ್ತ್ಯಾ ಭಜತ್ಯಜಸ್ರಂ ಮಾಂ ಸಾ ಸ್ಯಾತ್ ತಾಮಸಸಾತ್ವಿಕೀ ॥೪೮॥

ಹೀಗೆ ನನ್ನಲ್ಲಿ ಕ್ರಿಯಾಮಿಶ್ರವಾದ ಭಕ್ತಿಯು ಒಂಬತ್ತು ಪ್ರಕಾರವಾಗಿರುವುದನ್ನು ತೋರಿಸಿರುವೆನು. ಈ ಒಂಬತ್ತು ವಿಧವಾದ ಭಕ್ತಿಯೂ ಕ್ರಮವಾಗಿ ಮೋಕ್ಷವನ್ನು ಕೊಡ ತಕ್ಕುದಾಗಿರುವುದು ॥೪೩॥

ಅಯ್ಯಾ! ಸಾರಥಿವರ್ಯನಾದ ಸುಮಂತ್ರನೆ! ಅಶುದ್ಧವಾದ ಭಕ್ತಿಯಲ್ಲಿ ಕ್ರಿಯಾಮಿಶ್ರವೆಂದೂ ಗುಣಮಿಶ್ರವೆಂದೂ ಎರಡುಬಗೆಯೆಂಬುದಾಗಿ ನಾನು ಮೊದಲು ನಿನಗೆ ಹೇಳಿರುವೆನಷ್ಟೆ! ಅವುಗಳಲ್ಲಿ ಕ್ರಿಯಾಮಿಶ್ರಭಕ್ತಿಯು ಭೇದಗಳೂ ಗೊತ್ತಾದುವಷ್ಟೆ! ಈಗ ಗುಣಮಿಶ್ರವಾದ ಭಕ್ತಿಯು ಸ್ವರೂಪವನ್ನು ಹೇಳುವೆನು,—ಕೇಳು. ಗುಣಮಿಶ್ರಭಕ್ತಿಯು, ಸಾತ್ವಿಕ ರಾಜಸ ತಾಮಸಗಳೆಂಬುದಾಗಿ ಮೂರುಭೇದಗಳುಳ್ಳದಾಗಿರುವುದು. ಈ ಮೂರು ಭೇದಗಳಲ್ಲಿಯೂ ಪುನಃ ಮೂರು ಭೇದಗಳುಂಟೆಂದು ಹೇಳಲ್ಪಟ್ಟಿರುವುದು ॥೪೪॥

ಇವುಗಳಲ್ಲಿ, ಸಾತ್ವಿಕಭಕ್ತಿಯು, ತಮೋಯುಕ್ತವೆಂದೂ ರಜೋಯುಕ್ತವೆಂದೂ ಸತ್ವ ಯುಕ್ತವೆಂದೂ ಮೂರು ಭೇದವುಳ್ಳದೆಂದು ಹೇಳಲ್ಪಟ್ಟಿರುವುದು. ಅಯ್ಯಾ! ಸುಮಂತ್ರ! ಈಗ ಅವುಗಳ ಲಕ್ಷಣವನ್ನು ಹೇಳುವೆನು ॥೪೫॥

ಸರ್ವದಾ ನನ್ನಲ್ಲಿಯೇ ನಿರತರಾದ ನನ್ನ ಭಕ್ತರು, ಯಾವ ಭಕ್ತಿಯಿಂದ, ಸಕಲ ಸಾಧನವನ್ನೂ ಸಾತ್ವಿಕಗಳನ್ನಾಗಿಟ್ಟುಕೊಂಡು, ಪದೇಪದೇ ನನ್ನ ಸ್ವರೂಪವನ್ನು ತಿಳಿಯಬೇಕೆಂದು ಅಪೇಕ್ಷಿಸುವರೋ, ಅದು ಸಾತ್ವಿಕಸಾತ್ವಿಕ ಭಕ್ತಿಯೆನ್ನಿಸುವುದು ॥೪೬॥

ಪರೋಕ್ಷನಾಗಿರುವ ನನ್ನನ್ನು, ಸರ್ವಭೂತಗಳಲ್ಲಿಯೂ ವ್ಯಾಪ್ತನಾಗಿರತಕ್ಕವನೆಂದು ತಿಳಿದು, ಸರ್ವದಾ ಪ್ರತ್ಯಕ್ಷನಾಗಿರುವಂತೆ ಯಾವ ಭಕ್ತಿಯಿಂದ ಭಜಿಸುವರೋ, ಅದು ರಾಜಸಸಾತ್ವಿಕಭಕ್ತಿಯೆನ್ನಿಸುವುದು ॥೪೭॥

ಸರ್ವಭೂತಗಳಲ್ಲಿಯೂ ಇರುವ ಅದ್ವಿತೀಯನಾದ ನನ್ನನ್ನು ಯಾವ ಭಕ್ತಿಯಿಂದ ತಾರತಮ್ಯಕಲ್ಪನೆ ಮಾಡಿಕೊಂಡು ಭಜಿಸುವರೋ, ಅದು ತಾಮಸ ಸಾತ್ವಿಕಭಕ್ತಿಯೆನ್ನಿಸುವುದು ॥

ರಾಜಸ್ಯಪಿ ತ್ರಿಧಾ ಭಕ್ತಿಃ ಸತ್ವಯುಕ್ತಾ ತವೋನ್ವಿತಾ ।
ಋಷಿಭಿಃ ಪ್ರೋಚ್ಯತೇ ಸೂತ ತಥಾ ರಾಜಸರಾಜಸೀ ॥೪೯॥
ಸದಾ ನಿಷ್ಕಾಮಕರ್ಮಾಣಿ ಕುರ್ವಂ ಕಾಮ್ಯಮಪಿ ಕ್ವಚಿತ್ ।
ಮತ್ಪ್ರೀತ್ಯೈ ಯಃ ಸ್ಥಿತೋ ಭಕ್ತ್ಯಾ ಸ ತು ಸಾತ್ವಿಕರಾಜಸಃ ॥೫೦॥
ಭೋಗಾರ್ಥಂ ಪುಣ್ಯಲೋಕೇಷು ಯೋ ಮಾಂ ಭಕ್ತ್ಯಾ ನಿಷೇವತೇ ।
ದಮ್ಭಲೋಭಾದಿಸಹಿತಃ ಸ ತು ರಾಜಸರಾಜಸಃ ॥೫೧॥
ಅರ್ಥಾರ್ಥಂ ವಾರ್ತಿನಾಶಾರ್ಥಂ ತತ್ತದ್ದ್ರವ್ಯಾದಿಯೋಗತಃ ।
ಯೇ ಮಾಮುಪಾಸತೇ ಭಕ್ತ್ಯಾ ತೇ ತು ತಾಮಸರಾಜಸಾಃ ॥೫೨॥
ತಾಮಸ್ಯಪಿ ತ್ರಿಧಾ ಸೂತ ಮದ್ಭಕ್ತಿಶ್ಚ ಇಹೋತ್ಥಾನಾಮ್ ।
ಗುಣಾಂಶೋಪಾಧಿಭೇದೇನ ಬ್ರುವೇ ತಲ್ಲಕ್ಷಣಂ ಶೃಣು ॥೫೩॥
ಸಂಸಾರದೇಹಪುಷ್ಟ್ಯರ್ಥಂ ಮಾಂ ಯಃ ಶರಣಮೃಚ್ಛತಿ ।
ದಮ್ಭಪ್ರಧಾನಃ ಶ್ರದ್ಧಾಳುಃ ಸ ತು ಸಾತ್ವಿಕತಾಮಸಃ ॥೫೪॥

ಆಯ್ಯಾ! ಸುಮಂತ್ರ! ರಾಜಸಭಕ್ತ್ಯಾಯೂಕೂಡ, ಸಾತ್ವಿಕ ರಾಜಸವೆಂದೂ ತಾಮಸರಾಜಸವೆಂದೂ ರಾಜಸರಾಜಸವೆಂದೂ ಮೂರುಬಗೆ ಯಾಗಿರುವುದೆಂದು ಋಷಿಗಳಿಂದ ಹೇಳಲ್ಪಡುವುದು ॥೪೯॥

ಯಾವ ಭಕ್ತನು, ಸರ್ವದಾ ನಿಷ್ಕಾಮಕರ್ಮಗಳನ್ನು-ಕದಾಚಿತ್ ಕಾಮ್ಯಕರ್ಮಗಳನ್ನಾಗಲಿ-ನನ್ನ ಪ್ರೀತಿಗೋಸ್ಕರವಾಗಿ ಭಕ್ತಿಯಿಂದ ಮಾಡಿಕೊಂಡಿರುವನೋ, ಅವನು ಸಾತ್ವಿಕರಾಜಸಭಕ್ತಿಯುಳ್ಳವನೆನ್ನಲ್ಪಡುವನು ॥೫೦॥

ಯಾವ ಭಕ್ತನು, ಪುಣ್ಯಲೋಕಗಳಲ್ಲಿ ಭೋಗವನ್ನನುಭವಿಸಬೇಕೆಂಬ ಇಚ್ಛೆಯಿಂದ, ದಂಭಲೋಭಾದಿಸಹಿತನಾಗಿ ನನ್ನನ್ನು ಭಕ್ತಿಯಿಂದ ಸೇವಿಸುವನೋ, ಅವನು ರಾಜಸರಾಜಸ ಭಕ್ತಿಯುಳ್ಳವನೆಂದು ತಿಳಿಯುಲ್ಪಡಬೇಕು ॥೫೧॥

ಯಾವ ಭಕ್ತರು, ಧನಾರ್ಥವಾಗಿಯಾಗಲಿ-ಆರ್ತಪರಿಹಾರಾರ್ಥವಾಗಿಯಾಗಲಿ-ಅಯಾ ದ್ರವ್ಯಾದಿ ಯೋಗಗಳಿಂದ ನನ್ನನ್ನು ಉಪಾಸಿಸುವರೋ, ಅವರು ತಾಮಸರಾಜಸಭಕ್ತಿಯುಳ್ಳವರೆನ್ನಲ್ಪಡುವರು ॥೫೨॥

ಆಯ್ಯಾ! ಸಾರಥೇ! ಇದರಂತೆಯೇ ತಾಮಸಭಕ್ತ್ಯಾಯೂಕೂಡ, ಸತ್ವಾದಿಗುಣಗಳ ಅಂತರದಿಂದ-ಸಾತ್ವಿಕತಾಮಸವೆಂದೂ ರಾಜಸತಾಮಸವೆಂದೂ ತಾಮಸತಾಮಸವೆಂದೂ ಮೂರುಬಗೆ ಯಾಗಿರುವುದು. ಇದು, ಕೇವಲ ಚಂಚಲಾತ್ಮರಿಗೆ ಮಾತ್ರವೇ ಇರುವುದು. ಇವುಗಳ ಸ್ವರೂಪವನ್ನು ಹೇಳುವೆನು, -ಕೇಳು ॥೫೩॥

ಯಾವ ಭಕ್ತನು, ಕೇವಲ ದಂಭಪ್ರಧಾನನಾಗಿ ಸಂಸಾರದಲ್ಲಿ ದೇಹಪುಷ್ಟಿಗೋಸ್ಕರ ಶ್ರದ್ಧೆಯಿಂದ ನನ್ನನ್ನು ಶರಣಾಗತನಾಗುವನೋ, ಅವನು ಸಾತ್ವಿಕತಾಮಸಭಕ್ತಿಯುಳ್ಳವನೆಂದು ತಿಳಿಯಬೇಕು ॥೫೪॥

ಸ್ವೋತ್ಕರ್ಷಮಾನಪೂಜಾರ್ಥಂ ಯಾ ಭಕ್ತಿರ್ದಮ್ಭತೋ ಮಯಿ ।
ಕ್ರಿಯತೇ ಸೂತ ಸಂಪ್ರೋಕ್ತಾ ಸಾ ತು ರಾಜಸತಾಮಸೀ ॥೫೫॥

ಮೌಖ್ಯಾದವಿಧಿನಾ ಭಕ್ತ್ಯಾ ಸ್ವದೇಹೇನ್ದ್ರಿಯಶೋಷಕಃ ।
ಭಜೇನ್ಮಾಂ ಪರನಾಶಾರ್ಥಂ ಪ್ರೋಕ್ತಸ್ತಾಮಸತಾಮಸಃ ॥೫೬॥

ಏವಂ ಮದ್ಭಕ್ತಿಭೇದೇಷು ಗುಣಮಿಶ್ರಾ ವಿಶಿಷ್ಯತೇ ।
ತತ್ರಾಪಿ ಸಾತ್ವಿಕೀ ಭಕ್ತಿಃ ತಸ್ಯಾಂ ಸಾತ್ವಿಕಸಾತ್ವಿಕೀ ॥೫೭॥

ಯಯಾಕಯಾಜಿದ್ಭಜ್ಯಕ್ತ್ಯಾ ಮಾಂ ಅಶ್ರಿತಾಸ್ತು ಪ್ರಿಯಾಮತಾಃ ।
ಸಾತ್ವಿಕಾಸ್ತು ಪ್ರಿಯತಮಾಃ ಸಾಕ್ಷಾನ್ಮತ್ತತ್ತ್ವವೇದಿನಃ ॥೫೮॥

ಸರ್ವತೈ್ರವಂ ವಿದಿತ್ವಾ ಮಾಂ ಯಜನ್ತೇ ಸಾತ್ವಿಕಾಜನಾಃ ।
ರಾಜಸಾಃ ಪದ್ಮಜಂ ದೇವಾ ಪ್ರೇತಾ ರುದ್ರಂ ಚ ತಾಮಸಾಃ ॥೫೯॥

ತಾಮಸೀ ಜನಯೇದ್ಭಕ್ತಿಂ ರಾಜಸೀಂ ಸಾ ತು ಸಾತ್ವಿಕೀಮ್ ।
ಸಾತ್ವಿಕಾನಾಮಹಂ ಮೋಕ್ಷಂ ದಾಸ್ಯಾಮ್ಯನ್ತೇ ಜೆರಾದ್ಧ್ರುವಮ್ ॥೬೦॥

ಅಯ್ಯಾ! ಸುಮಂತ್ರ! ಪ್ರಪಂಚದಲ್ಲಿ ತನಗೆ ಮೇಲ್ಮೆಯೂ ಬಹುಮಾನವೂ ಪೂಜೆಯೂ ಉಂಟಾಗಬೇಕೆಂಬ ಇಚ್ಛೆಯಿಂದ ದಂಭಪೂರ್ವಕವಾಗಿ ನನ್ನಲ್ಲಿ ಯಾವ ಭಕ್ತಿ ಮಾಡಲ್ಪಡುವುದೋ, ಅದು ರಾಜಸ ತಾಮಸಭಕ್ತಿಯು ॥೫೫॥

ಕೇವಲ ಹಠದಿಂದ ವಿಧಿಯೊಂದೂ ಇಲ್ಲದೆಯೇ ತನ್ನ ದೇಹೇಂದ್ರಿಯಗಳನ್ನು ಶೋಷಿಸಿಕೊಂಡು ಪರರ ಹಾನಿಗೋಸ್ಕರ ನನ್ನನ್ನು ಭಕ್ತಿಯಿಂದ ಭಜಿಸುವುದಾವುದುಂಟೋ, ಅದು ತಾಮಸತಾಮಸ ಭಕ್ತಿಯು ॥೫೬॥

ಈರೀತಿಯಾಗಿರುವ ನನ್ನ ಭಕ್ತಿಭೇದಗಳಲ್ಲಿ, ಗುಣಮಿಶ್ರವಾಡ ಭಕ್ತಿಯು ವಿಶೇಷವೆನ್ನಿಸುವುದು. ಅದರಲ್ಲಿಯೂ ಸಾತ್ವಿಕಭಕ್ತಿಯು ಪ್ರಶಸ್ತವು. ತತ್ರಾಪಿ ಸಾತ್ವಿಕಸಾತ್ವಿಕಭಕ್ತಿಯು ಸರ್ವೋತ್ತಮವು ॥೫೭॥

ಈ ಭಕ್ತಿಗಳೊಳಗೆ ಯಾವ ಭಕ್ತಿಯಿಂದಾದರೂ ನನ್ನನ್ನು ಆಶ್ರಯಿಸತಕ್ಕವರು ನನಗೆ ಪ್ರಿಯರಾದವರು. ಸಾತ್ವಿಕರಾದರೋ, ಪ್ರಿಯತಮರೆನ್ನಲ್ಪಡುವರು; ಇವರು ಸಾಕ್ಷಾತ್ತಾಗಿ ನನ್ನ ಸ್ವರೂಪವನ್ನು ತಿಳಿಯತಕ್ಕವರಾಗಿರುವರು ॥೫೮॥

ಹೀಗೆಂದು ತಿಳಿದು, ಸಾತ್ವಿಕರಾದವರು ನನ್ನನ್ನು ಸರ್ವತ್ರ ಪೂಜಿಸುವರು; ರಾಜಸರಾದವರು, ಬ್ರಹ್ಮರೂಪದಿಂದ ನನ್ನನ್ನು ಪೂಜಿಸುವರು; ತಾಮಸರಾದವರು, ನನ್ನನ್ನು ದೇವತಾಂತರರೂಪದಿಂದಲೂ ಭೂತಪ್ರೇತಾದಿರೂಪದಿಂದಲೂ ರುದ್ರರೂಪದಿಂದಲೂ ಪೂಜಿಸುವರು ॥೫೯॥

ಆದರೆ, ತಾಮಸರಾಜಸಭಕ್ತಿಗಳು ನಿರರ್ಥಕಗಳೆಂದು ತಿಳಿಯಕೂಡದು. ತಾಮಸಭಕ್ತಿಯು ರಾಜಸಭಕ್ತಿಯನ್ನು ಹುಟ್ಟಿಸುವುದು; ಅದು ಸಾತ್ವಿಕಭಕ್ತಿಯನ್ನು ಹುಟ್ಟಿಸುವುದು. ಕೊನೆಯಲ್ಲಿ, ಬಹುಕಾಲಾನಂತರ, ಸಾತ್ವಿಕರಿಗೆ ನಾನು ಮೋಕ್ಷವನ್ನು ಕೊಡುವೆನು. ಇದು ನಿಶ್ಚಯವು ॥೬೦॥

ಯದ್ಯದ್ರಜಸ್ತಮೋಯುಕ್ತಂ ತತ್ತತ್ ತ್ಯಕ್ತ್ವಾ ಸುಬುದ್ಧಿರ್ಮಾ ।
ಸೇವೇತ ಸತ್ವಪ್ರಧಾನಾನಿ ಭಕ್ತಿಃ ಸ್ಯಾತ್ ತೇನ ಸಾತ್ವಿಕೀ ॥೬೧॥

ಯದಬ್ಭೀಕ್ರಿಯತೇ ಶಾಸ್ತ್ರೈಃ ಸದ್ಭಿರ್ವಾ ಸಾತ್ವಿಕಂ ಹಿ ತತ್ ।
ಯನ್ನಿನ್ದಿತಂ ತಾಮಸಂ ತತ್ ರಾಜಸಂ ಯದುಪೇಕ್ಷಿತಮ್ ॥೬೨॥

ಮಜ್ಜ್ಞಾನಂ ಸಾತ್ವಿಕೈರ್ಭಾವೈಃ ಭೋಗಶ್ರದ್ಧಾ ತು ರಾಜಸೈಃ ।
ನೋಭಯಂ ತಾಮಸೈಃ ಕಾರ್ಯೈಃ ವೃಥಾ ಮೋಹೋ ವೃಥಾ ಭಯಮ್॥

ಗುಣತ್ರಯಂ ಮನಃಕಾರ್ಯಂ ತನ್ಮನೋ ವರ್ಧತೇನ್ನ ಸಾ ।
ಯಾದೃಗನ್ನಂ ಮನಸ್ತಾದೃಕ್ ಅತೋ ಭವತಿ ಸಾರಥೇ ॥೬೪॥

ಭೋಜ್ಯಂ ತತಃ ಸಾತ್ವಿಕಾನ್ನಂ ಶುದ್ಧ್ಯರ್ಥಂ ಮನಸಃ ಸದಾ ।
ಮನಃ ಶುದ್ಧಂ ಯದಾ ಜಾತಂ ವೈರಾಗ್ಯಂ ಜಾಯತೇ ತದಾ ॥೬೫॥

ಜಿಹ್ವಾಜಯೇನ ಸರ್ವಾಣಿ ಹೃಷೀಕಾಣಿ ಜಿತಾನ್ಯಲಮ್ ।
ತತೋ ದೇಹಾಭಿಮಾನೋಸೌ ಕನ್ಯೈಃ ಸಂಯಾತಿ ತಾನವಮ್ ॥೬೬॥

ಹೀಗಿರುವುದರಿಂದ, ಬುದ್ಧಿಯುಕ್ತನಾದವನು, ಯಾವಯಾವುದು ರಜಸ್ಸಿನಿಂದಲೂ ತಮಸ್ಸಿನಿಂದಲೂ ಯುಕ್ತವಾಗಿರುವುದೋ-ಅದನ್ನು ಬಿಟ್ಟುಬಿಟ್ಟು, ಸತ್ವಪ್ರಧಾನವಾದುವುಗಳನ್ನೇ ಸೇವಿಸುತಿರಬೇಕು. ಇದರಿಂದ ಕರ್ಮೇಣ ಸಾತ್ವಿಕಭಕ್ತಿಯುಂಟಾಗುವುದು ॥೬೧॥

ಈ ಸಾತ್ವಿಕಾದಿ ಭೇದಗಳನ್ನು ತಿಳಿಯುವ ಬಗೆಯಾವುದೆಂದರೆ,—ಯಾವುದು, ಶಾಸ್ತ್ರಗಳಿಂದಲೂ ಸತ್ಪುರುಷರಿಂದಲೂ ಅಂಗೀಕರಿಸಲ್ಪಡುವುದೋ, ಅದು ಸಾತ್ವಿಕವು. ಯಾವುದು ನಿಂದಿಸಲ್ಪಡುವುದೋ, ಅದು ತಾಮಸವು. ಯಾವುದು ಉಪೇಕ್ಷಿಸಲ್ಪಟ್ಟಿರುವುದೋ, ಅದು ರಾಜಸವು ॥

ಸಾತ್ವಿಕವಾದ ಕಾರ್ಯಗಳಿಂದ, ನನ್ನ ಸ್ವರೂಪವು ಗೊತ್ತಾಗುವುದು; ರಾಜಸಗಳಿಂದ ಭೋಗಶ್ರದ್ಧೆಯು ಫಲಿಸುವುದು; ತಾಮಸಕಾರ್ಯಗಳಿಂದಾದರೋ, ಇವೆರಡೂ ಸಿದ್ಧಿಸುವುದಿಲ್ಲ; ವ್ಯರ್ಥವಾಗಿ ಮೋಹವೂ, ವ್ಯರ್ಥವಾಗಿ ಭಯವೂ, ಇವೆರಡು ಮಾತ್ರವೇ ಉಂಟಾಗುವುವು ॥೬೩॥

ಅಯ್ಯಾ! ಸಾರಥಿಯೇ! ಈ ಸತ್ವ ರಜಸ್ಸು ತಮಸ್ಸುಗಳೆಂಬ ಗುಣತ್ರಯವು, ಮನಸ್ಸಿನ ಕಾರ್ಯರೂಪವಾದುದು; ಆ ಮನಸ್ಸು ಅನ್ನದಿಂದ ವರ್ಧಿಸುವುದು. ಅದುಕಾರಣ, ಅನ್ನವೆಂತಹದೋ-ನಮ್ಮ ಮನಸ್ಸೂ ಅಂತಹದೇ ಆಗುವುದು ॥೬೪॥

ಅದುದರಿಂದ, ಮನಸ್ಸಿನ ಶುದ್ಧಿಗೋಸ್ಕರವಾಗಿ ಎಂದಿಗೂ ಸಾತ್ವಿಕಾನ್ನವನ್ನೇ ಭುಂಜಿಸಬೇಕು. ಯಾವಾಗ ಮನಸ್ಸು ಶುದ್ಧವಾಯ್ತೋ, ಆಗ ಸ್ವತಏವ ವೈರಾಗ್ಯವುದಯಿಸುವುದು ॥೬೫॥

ಮುಖ್ಯವಾಗಿ ಜಿಹ್ವೆಯೊಂದನ್ನು ತನ್ನ ವಶದಲ್ಲಿಟ್ಟುಕೊಂಡರೆ-ಸಮಸ್ತವಾದ ಇಂದ್ರಿಯಗಳನ್ನೂ ಸಂಪೂರ್ಣವಾಗಿ ಗೆದ್ದಂತೆಯೇ ಆಗುವುದು; ಆ ಒಳಿಕ, ಈ ದೇಹಾಭಿಮಾನವು ಮೆಲ್ಲಗೆ ಕಾರ್ಶ್ಯವನ್ನು ಪಡೆಯುವುದು ॥೬೬॥

ದೇಹಾಭಿಮಾನಾನ್ನಾವಿದ್ಯಾ ವಿದ್ಯತೇನ್ಯಾರಿಕರ್ಶನ ।
ತೇನೈವ ಬನ್ಧೋ ಜೀವಾನಾಂ ತನ್ನಾಶೋ ಮೋಕ್ಷ ಉಚ್ಯತೇ ॥೬೩॥
ಸ ಚಾಭಿಮಾನೋ ದ್ವಿವಿಧಃ ಸಾಮಾನ್ಯಶ್ಚ ವಿಶೇಷಕಃ ।
ದೇಹೇಭಿಮಾನಃ ಸಾಮಾನ್ಯಃ ವಿಶೇಷಸ್ತು ಕುಲಾದಿಷು ॥೬೪॥
ಆದೌ ದೇಹಾತ್ಮಬುದ್ಧಿಃ ಸ್ಯಾತ್ ತತೋ ಜಾತ್ಯಾಶ್ರಮಭ್ರಮಃ ।
ಗೋತ್ರಸೂತ್ರಾತ್ಮಸಮ್ಬನ್ಧಪ್ರಮುಖಾವಿಭ್ರಮಾಸ್ತತಃ ॥೬೫॥
ತತ್ತಜ್ಜಾತ್ಯಾದಿಕೇ ತತ್ತದಭಿಮಾನಾನುಸಾರತಃ ।
ವಿಹಿತಂ ಪ್ರತಿಷಿದ್ಧಂ ಚ ವಿಧತ್ತೇ ಶಾಸ್ತ್ರಮಪ್ಯಲಮ್ ॥೬೦॥
ವಿಹಿತಸ್ಯ ಪರಿತ್ಯಾಗಾತ್ ದೋಷಸ್ತತ್ಸ್ವೀಕೃತೌ ಗುಣಃ ।
ನಿಷಿದ್ಧಕರಣೇ ದೋಷಃ ತತ್ಯಾಗಾದ್ಗುಣಸಮ್ಭವಃ ॥೬೧॥
ಏವಂ ಚ ಗುಣದೋಷಾಭ್ಯಾಂ ಪುಣ್ಯಪಾಪಾದಿಸಮ್ಭವಃ ।
ತಾಭ್ಯಾಂ ತು ಸ್ವರ್ಗನರಕೌ ಚಿತ್ರಜನ್ಮ ತತೋ ಧ್ರುವಮ್ ॥೬೨॥
ಯದಾ ಜನ್ಮ ತದಾ ಮೃತ್ಯುಃ ಯದಾ ಮೃತ್ಯುಸ್ತದಾ ಜನಿಃ ।

ಎಲೈ ಶತ್ರುಪೀಡಾಕರನಾದ ಸುಮಂತ್ರನೆ! ದೇಹಾಭಿಮಾನಕ್ಕಿಂತಲೂ ಬೇರೆಯಾದ ಅವಿದ್ಯೆಯಾವುದೂ ಇಲ್ಲ. ಈ ದೇಹಾಭಿಮಾನದಿಂದಲೇ, ಜೀವರಿಗೆ ಬಂಧವುಂಟಾಗುವುದು; ಅದರ ನಾಶವೇ ಮೋಕ್ಷವೆನ್ನಲ್ಪಡುವುದು ॥೬೩॥

ಈ ಅಭಿಮಾನವು, ಸಾಮಾನ್ಯವೆಂದೂ ವಿಶೇಷವೆಂದೂ ಎರಡುಬಗೆಯಾಗಿರುವುದು. ದೇಹದಲ್ಲಿರುವ ಅಭಿಮಾನವೇ ಸಾಮಾನ್ಯಾಭಿಮಾನವು; ಕುಲಾದಿಗಳಲ್ಲಿಡುವ ಅಭಿಮಾನವೇ ವಿಶೇಷಾಭಿಮಾನವು ॥೬೪॥

ಜೀವನಿಗೆ, ಮೊದಲು ದೇಹದಲ್ಲಿ ಆತ್ಮನೆಂಬ ಬುದ್ಧಿಯುದಯಿಸುವುದು; ಬಳಿಕ, ನಾನು ಇಂತಹ ವರ್ಣದವನು–ನನ್ನ ಸೂತ್ರವಿಂತಹುದು–ನನ್ನ ಆತ್ಮಾನುಬಂಧಿಗಳೆಲ್ಲರೂ ಇಷ್ಟಿಷ್ಟು ದೊಡ್ಡ ಪದವಿಯಲ್ಲಿರುವರು–ಇತ್ಯಾದಿ ರೂಪವಾದ ಭ್ರಮೆಗಳೆಲ್ಲವೂ ಹುಟ್ಟುವುವು ॥೬೫॥

ಆಯಾ ವರ್ಣಾಶ್ರಮಾದಿಗಳಲ್ಲಿ, ಆಯಾ ಅಭಿಮಾನಕ್ಕನುಸಾರವಾಗಿ, ಶಾಸ್ತ್ರವೂ ಕೂಡ, ವಿಹಿತವನ್ನೂ ನಿಷಿದ್ಧವನ್ನೂ ಸಂಪೂರ್ಣವಾಗಿ ಶೋರಿಸಿರುವುದು ॥೬೦॥

ಹೀಗಿರುವಾಗ, ವಿಹಿತವನ್ನು ಬಿಡುವುದರಿಂದ ದೋಷವೂ, ಅದನ್ನು ಆಚರಿಸುವುದರಿಂದ ಗುಣವೂ ಸ್ಪಷ್ಟವಾಗಿರುವುವು. ಇದರಂತೆಯೇ, ನಿಷಿದ್ಧವನ್ನು ಆಚರಿಸುವುದರಿಂದ ದೋಷವೂ, ಇದನ್ನು ಪರಿತ್ಯಜಿಸುವುದರಿಂದ ಗುಣವೂ ಸಿದ್ಧವಾಗಿಯೇ ಇರುವುದು ॥೬೧॥

ಅಂತು, ಈ ಗುಣದೋಷಗಳಿಂದ ಪುಣ್ಯಪಾಪಗಳು ಸಂಭವಿಸುವುವು. ಈ ಪುಣ್ಯಪಾಪಗಳಿಂದ, ಕ್ರಮವಾಗಿ ಸ್ವರ್ಗವೂ ನರಕವೂ ಉಂಟಾಗುವುವು; ಬಳಿಕ, ನಾನಾವಿಧ ವಿಚಿತ್ರಜನ್ಮಗಳು ನಿಶ್ಚಿತವಾಗಿರುವುವು ॥೬೨॥

ಯಾವಾಗ ಜನ್ಮವುಂಟಾಯ್ತೋ, ಆಗ ಮರಣವೂ ಸಿದ್ಧವೇ ಆಗಿರುವುದು; ಯಾವಾಗ ಮರಣವುಂಟಾಯ್ತೋ, ಆಗ ಜನನವೂ ಸಿದ್ಧವೇ ಆಗಿರುವುದು. ಅಮೇಲೆ, ಜರೆ ರೋಗ ಮುಂತಾ

ಜರಾವ್ಯಾಧ್ಯಾದಯಃ ಪಶ್ಚಾತ್ ವಿನಾ ಜ್ಞಾನಂ ನ ತತ್ಕ್ಷತಿಃ ॥೭೩॥
ಪಞ್ಚ ಭೂತೈರೀಶ್ವರೇಣ ತತ್ತತ್ಕರ್ಮಾನುಸಾರತಃ ।
ಸ್ತ್ರೀಪುಮ್ಭೇದಾದ್ವಿಕಾರಾಸ್ತು ಸೃಷ್ಟಾಭೇದಾಶ್ಚ ಸರ್ವತಃ ॥೭೪॥
ಏವಂ ಸಮೇಷು ಸರ್ವೇಷು ಶರೀರೇಷು ಕುಲಾಶ್ರಮಾಃ ।
ಗೋತ್ರಸೂತ್ರಶಿಖಾಶಾಖಾನಾಮಾದ್ಯಾಶ್ಚ ತಥೈವ ಚ ॥೭೫॥
ಮಾತಾ ಪುತ್ರೀ ಸ್ನುಷಾ ಜಾಯಾ ಭ್ರಾತೃಜಾಮಾತೃಮಾತುಲಾಃ ।
ಪಿತೃಪುತ್ರಸುಹೃತ್ಪೌತ್ರಭಾವುಕಾದ್ಯಾಶ್ಚ ಪುಂಸ್ತನೌ ॥೭೬॥
ಏತೇ ಸರ್ವೇ ಯತೋ ಮಧ್ಯೇ ಪ್ರಾಪ್ತಾಸ್ತಸ್ಮಾತ್ ಪ್ರಕಲ್ಪಿತಾಃ ।
ತತಏವಾದ್ಯನ್ತವನ್ತಃ ತಸ್ಮಾದ್ದೇಹವದಧ್ರುವಾಃ ॥೭೭॥
ಜಾತ್ಯಾಶ್ರಮಾದೌ ಸ್ತ್ರೀಪುಂಸೋರಿವ ಲಿಙ್ಗಂ ನ ವರ್ಮ್ಮಸು ।
ಕಿಂ ತು ಸಙ್ಕೀತವೇಷಾದ್ಯೈಃ ಭಾತೀವ ನ ತು ತಲ್ಲಯೇ ॥೭೮॥
ಯಾವದ್ಯಾವದಹಂಭಾವವೃದ್ಧಿರ್ಜಾತ್ಯಾಶ್ರಮಾದಿಷು ।
ತಾವತ್ತಾವತ್ ಕ್ರಿಯಾವೃದ್ಧಿಃ ಜಾಯತೇ ಶಾಸ್ತ್ರಸಙ್ಘಯೇ ॥೭೯॥

ದುವುಗಳು ಅಸಂಖ್ಯಾಕವಾಗಿರುವುವು. ಜ್ಞಾನವಿಲ್ಲದೆ ಹೋದರೆ, ಇವುಗಳಿಗೆ ಕ್ಷಯವೇ ಇಲ್ಲವಾಗುವುದು ॥೭೩॥

ಹೀಗೆ ಅವರವರ ಕರ್ಮಾನುಸಾರವಾಗಿ, ಪರಮೇಶ್ವರನು, ಪಂಚಭೂತಗಳಿಂದ, ಸ್ತ್ರೀಯೆಂದೂ ಪುರುಷನೆಂದೂ ಭೇದಮಾಡಿ ವಿಕಾರಗಳನ್ನು ಸೃಜಿಸಿರುವನು; ಇದರಂತೆಯೇ, ಇನ್ನೂ ನಾನಾವಿಧ ಭೇದಗಳನ್ನೂ ಏರ್ಪಡಿಸಿರುವನು ॥೭೪॥

ಹೀಗೆ ಸಮಸ್ತ ಶರೀರಗಳೂ ಸಮಾನವಾಗಿರುವಾಗ, ವರ್ಣಾಶ್ರಮ ಭೇದಗಳೂ-ಗೋತ್ರ ಸೂತ್ರ ಶಿಖಾ ಶಾಖಾ ನಾಮ ಮುಂತಾದುವುಗಳೂ ಕಲ್ಪಿಸಲ್ಪಟ್ಟಿರುವುವು ॥೭೫॥

ಈರೀತಿಯಾಗಿಯೇ, ಈ ಪುರುಷದೇಹದಲ್ಲಿ, ತಾಯಿ ಮಗಳು ಸೊಸೆ ಹೆಂಡತಿ ಸಹೋದರ ಅಳಿಯ ಸೋದರಮಾವ ತಂದೆ ಮಗ ಮಿತ್ರ ಮುಮ್ಮಗ ಭಾವ ಮೈದ-ಇತ್ಯಾದಿ ಭೇದಗಳೂ ಕಲ್ಪಿತವಾಗಿರುವುವು ॥೭೬॥

ಇವುಗಳೆಲ್ಲವೂ ಮಧ್ಯಕಾಲದಲ್ಲಿ ಪ್ರಾಪ್ತವಾಗಿರುವಕಾರಣ, ಇವುಗಳು ಕಲ್ಪಿತಗಳೆಂಬುದೇ ಸಿದ್ಧಾಂತವು. ಆದುದರಿಂದಲೇ, ಇವು ಆದ್ಯಂತಯುಕ್ತಗಳೆಂದೂ, ದೇಹದಂತೆ ಇವೂ ಅನಿತ್ಯಗಳೆಂದೂ ತಿಳಿಯಬೇಕು ॥೭೭॥

ಸ್ತ್ರೀಪುರುಷರಿಗೆ ದೇಹದಲ್ಲಿ ಹೇಗೆ ಭೇದದ್ಯೋತಕವಾದ ಚಿಹ್ನೆಯಿರುವುದೋ, ಹಾಗೆ ವರ್ಣ ಆಶ್ರಮ ಕುಲ ಗೋತ್ರ ಮುಂತಾದುವುಗಳಲ್ಲಿರುವುದಿಲ್ಲ. ಮತ್ತೇನೆಂದರೆ,- ಕಲ್ಪಿತವಾದ ಸಂಕೇತಗಳೆಂದಲೂ ವೇಷ ಮೊದಲಾದವುಗಳಿಂದಲೂ, ಭೇದವಿರುವಂತೆ ತೋರುವುದು; ಆ ಸಂಕೇತಾದಿಗಳು ತಪ್ಪಿದರೋ, ಈ ಭೇದಗಳೂ ತಪ್ಪಿಹೋಗಿಬಿಡುವುವು ॥೭೮॥

ಈ ವರ್ಣಾಶ್ರಮಾದಿಗಳಲ್ಲಿ ಎಷ್ಟೆಷ್ಟು ಹೆಚ್ಚಾಗಿ ಅಹಂಭಾವವೃದ್ಧಿಯಾಗುವುದೋ, ಅಷ್ಟಷ್ಟು ಹೆಚ್ಚಾಗಿ ಕರ್ಮಕಲಾಪವೂ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವುದು ॥೭೯॥

ಅಹಙ್ಕಾರಕ್ಷತಿರ್ಯಾವತ್ ತಾವತ್ತಾವತ್ ಕ್ರಿಯಾಕ್ಷತಿಃ ।
ಅತಃವಾಶ್ರಮಾದೌ ಸ್ಯಾತ್ ಕ್ರಿಯಾವೃದ್ಧಿಶ್ಚ ತತ್ಕ್ಷಯಃ ॥೮೦॥
ಸ್ವಲ್ಪಾಭಿಮಾನೇ ಸ್ವಲ್ಪಾನಿ ಕರ್ಮಾಣ್ಯಪಿ ತದೀಕ್ಷ್ಯತಾಮ್ ।
ಭಿಕ್ಷೌ ಚ ದತ್ತಕನ್ಯಾಯಾಂ ಮೃತಾಯಾಂ ತತ್ಕ್ಷಯೇಪಿ ಚ ॥೮೧॥
ನಷ್ಟೇಭಿಮಾನೇ ಸರ್ವತ್ರ ನ ವಿಧಿರ್ನ ನಿಷೇಧಧೀಃ ।
ತತ್ತ್ವಜ್ಞಾನಿನಿ ಬಾಲೇ ಚ ಭ್ರಾನ್ತೇ ಚೈತತ್ ಪರೀಕ್ಷ್ಯತಾಮ್ ॥೮೨॥
ಗತಾಭಿಮಾನೈರ್ಜಾತ್ಯಾದೌ ಕೃತೇ ಕರ್ಮಣಿ ತಸ್ಯ ನ ।
ಫಲಮಸ್ತ್ಯತ್ರ ದೃಷ್ಟಾನ್ತಾಃ ತತ್ತ್ವವಿದ್ಭ್ರಾನ್ತಬಾಲಕಾಃ ॥೮೩॥
ಬಾಲಸ್ಯೇದಾನಹಙ್ಕಾರಾಭಾವಾತ್ ಕಿಞ್ಚನ್ನ ವಿದ್ಯತೇ ।
ಸ್ವಲ್ಪಾಭಿಮಾನೇ ತಸ್ಯೈವ ಸಂಸ್ಕಾರೋಲ್ಪಕ್ರಿಯಾಃ ಸ್ಮೃತಾಃ ॥೮೪॥

ಈ ಅಹಂಕಾರಕ್ಕೆ ಎಷ್ಟೆಷ್ಟು ಮಟ್ಟಿಗೆ ಹಾನಿಯುಂಟಾಗುವುದೋ, ಅಷ್ಟಷ್ಟುಮಟ್ಟಿಗೆ ಕರ್ಮ ಕಲಾಪದಲ್ಲಿಯೂ ಹ್ರಾಸವುಂಟಾಗುವುದು. ಹೀಗಿರುವುದರಿಂದಲೇ, ವರ್ಣಾಶ್ರಮಾದಿಗಳಲ್ಲಿ ಕರ್ಮ ವೃದ್ಧಿಯೂ ಕರ್ಮಹ್ರಾಸವೂ ಅಧೀನಗಳಾಗಿರುವುವೆಂದು ಸ್ಪಷ್ಟಪಡುವುದು ॥೮೦॥

ಅಭಿಮಾನವು ಸ್ವಲ್ಪವಾದಾಗ, ಕರ್ಮಗಳೂ ಸ್ವಲ್ಪವಾಗುವುವು. ಇದನ್ನು, ಸನ್ಯಾಸಿಯಲ್ಲಿಯೂ–ದಾನಮಾಡಲ್ಪಟ್ಟ ಕನ್ಯಕೆಯು ಸತ್ತಾಗಲೂ–ಅವಳ ವಂಶದಲ್ಲಿಯೂ ನೋಡಬಹುದು. (ಎಂದರೆ,-ಸನ್ಯಾಸಿಯು ಎಲ್ಲವನ್ನೂ ಬಿಟ್ಟುಬಿಟ್ಟು ಅಭಿಮಾನಶೂನ್ಯನಾಗಿರುವುದರಿಂದ, ಅವನಿಗೆ ವೂರ್ವಾಶ್ರಮದಲ್ಲಿದ್ದಷ್ಟು ಕರ್ಮಗಳು-ಸನ್ಯಾಸಾಶ್ರಮದಲ್ಲಿರುವುದಿಲ್ಲ ಕನ್ಯಕೆಯನ್ನು ಮತ್ತೊಬ್ಬನಿಗೆ ದಾನಮಾಡುವುದಕ್ಕೆ ಮೊದಲು ಅವಳು ಸತ್ತರೆ, ಅವಳಲ್ಲಿ ಮಮಕಾರ ಹೆಚ್ಚಾಗಿರುವುದರಿಂದ, ಆಗ ಕರ್ಮವೂ ಹೆಚ್ಚಾಗಿ ಮಾಡಲ್ಪಡಬೇಕಾಗುವುದು ; ಅವಳನ್ನು ಮತ್ತೊಬ್ಬರಿಗೆ ದಾನ ಮಾಡಿಬಿಟ್ಟಮೇಲೆ, ಅವಳಲ್ಲಿ ಮಮಕಾರ ಕಡಮೆಯಾಗುವಕಾರಣ, ಆಗ ಅವಳಿಗಾಗಿ ಮಾಡಬೇಕಾದ ಕರ್ಮವೊಂದೂ ಜನಕನಿಗಿರುವುದಿಲ್ಲ. ಹೀಗೆಯೇ, ಅವಳನ್ನು ಪರಿಗ್ರಹಿಸಿದವನಿಗೆ, ಪರಿಗ್ರಹಕ್ಕೆ ಮೊದಲು ಮಮಕಾರವಿಲ್ಲದಿರುವುದರಿಂದ, ಅವಳು ಸತ್ತರೆ ಯಾವ ಕರ್ಮವೂ ಮಾಡಬೇಕಾದುದಿಲ್ಲ; ಪರಿಗ್ರಹಾನಂತರ ಅವಳು ಸತ್ತರೋ, ಆಗ ಮಮಕಾರವಾಪ್ತವಾಗುವುದರಿಂದ, ಅವಳಿಗೆ ಪರಿಗ್ರಹೀತೃವೂ–ಅವನು ಹೋದಮೇಲೆ ಅವನ ವಂಶದವರೂ ವಿಶೇಷವಾಗಿ ಕರ್ಮಗಳನ್ನು ಮಾಡಿಯೇ ತೀರಬೇಕಾಗುವುದು) ॥೮೧॥

ಹೀಗಿರುವುದರಿಂದ, ಅಭಿಮಾನವು ನಷ್ಟವಾದಮೇಲೆ, ವಿಧಿಯೂ ಇಲ್ಲ; ನಿಷೇಧವೂ ಇಲ್ಲ. ತತ್ತ್ವಜ್ಞಾನಿಯಲ್ಲಿಯೂ, ಬಾಲಕನಲ್ಲಿಯೂ, ಬುದ್ಧಿಭ್ರಮೆಯುಂಟಾಗಿರತಕ್ಕವನಲ್ಲಿಯೂ, ಇದನ್ನು ಪರೀಕ್ಷಿಸಬಹುದು ॥೮೨॥

ವರ್ಣಾಶ್ರಮಾದಿಗಳಲ್ಲಿ ಅಭಿಮಾನಶೂನ್ಯರಾದವರಿಂದ ಕರ್ಮಮಾಡಲ್ಪಟ್ಟರೂ, ಅವರಿಗೆ ಆದರ ಫಲಸಂಬಂಧವಿರುವುದಿಲ್ಲ. ಈ ವಿಷಯದಲ್ಲಿ, ತತ್ತ್ವಜ್ಞನೂ ಬುದ್ಧಿಭ್ರಮೆಯುಳ್ಳವನೂ ಬಾಲಕನೂ ದೃಷ್ಟಾಂತವಾಗಿರುವರು ॥೮೩॥

ಬಾಲಕನಿಗೆ, ಆದಿಯಲ್ಲಿ ಅಹಂಕಾರವಿಲ್ಲದಿರುವುದರಿಂದ, ಯಾವುದೊಂದು ಕಾರ್ಯವೂ ಇರುವುದಿಲ್ಲ; ಅವನಿಗೆಯೇ, ಸ್ವಲ್ಪ ಅಭಿಮಾನಹುಟ್ಟಲಾಗಿ, ಸಂಸಾರವೂ ಸ್ವಲ್ಪ ಕರ್ಮಗಳೂ ವಿಹಿತವಾಗುವುವು ॥೮೪॥

ಕಾಲಪರಿಪಾಕೇನ ತಸ್ಯೈವಾಭಿಮಾನೇ ಸರ್ವತೋ ದೃಢೇ ।
ವಿಧೀಯನ್ತೇ ಕ್ರಿಯಾಬಹ್ವ್ಯೋ ಗೃಹವಿತ್ತಾದಯಃ ಖಲು ॥೪೫॥

ತತಸ್ತಸ್ಯೈವ ಸತ್ಸಙ್ಗಾತ್ ಶಾಸ್ತ್ರಜ್ಞಾನಾಚ್ಚ ಮದುಪಾಸನಾತ್ ।
ಕಿಞ್ಚಿತ್ ಕ್ಷೀಣಾಭಿಮಾನಸ್ಯ ವನಂ ಚಾಲ್ಪಕ್ರಿಯಾಃ ಸ್ಮೃತಾಃ ॥೪೬॥

ಮತ್ಪ್ರಸಾದೇನ ತಸ್ಯೈವ ಕ್ಷೀಣಸ್ನೇಹಸ್ಯ ಸರ್ವತಃ ।
ಜಾತಿಲಕ್ಷಣಹೀನೋಽಥ ನ್ಯಾಸಃ ಶಾಸ್ತ್ರೈರ್ವಿಧೀಯತೇ ॥೪೭॥

ನಾಶ್ರಮೋ ಜಾತಿಹೀನತ್ವಾತ್ ಪರಹಂಸಸ್ಯ ಸಮ್ಮತಮ್ ।
ಕಿಂ ತು ವರ್ಣಾಶ್ರಮಾತೀತಾಃ ತದನ್ಯೇ ನ್ಯಾಸಿನಃ ಸ್ಮೃತಾಃ ॥೪೮॥

ಶಾಸ್ತ್ರಾರ್ಥಸ್ಯ ಸಮಾಪ್ತತ್ವಾತ್ ಸನ್ನ್ಯಾಸೇ ಸರ್ವಕರ್ಮಣಾಮ್ ।
ತಸ್ಮಾನ್ನ್ಯಾಸಇತಿ ಶ್ರುತ್ಯಾ ನ್ಯಾಸಃ ಸರ್ವಾಧಿಕಃ ಸ್ಮೃತಃ ॥೪೯॥

ಶ್ರೌತೈರ್ಯೈಃ ಕರ್ಮನಿರತೈರಪ್ಯಬ್ಧ್ಯಾಃ ಪರಹಂಸಕಃ ।
ಶಾಸ್ತ್ರಸ್ಯೇತಿ ಬ್ರುವಾಣಸ್ಯ ತಾತ್ಪರ್ಯಂ ನಾಸ್ತಿ ಕರ್ಮಸು ॥೫೦॥

ಕಾಲಪರಿಪಾಕದಿಂದ ಅವನಿಗೆ ಸರ್ವತ್ರ ಅಭಿಮಾನ ದೃಢವಾಗಲಾಗಿ, ಅಧಿಕವಾದ ಕ್ರಿಯೆಗಳೂ ಗೃಹ ಧನಾದಿಗಳೂ ವಿಧಿಸಲ್ಪಡುವುವಲ್ಲವೆ! ॥೪೫॥

ಆ ಬಳಿಕ, ಅವನಿಗೇ, ಸತ್ಸಹವಾಸದಿಂದಲೂ ಶಾಸ್ತ್ರಜ್ಞಾನದಿಂದಲೂ ನನ್ನ ಉಪಾಸನೆಯಿಂದಲೂ ಸ್ವಲ್ಪ ಅಭಿಮಾನಕ್ಷಯವಾಗಲಾಗಿ, ವಾನಪ್ರಸ್ಥಾಶ್ರಮವೂ ಕರ್ಮಹ್ರಾಸವೂ ವಿಹಿತವಾಗಿರುವುವು ॥೪೬॥

ಅನಂತರ, ನನ್ನ ಅನುಗ್ರಹದಿಂದ ಅವನೇ ಸರ್ವತ್ರ ಸ್ನೇಹಶೂನ್ಯನಾದರೆ, ಸುತರಾಂ ವರ್ಣಲಕ್ಷಣವೇ ಇಲ್ಲದಿರುವ ಸನ್ಯಾಸಾಶ್ರಮವು ಶಾಸ್ತ್ರಗಳಲ್ಲಿ ವಿಧಿಸಲ್ಪಡುವುದು ॥೪೭॥

ಪರಮಹಂಸನಾದವನಿಗೆ, ಜಾತಿಯೇ ಇಲ್ಲದಿರುವುದರಿಂದ, ಯಾವ ಆಶ್ರಮವೂ ಇಲ್ಲವೆಂಬುದೇ ಯುಕ್ತವಾಮದು. ಆದರೆ, ವರ್ಣಾಶ್ರಮಾತೀತವಾದ ಇತರ ಕರ್ಮಗಳು(ಸವಾಧಿಮೊದಲಾದುವು), ಸನ್ಯಾಸಿಗೆ ವಿಧಿಸಲ್ಪಟ್ಟಿರುವುವು ॥೪೮॥

ಸರ್ವಕರ್ಮಗಳನ್ನೂ ಸನ್ಯಾಸವಾಡಿದಾಗ ಶಾಸ್ತ್ರಧರ್ಮಗಳೆಲ್ಲವೂ ಅಲ್ಲಿಗೆ ಮುಗಿದುಹೋಗುವ ಕಾರಣ,– 'ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ' (ಆದುದರಿಂದ, ಪೂರ್ವೋಕ್ತವಾದ ಸತ್ಯ ತಪಸ್ಸು ದಮ ಶಮ ಮುಂತಾದುವುಗಳಿಗಿಂತ ತಪಸ್ಸೇ ಅಧಿಕವೆಂದು ಪೂಜ್ಯರು ಹೇಳಿರುವರು) ಎಂದು ತೈತ್ತಿರೀಯಶ್ರುತಿಯು ಸಾರುವುದರಿಂದ, ಸನ್ಯಾಸವೇ ಸರ್ವಶ್ರೇಷ್ಠವೆಂದು ಉಕ್ತವಾಗಿರುವುದು ॥೪೯॥

'ಶ್ರೌತೈರ್ಯರಾದ ಕರ್ಮಠರಿಂದಲೂಕೂಡ ಪರಮಹಂಸನು ಪೂಜಿಸಲ್ಪಡಬೇಕು' ಎಂದು ಶಾಸ್ತ್ರವು ಹೇಳುತಿರುವುದರಿಂದ, ಶಾಸ್ತ್ರಗಳಿಗೆ ಕರ್ಮದಲ್ಲಿ ತಾತ್ಪರ್ಯವಿಲ್ಲವೆಂಬುದು ಸ್ಪಷ್ಟವಾಗುವುದು ॥೫೦॥

ಕಾನಿಚಿಜ್ಜಾತಿಭೇದೇನ ಶಾಸ್ತ್ರೋಕ್ತಾಖಿಲಕರ್ಮಣಾಮ್ ।
ನಿಷಿದ್ಧೋಕ್ತಾನಿ ಕಾನ್ಯೇವ ವಿಪ್ರಾದೀನಾಂ ಯಥಾಯಥಮ್ ॥೯೧॥
ತತ್ರಾಪ್ಯಾಶ್ರಮಭೇದೇನ ಕ್ರಿಯಾಃ ಕಾಶ್ಚಿನ್ನಿಷೇಧಿತಾಃ ।
ಕಾಶ್ಚಿತ್ ಕಾಶ್ಚಿತ್ ಕ್ರಿಯಾಪಿವ ಗೃಹಸ್ಥಾದೇರುದಾಹೃತಾಃ ॥೯೨॥
ಏವಂ ಜಾತ್ಯಾದಿಭೇದೇನ ಸ್ವಲ್ಪೇಷ್ವಪ್ಯಬ್ಲ ಕರ್ಮಸು ।
ದೇಶಕಾಲವಯೋಭೇದೈಃ ಲೋಪೋಪ್ಯಬ್ಲೀಕೃತಃ ಖಲು ॥೯೩॥
ಕ್ವಚಿದ್ಗುಣೋಪಿ ದೋಷಾಯ ದೋಷೋಪಿ ಸ್ಯಾತ್ ಕ್ವಚಿದ್ಗುಣಃ ।
ಗುಣದೋಷಾವವ್ಯವಸ್ಥಾ ಅಪ್ಯೇವಂ ಶಾಸ್ತ್ರಚೋದಿತಾ ॥೯೪॥
ತತ್ತದ್ವಾಗಾನುಸಾರೇಣ ಫಲಾನ್ಯುಕ್ತ್ವಾ ತದಾಪ್ತಯೇ ।
ಕರ್ಮನಿಷ್ಠಸ್ಯಾಥ ಶಾಸ್ತ್ರಂ ಶನೈರ್ವೈರಾಗ್ಯಬೋಧಕಮ್ ॥೯೫॥
ತಸ್ಮಾಚ್ಛಾಸ್ತ್ರಸ್ಯ ತಾತ್ಪರ್ಯಂ ನ ಕರ್ಮಸ್ವಿತಿ ನಿಶ್ಚಿನು ।

ಶಾಸ್ತ್ರೋಕ್ತವಾದ ಸಮಸ್ತ ಕರ್ಮಗಳ ಮಧ್ಯದಲ್ಲಿ, ಬ್ರಾಹ್ಮಣಾದಿಗಳಿಗೆ ಅಯಾ ಜಾತಿ ಭೇದಗಳನ್ನನುಸರಿಸಿ ಕೆಲವು ಕರ್ಮಗಳು ನಿಷೇಧಿಸಲ್ಪಟ್ಟಿರುವುವು ॥೯೧॥

ಅವುಗಳಲ್ಲಿಯೂ ಕೆಲವು ಕರ್ಮಗಳು, ಅಯಾ ಆಶ್ರಮಭೇದಾನುಗುಣವಾಗಿ ನಿಷೇಧಿಸಲ್ಪಟ್ಟಿರುವುವು. ಅಂತು, ಗೃಹಸ್ಥಾಶ್ರಮದವರಿಗೆ, ಕೊನೆಗೆ ಕೆಲ ಕೆಲವು ಕರ್ಮಗಳು ಮಾತ್ರವೇ ವಿಹಿತವಾಗಿರುವಂತೆ ನಿರ್ಧರವಾಗುವುದು ॥೯೨॥

ಆಯುಷ್ಮಾ! ಸುಮಂತ್ರ! ಹೀಗೆ ಜಾತ್ಯಾದಿಭೇದದಿಂದ ಹ್ರಸ್ವವಾಗಿರುವ ಕರ್ಮಗಳಲ್ಲಿಯೂ, ದೇಶ ಕಾಲ ವಯಸ್ಸುಗಳ ವ್ಯತ್ಯಾಸದಿಂದ ಕೆಲವು ಸಮಯದಲ್ಲಿ ಲೋಪವೂ ಅಂಗೀಕೃತವಾಗಿರುವುದಲ್ಲವೆ! ॥೯೩॥

'ಈ ಕರ್ಮಲೋಪದಿಂದ ದೋಷಸಂಭವಿಸುವುದಿಲ್ಲವೆ?' ಎಂದು ಕೇಳಿದರೆ,--ಅಯಾ ಸಂದರ್ಭಗಳಿಗನುಸಾರವಾಗಿ, ಕೆಲವುವೇಳೆ ಗುಣವೂ ದೋಷವಾಗುವುದು; ಮತ್ತೆ ಕೆಲವುವೇಳೆ ದೋಷವೂ ಗುಣವಾಗುವುದು. ಈರೀತಿಯಾಗಿ, ಗುಣದೋಷಗಳು ಅವ್ಯವಸ್ಥಾಸ್ಥಿತಿಯುಳ್ಳಿರುವುವೆಂದು ಶಾಸ್ತ್ರದಿಂದಲೇ ಗೊತ್ತಾಗುವುದು ॥೯೪॥

ಶಾಸ್ತ್ರವು ಪ್ರಥಮತಃ ಅಯಾ ಪುರುಷರ ಕಾಮನೆಗನುಗುಣವಾಗಿ ಫಲಗಳನ್ನು ಹೇಳಿ, ಅನಂತರ, ಅಯಾ ಫಲಗಳ ಪ್ರಾಪ್ತಿಗೋಸ್ಕರ ಕರ್ಮನಿಷ್ಠನಾದವನಿಗೆ, ಮೆಲ್ಲಗೆ ವೈರಾಗ್ಯವನ್ನು ಬೋಧಿಸುವುದು ॥೯೫॥

ಹೀಗಿರುವುದರಿಂದ, ಶಾಸ್ತ್ರಗಳಿಗೆ ಕರ್ಮದಲ್ಲಿ ತಾತ್ಪರ್ಯವಿಲ್ಲವೆಂದು ನಿಶ್ಚಯಿಸುವನಾಗು. ಮತ್ತೇನೆಂದರೆ,—ಪುರುಷರಿಗೆ ಸ್ವೇಚ್ಛಾಪ್ರವೃತ್ತಿಯುಂಟಾಗದಂತೆ ನಿಯಮವಾಡುವುದಕ್ಕಾಗಿಯೇ ಕರ್ಮವು ವಿಧಿಸಲ್ಪಟ್ಟಿರುವುದೆಂದು ತಿಳಿಯುವನಾಗು. (ಎಂದರೆ,-ಪುರುಷನು, ಸರ್ವದಾ ಯಾವುದಾದರೊಂದುವಿಧವಾದ ಕರ್ಮವನ್ನು ಮಾಡುತಲೇ ಇರುವನಲ್ಲದೆ, ನಿಷ್ಕರ್ಮನಾಗಿರುವುದಕ್ಕಾಗಲಾರದು. ಹೀಗಿರುವುದರಿಂದ, ಒಂದು ನಿಯಮವಿಲ್ಲದಿದ್ದರೆ, ಅವನು ದುಷ್ಕರ್ಮಕ್ಕೆ ಪ್ರವೇಶಿಸಬಹುದು. ಅದುಕಾರಣ, ಪುರುಷನಿಗೆ ದುಷ್ಕರ್ಮದಲ್ಲಿ ಪ್ರವೃತ್ತಿಯುಂಟಾಗದಿರಲೆಂಬು,

ಕಿಂ ತು ಕರ್ಮ ನೈಷಾಂ ಸ್ವೇಚ್ಛಾ ಪ್ರವೃತ್ತಿ ನಿಯಮಾಯ ಹಿ ॥೯೬॥
ಸಮಸ್ತ ವಿಷಯಾಸಕ್ತಗಾತ್ರಾಣಾಂ ನ ಕದಾಚನ ।
ನಿವೃತ್ತಿರಿತಿ ಶಾಸ್ತ್ರೇಣ ಗುಣದೋಷೌ ಚ ಕೀರ್ತಿತೌ ॥೯೭॥
ಶುದ್ಧ್ಯಶುದ್ಧಿಕರಂ ಶಾಸ್ತ್ರಂ ಇತಿ ದೇಹಾತ್ಮವಾನಿನಾಮ್ ।
ದೇಹಾಶುಚಿತ್ವಮೇವಾದ್ಧಾ ತಾತ್ಪರ್ಯಾದ್ದೊ ೞಧಿಯುತ್ಯಲಮ್ ॥೯೮॥
ಕಿಂ ಶುದ್ಧಂ ಕಿಮಶುದ್ಧಂ ವಾ ಪ್ರಪಞ್ಚೇ ಪಾಞ್ಚಭೌತಿಕೇ ।
ಕೌ ವಾ ಗುಣಾಗುಣೌ ವೀರ ವಿನಾ ಪ್ರತ್ಯಕ್ಷಬಾಧಕಮ್ ॥೯೯॥
ಮಲಮೂತ್ರವಸಾಮಾಂಸರಕ್ತಪಿತ್ತಾದಿದೂಷಿತಃ ।
ದೇಹಃ ಶುಧ್ಯತಿ ಗಙ್ಗಾದ್ಯೈಃ ತೀರ್ಥೈರ್ವಾ ಕರ್ಮಭಿಃ ಕಥಮ್ ॥೧೦೦॥
ಸ್ವದೇಹಾಶುಚಿಧಾತೂನಿ ಸಾಕ್ಷಾತ್ ಪಶ್ಯನ್ನಪೀಹ ಯಃ ।
ನ ವಿರಜ್ಯತಿ ಚೇದ್ದೇಹೇ ಶಾಸ್ತ್ರಂ ಕಿಂ ತಸ್ಯ ಬೋಧಯೇತ್ ॥೧೦೧॥
ಯಥಾ ರೋಗಾದ್ವಿಮುಕ್ತಸ್ಯ ನ ಪಥ್ಯೌಷಧಸಂಯಮಃ ।
ಏವಂ ಮೋಹಾದ್ವಿಮುಕ್ತಸ್ಯ ನಿಯಮಾಶ್ಚ ನ ಚ ಕ್ರಿಯಾಃ ॥೧೦೨॥

ಶಾಸ್ತ್ರಗಳು ಸತ್ಕರ್ಮಗಳನ್ನು ವಿಧಿಸಿರುವುವೇ ಹೊರತು, ಕರ್ಮಗಳನ್ನು ಮಾಡಿಯೇತೀರಬೇಕೆಂದೂ, ಅನ್ಯಥಾ ಮೋಕ್ಷಕ್ಕೆ ಮಾರ್ಗವೇ ಇಲ್ಲವೆಂದೂ ತಿಳಿಯಬಾರದೆಂದು ತಾತ್ಪರ್ಯವು ॥೯೬॥

ಸರ್ವದಾ ಸಕಲ ವಿಷಯಗಳಲ್ಲಿಯೂ ಇಂದ್ರಿಯಗಳು ಆಸಕ್ತವಾಗಿರುವವರಿಗೆ, ಎಂದಿಗೂ ಅವುಗಳಿಂದ ನಿವೃತ್ತಿಯುಂಟಾಗುವುದೇ ಇಲ್ಲ. ಇದರಿಂದಲೇ, ಶಾಸ್ತ್ರಗಳು ಆಯಾ ವಿಷಯಗಳಲ್ಲಿರುವ ಗುಣದೋಷಗಳನ್ನು ಸ್ಪಷ್ಟವಾಗಿ ವಿವರಿಸಿರುವುವು ॥೯೭॥

ಹೀಗೆ ಶುದ್ಧಿಯನ್ನೂ ಅಶುದ್ಧಿಯನ್ನೂ ತೋರಿಸುತಿರುವ ಶಾಸ್ತ್ರವು, ದೇಹಾತ್ಮಾಭಿಮಾನಿಗಳಿಗೆ (ದೇಹವನ್ನೇ ಆತ್ಮವೆಂದು ತಿಳಿದುಕೊಂಡಿರತಕ್ಕವರಿಗೆ), ದೇಹದಲ್ಲಿರುವ ಅಶುಚಿತ್ವವನ್ನೇ ಮುಖ್ಯ ತಾತ್ಪರ್ಯದಿಂದ ವಿಶೇಷವಾಗಿ ಬೋಧಿಸುತ್ತಿರುವುದು; ಇದೇ ನಿಶ್ಚಿತವು ॥೯೮॥

ಎಲೈ ಮಹಾವೀರನೆ! ಪಂಚಭೂತಮಯವಾದ ಈ ಪ್ರಪಂಚದೊಳಗೆ, ಪ್ರತ್ಯಕ್ಷವಾಗಿರುವ ದೋಷಗಳೇ ಬಾಧಕವಾಗಿ ತೋರದಿದ್ದರೆ, ಅಮೇಲೆ ಶುದ್ಧವಾವುದು?-ಅಶುದ್ಧವಾವುದು? ಗುಣವಾವುದು?-ದೋಷವಾವುದು? ॥೯೯॥

ಮಲ ಮೂತ್ರ ವಸಾ(ಕೊಬ್ಬು) ಮಾಂಸ ರಕ್ತ ಪಿತ್ತ ಮುಂತಾದುವುಗಳಿಂದ ದೂಷಿತವಾಗಿರುವ ಈ ದೇಹವು, ಗಂಗೆ ಮೊದಲಾದ ತೀರ್ಥಗಳಿಂದಲಾಗಲಿ-ಯಜ್ಞಾದಿಕರ್ಮಗಳಿಂದಾಗಲಿ-ಹೇಗೆ ಶುದ್ಧವಾಗುವುದು? ॥೧೦೦॥

ತನ್ನ ದೇಹದೊಳಗಿರುವ ಅಶುಚಿಯಾದ ರಕ್ತಮಜ್ಜಾದಿ ಧಾತುಗಳನ್ನು ಸಾಕ್ಷಾತ್ತಾಗಿ ನೋಡುತಿದ್ದರೂ, ಯಾವನು ಇಂತಹ ದೇಹದೊಳಗೆ ವಿರಕ್ತನಾಗುವುದಿಲ್ಲವೋ, ಅಂಥವನಿಗೆ ಶಾಸ್ತ್ರವು ಏನನ್ನು ತಾನೆ ಬೋಧಿಸಬಲ್ಲುದು? ॥೧೦೧॥

ರೋಗದಿಂದ ಬಿಡುಗಡೆಹೊಂದಿದವನಿಗೆ ಪಥ್ಯ ಔಷಧಗಳ ನಿಯಮವಾವುದೂ ಹೇಗೆ ಬೇಕಾಗಿರುವುದಿಲ್ಲವೋ, ಹಾಗೆ ಮೋಹದಿಂದ ಬಿಡುಗಡೆ ಹೊಂದಿದವನಿಗೆ-ಯಾವ ನಿಯಮವೂ ಯಾವ ಕರ್ಮವೂ ಬೇಕಾಗಿರುವುದಿಲ್ಲ ॥೧೦೨॥

ದೇಹಾಭಿಮಾನೇ ಗಳಿತೇ ವಿಜ್ಞಾತೇ ಮಯಿ ಮಾನದ ।
ಕ್ರಿಯಾಶ್ಚ ಸಂಶಯಾಃ ಸರ್ವೇ ನಶ್ಯನ್ತ್ಯೇವ ನ ಸಂಶಯಃ ॥೧೦೩॥
ತದೂರ್ಧ್ವಂ ಸಞ್ಚಿತಾಗಾಮಿಪ್ರಾರಬ್ಧಾನಾಂ ಯಥಾತಥಮ್ ।
ನಾಶೇನಾಲೇಪತೋ ಭೋಗೈಃ ನಾಶಃ ಸ್ಯಾತ್ ಸೂತ ಕರ್ಮಣಾಮ್ ॥೧೦೪॥
ತಸ್ಮಾಚ್ಚರೀರಜಾತ್ಯಾದೌ ಅಭಿಮಾನವತಾಂ ನೃಣಾಮ್ ।
ಶಾಸ್ತ್ರೇಣೋಕ್ತಂ ಕರ್ಮಜಾಲಂ ನಾನ್ಯಸ್ಯೇತಿ ವಿನಿಶ್ಚಿನು ॥೧೦೫॥
ಯದಾ ಜಾತ್ಯಾಶ್ರಮಾದೌ ತೇ ಬುದ್ಧೇರ್ಲೇಪೋ ಗತಸ್ತದಾ ।
ಬುಭುತ್ಸಾ ಶಾಮ್ಯತಿ ಕ್ಷಿಪ್ರಂ ತದಾ ಶಾಸ್ತ್ರಮ ಸರ್ವತಃ ॥೧೦೬॥
ತಸ್ಮಾದ್ದೇಹಾತ್ಮವಾದಾಪ್ತನಿಷೇಧವಿಧಿಗೋಚರಾ ।
ಸರ್ವಧರ್ಮಾ ಪರಿತ್ಯಜ್ಯ ಮದ್ಭಕ್ತಃ ಸುಖಮೇಷ್ಯತಿ ॥೧೦೭॥
ಸುಮನ್ತ್ರ ಯದಿ ತೇ ಬುದ್ಧಿಃ ಸುದೃಢಾ ಗುಣದೋಷಯೋಃ ।
ದೋಷರೂಪಂ ತಹಿ ದೇಹಭಾವಂ ತ್ಯಕ್ತ್ವಾ ವೃಥಾಗತಮ್ ॥೧೦೮॥
ಸಮಂ ಸರ್ವೇಷು ಭೂತೇಷು ಮಾಮೇಕಂ ಚೇತನಂ ಗುಣಮ್ ।
ಸ್ಥಿತಂ ಜ್ಞಾತ್ವಾನನ್ಯಭಕ್ತ್ಯಾ ಭಜೇಶಂ ಭಾವಗೋಚರಮ್ ॥೧೦೯॥

ಆಯ್ಯಾ! ಸುಮಂತ್ರ! ಪುರುಷನಿಗೆ ದೇಹಾಭಿಮಾನವು ಗಳಿತವಾಗಿ-ನನ್ನ ಸ್ವರೂಪವು ತಿಳಿದಬಳಿಕ, ಸಮಸ್ತ ಕರ್ಮಗಳೂ ಸಕಲ ಸಂಶಯಗಳೂ ನಾಶಹೊಂದಿಯೇ ಬಿಡುವುವು; ಇದರಲ್ಲಿ ಸಂಶಯವಿಲ್ಲ ॥೧೦೩॥

ಆಮೇಲೆ, ಸಂಚಿತ ಆಗಾಮಿ ಪ್ರಾರಬ್ಧಗಳೆಂಬ ಕರ್ಮಗಳೆಲ್ಲವೂ ನಾಶಹೊಂದಿಬಿಡುವುದರಿಂದ, ವಿಷಯಭೋಗಲೇಪವು ತಪ್ಪಿಹೋಗಿರುವಕಾರಣ, ಕರ್ಮಗಳಿಗೆ ಸ್ವತಏವ ನಾಶವು ಸಿದ ವಾಗಿರುವುದು ॥೧೦೪॥

ಹೀಗಿರುವುದರಿಂದ, ಆಯ್ಯಾ! ಸೂತ! ಶರೀರ ಜಾತಿ ಕುಲ ಮುಂತಾದುವುಗಳಲ್ಲಿ ಅಭಿಮಾನವುಳ್ಳ ಪುರುಷರಿಗೇ ಶಾಸ್ತ್ರಗಳು ಕರ್ಮಜಾಲವನ್ನು ವಿಧಿಸಿರುವುವೆಂದೂ-ಇತರರಿಗಲ್ಲವೆಂದೂ ನಿಶ್ಚಯಿಸುವನಾಗು ॥೧೦೫॥

ಯಾವಾಗ ನಿನಗೆ ಜಾತಿ ಆಶ್ರಮ ಮುಂತಾದುವುಗಳಲ್ಲಿ ಬುದ್ಧಿಯ ಲೇಪವು ಹೋಗಿಬಿಡುವುದೋ, ಆಗ ಬಲು ಬೇಗನೆ ಶಾಸ್ತ್ರಗಳಲ್ಲಿ ಜಿಜ್ಞಾಸೆಯು ಸರ್ವವಿಧವಾಗಿಯೂ ಶಾಂತವಾಗುವುದು ॥೧೦೬॥

ಆದುಕಾರಣ, ದೇಹಾತ್ಮವಾದದಿಂದ ಪ್ರಾಪ್ತವಾಗಿರುವ ವಿಧಿನಿಷೇಧಗಳಿಗೆ ವಿಷಯಗಳಾದ ಸಕಲ ಧರ್ಮಗಳನ್ನೂ ಪರಿತ್ಯಜಿಸಿ ನನ್ನಲ್ಲಿ ಭಕ್ತನಾದವನು, ಶಾಶ್ವತವಾದ ಮೋಕ್ಷಸುಖವನ್ನು ಪಡೆಯುವನು ॥೧೦೭॥

ಆಯ್ಯಾ! ಸುಮಂತ್ರ! ನಿನ್ನ ಬುದ್ಧಿಯು ಗುಣದೋಷಗಳಲ್ಲಿ ಚೆನ್ನಾಗಿ ದಾರ್ಢ್ಯವನ್ನು ಹೊಂದಿದ್ದಪಕ್ಷದಲ್ಲಿ, ದೋಷರೂಪವಾದ ಅಸತ್ಯವಾಗಿರುವ ದೇಹಾತ್ಮಭಾವನೆಯನ್ನು ಬಿಟ್ಟುಬಿಟ್ಟು, ಸರ್ವಭೂತಗಳಲ್ಲಿಯೂ ಸಮನಾಗಿ ನೆಲೆಸಿರುವ-ಅದ್ವಿತೀಯನಾದ-ಚೈತನ್ಯಾಕಾರನಾದ-ಗುಣಸ್ವರೂಪನಾದ ನನ್ನನ್ನು ತಿಳಿದುಕೊಂಡು, ನಿನ್ನ ಭಾವನೆಯಲ್ಲಿ ಪ್ರತ್ಯಕ್ಷನಾಗುವ ಪರಮಾತ್ಮನನ್ನು ಅನನ್ಯವಾದ ಭಕ್ತಿಯಿಂದ ಭಜಿಸುವನಾಗು ॥೧೦೮-೧೦೯॥

ಏವಂ ತ್ವಂ ಮದವಸ್ಥಾನಕಾಲಮಾತ್ರಂ ಕ್ಷಿತೌ ಸ್ಥಿತಃ ।
ತತೋ ಮತ್ಪದಮಾಸಾದ್ಯ ಮತ್ಸಾಯುಜ್ಯಮವಾಪ್ಸ್ಯಸಿ ॥೧೧೦॥
ತಸ್ಮಾದೇತರ್ಹಿ ಗತ್ವಾಶು ಪುರಂ ಮೇ ಮಾತರಂ ನೃಪಮ್ ।
ದುಃಖಾನ್ಮೋಚಯ ಮದ್ವಾಕ್ಯೈಃ ಉಪದಿಷ್ಟೈಸ್ತವಾಧುನಾ ॥೧೧೧॥

ಶ್ರೀ ಶಿವಉವಾಚ.

ಏವಂ ಸಮೋದಿತಃ ಸೂತೋ ರಾಮೇಣಾಥ ಕೃತಾಞ್ಜಲಿಃ ।
ರುದನ್ ಪಾಹೀತ್ಯಶ್ರುಪೂರ್ಣಃ ಪಾದಯೋರ್ನ್ಯಪತದ್ಧರೇಃ ॥೧೧೨॥
ತಂ ಸಮುತ್ಥಾಪ್ಯ ರಾಮೋಪಿ ಸ್ವಭಕ್ತಂ ತ್ಯಕ್ತುಮಕ್ಷಮಃ ।
ಬಹುಧಾ ಸಾನ್ತ್ವವಾಕ್ಯೈಸ್ತಂ ಪ್ರೇಷಯಾಮಾಸ ಸಾರಥಿಮ್ ॥೧೧೩॥

ಇತಿ ಶ್ರೀಮದಯೋಧ್ಯಾಕಾಣ್ಡೇ ಸುಮನ್ತ್ರಂ ಪ್ರತಿ ರಾಮೇಣ
ವೈರಾಗ್ಯತತ್ವಕಥನಂ ನಾಮ ದ್ವಾದಶಃ ಸರ್ಗಃ.



ಹೀಗೆ ಮಾಡುವೆಯಾದರೆ, ಈ ದೇಹದಲ್ಲಿ ನಾನಿರುವಷ್ಟುಕಾಲಮಾತ್ರವೇ ನೀನೂ ಈ ಭೂಮಿಯಲ್ಲಿದ್ದುಗೊಂಡು, ಅನಂತರ ನನ್ನ ಲೋಕವನ್ನು ಹೊಂದಿ, ಕ್ರಮವಾಗಿ ನನ್ನಲ್ಲಿ ಸಾಯುಜ್ಯವನ್ನು ಪಡೆಯುವೆ ॥೧೧೦॥

ಆದುದರಿಂದ, ಅಯ್ಯಾ! ಸೂತ! ಈಗ ನೀನು ಬೇಗನೆ ಅಯೋಧ್ಯಾಪಟ್ಟಣಕ್ಕೆ ಹೋಗಿ, ನಾನು ಈಗ ನಿನಗೆ ಉಪದೇಶಿಸಿರುವ ತತ್ವವಾಕ್ಯಗಳಿಂದ, ನನ್ನ ತಾಯಿಯನ್ನೂ ಮಹಾರಾಜ ದಶರಥನನ್ನೂ ದುಃಖದಿಂದ ಬಿಡುಗಡೆ ಮಾಡಿಸುವನಾಗು ॥೧೧೧॥

ಶ್ರೀ ಪರಮೇಶ್ವರನು ವಾರ್ತೆಯನ್ನು ಕುರಿತು ಹೇಳುವನು:—

ಎಲೌ ವಾರ್ತೆ! ಈರೀತಿಯಾಗಿ ಶ್ರೀರಾಮನಿಂದ ಉಪದೇಶಿಸಲ್ಪಟ್ಟ ಆ ಸುಮಂತ್ರನು, ಬಳಿಕ ಬದ್ಧಾಂಜಲಿಯಾಗಿ ರೋದನಮಾಡುತ 'ಸ್ವಾಮಿ! ನನ್ನನ್ನು ಕಾಪಾಡು' ಎಂದು ಹೇಳುತ, ಬಾಷ್ಪಪೂರಿತಲೋಚನನಾಗಿ, ಆ ಶ್ರೀಹರಿಯ ಪಾದಗಳ ಮೇಲೆ ಬಿದ್ದನು ॥೧೧೨॥

ಶ್ರೀರಾಮನೂಕೂಡ, ಅವನನ್ನು ಎಬ್ಬಿಸಿ, ತನ್ನ ಭಕ್ತನನ್ನು ಬಿಡಲಾರದೆ, ಬಹುವಿಧವಾದ ಸಮಾಧಾನೋಕ್ತಿಗಳಿಂದ ಆ ಸೂತನನ್ನು ಕಳುಹಿಸಿಕೊಟ್ಟನು ॥೧೧೩॥

ಇದು ಅಯೋಧ್ಯಾಕಾಂಡದಲ್ಲಿ ಸುಮಂತ್ರನಿಗೆ ಶ್ರೀರಾಮನು ಮಾಡಿದ
ತತ್ತ್ವೋಪದೇಶವರ್ಣನೆಯೆಂಬ ಹನ್ನೆರಡನೆಯ ಸರ್ಗವು.

ಅಥ ಶ್ರೀಮದಯೋಧ್ಯಾಕಾಣ್ಡೇ ತ್ರಯೋದಶಃ ಸರ್ಗಃ.

ಶ್ರೀ ಶಿವ ಉವಾಚ.

ತತೋ ರಾಮವಚಃ ಶ್ರುತ್ವಾ ಸುಮನ್ತ್ರೋ ಮನ್ತ್ರಿಸತ್ತಮಃ ।
ತದಾ ಕಥಞ್ಚಿತ್ ತಂ ಹಿತ್ವಾ ನ್ಯವರ್ತತ ಪುರಂ ಪ್ರತಿ ॥೧॥
ತತೋ ಗುಹೋ ಜನೈಃ ಶ್ರುತ್ವಾ ರಾಮಾಗಮಮಹೋತ್ಸವಮ್ ।
ಸಖಾಯಂ ಸ್ವಾಮಿನಂ ದ್ರಷ್ಟುಂ ಹರ್ಷಾತ್ ತೂರ್ಣಮುಪಾಗಮತ್ ॥೨॥
ತ್ರಿಲಕ್ಷಾಶ್ವೈರ್ಲಕ್ಷಗಜೈಃ ನವಲಕ್ಷಧನುರ್ಧರೈಃ ।
ರಥೈಶ್ಚ ಬಹುಭಿರ್ಯುಕ್ತೋ ರಾಮಾನ್ತಿಕಮುಪಾಗಮತ್ ॥೩॥
ಫಲಾನಿ ಮಧುಪುಷ್ಪಾಣಿ ಗೃಹೀತ್ವಾ ಭಕ್ತಿಸಂಯುತಃ ।
ರಾಮಸ್ಯಾಗ್ರೇ ವಿನಿಕ್ಷಿಪ್ಯ ದಣ್ಡವತ್ ಪ್ರಾಪತದ್ಭುವಿ ॥೪॥
ನಮೋನಮಸ್ತೇ ರಘುನನ್ದನಾಯ ಸೀತಾಸಮೇತಾಯ ಸಲಕ್ಷ್ಮಣಾಯ ।
ಕೋದಣ್ಡದೀಕ್ಷಾಗುರುವೇ ನಮಸ್ತೇ ಭೂಭಾರಸಂಹಾರಕೃತಾವತಾರ ॥೫॥

ಅಯೋಧ್ಯಾಕಾಂಡದಲ್ಲಿ ಹದಿಮೂರನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತೀದೇವಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಬಳಿಕ, ಮಂತ್ರಿಶ್ರೇಷ್ಠನಾದ ಸುಮಂತ್ರನು, ಶ್ರೀರಾಮನ ತತ್ತ್ವೋಪದೇಶವಾಕ್ಯವನ್ನು ಕೇಳಿ, ಆಗ ಬಹು ಪ್ರಯಾಸದಿಂದ ಅವನನ್ನು ಬಿಟ್ಟು ಅಯೋಧ್ಯಾಪಟ್ಟಣವನ್ನು ಕುರಿತು ಹಿಂದಿರುಗಿದನು ॥೧॥

ಅನಂತರ, ಗುಹನು ಜನಗಳದ್ವಾರಾ ಶ್ರೀರಾಮನ ಆಗಮನಮಹೋತ್ಸವವನ್ನು ಕೇಳಿದವನಾಗಿ, ತನಗೆ ಮಿತ್ರನೂ ಸ್ವಾಮಿಯೂ ಆದ ಶ್ರೀರಾಮನನ್ನು ನೋಡುವುದಕ್ಕಾಗಿ, ಹರ್ಷಾತಿರೇಕದಿಂದ ಬೇಗನೆ ಅಲ್ಲಿಗೆ ಬಂದನು ॥೨॥

ಆಗ, ಮೂರುಲಕ್ಷ ಕುದುರೆಗಳಿಂದಲೂ ಒಂದುಲಕ್ಷ ಆನೆಗಳಿಂದಲೂ ಒಂಬತ್ತುಲಕ್ಷ ಧನುರ್ಧಾರಿಗಳಿಂದಲೂ ಅನೇಕ ರಥಗಳಿಂದಲೂ ಯುಕ್ತನಾಗಿ, ಶ್ರೀರಾಮನ ಸನ್ನಿಧಾನವನ್ನು ಸೇರಿದನು ॥೩॥

ಫಲಗಳನ್ನೂ ಮಧುವನ್ನೂ ಪುಷ್ಪಗಳನ್ನೂ ಕೈಯಲ್ಲಿ ಹಿಡಿದುಕೊಂಡು ಬಂದು, ಅವೆಲ್ಲವನ್ನೂ ಶ್ರೀರಾಮನ ಮುಂದೆಗಡೆಯಲ್ಲಿ ಸಮರ್ಪಿಸಿ, ಭೂಮಿಯಮೇಲೆ ದಂಡಾಕಾರವಾಗಿ ಪ್ರಣಾಮಮಾಡಿದನು ॥೪॥

ಆಗ ನಮಸ್ಕಾರ ಮಾಡುವ ಸಮಯದಲ್ಲಿ 'ಭೂಭಾರವನ್ನಿಳುಹಲು ಅವತರಿಸಿರುವ ಎಲೈ ರಾಮಚಂದ್ರನೆ! ರಘುವಂಶಕ್ಕೆಲ್ಲ ಆನಂದಪ್ರದನಾಗಿ ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಕೂಡಿರುವ ನಿನಗೆ ನಮಸ್ಕಾರವು; ಧನುರ್ವಿದ್ಯೋಪದೇಶದಲ್ಲಿ ಪ್ರಪಂಚಕ್ಕೆಲ್ಲ ಗುರು

ಇತೀರಯಿತ್ವಾ ಲುಬ್ಧಕ ಭಕ್ತಃ ಶಬರೋ ಗುಹನಾಮಕಃ ।
ರಘುನಾಥಪದಾಮ್ಭೋಜಪರ್ಯನ್ತಂ ಸ ಲುಬ್ಧಕ ಯಯೌ ॥೬॥
ಸಂಸ್ಪೃಶ್ಯ ಹಿ ಪದದ್ವನ್ದ್ವಂ ಸಂಕೋಚೇನ ಗವಾಶನಃ ।
ಉತ್ಥಾಯ ಪ್ರಾಞ್ಜಲಿರ್ಭೂತ್ವಾ ವಾಕ್ಯಮಾಹಾತಿಭಕ್ತಿವೃತ ॥೭॥
ಇದಂ ವಪುರಿಮೇ ದಾರಾಃ ಪುತ್ರಾಶ್ಚೈವೇ ಧನಂ ತ್ವಿದವ್ ।
ರಾಜ್ಯಂ ಚೇದಮಹಂ ಭಕ್ತ್ಯಾ ಚತುರಙ್ಗಂ ಬಲಂ ಚ ಮೇ ॥೮॥
ಜೀವಿತಂ ಚಾಪಿ ಸುಕೃತಂ ಕರ್ಮ ಯದ್ವಾ ಶುಭಾಶುಭವ್ ।
ತತ್ ಸರ್ವಂ ಭವತೇ ದತ್ತಂ ಪ್ರಪನ್ನಂ ಕಾಧಿ ರಾಘವ ॥೯॥
ಇತಿ ಸರ್ವಂ ಸಮರ್ಪ್ಯಾಸ್ಮೈ ತಸ್ಮಿನ್ ನ್ಯಸ್ತಭರೋ ಗುಹಃ ।
ಭಕ್ತಿಗದ್ಗದಯಾ ವಾಚಾ ತುಷ್ಟಾವ ರಘುನನ್ದನವ್ ॥೧೦॥
ನಮಸ್ತೇ ಕರುಣಾಸಿನ್ಧೋ ನಮಸ್ತೇ ಭಕ್ತವತ್ಸಲ ।
ನಮಃ ಸರ್ವಾನ್ತರಸ್ಥಾಯ ಸಮತಾಗತಮೂರ್ತಯೇ ॥೧೧॥
ನ ಶಕ್ನುವನ್ತಿ ಸಂಸ್ತೋತುಂ ಬ್ರಹ್ಮರುದ್ರಾದಯೋಪಿ ಯವ್ ।
ಸ್ತೋಷ್ಯೇ ಕಥಂ ತ್ವಾಂ ಮೂಢಾತ್ಮಾ ಕಿರಾತಃ ಪಾಪಕರ್ಮಕೃತ ॥೧೨॥

ವಾದ ನಿನಗೋಸ್ಕರ ನಮಸ್ಕಾರವು' ಎಂದು ಬಾಯಲ್ಲಿ ಹೇಳುತ, ಭೂಮಿಯಲ್ಲಿ ಬಿದ್ದು ಹೊರಳುತಿರುವ ಗುಹನಾಮಕನಾದ ಆ ಶಬರನು, ಶ್ರೀರಾಮನ ಪಾದಕಮಲದವರೆಗೂ ಹೊರಳುತಲೇ ಹೋದನು ॥೫-೬॥

ಸ್ವಯಂ ಗೋಮಾಂಸಭಕ್ಷಕನಾಗಿರುವ ಆ ಗುಹನು, ಕೇವಲ ಸಂಕೋಚದಿಂದ ಶ್ರೀರಾಮಚಂದ್ರನ ಪಾದಕಮಲವನ್ನು ಸ್ಪರ್ಶಿಸಿ, ಆ ಬಳಿಕ ಎದ್ದು ನಿಂತುಗೊಂಡು, ಬದ್ಧಾಂಜಲಿಯಾಗಿ ಭಕ್ತಿವಿಶೇಷಯುಕ್ತನಾಗಿ ಈ ಮಾತನ್ನು ಹೇಳಿದನು ॥೭॥

ಹೇ ರಾಮಚಂದ್ರ! ಇದೋ-ಈ ನನ್ನ ದೇಹವು; ಈ ಹೆಂಡರು; ಈ ಮಕ್ಕಳು; ಈ ಧನವು; ಈ ದೊರೆತನವು; ಈ ನನ್ನ ಜೀವವು; ನನ್ನ ಚತುರಂಗಸೈನ್ಯವು; ನನ್ನ ಪ್ರಾಣವು; ನನ್ನ ಪುಣ್ಯವು. ಮತ್ತು, ನಾನು ಇದುವರೆಗೆ ಮಾಡಿರುವ ಸಮಸ್ತ ಶುಭಾಶುಭಕರ್ಮಗಳು. ಇದೆಲ್ಲವನ್ನೂ ನಿನಗೆ ಸಮರ್ಪಿಸಿರುವೆನು. ಹೇ ರಾಘವ! ಶರಣಾಗತನಾದ ನನ್ನನ್ನು ಅನುಗ್ರಹಪೂರ್ವಕವಾಗಿ ಕಾಪಾಡಬೇಕು ॥೮-೯॥

ಹೀಗೆಂದು ಹೇಳುತ, ಸಮಸ್ತವನ್ನೂ ಆ ಶ್ರೀರಾಮನಿಗೆ ಸಮರ್ಪಿಸಿ, ಅವನಲ್ಲಿ ತನ್ನ ಭಾರವನ್ನೆಲ್ಲ ಇಟ್ಟವನಾಗಿರುವ ಆ ಗುಹನು, ಭಕ್ತಿಗದ್ಗದವಾದ ಮಾತಿನಿಂದ ಆ ರಾಮಚಂದ್ರನನ್ನು ಸ್ತುತಿಸಲುಪಕ್ರಮಿಸಿದನು ॥೧೦॥

ಹೇ ಕೃಪಾಸಾಗರ! ನಿನಗೆ ನಮಸ್ಕಾರವು. ಎಲೈ ಭಕ್ತವತ್ಸಲನೆ! ನಿನಗೆ ನಮಸ್ಕಾರವು. ಸಕಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ಸರ್ವತ್ರ ಸಮನಾಗಿರುವ ನಿನಗೆ ನಮಸ್ಕಾರವು॥

ಬ್ರಹ್ಮರುದ್ರಾದಿಗಳೂ ಕೂಡ ಯಾವನನ್ನು ಸ್ತೋತ್ರಮಾಡಲು ಸಮರ್ಥರಾಗುವುದಿಲ್ಲವೋ, ಅಂತಹ ನಿನ್ನನ್ನು-ಕೇವಲ ಮೂಢನಾಗಿಯೂ ಪಾಪಕರ್ಮಕಾರಿಯಾಗಿಯೂ ಇರುವ ಕಿರಾತನಾದ ನಾನು-ಹೇಗೆತಾನೆ ಸ್ತೋತ್ರಮಾಡಬಲ್ಲೆನು? ॥೧೨॥

ನ ವಿಶೇಷೋಸ್ತಿ ತೇ ರಾಮ ಭಕ್ತೇಷು ಕರುಣಾಲಯ ।
ಸಮುದ್ರಂ ಪ್ರಾಪ್ಯ ಸರಿತಾಂ ಯಥಾ ಭೇದೋ ನ ವಿದ್ಯತೇ ॥೧೩॥
ಗವಾಶನೋಹಂ ಪಾಪಿಷ್ಠಃ ಪಾಪಕರ್ಮರತೋಪಿ ಚ ।
ಜುಗುಪ್ಸಿತೋ ನಿನ್ದಿತೋ ಮೇ ಕುಲಂ ರಾಘುವ ನಿನ್ದಿತಮ್ ॥೧೪॥
ಅಸಂಸ್ಪೃಶ್ಯೋಸ್ಮ್ಯಸಂಭಾಷ್ಯೋ ಭಾಷಣಂ ನ ತೃಣಂ ವಿನಾ ।
ಸ್ವಭಾವಾನರ್ಹತಾಂ ಪ್ರಾಪ್ತೋಽ ವಿಶ್ವಾಸಾನರ್ಹತಾಮಪಿ ॥೧೫॥
ಶಬರಂ ಕೃಷ್ಣಸರ್ಪಂ ಚ ಭ್ರಾನ್ತಂ ಲೇಖನಜೀವಿನಮ್ ।
ನ ವಿಶ್ವಸೇದ್ಬ್ರಹ್ಮಕಾರಂ ಕಾಮಿನಂ ಮದ್ಯಪಾಯಿನಮ್ ॥೧೬॥
ಸರ್ವಂ ತ್ವದ್ದರ್ಶನಾದೇವ ಮಾರ್ಜಿತಂ ಪಾವನೋಸ್ಮ್ಯಹಮ್ ।
ಕೃತಕೃತ್ಯೋಸ್ಮಿ ಭಗವನ್ ಜನ್ಮ ಮೇ ಸಫಲಂ ಕೃತಮ್ ॥೧೭॥
ಬ್ರಹ್ಮಾದಿಸನಕಾನ್ತಾನಾಂ ದುರ್ಲಭಂ ತವ ದರ್ಶನಮ್ ।
ಸತ್ಯಶೌಚವಿಹೀನಾನಾಂ ಶಬರಾಣಾಂ ತು ಕಾ ಕಥಾ ॥೧೮॥

ಆದರೆ, ಎಲೈ ಕೃಪಾಸಾಗರನಾದ ಶ್ರೀರಾಮನೆ! ಸಮುದ್ರವನ್ನು ಸೇರಿದಮೇಲೆ ನದಿಗಳಿಗೆ ಹೇಗೆ ಭೇದವಿಲ್ಲವಾಗುವುದೋ, ಹಾಗೆ ನಿನ್ನನ್ನು ಹೊಂದಿದಬಳಿಕ ಭಕ್ತರಲ್ಲಿ ನಿನಗೆ ಯಾವ ತಾರತಮ್ಯವೂ ಇರುವುದಿಲ್ಲ ॥೧೩॥

ಹೇ ರಾಘವ! ನಾನು-ಗೋಮಾಂಸಾಶನನಾಗಿರುವೆನು; ಮಹಾ ಪಾಪಿಷ್ಠನು; ಸರ್ವದಾ ಪಾಪಕರ್ಮಪರನಾಗಿರುವೆನು; ನನ್ನನ್ನು ಕಂಡರೆ, ಎಲ್ಲರೂ ಜುಗುಪ್ಸೆಪಡುತ ನಿಂದಿಸುವರು. ನನ್ನ ಕುಲವೇ ಪ್ರಪಂಚದಲ್ಲಿ ನಿಂದಾಸ್ಪದವಾದುದು ॥೧೪॥

ನನ್ನ ಸ್ಪರ್ಶವು ಸರ್ವರಿಗೂ ಪರಿಹರಣೀಯವಾದುದು; ಅದರಂತೆಯೇ, ನಾನು ಸರ್ವರಿಗೂ ಅಸಂಭಾಷ್ಯನಾಗಿರುವೆನು. ನನ್ನನ್ನು ಮಾತನಾಡಿಸಬೇಕಾದರೆ, ಉತ್ತಮವರ್ಣದವರು ಮಧ್ಯದಲ್ಲಿ ತೃಣವನ್ನಿಟ್ಟುಕೊಂಡು ಮಾತನಾಡಬೇಕಲ್ಲದೆ, ತೃಣವಿಲ್ಲದೆ ಯಾವಾಗಲೂ ನನ್ನೊಡನೆ ಮಾತನಾಡಕೂಡದು. ಹೀಗಿರುವುದರಿಂದ, ನಾನು ಸ್ವಭಾವದಿಂದಲೇ ಅಯೋಗ್ಯನಾಗಿರುವೆನು. ನನ್ನಲ್ಲಿ ಯಾರೂ ವಿಶ್ವಾಸವನ್ನು ಇಡಬಾರದಾಗಿರುವುದು ॥೧೫॥

ಪ್ರಪಂಚದಲ್ಲಿ, ಬೇಡನನ್ನೂ, ಕೃಷ್ಣಸರ್ಪವನ್ನೂ, ಬುದ್ಧಿಭ್ರಮೆಯುಂಟಾಗಿರಶಕ್ಯವ (ಹುಚ್ಚ)ರನ್ನೂ, ಲೇಖನದಿಂದ ಜೀವಿಸಶಕ್ಯವನನ್ನೂ, ಸುವರ್ಣಕಾರನನ್ನೂ, ಕೇವಲ ಕಾಮಪರನಾದವನನ್ನೂ, ಹೆಂಡಗುಡುಕನನ್ನೂ, ಎಂದಿಗೂ ನಂಬಬಾರದೆಂದು ನೀತಿವಚನವಿರುವುದು ॥೧೬॥

ಹೀಗಿದ್ದರೂ, ನಾನು ಇಂತಹ ದೋಷವುಳ್ಳವನಾಗಿದ್ದರೂ, ಈಗ ಅದೆಲ್ಲವೂ ನಿನ್ನ ದರ್ಶನದಿಂದಲೇ ತೊಡೆದುಹೋಯ್ತು. ನಾನು ಕೇವಲ ಪರಿಶುದ್ಧನಾದೆನು. ಎಲೈ ಭಗವಂತನೆ! ಈಗ ನಾನು ಕೃತಾರ್ಥನಾದೆನು. ನನ್ನ ಜನ್ಮವು ಸಫಲವಾಯ್ತು ॥೧೭॥

ಸ್ವಾಮಿ! ಬ್ರಹ್ಮ ಮೊದಲುಗೊಂಡು ಸನಕಾದಿಗಳವರೆಗೂ ನಿನ್ನ ದರ್ಶನವು ದುರ್ಲಭವಾಗಿರುವುದು. ಹೀಗಿರುವಾಗ, ಸತ್ಯಶೌಚಗಳೊಂದೂ ಇಲ್ಲದ ಶಬರರಿಗೆ ಹೇಳಶಕ್ಯವೇನಿರುವುದು? (ಎಂದು ಗುಹನು ಪ್ರಾರ್ಥಿಸಿದನು) ॥೧೮॥

ಇತೀರಯನ್ತಂ ಶ್ರೀರಾಮಃ ಶಬರಂ ಭಕ್ತವತ್ಸಲಃ ।
ಅನುಗೃಹ್ಯ ಮಹಾಬಾಹುಃ ವಚನಂ ಚೇದಮಬ್ರವೀತ್ ॥೧೯॥
ಮನುಷ್ಯಾಣಾಂ ಸಹಸ್ರೇಷು ಕಶ್ಚಿನ್ನಿಶ್ಚಲಭಕ್ತಿಮಾನ್ ।
ಮಯಿ ಸರ್ವಾತ್ಮಕೇ ದೇವೇ ಲೋಕಾತೀತೇ ಪರಾತ್ಮನಿ ॥೨೦॥
ಬಹುಜನ್ಮಾರ್ಜಿತೈಃ ಪುಣ್ಯೈಃ ಮಯಿಭಕ್ತಿರ್ಭವೇದ್ಯದಿ ।
ತದಾ ಪೂತೋ ಭವೇಜ್ಜನ್ತುಃ ನ ತೀರ್ಥೈರ್ನ ವ್ರತಾದಿಭಿಃ ॥೨೧॥
ಮಯಿ ಭಕ್ತಿಂ ಸಮಾಶ್ರಿತ್ಯ ನೀಚೋ ವಾ ನೀಚಕರ್ಮಕೃತ್ ।
ಕಿರಾತಮ್ಲೇಚ್ಛ ಚಣ್ಡಾಲಾಃ ಯೇ ಚಾನ್ಯೇ ಪಾಪಯೋನಯಃ ॥೨೨॥
ಗವಾಶನೋ ಮದ್ಯಪೋ ವಾ ಶಿವವಿಷ್ಣ್ವಾದಿನಿನ್ದಕಃ ।
ತೇ ಸರ್ವೇ ಶುದ್ಧಿಮಾಯಾನ್ತಿ ಸತ್ಯಂಸತ್ಯಂ ಮಯೋದಿತಮ್ ॥೨೩॥
ಸರ್ವಶಾಸ್ತ್ರರತೇಭ್ಯಶ್ಚ ಶ್ರುತ್ಯುಕ್ತಾಚಾರಿಣಸ್ತಥಾ ।
ಪುಣ್ಯಕರ್ಮರತೇಭ್ಯಶ್ಚ ಶ್ರೇಷ್ಠೋ ನೀಚೋಪಿ ಭಕ್ತಿಮಾನ್ ॥೨೪॥
ದೇಹಾಭಿಮಾನಿನಾಂ ಜಾತಿಸ್ವಾಶ್ರಮಾಚಾರಮಾನಿನಾಮ್ ।
ಕರ್ಮಜಾಡ್ಯರತಾನಾಂ ಚ ಮಯಿ ಭಕ್ತಿಃ ಸುದುರ್ಲಭಾ ॥೨೫॥

ಎಲೌ ಪಾರ್ವತಿ! ಹೀಗೆ ಹೇಳುತಿರುವ ಆ ಶಬರನನ್ನು, ಭಕ್ತವತ್ಸಲನಾದ ಮಹಾಭುಜನಾದ ರಾಮಚಂದ್ರನು ಅನುಗ್ರಹಿಸಿ, ಅವನನ್ನು ಕುರಿತು ಈ ಮಾತನ್ನು ಹೇಳಿದನು ॥೧೯॥

ಅಯ್ಯಾ! ಗುಹ! ಅನೇಕಸಹಸ್ರ ಮನುಷ್ಯರ ಮಧ್ಯದಲ್ಲಿ ಯಾವನೋ ಒಬ್ಬನು ಮಾತ್ರವೇ, ಸರ್ವಾತ್ಮಕನಾದ-ನಿತ್ಯೈಶ್ವರ್ಯಯುಕ್ತನಾದ-ಲೋಕಾತೀತನಾದ-ಪರಮಾತ್ಮನಾದ ನನ್ನಲ್ಲಿ ದೃಢವಾದ ಭಕ್ತಿಯನ್ನಿಡುವನು ॥೨೦॥

ಹೀಗೆ ಅನೇಕ ಜನ್ಮಗಳಲ್ಲಿ ಸಂಪಾದಿಸಲ್ಪಟ್ಟ ಪುಣ್ಯವಿಶೇಷಗಳಿಂದ ನನ್ನಲ್ಲಿ ಭಕ್ತಿಯುಂಟಾದರೆ, ಆಗ ಜೀವನು ಪರಿಶುದ್ಧನಾಗುವನು; ತೀರ್ಥಾದಿಗಳಿಂದಲೂ ವ್ರತಾದಿಗಳಿಂದಲೂ, ಎಂದಿಗೂ ಶುದ್ಧನಾಗುವುದಿಲ್ಲ ॥೨೧॥

ನನ್ನಲ್ಲಿ ಭಕ್ತಿಯಿಟ್ಟವನಾದರೆ, ಎಂತಹ ನೀಚನಾದರೂ, ಎಷ್ಟು ನೀಚವಾದ ಕರ್ಮವನ್ನು ಮಾಡಿದರೂ, ಕಿರಾತ ಮ್ಲೇಚ್ಛ ಚಂಡಾಲಜಾತಿಯವರಾದರೂ, ಇನ್ನೂ ಇತರವಾದ ಪಾಪಯೋನಿಗಳಲ್ಲಿ ಹುಟ್ಟಿದವರಾದರೂ, ಗೋಮಾಂಸಭಕ್ಷಕನಾದರೂ, ಮದ್ಯಪಾಯಿಯಾದರೂ ಶಿವ ವಿಷ್ಣು ಮೊದಲಾದ ದೇವತೆಗಳನ್ನು ನಿಂದಿಸತಕ್ಕವನಾದರೂ,—ಅವರೆಲ್ಲರೂ ಶುದ್ಧರಾಗುವರು. ನನ್ನಿಂದ ಹೇಳಲ್ಪಟ್ಟಿರುವ ಈ ಮಾತು ಸುತರಾಂ ಸತ್ಯವೆಂದು ನಂಬುವನಾಗು॥ ೨೨-೨೩॥

ನನ್ನಲ್ಲಿ ಭಕ್ತಿಯುಳ್ಳವನು, ಎಂತಹ ನೀಚನಾಗಿದ್ದರೂ ಸರ್ವಶಾಸ್ತ್ರಸದಾಚಾರನಿರತರಾದವರಿಗಿಂತಲೂ,-ವೇದೋಕ್ತಕರ್ಮಾನುಷ್ಠಾನತತ್ಪರನಿಗಿಂತಲೂ—ಸಕಲ ಪುಣ್ಯಕರ್ಮನಿರತರಾದವರಿಗಿಂತಲೂ ಶ್ರೇಷ್ಠನೆನ್ನಿಸಿಕೊಳ್ಳುವನು ॥೨೪॥

ಆದರೆ, ದೇಹಾಭಿಮಾನಯುಕ್ತರಾದವರಿಗೂ, ತಮ್ಮ ಜಾತಿ ಆಶ್ರಮಗಳ ಆಚಾರದಲ್ಲಿ ಅಭಿಮಾನವುಳ್ಳವರಿಗೂ, ಕರ್ಮಜಾಡ್ಯನಿರತರಾದವರಿಗೂ ಕೂಡ, ನನ್ನಲ್ಲಿ ಭಕ್ತಿಯು ಸುತರಾಂ ದುರ್ಲಭವಾಗುವುದು ॥೨೫॥

ಯಜ್ಞವ್ರತಾನಿ ತೀರ್ಥಾನಿ ಯೋಗಃ ಸ್ವಾಧ್ಯಾಯಏವ ಚ ।
ನ ತಥಾ ಪಾವಯನ್ತ್ಯಙ್ಗ ಮಯಿ ಭಕ್ತಿರ್ಯಥಾ ನರಾ ॥೬೬॥

ಬಹೂನಾಂ ಜನ್ಮನಾಮನ್ತೇ ಮಯಿ ಭಕ್ತಿಃ ಪ್ರಜಾಯತೇ ।
ಭಕ್ತ್ಯೈಕ್ಷ್ವಾತ್ ಪರಂ ನ್ಯಾಣಾಂ ನ ಕೃತ್ಯಮವಶಿಷ್ಯತೇ ॥೬೭॥

ನಿರ್ಮತ್ಸರಾವೀತರಾಗಾಃ ಸರ್ವಭೂತಹಿತೇ ರತಾಃ ।
ಸರ್ವಪ್ರಾಣೇಷು ಮದ್ಭಾವಾಃ ತೇ ತು ನೀಚಾಅಪಿ ದ್ವಿಜಾಃ ॥೬೮॥

ನಿರಾಶಿಷಸ್ತ್ವನಾರಮ್ಭಾಃ ನಿಷ್ಪರಿಗ್ರಹಜೀವಿನಃ ।
ಮಯಿ ಭಕ್ತಿಪರಾನೀಚಾಃ ಅಪಿ ತೇ ಬ್ರಾಹ್ಮಣೋತ್ತಮಾಃ ॥೬೯॥

ಯೇನಕೇನಾಪಿ ಸಂತುಷ್ಟಾಃ ಯತ್ರಕ್ವಚನ ವಾಸಿನಃ ।
ಲಾಭನಾಶಸಮಾಭಕ್ತಾಃ ಮಯಿ ನೀಚಾಅಪಿ ದ್ವಿಜಾಃ ॥೭೦॥

ಸ್ವಜಾತ್ಯಾಶ್ರಮಧರ್ಮೇಭ್ಯೋ ವಾ ತ್ಯಕ್ತವರ್ಣಾಶ್ರಮೋಥ ವಾ ।
ಅನನ್ಯಚೇತಾಸ್ತೋ ಮದ್ಭಕ್ತಃ ಸ ಮೇ ವಿಪ್ರಸಮೋ ಮತಃ ॥೭೧॥

ನನ್ನಲ್ಲಿ ಭಕ್ತಿಯು ಹೇಗೆ ಮನುಷ್ಯರನ್ನು ಪರಿಶುದ್ಧರನ್ನಾಗಿ ಮಾಡುವುದೋ, ಅಷ್ಟು ಮಟ್ಟಿಗೆ ಯಜ್ಞಗಳೂ ವ್ರತಗಳೂ ತೀರ್ಥಗಳೂ ಯೋಗಾಭ್ಯಾಸವೂ ವೇದಾಧ್ಯಯನವೂ ಪರಿಶುದ್ಧಿಗೊಳಿಸುವುದಿಲ್ಲ ॥೬೬॥

ಮನುಷ್ಯರಿಗೆ ಅನೇಕಜನ್ಮಗಳು ಕಳೆದನಂತರ ನನ್ನಲ್ಲಿ ಭಕ್ತಿ ಹುಟ್ಟುವುದು. ಭಕ್ತಿ ಹುಟ್ಟಿದಮೇಲೆ, ಅವರಿಗೆ ಮತ್ತಾವುದೊಂದು ಕರ್ಮವೂ ಅವಶಿಷ್ಟವಾಗಿರುವುದಿಲ್ಲ ॥೬೭॥

ಯಾರು–ನಿರ್ಮತ್ಸರರಾಗಿಯೂ- ವಿರಕ್ತರಾಗಿಯೂ- ಸರ್ವಭೂತಹಿತನಿರತರಾಗಿಯೂ-ಸರ್ವ ಪ್ರಾಣಿಗಳಲ್ಲಿಯೂ ನನ್ನನ್ನು ಭಾವಿಸತಕ್ಕವರಾಗಿಯೂ-ಇರುವರೋ, ಅವರು ನೀಚಜಾತಿಯವರಾಗಿದ್ದರೂ ಬ್ರಾಹ್ಮಣರೆಂದು ತಿಳಿಯಬೇಕು ॥೬೮॥

ಯಾರು-ಯಾವ ಕಾಮನೆಯೂ ಇಲ್ಲದವರಾಗಿಯೂ–ಯಾವ ವ್ಯಾಪಾರವನ್ನೂ ಮಾಡದವರಾಗಿಯೂ–ಯಾವುದನ್ನೂ ತಮ್ಮದೆಂದು ತಿಳಿದುಕೊಳ್ಳದೆ ಜೀವಿಸತಕ್ಕವರಾಗಿಯೂ ಇರುತ–ನನ್ನಲ್ಲಿ ಭಕ್ತಿಯನ್ನಿಟ್ಟುಕೊಂಡಿರುವರೋ, ಅವರು ನೀಚಜಾತಿಯವರಾಗಿದ್ದರೂ ಬ್ರಾಹ್ಮಣ ಶ್ರೇಷ್ಠರೆನ್ನಿಸಿಕೊಳ್ಳುವರು ॥೬೯॥

ಯಾರು-ಯಾವುದು ಸಿಕ್ಕಿದರೆ ಅದರಿಂದಲೇ ತೃಪ್ತಿಪಡುತಲೂ–ಎಲ್ಲಿಯಾದರೂ ಒಂದುಕಡೆ ವಾಸವಾಡುತಲೂ-ಲಾಭನಷ್ಟಗಳಲ್ಲಿ ಸಮಚಿತ್ತರಾಗಿಯೂ ಇರುತ-ನನ್ನಲ್ಲಿ ಭಕ್ತಿಯುಳ್ಳವರಾಗಿರುವರೋ, ಅವರು ನೀಚಜಾತಿಯವರಾದರೂ ಬ್ರಾಹ್ಮಣರೇ ಸರಿ ॥೭೦॥

ಯಾವನು–ತನ್ನ ವರ್ಣಾಶ್ರಮಧರ್ಮದಲ್ಲಿ ನಿರತನಾಗಿದ್ದರೂ–ಅಥವಾ ವರ್ಣಾಶ್ರಮ ಧರ್ಮವನ್ನು ಬಿಟ್ಟವನಾಗಿದ್ದರೂ–ಅನನ್ಯಚಿತ್ತನಾಗಿ ನನ್ನಲ್ಲಿ ಭಕ್ತಿಯಿಡುವನೋ, ಅವನು ಬ್ರಾಹ್ಮಣಸದೃಶನೆಂದು ನನ್ನ ಅಭಿಪ್ರಾಯವು ॥೭೧॥

ಭುಕ್ತಭೋಗಸ್ತ್ಯಕ್ತಕಾಮಃ ಸದಾ ವಾ ಭೋಗಲಮ್ಪಟಃ ।
ಮದೇಕಶರಣೋ ಯಃ ಸ್ಯಾತ್ ಸ ಮೇ ವಿಪ್ರಸಮೋ ಮತಃ ॥೩೦॥

ಸರ್ವಸಙ್ಗವಿನಿರ್ಮುಕ್ತೋ ಜಿತಕ್ರೋಧೋ ಜಿತೇನ್ದ್ರಿಯಃ ।
ಜಿತಾರಿನರ್ಗೋ ಮದ್ಭಕ್ತಃ ಸಮೇ ವಿಪ್ರತಮೋ ಮತಃ ॥೩೧॥

ಷಡಙ್ಗವೇದವಿದ್ವಾ ವಾ ವೇದಕರ್ಮರತೋಪಿ ವಾ ।
ಮಯಿ ಭಕ್ತಿವಿಹೀನೋ ಯಃ ಸ ಶೂದ್ರಃ ಸ ತು ಪುಲ್ಕಸಃ ॥೩೪॥

ಯಥಾ ನಾಗ್ನೇರ್ದಾಹ್ಯಭೇದೋ ನಾವ್ಯು ಭೇದೋ ಮಹೋದಧೇಃ ।
ಮದ್ಭಕ್ತೇಷು ತಥಾ ಭೇದೋ ಮಮ ನಾಸ್ತೀತಿ ನಿಶ್ಚಿನು ॥೩೫॥

ಇತ್ಯುಕ್ತ್ವಾ ರಾಘವಃ ಸ್ವಸ್ಯ ಲಕ್ಷ್ಮಣಸ್ಯ ಜಟಾಃ ಶುಭಾಃ ।
ಕೃತ್ವಾ ಗುಹಮುಖೋವಾಚ ನಾವಮಾನಯ ಮೇ ಸಖೇ ॥೩೬॥

ತತಃ ಸ ಪ್ರಾಞ್ಜಲಿರ್ಭೂತ್ವಾ ಗುಹೋ ರಾಘವಮಬ್ರವೀತ್ ।
ಉಪಸ್ಥಿತೇಯಂ ನೌರ್ದೇವ ಭೂಯಃ ಕಿಂ ಕರವಾಣಿ ತೇ ॥೩೭॥

ಯಾವನು–ಭೋಗವನ್ನನುಭವಿಸುತ್ತಿದ್ದರೂ-ಸುತರಾಂ ಕಾಮವನ್ನು ತ್ಯಜಿಸಿದರೂ–ಅಥವಾ ಸರ್ವದಾ ಭೋಗದಲ್ಲಿಯೇ ಲಂಪಟನಾಗಿದ್ದರೂ-ಅನನ್ಯಶರಣನಾಗಿ ನನ್ನನ್ನು ಮರೆಹೊಗುವನೋ, ಅವನು ಬ್ರಾಹ್ಮಣಸದೃಶನೆಂದು ನಾನು ಸಮ್ಮತಿಸುವೆನು ॥೩೦॥

ಯಾವನು ಸರ್ವಸಂಗಮುಕ್ತನಾಗಿಯೂ- ಕ್ರೋಧವನ್ನು ಜಯಿಸಿದವನಾಗಿಯೂ-ಜಿತೇಂದ್ರಿಯನಾಗಿಯೂ-ಅರಿಷಡ್ವರ್ಗವನ್ನು ಜಯಿಸಿದವನಾಗಿಯೂ ಇರುತ-ನನ್ನಲ್ಲಿ ಭಕ್ತಿಯಿಟ್ಟುಕೊಂಡಿರುವನೋ, ಅವನು ಬ್ರಾಹ್ಮಣೋತ್ತಮನೆಂದು ನಾನು ಒಪ್ಪುವೆನು ॥೩೧॥

ಷಡಂಗಸಹಿತವಾದ ವೇದವನ್ನು ತಿಳಿದವನಾಗಿದ್ದರೂ-ವೇದೋಕ್ತಕರ್ಮಾನುಷ್ಠಾನನಿರತನಾಗಿದ್ದರೂ-ಯಾವನು ನನ್ನಲ್ಲಿ ಭಕ್ತಿಶೂನ್ಯನಾಗಿರುವನೋ, ಅವನೇ ಶೂದ್ರನು; ಅವನೇ ಚಂಡಾಲನು ॥೩೪॥

ಅಗ್ನಿಗೆ ಸುಡತಕ್ಕ ವಸ್ತುಗಳಲ್ಲಿ ಹೇಗೆ ನೀರೋಚ್ಚಭೇದವಿಲ್ಲವೋ, ಸಮುದ್ರಕ್ಕೆ ತನ್ನೊಳಗೆ ಬಂದು ಬೀಳುವ ಜಲಗಳಲ್ಲಿ ಹೇಗೆ ನೀರೋಚ್ಚಭೇದವಿಲ್ಲವೋ, ಹಾಗೆ ನನ್ನ ಭಕ್ತರಲ್ಲಿ ನನಗೆ ನೀರೋಚ್ಚಭೇದವಿಲ್ಲವೆಂದು ನಿಶ್ಚಯಿಸುವನಾಗು. (ಎಂದು ಶ್ರೀರಾಮನು ಹೇಳಿದನು) ॥

ಹೀಗೆಂದು ಹೇಳಿ, ಆ ರಾಘವನು ತನಗೂ ಲಕ್ಷ್ಮಣನಿಗೂ ಉತ್ತಮವಾದ ಜಟೆಯನ್ನು ಮಾಡಿಕೊಂಡು, ಬಳಿಕ ಗುಹನನ್ನು ಕುರಿತು 'ಅಯ್ಯಾ ಮಿತ್ರನೆ! ನನಗೆ ಒಂದು ನಾವೆಯನ್ನು ತರಿಸು' ಎಂದು ಹೇಳಿದನು ॥೩೬॥

ಬಳಿಕ, ಆ ಗುಹನು ದಿವ್ಯವಾದ ನಾವೆಯನ್ನು ತರಿಸಿದವನಾಗಿ, ಕೈಮುಗಿದುಕೊಂಡು ಶ್ರೀರಾಮನನ್ನು ಕುರಿತು 'ಸ್ವಾಮಿ! ಇದೋ ಈ ನಾವೆಯು ಸಿದ್ಧವಾಗಿ ಬಂದಿರುವುದು. ನಾನು ತಮಗೆ ಮತ್ತೇನು ಮಾಡಿಕೊಡಬೇಕಾಗಿರುವುದು?' ಎಂದು ವಿಜ್ಞಾಪಿಸಿಕೊಂಡನು ॥೩೭॥

ತತೋ ಗುಹಸವಾನೀತಾಂ ನೌಕಾಂ ದೃಷ್ಟ್ವಾ ರಘೂತ್ತಮಃ ।
ಲಕ್ಷ್ಮಣಂ ಪ್ರೇರಯಾಮಾಸ ಸೀತಾಮಾರೋಹಯೇತ್ಯಲಮ್ ॥೩೪॥
ರಾಘವಸ್ಯ ವಚಃ ಶ್ರುತ್ವಾ ಲಕ್ಷ್ಮಣೋ ವಿನಯಾನ್ವಿತಃ ।
ಸೀತಾಮಾರೋಹಯಾಮಾಸ ನೌಕಾಯಾಂ ರಾಮಶಾಸನಾತ್ ॥೩೫॥
ರಾಮೋಽಪಾಸಿಸರತ್ಕೃತ್ವಾ ಪೌರ್ವಾಹ್ಣಿಕೀಂ ಕ್ರಿಯಾಮ್ ।
ಪುನರಾಚಮ್ಯ ವಿಧಿವತ್ ಆರುರೋಹ ತರೀಂ ಪ್ರಭುಃ ॥೩೬॥
ಗಙ್ಗಾಂ ತೀರ್ತ್ವಾ ಪರೇ ಪಾರೇ ಶುದ್ಧಾಚಮನಕೃತ್ ಪ್ರಭುಃ ।
ಗುಹೇನ ಸಹಿತೋ ರಾಮೋ ನದೀಸ್ತೀರ್ತ್ವಾ ಬಹೂದಕಾಃ ।
ಭರದ್ವಾಜಾಶ್ರಮಂ ಗತ್ವಾ ಪ್ರಯಾಗೇ ಮುನಿಪುಙ್ಗವಮ್ ॥೩೮॥
ಭರದ್ವಾಜಂ ಮುನಿವೃತಂ ದೀಪ್ಯಮಾನಮಿವಾನಲಮ್ ।
ತತೋ ರಾಮಃ ಪ್ರಸನ್ನಾತ್ಮಾ ನನಾಮ ಪ್ರಯತೋ ಮುನಿಮ್ ॥೩೯॥
ಭರದ್ವಾಜೋಽಪಿ ತಂ ರಾಮಂ ಅಶೀರ್ಭಿರಭಿನನ್ದ್ಯ ಚ ।
ನೀಲಜೀಮೂತಸಙ್ಕಾಶಂ ನವಮನ್ಮಥಸುನ್ದರಮ್ ॥೪೩॥
ಶಿಖಾಬನ್ಧನದೂರಸ್ಥ ಸೀಲಾಳಕವೃತಾನನಮ್ ।
ಸ್ಮಿತವಕ್ತ್ರಂ ವಿಶಾಲಾಕ್ಷಂ ಸ್ನಿಗ್ಧಗಾತ್ರಂ ಮನೋಹರಮ್ ॥೪೪॥

ಅನಂತರ, ಶ್ರೀರಾಮನು ಗುಹನಿಂದ ತರಿಸಲ್ಪಟ್ಟ ನಾವೆಯನ್ನು ನೋಡಿದವನಾಗಿ, ಸೀತೆಯನ್ನು ನಾವೆಯಮೇಲೆ ಹತ್ತಿಸೆಂದು ಲಕ್ಷ್ಮಣನಿಗೆ ಆಜ್ಞಾಪಿಸಿದನು ॥೩೪॥

ಆಗ, ರಾಮನ ಮಾತನ್ನು ಕೇಳಿ, ಲಕ್ಷ್ಮಣನು ವಿನಯಯುಕ್ತನಾಗಿ, ರಾಮನ ಆಜ್ಞಾನುಸಾರವಾಗಿ ಸೀತೆಯನ್ನು ನಾವೆಯಮೇಲೆ ಹತ್ತಿಸಿದನು ॥೩೫॥

ಬಳಿಕ, ಕರ್ಮಾನುಷ್ಠಾನತತ್ಪರನಾದ ಸರ್ವಲೋಕಪ್ರಭುವಾದ ಶ್ರೀರಾಮನು, ಪೂರ್ವಾಹ್ಣದಲ್ಲಿ ಮಾಡಬೇಕಾದ ಕರ್ಮಗಳನ್ನೆಲ್ಲ ಮುಗಿಯಿಸಿಕೊಂಡು, ಪುನಃ ಯಥಾವಿಧಿಯಾಗಿ ಆಚಮನ ಮಾಡಿ, ಅನಂತರ ನಾವೆಯನ್ನು ಹತ್ತಿದನು ॥೩೬॥

ಆಮೇಲೆ, ಸರ್ವಸಮರ್ಥನಾದ ಶ್ರೀರಾಮಚಂದ್ರನು, ಗಂಗೆಯನ್ನು ದಾಟಿ, ಆಚೆಯ ದಡದಲ್ಲಿಯೂ ಶುದ್ಧಾಚಮನಮಾಡಿದವನಾಗಿ, ಮುಂದೆ ಬಹು ಜಲಭರಿತವಾದ ಕೆಲವು ನದಿಗಳನ್ನು ಗುಹನೊಡನೆ ದಾಟಿ, ಪ್ರಯಾಗಕ್ಷೇತ್ರದಲ್ಲಿ ಭರದ್ವಾಜರ ಆಶ್ರಮಕ್ಕೆ ಹೋಗಿ, ಅಲ್ಲಿ ಅನೇಕ ಮುನಿಬೃಂದಪರಿವೃತನಾಗಿ ಅಗ್ನಿಯಂತೆ ಪ್ರಜ್ವಲಿಸುತಿರುವ ಭರದ್ವಾಜ ಮಹರ್ಷಿಯನ್ನು, ಪ್ರಸನ್ನಚಿತ್ತನಾಗಿಯೂ ಮಹಾ ನಿಯಮಯುಕ್ತನಾಗಿಯೂ ನಮಸ್ಕರಿಸಿದನು ॥೩೭-೩೯॥

ಆಬಳಿಕ, ಭರದ್ವಾಜಮುನಿಯೂ ಕೂಡ, ನೀಲಮೇಘ ಸದೃಶನಾಗಿಯೂ-ನವಮನ್ಮಥ ಸುಂದರನಾಗಿಯೂ-ಶಿಖೆಯನ್ನು ಕಟ್ಟಿಕೊಂಡಿರುವಕಾರಣ ದೂರವಾಗಿರುವ ನೀಲವಾದ ಮುಂಗುರುಳುಗಳಿಂದ ಅಚ್ಛಾದಿತವಾದ ಮುಖವುಳ್ಳವನಾಗಿಯೂ-ಮುಖದಲ್ಲಿ ಮಂದಹಾಸಯುಕ್ತನಾಗಿಯೂ-ವಿಶಾಲಲೋಚನನಾಗಿಯೂ-ಮಿರುಗುತಿರುವ ಶರೀರವುಳ್ಳವನಾಗಿಯೂ-ಸರ್ವಲೋಕ ಮನೋಹರನಾಗಿಯೂ-ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿರತಕ್ಕವನಾಗಿಯೂ-

ವಲ್ಕಲಾಜಿನಸಂವೀತಂ ಮತ್ತಮಾತಙ್ಗಗಾಮಿನವ್ ।
ಸೀತಾಸಹಾಯಂ ದೇವೇಶಂ ಲಕ್ಷ್ಮಣೇನ ಯವೀಯಸಾ ।೪೫॥
ಅಜಾನುಬಾಹುಂ ಶ್ರೀಮನ್ತಂ ಧನುರ್ಬಾಣಧರಂ ವಿಭುವ್ ।
ಹೃದಬ್ಜೇ ತು ಯಥಾ ಧ್ಯಾತಃ ತಥಾ ಬಾಹ್ಯೇಪಿ ಚ ಸ್ಥಿತವ್ ।೪೬॥
ರಾಮಂ ಪ್ರತ್ಯಕ್ಷತೋ ದೃಷ್ಟ್ವಾ ಸರ್ವಲೋಕೇಶ್ವರೇಶ್ವರವ್ ।೪೭॥
ಆಸನಾತ್ ಸ್ವಾತ್ ಸಮುತ್ಥಾಯ ಪುಳಕಾಸನ್ದಸಂವೃತಃ ।
ದಿವ್ಯರೂಪಧರಂ ದೇವಂ ವವನ್ದೇ ನಾಮ ಕೀರ್ತಯನ್ ।೪೮॥
ಪಾದ್ಯಾರ್ಘ್ಯಾಚಮನಂ ದತ್ತ್ವಾ ನಿವೇದ್ಯ ಸ್ವಸ್ತಿ ಕಾಸನಮ್ ।
ಮಧುಪರ್ಕಂ ವಲ್ಕಲಂ ಚ ಫಲಾನಿ ರಸವನ್ತಿ ಚ ॥೪೯॥
ಪಾದಪ್ರಕ್ಷಾಳನಂ ಕರ್ತುಂ ಉದ್ಯತಸ್ಯ ಮಹಾಮುನೇಃ ।
ಹಸ್ತಪ್ರಸಾರಣಂ ದೃಷ್ಟ್ವಾ ರಾಮೋ ವಚನಮಬ್ರವೀತ್ ॥೫೦॥
ವಯಂ ಕ್ಷತ್ರಿಯದಾಯಾದಾಃ ಯೂಯಂ ಬ್ರಹ್ಮಕುಲೋದ್ಭವಾಃ ।
ಪಾದಪ್ರಕ್ಷಾಳನಂ ಮೇದ್ಯ ಕರ್ತುಂ ನಾರ್ಹಸಿ ಸುವ್ರತ ॥೫೧॥

ಶ್ರೀ ಭರದ್ವಾಜ ಉವಾಚ.

ತ್ವಂ ತು ಜಾತೋ ರಘೋರ್ವಂಶೇ ಪರಮಾತ್ಮಾದಿಪೂರುಷಃ ।
ದುಷ್ಟನಿಗ್ರಹಣಂ ಕರ್ತುಂ ಶಿಷ್ಟಾನಾಂ ಪರಿಪಾಲನವ್ ।

ಮತ್ತಗಜಗಮನನಾಗಿಯೂ-ಪತ್ನಿಯಾದ ಸೀತೆಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಕೂಡಿದವನಾಗಿಯೂ-ಸರ್ವದೇವ ಮಹೇಶ್ವರನಾಗಿಯೂ-ಅಜಾನುಬಾಹುವಾಗಿಯೂ-ಮಹಾ ಕಾಂತಿಸಂಪನ್ನನಾಗಿಯೂ-ಧನುರ್ಬಾಣಧರನಾಗಿಯೂ-ತನ್ನ (ಭರದ್ವಾಜನ) ಮನಸ್ಸಿನಲ್ಲಿ ಧ್ಯಾನಿಸಲ್ಪಡುತಿದ್ದಂತೆಯೇ ಹೊರಗೂ ಪ್ರತ್ಯಕ್ಷನಾಗಿರತಕ್ಕವನಾಗಿಯೂ-ಸರ್ವಲೋಕೇಶ್ವರೇಶ್ವರನಾಗಿಯೂ ಇರುವ-ಶ್ರೀರಾಮನನ್ನು ಸಾಕ್ಷಾತ್ತಾಗಿ ನೋಡಿ, ಅವನಿಗೆ ಅತೀರ್ವಾದವನ್ನು ಮಾಡಿ, ತಟ್ಟನೆ ತನ್ನ ಆಸನದಿಂದ ಎದ್ದು, ರೋಮಾಂಚದಿಂದಲೂ ಆನಂದದಿಂದಲೂ ವ್ಯಾಪ್ತನಾಗಿ, ತನ್ನ ನಾಮಧೇಯವನ್ನು ಉಚ್ಚರಿಸುತ, ದಿವ್ಯರೂಪಧರನಾಗಿರುವ ಆ ಶ್ರೀರಾಮನಿಗೆ ನಮಸ್ಕಾರಮಾಡಿದನು ।೪೩—೪೮॥

ಆಗ, ಪಾದ್ಯ ಅರ್ಘ್ಯ ಆಚಮನೀಯಗಳನ್ನು ಕೊಟ್ಟು-ದಿವ್ಯವಾದ ಆಸನಗಳನ್ನು ನಿರ್ದೇಶಿಸಿ-ಮಧುಪರ್ಕವನ್ನೂ ವಲ್ಕಲವನ್ನೂ ರಸವತ್ತಾದ ಫಲಗಳನ್ನೂ ಸಮರ್ಪಿಸಿ-ತನಗೆ (ಶ್ರೀರಾಮನಿಗೆ) ಪಾದಪ್ರಕ್ಷಾಳನೆಯನ್ನು ಮಾಡುವುದಕ್ಕೆ ಉದ್ಯುಕ್ತನಾಗಿ ಭರದ್ವಾಜಮಹರ್ಷಿಯು ಹಸ್ತವನ್ನು ನೀಡುತಿರುವುದನ್ನು ನೋಡಿ, ಶ್ರೀರಾಮನು 'ಎಲೈ ಸುವ್ರತನೆ! ನಾವು ಕ್ಷತ್ರಿಯಕುಲದಲ್ಲಿ ಹುಟ್ಟಿದವರು; ನೀವು ಬ್ರಾಹ್ಮಣವಂಶಸಂಭೂತರು. ಆದುಕಾರಣ, ನೀವು ನನಗೆ ಪಾದಪ್ರಕ್ಷಾಳನೆಮಾಡುವುದು ಯುಕ್ತವಲ್ಲ' ಎಂದು ಹೇಳಿದನು ॥೪೯—೫೧॥

ಆಗ ಭರದ್ವಾಜಮುನಿಯು ಹೀಗೆ ವಾಕ್ಯನಾಡಿದನು:—

ಹೇ ರಾಮ! ನೀನು ಆದಿಪುರುಷನಾದ ಪರಮಾತ್ಮನು; ದುಷ್ಟನಿಗ್ರಹವನ್ನೂ ಶಿಷ್ಟರಕ್ಷಣೆಯನ್ನೂ ಭೂಭಾರಹರಣವನ್ನೂ ಮಾಡುವುದಕ್ಕೋಸರವೂ, ರಾಕ್ಷಸರ ಸಂಹಾರಕ್ಕೋಸ್ಕರವೂ,

ಭೂಭಾರಹರಣಂ ಕರ್ತುಂ ರಕ್ಷಸಾಂ ನಿಧನಾಯ ಚ ॥೫೨॥
ಭಕ್ತಾನುಗ್ರಹಕಾಮೇನ ವಿಗ್ರಹಸ್ತೇ ಪ್ರತೀಯತೇ ॥೫೩॥
ವ್ಯಾಪಕೋಸಿ ಮಹಾಭಾಗ ಕೇವಲೋಸಿ ನಿರಞ್ಜನಃ ।
ಪುರಾಣಪುರುಷೋಸಿ ತ್ವಂ ಕ್ಷೀರಾಬ್ಧಿನಿಲಯೋಸಿ ಚ ॥೫೪॥
ಜ್ಞೆದಾನನ್ದಸ್ವರೂಪೋಸಿ ನಿರ್ವಿಕಾರೋಸಿ ಶಾಶ್ವತಃ ।
ಹರಿಸ್ತ್ವಂ ಹರರೂಪೋಸಿ ಸರ್ವದೇವಾತ್ಮಕೋಸಿ ಚ ॥೫೫॥
ಪವಿತ್ರಚರಣಸ್ತ್ವಂ ಹಿ ಗಙ್ಗಾಜನಕ ಪಾವನ ।
ತವ ಪಾದಚ್ಯುತಾ ಗಙ್ಗಾ ಪುನಾತಿ ಭುವನತ್ರಯಮ್ ॥೫೬॥
ತವ ಸಂದರ್ಶನಂ ನೃಣಾಂ ಕೋಟಿಜನ್ಮಾತಿದುರ್ಲಭಮ್ ।
ಮಮ ಭಾಗ್ಯವಶಾದ್ರಾಮ ದೃಷ್ಟೋಸಿ ಖಲು ವಿಗ್ರಹೀ ॥೫೭॥
ತವ ಪಾದಕ್ಷಾಳನಾಮ್ಬು ಪವಿತ್ರಯತು ಮೇ ಗೃಹಮ್ ।
ದುರ್ಲಭಂ ಸರ್ವಜನ್ತೂನಾಂ ಮುನೀನಾಮಪಿ ದುರ್ಲಭಮ್ ॥೫೮॥
ತನ್ಮೇ ಪುಣ್ಯವಶಾಲ್ಲಬ್ಧಂ ಸಾಕ್ಷಾತ್ ಪಾದೋದಕಂ ತವ ।
ಲಬ್ಧ್ವಾ ನಿಧಿಂ ದರಿದ್ರೋ ಯಃ ಕಥಂ ತಂ ತ್ಯಕ್ತುಮರ್ಹತಿ ॥೫೯॥

ನೀನು ರಘುವಂಶದಲ್ಲಿ ಅವತರಿಸಿರುವೆ. ಭಕ್ತರನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ನೀನು ಶರೀರಗ್ರಹಣ ಮಾಡಿರುವೆಯೆಂದು ಸರ್ವಲೋಕವಿದಿತವಾಗಿರುವುದು ॥೫೨—೫೩॥

ಎಲೈ ಮಹಾನುಭಾವನೆ! ನೀನು ಸರ್ವವ್ಯಾಪಿಯಾಗಿಯೂ ಕೇವಲನಾಗಿಯೂ ನಿರಂಜನನಾಗಿಯೂ ಪುರಾಣಪುರುಷನಾಗಿಯೂ ಕ್ಷೀರಸಾಗರವಾಸಿಯಾಗಿಯೂ ಇರುವೆ ॥೫೪॥

ಮತ್ತು, ಜ್ಞಾನಾನಂದಸ್ವರೂಪನಾಗಿಯೂ ನಿರ್ವಿಕಾರನಾಗಿಯೂ ವಿಷ್ಣುವಾಗಿಯೂ ಶಿವನಾಗಿಯೂ ಸರ್ವದೇವರೂಪನಾಗಿಯೂ ಇರುವೆ ॥೫೫॥

ಎಲೈ ಗಂಗಾಜನಕನೆ! ಸಕಲ ಲೋಕಪಾವನನೆ! ನಿನ್ನ ಪಾದಕಮಲವು ಸರ್ವರಿಗೂ ಪವಿತ್ರವಾಗಿರುವುದು. ನಿನ್ನ ಪಾದದಿಂದ ಆವಿರ್ಭವಿಸಿದ ಗಂಗೆಯು, ಮೂರುಲೋಕವನ್ನೂ ಪರಿಶುದ್ಧಿಗೊಳಿಸುವುದು ॥೫೬॥

ಎಲೈ ರಾಮನೆ! ಮನುಷ್ಯರಿಗೆ ನಿನ್ನ ದರ್ಶನವು ಕೋಟಿಜನ್ಮಗಳು ಕಳೆದರೂ ದುರ್ಲಭವಾದುದು. ನನ್ನ ಭಾಗ್ಯವಶದಿಂದ ಈಗ ನೀನು ದಿವ್ಯಮಂಗಳವಿಗ್ರಹಧರನಾಗಿ ದರ್ಶನವನ್ನು ಕೊಟ್ಟಿರುವೆ ॥೫೭॥

ನಿನ್ನ ಪಾದಪ್ರಕ್ಷಾಳನೆಯು ತೀರ್ಥವು ಈಗ ನನ್ನ ಮನೆಯನ್ನೆಲ್ಲ ಪವಿತ್ರವನ್ನಾಗಿ ಮಾಡಲಿ. ಇದು, ಸಮಸ್ತ ಜಂತುಗಳಿಗೂ ದುರ್ಲಭವು; ಮಹಾತ್ಮರಾದ ಮುನಿಗಳಿಗೂ ಕೂಡ ದುರ್ಲಭವಾದುದು ॥೫೮॥

ಇಂತಹ ನಿನ್ನ ಪಾದೋದಕವು, ಈಗ ನನ್ನ ಪುಣ್ಯವಿಶೇಷದಿಂದ ಸಾಕ್ಷಾತ್ತಾಗಿ ಲಬ್ಧವಾಗಿರುವುದು. ಇದನ್ನು ನಾನೆಂದಿಗೂ ಬಿಡಲಾರೆನು. ಯಾವನು ಹುಟ್ಟಿಬಡವನೋ, ಅವನು ತಾನಾಗಿ ಸಿಕ್ಕಿದ ನಿಧಿಯನ್ನು ಹೇಗೆತಾನೆ ಬಿಡಬಲ್ಲನು! ॥೫೯॥

ಇತ್ಯುಕ್ತ್ವಾ ಪಾದಕಮಲಂ ರಾಘವಸ್ಯ ಮಹಾತ್ಮನಃ ।
ಪ್ರಕ್ಷಾಳ್ಯ ವಿಧಿವದ್ವಿಪ್ರಃ ಪಾತ್ರೇ ತೀರ್ಥಂ ಪ್ರಗೃಹ್ಯ ಚ ॥೬೦॥
ಪ್ರೋಕ್ಷ್ಯಾತ್ಮಾನಂ ವಧೂಂ ಶಿಷ್ಯಾ೯ ಆಶ್ರಮೇ ಭೂರುಹಾ೯ ಗೃಹಾ೯ ।
ಕೃತಕೃತ್ಯಮಿವಾತ್ಮಾನಂ ಮೇನೇ ರಾಘವದರ್ಶನಾತ್ ॥೬೧॥
ಉವಾಚ ಚ ಪ್ರಸನ್ನಾತ್ಮಾ ರಾಘವಂ ಕರುಣಾಕರಮ್ ॥೬೨॥
ಧನ್ಯೋಽಸ್ಮಿ ಕೃತಕೃತ್ಯೋಽಸ್ಮಿ ಪುಣ್ಯೋಽಸ್ಮಿ ಪುರುಷೋತ್ತಮ ।
ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಮ್ ॥೬೩॥
ಅದ್ಯ ಮೇ ಪಿತರಸ್ತುಷ್ಟಾಃ ರಾಘವೇ ಗೃಹಮಾಗತೇ ।
ಅದ್ಯೋತ್ಸವೋ ಮಹಾನಾಸೀತ್ ಪಿತೃಣಾಂ ಮಮ ವೇಶ್ಮನಿ ।
ಭರದ್ವಾಜಇತಿ ಖ್ಯಾತಿಃ ಲೋಕೇಷು ಪ್ರಚರಿಷ್ಯತಿ ॥೬೪॥
ಇತಿ ಸಮ್ಭಾಷ್ಯ ತೇನೋನ್ಯಂ ಉಷಿತಾಮುನಿಸನ್ನಿಧೌ ॥೬೫॥
ಪ್ರಾತರುತ್ಥಾಯ ಯಮುನಾಂ ಉತ್ತೀರ್ಯ ಮುನಿದಾರಕೈಃ ।

ಎಂಬುದಾಗಿ ಹೇಳಿ, ಆ ಭರದ್ವಾಜಮುನಿಯು, ಮಹಾತ್ಮನಾದ ಶ್ರೀರಾಮನ ಪಾದಕಮಲವನ್ನು ಯಥಾವಿಧಿಯಾಗಿ ತೊಳೆದು, ಒಂದು ಪಾತ್ರೆಯಲ್ಲಿ ಆ ಪಾದತೀರ್ಥವನ್ನು ಹಿಡಿದುಕೊಂಡು, ತನ್ನನ್ನೂ ತನ್ನ ಪತ್ನಿಯನ್ನೂ ಶಿಷ್ಯರನ್ನೂ ಆಶ್ರಮದಲ್ಲಿರುವ ವೃಕ್ಷಗಳನ್ನೂ ತನ್ನ ಮನೆಯನ್ನೂ ಅದರಿಂದ ಪ್ರೋಕ್ಷಿಸಿ, ಶ್ರೀರಾಮನ ದರ್ಶನದಿಂದ ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು. ಅನಂತರ, ಪ್ರಸನ್ನಹೃದಯನಾಗಿ ಕರುಣಾಕರನಾದ ಶ್ರೀರಾಮನನ್ನು ಕುರಿತು ಹೀಗೆ ಹೇಳಿದನು ॥೬೦—೬೨॥

ಎಲೈ ಪುರುಷೋತ್ತಮನೆ! ಈಗ ನಾನು ಧನ್ಯನಾದೆನು; ಕೃತಕೃತ್ಯನಾದೆನು; ಪುಣ್ಯಶಾಲಿಯಾದೆನು. ಈಗ ನನ್ನ ಜನ್ಮವು ಸಫಲವಾಯ್ತು; ನನ್ನ ಜೀವಿತವೂ ಈಗ ಉತ್ತಮವೆನ್ನಿಸಿತು ॥೬೩॥

ಶ್ರೀರಾಮನು ಮನೆಗೆ ಬರಲಾಗಿ, ಈಗ ನಮ್ಮ ಪಿತೃಗಳೆಲ್ಲರೂ ಸಂತುಷ್ಟರಾದರು; ನನ್ನ ಮನೆಯಲ್ಲಿ ಈಗ ಪಿತೃದೇವತೆಗಳು ವಿಶೇಷವಾಗಿ ಉತ್ಸವವನ್ನು ಅನುಭವಿಸುತ್ತಿರುವರು. ಇನ್ನು ಮೇಲೆ ಭರದ್ವಾಜ ಎಂಬ ಪ್ರಖ್ಯಾತಿಯು ಲೋಕಗಳಲ್ಲಿ ವಿಶೇಷವಾಗಿ ಹರಡಿಕೊಳ್ಳುವುದು. (ಎಂದು ಭರದ್ವಾಜನು ಹೇಳಿದನು) ॥೬೪॥

ಎಲೌ ಪಾರ್ವತಿ! ಈರೀತಿಯಾಗಿ ಮಾತನಾಡಿ, ಆ ರಾಮಾದಿಗಳು ಭರದ್ವಾಜಮುನಿಯ ಸವಿಾಪದಲ್ಲಿ ಆ ರಾತ್ರಿ ವಾಸಮಾಡಿಕೊಂಡಿದ್ದರು. ಆ ಬೆಳಗ್ಗೆ, ಶ್ರೀರಾಮನು ಎದ್ದವನಾಗಿ, ಯಸಿ ಪುತ್ರರು ಸಿದ್ಧಪಡಿಸಿಕೊಟ್ಟ ತೆಪ್ಪದಿಂದ ಯಮುನಾನದಿಯನ್ನು ದಾಟಿ, ಭರದ್ವಾಜಮುನಿಯು

ಕೃತಪ್ಲವೇನ ಮುನಿಸಂದಿಷ್ಟವಾರ್ಗೇಣ ರಾಘವಃ ।
ಪ್ರಯಯೌ ಚಿತ್ರಕೂಟಾದ್ರಿಂ ವಾಲ್ಮೀಕೇರ್ಯತ್ರ ಚಾಶ್ರಮಃ ॥೬೬॥
ಸುರಮ್ಯಮಾಸಾದ್ಯ ತು ಚಿತ್ರಕೂಟಂ ನದೀಂ ಚ ತಾಂ ಮಾಲ್ಯವತೀಂ
[ಸುತೀರ್ಥಾಮ್ ।
ನನಂದ ರಾಮೋ ಮೃಗಪಕ್ಷಿಜುಷ್ಟಾಂ ಜಹೌ ಚ ದುಃಖಂ ಪುರವಿಪ್ರವಾಸಾತ್॥

ಇತಿ ಶ್ರೀಮದಯೋಧ್ಯಾಕಾಣ್ಡೇ ಶ್ರೀರಾಮಸ್ಯ ಚಿತ್ರಕೂಟನಿವಾಸ
ಕಥನಂನಾಮ ತ್ರಯೋದಶಃ ಸರ್ಗಃ.



ತೋರಿಸಿದ ಮಾರ್ಗದಿಂದ, ವಾಲ್ಮೀಕಿಮುನಿಯು ಆಶ್ರಮದಿಂದ ಶೋಭಿಸುತ್ತಿರುವ ಚಿತ್ರಕೂಟ ಪರ್ವತವನ್ನು ಕುರಿತು ಹೊರಟನು ॥೬೫—೬೬॥

ಆಬಳಿಕ, ಅತಿರಮ್ಯವಾದ ಚಿತ್ರಕೂಟವನ್ನೂ, ಮೃಗಪಕ್ಷಿಸೇವಿತವಾದ ಸುಪ್ರಸಿದ್ಧವಾದ ಮಾಲ್ಯವತೀನದಿಯನ್ನೂ ಹೊಂದಿ, ಶ್ರೀರಾಮನು ಹರ್ಷಭರಿತನಾದನು: ತನ್ನ ಪಟ್ಟಣವನ್ನು ಬಿಟ್ಟು ಅರಣ್ಯದಲ್ಲಿ ವಾಸಮಾಡಬೇಕಾಗಿಬಂದುದರಿಂದ ಸಂಭವಿಸಿದ ವ್ಯಸನವನ್ನೂ ಬಿಟ್ಟು ಬಿಟ್ಟನು ॥೬೭॥

ಇದು ಅಯೋಧ್ಯಾಕಾಂಡದಲ್ಲಿ ಶ್ರೀರಾಮನ ಚಿತ್ರಕೂಟಪ್ರವೇಶಕಥನವೆಂಬ
ಹದಿಮೂರನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಚೈತುರ್ದಶಃ ಸರ್ಗಃ.

ಶ್ರೀಶಿವಉವಾಚ.

ಸುಮನೊ್ರಪಿ ತತೋಯೋಧ್ಯಾಂ ದಿನಾನ್ತೇ ಪ್ರವಿವೇಶ ಹ ।
ಬಹಿರೇವ ರಥಂ ಸ್ಥಾಪ್ಯ ರಾಜಾನಂ ದ್ರಷ್ಟುಮಾಯಯೌ ।
ಜಯಶಬ್ದೇನ ರಾಜಾನಂ ಸ್ತುತ್ವಾ ತಂ ಪ್ರಣನಾವು ಚ ॥೧॥
ತತೋ ರಾಜಾ ನಮನ್ತಂ ತಂ ಸುಮನ್ತ್ರಂ ವಿಹ್ವಲೋಬ್ರವೀತ್ ।
ಸುಮನ್ತ್ರ ರಾಮಃ ಕುತ್ರಾಸ್ತೇ ಕಿಂ ಮಾಂ ಪಾಪಿನಮಬ್ರವೀತ್ ॥೨॥
ಏವಂ ಮನ್ತ್ರೀ ಬ್ರುವನ್ತಂ ತಂ ಸುಮನೊ್ರ ವಾಕ್ಯಮಬ್ರವೀತ್ ॥೩॥
ರಾಮಃ ಸೀತಾ ಚ ಸೌಮಿತ್ರಿಃ ಮಯಾ ನೀತಾರಥೇನ ತೇ ।
ಶೃಙ್ಗಿಬೇರಪುರಾಭ್ಯಾಶೇ ಗಙ್ಗಾತೀರೇ ವ್ಯವಸ್ಥಿತಾಃ ॥೪॥
ವಟಕ್ಷೀರಂ ಸಮಾನೀಯ ಗುಹೇನ ರಘುನನ್ದನಃ ।
ಜಟಾಮಕುಟಮಾಬಧ್ಯ ಮಾಮಾಹ ಸ ದಯಾನಿಧಿಃ ॥೫॥

ಅಯೋಧ್ಯಾಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಶ್ರೀರಾಮನಿಂದ ಕಳುಹಿಸಲ್ಪಟ್ಟ ಸುಮಂತ್ರನೂ ಕೂಡ, ಸಾಯಂಕಾಲದಲ್ಲಿ ಅಯೋಧ್ಯಾನಗರಿಯನ್ನು ಪ್ರವೇಶಿಸಿದನು. ಅರಮನೆಯ ಹೊರಗಡೆಯೇ ರಥವನ್ನು ನಿಲ್ಲಿಸಿ, ದಶರಥನನ್ನು ನೋಡುವುದಕ್ಕಾಗಿ ತಾನು ಅರಮನೆಯೊಳಕ್ಕೆ ಹೋದನು. ಅಲ್ಲಿ ಅವನನ್ನು ಜಯಶಬ್ದ ಪುರಸ್ಸರವಾಗಿ ಸ್ತುತಿಸಿ, ಅವನಿಗೆ ನಮಸ್ಕಾರವನ್ನೂ ಮಾಡಿದನು ॥೧॥

ಅನಂತರ, ಪುತ್ರಶೋಕಾತುರನಾದ ದಶರಥನು, ತನಗೆ ನಮಸ್ಕಾರ ಮಾಡುತಿರುವ ಸುಮಂತ್ರನನ್ನು ಕುರಿತು 'ಅಯ್ಯಾ! ಸುಮಂತ್ರ! ನನ್ನ ರಾಮನೆಲ್ಲಿರುವನು? ಅವನು, ಮಹಾಪಾಪಿಯಾದ ನನಗೆ ಏನುಹೇಳಿ ಕಳುಹಿಸಿರುವನು?' ಎಂದು ಪ್ರಶ್ನೆಮಾಡಿದನು. ಹೀಗೆ ಹೇಳುತಿರುವ ದಶರಥನನ್ನು ಕುರಿತು, ಸುಮಂತ್ರನು ಈರೀತಿಯಾಗಿ ಹೇಳಿದನು ॥೨-೩॥

ಹೇ ಮಹಾರಾಜ! ರಾಮನನ್ನೂ ಸೀತೆಯನ್ನೂ ಲಕ್ಷ್ಮಣನನ್ನೂ ನಾನು ನಿನ್ನ ರಥದ ಮೇಲೆ ಕುಳ್ಳಿರಿಸಿಕೊಂಡು ಹೋದೆನಲ್ಲವೆ! ಅನಂತರ ಅವರು ಶೃಂಗಿಬೇರಪುರದ ಹತ್ತಿರ ಗಂಗಾನದಿಯ ತೀರದಲ್ಲಿ ರಥವನ್ನು ಬಿಟ್ಟು ಇಳಿದವರಾದರು ॥೪॥

ಅನಂತರ, ಕರುಣಾಸಾಗರನಾದ ಆ ರಘುನಂದನನು, ಗುಹನಿಂದ ಅಲದ ಹಾಲನ್ನು ತರಿಸಿಕೊಂಡು, ಅದರಿಂದ ಜಟಾಬಂಧವನ್ನು ಮಾಡಿಕೊಂಡು, ನನ್ನನ್ನು ಕುರಿತು ಹೀಗೆ ಹೇಳಿದನು॥

ಸುಮನ್ತ್ರ ಬ್ರೂಹಿ ರಾಜಾನಂ ಶೋಕಸ್ತೇ ನ ತು ಮತ್ಕೃತೇ ।
ಸಾಕೇತಾದಧಿಕಂ ಸೌಖ್ಯಂ ವಿಪಿನೇಪಿ ಭವಿಷ್ಯತಿ ॥೬॥
ಮಾತುರ್ಮೇ ವನ್ದನಂ ಬ್ರೂಹಿ ಶೋಕಂ ತ್ಯಜತು ಮತ್ಕೃತೇ ।
ಆಶ್ವಾಸಯತು ರಾಜಾನಂ ವೃದ್ಧಂ ಶೋಕಪರಿಪ್ಲುತಮ್ ॥೭॥
ಇತಿ ಸಂದಿಶ್ಯ ಮಾಂ ರಾಮೋ ಲಕ್ಷ್ಮಣೇ ಶೃಣ್ವತಿ ಸ್ವಯಮ್ ।
ಗುಹೇನಾನೀತಯಾ ನಾವಾ ಜಾಹ್ನವೀಮತರಚ್ಛುಭಾಮ್ ॥೮॥
ಯಾವದ್ಗಙ್ಗಾಂ ಸಮುತ್ತೀರ್ಯ ಗತಾಸ್ತಾವದಹಂ ಸ್ಥಿತಃ ।
ತತೋ ದುಃಖೇನ ಮಹತಾ ಪುನರೇವಾಹಮಾಗತಃ ॥೯॥
ಇತಿ ಸೂತವಚಃ ಶ್ರುತ್ವಾ ರುರೋದ ಶನಕೈರ್ನೃಪಃ ।
ಕೌಸಲ್ಯಾಪಿ ಚ ದುಃಖಾರ್ತಾ ಪ್ರಲಪ್ತುಮುಪಚಕ್ರಮೇ ॥೧೦॥
ಗಜರಾಜಗತಿರ್ವೀರೋ ಮಹಾಬಾಹುರ್ಧನುರ್ಧರಃ ।
ವನಮೇವಿಶತೇ ನೂನಂ ಸಹಭಾರ್ಯಃ ಸಲಕ್ಷ್ಮಣಃ ॥೧೧॥
ವನೇ ತ್ವದೃಷ್ಟದುಃಖಾನಾಂ ಕೈಕೇಯ್ಯನುಮತೇ ತ್ವಯಾ ।
ತ್ಯಕ್ತಾನಾಂ ವನವಾಸಾಯ ಕಾನ್ವವಸ್ಥಾ ಭವಿಷ್ಯತಿ ॥೧೨॥

ಅವನು ಹೇಳಿದುದೇನೆಂದರೆ:—ಅಯ್ಯಾ! ಸುಮಂತ್ರ! ನನಗೋಸ್ಕರ ದುಃಖಪಡಕೂಡದೆಂದೂ, ನನಗೆ ಅರಣ್ಯದಲ್ಲಿಯೂ ಅಯೋಧ್ಯೆಗಿಂತ ಹೆಚ್ಚಾಗಿ ಸುಖವುಂಟಾಗುವುದೆಂದೂ, ನೀನು ನನ್ನ ತಂದೆಗೆ ವಿಜ್ಞಾಪಿಸು ॥೬॥

ನನ್ನ ತಾಯಿಗೆ ನನ್ನ ನಮಸ್ಕಾರಗಳನ್ನು ತಿಳುಹಿಸು. ಅವಳು ನನಗೋಸ್ಕರ ದುಃಖಪಡದಂತೆ ಮಾಡು. ಅವಳು, ವೃದ್ಧನಾಗಿಯೂ ಶೋಕಪರಿಪ್ಲುತನಾಗಿಯೂ ಇರುವ ಮಹಾರಾಜನನ್ನು ಸಮಾಧಾನಪಡಿಸಲಿ ॥೭॥

ಹೀಗೆಂದು ನನಗೆ ಹೇಳಿ, ಲಕ್ಷ್ಮಣನು ಕೇಳುತಿರುವಾಗಲೇ, ಗುಹನಿಂದ ತರಿಸಲ್ಪಟ್ಟ ನಾವೆಯದ್ವಾರಾ, ಆ ಶ್ರೀರಾಮನು ಶುಭತಮವಾದ ಗಂಗಾನದಿಯನ್ನು ದಾಟಿ ಹೊರಟು ಹೋದನು ॥೮॥

ಅವರೆಲ್ಲರೂ ಗಂಗೆಯನ್ನು ದಾಟಿ ಹೋಗುವವರೆಗೂ ನಾನು ತೀರದಲ್ಲಿಯೇ ನಿಂತಿದ್ದೆನು. ಅವರೆಲ್ಲರೂ ಕಣ್ಣಿಗೆ ಕಾಣದಂತೆ ಹೊರಟುಹೋದಬಳಿಕ, ನಾನು ಮಹಾದುಃಖದಿಂದ ಪುನಃ ಹಿಂದಿರುಗಿ ಇಲ್ಲಿಗೆ ಬಂದೆನು. (ಎಂದು ಸುಮಂತ್ರನು ಹೇಳಿದನು) ॥೯॥

ಹೀಗೆ ಹೇಳಿದ ಸುಮಂತ್ರನ ಮಾತನ್ನು ಕೇಳಿ, ದಶರಥನು ಮೆಲ್ಲಗೆ ರೋದನಮಾಡಿದನು. ಕೌಸಲ್ಯೆಯೂ ಕೂಡ, ಮಹಾದುಃಖಪೀಡಿತಳಾಗಿ ಹೀಗೆ ಅಳುವುದಕ್ಕುಪಕ್ರಮಿಸಿದಳು ॥೧೦॥

ಮತ್ತಗಜಗಾಮಿಯಾಗಿಯೂ ಮಹಾಬಾಹುವಾಗಿಯೂ ಧನುರ್ಧರನಾಗಿಯೂ ಇರುವ ಆ ಮಹಾವೀರನಾದ ರಾಮನು, ಹೆಂಡತಿಯೊಡನೆಯೂ ಲಕ್ಷ್ಮಣನೊಡನೆಯೂ ಈಗ ನಿಶ್ಚಯವಾಗಿ ಅರಣ್ಯವನ್ನು ಪ್ರವೇಶಿಸುವನು ॥೧೧॥

ಎಲೌ ಕೈಕೇಯಿ! ನಿನ್ನ ಇಷ್ಟಾನುಸಾರವಾಗಿ ಅರಣ್ಯವಾಸಕ್ಕೆ ಕಳುಹಿಸಲ್ಪಟ್ಟಿರುವ–ಜನ್ಮಾರಭ್ಯ ದುಃಖವನ್ನು ಕಾಣದ ಆ ಸೀತಾರಾಮಲಕ್ಷ್ಮಣರಿಗೆ, ಅರಣ್ಯದಲ್ಲಿ ಎಂತಹ ಕಷ್ಟದಕೆಯುಂಟಾಗುವುದೋ! ॥೧೨॥

ಕದಾ ದೃಷ್ಟ್ವಾ ನರವ್ಯಾಘ್ರೌ ಅರಣ್ಯಾತ್ ಪುನರಾಗತೌ ।
ನನ್ದಿಷ್ಯತಿ ಪುರೀ ಹೃಷ್ಟಾ ಸಮುದ್ರಇವ ಪರ್ವಣಿ ॥೧೩॥
ಅಯಂ ಹಿ ಮಾಂ ದೀಪಯತೇ ಸಮುತ್ಥಿತಃ
ತನೂಜಶೋಕಪ್ರಭವೋ ಹುತಾಶನಃ ।
ಮಹೀಮಿಮಾಂ ರಶ್ಮಿಭಿರುದ್ಧತಪ್ರಭೋ
ಯಥಾ ನಿದಾಘೇ ಭಗವಾ೯ ದಿವಾಕರಃ ॥೧೪॥
ವಿಲಪನ್ತೀಂ ತಥಾ ತಾಂ ತು ಕೌಸಲ್ಯಾಂ ಪುನರುದೀರ್ತ್ತಮಾಮ್ ।
ಇದಂ ಧರ್ಮ್ಯೇ ಸ್ಥಿತಾ ಧರ್ಮ್ಯಾಂ ಸುಮಿತ್ರಾ ವಾಕ್ಯಮಬ್ರವೀತ್ ॥೧೫॥
ತವಾಯೇ೯ ಸದ್ಗುಣೈರ್ಯುಕ್ತಃ ಪುತ್ರಃ ಸ ಪುರುಷೋತ್ತಮಃ ।
ಕಿಂ ತೇ ವಿಲಪಿತೇನೈವಂ ಕೃಪಣಂ ರುದಿತೇನ ವಾ ॥೧೬॥
ಶಿಷ್ಟೈರಾಚರಿತೇ ಸಮ್ಯಕ್ ಶಶ್ವತ್ ಪ್ರೇತ್ಯಫಲೋದಯೇ ।
ರಾಮಃ ಸತ್ಯೇ ಸ್ಥಿತಃ ಶ್ರೇಷ್ಠೇ ನ ಶೋಚ್ಯಃ ಸ ಕದಾಚನ ॥೧೭॥
ವರ್ತತೇ ಚೋತ್ತಮಾಂ ವೃತ್ತಿಂ ಲಕ್ಷ್ಮಣೋಸ್ಯ ಸದಾನಘಃ ।
ದಯಾವಾ೯ ಸರ್ವಭೂತೇಷು ಲಾಭಸ್ತಸ್ಯ ಮಹಾತ್ಮನಃ ॥೧೮॥

ಅರಣ್ಯದಿಂದ ಹಿಂದಿರುಗಿ ಬಂದ ಆ ಪುರುಷಶ್ರೇಷ್ಠರನ್ನು ನೋಡಿ, ಪೂರ್ಣಿಮೆಯಲ್ಲಿ ಸಮುದ್ರವು ಹರ್ಷಪಡುವಂತೆ, ನಮ್ಮ ಅಯೋಧ್ಯೆಯು ಹರ್ಷಪಡುತ ಯಾವಾಗ ಅಭಿನಂದಿಸುವುದು ! ॥೧೩॥

ಗ್ರೀಷ್ಮಕಾಲದಲ್ಲಿ ಪ್ರಚಂಡಕಿರಣನಾದ ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ದಹಿಸುವಂತೆ, ಪುತ್ರವಿರಹದುಃಖದಿಂದುಂಟಾಗಿರುವ ಅಗ್ನಿಯು ಪ್ರಜ್ವಲಿಸುತ ನನ್ನನ್ನು ಸುಡುತಿರುವುದಲ್ಲ! ॥೧೪॥

ಈ ರೀತಿಯಾಗಿ ವಿಲಾಪವಾಡುತಿರುವ ಪ್ರಶಸ್ತಳಾದ ಕೌಸಲ್ಯೆಯನ್ನು ಕುರಿತು, ಧರ್ಮನಿಷ್ಠೆಯಾದ ಸುಮಿತ್ರೆಯು, ಧರ್ಮಯುಕ್ತವಾದ ಈ ಮಾತನ್ನು ಹೇಳಿದಳು ॥೧೫॥

ಆರ್ಯೇ! ಪುರುಷೋತ್ತಮನಾದ ನಿನ್ನ ಆ ಪುತ್ರನು ಕೇವಲ ಸದ್ಗುಣಸಂಪನ್ನನಾಗಿರುವನು. ಅವನನ್ನು ಕುರಿತು ನೀನು ಹೀಗೆ ಅಳುವುದರಿಂದ ಫಲವೇನು? ಕಣ್ಣೀರುಸುರಿಯಿಸುವುದುತಾನೆ ಏತಕ್ಕೆ? ॥೧೬॥

ನಮ್ಮ ರಾಮನು, ಶಿಷ್ಟರಿಂದ ಪದೇಪದೇ ಚೆನ್ನಾಗಿ ಆಚರಿಸಲ್ಪಟ್ಟ–ಪರಲೋಕಸುಖವಹವಾದ ಸತ್ಯಮಾರ್ಗದಲ್ಲಿ ನಡೆಯುತ್ತಿರುವನು. ಅವನವಿಷಯದಲ್ಲಿ ಎಂದಿಗೂ ಶೋಕಪಡಬಾರದು ॥೧೭॥

ನಿರ್ದೋಷನೂ ಸರ್ವಭೂತದಯಾಶಾಲಿಯೂ ಆದ ನಮ್ಮ ಲಕ್ಷ್ಮಣನು, ಅವನಲ್ಲಿ ಸರ್ವದಾ ಉತ್ತಮವಾದ ಸೇವಕವೃತ್ತಿಯನ್ನು ಕೈಗೊಂಡಿರುವನು. ಮಹಾತ್ಮನಾದ ಅವನಿಗೆ, ಇದೇ ದೊಡ್ಡ ಲಾಭವು॥೧೮॥

ಕೀರ್ತಿಭೂತಾಂ ಪತಾಕಾಂ ಯೋ ಲೋಕೇ ಭ್ರಾಮಯತಿ ಪ್ರಭುಃ ।
ರಾಮಃ ಸತ್ಯವ್ರತಪರಃ ಕಿಂ ನ ಪ್ರಾಪ್ತಸ್ತವಾತ್ಮಜಃ ॥೧೯॥
ವ್ಯಕ್ತಂ ರಾಮಸ್ಯ ವಿಜ್ಞಾಯ ಶೌರ್ಯಮಾಹಾತ್ಮ್ಯಮುತ್ತಮಮ್ ।
ನ ಗಾತ್ರಮಂಶುಭಿಃ ಸೂರ್ಯಃ ಸನ್ತಾಪಯಿತುಮರ್ಹತಿ ॥೨೦॥
ಶಿವಃ ಸರ್ವೇಷು ಕಾಲೇಷು ಕಾನನೇಭ್ಯೋ ವಿನಿಸ್ಸೃತಃ ।
ರಾಘವಂ ಯುಕ್ತಶೀತೋಷ್ಣಃ ಸೇವಿಷ್ಯತಿ ಸುಖೋನಿಲಃ ॥೨೧॥
ಶಯಾನಮಸಹಂ ರಾತ್ರೌ ಪಿತೇವಾಭಿಪರಿಷ್ವಜ್ಯ ।
ರಶ್ಮಿಭಿಃ ಸಂಸ್ಪೃಶ್ಯ ಶೀತೈಃ ಚನ್ದ್ರಮಾ ಹ್ಲಾದಯಿಷ್ಯತಿ ॥೨೨॥
ಸ ವೀರಃ ಪುರುಷವ್ಯಾಘ್ರಃ ಸ್ವಬಾಹುತಲಮಾಶ್ರಿತಃ ।
ಅರಣ್ಯಸ್ಥೋಪ್ಯಸಂತ್ರಸ್ತೋ ವೇಶ್ಮನೀವ ನಿವತ್ಸ್ಯತಿ ॥೨೩॥
ಯಸ್ಯೇಷುಪಥಮಾಸಾದ್ಯ ವಿನಾಶಂ ಯಾನ್ತಿ ಶತ್ರವಃ ।
ಕಥಂ ನ ಪೃಥಿವೀ ತಸ್ಯ ಶಾಸನೇ ಸ್ಥಾತುಮರ್ಹತಿ ॥೨೪॥
ಯಾ ಶ್ರೀಃ ಶೌರ್ಯಂ ಚ ರಾಮಸ್ಯ ಯಾ ಚ ಕಲ್ಯಾಣಸತ್ವತಾ ।
ನಿವೃತ್ತಾರಣ್ಯವಾಸಶ್ಚ ಕ್ಷಿಪ್ರಂ ರಾಜ್ಯಮವಾಪ್ಸ್ಯತಿ ॥೨೫॥

ಸತ್ಯವ್ರತಪರನೂ ಸರ್ವಸಮರ್ಥನೂ ಆಗಿರುವ ಯಾವ ರಾಮಚಂದ್ರನು-ತನ್ನ ಕೀರ್ತಿ ರೂಪವಾದ ಧ್ವಜವನ್ನು ಲೋಕದಲ್ಲೆಲ್ಲ ಬೀಸುತ್ತಿರುವನೋ, ಅಂತಹ ನಿನ್ನ ಮಗನು ಯಾವ ಸುಖವನ್ನು ತಾನೆ ಹೊಂದಲಾರನು? ॥೧೯॥

ರಾಮನ ಶೌರ್ಯವನ್ನೂ ಲೋಕೋತ್ತರವಾದ ಮಹಿಮೆಯನ್ನೂ ತಿಳಿದುಕೊಂಡು, ಸೂರ್ಯನೂ ಕೂಡ ತನ್ನ ಕಿರಣಗಳಿಂದ ರಾಮನ ಶರೀರವನ್ನು ಸಂತಾಪಪಡಿಸಲಾರನು ॥೨೦॥

ಅರಣ್ಯದಲ್ಲಿ ವೃಕ್ಷಷಂಡಗಳ ದೆಸೆಯಿಂದ ಹೊರಟು ಸುಖಕರವಾಗಿ ಬೀಸುವ ಮಂದವಾಯುವು, ಮಂಗಳಕರವಾಗಿಯೂ ತಕ್ಕಷ್ಟು ಶೀತೋಷ್ಣವಾಗಿಯೂ ಸರ್ವಕಾಲದಲ್ಲಿಯೂ ರಾಮನನ್ನು ಸೇವಿಸುವುದು ॥೨೧॥

ರಾತ್ರಿಯಲ್ಲಿ ಮಲಗಿರುವ ನಿರ್ದೋಷನಾದ ರಾಮನನ್ನು, ಚಂದ್ರನು ತನ್ನ ಶೀತಳವಾದ ಕಿರಣಗಳಿಂದ ತಂದೆಯೋಪಾದಿಯಲ್ಲಿ ಆಲಿಂಗಿಸುತ ಆಹ್ಲಾದಪಡಿಸುವನು ॥೨೨॥

ಪುರುಷವ್ಯಾಘ್ರನಾದ ಆ ಮಹಾವೀರನು, ತನ್ನ ಬಾಹುಬಲವನ್ನು ಆಶ್ರಯಿಸಿದವನಾಗಿ, ಅರಣ್ಯದಲ್ಲಿದ್ದರೂ ಮನೆಯಲ್ಲಿದ್ದಂತೆಯೇ ನಿರ್ಭಯವಾಗಿ ವಾಸಮಾಡುವನು ॥೨೩॥

ಯಾವನ ಬಾಣವಾರ್ಗಕ್ಕೆ ಗುರಿಯಾಗಿ ಸಕಲಶತ್ರುಗಳೂ ನಿಶ್ಶೇಷವಾಗಿ ನಾಶಹೊಂದುವರೋ, ಅಂಥವನಿಗೆ ಭೂಮಿಯು ಹೇಗೆತಾನೆ ಆಜ್ಞಾನುವರ್ತಿಯಾಗಿರಲಾರದು? ॥೨೪॥

ನಮ್ಮ ರಾಮನ ಯಾವ ದಿವ್ಯವಾದ ತೇಜಸ್ಸೂ-ಶೌರ್ಯವೂ-ಮಹಾಸತ್ವಸಂಪತ್ತಿಯೂ ಇರುವುವೋ, ಇವುಗಳ ಮಹಿಮೆಯಿಂದಲೇ-ಅವನು ಅರಣ್ಯವಾಸದಿಂದ ಹಿಂದಿರುಗಿ ಒಂದು ಬೇಗನೆ ರಾಜ್ಯವನ್ನು ಪಡೆಯುವನು ॥೨೫॥

ಸೂರ್ಯಸ್ಯಾಪಿ ಭವೇತ್ ಸೂರ್ಯೋ ಹ್ಯಗ್ನೇರಗ್ನಿಃ ಪ್ರಭೋಃ ಪ್ರಭುಃ ।
ಶ್ರಿಯಃ ಶ್ರೀಶ್ಚ ಭವೇದಗ್ರ್ಯಾ ಕೀರ್ತಿಃ ಕೀರ್ತ್ಯಾಃ ಕ್ಷಮಾಕ್ಷಮಾ।
ದೈವತಂ ದೇವತಾನಾಂ ಚ ಭೂತಾನಾಂ ಭೂತಸತ್ತಮಃ ॥೬೬॥
ತಸ್ಯ ಕೇ ಹ್ಯಗುಣಾದೇವಿ ರಾಷ್ಟ್ರೇ ವಾಪ್ಯಥವಾ ಪುರೇ ॥೬೭॥
ಪೃಥಿವ್ಯಾ ಸಹ ವೈದೇಹ್ಯಾ ಶ್ರಿಯಾ ಚ ಪುರುಷರ್ಷಭಃ ।
ಕ್ಷಿಪ್ರಂ ತಿಸೃಭಿರೇತಾಭಿಃ ಸಹ ರಾಮೋಭಿಷೇಕ್ಷ್ಯತೇ ॥೬೮॥
ಕುಶಚೀರಧರಂ ವೀರಂ ಗಚ್ಛನ್ತಮಪರಾಜಿತಮ್ ।
ಸೀತೇವಾನುಗತಾ ಲಕ್ಷ್ಮೀಃ ತಸ್ಯ ಕಿಂ ನಾಮ ದುರ್ಲಭಮ್ ॥೬೯॥
ಧನುರ್ಧರವರೋ ಯಸ್ಯ ಬಾಣಖಡ್ಗಾಸ್ತ್ರಭೃತ್ ಸ್ವಯಮ್ ।
ಲಕ್ಷ್ಮಣೋ ವ್ರಜತಿ ಹ್ಯಗ್ರೇ ತಸ್ಯ ಕಿಂ ನಾಮ ದುರ್ಲಭಮ್ ॥೭೦॥
ನಿವೃತ್ತವನವಾಸಂ ತಂ ದ್ರಷ್ಟಾಸಿ ಪುನರಾಗತಮ್ ।
ಜಹಿ ಶೋಕಂ ಚ ಮೋಹಂ ಚ ದೇವಿ ಸತ್ಯಂ ಬ್ರವೀಮಿ ತೇ ॥೭೧॥
ಶಿರಸಾ ಚರಣಾವೇತೌ ವನ್ದಮಾನಮನಿನ್ದಿತೇ ।
ಪುನರ್ದ್ರಕ್ಷ್ಯಸಿ ಕಲ್ಯಾಣಿ ಪುತ್ರಂ ಚನ್ದ್ರಮಿವೋದಿತಮ್ ॥೭೨॥

ನಮ್ಮ ರಾಮನು, ಸೂರ್ಯನಿಗೂ ಸೂರ್ಯನಾಗಿಯೂ, ಅಗ್ನಿಗೂ ಅಗ್ನಿಯಾಗಿಯೂ, ಪ್ರಭುವಿಗೆಲ್ಲ ಪ್ರಭುವಾಗಿಯೂ, ಲಕ್ಷ್ಮಿಗೆ ಲಕ್ಷ್ಮಿಯಾಗಿಯೂ, ಕೀರ್ತಿಗೆಲ್ಲ ಉತ್ತಮವಾದ ಕೀರ್ತಿಯಾಗಿಯೂ, ಕ್ಷಮೆಗೆ ಕ್ಷಮೆಯಾಗಿಯೂ, ದೇವತೆಗಳಿಗೆಲ್ಲ ದೇವತೆಯಾಗಿಯೂ, ಸಮಸ್ತಭೂತಗಳಿಗೂ ಉತ್ತಮಭೂತರೂಪನಾಗಿಯೂ ಇರುವನು. ಎಲೌ! ಕೌಸಲ್ಯೆ! ಇಂತಹ ಮಹಾನುಭಾವನಾದ ರಾಮನಿಗೆ, ರಾಷ್ಟ್ರದಲ್ಲಿಯಾಗಲಿ—ಅಥವಾ ಪಟ್ಟಣದಲ್ಲಿಯಾಗಲಿ ಯಾವ ಅವಗುಣಗಳು ಪ್ರತಿಬಂಧಕವಾಗಿರುವುವು? ॥೬೬—೬೭॥

ಪುರುಷಶ್ರೇಷ್ಠನಾದ ರಾಮನು, ಭೂಮಿಯೊಡನೆಯೂ ಸೀತೆಯೊಡನೆಯೂ ವಿಜಯಲಕ್ಷ್ಮಿಯೊಡನೆಯೂ ಬೇಗನೆ ಪಟ್ಟಾಭಿಷೇಕವಾಡಿಸಿಕೊಳ್ಳುವನು ॥೬೮॥

ನಾರುಮಡಿಯನ್ನುಟ್ಟುಕೊಂಡು ಅರಣ್ಯಕ್ಕೆ ಹೋಗುತಿರುವ ಅಪರಾಜಿತನಾದ ಯಾವ ಮಹಾವೀರನನ್ನು—ಸೀತೆಯಂತೆಯೇ-ಲಕ್ಷ್ಮಿಯೂ ಅನುಸರಿಸಿ ಹೊರಟಿಳೋ, ಅಂತಹ ಮಹಾನುಭಾವನಿಗೆ ಏನುತಾನೆ ದುರ್ಲಭವು? ॥೬೯॥

ಧನುರ್ಧಾರಿಗಳಲ್ಲೆಲ್ಲ ಉತ್ತಮನೆನಿಸಿದ ಲಕ್ಷ್ಮಣನು—ಖಡ್ಗವನ್ನೂ ಅಸ್ತ್ರವನ್ನೂ ಧರಿಸಿ-ತಾನು ಯಾವನಿಗೆ ಮುಂದುಗಡೆ ಹೋಗುತಿರುವನೋ, ಅಂಥವನಿಗೆ ಏನುತಾನೆ ದುರ್ಲಭವು? ॥

ಎಲೌ ದೇವಿ! ಅರಣ್ಯವಾಸವನ್ನು ಕಳೆದುಕೊಂಡು ಪುನಃ ಬಂದಂತಹ ಆ ರಾಮನನ್ನು, ನೀನು ಬೇಗನೆ ನೋಡುವೆ. ಈ ಶೋಕವನ್ನೂ ಮೋಹವನ್ನೂ ಬಿಟ್ಟುಬಿಡು. ನಾನು ನಿನಗೆ ದಿಟವಾಗಿ ಹೇಳುವೆನು ॥೭೧॥

ಎಲೌ ಅನಿಂದಿತೆ! ಕಲ್ಯಾಣಿ! ತನ್ನ ಶಿರಸ್ಸಿನಿಂದ ನಿನ್ನ ಈ ಪಾದಗಳನ್ನು ನಮಸ್ಕರಿಸುತ-ಆಗತಾನೆ ಉದಯಿಸಿದ ಚಂದ್ರನಂತೆ ಆಹ್ಲಾದವುಂಟುಮಾಡುವ ನಿನ್ನ ಮಗನನ್ನು ನೀನು ಪುನಃ ಬೇಗನೆ ನೋಡುವೆ ॥೭೨॥

ಪುನಃ ಪ್ರವಿಷ್ಟಂ ದೃಷ್ಟ್ವಾ ತಂ ಅಭಿಷಿಕ್ತಂ ಮಹಾಶ್ರಿಯಮ್ ।
ಸಮುತ್ಸೃಜಸಿ ನೇತ್ರಾಭ್ಯಾಂ ಕ್ಷಿಪ್ರಮಾನನ್ದಜಂ ಪಯಃ ॥೩೩॥
ನಾರ್ಹಾ ತ್ವಂ ಶೋಚಿತುಂ ದೇವಿ ಯಸ್ಯಾಸ್ತೇ ರಾಘವಃ ಸುತಃ ।
ನ ಹಿ ರಾಮಾತ್ ಪರೋ ಲೋಕೇ ವಿದ್ಯತೇ ಸತ್ಪಥೇ ಸ್ಥಿತಃ ॥೩೪॥
ಆಶ್ವಾಸಯನ್ತೀ ವಿವಿಧೈಶ್ಚ ವಾಕ್ಯೈಃ ವಾಕ್ಯೋಪಚಾರೈಃ ಕುಶಲಾನವದ್ಯಾ।
ರಾಮಸ್ಯತಾಂಮಾತರಮೇವಮುಕ್ತ್ವಾದೇವೀಸುಮಿತ್ರಾ ವಿರರಾಮರಾಮಾ॥
ನಿಶಮ್ಯ ತಲ್ಲಕ್ಷ್ಮಣಮಾತೃವಾಕ್ಯಂ ರಾಮಸ್ಯ ಮಾತುರ್ನರದೇವಪತ್ನ್ಯಾಃ ।
ಸದ್ಯಃ ಶರೀರೇ ವಿನನಾಶ ಶೋಕಃ ಶರದ್ಗತೋ ಮೇಘಇವಾಲ್ಪತೋಯಃ ॥

ಇತಿ ಶ್ರೀಮದಯೋಧ್ಯಾಕಾಣ್ಡೇ ಕೌಸಲ್ಯಾಂ ಪ್ರತಿ ಸುಮಿತ್ರಾಖ್ವಸನ
ವಾಕ್ಯಂ ನಾಮ ಚತುರ್ದಶಃ ಸರ್ಗಃ.



ಪುನಃ ಅಯೋಧ್ಯಾನಗರಿಯನ್ನು ಪ್ರವೇಶಿಸಿ ಪಟ್ಟಾಭಿಷಿಕ್ತನಾಗಿ ಮಹಾಕಾಂತಿಸಂಪನ್ನನಾಗಿರುವ ನಿನ್ನ ಮಗನನ್ನು ನೋಡಿ, ನೀನು ಬೇಗನೆ ಇದೇ ಕಣ್ಣುಗಳಿಂದಲೇ ಆನಂದಬಾಷ್ಪವನ್ನು ಸುರಿಯಿಸುವೆ ॥೩೩॥

ಎಲೌ ದೇವಿ! ಯಾವ ನಿನಗೆ ರಾಮನು ಮಗನಾಗಿರುವನೋ, ಅಂತಹ ಪುಣ್ಯಾತ್ಮಳಾದ ನೀನು ದುಃಖಪಡುವುದು ಯೋಗ್ಯವಲ್ಲ. ಈ ಮೂರುಲೋಕದಲ್ಲಿಯೂ, ರಾಮನಿಗಿಂತ ಹೆಚ್ಚಾಗಿ ಸನ್ಮಾರ್ಗದಲ್ಲಿರುವವನು ಯಾವನೊಬ್ಬನೂ ಇಲ್ಲವಲ್ಲವೆ! (ಎಂದು ಸುಮಿತ್ರೆ ಹೇಳಿದಳು) ॥೩೪॥

ಎಲೌ ಪಾರ್ವತಿ! ಈ ರೀತಿಯಾಗಿ ನಾನಾವಿಧವಾದ ಮಾತುಗಳಿಂದಲೂ ಉಪಚಾರೋಕ್ತಿಗಳಿಂದಲೂ ಆಶ್ವಾಸನೆಮಾಡುತಿರುವ-ಕುಶಲಳೂ ನಿರ್ದೋಷಳೂ ಆದ-ಸುಮಿತ್ರೆಯು, ಕೌಸಲ್ಯೆಯನ್ನು ಕುರಿತು ಇದುವರೆಗೂ ಹೇಳಿದವಳಾಗಿ, ಬಳಿಕ ಸುಮ್ಮನಾದಳು ॥೩೫॥

ಹೀಗೆ ಹೇಳಿದ ಸುಮಿತ್ರೆಯ ವಚನವನ್ನು ಕೇಳಿ, ದಶರಥರಾಜನ ಪತ್ನಿಯಾದ ಕೌಸಲ್ಯೆಗೆ ಶರತ್ಕಾಲದಲ್ಲಿ ಅಲ್ಪಜಲಯುಕ್ತವಾದ ಮೇಘದಂತೆ, ಶರೀರದಲ್ಲಿದ್ದ ಆ ಶೋಕವೆಲ್ಲವೂ ತಟ್ಟನೆ ಅದೃಶ್ಯವಾಯ್ತು ॥೩೬॥

ಇದು ಅಯೋಧ್ಯಾಕಾಂಡದಲ್ಲಿ ಸುಮಿತ್ರೆಯು ಮಾಡಿದ ಕೌಸಲ್ಯಾಸಮಾಶ್ವಾಸನ
ನಿರೂಪಣವೆಂಬ ಹದಿನಾಲ್ಕನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಪಞ್ಚಾದಶಃ ಸರ್ಗಃ.

ಶ್ರೀ ಶಿವಉವಾಚ.

ತತೋ ದಶರಥೋ ರಾಜಾ ರಾಮೇ ಚಿತ್ರಗಿರಿಂ ಗತೇ ।
ರಾಮಂ ದೂರಗತಂ ಜ್ಞಾತ್ವಾ ಕೌಸಲ್ಯಾಮಿದಮಬ್ರವೀತ್ ॥೧॥
ನ ತೇ ಮನುಷ್ಯಾದೇವಾಸ್ತೇ ಯೇ ಚಾರು ಶುಭಕುಣ್ಡಲಮ್ ।
ಮುಖಂ ದ್ರಕ್ಷ್ಯನ್ತಿ ರಾಮಸ್ಯ ವರ್ಷೇ ಪಞ್ಚದಶೇ ಪುನಃ ॥೨॥
ಪದ್ಮಪತ್ರೇಕ್ಷಣಂ ಸುಭ್ರು ಸುದಂಷ್ಟ್ರಂ ಚಾರುನಾಸಿಕಮ್ ।
ಧನ್ಯಾದ್ರಕ್ಷ್ಯನ್ತಿ ರಾಮಸ್ಯ ತಾರಾಧಿಪನಿಭಂ ಮುಖಮ್ ॥೩॥
ಇತ್ಯೇವಮುಕ್ತ್ವಾ ಧರ್ಮಾತ್ಮಾ ರಾಮಂ ಧ್ಯಾಯನ್ ಮುಹುರ್ಮುಹುಃ ।
ರಾಮೇತಿ ವಿಲಪನ್ನೇವ ಸ್ವರ್ಗಂ ಪ್ರಾಪ ಮಹೀಪತಿಃ ॥೪॥

ಶ್ರೀ ಪಾರ್ವತ್ಯುವಾಚ.

ರಾಮಸ್ಯ ದರ್ಶನಾದೇವ ಸ್ಮರಣಾತ್ ಸ್ಪರ್ಶನಾದಪಿ ।
ಪಾಪಿನೋಪಿ ಪ್ರಮುಚ್ಯನ್ತೇ ಕರ್ಮಬನ್ಧಾದ್ಯಮಾನ್ತಕ ॥೫॥

ಅಯೋಧ್ಯಾಕಾಂಡದಲ್ಲಿ ಹದಿನಯ್ದನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಆಬಳಿಕ, ರಾಮನು ಚಿತ್ರಕೂಟಪರ್ವತಕ್ಕೆ ಹೋಗಲಾಗಿ, ದಶರಥಮಹಾರಾಜನು, ರಾಮನು ಬಹುದೂರ ಹೊರಟುಹೋದನೆಂದು ತಿಳಿದುಕೊಂಡು ಕೌಸಲ್ಯೆಯೊಡನೆ ಹೀಗೆ ಹೇಳಿದನು ॥೧॥

ಎಲೌಕೌಸಲ್ಯೆ! ಈಗ ನಮ್ಮ ರಾಮನಿಗೆ ನಿಯಮಿತವಾಗಿರುವ ಹದಿನಾಲ್ಕುವರ್ಷ ಅರಣ್ಯವಾಸ ಕಳೆದಮೇಲೆ-ಹದಿನಯ್ದನೆಯ ವರ್ಷದಲ್ಲಿ-ಅತಿಸುಂದರವಾಗಿ ದಿವ್ಯಕುಂಡಲಗಳಿಂದ ವಿರಾಜಿಸುತ್ತಿರುವ ರಾಮನ ಮುಖವನ್ನು ಯಾರು ನೋಡುವರೋ, ಅವರು ಮನುಷ್ಯರಲ್ಲ;—ದೇವತೆಗಳು॥

ಕಮಲದಳದಂತೆ ನೇತ್ರವುಳ್ಳುದಾಗಿಯೂ, ಸುಂದರವಾದ ಹುಬ್ಬುಗಳಿಂದ ವಿರಾಜಿಸುತಲೂ, ಉತ್ತಮವಾದ ದಂತಪಂಕ್ತಿಯಿಂದ ಶೋಭಿಸುತಲೂ, ಎಸಳಾದ ಮೂಗಿನಿಂದ ಪ್ರಕಾಶಿಸುತಲೂ ಇರುವ, ಪೂರ್ಣಚಂದ್ರಸಮಾನವಾದ ರಾಮನ ಮುಖವನ್ನು, ಕೇವಲ ಪುಣ್ಯಶಾಲಿಗಳು ನೋಡುವರು (ಎಂದು ದಶರಥನು ಹೇಳಿದನು) ॥೩॥

ಎಲೌ ಪಾರ್ವತಿ! ಹೀಗೆಂದು ಹೇಳಿ, ಧರ್ಮಾತ್ಮನಾದ ಆ ದಶರಥನು, ರಾಮನನ್ನೇ ಧ್ಯಾನಿಸುತ, ರಾಮರಾಮ ಎಂದು ವಿಲಾಪವಮಾಡುತಲೇ ಸ್ವರ್ಗವನ್ನು ಹೊಂದಿಬಿಟ್ಟನು ॥೪॥

ಪಾರ್ವತೀದೇವಿಯು ಪ್ರಶ್ನೆಮಾಡುವಳು:—

ಯಮನಿಗೂ ಅಂತಕನಾದ ಪರಮೇಶ್ವರನೆ! ಎಂತಹ ಪಾಪಿಗಳಾದರೂ, ಶ್ರೀರಾಮನ ದರ್ಶನಮಾತ್ರದಿಂದಲೂ-ಸ್ಮರಣೆಯಿಂದಲೂ-ಸ್ಪರ್ಶನದಿಂದಲೂ-ಅಕ್ಷಣವೇ ಕರ್ಮಬಂಧದ ದೆಸೆಯಿಂದ ಬಿಡುಗಡೆಹೊಂದುವರು ॥೫॥

ಪುತ್ರರೂಪೇಣ ಜಾತೇಸ್ಮಿನ್ ತಾದೃಶೇ ಪರಮಾತ್ಮನಿ ।
ಮುಕ್ತಿಂ ವಿನಾ ನೃಪಃ ಸ್ವರ್ಗಂ ಜಗಾಮೈತತ್ ಕಥಂ ವದ ॥೬॥

ಶ್ರೀ ಶಿವಉವಾಚ.

ಪುರಾ ವಿಷ್ಣುಃ ಪುತ್ರಕಾಮಂ ಮನುಂ ಪ್ರಾಹೇತ್ಥಮಿಚ್ಛೇ ।
ತ್ವಾಂ ತ್ವಂ ಜನ್ಮತ್ರಯೇ ಪುತ್ರಂ ಲಬ್ಧ್ವಾನ್ತೇ ಮುಕ್ತಿಮೇಷ್ಯಸಿ ।
ತಸ್ಮಾತ್ ತದ್ವರಮಧ್ಯೇ ತು ತಸ್ಯ ಮೋಕ್ಷಃ ಕಥಂ ಭವೇತ್ ॥೭॥
ಕಿಞ್ಚಾಧಿಕಾರಿಣಾಂ ಮೋಕ್ಷೋ ನಾಸ್ತಿ ತದ್ಭೋಗಮನ್ತರಾ ।
ಇತಿ ವೇದಾನ್ತಸಿದ್ಧಾನ್ತಃ ತಸ್ಮಾದ್ರಾಜಾ ನ ಮುಕ್ತಿಭಾಕ್ ॥೮॥
ಜನ್ಮತ್ರಯಾನ್ತೇ ಮೋಕ್ಷಃಸ್ಯಾತ್ ನಾಸತ್ಯಂ ವಿಷ್ಣುಭಾಷಿತಮ್ ॥೯॥
ಮೃತೇ ತಸ್ಮಿನ್ ದಶರಥೇ ಮಹಾಶೋಕನಿಪೀಡಿತೇ ।
ವಸಿಷ್ಠಃ ಪ್ರಯಯೌ ತತ್ರ ಪ್ರಾತರ್ಮನ್ತ್ರಿಭಿರಾವೃತಃ ॥೧೦॥
ತೈಲದ್ರೋಣ್ಯಾಂ ದಶರಥಂ ಕ್ಷೇಪಯಾಮಾಸ ವೈ ತದಾ ।
ರಾಮೇ ಗತೇ ಮೃತೇ ರಾಜ್ಞೀ ವಸಿಷ್ಠೋ ವಾಕ್ಯಮಬ್ರವೀತ್ ॥೧೧॥

ಹೀಗಿರುವಾಗ, ಅಂತಹ ಈ ಪರಮಾತ್ಮನು ಪುತ್ರರೂಪದಿಂದ ಅವತರಿಸಿರಲಾಗಿ, ಆ ದಶರಥರಾಜನು ಮುಕ್ತಿಯನ್ನು ಪಡೆಯದೆ ಸ್ವರ್ಗವನ್ನು ಹೊಂದಿದುದು ಹೇಗೆ? ಇದನ್ನು ಅನುಗ್ರಹದಿಂದ ಅಪ್ಪಣೆಕೊಡಿಸಬೇಕು ॥೬॥

ಶ್ರೀ ಪರಮೇಶ್ವರನು ಉತ್ತರ ಹೇಳುವನು :—

ಎಲೌ ಅಂಬಿಕೆ! ಪೂರ್ವದಲ್ಲಿ ಪುತ್ರಕಾಮನಾದ ಮನುವನ್ನು ಕುರಿತು, ಶ್ರೀಮನ್ಮಹಾವಿಷ್ಣುವು 'ನೀನು ನನ್ನನ್ನು ಮೂರುಜನ್ಮಗಳಲ್ಲಿ ಮಗನನ್ನಾಗಿ ಪಡೆದು ಕೊನೆಗೆ ಮುಕ್ತಿಯನ್ನು ಹೊಂದುವೆ' ಎಂದು ಹೇಳಿದ್ದನು. ಆದುದರಿಂದ, ಆ ವರದ ಮಧ್ಯಕಾಲದಲ್ಲಿಯೇ ಅವನಿಗೆ ಹೇಗೆ ಮೋಕ್ಷವುಂಟಾದೀತು? ॥೭॥

ಮತ್ತು, ಅಧಿಕಾರಿಗಳಾದವರಿಗೆ (ಒಂದೊಂದು ಕೆಲಸದಲ್ಲಿ ನಿಯುಮಿತರಾದವರಿಗೆ ಅಧಿಕಾರಿಗಳೆಂದು ವ್ಯವಹಾರವು. ಬ್ರಹ್ಮ ವಿಷ್ಣು ಮುಂತಾದವರೆಲ್ಲ ಅಧಿಕಾರಿಗಳೆಂದು ಹೇಳಲ್ಪಡುವರು.) ಆ ಅಧಿಕಾರದ ಅವಧಿ ಮುಗಿಯುವವರೆಗೂ ಅದನ್ನು ಅನುಭವಿಸದಲ್ಲದೆ ಮುಕ್ತಿಯಿಲ್ಲವೆಂದು ವೇದಾಂತಸಿದ್ಧಾಂತವಿರುವುದು. ಈ ಕಾರಣದಿಂದಲೂ, ದಶರಥರಾಜನು ಮುಕ್ತಿಹೊಂದಲಿಲ್ಲವೆಂದು ತಿಳಿಯಬೇಕು. ಅದುಕಾರಣ, ಮೂರು ಜನ್ಮಗಳು ಕಳೆದ ಬಳಿಕ ಅವನಿಗೆ ಮೋಕ್ಷವುಂಟಾಗುವುದು. ಶ್ರೀಮಹಾವಿಷ್ಣುವಿನ ಮಾತು ಎಂದಿಗೂ ಅಸತ್ಯವಾಗುವುದಿಲ್ಲ ॥೮-೯॥

ಈ ವಿಷಯವಿರಲಿ. ಆಗ ದಶರಥನು ಮಹಾ ಶೋಕಪೀಡಿತನಾಗಿ ಮರಣಹೊಂದಲಾಗಿ, ಬೆಳಗ್ಗೆ ವಸಿಷ್ಠಮುನಿಯು ಮಂತ್ರಿಗಳಿಂದ ಪರಿವೃತನಾಗಿ ಅಂತಃಪುರಕ್ಕೆ ಹೋದನು ॥೧೦॥

ಆಗ, ಆ ದಶರಥನ ದೇಹವನ್ನು ಎಣ್ಣೆಯಕೊಪ್ಪರಿಗೆಯಲ್ಲಿಡಿಸಿದನು. ರಾಮನು ಅರಣ್ಯವಾಸಕ್ಕೆ ಹೋಗಿರಲಾಗಿ, ದಶರಥನು ಮರಣಹೊಂದಲಾಗಿ, ಮುಂದೆ ಏನುಮಾಡಬೇಕೆಂಬ ವಿಷಯವನ್ನು ಕುರಿತು, ವಸಿಷ್ಠಮಹರ್ಷಿಯು 'ನಾವು ಈಗ ಶತ್ರುಘ್ನಸಹಿತನಾದ ಭರತನನ್ನು

ಅನೇಪಾಮ್ಯಹೋ ವಯಂ ಶೀಘ್ರಂ ಭರತಂ ಸಯವೀಯಸಮ್ ।
ವಿಸೃಜ್ಯನ್ತಾಂ ಗೂಢದೂತಾಃ ಭರತಾಗಮನಂ ಪ್ರತಿ ॥೧೦॥
ವಸಿಷ್ಠವಚನಂ ಶ್ರುತ್ವಾ ಸುಮನೊತ್ತಮೇ ಮನ್ತ್ರಿಸತ್ತಮಃ ।
ತಥಾ ಚಕ್ರೇ ಮಹಾತೇಜಾಃ ವಸಿಷ್ಠಾನುಮತೇ ಸ್ಥಿತಃ ॥೧೩॥
ಆಯಯೌ ಭರತಃ ಶೀಘ್ರಂ ಸಹ ದೂತೈಃ ಸಹಾನುಜಃ ॥೧೪॥
ಪ್ರವಿಶ್ಯ ರಾಜಭವನಂ ರಾಜಲಕ್ಷ್ಮಣವರ್ಜಿತವಮ್ ।
ಅಪಶ್ಯತ್ ಕೈಕಯೀಂ ತತ್ರ ಹ್ಯೇಕಾಮೇಕಾಸನೇ ಸ್ಥಿತಾಮ್ ॥೧೫॥
ನನಾಮ ಶಿರಸಾ ಭಕ್ತ್ಯಾ ಮಾತೃಭಕ್ತಿಸಮನ್ವಿತಃ ॥೧೬॥
ಆಗತಂ ಭರತಂ ದೃಷ್ಟ್ವಾ ಕೈಕೇಯೀ ಪ್ರೇಮಸಮ್ಭ್ರಮಾತ್ ।
ಮೂರ್ಧ್ನ್ಯುಪಾಘ್ರಾಯ ಪಪ್ರಚ್ಛ ಕುಶಲಂ ಸ್ವಕುಲಸ್ಯ ಸಾ ॥೧೭॥
ಅಥ ಪೃಷ್ಟಃ ಸ ಭರತೋ ಮಾತ್ರಾ ಚಿನ್ತಾಕುಲೇನ್ದ್ರಿಯಃ ।
ದೂಯಮಾನೇನ ಮನಸಾ ಮಾತರಂ ಸಮಪೃಚ್ಛತ ॥೧೮॥
ಮಾತಃ ಪಿತಾ ಮೇ ಕುತ್ರಾಸ್ತೇ ಏಕಾ ತ್ವಮಿಹ ಸಂಸ್ಥಿತಾ ।
ತ್ವಯಾ ವಿನಾ ನ ಮೇ ತಾತಃ ಕದಾಚಿದಪಿ ಸಂಸ್ಥಿತಃ ॥೧೯॥

ಬೇಗನೆ ಕರೆಯಿಸಬೇಕು. ಆದಕ್ಕಾಗಿ ಭರತನನ್ನು ಕರೆದುಕೊಂಡು ಬರುವುದಕ್ಕೋಸ್ಕರ ರಹಸ್ಯವಾಗಿ ದೂತರು ಕಳುಹಿಸಲ್ಪಡಬೇಕು' ಎಂದು ಮಂತ್ರಿಗಳಿಗೆ ಆಜ್ಞಾಪಿಸಿದನು ॥೧೧—೧೨॥

ವಸಿಷ್ಠಮುನಿಯ ಮಾತನ್ನು ಕೇಳಿ, ಮಂತ್ರಿಶ್ರೇಷ್ಠನಾದ ಮಹಾ ತೇಜಸ್ವಿಯಾದ ಸುಮಂತ್ರನು, ವಸಿಷ್ಠರ ಆಜ್ಞಾನುಸಾರವಾಗಿ ದೂತರನ್ನು ಕಳುಹಿಸಿದನು. ಆಗ, ಭರತನು ದೂತರೊಡನೆಯೂ ತಮ್ಮನಾದ ಶತ್ರುಘ್ನನೊಡನೆಯೂ ಬೇಗನೆ ಅಯೋಧ್ಯೆಗೆ ಬಂದು ಸೇರಿದನು॥೧೩-೧೪॥

ಆ ಬಳಿಕ, ರಾಜಲಕ್ಷ್ಮಣವೊಂದೂ ಇಲ್ಲದಿರುವ ರಾಜಗೃಹವನ್ನು ಪ್ರವೇಶಿಸಿದನು. ಅಲ್ಲಿ ಏಕಾಸನಾಸೀನಳಾಗಿ ಒಬ್ಬಳೇ ಕುಳಿತಿರುವ ಕೈಕೇಯಿಯನ್ನು ಕಂಡನು. ಅನಂತರ, ಮಾತೃಭಕ್ತಿಯುಕ್ತನಾಗಿ, ತಲೆಬೊಗ್ಗಿಸಿ ಸಮಸ್ಕಾರ ಮಾಡಿದನು ॥೧೫—೧೬॥

ಆಗ, ತನ್ನ ಮಗನಾದ ಭರತನು ಬಂದುದನ್ನು ಕಂಡು, ಆ ಕೈಕೇಯಿಯು, ಪ್ರೇಮಾತಿಶಯದಿಂದ ಅವನ ಶಿರಸ್ಸಿನಲ್ಲಿ ಆಘ್ರಾಣಮಾಡಿ, ತನ್ನ ತವರುಮನೆಯವರೆಲ್ಲರ ಕ್ಷೇಮವನ್ನು ವಿಚಾರಿಸಿದಳು ॥೧೭॥

ಅನಂತರ, ತನ್ನ ತಾಯಿಯಿಂದ ಪ್ರಶ್ನೆಮಾಡಲ್ಪಟ್ಟ ಭರತನು, ಚಿಂತೆಯಿಂದ ವ್ಯಾಕುಲವಾದ ಇಂದ್ರಿಯಗಳುಳ್ಳವನಾಗಿ, ಮನಸ್ಸಿನಲ್ಲಿ ಪರಿತಾಪಪಡುತ, ಕೈಕೇಯಿಯನ್ನು ಕುರಿತು 'ಅಂಬ! ನನ್ನ ತಂದೆಯೆಲ್ಲಿರುವನು? ಇಲ್ಲಿ ನೀನೊಬ್ಬಳೇ ಕುಳಿತಿರುವೆಯಲ್ಲ! ನಿನ್ನನ್ನು ಬಿಟ್ಟು ನಮ್ಮ ತಂದೆಯು ಒಂದು ಕ್ಷಣವೂ ಇರುವುದಿಲ್ಲವಲ್ಲ! ಇದೇನು?' ಎಂದು ಪ್ರಶ್ನೆಮಾಡಿದನು ॥

ನಿಶಮ್ಯ ಪುತ್ರವಚನಂ ಕೈಕಯೀ ಪ್ರತ್ಯುವಾಚ ತಮ್ ।
ಅಹಿತಂ ಹಿತವದ್ವಾಕ್ಯಂ ತತ್ಸ್ವಭಾವಮಜಾನತೀ ॥೦೦॥
ರಾಮಂ ಚ ಲಕ್ಷ್ಮಣಂ ಸೀತಾಂ ಶೋಕೇನ ದೂರಗತಾಂ ಮುಹುಃ ।
ಯಾ ಗತಿರ್ಧರ್ಮಶೀಲಾನಾಂ ತಾಂ ಗತಿಂ ತೇ ಗತಃ ಪಿತಾ ॥೦೧॥
ತಚ್ಛ್ರುತ್ವಾ ನಿಪಪಾತೋರ್ವ್ಯಾಂ ಭರತಃ ಶೋಕಪೀಡಿತಃ ।
ಭೂಯಸ್ತಾಮಾಹ ಭರತೋ ರಾಮಃ ಸನ್ನಿಹಿತೋ ನ ಕಿಮ್ ।
ತದಾನೀಂ ಲಕ್ಷ್ಮಣೋ ವಾಪಿ ಸೀತಾ ವಾ ಕುತ್ರ ತೇ ಗತಾಃ ॥೦೨॥
ಇತಿ ಪುತ್ರವಚಃ ಶ್ರುತ್ವಾ ಕೈಕೇಯೀ ಪುನರಬ್ರವೀತ್ ॥೦೩॥
ರಾಮಸ್ಯ ಯೌವರಾಜ್ಯಾರ್ಥಂ ಪಿತ್ರಾ ತೇ ಸಮ್ಭ್ರಮಃ ಕೃತಃ ।
ತವ ರಾಜ್ಯಪ್ರದಾನಾಯ ತಸ್ಯಾಹಂ ವಿಘ್ನಮಾಚರನ್ ॥೦೪॥
ರಾಜ್ಞಾ ದತ್ತಂ ಹಿ ಮೇ ಪೂರ್ವಂ ವರದೇನ ವರದ್ವಯಮ್ ।
ಯಾಚಿತಂ ತದಿದಾನೀಂ ಮೇ ರಾಜ್ಯಮೇಕೇನ ತೇ ತಯೋಃ ॥೦೫॥
ದ್ವಿತೀಯೇನ ತು ರಾಮಸ್ಯ ವನವಾಸೋ ಮಯಾ ವೃತಃ ।
ಚತುರ್ದಶ ಸಮಾಃ ಪುತ್ರ ರೂಢ್ಯರ್ಥಂ ವಿಷಯೇ ತವ ॥೦೬॥

ಹೀಗೆ ಹೇಳುತಿರುವ ಮಗನ ಮಾತನ್ನು ಕೇಳಿ, ಅವನ ಸ್ವಭಾವವನ್ನರಿಯದ ಕೈಕೇಯಿಯು, ಅವನನ್ನು ಕುರಿತು 'ನಿಮ್ಮ ತಂದೆಯು, ದೂರವಾಗಿಹೋಗಿರುವ ರಾಮನನ್ನೂ ಲಕ್ಷ್ಮಣನನ್ನೂ ಸೀತೆಯನ್ನೂ ಕುರಿತು ಶೋಕಿಸುತ, ಧರ್ಮಾತ್ಮರಿಗೆ ಯಾವಗತಿ ಬರುವುದೋ-ಅದನ್ನು ಹೊಂದಿದನು.' ಎಂದು, ಅಹಿತವಾದ ಮಾತನ್ನು ಹಿತದಂತೆ ತೋರಿಸುತ ಹೇಳಿದಳು ॥೨೦-೨೧॥

ಇದನ್ನು ಕೇಳಿ ಶೋಕಪೀಡಿತನಾದ ಭರತನು, ಭೂಮಿಯಮೇಲೆ ಬಿದ್ದುಬಿಟ್ಟನು. ಮತ್ತೆ ಕೈಕೇಯಿಯನ್ನು ಕುರಿತು 'ಅಂಬ! ಆಗ ರಾಮನಾಗಲಿ ಲಕ್ಷ್ಮಣನಾಗಲಿ ಸೀತೆಯಾಗಲಿ ನಮ್ಮ ತಂದೆಯ ಹತ್ತಿರದಲ್ಲಿರಲಿಲ್ಲವೆ? ಹಾಗಾದರೆ ಅವರೆಲ್ಲರೂ ಎಲ್ಲಿಗೆ ಹೋದರು?' ಎಂದು ಕೇಳಿದನು. ಹೀಗೆಂದು ಕೇಳುತಿರುವ ಮಗನ ಮಾತನ್ನು ಕೇಳಿ, ಕೈಕೇಯಿಯು ಪುನಃ ಹೀಗೆ ಹೇಳಿದಳು ॥೨೨—೨೩॥

ವತ್ಸ! ಕೇಳುವನಾಗು. ನಿಮ್ಮ ತಂದೆಯು, ರಾಮನಿಗೆ ಯುವರಾಜಪಟ್ಟಾಭಿಷೇಕವಾಡುವುದಕ್ಕೋಸ್ಕರ ಪ್ರಯತ್ನಮಾಡಿದನು. ಆಗ ನಾನು ನಿನಗೆ ರಾಜ್ಯವನ್ನು ಕೊಡಿಸುವುದಕ್ಕೋಸ್ಕರ, ಆ ಪಟ್ಟಾಭಿಷೇಕಕ್ಕೆ ವಿಘ್ನಮಾಡಿದೆನು ॥೨೪॥

ಅದು ಹೇಗೆಂದರೆ,—ಪೂರ್ವದಲ್ಲಿ ನನಗೆ ವರವನ್ನು ಕೊಡಬೇಕಾದ ಸಂದರ್ಭಬಂದಾಗ, ದಶರಥನು ನನಗೆ ಎರಡು ವರಗಳನ್ನು ಕೊಟ್ಟಿದ್ದನು. ಅದನ್ನು ನಾನು ಈಗ ಕೇಳಿಕೊಂಡೆನು, ಅವುಗಳಲ್ಲಿ ಒಂದಕ್ಕೆ ನಿನ್ನ ಪಟ್ಟಾಭಿಷೇಕವನ್ನು ಫಲವನ್ನಾಗಿ ವರಿಸಿದೆನು. ಎರಡನೆಯದಕ್ಕಾದರೋ, ನೀನು ರಾಜ್ಯದಲ್ಲಿ ಚೆನ್ನಾಗಿ ಬೇರುಬಿಟ್ಟುಕೊಳ್ಳುವದಕ್ಕೋಸ್ಕರ, ರಾಮನು ಹದಿನಾಲ್ಕು ವರ್ಷಕಾಲ ಅರಣ್ಯದಲ್ಲಿ ವಾಸಮಾಡುವುದನ್ನೇ ಫಲವನ್ನಾಗಿ ವರಿಸಿದೆನು ॥೨೫—೨೬॥

ತಸ್ಮಾತ್ ಸತ್ಯಪರೋ ರಾಜಾ ರಾಜ್ಯಂ ದತ್ವಾ ತವೈವ ಹಿ ।
ರಾಮಂ ಸಂಪ್ರೇಷಯಾಮಾಸ ವನಮೇವ ಪಿತಾ ತವ ॥೨೬॥
ಸೀತಾಪ್ಯನುಗತಾ ರಾಮಂ ಪತಿವ್ರತಮುಪಾಸತೀ ।
ಸೌಭ್ರಾತ್ರಂ ದರ್ಶಯನ್ ರಾಮಂ ಅನುಯಾತೋಪಿ ಲಕ್ಷ್ಮಣಃ ॥೨೮॥
ಇತಿ ಬ್ರುವನ್ತೀಮಾಲೋಕ್ಯ ಮಾತರಂ ಪ್ರದಹನ್ನಿವ ।
ಉವಾಚ ವಚನಂ ಶ್ರೀಮಾನ್ ಭರತಃ ಕೈಕಯೀಸುತಃ ॥೨೯॥
ಅಜಾತಶತ್ರುಃ ಶ್ರೀರಾಮಃ ಪರಮಾತ್ಮಾ ಸನಾತನಃ ।
ಶ್ರೀವಿಷ್ಣೋರವತಾರೋಯಂ ಶಙ್ಕರಸ್ಯ ವಿಧೇರಪಿ ॥೩೦॥
ವ್ಯಾಪಕಃ ಸರ್ವಲೋಕೇಶಃ ಸರ್ವೇಷಾಂ ಹೃದಯಸ್ಥಿತಃ ।
ಅನ್ತರ್ಯಾಮೀ ಸರ್ವಸಾಕ್ಷೀ ಕೇವಲಶ್ಚಿತ್ಸ್ವರೂಪಧೃಕ್ ॥೩೧॥
ದರ್ಶನೀಯತಮಃ ಶ್ರೀಮಾನ್ ನಿಗ್ರಹಾನುಗ್ರಹಕ್ಷಮಃ ।
ರಾಮೋ ಧರ್ಮಭೃತಾಂ ಶ್ರೇಷ್ಠೋ ಮಮ ಜ್ಯೇಷ್ಠೋ ಮಹೀಭೃತಾಮ್ ॥
ಜ್ಯೇಷ್ಠಸ್ಯ ರಾಜತಾ ನಿತ್ಯಂ ಉಚಿತಾ ಹಿ ಕುಲಸ್ಯ ನಃ ।
ಕುಲಧರ್ಮಮವಿಜ್ಞಾಯ ತತ್ತ್ವಂ ಚಾಪಿ ಮಹಾತ್ಮನಃ ।
ಮಮಾಭಿಪ್ರಾಯಮಜ್ಞಾತ್ವಾ ಕಿಂ ಕೃತಂ ಮೂಢಯಾ ತ್ವಯಾ ॥೩೩॥

ಅದುಕಾರಣ, ಸತ್ಯಕ್ಕೆ ಕಟ್ಟುಬಿದ್ದ ನಿಮ್ಮ ತಂದೆಯಾದ ದಶರಥರಾಜನು, ನಿನಗೇ ದೊರೆತನವನ್ನು ಕೊಟ್ಟು, ರಾಮನನ್ನು ಅರಣ್ಯಕ್ಕೆ ಕಳುಹಿಸಿಬಿಟ್ಟನು ॥೨೭॥

ಅನಂತರ ತನ್ನ ಪತಿವ್ರತಾಧರ್ಮವನ್ನು ಪರಿಪಾಲಿಸಿಕೊಂಡು ಸೀತೆಯೂ ರಾಮನನ್ನು ಅನುಸರಿಸಿ ಹೊರಟಳು; ಲಕ್ಷ್ಮಣನೂ ಸೌಭ್ರಾತ್ರವನ್ನು ತೋರಿಸುತ ಹಿಂಬಾಲಿಸಿ ಹೋದನು ॥೨೮॥

ಹೀಗೆ ಹೇಳುತಿರುವ ತನ್ನ ತಾಯಿಯನ್ನು ಸುಟ್ಟುಬಿಡುವನಂತೆ ನೋಡುತಿರುವ ಕೈಕಯಿಯಾ ಪುತ್ರನಾದ-ಮಹಾ ಶ್ರೀಮಂತನಾದ ಭರತನು, ಅವಳನ್ನು ಕುರಿತು ಹೀಗೆ ಹೇಳಿದನು ॥೨೯॥

ಎಲೌ ನೀಚೆ! ನಮ್ಮ ಶ್ರೀರಾಮನಿಗೆ, ಪ್ರಪಂಚದೊಳಗಾಗಿ ಯಾರೂ ಶತ್ರುವೇ ಇಲ್ಲ; ಅವನು ಸನಾತನನಾದ ಸಾಕ್ಷಾತ್ ಪರಮಾತ್ಮನು; ಮತ್ತು, ಅವನು ಬ್ರಹ್ಮ ವಿಷ್ಣು ಮಹೇಶ್ವರ ಅವತಾರಭೂತನಾದವನು ॥೩೦॥

ಅವನು, ಸರ್ವವ್ಯಾಪಿಯೂ-ಸರ್ವಲೋಕಾಧಿಪತಿಯೂ-ಸರ್ವರ ಹೃದಯದಲ್ಲಿರತಕ್ಕವನೂ-ಅಂತರ್ಯಾಮಿಯೂ-ಸರ್ವಸಾಕ್ಷಿಯೂ-ಕೇವಲನೂ-ಜ್ಞಾನಸ್ವರೂಪನೂ ಆಗಿರುವನು ॥೩೧॥

ಮತ್ತು, ಆ ರಾಮನು, ಅತ್ಯಂತದರ್ಶನೀಯನಾದವನು; ಮಹಾಕಾಂತಿಸಂಪನ್ನನು; ನಿಗ್ರಹಾನುಗ್ರಹದಕ್ಷನಾದವನು; ಧರ್ಮಿಷ್ಠರಲ್ಲಿ ಶ್ರೇಷ್ಠನಾದವನು; ನನಗೆ ಜ್ಯೇಷ್ಠನಾದವನು; ಅವನು ಸಕಲರಾಜರಿಗೂ ಜ್ಯೇಷ್ಠನಾದವನು ॥೩೨॥

ಜ್ಯೇಷ್ಠನಾದವನಿಗೇ ದೊರೆತನವು, ನಮ್ಮ ವಂಶಕ್ಕೆ ಯೋಗ್ಯವಾದುದಲ್ಲವೆ! ಇಂತಹ ಕುಲಧರ್ಮವನ್ನೂ ಆ ಮಹಾತ್ಮನ ಸ್ವರೂಪವನ್ನೂ ತಿಳಿಯದೆ, ನನ್ನ ಅಭಿಪ್ರಾಯವನ್ನೂ ಪಡೆಯದೆ, ಮೂಢತಮಳಾದ ನೀನು ಎಂತಹ ಅಕಾರ್ಯವನ್ನು ಮಾಡಿಬಿಟ್ಟೆ! ॥೩೩॥

ರಾಮೇ ವನಂ ಗತೇ ವೀರೇ ಸೀತಯಾ ಲಕ್ಷ್ಮಣೇನ ಚ ।
ನಾಹಂ ರಾಮವಿಯೋಗೇನ ಕ್ಷಣಂ ಸ್ಥಾತುಮಿಹೋತ್ಸಹೇ ॥೩೪॥
ಯದ್ದರ್ಶನಾನ್ಮುನಿಗಣಾಃ ಆನನ್ದಾಶ್ರುಕಲಾಕ್ಷರಾಃ ।
ತಂ ವಿವಾಸ್ಯ ಮಹಾತ್ಮಾನಂ ಸುಖಂ ತಿಷ್ಠಸ್ವ ದುರ್ಮತೇ ॥೩೫॥
ಉತ್ಪನ್ನಾ ತು ಕಥಂ ಬುದ್ಧಿಃ ತವೇಯಂ ಪಾಪದರ್ಶಿನೀ ।
ಅಸಮ್ಭಾವ್ಯಾಸಿ ಮೇ ಘೋರೇ ಸಾ ತ್ವಂ ಭರ್ತೃವಿಘಾತಿನೀ ॥೩೬॥
ಪಾಪೇ ತ್ವದ್ಗರ್ಭಜಾತೋಽಹಂ ಪಾಪವಾನಸ್ಮಿ ಸಾಮ್ಪ್ರತಮ್ ।
ಅಹಮಗ್ನಿಂ ಪ್ರವೇಕ್ಷ್ಯಾಮಿ ವಿಷಂ ವಾ ಭಕ್ಷಯಾಮ್ಯಹಮ್ ॥೩೭॥
ಇತಿ ನಿರ್ಭರ್ತ್ಸ್ಯ ಕೈಕೇಯೀಂ ಕೌಸಲ್ಯಾಭವನಂ ಯಯೌ ।
ಆಲಿಙ್ಗ್ಯ ಭರತಂ ಸಾಧ್ವೀ ರಾಮಮಾತಾ ಯಶಸ್ವಿನೀ ।
ಕೃಶಾತಿದೀನವದನಾ ಸಾಶ್ರುನೇತ್ರೇದಮಬ್ರವೀತ್ ॥೩೮॥
ಇದಂ ತೇ ರಾಜ್ಯಕಾಮಸ್ಯ ರಾಜ್ಯಂ ಪ್ರಾಪ್ತಮಕಣ್ಟಕಮ್ ॥೩೯॥
ಪ್ರಸಾದ್ಯ ಚೀರವಸನಂ ಪುತ್ರಂ ಮೇ ವನವಾಸಿನಮ್ ।
ಕ್ಷಿಪ್ರಂ ಮಾಮಪಿ ಕೈಕೇಯೀ ಪ್ರಸ್ಥಾಪಯಿತುಮರ್ಹತಿ ।
ಹಿರಣ್ಯನಾಭೋ ಯತ್ರಾಸ್ತೇ ಸುತೋ ಮೇ ಸುಮಹಾಯಶಾಃ ॥೪೦॥

ಮಹಾವೀರನಾದ ರಾಮನು–ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಅರಣ್ಯಕ್ಕೆ ಹೊರಟುಹೋದ ಬಳಿಕ, ನಾನು ರಾಮನ ವಿಯೋಗವನ್ನು ಸಹಿಸಿಕೊಂಡು ಇಲ್ಲಿ ಒಂದು ಕ್ಷಣವೂ ಇರಲಾರೆನು ॥೩೪॥

ಯಾವನ ದರ್ಶನದಿಂದ–ಮುನಿಸಮೂಹವೆಲ್ಲವೂ ಆನಂದಬಾಷ್ಪದಿಂದ ಗದ್ಗದಕಂತವಾಗಿ ಸ್ತುತಿಸುವುದೋ, ಅಂತಹ ಮಹಾತ್ಮನನ್ನು ಅರಣ್ಯಕ್ಕೆ ಕಳುಹಿಸಿ, ಎಲೌ ದುಷ್ಟಬುದ್ಧಿಯೇ! ನೀನು ಸುಖವಾಗಿರು ॥೩೫॥

ನಿನಗೆ ಇಂತಹ ಪಾಪಕರವಾದ ಬುದ್ಧಿ ಹೇಗೆ ಉತ್ಪನ್ನವಾಯ್ತು? ಎಲೌ ಕ್ರೂರಳೆ! ಇಂತಹ ಭರ್ತೃಘಾತಿನಿಯಾದ ನೀನು ನನಗೆ ಸಂಭಾಷಣೆಗೆ ಹೋಗ್ಯಳಲ್ಲ ॥೩೬॥

ಎಲೌ ಪಾಪಾತ್ಮಳೆ! ನಿನ್ನ ಗರ್ಭದಿಂದ ಹುಟ್ಟಿರುವ ನಾನೂ ಈಗ ಪಾಪಿಷ್ಠನಾಗಿಬಿಟ್ಟೆನು. ನಾನು ಈಗ ಅಗ್ನಿಯನ್ನು ಪ್ರವೇಶಿಸುವೆನು; ಅಥವಾ–ವಿಷವನ್ನಾದರೂ ತಿಂದುಬಿಡುವೆನು ॥೩೭॥

ಹೀಗೆಂಬುದಾಗಿ ಕೈಕೇಯಿಯನ್ನು ಗದ್ದರಿಸಿ, ಆಭರತನು, ಅಲ್ಲಿಂದ ಕೌಸಲ್ಯೆಯ ಮನೆಗೆ ಹೋದನು. ಅಲ್ಲಿ, ದುಃಖದಿಂದ ಕೃಶಳಾಗಿಯೂ ಅತಿದೀನಮುಖಳಾಗಿಯೂ ಇದ್ದ– ಮಹಾಪತಿವ್ರತೆಯೂ ಮಹಾಕೀರ್ತಿಮಂತಳೂ ಆದ–ಕೌಸಲ್ಯೆಯು, ಭರತನನ್ನು ಆಲಿಂಗಿಸಿಕೊಂಡು, ಕಣ್ಣಿನಲ್ಲಿ ನೀರುಸುರಿಯಿಸುತ, ಅವನನ್ನು ಕುರಿತು ಈ ಮಾತನ್ನು ಹೇಳಿದಳು ॥೩೮॥

ಎಲೈ ಭರತನೆ! ಇದೋ–ರಾಜ್ಯವನ್ನು ಬಯಸುತಿದ್ದ ನಿನಗೆ ನಿಷ್ಕಂಟಕವಾದ ರಾಜ್ಯವು ಲಭಿಸಿರುವುದು. ನಿಮ್ಮ ತಾಯಿಯಾದ ಕೈಕೇಯಿಯು, ನನ್ನ ಮಗನನ್ನು ನಾರುಮಡಿಯುಡಿಸಿ ಅರಣ್ಯವಾಸಿಯನ್ನಾಗಿ ಮಾಡಿ, ಆ ಮಹಾ ಕೀರ್ತಿಯಾದ ಪುರುಷೋತ್ತಮನು ಇರುವ ಸ್ಥಳಕ್ಕೆ ನನ್ನನ್ನೂ ಬೇಗನೆ ಕಳುಹಿಸಲು ಸಿದ್ಧಳಾಗಿರುವಳು ॥೩೯—೪೦॥

ಸ ಏವಂ ಭರತೋ ವೀಕ್ಷ್ಯ ವಿಲಪನ್ತೀಂ ಶುಚಾ ಭೃಶಮ್ ।
ಪಾದೌ ಗೃಹೀತ್ವಾ ಪ್ರಾಹೇದಂ ಶೃಣು ಮಾತರ್ವಚೋ ಮಮ ॥೪೧॥
ಕೈಕೇಯ್ಯಾ ಯತ್ ಕೃತಂ ಕರ್ಮ ರಾಮರಾಜ್ಯಾಭಿಷೇಚನೇ ।
ಅಹಂ ತು ಯದಿ ಜಾನಾಮಿ ಸಾ ಮಯಾ ಬೋಧಿತಾ ಯದಿ ।
ಪಾಪಂ ಮೇಸ್ತು ಸದಾ ಮಾತಃ ಬ್ರಹ್ಮಹತ್ಯಾಶತೋದ್ಭವಮ್ ॥೪೨॥
ಅಪ್ರಾಪ್ಯ ಸದೃಶಾಂ ದಾರಾಂ ಅಸಪತ್ಯಃ ಪ್ರಮಾಯತಾಮ್ ॥೪೩॥
ಉಪದಿಷ್ಟಂ ಸುಸೂಕ್ಷ್ಮಾರ್ಥಂ ಶಾಸ್ತ್ರಂ ಯತ್ನೇನ ಧೀಮತಾ ।
ಸ ವಿಸ್ಮರತು ದುಷ್ಟಾತ್ಮಾ ಯಸ್ಯಾರ್ಯೋಽನುಮತೇ ಗತಃ ॥೪೪॥
ಮಾ ಚ ತಂ ವ್ಯಾಥಬಾಹ್ವಂಸಂ ಚನ್ದ್ರಭಾಸ್ಕರತೇಜಸಮ್ ।
ದಾಕ್ಷೀದಾಜ್ಯಸ್ಥಮಾಸೀನಂ ಯಸ್ಯಾರ್ಯೋಽನುಮತೇ ಗತಃ ॥೪೫॥
ಪಾಯಸಂ ಕೃಸರಂ ಭಾಗಂ ವೃಥಾ ಸೋಽಶ್ನಾತು ನಿರ್ಘೃಣಃ ।
ಗುರೂಂಶ್ಚಾಪ್ಯವಜಾನಾತು ಯಸ್ಯಾರ್ಯೋಽನುಮತೇ ಗತಃ ॥೪೬॥
ಪುತ್ರದಾರೈಶ್ಚ ಭೃತ್ಯೈಶ್ಚ ಸ್ವಗೃಹೇ ಪರಿವಾರಿತಃ ।
ಸ ಏಕೋ ಮೃಷ್ಟಮಶ್ನಾತು ಯಸ್ಯಾರ್ಯೋಽನುಮತೇ ಗತಃ ॥೪೭॥

ಹೀಗೆಂದು ದುಃಖದಿಂದ ಅತ್ಯಂತವಾಗಿ ವಿಲಾಪಮಾಡುತಿರುವ ಕೌಸಲ್ಯೆಯನ್ನು ನೋಡಿ, ಭರತನು ಅವಳ ಕಾಲುಗಳನ್ನು ಹಿಡಿದುಕೊಂಡು 'ಅಂಬ! ನನ್ನ ಮಾತು ಕೇಳು' ಎಂದು ಹೇಳುತ, ಈ ರೀತಿಯಾಗಿ ಹೇಳಿದನು ॥೪೧॥

ಅಮ್ಮಾ! ನಮ್ಮ ರಾಮನ ರಾಜ್ಯಾಭಿಷೇಕದ ವಿಷಯದಲ್ಲಿ ಕೈಕೇಯಿಯಿಂದ ಮಾಡಲ್ಪಟ್ಟ ಈ ಕೆಲಸವಾವುದುಂಟೋ, ಇದನ್ನು ನಾನು ತಿಳಿದಿದ್ದ ಪಕ್ಷದಲ್ಲಿಯೂ, ಅವಳು ನನ್ನಿಂದ ಬೋಧಿಸಲ್ಪಟ್ಟಿದ್ದ ಪಕ್ಷದಲ್ಲಿಯೂ ನನಗೆ ನೂರು ಬ್ರಹ್ಮಹತ್ಯೆಗಳನ್ನು ಮಾಡಿದಷ್ಟು ಪಾಪವು ಬರಲಿ ॥೪೨॥

ನಮ್ಮ ಪೂಜ್ಯನಾದ ರಾಮನು ಅರಣಕ್ಕೆ ಹೋದುದು ಯಾವನಿಗೆ ಸಮ್ಮತವೋ, ಅವನು-ಅನುರೂಪಳಾದ ಪತ್ನಿಯನ್ನು ಪಡೆಯದೆಯೇ-ಅಪುತ್ರನಾಗಿಯೇ ಮರಣಹೊಂದಲಿ; ಮತ್ತು, ಆ ದುಷ್ಟಾತ್ಮನು-ಪ್ರಾಜ್ಞನಾದ ಗುರುವಿನಿಂದ ಉಪದೇಶಿಸಲ್ಪಟ್ಟ ಅತಿ ಸೂಕ್ಷ್ಮವಾದ ಶಾಸ್ತ್ರವನ್ನು ಮರೆತುಬಿಡಲಿ ॥೪೩-೪೪॥

ಮತ್ತೂ, ನಮ್ಮ ಅಣ್ಣನು ಅರಣ್ಯಕ್ಕೆ ಹೋದುದು ಯಾವನಿಗೆ ಸಮ್ಮತವೋ, ಅವನು-ವಿಶಾಲಭುಜನಾಗಿಯೂ ಸೂರ್ಯ ಚಂದ್ರ ಸಮಾನ ತೇಜಸ್ಸ್ವನಾಗಿಯೂ ಇರುವ ರಾಜ್ಯಧುರಂಧರನಾಗಿ ಸಿಂಹಾಸನಾಸೀನನಾದ ಆ ರಾಮನನ್ನು ನೋಡದಿರಲಿ ॥೪೫॥

ನಮ್ಮ ಆರ್ಯನ ಅರಣ್ಯಗಮನವು ಯಾವನಿಗಭಿಮತವೋ, ಅಂತಹ ನಿರ್ಘೃಣನು-ಪಾಯಸವನ್ನೂ ಕೃಸರ(ಚಿಗುಳಿ)ವನ್ನೂ ಭಾಗ(ಕುರಿ)ವನ್ನೂ ನಿಷ್ಕಾರಣವಾಗಿ (ದೇವತೋದ್ದೇಶವಿಲ್ಲದೆ) ತಿನ್ನಲಿ;-ತನ್ನ ಗುರುಗಳನ್ನೂ ತಿರಸ್ಕರಿಸಲಿ ॥೪೬॥

ಆರ್ಯನಾದ ರಾಮನು ಅರಣ್ಯಕ್ಕೆ ಹೋದುದು ಯಾವನಿಗಭಿಮತವೋ, ಅವನು-ತನ್ನ ಮನೆಯಲ್ಲಿ ಪುತ್ರರಿಂದಲೂ ಪತ್ನಿಯಿಂದಲೂ ಭೃತ್ಯರಿಂದಲೂ ಪರಿವಾರಿತನಾಗಿ-ಮಧ್ಯದಲ್ಲಿ ಕುಳಿತುಕೊಂಡು-ತಾನೊಬ್ಬನೇ ಮೃಷ್ಟಾನ್ನವನ್ನು ಭುಜಿಸಲಿ ॥೪೭॥

ಯದಗ್ನಿದಾಯಕೇ ಪಾಪಂ ಯತ್ ಪಾಪಂ ಗುರುತಲ್ಪಗೇ ।
ಮಿತ್ರದ್ರೋಹೇ ಚ ಯತ್ ಪಾಪಂ ತತ್ ಪಾಪಂ ಪ್ರತಿಪದ್ಯತಾಮ್ ॥೪೪॥

ಬಹುಪುತ್ರೋ ದರಿದ್ರಶ್ಚ ಜ್ವರರೋಗಸಮನ್ವಿತಃ ।
ಸ ಭೂಯಾತ್ ಸತತಂ ಕ್ಲೇಶೀ ಯಸ್ಯಾರ್ಯೋಽನುಮತೇ ಗತಃ ॥೪೫॥

ಪಾನೀಯದೂಷಕೇ ಪಾಪಂ ತಥೈವ ವಿಷದಾಯಕೇ ।
ಬಾಲವತ್ಸಾಂ ಚ ಗಾಂ ದೋಗ್ಧ್ರೀ ಯಸ್ಯಾರ್ಯೋಽನುಮತೇ ಗತಃ ॥೪೬॥

ತಥಾ ತು ಶಪಥೈಃ ಕ್ಲಿಷ್ಟೈಃ ಶಪಮಾನಮಚೇತನಮ್ ।
ಭರತಂ ಶೋಕಸಂತಪ್ತಂ ಕೌಸಲ್ಯಾ ವಾಕ್ಯಮಬ್ರವೀತ್ ॥೪೭॥

ಶಪಥೈಃ ಶಪಮಾನೋ ಹಿ ಪ್ರಾಣಾನುಪರುಣತ್ಸಿ ಮೇ ।
ವತ್ಸ ಸತ್ಯಪ್ರತಿಜ್ಞೋಽಸಿ ಸತಾಂ ಲೋಕಾನವಾಪ್ಸ್ಯಸಿ ॥೪೮॥

ಧರ್ಮಜ್ಞಃ ಶಾಸ್ತ್ರವೇತ್ತಾಸಿ ತತ್ತ್ವಜ್ಞಶ್ಚ ವಿಶೇಷತಃ ।
ರಾಮಭಕ್ತೇ ಮತಾಂ ಶ್ರೇಷ್ಠಃ ತವಾಲಂ ವಾತ್ಯನಿನ್ದಯಾ ॥೪೯॥

ಮನೆಗೆ ಬೆಂಕಿಹಾಕಿದವನಿಗೆ ಯಾವ ಪಾಪವೋ, ಗುರುಪತ್ನೀಗಮನಮಾಡಿದವನಿಗೆ ಯಾವ ಪಾಪವೋ, ಮಿತ್ರದ್ರೋಹಮಾಡಿದವನಿಗೆ ಯಾವ ಪಾಪವೋ,-ಅಂತಹ ಪಾಪವು, ಶ್ರೀರಾಮನ ಅರಣ್ಯವಾಸವನ್ನು ಸಮ್ಮತಿಸಿದವನಿಗುಂಟಾಗಲಿ ॥೪೪॥

ಆರ್ಯನಾದ ರಾಮನು ಅರಣ್ಯಕ್ಕೆ ಹೋದುದು ಯಾವನಿಗಭಿಮತವೋ, ಅವನು-ಬಹುಪುತ್ರನೂ ಅತಿದರಿದ್ರನೂ ಆಗಿ-ಜ್ವರದಿಂದಲೂ ಇತರ ರೋಗಗಳಿಂದಲೂ ಪೀಡಿಸಲ್ಪಡುತ-ಸರ್ವದಾ ಕ್ಲೇಶವನ್ನನುಭವಿಸಲಿ ॥೪೫॥

ಕುಡಿಯುವ ನೀರನ್ನು ಕೆಡಿಸಿದವನಿಗೆ ಯಾವ ಪಾಪವೋ, ವಿಷವನ್ನು ಕೊಟ್ಟವನಿಗೆ ಯಾವ ಪಾಪವೋ, ಎಳೆಗರುವಿನ (ಈಯ್ದು ಹತ್ತು ದಿನ ಕಳೆಯುವುದಕ್ಕೆ ಮುಂಚೆ) ತಾಯಿಯ ಹಾಲನ್ನು ಕರೆಯುವನಿಗೆ ಯಾವ ಪಾಪವೋ,-ಅಂತಹ ಪಾಪವೆಲ್ಲವೂ, ಆರ್ಯನ ಅರಣ್ಯಗಮನವು ಯಾವನಿಗಭಿಮತವೋ-ಅವನಿಗೆ ಉಂಟಾಗಲಿ ॥೪೬॥


ಹೀಗೆಂದು ಅತ್ಯುಗ್ರವಾಗಿ ಶಪಥಮಾಡುತಿರುವ-ನಿಶ್ಚೇತನನಾಗಿ ದುಃಖದಿಂದ ಸಂತಾಪಪಟ್ಟ-ಭರತನನ್ನು ಕುರಿತು ಕೌಸಲ್ಯೆಯು ಈ ಮಾತನ್ನು ಹೇಳಿದಳು ॥೪೭॥

ವತ್ಸ! ಇಂತಹ ಕ್ರೂರವಾದ ಶಪಥಗಳಿಂದ ಆಣೆಯಿಟ್ಟುಕೊಳ್ಳುತ್ತಿರುವ ನೀನು, ನನ್ನ ಪ್ರಾಣಗಳನ್ನು ತಡೆಯುತ್ತಿರುವೆ. ನೀನು ಕೇವಲ ಸತ್ಯಪ್ರತಿಜ್ಞನಾದವನು. ಸತ್ಪುರುಷರಿಗೆ ಲಭ್ಯವಾದ ಉತ್ತಮಗತಿಯನ್ನು ಪಡೆಯುವೆ ॥೪೮॥

ನೀನು, ಧರ್ಮವನ್ನೆಲ್ಲ ತಿಳಿದಿರುವೆ; ಶಾಸ್ತ್ರಜ್ಞನಾಗಿಯೂ, ವಿಶೇಷತಃ ತತ್ವಜ್ಞನಾಗಿಯೂ ಇರುವೆ. ರಾಮಭಕ್ತರಲ್ಲೆಲ್ಲ ಶ್ರೇಷ್ಠನಾಗಿರುವೆ. ನೀನು ಮಾತ್ಯನಿಂದೆಯನ್ನು ಮಾಡಬಾರದು॥

ಕೈಕೇಯ್ಯಾನಾಪರಾಧೋಸ್ತಿ ಮಮ ಭಾಗ್ಯಂ ಹಿ ತಾದೃಶಮ್ ।
ಸ್ವಕೃತಂ ಸ್ವೇನ ಭೋಕ್ತವ್ಯಂ ನ ಹ್ಯನ್ಯೋಸ್ತ್ಯನ್ಯಕರ್ಮಣಃ ॥೫೪॥
ಏವಮುಕ್ತ್ವಾ ತು ಭರತಂ ಕೌಸಲ್ಯಾ ತತ್ತ್ವದರ್ಶಿನೀ ।
ಶಮಯನ್ತೀ ಸುತಂ ದುಃಖಾತ್ ತೂಷ್ಣೀಮಾಸ ಗಿರೀನ್ದ್ರಜೇ ॥೫೫॥

ಇತಿ ಶ್ರೀಮದಯೋಧ್ಯಾಕಾಣ್ಡೇ ಭರತಶಪಥವಾಕ್ಯಂ ನಾಮ
ಪಞ್ಚದಶಃ ಸರ್ಗಃ.



ಈ ವಿಷಯದಲ್ಲಿ, ಕೈಕೇಯಿಯ ಅಪರಾಧವೇನೂ ಇರುವುದಿಲ್ಲ. ನನ್ನ ಅದೃಷ್ಟವೇ ಅಂತ ಹುದು. ಪ್ರಪಂಚದಲ್ಲಿ, ಅವರವರು ಮಾಡಿದುದನ್ನು ಅವರವರೇ ಅನುಭವಿಸಬೇಕಾಗಿರುವುದು; ಒಬನ ಕರ್ಮವನ್ನು ಮತ್ತೊಬ್ಬನೆಂದಿಗೂ ಅನುಭವಿಸುವುದಕ್ಕಾಗಲಾರದು ॥೫೪॥

ಎಲೌ ಪಾರ್ವತಿ! ಹೀಗೆಂದು ಭರತನಿಗೆ ಹೇಳಿ, ತತ್ವಜ್ಞಳಾದ ಕೌಸಲ್ಯೆಯು, ಭರತನಿಗೆ ದುಃಖವನ್ನು ಸಮಾಧಾನಪಡಿಸುತ, ತಾನೂ ಸುಮ್ಮನಾದಳು ॥೫೫॥

ಇದು ಅಯೋಧ್ಯಾಕಾಂಡದಲ್ಲಿ ಭರತಶಪಥವಾಕ್ಯವೆಂಬ
ಹದಿನಯ್ದನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಷೋಡಶಃ ಸರ್ಗಃ.

ಶ್ರೀ ಶಿವಉವಾಚ.

ಏತಸ್ಮಿನ್ನನ್ತರೇ ಶ್ರುತ್ವಾ ಭರತಸ್ಯ ಸಮಾಗಮಮ್ ।
ವಸಿಷ್ಠೋ ಮನ್ತ್ರಿಭಿಃ ಸಾರ್ಧಂ ಪ್ರಯಯೌ ರಾಜಮನ್ದಿರಮ್ ॥೧॥
ರುದನ್ತಂ ಭರತಂ ದೃಷ್ಟ್ವಾ ವಸಿಷ್ಠಃ ಪ್ರಾಹ ಸಾದರಮ್ ॥೨॥
ವೃದ್ಧೋ ರಾಜಾ ಋಕ್ತಭೋಗೋ ಯಜ್ಞೈರ್ಬ್ರಾಹ್ಮೈ ಸುತಂ ಹರಿಮ್ ।
ಅನ್ತೇ ಜಗಾಮ ತ್ರಿದಿವಂ ದೇವೇನ್ದ್ರಾರ್ಧಾಸನಂ ಪ್ರಭುಃ ।
ತ್ವಂ ಶೋಚಸಿ ವೃಥೈವಾದ್ಯ ತ್ವಶೋಚ್ಯಂ ಮೋಕ್ಷಭಾಜನಮ್ ॥೩॥
ಆತ್ಮಾ ನಿತ್ಯೋಽವ್ಯಯಃ ಶುದ್ಧೋ ಜನ್ಮನಾಶಾದಿವರ್ಜಿತಃ ।
ಶರೀರಂ ಜಡಮತ್ಯರ್ಥಂ ಅಪವಿತ್ರಂ ಚ ನಶ್ವರಮ್ ॥೪॥
ವಿಚಾರ್ಯಮಾಣೇ ಶೋಕಸ್ಯ ನಾವಕಾಶಃ ಕಥಞ್ಚನ ।
ಮೂಢಾಸ್ತ್ವನುಶೋಚನ್ತಿ ಸ್ವಾತ್ಮತಾಡನಪೂರ್ವಕಮ್ ॥೫॥
ನಿಸ್ಸಾರೇ ಖಲು ಸಂಸಾರೇ ವಿಯೋಗೋ ಮಾನಿನಾಂ ಯದಾ ।
ಭವೇದ್ವೈರಾಗ್ಯಹೇತುಃ ಸಃ ಶಾನ್ತಿಂ ಸೌಖ್ಯಂ ತನೋತಿ ಚ ॥೬॥

ಅಯೋಧ್ಯಾಕಾಂಡದಲ್ಲಿ ಹದಿನಾರನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಇಷ್ವರೊಳಗಾಗಿ ಭರತನು ಬಂದುದನ್ನು ಕೇಳಿ, ವಸಿಷ್ಠಮುನಿಯು ಮಂತ್ರಿಗಳೊಡನೆ ಅರಮನೆಯೊಳಕ್ಕೆ ಹೋದನು. ಅಲ್ಲಿ, ಅಳುತ ಕುಳಿತಿರುವ ಭರತನನ್ನು ನೋಡಿ, ಅತ್ಯಾದರಪೂರ್ವಕವಾಗಿ ಹೀಗೆ ಹೇಳಿದನು ॥೧—೨॥

ವತ್ಸ! ಭರತ! ಪ್ರಭುವಾದ ದಶರಥಮಹಾರಾಜನು, ಸಕಲ ಭೋಗಗಳನ್ನೂ ಅನುಭವಿಸಿ ವೃದ್ಧನಾಗಿ, ಯಜ್ಞಗಳಿಂದ ಶ್ರೀಹರಿಯನ್ನು ಮಗನನ್ನಾಗಿ ಪಡೆದು, ಕೊನೆಗೆ ಸ್ವರ್ಗದಲ್ಲಿ ಇಂದ್ರನ ಅರ್ಧಾಸನವನ್ನು ಸೇರಿರುವನು. ನೀನು ಈಗ ಅಶೋಚನೀಯನಾದ ಅವನನ್ನು ಕುರಿತು, ಕೇವಲ ವ್ಯರ್ಥವಾಗಿ ಶೋಕಪಡುವೆ ॥೩॥

ಆತ್ಮನು, ನಿತ್ಯನೂ ಅವ್ಯಯನೂ ಶುದ್ಧನೂ ಜನ್ಮನಾಶಾದಿವರ್ಜಿತನೂ ಆಗಿರುವನು. ಶರೀರವಾದರೋ, ಅತ್ಯಂತ ಜಡವೂ ಅಪವಿತ್ರವೂ ನಶ್ವರವೂ ಆಗಿರುವುದು ॥೪॥

ಹೀಗಿರುವುದರಿಂದ, ಚೆನ್ನಾಗಿ ವಿಚಾರಮಾಡಿದರೆ, ಹೇಗೂ ಶೋಕಕ್ಕೆ ಅವಕಾಶವೇ ಇಲ್ಲ. ಮೂಢರಾದವರು, ತಮ್ಮ ಎದೆಯನ್ನು ಬಡಿದುಕೊಳ್ಳುತ, ವ್ಯರ್ಥವಾಗಿ ಆತ್ಮನನ್ನು ಕುರಿತು ಶೋಕಪಡುವರು ॥೫॥

ಅತ್ಯಂತ ನಿಸ್ಸಾರವಾದ ಈ ಸಂಸಾರದಲ್ಲಿಯಾದರೋ, ಅಭಿಮಾನಶಾಲಿಗಳಾದವರಿಗೆ ಯಾವಾಗ ಬಂಧುವಿಯೋಗವಾಗುವುದೋ, ಆಗ ಅದೇ ಅವರಿಗೆ ವೈರಾಗ್ಯಕ್ಕೆ ಹೇತುವಾಗುವುದು; ಮತ್ತು, ಶಾಂತಿಯನ್ನೂ ನಿರತಿಶಯಾನಂದವನ್ನೂ ಉಂಟುಮಾಡುವುದು ॥೬॥

ಜನ್ಮವಾ॑ ಯದಿ ಲೋಕೇಸ್ಮಿ॑ ತದಾ ತಂ ಮೃತ್ಯುರನ್ವಗಾತ್ ।
ಯಸ್ಮಾದಪರಿಹಾರ್ಯೋಯಂ ಮೃತ್ಯುರ್ಜನ್ಮವತಾಂ ಸದಾ ॥೬॥

ಸ್ವಕರ್ಮವಶಗೌ ಸರ್ವಜನ್ತೂನಾಂ ಪ್ರಭವವ್ಯಯೌ ।
ವಿಜಾನನ್ನಪಿ ವಿದ್ವಾ॑ ಕಃ ಕಥಂ ಶೋಚತಿ ಬಾನ್ಧವಾ॑ ॥೮॥

ಚಲಪತ್ರಾನ್ತರಲಗ್ನಮ್ಬು ಬಿನ್ದುವತ್ ಕ್ಷಣಭಙ್ಗುರಮ್ ।
ಆಯುಃ ಸನ್ತತ್ಪವೇಲಾಯಾಂ ಕಸ್ತತ್ರ ಪ್ರತ್ಯಯಸ್ತವ ॥೯॥

ದೇಹೀ ಪ್ರಾಕ್ತನದೇಹೋತ್ಥಕರ್ಮಣಾ ದೇಹವಾ॑ ಪುನಃ ।
ಯಥಾ ತ್ಯಜತಿ ವೈ ಜೀರ್ಣಂ ವಾಸೋ ಗೃಹ್ಣಾತಿ ನೂತನಮ್ ॥೧೦॥

ತಥಾ ಜೀರ್ಣಂ ಪರಿತ್ಯಜ್ಯ ದೇಹೀ ದೇಹಂ ಪುನರ್ನವಮ್ ।
ಭಜತ್ಯೇವ ಸದಾ ತತ್ರ ಶೋಕಸ್ಯಾವಸರಃ ಕುತಃ ॥೧೧॥

ದೇಹಿನೋಸ್ಮಿ॑ ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾನ್ತರಪ್ರಾಪ್ತಿಃ ಧೀರಸ್ತತ್ರ ನ ಮುಹ್ಯತಿ ॥೧೨॥

ವತ್ಸ! ಭರತ! ನಿಮ್ಮ ತಂದೆಯು ಯಾವಾಗ ಈ ಲೋಕದಲ್ಲಿ ಜನ್ಮವನ್ನು ಪಡೆದನೋ, ಆಗಲೇ ಅವನನ್ನು ಮೃತ್ಯುವೂ ಬೆನ್ನಟ್ಟಿಯೇ ಇದ್ದಿತು. ಈ ಮೃತ್ಯುವೆಂಬುದು, ಜನ್ಮವನ್ನು ಪಡೆದವರಿಗೆ ಎಂದಿಗೂ ಅಪರಿಹಾರ್ಯವಾದುದು ॥೬॥

ಪ್ರಾಣಿಗಳಿಗೆ, ಜನನಮರಣಗಳು ಅವರವರ ಕರ್ಮಾಧೀನವಾಗಿರುವುವು. ಇದನ್ನು ತಿಳಿದಮೇಲೆಯೂ, ಬುದ್ಧಿವಂತನಾದವನು ಯಾವನುತಾನೆ ತನ್ನ ಬಂಧುಗಳನ್ನು ಕುರಿತು ಶೋಕಿಸುವನು? ಶೋಕಪಡುವ ಬಗೆಯಾವುದು? ॥೮॥

ಪುರುಷರಿಗೆ ಆಯುಸ್ಸೆಂಬುದು, ಚಂಚಲವಾದ ಎಲೆಯ ತುದಿಯಲ್ಲಿ ಅಂಟಿಕೊಂಡಿರುವ ನೀರಿನ ಹನಿಯಂತೆ ಕ್ಷಣಭಂಗುರವಾದುದು. ಇದು ಸರ್ವಾನುಭವಸಿದ್ಧವಾಗಿದ್ದರೂ, ಇಂತಹ ಸಂತಾಪಕಾಲದಲ್ಲಿ ಇದನ್ನೆಲ್ಲ ಚೆನ್ನಾಗಿ ವಿಮರ್ಶಿಸುವುದು ಅವಶ್ಯಕವಾಗಿದ್ದರೂ, ಈಗ ನಿನಗೆ ಆಯುಸ್ಸಿನಲ್ಲಿ ನಂಬುಗೆಯಾವುದು? ॥೯॥

ಜೀವನು, ಪುರಾತನಜನ್ಮದ ವಾಸನೆಯಿಂದ ಈಗ ಪುನಃ ಶರೀರಗ್ರಹಣಮಾಡುವನು. ಲೋಕದಲ್ಲಿ ಮನುಷ್ಯನು ಹಳೆಯದಾದ ಬಟ್ಟೆಯನ್ನು ಎಸೆದುಬಿಟ್ಟು ಹೊಸದಾದ ವಸ್ತ್ರವನ್ನು ಹೇಗೆ ಸ್ವೀಕರಿಸುವನೋ, ಹಾಗೆ ಜೀವನು ಜೀರ್ಣವಾದ ದೇಹವನ್ನು ಪರಿತ್ಯಜಿಸಿ ನೂತನವಾದ ಶರೀರವನ್ನು ಸರ್ವದಾ ಸ್ವೀಕರಿಸುತ್ತಲೇ ಇರುವನು. ಹೀಗಿರುವಾಗ, ಇದರಲ್ಲಿ ಶೋಕಕ್ಕೆ ಅವಕಾಶವೆಲ್ಲಿಯದು? ॥೧೦—೧೧॥

ಜೀವನಿಗೆ, ಈ ಶರೀರದಲ್ಲಿ ಬಾಲ್ಯ ಯೌವನ ವಾರ್ಧಕಗಳೆಂಬ ಅವಸ್ಥೆಗಳು ಹೇಗೆ ಸಂಭವಿಸುವುವೋ, ಹಾಗೆ ದೇಹಾಂತರಪ್ರಾಪ್ತಿಯೆಂಬ ಅವಸ್ಥಾಂತರವೂ ಸಂಭವಿಸುವುದು. ಧೀರನಾದವನು ಈ ವಿಷಯದಲ್ಲಿ ಮೋಹಪಡುವುದಿಲ್ಲ ॥೧೨॥

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ರಾಘವ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ॥೧೩॥
ಆತ್ಮಾ ನ ಲೀಯತೇ ಜಾತು ಜಾಯತೇ ವರ್ಧತೇ ನ ಚ ।
ಷಡ್ಭಾವರಹಿತೋಽನನ್ತಃ ಸತ್ಯಪ್ರಜ್ಞಾನವಿಗ್ರಹಃ ॥೧೪॥
ಆನನ್ದರೂಪೋ ಒುದ್ಧ್ಯಾದಿಸಾಕ್ಷೀ ಲೇಪವಿವರ್ಜಿತಃ ।
ಏಕಏವ ಪರೋ ಹ್ಯಾತ್ಮಾ ಹ್ಯದ್ವಿತೀಯಃ ಸದಾ ಸ್ಥಿತಃ ॥೧೫॥
ಇತ್ಯಾತ್ಮಾನಂ ದೃಢಂ ಜ್ಞಾತ್ವಾ ತ್ಯಕ್ತ್ವಾ ಶೋಕಂ ಕುರು ಕ್ರಿಯಾಃ ।
ತೈಲದ್ರೋಣ್ಯಾಃ ಪಿತುರ್ದೇಹಂ ಉದ್ಧೃತ್ಯ ಸಜಿವೈಃ ಸಹ ॥೧೬॥
ಇತಿ ಸಮ್ಯೊಗಧಿತಃ ಸಾಕ್ಷಾತ್ ಗುರುಣಾ ಭರತಸ್ತದಾ ।
ವಿಸೃಜ್ಯಾಜ್ಞಾನಜಂ ಶೋಕಂ ಚಕ್ರೇ ಸ ವಿಧಿವತ್ ಕ್ರಿಯಾಃ ॥೧೭॥
ಪಿತೃಕೃತಾ ನಿವೃತ್ತೇ ತು ವಸಿಷ್ಠೋ ರಾಜಧರ್ಮವಿತ್ ।
ಸಭಾಮಿಕ್ಷ್ವಾಕುನಾಥಸ್ಯ ಪ್ರವಿವೇಶ ಮಹಾಯಶಾಃ ॥೧೮॥
ತತ್ರಾಸನೇ ಸಮಾಸೀನಃ ಚತುರ್ಮುಖಇವಾಪರಃ ।

ಅಯ್ಯಾ! ಭರತ! ಬಂಧು ಮಿತ್ರಕಳತ್ರಾದಿ ಭೂತಗಳು, ಮೊದಲು ಎಲ್ಲಿದ್ದುವೋ ಗೊತ್ತಿಲ್ಲ ದೆಯೇ ಬರುವುವು; ಮಧ್ಯದಲ್ಲಿ ಸ್ವಲ್ಪಕಾಲ ನಮ್ಮ ಕಣ್ಣೆದುರಿಗಿರುವುವು; ಪುನಃ ಎಲ್ಲಿಹೋಗುವುವೋ ಗೊತ್ತಿಲ್ಲದೆಯೇ ನಾಶಹೊಂದುವುವು. ಇಂತಹ ಅಸ್ಥಿರಗಳಾದುವುಗಳ ವಿಷಯದಲ್ಲಿ ಶೋಕವಾವುದು? ॥೧೩॥ -

ಆತ್ಮನಾದರೋ, ಎಂದಿಗೂ ನಾಶಹೊಂದುವುದಿಲ್ಲ; ಹುಟ್ಟುವುದೂ ಇಲ್ಲ; ಬೆಳೆಯುವುದೂ ಇಲ್ಲ. ಇವನು ಷಡ್ಭಾವರಹಿತನಾದವನು; ಸತ್ಯಜ್ಞಾನಸ್ವರೂಪನು; ಆನಂದರೂಪನು; ಬುದಿ ಮುಂತಾದುವುಗಳಿಗೆಲ್ಲ ಸಾಕ್ಷಿಭೂತನಾಗಿರುವನು. ಇವನಿಗೆ ಯಾವ ಲೇಪವೂ ಇಲ್ಲ. ಈ ಪರ ಮಾತ್ಮನು, ಏಕನಾಗಿಯೂ ಅದ್ವಿತೀಯನಾಗಿಯೂ ಸರ್ವದಾ ಇರುವನು ॥೧೪-೧೫॥

ವತ್ಸ! ಈರೀತಿಯಾಗಿ ಆತ್ಮಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು, ಶೋಕವನ್ನು ಬಿಟ್ಟುಬಿಟ್ಟು, ಎಣ್ಣೆಯ ದೋಣಿಯ ದಸೆಯಿಂದ ನಿಮ್ಮ ತಂದೆಯು ದೇಹವನ್ನು ಹೊರಕ್ಕೆ ತೆಗೆ ಯಿಸಿ, ಮಂತ್ರಿಗಳೊಡಗೂಡಿದವನಾಗಿ ಅವನಿಗೆ ಪೈಶಾಕಕರ್ಮಗಳನ್ನು ಮಾಡುವನಾಗು. (ಎಂದು ವಸಿಷ್ಠರು ಹೇಳಿದರು) ॥೧೬॥

ಎಲೌ ವಾರ್ವತಿ! ಹೀಗೆ ಸಾಕ್ಷಾತ್ತಾಗಿ ಗುರುವಿನಿಂದ ಬೋಧಿಸಲ್ಪಟ್ಟ ಭರತನು, ಆಗ ಅಜ್ಞಾನಜನ್ಯವಾದ ಶೋಕವನ್ನು ಬಿಟ್ಟುಬಿಟ್ಟು, ಯಥಾವಿಧಿಯಾಗಿ ಕರ್ಮಗಳನ್ನೆಲ್ಲ ಮಾಡಿ ದನು ॥೧೭॥

ಹೀಗೆ ಪಿತೃಯಜ್ಞವೆಲ್ಲ ಮುಗಿದಬಳಿಕ, ರಾಜಧರ್ಮವನ್ನು ತಿಳಿದವನಾಗಿಯೂ ಮಹಾಯ ಶಸ್ವಿಯಾಗಿಯೂ ಇರುವ ವಸಿಷ್ಠಮುನಿಯು, ಇಕ್ಷ್ವಾಕುಕುಲಪ್ರದೀಪನಾದ ದಶರಥನ ಸಭಾಗೃ ಹಕ್ಕೆ ಬಂದವನಾದನು ॥೧೮॥

ಅಲ್ಲಿ ಎರಡನೆಯ ಚತುರ್ಮುಖಬ್ರಹ್ಮನಂತೆ ಆಸನದಲ್ಲಿ ಕುಳಿತುಕೊಂಡು, ಕಾರ್ಯವಿಶೇಷ ಜ್ಞಾನಾದ ವಸಿಷ್ಠಮುನಿಯು, ಮಂತ್ರತತ್ವಜ್ಞರಾದ ಮಂತ್ರಿಗಳೊಡನೆ ಆಲೋಚಿಸಿ, ಶತ್ರುಘ್ನ

ಮನ್ತ್ರಿಭಿರ್ಮನ್ತ್ರತತ್ತ್ವಜ್ಞೈಃ ಸಮೂಲೋಚ್ಯ ವಿಶೇಷವಿತ್ ॥೧೯॥
ಆನಾಯ್ಯ ಭರತಂ ತತ್ರ ಹ್ಯುಪವೇಶ್ಯ ಸಹಾನುಜವ್ ।
ಅಬ್ರವೀದ್ವಚನಂ ದೇಶಕಾಲೋಚಿತಮರಿನ್ದಮವ್ ॥೨೦॥
ತಾತ ರಾಜಾ ದಶರಥಃ ಸ್ವರ್ಗತೋ ಧರ್ಮಮಾಚರನ್ ।
ಧನಧಾನ್ಯವತೀಂ ಸ್ಫೀತಾಂ ಪ್ರದಾಯ ಪೃಥಿವೀಂ ತವ ॥೨೧॥
ರಾಮಸ್ತಥಾ ಸತ್ಯಧೃತಿಃ ಸತಾಂ ಧರ್ಮಮನುಸ್ಮರನ್ ।
ನಾಜಹಾತ್ ಪಿತುರಾದೇಶಂ ಶಶೀ ಜ್ಯೋತ್ಸ್ನಾಮಿವೋದಿತಃ ॥೨೨॥
ಪಿತ್ರಾ ಭ್ರಾತ್ರಾ ಚ ತೇ ದತ್ತಂ ರಾಜ್ಯಂ ನಿಹತಕಣ್ಟಕಮ್ ।
ತದ್ಭುಂಕ್ಷ್ವ ಮುದಿತಾಮಾತ್ಯಃ ಕ್ಷಿಪ್ರಮೇವಾಭಿಷೇಚಯ ॥೨೩॥
ತಚ್ಛ್ರುತ್ವಾ ಭರತೋ ವಾಕ್ಯಂ ಶೋಕೇನಾಭಿಪರಿಪ್ಲುತಃ ।
ಜಗಾಮ ಮನಸಾ ರಾಮಂ ಜಗರ್ಹೇ ಚ ಪುರೋಹಿತಮ್ ॥೨೪॥
ರಾಮಮೇವಾಭಿಗಚ್ಛಾಮಿ ಸ ರಾಜಾ ದ್ವಿಪದಾಂ ವರಃ ।
ತ್ರಯಾಣಾಮಪಿ ಲೋಕಾನಾಂ ರಾಜ್ಯಮರ್ಹತಿ ರಾಘವಃ ॥೨೫॥

ಸಹಿತನಾದ ಭರತನನ್ನು ಅಲ್ಲಿಗೆ ಕರೆಯಿಸಿ, ಅವನನ್ನು ಉಚಿತವಾದ ಆಸನದಮೇಲೆ ಕುಳ್ಳಿರಿಸಿ, ಶತ್ರುವಿನಾಶಕನಾದ ಅವನನ್ನು ಕುರಿತು, ದೇಶಕ್ಕೂ ಕಾಲಕ್ಕೂ ಅನುಕೂಲವಾದ ಈ ಮಾತನ್ನು ಹೇಳಿದನು ॥೧೯-೨೦॥

ವತ್ಸ! ಭರತ! ಕೇವಲ ಧರ್ಮಮಾರ್ಗನಿಷ್ಠನಾಗಿದ್ದ ದಶರಥಮಹಾರಾಜನು, ಧನಧಾನ್ಯಯುಕ್ತವಾಗಿ ಸಮೃದ್ಧವಾಗಿರುವ ಭೂಮಿಯನ್ನು ನಿನಗೆ ಕೊಟ್ಟುಬಿಟ್ಟು, ತಾನು ಸ್ವರ್ಗಸುಖವನ್ನನುಭವಿಸುವುದಕ್ಕೆ ಹೊರಟುಹೋದನು ॥೨೧॥

ಅವನಂತೆ, ಸತ್ಯಪರಾಕ್ರಮನಾದ ಶ್ರೀರಾಮನೂ ಕೂಡ, ಸತ್ಪುರುಷರ ಧರ್ಮವನ್ನು ಸ್ಮರಿಸಿಕೊಂಡವನಾಗಿ, ಉದಯಹೊಂದಿದ ಚಂದ್ರನು ಬೆಳದಿಂಗಳನ್ನು ಬಿಡದಿರುವಂತೆ, ತಂದೆಯ ಆಜ್ಞೆಯನ್ನು ತಪ್ಪದೆ ನಡೆಯಿಸಿದನು ॥೨೨॥

ಹೀಗೆ ತಂದೆಯಿಂದಲೂ ಅಣ್ಣನಿಂದಲೂ ನಿನಗೆ ಕೊಡಲ್ಪಟ್ಟಿರುವ ನಿಷ್ಕಂಟಕವಾದ ರಾಜ್ಯವನ್ನು, ನೀನು ಸಂತುಷ್ಟರಾದ ಮಂತ್ರಿಗಳೊಡನೆ ಸುಖವಾಗಿ ಅನುಭವಿಸು. ಬೇಗನೆ ಪಟ್ಟಾಭಿಷೇಕ ಮಾಡಿಕೋ. (ಎಂದು ವಸಿಷ್ಠರು ಹೇಳಿದರು) ॥೨೩॥

ಈ ಮಾತನ್ನು ಕೇಳಿ, ದುಃಖಪರಿಪೂರ್ಣನಾದ ಭರತನು, ಮನಸ್ಸಿನಲ್ಲಿ ಶ್ರೀರಾಮನನ್ನು ಸ್ಮರಿಸಿಕೊಂಡು, ಪುರೋಹಿತರಾದ ವಸಿಷ್ಠರ ಮಾತನ್ನು ಅಭಿನಂದಿಸದೆ-' ನಾನು ರಾಮನಿರುವ ಕಡೆಗೆ ಹೋಗುವೆನು. ಪುರುಷೋತ್ತಮನಾದ ಅವನೇ ಈ ಭೂಮಿಗೆ ರಾಜನಾದವನು. ನಮ್ಮ ರಾಘವನು, ಮೂರುಲೋಕಗಳಿಗೂ ಒಡೆಯನಾಗಲು ಯೋಗ್ಯನಾಗಿರುವನು' ಎಂದು ಹೇಳಿದನು ॥೨೪—೨೫॥

ತದ್ವಾಕ್ಯಂ ಧರ್ಮಸಂಯುಕ್ತಂ ಶ್ರುತ್ವಾ ಸರ್ವೇ ಸಭಾಸದಃ ।
ಹರ್ಷಾನ್ಮುಮುಚುರಶ್ರೂಣಿ ರಾಮೇ ನಿಹಿತಚೇತಸಃ ॥೬೬॥
ಯದಿ ತ್ವಾರ್ಯಂ ನ ಕರ್ಷ್ಯಾಮಿ ವಿನಿವರ್ತಯಿತುಂ ವನಾತ್ ।
ವನೇ ತತ್ರೈವ ವತ್ಸ್ಯಾಮಿ ಯಥಾರ್ಯೋ ಲಕ್ಷ್ಮಣಸ್ತಥಾ ॥೬೭॥
ವಿವಮುಕ್ತ್ವಾ ತು ಧರ್ಮಾತ್ಮಾ ಸುಮನ್ತ್ರಂ ವಾಕ್ಯಮಬ್ರವೀತ್ ।
ಯಾತ್ರಾವಾಜ್ಞಾಪಯ ಕ್ಷಿಪ್ರಂ ಬಲಂ ಚೈವ ಸವಾಹನಯ ॥೬೮॥
ವಿವಮುಕ್ತಃ ಸುಮನ್ತ್ರಸ್ತು ಭರತೇನ ಮಹಾತ್ಮನಾ ।
ಪ್ರಹೃಷ್ಟಃ ಸೋದಿಶತ್ ಸರ್ವಂ ಯಥಾ ಸನ್ದಿಷ್ಟಮಿಷ್ಟವತ್ ॥೬೯॥
ತತೋಯೋಧ್ಯಾಬ್ಗನಾಃ ಸರ್ವಾಃ ಭರ್ತೄ್ಣಾಂ ಸರ್ವಾಸಾಂ ಗೃಹೇಗೃಹೇ ।
ಯಾತ್ರಾಗಮನಮಾಜ್ಞಾಯ ತ್ವರಯನ್ತಿ ಸ್ಮ ಹರ್ಷಿತಾಃ ॥೭೦॥
ತತಃ ಸಮುತ್ಥಿತಃ ಕಾಲ್ಯೇ ಆಸ್ಥಾಯ ಸ್ಯನ್ದನೋತ್ತಮಮ್ ।
ಪ್ರಯಯೌ ಭರತಃ ಶೀಘ್ರಂ ರಾಮದರ್ಶನಕಾಂಕ್ಷಯಾ ॥೭೧॥
ದಶಲಕ್ಷ್ಯವರಾಶ್ವಾಶ್ಚ ಶತಲಕ್ಷ್ಯಧನುರ್ಧರಾಃ ।
ಶತಸಾಹಸ್ರನಾಗಾಶ್ಚ ತಾವನ್ತಶ್ಚ ಮಹಾರಥಾಃ ॥೭೨॥

ಹೀಗೆ ಧರ್ಮಯುಕ್ತವಾಗಿ ಹೇಳಿದ ಅವನ ಮಾತನ್ನು ಕೇಳಿ, ಸಭಾಸದರೆಲ್ಲರೂ ರಾಮನಲ್ಲಿ ಮನಸ್ಸಿಟ್ಟವರಾಗಿ, ಹರ್ಷದಿಂದ ಆನಂದಬಾಷ್ಪವನ್ನು ಸುರಿಯಿಸಿದರು ॥೬೬॥

ಅನಂತರ ಧರ್ಮಾತ್ಮನಾದ ಭರತನು, ಪುನಃ ಸಭೆಯನ್ನು ಕುರಿತು 'ನಮ್ಮ ಪೂಜ್ಯನಾದ ಅಣ್ಣನನ್ನು ಅರಣ್ಯದಿಂದ ಹಿಂದಿರುಗಿಸುವುದಕ್ಕೆ ನಾನು ಸಮರ್ಥನಾಗದೆಹೋದಪಕ್ಷದಲ್ಲಿ, ಆರ್ಯನಾದ ಲಕ್ಷ್ಮಣನು ಹೇಗಿರುವನೋ-ಹಾಗೆ ಆ ಅರಣ್ಯದಲ್ಲಿಯೇ ನಾನು ವಾಸವಾಡಿಕೊಂಡಿರುವೆನು.' ಎಂಬುದಾಗಿ ಹೇಳಿ, ಸುಮಂತ್ರನನ್ನು ಕುರಿತು 'ಆರ್ಯಾ! ಸುಮಂತ್ರ! ನಾನು ಶ್ರೀರಾಮನಿರುವ ವನಕ್ಕೆ ಹೋಗುವೆನೆಂದು ಬೇಗನೆ ಎಲ್ಲರಿಗೂ ಆಜ್ಞೆಯನ್ನು ಕಳುಹಿಸು; ಸೈನ್ಯವನ್ನೂ ಸಿದ್ಧಪಡಿಸು' ಎಂದು ಹೇಳಿದನು ॥೬೭—೬೮॥

ಮಹಾತ್ಮನಾದ ಭರತನಿಂದ ಹೀಗೆ ಹೇಳಲ್ಪಟ್ಟ ಆ ಸುಮಂತ್ರನು, ಸಂತೋಷಧರಿತನಾಗಿ, ಅವನ ಆಜ್ಞಾನುಗುಣವಾಗಿ ಅವನ ಇಷ್ಟದಂತೆ ಸಮಸ್ತವನ್ನೂ ಆಜ್ಞಾಪಿಸಿದನು ॥೬೯॥

ಆ ಬಳಿಕ, ಭರತನು ಶ್ರೀರಾಮನಿದ್ದಕಡೆಗೆ ಹೊರಡುವನೆಂದು ತಿಳಿದು, ಪ್ರತಿ ಮನೆಯಲ್ಲಿಯೂ, ಅಯೋಧ್ಯೆಯಲ್ಲಿರುವ ಸ್ತ್ರೀಯರೆಲ್ಲರೂ, ಹರ್ಷಸಮನ್ವಿತರಾಗಿ, ತಾವು ಅಲ್ಲಿಗೆ ಹೊರಡಲು ತಮ್ಮ ಪತಿಗಳನ್ನು ತ್ವರೆಪಡಿಸಿದರು ॥೭೦॥

ಆ ಬೆಳಗ್ಗೆ, ಎದ್ದವನಾದ ಭರತನು, ಉತ್ತಮವಾದ ರಥವನ್ನು ಹತ್ತಿಕೊಂಡು, ರಾಮನನ್ನು ನೋಡಲಪೇಕ್ಷೆಯಿಂದ ಹೊರಟನು ॥೭೧॥

ಆಗ, ಹತ್ತುಲಕ್ಷ ಉತ್ತಮಾಶ್ವಗಳೂ, ನೂರುಲಕ್ಷ ಧನುರ್ಧಾರಿಗಳೂ, ಒಂದುಲಕ್ಷ ಗಜಗಳೂ, ಒಂದು ಲಕ್ಷ ದಿವ್ಯರಥಗಳೂ, ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೂ, ಇತರ

ಬ್ರಾಹ್ಮಣಾಃ ಕ್ಷತ್ರಿಯಾವೈಶ್ಯಾಃ ಶೂದ್ರಾಶ್ಚಾನ್ಯೇಚ ಜಾತಯಃ ।
ಸ್ತ್ರೀಬಾಲಯುವವೃದ್ಧಾಶ್ಚ ಸರ್ವೇ ಭರತಮನ್ವಯುಃ ॥೩೩॥

ಗಾಯನ್ತ್ಯೋ ರಾಘವಗುಣಾ ಮುದಾ ಪೌರಸ್ತ್ರಿಯಸ್ತದಾ ।
ಮನ್ದಂಮನ್ದಂ ಬೃನ್ದಶಸ್ತಂ ಅನುಜಗ್ಮುರ್ನೃಪಾತ್ಮಜಮ್ ॥೩೪॥

ಸರ್ವೈರೇವ ಸಮಾಯುಕ್ತೋ ಭರತಃ ಶಾನ್ತವಾಹನಃ ।
ಶೃಙ್ಗಿಬೇರಪುರಂ ಪ್ರಾಪ್ಯ ಗಙ್ಗಾತೀರೇವಸತ್ ಸುಖಮ್ ॥೩೫॥

ಗುಹೇನ ಪೂಜಿತಸ್ತತ್ರ ರಾಮವೃತ್ತಾನ್ತಮೂದಿತಃ ।
ಶ್ರುತ್ವಾ ವಿಷಣ್ಣಹೃದಯಃ ಸ್ವಯಮುಪ್ಯಕರೋಜ್ಜಟಾಃ ॥೩೬॥

ಪ್ರಭಾತೇ ಭರತೋ ಗಙ್ಗಾಂ ತತಸ್ತೀರ್ತ್ವಾ ಸಸೈನಿಕಃ ।
ಗುಹೇನ ಸಹಿತಸ್ತೂರ್ಣಂ ಭರದ್ವಾಜಾಶ್ರಮಂ ಯಯೌ ॥೩೭॥

ಭರದ್ವಾಜಾಶ್ರಮಂ ದೃಷ್ಟ್ವಾ ಕ್ರೋಶಾದೇವ ನರರ್ಷಭಃ ।
ಬಲಂ ಸರ್ವಮವಸ್ಥಾಪ್ಯ ಜಗಾಮ ಸಹ ಮನ್ತ್ರಿಭಿಃ ॥೩೮॥

ಆಶ್ರಮೇ ಮುನಿಮಾಸೀನಂ ಜ್ವಲನ್ತಮಿವ ಪಾವಕಮ್ ।
ದೃಷ್ಟ್ವಾ ನನಾಮ ಭರತಃ ಸಾಷ್ಟಾಙ್ಗಮತಿಭಕ್ತಿತಃ ॥೩೯॥

ಜಾತಿಯವರೂ, ಸ್ತ್ರೀ ಬಾಲ ಯುವ ವೃದ್ಧರೂ, ಎಲ್ಲರೂ ಭರತನನ್ನು ಅನುಸರಿಸಿ ಹೊರಟು ಬಿಟ್ಟರು ॥೩೨—೩೩॥

ಆಗ, ಅಯೋಧ್ಯಾಪಟ್ಟಣದ ಸ್ತ್ರೀಯರೆಲ್ಲರೂ, ಸಂತೋಷದಿಂದ ಗುಣಗಳನ್ನು ಗಾನಮಾಡುತ, ಮೆಲ್ಲಮೆಲ್ಲಗೆ ಗುಂಪುಗುಂಪಾಗಿ ಆ ಭರತನನ್ನು ಅನುಸರಿಸಿ ಹೊರಟರು ॥೩೪॥

ಹೀಗೆ ಇವರೆಲ್ಲರಿಂದಲೂ ಯುಕ್ತನಾಗಿ ಹೊರಟ ಆ ಭರತನು, ಮಾರ್ಗದಲ್ಲಿ ಕುದುರೆಗಳು ಬಳಲಿದ ಕಾರಣ, ಶೃಂಗಿಬೇರಪುರಕ್ಕೆ ಹೋಗಿ, ಅಲ್ಲಿ ಗಂಗಾನದಿಯ ತೀರದಲ್ಲಿ ಸುಖವಾಗಿ ಬಿಡಾರಮಾಡಿದನು ॥೩೫॥

ಅಲ್ಲಿ ಗುಹನಿಂದ ಪೂಜಿಸಲ್ಪಟ್ಟವನಾಗಿ, ಮೊದಲಿಂದಲೂ ರಾಮನ ವೃತ್ತಾಂತವನ್ನು ಗುಹನ ಮುಖದಿಂದ ಕೇಳಿ, ಮನಸ್ಸಿನಲ್ಲಿ ವಿಷಾದಪಟ್ಟು, ಆಗ ತಾನೂ ಜಟೆಯನ್ನು ಮಾಡಿಕೊಂಡನು ॥

ಅನಂತರ, ಆ ಭರತನು ಬೆಳಗ್ಗೆ ತನ್ನ ಸೈನ್ಯದೊಡನೆ ಗಂಗಾನದಿಯನ್ನು ದಾಟಿ, ಗುಹನೊಡಗೂಡಿ ತಟ್ಟನೆ ಭರದ್ವಾಜರ ಆಶ್ರಮಕ್ಕೆ ಹೊರಟನು ॥೩೭॥

ಪುರುಷಶ್ರೇಷ್ಠನಾದ ಭರತನು, ಒಂದು ಹರಿದಾರಿಯ ದೂರದಲ್ಲೇ ಭರದ್ವಾಜರ ಆಶ್ರಮವನ್ನು ಕಂಡು, ಅಲ್ಲಿಯೇ ಸೈನ್ಯವನ್ನೆಲ್ಲಾ ಇಳುಹಿಸಿ, ಮಂತ್ರಿಗಳೊಡನೆ ತಾನು ಆಶ್ರಮದೊಳಕ್ಕೆ ಹೋದನು ॥೩೮॥

ಆ ಆಶ್ರಮದೊಳಗೆ, ಅಗ್ನಿಯಂತೆ ಪ್ರಜ್ವಲಿಸುತ ಕುಳಿತಿರುವ ಭರದ್ವಾಜ ಮುನಿಯನ್ನು ಕಂಡು, ಅತಿಭಕ್ತಿಯುಕ್ತನಾಗಿ ಸಾಷ್ಟಾಂಗ ನಮಸ್ಕಾರಮಾಡಿದನು ॥೩೯॥

ಜ್ಞಾತ್ವಾ ದಾಶರಥಿಂ ಪ್ರೀತ್ಯಾ ಪೂಜಯಾಮಾಸ ಮೌನಿರಾಟ್ ।
ಗೃಹೀತಪೂಜಂ ರಾಜಾನಂ ಪಪ್ರಚ್ಛ ಕುಶಲಂ ಮುನಿಃ ।
ಪುರೇ ರಾಷ್ಟ್ರೇ ಜನಪದೇ ಬಲೇ ಕೋಶೇ ಚ ಸರ್ವತಃ ॥೪೦॥

ಸರ್ವತ್ರ ಕುಶಲಂ ರಾಜಾ ಮುನಯೇ ಸ ನ್ಯವೇದಯತ್ ॥೪೧॥

ತತಸ್ತು ಭರತಂ ರಾಮಭಕ್ತಂ ಜ್ಞಾತ್ವಾ ಮಹಾಮುನಿಃ ।
ಭಕ್ತಾರ್ಚನಾದ್ಯಥಾ ತುಷ್ಯೇತ್ ನ ತಥಾತ್ಮಾರ್ಚನಾದ್ವಿಭುಃ ।
ಇತಿ ನಿಶ್ಚಿತ್ಯ ಭರತಂ ಆತಿಥ್ಯೇನ ನ್ಯಮನ್ತ್ರಯತ್ ॥೪೨॥

ಆತಿಥ್ಯಂ ಕರ್ತುಮಿಚ್ಛಾಮಿ ಸಸೈನ್ಯಸ್ಯ ತವಾನಘ ।
ಅದ್ಯ ನಿತ್ಯಾ ಸಸೈನ್ಯಸ್ತ್ವಂ ಶ್ವೋ ಗನ್ತಾ ರಾಮಸನ್ನಿಧಿಮ್ ॥೪೩॥

ಭವಾ ಯದಾಜ್ಞಾಪಯತಿ ತಥೇತಿ ಭರತೋಽಬ್ರವೀತ್ ॥೪೪॥

ಭರದ್ವಾಜಸ್ತ್ವಪಃ ಸ್ಪೃಷ್ಟ್ವಾ ಮೌನೀ ಹೋಮಗೃಹೇ ಸ್ಥಿತಃ ।
ದಧ್ಯೌ ಕಾಮದುಘಾಂ ಕಾಮವರ್ಷಿಣೀಂ ಕಾಮದೋ ಮುನಿಃ ॥೪೫॥

ಅಸೃಜತ್ ಕಾಮಧುಕ್ ಸರ್ವಂ ಯಥಾಕಾಮಮಲೌಕಿಕಮ್ ।
ಭರತಸ್ಯ ಸಸೈನ್ಯಸ್ಯ ಯಥೇಷ್ಟಂ ಸಮನೋರಥಮ್ ॥೪೬॥

ಆಗ ಆ ಭರದ್ವಾಜಮಹಾಮುನಿಯು, ಭರತನು ಬಂದುದನ್ನು ಕಂಡು, ಪ್ರೀತಿಯಿಂದ ಅವನನ್ನು ಪೂಜಿಸಿದನು. ಬಳಿಕ, ಮರ್ಯಾದೆಯನ್ನು ಸ್ವೀಕರಿಸಿದ ಭರತನನ್ನು ಕುರಿತು, ಪುರ ರಾಷ್ಟ್ರ ಜನಪದ ಬಲ ಕೋಶಗಳಲ್ಲೆಲ್ಲ ಕುಶಲಪ್ರಶ್ನೆ ಮಾಡಿದನು. ಅನಂತರ, ಆ ಭರತನು, ಸರ್ವತ್ರ ಕುಶಲವಾಗಿರುವುದೆಂದು ಭರದ್ವಾಜಮುನಿಗೆ ವಿಜ್ಞಾಪಿಸಿದನು ॥೪೦—೪೧॥

ಆಮೇಲೆ, ಭರದ್ವಾಜಮಹಾಮುನಿಯು, ಭರತನು ಮಹಾರಾಮಭಕ್ತನೆಂದು ತಿಳಿದು, ಪರಮಾತ್ಮನು ತನ್ನ ಭಕ್ತರ ಪೂಜೆಯಿಂದ ಎಷ್ಟು ಸಂತೋಷಪಡುವನೋ ತನ್ನ ಪೂಜೆಯಿಂದ ಅಷ್ಟು ಸಂತೋಷಪಡುವುದಿಲ್ಲವೆಂದು ನಿಶ್ಚಯಿಸಿ, ಭರತನನ್ನು ಕುರಿತು 'ಅಯ್ಯಾ! ಮಹಾನುಭಾವನೆ! ಸೈನ್ಯಸಹಿತನಾದ ನಿನಗೆ ಈಗ ಆತಿಥ್ಯವನ್ನು ಮಾಡಬೇಕೆಂದು ಇಚ್ಛಿಸುವೆನು. ಅದು ಕಾರಣ, ನೀನು ಈ ದಿವಸ ಇಲ್ಲಿದ್ದು, ನಾಳೆ ಶ್ರೀರಾಮನ ಸನ್ನಿಧಿಗೆ ಹೋಗುವನಾಗು' ಎಂದು ಆತಿಥ್ಯಕ್ಕಾಗಿ ಪ್ರಾರ್ಥಿಸಿದನು. ಆಗ ಭರತನು ತಮ್ಮಪ್ಪಣೆಯಂತೆಯೇ ಆಗಬಹುದೆಂದು ವಿಜ್ಞಾಪಿಸಿಕೊಂಡನು ॥೪೨—೪೪॥

ಅನಂತರ, ಸಕಲರ ಇಷ್ಟಾರ್ಥವನ್ನೂ ನೆರವೇರಿಸಶಕ್ಯವನಾದ ಭರದ್ವಾಜಮುನಿಯು, ಸ್ನಾನ ಮಾಡಿ ಶುಚಿಯಾಗಿ, ಹೋಮಗೃಹದಲ್ಲಿ ಸ್ವಲ್ಪಕಾಲ ಮೌನದಿಂದಿದ್ದು, ಸರ್ವರ ಇಷ್ಟಾರ್ಥವನ್ನೂ ವರ್ಷಿಸಶಕ್ಯುಕಾದ ಕಾಮಧೇನುವನ್ನು ಸ್ಮರಿಸಿದನು ॥೪೫॥

ಆಗ, ಆ ಕಾಮಧೇನುವು, ಭರತನಿಗೂ ಅವನ ಸೈನ್ಯಕ್ಕೂ ಅವರವರು ಅಪೇಕ್ಷಿಸಿದಂತೆ ದಿವ್ಯವಾಗಿ ಸಕಲವಾದ ಇಷ್ಟಾರ್ಥವನ್ನೂ ಸೃಜಿಸಿತು ॥೪೬॥

ಧನೈರ್ವಸ್ತ್ರೈಶ್ಚ ರತ್ನೈಶ್ಚ ಗನ್ಧೈರ್ಮಾಲ್ಯೈಶ್ಚ ಭೂಷಣೈಃ ।
ಶಯನಾಸನಯಾನೈಶ್ಚ ಸರ್ವೇ ತೃಪ್ತಾ ಬಭೂವಿರೇ ॥೪೭॥
ಏವಮೇಕದಿನಂ ತತ್ರ ಹ್ಯುಷಿತ್ವಾ ಸ್ವರ್ಗಸನ್ನಿಭೇ ।
ಅಭಿವಾದ್ಯಾಭ್ಯನುಜ್ಞಾತಃ ಚಿತ್ರಕೂಟಗಿರಿಂ ಯಯೌ ॥೪೮॥
ಚಿತ್ರಕೂಟಮನುಪ್ರಾಪ್ಯ ಸನ್ನಿವೇಶ್ಯ ಚ ಸೈನಿಕಾನ್ ।
ರಾಮಸನ್ದರ್ಶನಾಕಾಂಕ್ಷೀ ಪ್ರಯಯೌ ಭರತಃ ಸ್ವಯಮ್ ॥೪೯॥
ಕತುಘ್ನೇನ ಸುಮನ್ತ್ರೇಣ ಗುಹೇನ ಚ ಪರನ್ತಪಃ ।
ತಪಸ್ವಿಮಣ್ಡಲಂ ಸರ್ವಂ ವಿಚಿನ್ವಾನೋ ಮಹಾಮತಿಃ ॥೫೦॥
ರಾಮಾಶ್ರಮಮಪಶ್ಯನ್ ವೈ ದುಃಖಶೋಕಾಭಿಪೀಡಿತಃ ।
ಉವಾಚೇದಂ ಶುಭಂ ವಾಕ್ಯಂ ಮನ್ತ್ರಿಜ್ಞಾತಿಪುರೋಹಿತಾನ್ ॥೫೧॥
ಯಾವನ್ನ ರಾಮಂ ದ್ರಕ್ಷ್ಯಾಮಿ ಲಕ್ಷ್ಮಣಂ ವಾ ಮಹಾಬಲಮ್ ।
ವೈದೇಹೀಂ ವಾ ಮಹಾಭಾಗಾಂ ನ ಮೇ ಶಾನ್ತಿರ್ಭವಿಷ್ಯತಿ ॥೫೨॥
ಯಾವನ್ನ ಚನ್ದ್ರಸಙ್ಕಾಶಂ ಪದ್ಮಪತ್ರನಿಭೇಕ್ಷಣಮ್ ।
ಮುಖಂ ದ್ರಕ್ಷ್ಯಾಮಿ ರಾಮಸ್ಯ ನ ಮೇ ಶಾನ್ತಿರ್ಭವಿಷ್ಯತಿ ॥೫೩॥
ಯಾವನ್ನ ಚರಣೌ ಭ್ರಾತುಃ ಪಾರ್ಥಿವವ್ಯಞ್ಜನಾನ್ವಿತೌ ।
ಶಿರಸಾ ಧಾರಯಿಷ್ಯಾಮಿ ನ ಮೇ ಶಾನ್ತಿರ್ಭವಿಷ್ಯತಿ ॥೫೪॥

ಆ ಸಮಯದಲ್ಲಿ, ಧನಗಳಿಂದಲೂ ವಸ್ತ್ರಗಳಿಂದಲೂ ರತ್ನಗಳಿಂದಲೂ ಮಾಲಿಕೆಗಳಿಂದಲೂ ಭೂಷಣಗಳಿಂದಲೂ ಕೂಡ-ಅವರೆಲ್ಲರೂ ತೃಪ್ತರಾದರು ॥೪೬॥

ಹೀಗೆ ಸ್ವರ್ಗಸದೃಶವಾದ ಆ ಭರದ್ವಾಜಾಶ್ರಮದಲ್ಲಿ ಒಂದುದಿವಸ ವಾಸಮಾಡಿ, ಭರದ್ವಾಜರಿಂದ ಅನುಜ್ಞೆ ಪಡೆದು, ಭರತನು ಚಿತ್ರಕೂಟಪರ್ವತಕ್ಕೆ ಹೊರಟನು ॥೪೮॥

ಬಳಿಕ ಚಿತ್ರಕೂಟಪರ್ವತದ ಸಮೀಪಕ್ಕೆ ಹೋಗಿ, ಅಲ್ಲಿ ಸೈನಿಕರನ್ನೆಲ್ಲ ನಿಲ್ಲಿಸಿ, ತಾನು ರಾಮದರ್ಶನವನ್ನು ಅಪೇಕ್ಷಿಸುತ ಪರ್ವತದಮೇಲಕ್ಕೆ ಹೋದನು ॥೪೯॥

ಮಹಾಮತಿಯಾದ ಭರತನು, ಶತ್ರುಘ್ನನೊಡನೆಯೂ ಗುಹನೊಡನೆಯೂ ಸುಮಂತ್ರನೊಡನೆಯೂ ತಪಸ್ವಿ ಮಂಡಲವನ್ನೆಲ್ಲ ಹುಡುಕಿದರೂ ರಾಮನ ಆಶ್ರಮವನ್ನು ಕಾಣದೆ, ದುಃಖ ಶೋಕಗಳಿಂದ ಪೀಡಿತನಾಗಿ, ಮಂತ್ರಿ ಬಂಧು ಪುರೋಹಿತರುಗಳನ್ನು ಕುರಿತು ಈ ಪ್ರಕಾರವಾದ ಮಾತನ್ನು ಹೇಳಿದನು ॥೫೦—೫೧॥

ರಾಮನನ್ನೂ-ಮಹಾಬಲನಾದ ಲಕ್ಷ್ಮಣನನ್ನೂ-ಪೂಜ್ಯಳಾದ ಸೀತೆಯನ್ನೂ ನಾನು ಎಲ್ಲಿಯವರೆಗೆ ನೋಡುವುದಿಲ್ಲವೋ, ಅಲ್ಲಿಯವರೆಗೆ ನನಗೆ ಶಾಂತಿಯುಂಟಾಗುವುದಿಲ್ಲ ॥೫೨॥

ಚಂದ್ರಮಂಡಲ ಸದೃಶವಾಗಿಯೂ ಕಮಲಪತ್ರಕ್ಕೆ ಸಮಾನವಾದ ನೇತ್ರವುಳ್ಳದಾಗಿಯೂ ಇರುವ-ಶ್ರೀರಾಮನ ಮುಖವನ್ನು ನೋಡುವವರೆಗೂ, ನನಗೆ ಶಾಂತಿಯುಂಟಾಗುವುದಿಲ್ಲ ॥೫೩॥

ರಾಜಲಕ್ಷಣಲಕ್ಷಿತವಾದ ನಮ್ಮ ಅಣ್ಣನ ಪಾದಗಳನ್ನು ನನ್ನ ತಲೆಯಮೇಲೆ ಧರಿಸುವವರೆಗೂ, ನನಗೆ ಶಾಂತಿಯುಂಟಾಗುವುದಿಲ್ಲ ॥೫೪॥

ಯೋವನ್ನ ರಾಜ್ಯೇ ರಾಜ್ಯಾರ್ಹಃ ಪಿತ್ರಾ ಪೈತಾಮಹೇ ಸ್ಥಿತಃ ।
ಅಭಿಷೇಕಜಲಕ್ಲಿನ್ನೋ ನ ಮೇ ಕಾನ್ತಿರ್ಭವಿಷ್ಯತಿ ॥೫೫॥
ವದನ್ನೇವಂ ಸ ಭರತೋ ರಾಮಸಕ್ತಮನಾಭೃಶಮ್ ।
ಚಿತ್ರಕೂಟಗಿರೇಃ ಪಶ್ಚಾತ್ ಗಙ್ಗಾಯಾಉತ್ತರೇ ತಟೇ ॥೫೬॥
ವಿವಿಕ್ತೇ ರಾಮಸದನಂ ದಿವ್ಯಕಾನನಮಣ್ಡಿತಮ್ ।
ಸಫಲೈರಾಮ್ರಪನಸೈಃ ಕದಳೀಕಾಣ್ಡಶೋಭಿತಮ್ ॥೫೭॥
ಜಮ್ಬ್ವಾರೈರ್ನಾರಿಕೇಳೈಶ್ಚ ನಾರಙ್ಗೈರ್ಬದರೀವನೈಃ ।
ಖರ್ಜೂರೈರ್ಬೀಜಪೂರೈಶ್ಚ ಮೃದ್ವೀಕಾಭಿಶ್ಚ ಸರ್ವಶಃ ॥೫೮॥
ಚಮ್ಪಕೈಃ ಕೋವಿದಾರೈಶ್ಚ ಪುನ್ನಾಗೈರ್ಬಕುಳೈರ್ಧವೈಃ ।
ಮಾಲತೀಮಲ್ಲಿಕಾಜಾತೀಭಾಣ್ಡೀರೈಃ ಕುನ್ದಗುಲ್ಮಕೈಃ ॥೫೯॥
ಏವಂ ನಾನಾವಿಧೈರ್ವೃಕ್ಷೈಃ ವೃತಂ ರಾಮಾಶ್ರಮಂ ಶುಭಮ್ ।
ದದರ್ಶ ಭರತಃ ಶ್ರೀಮಾ ಸರ್ವತೋ ಮುನಿಸಂವೃತಮ್ ॥೬೦॥

ಇತಿ ಶ್ರೀಮದಯೋಧ್ಯಾಕಾಣ್ಡೇ ಭರತಸ್ಯ ರಾಮಾಶ್ರಮದರ್ಶನಂ
ನಾಮ ಷೋಡಶಃ ಸರ್ಗಃ.




ದೊರೆತನಕ್ಕೆ ತಕ್ಕವನಾದ ನಮ್ಮ ಅಣ್ಣನು ತಂದೆ ತಾತಂದಿರಿಂದ ಬಂದ ರಾಜ್ಯದಲ್ಲಿ ಅಭಿಷಿಕ್ತನಾಗುವವರೆಗೂ ನನಗೆ ಶಾಂತಿಯುಂಟಾಗುವುದಿಲ್ಲ ॥೫೫॥

ಹೀಗೆಂದು ಹೇಳುತಿರುವ ಆ ಭರತನು, ರಾಮನಲ್ಲಿ ಅತ್ಯಾಸಕ್ತವಾದ ಮನಸ್ಸುಳ್ಳವನಾಗಿ, ಗಂಗಾನದಿಯ ಉತ್ತರತೀರದಲ್ಲಿ, ಚಿತ್ರಕೂಟಪರ್ವತದ ಹಿಂಭಾಗದಲ್ಲಿ, ವಿಜನವಾದ ಪ್ರದೇಶದಲ್ಲಿ, ದಿವ್ಯವಾದ ವನಷಂಡದಿಂದ ಮಂಡಿತವಾಗಿಯೂ–ಫಲಭರಿತವಾದ ಚೂತಪನಸಾದಿ(ಹಲಸು) ವೃಕ್ಷಗಳಿಂದ ಯುಕ್ತವಾಗಿಯೂ–ಕದಳೀಕಾಂಡಗಳಿಂದ ಶೋಭಿತವಾಗಿಯೂ ಇರುವ-ಶ್ರೀರಾಮನ ಆಶ್ರಮವನ್ನು ಕಂಡನು ॥೫೬—೫೭॥

ಆ ರಾಮಾಶ್ರಮವು, ನಿಂಬೆ ತೆಂಗು ಹೆರಳೆ ಎಲಚಿ ಖರ್ಜೂರ ಮಾದಳ ದ್ರಾಕ್ಷಿ ಸಂಪಿಗೆ ಕೋವಿದಾರ ಪುನ್ನಾಗ ವಕುಳ ಧವ ಮುಂತಾದ ವೃಕ್ಷಗಳಿಂದಲೂ, ಮಾಲತಿ ಮಲ್ಲಿಗೆ ಜಾಜಿ ಕೊಂಡೆ ಕುಂದ ಮುಂತಾದ ಲತೆಗಳ ಮಂಟಪಗಳಿಂದಲೂ ಅಲಂಕೃತವಾಗಿದ್ದಿತು. ಹೀಗೆ ನಾನಾವಿಧ ವೃಕ್ಷಗಳಿಂದ ಪರಿವೃತವಾಗಿ ಶೋಭಿಸುತ–ಸರ್ವತ್ರ ಮುನಿಗಳಿಂದ ಅಲಂಕೃತವಾಗಿದ್ದ ಶ್ರೀರಾಮನ ಆಶ್ರಮವನ್ನು, ಮಹಾಕಾಂತಿಸಂಪನ್ನನಾದ ಭರತನು ನೋಡಿದನು ॥೫೮—೬೦॥

ಇದು ಅಯೋಧ್ಯಾಕಾಂಡದಲ್ಲಿ ಭರತಕೃತರಾಮಾಶ್ರಮದರ್ಶನವೆಂಬ
ಹದಿನಾರನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಸಪ್ತದಶಃ ಸರ್ಗಃ.

ಶ್ರೀ ಶಿವಉವಾಚ.

ಅಥ ಗತ್ವಾಶ್ರಮಪದಸಮೀಪಂ ಭರತಸ್ತದಾ ।
ಸೀತಾರಾಮಪದೈರ್ಯುಕ್ತಂ ಪಾವನಂ ಚಾತಿಶೋಭನಮ್ ॥೧॥
ಸ ತತ್ರ ವಜ್ರಾಙ್ಕುಶವಾರಿಜಾಞ್ಛಿ ತಧ್ವಜಾದಿಚಿಹ್ನಾನಿ ಪದಾನಿ ಸರ್ವತಃ ।
ದದರ್ಶರಾಮಸ್ಯ ಭುವೋತಿಮಙ್ಗಳಾನ್ಯವೇಷ್ಟಯತ್ಪಾದರಜಃ ಸಹಾನುಜಃ ॥೨॥
ಅಹೋಸ್ಮಿ ಧನ್ಯೋಹಮಮೂನಿ ರಾಮಪದಾರವಿನ್ದಾಙ್ಕಿತಭೂತಳಾನಿ ।
ಪಶ್ಯಾಮಿಯತ್ಪಾದರಜೋವಿಮೃಗ್ಯಂಬ್ರಹ್ಮಾದಿದೇವೈಃಶ್ರುತಿಭಿಶ್ಚ ನಿತ್ಯಮ್॥೩॥
ಇತ್ಯದ್ಭುತಪ್ರೇಮರಸಾಪ್ಲುತಾಶಯೋ ವಿಗಾಢಚೇತಾರಘುನಾಥಭಾವನೇ ।
ಆನನ್ದಬಾಷ್ಪಸ್ನಪಿತಸ್ತನಾನ್ತರಃಶನ್ಯೈರವಾಪಾಶ್ರಮಸನ್ನಿಧಿಂ ಹರೇಃ ॥೪॥
ಸತತ್ರದೃಷ್ಟ್ವಾರಘುನಾಥಮಾಸ್ಥಿತಂದೂರ್ವಾದಳಶ್ಯಾಮಲಮಾಯತೇಕ್ಷಣಮ್
ಜಟಾಕಿರೀಟಂನವವಲ್ಕಲಾನ್ವಿತಂಪ್ರಸನ್ನವಕ್ತ್ರಂತರುಣಾರುಣದ್ಯುತಿಮ್॥೫॥

ಅಯೋಧ್ಯಾಕಾಂಡದಲ್ಲಿ ಹದಿನೇಳನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಆ ಬಳಿಕ, ಭರತನು ಸೀತಾರಾಮರ ಹೆಜ್ಜೆಗಳ ಗುರುತುಳ್ಳದಾಗಿ—ಅತಿಪವಿತ್ರವಾಗಿ—ಅತಿಶೋಭನವಾಗಿರುವ-ಆಶ್ರಮಪ್ರದೇಶದ ಹತ್ತಿರಕ್ಕೆ ಹೋಗಿ, ಅಲ್ಲಿ-ವಜ್ರ ಅಂಕುಶ ಪದ್ಮ ಧ್ವಜ ಮುಂತಾದ ರೇಖೆಗಳಿಂದ ಅಲಂಕೃತವಾಗಿ—ಲೋಕಕ್ಕೆಲ್ಲ ಅತಿಮಂಗಳಕರವಾಗಿರುವ-ಶ್ರೀರಾಮಚಂದ್ರನ ಹೆಜ್ಜೆಗಳನ್ನು ಕಂಡನು. ಅನಂತರ, ತಮ್ಮನಾದ ಶತ್ರುಘ್ನನೊಡನೆ, ಆ ರಾಮನ ಪಾದಧೂಳಿಯನ್ನು ತಲೆಯಮೇಲೆ ಧರಿಸಿದನು॥೧—೨॥

ಆಗ 'ಅಹಹ! ನಾನು ಧನ್ಯನಾದೆನು. ರಾಮನ ಪಾದಕಮಲದಿಂದ ಚಿಹ್ನಿತವಾಗಿರುವ ಈ ಪ್ರದೇಶಗಳನ್ನೂ, ಬ್ರಹ್ಮಾದಿದೇವತೆಗಳಿಂದಲೂ ವೇದಗಳಿಂದಲೂ ನಿತ್ಯವೂ ಹುಡುಕಲ್ಪಡುತಿರುವ ಶ್ರೀರಾಮಪಾದಧೂಳಿಯನ್ನೂ, ಈಗ ನಾನು ನೋಡುತಿರುವೆನಲ್ಲ! ನನ್ನ ಭಾಗ್ಯಕ್ಕೆ ಎಣೆಯುಂಟೆ?' ಎಂದು ಹೇಳುತ, ಆಶ್ಚರ್ಯರಸದಲ್ಲಿಯೂ ಪ್ರೇಮರಸದಲ್ಲಿಯೂ ತೇಲಿಹೋಗುತಿರುವ ಮನಸ್ಸುಳ್ಳವನಾಗಿ, ಶ್ರೀರಾಮನ ಧ್ಯಾನದಲ್ಲಿಯೇ ಲೀನವಾದ ಚಿತ್ತವುಳ್ಳವನಾಗಿ ಆನಂದಬಾಷ್ಪದಿಂದ ನೆನೆದುಹೋದ ವಕ್ಷಸ್ಥಲವುಳ್ಳವನಾಗಿ, ಮೆಲ್ಲನೆ ಶ್ರೀರಾಮನ ಆಶ್ರಮದ ಸನ್ನಿಧಿಗೆ ಸೇರಿದನು॥೩—೪॥

ಆ ಆಶ್ರಮದೊಳಗೆ ಕುಳಿತಿರುವ-ದೂರ್ವಾದಳಶ್ಯಾಮನಾಗಿಯೂ ವಿಶಾಲನೇತ್ರನಾಗಿಯೂ ಜಟಾಮಕುಟಮಂಡಿತನಾಗಿಯೂ ಚೀರವಸ್ತ್ರನಾಗಿಯೂ ಪ್ರಸನ್ನ ಮುಖನಾಗಿಯೂ ಬಾಲಸೂರ್ಯಸಮಪ್ರಭನಾಗಿಯೂ ಸರ್ವದಾ ಶ್ರೀ ಸೀತಾದೇವಿಯನ್ನು ವಿನೋದಪಡಿಸುತಿರುವನಾಗಿಯೂ

ವಿನೋದಯನ್ತಂ ಜನಕಾತ್ಮಜಾಂ ಸದಾ ಸೌಮಿತ್ರಿಣಾಸೇವಿತಪಾದಪಙ್ಕಜಮ್।
ತದಾಭಿದುದ್ರಾವ ರಥಾದ್ರಥೋತ್ತಮಂ ಶುಚಾಹಪರ್ಯಾಚ್ಛ ತತ್ಪಾದಯುಗಂ ತಥಾಗ್ರಹೀತ್॥
ರಾಮಸ್ತಮಾಕೃಷ್ಯ ಸುದೀರ್ಘಬಾಹುಃ ದೋರ್ಭ್ಯಾಂ ಪರಿಷ್ವಜ್ಯ ಸಿಷಿಞ್ಚ ನೇತ್ರಜೈಃ
ಜಲೈರಥಾಬಿಭ್ರೋಪರಿ ಸನ್ಯವೇಶಯತ್ ಪುನಃಪುನಸ್ತಂ ಪರಿಷಸ್ವಜೇ ವಿಭುಃ॥
ನಿವೇಶ್ಯ ಭರತಂ ವೀರೋ ನಮಶ್ಚಕ್ರೇ ಪುರೋಹಿತಮ್ ।
ವವನ್ದೇ ಮಾತರಃ ಸರ್ವಾಃ ಪ್ರೇಮ್ಣಾ ಧರ್ಮವಿಧಿಕ್ರಮಾತ್ ॥೪॥
ಸರ್ವಾಸ್ತಾ ರಾಘವಂ ದೃಷ್ಟ್ವಾ ಸಾಶ್ರುನೇತ್ರಾಬಭೂವಿರೇ ।
ಕೌಸಲ್ಯಾ ಪುತ್ರಮಾಲಿಙ್ಗ್ಯ ಚಿರಕಾಲಶುಚಂ ಜಹೌ ॥೫॥
ಕೈಕೇಯೀ ಸ್ವಕೃತಂ ಕರ್ಮ ಚಿನ್ತಯಿತ್ವಾತಿಲಜ್ಜಿತಾ ।
ಸ್ವಾಙ್ಗಾನಿ ಸಮ್ಪ್ರವಿಷ್ಟೇವ ಸಾಶ್ರುನೇತ್ರಾನನಾ ಸ್ಥಿತಾ ॥೦॥
ಕಲ್ಯಾಣೀ ಮೈಥಿಲೀ ಶ್ವಶ್ರೂಃ ನತ್ವಾ ಪಾರ್ಶ್ವಗತಾ ಸ್ಥಿತಾ ।
ಲಕ್ಷ್ಮಣೋ ಮಾತರೋ ದೃಷ್ಟ್ವಾ ತಾಸಾಂ ಚಕ್ರೇ ನಮಸ್ಕ್ರಿಯಾಮ್॥
ಸುಮಿತ್ರಾ ಲಕ್ಷ್ಮಣಂ ದೃಷ್ಟ್ವಾ ಸಮಾಲಿಙ್ಗ್ಯ ಜಹೌ ಶುಚಮ್ ॥೧೧॥

ಲಕ್ಷ್ಮಣನಿಂದ ಸೇವಿಸಲ್ಪಡುವ ಪಾದಕಮಲವುಳ್ಳವನಾಗಿಯೂ ಇರುವ-ಶ್ರೀರಾಮನನ್ನು ನೋಡಿ, ಆಗ ದುಃಖಾತಿರೇಕದಿಂದ ತಟ್ಟನೆ ಅವನ ಹತ್ತಿರಕ್ಕೆ ಓಡಿಹೋದನು. ಬಳಿಕ, ಹರ್ಷಯುಕ್ತನಾಗಿ ಅವನ ಪಾದಯುಗ್ಮವನ್ನು ಗಟ್ಟಿಯಾಗಿ ಹಿಡಿದುಕೊಂಡು ನಮಸ್ಕರಿಸಿದನು ॥೫—೬॥

ಆಗ, ಮಹಾದೀರ್ಘಬಾಹುವಾದ ಶ್ರೀರಾಮಚಂದ್ರನು, ದೂರದಿಂದಲೇ ಆ ಭರತನನ್ನು ನೆಲೆದುಕೊಂಡು ಭುಜಗಳಿಂದ ಆಲಿಂಗಿಸಿ, ಆನಂದಬಾಷ್ಪಗಳನ್ನು ಅವನಮೇಲೆ ಸುರಿಯಿಸಿದನು; ಅನಂತರ, ಅವನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡನು; ಮತ್ತೆಮತ್ತೆ ಅವನನ್ನು ಆಲಿಂಗಿಸಿದನು ॥೭॥

ಬಳಿಕ, ಭರತನನ್ನು ಆಸನದಲ್ಲಿ ಕುಳ್ಳಿರಿಸಿ, ಪುರೋಹಿತರಾದ ವಸಿಷ್ಠರಿಗೆ ನಮಸ್ಕಾರಮಾಡಿದನು; ಅಮೇಲೆ, ಯಥಾವಿಧಿಯಾಗಿ ಸಮಸ್ತರಾದ ತಾಯಿಯಿರನ್ನೂ ಪ್ರೀತಿಯಿಂದ ನಮಸ್ಕರಿಸಿದನು ॥೪॥

ಆಗ ಆ ತಾಯಿಯರೆಲ್ಲರೂ ರಾಮನನ್ನು ನೋಡಿ ಕಣ್ಣಿನಲ್ಲಿ ನೀರುದುಂಬಿದವರಾದರು. ಕೌಸಲ್ಯೆಯು ಮಗನನ್ನು ತಬ್ಬಿಕೊಂಡು ಬಹುಕಾಲದಿಂದ ಮನಸ್ಸಿನಲ್ಲಿದ್ದ ದುಃಖವನ್ನೆಲ್ಲ ಬಿಟ್ಟು ಬಿಟ್ಟಳು ॥೯॥

ಕೈಕೇಯಿಯಾದರೋ, ತಾನು ಮಾಡಿದ ಕೆಲಸವನ್ನು ನೆನೆಸಿಕೊಂಡು ಅತಿ ಲಜ್ಜಿತಳಾಗಿ, ತನ್ನ ದೇಹದೊಳಗೆ ಅಡಗಿಹೋದವಳಾಗಿ, ಕಣ್ಣಿನಲ್ಲಿ ನೀರುಸುರಿಯಿಸುತ ನಿಂತುಕೊಂಡಳು ॥

ಆ ಸಮಯದಲ್ಲಿ, ಮಂಗಳಾತ್ಮಕಳಾದ ಸೀತಾದೇವಿಯು, ತನ್ನ ಅತ್ತೆಯರನ್ನೆಲ್ಲ ನಮಸ್ಕರಿಸಿ, ಅವರ ಮೊಗ್ಗುಲಿನಲ್ಲಿ ನಿಂತುಕೊಂಡಳು. ಲಕ್ಷ್ಮಣನೂ ಕೂಡ, ತನ್ನ ತಾಯಿಯರನ್ನು ಕಂಡು, ಅವರಿಗೆ ನಮಸ್ಕಾರಮಾಡಿದನು. ಸುಮಿತ್ರಾದೇವಿಯು, ಲಕ್ಷ್ಮಣನನ್ನು ನೋಡಿ, ಅವನನ್ನು ತಬ್ಬಿಕೊಂಡು ವ್ಯಸನವನ್ನು ಬಿಟ್ಟುಬಿಟ್ಟಳು ॥೧೧॥

ಯಥಾರ್ಹಮುಪವೇಶ್ಯಾಹ ಸರ್ವಾನೇವ ರಘೂತ್ತಮಃ ।
ಪಿತಾ ಮೇ ಕುಶಲೀ ಕಿಂ ವಾ ಮಾಂ ಕಿಮಾಹಾತಿದುಃಖಿತಃ ॥೧೦॥
ವಸಿಷ್ಠಸ್ತಮುವಾಚೇದಂ ಪಿತಾ ತೇ ರಘುನನ್ದನ ।
ತ್ವದ್ವಿಯೋಗಾಭಿತಪ್ತಾತ್ಮಾ ರಾಮೇತಿ ಸ ಮುಮೂರ ಹ ॥೧೩॥
ತಚ್ಛ್ರುತ್ವಾ ಕರ್ಣಶೂಲಾಭಂ ಗುರೋರ್ವಚನಮುಜ್ಝಿತಂ ।
ಹಾ ಹತೋಸ್ಮೀತಿ ಪತಿತೋ ರುದನ್ ರಾಮಃ ಸಲಕ್ಷ್ಮಣಃ ॥೧೪॥
ವಸಿಷ್ಠಃ ಸಾನ್ತ್ವವಚನೈಃ ಶಮಯಾಮಾಸ ತಾಂ ಶುಚಮ್ ॥೧೫॥
ತತೋ ಮನ್ದಾಕಿನೀಂ ಗತ್ವಾ ಸ್ನಾತ್ವಾ ತೇ ವೀತಕಲ್ಮಷಾಃ ।
ರಾಜ್ಞೇ ದದುರ್ಜಲಂ ತತ್ರ ಸರ್ವೇ ತೇ ಜಲಕಾಂಕ್ಷಿಣೇ ॥೧೬॥
ಪಿಣ್ಡಾನ್ ನಿರ್ವಾಪಯಾಮಾಸ ರಾಮೋ ಲಕ್ಷ್ಮಣಸಂಯುತಃ ।
ಇಙ್ಗುದೀಫಲಪಿಣ್ಯಾಕರಚಿತಾನ್ ಸ ಮಧುಪ್ಲುತಾನ್ ॥೧೭॥
ವಯಂ ಯದನ್ನಾಃ ಪಿತರಃ ತದನ್ನಾಃ ಶ್ರುತಿಕೋದಿತಾಃ ।
ಇತಿ ದುಃಖಾಶ್ರುಪೂರ್ಣಾಕ್ಷಾಃ ಪುನಃ ಸ್ನಾತ್ವಾಯಯುರ್ಗೃಹಮ್ ॥೧೮॥

ಅನಂತರ, ಅವರೆಲ್ಲರನ್ನೂ ಯಥಾಯೋಗ್ಯವಾಗಿ ಕುಳ್ಳಿರಿಸಿ, ಶ್ರೀರಾಮನು 'ನಮ್ಮ ತಂದೆಯು ಕ್ಷೇಮವಾಗಿರುವನೆ? ಅತಿ ದುಃಖಪಡುತಿರುವ ಅವನು ನನಗೆ ಏನುಹೇಳಿಕಳುಹಿಸಿರುವನು?' ಎಂದು ಕೇಳಿದನು ॥೧೨॥

ಆಗ ವಸಿಷ್ಠಮಹರ್ಷಿಯು 'ವತ್ಸ! ರಾಮ! ನಿನ್ನ ತಂದೆಯು, ನಿನ್ನ ವಿಯೋಗದಿಂದ ಬಹು ಸಂಕಟಪಟ್ಟವನಾಗಿ, ರಾಮ ರಾಮ-ಎಂದು ನಿನ್ನನ್ನೇ ಸ್ಮರಿಸುತ ಸ್ವರ್ಗಸ್ಥನಾಗಿಬಿಟ್ಟನು' ಎಂದು ಹೇಳಿದನು ॥೧೩॥

ಹೀಗೆ ಕರ್ಣಶೂಲಸದೃಶವಾದ ಗುರುವಿನ ಮಾತನ್ನು ಕೇಳಿ, ಲಕ್ಷ್ಮಣನೊಡಗೂಡಿದ ಶ್ರೀರಾಮಚಂದ್ರನು, ದುಃಖಪಡುತ 'ಅಯ್ಯೋ! ನಾನು ಕೆಟ್ಟೆನಲ್ಲ!!' ಎಂದು ತಟ್ಟನೆ ಭೂಮಿಯಲ್ಲಿ ಬಿದ್ದುಬಿಟ್ಟನು. ಆಗ, ವಸಿಷ್ಠಮುನಿಯು ಸಮಾಧಾನೋಕ್ತಿಗಳಿಂದ ಆ ದುಃಖವನ್ನು ಶಾಂತಿಗೊಳಿಸಿದನು ॥೧೪-೧೫॥

ಅನಂತರ, ಅಕಲ್ಮಷರಾದ ಅವರೆಲ್ಲರೂ ಗಂಗಾನದಿಗೆ ಹೋಗಿ ಸ್ನಾನಮಾಡಿ, ಅಲ್ಲಿ ಜಲಾಭಿಲಾಷಿಯಾಗಿದ್ದ ದಶರಥನಿಗೆ ಜಲಾಂಜಲಿಯನ್ನು ಕೊಟ್ಟರು ॥೧೬॥

ಆಗ ಶ್ರೀರಾಮನು ಲಕ್ಷ್ಮಣಯುಕ್ತನಾಗಿ, ಇಂಗಳದಹಣ್ಣಿನ ಹಿಂಡಿಯಿಂದ ಮಾಡಲ್ಪಟ್ಟು ಜೇನುತುಪ್ಪದಲ್ಲಿ ಅದ್ದಿದ ಪಿಂಡಗಳನ್ನು ದಶರಥನಿಗೆ ಸಮರ್ಪಿಸಿದನು ॥೧೭॥

ಆಗ ಇದನ್ನು ನೋಡಿ, ಅವರೆಲ್ಲರೂ ದುಃಖದಿಂದ ಕಣ್ಣೀರುದುಂಬಿದವರಾಗಿ-'ನಾವು ಯಾವ ಅನ್ನವನ್ನು ತಿನ್ನುವೆವೋ, ನಮ್ಮ ಪಿತೃಗಳಿಗೂ ಅದೇ ಅನ್ನವೆಂದು ಶ್ರುತಿಯು ಹೇಳುತ್ತಿರುವುದು' ಎಂಬುದಾಗಿ ಮಾತಾಡಿಕೊಳ್ಳುತ, ಮತ್ತೆ ಸ್ನಾನಮಾಡಿ ಆಶ್ರಮಕ್ಕೆ ಹೊರಟು ಬಂದರು ॥೧೮॥

ತತೋ ಜಘನ್ಯೈಃ ಸಹಿತೈಃ ಸೇವನಿ ಭ್ರಿಃ ಪುರಪ್ರಧಾನೈಶ್ಚ ಸಹೈವ ಸೈನಿಕೈಃ।
ಜನೇನಧರ್ಮಜ್ಞತಮೇನಧರ್ಮವಾ ನುಪೋಪವಿಷ್ಟೋಭರತಸ್ತದಾಗ್ರಜಮ್ ॥೧೯॥
ಉಪೋಪವಿಷ್ಟಸ್ತು ತದಾಸವೀರ್ಯವಾ ನ್ತಪಸ್ವಿವೇಷೇಣ ಸವಿಸ್ಮಯಂ ರಾಘವಮ್।
ಶ್ರಿಯಾಜ್ವಲನ್ತಂಭರತಃಕೃತಾಞ್ಜಲಿಃಯಥಾಮಹೇನ್ದ್ರಃಪ್ರಯತಃಪ್ರಜಾಪತಿಮ್॥೨೦॥
ಕಿಮೇಷವಾಕ್ಯಂಭರತೋದ್ಯರಾಘವಂಪ್ರಣಮ್ಯಸತ್ಕೃತ್ಯಚ ಸಾಧುವಕ್ಷ್ಯತಿ।
ಇತೀವ ತಸ್ಯಾರ್ಯಜನಸ್ಯ ತತ್ವತೋಬಭೂವ ಕೌತೂಹಲಮುತ್ತಮಂ ತದಾ ॥೨೧॥
ಸರಾಘವಃಸತ್ಯಧೃತಿಶ್ಚ ಲಕ್ಷ್ಮಣಃಮಹಾನುಭಾವೋ ಭರತಶ್ಚ ಧಾರ್ಮಿಕಃ।
ವೃತಾಃಸುಹೃದ್ಭಿಶ್ಚ ವಿರೇಜುರಧ್ವರೇಯಥಾಸದಸ್ಯೈಃಸಹಿತಾಸ್ತ್ರಯೋಗ್ನಯಃ ॥೨೨॥

ಇತಿ ಶ್ರೀಮದಯೋಧ್ಯಾಕಾಣ್ಡೇ ಶ್ರೀರಾಮಭರತಸಮಾಗಮೋ
ನಾಮ ಸಪ್ತದಶಃ ಸರ್ಗಃ.




ಬಳಿಕ, ಆ ಭರತನು, ಮಂತ್ರಿಗಳಿಂದಲೂ ಪಟ್ಟಣಿಗರಲ್ಲಿ ಮುಖ್ಯರಾದವರಿಂದಲೂ ಸೈನಿಕರಿಂದಲೂ ಧರ್ಮಜ್ಞತಮರಾದ ಜನರಿಂದಲೂ ಸಹಿತನಾಗಿ, ತನ್ನ ಅಣ್ಣನಾದ ರಾಮನ ಸವಿಾಪದಲ್ಲಿ, ಅತಿ ದೀನವೃತ್ತಿಯಿಂದ ಕುಳಿತುಕೊಂಡನು.॥೧೯॥

ಆಗ, ಮಹಾವೀರ್ಯನಾದ ಭರತನು, ತಪಸ್ವಿವೇಷವನ್ನು ಧರಿಸಿಕೊಂಡು ಕಾಂತಿಯಿಂದ ಪ್ರಜ್ವಲಿಸುತ್ತಿರುವ ರಾಮನನ್ನು ನೋಡಿ, ಮಹೇಂದ್ರನು ಬ್ರಹ್ಮನಹತ್ತಿರ ನಿಯತನಾಗಿ ಕುಳಿತುಕೊಳ್ಳುವಂತೆ, ಶ್ರೀರಾಮನ ಹತ್ತಿರ ಅತಿ ವಿನೀತನಾಗಿ ಕೈಮುಗಿದುಕೊಂಡು ಕುಳಿತನು ॥

ಹೀಗಿರುವ ಸಮಯದಲ್ಲಿ, 'ಈಗ ಈ ಭರತನು ರಾಮನಿಗೆ ನಮಸ್ಕಾರಮಾಡಿ ವೂಜಿಸಿ ಯಾವ ಶುಭವಾದ ಮಾತನ್ನು ವಿಜ್ಞಾಪಿಸುವನೋ!!' ಎಂದು, ಆ ಸಮಸ್ತ ಜನರಿಗೂ ಅತಿಯಾಗಿ ಕುತೂಹಲವುಂಟಾಗಿಬಿಟ್ಟಿತು ॥೨೧॥

ಆ ಸಮಯದಲ್ಲಿ, ಸತ್ಯಪರಾಕ್ರಮನಾದ ಆ ರಾಮನೂ, ಮಹಾನುಭಾವನಾದ ಲಕ್ಷ್ಮಣನೂ, ಧರ್ಮನಿಷ್ಠನಾದ ಭರತನೂ, ಈ ಮೂರು ಮಂದಿಯೂ ,ತಮ್ಮ ಮಿತ್ರರೊಡನೆ ಕೂಡಿದವರಾಗಿ, ಯಜ್ಞಶಾಲೆಯಲ್ಲಿ ಸದಸ್ಯರೊಡಗೂಡಿದ ತ್ರೇತಾಗ್ನಿಗಳಂತೆ ವಿರಾಜಿಸುತಿದ್ದರು॥೨೨॥

ಇದು ಅಯೋಧ್ಯಾಕಾಂಡದಲ್ಲಿ ಶ್ರೀರಾಮಭರತಸಮಾಗಮ ಕಥನವೆಂಬ
ಹದಿನೇಳನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಅಷ್ಟಾದಶಃ ಸರ್ಗಃ.

ಶ್ರೀ ಶಿವಉವಾಚ.

ತಂ ತು ರಾಮಃ ಸಮಾಜ್ಞಾಯ ಭರತಂ ಗುರುವತ್ಸಲಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ಪ್ರಷ್ಟುಂ ಸಮುಪಚಕ್ರಮೇ ॥೧॥
ಯನ್ನಿಮಿತ್ತಮಿದಂ ದೇಶಂ ಕೃಷ್ಣಾಜಿನಜಟಾಧರಃ ।
ಹಿತ್ವಾ ರಾಜ್ಯಂ ಪ್ರವಿಷ್ಟಸ್ತ್ವಂ ತತ್ ಸರ್ವಂ ವಕ್ತುಮರ್ಹಸಿ ॥೨॥
ರಾಘವಸ್ಯ ವಚಃ ಶ್ರುತ್ವಾ ಭರತೋಽತ್ಯನ್ತದುಃಖಿತಃ ।
ಭಕ್ತ್ಯಾ ಮೂಢ ಭರತೋ ರಾಮೇ ನಸಹಿಷ್ಣುರ್ವನೇ ಗತಮ್ ॥೩॥
ರಾಜಾನಮೇವ ಮಾಂ ಮತ್ವಾ ಶ್ರೀರಾಮಃ ಪ್ರವದತ್ಯಲಮ್ ।
ಇತಿ ಸಞ್ಚಿನ್ತ್ಯ ಮನಸಾ ವಚನಂ ಪ್ರತ್ಯವೋಚತ ॥೪॥
ಆರ್ಯಂ ತಾತಃ ಪರಿತ್ಯಜ್ಯ ಕೃತ್ವಾ ಕರ್ಮ ಸುದುಷ್ಕರಮ್ ।
ಗತಃ ಸ್ವರ್ಗಂ ಮಹಾಬಾಹುಃ ಪುತ್ರಶೋಕಾಭಿಪೀಡಿತಃ ॥೫॥
ಸ್ತ್ರಿಯಾ ನಿಯುಕ್ತಃ ಕೈಕೇಯ್ಯಾ ಮಮ ಮಾತ್ರಾ ಪರನ್ತಪ ।
ಚಕಾರ ಸುಮಹತ್ ಪಾಪಂ ಇದಮಾತ್ಮಯಶೋಹರಮ್ ॥೬॥

ಅಯೋಧ್ಯಾಕಾಂಡದಲ್ಲಿ ಹದಿನೆಂಟನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಹೀಗಿರುವ ಸಮಯದಲ್ಲಿ, ಅನುಜನಾದ ಲಕ್ಷ್ಮಣನೊಡಗೂಡಿದ ಶ್ರೀ ರಾಮನು, ಭರತನು ಜ್ಯೇಷ್ಠನಲ್ಲಿ ಪ್ರೀತಿಯಿಂದ ಇಲ್ಲಿಗೆ ಬಂದಿರುವನೆಂದು ತಿಳಿದುಕೊಂಡು 'ವತ್ಸ! ಭರತ! ನೀನು ರಾಜ್ಯವನ್ನು ಬಿಟ್ಟುಬಿಟ್ಟು—ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿಕೊಂಡು ಇಲ್ಲಿಗೆ ಯಾವ ನಿಮಿತ್ತದಿಂದ ಬಂದೆಯೋ, ಅದೆಲ್ಲವನ್ನೂ ಹೇಳಬೇಕೆಂದು ನಾನು ಅಪೇಕ್ಷಿಸುವೆನು' ಎಂದು ಪ್ರಶ್ನೆಮಾಡಿದನು ॥೧–೨॥

ಅನಂತರ, ರಾಮನಲ್ಲಿ ಭಕ್ತಿಯುಳ್ಳವನಾಗಿ-ಅವನು ಅರಣ್ಯಕ್ಕೆ ಹೋದುದನ್ನು ಸಹಿಸದಿರುವ ಆ ಭರತನು, ರಾಮನ ಮಾತನ್ನು ಕೇಳಿ, ಅತ್ಯಂತ ದುಃಖಪಟ್ಟವನಾಗಿ 'ನಾನು ದೊರೆಯಾಗಿಯೇ ಇರುವನೆಂದು ತಿಳಿದು ಶ್ರೀರಾಮನು ನನ್ನನ್ನು ಮಾತನಾಡಿಸುವನು' ಎಂದು ಮನಸ್ಸಿನಲ್ಲಿ ಯೋಚಿಸಿದವನಾಗಿ, ಶ್ರೀರಾಮನಿಗೆ ಈರೀತಿಯಾಗಿ ಉತ್ತರಹೇಳಿದನು ॥೩–೪॥

ಪೂಜ್ಯನೆ! ಮಹಾತ್ಮನಾದ ನಮ್ಮ ತಂದೆಯು, ಆರ್ಯನಾದ ನಿನ್ನನ್ನು ಅರಣ್ಯಕ್ಕೆ ಕಳುಹಿಸಿಬಿಟ್ಟು, ಅತಿ ದುಷ್ಕರವಾದ ಕರ್ಮವನ್ನು ಮಾಡಿ, ಪುತ್ರಶೋಕದಿಂದ ಪೀಡಿತನಾಗಿ ಸ್ವರ್ಗಕ್ಕೆ ಹೋಗಿಬಿಟ್ಟನು ॥೫॥

ಶತ್ರುಸಂತಾಪಕನಾದ ರಾಮನೆ! ಕೇವಲ ಮೂರ್ಖಸ್ತ್ರೀಯಾದ–ನನ್ನ ತಾಯಾದ–ಕೈಕೇಯಿಂದ ನಿಯುಕ್ತನಾದ ನಮ್ಮ ತಂದೆಯು, ತನಗೆ ಅಪಯಶಸ್ಕರವಾದ ಈ ದೊಡ್ಡ ಪಾಪಕೃತ್ಯವನ್ನು ಮಾಡಿದನು ॥೬॥

ಸಾ ರಾಜ್ಯಫಲಮಪ್ರಾಪ್ಯ ವಿಧವಾ ಶೋಕಕರ್ಶಿತಾ ।
ಪತಿಷ್ಯತಿ ಮಹಾಘೋರೇ ನಿರಯೇ ಜನನೀ ಮಮ ॥೬॥

ಭ್ರಾತುಃ ಶಿಷ್ಯಸ್ಯ ದಾಸಸ್ಯ ಪ್ರಸಾದಂ ಕರ್ತುಮರ್ಹಸಿ ।
ಅಭಿಷಿಞ್ಚೈನಂ ಚಾದ್ಯೈವ ರಾಜ್ಯೇನ ಮಧುವಾನಿವ ॥೭॥

ಇಮಾಃ ಪ್ರಕೃತಯಃ ಸರ್ವಾಃ ವಿಧವಾಮಾತರಞ್ಚ ಯಾಃ ।
ತ್ವತ್ಸಕಾಶಮನುಪ್ರಾಪ್ತಾಃ ಪ್ರಸಾದಂ ಕರ್ತುಮರ್ಹಸಿ ॥೮॥

ಶೇಷೋ ವಹತಿ ಭೂಭಾರಂ ಕಾ ಕಥಾ ರಾಜಶೇಷಸು ಸಃ ।
ಗಜೋ ವಹತಿ ಯಂ ಭಾರಂ ಗೋವತ್ಸೇ ಸ ಕಥಂ ಭವೇತ್ ॥೧೦॥

ಮಹಾವೀರಸಹೇ ಯುದ್ಧೇ ಕಥಂ ಭೀರುಃ ಪ್ರವರ್ತತೇ ।
ಭೂಧರಃ ಸಹತೇ ವಾಯುಂ ಪ್ರಳಯೋತ್ಥಂ ನ ಶಾಲ್ಮಲಿಃ ॥೧೧॥

ಸಿಂಹತ್ರಸ್ತಾ ವೃಗಾಃ ಸರ್ವೇ ಗ್ರಾಮಸಿಂಹಾತ್ ಕಥಂ ಭಯಮ್ ।
ನಿವರ್ತತೇ ತಮಃ ಸೂರ್ಯಾತ್ ಖದ್ಯೋತೈರ್ನ ನಿವರ್ತತೇ ॥೧೨॥

ಇಷ್ವಕ್ಕೆಲ್ಲ ಕಾರಣಭೂತಳಾದ ನಮ್ಮ ತಾಯಿಯು, ರಾಜ್ಯವಾಪ್ತಿ ರೂಪವಾದ ಫಲವನ್ನು ಪಡೆಯದೆಯೇ, ಈಗ ವೈಧವ್ಯಕ್ಕೂ ಗುರಿಯಾಗಿ, ಶೋಕಪೀಡಿತಳಾಗಿ, ಮುಂದೆ ಮಹಾ ಘೋರವಾದ ನರಕದಲ್ಲಿ ಬೀಳುವಳು ॥೬॥

ನಾನು ನಿನಗೆ ತಮ್ಮನಾಗಿಯೂ ಶಿಷ್ಯನಾಗಿಯೂ ದಾಸನಾಗಿಯೂ ಇರುವೆನು. ನನ್ನ ವಿಷಯದಲ್ಲಿ ನೀನು ಅನುಗ್ರಹವಾಡಿಯೇ ತೀರಬೇಕು. ನೀನು ಸಾಕ್ಷಾದ್ದೇವೇಂದ್ರನಂತೆ ಈಗಲೇ ರಾಜ್ಯಾಭಿಷೇಕವಾಡಿಕೊಳ್ಳಬೇಕೆಂದು ನಾನು ಪ್ರಾರ್ಥಿಸುವೆನು ॥೭॥

ಈ ಸಮಸ್ತವಾದ ರಾಷ್ಟ್ರಜನರೂ, ವಿಧವೆಯರಾಗಿ ದುಃಖಪಡುತಿರುವ ತಾಯಿಯರೂ ನಿನ್ನ ಸಮೀಪಕ್ಕೆ ಬಂದಿರುವರಲ್ಲವೆ! ಇವರವಿಷಯದಲ್ಲಿಯಾದರೂ ನೀನು ಅನುಗ್ರಹವನ್ನು ತೋರಿಸಬೇಕಾಗಿರುವುದು ॥೮॥

ಆರ್ಯ! ದೊರೆತನಕ್ಕೆ ನೀನೇ ಅರ್ಹನಲ್ಲದೆ, ನಾನೆಂದಿಗೂ ಸಮರ್ಥನಲ್ಲ. ಆದಿಶೇಷನು ಭೂಭಾರವನ್ನು ಹೊರಒಲ್ಲನು. ನೀರುಹಾವುಗಳು ಅದನ್ನು ಹೊರಬಲ್ಲುವೆ? ದೊಡ್ಡ ಆನೆಯು ಯಾವ ಭಾರವನ್ನು ಹೊರಬಲ್ಲುದೋ, ಅದು ಸಣ್ಣ ಕರುವಿನಲ್ಲಿ ಹೇಗಿರಬಲ್ಲುದು? ॥೧೦॥

ಮಹಾವೀರನು ಸಹಿಸಬಹುದಾದ ಯುದ್ಧದಲ್ಲಿ, ಕೇವಲ ಭಯಶಾಲಿಯಾದವನು ಹೇಗೆ ಪ್ರವರ್ತಿಸುವನು? ಪ್ರಳಯವಾಯುವಿನ ತಾಪವನ್ನು ದೊಡ್ಡ ದಿಬ್ಬವು ಸಹಿಸಬಲ್ಲುದಲ್ಲದೆ, ಸಣ್ಣ ಬೂಮು ಗದ ಮರವೆಂದಿಗೂ ಸಹಿಸಲಾರದು ॥೧೧॥

ಸಿಂಹವನ್ನು ಕಂಡರೆ ಮೃಗಗಳೆಲ್ಲವೂ ಹೆದರುವುವು; ಗ್ರಾಮಸಿಂಹದಿಂದ ಅವುಗಳಿಗೆ ಭಯ ವೆಲ್ಲಿಯದು? ಕತ್ತಲೆಯು ಸೂರ್ಯನಿಂದಲೇ ನಿವೃತ್ತಿಹೊಂದುವುದಲ್ಲದೆ, ದೀಪದ ಹುಳುವಿನಿಂದ ಹೊಂದಲಾರದು ॥೧೨॥

ವಿಕಾಸಮೇತಿ ಸೂರ್ಯೇಣ ನಾಲಾತ್ಯೈಃ ಕಮಲಾಕರಃ ।
ವಿಧಿಜನ್ಯಾ ಜಗತ್ಸೃಷ್ಟಿಃ ನ ಕುಲಾಲ್ಯೈಃ ಪ್ರವರ್ತತೇ ॥೧೩॥
ವೃದ್ಧಾಧಿಕಾರಧರ್ಮೇಷು ಕಥಂ ಬಾಲಃ ಪ್ರವರ್ತತೇ ।
ಪಾಲನೀಯೇ ತ್ವಯಾ ರಾಜ್ಯೇ ಕಾ ಕಥಾ ಮಮ ರಾಘವ ॥೧೪॥
ರಾಜ್ಯಭಾರಸಮರ್ಥೇ ಹಿ ತ್ವಯಿ ಶಕ್ತಿಮತಿ ಸ್ಥಿತೇ ।
ಹೀನಶಕ್ತಿಗುಣೋ ಬಾಲಃ ಕಥಂ ರಾಜ್ಯಧುರಂ ವಹೇ ॥೧೫॥
ಇತ್ಯುಕ್ತ್ವಾ ಚರಣೌ ಭ್ರಾತುಃ ಚಿರಮಾದಾಯ ಭಕ್ತಿತಃ ।
ರಾಮಸ್ಯ ಪುರತಃ ಸಾಕ್ಷಾತ್ ದಂಡ್ಡವತ್ ಪತಿತೋ ಭುವಿ ॥೧೬॥
ಉತ್ಥಾಪ್ಯ ರಾಘವಃ ಶೀಘ್ರಂ ಆರೋಪ್ಯಾಙ್ಕೇತಿಹಾರ್ದತಃ ।
ಉವಾಚ ಭರತಂ ರಾಮಃ ಸ್ನೇಹಾರ್ದ್ರನಯನಃ ಶನೈಃ ॥೧೭॥
ನಾತ್ಮನಃ ಕಾಮುಕಾರೋಸ್ತಿ ಪುರುಷೋಯಮನೀಶ್ವರಃ ।
ಇತಶ್ಚೇತರತಶ್ಚೈನಂ ಕೃತಾನ್ತಃ ಪರಿಕರ್ಷತಿ ॥೧೮॥
ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।

ಕಮಲಸರಸ್ಸು ಸೂರ್ಯನಿಂದ ಅರಳುವುದಲ್ಲದೆ, ಕೊಳ್ಳಿಗಳಿಂದ ಅರಳುವುದಿಲ್ಲ. ಪ್ರಪಂಚ ಸೃಷ್ಟಿಯು ಚತುರ್ಮುಖಬ್ರಹ್ಮನಿಂದ ಸಾಧ್ಯವಲ್ಲದೆ, ಕುಂಬಾರರಿಂದ ಸಾಧ್ಯವಲ್ಲ ॥೧೩॥

ವೃದ್ಧರು ಮಾಡಬೇಕಾದ ಧರ್ಮಗಳಲ್ಲಿ ಬಾಲಕನು ಹೇಗೆ ಪ್ರವರ್ತಿಸುವನು? ಅಯ್ಯಾ! ರಾಘವ! ನಿನ್ನಿಂದ ಪಾಲಿಸಲ್ಪಡಬೇಕಾಗಿರುವ ರಾಜ್ಯದಲ್ಲಿ ನನಗೆ ಅವಕಾಶವೆಲ್ಲಿಯದು? ॥೧೪॥

ಮಹಾಶಕ್ತಿಯುಕ್ತನಾಗಿ ರಾಜ್ಯಭಾರಸಮರ್ಥನಾದ ನೀನು ಇರುವಾಗ, ಶಕ್ತಿಹೀನನೂ ಗುಣಹೀನನೂ ಆದ ಬಾಲಕನಾಗಿರುವ ನಾನು ರಾಜ್ಯಭಾರವನ್ನು ಹೇಗೆ ವಹಿಸಬಲ್ಲೆನು? (ಎಂದು ಭರತನು ಪ್ರಾರ್ಥಿಸಿದನು) ॥೧೫॥

ಹೀಗೆಂದು ಹೇಳಿ, ಆ ಭರತನು, ಭಕ್ತಿಯಿಂದ ತನ್ನ ಅಗ್ರಜನಾದ ರಾಮನ ಪಾದಗಳನ್ನು ಬಹಳಹೊತ್ತು ಗಟ್ಟಿಯಾಗಿ ಹಿಡಿದುಕೊಂಡು, ಅವನ ಮುಂದುಗಡೆ-ಅವನು ಕಾಣುವ ಹಾಗೆ-ನೆಲದಮೇಲೆ ದಂಡಾಕಾರವಾಗಿ ಬಿದ್ದುಗೊಂಡನು ॥೧೬॥

ಆಗ, ರಘುಕುಲನಂದನನಾದ ಶ್ರೀರಾಮನು, ಭರತನನ್ನು ಬೇಗನೆ ಮೇಲಕ್ಕೆಬ್ಬಿಸಿ, ಅತಿ ಸ್ನೇಹದಿಂದ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಪ್ರೀತಿಯಿಂದ ಕಣ್ಣೀರುಸುರಿಯಿಸುತ, ಅವನನ್ನು ಕುರಿತು ಮೆಲ್ಲಗೆ ಮಾತನಾಡಿದನು ॥೧೭॥

ವತ್ಸ! ಭರತ! ಇದೇನು ನೀನು ಹೀಗೆ ಸಂಕಟಪಡುವೆ? ವಿವೇಕಿಯಾದವನು ಹೀಗೆ ಸಂಕಟಪಡುವುದು ಯುಕ್ತವಲ್ಲ. ಜೀವನು ಸ್ವತಂತ್ರನಾಗಿ ಯಾವ ಕೆಲಸವನ್ನೂ ಮಾಡಲಾರನು; ಇವನು ತಾನು ಪರಾಧೀನನಾಗಿರುವನು. ಇವನನ್ನು, ವಿಧಿಯು ಇತ್ತಲೂ ಅತ್ತಲೂ ಸೆಳೆಯುತ್ತಿರುವುದು ॥೧೮॥

ಲೋಕದಲ್ಲಿ, ಅಭಿವೃದ್ಧಿಯೆಂಬುದೆಲ್ಲವೂ ಕ್ಷಯಕಾಲವುಂಟಾಗುವವರೆಗೆ ಮಾತ್ರವೇ ಇರತಕ್ಕುದು. ಮೇಲಕ್ಕೆ ಹತ್ತುವುದೆಲ್ಲವೂ ಪತನಕಾಲಪರ್ಯಂತವೇ ಇರತಕ್ಕುದು, ಪ್ರಾಣಿಗಳ

ಸಂಯೋಗಾವಿಪ್ರಯೋಗಾನ್ತಾಃ ಮರಣಾನ್ತಂ ಹಿ ಜೀವಿತಮ್ ॥೧೪॥
ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್ಭಯಮ್ ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಮ್ ॥೧೫॥
ಯಥಾಗಾರಂ ದೃಢಂ ಸ್ಥೂಲಂ ಜೀರ್ಣಂ ಭೂತ್ವಾವಸೀದತಿ ।
ತಥೈವ ಸೀದನ್ತಿ ನರಾಃ ಜರಾಮೃತ್ಯುವಶಂ ಗತಾಃ ॥೧೬॥
ಅತ್ಯೇತಿ ರಜನೀ ಯಾ ತು ಸಾ ನ ಪ್ರತಿನಿವರ್ತತೇ ।
ಯಾತ್ಯೇವ ಯಮುನಾ ಪೂರ್ಣಾ ಸಮುದ್ರಂ ಲವಣಾಕರಮ್ ॥೧೭॥
ಅಹೋರಾತ್ರಾಣಿ ಗಚ್ಛನ್ತಿ ಸರ್ವೇಷಾಂ ಪ್ರಾಣಿನಾಮಿಹ ।
ಆಯೂಂಷಿ ಕ್ಷಪಯನ್ತ್ಯಾಶು ಗ್ರೀಷ್ಮೇ ಜಲಮಿವಾಂಶವಃ ॥೧೮॥
ಆತ್ಮಾನಮನುಶೋಚ ತ್ವಂ ಕಿಮನ್ಯಮನುಶೋಚಸಿ ।
ಆಯುಸ್ತೇ ಹೀಯತೇ ಯಸ್ಯ ಸ್ಥಿತಸ್ಯ ಚ ಗತಸ್ಯ ಚ ॥೧೯॥
ಸಹೈವ ಮೃತ್ಯುರ್ವ್ರಜತಿ ಸಹ ಮೃತ್ಯುರ್ನಿಷೀದತಿ ।
ಗತ್ವಾ ಸುದೀರ್ಘಮಧ್ವಾನಂ ಸಹ ಮೃತ್ಯುರ್ನಿವರ್ತತೇ ॥೨೦॥

ಪರಸ್ಪರ ಸಂಯೋಗವೆಂಬುದು ವಿಯೋಗಕಾಲವೊದಗುವವರೆಗೇ ಇರತಕ್ಕುದು. ಇವುಗಳಂತೆಯೇ, ಜೀವಿತವೆಂಬುದೂ ಮರಣಪರ್ಯಂತವಾತ್ರವೇ ಇರತಕ್ಕುದು ॥೧೪॥

ಕಳಿತಿರುವ ಹಣ್ಣುಗಳಿಗೆ ಕೆಳಕ್ಕೆ ಬೀಳುವುದೊಂದು ಹೊರತು ಮತ್ತಾವುದರಿಂದಲೂ ಹೇಗೆ ಭಯವಿಲ್ಲವೋ, ಹಾಗೆ ಈ ಲೋಕದಲ್ಲಿ ಜನ್ಮವೆತ್ತಿದ ಮನುಷ್ಯನಿಗೆ ಮರಣವನ್ನು ಬಿಟ್ಟರೆ ಮತ್ತಾವುದರಿಂದಲೂ ಭಯವಿಲ್ಲ ॥೧೫॥

ದೃಢವಾಗಿಯೂ ಸ್ಥೂಲವಾಗಿಯೂ ಇರುವ ಮನೆಯು ಹಳೆಯದಾದಮೇಲೆ ಹೇಗೆ ಮುರಿದು ಹೋಗುವುದೋ, ಹಾಗೆಯೇ ಪುರುಷರೂ ಜರಾಮರಣಗಳಿಗೆ ವಶರಾಗಿ ನಾಶಹೊಂದುವರು ॥

ಪುರುಷರಿಗೆ ಯಾವುದೊಂದು ರಾತ್ರಿಯು ಕಳೆದು ಹೋಗುವುದೋ, ಅದು ಮತ್ತೆ ಹಿಂದಿರುಗುವುದಿಲ್ಲ. ಜಲಪರಿಪೂರ್ಣವಾದ ಯಮುನಾ ನದಿಯು, ಸಮುದ್ರವನ್ನು ಕುರಿತು ಹೋಗುತಿರುವುದೇ ಹೊರತು, ಅದೆಂದಿಗೂ ಹಿಂದಿರುವುದಿಲ್ಲವಲ್ಲವೆ! ॥೧೭॥

ಈ ಲೋಕದಲ್ಲಿ, ಸರ್ವದಾ ಕಳೆದು ಹೋಗುತಿರುವ ಅಹೋರಾತ್ರಗಳು, ಗ್ರೀಷ್ಮಕಾಲದಲ್ಲಿ ಸೂರ್ಯಕಿರಣಗಳು ಜಲವನ್ನು ಕ್ಷಯಹೊಂದಿಸುವಂತೆ, ಸಕಲಪ್ರಾಣಿಗಳಿಗೂ ಬೇಗಬೇಗನೆ ಆಯುಸ್ಸನ್ನು ಕಡಮೆಮಾಡುವುವು ॥೧೮॥

ನೀನು ನಿನ್ನನ್ನೇ ಕುರಿತು ವ್ಯಸನಪಡುವನಾಗು; ಮತ್ತೊಬ್ಬರ ವಿಷಯವನ್ನು ಕುರಿತು ಏಕೆ ವ್ಯಸನಪಡುವೆ? ನೀನು ಕುಳಿತಿದ್ದರೂ ನಿಂತಿದ್ದರೂ ನಡೆಯುತಿದ್ದರೂ ನಿನ್ನ ಆಯುಸ್ಸು ಕಳೆಯುತ್ತಲೇ ಇರುವುದಲ್ಲವೆ! ॥೧೯॥

ಪುರುಷರಿಗೆ, ಮೃತ್ಯುವು ಜತೆಯಲ್ಲಿಯೇ ಹೋಗುತಿರುವುದು; ಜತೆಯಲ್ಲಿಯೇ ಕುಳಿತುಕೊಳ್ಳುವುದು; ಬಹುದೂರ ಮಾರ್ಗ ನಡೆದುಹೋದರೂ, ಮತ್ತೆ ಮೃತ್ಯುವು ಜತೆಯಲ್ಲಿಯೇ ಹಿಂದಿರುಗಿ ಬರುವುದು ॥೨೦॥

ಗಾತ್ರೇಷು ವಲಯಃ ಪ್ರಾಪ್ತಾಃ ಶ್ವೇತಾಶ್ಚೈವ ಶಿರೋರುಹಾಃ ।
ಜರಯಾ ಪುರುಷೋ ಜೀರ್ಣಃ ಕಿಂ ಹಿ ಕೃತ್ವಾ ಪ್ರಭಾವಯೇತ್ ॥೬೬॥

ನನ್ದನ್ತ್ಯುದಿತಆದಿತ್ಯೇ ನನ್ದನ್ತ್ಯಸ್ತಮಿತೇ ರವೌ ।
ಆತ್ಮನೋ ನಾವಬುಧ್ಯನ್ತೇ ಮನುಷ್ಯಾಜೀವಿತಕ್ಷಯಮ್ ॥೬೭॥

ಹೃಷ್ಯನ್ತ್ಯೃತುಮುಖಂ ದೃಷ್ಟ್ವಾ ನವಂನವಮಿಹಾಗತಮ್ ।
ಋತೂನಾಂ ಪರಿವರ್ತೇನ ಪ್ರಾಣಿನಾಂ ಪ್ರಾಣಸಂಕ್ಷಯಃ ॥೬೮॥

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹಾರ್ಣವೇ ।
ಸಮೇತ್ಯ ಚ ವ್ಯಪೇಯಾತಾಂ ಕಾಲಮಾಸಾದ್ಯ ಕಞ್ಚನ ॥೬೯॥
ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ।
ಸಮೇತ್ಯ ವ್ಯವಧಾವನ್ತಿ ಧ್ರುವೋ ಹ್ಯೇಷಾಂ ವಿನಾಭವಃ ॥೭೦॥
ನಾತ್ರ ಕಶ್ಚಿದ್ಯಥಾಭಾವಂ ಪ್ರಾಣೀ ಸಮತಿವರ್ತತೇ ।
ತೇನ ತಸ್ಮಿನ್ ನ ಸಾಮರ್ಥ್ಯಂ ಪ್ರೇತಸ್ಯಾನ್ಯಾನುಶೋಚತಃ ॥೭೧॥

ಮನುಷ್ಯನಿಗೆ, ಶರೀರವೆಲ್ಲ ಸುಕ್ಕುಹಿಡಿದು ಹೋಗುವುದು ; ಕೂದಲೆಲ್ಲ ಬೆಳ್ಳಗಾಗುವುವು ; ವಾರ್ಧಕದಿಂದ ಪುರುಷನೇ ಜೀರ್ಣನಾಗುವನು. ಹೀಗಿರುವಾಗ, ಏನನ್ನು ಮಾಡಿದರೆ ತಾನೇ ಅವನ ಪೂರ್ವಾವಸ್ಥೆ ಬರುವುದು? ॥೬೬॥

ಪುರುಷರು, ಸೂರ್ಯನುದಯಿಸಿದರೆ ಹರ್ಷಪಡುವರು ;— ಸೂರ್ಯಾಸ್ತವಾದರೆ ಸಂತೋಷ ಪಡುವರು. ಈ ಸೂರ್ಯೋದಯಾಸ್ತಮಯಗಳಿಂದ ತಮಗೆ ಆಯುಸ್ಸು ಕಳೆದು ಹೋಗುವು ದೆಂಬುದನ್ನು ಮಾತ್ರ ಯಾರೂ ಯೋಚಿಸುವುದೇ ಇಲ್ಲ ॥೬೭॥

ಲೋಕದಲ್ಲಿ, ಹೊಸಹೊಸವಾದ ಋತುಗಳು ಉದಯಿಸುತಿರುವುದನ್ನು ನೋಡಿ ಮನು ಷ್ಯರು ವಿಶೇಷವಾಗಿ ಹರ್ಷಪಡುವರು. ಆದರೆ, ಋತುಗಳು ಸುತ್ತುತಿರುವುದರಿಂದ ಪ್ರಾಣಿಗ ಳಿಗೆ ಆಯುಸ್ಸು ಕಡಮೆಯಾಗುವುದು ॥೬೮॥

ಒಂದು ದೊಡ್ಡ ಸಮುದ್ರದಲ್ಲಿ—ಇತ್ತಕಡೆಯಿಂದ ಹೋಗುತಿರುವ ಒಂದು ಕಟ್ಟಿಗೆಯೂ—ಅತ್ತಕಡೆಯಿಂದ ಬರುತಿರುವ ಒಂದು ಕಟ್ಟಿಗೆಯೂ-ಮಧ್ಯದಲ್ಲಿ ಸ್ವಲ್ಪಹೊತ್ತು ಹೇಗೆ ಸೇರಿಕೊಂ ಡಿರುವುವೋ, ಸಮಯಬಂದಾಗ ಅವೆರಡೂ ಪುನಃ ಹೇಗೆ ಭಿನ್ನಭಿನ್ನವಾಗಿ ಹೊರಟುಹೋಗು ವುವೋ,—ಹೀಗೆಯೇ, ಹೆಂಡರೂ ಮಕ್ಕಳೂ ಜ್ಞಾತಿಗಳೂ ಧನಗಳೂ ಸ್ವಲ್ಪಹೊತ್ತು ಪರಸ್ಪರ ವಾಗಿ ಸೇರಿಕೊಂಡು ಹೋಗುತಿರುವರು ; ಆಮೇಲೆ ಇವರೆಲ್ಲರೂ ಅಗಲಿಹೋಗುವರೆಂಬುದೂ ಸಿದ್ಧವಾಗಿಯೇ ಇರುವುದು ॥೬೯—೭೦॥

ಈ ವಿಷಯವನ್ನು ಲೋಕದಲ್ಲಿ ಯಾವನೊಬ್ಬಪ್ರಾಣಿಯೂ ಹೇಗೆ ಅತಿಕ್ರಮಿಸಲಾರ ನೋ, ಹಾಗೆ ಅವನಿಗೆ ಸತ್ಕವನನ್ನು ಕುರಿತು ಅಳುವುದಕ್ಕೂ ಸಾಮರ್ಥ್ಯವಿಲ್ಲವೆಂದೇ ತಿಳಿಯ ಬೇಕು ॥೭೧॥

ಯಥಾ ಹಿ ಸಾರ್ಥಂ ಗಚ್ಛೇನ್ತಂ ಬ್ರೂಯಾತ್ ಕಞ್ಚಿತ್ ಪಥಿ ಸ್ಥಿತಃ ।
ಅಹಮಪ್ಯಾಗಮಿಷ್ಯಾಮಿ ಪೃಷ್ಠತೋ ಭವತಾಮಿತಿ ॥೩೦॥
ಏನಂ ಪೂರ್ವೈರ್ಗತೋ ಮಾರ್ಗಃ ಪಿತೃಪೈತಾಮಹೈರ್ಧ್ರುವಮ್ ।
ತಮಾಪನ್ನಃ ಕಥಂ ಶೋಚೇತ್ ಯಸ್ಯ ನಾಸ್ತಿ ವ್ಯತಿಕ್ರಮಃ ॥೩೧॥
ವಯಸಃ ಪತಮಾನಸ್ಯ ಸ್ರೋತಸೋ ವಾಽನಿವರ್ತಿನಃ ।
ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಃ ಪ್ರಜಾಃ ಸ್ಮೃತಾಃ ॥೩೪॥
ಸ ಜೀರ್ಣಾಂ ಮಾನುಷಂ ದೇಹಂ ಪರಿತ್ಯಜ್ಯ ಪಿತಾ ಹಿ ನಃ ।
ದೈವೀಮೃದ್ಧಿಮನುಪ್ರಾಪ್ತಃ ಬ್ರಹ್ಮಲೋಕವಿಹಾರಿಣೀಮ್ ॥೩೫॥
ತಂ ತು ನೈವಂವಿಧಃ ಕಶ್ಚಿತ್ ಪ್ರಾಜ್ಞಃ ಶೋಚಿತುಮರ್ಹತಿ ।
ತ್ವದ್ವಿಧೋ ಮದ್ವಿಧಶ್ಚಾಪಿ ಶ್ರುತಿವೃದ್ಧ ಬುದ್ಧಿಮತ್ತರಃ ॥೩೬॥
ಕಥಂ ಹ್ಯಹಂ ಪ್ರತಿಜ್ಞಾಯ ವನವಾಸಮಿಮಂ ಗುರೋಃ ।
ಭ್ರಾತುಸ್ತವ ಕರಿಷ್ಯಾಮಿ ವಚೋ ಹಿತ್ವಾ ಗುರೋರ್ವಚಃ ॥೩೭॥
ಅನಯಾ ವರ್ತಮಾನೋ ಹಿ ವೃತ್ತ್ಯಾ ಹೀನಪ್ರತಿಜ್ಞಯಾ ।
ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನಃ ಸಮುಪವರ್ತತೇ ॥೩೮॥

ಮಾರ್ಗದಲ್ಲಿ ದೊಡ್ಡದೆಂದು ಜನರ ಗುಂಪು ಹೋಗುತಿರುವಾಗ, ಅಲ್ಲಿ ನಿಂತಿರುವ ಮತ್ತೊಬ್ಬನು, ನಾನೂ ನಿಮ್ಮಹಿಂದೆ ಬರುವೆನೆಂದು ಹೇಗೆ ಹೇಳುವೆನೋ, ಹಾಗೆ ಈ ಸಂಸಾರದಲ್ಲಿಯೂ ಒಬ್ಬರಹಿಂದೊಬ್ಬರು ಹೋಗಬೇಕಾಗಿರುವುದು ॥೩೦॥

ಈ ವಿಧವಾದ ಮಾರ್ಗವು, ತಂದೆತಾತಂದಿರಿಂದಲೂ ಅನುಸರಿಸಲ್ಪಟ್ಟಿರುವುದು; ಇದನ್ನು ಯಾರೂ ವಿಚಾರಿಸಲಾರರು. ಇಂತಹ ಮಾರ್ಗವನ್ನು ಸೇರಿರತಕ್ಕವನು, ಹೇಗೆತಾನೆ ಅಳುವನು? ॥

ಒಂದು ನದಿಯ ಪ್ರವಾಹದಂತೆ-ಆಯುಸ್ಸು ಹಿಂದಿರುಗದೆ ಹೋಗುತಿರುವಾಗ, ಆತ್ಮವನು ಹೇಗಾದರೂ ಸುಖದಲ್ಲಿಟ್ಟಿರಬೇಕು. ಮನುಷ್ಯರು ಸುಖಕ್ಕಾಗಿಯೇ ಸೃಜಿಸಲ್ಪಟ್ಟಿರುವರೆಂದು ದೊಡ್ಡವರು ಹೇಳುವರು ॥೩೪॥

ವತ್ಸ! ಭರತ! ಈಗ ಪ್ರಕೃತವಿಷಯವನ್ನು ಕೇಳು:—ಆ ಪ್ರಸಿದ್ಧನಾದ ನಮ್ಮ ತಂದೆಯು, ಜೀರ್ಣವಾಗಿದ್ದ ಮನುಷ್ಯದೇಹವನ್ನು ಪರಿತ್ಯಜಿಸಿ, ಬ್ರಹ್ಮಲೋಕದಲ್ಲಿ ವಿಹಾರವನ್ನುಂಟುಮಾಡುವಂತಹ ದೈವಿಕಸಮೃದ್ಧಿಯನ್ನು ಪಡೆದವನಾದನು ॥೩೫॥

ಇಂತಹ ನಮ್ಮ ತಂದೆಯನ್ನು ಕುರಿತು ಶಾಸ್ತ್ರಜ್ಞಾನಸಂಪನ್ನನೂ ವಿವೇಕಿಯೂ ಆದ-ನಿನ್ನಂಥವನೂ ನನ್ನಂಥವನೂ-ಯಾವನೊಬ್ಬನೂ ವ್ಯಥೆಪಡುವುದು ನ್ಯಾಯವಲ್ಲ ॥೩೬॥

ಈಗ ಮತ್ತೊಂದು ವಿಷಯವನ್ನು ಕೇಳು:—ನಾನು, ಈ ವನವಾಸವನ್ನು ತಂದೆಗೆ ಪ್ರತಿಜ್ಞೆಮಾಡಿಕೊಟ್ಟು, ಈಗ ತಂದೆಯು ಮಾತನ್ನು ಬಿಟ್ಟು-ಸಹೋದರನಾದ ನಿನ್ನ ಮಾತನ್ನು ಹೇಗೆ ನಡೆಯಿಸಲಿ? ॥೩೭॥

ನಾನು ಹೀಗೆ ಹೀನಪ್ರತಿಜ್ಞನಾಗಿ ನಡೆದರೆ, ಇದರಿಂದ-ಈ ಸಮಸ್ತಲೋಕವೂ ಸ್ವೇಚ್ಛಾಚಾರಣೆಯಲ್ಲಿ ಪ್ರವರ್ತಿಸಿ-ನನ್ನ ಮಾರ್ಗವನ್ನೇ ಅನುಸರಿಸಿ ನಡೆಯುವುದು ॥೩೮॥

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥೩೯॥
ಯದಿ ಪ್ರತಿಜ್ಞಾಂ ಸನ್ತ್ಯಕ್ಷ್ಯೇ ತ್ವದ್ವಾಕ್ಯಾದ್ಭರತಾಧುನಾ ।
ಯದ್ವೃತ್ತಾಃ ಸನ್ತಿ ರಾಜಾನಃ ತದ್ವೃತ್ತಾಃ ಸನ್ತಿ ಹಿ ಪ್ರಜಾಃ ॥೪೦॥
ಸತ್ಯಮೇವಾನೃಶಂಸಂ ಚ ರಾಜವೃತ್ತಂ ಸನಾತನಮ್ ।
ತಸ್ಮಾತ್ ಸತ್ಯಾತ್ಮಕಂ ರಾಜ್ಯಂ ಸತ್ಯೇ ಲೋಕಃ ಪ್ರತಿಷ್ಠಿತಃ ॥೪೧॥
ಸತ್ಯವಾದೀ ಹಿ ಲೋಕೇಸ್ಮಿನ್ ಪರಮಂ ಗಚ್ಛತಿ ಹ್ಯಯಮ್ ।
ಉದ್ವಿಜನ್ತೇ ಯಥಾ ಸರ್ಪಾತ್ ನರಾದನೃತವಾದಿನಃ ॥೪೨॥
ದತ್ತಮಿಷ್ಟಂ ಹುತಂ ಚೈವ ತಪ್ತಾನಿ ಚ ತಪಾಂಸಿ ಚ ।
ದೇವಾಃ ಸತ್ಯಪ್ರತಿಷ್ಠಾನಾಃ ತಸ್ಮಾತ್ ಸತ್ಯಪರೋ ಭವೇತ್ ॥೪೩॥
ಏಕಃ ಪಾವಯತೇ ಲೋಕಂ ಏಕಃ ಪಾವಯತೇ ಕುಲಮ್ ।
ಮಜ್ಜತ್ಯೇಕೋ ಹಿ ನರಕೇ ಹ್ಯೇಕಃ ಸ್ವರ್ಗೇ ಮಹೀಯತೇ ॥೪೪॥
ಅಸತ್ಯಸನ್ಧಸ್ಯ ಸತಃ ಚಲಸ್ಯಾಸ್ಥಿ ರಚೇತಸಃ ।
ನೈವ ದೇವಾನ ಪಿತರಃ ಪ್ರತೀಚ್ಛನ್ತೀತಿ ನಃ ಶ್ರುತಮ್ ॥೪೫॥

ಅದೇಕೆಂದರೆ,–ಲೋಕದಲ್ಲಿ, ಶ್ರೇಷ್ಠನಾದವನು ಯಾವಯಾವುದನ್ನು ಆಚರಿಸುವನೋ, ಇತರಜನರೂ ಅದದನ್ನೇ ಆಚರಿಸುವರು; ಅವನು–ಲೌಕಿಕವನ್ನಾಗಲಿ ವೈದಿಕವನ್ನಾಗಲಿ-ಯಾವ ವಚನವನ್ನು ಪ್ರಮಾಣವನ್ನಾಗಿಟ್ಟುಕೊಳ್ಳುವನೋ, ಇತರಜನರೂ ಅದನ್ನೇ ಅನುವರ್ತಿಸುವರು॥

ಹೀಗಿರುವುದರಿಂದ, ವತ್ಸ! ಭರತ! ಈಗ ನಿನ್ನ ಮಾತಿನಿಂದ ನಾನು ಪ್ರತಿಜ್ಞೆಯನ್ನು ಬಿಟ್ಟುಬಿಡುವೆನಾದರೆ, ಆಗ–ದೊರೆಗಳು ಯಾವ ನಡತೆಯುಳ್ಳವರಾಗಿರುವರೋ-ಪ್ರಜೆಗಳೂ ಅದೇ ನಡತೆಯುಳ್ಳವರಾಗುವರು ॥೪೦॥

ಸನಾತನವಾದ ರಾಜವೃತ್ತ(ದೊರೆಯ ನಡತೆ)ವೆಂಬುದು, ಕೇವಲ ಸತ್ಯವೂ ಅನೃಶಂಸ (ಕ್ರೂರವಲ್ಲದುದು)ವೂ ಆದುದು. ಆದುಕಾರಣ, ರಾಜ್ಯವೆಂಬುದು ಸತ್ಯಸ್ವರೂಪವಾದುದು; ಸತ್ಯದಲ್ಲಿಯೇ ಸಕಲಲೋಕವೂ ನೆಲೆಸಿರುವುದು ॥೪೧॥

ಸತ್ಯವಾದಿಯಾದವನು, ಈ ಲೋಕದಲ್ಲಿ ಅತ್ಯುತ್ತಮವಾದ ಕರ್ಮಫಲವನ್ನು ಹೊಂದುವನು. ಅನೃತಭಾಷಿಯನ್ನು ಕಂಡರೆ, ಸರ್ಪವನ್ನು ಕಂಡಂತೆ ಎಲ್ಲರೂ ಹೆದರುವರು ॥೪೨॥

ದಾನ ಯಾಗ ಹೋಮ ತಪಸ್ಸು–ಇವುಗಳೆಲ್ಲವೂ ಸತ್ಯವೇಯೆ. ಸಮಸ್ತದೇವತೆಗಳೂ ಸತ್ಯದಲ್ಲಿಯೇ ನೆಲೆಸಿರುವರು. ಆದುಕಾರಣ, ಪುರುಷನು ಎಂದಿಗೂ ಸತ್ಯವಂತನಾಗಿರಬೇಕು ॥

ಲೋಕದಲ್ಲಿ, ಸಮಸ್ತಲೋಕವನ್ನೂ ಪವಿತ್ರಮಾಡತಕ್ಕವನೂ ಒಬ್ಬನೇ; ತನ್ನ ವಂಶವನ್ನೆಲ್ಲ ಪವಿತ್ರಮಾಡತಕ್ಕವನೂ ಒಬ್ಬನೇ. ನರಕದಲ್ಲಿ ಬೀಳುವಾಗಲೂ ಒಬ್ಬನೇ ಇರುವನು; ಸ್ವರ್ಗದಲ್ಲಿ ದೇವತೆಗಳಿಂದ ಪೂಜಿಸಲ್ಪಡುವಾಗಲೂ ಒಬ್ಬನೇ ಇರುವನು ॥೪೪॥

ಅಸತ್ಯಸಂಧನಾಗಿಯೂ ಚಂಚಲನಾಗಿಯೂ ಅಸ್ಥಿರಚಿತ್ತನಾಗಿಯೂ ಇರತಕ್ಕವನು ಮಾಡಿದ ಕರ್ಮಗಳಲ್ಲಿ, ದೇವತೆಗಳೂ ಪಿತೃಗಳೂ ವಿಶ್ವಾಸದಿಂದ ಹವಿಸ್ಸುಗಳನ್ನು ಸ್ವೀಕರಿಸುವುದಿಲ್ಲವೆಂದು ನಾನು ವೃದ್ಧರ ಮುಖದಿಂದ ಕೇಳಿರುವೆನು ॥೪೫॥

ಪ್ರತ್ಯಗಾತ್ಮ್ಯಮಿದಂ ಧರ್ಮ್ಯಂ ಸತ್ಯಂ ಪಶ್ಯಾಮ್ಯಹಂ ಸ್ವಯಮ್ ।
ಭಾರಃ ಸತ್ಪುರುಷಾಚೀರ್ಣಃ ತದರ್ಥಮಭಿನನ್ದ್ಯತೇ ॥೪೬॥
ಕಾಯೇನ ಕುರುತೇ ಪಾಪಂ ಮನಸಾ ಸಮ್ಪ್ರಧಾರ್ಯ ಚ ।
ಅನೃತಂ ಜಿಹ್ವಯಾ ವಕ್ತಿ ತ್ರಿವಿಧಂ ಕರ್ಮ ಪಾತಕಮ್ ॥೪೭॥
ಸತ್ಯಂ ಚ ಧರ್ಮಂಚಪರಾಕ್ರಮಂಚ ಭೂತಾನುಕಮ್ಪಾಂಪ್ರಿಯವಾದಿತಾಂಚ।
ದ್ವಿಜಾತಿದೇವಾತಿಥಿಪೂಜನಂ ಚ ಪನ್ಥಾ ನವೂಹುಸ್ತ್ರಿದಿವಸ್ಯ ಸನ್ತಃ ॥೪೮॥
ಲಕ್ಷ್ಮೀಶ್ಚ ನ್ದ್ರಾದಪೇಯಾದ್ವಾ ಹಿಮವಾ ವಾ ಹಿಮಂ ತ್ಯಜೇತ್ ।
ಅತೀಯಾತ್ ಸಾಗರೋ ವೇಲಾಂ ನ ಪ್ರತಿಜ್ಞಾಮಹಂ ತ್ಯಜೇ ॥೪೯॥
ಇತಿ ರಾಮವಚಃ ಶ್ರುತ್ವಾ ಸರ್ವೇಷಾಂ ಚೈವ ಸನ್ನಿಧೌ ।
ಉವಾಚ ಭರತೋ ರಾಮಂ ಸರ್ವೇಷಾಂ ಹಿತಕಾಮ್ಯಯಾ ॥೫೦॥

ಇತಿ ಶ್ರೀಮದಯೋಧ್ಯಾಕಾಣ್ಡೇ ಭರತೇನ ರಾಮಂ ಪ್ರತಿ
ಅಯೋಧ್ಯಾಗಮನಪ್ರಾರ್ಥನಂ ನಾಮ
ಅಷ್ಟಾದಶಃ ಸರ್ಗಃ.



ನಾನು ಈ ಸತ್ಯವನ್ನು ನನ್ನ ಮನಸ್ಸಿನಲ್ಲಿ ಸಾಕ್ಷಾತ್ತಾಗಿ ಧರ್ಮ್ಯವೆಂದು ತಿಳಿದಿರುವೆನು. ಈ ಸತ್ಯವನ್ನು ಕಾಪಾಡುವುದಕ್ಕಾಗಿಯೇ, ಮಹಾತ್ಮರಾದ ಋಷಿಗಳಿಂದ ಆಶ್ರಯಿಸಲ್ಪಟ್ಟಿರುವ–ಜಟಾವಲ್ಕಲಾದಿರೂಪವಾದ- ಈ ಭಾರವನ್ನು ನಾನು ಬಹುಮಾನಿಸುತ್ತಿರುವೆನು ॥೪೬॥


ಲೋಕದಲ್ಲಿ ಪುರುಷನು, ದೇಹದಿಂದ ಪಾಪಕರ್ಮವನ್ನು ಮಾಡುವನು ; ಇದನ್ನು ಮಾಡುವಾಗಲೇ, ಮನಸ್ಸಿನಲ್ಲಿ ಹೀಗೆಮಾಡುವೆನೆಂದು ನಿಶ್ಚಯಿಸಿಕೊಂಡಿರುವನು ; ತನ್ನ ನಾಲಿಗೆಯಿಂದ ಅಸತ್ಯವನ್ನು ನುಡಿಯುವನು. ಹೀಗೆ ಈ ಪಾಪವು ಮೂರುವಿಧವಾಗಿಯೂ ಪಾಪ್ತವಾಗುವುದು॥

ಪ್ರಪಂಚದಲ್ಲಿ, ಸತ್ಪುರುಷರಾದವರು, ಸತ್ಯ ಧರ್ಮ ಪರಾಕ್ರಮ ಭೂತದಯೆ ಪ್ರಿಯಭಾಷಣ ದೇವಬ್ರಾಹ್ಮಣಾತಿಥಿಪೂಜೆ- ಇವುಗಳೇ ಸ್ವರ್ಗಕ್ಕೆ ಮಾರ್ಗವೆಂದು ಹೇಳುವರು ॥೪೯॥

ಹೀಗಿರುವುದರಿಂದ, ವತ್ಸ! ಭರತ! ಚಂದ್ರನನ್ನು ಬಿಟ್ಟು ಬೆಳದಿಂಗಳಾದರೂ ಬೇರೆಯಾಗಬಹುದು ; ಹಿಮವಂತನು ಹಿಮವನ್ನಾದರೂ ಬಿಟ್ಟಿರಬಹುದು ; ಸಮುದ್ರವು ದಡವನ್ನಾದರೂ ವಿಹಾರಿ ಹರಿಯಬಹುದು. ನಾನು ನನ್ನ ಪ್ರತಿಜ್ಞೆಯನ್ನು ಮಾತ್ರ ಎಂದಿಗೂ ಬಿಡಲಾರೆನು. (ಎಂದು ರಾಮನು ಹೇಳಿದನು) ॥೪೯॥

ಹೀಗೆಂದು ಹೇಳಿದ ಶ್ರೀರಾಮನ ಮಾತನ್ನು ಕೇಳಿ, ಭರತನು, ಸರ್ವರಿಗೂ ಹಿತವನ್ನು ಬಯಸಿ, ಸಮಸ್ತಜನಗಳ ಎದುರಿಗೆ, ಶ್ರೀರಾಮನನ್ನು ಕುರಿತು ಹೀಗೆ ಹೇಳಲುಪಕ್ರಮಿಸಿದನು॥

ಇದು ಅಯೋಧ್ಯಾಕಾಂಡದಲ್ಲಿ ಭರತನು ರಾಮನನ್ನು ಅಯೋಧ್ಯಾನಗರಕ್ಕೆ ಬರಬೇಕೆಂದು ಪ್ರಾರ್ಥಿಸಿದನೆಂಬಲ್ಲಿಗೆ ಹದಿನೆಂಟನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಂಡೇ ಏಕೋನವಿಂಶಃ ಸರ್ಗಃ

ಶೃಣ್ವಂತು ಮೇ ಪರಿಷದಃ ಶ್ರೇಣಯೋ ಮಂತ್ರಿಣಸ್ತಥಾ ।
ಆರ್ಯಂ ಪರಮಧರ್ಮಜ್ಞಂ ನಾಸುಜಾನಾಮಿ ರಾಘವಮ್ ।
ನ ಯಾಚೇ ಪಿತರಂ ರಾಜ್ಯಂ ನಾನುಕಾಸಾಮಿ ಮಾತರಮ್ ॥೧॥
ಯದಿ ತ್ವವಶ್ಯಂ ವಸ್ತವ್ಯಂ ಕರ್ತವ್ಯಂ ಚ ಪಿತುರ್ವಚಃ ।
ಅಹಮೇವ ಹಿ ವತ್ಸ್ಯಾಮಿ ಚತುರ್ದಶಸಮಾವನೇ ॥೨॥
ನೋ ಚೇತ್ ಪ್ರಾಯೋಪವೇಶೇನ ತ್ಯಕ್ಷ್ಯಾಮ್ಯೇತತ್ ಕಳೇಬರಮ್ ॥
ಭರತಸ್ಯಾತಿನಿರ್ಬಂಧಂ ದೃಷ್ಟ್ವಾ ರಾಮೋಽವಿಸ್ಮಿತಃ ।
ನೇತ್ರಾಂತ್ಯ ಸಂಜ್ಞಾಂ ಗುರವೇ ಚಕಾರ ರಘುನಂದನಃ ॥೪॥
ತತ್ಸಜ್ಞಿತಂ ಗುರುರ್ಜ್ಞಾತ್ವಾ ಗೃಹೀತ್ವಾನ್ಯತ್ರ ತಂ ಯಯೌ ।
ಏಕಾಂತೇ ಭರತಂ ಪ್ರಾಹ ವಸಿಷ್ಠೋ ಜ್ಞಾನಿನಾಂ ವರಃ ॥೫॥

ಅಯೋಧ್ಯಾಕಾಂಡದಲ್ಲಿ ಹತ್ತೊಂಭತ್ತನೆಯ ಸರ್ಗವು.

ಆಗ ಭರತನು ಹೇಳಿದುದೇನಂದರೆ :—

ನಾನು ಹೇಳುವ ಮಾತನ್ನು, ಸಮಸ್ತ ಸಭಾಸದರೂ ಪೌರಮುಖ್ಯರೂ ಮಂತ್ರಿವರ್ಯರೂ ಕೇಳಬೇಕು. ಧರ್ಮಜ್ಞರಲ್ಲಿ ಅಗ್ರಗಣ್ಯನಾಗಿರುವ ಪೂಜ್ಯನಾದ ಶ್ರೀರಾಮನು ಅರಣ್ಯವಾಸ ಮಾಡುವುದನ್ನು, ನಾನು ಸುತರಾಂ ಒಪ್ಪಿದವನಲ್ಲ; ನಮ್ಮ ತಂದೆಯನ್ನು ನನಗೆ ರಾಜ್ಯಕೊಡಬೇಕೆಂದು ಪ್ರಾರ್ಥಿಸಿದವನೂ ಅಲ್ಲ; ನಮ್ಮ ತಾಯಿಯನ್ನು ಇದಕ್ಕಾಗಿ ನಾನು ಪ್ರೇರಿಸಿಯೂ ಇಲ್ಲ ॥೧॥

ಹೀಗಿದ್ದರೂ, ಅರಣ್ಯವಾಸವನ್ನು ಅವಶ್ಯವಾಗಿ ಮಾಡಿಯೇತೀರಬೇಕಾಗಿದ್ದಪಕ್ಷದಲ್ಲಿಯೂ, ತಂದೆಯ ಮಾತನ್ನು ನಡೆಯಿಸಿಯೇ ತೀರಬೇಕಾಗಿದ್ದಪಕ್ಷದಲ್ಲಿಯೂ, ಈ ಹದಿನಾಲ್ಕು ವರ್ಷಕಾಲ ನಾನೇ ಅರಣ್ಯದಲ್ಲಿ ವಾಸಮಾಡಿಕೊಂಡಿರುವೆನು. ನಮ್ಮ ಅಣ್ಣನು ಅಯೋಧ್ಯೆಗೆ ಹೋಗಿ ರಾಜ್ಯಭಾರಮಾಡಿಕೊಂಡಿರಲಿ. ಇದಕ್ಕೆ ಸಮ್ಮತಿಸದಿದ್ದರೆ, ನಾನು ಇಲ್ಲಿಯೇ ಪ್ರಾಯೋಪವೇಶ(ಉಪವಾಸವಾಗಿ ಮಲಗುವುದು)ದಿಂದ ಈ ದೇಹವನ್ನು ಬಿಟ್ಟುಬಿಡುವೆನು. (ಎಂದು ಭರತನು ಹೇಳಿದನು) ॥೨—೩॥

ಹೀಗೆ ಭರತನು ಅತಿಯಾಗಿ ನಿರ್ಬಂಧಮಾಡುತಿರುವುದನ್ನು ನೋಡಿ, ಅತಿಯಾಗಿ ಆಶ್ಚರ್ಯಪಟ್ಟ ಶ್ರೀರಾಮಚಂದ್ರನು, ಗುರುವಾದ ವಸಿಷ್ಠಮಹರ್ಷಿಗೆ ಕಡೆಗಣ್ಣಿನಿಂದ ಸನ್ನೆಮಾಡಿದನು ॥

ಆಗ, ಜ್ಞಾನಿಗಳಲ್ಲೆಲ್ಲ ಪ್ರಶಸ್ತನಾದ ವಸಿಷ್ಠಮಹರ್ಷಿಯು, ಅದರ ಸಂಕೇತವನ್ನು ತಿಳಿದವನಾಗಿ, ಭರತನನ್ನು ಬೇರೆಕಡೆಗೆ ಕರೆದುಕೊಂಡು ಹೋದನು. ಅಲ್ಲಿ, ಏಕಾಂತವಾಗಿ ಭರತನಿಗೆ ಈರೀತಿಯಾಗಿ ಉಪದೇಶಮಾಡಿದನು ॥೪॥

ವಸ್ತು ಗುಹ್ಯಂ ಕೃಷ್ಣಮೇವೇದಂ ಕುರು ವಾಕ್ಯಂ ಸುವಿಸ್ಮಿತಮ್ ।
ರಾಮೋ ನಾರಾಯಣಃ ಸಾಕ್ಷಾತ್ ಬ್ರಹ್ಮಣಾ ಯಾಚಿತಃ ಪುರಾ ।
ರಾವಣಸ್ಯ ವಧಾರ್ಥಾಯ ಜಾತೋ ದಶರಥಾತ್ಮಜಃ ॥೬॥
ಯೋಗಮಾಯಾಸಖಿ ಸೀತೇತಿ ಜಾತಾ ಜನಕನಂದಿನೀ ।
ಶೇಷೋಪಿ ಲಕ್ಷ್ಮಣೋ ಜಾತೋ ರಾಮಮನ್ವೇತಿ ಸರ್ವದಾ ॥೭॥
ರಾವಣಂ ಹಸ್ತಿಕಾವಸ್ಥೇ ಗಮಿಷ್ಯನ್ತಿ ಸ ಸಂಕಯಃ ॥೮॥
ಕೈಕೇಯ್ಯಾವರದಾನಾದಿ ಯದ್ಯನ್ನಿಷ್ಠುರಭಾಷಣಮ್ ।
ಸರ್ವಂ ದೇವಕೃತಂ ನೋ ಚೇತ್ ವಿನಂ ಭಾಷೇತ ಸಾ ಕಥಮ್ ॥೯॥
ತಸ್ಮಾತ್ ತ್ಯಜಾಗ್ರಹಂ ತಾತ ರಾಮಸ್ಯ ವಿನಿವರ್ತನೇ ।
ನಿವರ್ತಸ್ಯ ಮಹಾಸೈನ್ಯೈಃ ಮಾತೃಭಿಃ ಸಹಿತಃ ಪುರಮ್ ॥೧೦॥
ರಾವಣಂ ಸಕುಲಂ ಹತ್ವಾ ಶೀಘ್ರಮೇವಾಗಮಿಷ್ಯತಿ ।
ಇತಿ ಶ್ರುತ್ವಾ ಗುರೋರ್ವಾಕ್ಯಂ ಭರತೋ ವಾಕ್ಯಮಬ್ರವೀತ್ ॥೧೧॥

ಆರ್ಯಾ! ಭರತ! ಅತಿರಹಸ್ಯಭೂತವಾಗಿಯೂ ಅತಿಪ್ರಶಸ್ತವಾಗಿಯೂ ಇರುವ ನನ್ನ ವಾಕ್ಯವನ್ನು ಕೇಳುವನಾಗು. ರಾಮನು ಸಾಮಾನ್ಯನೆಂದು ತಿಳಿಯಬೇಡ; ಇವನು ಸಾಕ್ಷಾನ್ನಾರಾಯಣನು. ಪೂರ್ವದಲ್ಲಿ ಬ್ರಹ್ಮನಿಂದ ಯಾಚಿಸಲ್ಪಟ್ಟು, ರಾವಣನ ಸಂಹಾರಕ್ಕೋಸ್ಕರ, ದಶರಥನ ಮಗನಾಗಿ ಹುಟ್ಟಿರುವನು ॥೬॥

ಶ್ರೀಮನ್ನಾರಾಯಣನ ಯೋಗಮಾಯೆಯೂ ಕೂಡ, ಸೀತೆಯೆಂಬ ನಾಮಧೇಯವನ್ನಿಟ್ಟುಕೊಂಡು ಜನಕರಾಜನ ಪುತ್ರಿಯಾಗಿ ಅವತರಿಸಿರುವಳು. ಆದಿಶೇಷನೂಕೂಡ, ಲಕ್ಷ್ಮಣ ರೂಪನಾಗಿ ಅವತರಿಸಿ, ಸರ್ವದಾ ಶ್ರೀರಾಮನನ್ನು ಅನುಸರಿಸಿಕೊಂಡಿರುವನು. ಇವರೆಲ್ಲರೂ ರಾವಣನನ್ನು ಸಂಹರಿಸಬೇಕೆಂದು ದಂಡಕಾರಣ್ಯಕ್ಕೆ ಹೋಗುವರು. ಇದರಲ್ಲಿ ಸಂಶಯವಿಲ್ಲ ॥೭—೮॥

ದಶರಥನು ಕೈಕೇಯಿಗೆ ವರವನ್ನು ಕೊಟ್ಟುದುದು ಯಾವುದುಂಟೋ, ಅವಳು ಅಷ್ಟು ಕ್ರೂರವಾಗಿ ಮಾತನಾಡಿದುದು ಯಾವುದುಂಟೋ, ಅದೆಲ್ಲವೂ ದೇವತೆಗಳಿಂದ ಮಾಡಲ್ಪಟ್ಟುದು. ಹಾಗಿಲ್ಲದಪಕ್ಷದಲ್ಲಿ, ಅವಳು ಇಷ್ಟು ಕ್ರೂರವಾಗಿ ಹೇಗೆ ಮಾತನಾಡುತಿದ್ದಳು? ॥೯॥

ಆದುಕಾರಣ, ವತ್ಸ! ಭರತ! ರಾಮನನ್ನು ಹಿಂದಿರುಗಿಸುವ ವಿಷಯದಲ್ಲಿ ನೀನು ಹಠವನ್ನು ಬಿಟ್ಟುಬಿಡು. ಆ ದೊಡ್ಡ ಸೈನ್ಯದೊಡನೆಯೂ ನಿಮ್ಮ ತಾಯಿಯೊಡನೆಯೂ ಅಯೋಧ್ಯೆಗೆ ಹಿಂದಿರುಗುವವನಾಗು. ಶ್ರೀರಾಮನು, ರಾವಣನನ್ನು ಅವನ ವಂಶಸಹಿತವಾಗಿ ಕೊಂದುಬಿಟ್ಟು, ಬೇಗನೆಯೇ ಬರುವನು ॥೧೦॥

ಹೀಗೆಂದು ಹೇಳುತಿರುವ ವಸಿಷ್ಠರ ವಾಕ್ಯವನ್ನು ಕೇಳಿ, ಅವರನ್ನು ಕುರಿತು "ಗುರುಸತ್ತಮರೆ! ತಮ್ಮ ಅಪ್ಪಣೆಯಂತೆಯೇ ಆಗಬಹುದು. ಶ್ರೀರಾಮನು, ಸ್ವತಂತ್ರನಾದವನು; ಮಹಾಮೇಧಾವಿಯಾದವನು; ಅವನಲ್ಲಿ ಬಲವೂ ಪರಾಕ್ರಮವೂ ವಿಶೇಷವಾಗಿರುವುದು. ತನ್ನಲ್ಲಿ ಯಾವ

ರಾಮಃ ಸ್ವತನ್ತ್ರೋ ಮೇಧಾವೀ ಮಹಾಬಲಪರಾಕ್ರಮಃ ।
ಅಪರಾಧವಿಹೀನಃ ಸನ್ ಪಿತುರಾಜ್ಞಾನುಪಾಲಕಃ ॥೧೦॥
ಅಹಂ ಜ್ಯೇಷ್ಠಾವಮಾನೇನ ಲೋಕವಾದಭಯಾತುರಃ ।
ವಲ್ಕಲಾಜಿನ್ಗೀ ಯಥಾ ರಾಮಃ ತಥಾಹಂ ವನಗೋಚರಃ ।
ಚತುರ್ದಶಸಮಾನೀತ್ವಾ ವನೇ ಮೂಲಫಲಾಶನಃ ॥೧೩॥
ರಾಮೇ ಪ್ರತಿಜ್ಞಾಂ ಸ್ವಾಂ ತೀತ್ವಾ ಪ್ರವಿಷ್ಟೇ ನಗರಂ ಸ್ವಕಮ್ ।
ಅಭಿಷಿಕ್ತೇ ಮಹಾರಾಜ್ಯೇ ಸಿಂಹಾಸನಗತೇ ಸತಿ ॥೧೪॥
ಸಾಕೇತನಗರಂ ಪ್ರಾಪ್ಯ ಶ್ವೇತಚ್ಛತ್ರಧರೋಽಸ್ಮ್ಯಹಮ್ ।
ತಾವತ್ ಸಾಕೇತನಗರಂ ಪ್ರವೇಕ್ಷ್ಯಾಮಿ ಸುಖಾಯ ನ ॥೧೫॥
ಇದಂ ಸತ್ಯಮಿದಂ ಸತ್ಯಂ ಶಪೇ ಶ್ರೀರಾಮಪಾದಯೋಃ ॥೧೬॥
ಶ್ರುತ್ವಾ ರಾಮೋಪಿ ತದ್ವಾಕ್ಯಂ ಗುರವೇ ಭರತೋದಿತವ್ ।
ಭಯಭಕ್ತಿಯುತಂ ಸ್ನಿಗ್ಧ ಪ್ರೀತಿಲಕ್ಷಣಸಂಯುತವ್ ॥೧೭॥
ಆಲಿಙ್ಗ್ಯ ಭರತಂ ರಾಮಃ ಸಂಸ್ತುತ್ಯೈವ ಮಹಾಬಲವ್ ।
ಪ್ರೋವಾಚ ವಚನಂ ಧೀರಃ ತದ್ಧಿತಂ ಮನಸಾ ಸ್ಮರ್ ॥೧೮॥
ಭ್ರಾತಾಸಿ ಮಮ ಭಕ್ತೋಸಿ ಬುದ್ಧಿಮಾನಸಿ ಸೋದರ ।
ಮಮಾಜ್ಞಾಂ ತ್ವಂ ಪುರಸ್ಕೃತ್ಯ ರಾಜ್ಯಂ ಶಾಸಿತುಮರ್ಹಸಿ ॥೧೯॥

ದೊಂದಪರಾಧವೂ ಇಲ್ಲದಿದ್ದರೂ, ತಂದೆಯ ಆಪ್ಪಣೆಯನ್ನು ಪರಿಪಾಲಿಸುವುದಕ್ಕಾಗಿ ಅರಣ್ಯವಾಸ ವನ್ನನುಭವಿಸುವನು. ನಾನಾದರೋ, ಜ್ಯೇಷ್ಠನಿಗೆ ಅವಮಾನಹೇತುಭೂತನಾಗಿ, ಲೋಕಾಪ ವಾದಭಯದಿಂದ ಸಂಕಟಪಡುತಿರುವೆನು. ಆದುಕಾರಣ, ರಾಮನು ಹೇಗಿರುವನೋ– ಹಾಗೆಯೇ ನಾನೂ ನಾರುಮಡಿಯುಟ್ಟುಕೊಂಡು, ಅರಣ್ಯದಲ್ಲಿಯೇ ಇದ್ದುಗೊಂಡು, ಫಲಮೂಲ ಗಳನ್ನು ತಿನ್ನುತ, ಹದಿನಾಲ್ಕುವರ್ಷಗಳನ್ನು ಕಳೆದು, ರಾಮನು ತನ್ನ ಪ್ರತಿಜ್ಞೆಯನ್ನು ಮುಗಿ ಯಿಸಿಕೊಂಡು ಅಯೋಧ್ಯೆಯನ್ನು ಪ್ರವೇಶಿಸಿ ಸಿಂಹಾಸನದಮೇಲೆ ಪಟ್ಟಾಭಿಷೇಕಮಾಡಿಕೊಂ ಡರೆ, ಆಗ ಅವನಿಗೆ ಶ್ವೇತಚ್ಛತ್ರವನ್ನು ಹಿಡಿದುಕೊಂಡು ನಿಂತುಕೊಳ್ಳುವೆನು. ಆದುವರೆಗೆ, ನನ್ನ ದೇಹಸೌಖ್ಯಕ್ಕೋಸ್ಕರವಾಗಿ ಅಯೋಧ್ಯಾನಗರವನ್ನು ಪ್ರವೇಶಿಸುವುದಿಲ್ಲ. ಇದು ಸತ್ಯವು; ಇದೇ ಸತ್ಯವು. ಶ್ರೀರಾಮನ ಪಾದದಮೇಲೆ ಆಣೆಯಿಟ್ಟು ಹೇಳಿರುವೆನು”? ಎಂದು ವಿಜ್ಞಾಪಿಸಿದನು ॥೧೧—೧೬॥

ಹೀಗೆ ಭಯಭಕ್ತಿಯುಕ್ತನಾಗಿಯೂ ತನ್ನಲ್ಲಿ ಪ್ರೀತಿಸಂಯುತವಾಗಿಯೂ ಇರುವ ಭರತನಿಂದ–ಗುರುಗಳಿಗೆ ವಿಜ್ಞಾಪಿಸಲ್ಪಟ್ಟ ಮಾತನ್ನು ಕೇಳಿ, ಶ್ರೀರಾಮನು, ಮಹಾಬಲನಾದ ಭರತನನ್ನು ಆಲಿಂಗಿಸಿ, ಅವನನ್ನು ಶ್ಲಾಘಿಸಿ, ತನ್ನ ಮನಸ್ಸಿನಲ್ಲಿ ಅವನಿಗೆ ಹಿತವನ್ನು ಬಯಸುತ, ಅವನನ್ನು ಕುರಿತು ‘ವತ್ಸ! ಭರತ! ನೀನು ನನಗೆ ತಮ್ಮನಾಗಿಯೂ ಭಕ್ತನಾಗಿಯೂ ಬುದ್ಧಿ ಶಾಲಿಯಾಗಿಯೂ ಇರುವೆ. ನೀನು ನನ್ನ ಆಜ್ಞೆಯನ್ನು ಮುಂದಿಟ್ಟುಕೊಂಡು ರಾಜ್ಯವನ್ನು ಕಾಪಾ ಡಿಕೊಂಡಿರು’ ಎಂದು ಹೇಳಿದನು ॥೧೭—೧೯॥

ಶ್ರೀ ಭರತಉವಾಚ.

ಆಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ ।
ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥೨೦॥
ಇತ್ಯುಕ್ತಃ ಸೋಧಿರುಹ್ಯಾಥ ಪಾದುಕೇ ಹ್ಯವರುಹ್ಯ ಚ ।
ಪ್ರಾಯಚ್ಛತ್ ಸುಮಹಾತೇಜಾಃ ಭರತಾಯ ಮಹಾತ್ಮನೇ ॥೨೧॥
ಗೃಹೀತ್ವಾ ಪಾದುಕೇ ದಿವ್ಯೇ ಭರತೋ ರತ್ನಭೂಷಿತೇ ।
ರಾಮಂ ತತಃ ಪರಿಕ್ರಮ್ಯ ಪ್ರಣಾಮಾ ಪುನಃಪುನಃ ॥೨೨॥
ಭರತಃ ಪುನರಾಹೇದಂ ಭಕ್ತಿಗದ್ಗದಯಾ ಗಿರಾ ।
ನವಪಞ್ಚಸಮಾನ್ತೇ ತ್ವಂ ಪ್ರಥಮೇ ದಿವಸೇ ಯದಿ ।
ನಾಗಮಿಷ್ಯಸಿ ಚೇದ್ರಾಮ ಪ್ರವಿಶಾಮಿ ಮಹಾನಲಮ್ ॥೨೩॥
ಬಾಢಮಿತ್ಯೇವ ತಂ ರಾಮಃ ಪ್ರತ್ಯುಕ್ತ್ವಾ ಭಕ್ತವತ್ಸಲಃ ।
ಭ್ರಾತರಂ ಭಕ್ತಿಸಮ್ಪನ್ನಂ ಭರತಂ ಕೈಕಯೀಸುತಮ್ ॥೨೪॥
ಪುನರಪ್ಯಾಹ ವಚನಂ ಲೋಕಾನುಗ್ರಹಕಾಮ್ಯಯಾ ॥೨೫॥
ಅದ್ಯಪ್ರಭೃತಿ ಲೋಕಾನಾಂ ಭಕ್ತಿಮಾರ್ಗಪ್ರದರ್ಶಕಃ ।
ಕೀರ್ತಿಮಾನಪಿ ಲೋಕೇಷು ಮತ್ಪ್ರಸಾದಾದ್ಭವಿಷ್ಯಸಿ ॥೨೬॥

ಇದನ್ನು ಕೇಳಿ, ಭರತನು ಶ್ರೀರಾಮನನ್ನು ಪ್ರಾರ್ಥಿಸುವನು :—

ಆರ್ಯ! ಈ ಸುವರ್ಣಮಯವಾದ ಪಾದುಕೆಗಳನ್ನು ಒಂದುಸಲ ನಿನ್ನ ಪಾದಗಳಿಂದ ಮೆಟ್ಟುವನಾಗು. ಇವುಗಳೇ, ಸಮಸ್ತ ಲೋಕಕ್ಕೂ ಯೋಗಕ್ಷೇಮಗಳನ್ನು ಮಾಡಿಕೊಂಡಿರುವುವು ॥೨೦॥

ಬಳಿಕ ಈರೀತಿಯಾಗಿ ಭರತನಿಂದ ಪ್ರಾರ್ಥಿಸಲ್ಪಟ್ಟ ಮಹಾತೇಜಸ್ವಿಯಾದ ಶ್ರೀರಾಮನು, ಆ ಪಾದುಕೆಗಳಮೇಲೆ ನಿಂತುಕೊಂಡು ಅಲ್ಲಿಂದ ಇಳಿದವನಾಗಿ, ಅವುಗಳನ್ನು ಮಹಾತ್ಮನಾದ ಭರತನಿಗೆ ಕೊಟ್ಟನು ॥೨೧॥

ಆಗ ಆ ಭರತನು, ದಿವ್ಯವಾದ ಆ ರತ್ನಪಾದುಕೆಗಳನ್ನು ಸ್ವೀಕರಿಸಿ, ಬಳಿಕ ರಾಮನನ್ನು ಪ್ರದಕ್ಷಿಣಮಾಡಿ, ಮತ್ತೆಮತ್ತೆ ನಮಸ್ಕರಿಸಿದನು ॥೨೨॥

ಅನಂತರ, ಪುನಃ ಭಕ್ತಿಯಿಂದ ಗದ್ಗದಕಂಠನಾಗಿ 'ಆರ್ಯ! ಹದಿನಾಲ್ಕುವರ್ಷಗಳು ಕಳೆದ ಬಳಿಕ, ಮೊದಲನೆಯದಿವಸ ನೀನು ಬಾರದಿದ್ದಪಕ್ಷದಲ್ಲಿ, ನಾನು ಅಗ್ನಿಪ್ರವೇಶಮಾಡುವೆನು' ಎಂದು ಹೇಳಿದನು ॥೨೩॥

ಆಗ ಭಕ್ತವತ್ಸಲನಾದ ಶ್ರೀರಾಮನು, ಹಾಗೆಯೇ ಆಗಲೆಂದು ಅದಕ್ಕೆ ಒಪ್ಪಿಕೊಂಡು, ಮಹಾಭಕ್ತನಾದ ಕೈಕೇಯಿಪುತ್ರನಾದ ಭರತನನ್ನು ಕುರಿತು, ಲೋಕಾನುಗ್ರಹಾರ್ಥವಾಗಿ ಮತ್ತೆ ಈ ಮಾತನ್ನು ಹೇಳಿದನು ॥೨೪—೨೫॥

ವತ್ಸ! ಭರತ! ನನ್ನ ಅನುಗ್ರಹದಿಂದ, ನೀನು ಇದುಮೊದಲುಗೊಂಡು ಜನರಿಗೆ ಭಕ್ತಿಮಾರ್ಗವನ್ನು ತೋರಿಸತಕ್ಕವನಾಗಿಯೂ, ಅತ್ಯಂತ ಕೀರ್ತಿಯುಕ್ತನಾಗಿಯೂ ಇರುವೆ ॥೨೬॥

ಮುಕ್ತಿಂ ವಾಪಿ ಪ್ರದಾಸ್ಯೇಹಂ ನ ತು ಭಕ್ತಿಂ ಕದಾಚನೆ ।
ಯದಿ ಭಕ್ತಿರ್ದೃಢಾ ಮೇ ಸ್ಯಾತ್ ನ ಮುಕ್ತಿರವಶಿಷ್ಯತೇ ॥೨೭॥
ತಸ್ಮಾತ್ ಸರ್ವಾಂ ಪರಿತ್ಯಜ್ಯ ಮದ್ಭಕ್ತಿ ಪರವೋ ಭವೇತ್ ।
ಮದ್ಭಕ್ತಿರಚಲಾ ನೃಣಾಂ ಕಾಮಧುಗ್ಭವತಿ ಧ್ರುವಮ್ ॥೨೮॥
ಮಯಿ ಭಕ್ತಿಮಕೃತ್ವೈವ ಯೋ ಮುಕ್ತಿಮಭಿವಾಞ್ಛತಿ ।
ಸ ಲೋಕೇ ವಹ್ನಿಮುತ್ಸೃಜ್ಯ ಮೂಢೋನ್ನಂ ಕರ್ತುಮಿಚ್ಛತಿ ॥೨೯॥
ಸಂಸಾರೇ ಯಾದೃಶೀ ಪ್ರೀತಿಃ ಮಯಿ ಸ್ಯಾದ್ಯದಿ ತಾದೃಶೀ ।
ಕೋ ಬನ್ಧಮನುವರ್ತೇತ ಸ ನೇಚ್ಛನ್ನಪಿ ಮುಚ್ಯತೇ ॥೩೦॥
ದೇಹಾತ್ಮವಾದಿನಾಂ ಲೋಕೇ ವಿಷಯಾಸಕ್ತಚೇತಸಾಮ್ ।
ಮದ್ಭಕ್ತಿರ್ದುರ್ಲಭಾ ನೃಣಾಂ ಅನ್ಧಸ್ಯೇವಾರ್ಕದರ್ಶನಮ್ ॥೩೧॥
ಬಹುಜನ್ಮಕೃತೈಃ ಪುಣ್ಯೈಃ ಮಯಿ ಭಕ್ತಿಃ ಪ್ರಜಾಯತೇ ।
ಭಕ್ತಿಂ ಮಯಿ ದೃಢಾಂ ಕೃತ್ವಾ ಮಾಮೇವೈಷ್ಯತಸಂಶಯಮ್ ॥೩೨॥
ಸ ಶ್ರೇಷ್ಠಃ ಸರ್ವವರ್ಣೇಭ್ಯಃ ಸ ಧನ್ಯಃ ಸ ಗುಣಾಧಿಕಃ ।
ಕೃತಕೃತ್ಯಃ ಸ ತು ಪ್ರೋಕ್ತೋ ನೀಚೋಪಿ ಮಯಿ ಭಕ್ತಿಮಾನ್ ॥೩೩॥

ನಾನು ಮುಕ್ತಿಯನ್ನಾದರೂ ಕೊಡುವೆನಲ್ಲದೆ, ಭಕ್ತಿಯನ್ನು ಸಾಮಾನ್ಯವಾಗಿ ಕೊಡುವುದಿಲ್ಲ. ನನ್ನಲ್ಲಿ ಭಕ್ತಿಯು ದೃಢವಾಗಿಬಿಟ್ಟಪಕ್ಷದಲ್ಲಿ, ಅಮೇಲೆ ಮುಕ್ತಿಯೆಂಬುದು ಅವಶೇಷವಾಗಿ ನಿಲ್ಲಲಾರದು ॥೨೭॥

ಆದುಕಾರಣ, ಪುರುಷನು ಸಮಸ್ತವನ್ನೂ ಪರಿತ್ಯಜಿಸಿ ನನ್ನಲ್ಲಿ ಭಕ್ತಿತತ್ಪರನಾಗಬೇಕು. ನನ್ನಲ್ಲಿ ದೃಢವಾದ ಭಕ್ತಿಯು ಮನುಷ್ಯರಿಗೆ ಕಾಮಧೇನುವಾಗುವುದು. ಇದು ನಿಶ್ಚಯವು ॥

ಯಾವನು ನನ್ನಲ್ಲಿ ಭಕ್ತಿಯಿಡದೆಯೇ ಮುಕ್ತಿಯನ್ನಪೇಕ್ಷಿಸುವನೋ, ಆ ಮೂಢನು-ಬೆಂಕಿಯಿಲ್ಲದೆಯೇ ಅಡಿಗೆಮಾಡಲಪೇಕ್ಷಿಸುವನು ॥೨೯॥

ಸಂಸಾರದಲ್ಲಿ ಎಂತಹ ಪ್ರೀತಿಯಿರುವುದೋ-ಅಷ್ಟು ಪ್ರೀತಿಯು ನನ್ನಲ್ಲಿದ್ದಪಕ್ಷದಲ್ಲಿ, ಅಮೇಲೆ ಯಾವನುತಾನೆ ಈ ಸಂಸಾರಬಂಧವನ್ನನುಸರಿಸುವನು? ಅಂಥವನು, ತಾನು ಅಪೇಕ್ಷಿಸದಿದ್ದರೂ ಮುಕ್ತನಾಗುವನು ॥೩೦॥

ಲೋಕದಲ್ಲಿ, ದೇಹಾತ್ಮವಾದಿಗಳಾಗಿ ವಿಷಯಾಸಕ್ತಚಿತ್ತರಾಗಿರುವ ಮನುಷ್ಯರಿಗೆ, ಕುರುಡನಿಗೆ ಸೂರ್ಯದರ್ಶನವು ದುರ್ಲಭವಾಗುವಂತೆ, ನನ್ನ ಭಕ್ತಿಯು ದುರ್ಲಭವಾಗುವುದು ॥೩೧॥

ಹಿಂಡೆ ನೂರಾರು ಜನ್ಮಗಳಲ್ಲಿ ಮಾಡಿದ ಪುಣ್ಯವಿಶೇಷದಿಂದ ನನ್ನಲ್ಲಿ ಭಕ್ತಿಹುಟ್ಟುವುದು. ನನ್ನಲ್ಲಿ ದೃಢವಾಗಿ ಭಕ್ತಿಯನ್ನು ಮಾಡಿದರೆ, ನಿಸ್ಸಂಶಯವಾಗಿ ನನ್ನನ್ನೇ ಹೊಂದುವನು ॥

ಯಾವನು ನನ್ನಲ್ಲಿ ಭಕ್ತಿಯಿಡುವನೋ, ಅವನು ಎಂತಹ ನೀಚನಾಗಿದ್ದರೂ, ಸಮಸ್ತ ವರ್ಣಗಳಲ್ಲಿಯೂ ಅವನೇ ಉತ್ತಮನು; ಅವನೇ ಧನ್ಯನು; ಅವನೇ ಗುಣಾಧಿಕನು; ಅವನೇ ಕೃತಕೃತ್ಯನೆನ್ನಿಸಿಕೊಳ್ಳುವನು ॥೩೩॥

ತಾರತಮ್ಯಂ ನ ಭಕ್ತೇಷು ಮಯಿ ಚಾನನ್ಯಭಕ್ತಿಷು ।
ಭಕ್ತಾಪೇಕ್ಷಾ ಸದಾ ಶ್ರೇಷ್ಠಾಃ ಮಮ ತೇಷಾಂ ತಥಾಸ್ಮ್ಯಹಮ್ ॥೩೪॥
ತಸ್ಮಾನ್ಮದುಕ್ತ್ಯಾ ಮದ್ಭಕ್ತೋ ಮತ್ಪೂಜಾನಿರತಃ ಸದಾ ।
ಮಯಿ ಭಕ್ತಿಪರೋ ಭೂತ್ವಾ ಸರ್ವಾ ಕಾಮಾನವಾಪ್ನುಯಾಃ ॥೩೫॥
ಇತ್ಯುಕ್ತೋ ಭರತೋಽಪ್ಯಾಹ ರಾಮಂ ನತ್ವಾ ಪುನಃಪುನಃ ।
ತ್ವಯಿ ಭಕ್ತಿರ್ದೃಢಾ ಯದ್ವತ್ ವದ ತತ್ ಸಾಧನಂ ವಿಭೋ ॥೩೬॥

ಶ್ರೀರಾಮ ಉವಾಚ.

ಸಾಧು ಪೃಷ್ಟಂ ಮಹಾಭಾಗ ದುರ್ಲಭಂ ಭಕ್ತಿಸಾಧನಮ್ ।
ತಥಾಪಿ ತವ ವಕ್ಷ್ಯೇಽಹಂ ಸಾವಧಾನತಯಾ ಶೃಣು ॥೩೭॥
ಮತ್ಪುಣ್ಯಗಾಥಾಶ್ರವಣಂ ಮತ್ಪೂಜಾರತಿರಜ್ಜಸಾ ।
ಮದ್ಭಕ್ತಸಙ್ಗೋ ಮತ್ಸೇವಾ ಸದಾ ಮನ್ನಾಮಕೀರ್ತನಮ್ ॥೩೮॥
ಮನ್ಮನ್ತ್ರಾಪಠನಂ ನಿತ್ಯಂ ಸರ್ವಕರ್ಮಾರ್ಪಣಂ ಮಯಿ ।
ಸರ್ವಲಾಭೋಪಹರಣಂ ಮದರ್ಥಂ ಸ್ವಾಙ್ಗಚೇಷ್ಟನಮ್ ॥೩೯॥
ಮತ್ಸುತಿರ್ಮನ್ನಮಸ್ಕಾರೋ ಮತ್ಕ್ಷೇತ್ರಗಮನಂ ತಥಾ ।
ಮನ್ಮೂರ್ತಿದರ್ಶನಧ್ಯಾನೇ ಪರಿಚರ್ಯಾ ಸಮನ್ತತಃ ॥೪೦॥

ಅನನ್ಯಭಕ್ತರಾಗಿರುವ ನನ್ನ ಭಕ್ತರಲ್ಲಿ ಪರಸ್ಪರತಾರತಮ್ಯವೇಂಬುದು ಸ್ವಲ್ಪವೂ ಇಲ್ಲ. ಸಾಮಾನ್ಯವಾಗಿ ನನ್ನ ಭಕ್ತರೇ ಶ್ರೇಷ್ಠರಾದವರು; ನಾನೂ ಅವರಲ್ಲಿ ತಾರತಮ್ಯವಿಲ್ಲದೆಯೇ ಇರುವೆನು ॥೩೪॥

ಅದುಕಾರಣ, ನನ್ನ ಮಾತಿನಂತೆ ನೀನೂ ನನ್ನ ಭಕ್ತನಾಗಿ, ಸರ್ವದಾ ನನ್ನ ಪೂಜೆಯಲ್ಲಿ ಆಸಕ್ತನಾಗಿ, ನನ್ನಲ್ಲಿ ನಿಜವಾದ ಭಕ್ತಿಯನ್ನಿಟ್ಟಿದ್ದರೆ, ಸಕಲವಾದ ಇಷ್ಟಾರ್ಥಗಳನ್ನೂ ಪಡೆಯುವೆ ॥೩೫॥

ಹೀಗೆಂದು ಶ್ರೀರಾಮನಿಂದ ಹೇಳಲ್ಪಟ್ಟ ಆ ಭರತನು, ಪುನಃಪುನಃ ರಾಮನಿಗೆ ನಮಸ್ಕಾರ ಮಾಡಿ, ಅವನನ್ನು ಕುರಿತು 'ವಿಭೋ! ಹೇಗಿದ್ದರೆ ನಿನ್ನಲ್ಲಿ ಭಕ್ತಿ ದೃಢವಾಗುವುದೋ, ಅಂತಹ ಸಾಧನವನ್ನು ನನಗೆ ಹೇಳುವನಾಗು' ಎಂದು ಪ್ರಾರ್ಥಿಸಿದನು ॥೩೬॥

ಇದನ್ನು ಕೇಳಿ ಶ್ರೀರಾಮನು ಉತ್ತರಹೇಳುವನು :—

ಎಲೈ ಮಹಾನುಭಾವನಾದ ಭರತನೆ! ನೀನು ಬಲು ಚೆನ್ನಾಗಿ ಕೇಳಿದೆ. ಭಕ್ತಿಯ ಸಾಧನವೆಂಬುದು ಸಾಮಾನ್ಯವಾಗಿ ದುರ್ಲಭವಾದುದು. ಆದರೂ, ನಾನು ನಿನಗೆ ಹೇಳುವೆನು. ಸಾವಧಾನವಾಗಿ ಕೇಳು ॥೩೭॥

ಆ ಭಕ್ತಿಸಾಧನವೇನೆಂದರೆ, ನನ್ನ ಪುಣ್ಯಕಥಾಶ್ರವಣ, ಆ ಕ್ಷಣವೇ ನನ್ನನ್ನು ಪೂಜಿಸುವುದರಲ್ಲಿ ಆಸಕ್ತ, ನನ್ನ ಭಕ್ತರ ಸಹವಾಸ, ನನ್ನ ಸೇವೆ, ಸರ್ವದಾ ನನ್ನ ನಾಮಕೀರ್ತನ, ನಿತ್ಯವಾಗಿ ನನ್ನ ಮಂತ್ರವನ್ನು ಪಠಿಸುವಿಕೆ, ಸಕಲ ಕರ್ಮವನ್ನೂ ನನ್ನಲ್ಲಿ ಅರ್ಪಿಸುವಿಕೆ, ಸಕಲಲಾಭ

ದೇಹಾದ್ಯನಾತ್ಮತ್ವಜೆನ್ತಾ ವಿಷಯೇಷು ವಿರಕ್ತತಾ ।
ಕಾಮಕ್ರೋಧಾದಿರಾಹಿತ್ಯಂ ಮಯಿ ಸರ್ವೋತ್ತಮತ್ವಧೀಃ ॥೪೧॥
ಸರ್ವಭೂತಸುಹೃತ್ತ್ವಂ ಚ ಸರ್ವಭೂತೇಷು ಮನ್ಮತಿಃ ।
ಮಯಿ ತ್ವನನ್ಯಯೋಗೇನ ಮನಸಶ್ಚ ಪರ್ಣಂ ಸದಾ ॥೪೨॥
ಮದ್ಧ್ಯಾನಂ ಸರ್ವಭೂತೇಷು ಮತ್ಪ್ರೀಯವ್ರತಧಾರಣಮ್ ।
ಮತ್ಪರಿಗ್ರಹಣಂ ಭ್ರಾತಃ ಮಯಿ ಸರ್ವಸಿವೇದನಮ್ ॥೪೩॥
ಯಥಾಲಾಭೇನ ಸನ್ತೋಷಃ ಸಮತ್ವಂ ದ್ವನ್ದ್ವಸಂಜ್ಞಯೋಃ ।
ಮಯಿ ತುಷ್ಟಿರ್ಮಯಿ ರತಿಶ್ಚಾನ್ಯೋನ್ಯಂ ಮತ್ಪ್ರಬೋಧನಮ್ ॥೪೪॥
ಮದುತ್ಸವಸಮಾರಮ್ಭಃ ಪ್ರತಿಮಾಸ್ಥಾಪನಂ ಚ ಮೇ ।
ಉದ್ಯಾನವನಯಾನಾದಿಕರಣಂ ಮದವಜ್ಞಾನಮ್ ॥೪೫॥
ಯತ್ ಕರೋತಿ ಚ ಯದ್ಭುಙ್ಕ್ತೇ ಯದ್ದದಾತಿ ಜುಹೋತಿ ಚ ।
ಸುಕೃತಂ ದುಷ್ಕೃತಂ ವಾಪಿ ತತ್ ಕುರ್ಯಾನ್ಮತ್ಸಮರ್ಪಣಮ್ ॥೪೬॥
ಜ್ಞಾನತೋಽಜ್ಞಾನತೋ ವಾಪಿ ದಿವಾರಾತ್ರಂ ಚ ಸನ್ಧ್ಯಯೋಃ ।
ಯದ್ಯತ್ ಕರೋತಿ ತತ್ ಸರ್ವಂ ಕುರ್ಯಾನ್ಮತ್ಪ್ರೀತಯೇ ಬುಧಃ ॥೪೭॥

ವನ್ನೂ ನನಗೆ ಒಪ್ಪಿಸುವುದು, ನನಗೋಸ್ಕರ ತನ್ನ ಅವಯವಗಳನ್ನು ವ್ಯಾಪಾರಗೊಳ್ಳಿಸುವುದು, ನನ್ನ ಸ್ತೋತ್ರ, ನನ್ನ ನಮಸ್ಕಾರ, ನನ್ನ ಕ್ಷೇತ್ರಗಳ ಯಾತ್ರೆ, ನನ್ನ ವಿಗ್ರಹದ ದರ್ಶನ, ಅದರ ಧ್ಯಾನ, ಸುತ್ತಲೂ ಅದರಸೇವೆ, ದೇಹಾದಿಗಳಲ್ಲಿ ಅತ್ಮಜ್ಞಾನಪರಿತ್ಯಾಗ, ವಿಷಯಗಳಲ್ಲಿ ವೈರಾಗ್ಯ, ಕಾಮಕ್ರೋಧಾದಿರಾಹಿತ್ಯ, ನನ್ನಲ್ಲಿ ಸರ್ವೋತ್ತಮತ್ವಜ್ಞಾನ, ಸರ್ವಭೂತಗಳಲ್ಲಿಯೂ ಮೈತ್ರಿ, ಸಕಲಪ್ರಾಣಿಗಳನ್ನೂ ನಾನೆಂದು ಭಾವಿಸುವಿಕೆ, ಅನನ್ಯಶರಣನಾಗಿ ನನ್ನಲ್ಲಿ ಮನಸ್ಸನ್ನು ಸಮರ್ಪಿಸುವಿಕೆ, ಸರ್ವಭೂತಗಳಲ್ಲಿಯೂ ನನ್ನ ಅನುಸಂಧಾನ, ನನಗೆ ಇಷ್ಟವಾದ ವ್ರತಗಳನ್ನು ಧರಿಸುವಿಕೆ, ನನ್ನ ಪರಿಗ್ರಹ, ನನ್ನಲ್ಲಿ ಸರ್ವಸಮರ್ಪಣೆ, ಯಥಾಲಾಭವಾಗಿ ಸಂತೋಷ, ಸುಖದುಃಖಾದಿಗಳಲ್ಲಿ ಸಮಸ್ಥಿತಿ, ನನ್ನಲ್ಲಿ ಪ್ರೀತಿ, ನನ್ನಲ್ಲಿ ಆಸಕ್ತಿ, ಅನ್ಯೋನ್ಯವಾಗಿ ನನ್ನ ವಿಷಯವನ್ನು ಬೋಧಿಸುವಿಕೆ, ನನ್ನ ಉತ್ಸವಾರ್ಥವಾಗಿ ಸಮಾರಂಭ, ನನ್ನ ವಿಗ್ರಹವನ್ನು ಪ್ರತಿಷ್ಠೆ ಮಾಡುವಿಕೆ, ನನಗೋಸ್ಕರವಾಗಿ ಉದ್ಯಾನ ವನ ಯಾನ ಮುಂತಾದುವುಗಳನ್ನು ರಚಿಸುವಿಕೆ, ಯಾವ ರೀತಿಯಲ್ಲಿಯೂ ನನಗೆ ದ್ರೋಹವಾಡದಿರುವಿಕೆ,—ಇತ್ಯಾದಿಗಳೇ ನನ್ನ ಭಕ್ತಿಗೆ ಮುಖ್ಯ ಸಾಧನಗಳು ॥೪೪—೪೫॥

ಮತ್ತು, ಮನುಷ್ಯನು-ಯಾವುದನ್ನು ಮಾಡುವನೋ, ಯಾವುದನ್ನು ತಿನ್ನುವನೋ, ಯಾವುದನ್ನು ದಾನವಾಡುವನೋ, ಯಾವುದನ್ನು ಹೋಮವಾಡುವನೋ, ಅದೆಲ್ಲವನ್ನೂ-ಕೆಟ್ಟದು ದಾದರೂ ಒಳ್ಳೆಯದಾದರೂ-ನನಗೆ ಸಮರ್ಪಿಸಬೇಕು ॥೪೬॥

ಜ್ಞಾನದಿಂದಲಾಗಲಿ-ಅಥವಾ ಅಜ್ಞಾನದಿಂದಲಾಗಲಿ-ಹಗಲಾಗಲಿ-ರಾತ್ರಿಯಾಗಲಿ-ಸಂಧ್ಯಾಕಾಲಗಳಲ್ಲಿಯಾಗಲಿ-ಯಾವಯಾವ ಕೆಲಸವನ್ನು ಮಾಡುವನೋ, ಪ್ರಾಜ್ಞನಾದವನು ಅದೆಲ್ಲವನ್ನೂ ನನ್ನ ಪ್ರೀತಿಗೋಸ್ಕರವಾಗಿ ಮಾಡಬೇಕು ॥೪೭॥

ಏವಮಾದೀನ್ಯನೇಕಾನಿ ಮದ್ಭಕ್ತೇಃ ಸಾಧನಾನಿ ಚ ।
ಸನ್ತ್ಯಜ್ಯ ತೇಷು ಮುಖ್ಯಾನಿ ಮಯಾ ಪ್ರೋಕ್ತಾನಿ ಕಾನಿಚಿತ್ ॥೪೯॥
ಏವಂ ಸಾಧನಸಮ್ಪನ್ನೋ ಯಃ ಕಶ್ಚಿನ್ಮನುಜೋ ಭುವಿ ।
ಸ ಭಕ್ತಿಮಾ೯ ಭವೇದ್ವತ್ಸ ಕೃತಕೃತ್ಯೋ ಭವೇನ್ನರಃ ॥೪೯॥

ಶ್ರೀ ಶಿವಉವಾಚ.

ಇತ್ಯಾದಿ ರಾಮವಾಕ್ಯಾನಿ ಶ್ರುತ್ವಾ ಸರ್ವೇ ಸಭಾಸದಃ ।
ಮುನಯೋ ಮನ್ತ್ರಿಣಶ್ಚೈವ ನೈಗಮಾಭರತಸ್ತಥಾ ।
ಮಾತರಶ್ಚಾಪಿ ಮುಮುಚುಃ ನೇತ್ರೈರಾನನ್ದಜಂ ಪಯಃ ॥೫೦॥
ತದಾರಭ್ಯಾಖಿಲಾರಾಮೇ ಭಕ್ತಾಃ ಸ್ಯುರ್ನಷ್ಟಸಂಶಯಾಃ ।
ತತೋ ರಾಮಸ್ತು ಭರತಂ ಪರಿಷ್ವಜ್ಯೇದಮಬ್ರವೀತ್ ॥೫೧॥
ಮಾತರಂ ರಕ್ಷ ಕೈಕೇಯೀಂ ಮಾ ದೋಷಂ ಕುರು ತಾಂ ಪ್ರತಿ ।
ಮಯಾ ಚ ಸೀತಯಾ ಚೈವ ಶಪ್ತೋಽಸಿ ರಘುನನ್ದನ ॥೫೨॥
ಇತ್ಯುಕ್ತ್ವಾಶ್ರುಪರೀತಾಕ್ಷೋ ಭ್ರಾತರಂ ವಿಸಸರ್ಜ ಹ ॥೫೩॥
ಸಪಾದುಕೇತೇಭರತಃಪ್ರತಾಪವಾ೯ಸ್ವಲಙ್ಕೃತೇಸಂಪರಿಗೃಹ್ಯ ಧರ್ಮವಿತ್ ।
ಪ್ರದಕ್ಷಿಣಂಚೈವಚಕಾರರಾಘವಂ ಚಕಾರಚೈವೋತ್ತಮನಾಗಮೂರ್ಧನಿ॥

ವತ್ಸ! ಭರತ! ಇವೇ ಮೊದಲಾಗಿ ನನ್ನ ಭಕ್ತಿಗೆ ಸಾಧನಗಳು ಅಸಂಖ್ಯಾತವಾಗಿರುವವು. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರವೇ ನಾನು ನಿನಗೆ ಹೇಳಿರುವೆನು ॥೪೮॥

ವತ್ಸ! ಯಾವನೊಬ್ಬ ಮನುಷ್ಯನು ಈ ಸಾಧನಗಳಿಂದ ಸಂಪನ್ನನಾಗುವನೋ, ಅವನೇ ನನ್ನಲ್ಲಿ ಭಕ್ತಿಯುಳ್ಳವನಾಗುವನು; ಅವನೇ ಕೃತಾರ್ಥನಾಗುವನು. (ಎಂದು ಶ್ರೀರಾಮನು ಹೇಳಿದನು) ॥೪೯॥

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಇತ್ಯಾದಿರೀತಿಯಾಗಿ ಹೇಳಲ್ಪಟ್ಟ ಶ್ರೀರಾಮನ ಮಾತುಗಳನ್ನು ಕೇಳಿ, ಅಲ್ಲಿದ್ದ ಸಮಸ್ತ ಸಭಾಸದರೂ ಮುನಿಗಳೂ ಮಂತ್ರಿಗಳೂ ವೈದಿಕವರ್ಯರೂ ಭರತನೂ ತಾಯಿಯರೂ ಕೂಡ, ತಮ್ಮ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಯಿಸಿದರು ॥೫೦॥

ಆದುಮೊದಲುಗೊಂಡು, ಸಮಸ್ತರೂ ಸಂಶಯವನ್ನು ಬಿಟ್ಟು ರಾಮನಲ್ಲಿ ಭಕ್ತರಾದರು. ಆನಂತರ, ಶ್ರೀರಾಮನು, ಭರತನನ್ನು ತಬ್ಬಿಕೊಂಡು 'ವತ್ಸ! ಭರತ! ತಾಯಿಯಾದ ಕೈಕೇಯಿಯನ್ನು ಭಕ್ತಿಯಿಂದ ಕಾಪಾಡು; ಅವಳಲ್ಲಿ ದೋಷಬುದ್ಧಿಯನ್ನಿರಿಸಬೇಡ. ನನ್ನ ಮೇಲೆಯೂ ಸೀತೆಯಮೇಲೆಯೂ ಆಣೆಯಿಟ್ಟಿರುವೆನು' ಎಂದು ಹೇಳಿ, ಕಣ್ಣೀರುದುಂಬಿದವನಾಗಿ, ಅವನನ್ನು ಕಳುಹಿಸಿಕೊಟ್ಟನು ॥೫೧—೫೩॥

ಆನಂತರ, ಧರ್ಮಜ್ಞನೂ ಪ್ರತಾಪಯುಕ್ತನೂ ಆದ ಭರತನು, ಚೆನ್ನಾಗಿ ಅಲಂಕೃತವಾಗಿದ್ದ ಆ ರಾಮನ ಪಾದುಕೆಗಳನ್ನು ತೆಗೆದುಕೊಂಡು, ರಾಮನಿಗೆ ಪ್ರದಕ್ಷಿಣನಮಸ್ಕಾರಮಾಡಿ, ಆ ಪಾದುಕೆಗಳನ್ನು ಆನೆಯ ತಲೆಯಮೇಲೆ ಇರಿಸಿದನು ॥೫೪॥

ಅಥಾನುಪೂರ್ವ್ಯಾಪ್ರತಿಪೂಜ್ಯತಂಜನಂಗುರೂಂಶ್ಚ ಮನ್ತ್ರಿಪಕೃತೀಸ್ತಥಾನುಜೌ।
ವ್ಯಸರ್ಜಯದ್ರಾಘವವಂಶವರ್ಧನಃ ಸ್ಥಿತಃಸ್ವಧರ್ಮೇ ಹಿಮವಾನಿವಾಚಲಃ॥
ತಂವಾತರೋಬಾಷ್ಪಗೃಹೀತಕಂಠ್ಯೋ ದುಃಖೇನಚಾಮನ್ತ್ರಯಿತುಂನಶೇಕುಃ।
ಸತ್ಕೃತ್ಯ ವಾತ್ಯಾರಭಿವಾದ್ಯ ಸರ್ವಾಃ ರುದನ್ತಿಕಾಟೇಂಸ್ವಾಂಪ್ರವಿವೇಶರಾಮಃ ॥
ತತಃ ಶಿರಸಿ ಕೃತ್ವಾ ತು ಪಾದುಕೇ ಭರತಸ್ತದಾ ।
ಅರುರೋಹ ರಥಂ ಹೃಷ್ಟಃ ಶತ್ರುಘ್ನೇನ ಸಮನ್ವಿತಃ ॥೫೩॥
ಪ್ರದಕ್ಷಿಣಂ ಚ ಕುರ್ವಾಣಃ ಚಿತ್ರಕೂಟಂ ಮಹಾಗಿರಿಮ್ ।
ಚತುರಙ್ಗಬಲೋಪೇತೋ ಭರದ್ವಾಜಾಶ್ರಮಂ ಯಯೌ ॥೫೪॥
ತತ್ರೈಕಾಂ ರಜನೀಮುಷ್ಯ ಭರದ್ವಾಜೇನ ತೋಷಿತಃ ।
ಗುಹೇನ ಚಾರ್ಚಿತೋಯೋಧ್ಯಾಂ ಜಗಾಮ ಸಬಲಾನುಗಃ ॥೫೫॥
ತತೋ ವಾತ್ಯಾಃ ಸಮಾಶ್ವಾಸ್ಯ ಸನ್ನಿವೇಶ್ಯ ಚ ತಾಃ ಪ್ರಭೋ ।
ಅನಾಹೂತಾಗತಬಲೋ ನನ್ದಿಗ್ರಾಮಂ ಜಗಾಮ ಸಃ ॥೫೦॥
ಪಾದುಕೇ ಸೋಭಿಷಿಚ್ಯಾಥ ನನ್ದಿಗ್ರಾಮೇ ವಸಂಸ್ತದಾ ।
ಭರತಃ ಶಾಸನಂ ಸರ್ವಂ ಪಾದುಕಾಭ್ಯಾಂ ನ್ಯವೇದಯತ್ ॥೫೧॥

ಅನಂತರ, ಹಿಮವತ್ಪರ್ವತದಂತೆ ತನ್ನ ಧರ್ಮದಲ್ಲಿ ನಿಶ್ಚಲನಾಗಿ ನೆಲೆಸಿರುವ ಶ್ರೀರಾಮನು, ಯಥಾಕ್ರಮವಾಗಿ ಅವರೆಲ್ಲರಿಗೂ ಮರ್ಯಾದೆಮಾಡಿ, ಗುರುಗಳನ್ನೂ ಮಂತ್ರಿಗಳನ್ನೂ ಪಟ್ಟಣಿಗರನ್ನೂ ಶಮ್ಮಂದಿರನ್ನೂ ಕಳುಹಿಸಿಕೊಟ್ಟನು ॥೫೫॥

ಆಗ, ಕಣ್ಣೀರುದುಂಬಿದ ಕುತ್ತಿಗೆಯುಳ್ಳವರಾದ ರಾಮಮಾತೃಗಳು, ದುಃಖದಿಂದ ಅವನನ್ನು ಕೇಳಿಕೊಳ್ಳುವುದಕ್ಕೆ ಅಸಮರ್ಥರಾದರು. ಶ್ರೀರಾಮನಾದರೋ, ಧೈರ್ಯಾವಷ್ಟಂಭದಿಂದ ಅವರೆಲ್ಲರನ್ನೂ ನಮಸ್ಕರಿಸಿ, ಅಳುತ ತನ್ನ ಪರ್ಣಶಾಲೆಯೊಳಕ್ಕೆ ಪ್ರವೇಶಿಸಿದನು ॥೫೬॥

ಆಮೇಲೆ, ಹರ್ಷಯುಕ್ತನಾದ ಭರತನು, ಶ್ರೀರಾಮನ ಪಾದುಕೆಗಳನ್ನು ತಲೆಯಮೇಲಿಟ್ಟುಗೊಂಡು, ಶತ್ರುಘ್ನಸಹಿತನಾಗಿ ರಥವನ್ನು ಹತ್ತಿದನು ॥೫೭॥

ಅನಂತರ, ಆ ಚಿತ್ರಕೂಟಪರ್ವತವನ್ನು ಪ್ರದಕ್ಷಿಣೆಮಾಡಿ, ಚತುರಂಗಸೈನ್ಯಸಮನ್ವಿತನಾಗಿ ಭರದ್ವಾಜರ ಆಶ್ರಮಕ್ಕೆ ಬಂದನು ॥೫೮॥

ಅಲ್ಲಿ, ಭರದ್ವಾಜರಿಂದ ಬಹುಮಾನಿತನಾಗಿ ಒಂದು ರಾತ್ರಿಯಿದ್ದು, ಆಮೇಲೆ ಗುಹನಿಂದ ಅರ್ಚಿತನಾಗಿ, ಸೈನ್ಯದೊಡನೆಯೂ ಅನುಚರರೊಡನೆಯೂ ಅಯೋಧ್ಯೆಗೆ ಹೋದನು ॥೫೯॥

ಬಳಿಕ, ತಾಯಿಯರನ್ನು ಸಮಾಧಾನಪಡಿಸಿ, ಅವರೆಲ್ಲರನ್ನೂ ಅಯೋಧ್ಯಾಪಟ್ಟಣದೊಳಗಿರಿಸಿ, ತಾನು-ಕರೆಯದೆಯೇ ತನ್ನ ಹಿಂದೆ ಅನುಸರಿಸಿ ಬರುತಿರುವ ಸೈನಿಕರಿಂದ ಯುಕ್ತನಾಗಿ, ನಂದಿಗ್ರಾಮಕ್ಕೆ ಹೋದನು ॥೬೦॥

ಅನಂತರ ಆ ಭರತನು, ಆ ನಂದಿಗ್ರಾಮದಲ್ಲಿ ಶ್ರೀರಾಮನ ಪಾದುಕೆಗಳಿಗೆ ರಾಜ್ಯಾಭಿಷೇಕಮಾಡಿ, ತಾನೂ ಅಲ್ಲಿಯೇ ವಾಸಮಾಡುತ, ಸಮಸ್ತವಾದ ರಾಜ್ಯದ ಕಾರ್ಯಭಾಗವನ್ನೂ ಆ ಪಾದುಕೆಗಳಿಗೆ ವಿಜ್ಞಾಪಿಸುತಿದ್ದನು ॥೬೧॥

ತತಸ್ತು ಭರತಃ ಶ್ರೀಮಾ೯ ಅಭಿಷಿಚ್ಯಾರ್ಯಪಾದುಕೇ ।
ತದಧೀನಸ್ತದಾ ರಾಜ್ಯಂ ಕಾರಯಾಮಾಸ ಸರ್ವದಾ ॥೬೦॥

ಯದಾ ಹಿ ಯತ್‌ಕಾರ್ಯಮುಪೈತಿ
ಕಿಞ್ಚಿತ್‌ಉಪಾಯನಂ ಚೋಪಹೃತಂ ಮಹಾರ್ಹವತ್ ।
ಸ ಪಾದುಕಾಭ್ಯಾಂಪ್ರಥಮಂನಿವೇದ್ಯ
ಚಕಾರಪಶ್ಚಾದ್ಭರತೋಯಥಾವತ್ ॥೬೧॥

ಇತಿ ಶ್ರೀಮದಯೋಧ್ಯಾಕಾಣ್ಡೇ ಭರತಸ್ಯ ರಾಮಭಕ್ತಿಕಥನಂ ನಾಮ
ಏಕೋನವಿಂಶಃ ಸರ್ಗಃ.



ಹೀಗೆ ಶ್ರೀಮಂತನಾದ ಆ ಭರತನು, ಆಗ ಅಣ್ಣನ ಪಾದುಕೆಗಳಿಗೆ ಅಭಿಷೇಕಮಾಡಿ, ತಾನು ಅವುಗಳಿಗಧೀನನಾಗಿ, ಸರ್ವದಾ ಸಮಸ್ತ ರಾಜಕಾರ್ಯವನ್ನೂ ನಡೆಯಿಸುತಿದ್ದನು ॥೬೨॥

ಯಾವಾಗ ಯಾವುದೊಂದು ಕಾರ್ಯವೊದಗಿದರೂ, ಯಾವುದಾದರೊಂದು ಉಪಹಾರ (ನಜರು)ಬಂದರೂ, ಅದೆಲ್ಲವನ್ನೂ ಭರತನು ಮೊದಲು ಪಾದುಕೆಗಳಿಗೆ ಸಮರ್ಪಿಸಿ ಅನಂತರ ಅವುಗಳನ್ನು ಯಥಾವತ್ತಾಗಿ ಕ್ರಮಪಡಿಸುತಿದ್ದನು ॥೬೩॥

ಇದು ಅಯೋಧ್ಯಾಕಾಂಡದಲ್ಲಿ ಭರತನಿಗೆ ರಾಮನು ಭಕ್ತಿಸಾಧನವನ್ನುಪದೇಶಿಸಿದನೆಂಬಲ್ಲಿಗೆ
ಹತ್ತೊಂಭತ್ತನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ವಿಂಶಃ ಸರ್ಗಃ.

ಶ್ರೀ ಸೂತ ಉವಾಚ.

ಭರತೇ ತು ಗತೇ ರಾಮಃ ಸತ್ಯಸನ್ಧೋ ದೃಢವ್ರತಃ ।
ಭರದ್ವಾಜಾನ್ತಿಕಂ ಭೂಯೋ ಜಗಾಮ ಮುನಿಭಿಃ ಸಹ ॥೧॥
ಸ್ಥಿತೋರ್ಧಮಾಸಂ ತತ್ರೈವ ಸುಖೇನ ಸಪರಿಚ್ಛದಃ ।
ಕಾಶೀಂ ಜಗಾಮ ಕಾಕುತ್ಸ್ಥೋ ಭರದ್ವಾಜೇನ ಸಂಯುತಃ ॥೨॥
ವಿಶ್ವೇಶ್ವರಪುರೀ ಕಾಶೀ ಸಾಕ್ಷಾತ್ ಕೈಲಾಸವನ್ದಿರಮ್ ।
ಸರ್ವೈರ್ಯಾ ತು ನಿವಾಸಾಯ ಕಾಂಕ್ಷ್ಯತೇ ಮುಕ್ತ್ಯಪೇಕ್ಷಯಾ ॥೩॥
ಯತ್ರ ಸರ್ವೇ ಪ್ರತೀಕ್ಷನ್ತೇ ಮೃತ್ಯುಂ ಪ್ರಿಯಮಿವಾತಿಥಿಮ್ ।
ದೇಹಸನ್ತ್ಯಾಗಮಾತ್ರೇಣ ಮುಕ್ತಿರ್ಯತ್ರ ಕರೇ ಸ್ಥಿತಾ ॥೪॥
ವಿನಾ ಕ್ಲೇಶಂ ಶರೀರಸ್ಯ ಸುಖೇನ ಪ್ರಾಪ್ಯತೇ ಸುಖಮ್ ।
ಸರ್ವತ್ರ ಕ್ಲೇಶಯೋಗೇನ ನ ಸುಖಾಲ್ಲಭ್ಯತೇ ಸುಖಮ್ ॥೫॥
ಯತ್ರ ದೇಹಂ ಪರಿತ್ಯಜ್ಯ ನ ಪುನರ್ದೇಹಮಾಪ್ನುಯುಃ ।

ಅಯೋಧ್ಯಾಕಾಂಡದಲ್ಲಿ ಇಪ್ಪತ್ತನೆಯ ಸರ್ಗವು.

ಶ್ರೀಸೂತಪೌರಾಣಿಕರು ಶೌನಕಾದಿಮುನಿಗಳನ್ನು ಕುರಿತು ಹೇಳುವರು :—

ಆಯ್ಯಾ! ಶೌನಕಾದಿಮಹಾಮುನಿಗಳಿರಾ! ಪೂರ್ವೋಕ್ತರೀತಿಯಾಗಿ ಭರತನು ಅಯೋಧ್ಯೆಗೆ ತೆರಳಿದಬಳಿಕ, ಸತ್ಯಸಂಧನೂ ದೃಢವ್ರತನೂ ಆದ ಶ್ರೀರಾಮನು, ಪುನಃ ಮುನಿಗಳೊಡನೆ ಭರದ್ವಾಜರ ಆಶ್ರಮಕ್ಕೆ ಹೋದನು ॥೧॥

ಆ ಕಾಕುತ್ಸ್ಥನು, ಅಲ್ಲಿಯೇ ಸುಖವಾಗಿ ಹದಿನಯ್ದುದಿವಸವಿದ್ದು, ಬಳಿಕ ಭರದ್ವಾಜರೊಡನೆಯೂ ತನ್ನ ಪರಿವಾರದೊಡನೆಯೂ ಕಾಶಿಗೆ ಹೋದವನಾದನು ॥೨॥

ಕಾಶಿಯೆಂಬುದು ಸಾಮಾನ್ಯವಲ್ಲ. ಅದು-ಆ ವಿಶ್ವೇಶ್ವರನ ರಾಜಧಾನಿಯು; ಸಾಕ್ಷಾತ್ ಭೂಕೈಲಾಸಭವನವು. ಎಲ್ಲರೂ ಮುಕ್ತಿಯಲ್ಲಿ ಅಪೇಕ್ಷೆಯಿಂದ ಈ ಕಾಶಿಯನ್ನು ವಾಸಕ್ಕೋಸ್ಕರ ಅಪೇಕ್ಷಿಸುವರು ॥೩॥

ಆ ಕಾಶಿಯಲ್ಲಿ, ಸಮಸ್ತರೂ, ಪ್ರಿಯನಾದ ಅತಿಥಿಯಂತೆ ಮೃತ್ಯುವನ್ನು ನಿರೀಕ್ಷಿಸುವರು. ಏಕೆಂದರೆ,—ಅಲ್ಲಿ ದೇಹತ್ಯಾಗಮಾತ್ರದಿಂದಲೇ ಮೋಕ್ಷವು ಹಸ್ತಗತವಾಗುವುದು ॥೪॥

ಅಲ್ಲಿ, ದೇಹಕ್ಕೆ ಸ್ವಲ್ಪವೂ ಕ್ಲೇಶವಿಲ್ಲದೆಯೇ-ಸುಖದಿಂದಲೇ ಸುಖವು ಲಭಿಸುತ್ತದೆ. ಮಿಕ್ಕ ಸ ಳಗಳಲ್ಲೆಲ್ಲ, ಶರೀರಕ್ಲೇಶದಿಂದ ಸುಖವು ಲಭ್ಯವಲ್ಲದೆ, ಸುಖದಿಂದ ಸುಖವು ಲಭ್ಯವಲ್ಲ ॥೫॥

ಅಲ್ಲಿ ದೇಹವನ್ನು ಬಿಟ್ಟವರು, ಪುನಃ ದೇಹವನ್ನು ಹೊಂದುವುದಿಲ್ಲ. ಅನೇಕ ಜನ್ಮಗಳಲ್ಲಿ

ಬಹುಜನ್ಮತಪೋಲಭ್ಯಾ ಯಾ ಪುರೀ ಸರ್ವಸಾಧನೈಃ ॥೬॥
ನರೈರ್ನಿರಸ್ತಪಾಪೌಘೈಃ ಲಭ್ಯತೇ ಕಾಶಿಕಾಪುರೀ ।
ವಿಷ್ಣೋಃ ಶಿವಸ್ಯ ವಾ ಕ್ಷೇತ್ರಂ ನ ಸಮಂ ಕಾಶಿಕಾಪುರಾ ॥೭॥
ತಾಂ ಪುರೀಂ ರಾಘವೋ ಗತ್ವಾ ಸೀತಯಾ ಲಕ್ಷ್ಮಣೇನ ಚ ।
ಗಿರಿಜಾಸಹಿತಃ ಶಮ್ಭುಃ ಪ್ರಮಥೈರ್ಯತ್ರ ತಿಷ್ಠತಿ ॥೮॥
ಸ್ನಾತ್ವಾ ಗಙ್ಗಾನದೀತೀರ್ಥೇ ಸ್ವಪಾದಾಬ್ಜಸಮುದ್ಭವೇ ।
ಜಜಾಪ ಪರಮಂ ಮನ್ತ್ರಂ ಲೋಕಶಿಕ್ಷಣಕಾಙ್ಕ್ಷಯಾ ॥೯॥
ಋಷಯೋ ಮುನಯಃ ಸರ್ವೇ ಶತಶೋ ದ್ವಿಜಸತ್ತಮಾಃ ।
ರಾಮಂ ದೃಷ್ಟ್ವಮನುಪ್ರಾಪ್ತಾಃ ಬ್ರಹ್ಮರ್ಷಿಮುನಿಪುಙ್ಗವಾಃ ॥೧೦॥
ಕಾಶೀಪುರೇ ಸ್ಥಿತಾಸ್ತತ್ರ ಸೀತಾದರ್ಶನಲಾಲಸಾಃ ।
ಸರ್ವೇ ನರಾಶ್ಚ ನಾರ್ಯಶ್ಚ ರಾಮಾಶ್ರಮಮುಪಾಯಯುಃ ॥೧೧॥
ದೃಷ್ಟ್ವಾ ಸೀತಾಂ ವಿಶಾಲಾಕ್ಷೀಂ ರಾಮಂ ರಾಜೀವಲೋಚನಮ್ ।
ಪೀನವಕ್ಷಸ್ಸ್ಥಲಂ ರಾಮಂ ಪೀನೋನ್ನತಭುಜಂ ಭುವಿ ॥೧೨॥
ಸುನ್ದರಾಸ್ಯಂ ಸ್ಮಿತಮುಖಂ ಪೂರ್ಣಚನ್ದ್ರನಿಭಾನನಾಮ್ ।
ಅಜಾನುಬಾಹುಂ ಶ್ರೀಮನ್ತಂ ಶ್ರೀಮತೀಂ ಕನಕಪ್ರಭಾಮ್ ॥೧೩॥

ಸಕಲ ಸಾಧನಗಳಿಂದಲೂ ತಪಸ್ಸುಮಾಡಿದರೆ, ಆ ಕಾಶೀಪಟ್ಟಣವು ಲಭ್ಯವಾಗುವುದು ॥೬॥

ಸಮಸ್ತ ಪಾಪಸಮೂಹವನ್ನೂ ಕಳೆದುಕೊಂಡಿರುವ ಮನುಷ್ಯರಿಂದಮಾತ್ರವೇ ಕಾಶೀ ಪಟ್ಟಣವು ಲಭಿಸಲ್ಪಡುವುದು. ಈ ಕಾಶಿಗೆ ಸಮಾನವಾದ ವಿಷ್ಣುಕ್ಷೇತ್ರವಾಗಲಿ–ಶಿವಕ್ಷೇತ್ರವಾಗಲಿ–ಮತ್ತೊಂದಿಲ್ಲ ॥೭॥

ಯಾವ ಕಾಶೀಪಟ್ಟಣದಲ್ಲಿ ಪಾರ್ವತೀಸಹಿತನಾದ ಪರಮೇಶ್ವರನು ಪ್ರಮಥಗಣಗಳೊಡನೆ ವಾಸಮಾಡಿಕೊಂಡಿರುವನೋ, ಅಂತಹ ಕಾಶಿಕಾಪುರಿಯನ್ನು-ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಹೊಂದಿ, ಶ್ರೀರಾಮನು, ಜನರಿಗೆ ಮೇಲುಪಂಕ್ತಿಯನ್ನು ಹಾಕುವುದಕ್ಕೋಸ್ಕರ, ತನ್ನ ಪಾದಕಮಲದಲ್ಲಿ ಉತ್ಪನ್ನವಾದ ಗಂಗಾನದಿಯ ತೀರ್ಥದಲ್ಲಿ ಸ್ನಾನಮಾಡಿ, ದಿವ್ಯವಾದ ಜಪವನ್ನು ಜಪಿಸಿದನು ॥೮-೯॥

ಆಗ ಅಲ್ಲಿ, ಋಷಿಗಳೂ ಮುನಿಗಳೂ ಬ್ರಾಹ್ಮಣೋತ್ತಮರೂ ಬ್ರಹ್ಮರ್ಷಿಶ್ರೇಷ್ಠರೂ ಕೂಡ, ರಾಮನನ್ನು ನೋಡಬೇಕೆಂದು ಬರುತಿದ್ದರು ॥೧೦॥

ಆ ಕಾಶೀಪಟ್ಟಣದಲ್ಲಿದ್ದ ಸಮಸ್ತ ಸ್ತ್ರೀಪುರುಷರೂ, ರಾಮದರ್ಶನದಲ್ಲಿ ಆಸಕ್ತರಾಗಿ, ರಾಮನ ಆಶ್ರಮಕ್ಕೆ ಬರುತಿದ್ದರು ॥೧೧॥

ಸೀತೆಯೂ ರಾಮನೂ ಪರಸ್ಪರ ಅನುಗುಣರಾಗಿದ್ದರು. ಸೀತೆಯು ವಿಶಾಲನೇತ್ರಿಯಾಗಿದ್ದಳು; ರಾಮನು ಕಮಲದಳನಯನನಾಗಿದ್ದನು. ಸೀತೆಯು, ಸ್ಥೂಲವಾಗಿಯೂ ಉನ್ನತವಾಗಿಯೂ ಇರುವ ಸ್ತನವುಳ್ಳವಳಾಗಿದ್ದಳು; ರಾಮನು, ಉಬ್ಬಿದ ಎದೆಯುಳ್ಳವನಾಗಿದ್ದನು. ಸೀತೆಯು, ಮಹಾಕಾಂತಿಸಂಪನ್ನೆಯಾಗಿಯೂ ಸುವರ್ಣಪ್ರಭೆಯುಳ್ಳವಳಾಗಿಯೂ ಇದ್ದಳು;

ಅಹೋ ರೂಪಮಹೋ ಧೈರ್ಯಂ ಅಯೋ ಗಾಮ್ಭೀರ್ಯಮೇವ ಚ ।
ಅನಯೋರೂಪಲಾವಣ್ಯಂ ಅನಯೋರೇವ ಸಮ್ಮತಮ್ ॥೧೪॥
ಇತ್ಯಾಶ್ಚರ್ಯರಸಾಃ ಸರ್ವೇ ದದೃಶುರ್ದಮ್ಪತೀ ಉಭೌ ।
ಆಶ್ಚರ್ಯಾನನ್ದಸಮ್ಪೂರ್ತಾಃ ಸೀತಾಂ ರಾಮಂ ಚ ಲಕ್ಷ್ಮಣಮ್ ॥೧೫॥
ಏವಂ ಕಾಶೀಪುರವಾಸ್ಯೈಃ ಪೂಜಿತಾನ್ಯವಸನ್ ಸುಖಮ್ ।
ಭರದ್ವಾಜೇನ ಸಹಿತಾಃ ಕಥಾಃ ಶ್ರುತ್ವಾ ಮುದಾನ್ವಿತಾಃ ॥೧೬॥

ಋಷಯಊಚುಃ.

ಭೂಮೌ ಕ್ಷೇತ್ರಾಣ್ಯನೇಕಾನಿ ಸನ್ತಿ ಸೂತ ಸಹಸ್ರಶಃ ।
ಕಾಶೀ ತೇಭ್ಯೋಽಪಿ ಸರ್ವೇಭ್ಯಃ ಕಿಮರ್ಥಮಧಿಕಾಭವತ್ ॥೧೭॥
ಕೇನ ಮನ್ತ್ರಪ್ರಭಾವೇಣ ಮೃತ್ಯುಕಾಲೇ ಸಮಾಗತೇ ।
ಉಪದೇಶಂ ಚ ಸಮ್ಪ್ರಾಪ್ಯ ಮುಚ್ಯನ್ತೇ ತತ್ರ ಜನ್ತವಃ ॥೧೮॥

ಶ್ರೀ ಸೂತ ಉವಾಚ.

ಸಾಧು ಪೃಷ್ಟಂ ಮಹಾಭಾಗಾಃ ಪ್ರಶ್ನೋಽಯಂ ಪಾಪನಾಶನಃ ।
ಅನನ್ದವನಮಾಹಾತ್ಮ್ಯಂ ಸುಗೋಪ್ಯಂ ದುರ್ಲಭಂ ನೃಣಾಮ್ ॥೧೯॥

ರಾಮನು, ಮಹಾಕಾಂತಿವಿರಾಜಿತನಾಗಿಯೂ ಆಜಾನುಬಾಹುವಾಗಿಯೂ ಇದ್ದನು. ಹೀಗೆ ಒಬ್ಬರಿಗೊಬ್ಬರು ಅನುರೂಪರಾಗಿ ವಿರಾಜಿಸುತ್ತಿರುವ ಆ ಸೀತಾರಾಮರನ್ನು ನೋಡಿ 'ಅಹಹ! ಎಂತಹ ರೂಪವು!! ಅಹ! ಎಂತಹ ಧೈರ್ಯವು!! ಎಂತಹ ಗಾಂಭೀರ್ಯವು!!! ಇವರ ರೂಪಲಾವಣ್ಯವು ಇವರಿಬ್ಬರಿಗೆ ಮಾತ್ರವೇ ಅನುರೂಪವಾಗಿರುವುದು!' ಎಂದು ಹೇಳುತ, ಆಶ್ಚರ್ಯದಿಂದಲೂ ಆನಂದದಿಂದಲೂ ಪರಿಪೂರ್ಣರಾಗಿರುವ ಆ ಕಾಶೀಪಟ್ಟಣವಾಸಿಗಳು, ದಂಪತಿಗಳಾದ ಸೀತಾರಾಮರನ್ನೂ ಲಕ್ಷ್ಮಣನನ್ನೂ ನೋಡುತಿದ್ದರು ॥೧೩-೧೫॥

ಹೀಗೆ ಕಾಶೀಪುರನಿವಾಸಿಗಳಿಂದ ಪೂಜಿಸಲ್ಪಟ್ಟವರಾಗಿ, ಅಲ್ಲಿನ ಕಥೆಗಳನ್ನು ಕೇಳಿ ಹರ್ಷಪಡುತ, ಆ ರಾಮಾದಿಗಳು, ಭರದ್ವಾಜರೊಡನೆ ಅಲ್ಲಿ ಸುಖವಾಗಿ ವಾಸಮಾಡಿಕೊಂಡಿದ್ದರು॥೧೬॥

ಹೀಗೆಂದು ಹೇಳುತಿರುವ ಸೂತರನ್ನು ಶೌನಕಾದಿಗಳು ಪ್ರಶ್ನೆಮಾಡುವರು:—

ಎಲೈ ಸೂತಪೌರಾಣಿಕರೆ! ಭೂಮಿಯಲ್ಲಿ ಸಾವಿರಗಟ್ಟಲೆಯಾಗಿ ಅನೇಕ ಕ್ಷೇತ್ರಗಳಿರುವುವು. ಅವುಗಳಲ್ಲೆಲ್ಲ ಕಾಶಿಯು ಇಷ್ಟು ಶ್ರೇಷ್ಠವೆನ್ನಿಸಿಕೊಳ್ಳುವುದಕ್ಕೆ ಕಾರಣವೇನು? ॥೧೭॥

'ಅಲ್ಲಿ ಮೃತ್ಯುಕಾಲಬರಲಾಗಿ ಉಪದೇಶವನ್ನು ಪಡೆದು ಪ್ರಾಣಿಗಳು ಮುಕ್ತಿಹೊಂದುವುವು' ಎಂದು ಹೇಳಿದಿರಲ್ಲ! ಅದು ಯಾವ ಮಂತ್ರಮಹಿಮೆಯಿಂದ? ॥೧೮॥

ಶ್ರೀ ಸೂತಮುನಿಗಳು ಉತ್ತರ ಹೇಳುವರು:—

ಎಲೈ ಮಹಾನುಭಾವರಾ! ನೀವು ಚೆನ್ನಾಗಿ ಪ್ರಶ್ನೆಮಾಡಿದಿರಿ; ಈ ಪ್ರಶ್ನೆಯು ಲೋಕಗಳನ್ನೆಲ್ಲ ಪರಿಶುದ್ಧಿಗೊಳಿಸುವುದು. ಆನಂದವನ(ಕಾಶಿ)ದ ಮಹಿಮೆಯು ಕೇವಲ ಗೋಪ್ಯವಾದುದು; ಇದು ಮನುಜರಿಗೆ ಸಾಮಾನ್ಯವಾಗಿ ಸುಲಭವಲ್ಲ ॥೧೯॥

ಅಗಸ್ತ್ಯೇನ ಪುರಾ ಪ್ರೋಕ್ತಂ ಸುತೀಕ್ಷ್ಣಾಯ ಯದಾದರಾತ್ ।
ಉಕ್ತಂ ಚ ರಾಮತಾಪಿನ್ಯಾಂ ತದ್ವಚ್ಮಿ ಶೃಣುತರ್ಷಯಃ ॥೦೦॥

ಅಗಸ್ತ್ಯಉವಾಚ.

ಅಸ್ತಿ ವಾರಾಣಸೀ ನಾನು ಪುರೀ ಶಿವಮನೋಹರಾ ।
ಸರ್ವದಾಪೀಶ್ವರಸ್ತತ್ರ ಪಾರ್ವತ್ಯಾ ಸಹ ತಿಷ್ಠತಿ ॥೦೧॥

ತಸ್ಯಾಪ್ಯುಪಾಸಕಾಃ ಸರ್ವೇ·ಭಕ್ತ್ಯಾ ಯಾಂ ಪ್ರತಿಪೇದಿರೇ ।
ಮುಮುಕ್ಷವಃ ಪರಿತ್ಯಜ್ಯ ಸರ್ವಂ ತತ್ರೈವ ಸಂಸ್ಥಿತಾಃ ॥೦೨॥

ಸದಾ ಶಿವಶಿವೇತ್ಯೇವಂ ವದನ್ತಃ ಶಿವತತ್ಪರಾಃ ।
ಶಿವಾರ್ಪಿತಮನಃಕಾಯವಾಚಃ ಶಿವಪರಾಯಣಾಃ ॥೦೩॥

ಶಿವೋಪಿ ತಾ೯ ಮುಹುಃ ಪಶ್ಯ೯ ಅಸೀಚ್ಚಿನ್ತಾ ಸಮಾಕುಲಃ ।
ಕಥಮೇಭ್ಯಃ ಪ್ರದಾಸ್ಯಾಮಿ ಮುಕ್ತಿಮಿತ್ಯತಿದುಃಖಿತಃ ।
ತತ್ರೈವಾಸ್ತೇ ಗಣೈಃ ಸಾರ್ಧಂ ಋಷಿಭಿಶ್ಚ ಮಹಾವ್ರತೈಃ ॥೦೪॥

ಏವಂ ಚ ಸತಿ ಭೂಲೋಕಂ ಅಜಗಾಮ ಚತುರ್ಮುಖಃ ।
ತಮೀಶ್ವರೋ ನಿರೀಕ್ಷ್ಯೈವ ಸಮ್ಭ್ರಮೇಣಾಕರೋತ್ ಪ್ರಿಯಮ್ ॥೦೫॥

ಈ ವಿಷಯದಲ್ಲಿ ಹಿಂದೆ ಅಗಸ್ತ್ಯರಿಂದ ಸುತೀಕ್ಷ್ಣಮುನಿಗೆ ಆದರಪೂರಸ್ಸರವಾಗಿ ಏನು ಹೇಳಲ್ಪಟ್ಟಿರುವುದೋ, ಅದನ್ನೇ ಈಗ ನಾನು ನಿಮಗೆ ಹೇಳುವೆನು, ಕೇಳಿರಿ ॥೨೦॥

ಅಗಸ್ತ್ಯರು ಹೇಳಿದುದೇನೆಂದರೆ :—

ಪರಮೇಶ್ವರನಿಗೆ ಮನೋಹರವಾದ ವಾರಾಣಸಿಯೆಂಬ ಪಟ್ಟಣವೊಂದಿರುವುದು. ಅಲ್ಲಿ, ಪರಮೇಶ್ವರನು ಸರ್ವದಾ ಪಾರ್ವತಿಯೊಡನೆ ವಾಸಮಾಡಿಕೊಂಡಿರುವನು ॥೨೧॥

ಆ ಪರಮೇಶ್ವರನ ಸಮಸ್ತರಾದ ಉಪಾಸಕರೂ ಕೂಡ, ಭಕ್ತಿಯಿಂದ ಆ ಕಾಶೀಪಟ್ಟಣವನ್ನು ಸೇವಿಸುತಿದ್ದರು. ಮೋಕ್ಷದಲ್ಲಿಚ್ಛೆಯುಳ್ಳವರನೇಕರು, ಎಲ್ಲವನ್ನೂ ಬಿಟ್ಟುಬಿಟ್ಟು, ಸರ್ವದಾ 'ಶಿವ ಶಿವ' ಎಂದು ಸ್ಮರಣೆಮಾಡುತ, ಶಿವಭಕ್ತತತ್ಪರರಾಗಿ, ಶಿವನಲ್ಲಿ ತಮ್ಮ ಮನೋವಾಕ್ಕಾಯಕರ್ಮಗಳನ್ನು ಸಮರ್ಪಿಸಿದವರಾಗಿ, ನಿರಂತರವೂ ಶಿವಪರಾಯಣರಾಗಿ ವಾಸಮಾಡಿಕೊಂಡಿದ್ದರು ॥೨೨-೨೩॥

ಪರಮೇಶ್ವರನೂ ಕೂಡ, ಇವರುಗಳನ್ನು ಪದೇಪದೇ ನೋಡುತ 'ಇವರೆಲ್ಲರಿಗೂ ನಾನು ಹೇಗೆ ಮುಕ್ತಿಯನ್ನು ಕೊಡಲಿ!' ಎಂದು ಚಿಂತೆಯಿಂದ ವ್ಯಾಕುಲನಾದನು. ಹೀಗೆ ಮಹಾದುಃಖಸಮನ್ವಿತನಾಗಿ, ಪ್ರಮಥಗಣಗಳೊಡನೆಯೂ ಮಹಾವ್ರತಶತ್ವರರಾದ ಮುನಿಗಳೊಡನೆಯೂ ಅಲ್ಲಿಯೇ ವಾಸಮಾಡಿಕೊಂಡಿದ್ದನು ॥೨೪॥

ಹೀಗಿರುವಾಗ, ಒಂದು ಸಮಯದಲ್ಲಿ ಚತುರ್ಮುಖನು ಭೂಲೋಕಕ್ಕೆ ಬಂದನು. ಅವನನ್ನು ನೋಡಿದೊಡನೆಯೇ ಈಶ್ವರನು ಸಂಭ್ರಮದಿಂದ ಸಂತೋಷಪಟ್ಟನು; ಅವನನ್ನು

ಬಹು ಸಮ್ಭಾವಯಾಮಾಸ ಯದ್ಧಿತಂ ತನ್ನ್ಯವೇದಯತ್ ।
ತತಃ ಸ ಪ್ರಾಹ ಭಗವಾ೯ ಈಶ್ವರಸ್ತಂ ಚತುರ್ಮುಖಮ್ ॥೬೬॥
ಕುಶಲಂ ನನು ತೇ ಬ್ರಹ್ಮ೯ ಜೀರಾಯು ತ್ವಮಿಹಾಗತಃ ।
ಶ್ರೀಮದಾಗಮನೇನಾಹಂ ಲೋಕಪೂಜ್ಯೋಽಸ್ಮಿ ಸಾಮ್ಪ್ರತಮ್ ॥೬೭॥
ಸಮಾರಾಧ್ಯೇಹ ಮಾಂ ಮುಕ್ತಿಂ ಪ್ರಾರ್ಥಯನ್ತೇ ಮುಮುಕ್ಷವಃ ।
ಕೇನೋಪಾಯೇನ ತೇಷಾಂ ತತ್ ಫಲಂ ದಾಸ್ಯಾಮಿ ತದ್ವದ ॥೬೮॥
ಈಶ್ವರೇಣೈವಮುಕ್ತಃ ಸ೯ ಬಭಾಷೇ ದ್ರುಹಿಣೋ ವಚಃ ।
ಅಸ್ತ್ಯುಪಾಯೋ ಗೋಪನೀಯಃ ಪ್ರಾದಾದ್ಯಂ ಮೇ ರಘೂತ್ತಮಃ ।
ತಪಃ ಕೃತ್ವಾ ಜೀರಾಯಾಹಂ ತಂ ಪರಂ ಲಬ್ಧವಾ೯ ಮನುಮ್ ॥೬೯॥
ತತೋನ್ಯೋ ಮದಭಿಜ್ಞಾತೋ ನಾಸ್ತ್ಯುಪಾಯೋ ಮಹೇಶ್ವರ ।
ಮುಹ್ಯಮನ್ವಗ್ರಹೀದ್ರಾಮೋ ನ ಸನ್ದೇಹೋಸ್ತಿ ತತ್ರ ವೈ ॥೭೦॥
ಅಥ ಕಿಂ ಮೇ ವದಸ್ವೇದಂ ತ್ವಂ ಮಾಂ ಯದ್ಯನುಕಮ್ಪಸೇ ।
ಇತಿ ತೇನೋದಿತೋ ದಧ್ಯೌ ಕ್ವ ಕದಾ ಯುಕ್ತಮಿತ್ಯಪಿ ॥೭೧॥

ಬಹಳವಾಗಿ ಸಂಭಾವಿಸಿದನು; ಆಗ ಯಾವುದು ಹಿತವಾದುದೆಂದು ತಿಳಿಯಿಸಿದನು. ಬಳಿಕ, ಆ ಭಗವಂತನಾದ ಪರಮೇಶ್ವರನು, ಚತುರ್ಮುಖನನ್ನು ಕುರಿತು ಹೀಗೆ ಹೇಳಿದನು ॥೬೫-೬೬॥

ಎಲೈ ಬ್ರಹ್ಮನೆ! ನಿನಗೆ ಕುಶಲವೆ? ನೀನು ಬಹು ದಿವಸಕ್ಕೆ ಇಲ್ಲಿಗೆ ಬಂದೆ. ನೀನು ನಾನಿರುವ ಸ್ಥಳಕ್ಕೆ ಬಂದೆಯಾದಕಾರಣ, ಈಗ ನಾನು ಲೋಕದಲ್ಲೆಲ್ಲ ಪೂಜ್ಯನಾದೆನು ॥೬೭॥

ಇಲ್ಲಿ ಅನೇಕರಾದ ಮುಮುಕ್ಷುಗಳು, ನನ್ನನ್ನು ಆರಾಧಿಸಿ, ಮುಕ್ತಿಯನ್ನು ಪ್ರಾರ್ಥಿಸುತ್ತಿರುವರು. ಅವರಿಗೆ ಆ ಫಲವನ್ನು ನಾನು ಯಾವ ಉಪಾಯದಿಂದ ಕೊಡಲಿ? ಅದನ್ನು ಹೇಳುವನಾಗು ॥೬೮॥

ಹೀಗೆಂದು ಪರಮೇಶ್ವರನಿಂದ ಹೇಳಲ್ಪಟ್ಟವನಾಗಿ, ಆ ಬ್ರಹ್ಮನು, ಈಶ್ವರನನ್ನು ಕುರಿತು 'ಹೇ ಪರಮೇಶ್ವರ! ಈ ವಿಷಯದಲ್ಲಿ, ಗೋಪ್ಯವಾದ ಒಂದುಪಾಯವಿರುವುದು. ಇದನ್ನು ನನಗೆ ಶ್ರೀರಾಮನು ಸಾಕ್ಷಾತ್ತಾಗಿ ಅನುಗ್ರಹಿಸಿಕೊಟ್ಟಿರುವನು. ನಾನು ಬಹಳ ದಿವಸ ತಪಸ್ಸುಮಾಡಿ, ಅವೃತ್ತಮವಾದ ಮಂತ್ರವನ್ನು ಪಡೆದಿರುವೆನು. ಅಯ್ಯಾ! ಪರಮೇಶ್ವರ! ಅದನ್ನು ಬಿಟ್ಟು ಮತ್ತಾವುದೊಂದುಪಾಯವನ್ನೂ ನಾನರಿಯೆನು. ಅದನ್ನು, ಶ್ರೀರಾಮನೇ ನನಗೆ ಅನುಗ್ರಹಿಸಿಕೊಟ್ಟಿರುವನು. ಅದರಲ್ಲಿ ಸ್ವಲ್ಪವೂ ಸಂಶಯವಿಲ್ಲ' ಎಂದು ಹೇಳಿದನು॥೬೯-೭೦॥

ಅನಂತರ 'ಅಯ್ಯಾ! ಬ್ರಹ್ಮ! ನಿನಗೆ ನನ್ನಲ್ಲಿ ದಯೆಯಿರುವುದಾದರೆ, ನೀನು ಹೇಳಿದ ಉಪಾಯವಾವುದೆಂಬುದನ್ನು ಹೇಳುವನಾಗು' ಎಂದು ಶ್ರೀಪರಮೇಶ್ವರನಿಂದ ಪ್ರಾರ್ಥಿಸಲ್ಪಟ್ಟ ಚತುರ್ಮುಖಬ್ರಹ್ಮನು, ಆಗ 'ಇವನಿಗೆ ಯಾವಾಗ ಎಲ್ಲಿ ಹೇಳುವುದು ಯುಕ್ತವಾಗುವುದು?' ಎಂಬುದಾಗಿ ಮನಸ್ಸಿನಲ್ಲಿ ಯೋಚಿಸಿದನು ॥೭೧॥

ರಾಮಮನ್ತ್ರಂ ವಿನಾ ನೈವ ಮೋಕ್ಷೋ ಭವತಿ ದೇಹಿನಾಮ್ ।
ಇತಿ ನಿಶ್ಚಿತವಾ೯ ಬ್ರಹ್ಮಾ ಭೂತೇಶೇನಾಭಿಚೋದಿತಃ ॥೩೦॥
ಪುಣ್ಯಪ್ರತೀರೇ ಗಙ್ಗಾಯಾಃ ಸ ತತಃ ಸೂರ್ಯಪರ್ವಣಿ ।
ತಸ್ಮೈ ಮನ್ತ್ರವರಂ ಪ್ರಾದಾತ್ ಮನ್ತ್ರರಾಜಂ ಷಡಕ್ಷರಮ್ ॥೩೧॥
ನಿಯತಃ ಸೋಪಿ ತತ್ರೈವ ಜಜಾಪ ವೃಷಭಧ್ವಜಃ ।
ಮನ್ವಸ್ತರಶತಂ ಭಕ್ತ್ಯಾ ಧ್ಯಾನಹೋಮಾರ್ಚನಾದಿಭಿಃ ॥೩೪॥
ತತಃ ಪ್ರಸನ್ನೋ ಭಗವಾ೯ ರಾಮಃ ಪ್ರಾಹ ತ್ರಿಲೋಚನಮ್ ।
ವೃಣೀಷ್ವ ಯದಭೀಷ್ಟಂ ತೇ ದೇವಾನಾಮಪಿ ದುರ್ಲಭಮ್ ।
ತದೇವ ತವ ದಾಸ್ಯಾಮಿ ಮಾ ಚಿರಂ ವೃಷಭಧ್ವಜ ॥೩೫॥
ತತಸ್ತು ಸೋಬ್ರವೀದ್ವಿಷ್ಣುಂ ಈಶ್ವರಃ ಪರಯಾ ಮುದಾ ।
ದರ್ಶನೇನೈವ ತೇ ಧನ್ಯಃ ಕೃತಾರ್ಥೋ ನ ಮಮೇಪ್ಸಿತಮ್ ॥೩೬॥
ಏತೇ ಮದೀಯಾಃ ಸರ್ವೇಪಿ ಮಾಂ ಪರಂ ಪರ್ಯುಪಾಸತೇ ।
ಮುಕ್ತ್ಯರ್ಥಂ ತತ್ ಕುರುಷ್ವೇವ್ಯಂ ತದೇವಾತ್ರ ಪರಂ ವರಮ್ ।
ನಾತಃ ಪರತರಂ ಕಿಞ್ಚಿತ್ ಪ್ರಾರ್ಥಿತಂ ಮಮ ವಿದ್ಯತೇ ॥೩೭॥

ಆ ಬಳಿಕ, ಪೂರ್ವೋಕ್ತರೀತಿಯಾಗಿ ಪರಮೇಶ್ವರನಿಂದ ಪ್ರೇರಿತನಾದ ಬ್ರಹ್ಮನು 'ರಾಮ ಮಂತ್ರವನ್ನು ಉಪದೇಶಿಸದಿದ್ದರೆ ಪ್ರಾಣಿಗಳಿಗೆ ಮುಕ್ತಿಯಾಗುವುದೇ ಇಲ್ಲ' ಎಂದು ನಿಶ್ಚಯಿಸಿಕೊಂಡನು ॥೩೨॥

ಆಮೇಲೆ, ಪುಣ್ಯವಾದ ಗಂಗಾತೀರದಲ್ಲಿ, ಸೂರ್ಯೋಪರಾಗಪರ್ವಕಾಲದಲ್ಲಿ, ಮಂತ್ರರಾಜವೆಂದು ಪ್ರಸಿದ್ಧವಾದ ಷಡಕ್ಷರಮಂತ್ರವನ್ನು ಆ ಪರಮೇಶ್ವರನಿಗುಪದೇಶಿಸಿದನು ॥೩೩॥

ಆ ವೃಷಭಧ್ವಜನೂ ಕೂಡ, ಒಂದುನೂರು ಮನ್ವಂತರಕಾಲಪರ್ಯಂತವಾಗಿ, ನಿಯಮದಿಂದ ಧ್ಯಾನ ಹೋಮ ಪೂಜೆ ಮುಂತಾದುವುಗಳನ್ನು ಮಾಡುತ ಆ ಷಡಕ್ಷರ ಮಂತ್ರವನ್ನು ಜಪಿಸಿದನು ॥೩೪॥

ಅನಂತರ, ಭಗವಂತನಾದ ರಾಮನು ಪ್ರಸನ್ನನಾಗಿ 'ಹೇ ವೃಷಭಧ್ವಜ! ನಿನಗೆ ಯಾವುದಿಷ್ಟವೋ, ಅದನ್ನು ವರಿಸು. ಅದು ದೇವತೆಗಳಿಗೆಲ್ಲ ದುರ್ಲಭವಾಗಿದ್ದರೂ, ಅದನ್ನು ನಿನಗೆ ಕೊಟ್ಟೇಕೊಡುವೆನು. ವಿಲಂಬಮಾಡಬೇಡ' ಎಂಬುದಾಗಿ ಶ್ರೀಪರಮೇಶ್ವರನಿಗೆ ಹೇಳಿದನು ॥೩೫॥

ಆಗ ಪರಮೇಶ್ವರನು ಮಹಾಹರ್ಷಸಮನ್ವಿತನಾಗಿ 'ಸ್ವಾಮಿ! ನಾನು ನಿನ್ನ ದರ್ಶನದಿಂದಲೇ ಧನ್ಯನಾದೆನು; ಈಗ ನಾನು ಕೃತಕೃತ್ಯನಾದೆನು; ನನಗೆ ಯಾವುದೊಂದು ಇಷ್ಟಾರ್ಥವೂ ಇಲ್ಲ. ಆದರೆ, ನನ್ನ ಭಕ್ತರೆಲ್ಲರೂ, ನನ್ನನ್ನೇ ಸರ್ವಶ್ರೇಷ್ಠನೆಂದು ತಿಳಿದು, ಮುಕ್ತ್ಯರ್ಥವಾಗಿ ನಿನ್ನ ಉಪಾಸನೆಮಾಡುತಿರುವರು. ಇವರ ಇಷ್ಟಾರ್ಥವನ್ನು ನೀನು ನೆರವೇರಿಸುವನಾಗು. ಈಗ ನನಗೆ ಅದೇ ಉತ್ತಮವಾದ ವರವು. ಇದಕ್ಕಿಂತ ಹೆಚ್ಚಾಗಿ ನನ್ನ ಅಭೀಪ್ಸಿತವಾವುದೂ ಇಲ್ಲ' ಎಂಬುದಾಗಿ, ಆ ಶ್ರೀರಾಮರೂಪನಾದ ಮಹಾವಿಷ್ಣುವನ್ನು ಕುರಿತು ವಿಜ್ಞಾಪಿಸಿದನು ॥೩೬-೩೭॥

ಏವಂ ವದತಿ ತತ್ರೈವ ತದಾನೀಂ ತದುಪಾಸಕಾಃ ।
ಸರ್ವೇ ಜ್ಯೋತಿರ್ಮಯಾಃ ಸನ್ತೋ ವಿಷ್ಣವೇವ ಲಯಂಗತಾಃ ॥೩೪॥
ತತಃ ಪ್ರೋವಾಚ ರಾಮಸ್ತಂ ಪುನರಿಷ್ಟಂ ಯದಿ ಸ್ಥಿತಮ್ ।
ತದ್ಬ್ರೂಹೀಶ್ವರ ದಾಸ್ಯೇಹಂ ಪ್ರಾರ್ಥನಾದುರ್ಲಭಂ ಚ ಯತ್ ॥೩೫॥
ಇತ್ಯುಕ್ತಃ ಸ ಪುನರ್ವವ್ರೇ ಹಿತಕೃದ್ಭಕ್ತವತ್ಸಲಃ ।
ಸರ್ವಲೋಕೈಕಉಪಕಾರಾಯ ಸರ್ವೇಷಾಮಪಿ ದುರ್ಲಭಮ್ ॥೩೦॥
ಯೇ ಸ್ವತೋ ವಾನ್ಯತೋ ವಾಪಿ ಯತ್ರಕುತ್ರಾಪಿ ವಾ ಪ್ರಭೋ ।
ಪ್ರಾಣಾನ್ ಪರಿತ್ಯಜನ್ತ್ಯತ್ರ ಮುಕ್ತಿಸ್ತೇಷಾಂ ಫಲಂ ಭವೇತ್ ॥೩೧॥
ಗಙ್ಗಾಯಾಂ ವಾ ತಟೇ ವಾಪಿ ಯತ್ರಕ್ವಚನ ವಾ ಪುನಃ ।
ಮ್ರಿಯನ್ತೇ ಯೇ ಪ್ರಭೋ ದೇಹಿ ಮುಕ್ತಿಂ ನಾತೋ ವರಾನ್ತರಮ್ ॥೩೨॥

ಶ್ರೀರಾಮಉವಾಚ.

ಕ್ಷೇತ್ರೇಸ್ಮಿನ್ ದೇವದೇವೇಶ ಯತ್ರಕುತ್ರಾಪಿ ವಾ ಮೃತಾಃ ।
ಕೃಮಿಕೀಟಾದಯೋಪ್ಯೇಷು ಮುಕ್ತಾಃ ಸನ್ತು ನ ಚಾನ್ಯಥಾ ॥೩೩॥

ಹೀಗೆ ಆ ಪರಮೇಶ್ವರನು ವಿಜ್ಞಾಪಿಸುತ್ತಿರಲಾಗಿ, ಅವನನ್ನು ಉಪಾಸಿಸುತಿದ್ದವರೆಲ್ಲರೂ, ಅಗಲೇ ಅಲ್ಲಿಯೇ ತೇಜೋಮಯರಾದವರಾಗಿ, ಆ ಮಹಾವಿಷ್ಣುವಿನಲ್ಲಿಯೇ ಲೀನರಾದರು॥೩೪॥

ಆ ಬಳಿಕ, ಶ್ರೀರಾಮನು ' ಎಲೈ ಪರಮೇಶ್ವರನೆ! ನಿನಗೆ ಮುಕ್ತಾವ್ಯವಾದರೂ ಇಷ್ಟವಾಗಿದ್ದಪಕ್ಷದಲ್ಲಿ, ಅದನ್ನು ಕೇಳು ಪ್ರಾರ್ಥಿಸದವಾತ್ರದಿಂದಲೇ ಎಲ್ಲವೂ ಸುಲಭವಲ್ಲವಾಗಿದ್ದರೂ, ನೀನು ಪ್ರಾರ್ಥಿಸುವುದು ಎಂತಹ ದುರ್ಲಭವಾಗಿದ್ದರೂ, ಅದನ್ನು ನಿನಗೆ ಕೊಟ್ಟೇ ಕೊಡುವೆನು ' ಎಂದು ಹೇಳಿದನು ॥೩೫॥

ಈರೀತಿಯಾಗಿ ಶ್ರೀರಾಮನಿಂದ ಹೇಳಲ್ಪಟ್ಟ ಭಕ್ತವತ್ಸಲನಾದ ಆ ಪರಮೇಶ್ವರನು, ತನ್ನ ಭಕ್ತರಿಗೆ ಹಿತವನ್ನು ಬಯಸಿದವನಾಗಿ, ಸರ್ವಲೋಕೋಪಕಾರಕ್ಕೋಸ್ಕರ, ಸರ್ವರಿಗೂ ದುರ್ಲಭವಾಗಿರುವ ಈ ವರವನ್ನು ಪುನಃ ಕೇಳಿಕೊಂಡನು ॥೩೦॥

ಹೇ ಪ್ರಭೋ! ಯಾವ ಪ್ರಾಣಿಗಳು, ತಾವಾಗಿಯಾಗಲಿ-ಪರರ ನಿರ್ಬಂಧಾದಿಗಳಿಂದಾಗಲಿ-ಈ ಕಾಶೀಕ್ಷೇತ್ರದಲ್ಲಿ ಯಾವಕಡೆಯಾದರೂ ಪ್ರಾಣವನ್ನು ಬಿಡುವರೋ, ಅವರಿಗೆ ಮುಕ್ತಿಯು ಫಲಿಸುವಂತೆ ಅನುಗ್ರಹಿಸಬೇಕು ॥೩೧॥

ಹೇ ಸ್ವಾಮಿ! ಗಂಗೆಯು ಒಳಗಾಗಲಿ-ತೀರದಲ್ಲಾಗಲಿ-ಅಥವಾ ಮತ್ತೆಲ್ಲಿಯೇ ಆಗಲಿ-ಯಾವ ಪ್ರಾಣಿಗಳು ಈ ಕಾಶಿಯಲ್ಲಿ ಮರಣಹೊಂದುವರೋ, ಅವರಿಗೆ ನೀನು ಮುಕ್ತಿಯನ್ನು ದಯೆಪಾಲಿಸುವನಾಗು. ನಾನು ಮತ್ತಾವ ವರವನ್ನೂ ಬೇಡುವುದಿಲ್ಲ ॥೩೨॥

ಇದನ್ನು ಕೇಳಿ, ಶ್ರೀರಾಮನು ಹೇಳುವನು :—

ಎಲೈ ದೇವದೇವೇಶ್ವರನೆ! ಈ ಕ್ಷೇತ್ರದೊಳಗೆ ಎಲ್ಲಿಯಾದರೂ ಮರಣಹೊಂದಿದ ಕೃಮಿ ಕೀಟಾದಿಗಳೂ ಕೂಡ, ಆಕ್ಷಣವೇ ಮುಕ್ತಿಹೊಂದಲಿ; ಇದು ಅನ್ಯಥಾ ಆಗಬೇಡ ॥೩೩॥

ತ್ವತ್ತೋ ವಾ ಬ್ರಹ್ಮಣೋ ನಾಪಿ ಯೇ ಲಭನ್ತೇ ಷಡಕ್ಷರಮ್ ।
ಜೀವನ್ತೋ ಮನ್ತ್ರಸಿದ್ಧಾಃ ಸ್ಯುಃ ಮೃತಾಮಾಂ ಪ್ರಾಪ್ನುವನ್ತಿ ತೇ ॥೪೪॥
ಕ್ಷೇತ್ರೇಸ್ಮಿನ್ ಯೋರ್ಚಯೇದ್ಭಕ್ತ್ಯಾ ಮನ್ತ್ರೀಣಾನೇನ ವಾಂ ಶಿವ ।
ಬ್ರಹ್ಮಹತ್ಯಾದಿಪಾಪೇಭ್ಯೋ ಮೋಕ್ಷಯಿಷ್ಯಾಮಿ ವಾಽಽಶುಚಃ ॥೪೫॥
ಅವಿಮುಕ್ತೇ ತವ ಕ್ಷೇತ್ರೇ ಸರ್ವೇಷಾಂ ಮುಕ್ತಿಸಿದ್ಧಯೇ ।
ಅಹಂ ಸನ್ನಿಹಿತಸ್ತತ್ರ ಪಾಷಾಣಪ್ರತಿಮಾದಿಷು ॥೪೬॥
ಮುಮೂರ್ಷೋರ್ದಕ್ಷಿಣೇ ಕರ್ಣೇ ಯಸ್ಯಕಸ್ಯಾಪಿ ವಾ ಸ್ವಯಮ್ ।
ಉಪದೇಕ್ಷ್ಯಸಿ ಮನ್ಮನ್ತ್ರಂ ಸ ಮುಕ್ತೋ ಭವತೀಶ್ವರ ॥೪೭॥
ಇತ್ಯುಕ್ತವತಿ ದೇವೇಶೇ ಪುನರಪ್ಯಾಹ ಶಙ್ಕರಃ ॥೪೮॥
ಮಹಾ ಮವಾಭಿವಾನೋತ್ರ ಕ್ಷೇತ್ರಂ ತ್ರೈಲೋಕ್ಯದುರ್ಲಭಮ್ ॥
ಫಲಂ ಭವತು ದೇವೇಶ ಸರ್ವೇಷಾಂ ಮುಕ್ತಿಲಕ್ಷಣಮ್ ।
ಮುಮೂರ್ಷಾಣಾಂ ಚ ಸರ್ವೇಷಾಂ ದಾಸ್ಯೇ ಮನ್ತ್ರಂ ವರಂ ಪರಮ್ ॥
ಇತ್ಯೇವವಿಹಿತೋ ವಿಷ್ಣುಃ ತಸ್ಮೈ ದತ್ವಾ ವರಾನ್ತರಮ್ ।
ಯದಭೀಪ್ಸಂ ಪುನಸ್ತಸ್ಯ ತತ್ರೈವಾನ್ತರಧೀಯತ ॥೫೦॥

ಯಾವ ಪುರುಷರು, ನಿನ್ನ ಮುಖದಿಂದಲಾಗಲಿ-ಅಥವಾ ಬ್ರಹ್ಮನ ಮುಖದಿಂದಲಾಗಲಿ-ಷಡಕ್ಷರಮಂತ್ರವನ್ನು ಪಡೆಯುವರೋ, ಅವರು-ಬದುಕಿರುವಾಗ ಮಂತ್ರಸಿದ್ಧರಾಗಿರುವರು; ಸತ್ತಬಳಿಕ ನನ್ನನ್ನೇ ಹೊಂದುವರು ॥೪೪॥

ಅಜ್ಞಾ ! ಶಿವನೆ! ಈ ಕ್ಷೇತ್ರದಲ್ಲಿ ಭಕ್ತಿಯಿಂದ ಯಾವನು ನನ್ನನ್ನು ಈ ಮಂತ್ರದಿಂದ ಅರ್ಚಿಸುವನೋ, ಅವನನ್ನು ಬ್ರಹ್ಮಹತ್ಯಾದಿ ಪಾಪಗಳಿಂದಲೂ ನಾನು ಬಿಡುಗಡೆಮಾಡುವೆನು; ನೀನು ವ್ಯಸನಪಡಬೇಡ ॥೪೫॥

ಅವಿಮುಕ್ತವೆಂದು ಪ್ರಸಿದ್ಧವಾದ ನಿನ್ನ ಈ ಕ್ಷೇತ್ರದಲ್ಲಿ, ಸರ್ವರಿಗೂ ಮುಕ್ತಿಯು ಸಿದ್ಧಿಸುವುದಕ್ಕೋಸ್ಕರ, ಶಿಲಾಪ್ರತಿಮಾದಿಗಳಲ್ಲಿ ನಾನು ಸರ್ವದಾ ಸನ್ನಿಹಿತನಾಗಿರುವೆನು ॥೪೬॥

ಎಲ್ಲೆ ಪರಮೇಶ್ವರನೆ! ಇಲ್ಲಿ ಪ್ರಾಣೋತ್ಕ್ರಮಣಾವಸ್ಥೆಗೆ ಬಂದಿರುವ ಯಾವುದೊಂದು ಪ್ರಾಣಿಯು ಬಲಗಿವಿಯೊಳಗೆ ನೀನು ನನ್ನ ಮಂತ್ರವನ್ನು ಉಪದೇಶಿಸುವೆಯೋ, ಆಪ್ರಾಣಿಯು ಮುಕ್ತಿಪಡೆಯುವುದು. (ಎಂದು ಶ್ರೀರಾಮನು ಹೇಳಿದನು) ॥೪೭॥

ಹೀಗೆ ಆ ಸರ್ವದೇವೇಶ್ವರನಾದ ಶ್ರೀರಾಮನು ಹೇಳಲಾಗಿ, ಪರಮೇಶ್ವರನು ಅವನನ್ನು ಕುರಿತು ' ಭಗವಂತನೆ! ನನಗೆ ಈ ಕ್ಷೇತ್ರದಲ್ಲಿ ಹೆಚ್ಚಾದ ಅಭಿಮಾನವಿರುವುದು. ಇಂತಹ ಕ್ಷೇತ್ರವು ಮೂರುಲೋಕದಲ್ಲಿಯೂ ದುರ್ಲಭವಾದುದು, ಆದುಕಾರಣ, ಈ ಮುಕ್ತಿರೂಪವಾದ ಫಲವು ಎಲ್ಲರಿಗೂ ಸಿದ್ಧಿಸಲೀಕು, ಮುಮೂರ್ಷುಗಳಾದ ಸಕಲ ಪ್ರಾಣಿಗಳಿಗೂ ನಾನು ನಿನ್ನ ಮಂತ್ರವನ್ನು ಪಡೀಶಿಸುವೆನು ' ಎಂದು ಕೇಳಿಕೊಂಡನು ॥೪೪—೪೯॥

ಈರೀತಿಯಾಗಿ ಪ್ರಾರ್ಥಿಸಲ್ಪಟ್ಟ ಶ್ರೀಮಹಾವಿಷ್ಣುವು, ಆ ಪರಮೇಶ್ವರನಿಗೆ ಇಷ್ಟವಾದ ಇತರ ವರಗಳನ್ನು ಕೂಡ ಕೊಟ್ಟು, ಅಲ್ಲಿಯೇ ಅಂತರ್ಧಾನಹೊಂದಿದನು ॥೫೦॥

ತಸ್ಮಾದದ್ಯಾಪಿ ಗೌರೀಶಾತ್ ಪ್ರಾಣಿನಃ ಪ್ರಾಣಸಂಕ್ಷಯೇ ।
ಕಾಶ್ಯಾಂ ರಾಮಮನುಂ ಲಬ್ಧ್ವಾ ಪ್ರಾಪ್ನುವನ್ತಿ ಪರಂ ಪದಮ್ ॥೫೧॥

ದೇಹಾನ್ತೇ ತಾರಕಂ ಬ್ರಹ್ಮ ವ್ಯಾಚಷ್ಟೇ ರುದ್ರಉತ್ತಮಮ್ ।
ಯೇನಾಸಾವಮೃತೀಭೂಯ ಮೋಕ್ಷೀ ಭವತಿ ದೇಹಭೃಕ್ ॥೫೨॥

ತದಾದಿ ತದಭೂನ್ಮುಕ್ತಿಕ್ಷೇತ್ರಂ ತ್ರೈಲೋಕ್ಯವಿಶ್ರುತಮ್ ॥೫೩॥

ತತ್ರ ತಿಷ್ಠನ್ತಿ ಯೇ ಭಕ್ತ್ಯಾ ಯಾವಜ್ಜೀವಂ ನಿಯಮ್ಯ ತೇ ।
ಮುಕ್ತಿಭಾಜೋ ಭವನ್ತ್ಯೇವ ಸತ್ಯಂಸತ್ಯಂ ನ ಚಾನ್ಯಥಾ ॥೫೪॥

ಶ್ರೀ ಸೂತಉವಾಚ.

ಇತ್ಯುಕ್ತೋಗಸ್ತ್ಯಮುನಿನಾ ಸುತೀಕ್ಷ್ಣಃ ಪುನರಬ್ರವೀತ್ ।
ಕಥಂ ಮನ್ತ್ರವರಂ ಭೂಮೌ ಕೇನ ಚಾದೌ ಪ್ರಕಾಶಿತಮ್ ।

ಉಪಾದಿಶಚ್ಚ ಕಃ ಕಸ್ಮೈ ತನ್ಮೇ ಬ್ರೂಹಿ ತಪೋಧನ ॥೫೫॥

ಅಗಸ್ತ್ಯಉವಾಚ.

ಅದುಕಾರಣ, ಕಾಶಿಯೊಳಗೆ ಈಗಲೂ ಪ್ರಾಣಿಗಳು ಪ್ರಾಣೋತ್ಕ್ರಮಣಕಾಲದಲ್ಲಿ ಪರಮೇಶ್ವರನ ಮುಖದಿಂದ ರಾಮಮಂತ್ರವನ್ನು ಪಡೆದು ಪರಮಪದವನ್ನು ಹೊಂದುತ್ತಿರುವರು ॥೫೧॥

ಪ್ರಾಣಿಗೆ ಮರಣಕಾಲ ಸಮೀಪಿಸಿದಾಗ, ಶ್ರೀ ರುದ್ರನು ಉತ್ತಮವಾದ ತಾರಕಬ್ರಹ್ಮ ಮಂತ್ರವನ್ನುಪದೇಶಿಸುವನು. ಆದರಿಂದ ದೇಹಿಯು ಮೋಕ್ಷಭಾಗಿಯಾಗಿ ಶಾಶ್ವತವಾಗಿರುವನು ॥೫೨॥

ಅಯ್ಯಾ! ಸುತೀಕ್ಷ್ಣಮುನಿಯೆ! ಅದುಮೊದಲುಗೊಂಡು, ಆ ಕಾಶಿಯು ಮುಕ್ತಿಕ್ಷೇತ್ರವೆಂದು ಮೂರುಲೋಕದಲ್ಲಿಯೂ ಪ್ರಸಿದ್ಧವಾಯ್ತು. ಅಲ್ಲಿ ಯಾರು ಭಕ್ತಿಯಿಂದ ಯಾವಜ್ಜೀವವೂ ನಿಯಮವಾಡಿಕೊಂಡು ವಾಸಿಸುವರೋ, ಅವರು ಮೋಕ್ಷಭಾಗಿಗಳಾಗಿಯೇ ಆಗುವರು ಇದು ಸತ್ಯವು, ಇದು ಸತ್ಯವು. ಇದು ಅನ್ಯಥಾ ಆಗುವುದಿಲ್ಲ. (ಎಂದು ಅಗಸ್ತ್ಯರು ಹೇಳಿದರು) ॥೫೩--೫೪॥

ಶ್ರೀಸೂತರು ಶೌನಕಾದಿಗಳಿಗೆ ಹೇಳುವರು:—

ಅಯ್ಯಾ ಶೌನಕಾದಿಗಳಿರಾ! ಈರೀತಿಯಾಗಿ ಅಗಸ್ತ್ಯಮುನಿಯಿಂದ ಹೇಳಲ್ಪಟ್ಟವನಾದ ಸುತೀಕ್ಷ್ಣಮುನಿಯು, ಮತ್ತೆ ಅಗಸ್ತ್ಯಮುನಿಯನ್ನು ಕುರಿತು ' ಎಲೈ ತಪೋಧನನೆ! ಈಉತ್ತಮವಾದ ರಾಮಷಡಕ್ಷರಮಂತ್ರವು, ಭೂಮಿಯಲ್ಲಿ ಮೊದಲು ಯಾರಿಂದ ಹೇಗೆ ಪ್ರಕಾಶಪಡಿಸಲ್ಪಟ್ಟಿತು? ಅದನ್ನು ಯಾರು ಯಾರಿಗೆ ಉಪದೇಶಮಾಡಿದರು? ಈವಿಷಯವನ್ನು ನನಗೆ ನೀನು ಹೇಳುವನಾಗು ' ಎಂದು ಕೇಳಿಕೊಂಡನು ॥೫೫॥

ಆಗ ಪುನಃ ಅಗಸ್ತ್ಯಮುನಿಯು ಉತ್ತರ ಹೇಳುವನು:—

ಬ್ರಹ್ಮಾ ದದೌ ವಸಿಷ್ಠಾಯ ಸ ಶಕ್ತಾಯ ಮನುಂ ಪುನಃ।
ವೇದವ್ಯಾಸಾಯ ಮುನಯೇ ದದಾವಿತ್ಥ ಮನುಕ್ರಮಃ ॥೫೬॥

ವೇದವ್ಯಾಸಮುಖೇನಾತ್ರ ಭೂಮೌ ಮನ್ತ್ರಃ ಪ್ರಕಾಶಿತಃ।
ವೇದವ್ಯಾಸೋ ಮಹಾತೇಜಾಃ ಶಿಷ್ಯೇಭ್ಯಃ ಸಮುಪಾದಿಶತ್ ॥೫೭॥

ನ ಹಿ ತಸ್ಮಾತ್ ಪರಃ ಕಶ್ಚಿತ್ ಪಾಪಾರಣ್ಯದವಾನಲಃ।
ಸ್ಮರಣೌನ್ಮುಖ್ಯಮಾತ್ರೇಣ ಯೋಪರಾಶಿಃ ಪ್ರಣಶ್ಯತಿ ॥೫೮॥

ತಜ್ಜಾಪಕಸ್ಯ ಪಾಪಾನಿ ಗುರೂಣ್ಯಪಿ ಲಘೂನಿ ಚ।
ಬ್ರಹ್ಮಹತ್ಯಾಸಹಸ್ರಾಣಿ ಸ್ತೇಯಂ ಗುರ್ವಙ್ಗನಾಗಮಃ ॥೫೯॥

ಸುರಾಪಾನಂ ಚ ದುರ್ವಾರಂ ಮಹಾಪಾಪಚತುಷ್ಟಯಮ್।
ಚಣ್ಡಾಲಪುಲ್ಕಸಮ್ಲೇಚ್ಛ ವೇಶ್ಯಾಸ್ತ್ರೀಸಙ್ಗಸಮ್ಭವಮ್ ॥೬೦॥

ಗ್ರಾಮಚಣ್ಡಾಲಯುವತೀದಾಸೀಸಙ್ಗಮಸಮ್ಭವಮ್।
ರಜಸ್ವಲಾಮದ್ಯಪಸ್ತ್ರೀಮುಖಾಸ್ವಾದನಜಂ ರಹಃ ॥೬೧॥

ಏವಮಾದೀನ್ಯನೇಕಾನಿ ಕ್ಷುದ್ರಪಾಪಾನಿ ಜಾಪಕೇ।
ತತ್ಕ್ಷಣಾದೇವ ನಶ್ಯನ್ತಿ ರಾಮಮನ್ತ್ರಪ್ರಭಾವತಃ ॥೬೨॥

ಆರ್ಯಾ! ಸುತೀಕ್ಷ್ಣಮುನಿಯೇ! ಮೊದಲು ಇದನ್ನು ಬ್ರಹ್ಮನು ವಸಿಷ್ಠಮುನಿಗೆ ಉಪದೇಶಿಸಿದನು; ಅವನು, ಶುಕಸಹಿತನಾದ ವೇದವ್ಯಾಸಮುನಿಗೆ ಉಪದೇಶಿಸಿದನು. ಇದು ಹೀಗೆ ಅನುಕ್ರಮವಾಗಿ ಬಂದಿತು ॥೫೬॥

ವೇದವ್ಯಾಸರ ಮುಖದಿಂದ, ಈ ಮಂತ್ರವು ಭೂಮಿಯಲ್ಲಿ ಪ್ರಕಾಶಪಡಿಸಲ್ಪಟ್ಟಿತು. ಮಹಾತೇಜಸ್ವಿಯಾದ ವೇದವ್ಯಾಸನು, ತನ್ನ ಶಿಷ್ಯರಿಗೆ ಇದನ್ನು ಉಪದೇಶಿಸಿದನು ॥೫೭॥

ಈ ಷಡಕ್ಷರಮಂತ್ರಕ್ಕಿಂತ ಬೇರೆಯಾದ ಯಾವ ಮಂತ್ರವೂ, ಪಾಪರಾಶಿಯೆಂಬ ಕಾಡಿಗೆ ಅಗ್ನಿಯಾಗಿರುವುದಿಲ್ಲ. ಈ ಮಂತ್ರವನ್ನು ಸ್ಮರಿಸುವುದಕ್ಕೆ ಉದ್ಯುಕ್ತನಾದ ಮಾತ್ರದಿಂದಲೇ, ಪುರುಷನ ಪಾಪರಾಶಿಯೆಲ್ಲವೂ ನಾಶಹೊಂದುವುದು ॥೫೮॥


ಈ ಷಡಕ್ಷರಮಂತ್ರಜಪಮಾಡತಕ್ಕವನಲ್ಲಿರುವ-ಸಮಸ್ತವಾದ-ಮಹಾಪಾತಕಗಳೂ, ಉಪಪಾತಕಗಳೂ, ಅಸಂಖ್ಯಾಕವಾದ ಬ್ರಹ್ಮಹತ್ಯೆ ಸ್ವರ್ಣಸ್ತೇಯ ಗುರುದಾರಗಮನ ಸುರಾಪಾನಗಳೆಂಬ-ಎಂದಿಗೂ ಕಳೆಯಲಾರದ ಮಹಾಪಾಪಚತುಷ್ಟಯವೂ, ಚಂಡಾಲ ಪುಲ್ಕಸ ಮ್ಲೇಚ್ಛ ವೇಶ್ಯಾಸ್ತ್ರೀ ಸಂಗಜನ್ಯವಾದ ಪಾಪವೂ, ಗ್ರಾಮಚಂಡಾಲಸ್ತ್ರೀಯರ ಸಂಗದಿಂದಲೂ ದೇವದಾಸೀಸಂಗದಿಂದಲೂ ಸಂಭವಿಸುವ ಪಾಪವೂ, ರಜಸ್ವಲೆಯಾದ ಸ್ತ್ರೀಯ-ಮದ್ಯಪಾನಮಾಡತಕ್ಕ ಸ್ತ್ರೀಯ-ಮುಖಾಸ್ವಾದದಿಂದ ಸಂಭವಿಸುವ ಪಾಪವೂ, ರಹಸ್ಯಕೃತವಾದ ಪಾತಕವೂ, ಇವೇ ಮೊದಲಾಗಿ ಇನ್ನೂ ಅನೇಕವಿಧವಾಗಿರುವ ಪಾತಕಗಳೂ ಯಾವುವುಂಟೋ, ಅವೆಲ್ಲವೂ ಆ ಕ್ಷಣವೇ ರಾಮಮಂತ್ರಮಹಿಮೆಯಿಂದ ನಷ್ಟವಾಗುವುವು ॥೫೯—೬೨॥

ಸಿನ್ಧೌ ಲೀನಾಯಥಾ ನದ್ಯೋ ನಾಮರೂಪೇ ವಿಹಾಯ ವೈ ।
ತಥಾ ಸರ್ವಾಣಿ ಪಾಪಾನಿ ರಾಮಮನ್ತ್ರಪ್ರಜಾಪಕೇ ॥೬೩॥

ಶ್ರೀ ಸೂತಉವಾಚ.

ಏವಂ ವಾರಾಣಸೀಕ್ಷೇತ್ರೇ ಶೈವ್ಯಕಾರಣಮಾರ್ಯಕಾಃ ।
ಕುಮ್ಭಜೋಕ್ತಂ ಮಯಾ ಪ್ರೋಕ್ತಂ ಕಿಂ ಭೂಯಃ ಶ್ರೋತುಮಿಚ್ಛಥ ॥

ಇತಿ ಶ್ರೀಮದಯೋಧ್ಯಾಕಾಣ್ಡೇ ಕಾಶೀಕ್ಷೇತ್ರಮಾಹಾತ್ಮ್ಯವರ್ಣನಂ
ನಾಮ ವಿಂಶಃ ಸರ್ಗಃ.



ಅನೇಕವಾದ ನದಿಗಳು, ತಮ್ಮ ಹೆಸರನ್ನೂ ರೂಪವನ್ನೂ ಬಿಟ್ಟುಬಿಟ್ಟು ಸಮುದ್ರದಲ್ಲಿ ಹೇಗೆ ಅಡಗಿ ಹೋಗುವುವೋ, ಹಾಗೆಯೇ ಸಮಸ್ತಪಾಪಗಳೂ ರಾಮಮಂತ್ರಜಪಮಾಡತಕ್ಕವನಲ್ಲಿ ಅಡಗಿಹೋಗುವುವು. (ಎಂದು ಅಗಸ್ತ್ಯಮುನಿಯು ಸುತೀಕ್ಷ್ಣಮಹರ್ಷಿಗೆ ಹೇಳಿದನು)

ಶ್ರೀ ಸೂತರು ಶೌನಕಾದಿಗಳಿಗೆ ಹೇಳುವರು:—

ಎಲೈ ಮಹಾತ್ಮರಾದ ಶೌನಕಾದಿ ಮುನಿಗಳಿರಾ! ಹೀಗೆ ವಾರಾಣಸೀ ಕ್ಷೇತ್ರದ ಪ್ರಾಶಸ್ತ್ಯಕ್ಕೆ ಕಾರಣವನ್ನು, ಅಗಸ್ತ್ಯರು ಹೇಳಿದಮೇರೆಗೆ ನಾನು ನಿಮಗೆ ಹೇಳಿರುವೆನು. ಮತ್ತೆ ಏನನ್ನು ಕೇಳಬೇಕೆಂದು ಇಚ್ಛಿಸುವಿರಿ? ನೀವು ಕೇಳಿದುದನ್ನೆಲ್ಲ ನಾನು ತಿಳಿಯಿಸುವೆನು ॥೬೪॥

ಇದು ಅಯೋಧ್ಯಾಕಾಂಡದಲ್ಲಿ ಕಾಶೀಕ್ಷೇತ್ರಮಾಹಾತ್ಮ್ಯವರ್ಣನೆಯೆಂಬ
ಇಪ್ಪತ್ತನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಏಕವಿಂಶಃ ಸರ್ಗಃ.

ಋಷಯ ಊಚುಃ.

ರಾಮಃ ಕಿಮಕರೋತ್ ಪಶ್ಚಾತ್ ಕಾಶೀಂ ಸಂಪ್ರಾಪ್ಯ ತದ್ವದ ।
ರಾಮಗಾಥಾಸುಧಾಪಾನಾತ್ ನ ತೃಪ್ತಿರುಪಜಾಯತೇ ॥೧॥

ಶ್ರೀ ಸೂತಉವಾಚ.

ಸೀತಯಾ ಸಹ ಧರ್ಮಾತ್ಮಾ ಲಕ್ಷ್ಮಣೇನ ಯವೀಯಸಾ ।
ಗಯಾಂ ಪ್ರಾಪ್ಯ ಹರಿಃ ಸಾಕ್ಷಾತ್ ರಾಮೋ ದಶರಥಾತ್ಮಜಃ ॥೨॥
ಫಲ್ಗುನೀತೀರಮಾಸಾದ್ಯ ಕೃತ್ವಾನುಷ್ಠಾನಮುತ್ತಮಮ್ ।
ಋಷಿಭಿರ್ಮುನಿಭಿಃ ಸಾರ್ಧಂ ಘಟಿಕಾಂ ಪ್ರಯಯೌ ಮುದಾ ।
ಘಟಿಕಾಜೀವಿನೋ ವಿಪ್ರಾಃ ನ್ಯರುಧ್ಯ ರಾಘವಂ ತದಾ ॥೩॥
ವಿಪ್ರಾ ದುಷ್ಪಗುಣಾಜ್ ಜ್ಞಾತ್ವಾ ರಾಮೋ ಧರ್ಮಭೃತಾಂ ವರಃ ॥೪॥
ದುಷ್ಟನಿಗ್ರಹಣಾಕಾಂಕ್ಷೀ ಶಿಷ್ಟಪೋಷಣತತ್ಪರಃ ।
ಮದದರ್ಪಕ್ಷಯಾಕಾಂಕ್ಷೀ ವಿಪ್ರಾಣಾಂ ಧನಗರ್ವಿಣಾಮ್ ॥೫॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗವು.

ಮತ್ತೆ ಶೌನಕಾದಿಮುನಿಗಳು ಸೂತಮುನಿಯನ್ನು ಕುರಿತು ಹೇಳುವರು:—

ಸ್ವಾಮಿನಿ! ಸೂತರೇ! ಆ ರಾಮನು ಕಾಶಿಯನ್ನು ಹೊಂದಿದಮೇಲೆ ಅಲ್ಲಿ ಏನುಮಾಡಿದನು? ಅದನ್ನು ದಯೆಯಿಟ್ಟು ನಮಗೆ ಹೇಳಬೇಕು. ಶ್ರೀರಾಮನ ಕಥೆಯೆಂಬ ಅಮೃತವನ್ನು ಎಷ್ಟು ಪಾನಮಾಡಿದರೂ ನಮಗೆ ತೃಪ್ತಿಯುಂಟಾಗುವುದಿಲ್ಲ ॥೧॥

ಶ್ರೀ ಸೂತಮುನಿಯು ಉತ್ತರ ಹೇಳುವನು :—

ಆಯ್ಯಾ ಮುನಿಗಳಿರಾ! ಧರ್ಮಾತ್ಮನೂ ದಶರಥಪುತ್ರನೂ ಸಾಕ್ಷಾತ್ಪರಮಾತ್ಮನಾದ ವಿಷ್ಣುವೂ ಆದ ಶ್ರೀರಾಮನು, ಪತ್ನಿಯಾದ ಸೀತೆಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಗಯಾಕ್ಷೇತ್ರಕ್ಕೆ ಬಂದು, ಅಲ್ಲಿ ಫಲ್ಗುನೀನದಿಯ ತೀರಕ್ಕೆ ಹೋಗಿ, ಅಲ್ಲಿ ಮಾಡಬೇಕಾದ ಉತ್ತಮವಾದ ಕರ್ಮಗಳನ್ನೆಲ್ಲ ಮಾಡಿಕೊಂಡು, ಆಗ ಮಹರ್ಷಿಗಳೊಡನೆ ಘಟಿಕಾಸಾಮಕ್ಷೇತ್ರದ ಪ್ರದೇಶಕ್ಕೆ ಸಂತೋಷದಿಂದ ಹೋದನು. ಆಗ ಆ ಘಟಿಕಾಕ್ಷೇತ್ರದಿಂದ ಜೀವಿಸುವ ಬ್ರಾಹ್ಮಣರುಗಳು, ರಾಮನನ್ನು ಅಲ್ಲಿ ಶ್ರಾದ್ಧಾದಿಗಳನ್ನು ಮಾಡದಂತೆ ತಡೆದರು ॥೨–೩॥

ಆ ಬಳಿಕ, ಧರ್ಮಾತ್ಮರಲ್ಲೆಲ್ಲ ಶ್ರೇಷ್ಠನಾದ ಶ್ರೀರಾಮನು, ಆ ಬ್ರಾಹ್ಮಣರು ದುರ್ಗುಣಶಾಲಿಗಳೆಂದು ತಿಳಿದು, ದುಷ್ಟರ ನಿಗ್ರಹವನ್ನು ಅಪೇಕ್ಷಿಸಿದವನಾಗಿ, ಶಿಷ್ಟಸಂರಕ್ಷಣೆಯಲ್ಲಿ ತತ್ಪರನಾಗಿ, ಧನದಿಂದ ಗರ್ವಪಡುತಿರುವ ಆ ಬ್ರಾಹ್ಮಣರ ಮದವೂ ದರ್ಪವೂ ಕಡಮೆಯಾಗಬೇಕೆಂದು ಇಚ್ಛೆಪಟ್ಟನು. ಧನಮದವು ಕ್ಷಯಿಸಿದರೆ ಮನುಷ್ಯನ ಸ್ವಭಾವವು ಸರಿಯಾಗುವುದೆಂದು

ಧನಗರ್ವಕ್ಷಯೇ ದೇಹೀ ಪ್ರಕೃತಿಸ್ಥೋ ಭವಿಷ್ಯತಿ ।
ಇತಿ ಮತ್ವಾ ರಾಮಚನ್ದ್ರೋ ಗಯಾಸುರಮುವಾಚ ಹ ।
ಮಯಾ ದತ್ತಸ್ಯ ಪಿಣ್ಡಸ್ಯ ಜಿಹ್ವಾಗ್ರೇ ಗ್ರಹಣಂ ಕುರು ॥೬॥

ಗಯಾಸುರಸ್ತ್ವೇವಮುಕ್ತೋ ರಾಮೇಣ ಪರಮಾತ್ಮನಾ ।
ಜಿಹ್ವಾಂ ಪ್ರಸಾರ್ಯ ತದ್ದತ್ತಂ ಅಗ್ರಹೀತ್ ಪಿಣ್ಡಮುತ್ತಮಮ್ ॥೭॥

ನಾಯಾತಾಃ ಪಿತರಸ್ತತ್ರ ಮುಕ್ತಾಃ ಪೂರ್ವನಿಮಿತ್ತತಃ ।
ಪ್ರಾಹುಸ್ತೇ ಪಿತರಃ ಸರ್ವೇ ಮುಕ್ತಾಃ ಸ್ಮ ಇತಿ ರಾಘವಮ್ ॥೮॥

ರಾಘವೋ ವಿಸ್ಮಿತಸ್ತತ್ರ ಕೋ ಹೇತುರ್ಮುಕ್ತಿ ಭಾಜನೇ ।
ಫಲ್ಗುನೀಂ ಪ್ರಾಹ ರಾಮೋಪಿ ಪಿತೄಣಾಂ ಮುಕ್ತಿಕಾರಣಮ್ ॥೯॥

ಫಲ್ಗುನೀ ಪ್ರಾಹ ರಾಮಾಯ ಪಿತೄಣಾಂ ತೃಪ್ತಿಹೇತುಕಮ್ ॥೧೦॥

ಕಲ್ಯಾಣ್ಯಾ ಸೀತಯಾ ದತ್ತಂ ಫಲ್ಗುನೀಜಲಮುತ್ತಮಮ್ ।
ತೇನೈವ ತೃಪ್ತಾಃ ಪಿತರೋ ಮುಕ್ತಾಸ್ತೇ ರಘುನನ್ದನ ॥೧೧॥

ಯುಕ್ತಮಿತ್ಯೇವ ತನ್ಮತ್ವಾ ರಾಮಃ ಪ್ರಹಸಿತಾನನಃ ।
ಸೀತಾಂ ಪ್ರಾಹ ಮಹಾಬಾಹುಃ ಧರ್ಮಯುಕ್ತಮಿದಂ ವಚಃ ॥೧೨॥

ಯೋಚಿಸಿ, ಗಯಾಸುರನನ್ನು ಕುರಿತು 'ನಾನು ಕೊಟ್ಟ ಪಿಂಡವನ್ನು ನೀನು ನಿನ್ನ ನಾಲಿಗೆಯ ತುದಿಯಲ್ಲಿ ಹಿಡಿದು ಸ್ವೀಕರಿಸುವನಾಗು' ಎಂದು ಆಜ್ಞಾಪಿಸಿದನು ॥೪-೬॥

ಹೀಗೆ ಪರಮಾತ್ಮನಾದ ರಾಮನಿಂದ ಆಜ್ಞಾಪಿಸಲ್ಪಟ್ಟ ಗಯಾಸುರನು, ತನ್ನ ನಾಲಿಗೆಯನ್ನು ನೀಡಿಕೊಂಡು, ರಾಮನಿಂದ ಕೊಡಲ್ಪಟ್ಟ ಆ ಉತ್ತಮವಾದ ಪಿಂಡವನ್ನು ತೆಗೆದುಕೊಂಡನು ॥

ಆಗ, ಇದಕ್ಕೆ ಹಿಂದೆಯೇ ನಡೆದಿರುವ ಒಂದು ಕಾರಣಾಂತರದಿಂದ ಮುಕ್ತರಾಗಿದ್ದ ಪಿತೃ ದೇವತೆಗಳು, ಅಲ್ಲಿ ಶ್ರೀರಾಮನಿಂದ ಕೊಡಲ್ಪಟ್ಟ ಪಿಂಡವನ್ನು ಗ್ರಹಿಸುವುದಕ್ಕೆ ಬರಲಿಲ್ಲ. ಅವರೆಲ್ಲರೂ ರಾಮನನ್ನು ಕುರಿತು-ನಾವು ಮುಕ್ತರಾಗಿಬಿಟ್ಟೆವೆಂದು ಹೇಳಿದರು ॥೮॥

ಆ ಸಮಯದಲ್ಲಿ, ಪಿತೃಗಳೆಲ್ಲರೂ ಹೀಗೆ ಮುಕ್ತಿಹೊಂದಲು ಕಾರಣವೇನೆಂದು ಆಶ್ಚರ್ಯಪಡುತಿರುವ ಶ್ರೀರಾಮನು, ನಮ್ಮ ಪಿತೃಗಳು ಮುಕ್ತಿಹೊಂದಲು ಕಾರಣವೇನೆಂದು ಫಲ್ಗುನೀನದಿಯನ್ನು ಕೇಳಿದನು ॥೯॥

ಆ ಬಳಿಕ, ಆ ಫಲ್ಗುನೀನದಿಯು 'ಅಯ್ಯಾ! ರಾಘವ! ಮಂಗಳಾತ್ಮಳಾದ ಸೀತೆಯು ಈ ಪ್ರತಸ್ತವಾದ ನನ್ನ ಜಲವನ್ನು ಪಿತೃಗಳಿಗೋಸ್ಕರ ಕೊಟ್ಟವಳಾದಳು. ಅದರಿಂದಲೇ ತೃಪ್ತಿಹೊಂದಿ, ನಿನ್ನ ಪಿತೃಗಳು ಮುಕ್ತರಾದರು' ಎಂದು, ಆ ಪಿತೃಗಳ ಮುಕ್ತಿಗೆ ಕಾರಣವನ್ನು ತಿಳುಹಿಸಿದಳು ॥೧೦-೧೧॥

ಅದು ಯುಕ್ತವಾದ ಕಾರಣವೇ ಸರಿಯೆಂದು ತಿಳಿದು, ಮಹಾಬಾಹುವಾದ ರಾಮನು, ಮುಗುಳುನಗೆನಗುತ, ಸೀತೆಯನ್ನು ಕುರಿತು 'ನೀನು ಹಸಿದವಳಾಗಿ ನೀರುಕುಡಿದು-ಪಿತೃಗ

ಕ್ಷುಧಿತಾ ತ್ವಂ ಜಲಂ ಪೀತ್ವಾ ಪಿತೄಣಾಮಪಿ ಯುಜ್ಯತೇ ।
ದದಾಸ್ಯತ್ಯನೃತೇ ಕ್ಷಿಪ್ರಂ ನಾಧಿಕಾರೋಽಸ್ತಿ ತೇ ಸ್ತ್ರಿಯಃ ॥೧೩॥
ಇತಿ ರಾಮವಚಃ ಶ್ರುತ್ವಾ ಸೀತಾ ಕಮಲಲೋಚನಾ ।
ಸ್ಮಿತವಕ್ತ್ರಾ ನತಶಿರಾಃ ನೋವಾಚಾತ್ಯನ್ತಲಜ್ಜಿತಾ ॥೧೪॥
ಸ್ಮಿತಂ ಕೃತ್ವಾ ತದಾ ರಾಮಃ ಪೂರ್ಣಚನ್ದ್ರನಿಭಾನನಃ ।
ತೂಷ್ಣೀಮಾಸ ಮಹಾತೇಜಾಃ ಪಿತೃಮುಕ್ತ್ಯಾತಿಹರ್ಷವಾನ್ ॥೧೫॥
ತತಃ ಸೀತಾ ಪ್ರಕುಪಿತಾ ಫಲ್ಗುನೀಮಾಹ ಸುನ್ದರೀ ।
ಸ್ವವೃತ್ತಾನ್ತಂ ಕಥಯತೀಂ ರಾಘವಾಯ ಮಹಾತ್ಮನೇ ॥೧೬॥
ಅಯಿ ಫಲ್ಗುನಿ ಸಿನೋ್ಧೀ ತ್ವಂ ಸ್ತ್ರೀಭಾವಮನುವರ್ತಿನೀ ।
ಸ್ತ್ರಿಯಃ ಕಥಾಂ ಪತ್ಯುರಗ್ರೇ ಕಥಂ ತ್ವಂ ವಕ್ತುಮರ್ಹಸಿ ॥೧೭॥
ಸ್ತ್ರೀಣಾಂ ಮರ್ಮಪ್ರಕಥನಾತ್ ತ್ವಮನ್ತರ್ಜಲವಾಹಿನೀ ।
ಭವಿಷ್ಯಸಿ ಮಯಾ ಶಪ್ತಾ ಸ್ವಾಪರಾಧೇನ ಫಲ್ಗುನಿ ॥೧೮॥
ಇತಿ ಶಪ್ತ್ವಾ ನದೀಂ ಸೀತಾ ರಾಮಸನ್ನಿಧಿಮಾಗತಾ ।
ತದಾಪ್ರಭೃತಿ ಸಾ ಸಿನ್ಧುಃ ಅನ್ತರ್ಜಲವತೀ ಕೃತಾ ॥೧೯॥

ಳಿಗೂ ತೃಪ್ತಿಗೋಸ್ಕರ ಜಲವನ್ನು ಕೊಟ್ಟುದು ಯಾವುದುಂಟೋ, ಆ ಕೆಲಸದಲ್ಲಿ ಹೆಂಗಸಾದ ನಿನಗೆ ಅಧಿಕಾರವಿಲ್ಲ' ಎಂಬುದಾಗಿ, ಧರ್ಮಸಹಿತವಾದ ಈ ಮಾತನ್ನು ಹೇಳಿದನು ॥೧೨–೧೩॥

ಹೀಗೆ ಹೇಳಿದ ರಾಮನ ಮಾತನ್ನು ಕೇಳಿ, ಕಮಲಲೋಚನೆಯಾದ ಸೀತೆಯು, ಅತ್ಯಂತ ಲಜ್ಜಾಯುಕ್ತಳಾಗಿ ಮುಗುಳುನಗೆನಗುತ, ತಲೆಯನ್ನು ಬೊಗ್ಗಿಸಿಕೊಂಡು, ಯಾವ ಮಾತನ್ನೂ ಆಡದೆ ಸುಮ್ಮನಾದಳು ॥೧೪॥

ಆಗ, ಪೂರ್ಣಚಂದ್ರಮುಖನಾದ ಮಹಾತೇಜಸ್ವಿಯಾಗಿರುವ ಶ್ರೀರಾಮನೂ ಕೂಡ, ಪಿತೃಗಳು ಮುಕ್ತಿಹೊಂದಿದುದರಿಂದ ಅತ್ಯಂತ ಹರ್ಷಯುಕ್ತನಾಗಿ, ಸ್ವಲ್ಪ ನಳ್ಳು ಸುಮ್ಮನಾದನು ॥೧೫॥

ಅನಂತರ, ಮಹಾತ್ಮನಾದ ರಾಮನಿಗೆ ತನ್ನ ವೃತ್ತಾಂತವನ್ನು ಹೇಳಿದ ಫಲ್ಗುನೀನದಿಯಮೇಲೆ ಕೋಪಿಸಿಕೊಂಡ ಸೀತಾದೇವಿಯು, ಆ ಫಲ್ಗುನಿಯನ್ನು ಕುರಿತು ಹೀಗೆ ಹೇಳಿದಳು ॥

ಎಲೌ ಫಲ್ಗುನೀನದಿಯೆ ! ನೀನು ಸ್ತ್ರೀಯರ ಸ್ಥಿತಿಯನ್ನು ಅನುಸರಿಸಿಕೊಂಡಿರುವಳಾಗಿದ್ದರೂ, ಗಂಡನ ಎದುರಿಗೆ ಹೆಂಡತಿಯ ಚರಿತವನ್ನು ಹೇಳಬಹುದೆ? ॥೧೬॥

ಹೇ ಫಲ್ಗುನಿ ! ನೀನು ಸ್ತ್ರೀಯರ ಮರ್ಮವನ್ನು ಹೇಳಿಬಿಟ್ಟೆಕಾರಣ, ನಿನ್ನ ಅಪರಾಧಬಲದಿಂದ, ನನ್ನಿಂದ ಶಪಿಸಲ್ಪಟ್ಟವಳಾಗಿ, ಗುಪ್ತಗಾಮಿನಿಯಾಗುವೆ ॥೧೭॥

ಹೀಗೆಂದು ಆ ಫಲ್ಗುನೀನದಿಯನ್ನು ಶಪಿಸಿ, ಸೀತೆಯು ಶ್ರೀರಾಮನ ಸನ್ನಿಧಿಯನ್ನು ಸೇರಿದಳು. ಆ ಕಾಲ ಮೊದಲುಗೊಂಡು, ಆ ಫಲ್ಗುನೀನದಿಯು ಗುಪ್ತಗಾಮಿನಿಯಾಗಿ ಮಾಡಲ್ಪಟ್ಟಿತು ॥೧೮॥

ಗಯಾನಿವಾಸಿನೋ ವಿಪ್ರಾಃ ದೃಷ್ಟ್ವಾ ರಾಮಗಯಾಂ ತತಃ ।
ರಾಮಭದ್ರಕೃತಾಂ ತತ್ರ ಸರ್ವೇಷಾಂ ಮುಕ್ತಿದಾಮಿಹಾವ್ ॥೨೦॥
ಸರ್ವಸ್ಯಾನನ್ದಜನನೀಂ ಸ್ವಜೀವನನಿರೋಧಿನೀವ್ ।
ರಾಮಂ ಶರಣಮಾಪನ್ನಾಃ ಶರಣ್ಯಂ ಕರುಣಾರ್ದ್ರನಾವ್ ॥೨೧॥
ದುರ್ಜನಾನಾಂ ಸ್ವಭಾವೋಯಂ ಸತಿ ಘ್ನಾತೇ ಗುಣಾರ್ಜವವ್ ।
ಸಾಧುಸ್ವಭಾವಃ ಸರ್ವತ್ರ ಸಾಧುಮಾರ್ಗೇಣ ಸಂಸ್ಥಿತಃ ॥೨೨॥
ದುರ್ಜನಸ್ಯ ನ ದೇವೋಸ್ತಿ ನ ತೀರ್ಥಂ ನಾಪಿ ಸದ್ಗತಿಃ ।
ನ ವೃದ್ಧಸಾಧುಪೂಜಾ ವಾ ಶಿಶ್ನೋದರಸುಖಂ ವಿನಾ ॥೨೩॥
ತತೋ ಗಯಾಕ್ಷೇತ್ರಗತಾಃ ವಿಪ್ರಾಜೀವನಲೋಪತಃ ।
ತೇರ್ದಿತಾದೀನವದನಾಃ ರಾಮಂ ವಚನಮಬ್ರುವನ್ ॥೨೪॥
ರಾಮಚನ್ದ್ರಕೃಪಾಧಾರ ಪಾಹಿ ನೋಽಜೀವನಾದ್ಭಯಾತ್ ।
ದುರ್ಜನಾವಯಮತ್ಯನ್ತಂ ತಥಾಪಿ ಕರುಣಾನಿಧೇ ॥೨೫॥
ಮತ್ವಾ ರಾಜಕುಮಾರಂ ತ್ವಾಂ ಲೌಕಿಕಂ ಮದದರ್ಪಿತಾಃ ।
ಪ್ರಾಕೃತಂ ರಾಜಭೋಗೇಚ್ಛಂ ಮಹಾವಿಷಯಲಮ್ಪಟವ್ ॥೨೬॥
ತ್ವತ್ಸ್ವರೂಪಂ ನ ಜಾನೀಮೋ ನಿಗ್ರಹಾನುಗ್ರಹಕ್ಷಮವ್ ।
ಸಾಕ್ಷಾನ್ನಾರಾಯಣಂ ದೇವಂ ಬ್ರಹ್ಮವಿಷ್ಣುಶಿವಾತ್ಮಕವ್ ॥೨೭॥

ಆ ಬಳಿಕ, ಗಯಾನಿವಾಸಿಗಳಾದ ಆ ಬ್ರಾಹ್ಮಣರು, ಶ್ರೀರಾಮಚಂದ್ರನಿಂದ ಮಾಡಲ್ಪಟ್ಟ-ಸರ್ವರಿಗೂ ಆನಂದಜನಕವಾಗಿಯೂ ತಮಗೆ ಜೀವನನಾಶಕವಾಗಿಯೂ ಇರುವ-ರಾಮಗಯೆಯನ್ನು ನೋಡಿ, ಶರಣಾಗತರಕ್ಷಕನಾದ ಶ್ರೀರಾಮನನ್ನು ಮರೆಹೊಕ್ಕರು ॥೨೦-೨೧॥

ಲೋಕದಲ್ಲಿ, ಶಿಕ್ಷೆಯುಂಟಾದಾಗ ಋಜುವಾದ ಗುಣವನ್ನು ತೋರಿಸುವುದೇ ದುರ್ಜನರ ಸ್ವಭಾವವು; ಸಜ್ಜನರಿಗಾದರೋ, ಸರ್ವದಾ ಸಾಧುಮಾರ್ಗದಲ್ಲಿರುವುದೇ ಸ್ವಭಾವವು ॥೨೨॥

ದುರ್ಜನರಿಗೆ, ದೇವರೂ ಇಲ್ಲ; ತೀರ್ಥವೂ ಇಲ್ಲ; ಸದ್ಗತಿಯೂ ಇಲ್ಲ. ಕೇವಲ ಕಾಮ ಪರರಾಗಿ ಹೊಟ್ಟೆಹೊರೆಯುವುದೊಂದು ಹೊರತು, ಅವರಿಗೆ ವೃದ್ಧರ ಪೂಜೆಯಾಗಲಿ-ಸಾಧುಗಳ ಪೂಜೆಯಾಗಲಿ-ಯಾವುದೂ ಇಲ್ಲ ॥೨೩॥

ಹೀಗಿರುವುದರಿಂದ, ಗಯಾಕ್ಷೇತ್ರದಲ್ಲಿದ್ದ ಆ ಬ್ರಾಹ್ಮಣರೆಲ್ಲರೂ ಜೀವನಲೋಪದಿಂದ ಪೀಡಿತರಾಗಿ, ಮುಖವನ್ನು ಬಾಡಿಸಿಕೊಂಡು, ಶ್ರೀರಾಮನನ್ನು ಕುರಿತು ಹೀಗೆ ಹೇಳಿದರು ॥೨೪॥

ಎಲೈ ಕರುಣಾಸಾಗರನೆ! ಸಕಲಜಗತ್ತಿಗೂ ಆಧಾರಭೂತನಾದ ಶ್ರೀರಾಮನೆ! ನಾವು ವಸ್ತುತಃ ಅತ್ಯಂತ ದುಷ್ಟರು. ಆದರೂ, ನೀನು ನಮಗುಂಟಾಗಿರುವ ಜೀವನಲೋಪಭಯವನ್ನು ತಪ್ಪಿಸಿ ಕಾಪಾಡಬೇಕು ॥೨೫॥

ಕೇವಲ ಧನಮದದಿಂದೆರ್ವಿಕರಾಗಿದ್ದ ನಾವು, ನೀನು ಸಾಮಾನ್ಯನಾಗಿ ವಿಷಯಲಂಪಟನಾದ ರಾಜ್ಯಾಕಾಂಕ್ಷಿಯಾದ ಲೌಕಿಕರಾಜಪುತ್ರನೆಂದು ತಿಳಿದು, ಹೀಗೆ ನಿಗ್ರಹಾನುಗ್ರಹಕ್ಷಮನಾಗಿರುವ ನಿನ್ನ ಸ್ವರೂಪವನ್ನೂ, ನೀನು ಬ್ರಹ್ಮ ವಿಷ್ಣು ಶಿವಾತ್ಮಕನಾದ ಸಾಕ್ಷಾನ್ನಾರಾಯಣನೆಂಬುದನ್ನೂ ಅರಿಯದವರಾಗಿದ್ದೆವು ॥೨೬-೨೭॥

ಪರಬ್ರಹ್ಮಾಸಿ ರಾಮ ತ್ವಂ ಕೇವಲಂ ಜೆತ್ಸ್ವರೂಪಭಾಕ್ ।
ಸತ್ಯಾನನ್ದೋಽದ್ವಿತೀಯಸ್ತ್ವಂ ಕಾರಣಂ ನಿತ್ಯಮವ್ಯಯಮ್ ॥೧೯॥

ತ್ವಯಿ ತಿಷ್ಠನ್ತಿ ಭೂತಾನಿ ನ ಚ ತ್ವಂ ತೇಷು ಸಂಸ್ಥಿತಃ ।
ಅಸಙ್ಗತ್ವಾನ್ನಿರಂಶತ್ವಾತ್ ತಮಸಃ ಪರತಃ ಸ್ಥಿತಃ ॥೧೯॥

ತ್ವಯಾ ವ್ಯಾಪ್ತಮಿದಂ ಸರ್ವಂ ವ್ಯೋಮ್ನೇವ ಸಚರಾಚರಮ್ ।
ಅನ್ತರ್ಬಹಿಶ್ಚ ಭೂಮತ್ವಾತ್ ತಸ್ಮಾದಾನನ್ದರೂಪಧೃಕ್ ॥೨೦॥

ಜಗತ್ಸೃಷ್ಟ್ಯಾದಿಶಯ್ಯತ್ವಾತ್ ಅನ್ತೇ ತ್ವದವಶೇಷತಃ ।
ಸೃಷ್ಟಿಸಂಹಾರವಾಕ್ಯೈಸ್ತ್ವಂ ಸತ್ಯರೂಪಇತೀರ್ಯಸೇ ॥೨೧॥

ಯಸ್ಮಾತ್ ಪ್ರಮಾಣವೇದ್ಯಃ ಸನ್ ಅಪರೋಕ್ಷತಯಾ ಸ್ಥಿತಃ ।
ಪ್ರತ್ಯಕ್ ಸನ್ ಭಾಸಯಸ್ಯರ್ಕಾದ್ ತಸ್ಮಾತ್ ತ್ವಂ ಸ್ವಪ್ರಕಾಶಕಃ ॥೨೨॥

ತವ ನಿಶ್ವಸಿತಂ ವೇದಾಃ ವೇದವೇದ್ಯೋಽಸಿ ಪೂರುಷಃ ।
ನ ವೇದಾಅಪಿ ಜಾನನ್ತಿ ತ್ವಾಂ ಪುನರ್ಮಾದೃಶಾಃ ಕಥಮ್ ॥೨೩॥

ಸ್ವಾಮಿ! ರಾಮಚಂದ್ರ! ನೀನು, ಚಿದ್ರೂಪವಾಗಿರುವ ಕೇವಲವಾದ ಪರಬ್ರಹ್ಮವಾಗಿರುವೆ; ನೀನು ಸತ್ಯಾನಂದರೂಪನಾಗಿಯೂ, ಅದ್ವಿತೀಯನಾಗಿಯೂ, ಸಕಲಕಾರಣನಾಗಿಯೂ, ನಿತ್ಯನಾಗಿಯೂ, ಅವ್ಯಯನಾಗಿಯೂ ಇರುವೆ ॥೧೮॥

ಸಮಸ್ತಭೂತಗಳೂ ನಿನ್ನಲ್ಲಿರುವುವು; (ಎಂದರೆ, ನೀನು ಸಮಸ್ತಕ್ಕೂ ಆಧಾರನು) ನೀನು ಸಂಗರಹಿತನಾಗಿಯೂ ಅಖಂಡನಾಗಿಯೂ ಇರುವುದರಿಂದ, ಅವುಗಳಲ್ಲಿ ನೀನಿರುವುದಿಲ್ಲ. (ಎಂದರೆ ನಿನಗೆ ಭೂತಗಳು ಆಧಾರವಾಗುವುದಿಲ್ಲ) ನೀನು, ತಮಸ್ಸಿಗಿಂತ (ಮಾಯಾವರಣಕ್ಕಿಂತ) ಬಹಿರ್ಭೂತನಾಗಿರುವೆ ॥೧೯॥

ನೀನು ಸರ್ವಾಧಿಕನಾಗಿರುವುದರಿಂದ, ಚರಾಚರಾತ್ಮಕವಾದ ಈ ಸಮಸ್ತವಿಶ್ವವನ್ನೂ, ಒಳಗೂ ಹೊರಗೂ ಕೂಡ, ನೀನು ಆಕಾಶದಂತೆ ವ್ಯಾಪಿಸಿಕೊಂಡಿರುವೆ. ಇದರಿಂದ, ನೀನು ಆನಂದಸ್ವರೂಪವನ್ನು ಧರಿಸಿದವನಾಗಿರುವೆ ॥೨೦॥

ನೀನು ಜಗತ್ಸೃಷ್ಟಿಗೆ ಆಶ್ರಯಭೂತನಾಗಿರುವುದರಿಂದಲೂ, ಪ್ರಳಯಕಾಲದಲ್ಲಿ ನೀನೊಬ್ಬನೇ ಅವಶೇಷನಾಗಿರುವುದರಿಂದಲೂ, ವೇದಾಂತಶಾಸ್ತ್ರದಲ್ಲಿರುವ ಸೃಷ್ಟಿಸಂಹಾರವಾಕ್ಯಗಳು, ನಿನ್ನನ್ನು ಸರ್ವದಾ ಸತ್ಯರೂಪನೆಂದು ಹೇಳುವುವು ॥೨೧॥

ನೀನು, ಕೇವಲ ಪ್ರಮಾಣೈಕವೇದ್ಯನಾಗಿರುತ, ವಸ್ತುತಃ ಸರ್ವರಿಗೂ ಅಪರೋಕ್ಷರೂಪವಾಗಿರುವೆ; ಮತ್ತು, ಸ್ವಯಂಪ್ರತ್ಯಗ್ರೂಪನಾಗಿದ್ದುಗೊಂಡು, ಈ ಸಮಸ್ತವನ್ನೂ ಪ್ರಕಾಶಪಡಿಸುವೆ. ಹೀಗಿರುವುದರಿಂದ, ನೀನು ಸ್ವಯಂಪ್ರಕಾಶನೆಂದು ಹೇಳಲ್ಪಡುವೆ ॥೨೨॥

ಸಮಸ್ತ ವೇದಗಳೂ ನಿನ್ನ ನಿಶ್ವಾಸರೂಪಗಳು; ನೀನು ವೇದವೇದ್ಯನಾದ ಪರಮಪುರುಷನಾಗಿರುವೆ. ವೇದಗಳೂ ಕೂಡ ನಿನ್ನನ್ನು ಯಥಾವತ್ತಾಗಿ ತಿಳಿಯಲಾರವು; ಹೀಗಿರುವಾಗ, ಇನ್ನು ನಮ್ಮಂಥವರ ಪಾಡೇನು! ॥೨೩॥

ಧ್ಯಾನಮಾರ್ಗೇ ಸ್ಥಿತಾನಿತ್ಯಂ ಯೋಗಿನಃ ಸನಕಾದಯಃ।
ಬ್ರಹ್ಮಾದ್ಯಾಶ್ಚ ನ ಜಾನಂತಿ ಕಿಂ ಪುನರ್ಮಾದೃಶಾಜನಾಃ ॥೩೪॥
ಅಪರಾಧಂ ಕ್ಷಮಸ್ವ ತ್ವಂ ಕರುಣಾಪೂರ್ಣಮಾನಸ ।
ರಕ್ಷ ನಃ ಸಕಲಾ ರಾಮ ಜೀವನೋಪಾಯದರ್ಶನಾತ್ ॥೩೫॥
ತೀರ್ಥಯಾತಾರ್ಥಿನಾಂ ರಾಮ ಫಲಾಧಿಕ್ಯಂ ಪ್ರಕುರ್ವತಾ ।
ತ್ವಯಾ ಸೃಷ್ಟಾವಯಂ ರಾಮ ನಿರ್ದಯಾಃ ಪಾಪಕಾರಿಣಃ ॥೩೬॥
ನಿರ್ಬಂಧಕಾರಿಣಃ ಸರ್ವೇ ಕಾ ಗತಿರ್ನೋ ಭವಿಷ್ಯತಿ ।
ಕಠಿನಾಶ್ಚ ಜ್ಞಾ ಲಾರಾಮ ಧನಾರ್ಜನಪರಾಯಣಾಃ ।
ಪಾಹಿ ನಃ ಸಕಲಾಪದ್ಭ್ಯಃ ತ್ರಾತಾ ಸರ್ವಜಗದ್ಗುರುಃ ॥೩೭॥
ಇತ್ಯುಕ್ತ್ವಾ ಬ್ರಾಹ್ಮಣಾಃ ಸರ್ವೇ ಸಾಷ್ಟಾಂಗಂ ಪ್ರಣಿಪತ್ಯ ಚ ।
ಪುನರುತ್ಥಾಯ ರಾಮಾಗ್ರೇ ತದಾ ಪ್ರಾಂಜಲಯಃ ಸ್ಥಿತಾಃ ॥೩೮॥
ದಯಾರ್ದ್ರಹೃದಯಃ ಶ್ರೀಮಾ ರಾಘವಃ ಕರುಣಾಕರಃ ।
ಉವಾಚ ವಚನಂ ತತ್ರ ವ್ಯವಸ್ಥಾಃ ಕಾರಯ ಪ್ರಭುಃ ॥೩೯॥

ನಿತ್ಯವೂ ಕೇವಲ ಧ್ಯಾನಮಾರ್ಗೈಕನಿರತರಾಗಿರುವ ಸನಕಾದಿ ಮಹಾಯೋಗಿಗಳೂ, ಬ್ರಹ್ಮಾದಿದೇವತೆಗಳೂ, ನಿನ್ನನ್ನು ಯಥಾವತ್ತಾಗಿ ತಿಳಿಯಲಾರರು. ನಮ್ಮಂತಹ ಪಾಪಕೃತ ಜನರು ಹೇಗೆ ತಿಳಿಯಬಲ್ಲರು? ॥೩೪॥

ಕರುಣಾಪೂರ್ಣಹೃದಯನಾದ ಎಲೈ ರಾಮಭದ್ರನೇ! ನೀನು ನಮ್ಮ ಅಪರಾಧವನ್ನು ಕ್ಷಮಿಸುವನಾಗು; ನಮಗೆ ಜೀವನೋಪಾಯವನ್ನು ತೋರಿಸಿ, ನಮ್ಮೆಲ್ಲರನ್ನೂ ಸಂರಕ್ಷಿಸುವನಾಗು ॥೩೫॥

ಹೇ ರಾಮ! ತೀರ್ಥಯಾತ್ರೆ ಮಾಡತಕ್ಕವರಿಗೆ ಹೆಚ್ಚಾಗಿ ಫಲ ಬರುವಂತೆ ಮಾಡಬೇಕೆಂದು ಇಚ್ಛೈಯುಳ್ಳ ನೀನು, ನಮ್ಮನ್ನು ಇಷ್ಟು ನಿರ್ದಯರನ್ನಾಗಿಯೂ ಪಾಪಕಾರಿಗಳನ್ನಾಗಿಯೂ ಸೃಜಿಸಿರುವೆ ॥೩೬॥

ರಾಮಭದ್ರ! ನಾವು ಕೇವಲ ಧನಾರ್ಜನಪರಾಯಣರಾಗಿ, ಬಹು ಕಠಿನರಾಗಿಯೂ ಚಂಚಲಚಿತ್ತರಾಗಿಯೂ ಸರ್ವರನ್ನೂ ನಿರ್ಬಂಧಪಡಿಸುತ್ತಿರುವೆವು. ಈಗ ನಮಗೆ ಯಾವ ದುರ್ಗತಿ ಬರುವುದೋ ತಿಳಿಯದು. ಸರ್ವಜಗನ್ನಾಥನಾಗಿಯೂ ಸಕಲ ರಕ್ಷಕನಾಗಿಯೂ ಇರುವ ನೀನು, ನಮ್ಮನ್ನು ಸಮಸ್ತವಿಧವಾದ ವಿಪತ್ತನ್ನೂ ತಪ್ಪಿಸಿ ಕಾಪಾಡಬೇಕು. (ಎಂದು ಗಯಾವಾಸಿಗಳು ಪ್ರಾರ್ಥಿಸಿದರು) ॥೩೭॥

ಹೀಗೆಂದು ಪ್ರಾರ್ಥಿಸಿ, ಆ ಸಮಸ್ತರಾದ ಬ್ರಾಹ್ಮಣರೂ ಶ್ರೀರಾಮನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಪುನಃ ಎದ್ದವರಾಗಿ, ಅವನ ಮುಂದುಗಡೆ ಕೈಮುಗಿದು ನಿಂತುಕೊಂಡರು ॥೩೮॥

ಆ ಬಳಿಕ, ಕರುಣಾನಿಧಿಯಾದ ಸಕಲಲೋಕಪ್ರಭುವಾದ ಶ್ರೀರಾಘವನು, ದಯಾರ್ದ್ರಹೃದಯನಾಗಿ, ಅಲ್ಲಿ ಒಂದು ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿಕೊಂಡು ಹೀಗೆ ಹೇಳಿದನು ॥೩೯॥

ಗಯಾಸುರಮುಖೇ ಪಿಣ್ಡಾಃ ದಾತವ್ಯಾಃ ಪೂರ್ವವನ್ನೃಭಿಃ ।
ಮದ್ಗಯಾವ್ರಜನಾಚ್ಚಾಪಿ ಪಿತೃತೃಪ್ತಿರ್ಭವಿಷ್ಯತಿ ॥೪೦॥
ಉಭಯತ್ರ ಗಯಾಶ್ರಾದ್ಧಂ ಪಿತೄಣಾಂ ದತ್ತಮಕ್ಷಯಮ್ ॥೪೧॥
ಇತಿ ದತ್ತ್ವಾ ವರಂ ತೇಷಾಂ ತದಾ ಪರಪುರಞ್ಜಯಃ ।
ವ್ಯವಸ್ಥಾಮಕರೋದ್ರಾಮಃ ಉಭಯತ್ರಾಪಿ ನಿರ್ಮಲಃ ॥೪೨॥
ತದಾಪ್ರಭೃತಿ ರಾಮಸ್ಯ ಗಯಾಯಾಂ ಶ್ರಾದ್ಧಕೃನ್ನರಃ ।
ಪಿತೄನಕ್ಷಯಲೋಕಸ್ಥಾನ್ ಕರೋತಿ ಪುರುಷೋತ್ತಮಃ ।
ಸ್ವಯಂ ಪಿತೃಋಣಾನ್ಮುಕ್ತಃ ಕೃತಕೃತ್ಯೋ ಭವೇನ್ನರಃ ॥೪೩॥
ಗಯಾವ್ಯವಸ್ಥಾಂ ಕೃತ್ವೈವಂ ಪುನರ್ಜೀವನಕಾಂಕ್ಷಿಣಃ ।
ಬಭಾಷೇ ಬ್ರಾಹ್ಮಣಾನ್ ರಾಮೋ ಮಾನವಾನುಜಿಘೃಕ್ಷಯಾ ॥೪೪॥
ಸರ್ವೇ ಕಲಿಯುಗೇ ಮರ್ತ್ಯಾಃ ನಿರ್ಭಾಗ್ಯಾನಿರ್ಧನಾಃ ಖಲಾಃ ।
ಲುಬ್ಧಾಶ್ಚ ಧರ್ಮರಹಿತಾಃ ಪಿತೃಕಾರ್ಯವಿವರ್ಜಿತಾಃ ॥೪೫॥
ಏವಂ ಚೋಪದ್ರುತಾಃ ಸರ್ವೇ ತ್ಯಜನ್ತ್ಯೇವ ಗಯಾಂ ಜನಾಃ ।
ತಸ್ಮಾದ್ಯುಷ್ಮಜ್ಜೀವನಾಯ ದಾಸ್ಯೇ ವರಮನುತ್ತಮಮ್ ॥೪೬॥

ಸಮಸ್ತ ಪುರುಷರೂ ಪೂರ್ವದಂತೆಯೇ ಗಯಾಸುರನ ಮುಖದಲ್ಲಿಯೇ ಪಿಂಡವನ್ನು ಕೊಡತಕ್ಕುದು. ನಾನು ಏರ್ಪಡಿಸಿದ ಈ ಗಯೆ(ರಾಮಗಯೆ)ಯಲ್ಲಿಯೂ ಪಿಂಡಪ್ರದಾನ ಮಾಡಿದರೆ, ಪಿತೃಗಳಿಗೆ ತೃಪ್ತಿಯುಂಟಾಗುವುದು. ಈಯೆರಡುಸ್ಥಳಗಳಲ್ಲಿಯೂ ಮಾಡಲ್ಪಡುವ ಗಯಾಶ್ರಾದ್ಧವು, ಪಿತೃಗಳಿಗೆ ಅಕ್ಷಯವಾಗುವುದು ॥೪೦—೪೧॥

ಈರೀತಿಯಾಗಿ ಆ ಗಯಾವಾಸಿಗಳಿಗೆ ವರವನ್ನು ಕೊಟ್ಟು, ಶತ್ರು ನಿವಾರಕನಾದ ನಿರ್ದೋಷನಾದ-ರಾಮಚಂದ್ರನು, ಆಗ ಆಯೆರಡುಸ್ಥಳಗಳಲ್ಲಿಯೂ ಹೀಗೆ ವ್ಯವಸ್ಥೆಯನ್ನು ಮಾಡಿದನು ॥೪೨॥

ಆ ಕಾಲ ಮೊದಲುಗೊಂಡು, ರಾಮಗಯೆಯಲ್ಲಿ ಶ್ರಾದ್ಧ ಮಾಡತಕ್ಕ ಉತ್ತಮನಾದ ಮನುಷ್ಯನು, ತನ್ನ ಪಿತೃಗಳನ್ನು ಶಾಶ್ವತಪುಣ್ಯಲೋಕವಾಸಿಗಳನ್ನಾಗಿ ಮಾಡುವನು; ತಾನೂ ಪಿತೃಋಣಮುಕ್ತನಾಗಿ ಕೃತಾರ್ಥನಾಗುವನು ॥೪೩॥

ಹೀಗೆ ಗಯಾವ್ಯವಸ್ಥೆಯನ್ನು ಮಾಡಿದನಂತರ, ಶ್ರೀರಾಮನು, ಪುನಃ ಜೀವನಕಾಂಕ್ಷಿಗಳಾಗಿರುವ ಆ ಗಯಾವಾಸಿಗಳನ್ನು ನೋಡಿ, ಮನುಷ್ಯರಲ್ಲಿ ಅನುಗ್ರಹಬುದ್ಧಿಯಿಂದ ಅವರನ್ನುದ್ದರಿಸುವುದಕ್ಕಾಗಿ ಹೀಗೆ ಹೇಳಿದನು ॥೪೪॥

ಮುಂದೆ ಕಲಿಯುಗದಲ್ಲಿ, ಸಮಸ್ತ ಮನುಷ್ಯರೂ, ನಿರ್ಭಾಗ್ಯರಾಗಿಯೂ ದರಿದ್ರರಾಗಿಯೂ ನೀಚರಾಗಿಯೂ ಲುಬ್ಧರಾಗಿಯೂ ಧರ್ಮರಹಿತರಾಗಿಯೂ ಪಿತೃಕರ್ಮಹೀನರಾಗಿಯೂ ಇರುವರು ॥೪೫॥

ಆದುಕಾರಣ, ನೀವು ಅವರನ್ನು ಹೀಗೆ ಉಪದ್ರವಪಡಿಸಿದರೆ, ಆ ಜನಗಳು ಗಯಾಶ್ರಾದ್ಧವನ್ನೇ ಬಿಟ್ಟುಬಿಡುವರು. ಆದುದರಿಂದ, ನಿಮ್ಮ ಜೀವನಕ್ಕೋಸ್ಕರ, ಉತ್ತಮವಾದ ಒಂದು ವರವನ್ನು ಕೊಡುವೆನು ॥೪೬॥

ಶಾಲ್ಯನ್ನಪರ್ವತಶ್ಚಾಪಿ ಶಕ್ರೋತ್ಪನ್ನಃ ಶಾಶ್ವತೋಸ್ತು ವಃ ।
ದಧಿಕ್ಷೀರಾಜ್ಯಮಧೂನಾಂ ಕುಲ್ಯಾಭಿಃ ಸಾಕಮುಜ್ಜಸಾ ॥೪೬॥
ಯಾವನ್ನ ಗೃಹ್ಯತೇ ಕಿಞ್ಚಿತ್ ಯಸ್ಮಾತ್ಕಸ್ಮಾದ್ಧಯಾಗತಾತ್ ।
ತಾವತ್ ತದನ್ನಂ ವೋ ಭೂಯಾತ್ ತದೂರ್ಧ್ವಂ ತದ್ವಿನಂಕ್ಷ್ಯತಿ ॥೪೪॥
ಇತ್ಯುಕ್ತವತಿ ರಾಮೇಥ ತತ್ರಾಸೀದನ್ನಪರ್ವತಃ ।
ಅಸಕ್ತ ಮಧ್ವಾದಿಕಲ್ಯಾಶ್ಚ ದಿವ್ಯಗಂಧರಸಾಸ್ತಥಾ ॥೪೫॥
ಇತ್ಯುಕ್ತ್ವಾ ತಾಃ ಗಯಾವಿಪ್ರಾ ರಾಮೋ ಬ್ರಾಹ್ಮಣವತ್ಸಲಃ ।
ಪ್ರಸಾದಯಾಮಾಸ ತತಃ ಕಾಶೀಪುರನಿವಾಸಿನಃ ॥೪೦॥
ಭರದ್ವಾಜೋಪಿ ರಾಮೇಣ ಬಹುಮಾನಾನ್ನಿವರ್ತಿತಃ ।
ಅನ್ವಗಚ್ಛತ್ ಪ್ರಯಾಗಾಖ್ಯಂ ಸ್ವಾಶ್ರಮಂ ಮುನಿಭಿಃ ಸಹ ॥೪೧॥
ರಾಮಸ್ತು ಸೀತಯಾ ಸಾರ್ಧಂ ಲಕ್ಷ್ಮಣೇನ ಯವೀಯಸಾ ।
ಜಗಾಮ ಚಿತ್ರಕೂಟಾದ್ರಿಂ ವಾಲ್ಮೀಕೇರ್ಯತ್ರ ಚಾಶ್ರಮಃ ॥೪೨॥

ಇತಿ ಶ್ರೀಮದಯೋಧ್ಯಾಕಾಣ್ಡೇ ರಾಮಗಯಾಪ್ರಶಂಸಾಕಥನಂ
ನಾಮ ಏಕವಿಂಶಃ ಸರ್ಗಃ.

ನಿಮಗೆ, ಇಲ್ಲಿ ಸರ್ವದಾ ಸುಖೋತ್ಪನ್ನವಾಗಿರುವ ಶಾಲ್ಯನ್ನಪರ್ವತವೂ, ಹಾಲು ಮೊಸರು ತುಪ್ಪ ಜೇನುತುಪ್ಪಗಳ ಕಾಲುವೆಗಳೂ ಕೂಡ, ಯಥೇಚ್ಛವಾಗಿ ಸಿದ್ಧವಾಗಿರಲಿ ॥೪೬॥

ಎಲ್ಲಿಯವರೆಗೆ ಗಯೆಗೆ ಬಂದ ಯಾವನೊಬ್ಬನಿಂದಲೂ ಯಾವುದೊಂದನ್ನೂ ನೀವು ತೆಗೆದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಮಾತ್ರವೇ ನಿಮಗೆ ಆ ಅನ್ನವಿರಲಿ; ಅಮೇಲೆ ಆ ಅನ್ನವು ನಾಶಹೊಂದುವುದು ॥೪೪॥

ಹೀಗೆಂದು ಶ್ರೀರಾಮನು ಹೇಳುತಿರಲಾಗಿ, ಬಳಿಕ ಅಲ್ಲಿ ದೊಡ್ಡದಾದ ಅನ್ನಪರ್ವತವು ಸಿದ್ಧವಾಯ್ತು; ಮತ್ತು, ದಿವ್ಯವಾದ ಗಂಧವೂ ರಸವೂ ಉಳ್ಳ ಮಧು ಮುಂತಾದುವುಗಳ ಕಾಲುವೆಗಳೂ ಸಿದ್ಧವಾದುವು ॥೪೫॥

ಬಳಿಕ, ಬಹ್ಮಣಪತ್ಸಲನಾದ ಶ್ರೀರಾಮಚಂದ್ರನು, ಆ ಗಯಾನಿವಾಸಿಗಳಾದ ಬ್ರಾಹ್ಮಣರಿಗೆ ಹೀಗೆ ಆಜ್ಞೆಮಾಡಿ, ಹಿಂದೆ ತನ್ನೊಡನೆ ಬಂದಿದ್ದ ಕಾಶೀಕ್ಷೇತ್ರದ ಬ್ರಾಹ್ಮಣರನ್ನು ಕಳುಹಿಸಿಬಿಟ್ಟನು ॥೪೦॥

ಅನಂತರ, ಶ್ರೀರಾಮನಿಂದ ಬಹುಮಾನಪೂರ್ವಕವಾಗಿ ಕಳುಹಿಸಲ್ಪಟ್ಟ ಭರದ್ವಾಜಮುನಿಯೂ ಕೂಡ, ಮಹರ್ಷಿಗಳೊಡನೆ ಪ್ರಯಾಗವೆಂಬ ತನ್ನ ಆಶ್ರಮವನ್ನು ಕುರಿತು ಹೊರಟುಹೋದನು ॥೪೧॥

ಶ್ರೀರಾಮಚಂದ್ರನೋ, ಸೀತಾಲಕ್ಷ್ಮಣರೊಡನೆ, ವಾಲ್ಮೀಕಿಮಹರ್ಷಿಯ ಆಶ್ರಮವಿರುವ ಚಿತ್ರಕೂಟಪರ್ವತವನ್ನು ಕುರಿತು ಹೊರಟನು ॥೪೨॥

ಇದು ಅಯೋಧ್ಯಾಕಾಂಡದಲ್ಲಿ ರಾಮಗಯಾಪ್ರಶಂಸೆಯೆಂಬ
ಇಪ್ಪತ್ತೊಂದನೆಯ ಸರ್ಗವು.

ಅಥ ಶ್ರೀಮದಯೋಧ್ಯಾಕಾಣ್ಡೇ ದ್ವಾವಿಂಶಃ ಸರ್ಗಃ.

ಏತಸ್ಮಿನ್ನೇವ ಸಮಯೇ ರಾಕ್ಷಸಾವಿಕೃತಾನನಾಃ ।
ವಮನ್ತಃ ಪಾವಕಜ್ವಾಲಾಂ ಘೋರರೂಪಾಮಹಾಬಲಾಃ ॥೧॥

ತ್ರಯಃ ಪಾಪಸಮಾಚಾರಾಃ ಸ್ಯರುಧ್ಯ ಮಾರ್ಗಮಗ್ರತಃ ।
ನಿರುದ್ಧಮಾರ್ಗಃ ಶ್ರೀರಾಮೋ ಹತಾತ್ ತಾ೯ ಸನ್ದದರ್ಶ ಹ ॥೨॥

ತಾ೯ ದೃಷ್ಟ್ವೈವ ತದಾ ರಾಮಃ ಸ ತಾ೯ ಮಾರ್ಗನಿರೋಧಕಾ೯ ।
ದದಾಹಾಗ್ನೇಯಶಸ್ತ್ರೇಣ ಜ್ವಲತೈಕೇನ ರಾಕ್ಷಸಾ೯ ॥೩॥

ತಾ೯ ದೃಷ್ಟ್ವಾ ನಿಹತಾ೯ ದೇವಾಃ ಪುಷ್ಪವೃಷ್ಟಿಂ ಪ್ರಚಕ್ರಮುಃ ।
ಮನ್ಯಮಾನಾರಾಘವೇಣ ಸ್ವರ್ಗೋಪದ್ರವನಾಶನಮ್ ॥೪॥

ತತಃ ಶನೈರ್ನಿರ್ಭರ್ಯಾಸ್ತೇ ಮಾರ್ಗಾತೀತಾಬಭೂವಿರೇ ।
ದದೃಶುಶ್ಚಿತ್ರಕೂಟಾದ್ರಿಂ ಮಹಾಮುನಿನಿಷೇವಿತಮ್ ॥೫॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಸೀತಾ ರಾಮ ಲಕ್ಷ್ಮಣರು ಚಿತ್ರಕೂಟಪರ್ವತವನ್ನು ಕುರಿತು ಹೋಗುತಿರುವಾಗಲೇ, ಮಹಾವಿಕೃತಮುಖರಾಗಿಯೂ ಘೋರರೂಪರಾಗಿಯೂ ಮಹಾಬಲರಾಗಿಯೂ ಇರುವ ಮೂರುಮಂದಿ ರಾಕ್ಷಸರು, ಬಾಯಲ್ಲಿ ಅಗ್ನಿಜ್ವಾಲೆಯನ್ನು ಬಿಡುತ, ಮುಂದುಗಡೆ ಬಂದು ಇವರ ಮಾರ್ಗವನ್ನು ತಡೆದರು ॥೧॥

ಹೀಗೆ ಅಕಸ್ಮಿಕವಾಗಿ ತಡೆಯಲ್ಪಟ್ಟ ಮಾರ್ಗವುಳ್ಳ ಶ್ರೀರಾಮನು, ಅವರನ್ನು ನೋಡಿದನು; ಆಗ ಮಾರ್ಗನಿರೋಧಮಾಡುತಿರುವ ಅವರನ್ನು ಕಂಡೊಡನೆಯೇ, ಪ್ರಜ್ವಲಿಸುತಿರುವ ಒಂದು ಆಗ್ನೇಯಾಸ್ತ್ರದಿಂದ ಅವರನ್ನು ದಹಿಸಿಬಿಟ್ಟನು ॥೨-೩॥

ಶ್ರೀರಾಮನಿಂದ ಆ ರಾಕ್ಷಸರು ಹತರಾದುದನ್ನು ಕಂಡು, ಶ್ರೀರಾಘವನು ಸ್ವರ್ಗಲೋಕದ ಉಪದ್ರವವನ್ನು ನಾಶಪಡಿಸುವನೆಂದು ತಿಳಿದವರಾಗಿ, ಸಮಸ್ತ ದೇವತೆಗಳೂ ಪುಷ್ಪವೃಷ್ಟಿಯನ್ನು ಮಾಡಿದರು ॥೪॥

ಅನಂತರ, ಆ ಶ್ರೀರಾಮಾದಿಗಳು ನಿರ್ಭಯರಾಗಿ ಮೆಲ್ಲಗೆ ಮಾರ್ಗಕ್ರಮಣಮಾಡುತ ಹೋದರು. ಕ್ರಮೇಣ ಮಹಾಮುನಿಸೇವಿತವಾಗಿರುವ ಚಿತ್ರಕೂಟಪರ್ವತವನ್ನು ಕಂಡವರಾದರು ॥೫॥

ತತ್ರ ಗತ್ವಾ ಸಮಾಸೀನಂ ವಾಲ್ಮೀಕಿಂ ಮುನಿಸತ್ತಮಮ್ ।
ನನಾಮ ಶಿರಸಾ ರಾಮೋ ಲಕ್ಷ್ಮಣೇನ ಚ ಸೀತಯಾ ॥೬॥
ದೃಷ್ಟ್ವಾ ರಾಮಂ ರಮಾನಾಥಂ ವಾಲ್ಮೀಕಿರ್ಲೋಕಸುಂದರಮ್ ।
ಜಾನಕೀಲಕ್ಷ್ಮಣೋಪೇತಂ ಜಟಾಮಕುಟಮಂಡಿತಮ್ ॥೭॥
ಕಂದರ್ಪಸದೃಶಾಕಾರಂ ಕಮನೀಯಾಮ್ಬುಜೇಕ್ಷಣಮ್ ।
ಹರ್ಷೇಣ ಸಹಸೋತ್ತಸ್ಥೌ ವಿಸ್ಮಯಾನಿಮಿಷೇಕ್ಷಣಃ ॥೮॥
ಆಲಿಙ್ಗ್ಯ ಪರಮಾತ್ಮಾನಂ ರಾಮಂ ಬಾಷ್ಪಾಮ್ಬುಲೋಚನಃ ।
ಪೂಜಯಾಮಾಸ ಪೂಜಾರ್ಹಂ ಭಕ್ತ್ಯಾರ್ಘ್ಯಾದಿಭಿರಾದರಾತ್ ॥೯॥
ಏವಂ ಫಲಾದಿಭಿಃ ಸಮ್ಯಕ್ ವಾಲ್ಮೀಕೇರ್ನಾತಿಲಾಲಿತಃ ।
ರಾಘವಃ ಪ್ರಾಞ್ಜಲಿಃ ಪ್ರಾಹ ವಾಲ್ಮೀಕಿಂ ವಿನಯಾನ್ವಿತಃ ॥೧೦॥
ಪಿತುರಾಜ್ಞಾಂ ಪುರಸ್ಕೃತ್ಯ ದಣ್ಡಕಾನಾಗತಾವಯಮ್ ।
ಭವನ್ತೋಪಿ ವಿಜಾನನ್ತಿ ಕಿಂ ವಕ್ತ್ಯವ್ಯತ್ರ ಕಾರಣಮ್ ॥೧೧॥
ಯತ್ರ ಮೇ ಸುಖವಾಸಾಯ ಭವೇತ್ ಸ್ಥಾನಂ ಬ್ರವೀಹಿ ತತ್ ।
ಸೀತಯಾ ಸಹಿತಃ ಕಾಲಂ ಕಞ್ಚಿದತ್ರ ವಸಾಮ್ಯಹಮ್ ॥೧೨॥

ಆ ಚಿತ್ರಕೂಟಪರ್ವತಕ್ಕೆ ಹೋಗಿ, ಅಲ್ಲಿ ಕುಳಿತಿರುವ ವಾಲ್ಮೀಕಿಮಹರ್ಷಿಯನ್ನು, ಲಕ್ಷ್ಮಣನೊಡನೆಯೂ ಸೀತೆಯೊಡನೆಯೂ ಯುಕ್ತನಾಗಿರುವ ಶ್ರೀರಾಮನು, ತಲೆಯನ್ನು ಬೊಗ್ಗಿಸಿ ನಮಸ್ಕರಿಸಿದನು ॥೬॥

ಆಗ, ತ್ರಿಲೋಕಸುಂದರನಾಗಿಯೂ ಜಾನಕೀಲಕ್ಷ್ಮಣಯುಕ್ತನಾಗಿಯೂ ಜಟಾಮಕುಟ ಮಂಡಿತನಾಗಿಯೂ ಮನ್ಮಥಸದೃಶವಿಗ್ರಹನಾಗಿಯೂ ಕಮಲದಂತೆ ಸುಂದರವಾದ ನೇತ್ರವುಳ್ಳ ವನಾಗಿಯೂ ಇರುವ-ಲಕ್ಷ್ಮೀಪತಿಯಾದ ಶ್ರೀರಾಮನನ್ನು ಕಂಡು, ವಿಸ್ಮಯದಿಂದ ರೆಪ್ಪೆಮುಚ್ಚದಿರುವ ಕಣುಳ್ಳವನಾದ ವಾಲ್ಮೀಕಿ ಮಹರ್ಷಿಯು, ಹರ್ಷದಿಂದ ತಟ್ಟನೆ ಎದ್ದು ನಿಂತುಗೊಂಡನು ॥೭-೮॥

ಸನುಸ್ತುರಿಗೂ ಪೂಜನೀಯನಾದ ವಾಲ್ಮೀಕಿಮುನಿಯು, ಪರಮಾತ್ಮನಾದ ಶ್ರೀರಾಮನನ್ನು ಆಲಿಂಗಿಸಿಕೊಂಡು, ಬಾಷ್ಪಪೂರಿತನೇತ್ರನಾಗಿ, ಭಕ್ತಿಪುರಸ್ಸರವಾಗಿಯೂ ಆದರಪೂರ್ವಕವಾಗಿಯೂ ಅರ್ಘ್ಯಾದಿಗಳನ್ನು ಕೊಟ್ಟು ಪೂಜಿಸಿದನು ॥೯॥

ಹೀಗೆ ಫಲಾದಿಗಳನ್ನು ಕೊಟ್ಟು ವಾಲ್ಮೀಕಿಮುನಿಯಿಂದ ಅತಿಯಾಗಿ ಲಾಲಿಸಲ್ಪಟ್ಟ ಶ್ರೀರಾಮನು, ಕೈಮುಗಿದುಕೊಂಡು ವಿನಯಯುಕ್ತನಾಗಿ ವಾಲ್ಮೀಕಿಮುನಿಯನ್ನು ಕುರಿತು 'ಸ್ವಾಮಿ! ಮಹರ್ಷಿವರ್ಯರೆ! ನಾವುಗಳು ತಂದೆಯ ಆಜ್ಞೆಯನ್ನು ಬಹುಮಾನಿಸಿ ದಂಡಕಾವನವನ್ನು ಕುರಿತು ಹೊರಟುಬಂದವರಾಗಿರುವೆವು. ಈ ವಿಷಯವು ತಮಗೂ ತಿಳಿದೇ ಇರುವುದು. ಇದಕ್ಕೆ ಕಾರಣವನ್ನು ನಾನು ಇನ್ನೇಕೆ ಹೇಳಬೇಕು? ಈ ಅರಣ್ಯದಲ್ಲಿ ನನಗೆ ಯಾವ ಕಡೆ ಸುಖನಿವಾಸವಾಗಬಹುದೋ, ಅಂತಹ ಒಂದು ಸ್ಥಾನವನ್ನು ತಾವು ನನಗೆ ಹೇಳಬೇಕು. ತಾವು ಹೇಳುವ

ಇತ್ಯುಕ್ತೋ ರಾಘವೇಣಾಸೌ ಮುನಿಃ ಸಸ್ಮಿತಮಬ್ರವೀತ್ ।
ತ್ವಮೇವ ಸರ್ವಲೋಕಾನಾಂ ನಿವಾಸಸ್ಥಾನಮುತ್ತಮಮ್ ॥೧೩॥
ತವಾಪಿ ಸರ್ವಭೂತಾನಿ ನಿವಾಸಸದನಾನಿ ಹಿ ।
ಏವಂ ಸಾಧಾರಣಂ ಸ್ಥಾನಂ ಉಕ್ತಂ ತೇ ರಘುನನ್ದನ ॥೧೪॥
ಸೀತಯಾ ಸಹಿತಶ್ಚೇತಿ ವಿಶೇಷಂ ಪೃಚ್ಛಸೇ ಯತಃ ।
ತದ್ವಕ್ಷ್ಯಾಮಿ ರಘುಶ್ರೇಷ್ಠ ಯತ್ ತೇ ನಿಯತಮನ್ದಿರಮ್ ॥೧೫॥
ಶಾನ್ತಾನಾಂ ಸಮಚಿತ್ತಾನಾಂ ಮಧ್ಯಸ್ಥಾನಾಂ ಚ ಜನ್ತುಷು ।
ತ್ವಾಮೇವ ಭಜತಾಂ ನಿತ್ಯಂ ಹೃದಯಂ ತೇ ಹಿ ಮನ್ದಿರಮ್ ॥೧೬॥
ಧರ್ಮಾಧರ್ಮಾಂ ಪರಿತ್ಯಜ್ಯ ತ್ವಾಮೇವ ಭಜತೋನಿಶಮ್ ।
ಸೀತಯಾ ಸಹಿತಸ್ಯಾರ್ಯ ಮನಸ್ತೇ ಸುಖಮನ್ದಿರಮ್ ॥೧೭॥
ತ್ವನ್ಮನ್ತ್ರೋಪಕೋ ಯಸ್ತು ತ್ವಾಮೇವ ಶರಣಂ ಗತಃ ।
ನಿರ್ದ್ವನ್ದ್ವೋ ನಿಸ್ಪೃಹಸ್ತಸ್ಯ ಹೃದಯಂ ತೇ ಸುಮನ್ದಿರಮ್ ॥೧೮॥
ನಿರಹಙ್ಕಾರಿಣಃ ಶಾನ್ತಾಃ ರಾಗದ್ವೇಷವಿವರ್ಜಿತಾಃ ।
ಸಮಲೋಷ್ಟಾಶ್ಮಕನಕಾಃ ತೇಷಾಂ ತೇ ಹೃದಯಂ ಗೃಹಮ್ ॥೧೯॥

ಸ್ಥಳದಲ್ಲಿ, ನಾನು ಸ್ವಲ್ಪಕಾಲ ಸೀತಾ ಸಹಿತನಾಗಿ ವಾಸಮಾಡಿಕೊಂಡಿರುವೆನು' ಎಂದು ಹೇಳಿದನು. ಹೀಗೆಂದು ಶ್ರೀರಾಮನಿಂದ ಹೇಳಲ್ಪಟ್ಟ ಆ ವಾಲ್ಮೀಕಿಮುನಿಯು, ಮಂದಹಾಸಯುಕ್ತನಾಗಿ ಶ್ರೀರಾಮನನ್ನು ಕುರಿತು ಹೀಗೆ ಹೇಳಿದನು ॥೧೦-೧೨॥

ಹೇ ರಘುನಂದನ! ಸಮಸ್ತ ಲೋಕಗಳಿಗೂ ನೀನೇ ಮುಖ್ಯವಾದ ವಾಸಸ್ಥಾನವು; ನಿನಗೂ ಸಮಸ್ತಭೂತಗಳೂ ವಾಸಸ್ಥಾನವಾಗಿರುವುದಲ್ಲವೆ! ಹೀಗೆ ನಿನಗೆ ಸಾಮಾನ್ಯವಾದ ವಾಸಸ್ಥಾನವು ಹೇಳಲ್ಪಟ್ಟಂತಾಯ್ತು ॥೧೪॥

ಈಗ ನೀನು 'ಸೀತಾಸಹಿತನಾಗಿ ನಾನು ವಾಸಿಸಬೇಕು' ಎಂದು ವಿಶೇಷವನ್ನು ಕೇಳುತಿರುವೆಯಾದಕಾರಣ, ಹೇ ರಘುಶ್ರೇಷ್ಠ! ನಿನಗೆ ನಿಯತವಾಗಿರುವ ಮನೆಯನ್ನು ಹೇಳುವೆನು ॥

ಶಾಂತರಾಗಿಯೂ ಸಮಚಿತ್ತರಾಗಿಯೂ ಸಕಲಪ್ರಾಣಿಗಳಲ್ಲಿಯೂ ಉದಾಸೀನರಾಗಿಯೂ ಇದ್ದುಗೊಂಡು-ಸರ್ವದಾ ನಿನ್ನನ್ನೇ ಭಜಿಸುತಿರತಕ್ಕವರ ಹೃದಯವು ನಿನಗೆ ವಾಸಸ್ಥಾನವು ॥

ಎಲೈ ಪೂಜ್ಯನಾದ ರಾಮನೆ! ಸಮಸ್ತ ಧರ್ಮಾಧರ್ಮಗಳನ್ನೂ ಪರಿತ್ಯಜಿಸಿ ಸರ್ವದಾ ನಿನ್ನನ್ನೇ ಭಜಿಸುತ್ತಿರುವ ಭಕ್ತನ ಹೃದಯವು, ಸೀತಾಸಹಿತನಾದ ನಿನಗೆ ಸುಖನಿವಾಸಸ್ಥಾನವು ॥೧೬॥

ಯಾವ ಪುರುಷನು, ನಿನ್ನ ಮಂತ್ರವನ್ನು ಜಪಿಸುತ-ನಿನ್ನನ್ನೇ ಮರೆಹೊಕ್ಕವನಾಗಿ-ದ್ವಂದ್ವಾತೀತನಾಗಿಯೂ ನಿಸ್ಪೃಹನಾಗಿಯೂ ಇರುವನೋ, ಅವನ ಹೃದಯವು ನಿನಗೆ ಮನೆಯು ॥೧೭॥

ಯಾರು, ಅಹಂಕಾರಶೂನ್ಯರಾಗಿಯೂ ಶಾಂತರಾಗಿಯೂ ರಾಗದ್ವೇಷರಹಿತರಾಗಿಯೂ ಕಲ್ಲು ಮಣ್ಣು ಚಿನ್ನಗಳಲ್ಲಿ ಸಮಬುದ್ಧಿಯುಳ್ಳವರಾಗಿಯೂ ಇರುವರೋ, ಅವರ ಹೃದಯವು ನಿನಗೆ ಮನೆಯಾಗಿರುವುದು ॥೧೯॥

ತ್ವಯಿ ದತ್ತಮನೋಬುದ್ಧಿಃ ಯಃ ಸನ್ತುಷ್ಟಃ ಸದಾ ಭವೇತ್ ।
ತ್ವಯಿ ಸನ್ಯಸ್ತಕರ್ಮಾ ಯಃ ತನ್ಮನಸ್ತೇ ಶುಭಂ ಗೃಹಮ್ ॥೦೦॥

ಯೋ ನ ದ್ವೇಷ್ಟ್ಯಪ್ರಿಯಂ ಪ್ರಾಪ್ಯ ಪ್ರಿಯಂ ಪ್ರಾಪ್ಯ ನ ಹೃಷ್ಯತಿ ।
ಸರ್ವಂ ಮಾಯೇತಿ ನಿಶ್ಚಿತ್ಯ ತ್ವಾಂ ಭಜೇತ್ ತನ್ಮನೋ ಗೃಹಮ್ ॥೦೧॥

ಷಡ್ಭಾವಾದಿವಿಕಾರಾರ್ಹ ಯೋ ದೇಹೇ ಪಶ್ಯತಿ ನಾತ್ಮನಿ ।
ಕ್ಷುತ್ತೃಡ್ಭಯಂ ಸುಖಂ ದುಃಖಂ ಪ್ರಾಣಬುದ್ಧ್ಯೇರ್ನಿರೀಕ್ಷತೇ ॥೦೨॥

ಆತ್ಮಾನಂ ಸರ್ವದಾ ಪಶ್ಯೇತ್ ಸತ್ಯಜ್ಞಾನಾದಿಲಕ್ಷಣಮ್ ।
ಸಂಸಾರಧರ್ಮೈರ್ನಿರ್ಮುಕ್ತಃ ತಸ್ಯ ತೇ ಮಾನಸಂ ಗೃಹಮ್ ॥೦೩॥

ಪಶ್ಯನ್ತಿ ಯೇ ಸರ್ವಗುಹಾಶಯಸ್ಥಂ ತ್ವಾಂ ಜೀವ್ಯನಂ ಸತ್ಯಮನನ್ತಮೇಕಂ।
ನಭೋಪಮಂಸರ್ವಗತಂವರೇಣ್ಯಂ ತೇಷಾಂ ಹೃದನ್ತೇ ಸಹಸೀತಯಾ ವಸ ॥

ನಿರನ್ತರಾಭ್ಯಾಸದೃಢೀಕೃತಾತ್ಮನಾಂ ತ್ವತ್ಪಾದಸೇವಾಪರಿನಿಷ್ಠಿತಾನಾಮ್ ।
ತ್ವನ್ನಾಮಕೀರ್ತ್ಯಾ ಹತಕಿಲ್ಬಿಷಾಣಾಂ ಸೀತಾಸಮೇತಸ್ಯ ಗೃಹಂಹೃದಬ್ಜಮ್ ॥

ಯಾವನು ನಿನ್ನಲ್ಲಿ ತನ್ನ ಮನಸ್ಸನ್ನೂ ಬುದ್ಧಿಯನ್ನೂ ಇಟ್ಟುಗೊಂಡು ಸರ್ವದಾ ಸಂತುಷ್ಟನಾಗಿರುವನೋ, ಯಾವನು ಸಮಸ್ತ ಕರ್ಮಗಳನ್ನೂ ನಿನ್ನಲ್ಲಿ ಸಮರ್ಪಿಸುವನೋ, ಅವನ ಮನಸ್ಸು ನಿನಗೆ ಪ್ರಶಸ್ತವಾದ ಗೃಹವಾಗಿರುವುದು ॥೨೦॥

ಯಾವನು, ಅಪ್ರಿಯವಾದುದು ಬಂದಾಗ ಅದನ್ನು ದ್ವೇಷಿಸುವುದಿಲ್ಲವೋ, ಪ್ರಿಯವಾದುದು ಬಂದರೆ ಹರ್ಷಪಡುವುದೂ ಇಲ್ಲವೋ, ಪ್ರಿಯಾಪ್ರಿಯಗಳು ಸಮಸ್ತವೂ ಮಾಯೆಯೆಂಬುದಾಗಿ ನಿಶ್ಚಯಿಸಿಕೊಂಡು ನಿನ್ನನ್ನು ಭಜಿಸುವನೋ, ಅವನ ಮನಸ್ಸು ನಿನಗೆ ಮನೆಯು ॥೨೧॥

ಯಾವ ಪುರುಷನು, ಜನನಾದಿ ಷಡ್ಭಾವವಿಕಾರಗಳು ದೇಹಕ್ಕೆ ಮಾತ್ರವಿರುವುವೆಂದೂ ಆತ್ಮನಿಗಿಲ್ಲವೆಂದೂ ತಿಳಿಯುವನೋ, ಕ್ಷುತ್ ತೃಷ್ಣಾ ಭಯ ಸುಖ ದುಃಖಗಳು ಪ್ರಾಣ ಬುದ್ಧಿಗಳಿಗೆ ಸಂಬಂಧಪಟ್ಟುವೆಂದೂ ಆತ್ಮನಿಗಲ್ಲವೆಂದೂ ತಿಳಿಯುವನೋ, ಸರ್ವದಾ ಸರ್ವತ್ರ ಆತ್ಮನು ಸತ್ಯಜ್ಞಾನಾನಂದರೂಪನಾಗಿರುವನೆಂದು ನೋಡುತಿರುವನೋ, ಸಕಲ ಸಂಸಾರಧರ್ಮಗಳಿಂದಲೂ ಮುಕ್ತನಾಗಿರುವನೋ, ಅವನ ಮನಸ್ಸು ನಿನಗೆ ನಿವಾಸಗೃಹವು ॥೨೨-೨೩॥

ಅಯ್ಯಾ! ರಾಘವ! ಯಾರು ನಿನ್ನನ್ನು ಸರ್ವಾಂತರ್ಯಾಮಿಯೆಂದೂ ಜ್ಞಾನಘನನೆಂದೂ ಸತ್ಯನೆಂದೂ ಅನಂತನೆಂದೂ ಅದ್ವಿತೀಯನೆಂದೂ ಆಕಾಶದಂತೆ ನಿರ್ಲೇಪನೆಂದೂ ಸರ್ವಗತನೆಂದೂ ಪ್ರಶಸ್ತಮನೆಂದೂ ತಿಳಿಯುವರೋ, ಅಂಥವರ ಹೃದಯದಲ್ಲಿ ನೀನು ಸೀತೆಯೊಡನೆ ವಾಸಮಾಡಿಕೊಂಡಿರು ॥೨೪॥

ನಿರಂತರವಾದ ಅಭ್ಯಾಸಾತಿಶಯದಿಂದ ನಿನ್ನಲ್ಲಿ ಮನಸ್ಸನ್ನು ಸ್ಥಿರವಾಗಿಟ್ಟುಗೊಂಡು-ನಿನ್ನ ಪಾದಸೇವೆಯಲ್ಲಿ ನಿಷ್ಠರಾಗಿ-ನಿನ್ನ ನಾಮಸಂಕೀರ್ತ್ತನದಿಂದ ಪಾಪವನ್ನು ಕಳೆದುಕೊಂಡಿರತಕ್ಕವರ ಹೃದಯಕಮಲವು, ಸೀತಾಸಹಿತನಾದ ನಿನಗೆ ನಿಲಯವು ॥೨೫॥

ವ್ಯತ್ಯಸ್ತಾದಪಿ ತೇ ನಾಮ್ನೋ ಬ್ರಹ್ಮರ್ಷಿತ್ವಮಗಾಂ ಯತಃ ।
ನೀಚೋಽಪಿ ರಾಮ ತೇ ನಾಮ್ನೋ ಮಹಿಮಾ ಕೇನ ವರ್ಣ್ಯತೇ ॥೨೬॥

ಇತಿ ರಾಮಂ ಪ್ರಶಸ್ಯಾಹ ವಾಲ್ಮೀಕಿಸ್ತತ್ವವಿತ್ ಪುನಃ ।
ಮಯಿ ಪ್ರೀತ್ಯಾ ಸದಾರೋಸ್ಮಿನ್ ಚಿತ್ರಕೂಟೇ ವಸಾಚಲೇ ॥೨೭॥

ರಾಮೋ ಭಕ್ತಪರಾಧೀನಃ ತದಙ್ಗೀಕೃತ್ಯ ಸಾಧ್ವಿತಿ ।
ತತ್ರ ವಾಸಂ ಮುದಾ ಚಕ್ರೇ ಲೋಕಾನುಗ್ರಹಕಾಮ್ಯಯಾ ॥೨೮॥

ತಸ್ಮಾದದ್ಯಾಪಿ ತಚ್ಛೈಲಂ ರಾಮಃ ಸೀತಾನುಜಾನ್ವಿತಃ ।
ಸುಖಮಾಸ್ತೇ ಸ್ವಭಕ್ತಾನಾಂ ಭುಕ್ತಿಮುಕ್ತಿಪ್ರದಾಯಕಃ ॥೨೯॥

ಶ್ರೀಪಾರ್ವತ್ಯುವಾಚ.

ಮನ್ಮಾಥ ಕರುಣಾಸಿನ್ಧೋ ರಾಮವ್ಯತ್ಯಸ್ತನಾಮತಃ ।
ನೀಚೋಽಪಿ ಮುಕ್ತತಾಂ ಪ್ರಾಪ್ತಃ ಕಥಂ ತದ್ಬ್ರೂಹಿ ಕಙ್ಕರ ॥೩೦॥
ಸ ವಾಲ್ಮೀಕಿಃ ಪುರಾ ಕೋ ವಾ ತಂ ಚ ಬ್ರೂಹಿ ವಿಶೇಷತಃ ।
ರಾಮಗಾಥಾಸುಧಾಪಾನೇ ನ ತೃಪ್ತಿರ್ಮೇಸ್ತಿ ಕಙ್ಕರ ॥೩೧॥

ರಾಮಭದ್ರ! ನಾನು ಪರಮನೀಚನಾಗಿದ್ದರೂ, ವ್ಯತ್ಯಸ್ತವಾಗಿ ಜಪಿಸಲ್ಪಟ್ಟುದಾದರೂ ನಿನ್ನ ನಾಮದ ಮಹಿಮೆಯಿಂದ ಬ್ರಹ್ಮರ್ಷಿತ್ವವನ್ನು ಹೊಂದಿರುವೆನೆಲ್ಲವೆ! ಹೀಗಿರುವಾಗ, ನಿನ್ನ ಮಹಿಮೆಯನ್ನು ವರ್ಣಿಸುವುದು ಯಾರಿಗೆ ಸಾಧ್ಯವು? ॥೨೬॥

ಹೀಗೆಂದು ಶ್ರೀರಾಮನನ್ನು ಶ್ಲಾಘಿಸಿ, ತತ್ವಜ್ಞನಾದ ವಾಲ್ಮೀಕಿಮುನಿಯು, ಪುನಃ ರಾಮನನ್ನು ಕುರಿತು 'ರಾಮಚಂದ್ರ! ನನ್ನಮೇಲೆ ಪ್ರೀತಿಯಿಟ್ಟು ಈ ಚಿತ್ರಕೂಟಪರ್ವತದಲ್ಲಿ ಪತ್ನೀಸಹಿತನಾಗಿ ವಾಸವಮಾಡಿಕೊಂಡಿರು' ಎಂಬುದಾಗಿ ಹೇಳಿದನು ॥೨೭॥

ಭಕ್ತಪರಾಧೀನನಾದ ರಾಮನು, ಅದನ್ನೇ ಚೆನ್ನಾಗಿದೆಯೆಂದೊಪ್ಪಿಗೊಂಡು, ಲೋಕಾನುಗ್ರಹಾರ್ಥವಾಗಿ ಅಲ್ಲಿಯೇ ಸಂತೋಷದಿಂದ ವಾಸವಮಾಡಿಕೊಂಡಿದ್ದನು ॥೨೮॥

ಆದುಕಾರಣ, ಈಗಲೂ ಆ ಚಿತ್ರಕೂಟಪರ್ವತದ ಶಿಖರದಲ್ಲಿ ಶ್ರೀರಾಮನು ಸೀತಾ ಲಕ್ಷ್ಮಣ ಸಹಿತನಾಗಿ ತನ್ನ ಭಕ್ತರಿಗೆ ದರ್ಶನಮಾತ್ರದಿಂದ ಭುಕ್ತಿಮುಕ್ತಿಗಳನ್ನು ಕೊಡುತ ಸುಖವಾಗಿ ವಾಸವಮಾಡಿಕೊಂಡಿರುವನು ॥೨೯॥

ಹೀಗೆ ಹೇಳುತಿರುವ ಪರಮೇಶ್ವರನನ್ನು ಕುರಿತು ಪಾರ್ವತಿಯು ಪ್ರಶ್ನೆಮಾಡುವಳು:—

ಎಲೈ ನನ್ನೊಡೆಯನೆ! ಕರುಣಾಸಾಗರನೆ! ಶಂಕರನೆ! ರಾಮನಾಮವನ್ನು ವ್ಯತ್ಯಸ್ತವಾಗಿ ಜಪಿಸಿ ನೀಚನೂ ಮುಕ್ತಿಹೊಂದಿದನೆಂಬುದು ಹೇಗೆ? ಅದನ್ನು ಅಪ್ಪಣೆಕೊಡಿಸುವನಾಗು॥

ಮತ್ತು, ಆ ವಾಲ್ಮೀಕಿಯು ಪೂರ್ವದಲ್ಲಿ ಯಾರಾಗಿದ್ದನು? ಅದನ್ನು ನನಗೆ ವಿಶೇಷವಾಗಿ ಅಪ್ಪಣೆಕೊಡಿಸು. ಹೇ ಶಂಕರ! ಶ್ರೀರಾಮಕಥೆಯೆಂಬ ಅಮೃತವನ್ನು ಪಾನಮಾಡುವ ವಿಷಯದಲ್ಲಿ ನನಗೆ ಎಷ್ಟಾದರೂ ತೃಪ್ತಿಯುಂಟಾಗುವುದಿಲ್ಲ ॥೩೧॥

ಶ್ರೀ ಶಿವಉವಾಚ.

ಸಾಧು ಪೃಷ್ಟಂ ಸುರಾಧೀಶೇ ಪ್ರಿಯಾ ರಾಮಕಥಾ ತವ ।
ತಾಂ ವಕ್ಷ್ಯೇ ಸರ್ವಪಾಪಘ್ನೀಂ ಸಾವಧಾನಮನಾಃ ಶೃಣು ॥೩೦॥
ಅತ್ರಾಪ್ಯುದಾಹರನ್ತೀಮಂ ಇತಿಹಾಸಂ ಪುರಾತನಮ್ ।
ವಾಲ್ಮೀಕೇರ್ಮುನಿಸಿಂಹಸ್ಯ ಪುಳಿನ್ದಕುಲಜನ್ಮನಃ ॥೩೧॥
ದ್ವಾದಶಾಬ್ದಮನಾವೃಷ್ಟಿಃ ಅಭೂದ್ಭೂಮಂಡಲೇ ಪುರಾ ॥೩೪॥
ಔಷಧೀಷು ಚ ಸರ್ವೀಷು ಕ್ಷಯಂ ಯಾತೀಷು ಸರ್ವತಃ ।
ವೃತ್ತೀಹೀನೇ ಚ ಜಗತಿ ಪ್ರಾಣಿನಾಂ ಪ್ರಾಣಸಙ್ಕಟೇ ।
ನಪ್ತರ್ಯೋ ದೀಪ್ತಿಮನ್ತೋ ಹಿಮವನ್ತಂ ಯಯುಃ ಕಿಲ ॥೩೫॥
ಕಾನನೇ ಗಹನೇ ತತ್ರ ಝಿಲ್ಲಿಕಾಗಣನಾದಿತೇ ।
ಚೋರವ್ಯಾಳಭಯಾಕೀರ್ಣೇ ಭಲ್ಲೂಕೈರಥ ವಾನರೈಃ ॥೩೬॥
ಕ್ವಾಸದೈಭೋರ್ಮರಸಬ್ಯಾಕ್ಷೈಃ ಆಕೀರ್ಣೇ ಹರಿಣೇಗಣೈಃ ।
ಸೂಕರೈಶ್ಚ ಏವ ಸಾರಙ್ಗೈಃ ದುರ್ಭೇದ್ಯೇ ದೇವದಾನವೈಃ ॥೩೭॥
ತತ್ರ ಕಶ್ಚಿತ್ ಪುಳನ್ದೋಭೂತ್ ಚೋರಾಣಾಮಧಿಪಃ ಪ್ರಭುಃ ।
ಚೋರವೃಾರ್ಗವಿದವ್ಯಗ್ರೋ ನಿಷ್ಠುರಃ ಕಠಿನಾಶಯಃ ॥೩೮॥

ಶ್ರೀಪರಮೇಶ್ವರನು ಉತ್ತರಹೇಳುವನು .—

ಎಲೌ ಸುರಾಧೀಶಳೆ! ನೀನು ಬಲುಚೆನ್ನಾಗಿ ಪ್ರಶ್ನೆಮಾಡಿದೆ; ನಿನಗೆ ಶ್ರೀರಾಮನ ಕಥೆಯು ಅತಿಪ್ರಿಯವಾದುದು. ಸಕಲ ಪಾಪವನ್ನೂ ನಾಶಪಡಿಸತಕ್ಕ ಆ ರಾಮಕಥೆಯನ್ನು ನಾನು ಈಗ ನಿನಗೆ ಹೇಳುವೆನು ; ಸಾವಧಾನಚಿತ್ತಳಾಗಿ ಕೇಳುವಳಾಗು ॥೩೦॥

ಈ ವಿಷಯದಲ್ಲಿ, ಬೇಡರ ವಂಶದಲ್ಲಿ ಹುಟ್ಟಿದ್ದ ವಾಲ್ಮೀಕಿಮಹರ್ಷಿಯ ಪೂರ್ವಜನ್ಮ ವೃತ್ತಾಂತವನ್ನು, ಪ್ರಾಜ್ಞರು ಈರೀತಿಯಾಗಿ ಹೇಳುವರು ॥೩೧॥

ಪೂರ್ವದಲ್ಲಿ, ಭೂಮಂಡಲದೊಳಗೆ ಹನ್ನೆರಡುವರ್ಷಕಾಲ ಅನಾವೃಷ್ಟಿ ಸಂಭವಿಸಿತು. ಆಗ, ಸಮಸ್ತವಾದ ಓಷಧಿಗಳೂ ಎಲ್ಲಾ ಕಡೆಯಲ್ಲಿಯೂ ಕ್ಷಯಿಸಿಹೋಗಿರಲಾಗಿ, ಜಗತ್ತೆಲ್ಲವೂ ಜೀವನರಹಿತವಾಗಿರಲು, ಸಕಲ ಪ್ರಾಣಿಗಳಿಗೂ ಪ್ರಾಣಸಂಕಟವುಂಟಾಗಲಾಗಿ, ಮಹಾತೇಜಸ್ವಿಗಳಾದ ಸಪ್ತರ್ಷಿಗಳು ಹಿಮವತ್ಪರ್ವತಕ್ಕೆ ಹೋದರಂತೆ! ॥೩೪—೩೫॥

ಆಗ ಮಾರ್ಗಮಧ್ಯದಲ್ಲಿ, ದೊಡ್ಡದೊಂದು ಗಹನವಾದ ಅರಣ್ಯವು ಸಿಕ್ಕಿತು. ಆ ಅರಣ್ಯದಲ್ಲಿ, ಝಿಲ್ಲರಿಗಳೆಂಬ ಪಕ್ಷಿಗಳು ಧ್ವನಿಮಾಡುತಿದ್ದುವು; ಕಳ್ಳರೂ ಕಾಡಾನೆಗಳೂ ವಿಶೇಷವಾಗಿ ಭಯವುಂಟುಮಾಡುತಿದ್ದುವು; ಕರಡಿಗಳೂ, ಕೋತಿಗಳೂ, ಕ್ರೂರವಾದ ಮೃಗಗಳೂ, ಹರಿಣೇ ಸಮೂಹಗಳೂ, ಹಂದಿಗಳೂ, ಸಾರಂಗಗಳೂ, ಆ ಕಾಡಿನಲ್ಲಿ ತುಂಬಿದ್ದುವು; ಸಕಲ ದೇವಾಸುರರೂ ಅದರೊಳಗೆ ಪ್ರವೇಶಿಸುವುದಕ್ಕೆ ಅಸಮರ್ಥರಾಗಿದ್ದರು. ಇಂತಹ ಆ ಕಾಡಿನಲ್ಲಿ, ಚೋರರಿಗೆಲ್ಲ ಒಡೆಯನಾಗಿಯೂ-ಎಂತಹ ಕೆಲಸದಲ್ಲಿಯಾದರೂ ಸಮರ್ಥನಾಗಿಯೂ-ಕಳ್ಳತನದಲ್ಲಿ ಜಾಣನಾಗಿಯೂ-ಯಾವುದಕ್ಕೂ ಹೆದರದವನಾಗಿಯೂ-ಅತಿಕ್ರೂರನಾಗಿಯೂ-ಅತಿಕಠಿನವಾದ ಆಶಯವುಳ್ಳವನಾಗಿಯೂ ಇದ್ದ-ಒಬ್ಬ ಬೇಡರವನಿದ್ದನು ॥೩೬—೩೮॥

ನಿರ್ದಯೋ ಧರ್ಮರಹಿತೋ ಹಿಂಸ್ರಶ್ಚೌದನತತ್ಪರಃ ।
ದೀರ್ಘಕಾಯೋ ದೀರ್ಘಬಾಹುಃ ಚೋರವೇಷಸಮನ್ವಿತಃ ॥೩೯॥

ಶನೈಶ್ಚನೈಃ ಸ ಕುಞ್ಜಾನಾಂ ಪಾರ್ಶ್ವಭಾಗೇಭಿಸಞ್ಜರ್ಜ ।
ಆಕರ್ಣಪೂರ್ಣಬಾಣಶ್ಚ ಸಾಕ್ಷಾನ್ಮೃತ್ಯುರಿವಾಗತಃ ॥೪೦॥

ಉಜ್ಜ್ವಲಾಙ್ಗಾ ಮಹಾಭಾಗಾ ಸೂರ್ಯಪಾವಕವರ್ಚಸಃ ।
ಸಪ್ತರ್ಷೀ ಸ ದದರ್ಶಾಗ್ರೇ ಧೃತಹಸ್ತಾಕ್ಷಮಾಲಿಕಾ ॥೪೧॥

ದೃಷ್ಟ್ವೈತಾಂಶ್ಚ ಮಹಾಭಾಗಾ ಆನನ್ದೇನ ಪರಿಪ್ಲುತಃ ॥೪೨॥

ಅದ್ಯೈತಾ ವಿಪ್ರವೇಷಸ್ಥಾ ಮಹಾದ್ರವ್ಯಾಪಹಾರಿಣಃ ।
ಮಮ ಚಾಪಚ್ಯುತೈರ್ಬಾಣೈಃ ಹನಿಷ್ಯೇ ನೇಹ ಸಂಶಯಃ ॥೪೩॥

ದ್ರವ್ಯಂ ಬಹು ಸುಲಬ್ಧಂ ಮೇ ಕುಟುಮ್ಬಭರಣಕ್ಷಮಮ್ ।
ಇತಿ ಬ್ರುವ ಪುಳಿನ್ದೋ ಹಿ ತೇಷಾಂ ದೃಷ್ಟಿಪಥಂ ಗತಃ ॥೪೪॥

ಆ ಬೇಡನು, ಸುತರಾಂ ನಿರ್ದಯನಾಗಿದ್ದನು; ಯಾವ ಧರ್ಮವನ್ನೂ ಅವನು ಸ್ವಲ್ಪವೂ ಯೋಚಿಸುತ್ತಿರಲಿಲ್ಲ; ಕೇವಲ ಹಿಂಸಾಪರನಾಗಿದ್ದನು; ಯಾವುದನ್ನು ಕಂಡರೂ ಕತ್ತರಿಸುತಿದ್ದನು. ದೊಡ್ಡದೇಹವುಳ್ಳವನಾಗಿಯೂ, ದೀರ್ಘಬಾಹುವಾಗಿಯೂ ಇದ್ದನು; ಖಡ್ಗವನ್ನೂ ತೂಣೀರವನ್ನೂ ಧನುಸ್ಸನ್ನೂ ಧರಿಸಿದ್ದನು. ಪಿಂಗಳ(ಹೊಂಬಣ್ಣ)ನೇತ್ರನಾಗಿಯೂ, ಬಲು ಕೆಟ್ಟವನಾಗಿಯೂ, ಕ್ರೂರನಾಗಿಯೂ, ಚೋರರಿಗುಚಿತವಾದ ವೇಷವನ್ನು ಧರಿಸಿದವನಾಗಿಯೂ ಇದ್ದನು ॥೩೯॥

ಇಂತಹ ಆ ವ್ಯಾಧನು, ಮೆಲ್ಲಮೆಲ್ಲಗೆ ಪೊದೆಗಳ ಮಗ್ಗುಲಿನಲ್ಲಿ ಸಂಚರಿಸುತ, ಕರ್ಣಪರ್ಯಂತವಾಗಿ ಬಾಣವನ್ನು ಸೆಳೆದು ಹಿಡಿದುಕೊಂಡು, ಸಾಕ್ಷಾತ್ತಾಗಿ ಮೃತ್ಯುದೇವತೆಯೋಪಾದಿಯಲ್ಲಿ ಅಲ್ಲಿಗೆ ಬಂದನು ॥೪೦॥

ಆಗ, ಮಹಾಪ್ರಕಾಶವಾದ ಶರೀರವುಳ್ಳವರಾಗಿಯೂ ಅಗ್ನಿಸೂರ್ಯಸದೃಶವಾದ ತೇಜಸ್ಸುಳ್ಳವರಾಗಿಯೂ ಕೈಯಲ್ಲಿ ಜಪಸರವನ್ನು ಹಿಡಿದುಕೊಂಡಿರುವರಾಗಿಯೂ ಇದ್ದ ಮಹಾನುಭಾವರಾದ ಸಪ್ತರ್ಷಿಗಳನ್ನು ಕಂಡನು ॥೪೧॥

ಇಂತಹ ಆ ಸಪ್ತರ್ಷಿಗಳನ್ನು ಕಂಡು, ಆ ವ್ಯಾಧನು, ಆನಂದಯುಕ್ತನಾಗಿ 'ಇವರು ಯಾರೋ ಬ್ರಾಹ್ಮಣವೇಷಧಾರಿಕೊಂಡು ಹೆಚ್ಚಾಗಿ ಧನವನ್ನು ಅಪಹರಿಸಿಕೊಂಡು ಹೋಗುತಿರುವರು, ಇವರನ್ನು ಈಗ ನನ್ನ ಧನುಸ್ಸಿನಿಂದ ಬಾಣಗಳನ್ನು ಬಿಟ್ಟು ಹೊಡೆಯುವೆನು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ನನ್ನ ಕುಟುಂಬವನ್ನೆಲ್ಲ ಜೀನ್ನಾಗಿ ಕಾಪಾಡುವುದಕ್ಕೆ ಸಾಕಾದಷ್ಟು ಅಧಿಕವಾದ ದ್ರವ್ಯವು ಈಗ ನನಗೆ ಸಿಕ್ಕಿತು.' ಎಂದು ಹೇಳುತ, ಆ ಸಪ್ತರ್ಷಿಗಳ ಕಣ್ಣೆದುರಿಗೆ ಹೋದನು ॥೪೨—೪೪॥

ತೇಪಿ ದೃಷ್ಟ್ವಾ ಮಹಾಭಾಗಾಃ ಹಠಾನ್ಮಾರ್ಗಪ್ರರೋಧಕಮ್ ।
ಲೋಕಾನಾಮಾರ್ತಿಜನನಂ ಯಮದೇವಮಿವ ಸ್ಥಿತಮ್ ॥೪೫॥
ಅನ್ಯೋನ್ಯಜಲ್ಪನಂ ಚಕ್ರುಃ ತಂ ದೃಷ್ಟ್ವಾ ಮುನಯೋನ್ತಕಮ್ ।
ಕಿಮತ್ರ ಕರಣೀಯಂ ನಃ ಚೋರೋಯಂ ಸಮುಪಾಗತಃ ॥೪೬॥
ಇತಿ ತಾ೯ ಗದತೋ ದೃಷ್ಟ್ವಾ ಛಿನ್ದಿ ಭಿನ್ದೀತಿ ನಾದಯ೯ ।
ಮುನೀನಾಮನ್ತಿಕಂ ಪ್ರಾಪ್ತೋ ಜಘಾಂಸುಃ ಕಠಿನಃ ಶಠಃ ॥೪೭॥
ತಂ ದೃಷ್ಟ್ವಾ ಮುನಯಃ ಸರ್ವೇ ಸಮಾಭಾಷ್ಯ ಪರಸ್ಪರಮ್ ।
ತದೈವಂ ವಕ್ತುಮುದ್ಯುಕ್ತಾಃ ವೇಪಮಾನಾಃ ಸ್ವಮಾನಸೇ ॥೪೮॥
ಸಹ್ಯಾಪದಿ ವಿಮುಹ್ಯನ್ತಿ ಕುಶಲಾಬುದ್ಧಿಜೀವಿನಃ ।
ಯೇನಕೇನಾಪ್ಯುಪಾಯೇನ ಪ್ರತರನ್ತಿ ಮನೀಷಿಣಃ ॥೪೯॥
ಇತ್ಯಾಲೋಚ್ಯ ತತಃ ಸರ್ವೇ ತಸ್ಮಿಂಶ್ಚೋರೇ ಚ ಶೃಣ್ವತಿ ।
ವೈರಾಗ್ಯಸಹಿತಂ ತತ್ತ್ವಂ ಊಚುಸ್ತದ್ಬೋಧನಾಯ ತೇ ॥೫೦॥
ಸ್ವಲ್ಪಮಪ್ಯಾಪದಂ ಪ್ರಾಪ್ಯ ನೀಚಾಃ ಪರಿಭವನ್ತಿ ಹಿ ।
ಪದ್ಮಪತ್ರಸ್ಥಜಲವತ್ ಜೀವಿತಂ ಚಞ್ಚಲಂ ಸ್ಮೃತಮ್ ॥೫೧॥

ಅವರೂ ಕೂಡ, ಹಠಾತ್ತಾಗಿ ಮಾರ್ಗವನ್ನು ತಡೆಯುತಿರುವ- ಲೋಕಕ್ಕೆಲ್ಲ ಪೀಡಾಕರನಾದ– ಸಾಕ್ಷಾದ್ಯಮನಂತೆ ನಿಂತಿರುವ–ಅವನನ್ನು ಕಂಡು, ಪರಸ್ಪರವಾಗಿ ' ಈ ಕಳ್ಳನು ಬಂದಿರುವನಲ್ಲ! ಈಗ ನಾವೇನುಮಾಡತಕ್ಕುದು? ' ಎಂದು ಮಾತನಾಡಿಕೊಂಡರು ॥೪೫— ೪೬॥

ಹೀಗೆ ಅವರು ಮಾತನಾಡಿಕೊಳ್ಳುತಿರುವುದನ್ನು ನೋಡಿ, ಮಹಾಕ್ರೂರನೂ ಶಠನೂ ಆದ ಆ ವ್ಯಾಧನು, ಕತ್ತರಿಸು–ಸೀಳು-ಎಂಬ ಶಬ್ದಗಳನ್ನು ಹೇಳುತ, ಆ ಮುನಿಗಳನ್ನು ಕೊಲ್ಲಬೇಕೆಂದು ಅವರ ಹತ್ತಿರಕ್ಕೆ ಬಂದನು ॥೪೭॥

ಹೀಗೆ ಅವನು ತಮ್ಮನ್ನು ಕೊಲ್ಲಲು ಬರುತಿರುವುದನ್ನು ಕಂಡು ನಡುಗುತಿರುವ ಆ ಸಮಸ್ತ ಮುನಿಗಳೂ, ತಮ್ಮ ಮನಸ್ಸಿನಲ್ಲಿ ' ಕುಶಲರಾಗಿಯೂ ತಮ್ಮ ಬುದ್ಧಿಯಿಂದ ಜೀವಿಸತಕ್ಕವರಾಗಿಯೂ ಇರುವವರು, ಎಂತಹ ಆಪತ್ತು ಬಂದರೂ ಬುದ್ಧಿಯಲ್ಲಿ ಭ್ರಮಣೆಯುಳ್ಳವರಾಗುವುದಿಲ್ಲ; ಯಾವದಾದರೊಂದುಪಾಯದಿಂದ, ಬುದ್ಧಿವಂತರಾದವರು ಬಂದ ವಿಪತ್ತನ್ನು ಕಳೆದುಕೊಳ್ಳುವರು. ' ಎಂದು ಆಲೋಚಿಸಿ, ಪರಸ್ಪರವಾಗಿ ಮಾತನಾಡಿಕೊಂಡು, ಆ ಕಳ್ಳನು ಕೇಳುವ ಹಾಗೆಯೇ, ಅವನಿಗೆ ಜ್ಞಾನೋದಯವುಂಟಾಗುವುದಕ್ಕೋಸ್ಕರ, ಈರೀತಿಯಾಗಿ ವೈರಾಗ್ಯಯುಕ್ತವಾದ ವಚನವನ್ನು ಹೇಳಿದರು ॥೪೮— ೫೦॥

ಲೋಕದಲ್ಲಿ, ನೀಚರಾದವರು, ತಮಗೆ ಸ್ವಲ್ಪ ತೊಂದರೆ ಸಂಭವಿಸಿದರೂ ಕೂಡ, ಅದನ್ನು ತೀರಿಸಿಕೊಳ್ಳುವುದಕ್ಕಾಗಿ ಇತರರನ್ನು ಹಿಂಸಿಸುವರು. ಯಾವ ಜೀವಿತಕ್ಕಾಗಿ ಇಷ್ಟು ಅಧ್ವನವನ್ನು ಮಾಡುವರೋ, ಆ ಜೀವಿತವು ತಾವರೆಯೆಲೆಯ ಮೇಲಿನ ನೀರುಹನಿಯಂತೆ ಚಂಚಲವಾದುದೆಂದು ಸುಪ್ರಸಿದ್ಧವಾಗಿಯೇ ಇರುವುದು! ॥೫೧॥

ತಾದೃಶಂ ಚ ಶರೀರಂ ಹಿ ಜಲಬುದ್ಬುದಸನ್ನಿಭಮ್ ।
ಭೋಗಾಶ್ಚ ವಿವಿಧಾಕಾರಾಃ ದೃಶ್ಯನ್ತೇ ವೈದ್ಯುತೋಪಮಾಃ ॥೫೦॥

ಅಭ್ರಚ್ಛಾಯಾಃ ಶ್ರಿಯಃ ಸರ್ವಾಃ ಚಞ್ಚಲಾಶ್ಚ ಕ್ಷಯಿಷ್ಣವಃ ।
ಯೌವನಂ ಗತ್ವರಂ ಶೀಘ್ರಂ ಅಯುಶ್ಚಾತೀವ ಚಞ್ಚಲಮ್ ॥೫೧॥

ಶರೀರಂ ಜರ್ಜುರಂ ದುಷ್ಟಂ ತಾಪತ್ರಯವಿದೂಷಿತಮ್ ।
ಶೋಕದಂ ದುಃಖದಂ ಕ್ರೂರಂ ಪಾತ್ರಂ ಮೂತ್ರಪುರೀಷಯೋಃ ॥೫೨॥

ಅಸ್ಥಿಸ್ತಮ್ಭಂ ಸ್ನಾಯುಬದ್ಧಂ ಮಾಂಸಕ್ಷತಜಲೇಪನಮ್ ।
ಚರ್ಮಾವನದ್ಧಂ ದುರ್ಗನ್ಧಿ ಶೋಕಮನ್ದಿರಮಾತುರಮ್ ।
ಅಶುಚಿಸ್ರಾವಿ ಸಚ್ಛಿದ್ರಂ ಪಿತ್ತಶ್ಲೇಷ್ಮವಿದೂಷಿತಮ್ ॥೫೩॥

ಅಧರ್ಮಾಂ ಚರತಾಂ ನೂನಂ ಪರಲೋಕೋ ಹಿ ಭಜ್ಯತೇ ।
ಪರಲೋಕವಿಹೀನಾನಾಂ ನರಕೇ ನಿಯತಾ ಸ್ಥಿತಿಃ ॥೫೪॥

ನರಕಾನುಭವಾದನ್ಯತ್ ಕಿಮಶ್ರೇಯೋ ಭವೇನ್ನೃಣಾಮ್ ॥೫೫॥

ಶರೀರವೂ ಹಾಗೆಯೇ ನೀರಿನ ಗುಳ್ಳೆಗೆ ಸಮಾನವಾಗಿರುವುದು. ನಾನಾವಿಧವಾದ ಭೋಗಗಳೂ ಮಿಂಚಿನ ಹೊಳಪಿನಂತೆ ಕ್ಷಣಕಾಲ ಮಾತ್ರ ಕಾಣಿಸಿಕೊಳ್ಳುವುವು ॥೫೦॥

ಸಕಲವಿಧವಾದ ಸಂಪತ್ತುಗಳೂ, ಮೇಘದ ನೆಳಲಿನಂತೆ ಹಾರಿಹೋಗತಕ್ಕುವುಗಳಾಗಿಯೂ ನಶ್ವರಗಳಾಗಿಯೂ ಇರುವುವು. ಯೌವನವು ಬೇಗನೆ ಹೊರಟುಹೋಗುವುದು. ಆಯುಸ್ಸಂತು ಅತ್ಯಂತ ಚಂಚಲವಾದುದು ॥೫೧॥

ಶರೀರವೆಂಬುದು, ಎಂದಿಗಾದರೂ ಜರ್ಝರವಾಗಿ ಹೋಗತಕ್ಕುದು; ಅತಿದೋಷಯುಕ್ತವಾದುದು; ತಾಪತ್ರಯದಿಂದ ಪೀಡಿತವಾದುದು; ಅನೇಕವಿಧವಾದ ದುಃಖವನ್ನೂ ಶೋಕವನ್ನೂ ಕೊಡತಕ್ಕುದು; ಬಹುಕ್ರೂರವಾದುದು; ಮಲಮೂತ್ರಗಳಿಗೆ ಪಾತ್ರವಾಗಿರತಕ್ಕುದು ಅಸ್ಥಿಪಂಜರವು ಇದರಲ್ಲಿ ಕಂಬದಂತೆ ಆಸರೆಯಾಗಿರುವುದು; ನರದಿಂದ ಬದ್ಧವಾಗಿರುವುದು; ರಕ್ತಮಾಂಸಗಳಿಂದ ಲಿಪ್ತವಾಗಿರುವುದು; ಚರ್ಮದಿಂದ ಮೇಲೆ ಆಚ್ಛಾದಿಸಲ್ಪಟ್ಟಿರುವುದು; ಅತಿದುರ್ಗಂಧಮಯವಾಗಿರುವುದು; ಶೋಕಕ್ಕೆ ತವರುಮನೆಯಾದುದು; ಸರ್ವದಾ ರೋಗಾಕ್ರಾಂತವಾಗಿರುವುದು; ಅಪರಿಶುದ್ಧವಾದ ಮಲಮೂತ್ರಾದಿಗಳನ್ನು ನಿರಂತರವಾಗಿ ಸುರಿಯಿಸುತ್ತಿರುವುದು; ಸುತ್ತಲೂ ಅನೇಕವಾಗಿ ರಂಧ್ರವುಳ್ಳದಾಗಿರುವುದು; ಪಿತ್ತದಿಂದಲೂ ಶ್ಲೇಷ್ಮದಿಂದಲೂ ದೂಷಿತವಾಗಿರುವುದು ॥೫೪— ೫೫॥

ಇಂತಹ ದೇಹಕ್ಕಾಗಿ ಅಧರ್ಮವನ್ನಾಚರಿಸತಕ್ಕ ಪುರುಷರಿಗೆ ಪರಲೋಕವು ಭಗ್ನವಾಗುವುದು; ಪರಲೋಕಹೀನರಾದವರಿಗೆ ನರಕದಲ್ಲಿ ಶಾಶ್ವತವಾಗಿ ಸ್ಥಿತಿಯುಂಟಾಗುವುದು. ಈ ನರಕಾನುಭವಕ್ಕಿಂತಲೂ ಬೇರೆಯಾದ ಯಾವ ಅಶ್ರೇಯಸ್ಸು ಮನುಷ್ಯರಿಗಿರುವುದು? ॥೫೬-೫೭॥

ಬ್ರಾಹ್ಮಣದ್ರವ್ಯಹರಣಾತ್ ಬ್ರಾಹ್ಮಣಾನಾಂ ವಿಹಿಂಸನಾತ್ ।
ಬ್ರಾಹ್ಮಣಕ್ಷೋಭಕರಣಾತ್ ಕಿಮನ್ಯತ್ ಪಾತಕಂ ನೃಣಾಮ್ ॥೫೪॥

ಬ್ರಹ್ಮಹತ್ಯಾ ಸುರಾಪಾನ ಸ್ತೇಯ ಗುರ್ವಙ್ಗನಾಗಮಾಃ ।
ವಿಪ್ರವಿತ್ತಾಪಹರಣಕಲಾಂ ನಾರ್ಹನ್ತಿ ಷೋಡಶೀಮ್ ॥೫೫॥

ವಿಪ್ರವಿತ್ತಾಗ್ನಿರೇಕೋ ಹಿ ಧರ್ಮಪರ್ವತಮೂಲಿಕಾಮ್ ।
ಸಮೂಲಂ ಸ್ಪರ್ಶನಾದೇವ ಭಸ್ಮಶೇಷಂ ಕರಿಷ್ಯತಿ ॥೫೦॥

ಇತ್ಯನ್ಯೋನ್ಯಂ ಸಮಾಭಾಷ್ಯ ತಸ್ಮಿಂಶ್ಚೌರ್ಯಾತಿ ತದ್ವಚಃ ।
ಮುನಯಶ್ಚೋರಮಾಹೂಯ ವಚನಂ ಚೇದಮಬ್ರುವ ॥೫೧॥

ತ್ವಯಾ ಪರಿಜನಸ್ಯಾರ್ಥೇ ಕ್ರಿಯತೇ ಪಾಪಮನ್ವಹಮ್ ।
ತವಾನನ್ತ್ರಯೇ ತತ್ಪಾಪಭಾಕ್ತ್ವಂ ತಸ್ಯಾಸ್ತಿ ವಾ ನ ವಾ ॥೫೨॥

ಇತ್ಥಂ ಮುನಿವಚಃ ಶ್ರುತ್ವಾ ಕ್ರೂರೋಪ್ಯಕ್ರೂರತಾಂ ಗತಃ ।
ಧರ್ಮಸ್ಯ ಶ್ರವಣಾಚ್ಚೋರಃ ಪುಳಿನ್ದೋ ಮೃದುತಾಂ ಗತಃ ॥೫೩॥

ಮಹತಾಂ ಸನ್ನಿಧಾನಂ ಹಿ ಮೃದುತ್ವಸ್ಯಾಸ್ಯ ಕಾರಣಮ್ ।
ಹೇತುಸ್ತತ್ಸನ್ನಿಧಾನಸ್ಯ ಪ್ರಾಗ್ಜನ್ಮಸುಕೃತಂ ಪರಮ್ ॥೫೪॥

ಬ್ರಾಹ್ಮಣರ ದ್ರವ್ಯವನ್ನು ಕಿತ್ತುಕೊಳ್ಳುವುದಕ್ಕಿಂತಲೂ, ಬ್ರಾಹ್ಮಣರನ್ನು ಹಿಂಸೆಪಡಿಸುವುದಕ್ಕಿಂತಲೂ, ಬ್ರಾಹ್ಮಣರಿಗೆ ಕ್ಷೋಭೆಯುಂಟಾಗುವುದಕ್ಕಿಂತಲೂ, ಮನುಷ್ಯರಿಗೆ ಬೇರೆಯಾದ ಪಾಪವಾವುದಿರುವುದು? ॥೫೪॥

ಬ್ರಹ್ಮಹತ್ಯೆ ಸುರಾಪಾನ ಸ್ವರ್ಣ ಸ್ತೇಯ ಗುರುದಾರಗಮನಗಳು, ಬ್ರಾಹ್ಮಣರ ದ್ರವ್ಯವನ್ನು ಅಪಹರಿಸುವ ಪಾಪದ ಹದಿನಾರನೆಯೊಂದುಭಾಗಕ್ಕೂ ಸಮವಾಗುವುದಿಲ್ಲ ॥೫೫॥

ಬ್ರಾಹ್ಮಣದ್ರವ್ಯವೆಂಬ ಅಗ್ನಿಯೊಂದೇ, ಧರ್ಮಗಳೆಂಬ ಪರ್ವತಪರಂಪರೆಯನ್ನು, ಸ್ಪರ್ಶಮಾತ್ರದಿಂದಲೇ ಸಮೂಲವಾಗಿ ಭಸ್ಮಾವಶೇಷವಾಡುವುದು ॥೫೦॥

ಹೀಗೆಂದು–ಆ ಚೋರವ್ಯಾಧನು ಕೇಳುತಿರುವಾಗಲೇ–ಪರಸ್ಪರವಾಗಿ ಮಾತನಾಡಿಕೊಂಡು, ಆ ಮುನಿಗಳು ಅವನನ್ನು ಕರೆದು 'ಅಯ್ಯಾ! ವ್ಯಾಧ! ನೀನು ನಿನ್ನ ಪರಿಜನರಿಗೋಸ್ಕರ ಪ್ರತಿದಿವಸವೂ ಪಾಪವನ್ನು ಮಾಡುತಿರುವೆಯಲ್ಲವೆ! ಈ ಪಾಪಕ್ಕೆ ಅವರೂ ಭಾಗಿಗಳಾಗುತ್ತಾರೆಯೇ–ಇಲ್ಲವೇ?–ಎಂಬುದಾಗಿ ಅವರನ್ನು ಕೇಳಿಕೊಂಡು ಬಾ' ಎಂದು ಹೇಳಿದರು ॥೫೧–೫೩॥

ಹೀಗೆ ಹೇಳಿದ ಸಪ್ತರ್ಷಿಗಳ ಮಾತನ್ನು ಕೇಳಿ, ಅತಿಕ್ರೂರನಾಗಿದ್ದ ಆ ಚೋರನು ಆಗ ತನ್ನ ಕ್ರೌರ್ಯವನ್ನು ಬಿಟ್ಟವನಾದನು. ಅವರು ಹೇಳಿದ ಧರ್ಮವಚನಮಸ್ಸನ್ನು ಕೇಳಿದುದರಿಂದ, ಕಳ್ಳನಾಗಿದ್ದ ಆ ಬೇಡನು ಮೃದುತ್ವವನ್ನು ಹೊಂದಿಬಿಟ್ಟನು ॥೫೩॥

ಮಹಾತ್ಮರ ಸಾನ್ನಿಧ್ಯವೇ ಈ ಮೃದುತ್ವಕ್ಕೆ ಕಾರಣವು; ಆ ಮಹಾತ್ಮರ ಸಾನ್ನಿಧ್ಯಕ್ಕೆ, ಅತಿಶಯವಾಗಿದ್ದ ಪೂರ್ವಜನ್ಮಸುಕೃತವೇ ಮುಖ್ಯಹೇತುಭೂತವಾದುದು ॥೫೪॥

ಅಸಾರೇ ದಗ್ಧಸಂಸಾರೇ ಸಾರಮೇತಚ್ಚತುಷ್ಟಯಮ್ ।
ಗಙ್ಗಾ ಚ ತುಲಸೀಸೇವಾ ಸತ್ಸಙ್ಗೀ ಹರಿಕೀರ್ತನಮ್ "೬೫॥

ಸಙ್ಗಪ್ರಕರ್ಷಾತ್ ಖಲು ದೌಷ್ಟ್ಯನಾಶಃತದ್ದೌಷ್ಟ್ಯನಾಶಾತ್ ಖಲು ಚಿತ್ತಶುದ್ಧಿಃ ।
ತಚ್ಚಿತ್ತಶುದ್ಧೇಃ ಖಲು ಪುಣ್ಯಕರ್ಮ ಸ ಪುಣ್ಯಕರ್ಮಾ ಸುಖಮೇತಿ ನಾಕಮ್ ॥೬೬॥

ಇತಿ ಶ್ರೀಮದಯೋಧ್ಯಾಕಾಣ್ಡೇ ಸಪ್ತರ್ಷಿಚೋರಸಂವಾದೋ ನಾಮ
ದ್ವಾವಿಂಶಃ ಸರ್ಗಃ.



ಕೇವಲ ನಿಸ್ಸಾರವಾಗಿರುವ ಈ ಸಂಸಾರದಲ್ಲಿ, ಗಂಗಾನದಿ ತುಲಸೀಸೇವೆ ಸತ್ಸಹವಾಸ ಭಗವನ್ನಾಮಕೀರ್ತನ- ಈ ನಾಲ್ಕೇ ಮುಖ್ಯ ಸಾರಭೂತವಾಗಿರುವುವು ॥೬೫॥

ಹೀಗೆ ಸಾಧುಸಂಗದಿಂದ ದೋಷನಾಶವಾಗುವುದು; ದೋಷನಾಶದಿಂದ ಚಿತ್ತಶುದ್ಧಿಯುಂಟಾಗುವುದು; ಚಿತ್ತಶುದ್ಧಿಯಿಂದ ಪುಣ್ಯಕರ್ಮಪ್ರಾಪ್ತಿಯಾಗುವುದು; ಹೀಗೆ ಪುಣ್ಯಕರ್ಮ ಮಾಡತಕ್ಕವನು ಸುಖವಾಗಿ ಸ್ವರ್ಗವನ್ನು ಹೊಂದುವನು ॥೬೬॥

ಇದು ಆಯೋಧ್ಯಾಕಾಂಡದಲ್ಲಿ ಸಪ್ತರ್ಷಿಚೋರಸಂವಾದವೆಂಬ
ಇಪ್ಪತ್ತೆರಡನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ತ್ರಯೋವಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ಇತ್ಥಂ ಧರ್ಮ್ಯೇಣ ಮಾರ್ಗೇಣ ಬೋಧಿತಶ್ಚೋರಪುಙ್ಗವಃ ।
ಋಷೀಣ್ ನತ್ವಾ ಪ್ರಕರ್ಷೇಣ ಬಭಾಷೇ ವಚನಂ ಶುಭಮ್ ॥೧॥
ಮಯಾ ತು ಭವತಾಮರ್ಥೇ ಕ್ರಿಯತೇ ಪಾಪಮುಲ್ಬಣಮ್ ।
ತದ್ಭಾಗಹಾರಿಣೋ ಯೂಯಂ ನ ವಾ ಶೀಘ್ರಮಿಹೋಚ್ಯತಾಮ್ ॥೨॥
ಇತ್ಯಾಭಾಷ್ಯ ಹಿತಾನ್ ಸರ್ವಾನ್ ಪುನರಾಗಮ್ಯತೇ ಮಯಾ ।
ಯುಷ್ಮಾಭಿಸ್ತಾವದಾಸ್ಥೇಯಂ ತತ್ರ ಕಿಂ ಮಾನಮುಚ್ಯತಾಮ್ ॥೩॥
ಯದಿ ಜೀವೇಸ್ತು ವಃ ಪ್ರೇಮ ನ ಗನ್ತವ್ಯಮಿತಃ ಪದಮ್ ।
ನಿಶ್ಚಿತ್ಯಾಬ್ರಾಹ್ಮಣಾಯೂಯಂ ಸ್ಥಿತಿಕಾರಣಮುಚ್ಯತಾಮ್ ॥೪॥
ಇತಿ ಚೋರವಚಃ ಶ್ರುತ್ವಾ ಸರ್ವೇ ತೇ ಮುನಿಪುಙ್ಗವಾಃ ।
ಪ್ರತ್ಯೇಕಂ ವಚನಂ ಪ್ರೋಚುಃ ತಸ್ಯ ವಿಶ್ವಾಸಕಾರಣಮ್ ॥೫॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತ್ಮೂರನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಹೇಳುವನು:—

ಎಲೌ ಪಾರ್ವತಿ! ಮೊದಲ್ಕೊಂಡ್ರೀತಿಯಾಗಿ ಧರ್ಮ್ಯಯುಕ್ತವಾದ ಮಾರ್ಗದಿಂದ ಪ್ರಬೋಧಿತನಾದ ಆ ಚೋರರಾಜನು, ಆ ಸಪ್ತಮಹರ್ಷಿಗಳಿಗೆ ನಮಸ್ಕಾರವಮಾಡಿ, ಅತಿಶುಭವಾದ ಈ ಮಾತನ್ನು ಹೇಳಿದನು ॥೧॥

ಅಯ್ಯಾ ಮುನಿಗಳಿರಾ! ನಾನು ಮನೆಗೆ ಹೋಗಿ, ನಮ್ಮ ಜನಗಳೆಲ್ಲರನ್ನೂ ' ನಾನು ನಿಮಗೋಸ್ಕರವಾಗಿ ಅತ್ಯಧಿಕವಾದ ಪಾಪವನ್ನು ಮಾಡುತ್ತಿರುವೆನು. ಈ ಪಾಪದಲ್ಲಿ ನೀವೂ ಭಾಗಿಗಳಾಗುವಿರೋ? ಇಲ್ಲವೋ? ಬೇಗನೆ ಹೇಳಿರಿ.' ಎಂದು ಕೇಳಿಕೊಂಡು, ಮತ್ತೆ ಇಲ್ಲಿಗೆ ಬರುವೆನು. ಅದುವೆರೆಗೆ ನೀವುಗಳು ಇಲ್ಲಿಯೇ ನಿಂತಿರಬೇಕು. ಆ ವಿಷಯದಲ್ಲಿ ನನಗೇನು ನಂಬುಗೆ? ನೀವು ಇದನ್ನು ಸರಿಯಾಗಿ ಹೇಳಿರಿ ॥೨—೩॥

ನಿಮಗೆ ನಿಮ್ಮ ಪ್ರಾಣದಲ್ಲಿ ಪ್ರೀತಿಯಿದ್ದ ಪಕ್ಷದಲ್ಲಿ, ಇಲ್ಲಿಂದ ಮುಂದಕ್ಕೆ ಒಂದುಹೆಜ್ಜೆಯೂ ನೀವು ಹೋಗಕೂಡದು. ನೀವು ಬ್ರಾಹ್ಮಣರಾಗಿರುವುದರಿಂದ, ನಿಮ್ಮ ವಿಷಯದಲ್ಲಿ ನನಗೆ ಸ್ವಲ್ಪವೂ ಶಂಕೆಯಿಲ್ಲ. ನೀವು ಇಲ್ಲಿಯೇ ನಿಂತಿರುವ ವಿಷಯದಲ್ಲಿ ಸರಿಯಾದ ನಂಬುಗೆಯನ್ನು ಕೊಡಿರಿ. (ಎಂದು ವ್ಯಾಧನು ಹೇಳಿದನು) ॥೪॥

ಹೀಗೆ ಹೇಳಿದ ಚೋರನ ಮಾತನ್ನು ಕೇಳಿ, ಆ ಸಮಸ್ತಮುನಿಗಳೂ, ಬೇರೆಬೇರೆಯಾಗಿ ಅವನಿಗೆ ನಂಬುಗೆಹುಟ್ಟುವ ಮಾತನ್ನು ಹೇಳಲುಪಕ್ರಮಿಸಿದರು ॥೫॥

ವಸಿಷ್ಠ ಉವಾಚ.

ಸಪ್ತಾಹಂ ಪ್ರಾತರಸ್ನಾತುಃ ಯಾವದ್ಭವತಿ ಪಾತಕಮ್ ।
ತಾವದ್ಭವತು ಮೇ ಪಾಪಂ ಯದ್ಯುತ್ಸೃಜ್ಯ ವ್ರಜೇ ಪದಮ್ ॥೬॥

ವಿಶ್ವಾಮಿತ್ರ ಉವಾಚ.

ಏಕಕೂಪೋದಕಂ ಪೀತ್ವಾ ಶೂದ್ರಗ್ರಾಮನಿವಾಸಿನಃ ।
ವಿಪ್ರಸ್ಯ ಪಾತಕಂ ಯಾವತ್ ತಾವನ್ಮೇಸ್ತು ಗತೇ ಮಯಿ ॥೭॥

ಗೌತಮ ಉವಾಚ.

ವೈಶ್ವದೇವಮಕೃತ್ವಾ ತು ಭುಂಜಾನೇ ಯಸ್ತು ದ್ವಿಜಾಧಮಃ ।
ತಸ್ಯ ವಿಪ್ರಸ್ಯ ಯತ್ ಪಾಪಂ ತನ್ಮಮ ಸ್ಯಾತ್ ಪದಂ ಗತೇ ॥೮॥

ಜಮದಗ್ನಿರುವಾಚ.

ಶ್ರೋತ್ರಿಯಂ ವೃತ್ತಿಹೀನಂ ತು ಸೀದನ್ತಂ ವ್ರತಕರ್ಶಿತಮ್ ।
ದೃಷ್ಟ್ವೋಪೇಕ್ಷೇತ ಯಃ ಸ್ವಾಮೀ ತತ್ ಪಾಪಂ ಮೇ ಪದಂ ಗತೇ ॥೯॥

ಭರದ್ವಾಜ ಉವಾಚ.

ವಿಭವೇ ಸತಿ ಮೃಷ್ಟಾನ್ನಂ ಯೋ ಭುಂಜೀತಾಸಾಕ್ಷಿಕಂ ದ್ವಿಜಃ ।
ತಸ್ಯ ವಿಪ್ರಸ್ಯ ಯತ್ ಪಾಪಂ ತನ್ಮಮ ಸ್ಯಾತ್ ಪದಂ ಗತೇ ॥೧೦॥

ಆಗ ವಸಿಷ್ಠಮುನಿಯು ಹೇಳಿದುದೇನೆಂದರೆ:—

ಆಯ್ಯಾ! ವ್ಯಾಧ! ನಾನು ಈ ಸ್ಥಳವನ್ನು ಬಿಟ್ಟು ಒಂದುಹೆಜ್ಜೆ ಮುಂದಕ್ಕೆ ಹೋದಪಕ್ಷದಲ್ಲಿ, ಏಳುದಿವಸ ಪ್ರಾತಃಸ್ನಾನಮಾಡದಿರುವನಿಗೆ ಎಷ್ಟು ಪಾಪಬರುವುದೋ-ಅಷ್ಟು ಪಾಪವು ನನಗೆ ಬರಲಿ ॥೬॥

ವಿಶ್ವಾಮಿತ್ರನು ಹೇಳುವನು :—

ಶೂದ್ರಗ್ರಾಮದಲ್ಲಿ ಒಂದೇಬಾವಿಯ ನೀರನ್ನು ಕುಡಿದುಕೊಂಡು ವಾಸವಾಡತಕ್ಕವನಿಗೆ ಎಷ್ಟು ಪಾಪಬರುವುದೋ, ನಾನು ಇಲ್ಲಿಂದ ಹೋದರೆ ನನಗೆ ಅಷ್ಟು ಪಾಪಬರಲಿ ॥೭॥

ಗೌತಮನು ಹೇಳುವನು:—

ನಾನು ಇಲ್ಲಿಂದ ಒಂದು ಹೆಜ್ಜೆ ಆಚೆಗೆ ಹೋದಪಕ್ಷದಲ್ಲಿ, ವೈಶ್ವದೇವವನ್ನು ಮಾಡದೆ ಭೋಜನ ಮಾಡುವ ಬ್ರಾಹ್ಮಣನಿಗೆ ಯಾವ ಪಾಪಬರುವುದೋ-ಆ ಪಾಪವು ನನಗೆ ಬರಲಿ ॥೮॥

ಜಮದಗ್ನಿಯು ಹೇಳುವನು :—

ಶ್ರೋತ್ರಿಯನಾಗಿಯೂ ವೃತ್ತಿಯಿಲ್ಲದೆ ಕೃಶನಾಗಿಯೂ ಇರುವವನು ಜೀವನವಿಲ್ಲದೆ ಕಷ್ಟಪಡುವುದನ್ನು ನೋಡಿಯೂ ಉಪೇಕ್ಷಿಸತಕ್ಕ ಸ್ವಾಮಿಗೆ ಯಾವ ಪಾಪ ಬರುವುದೋ, ನಾನು ಇಲ್ಲಿಂದ ಒಂದು ಹೆಜ್ಜೆ ಹೋದರೆ ಆ ಪಾಪವು ನನಗುಂಟಾಗಲಿ ॥೯॥

ಭರದ್ವಾಜನು ಹೇಳುವನು:—

ನಾನು ಇಲ್ಲಿಂದ ಒಂದುಹೆಜ್ಜೆ ಆಚೆಗೆ ಹೋದರೆ, ದ್ರವ್ಯಸಂಪತ್ತಿಯಿದ್ದರೂ ಯಾವ ಬ್ರಾಹ್ಮಣನು ಒಬ್ಬರಿಗೂ ಇಕ್ಕದೆ ಅಸಾಕ್ಷಿಕವಾಗಿ ತಾನೊಬ್ಬನೇ ಮೃಷ್ಟಾನ್ನವನ್ನು ಭುಜಿಸುವನೋ-ಅವನಿಗೆ ಬರಬಹುದಾದ ಪಾಪವು ನನಗೆ ಬರಲಿ ॥೧೦॥

ಕಶ್ಯಪ ಉವಾಚ.

ಮಾತರಂ ಪಿತರಂ ಚಾಪಿ ಯೋ ನ ಸ್ಮರತಿ ದುಃಖಿತೌ ।
ಪ್ರತಿಕ್ಷಣಂ ಚ ಭವತಿ ತನ್ಮೇ ಭವತು ಪಾತಕಮ್ ॥೧೧॥

ಅತ್ರಿರುವಾಚ.

ಸೂರ್ಯಸ್ಯಾಭಿಮುಖೋ ಯಸ್ತು ಮೋಹತೋ ಮೃದ್ವಿವರ್ಜಿತಃ ।
ತಸ್ಯ ವಿಪ್ರಸ್ಯ ಯತ್ ಪಾಪಂ ತನ್ಮಮಾಸ್ತು ಪದಂ ಗತೇ ॥೧೨॥

ಶ್ರೀ ಶಿವ ಉವಾಚ.

ಶ್ರುತ್ವೈವಂ ವಿಪ್ರವಾಕ್ಯಾನಿ ವಿಶ್ವಸ್ಯಾಗಾತ್ ಪುರಂ ಖಲಃ ।
ರಣದ್ಭಿರ್ಭೀಷಣೈರ್ಘೋರೈಃ ಪುಳಿನ್ದೈ ರತಿದಾರುಣೈಃ ।
ಕಾಲೋಜಿತಮಹಾವೇಷೈಃ ಧೃತಾಧಿಜ್ಯಶರಾಸನೈಃ ॥೧೩॥
ಪ್ರಚಣ್ಡೈಶ್ಚಣ್ಡವೇಷೈಶ್ಚ ಪ್ರಾಣಿಜೀವನನಾಶಕೈಃ ।
ದರ್ಶನಾದೇವ ಭೀರೂಣಾಂ ಹೃದಯಂ ಪ್ರವಿದೀರ್ಯತೇ ॥೧೪॥
ಶ್ವಗಣೈರ್ಬಹುಭಿಃ ಕೀರ್ಣಂ ಅಸ್ಥಿಭಕ್ಷಣತತ್ಪರೈಃ ।
ವರಾಹೈಃ ಸೂಕರೈಶ್ಚೈವ ವನಗ್ರಾಮನಿವಾಸಿಭಿಃ ॥೧೫॥

ಕಶ್ಯಪನು ಹೇಳುವನು:—

ನಾನು ಇಲ್ಲಿಂದ ಮುಂದೆ ಹೋದೆನಾದರೆ, ಯಾವ ಮನುಷ್ಯನು ದುಃಖಪಡುತ್ತಿರುವ ತನ್ನ ಮಾತಾಪಿತೃಗಳನ್ನು ಸ್ಮರಿಸುವುದಿಲ್ಲವೋ,-ಅಂಥವನಿಗೆ ಪ್ರತಿಕ್ಷಣವೂ ಯಾವ ಪಾಪವು ಬರುವುದೊ,—ಆ ಪಾಪವು ನನಗೆ ಒರಲಿ ॥೧೧॥

ಅತ್ರಿಯು ಹೇಳುವನು:—

ನಾನು ಇಲ್ಲಿಂದ ಒಂದುಹೆಜ್ಜೆ ಆಚೆಗೆ ಹೋದಪಕ್ಷದಲ್ಲಿ, ಯಾವನು ಸೂರ್ಯಾಭಿಮುಖನಾಗಿ ಮಲವಿಸರ್ಜನೆಮಾಡಿ ಮೃತ್ತಿಕಾಶೌಚರಹಿತನಾಗಿರುವನೋ, ಅಂತಹ ಬ್ರಾಹ್ಮಣನಿಗುಂಟಾಗುವ ಪಾಪವು ನನಗುಂಟಾಗಲಿ ॥೧೨॥

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಹೀಗೆ ಹೇಳಿದ ಬ್ರಾಹ್ಮಣರ ಮಾತನ್ನು ಕೇಳಿ, ಆ ಕ್ರೂರನಾದ ವ್ಯಾಧನು, ಅವರಲ್ಲಿ ನಂಬುಗೆಯಿಟ್ಟು, ತನ್ನ ಊರಿಗೆ ಹೋದನು. ಆ ಊರಿನೊಳಗೆ, ಅತಿಭಯಂಕರವಾಗಿ ಧ್ವನಿಮಾಡುತ್ತಿರುವರಾಗಿಯೂ, ಘೋರರಾಗಿಯೂ, ಅತಿದಾರುಣರಾಗಿಯೂ, ತಮ್ಮ ಜಾತಿಗೆ ತಕ್ಕಂತೆ ಮಹಾಕ್ರೂರವಾದ ವೇಷವನ್ನು ಧರಿಸಿದವರಾಗಿಯೂ, ಬಿಲ್ಲನ್ನು ಹೆದೆಯೇರಿಸಿ ಹಿಡಿದುಕೊಂಡಿರುವರಾಗಿಯೂ, ಪ್ರಾಣಿಗಳ ಪ್ರಾಣಗಳನ್ನು ಅಪಹರಿಸತಕ್ಕವರಾಗಿಯೂ ಇದ್ದ, ಅನೇಕರಾದ ವ್ಯಾಧರು ತುಂಬಿದ್ದರು. ಅವರ ದರ್ಶನಮಾತ್ರದಿಂದಲೇ, ಭಯಸ್ಥರ ಎದೆಯು ಒಡೆದುಹೋಗುತ್ತಿದ್ದಿತು ॥೧೩—೧೪॥

ಮತ್ತು, ಆ ಊರಿನಲ್ಲಿ, ಅನೇಕವಾದ ನಾಯಿಗಳು ಮೂಳೆಗಳನ್ನು ಗಿಯುತ ಗುಂಪುಗುಂಪಾಗಿ ನಿಂತಿದ್ದುವು. ಕಾಡುಹಂದಿಗಳೂ ಊರುಹಂದಿಗಳೂ ಯಥೇಚ್ಛವಾಗಿ ಓಡಾಡುತಿದ್ದುವು॥

ವಾಂಸಲೇಶಾದನಕೃತೇ ಕಙ್ಕಗೃಧ್ರನಿಷೇವಿತಮ್ ।
ವ್ಯಾಧಾನೀತಮೃಗಾಣಾಂ ಹಿ ಸಹಸ್ರೈಃ ಪರಿಸಙ್ಕುಲಮ್ ॥೧೬॥
ಶಕುನೈರ್ಲುಪ್ತಪಕ್ಷೈಶ್ಚ ವೇಪ್ಯದ್ಭಿರ್ವಾನಮಹೀತಲಮ್ ।
ಛಿನ್ದಿ ಭಿನ್ದೀತಿ ವಾಕ್ಯಾನಾಂ ಆಲಯಂ ರೋಮಹರ್ಷಣಮ್ ॥೧೩॥
ಕ್ವಚಿತ್ ಪಿಶಿತರಾಶೀಭಿಃ ಕ್ವಚಿತ್ ಪತಿತಪತ್ರಕೈಃ ।
ಕ್ವಚಿದ್ವಿಹಾಯಸಿ ಭ್ರಾಮ್ಯತ್ಪಕ್ಷಿಸಙ್ಘೈಃಸಮಾಕುಲಮ್ ॥೧೪॥
ತತಃ ಪುರಂ ಪ್ರವಿಶ್ಯೋಚ್ಚಂ ನಾನಾಗೃಹವಿರಾಜಿತಮ್ ।
ಯತ್ರಕುತ್ರಾಪಿ ವಾಂಸಾನಾಂ ದುರ್ಗನ್ಧೈಃ ಪರಿದೂಷಿತಮ್ ।
ಮದ್ಯಗನ್ಧೇನ ಮಹತಾ ಮೇದೋಗನ್ಧೇನ ಸಂಯುತಮ್ ॥೧೫॥
ದೀಪ್ತೌಸಿಪಟ್ಟಿಶಧರೈಃ ಧನುರ್ಬಾಣಧರೈರಪಿ ।
ದುಷ್ಪ್ರವೇಶಂ ಪರೇಷಾಂ ಹಿ ಸಾಕ್ಷಾತ್ ಸಂಯಮಿನೀಸಮಮ್ ॥೧೦॥
ತತಃ ಸ್ವಮನ್ದಿರಂ ಪ್ರಾಪ್ಯ ಪೂಜಿತಃ ಸ್ವಪರಿಚ್ಛದೈಃ ॥೧೧॥
ವಿತಾನೈರದ್ಭುತಾಕಾರೈಃ ತಿರಸ್ಕರಣಶೋಭಿತೇ ।
ತತಃ ಸ್ವಕಶಿಪೂತ್ಸಙ್ಗೇ ಸುಖಮಾಸೀನಮುತ್ತಮೇ ।
ಪತಿಂ ಪರ್ಯಚರತ್ ಪತ್ನೀ ತಾಮ್ರೌಲ್ಯೈರ್ವಜನೈರಪಿ ॥೧೨॥

ಅಲ್ಲಲ್ಲಿ ಬಿದ್ದುಹೋದ ಮಾಂಸದ ಜೂರುಗಳನ್ನು ತಿನ್ನುವುದಕ್ಕಾಗಿ, ಕಂಕಗಳೂ ಗೃಧ್ರಗಳೂ ಹಾರಾಡುತಿದ್ದುವು; ಬೇಡರು ಕಾಡಿನಿಂದ ತಂದ ವ್ಯಗಗಳು, ಅಸಂಖ್ಯಾಕವಾಗಿ ತುಂಬಿದ್ದುವು ॥೧೬॥

ಹಕ್ಕಿಗಳ ರಕ್ಕೆ ಪುಕ್ಕಗಳನ್ನು ತರಿದು ಅಲ್ಲಲ್ಲಿ ಎಸೆದುಬಿಟ್ಟಿದ್ದರು; ಆಗ ಆ ಹಕ್ಕಿಗಳು ಭೂಮಿಯಮೇಲೆ ಬಿದ್ದು ಹೊರಳುತಿದ್ದುವು. 'ತಿವಿ-ಇರಿ' ಎಂಬ ಮಾತುಗಳಿಗೆ ಆವೂರು ತವರು ಮನೆಯಾಗಿದ್ದಿತು; ಅದನ್ನು ನೋಡಿದರೆ ಮೈಯೆಲ್ಲ ಜುಮ್ಮೆನ್ನುವಹಾಗಿದ್ದಿತು ॥೧೩॥

ಕೆಲವುಕಡೆ ಮಾಂಸರಾತಿಗಳಿಂದಲೂ, ಕೆಲವುಕಡೆ ರಕ್ಕೆಯಿಲ್ಲದಿರುವ ಹಕ್ಕಿಗಳಿಂದಲೂ, ಕೆಲವುಕಡೆ ಆಕಾಶದಲ್ಲಿ ಹಾರಾಡುತಿರುವ ಪಕ್ಷಿಸಮೂಹಗಳಿಂದಲೂ, ಆವೂರು ವ್ಯಾಪ್ತವಾಗಿದ್ದಿತು ॥೧೪॥

ಇಂತಹ ನಾನಾಗೃಹವಿರಾಜಿತವಾಗಿರುವ-ಊರಿಗೆ ಹೋದ ಆ ವ್ಯಾಧನು, ಎಲ್ಲೆಲ್ಲಿ ನೋಡಿದರೂ ಮಾಂಸದುರ್ಗಂಧದಿಂದ ದೂಷಿತವಾಗಿಯೂ, ಅಧಿಕವಾದ ಮದ್ಯಗಂಧದಿಂದಲೂ ಮೇದಸ್ಸಿನ (ಕೊಬ್ಬು) ಗಂಧದಿಂದಲೂ ಯುಕ್ತವಾಗಿಯೂ, ಉದ್ದವಾದ ಕತ್ತಿಯನ್ನೂ ಪಟಕವನ್ನೂ ಧನುಸ್ಸನ್ನೂ ಹಿಡಿದಿರುವ ಕಾವಲುಗಾರರಿಂದ ರಕ್ಷಿಸಲ್ಪಡುತಿರುವಕಾರಣ-ಇತರರಿಗೆ ಪ್ರವೇಶಿಸಲು ಅಸಾಧ್ಯವಾಗಿಯೂ, ಸಾಕ್ಷಾತ್ ಯಮಪಟ್ಟಣಕ್ಕೆ ಸದೃಶವಾಗಿಯೂ ಇದ್ದ, ತನ್ನ ಮನೆಯನ್ನು ಹೊಂದಿ, ಅಲ್ಲಿರುವ ತನ್ನ ಪರಿವಾರದ ಜನಗಳಿಂದ ಪೂಜಿತನಾದನು ॥೧೫-೨೦

ಆಬಳಿಕ, ಅತಿವಿಚಿತ್ರವಾದ ಮೇಲುಕಟ್ಟುಗಳಿಂದಲೂ ತೆರೆಗಳಿಂದಲೂ-ಶೋಭಿಸುತಿರುವ-ದಿವ್ಯವಾದ ಹಾಸಿಗೆಯಮೇಲೆ ಸುಖವಾಗಿ ಕುಳಿತುಕೊಂಡನು; ಆಸಮಯದಲ್ಲಿ, ಅವನ-ಪತ್ನಿಯು, ತಾಂಬೂಲವನ್ನು ತಂದುಕೊಟ್ಟು ಬೀಸಣಿಕೆಯಿಂದ ಬೀಸುತ ಉಪಚರಿಸುತಿದ್ದಳು ॥೨೧॥

ತತೋ ರಹಸಿ ಸಂಪ್ರಾಪ್ತಂ ಭಾರ್ಯಾಮಾಮನ್ತ್ರ್ಯ ಸುನ್ದರೀಮ್ ।
ಹೃದಯಸ್ಥಿತಸಂಪ್ರಶ್ನಂ ವಕ್ತುಂ ಸಮುಪಚಕ್ರಮೇ ॥೫೩॥
ಸತ್ಯಂ ವದಾತ್ರ ಸುದತಿ ಮಿಥ್ಯಾವಾಕ್ಯಂ ನ ಮೇ ಪ್ರಿಯಮ್ ।
ಮಿಥ್ಯಾವಾದಾತ್ ಪರೋ ದೋಷೋ ನ ಭೂತೋ ನ ಭವಿಷ್ಯತಿ ॥೫೪॥
ಸತ್ಯಂ ಹಿ ಸರ್ವಜನ್ತೂನಾಂ ಧರ್ಮಮೂಲಂ ಪರಂ ಸ್ಮೃತಮ್ ।
ಸತ್ಯಹೀನಃ ಕೃತೋ ಧರ್ಮೋ ನಿಷ್ಫಲೋ ಭವತಿ ಪ್ರಿಯೇ ॥೫೫॥
ಸತ್ಯೇನ ಸ್ವರ್ಗಮಾಪ್ನೋತಿ ವೈಕುಣ್ಠಂ ಚ ಶಿವಾಲಯಮ್ ।
ತಸ್ಮಾತ್ ಸತ್ಯಸಮೋ ಧರ್ಮೋ ನಾಸ್ತಿ ಲೋಕತ್ರಯೇಪಿ ಚ ॥೫೬॥
ಸ್ತ್ರೀಣಾಮಮಾಯಯಾ ಭಕ್ತಿಃ ಪತಿಲೋಕವಿಧಾಯಿನೀ ।
ಮಾಯಾವತೀನಾಂ ಸ್ತ್ರೀಣಾಂ ಹಿ ದಾನಧರ್ಮವ್ರತಾದಿಕಮ್ ।
ಸದ್ಯೋ ನಿಷ್ಫಲತಾಂ ಯಾತಿ ದಾನಮಶ್ರೋತ್ರಿಯೇ ಯಥಾ ॥೫೩॥
ತಸ್ಮಾತ್ ಪತ್ಯೌ ಸುವಿಶ್ವಾಸಂ ಕಾರಯೇತ ಪತಿವ್ರತಾ ॥೫೯॥
ಮಯಾ ಸುದತಿ ಯತ್ ಪಾಪಂ ಯುಷ್ಮದರ್ಥಂ ಕೃತಂ ಬಹು ।
ಅಕಾರ್ಯಂ ಕೃತಮಸ್ಮಾಭಿಃ ಕಾರ್ಯಂ ತ್ಯಕ್ತ್ವಮಸಂಶಯಮ್ ॥೬೦॥

ಆ ಬಳಿಕ, ಹೀಗೆ ವಿಜನವಾದ ಸಮಯದಲ್ಲಿ ಬಂದಿರುವ ಸುಂದರಿಯಾದ ತನ್ನ ಪತಿ, ಯನ್ನು ವಿನೋದದಿಂದ ಮಾತನಾಡಿಸಿ, ಆ ವ್ಯಾಧನು ತನ್ನ ಮನಸ್ಸಿನಲ್ಲಿದ್ದ ಪ್ರಶ್ನೆಯನ್ನು ಕೇಳಲುಪಕ್ರಮಿಸಿದನು ॥೫೩॥

ಎಲೌ ಸುಂದರಿ! ನೀನು ನನ್ನೆದುರಿಗೆ ದಿಟವನ್ನೇ ಹೇಳು. ನನಗೆ ಅಸತ್ಯವಚನವು ಸ್ವಲ್ಪವೂ ಪ್ರಿಯವಾಗುವುದಿಲ್ಲ. ಲೋಕದಲ್ಲಿ ಮಿಥ್ಯಾವಾಕ್ಯಕ್ಕಿಂತ ಹೆಚ್ಚಾದ ದೋಷವನ್ನು ಹಿಂದೆ ಇರಲೂ ಇಲ್ಲ; ಮುಂದೆ ಆಗುವುದೂ ಇಲ್ಲ ॥೫೪॥

ಎಲೌ ಪ್ರಿಯೆ! ಸತ್ಯವೇ ಸಮಸ್ತಪ್ರಾಣಿಗಳಿಗೂ ಮುಖ್ಯವಾದ ಧರ್ಮಮೂಲವೆಂದು ಶಾಸ್ತ್ರಗಳು ಹೇಳುತಿರುವವು. ಸತ್ಯವಿಲ್ಲದೆ ಯಾವ ಧರ್ಮವನ್ನು ಮಾಡಿದರೂ, ಅದೆಲ್ಲವೂ ನಿಷ್ಫಲವಾಗುವುದು ॥೫೫॥

ಸತ್ಯದಿಂದಲೇ, ಪುರುಷನು ಸ್ವರ್ಗವನ್ನೂ ವೈಕುಂಠವನ್ನೂ ಕೈಲಾಸವನ್ನೂ ಹೊಂದುವನು. ಅದುಕಾರಣ, ಸತ್ಯಕ್ಕೆ ಸಮಾನವಾದ ಧರ್ಮವು ಮೂರುಲೋಕದಲ್ಲಿಯೂ ಇಲ್ಲ. ಅದುದರಿಂದ, ನೀನು ಸತ್ಯವಾಗಿ ಹೇಳುವಳಾಗು ॥೫೬॥

ಸ್ತ್ರೀಯರಿಗೆ, ಅಕಪಟವಾದ ಪತಿಭಕ್ತಿಯೇ ಪತಿಸಾಲೋಕ್ಯವನ್ನು ಕೊಡತಕ್ಕುದು. ಪತಿಗೆ ವಂಚನೆಮಾಡಿ ದಾನ ಧರ್ಮ ವ್ರತಾದಿಗಳನ್ನಾಚರಿಸತಕ್ಕವರಿಗೆ, ಅವರು ಮಾಡುವ ದಾನ ಧರ್ಮಾದಿಗಳೆಲ್ಲವೂ, ಶ್ರೋತ್ರಿಯನಲ್ಲದವನಿಗೆ ಕೊಟ್ಟ ದಾನದಂತೆ, ಆ ಕ್ಷಣವೇ ವ್ಯರ್ಥವಾಗುವುವು. ಹೀಗಿರುವುದರಿಂದ, ಪತಿವ್ರತೆಯಾದವಳು ತನ್ನ ಪತಿಯಲ್ಲಿ ಅಕಪಟವಾದ ಭಕ್ತಿಪ್ರೀತಿಗಳನ್ನಿಡಬೇಕು ॥೫೭—೫೯॥

ಸುಂದರಿ! ನಾನು ನಿಮ್ಮಗಳಿಗೋಸ್ಕರವಾಗಿ ಅನೇಕವಾದ ಅಕಾರ್ಯಗಳನ್ನು ಮಾಡಿರುವೆನು; ಸತ್ಕರ್ಮಗಳನ್ನೆಲ್ಲ ಬಿಟ್ಟಿರುವೆನು. ಇದು ನಿಶ್ಚಯವು ॥೬೦॥

ಕೃಷಿತೋ ಭಾರತಶ್ಚೈವ ಸೇವಾಕರ್ಮ ರತೇನ ಚ ।
ವಾಣಿಜ್ಯೇನಾಪಿ ಯತ್ ಪಾಪಂ ವಞ್ಚನಾದನವಮಾನತಃ ॥೩೦॥
ವಿಶ್ವಾಸಘಾತಕೇನಾಪಿ ದ್ವಾರಂದ್ವಾರಂ ಚ ಯಾಚನಾತ್ ।
ಅಭಕ್ಷ್ಯಭಕ್ಷಣೈಶ್ಚೈವ ಬಹವೋ ಮೇ ನಿಷೂದಿತಾಃ ॥೩೧॥
ಧನಂ ಬಹು ಗೃಹೀತಂ ಹಿ ಚೋರವಾರ್ಗರತೇನ ಹಿ ।
ತಸ್ಮಾದಾಢ್ಯತರಶ್ಚಾಸ್ಮಿ ಚೋರಪುಙ್ಗವತಾಂ ಗತಃ ॥೩೨॥
ತ್ವಂ ಚ ಸರ್ವಸುಖೋಪೇತಾ ಸರ್ವಾಭರಣಭೂಷಿತಾ ।
ಸರ್ವೇ ಭೋಗಾಶ್ಚೋಪಹೃತಾಃ ದುರ್ಲಭಾಯೇ ಚ ಜೀವಿನಾಮ್ ।
ಸುತಾಶ್ಚ ಸುಖಿನಃ ಸರ್ವೇ ಸರ್ವಭೋಗಸಮನ್ವಿತಾಃ ॥೩೩॥
ಮಯಾ ಕೃತಮಿದಂ ತೇದ್ಯ ಪಾಪಿನಾ ಪಾಪಕರ್ಮಣಾ ।
ಮತ್ಕೃತಸ್ಯ ಹಿ ಪಾಪಸ್ಯ ಭಾಗಂ ಸ್ವೀಕುರು ಭಾಮಿನಿ ॥೩೪॥
ಇತ್ಯುಕ್ತಾ ಚೋರಪತ್ನೀ ತು ಪ್ರತ್ಯುವಾಚ ಪತಿಂ ತದಾ ।
ತ್ವಯಾ ಕ್ಷೇಮಮಕೃತಾ ನಾಥ ಪುತಾನಾಂ ಜ್ಞಾತಿನಾಂ ಮಮ ।

ಭೂಮಿಯನ್ನು ಉಳುವಾಗಲೂ, ಹೊರೆಯನ್ನು ಹೊರುವಾಗಲೂ, ಪರರ ಸೇವೆಯನ್ನು ಮಾಡಿಯೂ, ವಾಣಿಜ್ಯ(ವ್ಯಾಪಾರ)ವನ್ನು ಮಾಡಿಯೂ, ಜನರನ್ನು ವಂಚಿಸಿಯೂ, ಇತರರಿಗೆ ಅವಮಾನಮಾಡಿಯೂ, ನಾನು ಬಹಳವಾಗಿ ಪಾಪವನ್ನು ಸಂಪಾದಿಸಿರುವೆನು ॥೩೦॥

ನಾನು ಅನೇಕವೇಳೆ ವಿಶ್ವಾಸಘಾತಕ(ನಂಬಿಸಿ ಮೋಸಮಾಡುವವನು)ನಾಗಿಯೂ, ಮನೆ ಮನೆಗೂ ಹೋಗಿ ಯಾಚಿಸಿಯೂ, ಅಭಕ್ಷ್ಯಭಕ್ಷಣೆಮಾಡಿಯೂ, ಅನೇಕರನ್ನು ಕೊಂದೂಕೂಡ, ಪಾಪಗಳನ್ನು ಸಂಗ್ರಹಿಸಿರುವೆನು ॥೩೧॥

ಮತ್ತು, ಕಳ್ಳತನದಲ್ಲಿ ಪ್ರವೇಶಿಸಿ ಹೆಚ್ಚಾಗಿ ಧನವನ್ನು ಸಂಗ್ರಹಿಸಿರುವೆನು; ಇದರಿಂದಲೇ, ನಾನು ಈಗ ವಿಶೇಷ ಧನಿಕನಾಗಿರುವೆನು; ಕಳ್ಳರಿಗೆಲ್ಲ ದೊರೆಯಾಗಿಯೂ ಇರುವೆನು ॥೩೨॥

ನಾನು ಇಷ್ಟು ಪಾಪಕೃತ್ಯಗಳನ್ನು ಮಾಡಿ ಸಂಪಾದಿಸಿದ ದ್ರವ್ಯದಿಂದಲೇ, ಈಗ ನೀನು ಸಕಲ ಸುಖಗಳನ್ನೂ ಅನುಭವಿಸುತ-ಸರ್ವಾಭರಣಭೂಷಿತಳಾಗಿ ವಿರಾಜಿಸುತ್ತಿರುವೆ; ಸಾಮಾನ್ಯವಾಗಿ ಮನುಷ್ಯರಿಗೆ ದುರ್ಲಭವಾದ ಭೋಗಗಳನ್ನೆಲ್ಲ ಅನುಭವಿಸುತ್ತಿರುವೆ. ಮತ್ತು, ನಿನ್ನ ಮಕ್ಕಳುಗಳೆಲ್ಲರೂ ಸಮಸ್ತ ಸುಖಗಳನ್ನೂ ಅನುಭವಿಸುತ್ತಿರುವರು ॥೩೩॥

ಎಲೌ ಭಾಮಿನೀಮಣಿಯೇ! ನಿನಗೋಸ್ಕರ, ಪಾಪಿಷ್ಠನಾಗಿಯೂ ಪಾಪಕರ್ಮಪರನಾಗಿಯೂ ಇರುವ ನಾನು ಇಷ್ಟು ಪಾಪಗಳನ್ನು ಮಾಡಿರುವೆನು. ಅದುಕಾರಣ, ನಾನು ಮಾಡಿರುವ ಪಾಪದಲ್ಲಿ ನೀನು ಒಂದು ಭಾಗವನ್ನು ಈಗ ಸ್ವೀಕರಿಸಬೇಕು. (ಎಂದು ವ್ಯಾಧನು ಹೇಳಿದನು) ॥೩೪॥

ಹೀಗೆ ಚೋರರಾಜನಿಂದ ಹೇಳಲ್ಪಟ್ಟವಳಾದ ಅವನ ಪತ್ನಿಯು, ಆವನನ್ನು ಕುರಿತು ಈ ರೀತಿಯಾಗಿ ಹೇಳಿದಳು:—ಹೇನಾಥ! ನನಗೂ ನನ್ನ ಮಕ್ಕಳಿಗೂ ಬಂಧುಗಳಿಗೂ ಕ್ಷೇಮವನ್ನು

ವೃತ್ತ್ಯರ್ಥಂ ಯತ್ ಕೃತಂ ಪಾಪಂ ತಸ್ಯ ತ್ವಂ ಕಾರಣಂ ಮತವ್ ॥೩೫॥
ಏಕೇನ ಕ್ರಿಯತೇ ಪಾಪಂ ಫಲಮನ್ಯೇನ ಭುಜ್ಯತೇ ।
ವಿರುದ್ಧಮೇತಚ್ಛಾಸ್ತ್ರೇಷು ನ ಮನೀಷಿಪ್ರಸಮ್ಮತವ್ ॥೩೬॥
ಪತ್ನ್ಯಾಃ ಪುತ್ರಸ್ಯ ಶಿಷ್ಯಸ್ಯ ಪಾಪಭಾಗ್ಭವತೇ ಗುರುಃ ।
ಶಿಕ್ಷಾರ್ಹಶಿಕ್ಷಣಾಭಾವೇ ಮೋಹಸ್ನೇಹನಿಬನ್ಧನಾತ್ ॥೩೭॥
ಪತಿಧರ್ಮಾಂಶಭಾಜ್ನಿತ್ಯಂ ಸಹಧರ್ಮಚರೀ ಸತೀ ।
ನ ಪತ್ನ್ಯಾಧರ್ಮಜಾಲಸ್ಯ ಸೋಂಶಭಾಗ್ಭವತೇ ಪತಿಃ ॥೩೮॥
ಕರ್ತಾ ಕಾರಯಿತಾ ಚೈವ ಪ್ರೇರಕಶ್ಚಾನುಮೋದಕಃ ।
ಸುಕೃತೇ ದುಷ್ಕೃತೇ ಚೈವ ಚತ್ವಾರಃ ಸಮಭಾಗಿನಃ ।
ಕರ್ತೃಕಾರಯಿತೃತ್ವಾದೌ ನಿಸ್ತ್ರೀಣಾಂ ನಾಸ್ತ್ಯಧಿಕಾರಿತಾ ॥೩೯॥
ಗೃಹನಾಥೇನ ಯದ್ದತ್ತಂ ತದೇವ ಪರಮಂ ಸುಖಮ್ ।
ತಸ್ಮಾತ್ ತ್ವತ್ಕೃತಪಾಪಸ್ಯ ನ ಮೇ ಭಾಗಾಪಹಾರಿತಾ ॥೪೦॥
ತ್ವದಧೀನಾವಯಂ ಸರ್ವೇ ಶಿಕ್ಷಣೇ ರಕ್ಷಣೇಪಿ ವಾ ॥೪೧॥

ಕಲ್ಪಿಸುವುದಕ್ಕೋಸ್ಕರ-ನಮ್ಮಗಳ ಜೀವನಾರ್ಥವಾಗಿ-ನೀನು ಯಾವ ಪಾಪಕರ್ಮವನ್ನು ಮಾಡಿರುವೆಯೋ ಅದಕ್ಕೆ ನೀನೇ ಕಾರಣಭೂತನೆಂದು ಸರ್ವಜನಸಮ್ಮತವಾಗಿರುವುದು ॥೩೫॥

ಒಬ್ಬನು ಪಾಪವಮಾಡಿದರೆ ಅದರ ಫಲವನ್ನು ಮತ್ತೊಬ್ಬನನುಭವಿಸಬೇಕೆಂದು ಹೇಳುವುದು, ಶಾಸ್ತ್ರಗಳಿಗೆಲ್ಲ ವಿರುದ್ಧವಾಗಿ ಕಾಣುವುದು; ಇದನ್ನು ಬುದ್ಧಿವಂತರಾದವರೆಂದಿಗೂ ಒಪ್ಪುವುದಿಲ್ಲ ॥೩೬॥

ಲೋಕದಲ್ಲಿ, ಶಿಕ್ಷಿಸಬೇಕಾದಾಗ ಮೋಹದಿಂದಲೂ ಸ್ನೇಹದಿಂದಲೂ ಶಿಕ್ಷಿಸದೇಬಿಟ್ಟರೆ, ಪತ್ನಿಯ ಪಾಪಕ್ಕೆ ಪತಿಯೂ, ಪುತ್ರನ ಪಾಪಕ್ಕೆ ಪಿತನೂ, ಶಿಷ್ಯನಪಾಪಕ್ಕೆ ಗುರುವೂ ಭಾಗಿಗಳಾಗುವರು. ಹೀಗೆ ಕಿರಿಯವರ ಪಾಪಕ್ಕೆ ಹಿರಿಯರು ಗುರಿಯಾಗುವರೆಂದು ಶಾಸ್ತ್ರವಿರುವುದಲ್ಲದೆ, ಹಿರಿಯರು ಮಾಡಿದ ಪಾಪವನ್ನು ಕಿರಿಯರು ಅನುಭವಿಸಬೇಕೆಂದು ಎಲ್ಲಿಯೂ ಉಕ್ತವಾಗಿಲ್ಲ ॥

ಪತಿವ್ರತೆಯಾದ ಸಹಧರ್ಮಿಣಿಯು ಎಂದಿಗೂ ಪತಿಯ ಧರ್ಮದಲ್ಲಿ ಭಾಗಹಾರಿಣಿಯಾಗುವಳಲ್ಲದೆ, ಪತ್ನಿಮಾಡಿದ ಧರ್ಮದಲ್ಲಿ ಪತಿಯು ಎಂದಿಗೂ ಭಾಗಹಾರಿಯಾಗಲಾರನು ॥೩೮॥

ಯದ್ಯಪಿ ' ಮಾಡತಕ್ಕವನು-ಮಾಡಿಸತಕ್ಕವನು-ಪ್ರೇರಿಸತಕ್ಕವನು-ಅನುಮೋದಿಸತಕ್ಕವನು ಈ ನಾಲ್ಕುಮಂದಿಯೂ, ಪುಣ್ಯಪಾಪಗಳೆರಡರಲ್ಲಿಯೂ ಸಮಭಾಗಿಗಳು ' ಎಂದು ಶಾಸ್ತ್ರವಚನವಿರುವುದು. ಆದರೆ, ಹೆಂಗಸರಿಗೆ ಮಾಡುವುದೂ ಮಾಡಿಸುವುದು ಮುಂತಾದವುಗಳಲ್ಲಿ ಅಧಿಕಾರವೇ ಇಲ್ಲ ॥೩೯॥

ಮನೆಗೆ ಯಜಮಾನನಾದವನು ಏನುಕೊಡುವನೋ, ಅದೇ ನಮಗೆ ಪರಮಸುಖವು. ಹೀಗಿರುವುದರಿಂದ, ನೀನು ಮಾಡಿದ ಪಾಪದಲ್ಲಿ ನನಗೆ ಭಾಗಹಾರಿತ್ವವಿರುವುದಿಲ್ಲ. ಶಿಕ್ಷಣೆಯಲ್ಲಾಗಲಿ-ರಕ್ಷಣೆಯಲ್ಲಾಗಲಿ-ನಾವೆಲ್ಲರೂ ನಿನಗೆ ಅಧೀನರಾಗಿರುವೆವು ಎಂದು ಜೋರನೆ ಪತ್ನಿ ಹೇಳಿದಳು ॥೪೦—೪೧॥

ಏವಂ ಪತ್ನೀವಚಃ ಶ್ರುತ್ವಾ ಪುತ್ರಂ ಪ್ರಾಹಾಥ ಜೋರರಾಟ್ ।
ವಿನೀತಂ ಗುಣಸಮ್ಪನ್ನಂ ರೂಪವನ್ತಮಲಙ್ಕೃತಮ್ ॥೪೦॥

ಮಯಾ ಪಾಪಾನಿ ಜೇರ್ಣಾನಿ ಬ್ರಹ್ಮಹತ್ಯಾಶತಾನಿ ಚ ।
ಸುರಾಪಾನಾದಿಪಾಪಾನಿ ಸ್ವರ್ಣಸ್ತೇಯಾನ್ಯನೇಕಶಃ ॥೪೩॥

ಉಪಪಾಪಾನಿ ಸರ್ವಾಣಿ ಕೃತಾನಿ ಭವತಾಂ ಕೃತೇ ।
ಯಾನಿಯಾನಿ ಚ ಪಾಪಾನಿ ಸರ್ವಾಣ್ಯಾಚರಿತಾನಿ ಮೇ ॥೪೪॥

ಗಣ್ಯನ್ತೇ ಪಾಂಸವೋ ಭೂಮೇಃ ಗಣ್ಯನ್ತೇ ಜಲಬಿನ್ದವಃ ।
ಮತ್ಕೃತಸ್ಯ ತು ಪಾಪಸ್ಯ ಗಣನಾ ನೈವ ವಿದ್ಯತೇ ॥೪೫॥

ತಾದೃಕಸ್ಯ ಚ ಪಾಪಸ್ಯ ಭಾಗಭಾಗ್ಭವ ಪುತ್ರಕ ।
ತತೋ ಲಘುತರೋ ಭೂತ್ವಾ ಯತಿಷ್ಯೇ ಹರಣೇಂಹಸಃ ॥೪೬॥

ಜೋರಪುತ್ರ ಉವಾಚ.

ನಾಹಂ ಹರಿಷ್ಯೇ ಪಾಪಸ್ಯ ಭಾಗಲೇಶಂ ಹಿ ತಾದೃಶಮ್ ।
ತಚ್ಛ್ರುತ್ವಾ ಹೃದಯಂ ದೀರ್ಣಂ ಕರ್ಣೌ ಮೇ ಬಧಿರೀಕೃತೌ ॥೪೭॥

ಹೀಗೆ ಹೇಳಿದ ಹೆಂಡತಿಯ ಮಾತನ್ನು ಕೇಳಿ, ಅನಂತರ ಆ ಚೋರರಾಜನು, ವಿನೀತನೂ ಗುಣಸಂಪನ್ನನೂ ರೂಪವಂತನೂ ಅಲಂಕಾರಶೋಭಿತನೂ ಆಗಿದ್ದ ತನ್ನ ಮಗನನ್ನು ಕುರಿತು ಹೇಳುವನು ॥೪೨॥

ವತ್ಸ ! ನಾನು ನಿಮಗೋಸ್ಕರ, ಅನೇಕ ಮಹಾ ಪಾಪಗಳನ್ನೂ ನೂರಾರು ಬ್ರಹ್ಮಹತ್ಯೆಗಳನ್ನೂ, ಸುರಾಪಾನಾದಿ ಪಾಪಗಳನ್ನೂ ಅನೇಕವಾಗಿ ಸ್ವರ್ಣಸ್ತೇಯಗಳನ್ನೂ, ಇನ್ನೂ ಇತರವಾಗಿರುವ ಸಮಸ್ತವಾದ ಯಾವ ಪಾಪಗಳನ್ನೂ, ಮಾಡಿರುವೆನು, ಮುಖ್ಯವಾಗಿ ಯಾವ ಯಾವ ಪಾಪಗಳಿರುವುವೋ, ಅವುಗಳೆಲ್ಲವೂ ನನ್ನಿಂದ ಮಾಡಲ್ಪಟ್ಟಿರುವುವು ॥೪೩—೪೪॥

ಭೂಮಿಯಲ್ಲಿರುವ ಧೂಳನ್ನಾದರೂ ಎಣಿಸಬಹುದು; ಸಮುದ್ರದಲ್ಲಿರುವ ನೀರಿನ ಹನಿಗಳನ್ನಾದರೂ ಎಣಿಸಬಹುದು ; ನಾನು ಮಾಡಿರುವ ಪಾಪಕ್ಕೆ ಎಣಿಕೆಯೇ ಇಲ್ಲ ॥೪೫॥

ಅಯ್ಯಾ ! ಮಗನೆ ; ನನ್ನಿಂದ ಮಾಡಲ್ಪಟ್ಟಿರುವ ಇಂತಹ ಪಾಪದಲ್ಲಿ ನೀನು ಸ್ವಲ್ಪಭಾಗವನ್ನು ತೆಗದುಕೊಳ್ಳುವನಾಗು. ನೀನು ಹೀಗೆ ಮಾಡಿದರೆ, ಬಳಿಕ ನಾನು ಪಾಪಕಡಮೆಯಾದವನಾಗಿ, ಅದನ್ನು ನಿಶ್ಶೇಷವಾಗಿ ಪರಿಹರಿಸಿಕೊಳ್ಳುವುದಕ್ಕೆ ಪ್ರಯತ್ನಿಸುವೆನು ॥೪೬॥

ಇದನ್ನು ಕೇಳಿ ಅವನ ಮಗನು ಉತ್ತರಕೊಡುವನು:—

ತಾತ ! ನೀನು ಮಾಡಿರುವ ಅಷ್ಟು ಗುರುತರವಾದ ಪಾಪದಲ್ಲಿ ಒಂದು ಸಣ್ಣ ಭಾಗವನ್ನಾದರೂ ನಾನು ಹೇಗೆತಾನೆ ಸ್ವೀಕರಿಸುವೆನು? ನೀನು ಹೇಳಿದ ಮಾತನ್ನು ಕೇಳಿ, ನನ್ನ ಎದೆಯು ಸೀಳಿಹೋಯ್ತು ; ಕಿವಿಯೆಲ್ಲ ಕಿವುಡಾಗಿಬಿಟ್ಟಿತು ॥೪೭॥

ಪೋಷ್ಯೋಽಹಂ ಪೋಷಕಸ್ತ್ವಂ ಹಿ ಪೋಷ್ಯಪೋಷಕತಾಂ ಗತೌ ।
ಪುತ್ರೋಽಹಂ ಜನಕಸ್ತ್ವಂ ಹಿ ಕಾರ್ಯಕಾರಣತಾಂ ಗತೌ ॥೪೪॥
ಏತೇಷಾಂ ಫಲಭೋಕ್ತಾ ತ್ವಂ ನಾನ್ಯಃ ಶಿಷ್ಯಃ ಸುತಃ ಸ್ತ್ರಿಯಃ ।
ತ್ವಯಾ ಪರಿಜನಸ್ಯಾರ್ಥೇ ಪಾಪಂ ಕೃತಮನೇಕಧಾ ।
ತ್ವಮೇವ ತೇನ ದಗ್ಧೋಽಸಿ ಗಮಿಷ್ಯಸಿ ಫಲಾದನಾಃ ॥೪೫॥
ತಸ್ಮಾತ್ ಪಾಪಂ ನ ಕುರ್ವಂತಿ ಪುತ್ರಾದ್ಯರ್ಥಂ ಸುಬುದ್ಧಯಃ ।
ಧನ್ಯಾಮೇವ ವದಂತಿ ಸ್ಮ ತತ್ತ್ವಜ್ಞಾಃ ಶಾಸ್ತ್ರವೇದಿನಃ ॥೪೦॥
ನಿಶಮ್ಯ ವಚನಂ ಚೋರಃ ಪುತ್ರಸ್ಯಾಮಿತತೇಜಸಃ ।
ನಿನಿಂದ ಸ್ವಕುಲಂ ಜನ್ಮ ಸ್ವವಂಶಜ್ಞಾತಿಬಾಂಧವಾನ್ ॥೪೧॥
ತತ್ತತ್ ಕೃತ್ವಾ ಸ್ವಕಂ ಪಾಪಂ ವ್ಯಥಿತಶ್ಚೋರಭೂಪತಿಃ ॥೪೨॥
ಸ್ವಪಾಪಪರ್ವತಾನಾಂ ಹಿ ಸ್ವಯಂ ಕರ್ತುಂ ವಿನಿಷ್ಕೃತಿಮ್ ।
ವಿನಿರ್ಯಯೌ ಗೃಹಾತ್ ತೂರ್ಣಂ ಭ್ರಷ್ಟಸಂಕಲ್ಪಮಾನಸಃ ॥೪೩॥
ಏವಂ ಸಂಚಿಂತಯಚ್ಚೋರೋ ಹಾಹಾ ಮೇ ನಷ್ಟಜನ್ಮನಃ ।

ನಾನು ಪೋಷ್ಯನು; ನೀನು ಪೋಷಕನು. ಹೀಗೆ ನೋಡಿದರೆ, ನಮ್ಮಿಬ್ಬರಿಗೂ ಪೋಷ್ಯ ಪೋಷಕಸಂಬಂಧವಿರುವುದಲ್ಲದೆ–ಮತ್ತೇನೂ ಇಲ್ಲ. ನಾನು ಮಗನೆಂದು ನೀನು ತಂದೆಯೆಂದೂ ಇಟ್ಟುಕೊಂಡರೆ, ಆಗ ನಾವಿಬ್ಬರೂ ಕಾರ್ಯಕಾರಣಭೂತರಾಗುವೆವು ॥೪೪॥

ಹೀಗಿರುವುದರಿಂದ, ನೀನು ಮಾಡಿರುವ ಈ ಪಾಪಗಳ ಫಲವನ್ನು ನೀನೇ ಅನುಭವಿಸಬೇಕಲ್ಲವೆ, ಇತರರಾದ ಶಿಷ್ಯರಾಗಲಿ ಪುತ್ರರಾಗಲಿ ಸ್ತ್ರೀಯರಾಗಲಿ–ಅದನ್ನನುಭವಿಸಲಾರರು. ನೀನು ನಿನ್ನ ಪರಿಜನಕ್ಕೋಸ್ಕರ ಅನೇಕ ವಿಧವಾಗಿ ಪಾಪವಮಾಡಿರುವೆ. ಆದರಿಂದ ನೀನು ಪಾಪ ಮಾಡಿ ಸಂಗ್ರಹಿಸಿದ ದ್ರವ್ಯದ ಫಲವನ್ನನುಭವಿಸತಕ್ಕವರು, ಆವರವರ ಇಚ್ಛೆಬಂದಂತೆ ಹೊರಟುಹೋಗುವರು ॥೪೫॥

ಆದುದರಿಂದ, ಬುದ್ಧಿವಂತರು ಪುತ್ರಾದಿಗಳಿಗೋಸ್ಕರವಾಗಿ ಪಾಪಕೃತ್ಯವನ್ನು ಮಾಡುವುದಿಲ್ಲವೆಂದು, ಶಾಸ್ತ್ರವೇತ್ತರಾದ ತತ್ವಜ್ಞರು ಧರ್ಮಯುಕ್ತವಾಗಿಯೇ ಹೇಳಿರುವರು ॥೪೦॥

ಹೀಗೆಂದು ಹೇಳುತಿರುವ–ಮಹಾತೇಜಸ್ವಿಯಾದ- ಮಗನ ಮಾತನ್ನು ಕೇಳಿ, ಆ ಚೋರನು, ತನ್ನ ಜಾತಿಯನ್ನೂ ತನ್ನ ಜನ್ಮವನ್ನೂ ತನ್ನ ವಂಶವನ್ನೂ ಜ್ಞಾತಿಗಳನ್ನೂ ಬಂಧುಗಳನ್ನೂ ವಿಶೇಷವಾಗಿ ನಿಂದಿಸಿದನು. ಮತ್ತು, ತಾನು ಮಾಡಿರುವ ಅಯಾ ಪಾಪಕೃತ್ಯಗಳನ್ನೆಲ್ಲ ನೆನಸಿಕೊಂಡು ಅತಿಯಾಗಿ ವ್ಯಥೆಪಟ್ಟನು ॥೪೧—೪೨॥

ಈರೀತಿಯಾಗಿ ತನ್ನ ಮನಸ್ಸಿನ ಸಂಕಲ್ಪವು ಭ್ರಷ್ಟವಾದುದರಿಂದ, ತನ್ನ ಪಾಪಗಳೆಂಬ ಪರ್ವತಗಳಿಗೆ ಪ್ರತೀಕಾರ ಮಾಡಿಕೊಳ್ಳುವುದಕ್ಕೋಸ್ಕರ, ಆಕ್ಷಣವೇ ತನ್ನ ಮನೆಯನ್ನು ಬಿಟ್ಟು ಹೊರಟುಹೋದನು ॥೪೩॥

ಆಗ ದಾರಿಯಲ್ಲಿ ಬರುತ್ತ ಆ ಕಳ್ಳನು ಈರೀತಿಯಾಗಿ ಮನಸ್ಸಿನಲ್ಲಿ ಆಲೋಚಿಸಿದನು:—ಹಾಹಾ! ಜನ್ಮವನ್ನೆಲ್ಲ ವ್ಯರ್ಥವಾಗಿ ಕಳೆದುಕೊಂಡು–ಈ ಹಾಳುಸಂಸಾರದಲ್ಲಿ ಬಿದ್ದು ಕೃತ್ಯಾ

ಸಂಸಾರೇ ವರ್ತಮಾನಸ್ಯ ಕಾರ್ಯಾಕಾರ್ಯಮಜಾನತಃ ॥೫೪॥

ಧರ್ಮಹೀನಸ್ಯ ಪಾಪಸ್ಯ ಜನ್ಮೇದಂ ವಿಫಲಂ ಕೃತಮ್ ।
ಕಿಂ ಕರೋಮಿ ಕ್ವ ಗಚ್ಛಾಮಿ ಕಿಂ ಕೃತ್ವಾ ಸುಕೃತಂ ಭವೇತ್ ॥೫೫॥

ಯನ್ಮೇ ಪರಿಜನಸ್ಯಾರ್ಥೇ ಕೃತಂ ಕರ್ಮಾಽಕುಶಲಂ ಶುಭಮ್ ।
ವಿಕಾಕೇ ತೇನ ದಹ್ಯೇಽಹಂ ಗತಾಸ್ತೇ ಫಲಭಾಗಿನಃ ॥೫೬॥

ಧರ್ಮಃ ಸಹಾಯಃ ಸರ್ವೇಷಾಂ ಪರಲೋಕಂ ಹಿ ಗಚ್ಛತಾಮ್ ।
ಬನ್ಧುರ್ಮಿತ್ರಂ ಕಳತ್ರಂ ಚ ಪುತ್ರಾಸ್ತತ್ಪರಿಪನ್ಥಿನಃ ॥೫೭॥

ಪಞ್ಚೇನ್ದ್ರಿಯವಶಂ ನೀತಾಃ ಕಳತ್ರೇಣಾಪಿ ನಿರ್ಜಿತಾಃ ।
ಭೋಗಲಾಲಪ್ಯಮಾಪನ್ನಾಃ ತೇ ವೈ ನಿರಯಗಾಮಿನಃ ॥೫೮॥

ಅಹಂ ಶರಣಮಾಪತ್ಸ್ಯೇ ತಾನ್ ವಿಪ್ರಾನ್ ವೇದಪಾರಗಾನ್ ।
ದರ್ಶನಾದೇವ ಯೇಷಾಂ ಮೇ ಮನಶ್ಶಾನ್ತಿರಭೂತ್ ಪುರಾ ॥೫೯॥

ತೇ ವೈ ತಾರಯಿತುಂ ಶಕ್ತಾಃ ಶರಣಾಗತಮಾನವಾನ್ ।
ಪತಿತಾನ್ ಕ್ರೂರಚೇಷ್ಟಾನ್ ವಾ ಬ್ರಾಹ್ಮಣಾನ್ಮೃದುಮಾನಸಾನ್ ॥೬೦॥

ಕೃತ್ಯಗಳನ್ನರಿಯದೆ-ಧರ್ಮಹೀನನಾಗಿ ಮಹಾಪಾಪಾತ್ಮನಾಗಿರುವ ನನಗೆ, ಈ ಜನ್ಮವೇ ವ್ಯರ್ಥವಾಯಿತಲ್ಲ! ನಾನು ಈಗ ಏನುಮಾಡಲಿ? ಎಲ್ಲಿಗೆ ಹೋಗಲಿ? ಏನುಮಾಡಿದರೆ ಒಳ್ಳೆಯದಾದೀತು? ॥೫೪—೫೫॥

ನನ್ನ ಪರಿಜನಕ್ಕೋಸ್ಕರ ನಾನು ಅತ್ಯದ್ಭುತ ಪಾಪಕರ್ಮವನ್ನು ಮಾಡಿದುದಾವುದುಂಟೋ, ಇದರಿಂದ ಈಗ ನಾನೊಬ್ಬನೇ ಸಂಕಟಪಡುತ್ತಿರುವೆನು. ಅವರೆಲ್ಲರೂ ಫಲವನ್ನು ಮಾತ್ರ ಅನುಭವಿಸಿಬಿಟ್ಟು ತಮ್ಮ ಪಾಡಿಗೆ ತಾವು ಹೊರಟುಹೋದರು ॥೫೬॥

ಪರಲೋಕದಲ್ಲಿ ಸದ್ಗತಿಯನ್ನು ಹೊಂದಬೇಕೆನ್ನುವವರಿಗೆಲ್ಲ, ಧರ್ಮವೇ ಸಹಾಯಭೂತವಾದುದು; ಬಂಧು ಮಿತ್ರರು ಪುತ್ರಕಳತ್ರಾದಿಗಳೆಲ್ಲರೂ, ಅದಕ್ಕೆ ಕೇವಲ ವಿಘ್ನಭೂತರಾಗುವರು ॥೫೭॥

ಹೀಗಿರುವುದರಿಂದ, ಯಾರು ಇಂದ್ರಿಯಪರವಶರಾಗಿ-ಕೇವಲ ಸ್ತ್ರೀಜಿತರಾಗಿ-ಭೋಗಲಂಪಟರಾಗಿರುವರೋ, ಅವರು ನರಕಭಾಗಿಗಳಾಗುವರು ॥೫೮॥

ಆದುಕಾರಣ, ಈಗ ಅರಣ್ಯದಲ್ಲಿ ಯಾರನ್ನು ನೋಡಿದೊಡನೆಯೇ ನನಗೆ ಮನಶ್ಶಾಂತಿಯುಂಟಾಗಿಬಿಟ್ಟಿತೋ, ಆ ವೇದವಾರಂಗತರಾದ ಬ್ರಾಹ್ಮಣರನ್ನು ಮರೆಹೊಗುವೆನು ॥೫೯॥

ಅವರುಗಳೇ, ಶರಣಾಗತರಾದ ಮನುಷ್ಯರು—ಪತಿತರಾಗಿದ್ದರೂ-ಅಥವಾ ಕ್ರೂರಕರ್ಮರಾಗಿದ್ದರೂ-ಅವರನ್ನು ಉದ್ಧರಿಸುವುದರಲ್ಲಿ ಸಮರ್ಥರಾಗಿರುವರು. ಬ್ರಾಹ್ಮಣರು ಸ್ವಭಾವತಃ ಮೃದುಹೃದಯರಾದವರು ॥೬೦॥

ಏವಂ ವಿಜಿನ್ಯ ಮನಸಾ ಶನೈರ್ಗಚ್ಛ ದ್ವಿಜಾನ್ತಿಕಮ್ ।
ದದೃಶೇ ಭೀಮಬಾಹೋಸೌ ವ್ಯಾಘ್ರೋವದ್ಭಯದರ್ಶನಃ ॥೬೧॥
ಘೋರರೂಪಮುಪಾಯಾನ್ತಂ ಚೋರಂ ದೃಷ್ಟ್ವಾ ಮುನೀಶ್ವರಾಃ।
ಉದ್ವಿಗ್ನಮನಸಃ ಸರ್ವೇ ರಾಮಂ ಶರಣಮಾಗತಾಃ ॥೬೨॥

ಇತಿ ಶ್ರೀಮದಯೋಧ್ಯಾಕಾಣ್ಡೇ ಚೋರೇಣ ಭಾರ್ಯಾದ್ಯಾಲೋಚನ
ಕಥನಂ ನಾಮ ತ್ರಯೋವಿಂಶಃ ಸರ್ಗಃ.



ಹೀಗೆಂದು ತನ್ನ ಮನಸ್ಸಿನಲ್ಲಿ ಬೋಧಿಸಿಕೊಂಡು-ಮೆಲ್ಲಗೆ ಆ ಸಪ್ತರ್ಷಿಗಳ ಹತ್ತಿರಕ್ಕೆ ಭೀರುಶಪಥರನಾಗಿ ಬರುತಿರುವ ಆ ವ್ಯಾಧನು, ವ್ಯಾಘ್ರದಂತೆ ಅತಿಭಯಂಕರನಾಗಿ ಕಾಣಿಸಿಕೊಂಡನು ॥೬೧॥

ಆಗ, ಹೀಗೆ ಅತಿಭಯಂಕರನಾಗಿ ಬರುತಿರುವ ಆ ಚೋರನನ್ನು ಕಂಡು, ಸಮಸ್ತ ಮುನಿಗಳೂ ಎದೆಯೊಡೆದುಹೋದವರಾಗಿ, ಶ್ರೀರಾಮನಿಗೆ ಶರಣಾಗತರಾದರು ॥೬೨॥

ಇದು ಅಯೋಧ್ಯಾಕಾಂಡದಲ್ಲಿ ಚೋರವ್ಯಾಧನು ಭಾರ್ಯಾವೃತ್ತಾದಿಗಳೊಡನೆ
ಆಲೋಚನೆ ಮಾಡಿದನೆಂಬಲ್ಲಿಗೆ ಇಪ್ಪತ್ತ್ಮೂರನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಚೈತುರ್ವಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ಸ್ವಸ್ವಮಾನಸಕಾತರ್ಯಂ ಅಲೋಚ್ಯ ಸ್ವಸ್ವಮಾನಸಮ್ ।
ಶಿಕ್ಷಯನ್ತಸ್ತತೋ ರಾಮಂ ತುಷ್ಟುವುಸ್ತೇ ಪೃಥಕ್‌ಪೃಥಕ್ ॥೧॥

ಕಶ್ಯಪ ಉವಾಚ.

ನಿತ್ಯಂ ಕಿಂ ಧಾವಸಿ ಚಲ ವಿಷಯಾನನುಭವಿತುಂ ಸುಖಲೇಶಾಭಾಸಾ
ಉರುತರದುಃಖಾನತಿದುಸ್ಸಾಧ್ಯಾನತ್ಯನ್ತಾ ಯಾಸಾನಂಹೋಮೂಲಾ । ನ್ಯುಗ್ರ
ಭಯಙ್ಕರರೌರವಾದಿನಾರಕಗತಿಹೇತೂನೇತಾನಪಿ ಪರಿಹರ ಸೀತಾಪತಿಮಾಶು
ಪರಿಚರೇಶಂ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ
ಶರಣಮ್ ॥೨॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತನಾಲ್ಕನೆಯ ಸರ್ಗವು.

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಆ ಬಳಿಕ, ಆ ಸಪ್ತಮಹರ್ಷಿಗಳು, ತಂತಮ್ಮ ಮನಸ್ಸಿನ ಭೀತಿಯನು ನೋಡಿಕೊಂಡು. ತಂತಮ್ಮ ಮನಸ್ಸನ್ನು ಶುದ್ಧಿಸುತ, ಈರೀತಿಯಾಗಿ ಬೇರೆಬೇರೆ ಶ್ರೀರಾಮನನ್ನು ಸ್ತುತಿಸಿದರು ॥೧॥

ಕಶ್ಯಪಮುನಿ ಮಾಡಿದ ಸ್ತೋತ್ರವೇನೆಂದರೆ :—

ಎಲೈ ಚಂಚಲವಾದ ಮನಸ್ಸೇ! ನೀನು ಈ ವಿಷಯಗಳನ್ನು ಅನುಭವಿಸುವುದಕ್ಕಾಗಿ ಸರ್ವದಾ ಹೀಗೇಕೆ ಓಡುತಿರುವೆ? ಈ ವಿಷಯಗಳ ಸ್ವರೂಪವನ್ನು ಚೆನ್ನಾಗಿ ಯೋಚಿಸು. ಇವು ಸುತರಾಂ ಸುಖಕರಗಳಲ್ಲ ಎಲ್ಲಿಯೋ ಒಂದು ಸುಖಲೇಶವಿರುವಂತೆ ಮಾತ್ರ ತೋರುವುದು. ದುಃಖವಾದರೋ ಅತಿಯಾಗಿರುವುದು. ಇವ್ವಾದರೂ, ಇವುಗಳನ್ನು ಸಾಧಿಸಿಕೊಳ್ಳುವುದೇ ಅತಿಶ್ರಮಕರವಾಗಿರುವುದು. ಇವುಗಳು ಅತಿಯಾಗಿ ಆಯಾಸಹೇತುಗಳು. ಕೊನೆಗೆ ಪಾಪಕ್ಕೆ ಮೂಲಜೊತವಾಗುವುವು. ಆಮೇಲೆ ಅತ್ಯುಗ್ರವಾಗಿ ಭಯಂಕರವಾಗಿರುವ ರೌರವ ಮುಂತಾದ ನರಕಗಳಿಗೆ ಕಾರಣವಾಗುವುವು. ಇಂತಹ ಈ ವಿಷಯಗಳ ಯೋಚನೆಯನ್ನು ಬಿಟ್ಟು ಸರ್ವಲೋಕಮಹೇಶ್ವರನಾದ ಶ್ರೀಸೀತಾಪತಿಯನ್ನು ಸೇವಿಸು. ಎಲೈ ಮನಸ್ಸೆ! ನೀನು ಶ್ರೀರಾಮನನ್ನು ಮರೆಹೋಗುವನಾಗು. ಆ ರಘುಕುಲತಿಲಕನಾದ ಶ್ರೀರಾಮನನ್ನು ಸೇವಿಸು ಅವನಿಗೆ ಶರಣಾಗತನಾಗು ॥೧॥ ಅತ್ರಿಶರಿಗೆ ಚಿಂತಾಮಣಿಯೂ ಅತ್ಯಂತ ದಯಾನಿಧಿಯೂ ಶತ್ರುನಾಶಕನೂ ವರಧನುರ್ಬಾಣಧರನೂ ಆಗಿರುವ ಶ್ರೀರಾಮನನ್ನು, ಎಲೈ ಮನಸ್ಸೆ! ನೀನು ಮರೆಹೊಗುವನಾಗು. ಆ ರಘುಕುಲತಿಲಕನಾದ ಶ್ರೀರಾಮನನ್ನು ಸೇವಿಸು ; ಅವನಿಗೆ ಶರಣಾಗತನಾಗು ॥೨॥

ಶ್ರಿತಜನ್ತಾಮಣಿಮತಿಕರುಣಾಕರವರಿಹರಮುರಿತರಶರಕೋದಣ್ಡಮ್।
ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜಶರಣಮ್ ॥
ಅತ್ರಿರುವಾಚ.

ಬಹುವಿಧಪಾಪವಶಾದಿಹ ನಾನಾಯೋನಿಷು ಜನ್ಮಮೃತೀ ಯಾತೋ
ದೇಹೀ ದೈವಾದುತ್ತಮಮಾನುಷಪೌರುಷವಿಪ್ರದೇಹವಿದ್ಯಾಸಮ್ಪನ್ನೋಪಿ
ಬ್ರಹ್ಮಣಿ ಪರಮೇ ವಿಮುಖೋ ದುಃಖೀ ದುರ್ವಿಷಯೈಷೀ ನಶ್ಯತಿ ತೃಣಕ
ಬಳಸ್ವೀಕರಣೇ ಕಾಲೇ ಪಶುರಿವ ರೋಮನ್ಥಂ ಕುರ್ವ ಭೋಶ್ಚೇತಃ
ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್॥೩॥

ಶ್ರಿತಜನ್ತಾಮಣಿ—ಶರಣಮ್.

ಭರದ್ವಾಜಉವಾಚ.

ಉಪರ್ಯುಪರಿ ಮನೋರಥಜಾಲಂ ವಿದ್ವಾನಪಿ ಕಾಮಯತೇ ಯತತೇ
ಪುತ್ರಮಿತ್ರಕಳತ್ರಾದಿಷು ನಿರ್ವೇದಂ ನೈವ ಯಾತಿ ಕಾಮುಕಾಮಿನಿ। ವಿದ್ಯಾ
ಸಮ್ಪತ್ಕುಲಧನಸೌಭಗಯೌವನಗರ್ವಪರ್ವತಾಧಿರೂಢೋ ಮೂಢಃ ಪಕ್ಷಾ
ದನ್ಧೇ ತಮಸಿ ಪತೇದವಶೋನ್ಧುನನ್ಧಇವ ಭೋಶ್ಚೇತಃ ಶ್ರೀರಾಮಂ
ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೪॥

ಶ್ರಿತಜನ್ತಾಮಣಿ—ಶರಣಮ್.

ಅತ್ರಿಮುನಿಯು ಮಾಡಿದ ಸ್ತೋತ್ರವೇನೆಂದರೆ:—

ಜೀವನು, ತಾನುಮಾಡಿದ ಅನೇಕವಿಧ ಪಾಪಗಳಿಗಧೀನನಾಗಿ, ಈ ಲೋಕದಲ್ಲಿ ನಾನಾ ಯೋನಿಗಳೊಳಗೆ ಜನನಮರಣಗಳನ್ನು ಹೊಂದಿ, ಬಳಿಕ ಅದೃಷ್ಟವಿಶೇಷದಿಂದ ಉತ್ತಮವಾದ ಮನುಷ್ಯಜನ್ಮವನ್ನೂ-ಅದರಲ್ಲೂ ಪುರುಷಜನ್ಮವನ್ನೂ-ತತ್ರಾಪಿ ಬ್ರಾಹ್ಮಣಜನ್ಮವನ್ನೂ ಪಡೆದವನಾಗಿದ್ದರೂ ವಿದ್ಯಾಸಂಪನ್ನನಾಗಿದ್ದರೂ, ಆ ಪರಬ್ರಹ್ಮನಲ್ಲಿ ವಿಮುಖನಾಗಿ, ದುಃಖ ಪಡುತ, ದುಷ್ಟವಾದ ವಿಷಯಗಳನ್ನಪೇಕ್ಷಿಸುತ' ಹುಲ್ಲನ್ನು ತೆಗೆದುಕೊಳ್ಳತಕ್ಕ ಹೊತ್ತಿನಲ್ಲಿ ಮೆಲಕುಮಾಡುವುದಕ್ಕುಪಕ್ರಮಿಸುವ ಪಶುವಿನಂತೆ, ವೃಥಾ ನಾಶಹೊಂದುವನು. ಅದುಕಾರಣ, ಎಲೈ ಮನಸ್ಸೇ! ನೀನು ಹೀಗೆ ಮಾಡದೆ, ಶ್ರೀರಾಮನನ್ನು ಮರೆಹೋಗುವನಾಗು..... ನಾಗು ॥೩॥ ಆಶ್ರಿತರಿಗೆ.....! ನಾನು !

ಭರದ್ವಾಜನು ಮಾಡುವ ಸ್ತೋತ್ರವೇನೆಂದರೆ:—

ಎಂತಹ ವಿದ್ವಾಂಸನಾಗಿದ್ದರೂ, ಮೇಲೆಮೇಲೆ ಮನೋರಥಪರಂಪರೆಯನ್ನು ಅಪೇಕ್ಷಿಸುತ್ತಲೇ ಇರುವನು; ಪುತ್ರಮಿತ್ರ ಕಳತ್ರಾದಿಗಳ ವಿಷಯದಲ್ಲಿ ಪ್ರಯತ್ನಪಡುತ್ತಲೇ ಇರುವನು; ಸರ್ವದಿಾ ಕಾಮಭೋಗವನ್ನು ಬಯಸುತ, ಅದರಲ್ಲಿ ಸ್ವಲ್ಪವೂ ನಿರ್ವೇದವನ್ನು ಹೊಂದುವುದೇಇಲ್ಲ. ವಿದ್ಯೆ ಸಂಪತ್ತು ಕುಲ ಧನ ಸೌಭಾಗ್ಯ ಯೌವನ-ಇವುಗಳೆಂಬುಂಟಾಗುವ ಗರ್ವವೆಂಬ ಪರ್ವತದಮೇಲೆ ಹತ್ತಿ ಕುಳಿತುಕೊಂಡಿರುವ ಆ ಮೂಢನು, ಕುರುಡನು ಹಳ್ಳದಲ್ಲಿ ಬೀಳುವಂತೆ, ಕೊನೆಗೆ ತನ್ನ ಹಿತ್ತುವಿಲ್ಲದೆ ಅಂಧತಮಸ್ಸಿನಲ್ಲಿ ಬಿದ್ದುಬಿಡುವನು. ಅದುದರಿಂದ, ಎಲೈ ಮನಸ್ಸೇ! ನೀನು ಹೀಗೆ ಮಾಡದೆ ಶ್ರೀರಾಮನನ್ನು ಮರೆಹೋಗುವನಾಗು.....ನಾಗು॥೪॥ ಆಶ್ರಿತರಿಗೆ...ನಾಗು.

ವಿಶ್ವಾಮಿತ್ರಉವಾಚ.

ಅರಿಷಡ್ವರ್ಗಂ ಜಹಿ ತೃಷ್ಣಾಮಪಿ ಮಾಯಾಮಿಲಿತಮಿದಮಿತಿಬುದ್ಧ್ಯಾ ದುರ್ಜನಸಜ್ಜನತಿಮತಿದೂರೀಕುರು ಸಜ್ಜನಮಾಶ್ರಯ ಭೋಃ । ಪರಧನಪರದಾರಾಭಿರತಿಂ ತ್ಯಜ ಪಾರಲೌಕಿಕಂ ಧರ್ಮಂ ಪರಿಚಿನು ಪದ್ಮಾಪತಿಪದಪದ್ಮಂಸೇವಯ ಬನ್ಧಮುಕ್ತಯೇ ಭೋಃ ಶ್ರೀತಃ ಶ್ರೀರಾಮಂ ಭಜ ಕರಣಂ ಭಜ ರಘುರಾಮಂ ಭಜ ಕರಣಮ್ ॥೩॥ ಶ್ರಿತಜನ-ತ್ರಾಣ—ಕರಣಮ್.

ಗೌತಮಉವಾಚ.

ಕರ್ಣಾಕರ್ಣಯ ವೈದೇಹೀವರವರ್ಣಿನೀಯಗುಣಚರಿತಂ ನಯನಾಲೋಕಯ ನಳನನಯನಮುಖಸುನ್ದರೀನ್ದುಬಿನ್ಬಮ್ । ಮಸ್ತಕ ಸಂಸ್ತುತಮುಹಿ ಮಾಸಂ ನಮ ಕಸೂರೀನಿಕರಾಕಾರಂ ಹರಿಮರ್ಚಯ ಹಸ್ತಯುಗಾಪನೀಪಾಲ ನಮಿನಕುಲರತ್ನಂ। ಭೋಃ ಶ್ರೀತಃ ಶ್ರೀರಾಮಂ ಭಜ ಕರಣಂ ಭಜ ರಘುರಾಮಂ ಭಜ ಕರಣಮ್ ॥೪॥ ಶ್ರಿತಜನ-ತ್ರಾಣ—ಕರಣಮ್.

ಜಮದಗ್ನಿರುವಾಚ.

ಪರಾಪವಾದಂ ಪರಿಹರ ಜಿಹ್ವೇ ಪಾರುಷ್ಯಂ ಚಾನೃತಮಪಿ ಮಾವದ ಸಂಕೀರ್ತಯ ಸಂಕೀರ್ತಯ ಶ್ರೀಕೇಶವ ನಾರಾಯಣ ಕೃಷ್ಣ ಗೋವಿನ್ದನೃಹರೇ।

ವಿಶ್ವಾಮಿತ್ರಮುನಿಯು ಮಾಡಿದ ಸ್ತೋತ್ರವೇನೆಂದರೆ :—

ಎಲೈ ಮನಸ್ಸೇ! ಈ ಪ್ರಪಂಚವೆಲ್ಲವೂ ಮಾಯಾಕಾವಿಲಾಸವೆಂದು ತಿಳಿದುಕೊಂಡು, ಕಾಮ ಕ್ರೋಧಾದ್ಯರಿಷಡ್ವರ್ಗವನ್ನೂ ತೃಷ್ಣೆಯನ್ನೂ ಪರಿಹರಿಸು; ದುರ್ಜನರ ಸಹವಾಸವನ್ನು ಅತಿದೂರವಾಗಿ ಬಿಟ್ಟುಬಿಡು, ಸತ್ಪುರುಷರನ್ನೇ ಸರ್ವದಾ ಆಶ್ರಯಿಸು; ಪರಧನದಲ್ಲಿಯೂ ಪರದಾರರಲ್ಲಿಯೂ ಆಶೆಯನ್ನು ಮಾಡಬೇಡ; ಪರಲೋಕಸಾಧಕವಾದ ಧರ್ಮವನ್ನು ಸಂಗ್ರಹಿಸು; ಸಂಸಾರ ಬಂಧಮುಕ್ತಿಗೋಸ್ಕರವಾಗಿ, ಶ್ರೀ ಸೀತಾಕಾಂತನ ಪಾದಕಮಲವನ್ನು ಸರ್ವದಾ ಸೇವಿಸುವನಾಗು. ಎಲೈ ಮನಸ್ಸೆ! ನೀನು ಶ್ರೀರಾಮನನ್ನು ಮರೆಹೊಗುವನಾಗು.....॥೩॥ ಆಶ್ರಿತರಿಗೆ.....ನಾಗು ॥

ಗೌತಮಮುನಿಯು ಮಾಡಿದ ಸ್ತೋತ್ರವೇನೆಂದರೆ :—

ಎಲೈ ನನ್ನ ಕವಿಯೇ! ನೀನು ಆ ಸೀತಾಪತಿಯು ಪ್ರಶಸ್ತನಾದ ಗುಣಚರಿತ್ರವನ್ನು ಕೇಳು ತಿರು; ಎಲೈ ನೇತ್ರವೇ! ನೀನು ಆ ಪುಂಡರೀಕಾಕ್ಷನ ಮುಖವೆಂಬ ಸುಂದರವಾದ ಚಂದ್ರಬಿಂಬವನ್ನು ನೋಡುತಿರು; ಎಲೈ ಶಿರಸ್ಸೇ! ನೀನು ಪ್ರಶಸ್ತಮಹಿಮನಾದ ಕಸ್ತೂರೀ ನವೋಪಸವರ್ಣನಾದ ಆ ರಘುಪತಿಯನ್ನು ನಮಸ್ಕರಿಸು; ಎಲೈ ಹಸ್ತಯುಗ್ಮವೇ! ಸಜ್ಜನಕುಲರತ್ನನಾಗಿ ರಾಜಾಧಿರಾಜನಾಗಿ ಅವತರಿಸಿದ ಶ್ರೀಹರಿಯನ್ನು ನೀನು ಪೂಜಿಸು. ಎಲೈ ನನ್ನ ಮನಸ್ಸೇ! ನೀನು ಶ್ರೀರಾಮನನ್ನು ಮರೆಹೊಗುವ.....ನಾಗು ॥೪॥ ಆಶ್ರಿತರಿಗೆ.....ನಾಗು ॥

ಜಮದಗ್ನಿಮುನಿಯು ಮಾಡಿದ ಸ್ತೋತ್ರವೇನೆಂದರೆ :—

ಎಲೈ ನನ್ನ ನಾಲಿಗೆಯೇ! ನೀನು ಪರರಲ್ಲಿ ದೋಷಾರೋಪಣೆ ಮಾಡುವುದನ್ನು ಸುತರಾಂ ಪರಿಹರಿಸು; ಕ್ರೂರವಚನವನ್ನೂ ಅಸತ್ಯವನ್ನೂ ಹೇಳಬೇಡ. ಶ್ರೀಕೇಶವ, ನಾರಾಯಣ,

ವೈಕುಣ್ಠಾಧಿಪ ದಾಮೋದರ ಬುಧಮಾನಸಮಂದಿರ ಸೀತಾವಲ್ಲಭ ದಶರಥರಾಜ ನಂದನೇತಿ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೬॥ ಶ್ರುತಚಿನ್ತಾಮಣೇ—ಶರಣಮ್.

ವಸಿಷ್ಠ ಉವಾಚ.

ನಿತ್ಯಾನಂದಂ ಸತ್ಯಮನಂತಂ ಬ್ರಹ್ಮ ಪರಾತ್ಪರಮದ್ವಯಮಮಲಂ ನಿತ್ಯಂ ಬುದ್ಧಂ ಶುದ್ಧಂ ಶಾಂತಂ ಶಾಶ್ವತಮಪ್ರಮೇಯಮನಾದ್ಯಂತಮ್ । ಸರ್ವಾಸಾಮುಪನಿಷದಾಮರ್ಥಃ ಸ ಶ್ರೀರಾಮಃ ಸೀತಾಪತಿರಿತಿ ಹರಿಹರ ಚತುರಾನನಾದಿಭಿರ್ಗೀಯತೇ ಯಸ್ತಸ್ಯ ದಾಸೋಹಂ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೫॥ ಶ್ರುತಚಿನ್ತಾಮಣೇ ಮತಿಕರುಣಾಕರ ಮುರಿಹರಮುರುತರಶರಕೋದಂಡಂ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥

ಶ್ರೀ ಶಿವ ಉವಾಚ.

ಏವಂ ಸ್ತುತ್ವಾ ರಾಮಚಂದ್ರಂ ಮುನೀನ್ದ್ರಾಃ
ಪ್ರತ್ಯೇಕಂ ತೇ ಭಕ್ತಿನಮ್ರಾಸ್ತದಾನೀಮ್ ।
ಆಪನ್ನಾರ್ತಿಧ್ವಾನ್ತಭಾನುಂ ಪ್ರಪನ್ನಾಃ
ತೂಷ್ಣೀಮಾಸನ್ ರಾಮಪಾದೈಕನಿಷ್ಠಾಃ ॥೮॥

ಕೃಷ್ಣ, ಗೋವಿಂದ, ನರಹರೇ, ವೈಕುಂಠನಾಯಕ, ದಾಮೋದರ, ಹೇ ಯೋಗಿಮನೋನಿಲಯ, ಸೀತಾವಲ್ಲಭ, ದಾಶರಥೇ,—ಎಂದು ಸರ್ವದಾ ಪುನಃಪುನಃ ಕೀರ್ತನೆಮಾಡುತಿರು. ಎಲೈ ನನ್ನ ಮನಸ್ಸೇ! ನೀನು ಶ್ರೀರಾಮನನ್ನು ಮರೆಹೊಗುವನಾಗು.....॥೬॥ ಅಶ್ರುತರಿಗೆ.....ನಾಗು॥

ವಸಿಷ್ಠಮುನಿಯು ಮಾಡಿದ ಸ್ತೋತ್ರವೇನೆಂದರೆ :—

ಯಾವ ಸೀತಾಪತಿಯಾದ ಶ್ರೀರಾಮನು, ನಿತ್ಯಾನಂದ ಸತ್ಯ ಅನಂತ ಪರಬ್ರಹ್ಮ ಪರಾತ್ಪರ ಅದ್ವಯ ಅಮಲ ನಿತ್ಯ ಬುದ್ಧ ಶುದ್ಧ ಶಾಂತ ಶಾಶ್ವತ ಅಪ್ರಮೇಯ ಅನಾದ್ಯಂತ ಸರ್ವೋಪನಿಷದ್ಗೋಚರ-ಎಂಬುದಾಗಿ ಬ್ರಹ್ಮ ವಿಷ್ಣು ಮಹೇಶ್ವರಾದಿಗಳಿಂದ ಸ್ತುತಿಸಲ್ಪಡುತಿರುವನೋ, ಅವನಿಗೆ ನಾನು ದಾಸನು. ಎಲೈ ನನ್ನ ಮನಸ್ಸೇ! ನೀನು ಶ್ರೀರಾಮನನ್ನು ಮರೆಹೊಗುವನಾಗು. ಆ ರಘುಕುಲತಿಲಕನಾದ ಶ್ರೀರಾಮನನ್ನು ಸೇವಿಸು; ಅವನಿಗೆ ಶರಣಾಗತನಾಗು॥೫॥ ಅಶ್ರುತರಿಗೆ ಚಿಂತಾಮಣಿಯೂ ಅಶ್ಯಂತ ದಯಾನಿಧಿಯೂ ಶತ್ರುನಾಶಕನೂ ವರಧನುರ್ಬಾಣ ಧರನೂ ಆಗಿರುವ ಶ್ರೀರಾಮನನ್ನು, ಎಲೈ ಮನಸ್ಸೇ! ನೀನು ಮರೆಹೊಗುವನಾಗು. ಆ ರಘು ಕುಲತಿಲಕನಾದ ಶ್ರೀರಾಮನನ್ನು ಸೇವಿಸು; ಅವನಿಗೆ ಶರಣಾಗತನಾಗು ॥

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಆಗ ಭಕ್ತಿನಮ್ರರಾಗಿರುವ ಸಪ್ತಮಹರ್ಷಿಗಳು ಈರೀತಿಯಾಗಿ ಶ್ರೀ ರಾಮಚಂದ್ರನನ್ನು ಬೇರೆಬೇರೆಯಾಗಿ ಸ್ತುತಿಸಿ, ಆರ್ತರ ದುಃಖವೆಂಬ ಅಂಧಕಾರಕ್ಕೆ ಸೂರ್ಯ ಪ್ರಾಯನಾಗಿರುವ ಆ ಶ್ರೀರಾಮನಿಗೆ ಪ್ರಪನ್ನರಾಗಿ, ಆ ರಾಮನ ಪಾದವೊಂದರಲ್ಲಿಯೇ ಭಾರ ವನ್ನಿಟ್ಟುಕೊಂಡು ಸುಮ್ಮನಾದರು ॥೮॥

ತತಃ ಪ್ರಸನ್ನೋ ಭಗವಾ೯ ಕರುಣಾವರುಣಾಲಯಃ ।
ಸಸ್ಮಿತಃ ಸುಂದರಃ ಕಾನ್ತೋ ವನಮಾಲಾವಿರಾಜಿತಃ ॥೧೦॥
ಪೀತಾಮ್ಬರಧರೋ ದೇವಃ ಸೀತಾಲಕ್ಷ್ಮಣಸಂಯುತಃ ।
ಆಜಾನುಬಾಹುಃ ಸರ್ವಜ್ಞೋ ಭಕ್ತಾನಾಮಭಯಪ್ರದಃ ॥೧೧॥
ವಿಶಾಲವಕ್ಷಾಃ ಸಮ್ಭ್ರಾಜತ್ಕೌಸ್ತುಭಾಮುಕ್ತಕನ್ಧರಃ ।
ಸರ್ವಾಭರಣಸಂಯುಕ್ತಃ ಪುಂಡರೀಕಾಯತೇಕ್ಷಣಃ ॥೧೨॥
ಮಹಾನುರಕತಪ್ರಖ್ಯೋ ದೂರ್ವಾದಳಸಮಪ್ರಭಃ ।
ಸರ್ವಾಙ್ಗಸುನ್ದರೋ ದೇವಃ ಕೋಟಿಕನ್ದರ್ಪಸನ್ನಿಭಃ ॥೧೩॥
ಲಕ್ಷ್ಮಣಾನುಸೃತಃ ಖಡ್ಗೀ ಬಾಣತೂಣೀಧನುರ್ಧರಃ ।
ಬಾಣಂ ದಕ್ಷಿಣಹಸ್ತೇನ ಭ್ರಾಮಯನ್ ಲೀಲಯಾ ಪ್ರಭುಃ ॥೧೪॥
ದುರ್ನಿರೀಕ್ಷ್ಯೋ ದುರಾಧರ್ಷೋ ಹೃದಾ ನೇತ್ರೈರ್ದುರಾತ್ಮಭಿಃ ।
ವಿಾದುರಾಸೀನ್ಮಹಾತೇಜಾಃ ಸೀತಯಾ ಸಹ ರಾಘವಃ ॥೧೫॥
ರಾಮಂ ಸಾಕ್ಷಾತ್ ಪುರೋ ದೃಷ್ಟ್ವಾ ನಿಶ್ಚಿತ್ಯಾನ್ಯಮುನಿಪುಙ್ಗವಾಃ ।
ಮನಸಾಸ್ವಾಸ್ಥ್ಯಂ ಪ್ರಪನ್ನಾಸ್ತೇ ತದ್ಧ್ಯಾನವಿಗತಾಪದಃ ॥೧೬॥
ತತಃ ಸನ್ತ್ಯಜ್ಯ ಸಮ್ಮೋಹಂ ಬಾಹ್ಯಂ ವಿಸ್ಮೃತ್ಯ ಪಾವನಾಃ ।
ರಾಮಾತ್ಮಕಮಿದಂ ಸರ್ವಂ ದದೃಶುರ್ಜಗದೀಶ್ವರಾ ॥೧೭॥

ಆ ಒಳಿಕ, ದಯಾಸಾಗರನೂ ಮಂದಹಾಸಯುತನೂ ಸುಂದರಾಂಗನೂ ಶಾಂತನೂ ವನಮಾಲೆಯಿಂದ ಶೋಭಿತನೂ ಪೀತಾಂಬರಧರನೂ ಆದಿದೇವನೂ ಸೀತಾಲಕ್ಷ್ಮಣಯುಕ್ತನೂ ಆಜಾನುಬಾಹುವೂ ಸರ್ವಜ್ಞನೂ ಭಕ್ತರಿಗೆ ಅಭಯಪ್ರದಾತನೂ ವಿಶಾಲಹೃದಯನೂ ವಿರಾಜಮಾನವಾದ ಕೌಸ್ತುಭಮಣಿಯಿಂದ ಶೋಭಿಸುತಿರುವ ಕಂಠವುಳ್ಳವನೂ ಸರ್ವಾಭರಣ ಭೂಷಿತನೂ ಪುಂಡರೀಕನೇತ್ರನೂ ಇಂದ್ರನೀಲಮಣಿಸದೃಶದೇಹನೂ ದೂರ್ವಾದಳಸಮಪ್ರಭನೂ ಸರ್ವಾಂಗಸುಂದರನೂ ದೇವದೇವನೂ ಕೋಟಿಮನ್ಮಥಸದೃಶನೂ ಲಕ್ಷ್ಮಣನಿಂದ ಅನುಸೃತನೂ ಖಡ್ಗಹಸ್ತನೂ ಧನುರ್ಬಾಣತೂಣೀರಧರನೂ ಒಲಗೈಯಲ್ಲಿ ವಿಲಾಸದಿಂದ ಬಾಣವನ್ನು ತಿರುಗಿಸುತಿರತಕ್ಕವನೂ ಸರ್ವಸಮರ್ಥನೂ ದುರಾತ್ಮರಾದವರಿಗೆ ಕಣ್ಣಿನಿಂದ ನೋಡುವುದಕ್ಕೂ ಮನಸ್ಸಿನಲ್ಲಿಯೂ ಕೂಡ ತಿರಸ್ಕರಿಸುವುದಕ್ಕೂ ಅಸಾಧ್ಯನೂ ಆಗಿರುವ–ಭಗವಂತನಾದ-ಮಹಾತೇಜಸ್ಸಂಪನ್ನನಾದ–ಶ್ರೀರಾಮನು, ಆ ಮುನಿಗಳಿಗೆ ಪ್ರಸನ್ನನಾಗಿ, ಸೀತೆಯೊಡನೆ ಅವರೆದುರಿಗೆ ಬಂದು ನಿಂತವನಾದನು ॥೧೦–೧೫॥

ಆಗ ಮುಂದುಗಡೆ, ಪ್ರತ್ಯಕ್ಷನಾಗಿ ನಿಂತಿರುವ ಶ್ರೀರಾಮನನ್ನು ನೋಡಿ ನಿರಾತಂಕರಾದ ಆ ಸಪ್ತಮಹರ್ಷಿಗಳು, ಆ ರಾಮನ ಧ್ಯಾನದಿಂದ ತಮ್ಮ ವಿಪತ್ತನ್ನು ಕಳೆದುಕೊಂಡವರಾಗಿ, ಚಿತ್ತಸ್ವಾಸ್ಥ್ಯವನ್ನು ಪಡೆದರು ॥೧೬॥

ಆ ಬಳಿಕ, ಪೂತಾತ್ಮರಾದ ಆ ಮುನಿಗಳು, ಮನಸ್ಸಿನ ಮೋಹವನ್ನು ಬಿಟ್ಟುಬಿಟ್ಟು, ಬಾಹ್ಯ ವಿಷಯಗಳನ್ನೆಲ್ಲ ಮರೆತು, ಅಕ್ಷಣವೇ ಈ ಸಮಸ್ತ ಜಗತ್ತನ್ನೂ ಶ್ರೀರಾಮರೂಪವನ್ನಾಗಿ ನೋಡುತಿದ್ದರು ॥೧೭॥

ಏವಂ ದೃಷ್ಟ್ವಾ ಪರಾತ್ಮಾನಂ ಚರಾಚರಗುರುಂ ವಿಭುಮ್ ।
ತದ್ದರ್ಶನಾದ್ಬಭೂವುಸ್ತೇ ಪರಮಾನನ್ದನಿರ್ಭರಾಃ ॥೧೯॥
ವಿತತ್ಯ ಮಾರ್ಗಂ ಚೋರೋಪಿ ಭೃತ್ಯವರ್ಗೈರತನ್ದ್ರಿತಃ ।
ವಿಮನಾಇವ ವಿಪ್ರಾಣಾಂ ಅನ್ತಿಕಂ ಪ್ರಯಯೌ ಖಲಃ ॥೧೯॥

ದೃಷ್ಟ್ವಾ ತಾಂಸ್ತಾಪಸಾಂಸ್ತತ್ರ ಸಾಷ್ಟಾಙ್ಗಂ ಪ್ರಣಿಪತ್ಯ ಚ ।
ಉತ್ಥಾಯ ಪ್ರಯತೋ ಭೂತ್ವಾ ವಾಗ್ಜಾಲಿರ್ವಾಕ್ಯಮಬ್ರವೀತ್ ॥೨೦॥
ಇತೋ ಗತ್ವಾ ಮಯಾ ದೃಷ್ಟಾಃ ಭಾರ್ಯಾಃ ಪುತ್ರಾಶ್ಚ ಬಾನ್ಧವಾಃ ।
ಜಾಮಾತೃಭ್ರಾತೃದುಹಿತೃಸ್ವಸೃಭ್ರಾತೃವ್ಯಕಾದಯಃ ॥೨೧॥
ಪ್ರತ್ಯೂಚುಸ್ತೇ ಮುನಿಶ್ರೇಷ್ಠಾಃ ನ ವಯಂ ಪಾಪಭಾಗಿನಃ ॥೨೨॥
ಪುತ್ರಮಿತ್ರಕಳತ್ರಾದಿಬನ್ಧುಪೋಷಣತತ್ಪರಃ ।
ತ್ವಂ ತು ದುಃಖಸ್ಯ ಪಾಪಸ್ಯ ಶ್ರಮಸ್ಯಾಪಿ ಸುಭಾಜನಮ್ ॥೨೩॥
ಇತಿ ತೇಷಾಂ ವಚಃ ಶ್ರುತ್ವಾ ಭೀತೋಹಂ ವಿತಥೋದ್ಯಮಃ ।
ಸ್ಮೃತ್ವಾ ಮತ್ಕೃತಪಾಪೌಘಂ ತಸ್ಮಾದ್ದೇಶಾದಪಾಕ್ರಮಮ್ ॥೨೪॥

ಈರೀತಿಯಾಗಿ ಚರಾಚರಗುರುವಾದ ಆ ಪರಮಾತ್ಮನನ್ನು ಕಂಡು, ಅವನ ದರ್ಶನದಿಂದ ಪರಮಾನಂದಭರಿತರಾದರು ॥೧೮॥

ಹೀಗಿರುವಾಗ, ಮೊದಲು ತನ್ನ ಭೃತ್ಯರಿಂದಲೂ ಮಾರ್ಗವನ್ನೆಲ್ಲ ತಡೆಸಿಕೊಂಡಿದ್ದ ಆ ದುಷ್ಟನಾದ ಚೋರನು, ಯಾವುದರಲ್ಲಿಯೂ ಮನಸ್ಸೇ ಇಲ್ಲದಿರುವನಂತೆ, ಆ ಮುನಿಗಳ ಸವಿಾಪಕ್ಕೆ ಬಂದನು ॥೧೯॥

ಅಲ್ಲಿ ಆ ತಪಸ್ವಿಗಳನ್ನು ಕಂಡು, ಸಾಷ್ಟಾಂಗನಮಸ್ಕಾರಮಾಡಿ ಎದ್ದು, ಬಹುನಿಯಮದಿಂದ ಅಂಜಲಿಬಂಧಮಾಡಿಕೊಂಡು ಈರೀತಿಯಾಗಿ ಮಾತನಾಡಿದನು ॥೨೦॥

ಅಯ್ಯಾ ಮುನಿಗಳಿರಾ! ನಾನು ಇಲ್ಲಿಂದ ಹೋಗಿ, ಹೆಂಡತಿ ಮಕ್ಕಳು ಅಳಿಯ ಸಹೋದರ ಮಗಳು ಸಹೋದರಿ ಸಹೋದರ ಪುತ್ರರು ಇವರೇ ಮೊದಲಾದ ಬಂಧುಗಳನ್ನೆಲ್ಲ ಕೇಳಿದೆನು ॥೨೧॥

ಅವರು 'ನೀನು ಮಾಡಿದ ಪಾಪಕ್ಕೆ ನಾವು ಭಾಗಿಗಳಲ್ಲ; ನೀನು ಸಂಪಾದಿಸಿದ ಹಣದಲ್ಲಿ ಮಾತ್ರ ನಮಗೆ ಭಾಗವುಂಟೇ ಉಂಟು. ನೀನು, ಪುತ್ರ ಮಿತ್ರ ಕಳತ್ರ ಮುಂತಾದ ಬಂಧುಗಳನ್ನು ಪೋಷಿಸುವುದಕ್ಕಾಗಿ, ಅನೇಕ ಪಾಪಗಳನ್ನು ಮಾಡಿರಬಹುದು. ಆ ದುಃಖಕ್ಕೂ ಶ್ರಮಕ್ಕೂ ನೀನೇ ಗುರಿಯಾದವನು.' ಎಂದು ನನಗೆ ಉತ್ತರ ಹೇಳಿಬಿಟ್ಟರು ॥೨೨—೨೩॥

ಈ ರೀತಿಯಾಗಿ ಅವರು ಹೇಳಿದ ಮಾತನ್ನು ಕೇಳಿ, ನಾನು ಭೀತನಾಗಿ, ನನ್ನ ಪ್ರಯತ್ನವೆಲ್ಲ ವ್ಯರ್ಥವಾಯ್ತೆಂದು ತಿಳಿದುಕೊಂಡು, ನಾನು ಮಾಡಿರುವ ಪಾಪಸಮೂಹವನ್ನೆಲ್ಲ ಸ್ಮರಿಸಿಕೊಂಡು, ಆ ಪ್ರದೇಶದಿಂದ ತಟ್ಟನೆ ಹೊರಟುಬಂದೆನು ॥೨೪॥

ಯದಾ ಮೇ ದರ್ಶನಂ ಜಾತಂ ಭವತಾಂ ಪುಣ್ಯಕರ್ಮಣಾಮ್ ।
ತದಾಪ್ರಭೃತಿ ಮಚ್ಚಿತ್ತಂ ದುಷ್ಟಭಾವವಿವರ್ಜಿತಮ್ ॥೨೫॥
ಸತಾಂ ಸನ್ನಿಧಿರೇವಾತ್ರ ಕಾರಣಂ ವೀತರಾಗಿಣಾಮ್ ।
ವೇಧಾರಸಪ್ರಭಾವೇನ ಸ್ಯಾದಯಃ ಕಾಞ್ಚನಂ ಯಥಾ ॥೨೬॥
ಕೃತಸಜ್ಜನಸಂಸರ್ಗಃ ಕ್ರೂರೋಪಿ ಮೃದುತಾಂ ವ್ರಜೇತ್ ।
ಯಥಾ ವಿಧುಕರಸ್ಪರ್ಶಾತ್ ಮೃದುಃ ಕಾನ್ತಶಿಲಾ ಭವೇತ್ ॥೨೭॥
ಅಹೋ ಸಜ್ಜನಮಾಹಾತ್ಮ್ಯಂ ತದ್ರೂಪಂ ಭಜತೇ ಖಲಃ ।
ಅಪಿ ತದ್ದರ್ಶನಸ್ಪರ್ಶಸಲ್ಲಾಪೈರ್ಭೃಙ್ಗಕೀಟವತ್ ॥೨೮॥
ಪುಣ್ಯಲಭ್ಯೋ ಹಿ ಸತ್ಸಙ್ಗಃ ತದಭಾವೇ ಕಥಂ ನು ಸಃ ।
ಕಿಞ್ಚಿನ್ನೇ ಪ್ರಾಗ್ಭವೇ ಪುಣ್ಯಂ ಅಸ್ತಿ ಸತ್ಸಙ್ಗಕಾರಣಮ್ ॥೨೯॥
ತಸ್ಮಾತ್ ಸತ್ಸಙ್ಗಮಃ ಪುಣ್ಯೋ ಲಬ್ಧೋ ಮೇ ನೀಚಜನ್ಮನಃ ।
ಪುಣ್ಯಮೇವ ಹಿ ಸರ್ವತ್ರ ಕಾರಣಂ ತರ್ತುಮಿಚ್ಛತಾಮ್ ॥೩೦॥
ತಸ್ಮಾನ್ಮತ್ಕೃತಪಾಪಾನಾಂ ತಾರಕಾಮುನಿಪುಙ್ಗವಾಃ ।
ತರ್ತುಕಾಮಃ ಸ್ವಪಾಪಾನಿ ಭವತಃ ಶರಣಂ ಗತಃ ॥೩೧॥

ಯಾವಾಗ ನನಗೆ ಪುಣ್ಯಾತ್ಮರಾದ ತಮ್ಮಗಳ ದರ್ಶನಲಾಭವಾಯ್ತೋ, ಅದು ಮೊದಲು ಗೊಂಡು ನನ್ನ ಮನಸ್ಸು ದುಷ್ಟಭಾವವನ್ನು ಬಿಟ್ಟಿರುವುದು ॥೨೫॥

ಈ ವಿಷಯದಲ್ಲಿ, ವೀತರಾಗರಾದ ಸತ್ಪುರುಷರ ಸಾನ್ನಿಧ್ಯವೇ ಕಾರಣಭೂತವಾಗಿರುವುದು. ಸ್ಪರ್ಶರಸದ (ಮೂಲಿಕಾ ವಿಶೇಷ) ಮಹಿಮೆಯಿಂದ ಕಬ್ಬಿಣವು ಚಿನ್ನವಾಗುವುದಲ್ಲವೆ? ॥೨೬॥

ಸತ್ಪುರುಷ ಸಹವಾಸಮಾಡಿದ ಕ್ರೂರನೂ ಕೂಡ ಮೃದುವಾಗಿ ಬಿಡುವನು. ಚಂದ್ರ ಕಿರಣಸಂಪರ್ಕದಿಂದ, ಚಂದ್ರಕಾಂತಶಿಲೆಯು ಮೃದುವಾಗಿ ಬಿಡುವುದಲ್ಲವೆ! ॥೨೭॥

ಸತ್ಪುರುಷರ ಮಹಿಮೆಯು ಅತ್ಯಾಶ್ಚರ್ಯಕರವಾಗಿರುವುದು. ಅವರ ದರ್ಶನ ಸ್ಪರ್ಶನ ಸಂಭಾಷಣೆಗಳಿಂದಲೂ ಕೂಡ, ಭ್ರಮರಕೀಟನ್ಯಾಯಾನುಸಾರವಾಗಿ, ನೀಚನೂ ಅವರಂತೆಯೇ ಆಗುವನು ॥೨೮॥

ಲೋಕದಲ್ಲಿ, ಸತ್ಸಹವಾಸವು ಕೇವಲ ಪುಣ್ಯದಿಂದ ಲಭ್ಯವಾಗಿರುವುದು; ಆ ಪುಣ್ಯವಿಲ್ಲದಿದ್ದರೆ ಅದು ಹೇಗೆತಾನೆ ದೊರೆದೀತು? ನನಗೆ, ಸತ್ಸಂಗಹೇತುವಾದ ಜನ್ಮಾಂತರೀಯ ಸುಕೃತ ವಿಶೇಷವಾವದೋ ಒಂದು ಇರುವುದು ॥೨೯॥

ಹೀಗಿರುವುದರಿಂದಲೇ, ಅತಿ ನೀಚಜನ್ಮನಾದ ನಾನು, ಅತಿ ಪುಣ್ಯಕರವಾದ ಸತ್ಸಂಗವನ್ನು ಪಡೆದೆನು. ಈ ಸಂಸಾರಸಮುದ್ರವನ್ನು ದಾಟಬೇಕೆಂದು ಅಪೇಕ್ಷಿಸತಕ್ಕವರಿಗೆ, ಎಲ್ಲಾ ಕಡೆಯಲ್ಲಿಯೂ ಪುಣ್ಯವೇ ಕಾರಣವಲ್ಲವೆ! ॥೩೦॥

ಆದುಕಾರಣ, ನನ್ನಿಂದ ಮಾಡಲ್ಪಟ್ಟಿರುವ ಪಾಪಗಳಿಗೆಲ್ಲ ಉತ್ತರದ ಮಹರ್ಷಿಗಳಿರಾ! ಈಗ ನಾನು ನನ್ನ ಪಾಪಗಳನ್ನು ಕಳೆದುಕೊಳ್ಳಬೇಕೆಂದು ತಮ್ಮನ್ನು ಮರೆಹೊಕ್ಕಿರುವೆನು. (ಎಂದು ಆ ಚೋರನು ಹೇಳಿದನು) ॥೩೧॥

ಇತ್ಯುಕ್ತ್ವಾ ತಾ೯ ಮುನೀ೯ ಸರ್ವಾ೯ ಪಶ್ಚಾತ್ತಾಪಸಮನ್ವಿತಃ ।
ಪತಿತ್ವಾ ದಂಡವದ್ಭೂಮೌ ಪರಿಕ್ರಮ್ಯ ಪುನಃಪುನಃ ॥೩೦॥
ಚೋರೋ ವಸಿಷ್ಠಮುದ್ದಿಶ್ಯ ವಚನಂ ಚೇದಮಬ್ರವೀತ್ ।
ತಿಷ್ಠಂತು ಮುನಯಃ ಸರ್ವೇ ತ್ವಂ ಮಮೋಪದಿಶ ದ್ವಿಜ ॥೩೧॥

ಶ್ರೀ ವಸಿಷ್ಠ ಉವಾಚ.

ಜಾತ್ಯಾ ಪುಳಿಂದಜನ್ಮಾಸಿ ಚೋರೋಪ್ಯಸಿ ವಿಶೇಷತಃ ।
ಶೂದ್ರಪ್ರಾಯಶ್ಚ ಶೂದ್ರಶ್ಚ ದ್ವೈವಿಧ್ಯಾತ್ ಪತಿತೋ ಯತಃ ॥೩೪॥
ವಿದ್ವಾ೯ ವಿನೀತಃ ಶುದ್ಧಾತ್ಮಾ ಶ್ರದ್ಧಾವಾನಾಸ್ತಿಕಃ ಶುಚಿಃ ।
ದೃಢಃ ಕರ್ಮಾಭಿನಿರತಃ ಉಪದೇಶಂ ಸಮರ್ಹತಿ ॥೩೫॥

ದುಶ್ಶೀಲೋಪಿ ದ್ವಿಜಃ ಪೂಜ್ಯೋ ನ ತು ಶೂದ್ರೋ ಜಿತೇಂದ್ರಿಯಃ ।
ಕಃ ಪರಿತ್ಯಜ್ಯ ಗಾಂ ದುಷ್ಟಾಂ ದುಹ್ಯಾಚ್ಛೀಲವತೀಂ ಖರೀಮ್ ॥೩೬॥
ಕ್ವ ಮಾಂಸಂ ಕ್ವ ಚ ಸಾ ಭಕ್ತಿಃ ಕ್ವ ಮದ್ಯಂ ಕ್ವಾಚ್ಯುತಾರ್ಚನಮ್ ।
ಮದ್ಯಮಾಂಸರತಾನಾಂ ಹಿ ದೂರೇ ತಿಷ್ಠತಿ ಚಾಚ್ಯುತಃ ॥೩೭॥

ಆಗ ಪಶ್ಚಾತ್ತಾಪಯುಕ್ತನಾಗಿರುವ ಆ ಚೋರನು, ಈರೀತಿಯಾಗಿ ಆ ಸಮಸ್ತಮುನಿಗಳಿಗೂ ಹೇಳಿ, ಮತ್ತೆಮತ್ತೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡುತ, ವಸಿಷ್ಠರನ್ನು ನಿರ್ದೇಶಿಸಿ 'ಆರ್ಯಾ! ಬ್ರಾಹ್ಮಣ! ಈ ಸಮಸ್ತಮುನಿಗಳೂ ಹೀಗಿರಲಿ; ನೀನು ನನಗೆ ಉಪದೇಶ ಮಾಡು' ಎಂದು ಹೇಳಿದನು ॥೩೨—೩೩॥

ಆಗ ವಸಿಷ್ಠರು ಉತ್ತರ ಹೇಳುವರು;—

ಆರ್ಯಾ! ನೀನು ಜಾತಿಯಲ್ಲಿ ಬೇಡನಾಗಿರುವೆ; ಆದರಮೇಲೆ ಕಳ್ಳತನದಲ್ಲಿಯೂ ಪ್ರಸಿದ್ಧನಾಗಿಬಿಟ್ಟಿರುವೆ. ನೀನು ಹೀಗೆ ಎರಡುವಿಧವಾಗಿಯೂ ಪತಿತನಾಗಿರುವುದರಿಂದ, ಶೂದ್ರಸಮನೂ ಶೂದ್ರನೂ ಆಗಿರುವೆ ॥೩೪॥

ಲೋಕದಲ್ಲಿ, ವಿನೀತನಾಗಿಯೂ ಪರಿಶುದ್ಧನಾಗಿಯೂ ಶ್ರದ್ಧಾವಂತನಾಗಿಯೂ ಆಸ್ತಿಕನಾಗಿಯೂ ಶುಚಿಯಾಗಿಯೂ ಸ್ಥಿರಚಿತ್ತನಾಗಿಯೂ ಕರ್ಮನಿಷ್ಠನಾಗಿಯೂ ಇರುವ ಪುರುಷನೇ ಉಪದೇಶಕ್ಕೆ ಯೋಗ್ಯನು ॥೩೫॥

ಎಂತಹ ದುಶ್ಶೀಲನಾದರೂ ಬ್ರಾಹ್ಮಣನು ಪೂಜಾರ್ಹನಲ್ಲದೆ, ಎಷ್ಟು ಜಿತೇಂದ್ರಿಯನಾಗಿದ್ದರೂ ಶೂದ್ರನು ಪೂಜಾಯೋಗ್ಯನಾಗುವುದಿಲ್ಲ. ದುಷ್ಟವಾದಮಾತ್ರದಿಂದಲೇ ಹಸುವನ್ನು ಬಿಟ್ಟು-ಸಾಧುವಾಗಿರುವ ಕತ್ತೆಯಲ್ಲಿ ಯಾವನು ತಾನೆ ಹಾಲು ಕರೆದಾನು? ॥೩೬॥

ಆರ್ಯಾ! ವ್ಯಾಧ! ನಿನ್ನ ಈ ಮಾಂಸವೆಲ್ಲಿ?—ಆ ವಿಷ್ಣುಭಕ್ತಿಯೆಲ್ಲಿ? ಈ ಮದ್ಯವೆಲ್ಲಿ?—ಆ ಅಚ್ಯುತಪೂಜೆಯಲ್ಲಿ? ಮದ್ಯಮಾಂಸ ನಿರತರಾದವರಿಗೆ ಆ ಅಚ್ಯುತನು ಬಹು ದೂರದಲ್ಲಿರುವನು ॥೩೭॥

ತಸ್ಮಾಚ್ಛೂದ್ರೋಪದೇಶಸ್ತು ಪರಲೋಕಹಿತೇಪ್ಸುನಾ ।
ತಪೋವಿದ್ಯಾದಿಯುಕ್ತೇನ ನ ಕಾರ್ಯಃ ಪರಲೋಕಹೃತ್ ॥೩೪॥

ಚೋರ ಉವಾಚ.

ಅಹಂ ಹಿ ಮುನಿಶಾರ್ದೂಲ ಶಿಷ್ಯೋಸ್ಮಿ ಭವತಃ ಪರಮ್ ।
ದೃಢಚೇತೋ ದೃಢಾಚಾರೋ ದೃಢಭಕ್ತೋಸ್ಮಿ ತೇ ಗುರೋ ॥೩೫॥
ಮಾಂ ತಾರಯ ಮಹೀದೇವ ದುಃಖಸಂಸಾರಸಾಗರಾತ್ ।
ಕೃಪಾಳವೋ ಹಿ ಸರ್ವತ್ರ ದಯಾಂ ಕುರ್ವಂತಿ ದೇಹಿಷು ॥೩೬॥
ಕುರು ಮನ್ತ್ರೋಪದೇಶಂ ಮೇ ತ್ವಮೇವ ಜ್ಞಾನಚಕ್ಷುಷಾ ।
ಏತೇ ಹ್ಯಛಿನ್ನಮರ್ಯಾದಂ ತ್ವಾಮುದ್ದಿಶ್ಯಂತಿ ಭೂಸುರಾಃ ॥೩೭॥
ತ್ವದಧೀನಾಹಿ ತೇ ಸರ್ವೇ ನ ಸ್ವತನ್ತ್ರಾಹಿ ಕರ್ಮಸು ।
ಮಾಂ ತಾರಯ ಮಹಾಬುದ್ಧೇ ಕೃತಕೃತ್ಯೋಸ್ಮಿ ಸಾಮ್ಪ್ರತಮ್ ॥೩೮॥
ಕೃತವಿದ್ಯಾಗಮಾನಾಂ ಹಿ ವಿಪ್ರಾಣಾಮಗ್ನಿವರ್ಚಸಾಮ್ ।
ಆಪತ್ಕಾಲೇ ನ ಮರ್ಯಾದಾ ಕೃತ್ಯಾಕೃತ್ಯವಿಚಾರಣಾ ॥೩೯॥

ಅದುಕಾರಣ, ಪರಲೋಕದಲ್ಲಿ ಸದ್ಗತಿಯನ್ನಪೇಕ್ಷಿಸಶಕ್ಯ ತಪೋಜ್ಞಾನಸಂಪನ್ನನಾದವನು, ಪರಲೋಕನಾಶಕವಾದ ಶೂದ್ರೋಪದೇಶವನ್ನೆಂದಿಗೂ ಮಾಡಬಾರದು ॥೩೪॥

ಇದನ್ನು ಕೇಳಿ ಚೋರನು ಮತ್ತೆ ಕೇಳಿಕೊಳ್ಳುವನು:—

ಎಲ್ಲೆ ಮುನಿಶ್ರೇಷ್ಠನೆ! ನಾನಂತು ನಿನಗೆ ಶಿಷ್ಯನಾಗಿರುವೆನು. ಹೇ ಗುರೋ! ನಾನು ಈಗ ದೃಢಚಿತ್ತನಾಗಿಯೂ ದೃಢಾಚಾರನಾಗಿಯೂ ನಿನ್ನಲ್ಲಿ ದೃಢವಾದ ಭಕ್ತಿಯುಳ್ಳವನಾಗಿಯೂ ಇರುವೆನು ॥೩೫॥

ಎಲೈ ಭೂಸುರೋತ್ತಮನೆ! ಈ ದುಃಖಕರವಾವ ಸಂಸಾರವೆಂಬ ಸಮುದ್ರದ ದೆಸೆಯಿಂದ ನನ್ನನ್ನು ದಾಟಿಸು. ಲೋಕದಲ್ಲಿ ಕೃಪಾಶಾಲಿಗಳಾದರು ಯಾವ ವಿವೇಚನೆಯನ್ನೂ ಮಾಡದೆ ಸಮಸ್ತಪ್ರಾಣಿಗಳಲ್ಲಿಯೂ ದಯೆಯನ್ನು ತೋರಿಸುವರಲ್ಲವೆ! ॥೩೬॥

ಈಗ ನೀನೇ ಜ್ಞಾನದೃಷ್ಟಿಯಿಂದ ಯೋಚಿಸಿ ನನಗೆ ಮಂತ್ರೋಪದೇಶ ಮಾಡಬೇಕು. ನಿನ್ನ ಜತೆಯಲ್ಲಿರುವ ಈ ಸಮಸ್ತ ಬ್ರಾಹ್ಮಣರೂ, ಲೋಕಮರ್ಯಾದೆಯನ್ನು ಪರಿಪಾಲಿಸಶಕ್ಯವನಾಗಿರುವ ನಿನ್ನನ್ನೇ ನಿರ್ದೇಶಿಸುತ್ತಿರುವರಲ್ಲವೆ! ॥೩೭॥

ಅವರೆಲ್ಲರೂ ನಿನಗೆ ಅಧೀನರಾಗಿರುವರು; ಯಾವಕೆಲಸದಲ್ಲಿಯೂ ಅವರು ಸ್ವತಂತ್ರರಾಗಿ ಪ್ರವರ್ತಿಸುವುದಿಲ್ಲ. ಮಹಾಜ್ಞಾನಿಯೆ! ನೀನು ನನ್ನನ್ನು ಉತ್ತಾರಣೆ ಮಾಡು. ಈಗ ನಾನು ಕೃತಾರ್ಥನಾದೆನು ॥೩೮॥

ಇದಲ್ಲದೆ, ವಿದ್ಯಾವಂತರಾಗಿಯೂ, ತೇಜಸ್ವಿಗಳಾಗಿಯೂ ಇರುವ ಬ್ರಾಹ್ಮಣರಿಗೆ, ಆಪತ್ಕಾಲದಲ್ಲಿ ಲೋಕಮರ್ಯಾದೆಯೂ ಕೃತ್ಯಾಕೃತ್ಯವಿಚಾರವೂ ಇಲ್ಲವಷ್ಟೆ! ॥೩೯॥

ಅಪತ್ಕಾಲಸ್ತು ಸಂಪ್ರಾಪ್ತೋ ಯುಷ್ಮಾಕಂ ವನಗಹ್ವರೇ ।
ಘೋರೇ ಭಯಾನಕೇ ವಿಪ್ರಾಃ ಪ್ರಾಣತ್ರಾಣವಿವರ್ಜಿತೇ ॥೪೫॥
ಭವತಾಮಾಯುರತ್ಯನ್ತಂ ಮಮ ಹಸ್ತೇ ಸಮರ್ಪಿತಮ್ ।
ವಿನಾ ಮಾಂ ಕೋಟಿ ವಿಪ್ರೇ ನ್ದ್ರಾಃ ತ್ರಾತಾ ವೋತ್ರ ನ ದೃಶ್ಯತೇ ॥೪೬॥

ಶ್ರೀ ಶಿವ ಉವಾಚ.

ಇತ್ಯುಕ್ತ್ವಾ ದಣ್ಡಮುದ್ಯಮ್ಯ ಪ್ರಹಾರಂ ಕರ್ತುಮುದ್ಯತಃ ।
ಪ್ರಾಹಸಂಸ್ತೇ ದ್ವಿಜಶ್ರೇಷ್ಠಾಃ ಶತ್ರೌ ಮಿತ್ರೇ ಚ ತೇ ಸಮಾಃ ॥೪೭॥

ಇತಿ ಶ್ರೀಮದಯೋಧ್ಯಾಕಾಣ್ಡೇ ಸಪ್ತರ್ಷಿಚೋರಸಂವಾದೇ
ನಾಮ ಚತುರ್ವಿಂಶಃ ಸರ್ಗಃ.



ಅಯ್ಯಾ! ಬ್ರಾಹ್ಮಣಶ್ರೇಷ್ಠರೆ! ಅತಿಘೋರವಾಗಿಯೂ ಭಯಂಕರವಾಗಿಯೂ ರಕ್ಷಕರೊಬ್ಬರು ಇಲ್ಲದುದಾಗಿಯೂ ಇರುವ ಈ ದೊಡ್ಡಕಾಡಿನಲ್ಲಿ, ಈಗ ನಿಮಗೆ ಆಪತ್ಕಾಲವೊದಗಿಯೇ ಇರುವುದಲ್ಲವೆ! ॥೪೪॥

ಎಲೈ ವಿಪ್ರವರ್ಯರಾ! ನಿಮ್ಮೆಲ್ಲರ ಆಯುಸ್ಸು ಈಗ ಸಂಪೂರ್ಣವಾಗಿ ನನ್ನ ಕೈಯಲ್ಲಿ ಸೇರಿರುವುದು. ಈ ಅರಣ್ಯದಲ್ಲಿ ನನ್ನನ್ನು ಬಿಟ್ಟು ಮತ್ತಾರೂ ನಿಮ್ಮನ್ನು ಕಾಪಾಡುವುದಕ್ಕೆ ಬರಲಾರರು. (ಎಂದು ಆ ಚೋರನು ಹೇಳಿದನು) ॥೪೫॥

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಹೀಗೆಂದು ಹೇಳಿ, ಆ ವ್ಯಾಧನು, ದೊಣ್ಣೆಯನ್ನೆತ್ತಿಕೊಂಡು ಅವರನ್ನು ಹೊಡೆಯಲುದ್ಯುಕ್ತನಾದನು. ಆಗ ಆ ಬ್ರಾಹ್ಮಣೋತ್ತಮರೆಲ್ಲರೂ ವಿಶೇಷವಾಗಿ ನಕ್ಕರು. ಏಕೆಂದರೆ,- ಅವರು ಶತ್ರುವಿನಲ್ಲಿಯೂ ಮಿತ್ರರಾಗಿದ್ದರು. ಅದುಕಾರಣ, ತಮ್ಮ ಶತ್ರುವು ತಮ್ಮನ್ನು ಹೊಡೆಯುವುದಕ್ಕೆ ಬಂದುದನ್ನು ನೋಡಿ ಅವರಿಗೆ ಪರಿಹಾಸವುಂಟಾಯ್ತು ॥೪೬॥

ಇದು ಅಯೋಧ್ಯಾಕಾಂಡದಲ್ಲಿ ಸಪ್ತರ್ಷಿಚೋರಸಂವಾದವೆಂಬ
ಇಪ್ಪತ್ತನಾಲ್ಕನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಪಞ್ಚವಿಂಶಃ ಸರ್ಗಃ.

ಶ್ರೀ ಶಿವಉವಾಚ.

ತತಃ ಸರ್ವೇ ಸಮಾಗಮ್ಯ ವಸಿಷ್ಠಂ ವಾಕ್ಯಮಬ್ರುವನ್ ।
ಯಥಾ ತರೇಮ ಸರ್ವೇ ಹಿ ಚೋರಾದ್ವ್ಯಾಘ್ರಸಮಾದ್ವಯಮ್ ।
ಕುಶಲಃ ಸರ್ವಕಾರ್ಯೇಷು ತಥಾ ನೀತಿರ್ವಿಧೀಯತಾಮ್ ॥೧॥
ಇತ್ಯುಕ್ತೋ ಮುನಿಭಿಸ್ತತ್ರ ವಸಿಷ್ಠೋ ವಾಕ್ಯಮಬ್ರವೀತ್ ॥೨॥
ಆಪತ್ಕಾಲೇ ತು ಸಂಪ್ರಾಪ್ತೇ ಸ್ಮರ್ತವ್ಯೋ ಹರಿರೀಶ್ವರಃ ।
ಆಪದಸ್ತಸ್ಯ ನಶ್ಯನ್ತಿ ಸತಿ ಸೂರ್ಯೋದಯೇ ತಮೋ ಯಥಾ ॥೩॥
ಚೋರಾಕುಲೇ ಮಹಾಘೋರೇ ವನೇ ವ್ಯಾಘ್ರಾದಿಸಙ್ಕುಲೇ ।
ನಿರ್ಜನೇ ತ್ರಾಣರಹಿತೇ ಸ್ಮರ್ತವ್ಯೋ ರಘುನನ್ದನಃ ॥೪॥
ಧನುರ್ಬಾಣಧರೋ ವೀರೋ ಮೇಘಶ್ಯಾಮೋ ಮಹಾಬಲಃ ।
ದಾನವಾರಿರ್ಮಹಾತೇಜಾಃ ರಾವಣಾನ್ತಕರಃ ಪ್ರಭುಃ ॥೫॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತೈದ್ನೆನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಅನಂತರ, ಆ ಸಮಸ್ತಮುನಿಗಳೂ ಒಟ್ಟಾಗಿ ಬಂದು, ವಸಿಷ್ಠಮುನಿಯನ್ನು ಕುರಿತು 'ಅಯ್ಯಾ! ವಸಿಷ್ಠ! ವ್ಯಾಘ್ರಸದೃಶನಾಗಿರುವ ಈ ಚೋರನ ದೆಸೆಯಿಂದ ನಾವು ಹೇಗೆ ತಪ್ಪಿಸಿಕೊಂಡು ಹೋಗಬಹುದೋ, ಹಾಗೆ ಒಂದು ಉಪಾಯವನ್ನು ಮಾಡುವನಾಗು; ನೀನು ಸಮಸ್ತಕಾರ್ಯಗಳಲ್ಲಿಯೂ ಕುಶಲನಾದವನು.' ಎಂದು ಹೇಳಿದರು. ಆಗ ಹೀಗೆ ಇತರ ಮುನಿಗಳಿಂದ ಹೇಳಲ್ಪಟ್ಟ ವಸಿಷ್ಠಮುನಿಯು, ಅವರನ್ನು ಕುರಿತು ಹೀಗೆ ಹೇಳಿದನು ॥೧-೨॥

ಅಯ್ಯಾ! ಮುನಿಗಳಿರಾ! ಆಪತ್ಕಾಲವೊದಗಿದರೆ, ಆಗ ಸರ್ವಲೋಕಮಹೇಶ್ವರನಾದ ಶ್ರೀಹರಿಯನ್ನು ಸ್ಮರಿಸಬೇಕು. ಹೀಗೆ ಸ್ಮರಿಸಶಕ್ಯನನಿಗೆ, ಸೂರ್ಯೋದಯವಾದಾಗ ಅಂಧಕಾರವು ತೊಲಗುವಂತೆ, ಸಮಸ್ತ ವಿಪತ್ತುಗಳೂ ನಾಶಹೊಂದುವವು ॥೩॥

ಚೋರರಿಂದ ವ್ಯಾಕುಲವಾಗಿಯೂ ಅತಿಘೋರವಾಗಿಯೂ ವ್ಯಾಘ್ರಾದಿ ದುಷ್ಟಮೃಗಯುಕ್ತವಾಗಿಯೂ ನಿರ್ಜನವಾಗಿಯೂ ರಕ್ಷಕ ಶೂನ್ಯವಾಗಿಯೂ ಇರುವ ಅರಣ್ಯಾದಲ್ಲಿ ಶ್ರೀ ರಾಮನನ್ನು ಸ್ಮರಿಸಬೇಕು ॥೪॥

ಧನುರ್ಬಾಣಧರನಾಗಿಯೂ, ಮಹಾವೀರನಾಗಿಯೂ, ಮೇಘಶ್ಯಾಮಲಮೂರ್ತಿಯಾಗಿಯೂ, ಮಹಾಬಲನಾಗಿಯೂ, ರಾಕ್ಷಸಾಂತಕನಾಗಿಯೂ, ಮಹಾತೇಜಸ್ವನಾಗಿಯೂ, ರಾವಣಸಂಹಾರಕನಾಗಿಯೂ, ಸಕಲಲೋಕಪ್ರಭುವಾಗಿಯೂ, ಅಹಲ್ಯಾಶಾಪಮೋಚನನಾಗಿಯೂ,

ಅಹಲ್ಯಾಶಾಪನಿರ್ಹರ್ತಾ ಪವಿತ್ರಪದಪಙ್ಕಜಃ ।
ದುಷ್ಟದಾನವಸಂಹರ್ತಾ ಮಹಾಬಲಪರಾಕ್ರಮಃ ॥೬॥
ಬಲವಾ ನಿಹತಾಮಿತ್ರೋ ಧರ್ಮಸೇತುರುದಾರಧೀಃ ।
ಸರ್ವದುಷ್ಟಪ್ರಹರ್ತಾ ಚ ಸರ್ವೋಪದ್ರವನಾಶನಃ ॥೭॥
ಸರ್ವಾಧಿವ್ಯಾಧಿಶಮನಃ ಸರ್ವಪಾಪವಿನಾಶಕಃ ।
ಭಕ್ತಾಭಯಪ್ರದಾತಾ ಚ ರಾಘವೋಸ್ತು ಗತಿಃ ಪಥಿ ॥೮॥
ಆಪದಾಮಪಹರ್ತಾರಂ ದಾತಾರಂ ಸರ್ವಸಮ್ಪದಾಮ್ ।
ಲೋಕಾಭಿರಾಮಂ ಶ್ರೀರಾಮಂ ಭೂಯೋಭೂಯೋ ನಮಾಮ್ಯಹಮ್ ॥೯॥
ಅಗ್ರತಃ ಪೃಷ್ಠತಶ್ಚೈವ ಪಾರ್ಶ್ವತಶ್ಚ ಮಹಾಬಲೌ ।
ಆಕರ್ಣಪೂರ್ಣಧನ್ವಾನೌ ರಕ್ಷೇತಾಂ ರಾಮಲಕ್ಷ್ಮಣೌ ॥೧೦॥
ಸ್ಮೃತ್ವಾ ನಾರಾಯಣಂ ದೇವಂ ಗಜೋಪಿ ಚ್ಛಿನ್ನಬನ್ಧನಃ ।
ಕಿಂ ಪುನರ್ಮಾನವಾರಾಮಂ ಜ್ಞಾತ್ವಾ ಸಞ್ಛಿನ್ನಬನ್ಧನಾಃ ॥೧೧॥
ಇತಿ ಸಞ್ಚಿನ್ತ್ಯ ಮನಸಾ ಪರಮಾಪದ್ಗತೋ ಮುನಿಃ ।
ತದಾ ಸ್ವರಕ್ಷಣಾರ್ಥಾಯ ಶ್ರೀರಾಮಂ ಶರಣಂ ಯಯೌ ॥೧೨॥

ಪವಿತ್ರವಾದ ಪಾದಕಮಲವುಳ್ಳವನಾಗಿಯೂ, ದುಷ್ಟರಾಕ್ಷಸ ಸಂಹಾರಕನಾಗಿಯೂ, ಮಹಾಬಲ ಪರಾಕ್ರಮನಾಗಿಯೂ, ಮಹಾ ಬಲಶಾಲಿಯಾಗಿಯೂ, ನಿಹತಶತ್ರುವಾಗಿಯೂ, ಧರ್ಮಸಂಸ್ಥಾಪಕನಾಗಿಯೂ, ಉದಾರಹೃದಯನಾಗಿಯೂ, ಸರ್ವದುಷ್ಟಸಂಹಾರಕನಾಗಿಯೂ, ಸರ್ವೋಪದ್ರವನಾಶಕನಾಗಿಯೂ, ಸರ್ವವಿಧವಾದ ಆಧಿಗಳನ್ನೂ ವ್ಯಾಧಿಗಳನ್ನೂ ಶಾಂತಿಗೊಳಿಸಶಕ್ಯವನಾಗಿಯೂ, ಸರ್ವಪಾಪವಿನಾಶಕನಾಗಿಯೂ, ಭಕ್ತರಿಗೆ ಅಭಯವನ್ನು ಕೊಡಶಕ್ಯವನಾಗಿಯೂ ಇರುವ ಶ್ರೀರಾಮನು, ನಮ್ಮಗಳಿಗೆ ಈ ಅರಣ್ಯವಾರ್ಗದಲ್ಲಿ ಗತಿಯಾಗಲಿ ॥೫-೮॥

ಭಕ್ತರ ವಿಪತ್ತುಗಳನ್ನು ಪರಿಹರಿಸಶಕ್ಯವನಾಗಿಯೂ, ಸಕಲ ಸಂಪತ್ತುಗಳನ್ನೂ ಕೊಡಶಕ್ಯವನಾಗಿಯೂ, ಸರ್ವಲೋಕ ಮನೋಹರನಾಗಿಯೂ ಇರುವ ಶ್ರೀರಾಮನನ್ನು, ನಾನು ಪುನಃಪುನಃ ನಮಸ್ಕರಿಸುವೆನು ॥೯॥

ಕರ್ಣಪರ್ಯಂತವಾಗಿ ಧನುಸ್ಸನ್ನು ಸೆಳೆದು ಹಿಡಿದುಕೊಂಡಿರುವ ಮಹಾಬಲಿಷ್ಠರಾದ ರಾಮಲಕ್ಷ್ಮಣರು, ಮುಂದುಗಡೆಯೂ ಹಿಂದುಗಡೆಯೂ ಪಾರ್ಶ್ವಭಾಗಗಳಲ್ಲಿಯೂ ಕೂಡ ನಮ್ಮನ್ನು ರಕ್ಷಿಸಲಿ ॥೧೦॥

ಆ ಶ್ರೀಮನ್ನಾರಾಯಣನನ್ನು ಸ್ಮರಿಸಿದಮಾತ್ರದಿಂದಲೇ, ಬಂದು ಗಜಕ್ಕೂ ಕೂಡ ಬಂಧವು ಕಳ್ಚರಿಸಿಹೋಯ್ತು. (ಗಜೇಂದ್ರಮೋಕ್ಷಕಥೆ) ಹೀಗಿರುವಾಗ, ಮನುಷ್ಯರು ಶ್ರೀರಾಮನ ಸ್ವರೂಪವನ್ನು ತಿಳಿದುಕೊಂಡು ಬಂಧವನ್ನು ಕಳೆದುಕೊಳ್ಳುವರೆಂದು ಹೇಳಬೇಕಾದುದೇನು? ॥೧೧॥

ಈರೀತಿಯಾಗಿ ದೊಡ್ಡ ವಿಪತ್ತಿಗೆ ಸಿಕ್ಕಿಕೊಂಡಿದ್ದ ಆ ವಸಿಷ್ಠಮುನಿಯು ತನ್ನ ಮನಸ್ಸಿನಲ್ಲಿ ಹೋಚಿಸಿ, ಆಗ ಆತ್ಮರಕ್ಷಣೆಗಾಗಿ ಶ್ರೀರಾಮನಿಗೆ ಶರಣಾಗತನಾದನು ॥೧೨॥

ತತೋ ಬ್ರಹ್ಮ ವನಂ ಬ್ರಹ್ಮ ವೃಕ್ಷಾಶ್ಚೇತ್ ತದಾ ಮುನೇಃ ।
ಏವಂ ಸರ್ವಾತ್ಮಕಂ ರಾಮಂ ದದರ್ಶ ಧ್ಯಾನತೋ ಮುನಿಃ ॥೧೩॥
ರಾಘವಾನುಗ್ರಹೇಣೈವ ಮರೇತಿ ದ್ವ್ಯಕ್ಷರಂ ಶುಭಮ್ ।
ಗಗನೋದೀರಿತಂ ಶಬ್ದಂ ಶುಶ್ರಾವ ಸ ತದಾ ಮುನಿಃ ॥೧೪॥
ರಾಮಲೋಕಗತಃ ಕ್ಷಿಪ್ರಂ ಸ್ಮೃತ್ವಾ ಬಾಹ್ಯಂ ತದಾ ಮುನಿಃ ।
ತತಃ ಪ್ರೋವಾಚ ಭಗವಾನ್ ವಸಿಷ್ಠೋ ಮುನಿಸತ್ತಮಾನ್ ॥೧೫॥
ಶ್ರುತಃ ಶಬ್ದೋ ಮಯಾ ವಿಪ್ರಾಃ ಮರೇತಿ ದ್ವ್ಯಕ್ಷರೋಧುನಾ ।
ತತೋ ವದನ್ತು ಮುನಯಃ ಕಿಂ ಕೃತಂ ಸುಕೃತಂ ಭವೇತ್ ॥೧೬॥

ಮುನಯಊಚುಃ.

ವಕ್ಷ್ಯಾಮ್ಯೇತತ್ಪ್ರಮುನಿಶ್ರೇಷ್ಠ ಹಿತಂ ನಃ ಪರಮಂ ಮತಮ್ ।
ತ್ವಂ ತು ಬುದ್ಧಿಮತಾಂ ಶ್ರೇಷ್ಠಃ ಸರ್ವಂ ತೇ ವಿದಿತಂ ಪರಮ್ ॥೧೭॥
ಅಪನ್ನೋ ಯಸ್ತು ಪುರುಷೋ ನಿರಾಲಮ್ಬೋ ಜಿಜೀವಿಷುಃ ।
ತಾವನ್ಮಾತ್ರಪದಂ ಸನ್ತ ಏತ ಯೇನಕೇನಾಪಿ ಕರ್ಮಣಾ ॥೧೮॥
ಕಿಞ್ಚಿತ್ಕೃತೇಹ ಭಗವನ್ ಬ್ರಹ್ಮನ್ ಮಮುಮತ್ಪ್ರಪದಂ ಗತಾಃ ।
ರಾಘವಾನುಗ್ರಹಾದೇವ ಶ್ರುತಃ ಶಬ್ದಸ್ತ್ವಯಾ ವಿಭೋ ॥೧೯॥

ಆ ಒಳಿಕ, ಆ ವಸಿಷ್ಠಮುನಿಗೆ, ಅರಣ್ಯವೂ ವೃಕ್ಷವೂ ಎಲ್ಲವೂ ಕೇವಲ ಬ್ರಹ್ಮಮಯವೇ ಆಗಿಬಿಟ್ಟಿತು. ಈರೀತಿಯಾಗಿ ಆ ಮುನಿಯು ಧ್ಯಾನಬಲದಿಂದ ಶ್ರೀರಾಮನನ್ನು ಸರ್ವಾತ್ಮಕನನ್ನಾಗಿ ದರ್ಶನಮಾಡಿದನು ॥೧೩॥

ಆಗ ಆ ವಸಿಷ್ಠ ಮಹರ್ಷಿಯು, ಶ್ರೀರಾಮನ ಅನುಗ್ರಹದಿಂದಲೇ ಆಕಾಶದಲ್ಲಿ 'ಮರಾ' ಎಂಬ ಎರಡು ಅಕ್ಷರಗಳುಳ್ಳ ಶುಭವಾದ ಶಬ್ದವು ಉಚ್ಚರಿತವಾದುದನ್ನು ಕೇಳಿದನು ॥೧೪॥

ಆ ಸಮಯದಲ್ಲಿ ರಾಮಲೋಕವನ್ನು ಹೊಂದಿದ್ದ ಆ ವಸಿಷ್ಠಮಹರ್ಷಿಯು, ದೇಗನೆ ಬಹಿರ್ಮುಖನಾಗಿ, ಇತರರಾದ ಮುನಿಗಳನ್ನು ಕುರಿತು ಹೀಗೆ ಹೇಳಿದನು ॥೧೫॥

ಆಯ್ಯಾ! ಬ್ರಾಹ್ಮಣಶ್ರೇಷ್ಠರೆ! 'ಮರಾ' ಎಂದು ಎರಡಕ್ಷರಗಳುಳ್ಳ ಶಬ್ದವೊಂದು ನನ್ನಿಂದ ಕೇಳಲ್ಪಟ್ಟಿತು. ಈಗ ಏನುಮಾಡಿದರೆ ಒಳ್ಳೆಯದಾಗುವುದೋ,—ಅದನ್ನು ನೀವೇ ಹೇಳಬೇಕು ॥೧೬॥

ಇದನ್ನು ಕೇಳಿ ಮುನಿಗಳು ಹೇಳುವರು :—

ಆಯ್ಯಾ! ವಸಿಷ್ಠಮಹರ್ಷಿಯೆ! ಈಗ ನಮಗೆ ಪರಮಹಿತವಾದ ಅಭಿಪ್ರಾಯವನ್ನು ಹೇಳುವೆವು. ನೀನು ಬುದ್ಧಿವಂತರಲ್ಲೆಲ್ಲ ಶ್ರೇಷ್ಠನಾಗಿರುವೆ; ನಿನಗೆ ಸಮಸ್ತ ತತ್ವವೂ ತಿಳಿದೇ ಇರುವುದು ॥೧೭॥

ಯಾವ ಪುರುಷನು ಆಪತ್ತಿಗೆ ಗುರಿಯಾಗಿ ನಿರವಲಂಬನನಾಗುವನೋ, ಅವನು ಬದುಕಲಿಚ್ಛೆಯುಳ್ಳವನಾಗಿದ್ದರೆ--ಯಾವ ಕೆಲಸವನ್ನಾದರೂ ಮಾಡಿ ಆ ವಿಪತ್ತನ್ನು ದಾಟಬೇಕು ॥೧೮॥

ಮತ್ತು, ಪೂಜ್ಯನಾದ ವಸಿಷ್ಠಮಹರ್ಷಿಯೆ! ನಾವು ಈಗ ವಿಪತ್ತಿಗೊಳಗಾಗಿರುವೆವು. ಇದಲ್ಲದೆ, ಶ್ರೀರಾಮನ ಅನುಗ್ರಹದಿಂದಲೇ ಈಗ ಈ ಶಬ್ದವು ನಿನ್ನ ಕಿವಿಗೆ ಬಿದ್ದಿರುವುದು ॥೧೯॥

ಮುರೇತಿ ಯಃ ಶ್ರುತಃ ಶಬ್ದಃ ತ್ವಯಾ ಬ್ರಹ್ಮರ್ಷೆ ಮಹಾಮುನೇ ।
ತಮೇವ ತಸ್ಯೋಪದಿಶ ಮುಕ್ತೋ ಭವತು ಪಾತಕೀ ॥೦೦॥

ಶ್ರೀ ವಸಿಷ್ಠ ಉವಾಚ.

ಅಹಮದ್ಯೈವ ದಾಸ್ಯಾಮಿ ಮನ್ತ್ರಮೇತದುದೀರಿತಮ್ ।
ನಾನ್ಯತ್ರ ವಿನಿಯೋಗೋಸ್ತಿ ಮನ್ತ್ರಸ್ಯಾಸ್ಯ ಮುನೀಶ್ವರಾಃ ॥೦೧॥

ಶ್ರೀ ಶಿವ ಉವಾಚ.

ಇತ್ಯುಕ್ತ್ವಾಥ ವಸಿಷ್ಠಸ್ತಂ ಚೋರಂ ಸನ್ನಿಧಿಮಾಗತಮ್ ।
ಕಾಂಕ್ಷನ್ತಮುಪದೇಶಂ ತಂ ಸಾಕ್ಷಾನ್ಮೃತ್ಯುಮಿವಾಪರಮ್ ॥೦೨॥
ದೃಷ್ಟ್ವಾ ಕ್ರೂರತರಂ ತಂ ತು ನಿರ್ಭಯೋನಾನ್ತರಾತ್ಮನಾ ।
ಪ್ರೋವಾಚ ವಚನಂ ತತ್ರ ಚೋರಮಾಹೂಯ ಬುದ್ಧಿಮಾನ್ ॥೦೩॥
ಚೋರ ಚೋರೇತಿ ಸವಾಗಚ್ಛ ಮನ್ತ್ರಾರ್ಥೀ ತ್ವಂ ಗುಣೋತ್ತಮಃ ।
ದದಾಮಿ ತವ ಮನ್ತ್ರಂ ತಂ ಯಂ ಜಪ್ತ್ವಾಮೃತಮೇಷ್ಯಸಿ ॥೦೪॥
ಇತ್ಯುಕ್ತೋ ಮುನಿನಾ ತೇನ ವಸಿಷ್ಠೇನ ಮಹಾತ್ಮನಾ ।
ಚೋರಃ ಸಸಮ್ಭ್ರಮೋ ಭೂತ್ವಾ ಪ್ರಣನಾನು ಮಹಾಮುನಿಮ್ ॥೦೫॥

ಎಲೈ ಬ್ರಹ್ಮರ್ಷಿವರ್ಯನೆ! ನೀನು ಈಗ 'ಮುರಾ' ಎಂದು ಯಾವಶಬ್ದವನ್ನು ಕೇಳಿದೆಯೋ, ಅದನ್ನೇ ಈ ವ್ಯಾಧನಿಗುಪದೇಶಿಸು. ಈ ಪಾಪಿಷ್ಠನು ಇದರಿಂದ ಮುಕ್ತಿಯನ್ನು ಪಡೆಯಲಿ ॥

ಶ್ರೀ ವಸಿಷ್ಠರು ಉತ್ತರ ಹೇಳುವರು :—

ಅಯ್ಯಾ! ಮುನೀಶ್ವರರೆ! ಆಕಾಶದಲ್ಲಿ ಉಚ್ಚರಿತವಾದ ಈ ಮಂತ್ರವನ್ನು, ನಾನು ಈಗಲೇ ಇದನಿಗುಪದೇಶಿಸುವೆನು. ಈ ಮಂತ್ರಕ್ಕೆ ಮತ್ತೆಲ್ಲಿಯೂ ವಿನಿಯೋಗವೇ ಕಾಣುವುದಿಲ್ಲ ॥೨೧॥

ಶ್ರೀ ಪರಮೇಶ್ವರನು ಹೇಳುವನು :—

ಎಲೌ ಪಾರ್ವತಿ! ಹೀಗೆಂದು ಮುನಿಗಳಿಗೆ ಹೇಳಿ, ಬುದ್ಧಿಶಾಲಿಯಾದ ಆ ವಸಿಷ್ಠಮುನಿಯು, ಸಾಕ್ಷಾತ್ತಾದ ಮೃತ್ಯುದೇವತೆಯೋ ಎಂಬಂತೆ ಕ್ರೂರನಾಗಿ-ತನ್ನ ಹತ್ತಿರಕ್ಕೆ ಉಪದೇಶಾರ್ಥವಾಗಿ ಬರುತಿರುವ-ಆ ಚೋರನನ್ನು ಕಂಡು, ಆ ಕಳ್ಳನನ್ನು ಕರೆದು 'ಚೋರ! ಚೋರ! ನೀನು ಬೇಗನೆ ಬಾ. ನೀನು ನನ್ನಲ್ಲಿ ಮಂತ್ರೋಪದೇಶವನ್ನು ಪೇಕ್ಷಿಸುವೆಯಲ್ಲವೆ! ನೀನು ಗುಣಾಧಿಕನೆಂದು ನನಗೆ ತೋರುವುದು. ನಿನಗೆ ಉತ್ತಮವಾದೊಂದು ಮಂತ್ರವನ್ನು ಪದೇಶಿಸುವೆನು; ಇದನ್ನು ಜಪಿಸಿದರೆ, ನೀನು ಮೋಕ್ಷಭಾಗಿಯಾಗುವೆ.' ಎಂದು ಹೇಳಿದನು॥೨೨-೨೪॥

ಹೀಗೆ ಮಹಾತ್ಮನಾದ ವಸಿಷ್ಠಮುನಿಯಿಂದ ಹೇಳಲ್ಪಟ್ಟ ಆ ಚೋರನು, ಮಹಾಸಂಭ್ರಮಯುಕ್ತನಾಗಿ ವಸಿಷ್ಠಮಹರ್ಷಿಗೆ ನಮಸ್ಕಾರ ಮಾಡಿದನು ॥೨೫॥

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯೋಽಹಂ ತೇ ಕಥಯಾಸ್ಪದಮ್ ।
ಸಾಧೂನಾಂ ಸಮಚಿತ್ತಾನಾಂ ನ ಹಿ ವೈಷಮ್ಯಧೀಃ ಕ್ವಚಿತ್ ॥೨೬॥
ಸೂರ್ಯಾಚಂದ್ರಮಸೋಃ ಪಾದಾಃ ಪವಿತ್ರಂ ಕುರ್ವತೀ ಜಗತ್ ।
ಏವಂ ಸನ್ತೋ ಮಹಾತ್ಮಾನಃ ಪಾವಯನ್ತಿ ಜಗತ್ತ್ರಯಮ್ ॥೨೭॥
ಕ್ವ ಯೂಯಂ ಕ್ವ ವಯಂ ವಿಪ್ರಾಃ ಜಾತ್ಯಾಪಿ ಚ ಗವಾಶನಾಃ ।
ದೀನೇ ಕರುಣಮಾಪನ್ನೇ ದಯಾಂ ಕುರ್ವನ್ತಿ ಪಣ್ಡಿತಾಃ ॥೨೮॥
ಸರ್ವಂ ಮೇ ದುರಿತಂ ನಷ್ಟಂ ಜನ್ಮಾದ್ಯ ಸಫಲಂ ಮಮ ।
ತ್ವದ್ದೃಷ್ಟಿಪಾತಮಾತ್ರೇಣ ಸಿದ್ಧೋಽಸ್ಮಿ ವಸುಧಾತಲೇ ॥೨೯॥
ನಿಸ್ತೀರ್ಣೋಽಹಂ ಮೇ ಭವಾಮ್ಭೋಧಿಃ ಪ್ರಾಪ್ತಂ ಮೇ ಪರಮಂ ಪದಮ್ ।
ಅಕಲ್ಪಂ ಯಶಸಾ ವ್ಯಾಪ್ತಂ ಪ್ರಸಿದ್ಧಃ ಸ್ಯಾಂ ಜಗತ್ತ್ರಯೇ ॥೩೦॥
ಕಿಂ ಕರ್ತವ್ಯಂ ಮಯಾ ದೇವ ಕಿಮಾಜ್ಞೇಯಂ ಭವತ್ಕೃತೇ ।
ತ್ವದಧೀನಾ ತನುರ್ಮೇಽದ್ಯ ಪ್ರಾಣಾಶ್ಚೈವ ಚ ಜೀವಿತಮ್ ॥೩೧॥
ಮಮ ಸರ್ವಾಣ್ಯಭದ್ರಾಣಿ ವಿಲಯಂ ಯಾನ್ತಿ ವೈ ಧ್ರುವಮ್ ।
ಜನ್ಮಪ್ರಭೃತಿ ಯಾನ್ಯಾಶು ಗುರುಪಾದಾಭಿವನ್ದನಾತ್ ॥೩೨॥

ಭಗವನ್! ನಾನು ತಮ್ಮ ದಯೆಗೆ ಪಾತ್ರನಾದೆನಲ್ಲ! ನಾನು ಈಗ ಧನ್ಯನಾದೆನು; ಕೃತಕೃತ್ಯನಾದೆನು. ಸರ್ವತ್ರ ಸಮಚಿತ್ತರಾಗಿರುವ ಸಾಧುಗಳಿಗೆ, ಯಾವುದೊಂದು ಕಡೆಯಲ್ಲಿಯೂ ಪಕ್ಷಪಾತಬುದ್ಧಿಯಿರುವುದಿಲ್ಲ॥೨೬॥

ಸೂರ್ಯಚಂದ್ರರ ಕಿರಣಗಳು, ಯಾವ ವ್ಯತ್ಯಾಸವೂ ಇಲ್ಲದೆ ಜಗತ್ತನ್ನೆಲ್ಲ ಪರಿಶುದ್ಧಮಾಡುವವಲ್ಲವೆ! ಹೀಗೆಯೇ, ಮಹಾತ್ಮರಾದ ಸತ್ಪುರುಷರು, ಯಾವ ಭೇದವೂ ಇಲ್ಲದೆ ಮೂರುಲೋಕವನ್ನೂ ಪರಿಶುದ್ಧಮಾಡುವರು॥೨೭॥

ಎಲೈ ಬ್ರಾಹ್ಮಣಶ್ರೇಷ್ಠರೆ! ಮಹಾತ್ಮರಾದ ನೀವೆಲ್ಲಿ?–ಜಾತಿಯಲ್ಲಿಯೇ ಗೋವಧಿಂಸಕರಾದ ನಾವೆಲ್ಲಿ? ದೀನನಾದ ಶರಣಾಗತನಲ್ಲಿ, ಪಂಡಿತರಾದವರು ಸರ್ವದಾ ದಯೆಯನ್ನು ತೋರಿಸುವರು॥೨೮॥

ಈಗ ನನ್ನ ಪಾಪವೆಲ್ಲವೂ ನಷ್ಟವಾಯ್ತು; ನನ್ನ ಜನ್ಮವು ಸಾರ್ಥಕವಾಯ್ತು. ತಮ್ಮ ದೃಷ್ಟಿಪಾತಮಾತ್ರದಿಂದಲೇ ನಾನು ಈ ಭೂಮಿಯಲ್ಲೆಲ್ಲ ಸಿದ್ಧಪುರುಷನೆನ್ನಿಸಿಕೊಳ್ಳುವೆನು॥೨೯॥

ಈ ಸಂಸಾರಸಮುದ್ರವನ್ನು ಈಗ ನಾನು ದಾಟಿದೆನು; ಪರಮಪದವೂ ಈಗ ನನಗೆ ಪ್ರಾಪ್ತವಾಯ್ತು; ಪ್ರಳಯಕಾಲದವರೆಗೂ ನನ್ನ ಯಶಸ್ಸು ಲೋಕದಲ್ಲೆಲ್ಲ ಹರಡಿಕೊಂಡಿರುವುದು; ಮೂರುಲೋಕದಲ್ಲಿಯೂ ನಾನು ಪ್ರಸಿದ್ಧನಾಗುವೆನು॥೩೦॥

ಸ್ವಾಮಿ! ನಾನು ಈಗ ಏನುಮಾಡಲಿ? ತಮಗೋಸ್ಕರ ನನ್ನನ್ನು ತಂದುಕೊಡಲಿ? ನನ್ನ ಶರೀರವೂ ಪ್ರಾಣಗಳೂ ಜೀವಿತವೂ ಕೂಡ, ಈಗ ತಮ್ಮ ಅಧೀನವಾಗಿರುವುವು॥೩೧॥

ನಾನು ಜನ್ಮಾರಭ್ಯ ಕೂಡಿಸಿಕೊಂಡಿರುವ ಯಾವ ಅಮಂಗಳಗಳಿಗೆ ಗುರುವುಂಟೋ, ಅವುಗಳೆಲ್ಲವೂ ಈಗ ಗುರುಪಾದಸೇವೆಯಿಂದ ಶಬ್ದನೆ ಲಯವಹೊಂದುವುವು; ಇದರಲ್ಲಿ ಸಂಶಯವಿಲ್ಲ॥೩೨॥

ಗುರುಪಾದೋದಕೇನೈವ ದುಸ್ತರಂ ಭವಸಾಗರಮ್ ।
ತರನ್ತಿ ಶುದ್ಧಹೃದಯಾಃ ಗುರುಸೇವಾಹತೈನಸಃ ॥೩೩॥
ಗುರೂಣಾಂ ಚರಣಾಮ್ಭೋಜಂ ಯೇರ್ಚಯನ್ತಿ ಸದಾ ಹೃದಿ ।
ತೇಷಾಂ ನಶ್ಯನ್ತಿ ವಿಪದೋ ಭಜನ್ತೇ ಸರ್ವಸಮ್ಪದಃ ॥೩೪॥
ಗುರುರೇವ ಪರಂ ಬ್ರಹ್ಮ ಗುರುರೇವ ಸ್ವದೇವತಾ ।
ಗುರುರ್ವಿತ್ತಂ ಗುರುಸ್ತತ್ತ್ವಂ ನಾಸ್ತಿ ತತ್ತ್ವಂ ಗುರೋಃ ಪರಮ್ ॥೩೫॥
ತಸ್ಮಾತ್ ಸರ್ವಪ್ರಯತ್ನೇನ ಕರ್ತವ್ಯಂ ಗುರುಪೂಜನಮ್ ।
ಸದ್ಗುರೋಃ ಪೂಜನಾದೇವ ತತ್ತ್ವಂ ಕರತಲೇ ಸ್ಥಿತಮ್ ॥೩೬॥
ಭವಾಬ್ಧಿ ಯದಿ ಗುರುರ್ಮಹ್ಯಂ ಅತರಂ ಭವಸಾಗರಮ್ ।
ಗೋಷ್ಪದೀಕೃತ್ಯ ದುಸ್ತಾರಂ ಹನೂಮಾನ್ ಸಾಗರಂ ಯಥಾ ॥೩೭॥
ಇತ್ಯುದೀರಿತಮಾಕರ್ಣ್ಯ ವಸಿಷ್ಠೋ ಭಗವಾನ್ ಋಷಿಃ ।
ತತ್ತ್ವಸಂಶಯಮಾಪನ್ನಃ ಸಕಾಶಾತ್ಸಕ್ತಿವೇಚನೇ ॥೩೮॥
ನ ಹೀದೃಶಾನಿ ವಾಕ್ಯಾನಿ ಚೋರಸ್ಯಾಸಕ್ತಚೇತಸಃ ।
ಚೋರಾಣಾಂ ಧನಹಾರಿತ್ವಂ ನ ತು ತತ್ತ್ವಪ್ರಭಾಷಣಮ್ ॥೩೯॥

ಶುದ್ಧಹೃದಯರಾದವರು, ಗುರುಸೇವಾಪ್ರಭಾವದಿಂದ ತಮ್ಮ ಪಾಪಗಳನ್ನೆಲ್ಲ ಕಳೆದು ಕೊಂಡು, ಅತಿದುಸ್ತರವಾದ ಈ ಸಂಸಾರಸಾಗರವನ್ನು, ಗುರುಪಾದೋದಕಪಾನದಿಂದಲೇ ದಾಟುವರು ॥೩೩॥

ಯಾವ ಪುರುಷರು ಸರ್ವದಾ ಹೃದಯದಲ್ಲಿ ಗುರುಗಳ ಪಾದಕಮಲವನ್ನು ಪೂಜಿಸು ವರೋ, ಅವರ ವಿಪತ್ತುಗಳೆಲ್ಲವೂ ನಾಶಹೊಂದುವುವು; ಅವರು ಸಮಸ್ತ ಸಂಪತ್ತುಗಳನ್ನೂ ಪಡೆಯುವರು ॥೩೪॥

ಗುರುವೇ ಪರಬ್ರಹ್ಮವು; ಗುರುವೇ ಆತ್ಮದೇವತೆಯು; ಗುರುವೇ ವಿತ್ತವು; ಗುರುವೇ ತತ್ವವು. ಗುರುವಿಗಿಂತ ಬೇರೆಯಾದ ತತ್ವವೊಂದೂ ಇಲ್ಲ ॥೩೫॥

ಆದುಕಾರಣ, ಸರ್ವಪ್ರಯತ್ನದಿಂದಲೂ ಗುರುಪೂಜೆಯನ್ನು ಮಾಡಬೇಕು. ಸದ್ಗುರು ವಿನ ಪೂಜೆಯಿಂದಲೇ, ಪರತತ್ವವು ಕರತಲಾಮಲಕವಾಗುವುದು ॥೩೬॥

ಸ್ವಾಮಿಾ ಮಹರ್ಷಿಗಳೆ! ತಾವು ನನಗೆ ಗುರುವಾಗಿಬಿಟ್ಟಮೇಲೆ, ದುಸ್ತರವಾಗಿರತಕ್ಕ ಸಾಗರವನ್ನು ಹನುಮಂತನು ಒಂದು ಗೋಷ್ಪದದಂತೆ ಮಾಡಿಕೊಂಡು ದಾಟಿದಂತೆ, ನಾನು ಈ ಸಂಸಾರಸಾಗರವನ್ನು ದಾಟಿದವನಂತೆಯೇ ಆದೆನು. (ಎಂದು ಆ ಚೋರವ್ಯಾಧನು ಹೇಳಿ ದನು) ॥೩೭॥

ಈರೀತಿಯಾಗಿ ಆ ಚೋರನಿಂದ ಹೇಳಲ್ಪಟ್ಟ ಮಾತನ್ನು ಕೇಳಿ, ವಸಿಷ್ಠಮಹರ್ಷಿಯು, ಆ ಚೋರನು ಸಂಸಾರದಲ್ಲಿ ಸಕ್ತನೋ–ಅಥವಾ ವಿರಕ್ತನೋ–ಎಂದು ವಿವೇಚನೆ ಮಾಡುವ ದರಲ್ಲಿ ಸಂಶಯಗ್ರಸ್ತನಾಗಿ, ತನ್ನ ಮನದೊಳಗೆ ಹೀಗೆ ಯೋಚಿಸಿದನು ॥೩೮॥

ಸಂಸಾರದಲ್ಲಿ ಆಸಕ್ತನಾದ ಮನಸ್ಸುಳ್ಳವನ ಬಾಯಲ್ಲಿ ಇಂತಹ ಮಾತುಗಳು ಎಂದಿಗೂ ಹೊರಡಲಾರವು. ಚೋರರಿಗೆ ಧನಾಪಹಾರವು ಸ್ವಾಭಾವಿಕವಲ್ಲದೆ, ತತ್ವಭಾಷಣವೆಂದಿಗೂ ಸ್ವಾಭಾವಿಕವಲ್ಲ ॥೩೯॥

ತತ್ತ್ವಂ ಪ್ರಭಾಷ್ಯತೇನೇನ ಶಾಸ್ತ್ರೋಕ್ತಂ ಮುನಿನಾ ಯಥಾ ।
ವಿರಕ್ತ ಇವ ಮೇ ಭಾತಿ ತಸ್ಯೇದೃಗ್ವಾಕ್ಯದರ್ಶನಾತ್ ॥೪೦॥
ವಚನಾದ್ಧೃದಯಂ ಗ್ರಾಹ್ಯಂ ದುಷ್ಟಂ ಶಿಷ್ಟಂ ಚ ಭಾಷಿತಾತ್ ।
ಯದಸ್ತಿ ಹೃದಯೇ ಲೋಕೇ ವಾಚಾ ವಕ್ತಿ ತದೇವ ಸಃ ॥೪೧॥
ವಿರಕ್ತೋಯಂ ನ ಸನ್ದೇಹೋ ಯಸ್ಯೇದೃಗ್ವಚನಂ ಶುಭಮ್ ।
ವೈರಾಗ್ಯವಾಶ್ರಿತಸ್ಯಾಸ್ಯ ಭವೇತ್ ಸಿದ್ಧಿರ್ನ ಸಂಶಯಃ ॥೪೨॥
ಅಯಂ ಕಿಲ ಪುರಾ ವಿಪ್ರಃ ಪಾತಕಾದೀದೃಶೋಭವತ್ ।
ಅನಾಚಾರಾಜ್ಜನ್ಮ ಜಿತ್ರಂ ಭವತೀತ್ಯನುಶುಶ್ರುಮ ॥೪೩॥
ತತ್ರ ಚೇತ್ ಪ್ರಬಲಂ ಪುಣ್ಯಂ ತಸ್ಯ ತತ್ ತಾರಕಂ ಭವೇತ್ ।
ಪುಣ್ಯಾಭಾವೇನ ಚೈತಸ್ಯ ಬುದ್ಧಿರೇತಾದೃಶೀ ಭವೇತ್ ॥೪೪॥
ಮಾಯಾವಿನಾಂ ತು ಸರ್ವೇಷಾಂ ಮಾಯಾಮೇವ ಪ್ರಯೋಜಯೇತ್ ।

ಇವನು ಮಹಾಮುನಿಯಂತೆ ಶಾಸ್ತ್ರೋಕ್ತವಾದ ತತ್ವವನ್ನು ಹೇಳುತ್ತಿರುವನು. ಇವನ ಬಾಯಲ್ಲಿ ಇಂತಹ ಮಾತುಗಳು ಹೊರಡುತ್ತಿರುವುದರಿಂದ ಇವನು ವಿರಕ್ತನೆಂದು ನನಗೆ ತೋರುವುದು ॥೪೦॥

ಒಬ್ಬ ಮನುಷ್ಯನ ಹೃದಯವು ದುಷ್ಟವೋ-ಅಥವಾ ಶಿಷ್ಟವೋ—ಎಂಬುದನ್ನು, ಅವನ ಬಾಯಲ್ಲಿ ಹೊರಡುವ ಮಾತಿನಿಂದ ನಿಶ್ಚಯಿಸಿಕೊಳ್ಳಬೇಕು. ಲೋಕದಲ್ಲಿ, ಯಾವನ ಮನಸ್ಸಿನೊಳಗೆ ಯಾವುದಿರುವುದೋ, ಅದನ್ನೇ ಅವನು ತನ್ನ ಬಾಯಿಯಲ್ಲಿಯೂ ಹೇಳಿಬಿಡುವನು. ಇದು ಸ್ವಭಾವವು ॥೪೧॥

ಈ ವ್ಯಾಧನ ಬಾಯಲ್ಲಿ ಇಂತಹ ಶುಭವಾದ ಮಾತು ಹೊರಡುತಿರುವಕಾರಣ, ಇವನು ವಿರಕ್ತನೇ ಆಹುದು. ಹೀಗೆ ವೈರಾಗ್ಯವನ್ನು ತಾಳಿರುವ ಇವನಿಗೆ ಸಿದ್ಧಿಯಾಗುವುದರಲ್ಲಿ ಸಂಶಯವಿಲ್ಲ ॥೪೨॥

ಈ ವ್ಯಾಧನಾದರೋ, ಪೂರ್ವದಲ್ಲಿ ಬ್ರಾಹ್ಮಣನಾಗಿದ್ದನು; ತನ್ನ ಪಾಪದಿಂದ ಈಗ ಈ ಜನ್ಮದಲ್ಲಿ ಹುಟ್ಟಿರುವನು. ಅನಾಚಾರದಿಂದ ನಾನಾವಿಧ ದುಷ್ಟಜನ್ಮವು ಬರುವುದೆಂದು ನಾವು ಕೇಳಿರುವೆವಲ್ಲವೆ! ॥೪೩॥

ಆ ಜನ್ಮದಲ್ಲಿ ಪುಣ್ಯವು ಪ್ರಬಲವಾಗಿದ್ದರೆ, ಅದು ಅವನಿಗೆ ಉತ್ತಾರಕವಾಗಬಹುದು. ಇವನಿಗಾದರೋ, ಸುತರಾಂ ಪುಣ್ಯವಿಲ್ಲದಿದ್ದಕಾರಣ ಈಗ ಇಂತಹ ದುರ್ಬುದ್ಧಿಯುದಯಿಸಿರಬಹುದು ॥೪೪॥

ಲೋಕದಲ್ಲಿ, ಯಾರು ಕಪಟಶಾಲಿಗಳೋ-ಅವರಲ್ಲೆಲ್ಲ ನಾವೂ ಕಪಟವನ್ನೇ ಉಪಯೋಗಿಸ

ಅಯಂ ಚೋರಸ್ತು ನಿರ್ವಾಯಃ ಉಪದೇಕ್ಷ್ಯಾಮ್ಯಹಂ ತೋ ಮನುಮ್ ॥೪೫॥

ಇತ್ಯಾಲೋಚ್ಯ ಮುನಿಃ ಸಮ್ಯಕ್ ಪ್ರಪನ್ನಸ್ಯ ಜಿತಾತ್ಮನಃ ।

ಸ್ಮೃತ್ವಾಕ್ಷರದ್ವಯಂ ತಸ್ಯ ಕರ್ಣೇ ತೂಪದಿದೇಶ ಸಃ ॥೪೬॥

ಇತಿ ಶ್ರೀಮದಯೋಧ್ಯಾಕಾಂಡೇ ಚೋರಸ್ಯ ಉಪದೇಶಾಧಿಕಾರ

ವಿಚಾರ ಮನ್ತ್ರೋಪದೇಶೋ ನಾಮ

ಪಞ್ಚವಿಂಶಃ ಸರ್ಗಃ.



ಬೇಕು. ಆದರೆ, ಈ ಚೋರನು ನಿಷ್ಕಪಟಿನಾಗಿರುವುದರಿಂದ, ಇವನಿಗೆ ಉತ್ತಮವಾದ ಮಂತ್ರವನ್ನು ಈಗ ನಾನು ಉಪದೇಶಿಸುವೆನು ॥೪೫॥

ಹೀಗೆಂದು ಮನಸ್ಸಿನಲ್ಲಿ ಪರ್ಯಾಲೋಚಿಸಿ, ಆ ವಸಿಷ್ಠಮುನಿಯು, ಹಿಂದೆ ಆಕಾಶದಲ್ಲಿ ಕೇಳಿಬಂದ 'ಮರಾ' ಎಂಬ ಎರಡಕ್ಷರವನ್ನು ಸ್ಮರಿಸಿಕೊಂಡು, ನಿರ್ದೋಷನಾಗಿಯೂ ಜಿತೇಂದ್ರಿಯನಾಗಿಯೂ ಇರುವ ಆ ವ್ಯಾಧನ ಕಿವಿಯಲ್ಲಿ ಅದನ್ನು ಉಪದೇಶಿಸಿದನು ॥೪೬॥

ಇದು ಅಯೋಧ್ಯಾಕಾಂಡದಲ್ಲಿ ಚೋರನಿಗೆ ಉಪದೇಶಾಧಿಕಾರ

ಮಂತ್ರೋಪದೇಶವೆಂಬ ಇಪ್ಪತ್ತೈದನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಷಡ್ವಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ತತಃ ಸ ತಿಮಿರಂ ಭಿತ್ವಾ ಬಭೌ ಸೂರ್ಯ ಇವೋದಿತಃ ।
ಉಪದೇಶವನುಪ್ರಾಪ್ಯ ವಸಿಷ್ಠಾದ್ಋಷಿಸತ್ತಮಾತ್ ॥೧॥
ಅತ್ಯಾನನ್ದಮನುಪ್ರಾಪ್ಯ ನನರ್ತ ಸ ಪುನಃಪುನಃ ॥೨॥
ಜಿತಾಲೋಕಾಮಯಾ ಸರ್ವೇ ಪಾಪನಿರ್ಹರಣಂ ಕೃತಮ್ ।
ಚತುರ್ದಶಸು ಲೋಕೇಷು ಪಾತ್ರಭೂತೋಸ್ಮಿ ಸಾಮ್ಪ್ರತಮ್ ।
ಇತಿ ಬ್ರುವಾಣಶ್ಚೋರೋಪಿ ಕರ್ತವ್ಯಂ ಸಮುಪದ್ಯತ ॥೩॥
ವಲ್ಕಲಾನಾಂ ಸಹಸ್ರಾಣಿ ಭೃಙ್ಗಾರೂಣಾಂ ಶತಾನಿ ಚ ।
ಹಾರಾಣಾಂ ಶತಸಹಸ್ರಾಣಿ ಮೌಕ್ತಿಕಾನಾಂ ಸುವರ್ಚಸಾಮ್ ॥೪॥
ರುದ್ರಾಕ್ಷಾಣಾಂ ಮಹಾಮಾಲಾಃ ಸೂಕ್ಷ್ಮಾಣಾಂ ಚ ಮಹಾಧನಾಃ ।
ಪಟ್ಟವಸ್ತ್ರಶತಂ ಶುದ್ಧಂ ಶತಂ ಚ ಕ್ಷೌಮವಾಸಸಾಮ್ ॥೫॥
ಮುಕ್ತಾಪ್ರವಾಳಸಮ್ಮಿಶ್ರಾಃ ಕೇವಲಾಶ್ಚ ರುದ್ರಮಾಲಿಕಾಃ ।
ಲೋಹಿತಾದೀನಿ ಪಾತ್ರಾಣಿ ವ್ಯಾಘ್ರಕೃಷ್ಣಾಜಿನಾನಿ ಚ ॥೬॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸಿದನು :—

ಎಲೌ! ಪಾರ್ವತಿ! ಆ ಬಳಿಕ, ಋಷಿಶ್ರೇಷ್ಠನಾದ ವಸಿಷ್ಠಮುನಿಯ ದೆಸೆಯಿಂದ ಉಪದೇಶವನ್ನು ಪಡೆದ ಆ ವ್ಯಾಧನು, ಅಂಧಕಾರವನ್ನು ಭೇದಿಸಿಕೊಂಡು ಉದಯಿಸಿದ ಸೂರ್ಯನಂತೆ ಪ್ರಕಾಶಿಸಿದನು. ಆಗ ಅವನು ಅತಿಯಾಗಿ ಆನಂದವನ್ನು ಹೊಂದಿ ಪುನಃಪುನಃ ನರ್ತನಮಾಡಲುಪಕ್ರಮಿಸಿದನು ॥೧—೨॥

'ನಾನು ಸಮಸ್ತಲೋಕಗಳನ್ನೂ ಈಗ ವಶಮಾಡಿಕೊಂಡೆನು; ಈಗ ಸಮಸ್ತಪಾಪವನ್ನೂ ಕಳೆದುಕೊಂಡೆನು. ಹದಿನಾಲ್ಕು ಲೋಕಗಳಲ್ಲಿಯೂ ಪ್ರಶಸ್ತನೆನ್ನಿಸಿಕೊಂಡೆನು' ಎಂದು ಹೇಳುತ, ಆ ಚೋರನು, ತಾನು ಮಾಡಬೇಕಾದುದೇನೆಂದು ತಿಳಿದವನಾದನು ॥೩॥

ಆಗ, ಸಾವಿರ ನಾರುಮಡಿಗಳನ್ನೂ, ನೂರು ಭೃಂಗಾರು(ಹೂಜಿ)ಗಳನ್ನೂ ಅತಿಪ್ರಕಾಶವಾದ ಮುತ್ತುಗಳಿಂದ ರಚಿತವಾದ ಲಕ್ಷ ಹಾರಗಳನ್ನೂ, ತುಂಬಾ ಬೆಲೆಬಾಳುವ-ಸೂಕ್ಷ್ಮವಾದ ರುದ್ರಾಕ್ಷಿಗಳ ಮಾಲೆಗಳನ್ನೂ, ಶುಭ್ರವಾಗಿರುವ ನೂರು ಪಟ್ಟವಸ್ತ್ರಗಳನ್ನೂ, ಪೀತಾಂಬರಗಳನ್ನೂ, ಮುತ್ತು ಹವಳಗಳಿಂದ ವಿಶ್ರವಾಗಿಯೂ ಅವುಗಳಿಲ್ಲದೆಯೂ ಇರುವ ರುದ್ರಾಕ್ಷಮಾಲೆಗಳನ್ನೂ, ತಾಮ್ರ ಮುಂತಾದುವುಗಳ ಪಾತ್ರೆಗಳನ್ನೂ, ವ್ಯಾಘ್ರಾಜಿನ ಕೃಷ್ಣಾಜಿನಗಳನ್ನೂ, ರತ್ನಾಲಂಕೃತವಾದ ಸುವರ್ಣ ಯಜ್ಞೋಪವೀತವನ್ನೂ, ತುಂಬ ಬೆಲೆಬಾಗುವ—

ಸ್ವರ್ಣಯಜ್ಞೋಪವೀತಂ ಚ ಮಣಿಭೂಷಣಭೂಷಿತಮ್ ॥೬॥
ಮಹಾರ್ಹಾಣಾಂ ದೇಶಜಾನಾಂ ಧಾಣಿಕ್ಯಾನಾಂ ಸುವರ್ಚಸಾಮ್ ।
ಸುವರ್ಣಸವರತ್ನಾನಾಂ ಕೋಟಿಕೋಟಿಪ್ರಸಙ್ಖ್ಯಯಾ।
ಗುರೂಣಾಂ ದಕ್ಷಿಣಾಂ ದತ್ವಾ ಕೃತಕೃತ್ಯೋಭವತ್ ತದಾ ॥೮॥
ಚೋರಸ್ಯ ಚಿತ್ತನೈರ್ಮಲ್ಯಂ ವೈರಾಗ್ಯಂ ಚ ವಿವೇಕಿತಾಮ್ ।
ಔದಾರ್ಯಾದೀನಿ ದೃಷ್ಟ್ವಾಥ ಮುನಯೋ ವಿಸ್ಮಯಂ ಗತಾಃ ॥೯॥
ಪ್ರತಿಗೃಹ್ಯಾಥ ತದ್ದ್ರವ್ಯಂ ವಸಿಷ್ಠಾದ್ಯಾಮಹರ್ಷಯಃ ।
ತತೋ ದುರ್ಗವನಂ ತೀರ್ತ್ವಾ ಪ್ರಯಯುಸ್ತೇ ಹಿಮಾಚಲಮ್ ॥೧೦॥
ಮನ್ತ್ರಂ ಲಬ್ಧ್ವಾಥ ಚೋರೋಪಿ ಯತವಾಕ್ಕಾಯಮಾನಸಃ ।
ವಿಧೂಯ ಸರ್ವಪಾಪಾನಿ ತಪಸೇ ಮನಸಾದಧೇ ॥೧೧॥
ತತಃ ಸ್ನಾತ್ವಾ ಮಹಾನದ್ಯಾಂ ಧೃತ್ವಾ ವಲ್ಕಲಮುತ್ತಮಮ್ ।
ಕೃಷ್ಣಾಜಿನಂ ವ್ಯಾಘ್ರಚರ್ಮ ಕುಶಪಾಣಿರತನ್ದ್ರಿತಃ ।೧೨॥
ವರ್ಜಯಿತ್ವಾ ಶಿರೋಭ್ಯಙ್ಗಂ ಅಧಶ್ಯಾಯೀ ಜಿತೇನ್ದ್ರಿಯಃ ।
ವಲ್ಕಲಾಜಿನಸಂವೀತೋ ಜಜಾಪ ಪರಮಂ ಹಿತಮ್ ॥೧೩॥
ನ ಶ್ರಮೋ ನ ಮನಃಖೇದೋ ನ ಪರಾಙ್ಮುಖತಾಪಿ ವಾ ।
ದೃಢಚೇತಸಿ ಚೋರೇ ತು ನ ನಿರ್ವೇದಕಥಾಪಿ ಚ ॥೧೪॥

ಅಯಾ ದೇಶಗಳಲ್ಲುತ್ಪನ್ನವಾಗುವ ಮಾಣಿಕ್ಯರತ್ನಗಳನ್ನೂ, ಕೋಟಿಕೋಟಿಸಂಖ್ಯಾಕವಾಗಿ ಸುವರ್ಣ ನವರತ್ನಗಳನ್ನೂ ಕೂಡ, ಗುರುಗಳಿಗೆ ದಕ್ಷಿಣೆಯಾಗಿ ಕೊಟ್ಟು, ತಾನು ಕೃತಾರ್ಥನಾದನು ॥೪—೮॥

ಅನಂತರ, ಆ ಮುನಿಗಳು, ಚೋರವ್ಯಾಧನಿಗಿರುವ ಚಿತ್ತನೈರ್ಮಲ್ಯವನ್ನೂ ವೈರಾಗ್ಯವನ್ನೂ ವಿವೇಕವನ್ನೂ ಔದಾರ್ಯಾದಿ ಗುಣಗಳನ್ನೂ ನೋಡಿ ಆಶ್ಚರ್ಯಪಟ್ಟರು ॥೯॥

ಬಳಿಕ, ಆ ವಸಿಷ್ಠಾದಿ ಮಹರ್ಷಿಗಳು, ಅವನಿಂದ ಕೊಡಲ್ಪಟ್ಟ ಆ ದ್ರವ್ಯವನ್ನು ಪ್ರತಿಗ್ರಹಿಸಿ, ದುರ್ಗವಾಗಿದ್ದ ಆ ಅರಣ್ಯವನ್ನು ದಾಟಿ ಹಿಮವತ್ಪರ್ವತಕ್ಕೆ ಹೊರಟುಹೋದರು ॥೧೦॥

ಆಮೇಲೆ, ವಸಿಷ್ಠರಿಂದ ಮಂತ್ರೋಪದೇಶವನ್ನು ಪಡೆದವನಾದ ಆ ಚೋರನು, ಸಮಸ್ತ ಪಾಪಗಳನ್ನೂ ಕಳೆದುಕೊಂಡು, ತಪಸ್ಸಿಗೋಸ್ಕರ ಮನಸ್ಸಿಟ್ಟವನಾದನು ॥೧೧॥

ಆಗ ಮಹಾನದಿಯಲ್ಲಿ ಸ್ನಾನಮಾಡಿ, ಉತ್ತಮವಾದ ವಲ್ಕಲವನ್ನೂ ಕೃಷ್ಣಾಜಿನವನ್ನೂ ವ್ಯಾಘ್ರಚರ್ಮವನ್ನೂ ಧರಿಸಿ, ಕೈಯಲ್ಲಿ ದರ್ಭಪವಿತ್ರವನ್ನಿಟ್ಟುಗೊಂಡು, ಸ್ವಲ್ಪವೂ ಆಲಸ್ಯವಿಲ್ಲದೆ, ಅಭ್ಯಂಗಾದಿಗಳನ್ನು ಬಿಟ್ಟು, ನೆಲದಮೇಲೆ ಮಲಗುತ, ಜಿತೇಂದ್ರಿಯನಾಗಿ, ವಲ್ಕಲಾಜಿನಗಳನ್ನುಟ್ಟುಕೊಂಡು, ಪರಮಹಿತವಾದ ಮಂತ್ರವನ್ನು ಜಪಿಸುತಿದ್ದನು ॥೧೨—೧೩॥

ಮಹಾಸ್ಥಿರಚಿತ್ತನಾಗಿರುವ ಆ ಚೋರನಲ್ಲಿ, ಶ್ರಮವಾಗಲಿ—ಮನಃಖೇದವಾಗಲಿ—ಪರಾಙ್ಮುಖೀಭಾವವಾಗಲಿ—ನಿರ್ವೇದ(ಬೇಜಾರು)ವೆಂಬ ಹೆಸರಾಗಲಿ—ಸ್ವಲ್ಪವೂ ಉದಯಿಸಲಿಲ್ಲ॥

ಕ್ವಚಿನ್ಮೂಲಫಲಾಹಾರಃ ಕ್ವಚಿತ್ಕಾಲಸ್ಯ ಭೋಜನಮ್ ।
ಕ್ವಚಿತ್ ಪಯಃ ಕ್ವಚಿತ್ ಪರ್ಣಂ ಕ್ವಚಿದ್ವಾಯುಃ ತಪಶ್ಚರ್ ॥೨೫॥
ಪಞ್ಚೇನ್ದ್ರಿಯಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಬಾಹ್ಯಂ ವಿಸ್ಮೃತ್ಯ ಪವನಂ ಚಿತ್ವಾ ಜಪ್ಯಂ ಜಜಾಪ ಸಃ ॥೨೬॥
ಏತಸ್ಮಿನ್ನೇವ ಸಮಯೇ ಭಾರ್ಯಾ ಬನ್ಧುಸುತಾದಯಃ ।
ಧನಾಶಾಪಾಶಸಂಬದ್ಧಃ ಚೋರೋ ಯಾತಃ ಕ್ವ ಚಾಧುನಾ ॥೨೭॥
ಧಿಗ್ಧನೇಚ್ಛಾಂ ಪಿಶುನತಾಂ ದೇವಾನಾಮಪಿ ದುಃಖದಾಮ್ ।
ಧನಂ ಹಿ ಸರ್ವಜನ್ತೂನಾಂ ಅಮೃತಂ ಪ್ರೇಮಕಾರಣಮ್ ॥೨೮॥
ಸುವರ್ಣಪ್ರಾಣಯೋರ್ಮಧ್ಯೇ ಸುವರ್ಣಂ ಶ್ರೇಷ್ಠಮುಚ್ಯತೇ ।
ಪ್ರಾಣಾನಪಿ ಪರಿತ್ಯಜ್ಯ ಸ್ವರ್ಣಾಯ ಯತತೇ ಯತಃ ॥೨೯॥
ವೇಧಾದ್ವೇಧಾ ಭ್ರಮಂ ಚಕ್ರೇ ಕಾನ್ತಾಸು ಕನಕೇಷು ಚ ।
ತಾಸು ತೇಷ್ವಸಂನಾಸಕ್ತಃ ಸಾಕ್ಷಾದ್ಬ್ರಹ್ಮಾ ಸರಾಕೃತಿಃ ॥೩೦॥
ಅರ್ಥಾನಾಮಾರ್ಜನೇ ದುಃಖಂ ಆರ್ಜಿತಾನಾಂ ತು ರಕ್ಷಣೇ ।
ನಾಶೇ ದುಃಖಂ ವ್ಯಯೇ ದುಃಖಂ ಧಿಗರ್ಥಂ ಕ್ಲೇಶದಂ ಸದಾ ॥೩೧॥

ಹೀಗೆ ತಪಸ್ಸುಮಾಡುತಿರುವ ಆ ಚೋರನು, ಕೆಲವುವೇಳೆ ಫಲಮೂಲಗಳನ್ನೂ, ಕೆಲವು ವೇಳೆ ಶಾಕ(ಕಾಯಿಪಲ್ಯ)ಗಳನ್ನೂ, ಕೆಲವು ಕಾಲ ನೀರನ್ನೂ, ಕೆಲವು ಕಾಲ ಎಲೆಗಳನ್ನೂ, ಕೆಲವು ಕಾಲ ವಾಯುವನ್ನೂ ಭಕ್ಷಿಸಿಕೊಂಡಿದ್ದನು ॥೨೫॥

ಅವನು, ಪಂಚೇಂದ್ರಿಯಗಳನ್ನು ನಿಗ್ರಹಿಸಿ, ಮನಸ್ಸನ್ನು ತನ್ನ ಹೃದಯದೊಳಗೆ ನಿರೋಧ ಪಡಿಸಿ, ಬಾಹ್ಯವಿಷಯಗಳನ್ನೆಲ್ಲ ಮರೆತು, ಶ್ವಾಸೋಚ್ಛ್ವಾಸಗಳನ್ನು ತಡೆದು, ಮಂತ್ರವನ್ನು ಜಪಿಸುತಿದ್ದನು ॥೨೬॥

ಹೀಗಿರುವ ಸಮಯದಲ್ಲಿಯೇ, ಅವನ ಭಾರ್ಯಾ ಬಂಧು ಪುತ್ರಾದಿಗಳು 'ನಮ್ಮ ಚೋರ ರಾಜನು, ಧನಾಶೆಯೆಂಬ ಪಾಶದಿಂದ ಬದ್ಧನಾಗಿ ಎಲ್ಲಿಗೆ ಹೋದನೋ?-ಕಾಣೆವಲ್ಲ! ಈ ಹಾಳು ಧನೇಚ್ಛೆಯನ್ನು ಸುಡಬೇಕು. ಇದು ದೇವತೆಗಳಿಗೂ ದುಃಖವುಂಟುಮಾಡತಕ್ಕದ್ದು. ಧನವೆಂಬುದು, ಸಮಸ್ತಪ್ರಾಣಿಗಳಿಗೂ ಮರಣಾಂತವಾಗಿ ಪ್ರೀತಿಜನಕವಾದುದು. ಸುವರ್ಣ ಪ್ರಾಣಗಳ ಮಧ್ಯದಲ್ಲಿ, ಸುವರ್ಣವೇ ಶ್ರೇಷ್ಠವೆಂದು ಹೇಳಲ್ಪಡುವುದು. ಪ್ರಾಣವನ್ನಾದರೂ ಬಿಟ್ಟು, ಸುವರ್ಣಕ್ಕೋಸ್ಕರವಾಗಿಯೇ ಮನುಷ್ಯನು ಪ್ರಯತ್ನಪಡುವನಲ್ಲವೆ! ಬ್ರಹ್ಮನು, ಕಾಂತೆಯಲ್ಲಿಯೂ ಕನಕದಲ್ಲಿಯೂ ಎರಡುವಿಧವಾದ ಭ್ರಮೆಯನ್ನುಂಟುಮಾಡಿರುವನು. ಅವೆರಡರಲ್ಲಿಯೂ ಅಸಕ್ತಿಯಿಲ್ಲದವನು, ಮನುಷ್ಯರೂಪದಲ್ಲಿರುವ ಸಾಕ್ಷಾತ್ ಪರಮೇಶ್ವರನೆನ್ನಿಸಲ್ಪಡುವನು. ಧನವನ್ನು ಸಂಪಾದಿಸುವಾಗಲೂ ದುಃಖವು; ಸಂಪಾದಿಸಿದಮೇಲೆ ಅದನ್ನು ಕಾಪಾಡುವಾಗಲೂ ದುಃಖವು; ಅದು ನಾಶಹೊಂದಿದರೂ ದುಃಖವು; ಅದನ್ನು ವೆಚ್ಚಮಾಡಿದರೂ ದುಃಖವು. ಹೀಗೆ ಸಕಲವಿಧವಾಗಿಯೂ ಸರ್ವದಾ ದುಃಖಕರವಾಗಿರುವ ಧನವನ್ನು ಸುಡಬೇಕು.

ಅಹಾ ಲೋಭಃ ಸ್ಮಯೋ ಗರ್ವೋ ಮದೋ ದಮ್ಭೋತಿವಮಾನಿತಾ ।
ತಿರಸ್ಕಾರೋ ಜನೇ ಕ್ರೋಧಃ ಪಾಪಂ ಚ ದ್ರವ್ಯಮಾಶ್ರಿತಮ್ ॥೨೦॥
ಏವಂ ಸಞ್ಚಿನ್ತ್ಯ ತೇ ಸರ್ವೇ ಬಾನ್ಧವಾಹಿತಕಾರಿಣಃ ।
ಸಾಧನಂ ಸರ್ವಮಾದಾಯ ಯಯುರ್ಯತ್ರ ಸ ತಿಷ್ಠತಿ ॥ ೨೧॥
ತತೋ ವಿಜಿತ್ಯ ತೇ ಘೋರಂ ವನಂ ಸರ್ವಂ ಭಯಾವಹಮ್ ।
ತತೋ ದದೃಕುರೇಕಾನ್ತೇ ಜಟಾಸನಮುತನ್ದ್ರಿತಮ್ ॥೨೪॥
ವಲ್ಕಲಾಜಿನಸಂವೀತಂ ವೃಕ್ಷಮೂಲಮುಪಾಶ್ರಿತಮ್ ।
ಕುಶಾಸನೇ ಸಮಾಸೀನಂ ದೀಪ್ಯಮಾನಮಿವಾನಲಮ್ ॥೨೫॥
ಗುರೂಪದೇಶವಿಧಿನಾ ಜಪನ್ತಂ ತಾರಕಂ ಮನುಮ್ ।
ರಾಮೋರ್ಪಿತಮನೋಬುದ್ಧಿಂ ಧ್ಯಾಯನ್ತಂ ರಾಘವಂ ಹೃದಿ ।
ದೃಷ್ಟ್ವಾ ಸಂಶಯಮಾಪನ್ನಾಃ ಶಬರಾನಿಷ್ಟ ಯಾಲಸಾಃ ॥೨೬॥
ನಾಯಂ ಮದೀಯಃ ಶಬರೋ ವೇಷಭೂಷಣಭೀಷಣಃ ।
ಇತಿ ಸಂವದತಾಂ ತೇಷಾಂ ಏವಂ ಕಾಚಿದಭೂನ್ಮತಿಃ ॥೨೭॥
ಅಯಮೇವ ಮದೀಯಃ ಸ್ಯಾತ್ ಪ್ರೀತಿರೇವಾತ್ರ ಕಾರಣಮ್ ।
ಇತಿ ನಿಶ್ಚಿತ್ಯ ತೇನ್ಯೋನ್ಯಂ ತತ್ಸಮೀಪಮುಪಾಯಯುಃ ॥೨೮॥

ಆಶೆ ಲೋಭ ಅಹಂಕಾರ ಗರ್ವ ಮದ ದಂಭ ಅತಿವಮಾನ ಜನಗಳಲ್ಲಿ ತಿರಸ್ಕಾರ ಕ್ರೋಧ-ಇವೆಲ್ಲವೂ ಧನವನ್ನು ಆಶ್ರಯಿಸಿಕೊಂಡಿರುವುವು.' ಎಂದು ಆಲೋಚಿಸುತ, ಅವನಿಗೆ ಹಿತವುಂಟುಮಾಡ ಬೇಕೆಂಬ ಉದ್ದೇಶದಿಂದ, ಸಕಲಸಾಮಗ್ರಿಗಳನ್ನೂ ತೆಗೆದುಕೊಂಡು, ಅವನಿರುವಕಡೆಗೆ ಹೊರ ಟರು ॥೧೩—೨೩॥

ಅನಂತರ, ಅತಿಭಯಂಕರವಾಗಿ ಮಹಾ ಘೋರವಾಗಿರುವ ಅರಣ್ಯವನ್ನೆಲ್ಲ ಹುಡುಕಿ, ಒಂದುಕಡೆ ರಹಸ್ಯವಾದ ಪ್ರದೇಶದಲ್ಲಿ ಸ್ಥಿರಾಸನನಾಗಿ ತಪಸ್ಸುಮಾಡುತ ಕುಳಿತುಕೊಂಡಿರುವ ಆ ವ್ಯಾಧನನ್ನು ಕಂಡರು ॥೨೪॥

ಆಗ ಅವನು, ವಲ್ಕಲಾಜಿನಗಳಿಂದ ಅಚ್ಛಾದಿತನಾಗಿ ವೃಕ್ಷಮೂಲವನ್ನಾಶ್ರಯಿಸಿಕೊಂ ಡಿದ್ದನು. ಅಗ್ನಿಯಂತೆ ಪ್ರಜ್ವಲಿಸುತ ದರ್ಭಾಸನದಲ್ಲಿ ಕುಳಿತಿದ್ದನು. ಗುರುಗಳು ಉಪದೇಶ ಮಾಡಿದ ರೀತಿಯಲ್ಲಿ ತಾರಕವಾದ ಮಂತ್ರವನ್ನು ಜಪಿಸುತಿದ್ದನು. ರಾಮನಲ್ಲಿ ತನ್ನ ಮನಸ್ಸನ್ನೂ ಬುದ್ಧಿಯನ್ನೂ ಸಮರ್ಪಿಸಿ, ಹೃದಯದಲ್ಲಿ ರಾಘವನನ್ನು ಧ್ಯಾನಿಸುತಿದ್ದನು. ಇಂತಹ ಸ್ಥಿತಿಯಲ್ಲಿ ರುವ ಆ ವ್ಯಾಧನನ್ನು ನೋಡಿ, ಅವರೆಲ್ಲರೂ ಸಂಶಯಪಡಲಾರಂಭಿಸಿದರು ॥೨೫— ೨೬॥

ಆಗ 'ಇವನು ನಮ್ಮ ವ್ಯಾಧನಲ್ಲ. ಅವನು, ವೇಷದಲ್ಲಿಯೂ ಭಾಷಣದಲ್ಲಿಯೂ ಅತಿ ಭಯಂಕರನಾಗಿದ್ದನು. ಇವನಾದರೋ, ಅತಿಸೌಮ್ಯನಾಗಿರುವನು' ಎಂದು ಮಾತನಾಡುತಿರು ವಾಗ, ಅವರಿಗೆ ಈ ರೀತಿಯಾಗಿ ಮತ್ತೊಂದುವಿಧವಾದ ಅಭಿಪ್ರಾಯ ಹುಟ್ಟಿತು ॥೨೭॥

'ಇವನೇ ನಮ್ಮವನಾಗಿರಬಹುದು. ಈ ವಿಷಯದಲ್ಲಿ ಪ್ರೀತಿಯೇ ನಿದರ್ಶನವು. ಇವನು ನಮ್ಮವನಾಗದಿದ್ದರೆ, ಇವನಲ್ಲಿ ನಮಗೆ ಇಷ್ಟು ಪ್ರೀತಿಹುಟ್ಟುತಿರಲಿಲ್ಲ' ಎಂದು ಪರಸ್ಪರವಾಗಿ ನಿಶ್ಚಯಿಸಿಕೊಂಡು ಅವನ ಸಮೀಪಕ್ಕೆ ಹೋದರು ॥೨೮॥

ಅಲಿಙ್ಗನಸಮಸ್ಕಾರಮಙ್ಗಳಸ್ತುತಿವನ್ದನೈಃ ।
ಸನ್ತೋಷಂ ಜನಯನ್ತಿ ಸ್ಮ ದಯಾಕಾರಣಕರ್ಮಭಿಃ ॥೬೯॥
ಪುತ್ರಾಂಶ್ಚ ಪೌತ್ರಾಂಶ್ಚ ಪ್ರಪೌತ್ರಾಂಶ್ಚ ಭಾರ್ಯಾಬನ್ಧುಸುಹೃಜ್ಜನಾಂಶ್ಚ ।
ಪಶ್ಯ ಸರ್ವಾನಯಂ ಕ್ಷಿಪ್ರಂ ಯಥಾನ್ಯಾಯಂ ಮಹಾಮತೇ ॥೭೦॥
ತ್ವದಧೀನಾವಯಂ ಸರ್ವೇ ಬಹುಧಾ ಪೋಷಿತಾಸ್ತ್ವಯಾ ।
ತ್ವಾಂ ವಿನಾ ಕಥಮಸ್ಮಾಕಂ ಜೀವನಂ ಸಮ್ಭವಿಷ್ಯತಿ ॥೭೧॥
ತಪಶ್ಚರನ್ತಿ ಮುನಯೋ ಬ್ರಾಹ್ಮಣಾಶ್ಚ ತ್ರಿಯಾದಯಃ ।
ನಾಸ್ತಿ ಕಿಂ ತೇ ತಪಃ ಕರ್ತುಂ ಭೋಗಭಾಗ್ಯವತಃ ಸುಖಮ್ ॥೭೨॥
ದರಿದ್ರಸ್ಯ ತಪಃ ಕೃತ್ಯಂ ತೀರ್ಥಕ್ಷೇತ್ರನಿಷೇವಣಮ್ ।
ಶ್ರೀಮತಾಂ ನ ತಪಃ ಕೃತ್ಯಂ ನ ತೀರ್ಥಂ ನಾಪಿ ಪೂಜನಮ್ ॥೭೩॥
ನ ಹೀದೃಶಂ ಕರ್ಮ ಲೋಕೇ ಪುಣ್ಯವನ್ತಾನಾಂ ಪ್ರದೃಶ್ಯತೇ ।
ಮೃಗಯಾಚೋರಕರ್ಮಭ್ಯಾಂ ವಯಂ ಜೀವಾಮಹೇ ಪ್ರಭೋ ॥೭೪॥
ಶಬರೇಷು ಕ್ವ ಸನ್ನ್ಯಾಸೋ ಮ್ಲೇಚ್ಛವರ್ಗೇ ಕ್ವ ಸೌಹೃದಮ್ ।
ಪುಲ್ಕಸೇಷು ಕ್ವ ವಾ ಸತ್ಯಂ ಕದರ್ಯೇಷು ಕ್ವ ಭೋಗಿತಾ ॥೭೫॥

ಅನಂತರ, ಆಲಿಂಗನ ನಮಸ್ಕಾರ ಮಂಗಳಾಶಾಸನೆ ಸ್ತೋತ್ರ ಮುಂತಾಗಿರುವ ದಯಾಜನಕವಾದ ವ್ಯಾಪಾರಗಳಿಂದ, ಅವನಿಗೆ ಸಂತೋಷವನ್ನು ಹುಟ್ಟಿಸಿದರು ॥೬೯॥

ಆಮೇಲೆ ಅವನನ್ನು ಕುರಿತು ಹೀಗೆ ಹೇಳಿದರು :—ಎಲೈ ಮಹಾಬುದ್ಧಿಯಾದವನೆ! ನಿನ್ನ ಪುತ್ರ ಪೌತ್ರ ಪ್ರಪೌತ್ರರನ್ನೂ, ಭಾರ್ಯಾ ಬಂಧು ಮಿತ್ರರುಗಳನ್ನೂ ನೋಡುವನಾಗು; ಇವರನ್ನೆಲ್ಲ ಬೇಗನೆ ಯಥಾಯೋಗ್ಯವಾಗಿ ಮರ್ಯಾದಿಸು ॥೭೦॥

ನಾವೆಲ್ಲರೂ ನಿನಗೆ ಅಧೀನರಾಗಿರುವೆವು; ನಿನ್ನಿಂದ ನಾವು ಬಹುವಿಧವಾಗಿ ಪೋಷಿತರಾಗಿರುವೆವು. ಈಗ ನಿನ್ನನ್ನು ಬಿಟ್ಟು ನಮಗೆ ಜೀವನ ಹೇಗೆ ಸಂಭವಿಸುವುದು?॥೭೧॥

ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಮುನಿವ್ರತವನ್ನು ಧರಿಸಿ ತಪಸ್ಸುಮಾಡುವರು. ಸಕಲ ಭೋಗಭಾಗ್ಯಯುಕ್ತನಾಗಿರುವ ನೀನು ತಪಸ್ಸುಮಾಡುವುದಕ್ಕೆ, ಈಗ ನಿನಗೆ ಯಾವ ಸುಖವಿಲ್ಲವಾಗಿದೆ? ॥೭೨॥

ದರಿದ್ರನಾಗಿರತಕ್ಕವನಿಗೆ, ತಪಸ್ಸೂ ತೀರ್ಥಸೇವೆಯೂ ಮಾಡಬೇಕಾದುದೇ ಸರಿ; ನಿನ್ನಂತಹ ಶ್ರೀಮಂತರಿಗೆ, ತಪಸ್ಸು ತೀರ್ಥ ಪೂಜೆ–ಇದೊಂದೂ ಅವಶ್ಯಕವಿಲ್ಲ ॥೭೩॥

ಲೋಕದಲ್ಲಿ, ನಿನ್ನಂತೆ ತಪಸ್ಸುಮಾಡುತ್ತಿರುವುದು ಯಾವ ಬೇಡರಲ್ಲಿಯೂ ಕಾಣುವುದಿಲ್ಲವಲ್ಲ! ಅಯ್ಯಾ! ಪ್ರಭುವೆ! ನಾವು ಬೇಟೆಯಿಂದಲೂ ಚೌರ್ಯದಿಂದಲೂ ಸುಖವಾಗಿ ಜೀವಿಸಿಕೊಂಡಿರೋಣ ॥೭೪॥

ಬೇಡರಲ್ಲಿ ಸನ್ಯಾಸವೆಲ್ಲಿಯದು? ಮ್ಲೇಚ್ಛರಲ್ಲಿ ಮೈತ್ರಿಯಲ್ಲಿಯದು? ಚಂಡಾಲರಲ್ಲಿ ಸತ್ಯವೆಲ್ಲಿರುವುದು? ಕೃಪಣರಿಗೆ ಸುಖಾನುಭವವೆಲ್ಲಿ ಬಂದೀತು? ॥೭೫॥

ಗೃಹಾಶ್ರಮಂ ಪ್ರಶಂಸನ್ತಿ ದೇವಾಅಪಿ ಮಹರ್ಷಯಃ ।
ಮುನಯಃ ಪಿತರಶ್ಚೈವ ಯತಯೋ ಬ್ರಹ್ಮವಾದಿನಃ ॥೩೬॥

ಗೃಹಾಶ್ರಮವಿಹೀನಾನಾಂ ಧರ್ಮೋ ನಿರವಲಮ್ಬನಃ ।
ತಸ್ಮಾದ್ಗೃಹಂ ಪರಿತ್ಯಜ್ಯ ನ ಪಾರಿವ್ರಾಜ್ಯಮರ್ಹಸಿ ॥೩೭॥

ತಸ್ಮಾದುತ್ತಿಷ್ಠ ಭದ್ರಂ ತೇ ಕಿಂ ವಿಲಮ್ಬೇನ ಚೇತಸಃ ।
ಭುಂಕ್ಷ್ವ ಭೋಗಾನ್ ದಿವ್ಯಸರ್ವಾನ್ ಪಾಲಯಾಸ್ಮಾನನುವ್ರತಾನ್ ॥೩೮॥

ಶ್ರೀ ಶಿವಉವಾಚ.

ನೈತಚ್ಛ್ರೋತ್ರಗತಂ ದೇವಿ ವಾಕ್ಯಜಾಲಂ ಮಹಾತ್ಮನಃ ।
ವೈರಾಗ್ಯದೃಢಚಿತ್ತಸ್ಯ ಚೇಲಸಂರುದ್ಧಕರ್ಣವತ್ ॥೩೯॥

ಇತಿ ಶ್ರೀಮದಯೋಧ್ಯಾಕಾಣ್ಡೇ ಚೋರಬನ್ಧುಕೃತಪ್ರಾರ್ಥನ ಕಥನಂ
ನಾಮ ಷಡ್ವಿಂಶಃ ಸರ್ಗಃ.



ಮೆಟ್ಟು, ದೇವತೆಗಳೂ ಮಹರ್ಷಿಗಳೂ ಮುನಿಗಳೂ ಪಿತೃಗಳೂ ಯತಿಗಳೂ ಬ್ರಹ್ಮವಾದಿಗಳೂ-ಗೃಹಸ್ಥಾಶ್ರಮವೇ ಸರ್ವೋತ್ತಮವೆಂದು ಹೊಗಳುತ್ತಿರುವರು ॥೩೬॥

ಗೃಹಸ್ಥಾಶ್ರಮವಿಲ್ಲದವರಿಗೆ ಧರ್ಮವು ನಿರಾಶ್ರಯವಾಗುವುದು. ಅದುಕಾರಣ, ಗೃಹಸ್ಥಾಶ್ರಮವನ್ನು ಬಿಟ್ಟು ಸನ್ಯಾಸವನ್ನು ಒಯಸುವುದು ನಿನಗೆ ಯುಕ್ತವಲ್ಲ ॥೩೭॥

ಹೀಗಿರುವುದರಿಂದ, ಅಯ್ಯಾ! ಪ್ರಭುವೆ! ನೀನು ಬೇಗ ಏಳುವನಾಗು. ನಿನಗೆ ಮಂಗಳವಾಗಲಿ. ಮನಸ್ಸಿನಲ್ಲಿ ಇಷ್ಟು ಕಾಲಕ್ಷೇಪಮಾಡುವ ಯೋಚನೆಯಿಂದ ಪ್ರಯೋಜನವೇನು? ಸ್ವರ್ಗಭೋಗ ಸದೃಶವಾದ ಭೋಗಗಳನ್ನೆಲ್ಲ ಅನುಭವಿಸು. ನಿನ್ನನ್ನೇ ಅನುಸರಿಸಿಕೊಂಡು ಜೀವಿಸುತ್ತಿರುವ ನಮ್ಮನ್ನು ಪರಿಪಾಲಿಸು. (ಎಂದು ಆ ವ್ಯಾಧರು ಹೇಳಿದರು) ॥೩೮॥

ಶ್ರೀ ಪರಮೇಶ್ವರನು ಹೇಳುವನು :—

ಎಲೌ ಪಾರ್ವತಿ! ಹೀಗೆ ಆ ವ್ಯಾಧನ ಬಂಧುಗಳು ಹೇಳುತಿದ್ದರೂ, ವೈರಾಗ್ಯದಿಂದ ದೃಢ ಚಿತ್ತನಾಗಿರುವ ಆ ಮಹಾತ್ಮನಾದ ವ್ಯಾಧನಿಗೆ, ಬಟ್ಟೆಯಿಂದ ಕಿವಿಯನ್ನು ಮುಚ್ಚಿದ್ದಂತೆಯಲ್ಲಿ, ಅವರ ಮಾತೊಂದೂ ಹೃದಯದಲ್ಲಿ ಪ್ರವೇಶಿಸಲೇ ಇಲ್ಲ ॥೩೯॥

ಇದು ಅಯೋಧ್ಯಾಕಾಂಡದಲ್ಲಿ ಚೋರಬಂಧುಕೃತವಾರ್ಥನ ಕಥನವೆಂಬ
ಇಪ್ಪತ್ತಾರನೆಯ ಸರ್ಗವು.

ಅಥ ಶ್ರೀಮದಯೋಧ್ಯಾಕಾಣ್ಡೇ ಸಪ್ತವಿಂಶಃ ಸರ್ಗಃ.

ಶ್ರೀಶಿವಉವಾಚ.

ತತೋ ಬನ್ಧುಜನಾಃ ಸರ್ವೇ ಚಿನ್ತಾಸಂಪ್ಲುತಮಾನಸಾಃ ।
ಹಾ ಕಷ್ಟಮಿತಿ ನಿಶ್ಚಿತ್ಯ ಪುನರ್ವಕ್ತುಂ ಸಮುಪಚಕ್ರಮುಃ ॥೧॥
ಕೇನ ಪುಣ್ಯವತಾ ಧೂರ್ತ ವಞ್ಚಿತೋಸಿ ಮಹಾತ್ಮನಾ ।
ಕೇನ ದತ್ತಂ ಚ ಭವತೇ ಭ್ರಮಕಾರಣಮೌಷಧಮ್ ॥೨॥
ಚೋರಬಾಧಾನಿವೃತ್ತ್ಯರ್ಥಂ ವಞ್ಚಿತೋಸಿ ದುರಾತ್ಮನಾ ।
ಮಣಿಮನ್ತ್ರೌಷಧಾನಾಂ ಹಿ ಪ್ರಭಾವೋಚಿನ್ತ್ಯವೈಭವಃ ॥೩॥
ಮನ್ತ್ರಾಭಿಧ್ಯಾನಸಂಸಕ್ತಚೇತಸೋನನ್ಯಚೇತಸಃ ।
ಪುಳನ್ದಸ್ಯ ನ ತತ್ ಸರ್ವಂ ಶ್ರವಣಾತಿಥಿತಾಂ ಗತಮ್ ॥೪॥
ವಿಸ್ಮೃತವ್ಯವಹಾರಸ್ಯ ಪರಮಾನನ್ದನನ್ದಿನಃ ।
ತೇಷಾಂ ತದ್ವಚನಂ ಸರ್ವಂ ನ ಶ್ರೋತ್ರಪಥಮನ್ವಗಾತ್ ।
ತಸ್ತಧಾ ಬ್ಧವಾಃ ಸರ್ವೇ ಪ್ರೋಚುರತ್ಯನ್ತಮಾತುರಾಃ ॥೫॥
ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಪಶ್ಯ ಬನ್ಧೂನ್ ಸಮಾಗತಾನ್ ॥೬॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು :—

ಎಲೌ ಪಾರ್ವತಿ! ಅನಂತರ, ಆ ಬಂಧುಜನಗಳೆಲ್ಲರೂ ಚಿಂತಾಕ್ರಾಂತಚಿತ್ತರಾಗಿ, ಅಯ್ಯೋ ಬಹಳ ಕಷ್ಟವೊದಗಿತು—ಎಂದು ನಿಶ್ಚಯಿಸಿ, ಪುನಃ ಮಾತನಾಡುವುದಕ್ಕುಪಕ್ರಮಿಸಿದರು ॥೧॥

ಅಯ್ಯೋ! ಧೂರ್ತ! ಯಾವ ಮಹಾತ್ಮನಾದ ಪುಣ್ಯಶಾಲಿಯು ನಿನ್ನನ್ನು ವಂಚಿಸಿರುವನು? ಹೀಗೆ ಬುದ್ಧಿಭ್ರಮೆಯುಂಟಾಗುವಂತೆ ಯಾವನು ನಿನಗೆ ಔಷಧವನ್ನು ಕೊಟ್ಟನು? ॥೨॥

ಕಳ್ಳರ ಬಾಧೆಯನ್ನು ಪರಿಹರಿಸುವುದಕ್ಕಾಗಿ, ಯಾವನೋ ದುರಾತ್ಮನು ನಿನ್ನನ್ನು ಹೀಗೆ ವಂಚಿಸಿರುವನು. ಮಣಿ ಮಂತ್ರ ಔಷಧಗಳ ಮಹಿಮೆಯು ಅಚಿಂತನೀಯವಾದುದು. (ಎಂದು ಅವರು ಹೇಳುತಿದ್ದರು) ॥೩॥

ಹೀಗೆ ಅವರುಗಳು ಹೇಳುತಿರಲಾಗಿ, ಮುಂತ್ರಜಪ ತತ್ಪರನಾಗಿ ಮತ್ತೆಲ್ಲಿಯೂ ಮನಸ್ಸು ಕೊಡದಿರುವ ಆ ವ್ಯಾಧನಿಗೆ, ಅವರು ಹೇಳಿದ ಮಾತೊಂದೂ ಕಿವಿಗೆ ಬೀಳಲೇ ಇಲ್ಲ. ಅನಂತರ ಅವನ ಬಂಧುಗಳೆಲ್ಲರೂ ಅತ್ಯಂತ ವ್ಯಥಿತರಾಗಿ ಹೀಗೆ ಹೇಳಿದರು ॥೪—೫॥

ಅಯ್ಯಾ! ಏಳು ಏಳು; ನಿನಗೆ ಮಂಗಳವಾಗಲಿ. ನಿನ್ನ ಬಂಧುಗಳೆಲ್ಲ ಇಲ್ಲಿಗೆ ಬಂದಿರುವುದನ್ನು ನೋಡು. ಮುಂದೆ ಯಾವಾಗಲೋ ಅಂಟಾಗಬಹುದಾದ ಒಂದು ಸುಖವನ್ನು ಮನಸ್ಸಿನಲ್ಲಿ ನಿರೀಕ್ಷಿಸಿಕೊಂಡು, ಈಗ ಸಿದ್ಧವಾಗಿರುವ ಸ್ಥಿರವಾದ ಸುಖವನ್ನು ಬಿಟ್ಟುಬಿಟ್ಟು, ಘೋರ

ಕಾಲಾನ್ತರಸುಖಂ ಪ್ರೇಕ್ಷ್ಯ ಸ್ಥಿರಭೋಗಂ ಪರಿತ್ಯಜ್ಯ ।
ಸರ್ವಾಭ್ರಸ್ತಇವ ನೋ ಭಾಸಿ ಬುದ್ಧಿಭ್ರಮೌನೋತಿದುಃಖಿತಃ ।
ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾರ್ಥಮಟಸೇ ಕಥಮ್ ॥೬॥
ಕಿಂ ತ್ವಯಾ ಸ್ವರ್ಗಸೌಖ್ಯಾನಿ ಲಬ್ಧುಂ ಶಕ್ಯಾನಿ ದುರ್ಮತೇ ।
ಕ್ವ ಸ್ವರ್ಗಃ ಕ್ವ ವಯಂ ಮೂಖರ್ಾಃ ಮೂಖರ್ೈಃ ಸ್ವರ್ಗಃ ಸುದುರ್ಲಭಃ॥
ಮೂಖರ್ಾಃ ಸ್ವಾಚಾರವಿಭ್ರಷ್ಟಾಃ ನೀಚಾದುಷ್ಕೃತಿಕಾರಿಣಃ ॥೯॥
ಕುಲಾನುಚಿತಧರ್ಮಂ ಯಃ ಕರೋತಿ ಪುರುಷಾಧಮಃ ।
ನ ತಸ್ಯ ಫಲತೇ ಕರ್ಮ ತಪ್ತಲೋಹಸ್ಥಬೀಜವತ್ ॥೧೦॥
ಇತಿ ಸಂವದತಾಂ ತೇಷಾಂ ಅನ್ಯೋನ್ಯಂ ಚೋರವಧಂ ಪ್ರತಿ ।
ತತ್ರ ಕಶ್ಚಿದ್ವೃದ್ಧತನುಃ ಶಬರೋ ವಾಕ್ಯಮಬ್ರವೀತ್ ॥೧೧॥
ಅಯಂ ತಿಷ್ಠತು ಸನ್ಮಾರ್ಗೇ ವಯಂ ಗಚ್ಛಾಮಹೇ ಗೃಹಾನ್ ।
ನಿರ್ಬನ್ಧೋ ನಾತ್ರ ಕರ್ತವ್ಯಃ ಪರಧ್ಯಾನಸಮನ್ವಿತೇ ॥೧೨॥
ಇತಿ ತದ್ವಚನಂ ಶ್ರುತ್ವಾ ತೇ ಸರ್ವೇ ಶಬರಾಃ ಶಿವೇ ।
ಪ್ರಯಯುಸ್ತದ್ಗೃಹಾನೇವ ವಿನಿನ್ದನ್ತಃ ಸ್ವಕಂ ಕುಲಮ್ ॥೧೩॥

ವನ್ನಾಶ್ರಯಿಸಿ ಬಹುದುಃಖಪಡುತಿರುವೆಯಲ್ಲ! ನಿನ್ನನ್ನು ನೋಡಿದರೆ, ಬುದ್ಧಿಭ್ರಮೆಯುಂಟಾಗಿರುವಂತೆ ನಮಗೆ ತೋರುತಿರುವೆ. ಸಿದ್ಧವಾಗಿರುವ ಅನ್ನವನ್ನು ಬಿಟ್ಟುಬಿಟ್ಟು, ಭಿಕ್ಷೆಗೋಸ್ಕರವಾಗಿ ಹೀಗೆ ಅಲೆಯುವುದೇಕೆ? ॥೬—೭॥

ಅಯ್ಯೋ! ಮೂಢ! ನೀನು ಸ್ವರ್ಗಸೌಖ್ಯಗಳನ್ನು ಪಡೆಯಬಲ್ಲೆಯಾ? ಆ ಸ್ವರ್ಗವೆಲ್ಲಿ?-ಮೂಖರ್ಾದ ನಾವೆಲ್ಲಿ? ಮೂಖರಿಗೆ ಸ್ವರ್ಗವು ಸುಕರಾಂ ದುರ್ಲಭವು. ಮೂಖರ್ಾದವರು, ತಮ್ಮ ಆಚಾರದಿಂದ ಭ್ರಷ್ಟರಾಗಿಯೂ ಪರಮನೀಚರಾಗಿಯೂ ಪಾಪಕರ್ಮವನ್ನಾಚರಿಸತಕ್ಕವರಾಗಿಯೂ ಇರುವರು ॥೮—೯॥

ಯಾವ ಪುರುಷಾಧಮನು ತನ್ನ ವಂಶಕ್ಕೆ ಅನುಚಿತವಾದ ಧರ್ಮವನ್ನು ಆಚರಿಸುವನೋ, ಅವನು ಮಾಡಿದ ಕರ್ಮವು-ಕಾಯ್ದಕಬ್ಬುಣದಮೇಲೆ ಬಿತ್ತಿದ ಬೀಜದಂತೆ-ಸುಕರಾಂ ಫಲಿಸುವುದಿಲ್ಲ. (ಎಂದು ಆ ಬಂಧುಜನಗಳು ಹೇಳುತಿದ್ದರು) ॥೧೦॥

ಈರೀತಿಯಲ್ಲಿ ಅವರೆಲ್ಲರೂ ಚೋರರಾಜನನ್ನುದ್ದೇಶಿಸಿಕೊಂಡು ಪರಸ್ಪರ ಮಾತನಾಡುತಿರಲಾಗಿ, ಅವರಲ್ಲಿ ತುಂಬಾ ಮುದುಕನಾಗಿದ್ದ ಒಬ್ಬ ಬೇಡನು, ಅವರುಗಳನ್ನು ಕುರಿತು 'ಅಯ್ಯಾ! ವ್ಯಾಧರೆ! ಇವನು ಹೀಗೆಯೇ ಸನ್ಮಾರ್ಗದಲ್ಲಿದ್ದುಗೊಂಡಿರಲಿ; ನಾವು ನಮ್ಮ ಮನೆಗೆ ಹೋಗೋಣ. ಪರಮಾತ್ಮಧ್ಯಾನನಿಷ್ಠನಾಗಿರುವ ಇವನಿಗೆ ನಾವು ನಿರ್ಬಂಧಮಾಡಬಾರದು.' ಎಂದು ಹೇಳಿದನು ॥೧೧—೧೩॥

ಎಲೌ ಪಾರ್ವತಿ! ಹೀಗೆ ಅವನು ಹೇಳಿದ ಮಾತನ್ನು ಕೇಳಿ, ಆ ಸಮಸ್ತ ವ್ಯಾಧರೂ, ತಮ್ಮ ಜಾತಿಯನ್ನು ನಿಂದಿಸಿಕೊಳ್ಳುತ್ತ ಅವರವರ ಮನೆಗೇ ಹೊರಟುಹೋದರು ॥೧೩॥

ತತೋಽಸ್ಯ ತಪಸೋ ವೇಗಾತ್ ಭೀತೋ ಭೂತಗಣಸ್ತದಾ ।
ಸ್ವಾಂಸ್ವಾಂ ಸೇವಾಂ ಪ್ರಕುರುತೇ ತಸ್ಯ ಸನ್ತೋಷಹೇತವೇ ॥೧೪॥

ಪೃಥಿವೀ ವಾಯುರಾಕಾಶಂ ಆಪೋ ಜ್ಯೋತಿಶ್ಚ ಪಞ್ಚಮಮ್ ।
ತಸ್ಯ ತೀವ್ರೇಣ ತಪಸಾ ಸ್ವಧರ್ಮವಿಮುಖಾಃ ಕೃತಾಃ ॥೧೫॥

ಸ್ವಕಾಠಿನ್ಯಂ ಪರಿತ್ಯಜ್ಯ ಪೃಥಿವೀ ಮೃದುತಾಂ ಗತಾ ॥೧೬॥

ವನಂ ಚೈತ್ರರಥಾಕಾರಂ ಫಲಪುಷ್ಪದ್ರುಮಾಕುಲಮ್ ।
ಸರ್ವರ್ತುಕುಸುಮೋಪೇತಂ ಪುಟಕೇಪುಟಕೇ ಮಧು ।
ಅಮೂಲಪುಷ್ಪಸುಫಲಪಲ್ಲವಾವನತದ್ರುಮಮ್ ॥೧೭॥

ಕಲ್ಪವೃಕ್ಷೋಪಮೈರ್ವೃಕ್ಷೈಃ ಸರ್ವಕಾಲಸುಖಪ್ರದಮ್ ।
ವನಮೇವಂವಿಧಂ ಕೃತ್ವಾ ಮಹೀ ನಿರ್ವರ್ಯತಾಂ ಗತಾ ॥೧೮॥

ಆದಿತ್ಯವಹ್ನಿಮುಖ್ಯಾನಾಂ ತೇಜಸ್ತ್ಯಕ್ತ್ವಾತಿತೀಕ್ಷ್ಣತಾಮ್ ।
ಮೃದೂಷ್ಣಕಾನ್ತಿಮದ್ಭೂತ್ವಾ ತಸ್ಯ ಸೇವಾಪರಂ ಹ್ಯಭೂತ್ ॥೧೯॥

ಉದಕಂ ದೋಷಿತಾಂ ತ್ಯಕ್ತ್ವಾ ಲಘು ಸ್ವಚ್ಛಂ ಸುಶೀತಲಮ್ ।
ಅಗಾಧತ್ವಂ ಚ ಸನ್ತ್ಯಜ್ಯ ಗಾಧತಾಮಗಮತ್ ಸುಖಮ್ ॥೨೦॥

ಅನಂತರ, ಇವನ ತಪೋವೇಗದಿಂದ ಭಯಪಟ್ಟ ಭೂತಸಮುದಾಯವು, ಅವನಿಗೆ ಸಂತೋಷಹುಟ್ಟಿಸುವುದಕ್ಕಾಗಿ, ತಾವುತಾವು ಮಾಡಬಹುದಾದ ಸೇವೆಯನ್ನು ಮಾಡಲುಪಕ್ರಮಿಸಿತು॥

ಪೃಥಿವಿ ವಾಯು ಆಕಾಶ ಅಪ್ಪು ತೇಜಸ್ಸು ಈ ಐದ್ದು ಭೂತಗಳೂ ಕೂಡ, ಅವನ ತೀವ್ರವಾದ ತಪಸ್ಸಿನಿಂದ, ತಮ್ಮ ಧರ್ಮಗಳಲ್ಲಿ ಪರಾಙ್ಮುಖಗಳಾಗಿ ಮಾಡಲ್ಪಟ್ಟುವು ॥೧೫॥

ಅದು ಹೇಗೆಂದರೆ:—ಭೂಮಿಯು ತನ್ನ ಕಾಠಿನ್ಯವನ್ನು ಬಿಟ್ಟುಬಿಟ್ಟು ಅವನಿಗೆ ಮೃದುವಾಗಿದ್ದಿತು. ಮತ್ತು, ಅವನು ತಪಸ್ಸುಮಾಡುತಿದ್ದ ವನವನ್ನು, ಚೈತ್ರರಥ(ಕುಬೇರನಉದ್ಯಾನ)ವನಕ್ಕೆ ಸಮಾನವನ್ನಾಗಿಯೂ-ಫಲವೃಕ್ಷ ಪುಷ್ಪವೃಕ್ಷಗಳಿಂದ ಧರಿತವನ್ನಾಗಿಯೂ-ಸರ್ವದಾ ಸರ್ವಋತುಗಳ ಕುಸುಮಗಳಿಂದಲೂ ಯುಕ್ತವನ್ನಾಗಿಯೂ ಮಾಡಿತು. ಅಲ್ಲಿ ಪ್ರತಿಯೊಂದು ಪುಷ್ಪಪುಟದಲ್ಲಿಯೂ ಮಕರಂದವು ತುಂಬಿದ್ದಿತು. ಈ ಪುಷ್ಪಗಳಿಂದಲೂ ಫಲಗಳಿಂದಲೂ ಪಲ್ಲವಗಳಿಂದಲೂ ತುಂಬಿಹೋಗಿರುವ ಆ ವೃಕ್ಷಗಳು, ಬುಡದವರೆಗೂ ಬೊಗ್ಗಿ ಹೋಗಿದ್ದುವು. ಇಂತಹ ಕಲ್ಪವೃಕ್ಷಸದೃಶವಾದ ವೃಕ್ಷಗಳು, ಸರ್ವಕಾಲದಲ್ಲಿಯೂ ಸುಖವುಂಟುಮಾಡುತಿದ್ದುವು. ಆ ವನವನ್ನು ಈರೀತಿಯಾಗಿ ಮಾಡಿ, ಆಗ ಪೃಥಿವಿಯು ತಾನು ನಿರಾತಂಕವಾಗಿದ್ದಿತು॥೧೬-೧೮॥

ಆದಿತ್ಯ ವಹ್ನಿ ಮೊದಲಾದುವುಗಳ ತೇಜಸ್ಸು, ತನ್ನಲ್ಲಿದ್ದ ತೀಕ್ಷ್ಣತ್ವವನ್ನು ಬಿಟ್ಟುಬಿಟ್ಟು, ಸುಖೋಷ್ಣವಾದ ಕಾಂತಿಯುಳ್ಳದಾಗಿ, ಅವನ ಸೇವೆಯಲ್ಲಿ ಅಸಕ್ತವಾಯ್ತು ॥೧೯॥

ಜಲವು ತನ್ನಲ್ಲಿದ್ದ ಕಲ್ಮಷವನ್ನು ಬಿಟ್ಟುಬಿಟ್ಟು, ತಿಳ್ಳಗೆ ತಣ್ಣಗೆ ನಿರ್ಮಲವಾಗಿದ್ದುಗೊಂಡು, ಆಳವನ್ನು ಬಿಟ್ಟು-ಮೇಲುಗಡೆಯಲ್ಲಿ ಸುಖವಾಗಿ ಸಿಕ್ಕುತಿದ್ದಿತು ॥೨೦॥

ವಾಯುಃ ಪ್ರಚಂಡತಾಂ ತ್ಯಕ್ತ್ವಾ ಮೃದು ಶೀತಂ ವವೌ ತದಾ ।
ಆಕಾಶೋ ಮಧುರಂ ಶಬ್ದಂ ಅಸೃಜಚ್ಚ ತದಾಕ್ರಮೇ ॥೨೧॥

ವಿಹಗಾಃ ಸ್ಥಾಣುಮುದ್ದಿಶ್ಯ ತಸ್ಯ ವಾಸಂ ಪ್ರಚಕ್ರಿರೇ ।
ವಲ್ಮೀಕಾಮುಕಕಾಶ್ಚೈವ ಖಾದಯನ್ತಿ ಸ್ಮ ತಂ ಮುನಿಮ್ ।
ಪಿಪೀಲಿಕಾಶ್ಚ ಬಹವೋ ಮಾಂಸಭಕ್ಷಣಪೂರ್ವಕಮ್ ॥೨೨॥

ಏತೈರ್ಜರ್ಜುರದೇಹೋಪಿ ನಿಯಮ್ಯಾನ್ತರಪಞ್ಚಕಮ್ ।
ಪಞ್ಚೇನ್ದ್ರಿಯಾಣಿ ಸಂಯಮ್ಯ ನ ಚಚಾಲ ತದಾ ಮುನಿಃ ॥೨೩॥

ಏವಂ ತಪಸ್ಯತಸ್ತಸ್ಯ ರಾಮಮನ್ತ್ರಾರ್ಚಿತಾತ್ಮನಃ ।
ದಿವ್ಯವರ್ಷಸಹಸ್ರಾಣಿ ವ್ಯತೀಯುಃ ಕ್ಷಣವನ್ಮುನೇಃ ॥೨೪॥

ತಸ್ಯ ಘೋರೇಣ ತಪಸಾ ನಿರಾಹಾರಸ್ಯ ದೇಹಿನಃ ।
ದೇವಾನಾಮುಭವದ್ಭೀತಿಃ ಸ್ವಸ್ಥಾನಭ್ರಂಶಶಙ್ಕಿನಾಮ್ ॥೨೫॥

ಭೀತಭೀತಾಶ್ಚ ತೇ ಸರ್ವೇ ಸಮವೇತಾಃ ಪರಸ್ಪರಮ್ ।
ತಪೋವಿಘ್ನಾಯ ಚಾಲೋಚ್ಯ ಯತ್ನವನ್ತೋ ಬಭೂವಿರೇ ॥೨೬॥

ವಾಯುವು ತನ್ನ ಪ್ರಚಂಡರೂಪವನ್ನು ಬಿಟ್ಟುಬಿಟ್ಟು, ಆಗ ಮೃದುವಾಗಿಯೂ ಶೀತವಾಗಿಯೂ ಬೀಸುತಿದ್ದಿತು. ಆಕಾಶವು, ಅವನ ಆಶ್ರಮದಲ್ಲಿ ಮಧುರವಾದ ಶಬ್ದವನ್ನು ಪ್ರಕಟಪಡಿಸುತಿದ್ದಿತು. ಹೀಗೆ ಪಂಚಮಹಾಭೂತಗಳೂ ಅವನ ಆಶ್ರಮದಲ್ಲಿ ಅವನಿಗೆ ಹೆದರಿಕೊಂಡು ನಡೆಯುತಿದ್ದುವು ॥೨೧॥

ಮತ್ತು, ಅನೇಕವಾದ ಪಕ್ಷಿಗಳು, ಅವನನ್ನು ಮೋಟುಮರವೆಂದು ತಿಳಿದುಕೊಂಡು, ಅವನ ಶರೀರದಮೇಲೆ ವಾಸಮಾಡಿಕೊಂಡಿದ್ದುವು. ನೊಣಗಳೂ ಸೊಳ್ಳೆಗಳೂ ಇರುವೆಗಳೂ ಕೂಡ, ಅವನ ಮಾಂಸವನ್ನು ತಿನ್ನುತ ಕಚ್ಚುತಿದ್ದುವು ॥೨೨॥

ಹೀಗೆ ಇವುಗಳಿಂದ ಜರ್ಜುರವಾದ ದೇಹವುಳ್ಳವನಾಗಿದ್ದರೂ, ಅವನು ಜ್ಞಾನೇಂದ್ರಿಯಗಳನ್ನು ಕರ್ಮೇಂದ್ರಿಯಗಳನ್ನೂ ನಿಗ್ರಹಿಸಿಕೊಂಡು, ಸ್ವಲ್ಪವೂ ಅಲುಗಾಡದೆ ಇದ್ದನು ॥೨೩॥

ಈರೀತಿಯಾಗಿ ರಾಮಮಂತ್ರ ಜಪದಲ್ಲಿ ಮನಸ್ಸಿಟ್ಟು ಆಗ ತಪಸ್ಸುಮಾಡುತಿರುವ ಆ ವ್ಯಾಧ ಕೂಡನಾದ ಮುನಿಗೆ, ಅನೇಕ ದಿವ್ಯವರ್ಷಸಹಸ್ರಗಳು ಒಂದು ಕ್ಷಣದಹಾಗೆ ಕಳೆದುಹೋದುವು॥

ಆಗ ನಿರಾಹಾರನಾಗಿ ತಪಸ್ಸುಮಾಡುತಿರುವ ಅವನ ಉಗ್ರವಾದ ತಪಸ್ಸಿನಿಂದ, ತಮಗೆಲ್ಲಿ ಸ್ಥಾನಭ್ರಂಶವಾಗುವುದೆಂದೋ ಎಂದು ಶಂಕೆಪಡುತಿರುವ ಸಮಸ್ತ ದೇವತೆಗಳಿಗೂ, ಅತಿಯಾಗಿ ಭಯವುಂಟಾಯ್ತು ॥೨೫॥

ಹೀಗೆ ಅತಿಯಾಗಿ ಭಯಪಟ್ಟ ಆ ದೇವತೆಗಳೆಲ್ಲರೂ, ಪರಸ್ಪರ ಒಟ್ಟುಗೂಡಿ ಪರ್ಯಾಲೋಚಿಸಿ, ಅವನ ತಪಸ್ಸಿಗೆ ವಿಘ್ನಮಾಡುವುದಕ್ಕೆ ಪ್ರಯತ್ನಪಟ್ಟರು ॥೨೬॥

ಇನ್ದ್ರಸ್ತದಾಹ್ವಯಾನಾಸ ಕ್ಷಮ್ಯಾಭ್ಯಪ್ಸರಸಾಂ ಗಣಾನ್ ।
ಗನ್ಧರ್ವಾನ್ ಗಾನಕುಶಲಾನ್ ವೀಣಾವಾದನಪಣ್ಡಿತಾನ್ ॥೨೩॥

ರಮ್ಭಾ ತಿಲೋತ್ತಮಾ ಚೈವ ಮೇನಕಾ ಚೋರ್ವಶೀ ತಥಾ ।
ಸುಕೇಶೀ ಚನ್ದ್ರವದನಾ ಚನ್ದ್ರಲೇಖಾ ಮದಾಲಸಾ ।
ಚನ್ದ್ರರೇಖಾ ಸುನಯನಾ ಸುಕೇಶೀ ಪುಞ್ಜಿಕಸ್ಥಲೀ ॥೨೪॥

ಏತಾಶ್ಚಾನ್ಯಾಶ್ಚ ಸುನ್ದರ್ಯೋ ಗನ್ಧರ್ವಾಶ್ಚಾಪಿ ಗಾಯಕಾಃ ।
ವಸನ್ತೋ ಮನ್ಮಥೋ ವಾಯುಃ ಮಾಲಯೋನ್ಯಾಶ್ಚ ದೇವತಾಃ ।
ಸಮ್ಭ್ರಾನ್ತಮನಸಃ ಸರ್ವೇ ಇನ್ದ್ರಂ ಸಮುಪತಸ್ಥಿರೇ ॥೨೫॥

ದೇವಾಊಚುಃ.

ಕಿಮಾಹ್ವಾನಸ್ಯ ಕಾರ್ಯಂ ನಃ ಕಿಂ ವಾ ಕಾರ್ಯಂ ವ್ಯವಸ್ಥಿತಮ್ ।
ಗುರು ವಾ ಲಘು ವಾ ದೇವ ತನ್ನಃ ಶಂಸಿತುಮರ್ಹಸಿ ॥೨೬॥

ಇನ್ದ್ರಉವಾಚ.

ವಿಜಯಾಖ್ಯಶ್ಚ ಚೋರೋ ವೈ ತಪಶ್ಚರತಿ ದಾರುಣಮ್ ।
ತಾನ್ತೋ ದಾನ್ತಸ್ತಿತಿಕ್ಷುಶ್ಚ ನಿರಾಹಾರೋ ಜಿತೇನ್ದ್ರಿಯಃ ॥೨೭॥

ಆ ಸಮಯದಲ್ಲಿ, ದೇವೇಂದ್ರನು, ರಂಭೆ ಮೊದಲಾದ ಅಪ್ಸರಸ್ತ್ರೀಸಮೂಹವನ್ನೂ, ಗಾನದಲ್ಲಿ ಕುಶಲರಾಗಿಯೂ ವೀಣಾವಾದನದಲ್ಲಿ ಪಂಡಿತರಾಗಿಯೂ ಇರುವ ಗಂಧರ್ವರುಗಳನ್ನೂ ಕರೆಯಿಸಿದನು ॥೨೭॥

ಅನಂತರ, ರಂಭೆ ತಿಲೋತ್ತಮೆ ಮೇನಕೆ ಊರ್ವಶಿ ಸುಕೇಶಿ ಚಂದ್ರವದನೆ ಚಂದ್ರಲೇಖೆ ಮದಾಲಸೆ ಸುಂದರನೇತ್ರಿಯಾದ ಚಂದ್ರರೇಖೆ ಮನೋಹರಕೇಶಿಯಾದ ಪುಂಜಿಕಸ್ಥಲಿ-ಇವರುಗಳೂ, ಇನ್ನೂ ಇತರರಾದ ಸುಂದರಿಯರೂ, ಗಾಯಕರಾದ ಗಂಧರ್ವರೂ ವಸಂತನೂ, ಮನ್ಮಥನೂ, ಮಲಯಮಾರುತನೂ, ಇನ್ನೂ ಇತರರಾದ ದೇವತೆಗಳೂ, ಇವರೆಲ್ಲರೂ ಸಂಭ್ರಾಂತಹೃದಯರಾಗಿ, ಅಕ್ಷಣವೇ ಇಂದ್ರನ ಸವಿಾಪಕ್ಕೆ ಬಂದು ನಿಂತರು ॥೨೪—೨೫॥

ಆಗ ಆ ದೇವತೆಗಳೆಲ್ಲರೂ ಮಹೇಂದ್ರನನ್ನು ಕುರಿತು ಹೀಗೆ ಹೇಳಿದರು:—

ಸ್ವಾಮಿ! ನಮ್ಮನ್ನು ಕರೆಯಿಸಿದುದು ವಿಷಕ್ಕೆ? ಈಗ ಯಾವ ಕಾರ್ಯವು ನಿನ್ನ ಹಿತವಾಗಿರುವುದು? ಅದು ದೊಡ್ಡದಾಗಿದ್ದರೂ—ಅಥವಾ ಚಿಕ್ಕದಾಗಿದ್ದರೂ—ಅದನ್ನು ಈಗ ನಮಗೆ ನೀನು ಅಪ್ಪಣೆಕೊಡಿಸದೇಕು ॥೨೦॥

ಮಹೇಂದ್ರನು ಉತ್ತರಕೊಡುವನು:—

ಎಲೈ ದೇವತೆಗಳಿರಾ! ವಿಜಯನೆಂಬ ಒಬ್ಬ ಚೋರನು ತನುದಮಪಂಪನ್ನನಾಗಿ—ಆಹಾರವನ್ನು ಬಿಟ್ಟು- ಇಂದ್ರಿಯಗಳನ್ನು ನಿಗ್ರಹಿಸಿ—ಅತಿಕ್ರೂರವಾಗಿ ತಪಸ್ಸು ಮಾಡುತ್ತಿರುವನು॥ ೨೧॥

ತಸ್ಯ ಘೋರೇಣ ತಪಸಾ ಭೀತಾಲೋಕಾಶ್ಚ ತುರ್ದಶ ।
ಸರ್ವಲೋಕಹಿತಾರ್ಥಾಯ ಯೂಯಂ ಗಚ್ಛತ ಮಾ ಚಿರಮ್ ॥೩೦॥
ಗತ್ವಾ ತತ್ತಪಸೋ ವಿಘ್ನಂ ಕುರ್ವನ್ತ್ವಪ್ಸರಸಾಂ ಗಣಾಃ ।
ಮದನೇನ ಸಹಾಯೇನ ವಸನ್ತೇನ ಮಹಾತ್ಮನಾ ॥೩೧॥
ಅನ್ಯೈರಪಿ ಸಹಾಯೈಶ್ಚ ಸಂಯುಕ್ತಾಃ ಸರ್ವಸಾಧನೈಃ ।
ಯೇನಕೇನಾಪ್ಯುಪಾಯೇನ ಲೋಭಯನ್ತು ತಪೋಧನಮ್ ॥೩೨॥
ಇತಿ ತಸ್ಯ ವಚಃ ಶ್ರುತ್ವಾ ಸರ್ವೇಪ್ಯಪ್ಸರಸಾಂ ಗಣಾಃ ।
ನಿರ್ಯಯುಃ ಕಕ್ಷಭವನಾತ್ ವರ್ಧಯಿತ್ವಾ ಶತಕ್ರತುಮ್ ॥೩೩॥
ಯಾನಾನಿ ಚ ವಿಮಾನಾನಿ ಸಮಾರುಹ್ಯ ಸಸಾಧನಾಃ ।
ದೇವಸ್ತ್ರಿಯೋ ದೇವತಾಶ್ಚ ವಿಜಯಾಶ್ರಮಮಾಗತಾಃ ॥೩೪॥
ದದೃಶುಸ್ತದ್ವನಂ ದಿವ್ಯಂ ಮುನೇಸ್ತಸ್ಯ ಮಹಾತ್ಮನಃ ।
ಸರ್ವರ್ತುಗಣಸಮ್ಪೂರ್ಣಂ ದೇವೋದ್ಯಾನಮಿವಾಪರಮ್ ॥೩೫॥
ಕ್ರೀಡಿತಾಃ ಸುಚಿರಂ ತತ್ರ ಸರ್ವಭೋಗಸಮನ್ವಿತೇ ।
ತತೋ ಯುವತ್ಯೋ ದೇವಾಶ್ಚ ಸರ್ವಾಲಙ್ಕಾರಸಂಯುತಾಃ ॥೩೬॥

ಅತಿ ಘೋರವಾವ ಅವನ ತಪಸ್ಸಿನಿಂದ, ಈಗ ಚತುರ್ದಶಲೋಕಗಳೂ ಭಯಪಡುತ್ತಿರುವುವು. ಅದುಕಾರಣ, ಸರ್ವಲೋಕಕ್ಕೂ ಹಿತವನ್ನುಂಟುಮಾಡುವುದಕ್ಕಾಗಿ, ನೀವು ಹೊರಡಿರಿ; ತಡಮಾಡಬೇಡಿರಿ॥೩೦॥

ಇಲ್ಲಿಂದ ಹೋಗಿ, ನಮ್ಮ ಅಪ್ಸರಸ್ತ್ರೀಯರೆಲ್ಲರೂ, ಮನ್ಮಥನನ್ನೂ ಮಹಾತ್ಮನಾದ ವಸಂತನನ್ನೂ ಸಹಾಯುಮಾಡಿಕೊಂಡು, ಅವನ ತಪಸ್ಸಿಗೆ ವಿಘ್ನವುಂಟಾಗುವಂತೆ ಮಾಡಬೇಕು ॥೩೧॥

ಇನ್ನೂ ಇತರವಾದ ಸಹಾಯಗಳಿಂದಲೂ ಸಕಲ ಸಾಧನಗಳಿಂದಲೂ ಸಂಪನ್ನರಾಗಿ, ಯಾವುದಾದರೊಂದು ಉಪಾಯದಿಂದ, ಆ ತಪಸ್ವಿಯನ್ನು ಪ್ರಲೋಭನಪಡಿಸಬೇಕು. (ಎಂದು ಮಹೇಂದ್ರನು ಹೇಳಿದನು) ॥೩೨॥

ಹೀಗೆ ಆಇಂದ್ರನು ಹೇಳಿದ ಮಾತನ್ನುಕೇಳಿ, ಸಮಸ್ತರಾದ ಅಪ್ಸರಸ್ತ್ರೀಯರೂ ಮಹೇಂದ್ರನಿಗೆ ಜಯವಾಗಲೆಂದು ಹರಸಿ, ಅಲ್ಲಿಂದ ಹೊರಟಿವರಾದರು ॥೩೩॥

ಆಗ ಆ ಅಪ್ಸರಸ್ತ್ರೀಯರೂ ಇತರ ದೇವತೆಗಳೂ ಕೂಡ, ರಥಾದಿಯಾನಗಳನ್ನೂ ವಾಹನಗಳನ್ನೂ ಹತ್ತಿಕೊಂಡು, ಸಾಮಗ್ರಿಗಳನ್ನೆಲ್ಲ ತೆಗೆದುಕೊಂಡವರಾಗಿ, ಆ ವಿಜಯನ ಆಶ್ರಮಕ್ಕೆ ಬಂದರು ॥೩೪॥

ಅಲ್ಲಿ ಸಮಸ್ತ ಋತುಸಮೂಹಸೇವಿತವಾಗಿ–ದ್ವಿತೀಯ ನಂದನವನವೋ ಎಂಬಂತೆ ವಿರಾಜಿಸುತ್ತಿರುವ–ಆ ಮಹಾತ್ಮನಾದ ಮುನಿಯ ದಿವ್ಯವಾದ ಆಶ್ರಮವನ್ನು, ಅತ್ಯಾಶ್ಚರ್ಯದಿಂದ ನೋಡಿದರು ॥೩೫॥

ಅನಂತರ, ಆ ಅಪ್ಸರಸ್ತ್ರೀಯರೂ ಇತರ ದೇವತೆಗಳೂ ಕೂಡ, ಸರ್ವಾಲಂಕಾರಭೂಷಿತರಾಗಿ, ಶೃಂಗಾರೋಚಿತವಾದ ವೇಷವನ್ನು ಸ್ವೀಕರಿಸಿ, ದಿವ್ಯವಾದ ಮಾಲೆಗಳಿಂದಲೂ ವಸ್ತ್ರಗ

ನವೈರ್ಬ್ರಾಹ್ಮರವೇಷಾಢ್ಯಾಃ ದಿವ್ಯಸ್ರಗ್ವಸ್ತ್ರಭೂಷಿತಾಃ ।
ದಿವ್ಯಚನ್ದನಲಿಪ್ತಾಙ್ಗಾಃ ದಿವ್ಯಭೋಗಸಮನ್ವಿತಾಃ ॥೩೯॥
ಅಹಂ ಪೂರ್ವಮಹಂ ಪೂರ್ವಂ ಇತಿ ದರ್ಪಸಮನ್ವಿತಾಃ ।
ಸ್ವಸ್ವಸಾಧನಮಾದಾಯ ತತ್ರ ಜಗ್ಮುರ್ವರಸ್ತ್ರಿಯಃ ॥೪೦॥
ಪ್ರವಿಶ್ಯ ತದ್ವನಂ ಶುದ್ಧಂ ರಾಘವೇಣಾಭಿರಕ್ಷಿತಮ್ ।
ದೃಷ್ಟ್ವಾ ವಿಸ್ಮಯಮಾಪೇದುಃ ಜಗೃಹ್ಯುಃ ದಿವ್ಯಫಲಾನಿ ಚ ॥೪೧॥
ರಸಾಯನಾನಿ ಮಧು ಚ ಪೀತ್ವಾಪೀತ್ವಾಽಮೃತೋಪಮಮ್ ।
ನಿರ್ಯಯುರ್ಮುನಿಲೋಭಾಯ ದರ್ಪಾಹಙ್ಕಾರಸಂಯುತಾಃ ॥೪೨॥
ಏತಸ್ಮಿನ್ನೇವ ಸಮಯೇ ರಾಘವೋ ಭಕ್ತವತ್ಸಲಃ ।
ನಿರ್ಮಾಯ ಮಹತೀಂ ಮಾಯಾಂ ಮೋಹಯಾಮಾಸ ತಾಃ ಸ್ತ್ರಿಯಃ ॥
ಸಸ್ಯೋತಗಾವಇವ ತೇ ತಸ್ಯ ಮಾಯಾವಶಂ ಗತಾಃ ।
ದೇವಾಬ್ರಹ್ಮೇನ್ದ್ರರುದ್ರಾದ್ಯಾಃ ಕಿಂ ಪುನಸ್ತ್ವಪರೇ ಜನಾಃ ॥೪೪॥
ತತಸ್ತದ್ವನಮತ್ಯನ್ತಂ ದದೃಶೇ ರಾಘವಾತ್ಮನಾ ।
ವೃಕ್ಷಂವೃಕ್ಷಂ ಪ್ರತಿವನಂ ದದೃಶೇ ರಘುನನ್ದನಃ ॥೪೫॥

ಳಿಂದಲೂ ಅಲಂಕೃತರಾಗಿ, ದಿವ್ಯವಾದ ಗಂಧವನ್ನು ಲೇಪಿಸಿಕೊಂಡು, ಸರ್ವಭೋಗಸಮನ್ವಿತವಾದ ಆ ಸ್ಥಳದಲ್ಲಿ ಬಹಳ ಹೊತ್ತು ವಿಹರಿಸಿದರು ॥೩೯—೪೯॥

ಆಮೇಲೆ, ಆ ಅಪ್ಸರಸ್ತ್ರೀಯರೂ, ತಂತಮ್ಮ ಸಾಧನಗಳನ್ನು ತೆಗೆದುಕೊಂಡು, ನಾನು ಮುಂದೆತಾನುಮುಂದೆನ್ನುತ್ತ, ಗರ್ವಯುಕ್ತರಾಗಿ ಆ ಆಶ್ರಮದೊಳಕ್ಕೆ ಪ್ರವೇಶಿಸಿದರು ॥೪೦॥

ಅಲ್ಲಿ ಪ್ರವೇಶಿಸಿ, ಶ್ರೀರಾಮನಿಂದ ಸಂರಕ್ಷಿಸಲ್ಪಟ್ಟಿರುವ ಪರಿಶುದ್ಧವಾದ ಆ ವನವನ್ನು ನೋಡಿ, ಅಲ್ಲಿದ್ದ ದಿವ್ಯವಾದ ಫಲಗಳನ್ನು ತಿಂದು, ಅತಿಯಾಗಿ ಆಶ್ಚರ್ಯಪಟ್ಟರು ॥೪೧॥

ಮತ್ತು, ಅಲ್ಲಿರತಕ್ಕ ರಸಾಯನಗಳನ್ನೂ - ಅಮೃತಸದೃಶವಾದ ಮಧುವನ್ನೂ ಪುನಃಪುನಃ ಪಾನಮಾಡಿ, ದರ್ಪದಿಂದಲೂ ಅಹಂಕಾರದಿಂದಲೂ ಯುಕ್ತರಾಗಿ, ಆ ಮುನಿಯನ್ನು ಪ್ರಲೋಭನಪಡಿಸುವುದಕ್ಕಾಗಿ ಹೊರಟರು ॥೪೨॥

ಇಷ್ಟರಲ್ಲಿಯೇ, ಭಕ್ತವತ್ಸಲನಾದ ಶ್ರೀರಾಮನು, ಒಂದು ಮಹಾಮಾಯೆಯನ್ನು ನಿರ್ಮಾಣಮಾಡಿ, ಆ ಸ್ತ್ರೀಯರನ್ನು ಮೋಹಪಡಿಸಿದನು ॥೪೩॥

ಆ ಪರಮಾತ್ಮನ ಮಾಯೆಗೆ, ಬ್ರಹ್ಮ ಇಂದ್ರ ರುದ್ರ ಮೊದಲಾದ ಸಮಸ್ತ ದೇವತೆಗಳೂ, ಮೂಗುದಾರಹಾಕಿದ ಎತ್ತುಗಳಂತೆ ವಶವಾಗಿರುವರು. ಹೀಗಿರುವಾಗ, ಇನ್ನು ಇತರರ ವಿಷಯವನ್ನು ಹೇಳತಕ್ಕುದೇನು ? ॥೪೪॥

ಆ ಬಳಿಕ, ಆ ಅರಣ್ಯವು ಅತ್ಯಂತವಾಗಿ ಶ್ರೀರಾಮಾತ್ಮಕವಾದುದಾಗಿ ಕಾಣಿಸಿತು. ಪ್ರತಿವನದಲ್ಲಿಯೂ, ಪ್ರತಿವೃಕ್ಷದಲ್ಲಿಯೂ, ಶ್ರೀರಾಮನು ಕಾಣಿಸುತಿದ್ದನು ॥೪೫॥

ಆಗ, ಮುಖದಲ್ಲಿ ಮಂದಹಾಸಯುತನಾಗಿಯೂ, ವಿಶಾಲಲೋಚನನಾಗಿಯೂ, ಮಿರುಗುತಿರುವ ಶರೀರಕಾಂತಿಯುಳ್ಳವನಾಗಿಯೂ, ಅತಿಸುಂದರನಾಗಿಯೂ, ಇಂದ್ರನೀಲರತ್ನಶ್ಯಾಮಲನಾ

ಸ್ಮಿತವಕ್ತ್ರಂ ವಿಶಾಲಾಕ್ಷಂ ಸ್ನಿಗ್ಧಗಾತ್ರಂ ಮನೋಹರಮ್ ।
ಇನ್ದ್ರನೀಲದಳಶ್ಯಾಮಂ ವನಮಾಲಾವಿಕೋಭಿತಮ್ ॥೪೬॥
ಧನುರ್ಬಾಣಧರಂ ವೀರಂ ಭಕ್ತಾನುಗ್ರಹತತ್ಪರಮ್ ।
ತ್ರೈಲೋಕ್ಯವೋಹನಾಕಾರಂ ಪುಂಸಾಮಪಿ ವಿಮೋಹಕಮ್ ॥೪೭॥
ದೃಷ್ಟ್ವಾ ರಾಮಂ ಮಹಾಬಾಹುಂ ಸಾಕ್ಷಾನ್ಮನ್ಮಥಮನ್ಮಥಮ್ ।
ಸರ್ವಾಃ ಪ್ರಜಲಿತಾನಾರ್ಯೋ ರಾಮಾಲಿಙ್ಗನಕಾಂಕ್ಷಯಾ ॥೪೮॥
ಏತದಾಲಿಙ್ಗನಂ ಪ್ರಾಪ್ಯ ಗಚ್ಛಾಮೋ ನಿರ್ವೃತಿಂ ಪರಾಮ್ ।
ಇತಿ ಕಾಮಾರ್ದಿತಾಃ ಸರ್ವಾಃ ಅನ್ವಧಾವನ್ ಗತತ್ರಪಾಃ ॥೪೯॥
ದ್ರುಮಾದ್ದ್ರುಮಂ ಪ್ರಧಾವನ್ತ್ಯಃ ಕುಞ್ಜಾತ್ ಕುಞ್ಜಂ ಚ ತಾಃಸ್ತ್ರಿಯಃ ।
ಪರಸ್ಪರಂ ಚ ಶ್ರೀರಾಮಭ್ರಾನ್ತ್ಯಾ ಸಮ್ಪರಿಷಸ್ವಜುಃ ॥೫೦॥
ಕ್ವಚಿಚ್ಚ ಪ್ರಕಟಶ್ಚನ್ದ್ರೋ ಬಹುರೂಪಃ ಕ್ವಚಿದ್ಬಭೌ ।
ಹಸ್ತಪ್ರಾಪ್ತವದೇಕತ್ರ ಕ್ವಚಿದ್ದೂರೇಪಿ ಚಾನ್ತಿಕೇ ॥೫೧॥
ಮುನಿಮಾನಸಸಞ್ಚಾರೋ ಹ್ಯಲಭ್ಯಃ ಸನಕಾದಿಭಿಃ ।
ರಾಮಃ ಕಥಂ ಸ ನಾರೀಣಾಂ ಲಭ್ಯೋ ಭವತಿ ಸುನ್ದರಿ ॥೫೨॥

ಗಿಯೂ, ವನಮಾಲೆ ಮುಂತಾದುವುಗಳಿಂದ ಶೋಭಿತನಾಗಿಯೂ, ಧನುರ್ಬಾಣಗಳನ್ನು ಧರಿಸಿರು ವನಾಗಿಯೂ, ಮಹಾವೀರನಾಗಿಯೂ, ಭಕ್ತಾನುಗ್ರಹತತ್ಪರನಾಗಿಯೂ, ತ್ರೈಲೋಕ್ಯಮೋ ಹಕವಾದ ರೂಪವುಳ್ಳವನಾಗಿಯೂ, ಪುರುಷರಿಗೂ ಮೋಹಜನಕನಾಗಿಯೂ, ಮಹಾಭುಜನಾ ಗಿಯೂ, ಮನ್ಮಥನಿಗೂ ಮನ್ಮಥನಾಗಿಯೂ ಇರುವ ಶ್ರೀರಾಮನನ್ನು ನೋಡಿ, ಆ ಸಮಸ್ತ ಸ್ತ್ರೀಯರೂ, ಅವನನ್ನು ಆಲಿಂಗಿಸಿಕೊಳ್ಳಬೇಕೆಂದು ಹೊರಟರು ॥೪೬—೪೯॥

ಹೀಗೆ ಕಾಮಪೀಡಿತರಾದ ಆ ಸ್ತ್ರೀಯರು, ಇವನ ಆಲಿಂಗನವನ್ನು ಹೊಂದಿ ಅಧಿಕವಾಗಿ ಸಂತೋಷವನ್ನನುಭವಿಸಬೇಕೆಂಬ ಇಚ್ಛೆಯಿಂದ, ಲಜ್ಜೆಯನ್ನು ಬಿಟ್ಟು ಓಡುತಿದ್ದರು ॥೪೯॥

ಆಗ ಆ ಸ್ತ್ರೀಯರು, ಮರದಿಂದ ಮರಕ್ಕೂ-ಲತಾಗೃಹದಿಂದ ಮತ್ತೊಂದು ಲತಾಗೃ ಹಕ್ಕೂ ಓಡಿಯಾಡುತ, ಶ್ರೀರಾಮನೆಂಬ ಭ್ರಾಂತಿಯಿಂದ ಒಬ್ಬರನ್ನೊಬ್ಬರು ಆಲಿಂಗಿಸಿಕೊ ಳ್ಳುತಿದ್ದರು ॥೫೦॥

ಆ ಸಮಯದಲ್ಲಿ ಶ್ರೀರಾಮನು, ಕೆಲವುಕಡೆ ಕಣ್ಣಿಗೆ ಕಾಣಿಸುತಲೂ, ಕೆಲವುಕಡೆ ಮರೆ ಯಾಗಿಯೂ, ಕೆಲವುಕಡೆ ಬಹುರೂಪವುಳ್ಳವನಾಗಿಯೂ, ಕೆಲವುಕಡೆ ಕೈಯಿಗೆ ಸಿಕ್ಕಿದವನಂ ತೆಯೂ, ಕೆಲವುಕಡೆ ದೂರವಾಗಿಯೂ, ಕೆಲವುಕಡೆ ಸವಿಾಪವರ್ತಿಯಾಗಿಯೂ ಭಾಸಿಸುತಿ ದ್ದನು ॥೫೧॥

ಎಲೌ ವಾರ್ತೆ! ಹಾಗವನು-ಕೇವಲ ಮುನಿಮಾನಸಸಂಚಾರಿಯಾಗಿ-ಸನಕಾದಿಗಳಿಗೂ ದುರ್ಲಭನಾಗಿರುವನೋ, ಅಂತಹ ರಾಮನು ಮೂಢರಾದ ಸ್ತ್ರೀಯರಿಗೆ ಹೇಗೆ ಲಭ್ಯನಾಗು ವನು ? ॥೫೨॥

ದೃಷ್ಟ್ವಾ ರಾಮಂ ಪರಾತ್ಮಾನಂ ವಿಶ್ವರೂಪಧರಂ ಪ್ರಭುಮ್ ।
ಪರಾರ್ಥಂ ಪ್ರೇಷಿತಾನಾಂ ಚ ಸ್ವಾರ್ಥಲಾಭೋ ಮಹಾನಭೂತ್ ॥೫೩॥
ದದೃಶುರ್ಯಾರವಾನಾಥಂ ವೇದಾನ್ತಜ್ಞಾನಗೋಚರಮ್ ।
ಅಲಂ ಜನ್ಮಾದಿ ನಾರೀಣಾಂ ಕರ್ಮಾನಧಿಕೃತಾನುಪಿ ॥೫೪॥
ತತೋ ರಾಮಂ ಬಹಿರ್ಯಾರ್ಯೋ ಹ್ಯಸಂಪ್ರಾಪ್ಯ ಹೃದಮ್ಬುಜೇ ।
ಧ್ಯಾತ್ವಾ ತಮೇವ ಸಂಶ್ಲಿಷ್ಯೈ ಕಾಮತೃಪ್ತಿಂ ಯಯುಃ ಪರಾಮ್ ॥೫೫॥
ರಾಮಪಿವ ಪರಂ ಬ್ರಹ್ಮ ರಾಮಾದನ್ಯನ್ನ ವಿದ್ಯತೇ ।
ರಾಮಪಿವ ಜಗತ್ ಸರ್ವಂ ರಾಮಪಿವಾಸ್ಯ ಶಿಕ್ಷಕಃ ॥೫೬॥
ಇತಿ ನಿಶ್ಚಿತ್ಯಾಪಿ ಸರ್ವಾಃ ನನೃತುರ್ವಿಜಯಾನ್ತಿಕೇ ।
ತತ್ರ ತೌರ್ಯತ್ರಿಕಂ ಚಕ್ರುಃ ಸುಧರ್ಮಾಯಾಂ ಯಥಾದ್ಭುತಮ್ ॥೫೭॥
ಕ್ರಮಾತ್ ಸರ್ವಾಸು ನಾರೀಷು ಕೃತನೃತ್ಯಾಸು ಸರ್ವತಃ ।
ಜನ್ತುಮಾತ್ರಸ್ಯ ತತ್ರಾಸೀತ್ ನಾಽಸಕ್ತಿರ್ವಿಜಯಂ ವಿನಾ ॥೫೮॥
ವೃಥಾಯಾಸಃ ಕೃತೋಸ್ಮಾಭಿಃ ಇತಿ ಸರ್ವಾವರಾಙ್ಗನಾಃ।
ತಸ್ಮಾದಪಸರನ್ತಿ ಸ್ಮ ಪ್ರೇಕ್ಷ್ಯಕಾಶ್ಚಿದ್ಭವರ್ಷಿ ಮುನಿಮ್ ॥೫೯॥

ಹೀಗೆ ವಿಶ್ವರೂಪಧರನಾಗಿರುವ ಆ ಪರಮಾತ್ಮನಾದ ಶ್ರೀರಾಮನನ್ನು ನೋಡಿದಕಾರಣ, ಆ ಅಪ್ಸರಸ್ತ್ರೀಯರು ಪರರ ಪ್ರಯೋಜನಕ್ಕಾಗಿ ಬಂದಿದ್ದವರಾದರೂ, ಅವರಿಗೆ ವಿಶೇಷವಾಗಿ ಸ್ವಪ್ರಯೋಜನಲಾಭವಾಯ್ತು ॥೫೩॥

ಯಾವ ಸ್ತ್ರೀಯರು, ಸಕಲವೇದಾಂತಶಾಸ್ತ್ರಗೋಚರನಾಗಿರುವ ಶ್ರೀರಮಾಪತಿಯನ್ನು ಸಾಕ್ಷಾತ್ತಾಗಿ ದರ್ಶನಮಾಡಿದರೋ, ಆ ಅಪ್ಸರಸ್ತ್ರೀಯರಿಗೆ-ಅವರು ಕರ್ಮದಲ್ಲಿ ಅಧಿಕಾರವಿಲ್ಲದ ವರಾಗಿದ್ದರೂ ಕೂಡ-ಜನನಮರಣಾದಿಗಳು ಅಗಲೇ ಮುಗಿದುಹೋದುವಲ್ಲವೆ? ॥೫೪॥

ಆ ಬಳಿಕ, ಆ ಸ್ತ್ರೀಯರು, ಶ್ರೀರಾಮನನ್ನು ಬಹಿರಂಗವಾಗಿ ಕಾಣದೆ, ಅಂತರಂಗದಲ್ಲಿ ಅವನನ್ನು ಧ್ಯಾನಿಸಿ, ಅವನನ್ನೇ ಆಲಿಂಗಿಸಿ, ತಮ್ಮ ಕಾಮತೃಪ್ತಿಯನ್ನು ಪಡೆದವರಾದರು ॥೫೫॥

'ರಾಮನೇ ಪರಬ್ರಹ್ಮನು; ರಾಮನನ್ನು ಬಿಟ್ಟರೆ ಮತ್ತಾವುದೂ ಇಲ್ಲವೇ ಇಲ್ಲ; ಸಮಸ್ತ ಜಗತ್ತೂ ಶ್ರೀರಾಮನೆಯೇ; ಶ್ರೀರಾಮನೇ ಈ ಸಮಸ್ತ ಜಗತ್ತಿಗೂ ನಿಯಂತೃವಾದವನು.' ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡವರಾದರೂ, ಆ ಅಪ್ಸರಸ್ತ್ರೀಯರು, ಅಲ್ಲಿ ತಪಸ್ಸುಮಾಡುತಿದ್ದ ವಿಜಯನೆಂಬ ವ್ಯಾಧನ ಎದುರಿಗೆ ನರ್ತನಮಾಡಲುಪಕ್ರಮಿಸಿದರು; ದೇವೇಂದ್ರನ ಸಭೆಯಲ್ಲಿ ಮಾಡುವಂತೆ,ಅಲ್ಲಿಯೂ ನೃತ್ತ ಗೀತ ವಾದ್ಯಗಳನ್ನು ಮಾಡಲುಪಕ್ರಮಿಸಿದರು॥೫೬-೫೭॥

ಆಗ, ಆ ಸಮಸ್ತ ಸ್ತ್ರೀಯರೂ ಕ್ರಮೇಣ ಸರ್ವತ್ರ ತಮ್ಮ ಚಾತುರ್ಯವನ್ನು ತೋರಿಸುತ್ತಿರಲಾಗಿ, ಅಲ್ಲಿ ಆ ವಿಜಯನೊಬ್ಬನನ್ನು ಬಿಟ್ಟು ಉಳಿದ ಪ್ರಾಣಿಸಾಮಾನ್ಯವೂ ಅವರಲ್ಲಿ ಆಸಕ್ತವಾಗಿಬಿಟ್ಟಿತು ॥೫೮॥

ಇಷ್ಟಾದರೂ ಆ ಚೋರನು ತಮ್ಮಲ್ಲಿ ಆಸಕ್ತನಾಗದಿರುವುದನ್ನು ನೋಡಿ, ಆ ಸಮಸ್ತ ದೇವಸ್ತ್ರೀಯರೂ, ನಾವು ವ್ಯರ್ಥವಾಗಿ ಆಯಾಸಪಟ್ಟೆವೆಂದು ತಿಳಿದುಕೊಂಡು, ಆ ಮುನಿಯನ್ನು ಬಿಟ್ಟು ದೂರವಾಗಿ ಹೋಗಿ ನಿಂತವರಾಗಿ, ಅವನನ್ನು ನೋಡುತಿದ್ದರು ॥೫೯॥

ನ ಯಸ್ಯ ಸ್ಮೃತಿತೋಽಪ್ಯರ್ಯೇಽದೇವತಾನ್ತರಭಕ್ತವತ್ ।
ಭಕ್ತಃ ಕಿಲ ಹತೋ ರಾಮೇ ವಿಘ್ನೈಃ ಕಿಂ ತಸ್ಯ ಸನ್ನಿಧೌ ॥೬೦॥
ತತಸ್ತೇಽಪ್ಸರಸಾಂ ಸಙ್ಘಾಃ ನಿರ್ಯಯುಃ ಶಾಪಭೀರವಃ ।
ಗತ್ವೇನ್ದ್ರಭವನಂ ಸರ್ವೇ ತಸ್ಮೈ ಸರ್ವಂ ನ್ಯವೇದಯನ್ ॥೬೧॥

ಇತಿ ಶ್ರೀಮದಯೋಧ್ಯಾಕಾಣ್ಡೇ ಜೋರತಪೋವಿಘ್ನ ಕಥನಂ
ನಾಮ ಸಪ್ತವಿಂಶಃ ಸರ್ಗಃ.



ಎಲೌ ಪಾರ್ವತಿ! ಇತರ ದೇವತೆಗಳ ಭಕ್ತರಂತಲ್ಲದೆ, ಯಾವ ಶ್ರೀರಾಮನ ಭಕ್ತರು ಅವನ ಸ್ಮೃತಿಮಾತ್ರದಿಂದಲೇ ನಿರುಪಾಧಿಕರಾಗಿರುವರೋ, ಅವನೇ ಸಾಕ್ಷಾತ್ತಾಗಿರುವಾಗ ಅವನ ಸನ್ನಿಧಿಯಲ್ಲಿ ಯಾವ ವಿಘ್ನದಿಂದತಾನೆ ಏನಾಗುವುದು? ॥೬೦॥

ಅನಂತರ, ಆ ಸಮಸ್ತರಾದ ಅಪ್ಸರಸ್ತ್ರೀಯರೂ, ಅವನು ಶಾಪಕೊಟ್ಟಾನೆಂದು ಹೆದರಿದವರಾಗಿ, ಅಲ್ಲಿಂದ ಹೊರಟುಹೋದರು; ಅಮೇಲೆ ಇಂದ್ರಲೋಕಕ್ಕೆ ಹೋಗಿ, ಅಲ್ಲಿನ ವಿಷಯಗಳನ್ನೆಲ್ಲ ಅವನಿಗೆ ವಿಜ್ಞಾಪಿಸಿದರು ॥೬೧॥

ಇದು ಅಯೋಧ್ಯಾಕಾಂಡದಲ್ಲಿ ಜೋರತಪೋವಿಘ್ನಕಥನವೆಂಬ
ಇಪ್ಪತ್ತೇಳನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಅಷ್ಟಾವಿಂಶಃ ಸರ್ಗಃ.

ಶ್ರೀ ಶಿವಉವಾಚ.

ಅಥ ತಾಸಾಂ ವಚಃ ಶ್ರುತ್ವಾ ಶಕ್ರಃ ಸಂತ್ರಸ್ತಮಾನಸಃ ।
ಬೃಹಸ್ಪತಿಂ ಸುರಾಚಾರ್ಯಂ ವಚನಂ ಚೇದಮುಬ್ರವೀತ್ ॥೧॥
ಕಥಂ ತತ್ರ ವಿಜೇಷ್ಯಾಮಃ ಕಥಂ ತತ್ರ ಪರಾಭವಃ ।
ಕಥಂ ಸುಖಂ ಭವೇದತ್ರ ದೇವಾನಾಂ ವದ ನೋ ಗುರೋ ॥೨॥

ಗುರುರುವಾಚ.

ನ ಭಯಂ ಭವಿತಾ ತಸ್ಮಾತ್ ದೇವತಾನಾಂ ನ ಚಾಶುಭಮ್ ।
ರಾಮಾಯಣಸ್ಯ ಕರ್ತಾಸೌ ವಾಲ್ಮೀಕಿರಿತಿ ವಿಶ್ರುತಃ ।
ಸ ಭವಿಷ್ಯತಿ ಬ್ರಹ್ಮರ್ಷಿಃ ವಲ್ಮೀಕೋತ್ಪನ್ನದೇಹವಾ ॥೩॥
ಬೃಹಸ್ಪತೇಸ್ತದ್ವಚನಾತ್ ಇನ್ದ್ರಃ ಸ್ವಸ್ಥೋ ಬಭೂವ ಸಃ ॥೪॥

ಅಯೋಧ್ಯಾಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗವು.

ಪುತ್ರೆ ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು:—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಅಪ್ಸರಸ್ತ್ರೀಯರು ಹೋಗಿ ಹೇಳಿದಬಳಿಕ, ಅವರು ಹೇಳಿದುದನ್ನೆಲ್ಲ ಕೇಳಿ ಮನಸ್ಸಿನಲ್ಲಿ ಭಯಪಟ್ಟ ದೇವೇಂದ್ರನು, ದೇವಗುರುವಾದ ಬೃಹಸ್ಪತಿಯನ್ನು ಕುರಿತು 'ಹೇಗುರೋ! ಇವನ ವಿಷಯದಲ್ಲಿ ನಾವು ಜಯಶಾಲಿಗಳಾಗುವುದು ಹೇಗೆ? ಅವನನ್ನು ನಾವು ಹಿಮ್ಮೆಟ್ಟುವುದು ಹೇಗೆ? ಈ ಸಂದರ್ಭದಲ್ಲಿ ಹಾನಾದರೆ ದೇವತೆಗಳಿಗೆ ಸುಖವುಂಟಾಗಬಹುದು? ಇದನ್ನು ನನಗೆ ಅಪ್ಪಣೆಕೊಡಿಸಬೇಕು' ಎಂದು ಹೇಳಿದನು ॥೧—೨॥

ಇದಕ್ಕೆ ಆ ಬೃಹಸ್ಪತಿಯು ಉತ್ತರಹೇಳುವನು:—

ಅಯ್ಯಾ! ಸುಹೇಂದ್ರನೆ! ಆ ತಪಸ್ವಿಯ ದೆಸೆಯಿಂದ ದೇವತೆಗಳಿಗೆ ಯಾವ ಭಯವೂ ಯಾವ ಕೆಡಕೂ ಉಂಟಾಗುವುದಿಲ್ಲ. ಅವನು, ವಲ್ಮೀಕ(ಹುತ್ತ)ದಿಂದ ಹುಟ್ಟಿದ ದೇಹವುಳ್ಳವನಾಗಿ, ವಾಲ್ಮೀಕಿಯೆಂದು ಪ್ರಸಿದ್ಧನಾದ ಬ್ರಹ್ಮರ್ಷಿಯಾಗಿ, ಶ್ರೀಮದ್ರಾಮಾಯಣವೆಂಬ ಸರ್ವೋತ್ತಮ ಗ್ರಂಥಕ್ಕೆ ಕರ್ತೃವಾಗುವನು.(ಎಂದು ಬೃಹಸ್ಪತಿ ಹೇಳಿದನು) ॥೩॥

ಎಲೌ ಪಾರ್ವತಿ! ಹೀಗೆ ಹೇಳಿದ ಬೃಹಸ್ಪತಿಯ ಮಾತನ್ನು ಕೇಳಿ, ಆಗ ಸುಹೇಂದ್ರನು ಶಾಂತಚಿತ್ತನಾದನು ನೆಳಿ॥

ಶ್ರೀ ಪಾರ್ವತ್ಯುವಾಚ.

ವಲ್ಮೀಕಾತ್ ಸ ಕಥಂ ಜಜ್ಞೇ ಸ್ವದೇಹೇನೈವ ಮಾನವಃ ।
ವೃತ್ತಾಂತಃ ಕಯಾ ವಾಜೀವತ್ ಸಃ ಕಥಂ ವಾಲ್ಮೀಕಿನಾಮಭಾಕ್ ॥೫॥

ಶ್ರೀ ಶಿವ ಉವಾಚ.

ವೃತ್ತಿಂ ಕಲ್ಪಿತವಾ ರಾಮೋ ವಲ್ಮೀಕಚ್ಛದ್ಮನಾ ವಿಭುಃ ॥೬॥
ತಸ್ಯ ದೇಹಸ್ಯ ರಕ್ಷಾರ್ಥಂ ಪ್ರಭವಾಯ ಮಹಾತ್ಮನಃ ।
ಪಿಪೀಲಿಕಾಮಕ್ಷಿಕಾದೇಃ ಸರ್ವಾದೀನಾಂ ನಿವಾರಕಮ್ ॥೭॥
ವಲ್ಮೀಕಮಧ್ಯಸಂಸ್ಥಸ್ಯ ನ ಭಯಂ ವಿದ್ಯತೇ ಕ್ವಚಿತ್ ।
ನಿರ್ವರ್ಷಂ ಚ ನಿವಾತಂ ಚ ವಲ್ಮೀಕಂ ಶುಭದರ್ಶನೇ ।
ತಸ್ಮಾದ್ವಲ್ಮೀಕಮಧ್ಯಸ್ಥಃ ಚಕಾರ ತಪಉತ್ತಮಮ್ ॥೮॥
ಏನಂ ಮನ್ವಂತರಾಣ್ಯಸ್ಯ ಬಹೂನ್ಯಪಿ ಯುಗಾನಿ ವೈ ।
ತಪಸ್ಯತೋ ವ್ಯತೀತಾನಿ ಪರಾತ್ಮಾಸಕ್ತಚೇತಸಃ ॥೯॥
ಪರಾವೃತ್ತಾಸ್ತತಸ್ತಸ್ಮಾತ್ ಮುನಯೋ ಹಿಮಶೈಲತಃ ।
ಭೂಲೋಕನಿಲಯಂ ದ್ರಷ್ಟುಂ ಪರಸ್ಪರಸಮನ್ವಿತಾಃ ॥೧೦॥
ಶಿಷ್ಯಾಃ ಷಷ್ಟಿಸಹಸ್ರಾಣಿ ಮುನಿಂಮುನಿಮುಪಾಶ್ರಿತಾಃ ।
ಗತ್ವಾ ತೇ ದೂರಮಧ್ವಾನಂ ದದೃಶುರ್ವನಮುತ್ತಮಮ್ ॥೧೧॥

ಶ್ರೀ ಪಾರ್ವತಿಯು ಪರಮೇಶ್ವರನನ್ನು ಕುರಿತು ಪ್ರಶ್ನೆಮಾಡುವಳು:—

ಸ್ವಾಮಿ! ಮನುಷ್ಯನಾಗಿದ್ದ ಅವನು ತನ್ನ ದೇಹದಿಂದಲೇ ವಲ್ಮೀಕದಲ್ಲಿ ಹೇಗೆ ಹುಟ್ಟಿದನು? ಅದುವರೆಗೆ ಅವನು ಯಾವ ಜೀವನದಿಂದ ಬದುಕಿದ್ದನು? ಅವನಿಗೆ ವಾಲ್ಮೀಕಿಯೆಂಬ ಹೆಸರು ಬರುವುದಕ್ಕೆ ಕಾರಣವೇನು? ॥೫॥

ಶ್ರೀ ಪರಮೇಶ್ವರನು ಉತ್ತರ ಹೇಳುವನು: —

ಎಲೌ ಪಾರ್ವತಿ! ಸರ್ವಲೋಕಪ್ರಭುವಾದ ಶ್ರೀರಾಮನೇ, ಅವನ ದೇಹರಕ್ಷಣೆಗಾಗಿಯೂ, ಅವನು ಮಹಾತ್ಮನಾಗಿ ಹುಟ್ಟುವುದಕ್ಕಾಗಿಯೂ, ಇರುವೆ ನೊಣ ಹಾವು ಮುಂತಾದುವುಗಳು ಬಂದು ಮುಟ್ಟದಿರುವುದಕ್ಕಾಗಿಯೂ ಕೂಡ, ವಲ್ಮೀಕವ್ಯಾಜದಿಂದ ವೃತ್ತಿಯನ್ನು ಕಲ್ಪಿಸಿದ್ದನು॥

ವಲ್ಮೀಕದ ಮಧ್ಯದಲ್ಲಿರತಕ್ಕವನಿಗೆ ಯಾವಾಗಲೂ ಭಯವಿಲ್ಲವಲ್ಲವೆ! ಎಲೌ ಶುಭದರ್ಶನೆಯೆ! ವಲ್ಮೀಕದಲ್ಲಿ ಮಳೆಯು ಭಯವೂ ಗಾಳಿಯ ಭಯವೂ ಇಲ್ಲವಷ್ಟೆ! ಹೀಗಿದ್ದುದರಿಂದ, ಅವನು ವಲ್ಮೀಕಮಧ್ಯಸ್ಥಿತನಾಗಿ ಉತ್ತಮವಾದ ತಪಸ್ಸನ್ನು ಮಾಡಿದನು॥೮॥

ಹೀಗೆ ಪರಮಾತ್ಮನಿಷ್ಠಹೃದಯನಾಗಿ ತಪಸ್ಸುಮಾಡುತಿರುವ ಆ ವ್ಯಾಧನಿಗೆ, ಅನೇಕ ಯುಗಗಳೂ ಅನೇಕ ಮನ್ವಂತರಗಳೂ ಕಳೆದುಹೋದುವು ॥೯॥

ಅನಂತರ, ಒಂದು ಸಮಯದಲ್ಲಿ, ಪೂರ್ವೋಕ್ತರಾದ ಸಪ್ತರ್ಷಿಗಳು, ಭೂಲೋಕವನ್ನು ನೋಡುವುದಕ್ಕಾಗಿ ಗುಂಪುಗೂಡಿ ಆ ಹಿಮವತ್ಪರ್ವತದಿಂದ ಹಿಂದಿರುಗಿ ಬಂದರು ॥೧೦॥

ಆ ಪ್ರತಿಯೊಬ್ಬ ಮುನಿಯನ್ನೂ ಅರವತ್ತುಸಾವಿರ ಮಂದಿ ಶಿಷ್ಯರು ಅನುಸರಿಸಿಕೊಂಡು ಬರುತಿದ್ದರು. ಅವರೆಲ್ಲರೂ ಬಹಳದೂರ ನಡೆದುಬಂದು ಆ ಉತ್ತಮವಾದ ವನವನ್ನು ಕಂಡರು॥

ಉದ್ಯಾನಮಿವ ದೇವಾನಾಂ ಫಲೈರ್ನನ್ದನಸನ್ನಿಭಮ್ ।
ಮನಸ್ಕಾನ್ತಿಕರಂ ನಿತ್ಯಂ ತ್ಯಕ್ತೇರ್ಷ್ಯಂ ತ್ಯಕ್ತಮತ್ಸರಮ್ ॥೧೬॥
ತಸ್ಯೈವ ತಪಸಾ ಭೀತೈಃ ಪಞ್ಚಭೂತೈರ್ವಿನಿರ್ಮಿತಮ್ ।
ದೇವಾನಾಂ ಚ ವಿಹಾರಾರ್ಥಂ ಸರ್ವಪ್ರಾಣಿಮನೋಹರಮ್ ॥೧೭॥
ತಾದೃಶಂ ವನಮಾಸಾದ್ಯ ಸರ್ವೇ ತೇ ಮುನಿಪುಙ್ಗವಾಃ ।
ಸದ್ಯೋತ್ಯಜಂಸ್ತೇ ಸನ್ತಾಪಂ ಮಾರ್ಗಸಞ್ಜಾತಸಮ್ಭವಮ್ ॥೧೮॥
ತತಃ ಸರ್ವೇ ಯಥಾನ್ಯಾಯ್ಯಂ ಯಥಾಮತಿ ಯಥಾಸುಖಮ್ ।
ಗೃಹೀತಭೂತೇಷು ವೃಕ್ಷೇಷು ನಿವಾಸಂ ಚಕ್ರುರುತ್ತಮಮ್ ॥೧೯॥
ತತಃ ಸ್ವಭಕ್ತಾಶ್ರಮಸ್ಥಾ ಅತಿಥೀ ವೀಕ್ಷ್ಯ ರಾಘವಃ ।
ತೇಷಾಮಾತಿಥ್ಯಸಮ್ಭಾರಾನ್ ಸ್ವಯಮೇವ ವಿನಿರ್ಮಮೇ ॥೨೦॥
ಗೃಹಂಗೃಹಂ ಫಲಂ ಮೂಲಂ ಮಧುನೀವಾರತಣ್ಡುಲಾನ್ ।
ಘೃತಂ ದಧಿ ಚ ಶಾಕಾನಿ ಸೂಪಂ ವಿವಿಧಮವ್ರಣಮ್ ॥೨೧॥
ತೈಲಂ ದೇಹಾನುಲೇಪಂ ಚ ಹಿಙ್ಗುಜೀರಸಮನ್ವಿತಮ್ ।
ವಿವಿಧಾನ್ಯಪಿ ಪಾತ್ರಾಣಿ ಪಾಕನಿರ್ವಾಣಕಾರಣಾತ್ ॥೨೨॥
ವಿಸ್ತೀರ್ಣಕದಳೀಪರ್ಣಾನ್ಯೇಲಾಂ ಮರಿಚಕಂ ತಥಾ ।
ತಣ್ಡುಲಾದಿಪದಾರ್ಥಾಂಶ್ಚ ಮನಸೈವ ವಿನಿರ್ಮಿತಾನ್ ॥೨೩॥

ಅಲ್ಲಿರುವ ಹಣ್ಣುಗಳನ್ನು ನೋಡಿದರೆ, ದೇವತೆಗಳ ನಂದನವನವೋ ಎನ್ನುವಹಾಗಿದ್ದಿತು; ಅಲ್ಲಿ ಸರ್ವರಿಗೂ ಸರ್ವದಾ ಮನಸ್ಸು ಶಾಂತವಾಗಿರುತಿದ್ದಿತು; ಈರ್ಷ್ಯೆಯೂ ಮತ್ಸರವೂ ಅಲ್ಲಿ ಸುತರಾಂ ಇರಲಿಲ್ಲ; ಅವನ ತಪಸ್ಸಿನಿಂದಲೇ ಭಯಪಟ್ಟ ಪಂಚಮಹಾಭೂತಗಳು, ಆ ವನವನ್ನು ಅರೀತಿಯಾಗಿ ನಿರ್ಮಿಸಿದ್ದುವು; ಅದು, ದೇವತೆಗಳಿಗೂ ವಿಹಾರಸ್ಥಾನವಾಗಿ ಸರ್ವಪ್ರಾಣಿಮನೋಹರವಾಗಿದ್ದಿತು. ಇಂತಹ ಆ ಅರಣ್ಯವನ್ನು ಹೊಂದಿ, ಆ ಸಮಸ್ತಮಹರ್ಷಿಗಳೂ, ಮಾರ್ಗಸಂಚಾರದಿಂದ ಉಂಟಾಗಿದ್ದ ಆಯಾಸವನ್ನೆಲ್ಲ ಅಕ್ಷಣವೇ ಕಳೆದುಕೊಂಡರು ॥೧೪-೧೫॥

ಅನಂತರ, ಅವರೆಲ್ಲರೂ, ವೃಕ್ಷತಲಗಳನ್ನೇ ಮನೆಯನ್ನಾಗಿ ಮಾಡಿಕೊಂಡು, ತಂತಮ್ಮ ಯೋಗ್ಯತೆಗೂ ಬುದ್ಧಿವಿಧವಕ್ಕೂ ತಕ್ಕಂತೆ, ಸುಖವಾಗಿ ನಿವಾಸಮಾಡಿಕೊಂಡಿದ್ದರು ॥೧೭॥

ಅನಂತರ, ಶ್ರೀರಾಮನು, ತನ್ನ ಭಕ್ತನ ಆಶ್ರಮದಲ್ಲಿ ಅತಿಥಿಗಳು ಬಂದು ಇಳಿದುಕೊಂಡುದುದನ್ನು ಕಂಡು, ತಾನೇ ಅವರಿಗೆ ಆತಿಥ್ಯಕ್ಕೆ ಬೇಕಾದ ವಸ್ತುಗಳನ್ನು ನಿರ್ಮಿಸಿದನು ॥೧೮॥

ಪ್ರತಿಯೊಂದು ಮುನಿಗೃಹದಲ್ಲಿಯೂ, ಫಲ ಮೂಲ ಮಧು ನೀವಾರ(ಹುಲ್ಲಿನಲ್ಲಿ ಬೆಳೆಯುವ ಧಾನ್ಯ)ಅಕ್ಕಿ ತುಪ್ಪ ಮೊಸರು ಕಾಯಿಪಲ್ಯ ನಾನಾವಿಧವಾಗಿರುವ ಪ್ರಶಸ್ತವಾದ ಸೂಪಕೈಲ ಅನುಲೇಪನ(ಗಂಧ ಮುಂತಾದುದು)ಹಿಂಗು ಜೀರಿಗೆ ಅಡಿಗೆಮಾಡಿಕೊಳ್ಳುವುದಕ್ಕೆ ನಾನಾವಿಧವಾದ ಪಾತ್ರೆ ದೊಡ್ಡದಾಗಿರುವ ಬಾಳೆಲೆ ಏಲಕ್ಕಿ ಮೆಣಸು ಅಕ್ಕಿ–ಇತ್ಯಾದಿ ಪದಾರ್ಥಗಳೂ ಪಾಕಾರ್ಥವಾದ ಸಕಲ ಸಾಮಗ್ರಿಗಳೂ ಅಲ್ಲಿ ಮನಸ್ಸಿನಿಂದಲೇ ನಿರ್ಮಿಸಲ್ಪಟ್ಟಿರುವುದನ್ನು ಕಂಡು,

ದೃಷ್ಟ್ವಾ ತೇ ಮುನಯಃ ಸರ್ವೇ ಸಾಮುಗ್ರೀಕ ಪಾಕನಿರ್ಮಿತಾಮ್ ।
ವಿಸ್ಮಯಂ ಪರಮಂ ಜಗ್ಮುಃ ಅವಿಜ್ಞಾತಪ್ರಸಾಧನಮ್ ॥೬೦॥
ಜಪ್ತ್ವಾ ಜಪ್ಯಂ ದೇವಪೂಜಾಂ ಪಾಕಂ ನಿರ್ವರ್ತ್ಯ ಸತ್ಕ್ರಿಯಾಮ್ ।
ಕೃತ್ವಾ ಬಲ್ಲಿ ಮಹಾಯಜ್ಞೈ ಭೋಜನಂ ತೇ ಪ್ರಚಕ್ರಿರೇ ॥೬೧॥
ಕೃತ್ವಾ ಸಾಯಂತನೇ ಕರ್ಮ ವಿರಜಸ್ಕಮಹೌಜಸಃ ।
ತತೋಽಥ ದೇವಂ ಸುಸಂಸ್ಮೃತ್ಯ ನಿದ್ರಾಂ ಜಗ್ಮುರ್ಮುನೀಶ್ವರಾಃ ॥೬೨॥
ನಿದ್ರಾವಶಾಸ್ತು ತೇ ಸರ್ವೇ ದದೃಶುರ್ಮುನಿಪುಙ್ಗವಾಃ ।
ತಪಸ್ಯಸ್ತಂ ಚಿತಕ್ರೋಧಂ ಧರ್ಮಾತ್ಮಾನಂ ದಯಾಯುತಮ್ ॥೬೩॥
ತಪಸ್ಸಿದ್ಧಿಪ್ರಭಾವೇನ ಮೂರ್ತಿಮಂತಮಿವಾನಲಮ್ ।
ಮನಸಾ ಕರ್ಮಣಾ ವಾಚಾ ರಾಮತಾದಾತ್ಮ್ಯಮಾಗತಮ್ ॥೬೪॥
ತ್ಯಕ್ತೇರ್ಷ್ಯಂ ತ್ಯಕ್ತಕಲುಷಂ ರಾಮರಾಮೇತಿವಾದಿನಮ್ ।
ಅಸಿ ಚರ್ಮಾವಶೇಷೇಣ ದ್ವಿತೀಯಾಶಚನ್ದ್ರಸನ್ನಿಭಮ್ ।
ವಿಶುದ್ಧಪುಟಪಾಕೇನ ಹಿರಣ್ಯಮಿವ ನಿರ್ಮಲಮ್ ॥೬೫॥
ಸಾನ್ತೇ ರಘುವರಂ ವೀರಂ ಸೀತಯಾ ಸಹಿತಂ ಪ್ರಭುಮ್ ।
ಪೀತಾಮ್ಬರಧರಂ ದೇವಂ ಸಿಂಹಾಸನಗತಂ ವಿಭುಮ್ ॥೬೬॥

ಅದನ್ನು ಸಿದ್ಧಪಡಿಸಶಕ್ಯವರು ಇಂಥವರೆಂದು ತಿಳಿಯದೆ, ಆತಿಯಾಗಿ ವಿಚ್ಛರ್ಯಪಟ್ಟರು ॥೧೭-೨೦॥

ಅನಂತರ, ಅವರು ಜಪವನ್ನು ಮಾಡಿ, ದೇವಪೂಜೆಯನ್ನೂ ಪಾಕವನ್ನೂ ಅತಿಥಿಸತ್ಕಾರವನ್ನೂ ನೆರವೇರಿಸಿ, ಪಂಚಮಹಾಯಜ್ಞಗಳನ್ನೂ ಮಾಡಿ, ತಾವು ಭೋಜನಮಾಡಿದರು ॥೨೧॥

ಆ ಬಳಿಕ, ನಿತ್ಯಾಪರಾಗಿಯೂ ಮಹಾತೇಜಸ್ವಿಗಳಾಗಿಯೂ ಇರುವ ಆ ಮುನೀಶ್ವರರು, ಸಾಯಂಕಾಲಿಕವಾದ ಕರ್ಮವನ್ನೆಲ್ಲ ಮುಗಿಯಿಸಿ, ಶ್ರೀಪರಮಾತ್ಮನನ್ನು ಧ್ಯಾನಿಸಿ, ನಿದ್ರಾಪರವಶರಾದರು ॥೨೨॥

ಹೀಗೆ ನಿದ್ರಾಪರವಶರಾಗಿರುವ ಮುನಿಶ್ರೇಷ್ಠರೆಲ್ಲರೂ, ತಮ್ಮ ಸ್ವಪ್ನದಲ್ಲಿ ಆ ವ್ಯಾಧನನ್ನು ಕಂಡರು. ಆಗ ಅವನು, ತಪಸ್ಸುಮಾಡುತ- ಚಿತಕ್ರೋಧನಾಗಿ- ಮಹಾಧರ್ಮಾತ್ಮನಾಗಿ-ದಯಾಯುಕ್ತನಾಗಿ-ಇವರ ಕಣ್ಣಿಗೆ ಕಾಣಿಸಿದನು ॥೨೩॥

ತನ್ನ ತಪಸ್ಸಿದ್ಧಿಯ ಮಹಿಮೆಯಿಂದ, ಸಾಕ್ಷಾತ್ ಅಗ್ನಿಯಂತೆ ಪ್ರಜ್ವಲಿಸುತಿದ್ದನು- ಕಾಯುವಳಕ್ಕೆ ಮನಸ್ಸುಗಳೆಂಬ ತ್ರಿಕರಣಗಳಲ್ಲಿಯೂ ರಾಮತಾದಾತ್ಮ್ಯವನ್ನು ಹೊಂದಿದ್ದನು ॥೨೪॥

ಈರ್ಷ್ಯೆಯನ್ನೂ ಪಾಪವನ್ನೂ ತೊರೆದಿದ್ದನು. ಸರ್ವದಾ ರಾಮರಾಮ ಎಂದು ಹೇಳುತಿದ್ದನು. ಅವನ ಚರ್ಮಗಳು ಮಾತ್ರವೇ ಉಳಿದಿರುವಕಾರಣ, ವಿಳಕ್ಷಣಾಪಶಾಶ್ರೀಷನಾದ ದ್ವಿತೀಯಾಚಂದ್ರನಂತೆ ವಿರಾಜಿಸುತಿದ್ದನು. ಚೆನ್ನಾಗಿ ಪುಟಪಾಕಕ್ಕೆ ಹಾಕಲ್ಪಟ್ಟು ಪರಿಶುದ್ಧವಾಗಿರುವ ಸುವರ್ಣದಂತೆ ನಿರ್ಮಲನಾಗಿ ಪ್ರಕಾಶಿಸುತಿದ್ದನು ॥೨೫॥

ತಕ್ಷಣ ಹೃದಯದಲ್ಲಿ, ಸೀತಾಸಮೇತನಾಗಿಯೂ, ಪೀತಾಂಬರಧರನಾಗಿಯೂ, ಸಿಂಹಾಸನಾಸೀನನಾಗಿಯೂ, ಹನೂಮಂತನಿಂದ ಸೇವಿಸಲ್ಪಡುತಿರುವ ಪಾದಪದ್ಮಯುಗ್ಮವುಳ್ಳವನಾಗಿಯೂ,

ಹನೂಮತಾ ಸೇವ್ಯಮಾನಪಾದಪಾಥೋರುಹದ್ವಯಮ್ ।
ಕಪಿದಾನವರಾಜಾದಿವೇತ್ರಪಾಣಿಭಿರಜ್ಞ್ ತನಮ್ ॥೨೩॥
ಸೇವಿತಂ ಭರತೇನಾಪಿ ನುಕ್ತಿ ಕಚ್ಛತ್ರಪಾಣಿನಾ ।
ಯವೀಯಸಾ ಲಕ್ಷ್ಮಣೇನ ಧನುಷಾ ವ್ಯಜನೇನ ಚ ॥೨೪॥
ನೀಲೇನ್ದೀವರಸಬ್ಕಾಶಂ ದೂರ್ವಾದಳಸಮಪ್ರಭನಮ್ ।
ಮುಗ್ಧಸ್ಮಿತಮುದಾರಾಙ್ಗಂ ವಿಶಾಲಾಕ್ಷಂ ಮಹಾಭುಜಮ್ ॥೨೫॥
ಹಾರಕೇಯೂರಮುಕುಟವಿಚಿತ್ರಮಣಿಭೂಷಣಮ್ ।
ವೀರಶ್ರಿಯಾ ಬಸ್ಫುರಾಙ್ಗಂ ವೀರಮೂರ್ತಿಂ ರಣೋತ್ಕಟಮ್ ॥೨೬॥
ವೀರಾಸನಸ್ಥಂ ರಾಜೇನ್ದ್ರಂ ಮನ್ದಾರಕುಸುಮಾರ್ಚಿತಮ್ ।
ಯಕ್ಷಕರ್ದಮಲಿಪ್ತಾಙ್ಗಂ ನೀಲಾಳಕವೃತಾನನಮ್ ॥೨೭॥
ಸನಕಾದಿಮುನಿಸ್ತುತ್ಯಂ ಸರ್ವಲಕ್ಷಣಲಕ್ಷಿತಮ್ ।
ಧ್ಯಾಯನ್ತಮೇವಮನಿಶಂ ಭಕ್ತಾನುಗ್ರಹತತ್ಪರಮ್ ॥೨೮॥
ತಂ ದೃಷ್ಟ್ವಾ ಯಮಿನಾಂ ಶ್ರೇಷ್ಠಂ ಅಪೂರ್ವಂ ರಾಘವಾನ್ತಿಕೇ ।
ದದೃಶುರ್ವಿಸ್ಮಿತಾಕಾರಂ ರಾಮಂ ಚ ವರದಾಯಿನಮ್ ।
ಅಮನ್ದಾನನ್ದಸನ್ದೋಹಾಃ ಮುನಯಃ ಸ್ವಚ್ಛಮಾನಸಾಃ ॥೨೯॥

ವೇತ್ರಪಾಣಿಗಳಾದ ಸುಗ್ರೀವ ವಿಭೀಷಣ ಮುಂತಾದವರಿಂದಲೂ-ಮುಕ್ತಾಮಯವಾದ ಛತ್ರವನ್ನು ಹಿಡಿದುಕೊಂಡಿರುವ ಭರತನಿಂದಲೂ-ಒಂದು ಕೈಯಲ್ಲಿ ಧನುಸ್ಸನ್ನು ಹಿಡಿದುಕೊಂಡು ಮತ್ತೊಂದು ಕೈಯಿಂದ ಬೀಸಣಿಕೆಯನ್ನು ಬೀಸುತಿರುವ ಲಕ್ಷ್ಮಣನಿಂದಲೂ ಸೇವಿಸಲ್ಪಡುತಿರುವನಾಗಿಯೂ, ನೀಲೋತ್ಪಲಕ್ಕೂ ದೂರ್ವಾದಳಕ್ಕೂ ಸದೃಶವಾದ ದೇಹವುಳ್ಳವನಾಗಿಯೂ, ಮಧುರವಾದ ಮಂದಹಾಸವುಳ್ಳವನಾಗಿಯೂ, ಅತಿಪ್ರಶಸ್ತವಾದ ಅವಯವಸನ್ನಿವೇಶವುಳ್ಳವನಾಗಿಯೂ, ವಿಶಾಲನೇತ್ರನಾಗಿಯೂ, ದೀರ್ಘಭುಜನಾಗಿಯೂ, ಹಾರ ಅಂಗದ ಮಕುಟ ಮುಂತಾದ ವಿಚಿತ್ರರತ್ನಾಭರಣಗಳನ್ನು ಧರಿಸಿದವನಾಗಿಯೂ, ವೀರಲಕ್ಷ್ಮೀಸಮೇತನಾಗಿಯೂ ವೀರರಸವಿಗ್ರಹನಾಗಿಯೂ, ರಣಧೀರನಾಗಿಯೂ, ವೀರಾಸನಸ್ಥಿತನಾಗಿಯೂ, ಸಕಲ ರಾಜ ಶ್ರೇಷ್ಠನಾಗಿಯೂ, ಮನ್ದಾರಕುಸುಮಾರ್ಚಿತನಾಗಿಯೂ, ದಿವ್ಯಗನ್ಧಲಿಪ್ತನಾಗಿಯೂ, ನೀಲವಾದ ಮುಂಗುರುಳುಗಳಿಂದ ಅಚ್ಛಾದಿತವಾದ ಮುಖವುಳ್ಳವನಾಗಿಯೂ, ಸನಕಾದಿಮುನಿಗಳಿಂದ ಸ್ತುತಿಸಲ್ಪಡುತಿರುವನಾಗಿಯೂ, ಸರ್ವಲಕ್ಷಣಸಂಪೂರ್ಣನಾಗಿಯೂ, ಭಕ್ತಾನುಗ್ರಹತತ್ಪರನಾಗಿಯೂ ಇರುವ ಶ್ರೀರಾಮಚನ್ದ್ರನನ್ನು ಸರ್ವದಾ ಧ್ಯಾನಿಸುತಿದ್ದರು ॥೨೩—೨೯॥

ಈರೀತಿಯಲ್ಲಿರುವ ಅಪೂರ್ವನಾದ ಮುನಿಶ್ರೇಷ್ಠನನ್ನು ಶ್ರೀರಾಮನ ಸನ್ನಿಧಿಯಲ್ಲಿ ಕಂಡು, ಅವನ ಹತ್ತಿರವೇ ವರವನ್ನು ಕೊಡುವುದಕ್ಕೆ ಸಿದ್ಧನಾಗಿರುವ ಅದ್ಭುತಾಕಾರನಾದ ಶ್ರೀರಾಮನನ್ನೂ ನೋಡಿದರು; ಹೀಗೆ ಇವರಿಬ್ಬರನ್ನೂ ಸ್ವಪ್ನದಲ್ಲಿ ನೋಡಿದ ಮಹಾನಿರ್ಮಲ ಹೃದಯರಾದ ಆ ಮುನೀಶ್ವರರು, ಆಗ ಅತ್ಯಧಿಕವಾದ ಆನಂದದಿಂದ ಪರಿಪೂರ್ಣರಾದರು ॥೩೦॥

ರಾಮೂನನ್ದಾತ್ಮನಾ ತತ್ರ ಸ್ಥಿತಾನಾಂ ಭಾವಿತಾತ್ಮನಾಮ್ ।
ಸಾ ರಾತ್ರಿಃ ಕ್ಷಣಭೂತೇವ ಬಭೂವ ಗಿರಿಸನ್ದಿನಿ ॥೫೪॥
ತತಃ ಪ್ರಭಾತೇ ವಿಮಲೇ ಸ್ನಾತ್ವಾ ಹುತಹುತಾಶನಾಃ ।
ರಾಮೂನನ್ದಂ ಸ್ವಪ್ನದೃಷ್ಟಂ ಸ್ಮರನ್ತೋ ವಿವಿಶುಃ ಸಭಾಮ್ ॥೫೫॥
ಸಭಾಯಾಂ ಸನ್ನಿವಿಷ್ಟಾಯಾಂ ನಾರದೋ ದಿವ್ಯದರ್ಶನಃ ।
ತತ್ರಾಗಚ್ಛನ್ಮಹಾತೇಜಾಃ ಮುನೀನಾಂ ಭಾವಿತಾತ್ಮನಾಮ್ ॥೫೬॥
ತಂ ದೃಷ್ಟ್ವಾ ಮುನಯಃ ಸರ್ವೇ ಪ್ರತ್ಯುತ್ಥಾಯಾಭಿವಾದ್ಯ ಚ ।
ವಿನಯಾವನತಾಭೂತ್ವಾ ಪಪ್ರಚ್ಛುರಿದಮಾದರಾತ್ ॥೫೭॥
ಕಸ್ಯೇದಮಾಶ್ರಮಪದಂ ಕಃ ಶ್ರೇಷ್ಠೋತ್ರ ಮಹಾಮುನಿಃ ।
ತಪಃ ಕಸ್ಯೇದಮತುಲಂ ಯೇನೇದಂ ನಿರ್ಮಿತಂ ವನಮ್ ॥೫೮॥
ಕಿಞ್ಚಿನ್ನಿದ್ರಾವಶೇಷೇ ತು ದೃಷ್ಟಂ ನೋ ಮಹದದ್ಭುತಮ್ ।
ರಾಮೂರಾಮೇತಿ ಮಧುರಂ ಕ್ರುಶಂ ತತ್ತಾರಕಂ ಪದಮ್ ॥೫೯॥
ಮುನಿಶ್ಚ ಜ್ವಲಿತೋ ದೃಷ್ಟಃ ಸಾಕ್ಷಾದ್ವಹ್ನಿಸಮಪ್ರಭಃ ।
ರಾಮನಾಮಜಪಂ ಕುರ್ವನ್ ದ್ವಿತೀಯೋಇವ ರಾಘವಃ ॥೬೦॥

ಎಲೌ ಪಾರ್ವತಿ! ಹೀಗೆ ರಾಮೂನಂದರೂಪವಾಗಿ ಭಾವನೆಮಾಡುತ ಅಲ್ಲಿದ್ದ ಆ ಮುನೀಶ್ವರರಿಗೆ, ಆ ರಾತ್ರಿಯು ಒಂದುಕ್ಷಣದಂತೆ ಕಳೆದುಹೋಯ್ತು ॥೫೪॥

ಆ ಬಳಿಕ, ಬೆಳಕುಹರಿಯಲಾಗಿ, ಅವರೆಲ್ಲರೂ ಸ್ನಾನಸಂಧ್ಯಾಗ್ನಿಹೋತ್ರಾದಿಗಳನ್ನು ಮುಗಿಯಿಸಿಕೊಂಡು, ರಾತ್ರಿ ಸ್ವಪ್ನದಲ್ಲಿ ಕಂಡ ರಾಮೂನಂದವನ್ನು ಸ್ಮರಿಸಿಕೊಳ್ಳುತ, ಒಟ್ಟಾಗಿ ಸಭೆಸೇರಿದರು ॥೫೫॥

ಜ್ಞಾನನಿಷ್ಠರಾದ ಆ ಮುನಿಗಳೆಲ್ಲರೂ ಸಭೆಸೇರಿರುವಾಗ, ದಿವ್ಯಜ್ಞಾನಸಂಪನ್ನನಾದ ಮಹಾತೇಜಸ್ವಿಯಾದ ನಾರದಮುನಿಯು ಅಲ್ಲಿಗೆ ಬಂದನು ॥೫೬॥

ಆ ನಾರದಮುನಿಯನ್ನು ಕಂಡು, ಆ ಸಮಸ್ತಮುನಿಗಳೂ, ಪ್ರತ್ಯುತ್ಥಾನ ನಮಸ್ಕಾರಗಳನ್ನು ಮಾಡಿ, ವಿನಯದಿಂದ ನಮ್ರರಾಗಿ, ಅತ್ಯಾದರದಿಂದ ಹೀಗೆ ಪ್ರಶ್ನೆಮಾಡಿದರು ॥೫೭॥

ಸ್ವಾಮಿನ್! ದಿವ್ಯಮುನಿಗಳೆ! ಈ ಆಶ್ರಮವಾರದು? ಇಲ್ಲಿರುವ ಶ್ರೇಷ್ಠನಾದ ಈ ಮಹರ್ಷಿಯಾರು? ಈ ದಿವ್ಯವಾದ ವನವನ್ನು ನಿರ್ಮಾಣಮಾಡಿರುವ ಅಸದೃಶವಾದ ಈ ತಪಸ್ಸು ಯಾರದು? ॥೫೮॥

ನಿನ್ನೆಯರಾತ್ರಿ ಸ್ವಲ ನಿದ್ರಾಶೇಷವಾಗಿರುವಾಗ, ನಾವುಗಳು ಅತ್ಯಾಶ್ಚರ್ಯಕರವಾದ ಸ್ವಪ್ನವನ್ನು ಕಂಡೆವು; ರಾಮ ರಾಮ ಎಂದು ಮಧುರವಾದ ಸರ್ವೋತ್ತಮವಾಗಿರುವ ತಾರಕ ಮಂತ್ರವನ್ನೂ ಕೇಳಿದೆವು ॥೫೯॥

ಎರಡನೆಯ ಶ್ರೀರಾಮಸಂತೆ ಕಾಣಿಸುತಿರುವ-ಸಾಕ್ಷಾತ್ಪಹ್ನಿಸಮಕಾಂತಿಯಾದ-ಶ್ರೀರಾಮನಾಮ ಜಪವನ್ನು ಮಾಡುತಿರುವ-ಒಬ್ಬ ಮಹರ್ಷಿಯು, ನನಗೆ ಸ್ವಪ್ನದಲ್ಲಿ ಕಾಣಿಸಿದನು.

ಜಪ್ತುರಗ್ರೇ ಪ್ರಸನ್ನಾತ್ಮಾ ವರದಾನಪರೋ ಹರಿಃ ॥೪೧॥
ಅಪಿ ಚೇತ್ಥಂ ಪ್ರತಿದಿನಂ ಸ್ವಪ್ನಮದ್ಭುತದರ್ಶನಮ್ ।
ರಾಮೇತಿ ಮಧುರಃ ಶಬ್ದಃ ಶ್ರೂಯತೇ ಚ ಮಹಾಮುನೇ ।
ಕರ್ತಾ ನೋ ದೃಶ್ಯತೇ ಹ್ಯತ್ರ ತತ್ ಸರ್ವಂ ವಕ್ತುಮರ್ಹಸಿ ॥೪೨॥
ಇತಿ ಪೃಷ್ಟಃ ಸ ಮುನಿಭಿಃ ನಾರದೋ ದಿವ್ಯದರ್ಶನಃ ।
ತದಾಶ್ರಮಕಥಾಂ ವಕ್ತುಂ ಆರೇಭೇ ಮುನಿಸನ್ನಿಧೌ ॥೪೩॥

ಇತಿ ಶ್ರೀಮದಯೋಧ್ಯಾಕಾಣ್ಡೇ ಜೋರಾಶ್ರಮಂ ಪ್ರತಿ ಸಪ್ತರ್ಷಿ
ನಾರದಾಗಮನನ ಕಥನಂ ನಾಮ ಅಷ್ಟಾವಿಂಶಃ ಸರ್ಗಃ.




ಹೀಗೆ ಜಪಮಾಡುತಿರುವ ಅವನ ಮುಂದುಗಡೆ, ಪ್ರಸನ್ನನಾಗಿ ವರವನ್ನು ಕೊಡಲು ಸಿದ್ಧನಾಗುತಿರುವ ಶ್ರೀಹರಿಯೂ ಕಾಣಿಸಿದನು ॥೪೦—೪೧॥

ಇದಲ್ಲದೆ, ಪ್ರತಿದಿನವೂ ಹೀಗೆಯೇ ಅತ್ಯದ್ಭುತವಾದ ಸ್ವಪ್ನವನ್ನು ಇಲ್ಲಿ ನೋಡುತಿರುವೆವು. ಎಲೈ ಮಹಾಮುನಿಯೇ! ಹಾಗೆಯೇ ಪ್ರತಿದಿನವೂ ರಾಮರಾಮ ಎಂಬ ದಿವ್ಯವಾದ ಶಬ್ದವೂ ಕೇಳಿಸುತ್ತಿರುವುದು. ಆದರೆ, ಇದಕ್ಕೆಲ್ಲ ಕರ್ತೃವಾಗಿರತಕ್ಕವನೊಬ್ಬನೂ ಇಲ್ಲಿ ಕಣ್ಣಿಗೆ ಕಾಣಿಸುವುದಿಲ್ಲ. ಇದೆಲ್ಲವನ್ನೂ ತಾವು ನಮಗೆ ಅಪ್ಪಣೆಕೊಡಿಸಬೇಕು. (ಎಂದು ಆ ಸಪ್ತರ್ಷಿಗಳು ಕೇಳಿದರು) ॥೪೨॥

ಈರೀತಿಯಾಗಿ ಸಪ್ತರ್ಷಿಗಳಿಂದ ಪ್ರಶ್ನೆಮಾಡಲ್ಪಟ್ಟ ದಿವ್ಯಜ್ಞಾನಿಯಾದ ನಾರದಮಹರ್ಷಿಯು, ಆ ಮುನಿಗಳ ಸನ್ನಿಧಿಯಲ್ಲಿ ಆ ಆಶ್ರಮದ ಕಥೆಯನ್ನು ಹೇಳುವುದಕ್ಕುಪಕ್ರಮಿಸಿದನು ॥೪೩॥

ಇದು ಅಯೋಧ್ಯಾಕಾಂಡದಲ್ಲಿ ಜೋರನ ಆಶ್ರಮಕ್ಕೆ ಸಪ್ತರ್ಷಿಗಳೂ
ನಾರದರೂ ಬಂದರೆಂಬಲ್ಲಿಗೆ ಇಪ್ಪತ್ತೆಂಟನೆಯ ಸರ್ಗವು.



ಭಗ್ನೇ ವಲ್ಮೀಕದೇಶೇ ತು ಮುನಿಂ ಜ್ವಲಿತತೇಜಸಮ್ ।
ಶುದ್ಧಸ್ವರ್ಣಸಮಾಕಾರಂ ದರ್ಶನೀಯತನೂಕೃತಿಮ್ ॥೧೪॥
ವಹ್ನಿಮಧ್ಯಗತಂ ಯದ್ವತ್ ಪುಟಪಾಕವಿಶೋಧಿತಮ್ ।
ಸ್ವರ್ಣಂ ನಿರ್ವಾಪಿತೇ ವಹ್ನೌ ನಿಷ್ಕಳಙ್ಕಂ ಮನೋರಮಮ್ ॥೧೫॥
ಅಶಾಸ್ಯಮಾನಂ ಸರ್ವೇಷಾಂ ತಥಾ ನಿಷ್ಕಲ್ಮಷಂ ದ್ವಿಜಮ್ ।
ತಪಸ್ಯನ್ತಂ ತಪೋಮೂರ್ತಿಂ ತಪನದ್ಯೋತಿತಪ್ರಭಮ್ ॥೧೬॥
ಜಪನ್ತಂ ರಾಮರಾಮೇತಿ ಗುರುಪಾದಾಪಿತೇಕ್ಷಣಮ್ ।
ಸಮ್ವನ್ತರೇ ಶನಕ್ಯೈರಾಮಂ ಅರ್ಚಯನ್ತಮನೇಕಧಾ ॥೧೭॥
ಸೀತಾಲಕ್ಷ್ಮಣಶತ್ರುಘ್ನಹನೂಮದ್ಭರತೈಃ ಶ್ರಿತಮ್ ।
ಹಾರಕೇಯೂರಕಟಕಕಙ್ಕಣಾಙ್ಗದಭೂಷಿತಮ್ ।
ದೀರ್ಘಬಾಹುಂ ವಿಶಾಲಾಕ್ಷಂ ಸುನ್ದರಾಙ್ಗಂ ಶುಜಿಸ್ಮಿತಮ್ ॥೧೮॥
ರಾಮಲೋಕಗತೋ ಭೂತ್ವಾ ಬಾಹ್ಯಂ ವಿಸ್ಮೃತ್ಯ ಸಂಸ್ಥಿತಮ್ ॥೧೯॥
ಜಟಾವಲ್ಕಲಸಂವೀತಂ ಪದ್ಮಾಸನಸಮಾಸ್ಥಿತಮ್ ।
ದದೃಶುರ್ವಿಸ್ಮಯಾಕಾರಂ ಮುನಿಮದ್ಭುತದರ್ಶನಮ್ ॥೨೦॥
ದೃಷ್ಟ್ವಾ ಸನ್ನಿಧಿಮಾಗತ್ಯ ಬೋಧಯಾಞ್ಚಕ್ರಿರೇ ತದಾ ।
ಸ್ತುತಿಭಿಃ ಪುಷ್ಕಳಾಭಿಶ್ಚ ಸಾಮವಾಕ್ಯೈರನೇಕಧಾ ॥೨೧॥

ಆ ಹುತ್ತವು ಅಗೆಯಲ್ಪಡಲಾಗಿ, ಅದರೊಳಗೆ ಮಹಾತೇಜಸ್ಸಂಪನ್ನನಾಗಿ ಪ್ರಜ್ವಲಿಸುತ್ತಿರುವ ಮುನಿಯನ್ನು ಕಂಡರು. ಆ ಮುನಿಯು, ಪುಟಹಾಕಿದ ಚಿನ್ನಕ್ಕೆ ಸಮವಾದ ಶರೀರವುಳ್ಳವನಾಗಿಯೂ, ಅತಿದರ್ಶನೀಯನಾಗಿಯೂ ಇದ್ದನು. ಅಗ್ನಿಯೊಳಗೆ ಪುಟಹಾಕಿರುವ ಚಿನ್ನವು ಅಗ್ನಿಯನ್ನು ಆರಿಸಿಬಿಟ್ಟಮೇಲೆ ನಿಷ್ಕಲ್ಮಷವಾಗಿ ಹೇಗೆ ವಿರಾಜಿಸುವುದೋ, ಹಾಗೆ ಹುತ್ತದ ಮಧ್ಯದಲ್ಲಿದ್ದ ಆ ಮುನಿಯು, ಹುತ್ತವನ್ನು ಅಗೆದಮೇಲೆ ನಿಷ್ಕಲ್ಮಷನಾಗಿಯೂ ಸರ್ವರಿಗೂ ಅಪೇಕ್ಷಣೀಯನಾಗಿಯೂ ವಿರಾಜಿಸುತಿದ್ದನು. ಸ್ವಯಂ ತಪಸ್ಸುಮಾಡುತಲೂ, ತಪೋಮೂರ್ತಿಯಾಗಿಯೂ, ತಪಸ್ಸಿನಿಂದ ಸಮಸ್ತ ದಿಕ್ಕನ್ನೂ ಬೆಳಗುತಲೂ ಇದ್ದನು. ಗುರುವಿನ ಪಾದದಲ್ಲಿ ದೃಷ್ಟಿಯಿಟ್ಟು, ರಾಮರಾಮ ಎಂದು ಜಪಮಾಡುತಿದ್ದನು. ಮತ್ತು, ತನ್ನ ಹೃದಯದಲ್ಲಿ, ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮಂತರಿಂದ ಪರಿವೃತನಾಗಿಯೂ–ಹಾರ ಅಂಗದ ಕಟಿಕ ಕಂಕಣಾದಿಗಳಿಂದ ಭೂಷಿತನಾಗಿಯೂ–ದೀರ್ಘಬಾಹುವಾಗಿಯೂ– ವಿಶಾಲನೇತ್ರನಾಗಿಯೂ–ಸುಂದರಾಂಗನಾಗಿಯೂ–ಮಂದಸ್ಮಿತಸಹಿತನಾಗಿಯೂ ಇರುವ ಶ್ರೀರಾಮನನ್ನು ಮೆಲ್ಲಗೆ ಪೂಜಿಸುತಿದ್ದನು. ರಾಮಸಾಲೋಕ್ಯಗತನಾಗಿ ಬಹಿರ್ವಿಷಯಗಳನ್ನೆಲ್ಲ ಮರೆತಿದ್ದನು. ಜಟೆಯನ್ನೂ ನಾರುಮಡಿಯನ್ನೂ ಧರಿಸಿದ್ದನು. ಪದ್ಮಾಸನಹಾಕಿಕೊಂಡು ಕುಳಿತಿದ್ದನು. ಇಂತಹ ಅತ್ಯದ್ಭುತಾಕಾರನಾದ ಮುನಿಯನ್ನು ಕಂಡು, ಅವರೆಲ್ಲರೂ ಅವನಹತ್ತಿರಕ್ಕೆ ಬಂದು, ಅನೇಕವಾದ ಸ್ತುತಿಗಳಿಂದಲೂ ನಾನಾವಿಧವಾದ ಸಾಮೋಕ್ತಿಗಳಿಂದಲೂ ಅವನನ್ನು ಎಚ್ಚರಪಡಿಸಿದರು ॥೧೪—೨೧॥

ನೋದತಿಷ್ಠತ್ ಪರಾನನ್ದರಸಾಸ್ವಾದನತತ್ಪರಃ ।
ತದೊದ್ಬೋಧನಾಶಕ್ತತರಾಃ ಮುನಯಃ ಶ್ರಮಪೀಡಿತಾಃ ।
ಉಪಾಯಂ ತೇ ತು ನಾಪಶ್ಯನ್ ಬೋಧನೇ ತಸ್ಯ ಧೀಮತಃ ॥೨೨॥
ಕಿಂ ವಾಸ್ಯ ಸಾಧಸಂ ಬೋಧೇ ನ ಶೃಣೋತಿ ನ ಪಶ್ಯತಿ ॥೨೩॥
ಏತಸ್ಮಿನ್ನೇವ ಸಮಯೇ ದೇವಾಸ್ತತ್ರ ಸಮಾಗತಾಃ ।
ಮುನಯೋಪಿ ಸಹೇನ್ದ್ರೇಣ ದಿಕ್ಪಾಲಾಶ್ಚ ಮಹೌಜಸಃ ॥೨೪॥
ಹರಿರ್ವೈಕುಂಠನಿಲಯಃ ಕೈಲಾಸನಿಲಯಃ ಶಿವಃ ।
ಸತ್ಯಲೋಕಸ್ಥಿತೈಃ ಸಾರ್ಧಂ ಬ್ರಹ್ಮಾಪಿ ಚತುರಾನನಃ ॥೨೫॥
ಯೇಯೇ ಲೋಕೇ ಪ್ರಸಿದ್ಧಾಶ್ಚ ತೇ ಸರ್ವೇ ಸಮುಪಸ್ಥಿತಾಃ ।
ವಿಸ್ಮಿತಾದದೃಶುಸ್ತೇಪಿ ತದೊದ್ಬೋಧಂ ಕರ್ತುಮಕ್ಷಮಾಃ ॥೨೬॥
ತತ್ರ ಬುದ್ಧಿಮತಾಂ ಶ್ರೇಷ್ಠೋ ವಸಿಷ್ಠೋ ಭಗವಾನ್ ಋಷಿಃ ।
ವಿಚಿನ್ತ್ಯ ಬಹುಧಾ ಯತ್ನಾತ್ ಇದಂ ತತ್ರಾನ್ವಪದ್ಯತ ॥೨೭॥
ವಿಶ್ವಾಸೋಸ್ತಿ ಗುರಾವಸ್ಯ ಪುರೈತದ್ವನಚಾರಿಣಃ ।
ಇದಾನೀಮಪಿ ಧೀರಸ್ಯ ಸ ಧರ್ಮಃ ಕ್ವ ಗಮಿಷ್ಯತಿ ।
ಗುರುಸ್ತವಾಗತೋಸ್ತೀತಿ ವದಿಷ್ಯಾಮೀತ್ಯಚಿನ್ತಯತ್ ॥೨೮॥

ಇಷ್ಟಾದರೂ, ಬ್ರಹ್ಮಾನಂದರಸಾಸ್ವಾದನನಿಷ್ಠನಾಗಿರುವ ಆ ಮುನಿಯು ಎಚ್ಚರಹೊಂದಲಿಲ್ಲ. ಆಗ ಅವನನ್ನು ಎಚ್ಚರಪಡಿಸಲು ಸುತರಾಂ ಅಶಕ್ತರಾದ ಆ ಮುನಿಗಳು, ಶ್ರಮದಿಂದ ಪೀಡಿತರಾಗಿ 'ಇವನು ಕೇಳುವುದೂ ಇಲ್ಲ; ನೋಡುವುದೂ ಇಲ್ಲ. ಇವನನ್ನು ಎಚ್ಚರಪಡಿಸುವುದಕ್ಕೆ ತಕ್ಕ ಸಾಮಗ್ರಿಯಾವುದು?' ಎಂದು ಯೋಚಿಸುತ್ತ, ಆ ಜ್ಞಾನಿಯನ್ನು ಎಚ್ಚರಪಡಿಸಲು ಯಾವ ಉಪಾಯಪನ್ನೂ ಅರಿಯುದವರಾಗಿದ್ದರು ॥೨೨—೨೩॥

ಈ ಸಮಯುದಲ್ಲಿಯೇ, ಸಮಸ್ತ ದೇವತೆಗಳೂ, ಮುನಿಗಳೂ, ಮಹೇಂದ್ರಯುಕ್ತರಾದ ಸಮಸ್ತದಿಕ್ಪಾಲಕರೂ, ವೈಕುಂಠವಾಸಿಯಾದ ಶ್ರೀಹರಿಯೂ, ಕೈಲಾಸವಾಸಿಯಾದ ಶ್ರೀಶಿವನೂ, ಸತ್ಯಲೋಕವಾಸಿಗಳೊಡಗೂಡಿದ ಚತುರ್ಮುಖಬ್ರಹ್ಮನೂ, ಇನ್ನೂ ಲೋಕದಲ್ಲಿ ಯಾರು ಯಾರು ಪ್ರಸಿದ್ಧರಾಗಿರುವರೋ—ಅವರೆಲ್ಲರೂ, ಅಲ್ಲಿಗೆ ಬಂದವರಾದರು. ಆತ್ಯಾಶ್ಚರ್ಯದಿಂದ ಅವನನ್ನು ನೋಡಿ, ಅವನನ್ನು ಎಚ್ಚರಪಡಿಸುವುದಕ್ಕೆ ಅಸಮರ್ಥರಾದರು ॥೨೪—೨೬॥

ಆಗ, ಬುದ್ಧಿಮಂತರಲ್ಲಿ ಶ್ರೇಷ್ಠನಾದ ವಸಿಷ್ಠಮಹಾಮುನಿಯು, ಪ್ರಯತ್ನದಿಂದ ನಾನಾ ವಿಧವಾಗಿ ಯೋಚಿಸಿ, ಕೊನೆಗೆ ಈ ಯುಕ್ತಿಯನ್ನು ಹುಡುಕಿದನು ॥೨೭॥

ಏನೆಂದರೆ,—ಪೂರ್ವದಲ್ಲಿ ಈ ಅರಣ್ಯದೊಳಗೇ ಇವನು ಸಂಚರಿಸುತ್ತಿದ್ದನು; ಇವನ ಸ್ವಭಾವವು ನನಗೆ ಗೊತ್ತುಂಟು. ಇವನಿಗೆ ಗುರುವಿನಲ್ಲಿ ಬಹು ಭಕ್ತಿಯಿರುವುದು. ಈಗಲೂ ಕೂಡ ಹೀಗೆ ಸ್ಥಿರಚಿತ್ತನಾಗಿರುವ ಇವನಿಗೆ ಆ ಧರ್ಮವೆಲ್ಲಿ ಹೋಗುವುದು? ಅದುದರಿಂದ, ನಿನ್ನ ಗುರುವಾದ ನಾನು ಬಂದಿರುವೆನೆಂದು ಇವನೆದುರಿಗೆ ಹೇಳುವೆನು.—ಎಂಬುದಾಗಿ ಶ್ರೀವಸಿಷ್ಠ ಮುನಿಯು ಯೋಚಿಸಿದನು ॥೨೮॥

ತ್ರಯಾಣಾಮಪಿ ಲೋಕಾನಾಂ ಖ್ಯಾತಿಮೇಷ ಗಮಿಷ್ಯತಿ ।
ವಾಣೀ ನೃತ್ಯತು ಜಿಹ್ವಾಗ್ರೇ ಹ್ಯಸ್ಯ ವಾಲ್ಮೀಧುರಾ ಭವೇತ್ ॥೪೦॥
ರಾಮಾಯಣಸ್ಯ ಕರ್ತಾಯಂ ಭವಿಷ್ಯತಿ ಮಹಾಮತಿಃ ॥೪೧॥
ಮಯಿ ರಾಮಾತ್ಮನಾ ಜಾತೇ ವೇದವೇದ್ಯೇ ಪರಾತ್ಮನಿ ।
ಪ್ರವಹಿಷ್ಯತಿ ವೇದೋಽಸ್ಯ ಮುಖಾದ್ರಾಮಾಯಣಾತ್ಮನಾ ।
ಯತ್ರಾಕ್ಷರಂ ಮಹಾಪಾಪವಾರಣಂ ಖಲು ಪಾಪಿನಾಮ್ ॥೪೪॥
ಭಕ್ತ್ಯಾ ರಾಮಾಯಣಂ ಯೇನ ಪಠಿತಂ ಶ್ರುತಿಗೋಚರಮ್ ।
ಜೀವನ್ಮುಕ್ತೋ ಭವೇತ್ ಸದ್ಯಃ ಪಾಪಮಾತ್ರವಿನಾಶನಮ್ ॥೪೫॥
ದುರ್ಭೋಜನ ದುರಾಲಾಪ ದುಷ್ಪ್ರತಿಗ್ರಹ ಸಂಭವಮ್ ।
ದುಸ್ಸಙ್ಗ ದುರ್ಜನಾಲಾಪ ಸಮೂಹಿತಂ ದುಷ್ಟಸೇವಯಾ ॥೪೬॥
ಬ್ರಹ್ಮಹತ್ಯಾ ಸುರಾಪಾನ ಗುರುತಲ್ಪಾದಿಸಂಭವಮ್ ।
ಪರಪೀಡನಸಮೂಹಿತಂ ದುಷ್ಟಸ್ತ್ರೀಸಙ್ಗಸಂಭವಮ್ ॥೪೭॥
ಸರ್ವಪಾಪವಿನಿರ್ಮುಕ್ತೋ ರಾಹುಮುಕ್ತಃ ಶಶೀ ಯಥಾ ॥೪೮॥
ಅಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವಿಷ್ಯತಿ ।
ಮಮ ಶಮ್ಭೋರ್ಬ್ರಹ್ಮಣಶ್ಚ ಲೋಕೇಷು ಚ ಭವಿಷ್ಯತಿ ॥೪೯॥

ಇವನು ಮೂರುಲೋಕಗಳಲ್ಲಿಯೂ ಪ್ರಸಿದ್ಧಿಪಡೆಯುವನು. ಇವನ ನಾಲಿಗೆಯ ತುದಿಯಲ್ಲಿ ಸರಸ್ವತಿಯು ನರ್ತನಮಾಡುತಿರಲಿ; ಇವನ ವಾಕ್ಯ ಮಧುರತಮವಾಗಲಿ ॥೪೨॥

ಈ ಮಹಾಪ್ರಾಜ್ಞನು, ರಾಮಾಯಣವೆಂಬ ಗ್ರಂಥಕ್ಕೆ ಕರ್ತೃವಾಗುವನು. ವೇದವೇದ್ಯನಾದ ಪರಾತ್ಮನಾದ ನಾನು ರಾಮರೂಪದಿಂದ ಅವತರಿಸಿದಾಗ, ವೇದವು ಇವನ ಮುಖದಿಂದ ರಾಮಾಯಣರೂಪನಾಗಿ ಪ್ರವಹಿಸುವುದು. ಆ ರಾಮಾಯಣದ ಪ್ರತಿಯೊಂದಕ್ಷರವೂ, ಪಾಪಾತ್ಮರಿಗೆ ಸಮಸ್ತ ಮಹಾಪಾಪಗಳನ್ನೂ ನಿವಾರಿಸತಕ್ಕುದು ॥೪೩—೪೪॥

ಯಾವನಿಂದ ಭಕ್ತಿಪೂರ್ವಕನಾಗಿ ರಾಮಾಯಣವು ಪಾರಾಯಣ ಮಾಡಲ್ಪಡುವುದೋ, ಅಥವಾ ಶ್ರವಣಮಾಡಲ್ಪಡುವುದೋ, ಅವನು ಆ ಕ್ಷಣದಲ್ಲೇ ಜೀವನ್ಮುಕ್ತನಾಗುವನು; ಅವನ ಸಮಸ್ತಪಾಪಗಳೂ ಆ ಕ್ಷಣವೇ ವಿನಾಶಹೊಂದುವುವು॥೪೫॥

ದುಷ್ಟಾನ್ನಭೋಜನ ದುಷ್ಟಾಲಾಪಭಾಷಣ ದುಷ್ಟಪ್ರತಿಗ್ರಹ ದುಷ್ಟಸಹವಾಸ ದುರ್ಜನ ಸಲ್ಲಾಪ ದುಷ್ಟಸೇವೆ ಬ್ರಹ್ಮಹತ್ಯೆ ಸುರಾಪಾನ ಗುರುಕಲ್ಪಗಮನ ಪರಪೀಡಾಕರಣ ದುಷ್ಟಸ್ತ್ರೀ ಸಮಾಗಮ-ಇತ್ಯಾದಿಗಳಿಂದ ಸಂಭವಿಸುವ ಸಕಲ ಪಾಪಗಳಿಂದಲೂ ಮುಕ್ತನಾಗಿ, ರಾಹುಮುಕ್ತನಾದ ಚಂದ್ರನಂತೆ ವಿರಾಜಿಸುವನು ॥೪೬—೪೮॥

ಮತ್ತು, ಈ ರಾಮಾಯಣ ಪಠನ ಶ್ರವಣಗಳನ್ನು ಮಾಡಿದವನು, ಸಮಸ್ತ ಪುಣ್ಯಲೋಕಗಳಲ್ಲಿಯೂ, ವೈಕುಂಠ ಕೈಲಾಸ ಸತ್ಯಲೋಕಗಳಲ್ಲಿಯೂ, ಸ್ವೇಚ್ಛೆಯಾಗಿ ಸಂಚರಿಸಿಕೊಂಡಿರುವನು. (ಎಂದು ಶ್ರೀ ವಿಷ್ಣುವು ಹೇಳಿದನು) ॥೪೯॥

ಇತ್ಯುಕ್ತೇ ಹರಿಣಾ ತತ್ರ ಶಿವೇನಾಪ್ಯನುಮೋದಿತಮ್ ।
ತಥಾ ಸರ್ವೇಽನುಮೋದನ್ತೇ ಪುಷ್ಪವೃಷ್ಟಿರಭೂತ್ ಪುನಃ ॥೨೦॥
ಏವಂ ದತ್ತ್ವಾ ವರಂ ತಸ್ಮೈ ವೇಣುಂ ತಸ್ಯ ಶರೀರಜಮ್ ।
ಮಹಾಸಾರಮಿತಿ ಜ್ಞಾತ್ವಾ ಧನುಸ್ತ್ರಯಮಕಲ್ಪಯತ್ ॥೨೧॥
ಪ್ರಥಮಂ ವೈಷ್ಣವಂ ಖಂಡಂ ದ್ವಿತೀಯಂ ಶೈವಮುಚ್ಯತೇ ।
ತೃತೀಯಂ ಗಾಣ್ಡೀವಂ ಜ್ಞೇಯಂ ಧನುಷಾಮೇಷ ನಿರ್ಣಯಃ ॥೨೨॥
ರಾಮಮಾಹೃತಂ ಭಾರ್ಗವಾದ್ಯತ್ ತದ್ಧನುರ್ವೈಷ್ಣವಂ ಸ್ಮೃತಮ್ ।
ಯದ್ರಾಮಭಗ್ನಂ ತಚ್ಛೈವಂ ಗಾಣ್ಡೀವಂ ಪಾರ್ಥಹಸ್ತಗಮ್ ॥೨೩॥
ಇತಿ ದತ್ತವರೋ ಧೀರ್ಮಾ ವಾಲ್ಮೀಕಿರ್ಮುನಿಪುಙ್ಗವಃ ।
ಪುರತೋಽಞ್ಜಲಿಮಾದಾಯ ತುಷ್ಟಾವ ಹರಿಮವ್ಯಯಮ್ ॥೨೪॥

ಇತಿ ಶ್ರೀಮದಯೋಧ್ಯಾಕಾಣ್ಡೇ ಬ್ರಹ್ಮಾದಿದೇವಾಗಮನ ವಾಲ್ಮೀಕಿ
ವರಪ್ರದಾನಕಥನಂ ನಾಮ ಏಕೋನತ್ರಿಂಶಃ ಸರ್ಗಃ.



ಹೀಗೆ ಶ್ರೀಹರಿಯಿಂದ ಹೇಳಲ್ಪಡಲಾಗಿ, ಇದನ್ನು ಶ್ರೀಶಿವನೂ ಅನುಮೋದಿಸಿದನು; ಅಲ್ಲಿದ್ದ ಸಮಸ್ತರೂ ಅನುಮೋದಿಸಿದರು. ಪುನಃ ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯ್ತು ॥೨೦॥


ಆಗ ಶ್ರೀಹರಿಯು ಈರೀತಿಯಾಗಿ ಅವನಿಗೆ ವರವನ್ನು ಕೊಟ್ಟು, ಅವನ ಶರೀರದಲ್ಲಿದ್ದ ವೇಣು(ಬೆನ್ನಿನ ನರ)ವನ್ನು ನೋಡಿ–ಇದು ಮಹಾಸಾರವುಳ್ಳದೆಂದು ಯೋಚಿಸಿ, ಅದನ್ನು ಮೂರುಧನುಸ್ಸನ್ನಾಗಿ ಮಾಡಿದನು ॥೨೧॥

ಆದರ ಮೊದಲನೆಯ ಖಂಡವು ವೈಷ್ಣವಧನುಸ್ಸು; ದ್ವಿತೀಯಖಂಡವು ಶೈವಧನುಸ್ಸು; ತೃತೀಯಖಂಡವು ಗಾಂಡೀವಧನುಸ್ಸು. ಈರೀತಿಯಾಗಿ ಆ ಧನುಸ್ಸುಗಳ ನಿರ್ಣಯವು ಮಾಡಲ್ಪಟ್ಟಿತು ॥೨೨॥

ರಾಮನು ಪರಶುರಾಮನ ಹಸ್ತದಿಂದ ತೆಗೆದುಕೊಂಡ ಧನುಸ್ಸು ಯಾವುದುಂಟೋ, ಅದು ವೈಷ್ಣವಧನುಸ್ಸು; ರಾಮನಿಂದ ವಿವಾಹಕಾಲದಲ್ಲಿ ಮುರಿಯಲ್ಪಟ್ಟುದು ಯಾವುದೋ, ಅದು ಶೈವ ಧನುಸ್ಸು; ಗಾಂಡೀವವೆಂಬುದು ಅರ್ಜುನನ ಕೈಯಲ್ಲಿದ್ದುದು ॥೨೩॥

ಆಗ ಈರೀತಿಯಾಗಿ ಮಹಾವಿಷ್ಣುವಿನಿಂದ ವರಕೊಡಲ್ಪಟ್ಟ ವಾಲ್ಮೀಕಿಮಹಾಮುನಿಯು, ಅವನ ಮುಂದೆ ಅಂಜಲಿಬಂಧಮಾಡಿ ನಿಂತುಕೊಂಡು, ಅವ್ಯಯನಾದ ಆ ಶ್ರೀಹರಿಯನ್ನು ಸ್ತುತಿಸಲುಪಕ್ರಮಿಸಿದನು ॥೨೪॥

ಇದು ಅಯೋಧ್ಯಾಕಾಂಡದಲ್ಲಿ ಬ್ರಹ್ಮಾದಿದೇವಾಗಮನ ವಾಲ್ಮೀಕಿವರಪ್ರದಾನಕಥನವೆಂಬ
ಇಪ್ಪತ್ತೊಂಬತ್ತನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ತ್ರಿಂಶಃ ಸರ್ಗಃ.

ಶ್ರೀ ವಾಲ್ಮೀಕಿರುವಾಚ.

ನಮಸ್ತೇಽಖಿಲರೂಪಾಯ ವಿಶ್ವರೂಪಧರಾಯ ಚ ।
ವಿಶ್ವಾತ್ಮನೇ ನಮಸ್ತುಭ್ಯಂ ವಿಶ್ವಮೋಹನಹೇತವೇ ॥೧॥
ಶಙ್ಖಚಕ್ರಗದಾಪಾಣೇ ವೈಕುಣ್ಠನಿಲಯಾಚ್ಯುತ ।
ಕ್ಷೀರೋದಶಾಯಿನೇ ತುಭ್ಯಂ ಶ್ವೇತದ್ವೀಪನಿವಾಸಿನೇ ।
ನಮೋ ಬದರಿಕಾವಾಸ ನರನಾರಾಯಣಾಯ ತೇ ॥೨॥
ಅವತಾರಸಹಸ್ರೇಣ ಪಾಸಿ ಸರ್ವಂ ಧರಾತಲಮ್ ।
ಸರ್ವೇಷಾಮನ್ತರಾವಾಸಿ ಸರ್ವಸಾಕ್ಷ್ಯಸಿ ಕೇವಲಮ್ ॥೩॥
ನಮೋ ವಿಚಿತ್ರರೂಪಾಯ ವಿಚಿತ್ರಾಭರಣಾಯುಧ ॥೪॥
ರಾಮರೂಪೇಣ ಮೇ ಭಾಸಿ ಸರ್ವರೂಪೋ ಭವಾನ್ ಯತಃ ।
ಸೀತಾಲಕ್ಷ್ಮಣಶತ್ರುಘ್ನಭರತಾದಿಪರಿಶ್ರಿತ ॥೫॥
ಕೌಸಲ್ಯಾಗರ್ಭಸಮ್ಭೂತ ಸಾಕೇತನಿಲಯಾಯ ಚ ।
ನಮಸ್ತೇ ತಾಟಕಾಹನ್ತ್ರೇ ವಿಶ್ವಾಮಿತ್ರೇಣ ಯಾಚಿತ ॥೬॥

ಅಯೋಧ್ಯಾಕಾಂಡದಲ್ಲಿ ಮುವ್ವತ್ತನೆಯ ಸರ್ಗವು.

ಶ್ರೀವಾಲ್ಮೀಕಿಮುನಿಯು ಮಾಡಿದ ಸ್ತೋತ್ರಕ್ರಮವೇನೆಂದರೆ:—

ಮಹಾಪ್ರಭೋ! ಸರ್ವರೂಪನಾಗಿರುವ ನಿನಗೆ ನಮಸ್ಕಾರವು. ವಿಶ್ವರೂಪಧಾರಿಯಾದ ನಿನಗೆ ನಮಸ್ಕಾರವು. ವಿಶ್ವಾತ್ಮನೂ ವಿಶ್ವಮೋಹನನೂ ಆದ ನಿನಗೆ ನಮಸ್ಕಾರವು ॥೧॥

ಶಂಖಚಕ್ರಗದಾಪಾಣಿಯೇ! ವೈಕುಂಠನೇ! ಅಚ್ಯುತನೇ! ಕ್ಷೀರಸಾಗರಶಾಯಿಯಾದ ನಿನಗೆ ನಮಸ್ಕಾರವು. ಶ್ವೇತದ್ವೀಪನಿವಾಸಿಯಾದ ನಿನಗೆ ನಮಸ್ಕಾರವು. ಬದರಿಕಾಶ್ರಮದಲ್ಲಿ ನರನಾರಾಯಣರೂಪದಿಂದ ವಾಸಮಾಡುತಿರುವ ನಿನಗೆ ನಮಸ್ಕಾರವು ॥೨॥

ಎಲೈ ಸರ್ವಾಂತರ್ಯಾಮಿಯಾದವನೆ! ನೀನು, ಸಾವಿರಾರು ಅವತಾರಗಳನ್ನು ಮಾಡಿ ಭೂಮಿಯನ್ನು ರಕ್ಷಿಸುವೆ. ಆದರೂ ಸರ್ವಕ್ಕೂ ಕೇವಲ ಸಾಕ್ಷಿಭೂತನಾಗಿದ್ದುಗೊಂಡು, ನಿರ್ಲಿಪ್ತನಾಗಿರುವೆ. ವಿಚಿತ್ರರೂಪನಾಗಿಯೂ ವಿಚಿತ್ರಭೂಷಣನಾಗಿಯೂ ಇರುವ ನಿನಗೆ ನಮಸ್ಕಾರವು ॥

ವಸ್ತುತಃ ಸಕಲರೂಪನಾಗಿದ್ದರೂ, ನೀನು ನನಗೆ ಸೀತಾ ಲಕ್ಷ್ಮಣ ಭರತ ಶತ್ರುಘ್ನಾದಿಗಳಿಂದಪರಿವೃತನಾಗಿರುವ ಶ್ರೀರಾಮನಾಗಿ ಕಾಣಿಸುತ್ತಿರುವೆ ॥೫॥

ಎಲೈ ಕೌಸಲ್ಯಾಗರ್ಭಸಂಭವನೇ! ಅಯೋಧ್ಯಾಧಿವಾಸಿಯಾದ ನಿನಗೆ ನಮಸ್ಕಾರವು. ವಿಶ್ವಾಮಿತ್ರಮುನಿಯಿಂದ ಪ್ರಾರ್ಥಿತನಾದವನೆ! ತಾಟಕಾನಾಶಕನಾದ ನಿನಗೆ ನಮಸ್ಕಾರವು ॥

ತದ್ಯಾಗರಕ್ಷಣೋದ್ಯೋಗ ಸುಬಾಹುನಿಧನಾಯ ತೇ ।
ಅಹಲ್ಯಾಶಾಪಹನನ ಮುನಿಪತ್ನೀಪ್ರದಾಯಿನೇ ॥೬॥
ಸೀತಾಪತೇ ನಮಸ್ತುಭ್ಯಂ ಶಿವಕೋದಂಡಖಂಡನ ।
ಭೃಗುವಾನುಸ್ಯ ದರ್ಪಘ್ನ ನಮಃ ಕೋದಂಡಧಾರಿಣೇ ॥೮॥
ಅಯೋಧ್ಯಾಧಿಪತೇ ತುಭ್ಯಂ ಪಿತುರಾಜ್ಞಾವಿಧಾಯಿನೇ ।
ಗಙ್ಗಾತೀರನಿವಾಸಾಯ ಗುಹಾನುಗ್ರಹಕಾರಿಣೇ ॥೯॥
ಭರದ್ವಾಜಾಶ್ರಮಾವಾಸ ನಮಸ್ತೇ ಮುನಿಪೂಜಿತ ।
ಚಿತ್ರಕೂಟಾಚಲಾವಾಸ ಪೌರವರ್ಗನಮಸ್ಕೃತ ॥೧೦॥
ನಮೋ ರಾಕ್ಷಸನಾಶಾಯ ದಣ್ಡಕಾರಣ್ಯವಾಸಿನೇ ।
ಕಬನ್ಧಪ್ರಾಣನಾಶಾಯ ವಿರಾಧನಿಧನಾಯ ಚ ॥೧೧॥
ಶೂರ್ಪಣಖ್ಯೈ ವಿರೂಪೈದಪಣ್ಡಿತಾಯ ನಮೋನಮಃ ।
ಖರಹನ್ತ್ರೇ ನಮಸ್ತುಭ್ಯಂ ರಕ್ಷೋಘ್ನಾಯ ರಘೂತ್ತಮ ॥೧೨॥
ಮಾರೀಚನಾಥಿನೇ ತುಭ್ಯಂ ಪಕ್ಷಿರಾಜಾಯ ಮುಕ್ತಿದ ।
ಶಬರೀಕೃತಪೂಜಾಯ ಪಮ್ಪಾತೀರವಿಹಾರಿಣೇ ॥೧೩॥

ವಿಶ್ವಾಮಿತ್ರಮುನಿಯ ಯಜ್ಞರಕ್ಷಣೆಯಲ್ಲಿ ಉದ್ಯುಕ್ತನಾದವನೆ! ಸುಬಾಹುರಾಕ್ಷಸವಧೆ ಮಾಡಿದವನೆ! ನಿನಗೆ ನಮಸ್ಕಾರವು. ಅಹಲ್ಯಾಶಾಪಮೋಚಕನೆ! ಗೌತಮಮುನಿಗೆ ಪತ್ನಿಯನ್ನು ಕೊಟ್ಟಂತಹ ನಿನಗೆ ನಮಸ್ಕಾರವು ॥೬॥

ಶಿವಧನುರ್ಭಂಗಕಾರಕನೆ! ಸೀತಾಪತಿಯೇ! ನಿನಗೆ ನಮಸ್ಕಾರವು. ಪರಶುರಾಮಗರ್ವ ಭಂಗಮಾಡಿದವನೆ! ಕೋದಂಡಪಾಣಿಯಾದ ನಿನಗೆ ನಮಸ್ಕಾರವು ॥೮॥

ಅಯೋಧ್ಯಾಧಿಪತಿಯೆ! ತಂದೆಯ ಆಜ್ಞೆಯನ್ನು ಶಿರಸಾವಹಿಸಿದ ನಿನಗೆ ನಮಸ್ಕಾರವು. ಗಂಗಾತೀರನಿವಾಸಿಯಾಗಿಯೂ, ಗುಹನಿಗೆ ಅನುಗ್ರಹ ಮಾಡಿದವನಾಗಿಯೂ ಇರುವ ನಿನಗೆ ನಮಸ್ಕಾರವು ॥೯॥

ಭರದ್ವಾಜಮುನಿಯ ಆಶ್ರಮದಲ್ಲಿ ವಾಸವಮಾಡಿದವನೆ! ಸಕಲಮಹರ್ಷಿಪೂಜಿತನಾದವನೆ! ಚಿತ್ರಕೂಟಗಿರಿನಿವಾಸನೆ! ಪೌರಸಮೂಹದಿಂದ ನಮಸ್ಕೃತನಾದವನೆ! ನಿನಗೆ ನಮಸ್ಕಾರವು ॥

ರಾಕ್ಷಸನಾಶಕನೂ, ದಂಡಕಾರಣ್ಯವಾಸಿಯೂ, ಕಬಂಧಪ್ರಾಣನಾಶಕನೂ, ವಿರಾಧನಿಧನ ಕಾರಿಯೂ ಆದ ನಿನಗೆ ನಮಸ್ಕಾರವು ॥೧೧॥

ಶೂರ್ಪಣಖಿಯು ನಾಸಿಕಾಚೆ ೇದದಲ್ಲಿ ವಿಶಾರದನಾದ ನಿನಗೆ ಪುನಃಪುನಃ ನಮಸ್ಕಾರವು. ಹೇ ರಘೂತ್ತಮ! ಖರರಾಕ್ಷಸನಾಶಕನೂ ದೂಷಣಾದಿ ರಾಕ್ಷಸಸಂಹಾರಕನೂ ಆದ ನಿನಗೆ ನಮಸ್ಕಾರವು ॥೧೨॥

ಮಾರೀಚಮಥನಮಾಡಿದವನಿಗೆ ನಮಸ್ಕಾರವು. ಜಟಾಯುವಿಗೆ ಮುಕ್ತಿಯನ್ನು ಕೊಟ್ಟವನೆ! ನಿನಗೆ ನಮಸ್ಕಾರವು. ಶಬರಿಯಿಂದ ಪೂಜಿತನಾದವನೆ! ನಿನಗೆ ನಮಸ್ಕಾರವು. ಪಂಪಾತೀರದಲ್ಲಿ ವಿಹರಿಸಿದ ನಿನಗೆ ನಮಸ್ಕಾರವು ॥೧೩॥

ಸುಗ್ರೀವಕೃತಸಖ್ಯಾಯ ನಮೋ ವಾಲಿವಿನಾಶಿನೇ ।
ಸುಗ್ರೀವಸೇನಾಪನಾಚಾರ್ಯ ನಮಸ್ತೇ ಕರುಣಾಕರ ॥೧೪॥
ಹನೂಮದ್ಗುರವೇ ತುಭ್ಯಂ ವಿಭೀಷಣವರಪ್ರದ ।
ಸಮುದ್ರತರಣೋದ್ಯೋಗ ಸೇತುಬನ್ಧನಕಾರಿಣೇ ॥೧೫॥
ಲಙ್ಕಾವರೋಧನಕೃತೇ ರಾಕ್ಷಸಾನ್ತಕರಾಯ ಚ ।
ಕುಮ್ಭಕರ್ಣವಿನಾಶಾಯ ರಾವಣಾಸುರಹಾರಿಣೇ ॥೧೬॥
ಸೀತಾಲಕ್ಷ್ಮಣಸಂಯುಕ್ತ ಸಾಕೇತಪುರವಾಸಿನೇ ।
ಸಿಂಹಾಸನಾಧಿರೂಢಾಯ ಮುನಿಶ್ರೇಷ್ಠಾಭಿಷೇಚಿತ ।
ರಾಜ್ಯಶಾಸನತತ್ವಜ್ಞ ಪ್ರಜಾನಾಂ ಪತಯೇ ನಮಃ ॥೧೭॥
ನ ಹಿ ತತ್ತ್ವಂ ವಿಜಾನಾಮಿ ತವ ಬ್ರಹ್ಮಾದ್ಯಗೋಚರಮ್ ॥೧೮॥
ಬಾಲಕಸ್ಯ ಯಥಾ ವಾಕ್ಯಂ ಪಿತುಃ ಪ್ರೀತಿಕರಂ ಭವೇತ್ ।
ಸ್ಖಲಿತಂ ಚಾಪ್ಯಸಮ್ಬದ್ಧಂ ಭವತು ಪ್ರೀಣನಾಯ ತೇ ॥೧೯॥
ತ್ವಂ ಹಿ ಸರ್ವೋ ಹಿ ಸರ್ವಜ್ಞಃ ಸರ್ವಕರ್ತಾಸಿ ರಾಘವ ।

ಸುಗ್ರೀವನೊಡನೆ ಸಖ್ಯವನ್ನು ಮಾಡಿದ ನಿನಗೆ ನಮಸ್ಕಾರವು. ವಾಲಿಸಂಹಾರಕಾರಿಯಾದ ನಿನಗೆ ನಮಸ್ಕಾರವು. ಸುಗ್ರೀವನನ್ನು ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಆಚಾರ್ಯಭೂತನಾದವನೆ! ನಿನಗೆ ನಮಸ್ಕಾರವು. ಎಲೈ ಕೃಪಾಸಾಗರನೆ! ನಿನಗೆ ನಮಸ್ಕಾರವು ॥೧೪॥

ಹನುಮಂತನಿಗೆ ಗುರುವಾದ ನಿನಗೆ ನಮಸ್ಕಾರವು. ವಿಭೀಷಣನಿಗೆ ವರಪ್ರದಾನವಮಾಡಿದವನೆ! ನಿನಗೆ ನಮಸ್ಕಾರವು. ಸಮುದ್ರವನ್ನು ದಾಟುವುದರಲ್ಲಿ ಉದ್ಯೋಗಮಾಡಿದವನೆ! ಸೇತುಬಂಧನವನ್ನು ಮಾಡಿಸಿದ ನಿನಗೆ ನಮಸ್ಕಾರವು ॥೧೫॥

ಲಂಕಾಪಟ್ಟಣಕ್ಕೆ ಮುತ್ತಿಗೆಹಾಕಿದ ನಿನಗೆ ನಮಸ್ಕಾರವು. ರಾಕ್ಷಸಾಂತಕರನಾದ ನಿನಗೆ ನಮಸ್ಕಾರವು. ಕುಂಭಕರ್ಣವಿನಾಶಕನಾದ ನಿನಗೆ ನಮಸ್ಕಾರವು. ರಾವಣಾಸುರಸಂಹಾರಕನಾದ ನಿನಗೆ ನಮಸ್ಕಾರವು ॥೧೬॥

ಸೀತಾಲಕ್ಷ್ಮಣಯುಕ್ತನಾದ ನಿನಗೆ ನಮಸ್ಕಾರವು. ಸಾಕೇತಪುರವಾಸಿಯಾದ ನಿನಗೆ ನಮಸ್ಕಾರವು. ಸಿಂಹಾಸನಾಧಿರೂಢನಾದ ನಿನಗೆ ನಮಸ್ಕಾರವು. ಮುನಿಶ್ರೇಷ್ಠರಿಂದ ಪಟ್ಟಾಭಿಷೇಕಮಾಡಲ್ಪಟ್ಟವನೆ! ನಿನಗೆ ನಮಸ್ಕಾರವು. ರಾಜ್ಯಪರಿಪಾಲನರಹಸ್ಯವನ್ನು ಬಲ್ಲವನೆ! ಸಕಲಪ್ರಜೆಗಳಿಗೂ ಸ್ವಾಮಿಯಾದ ನಿನಗೆ ನಮಸ್ಕಾರವು ॥೧೭॥

ಸ್ವಾಮಿಾ! ಬ್ರಹ್ಮಾದಿಗಳಿಗೂ ಅಗೋಚರವಾಗಿರುವ ನಿನ್ನ ತತ್ವವನ್ನು ನಾನು ಅರಿಯೆನು. ಆದರೂ ಬಾಲಕನ ವಚನವು ಹೇಗೆ ತಂದೆಗೆ ಸಂತೋಷಜನಕವಾಗುವುದೋ, ಹಾಗೆ ಅಪಶಬ್ದಬಹುಳವೂ ಅಸಂಬದ್ಧವೂ ಆಗಿರುವ ನನ್ನ ವಚನವು ನಿನಗೆ ಪ್ರೀತಿಯನ್ನುಂಟುಮಾಡತಕ್ಕುದಾಗಲಿ ॥೧೮-೧೯॥

ಹೇ ರಾಘವ! ನೀನು, ಸರ್ವಸ್ವರೂಪನು; ಸರ್ವಜ್ಞನು; ಸರ್ವಕರ್ತೃವು. ಆದುಕಾರಣ, ನನ್ನ

ಕ್ಷಮಸ್ವ ಮಮ ದೌರಾತ್ಮ್ಯಂ ಅಪರಾಧಾ೯ ಸಹಸ್ರಧಾ ॥೨೦॥
ಮಾನಸಂ ವಾಚಿಕಂ ಚಾಪಿ ಕಾಯೇನೈವ ಚ ಯತ್ ಕೃತಮ್ ।
ಜ್ಞಾನಾಜ್ಞಾನಕೃತಂ ಪಾಪಂ ಕ್ಷಮಸ್ವ ರಘುನನ್ದನ ॥೨೧॥
ಪರಿಗೃಹ್ಯ ಮಮ ಸ್ತೋತ್ರಂ ರಕ್ಷ ಮಾಂ ಪರಮೇಶ್ವರ ।
ಇತಿ ಸ್ತುತ್ವಾ ಮುನಿಶ್ರೇಷ್ಠಃ ತತಸ್ತೂಷ್ಣೀಂ ಬಭೂವ ಹ ॥೨೨॥
ವಾಲ್ಮೀಕಿನಾ ಕೃತಂ ಸ್ತೋತ್ರಂ ನಿಶಮ್ಯ ರಘುನನ್ದನಃ ।
ದತ್ವಾ ವರಾ೯ ಬಹೂನನ್ಯಾ೯ ವಾಲ್ಮೀಕೇರ್ಭಾವಿತಾತ್ಮನಃ ।
ಸರ್ವದೇವಗಣೋಪೇತಃ ಸ್ವಧಾಮ ಪ್ರತ್ಯಪದ್ಯತ ॥೨೩॥
ತಮಸಾತೀರಮಾಸಾದ್ಯ ವಾಲ್ಮೀಕಿಸ್ತು ಮಹಾ೯ ಋಷಿಃ ॥೨೪॥
ಕೃತ್ವಾ ಪರ್ಣಕುಟೀಂ ತತ್ರ ವಸ೯ ರಾಮಂ ಸದಾ ಭಜ೯ ।
ಮುನಿದೇವಮನುಷ್ಯೇಷು ಪ್ರಸಿದ್ಧಸ್ತಪಸಾಭವತ್ ॥೨೫॥
ರಾಮಾಯಣಕಥಾಂ ತತ್ರ ಕರ್ತುಕಾಮೋ ಮಹಾಮುನಿಃ ।
ನಾರದಾಚ್ಛ್ರುತವೃತ್ತಾನ್ತಃ ತಸ್ಥೌ ಸುಖಮಕಲ್ಮಷಃ ॥೨೬॥
ವ್ಯತ್ಯಸ್ತಾದಪಿ ರಾಮಸ್ಯ ನಾಮೈಶ್ವರ್ಯೀ ನೀಚೋಪಿ ಮೌನಿರಾಟ್ ।

ದುಷ್ಟತನವನ್ನೂ ಅನೇಕವಿಧವಾಗಿ ಮಾಡಿದ ಅಪರಾಧಗಳನ್ನೂ ನೀನು ಕ್ಷಮಿಸಬೇಕು ॥೨೦॥

ಹೇ ರಘುನಂದನ ! ಕಾಯ ವಾಕ್ಯ ಮನಸ್ಸುಗಳಲ್ಲಿ ಮಾಡಿದ ಪಾಪಗಳನ್ನೂ, ಜ್ಞಾನದಲ್ಲಿಯೂ ಅಜ್ಞಾನದಲ್ಲಿಯೂ ಮಾಡಲ್ಪಟ್ಟಿರುವ ಪಾಪಗಳನ್ನೂ, ನೀನು ಕ್ಷಮಿಸುವನಾಗಬೇಕು॥೨೧

ಹೇ ಪರಮೇಶ್ವರ ! ನಾನು ಮಾಡಿದ ಈ ಸ್ತುತಿಯನ್ನು ಪರಿಗ್ರಹಿಸಿ, ನೀನು ನನ್ನನ್ನು ಸಂರಕ್ಷಿಸು —ಎಂದು ಸ್ತೋತ್ರಮಾಡಿ, ಒಳಿಕ ಆ ಮುನಿಶ್ರೇಷ್ಠನು ಸುಮ್ಮನಾದನು ॥೨೨॥

ಎಲೌ ಪಾರ್ವತಿ ! ಈರೀತಿಯಾಗಿ ಆಗ ವಾಲ್ಮೀಕಿಮುನಿಯಿಂದ ಮಾಡಲ್ಪಟ್ಟ ಸ್ತೋತ್ರವನ್ನು ಕೇಳಿ, ಶ್ರೀಮಹಾವಿಷ್ಣುರೂಪನಾದ ಶ್ರೀರಾಮನು, ಜ್ಞಾನನಿಷ್ಠನಾದ ಆ ವಾಲ್ಮೀಕಿಗೆ ಇನ್ನೂ ಅನೇಕವಾದ ವರಗಳನ್ನು ಕೊಟ್ಟು, ಸಕಲ ದೇವಸಮೂಹದೊಡನೆ ತನ್ನ ವೈಕುಂಠಲೋಕಕ್ಕೆ ಹೊರಟುಹೋದನು ॥೨೩॥

ಅನಂತರ, ಆ ವಾಲ್ಮೀಕಿಮಹರ್ಷಿಯು, ತಮಸಾನದಿಯ ತೀರಕ್ಕೆ ಬಂದು, ಅಲ್ಲಿ ಪರ್ಣಶಾಲೆಯನ್ನು ಮಾಡಿಕೊಂಡು, ಅದರೊಳಗೆ ವಾಸಮಾಡುತ, ಸರ್ವದಾ ಶ್ರೀರಾಮನನ್ನು ಭಜಿಸುತ, ತನ್ನ ತಪಸ್ಸಿನಿಂದ ಮುನಿ ದೇವ ಮನುಷ್ಯರೊಳಗೆಲ್ಲ ಪ್ರಸಿದ್ಧನಾದನು ॥೨೪—೨೫॥

ಆಲ್ಲಿ, ವೀತಕಲ್ಮಷನಾದ ಆ ಮಹಾಮುನಿಯು, ರಾಮಾಯಣಕಥೆಯನ್ನು ರಚಿಸಬೇಕೆಂದು ಆಶೆಪಟ್ಟವನಾಗಿ, ನಾರದರ ಮುಖದಿಂದ ಆ ರಾಮನ ವೃತ್ತಾಂತವನ್ನೆಲ್ಲ ಕೇಳಿತಿಳಿದುಕೊಂಡು, ಸುಖವಾಗಿ ವಾಸಮಾಡಿಕೊಂಡಿದ್ದನು ॥೨೬॥

ಎಲೌ ಪಾರ್ವತಿ ! ಹೀಗೆ ವ್ಯತ್ಯಸ್ತವಾಗಿ ಜಪಿಸಲ್ಪಟ್ಟರೂ ಶ್ರೀರಾಮನಾಮದಿಂದ ಅಂತಃ

ಅಭೂತ್ ತತ್ ಕ್ರಮತೋ ಜಪ್ತುಃ ನಾಹಂ ವಕ್ಷ್ಯಂ ಫಲಂ ಕ್ಷ್ವಯಃ॥೨೩॥
ವಿಷ್ಣೋಃ ಸರ್ವಾಣಿ ನಾಮಾನಿ ಕ್ರಮೋತ್ಕ್ರಮಫಲಾನ್ಯಲಮ್ ।
ರಾಮನಾಮ ತು ಭಕ್ತಾನಾಂ ಕ್ರಮಾತ್ಕ್ರಮವಿಮುಕ್ತಿದಮ್ ॥೨೪॥
ಸರ್ವನಾಮ್ನಾಮತೋ ವಿಷ್ಣೋಃ ಮುಖಮೇಕಂ ಫಲಂ ಪ್ರತಿ ।
ರಾಮನಾಮ ತು ಜಪ್ತ್ಯಾನಾಂ ರಾಮವತ್ ಸರ್ವತೋಮುಖಮ್ ॥೨೫॥
ವ್ಯತ್ಯಸ್ತಂ ವಾ ಸಮಸ್ತಂ ವಾ ರಾಮನಾಮ ಸ್ಮರೇತ ಯಃ ।
ತಜ್ಜನ್ಮನಃ ಫಲಂ ತತ್ ಸ್ಯಾತ್ ಅನ್ಯಥಾ ಪಶುರೇವ ಸಃ ॥೨೬॥
ಸರ್ವೇ ಶಬ್ದಾವ್ಯುತ್ಕ್ರಮೋತ್ಕ್ರಾಃ ನಿರರ್ಥಾರಾಮನಾಮ ತು ।
ಕ್ರಮೋತ್ಕ್ರಮಕ್ರಮೋತ್ಕ್ರಂ ವಾ ಫಲದಂ ತ್ವಿಕ್ಷುದಂಡವತ್ ॥೨೭॥
ಅಕಾರಾಕಾರಯುಗಳಮುಕಾರೈರ್ಗುಣಮೂರ್ತಯಃ ।
ಪ್ರೋಚ್ಯಂತೇ ರೇಫತೋ ಬ್ರಹ್ಮ ಮೂರ್ತಿಕಾರಣಮುಚ್ಯತೇ ॥೨೮॥

ನೀಚನಾದ ವ್ಯಾಧನೂ ಕೂಡ ಮುನಿಶ್ರೇಷ್ಠನಾದನು. ಹೀಗಿರುವಾಗ, ಅದನ್ನು ಕ್ರಮವಾಗಿ ಜಪಮಾಡಿದವರಿಗೆ ಉಂಟಾಗುವ ಫಲವನ್ನು ಹೇಳಲು ನಾನು ಸಮರ್ಥನಲ್ಲ ॥೨೩॥

ಶ್ರೀಮಹಾ ವಿಷ್ಣುವಿನ ಸಕಲ ನಾಮಗಳೂ ಕ್ರಮವಾಗಿ ಉಚ್ಚರಿಸಲ್ಪಟ್ಟರೆ ಫಲವನ್ನು ಕೊಡುವುವು. ಶ್ರೀರಾಮನಾಮವಾದರೋ, ಕ್ರಮವಾಗಿಯಾಗಲಿ–ಅಕ್ರಮವಾಗಿಯಾಗಲಿ–ಹೇಗೆ ಜಪಿಸಲ್ಪಟ್ಟರೂ, ಮೋಕ್ಷವನ್ನು ಕೊಡತಕ್ಕುದಾಗಿರುವುದು ॥೨೪॥

ಹೀಗಿರುವುದರಿಂದ, ಸಮಸ್ತ ನಾಮಜಪಗಳಿಗೂ ಫಲವನ್ನು ಕೊಡುವ ವಿಷಯದಲ್ಲಿ ವಿಷ್ಣುವೊಂದೇ ಮುಖವಿರುವುದು. ರಾಮನಾಮವಾದರೋ, ಜಪಮಾಡತಕ್ಕವರಿಗೆ ರಾಮನಂತೆಯೇ ಸರ್ವತೋಮುಖವಾಗಿ ಫಲಪ್ರದವಾಗುವುದು ॥೨೫॥

ಯಾವನು ವ್ಯತ್ಯಸ್ತವಾಗಿಯಾದರೂ ಕ್ರಮವಾಗಿಯಾದರೂ ರಾಮನಾಮವನ್ನು ಸ್ಮರಿಸುವನೋ, ಅವನ ಜನ್ಮಕ್ಕೆ ಅದೇ ಫಲವಾಗುವುದು; ಇಲ್ಲದಿದ್ದರೆ, ಅವನು ಪಶುಸಮಾನನೆಯೇ ॥

ಪ್ರಪಂಚದಲ್ಲಿ ಸಮಸ್ತ ಶಬ್ದಗಳೂ ವ್ಯುತ್ಕ್ರಮವಾಗಿ ಉಚ್ಚರಿಸಲ್ಪಟ್ಟರೆ ನಿಷ್ಫಲಗಳಾಗುವುವು; ರಾಮನಾಮವಾದರೋ, ಕ್ರಮವಾಗಿ ಉಚ್ಚರಿಸಲ್ಪಟ್ಟರೂ ವ್ಯತ್ಯಸ್ತವಾಗಿ ಉಚ್ಚರಿಸಲ್ಪಟ್ಟರೂ, ಫಲವನ್ನು ಕೊಡುವುದು. ಕಬ್ಬನ್ನು ಕ್ರಮವಾಗಿ ತಿಂದರೂ, ತಲೆಕೆಳಗಾಗಿ ತಿಂದರೂ, ಅದರ ಮಾಧುರ್ಯವೇಕರೀತಿಯಾಗಿರುವುದಲ್ಲವೆ! ಇದರಂತೆಯೇ, ಈ ರಾಮನಾಮವೂ ಹೇಗೆ ಜಪಿಸಲ್ಪಟ್ಟರೂ ಮುಕ್ತಿಯನ್ನು ಕೊಡತಕ್ಕುದೆಂದು ತಿಳಿಯಬೇಕು ॥೨೬॥

'ರಾಮ' ಎಂಬ ಶಬ್ದವನ್ನು ವ್ಯತ್ಯಸ್ತವಾಗಿ 'ಮರಾ' ಎಂದು ಉಚ್ಚರಿಸಿದರೆ, ಆಗ ಅದರಲ್ಲಿರುವ ಅಕಾರ ಆಕಾರ ಮಕಾರಗಳು ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಹೇಳುವುವು. 'ರ' ಎಂಬ ಅಕ್ಷರದಿಂದ, ಈ ತ್ರಿಮೂರ್ತಿಗಳಿಗೂ ಕಾರಣಭೂತವಾದ ಪರಬ್ರಹ್ಮವು ಹೇಳಲ್ಪಡುವುದು. ಅಂತು, ರಾಮನಾಮವು ತ್ರಿಮೂರ್ತಿಗಳನ್ನೂ ಪರಬ್ರಹ್ಮವನ್ನೂ ಹೇಳುವುದೆಂದು ಸ್ಪಷ್ಟವಾಯ್ತು ॥೨೭॥

ರಾಮನಾಮಸಮಂ ನಾನ್ಯತ್ ಅಸ್ತಿ ಪಾತಕಶೋಧಕಮ್ ।
ಮನ್ತ್ರಂ ವಾ ನಾಮ ತೀರ್ಥಂ ವಾ ಮುನಿರೇವಾತ್ರ ಕಾರಣಮ್ ॥೩೩॥
ವಿಪ್ರಕಲ್ಪೈಃ ಕೌಶಿಕಾದ್ಯೈಃ ವೇದೈರ್ವೇದೋಕ್ತಕರ್ಮಭಿಃ ।
ತಪೋಭಿರಪಿ ವಿಪ್ರತ್ವಂ ಕಥಞ್ಚಿತ್ ಪ್ರಾಪ್ತಮಮ್ಬಿಕೇ ॥೩೪॥
ತಾದೃಶೇನ ಸುಖಂ ಪ್ರಾಪ್ತಾ ಕಿರಾತೇನಾಪಿ ವಿಪ್ರತಾ ।
ವ್ಯತ್ಯಸ್ತರಾಮನಾಮ್ನೈವ ನಾನ್ಯಸಾಧನತಃ ಶಿವೇ ॥೩೫॥
ಚಣ್ಡಾಲಂ ಪತಿತಂ ಮ್ಲೇಚ್ಛಂ ಕಿರಾತಂ ಚಾಪಿ ಪಾಪಿನಮ್ ।
ಶೋಧಯೇದ್ರಾಮನಾಮೈವ ಲೋಹಂ ಸಿದ್ಧರಸೋ ಯಥಾ ॥೩೬॥
ಸ್ನಾನೇ ದಾನೇ ಜಪೇ ಹೋಮೇ ಸ್ವಾಧ್ಯಾಯೇ ತರ್ಪಣೇಪಿ ಚ ।
ಕ್ಷುತಾದೌ ತಾಡನಾದೌ ಚ ರಾಮನಾಮ ಸದಾ ಸ್ಮರೇತ್ ॥೩೭॥
ಸ್ಮರಣಂ ರಾಮರಾಮೇತಿ ಶರಣಂ ಪಾಪಿನಾಮುಲಮ್ ।
ಕರಣಂ ಮುಕ್ತಿಮಾರ್ಗಸ್ಯ ತರಣಂ ಭವವಾರಿಧೇಃ ॥೩೮॥
ಧಿಕ್ಕರೋತಿ ಯಮಃ ಪ್ರೇತಾನ್ ಸುಖೋಚ್ಚಾರ್ಯೇ ಸುಖಪ್ರದೇ ।
ರಾಮನಾಮ್ನಿ ಸ್ಥಿತೇ ಪಾಪಾಃ ಕಿಮರ್ಥಂ ನಿರಯಂ ಗತಾಃ ॥೩೯॥

ಶ್ರೀರಾಮನಾಮಕ್ಕೆ ಸಮವಾಗಿ ಪಾಪಪರಿಹಾರಕವಾದ ಇತರ ಮಂತ್ರವಾಗಲಿ–ನಾಮವಾಗಲಿ–ಯಾವುದೊಂದೂ ಇಲ್ಲ. ಈ ವಿಷಯದಲ್ಲಿ ವಾಲ್ಮೀಕಿಮುನಿಯೇ ನಿದರ್ಶನಭೂತನು ॥

ಎಲೌ ಪಾರ್ವತಿ! ಬ್ರಾಹ್ಮಣ್ಯವನ್ನು ಪಡೆದವರಾಗಿರುವ ವಿಶ್ವಾಮಿತ್ರಾದಿಗಳು, ವೇದಾಭ್ಯಾಸಗಳಿಂದಲೂ–ವೇದೋಕ್ತಕರ್ಮಾನುಷ್ಠಾನಗಳಿಂದಲೂ ನಾನಾವಿಧ ತಪಸ್ಸುಗಳಿಂದಲೂ–ಬಹು ಪ್ರಯಾಸಪಟ್ಟು ಆ ಬ್ರಾಹ್ಮಣ್ಯವನ್ನು ಸಂಪಾದಿಸಿದರಲ್ಲವೆ! ಅಂತಹ ಬ್ರಾಹ್ಮಣ್ಯವನ್ನು, ಅಷ್ಟು ದುಷ್ಟನಾಗಿದ್ದ ಆ ಕಿರಾತನು, ವ್ಯತ್ಯಸ್ತವಾಗಿ ಮಾಡಿದ ರಾಮನಾಮಜಪವೊಂದರಿಂದಲೇ ಪಡೆದನು; ಇವನು ಇದಕ್ಕಾಗಿ ಮತ್ತಾವ ಸಹಾಯವನ್ನೂ ಅಪೇಕ್ಷಿಸಲಿಲ್ಲ ॥೩೪—೩೫॥

ಚಂಡಾಲನನ್ನಾದರೂ, ಪತಿತನನ್ನಾದರೂ, ಮ್ಲೇಚ್ಛನನ್ನಾದರೂ, ಕಿರಾತನನ್ನಾದರೂ, ಮಹಾಪಾಪಿಯನ್ನಾದರೂ, ಶುದ್ಧವಾದ ರಸವು ಲೋಹವನ್ನು ಶುದ್ಧಪಡಿಸುವಂತೆ, ರಾಮನಾಮವೊಂದೇ ಶುದ್ಧಪಡಿಸುವುದು ॥೩೬॥

ಸ್ನಾನ ದಾನ ಜಪ ಹೋಮ ವೇದಾಧ್ಯಯನ ತರ್ಪಣಕಾಲಗಳಲ್ಲಿಯೂ, ಸೀನು ಮುಂತಾದುದು ಒಂದ ಕಾಲದಲ್ಲಿಯೂ, ಏಟು ಮುಂತಾದುದು ಬಿದ್ದಕಾಲದಲ್ಲಿಯೂ, ಶ್ರೀರಾಮನನ್ನೇ ಸರ್ವದಾ ಸ್ಮರಿಸುತ್ತಿರಬೇಕು ॥೩೭॥

'ರಾಮರಾಮ' ಎಂಬ ಸ್ಮರಣೆಯು, ಪಾಪಿಗಳಿಗೆಲ್ಲ ವಿಶೇಷವಾಗಿ ಶರಣವು; ಮುಕ್ತಿಮಾರ್ಗಕ್ಕೆ ಉಪಕರಣವು; ಸಂಸಾರಸಮುದ್ರಕ್ಕೆ ತರಣವು. (ತೆಪ್ಪ) ॥೩೮॥

ಯಮಲೋಕಕ್ಕೆ ಹೋದ ಪಾಪಿಗಳನ್ನು ನೋಡಿ, ಯಮನು 'ಅಯ್ಯೋ ಪಾಪಿಷ್ಠರಾ! ಸುಖವಾಗಿ ಉಚ್ಚರಿಸಲ್ಪಡತಕ್ಕುದೂ ಸುಖವನ್ನು ಕೊಡತಕ್ಕುದೂ ಆದ ಶ್ರೀರಾಮನಾಮವಿರುವಾಗ, ನೀವು ಏಕೆ ನರಕಕ್ಕೆ ಬಂದಿರಿ?' ಎಂದು ಧಿಕ್ಕರಿಸುವನು ॥೩೯॥

ಜಪನ್ತು ಯಾಗಂ ಕುರ್ವನ್ತು ಸರ್ವಕ್ಷೇತ್ರಾಣ್ಯಟನ್ತು ವಾ ।
ಪಠನ್ತು ವೇದಾ೯ ರಾಮಸ್ಯ ನ ಸಿಧ್ಯನ್ತ್ಯಭಿಧಾಂ ವಿನಾ ॥೪೦॥
ನಿರಹಙ್ಕಾರಿಣಃ ಶಾನ್ತಾಃ ನಿರ್ಮಮಾವೀತರಾಗಿಣಃ ।
ದಮ್ಭಹೀನಾಶ್ಚ ಯೇ ರಾಮಂ ವಿದುಸ್ತೇ ಧ್ಯಾನಿತಾಂ ಗತಾಃ ॥೪೧॥
ಜಾತ್ಯಾಶ್ರಮವಯೋವಸ್ಥಾದೇಹಾದಾವತಿಮಾನಿನಾಮ್ ।
ನ ರೋಚತೇ ರಾಮನಾಮ ಘೂಕಸ್ಯೇವಾರ್ಕದರ್ಶನಮ್ ॥೪೨॥
ದುರ್ಲಭಂ ಮಾನುಷಂ ದೇಹಂ ಯಃ ಪಾಪ್ಯಾಪಿ ನ ರಾಘವಮ್ ।
ಸ್ಮರತೇ ತಸ್ಯ ತಜ್ಜನ್ಮ ವೃಥಾ ಸ್ಯಾತ್ ಪಶುಜನ್ಮವತ್ ॥೪೩॥
ವಿಪ್ರೋ ವಾ ನೀಚಯೋನಿರ್ವಾ ನಾರೀ ವಾ ಭಕ್ತಿಭಾವಿತಃ ।
ಯೋ ರಾಮಂ ಸತತಂ ಧ್ಯಾಯೇತ್ ಸ ಧನ್ಯಃ ಪಙ್ಕ್ತಿಪಾವನಃ ॥೪೪॥
ರಾಮನಾಮಪ್ರಭಾವೋ ಹಿ ವರ್ಣಿತೋ ಮೇ ಯಥಾಮತಿ ।
ರಾಮನಾಮಸ್ತುತಿಂ ಕೃತ್ವಾ ತರತ್ಯೇವ ಭವಾಮ್ಬುಧಿಮ್ ॥೪೫॥
ಏವಂಪ್ರಭಾವೋ ವಾಲ್ಮೀಕಿಃ ಶ್ರೀರಾಮೇತ್ಯಸ್ತಭಕ್ತಿಮಾ೯ ।

ಲೋಕದಲ್ಲಿ ಜನರು, ಜಪಮಾಡಲಿ,—ಯಜ್ಞಮಾಡಲಿ,—ಸರ್ವತೀರ್ಥಯಾತ್ರೆಯನ್ನು ಬೇಕಾದರೂ ಮಾಡಲಿ,—ಸಕಲ ವೇದಗಳನ್ನೂ ಪಠಿಸಲಿ. ಆದರೂ, ಶ್ರೀರಾಮನಾಮ ಜಪವಿಲ್ಲದೆ ಅವರಿಗೆ ಸಿದ್ಧಿಯುಂಟಾಗುವುದಿಲ್ಲ ॥೪೦॥

ಯಾರು, ನಿರಹಂಕಾರಿಗಳಾಗಿಯೂ ಶಾಂತರಾಗಿಯೂ ಮಮಕಾರವಿಲ್ಲದವರಾಗಿಯೂ ವೀತರಾಗರಾಗಿಯೂ ದಂಭಹೀನರಾಗಿಯೂ ಇರುವರೋ, ಅವರು ಧ್ಯಾನಾರೂಢರಾಗಿ ಶ್ರೀರಾಮ ಸಾಕ್ಷಾತ್ಕಾರವನ್ನು ಪಡೆಯುವರು ॥೪೧॥

ಜಾತಿ ಆಶ್ರಮ ವಯಸ್ಸು ಅವಸ್ಥೆ ದೇಹ—ಇತ್ಯಾದಿಗಳಲ್ಲಿ ವಿಶೇಷವಾಗಿ ಅಭಿಮಾನವಿಟ್ಟು ಕೊಂಡಿರತಕ್ಕವರಿಗೆ, ಸೂರ್ಯನ ದರ್ಶನವು ಗೂಗೆಗೆ ರುಚಿಸದಂತೆ, ರಾಮನಾಮವು ರುಚಿಸುವುದಿಲ್ಲ ॥೪೨॥

ದುರ್ಲಭವಾದ ಮಾನುಷಜನ್ಮವನ್ನು ಹೊಂದಿಯೂ ಯಾವನು ಶ್ರೀರಾಮನನ್ನು ಸ್ಮರಿಸುವುದಿಲ್ಲವೋ, ಅವನ ಆ ಜನ್ಮವು—ಪಶುತುಲ್ಯವಾಗಿ—ವ್ಯರ್ಥವಾಗುವುದು ॥೪೩॥

ಬ್ರಾಹ್ಮಣನಾಗಲಿ ನೀಚಜಾತಿಯವನಾಗಲಿ ಸ್ತ್ರೀಯಾಗಲಿ ಯಾರು ಭಕ್ತಿಭರಿತರಾಗಿ ಸರ್ವದಾ ರಾಮನನ್ನು ಧ್ಯಾನಿಸುವರೋ, ಅವರೇ ಧನ್ಯರು; ಅವರೇ ಪಂಕ್ತಿಪಾವನರು ॥೪೪॥

ಎಲೌ ಪಾರ್ವತಿ! ಇದೋ ಈರೀತಿಯಾಗಿ ನನಗೆ ಶಕ್ತಿಯಿರುವಮಟ್ಟಿಗೆ ರಾಮನಾಮದ ಮಹಿಮೆಯನ್ನು ವರ್ಣಿಸಿರುವೆನು. ಮುಖ್ಯವಾಗಿ, ರಾಮನಾಮ ಜಪಮಾಡಿದವನು, ಸಂಸಾರ ಸಮುದ್ರವನ್ನು ದಾಟುವೆನೋ ದಾಟುವನು; ಇದರಲ್ಲಿ ಸಂಶಯವಿಲ್ಲ ॥೪೫॥

ಈಗ ಪ್ರತ್ಯಕ್ಷವಾದ ಕಥೆಯನ್ನು ಕೇಳು,— ಇಂತಹ ಮಹಿಮೆಯುಳ್ಳ ವಾಲ್ಮೀಕಿಮುನಿಯು, ಶ್ರೀರಾಮನಲ್ಲಿ ಅತ್ಯಂತ ಭಕ್ತಿಯುಕ್ತನಾಗಿದ್ದನು. ಅದುಕಾರಣದಿಂದಲೇ, ಶ್ರೀರಾ

ತಸ್ಮಾತ್ ತದಾಶ್ರಮೇ ರಾಮಃ ಚಿತ್ರಕೂಟೇ ಮುದಾವಸತ್ ॥೪೬॥
ತಸ್ಮಿನ್ನದ್ರೌ ಸ್ಥಿತೇ ರಾಮೇ ಮುನಯಃ ಪರಮಾತ್ಮನಿ ।
ಯಾನ್ಯಾನ್ಯಾನ್ಯೇಷಂ ರಾಮದರ್ಶನಾರ್ಥಂ ವಧೂಯುತಾಃ ॥೪೭॥
ವಿಶ್ವರೂಪಧರಾ ದೇವೀ ಸೀತಾ ತು ಜನಕಾತ್ಮಜಾ ।
ಪತ್ಯಾಜ್ಞಾಂ ಶಿರಸಾ ಧೃತ್ವಾ ಭಕ್ತ್ಯನ್ನಾರ್ಥಿನಾಂ ದದೌ ॥೪೮॥
ಭುಞ್ಜತೇ ಋಷಯಸ್ತತ್ರ ಮುನಯೋ ಬ್ರಹ್ಮಚಾರಿಣಃ ।
ವಾನಪ್ರಸ್ಥಾ ಗೃಹಸ್ಥಾಶ್ಚ ಯೇ ತತ್ರಾನ್ನಾರ್ಥಿನೋ ದ್ವಿಜಾಃ ॥೪೯॥
ಆಬಾಲವೃದ್ಧಂ ಸರ್ವೇಪಿ ಭುಞ್ಜತೇ ವನವಾಸಿನಃ ।
ಏವಂ ಪ್ರತಿದಿನಂ ಸೀತಾ ಮಾತೇವಾನ್ನಂ ದದೌ ಮುದಾ ॥೫೦॥
ಏವಂ ವಸತಿ ರಾಮೇ ತು ಚಿತ್ರಕೂಟೇ ಮಹಾಗಿರೌ ।
ಕದಾಚಿದಬ್ಭೀ ವೈದೇಹ್ಯಾಃ ನಿದ್ರಾಣೇ ರಘುನನ್ದನೇ ॥೫೧॥
ಐನ್ದ್ರಃ ಕಾಕಃ ಸಮಾಗತ್ಯ ಜಾನಕೇಯಂ ವೀಕ್ಷ್ಯ ಕಾಮುಕಃ ।
ವಿದದಾರ ನಖೈಸ್ತೀಕ್ಷ್ಣೈಃ ಪೀನೋನ್ನತಪಯೋಧರಮ್ ॥೫೨॥
ತಂ ದೃಷ್ಟ್ವಾ ರಾಘವಃ ಕ್ರುದ್ಧಃ ಕುಶಂ ಜಗ್ರಾಹ ಪಾಣಿನಾ ।
ಬ್ರಾಹ್ಮೇಣಾಸ್ತ್ರೇಣ ಸಂಯೋಜ್ಯ ಪ್ರಾಕ್ಷಿಪತ್ ಕಾಮುಕಾತರೇ ॥೫೩॥

ಮನು ವಾಲ್ಮೀಕಿಯ ಆಶ್ರಮವಾದ ಚಿತ್ರಕೂಟದಲ್ಲಿ ಸಂತೋಷದಿಂದ ವಾಸಮಾಡಿಕೊಂಡಿದ್ದನು ॥೪೬॥

ಆ ಪರ್ವತದಲ್ಲಿ ಪರಮಾತ್ಮನಾದ ಶ್ರೀರಾಮನು ವಾಸಮಾಡಿಕೊಂಡಿರಲಾಗಿ, ಸಮಸ್ತ ಮುನಿಗಳೂ ತಮ್ಮ ಪತ್ನಿಯರೊಡಗೂಡಿ ಅವನ ದರ್ಶನಕ್ಕೋಸ್ಕರ ಹೋಗಿಬರುವುದಕ್ಕುಪಕ್ರಮಿಸಿದರು ॥೪೭॥

ಆಗ, ಜನಕಪುತ್ರಿಯಾದ ಸೀತಾದೇವಿಯು, ಪತಿಯ ಆಜ್ಞೆಯನ್ನು ಶಿರಸಾ ವಹಿಸಿ, ವಿಶ್ವರೂಪಧರಳಾಗಿ, ಅನ್ನಾರ್ಥಿಗಳಿಗೆಲ್ಲ ತಾನೊಬ್ಬಳೇ ಅನ್ನವನ್ನು ಕೊಡುತ್ತಿದ್ದಳು ॥೪೮॥

ಅಲ್ಲಿ, ಋಷಿಗಳೂ ಮುನಿಗಳೂ ಬ್ರಹ್ಮಚಾರಿಗಳೂ ವಾನಪ್ರಸ್ಥರೂ ಗೃಹಸ್ಥರೂ-ಅನಾರ್ಥಿಗಳಾದ ಸಮಸ್ತ ಬ್ರಾಹ್ಮಣರೂ-ಭೋಜನಮಾಡುತಿದ್ದರು ॥೪೯॥

ಆ ಅರಣ್ಯದಲ್ಲಿದ್ದ ಅಬಾಲವೃದ್ಧರೆಲ್ಲರೂ ಅಲ್ಲಿ ಊಟಮಾಡುತಿದ್ದರು. ಈರೀತಿಯಾಗಿ ಸೀತೆಯು ಪ್ರತಿದಿನವೂ ಸಮಸ್ತರಿಗೂ ತಾಯಿಯಂತೆ ಅನ್ನವನ್ನಿಕ್ಕುತಿದ್ದಳು ॥೫೦॥

ಹೀಗೆ ಚಿತ್ರಕೂಟಪರ್ವತದಲ್ಲಿ ವಾಸಮಾಡಿಕೊಂಡಿರುವ ಶ್ರೀರಾಮನು-ಒಂದಾನೊಂದು ಸಮಯದಲ್ಲಿ ಸೀತೆಯು ತೊಡೆಯಮೇಲೆ ತಲೆಯನ್ನಿಟ್ಟುಕೊಂಡು ನಿದ್ರೆಮಾಡುತ್ತಿರಲಾಗಿ, ಇಂದ್ರಪುತ್ರನಾದ ಕಾಕಾಸುರನು ಅಲ್ಲಿಗೆ ಬಂದು, ಸೀತೆಯನ್ನು ನೋಡಿ ಅವಳಲ್ಲಿ ಕಾಮುಕನಾಗಿ, ತನ್ನ ತೀಕ್ಷ್ಣವಾದ ಉಗುರುಗಳಿಂದ ಅವಳ ಸ್ತನವನ್ನು ಕುಕ್ಕಿದನು ॥೫೧—೫೨॥

ಇದನ್ನು ನೋಡಿ ಕ್ರೋಧಾವಿಷ್ಟನಾದ ಶ್ರೀರಾಮನು, ಕೈಯಲ್ಲಿ ಒಂದು ದರ್ಭೆಯನ್ನು ತೆಗೆದುಕೊಂಡನು. ಆದರಲ್ಲಿ ಬ್ರಾಹ್ಮಾಸ್ತ್ರವನ್ನಭಿಮಂತ್ರಿಸಿ, ಕಾಮಲಂಪಟನಾದ ಆ ಕಾಕಾಸುರನಮೇಲೆ ಬಿಟ್ಟನು ॥೫೩॥

ತತ್ ತೃಣಂ ಘೋರಸಙ್ಕಾಶಂ ಜ್ವಲತ್ ಕಾಲಾನಲೋಪಮಮ್ ।
ದೃಷ್ಟ್ವಾ ಕಾಕಃ ಪ್ರದುದ್ರಾವ ನಿನರ್ದ ದಾರುಣಸ್ವನಮ್ ॥೫೪॥
ತಂ ಕಾಕಂ ಪ್ರತ್ಯಸುಯಯೌ ಶ್ರೀರಾಮಾಸ್ತ್ರಂ ಸುದಾರುಣಮ್ ।
ವಾಯಸಸ್ತ್ರಸ್ತ ಲೋಕೇಷು ಬಭ್ರಾಮ ಭಯಪೀಡಿತಃ ॥೫೫॥
ಯತ್ರಯತ್ರ ಯಯೌನೈನ್ದ್ರಃ ಶರಣಾರ್ಥೀ ಸ ವಾಯಸಃ ।
ತತ್ರತತ್ರ ತದಸ್ತ್ರಂ ತು ಪ್ರವಿವೇಶ ಭಯಾನಹಮ್ ॥೫೬॥
ವಿಷ್ಣುಂ ಬ್ರಹ್ಮಾಣಮಿನ್ದ್ರಂ ಮಾಂ ಶರಣಾರ್ಥೀ ಸ ವಾಯಸಃ ।
ಜಗಾಮ ಶರಣಂ ಭೀತಃ ಕ್ರಮಾದನ್ಯಾಶ್ಚ ದೇವತಾಃ ॥೫೭॥
ತಂ ದೃಷ್ಟ್ವಾ ವಾಯಸಂ ಭೀತಂ ದೇವತಾಸ್ತ್ವಸ್ಮದಾದಯಃ ।
ನ ಶಕ್ತಾಃ ಸ್ಮೋ ವಯಂ ತ್ರಾತುಂ ರಾಘವಾಸ್ತ್ರಾದ್ಭಯಙ್ಕರಾತ್ ।
ಇತಿ ಬ್ರುವಾಮಹೇ ದೇವಿ ಹ್ಯನ್ಯಥಾಸ್ತ್ರಂ ದಹೇಚ್ಚ ನಃ ॥೫೮॥
ಪುನಶ್ಚ ಗಾದ್ವಿಧಿಂ ಕಾಕೋ ದಯಯಾ ವಿಧಿರಾಹ ತಮ್ ।
ಭೋಭೋ ಬಲಿಭುಜಾಂ ಶ್ರೇಷ್ಠ ತಮೇವ ಶರಣಂ ವ್ರಜ ॥೫೯॥
ಸಏವ ರಕ್ಷಕಃ ಶ್ರೀಶಃ ಶರಣಾಗತವತ್ಸಲಃ ॥೬೦॥
ದಯಾಳುಂ ಜಾನಕೀನಾಥಂ ಪ್ರಪನ್ನಭಯನಾಶನಮ್ ।
ಶರಣಂ ವ್ರಜ ತಂ ರಾಮಂ ನಾನ್ಯಚ್ಛರಣಮಸ್ತಿ ತೇ ॥೬೧॥

ಅತಿಘೋರವಾಗಿ ಪ್ರಳಯಕಾಲಾಗ್ನಿಯಂತೆ ಪ್ರಜ್ವಲಿಸುತಿರುವ ಆ ತೃಣವನ್ನು ನೋಡಿ, ಆ ಕಾಕಾಸುರನು, ಅತಿದಾರುಣವಾಗಿ ಧ್ವನಿಮಾಡುತ ಓಡಿಹೋದನು ॥೫೪॥

ಆಗ ಆ ಕಾಗೆಯನ್ನು ಬೆನ್ನಟ್ಟಿಕೊಂಡು, ಅತಿಘೋರವಾದ ರಾಮಾಸ್ತ್ರವು ಓಡಿಹೋಯಿತು. ಆ ಕಾಗೆಯು ಭಯಗ್ರಸ್ತವಾಗಿ ಮೂರುಲೋಕದಲ್ಲಿಯೂ ಭ್ರಮಿಸಿತು ॥೫೫॥

ಆಯಿಂದ್ರಪುತ್ರನಾದ ವಾಯಸನು, ಶರಣಾರ್ಥಿಯಾಗಿ ಎಲ್ಲೆಲ್ಲಿ ಹೋದನೋ, ಅಲ್ಲಲ್ಲೆಲ್ಲ-ಅತಿಭಯಂಕರವಾಗಿರುವ ಆ ರಾಮಾಸ್ತ್ರವು ಪ್ರವೇಶಿಸಿತು ॥೫೬॥

ಆಗ ಭಯಪೀಡಿತನಾದ ಆ ಕಾಕನು, ಶರಣಾರ್ಥಿಯಾಗಿ, ವಿಷ್ಣುವನ್ನೂ ಬ್ರಹ್ಮನನ್ನೂ ಇಂದ್ರನನ್ನೂ ನನ್ನನ್ನೂ(ಶಿವ)ಕ್ರಮೇಣ ಇತರದೇವತೆಗಳನ್ನೂ ಶರಣಹೊಂದಿದನು ॥೫೭॥

ಎಲೌ ಪಾರ್ವತಿ! ಆಗ ಹೀಗೆ ಭಯಗ್ರಸ್ತನಾಗಿರುವ ವಾಯಸನನ್ನು ನೋಡಿ, ನಾನೇ ಮೊದಲಾದ ಸಮಸ್ತ ದೇವತೆಗಳೂ 'ಅತಿಭಯಂಕರವಾದ ಈ ರಾಮಾಸ್ತ್ರದಿಂದ ಕಾಪಾಡಲು ನಾವು ಶಕ್ತರಾಗಿಲ್ಲ' ಎಂದು ಹೇಳಿಬಿಟ್ಟೆವು. ಇಲ್ಲದಿದ್ದರೆ, ಆ ಅಸ್ತ್ರವು ನಮ್ಮನ್ನೇ ಸುಟ್ಟೆಬಿಡುತಿದ್ದಿತು ॥೫೮॥

ಆಗ ಕಾಕಾಸುರನು ಪುನಃ ಬ್ರಹ್ಮನಿಗೆ ಶರಣಾಗತನಾದನು. ಆಗ ಆ ಬ್ರಹ್ಮನು, ಅವನಲ್ಲಿ ದಯೆಯಿಟ್ಟು 'ಎಲೈ ಕಾಕನೆ! ನೀನು ಆ ಶ್ರೀರಾಮನನ್ನೇ ಶರಣಹೊಂದುವನಾಗು. ಶರಣಾಗತವತ್ಸಲನಾದ ಆ ಲಕ್ಷ್ಮೀಪತಿಯೇ ನಿನಗೆ ಈಗ ರಕ್ಷಕನು. ದಯಾನಿಧಿಯೂ ಪ್ರಪನ್ನಭಯನಾಶಕನೂ ಸೀತಾಕಾಂತನೂ ಆದ ಶ್ರೀರಾಮನನ್ನೇ ನೀನು ಮರೆಹೊಗುವನಾಗು; ನಿನಗೆ ಮತ್ತೊಂದು ಶರಣವಿಲ್ಲ' ಎಂದು ಹೇಳಿದನು ॥೫೯-೬೧॥

ಇತ್ಯುಕ್ತಃ ಸೋಥ ಬಲಿಭುಕ್ ಬ್ರಹ್ಮಾಣಂ ರಘುನನ್ದನಮ್ ।
ಉಪೇತ್ಯ ಸಹಸಾ ಭೂಮೌ ನಿಪಪಾತ ಭಯಾತುರಃ ॥೨೦॥
ಪಲಾಯಿತವಧಂ ಕೃತ್ವಾ ಯಶೋನಾಶೋ ಭವೇದಿತಿ ।
ತಮುಹತ್ಯೈವಾನುಯಾತೋ ರಾಮಂ ಬಾಣೋಪ್ಯಗಾತ್ ಪುನಃ ॥೨೧॥
ಪ್ರಾಣಸಂಶಯಮಾಪನ್ನಂ ದೃಷ್ಟ್ವಾ ಸೀತಾ ತು ವಾಯಸಮ್ ।
ತ್ರಾಹಿತ್ರಾಹೀತಿ ಭರ್ತಾರಂ ಉವಾಚ ದಯಯಾ ವಿಭುಮ್ ॥೨೨॥
ತಥಾಪಿ ರಾಮೋ ದುರ್ವೃತ್ತಂ ಕಾಙ್ಕ್ಷನ್ತಂ ದ್ರೋಹಕಾರಿಣಮ್ ।
ದಯಾಪರೋಪಿ ತಂ ವೀಕ್ಷ್ಯ ಹ್ಯುದಾಸೀನ್ಯೇನ ವರ್ತತೇ ॥೨೩॥
ಉದಾಸೀನಂ ಪತಿಂ ದೃಷ್ಟ್ವಾ ಕಾಕಂ ಚ ಭಯವಿಪ್ಲವಮ್ ।
ತಜ್ಜೈರಃ ಪಾದಯೋಸ್ತಸ್ಯ ಯೋಜಯಾಮಾಸ ಜಾನಕೀ ॥೨೪॥
ತಮುತ್ಥಾಪ್ಯ ಕರೇಣಾಥ ಕೃಪಯಾ ರಘುನನ್ದನಃ ।
ರರಕ್ಷಾಸೌ ನಿಜಾಸ್ತ್ರೇಣ ತದೇಕಾಕ್ಷಿ ದದೌ ನೃಪಃ ॥೨೫॥
ವಾಯಸೋಪಿ ಪುನರ್ನತ್ವಾ ಸೀತಾಯೈ ರಾಘವಾಯ ಚ ।
ಸ್ವಲೋಕಂ ಪ್ರಯಯೌ ಹೃಷ್ಟೋ ರಾಘವೇಣಾಭಿಪಾಲಿತಃ ॥೨೬॥

ಅನಂತರ, ಬ್ರಹ್ಮನಿಂದ ಹೀಗೆ ಹೇಳಲ್ಪಟ್ಟ ಆ ವಾಯಸನು, ಶ್ರೀರಾಮನ ಸನ್ನಿಧಿಗೆ ಬಂದು, ಭಯಾತುರನಾಗಿ ತಟ್ಟನೆ ಭೂಮಿಯಮೇಲೆ ಬಿದ್ದನು ॥೨೦॥

ಶ್ರೀರಾಮನ ಬಾಣವೂ ಕೂಡ, ಪಲಾಯಿತ (ಓಡಿಹೋದವನು) ವಧವನ್ನು ಮಾಡಿದರೆ ಕೀರ್ತಿಹಾನಿಯಾಗುವುದೆಂದು ಯೋಚಿಸಿ, ಅವನನ್ನು ಹೊಡೆಯದೆಯೇ, ಅವನ ಹಿಂದುಗಡೆಯೇ ಪುನಃ ಬಂದು ಸೇರಿತು ॥೨೧॥

ಆಗ ಸೀತಾದೇವಿಯು, ಪ್ರಾಣಸಂಶಯಕ್ಕೊಳಪಟ್ಟಿರುವ ಕಾಕಾಸುರನನ್ನು ನೋಡಿ, ದಯೆಯಿಂದ, ಸರ್ವಲೋಕವಿಭುವಾದ ತನ್ನ ಪತಿಯನ್ನು ಕುರಿತು 'ಸ್ವಾವಿಾ! ತ್ರಾಹಿ ತ್ರಾಹಿ' ಎಂದು ಪ್ರಾರ್ಥಿಸಿದಳು ॥೨೨॥

ಆದರೂಕೂಡ, ಶ್ರೀರಾಮನು, ಮಹಾದಯಾನಿಧಿಯಾಗಿದ್ದರೂ, ಪತ್ನೀದ್ರೋಹಕಾರಿಯಾದ ದುರ್ವೃತ್ತನಾದ ಅವನನ್ನು ನೋಡುತ, ಉದಾಸೀನನಾಗಿಯೇ ಇದ್ದನು ॥೨೩॥

ಹೀಗೆ ತನ್ನ ಪತಿಯು ಉದಾಸೀನನಾಗಿರುವುದನ್ನೂ, ಕಾಕನು ಭಯದಿಂದ ನಡುಗುತಿರುವುದನ್ನೂ ಕಂಡು, ಸೀತಾದೇವಿಯು, ತನ್ನ ಕೈಯಿಂದ ಆ ಕಾಗೆಯ ತಲೆಯನ್ನು ಹಿಡಿದು ಕೊಂಡು ರಾಮನ ಪಾದದಮೇಲೆ ಇರಿಸಿದಳು ॥೨೪॥

ಅನಂತರ, ಶ್ರೀರಾಮನು ಕೃಪೆಯಿಂದ ಅವನನ್ನು ಎಬ್ಬಿಸಿ, ಅವನನ್ನು ರಕ್ಷಿಸಿದನು; ತನ್ನ ಅಸ್ತ್ರಕ್ಕೆ ಅವನ ಒಂದು ಕಣ್ಣನ್ನು ಆಹಾರವಾಗಿ ಕೊಟ್ಟುಬಿಟ್ಟನು ॥೨೫॥

ಆ ವಾಯಸನು, ಮತ್ತೆ ಸೀತೆಗೂ ರಾಮನಿಗೂ ನಮಸ್ಕಾರಮಾಡಿ, ರಾಮನಿಂದ ರಕ್ಷಿತನಾಗಿ, ಸಂತೋಷದಿಂದ ಸ್ವರ್ಗಲೋಕಕ್ಕೆ ಹೊರಟುಹೋದನು ॥೨೬॥

ತತೋ ರಾಮೋ ಮಹಾತೇಜಾಃ ವೈದೇಹ್ಯಾ ಲಕ್ಷ್ಮಣೇನ ಚ ।
ಉವಾಸ ಚಿತ್ರಕೂಟಾದ್ರೌ ಸೂಯಮಾನೋ ಮಹರ್ಷಿಭಿಃ ॥೬೯॥
ಏತಸ್ಮಿನ್ನೇವ ಸಮಯೇ ನಾರದೋ ಮುನಿಸತ್ತಮಃ ।
ರಾಮಾಶ್ರಮಮಗಾದ್ದ್ರಷ್ಟುಂ ಬ್ರಹ್ಮಣಾ ಪ್ರೇಷಿತಸ್ತದಾ ॥೭೦॥
ಮುನಿಮಾಗತಮಾಜ್ಞಾಯ ರಾಮೋ ಧರ್ಮಭೃತಾಂ ವರಃ ।
ಪ್ರತ್ಯುತ್ಥಾನಾಭಿವಾದಾಭ್ಯಾಂ ಪೂಜಯಾಮಾಸ ರಾಘವಃ ॥೭೧॥
ಪೂಜಿತಸ್ತೇನ ಸ ಮುನಿಃ ಸ್ತುತ್ವಾ ತಂ ರಘುನನ್ದನಮ್ ।
ಕಾರ್ಯಂ ವಿಜ್ಞಾಪಯಾಮಾಸ ಬ್ರಹ್ಮಣಾ ಪ್ರೇಷಿತಂ ಯಥಾ ॥೭೨॥
ಅವತೀರ್ಣೋಽಸಿ ಲೋಕಾನಾಂ ಹಿತಾಯ ರಘುನನ್ದನ ।
ದೈತ್ಯದಾನವನಾಶಾಯ ದೇವವಿಪ್ರದ್ರುಹಾಮಿತಿ ॥೭೩॥
ಜಗದ್ಭಾರವಿನಾಶಾಯ ಸಾಧೂನಾಂ ರಕ್ಷಣಾಯ ಚ ।
ಕರ್ತವ್ಯಂ ತೇ ಮಹತ್ ಕಾರ್ಯಂ ಯದರ್ಥೇ ವರ್ತತೇನಘ ॥೭೪॥
ರಾಜ್ಯಾಭಿಷೇಕೋ ದಿವಿಜೈಃ ವಿಹತೋ ಯನ್ನಿಮಿತ್ತತಃ ।
ತ್ವಯಾ ಕಾರ್ಯೋ ಮಹಾಕಾರ್ಯೋ ನಾನ್ಯಃ ಶಕ್ತಿಧರೋ ಭವೇತ್ ॥೭೫॥

ಅನಂತರ, ಮಹಾತೇಜಸ್ವಿಯಾದ ಶ್ರೀರಾಮನು, ಮಹರ್ಷಿಗಳಿಂದ ಸ್ತುತಿಸಲ್ಪಡುತ, ಸೀತಾಲಕ್ಷ್ಮಣಯುಕ್ತನಾಗಿ ಚಿತ್ರಕೂಟದಲ್ಲಿ ವಾಸವಾಡಿಕೊಂಡಿದ್ದನು ॥೬೯॥

ಈ ಸಮಯದಲ್ಲಿಯೇ, ನಾರದಮಹರ್ಷಿಯು, ಬ್ರಹ್ಮನಿಂದ ಕಳುಹಿಸಲ್ಪಟ್ಟವನಾಗಿ, ಶ್ರೀ ರಾಮನನ್ನು ನೋಡುವುದಕ್ಕಾಗಿ ಅವನ ಆಶ್ರಮಕ್ಕೆ ಬಂದನು ॥೭೦॥

ಆಗ ನಾರದಮುನಿ ಬಂದುದನ್ನು ಕಂಡು, ಧರ್ಮಿಷ್ಠರಲ್ಲಿ ವರಿಷ್ಠನಾದ ಶ್ರೀರಾಮನು, ಪ್ರತ್ಯುತ್ಥಾನಾಭಿವಾದನಗಳಿಂದ ಅವನನ್ನು ಪೂಜಿಸಿದನು ॥೭೧॥

ಅವನಿಂದ ಪೂಜಿತನಾದ ನಾರದಮಹರ್ಷಿಯು, ಆ ರಾಘವನನ್ನು ಸ್ತುತಿಸಿ, ಬ್ರಹ್ಮನು ತನ್ನನ್ನು ಕಳುಹಿಸಿರುವ ಕಾರ್ಯವನ್ನು ಹೀಗೆ ವಿಜ್ಞಾಪಿಸಿದನು ॥೭೨॥

ಹೇ ರಘುನಂದನ! ನೀನು, ಲೋಕಹಿತಾರ್ಥವಾಗಿಯೂ, ದೈತ್ಯದಾನವರನ್ನೂ ದೇವ ಬ್ರಾಹ್ಮಣದ್ರೋಹಿಗಳನ್ನೂ ಕೊಲ್ಲುವುದಕ್ಕಾಗಿಯೂ ಅವತರಿಸಿರುವೆ ॥೭೩॥

ಜಗತ್ತಿನ ಭಾರವನ್ನು ಇಳುಹುವುದಕ್ಕಾಗಿಯೂ, ಸಾಧುಗಳನ್ನು ರಕ್ಷಿಸುವುದಕ್ಕಾಗಿಯೂ, ನೀನು ಮುಂದೆ ಬಲುದೊಡ್ಡ ಕೆಲಸವನ್ನು ಮಾಡಬೇಕಾಗಿರುವುದು ॥೭೪॥

ದೇವತೆಗಳು ಯಾವುದಕ್ಕೋಸ್ಕರವಾಗಿ ನಿನ್ನ ರಾಜ್ಯಾಭಿಷೇಕಕ್ಕೆ ವಿಘ್ನ ಮಾಡಿದರೋ, ಆ ಕೆಲಸವು ನಿನ್ನೊಬ್ಬನಿಂದಲೇ ಸಾಧ್ಯವಾಗಿರುವುದು. ಅಂತಹ ಮಹಾಕಾರ್ಯವನ್ನು ಮಾಡಲು, ನಿನ್ನನ್ನು ಬಿಟ್ಟರೆ ಮತ್ತೊಬ್ಬನು ಶಕ್ತನಾಗಲಾರನು. (ಎಂದು ನಾರದಮುನಿಯು ವಿಜ್ಞಾಪಿಸಿದನು) ॥೭೫॥

ಶ್ರೀರಾಮಉವಾಚ.

ಸರ್ವಂ ಜಾನಾಮಿ ದೇವರ್ಷೇ ಭೂತಂ ಭವ್ಯಂ ಭವಚ್ಚ ಯತ್ ।
ಶ್ವಸ್ತು ಗತ್ವಾ ವಮಹಾರಣ್ಯಂ ಭೂಭಾರಂ ನಾಶಯಾಮ್ಯಹಮ್ ॥೨೬॥

ಏವಮುಕ್ತೋ ರಾಘುವೇಣ ಚಿತ್ರಕೂಟನಿವಾಸಿನಾ ।
ನಾರದೋ ದೇವಕಾರ್ಯಾರ್ಥೀ ತಸ್ಥೌವಾನ್ತರಧೀಯತ ॥೨೭॥

ದೃಷ್ಟ್ವಾಥ ಜನಸಮ್ಬಾಧಂ ರಾಮಸ್ತತ್ಯಾಜ ತಂ ಗಿರಿಮ್ ।
ಅನ್ವಗಾತ್ ಸೀತಯಾ ಭ್ರಾತ್ರಾ ಹ್ಯತ್ರೇರಾಶ್ರಮಮುತ್ತಮಮ್ ॥೨೮॥

ಇತಿ ಶ್ರೀಮದಯೋಧ್ಯಾಕಾಣ್ಡೇ ವಾಲ್ಮೀಕಿಸ್ತುತಿ ಕಾಕೋಪಾಖ್ಯಾನ
ನಾರದಾಗಮನಾದಿ ಕಥನಂ ನಾಮ ತ್ರಿಂಶಃ ಸರ್ಗಃ.



ಇದನ್ನು ಕೇಳಿ ಶ್ರೀರಾಮನು ಉತ್ತರಹೇಳುವನು:—

ಅಯ್ಯಾ! ದೇವರ್ಷಿಯೇ! ಭೂತಭವಿಷ್ಯದ್ವರ್ತಮಾನಗಳನ್ನೆಲ್ಲ ನಾನು ಬಲ್ಲೆನು. ನಾನು ನಾಳೆಯೇ ದಂಡಕಾರಣ್ಯವನ್ನು ಪ್ರವೇಶಿಸಿ, ಭೂಭಾರವನ್ನು ನಾಶಪಡಿಸುವೆನು ॥೨೬॥

ಹೀಗೆಂದು ಚಿತ್ರಕೂಟನಿವಾಸಿಯಾದ ಶ್ರೀರಾಮನಿಂದ ಹೇಳಲ್ಪಟ್ಟ ನಾರದಮುನಿಯು ದೇವಕಾರ್ಯಾರ್ಥಿಯಾಗಿ ಅಲ್ಲಿಯೇ ಅಂತರ್ಧಾನಹೊಂದಿದನು ॥೨೭॥

ಅನಂತರ, ಶ್ರೀರಾಮನು ಅಲ್ಲಿ ಜನಸಮ್ಮರ್ದ ಹೆಚ್ಚಿದುದನ್ನು ಕಂಡು, ಸೀತಾಲಕ್ಷ್ಮಣರೊಡಗೂಡಿ ಅಲ್ಲಿಂದ ಹೊರಟು, ಅತ್ಯುತ್ತಮವಾದ ಅತ್ರಿಮುನಿಯ ಆಶ್ರಮಕ್ಕೆ ಹೋದನು ॥೨೮॥

ಇದು ಅಯೋಧ್ಯಾಕಾಂಡದಲ್ಲಿ ವಾಲ್ಮೀಕಿಸ್ತುತಿಕಾಕೋಪಾಖ್ಯಾನ
ನಾರದಾಗಮನಾದಿಕಥನವೆಂಬ
ಮುವ್ವತ್ತನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ಏಕತ್ರಿಂಶಃ ಸರ್ಗಃ.

ಶ್ರೀ ಶಿವ ಉವಾಚ.

ಸ್ವಾಶ್ರಮಂ ಸಮುಪಾಯಾನ್ತಂ ರಾಮಂ ಶ್ರುತ್ವಾತ್ರಿರಾದರಾತ್ ।
ಪಾದ್ಯಮರ್ಘ್ಯಂ ಚ ಸಂಗೃಹ್ಯ ರಾಮಸ್ಯಾಭಿಮುಖೋ ಯಯೌ ॥೧॥

ದೃಷ್ಟ್ವಾಯಾನ್ತಂ ಮುನಿಂ ದೂರಾತ್ ರಾಮಃ ಕಮಲಲೋಚನಃ ।
ನಮಶ್ಚಕಾರ ಧರ್ಮಾತ್ಮಾ ರಾಮೋಹಮಿತಿ ಕೀರ್ತಯನ್ ॥೨॥

ಸ್ವಸ್ತೀತ್ಯುಕ್ತ್ವಾ ಮುನಿರಪಿ ನಮೋಜ್ಜೀಕೃತ್ಯ ಚ ದ್ವಯೋಃ ।
ಸೌಭಾಗ್ಯಮುಕ್ತ್ವಾ ಸೀತಾಯೈ ಮಹಾಭಕ್ತಿಪುರಸ್ಸರಮ್ ।
ರಾಮಪಾದಕ್ಷಾಳನಾರ್ಥಂ ಮುನಿಃ ಪ್ರಯತತೇನಘಃ ॥೩॥

ತಥಾವಿಧಂ ಮುನಿಂ ದೃಷ್ಟ್ವಾ ರಾಘವೋ ವಾಕ್ಯಮಬ್ರವೀತ್ ॥೪॥

ತ್ವಯಾ ದತ್ತಂ ಸ್ವಸ್ತಿವಾಕ್ಯಂ ಅಲಂ ನೋ ಮುನಿಪುಙ್ಗವ ।
ಉಚಿತಂ ಕರ್ಮ ಕರ್ತವ್ಯಂ ಬ್ರಾಹ್ಮಣೈಃ ಕ್ಷತ್ರಿಯಾವಯಮ್ ॥೫॥

ಅಯೋಧ್ಯಾಕಾಂಡದಲ್ಲಿ ಮುವ್ವತ್ತೊಂದನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು:—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಶ್ರೀರಾಮನು ಅತ್ರಿಮುನಿಯು ಆಶ್ರಮಕ್ಕೆ ಹೋಗಲಾಗಿ, ಆಗ ತನ್ನ ಆಶ್ರಮಕ್ಕೆ ಶ್ರೀರಾಮನು ಬರುತಿರುವುದನ್ನು ಕೇಳಿ, ಅತ್ರಿಮಹರ್ಷಿಯು, ಆದರದಿಂದ ಪಾದ್ಯವನ್ನೂ ಅರ್ಘ್ಯವನ್ನೂ ತೆಗೆದುಕೊಂಡು ರಾಮನಿಗೆ ಅಭಿಮುಖನಾಗಿ ಹೋದನು ॥೧॥

ಆಗ ದೂರದಲ್ಲಿ ಬರುತಿರುವ ಅತ್ರಿಮಹರ್ಷಿಯನ್ನು ಕಂಡು, ಕಮಲನೇತ್ರನಾದ ಧರ್ಮಾತ್ಮನಾದ ರಾಮನು ' ರಾಮೋಹಮಭಿವಾದಯೇ ' ಎಂದು ಹೇಳಿಕೊಂಡು ನಮಸ್ಕರಿಸಿದನು॥೨॥

ಅನಂತರ, ಮಹಾತ್ಮನಾದ ಅತ್ರಿಮುನಿಯು, ಆ ರಾಮಲಕ್ಷ್ಮಣರ ನಮಸ್ಕಾರವನ್ನು ಸ್ವೀಕರಿಸಿ, ಅವರಿಗೆ ಸ್ವಸ್ತಿವಾಚನವನ್ನು ಮಾಡಿ, ಸೀತೆಗೆ ಸೌಭಾಗ್ಯವೃದ್ಧಿಯಾಗುವಂತೆ ಆಶೀರ್ವದಿಸಿ, ಭಕ್ತಿಪೂರ್ವಕವಾಗಿ ರಾಮನ ಪಾದಪ್ರಕ್ಷಾಳನೆಗೋಸ್ಕರ ಪ್ರಯತ್ನಪಟ್ಟನು ॥೩॥

ಹೀಗೆ ಅತ್ರಿಮುನಿಯು ತನ್ನ ಕಾಲುತೊಳೆಯುವುದಕ್ಕೆ ಬರುತ್ತಿರುವುದನ್ನು ಕಂಡು, ಶ್ರೀರಾಮನು ' ಎಲೈ ಮುನಿಶ್ರೇಷ್ಠನೆ! ನೀನು ನಮಗೆ ಮಾಡಿದ ಆಶೀರ್ವಾದವೇ ಸಾಕಾಗಿರುವುದು. ನಾವು ಕ್ಷತ್ರಿಯರು. ಬ್ರಾಹ್ಮಣರಾದ ನೀವು, ಕ್ಷತ್ರಿಯರಾದ ನಮಗೆ ಉಚಿತವಾಗಿರುವ ಕರ್ಮವನ್ನು ಮಾಡದೇಕು ' ಎಂದು ಹೇಳಿದನು ॥೪—೫॥

ಅತ್ರಿರುವಾಚ.

ಜಾನೀಮಃ ಕ್ಷತ್ರಿಯಾನ್ ಸರ್ವಾನ್ ಸೋದರಂಭರಿಕಾನಪಿ ।
ರಾಜಶಬ್ದೋದ್ಧತಮದಾನ್ ಕರ್ತವ್ಯೇಷ್ವವಿಹಿಂಸಕಾನ್ ॥೬॥
ತ್ವಂ ಕಾರಣಶರೀರೋಽಸಿ ಪರಮಾತ್ಮಾಸಿ ರಾಘವ ।
ಸರ್ವದೇವಮಯಃ ಶ್ರೀಮಾನ್ ಸರ್ವಲೋಕನಮಸ್ಕೃತಃ ॥೭॥
ರಮಂತೇ ಯೋಗಿನೋ ಯಸ್ಮಿನ್ ಪರಾನಂದೇ ಚಿದಾತ್ಮನಿ ।
ಇತಿ ರಾಮಪದೇನ ತ್ವಂ ಪರಬ್ರಹ್ಮಾಭಿಧೀಯಸೇ ॥೮॥
ಸಾಕ್ಷಾತ್ಕಾರಸ್ತು ತೇ ನೃಣಾಂ ದುರ್ಲಭೋ ಯಮಿನಾಮಪಿ ।
ತವ ಪಾದಾರ್ಚನಾದ್ಯಾಮಃ ಕೃತಾರ್ಥಾವಯಮೀಶ್ವರ ॥೯॥
ಇತ್ಯುಕ್ತ್ವಾ ಕ್ಷಾಳಯಾಮಾಸ ಪಾದೌ ಪಾತ್ರಾಂತರೇ ಮುನಿಃ ।
ಅನಸೂಯಾಪ್ರದತ್ತೇನ ವಾರಿಣಾ ಶ್ರಮಹಾರಿಣಾ ॥೧೦॥
ತತ್ತೀರ್ಥಂ ಪಾಣಿನಾ ಪೀತ್ವಾ ಪ್ರೋಕ್ಷ್ಯಾತ್ಮಾನಂ ಸ್ತ್ರಿಯಂ ಸ್ವಕಾಂ ।
ಮೇನೇ ಕೃತಾರ್ಥಮಾತ್ಮಾನಂ ರಾಮಪಾದಾಭಿಷೇಚನಾತ್ ॥೧೧॥

ಇದನ್ನು ಕೇಳಿ ಅತ್ರಿಮುನಿಯು ಹೇಳುವನು: —

ಅಯ್ಯಾ! ಮಹಾನುಭಾವನೆ! ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುವ ಕ್ಷತ್ರಿಯರನ್ನೆಲ್ಲ ನಾವು ಬಲ್ಲೆವು. ಅವರು, ದೊರೆಯೆಂಬ ಹೆಸರಿನಿಂದಲೇ ಗರ್ವಪಡುತ, ಕರ್ತವ್ಯಪರಾಙ್ಮುಖರಾಗಿರುವರು ॥೬॥

ಹೇ ರಾಘವ! ನೀನು ಕಾರಣಶರೀರನಾಗಿರುವೆ; ಪರಮಾತ್ಮನಾಗಿರುವೆ; ಸರ್ವದೇವಮಯನೂ, ಮಹಾಕಾಂತಿಸಂಪನ್ನನೂ, ಸರ್ವಲೋಕನಮಸ್ಕೃತನೂ ಆಗಿರುವೆ ॥೭॥

'ಪರಾನಂದಚಿದಾತ್ಮನಾದ ಯಾವನಲ್ಲಿ ಯೋಗಿಗಳು ಸರ್ವದಾ ರಮಿಸುವರೋ, ಅವನೇ ರಾಮನು' ಎಂಬ ವ್ಯುತ್ಪತ್ತಿಯನ್ನನುಸರಿಸಿ, ರಾಮನೆಂಬ ಶಬ್ದದಿಂದ, ಪರಬ್ರಹ್ಮನಾದ ನೀನು ಹೇಳಲ್ಪಡುವೆ ॥೮॥

ಅಯ್ಯಾ! ರಾಮ! ಯೋಗನಿಷ್ಠರಾದ ಮಹರ್ಷಿಗಳಿಗೂ ಕೂಡ ನಿನ್ನ ಸಾಕ್ಷಾತ್ಕಾರವು ದುರ್ಲಭವು. ಹೀಗಿರುವುದರಿಂದ, ಹೇ ಪರಮೇಶ್ವರ! ನಿನ್ನ ಪಾದಪೂಜನದಿಂದ ನಾವು ಈಗ ಕೃತಕೃತ್ಯರಾದೆವು. (ಎಂದು ಅತ್ರಿಮುನಿಯು ಹೇಳಿದನು) ॥೯॥

ಹೀಗೆ ಹೇಳಿ, ಅತ್ರಿಮುನಿಯು, ರಾಮನ ಪಾದಗಳನ್ನು ಒಂದು ಪಾತ್ರೆಯೊಳಗಿಟ್ಟು, ಅನಸೂಯೆಯಿಂದ ಸಮರ್ಪಿಸಲ್ಪಟ್ಟ ಶ್ರಮಹರವಾದ ಜಲದಿಂದ ಪಾದಪ್ರಕ್ಷಾಳನೆಮಾಡಿದನು ॥

ಆ ತೀರ್ಥವನ್ನು ಹಸ್ತದಿಂದ ಪ್ರಾಶನಮಾಡಿ, ತನ್ನ ಮೇಲೂ ಅನಸೂಯೆಯ ಮೇಲೂ ತನ್ನ ಶಿಷ್ಯರ ಮೇಲೂ ಪ್ರೋಕ್ಷಿಸಿ, ರಾಮಪಾದಪ್ರಕ್ಷಾಳನೆಮಾಡಿದುದರಿಂದ ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು ॥೧೧॥

ತತೋ ರಾಮಂ ಸುಖಾಸೀನಂ ವಿಪ್ಪರೇ ಮುನಿರಬ್ರವೀತ್ ॥೧೦॥
ಜ್ಞಾತಂ ಸರ್ವಂ ಮಯಾ ರಾಮ ತ್ವದಾಗಮನಕಾರಣಮ್ ।
ಭಾರ್ಯಾ ಮೇತೀವ ಸಂವೃದ್ಧಾ ಹ್ಯನಸೂಯೇತಿ ವಿಶ್ರುತಾ ॥೧೩॥
ತಪಶ್ಚರನ್ತೀ ಸುಚಿರಂ ಧರ್ಮಜ್ಞಾ ಧರ್ಮವತ್ಸಲಾ ।
ಅನ್ತಃಸ್ಥಿತಾ ತಾಂ ಸೀತಾ ಪಶ್ಯತ್ವೇನಿಷೂದನ ॥೧೪॥
ಏವಂ ಬ್ರುವಾಣಂ ತಮೃಷಿಂ ತಥೇತ್ಯುಕ್ತ್ವಾ ಸ ರಾಘವಃ।
ಸೀತಾಂ ಪ್ರೋವಾಚ ಧರ್ಮಜ್ಞಾಂ ಇದಂ ವಚನಮುತ್ತಮಮ್ ।
ಶ್ರೇಯೋರ್ಥಮಾತ್ಮನಃ ಶೀಘ್ರಂ ಅಭಿಗಚ್ಛ ತಪಸ್ವಿನೀಮ್ ॥೧೫॥
ಸೀತಾ ತ್ವೇತದ್ವಚಃ ಶ್ರುತ್ವಾ ರಾಘವಸ್ಯ ಹಿತೈಷಿಣಃ ।
ತಾಮತ್ರಿಪತ್ನೀಂ ಧರ್ಮಜ್ಞಾಂ ಅಭಿಚಕ್ರಾಮ ಮೈಥಿಲೀ ॥೧೬॥
ಶಿಥಿಲಾಂ ಪಲಿತಾಂ ವೃದ್ಧಾಂ ಜರಾಪಾಣ್ಡುರಮೂರ್ಧಜಾಮ್ ।
ಸತತಂ ವೇಪಮಾನಾಙ್ಗೀಂ ಪ್ರವಾತೇ ಕದಳೀಂ ಯಥಾ ॥೧೭॥
ಅಭಿವಾದ್ಯ ಚ ವೈದೇಹೀ ತಾಪಸೀಂ ತಾಮನಿನ್ದಿತಾಮ್ ।
ಬದ್ಧಾಞ್ಜಲಿಸ್ಥಿತಾ ಹೃಷ್ಟಾ ಪರ್ಯಪೃಚ್ಛದನಾಮಯಮ್ ॥೧೮॥
ಸಾನ್ತ್ವಯನ್ತ್ಯಬ್ರವೀದ್ಧೃಷ್ಟಾ ಸೀತೇ ಧರ್ಮಮವೇಕ್ಷಸೇ ॥೧೯॥
ತ್ಯಕ್ತ್ವಾ ಜ್ಞಾತಿಜನಂ ಸೀತೇ ಮಾನವೃದ್ಧಿಂ ಚ ಭಾಮಿನಿ ।

ಅನಂತರ, ಆಸನದಮೇಲೆ ಸುಖವಾಗಿ ಕುಳಿತುಕೊಂಡ ಶ್ರೀರಾಮನನ್ನು ಕುರಿತು 'ರಾಮ! ನೀನು ಇಲ್ಲಿಗೆ ಬಂದುದಕ್ಕೆ ಕಾರಣವೆಲ್ಲವೂ ನನಗೆ ಗೊತ್ತಾಯ್ತು. ಅನಸೂಯೆಯೆಂದು ಪ್ರಸಿದ್ಧಳಾದ ನನ್ನ ಪತ್ನಿಯು, ಅತಿವೃದ್ಧಳಾಗಿಯೂ ಧರ್ಮಜ್ಞಳಾಗಿಯೂ ಧರ್ಮನಿಷ್ಠಳಾಗಿಯೂ ತಪಶ್ಚರಣತತ್ಪರಳಾಗಿಯೂ ಒಳಗಿರುವಳು. ಅಯ್ಯಾ! ಅರಿನಿಷೂದಕನೆ! ಅವಳನ್ನು ನಿನ್ನ ಪತ್ನಿಯಾದ ಸೀತೆಯು ನೋಡುವಳಾಗಲಿ' ಎಂದು ಹೇಳಿದನು ॥೧೨—೧೪॥

ಹೀಗೆ ಹೇಳುತಿರುವ ಆ ಮುನಿಯನ್ನು ಕುರಿತು ಹಾಗೆಯೇ, ಆಗಲೆಂದು ಹೇಳಿ, ಆ ರಾಮನು, ಸೀತೆಯನ್ನು ನೋಡಿ 'ನಿನಗೆ ಶ್ರೇಯಃಪ್ರಾಪ್ತಿಯಾಗುವುದಕ್ಕಾಗಿ ಮಹಾತಪಸ್ವಿನಿಯಾದ ಅನಸೂಯೆಯನ್ನು ಸೇವಿಸುವಳಾಗು' ಎಂದು ಅತ್ಯುತ್ತಮವಾದ ಮಾತನ್ನು ಹೇಳಿದನು ॥೧೫॥

ಜನಕರಾಜಸುತೆಯಾದ ಸೀತೆಯು, ಹಿತಾಕಾಂಕ್ಷಿಯಾದ ರಾಮನ ಈ ಮಾತನ್ನು ಕೇಳಿ, ಧರ್ಮಜ್ಞಳಾದ ಆ ಅನಸೂಯೆಯ ಹತ್ತಿರಕ್ಕೆ ಹೋದಳು ॥೧೬॥

ಮೈಯೆಲ್ಲ ಜರ್ಜರವಾಗಿಯೂ, ನರೆ ಹಿಡಿದವಳಾಗಿಯೂ, ಮುಪ್ಪಿನಿಂದ ಕೂದಲೆಲ್ಲ ಬಿಳ್ಳಗಾದವಳಾಗಿಯೂ, ಹೆಚ್ಚು ಗಾಳಿಯುಳ್ಳ ಪ್ರದೇಶದಲ್ಲಿರುವ ಬಾಳೆಯಗಿಡದಂತೆ ಸರ್ವದಾ ನಡುಗುತಿರುವಳಾಗಿಯೂ ಇರುವ ಮಹಾತ್ಮಳಾದ ಅನಸೂಯೆಯನ್ನು ನಮಸ್ಕರಿಸಿ, ಕೈಮುಗಿದುಕೊಂಡು, ಸಂತೋಷದಿಂದ ಅವಳನ್ನು ಕುಶಲಪ್ರಶ್ನೆ ಮಾಡಿದಳು ॥೧೭—೧೯॥

ಆನಂತರ, ಧರ್ಮಚಾರಿಣಿಯಾದ ಮಹಾತ್ಮಳಾದ ಆ ಸೀತೆಯನ್ನು ನೋಡಿ, ಸಂತುಷ್ಟಳಾದ ಅನುಸೂಯೆಯು, 'ಸೀತೇ! ನೀನು ಧರ್ಮದೃಷ್ಟಿಯುಳ್ಳವಳೆಂದು ಹೇಳುತ, ಮತ್ತೆ ಈರೀತಿಯಾಗಿ ಹೇಳಿದಳು॥

ಅವಿರುದ್ಧಂ ವನೇ ರಾಮಂ ಭಕ್ತ್ಯಾ ತ್ವಮನುವರ್ತಸೇ ॥೨೦॥
ದುಶ್ಶೀಲಃ ಕಾಮವೃತ್ತೋ ವಾ ಧನೈರ್ವಾ ಪರಿವರ್ಜಿತಃ ।
ಸ್ತ್ರೀಣಾಮಾರ್ತಸ್ವಭಾವಾನಾಂ ಪರಮಂ ದೈವತಂ ಪತಿಃ ॥೨೧॥
ನಗರಸ್ಥೋ ವನಸ್ಥೋ ವಾ ಪಾಪೋ ವಾ ಯದಿ ವಾ ಶುಭಃ ।
ಯಾಸಾಂಸ್ತ್ರೀಣಾಂ ಪ್ರಿಯೋ ಭರ್ತಾ ತಾಸಾಂಲೋಕಾಮಹೋದಯಾಃ॥
ನಾರ್ಯಃ ಸನ್ತಿ ಮಹಾಭಾಗಾಃ ಸಾಧ್ವ್ಯಃ ಸತ್ಕುಲಸಮ್ಭವಾಃ ।
ಸತ್ಯವ್ರತಾಃ ಸತ್ಯಶೀಲಾಃ ಪತಿಸೇವಾಪರಾಯಣಾಃ ॥೨೩॥
ಸರ್ವಲಕ್ಷಣಸಮ್ಪನ್ನಾಃ ಪರಿಶುದ್ಧಾಃ ಪತಿವ್ರತಾಃ ।
ಮನಸಾ ಕರ್ಮಣಾ ವಾಚಾ ನಾತಿವರ್ತನ್ತಿ ತಾಃ ಪತಿಮ್ ॥೨೪॥
ಪತಿಸೇವಾಂ ಪ್ರಕುರ್ವಾಣೋ ನಾನ್ಯತ್ ಕಾಂಕ್ಷನ್ತಿ ವೈ ಸುಖಮ್ ।
ಪತಿಸೇವೈವ ತಾಸಾಂ ಹಿ ಸರ್ವಸ್ಮಾದತಿರಿಚ್ಯತೇ ॥೨೫॥
ಪತಿಸೇವೈವ ನಾರೀಣಾಂ ಸರ್ವಭಾಗ್ಯಪ್ರದಾಯಿನೀ ॥೨೬॥
ನ ಶಯ್ಯಾಯಾಂ ನ ಗೇಹೇಷು ನ ಸುತಭ್ರಾತೃಬನ್ಧುಷು ।

ಸೀತೆ ! ಬಂಧುಗಳನ್ನೂ, ದೊರೆಮಗಳೆಂಬ ಅಭಿಮಾನವನ್ನೂ ಬಿಟ್ಟುಬಿಟ್ಟು, ಅರಣ್ಯದಲ್ಲಿ ರಾಮನನ್ನು ಭಕ್ತಿಯಿಂದ ನೀನು ಅನುವರ್ತಿಸಿಕೊಂಡು ಬರುತ್ತಿರುವೆಯಲ್ಲ! ಇದು ಕೇವಲ ಧರ್ಮಯುಕ್ತವಾದ ಕೆಲಸವು ॥೨೦॥

ದುಶ್ಶೀಲನಾಗಿದ್ದರೂ, ಕಾಮವೃತ್ತನಾಗಿದ್ದರೂ, ಧನವರ್ಜಿತನಾಗಿದ್ದರೂ, ದೀನಸ್ವಭಾವರಾದ ಸ್ತ್ರೀಯರಿಗೆ ಪತಿಯೇ ಪರದೈವವು ॥೨೧॥

ನಗರದಲ್ಲಿದ್ದರೂ, ಕಾಡಿನಲ್ಲಿದ್ದರೂ, ಪಾಪಿಷ್ಠನಾಗಿದ್ದರೂ, ಅಥವಾ ಪುಣ್ಯಶೀಲನಾಗಿದ್ದರೂ,- ಯಾವ ಸ್ತ್ರೀಯರಿಗೆ ಪತಿಯು ಪ್ರಿಯನಾಗಿರುವನೋ,- ಅವರಿಗೆ ಅನೇಕವಾದ ಪುಣ್ಯಲೋಕಗಳು ಸುಲಭವಾಗುವುವು ॥೨೨॥

ಮಹಾತ್ಮೆಯರಾಗಿಯೂ, ಮಹಾಪತಿವ್ರತೆಯರಾಗಿಯೂ, ಸತ್ಕುಲಪ್ರಸೂತೆಯರಾಗಿಯೂ, ಸತ್ಯವ್ರತೆಯರಾಗಿಯೂ, ಸತ್ಯಶೀಲೆಯರಾಗಿಯೂ, ಪತಿಶುಶ್ರೂಷಾಪರಾಯಣೆಯರಾಗಿಯೂ, ಸರ್ವಲಕ್ಷಣಸಂಪನ್ನೆಯರಾಗಿಯೂ, ಪರಿಶುದ್ಧೆಯರಾಗಿಯೂ ಇರುವ ಯಾವ ಸ್ತ್ರೀಯರಿರುವರೋ, ಅವರು-ಮನಸ್ಸಿನಲ್ಲಿಯೂ ಕರ್ಮದಲ್ಲಿಯೂ ವಾಕ್ಕಿನಲ್ಲಿಯೂ ಪತಿಯನ್ನು ಅತಿಕ್ರಮಿಸಿ ನಡೆಯುವುದಿಲ್ಲ ॥೨೩—೨೪॥

ಅವರು, ಸರ್ವದಾ ಪತಿಸೇವೆಯನ್ನು ಮಾಡುತ, ಮತ್ತಾವ ಸುಖವನ್ನೂ ಬಯಸುವುದಿಲ್ಲ. ಅವರಿಗೆ ಎಲ್ಲಕ್ಕಿಂತಲೂ ಪತಿಸೇವೆಯೇ ಅತ್ಯಧಿಕವಾಗಿರುವುದು. ಪತಿಸೇವೆಯೇ ಸ್ತ್ರೀಯರಿಗೆ ಸಕಲ ಸೌಭಾಗ್ಯವನ್ನೂ ಕೊಡತಕ್ಕುದು ॥೨೫—೨೬॥

ಆ ಪತಿವ್ರತೆಯರಿಗೆ, ಭೋಜನದಲ್ಲಿಯೂ ಇಚ್ಛೆಯಿಲ್ಲ; ವಸ್ತ್ರದಲ್ಲಿಯೂ ಇಚ್ಛೆಯಿಲ್ಲ; ಭೂಷಣದಲ್ಲಿಯೂ ಇಲ್ಲ; ಶಯ್ಯೆಯಲ್ಲಿಯೂ ಇಲ್ಲ; ಗೃಹದಲ್ಲಿಯೂ ಇಲ್ಲ; ಪುತ್ರಭ್ರಾತೃಬಂಧು


ಸರ್ವೇಷು ಜನಸೌಖ್ಯೇಷು ಪತಿಸೇವಾಂ ವಿನಾ ಭವೇತ್ ॥೨೭॥

ಪತಿಸೇವಾರಸಾಸ್ವಾದನಿರ್ವೃತಾಯಾಃ ಕುಲಸ್ತ್ರಿಯಃ ।
ತತ್ಸೇವೈವ ಪರಂ ಸ್ತ್ರೀಣಾಂ ಬ್ರಹ್ಮಾನಂದರಸೋ ಭವೇತ್ ॥೨೮॥

ಆರ್ತಾರ್ತೇ ಮುದಿತೇ ಹೃಷ್ಟಾ ಪ್ರೋಷಿತೇ ಮಲಿನಾ ಕೃಶಾ ।
ಮೃತೇ ಮ್ರಿಯೇತ ಯಾ ನಾರೀ ಸಾ ಸ್ತ್ರೀ ಜ್ಞೇಯಾ ಪತಿವ್ರತಾ ॥೨೯॥

ಅಪಿ ಯಾ ನಿರ್ವಮಸ್ಕಾರಾ ನಿವೃತ್ತಾ ದೇವಪೂಜನಾತ್ ।
ಶುಶ್ರೂಷಾಮೇವ ಭರ್ತುರ್ಯಾ ಕುರ್ಯಾತ್ ಸಾ ಸ್ತ್ರೀ ಪತಿವ್ರತಾ ॥೩೦

ಇತಿ ಶ್ರೀಮದಯೋಧ್ಯಾಕಾಂಡೇ ಅತ್ರಿಕೃತಾತಿಥ್ಯಕಥನಂ
ನಾಮ ತ್ರಿಂಶಃ ಸರ್ಗಃ.



ಗಳಲ್ಲಿಯೂ ಇಚ್ಛೆಯಿರುವುದಿಲ್ಲ. ಅವರಿಗೆ ಪತಿಸೇವೆಯೊಂದುಹೊರತು, ಇತರವಾದ ಸಮಸ್ತ ಪ್ರಾಪಂಚಿಕಸುಖಗಳಲ್ಲಿಯೂ ಇಚ್ಛೆಯುಂಟಾಗುವುದಿಲ್ಲ ॥೨೭॥

ಪತಿಸೇವಾರಸಾನುಭವದಿಂದ ಸುಹಿತರಾದ ಯಾವ ಕುಲಸ್ತ್ರೀಯರಿರುವರೋ, ಅವರಿಗೆ ಆ ಪತಿಸೇವೆಯೇ ಬ್ರಹ್ಮಾನಂದರಸವಾಗುವುದು ॥೨೮॥

ಯಾವ ಸ್ತ್ರೀಯು, ತನ್ನ ಪತಿಯು ದುಃಖಿತನಾದಾಗ ತಾನೂ ದುಃಖಿತಳಾಗಿಯೂ, ಆವನು ಸಂತೋಷದಲ್ಲಿದ್ದಾಗ ತಾನೂ ಸಂತೋಷಯುಕ್ತಳಾಗಿಯೂ, ಅವನು ಪರಸ್ಥಳವಾಸಿಯಾಗಿದ್ದಾಗ ತಾನು ಆಲಂಕಾರಾದಿರಹಿತಳಾಗಿ ಕೃಶಳಾಗಿಯೂ ಇರುತ, ಪತಿಯು ಮೃತನಾದ ಪಕ್ಷದಲ್ಲಿ ತಾನೂ ಮರಣಹೊಂದುವಳೋ, ಅವಳು ಪತಿವ್ರತೆಯೆಂದು ತಿಳಿಯಲ್ಪಡಬೇಕು ॥೨೯॥

ಮತ್ತು, ಯಾವಳು ಯಾರಿಗೂ ನಮಸ್ಕಾರಗಳನ್ನೂ ಮಾಡದೆಯೂ-ದೇವಪೂಜಾದಿಗಳಲ್ಲಿಯೂ ಆಸಕ್ತಳಾಗಿಯೂ ಇದ್ದರೂ-ಪತಿಶುಶ್ರೂಷೆಯನ್ನು ಮಾತ್ರ ತಪ್ಪದೆ ಮಾಡುವಳೋ, ಅವಳು ಪತಿವ್ರತೆಯೆಂದು ತಿಳಿಯಲ್ಪಡಬೇಕು ॥೩೦॥

ಇದು ಅಯೋಧ್ಯಾಕಾಂಡದಲ್ಲಿ ಅತ್ರಿಕೃತಾತಿಥ್ಯಕಥನವೆಂಬ
ಮುವ್ವತ್ತೊಂದನೆಯ ಸರ್ಗವು.



ಅಥ ಶ್ರೀಮದಯೋಧ್ಯಾಕಾಣ್ಡೇ ದ್ವಾತ್ರಿಂಶಃ ಸರ್ಗಃ.

ಅನಸೂಯೋವಾಚ.

ಅತ್ರೈವೋದಾಹರನ್ತೀಮಂ ಇತಿಹಾಸಂ ಪುರಾತನಮ್ ।
ಗುಣಶೀಲವತೀ ಕಾಚಿತ್ ಬ್ರಾಹ್ಮಣೀ ಸುಪತಿವ್ರತಾ ।
ಪತಿಸೇವಾಂ ವಿನಾ ನಾನ್ಯಂ ಜಾನನ್ತೀ ಧರ್ಮಮುತ್ತಮಮ್ ॥೧॥
ತಸ್ಯಾಭರ್ತಾ ವಿಶಾಲಾಕ್ಷ್ಯಃ ದುರ್ವೃತ್ತಃ ಕಾಮವಲ್ಲಭಃ ॥೨॥
ದುಶ್ಶೀಲೋ ದುರ್ಭಗೋಽದಾನ್ತಃ ಪಾಪಕರ್ಮರತೋಪಿ ಚ ।
ಕಠಿನಃ ಪಿಶುನಃ ಕ್ರೂರಃ ಸರ್ವಾವಗುಣಸಂಯುತಃ ॥೩॥
ಕೇನಚಿತ್ ಕರ್ಮಪಾಕೇನ ವಾತರೋಗೇಣ ಪೀಡಿತಃ ।
ಪಙ್ಗುತ್ವಮಗಮತ್ ಸದ್ಯಃ ಕುರೂಪತ್ವಂ ಚ ಸೋಗಮತ್ ॥೪॥
ತಥಾಪಿ ನ ತ್ಯಜತ್ಯೇನಂ ದೇವಭಾವೇನ ಸೇವತೇ ।
ದುಶ್ಶೀಲೋಪಿ ಪತಿಃ ಸ್ತ್ರೀಣಾಂ ಪೂಜ್ಯೋ ಧರ್ಮಃ ಸನಾತನಃ ॥೫॥
ತಸ್ಯ ದುರ್ವೃತ್ತತಃ ಸರ್ವಾಃ ಶ್ರಿಯೋ ನಷ್ಟಾದುರಾತ್ಮನಃ ।
ದುರ್ವೃತ್ತಮತಿಮರ್ಯಾದಂ ತ್ಯಜನ್ತಿ ಹಿ ನರಂ ಶ್ರಿಯಃ ॥೬॥

ಅಯೋಧ್ಯಾಕಾಂಡದಲ್ಲಿ ಮುವ್ವತ್ತೆರಡನೆಯೆ ಸರ್ಗವು

ಪುನಃ ಅನಸೂಯೆಯು ಶ್ರೀ ಸೀತಾದೇವಿಯನ್ನು ಕುರಿತು ಹೇಳುವಳು :—

ಏಲೌ ಸೀತೇ! ನಾನು ಇದುವರೆಗೂ ನಿನಗೆ ಹೇಳಿದ ಪತಿವ್ರತಾ ವಿಷಯದಲ್ಲಿಯೇ, ಇದೊಂದು ಪುರಾತನವಾದ ಇತಿಹಾಸವನ್ನು ಪ್ರಾಜ್ಞರು ಹೇಳುವರು.—ಗುಣಶೀಲಸಂಪನ್ನಳಾದ ಮಹಾಪತಿವ್ರತೆಯಾದ ಬ್ರಾಹ್ಮಣ ಸ್ತ್ರೀಯೊಬ್ಬಳಿದ್ದಳು. ಅವಳು, ಪತಿಸೇವೆಯನ್ನು ಬಿಟ್ಟು ಮತ್ತಾವ ಧರ್ಮವನ್ನೂ ಉತ್ತಮವೆಂದು ತಿಳಿದಿರಲಿಲ್ಲ ॥೧॥

ಅಕೆಯ ಪತಿಯು, ದುರ್ವೃತ್ತನಾಗಿಯೂ ಕಾಮಲಂಪಟನಾಗಿಯೂ ದುಶ್ಶೀಲನಾಗಿಯೂ ಅಜಿತೇಂದ್ರಿಯನಾಗಿಯೂ ಪಾಪಕರ್ಮನಿರತನಾಗಿಯೂ ಕಠಿನನಾಗಿಯೂ ಪಿಶುನ(ಚಾಡಿಕೋರ)ನಾಗಿಯೂ ಕ್ರೂರನಾಗಿಯೂ ಮುಖ್ಯವಾಗಿ ಸರ್ವಾವಗುಣಯುಕ್ತನಾಗಿಯೂ ಇದ್ದನು॥೨–೩॥

ಅವನು, ಯಾವುದೋ ಒಂದು ದುಷ್ಕರ್ಮಪರಿಪಾಕದಿಂದ ವಾತರೋಗಪೀಡಿತನಾಗಿ, ಹೆಳವನಾಗಿಬಿಟ್ಟನು; ಆಗಲೇ ಕುರೂಪನೂ ಆಗಿಬಿಟ್ಟನು ॥೪॥

ಹೀಗಾದರೂ, ಆ ಪತಿವ್ರತೆಯು ಅವನನ್ನು ಬಿಡಲಿಲ್ಲ ; ಅವನೇ ದೇವರೆಂದು ತಿಳಿದು ಸೇವಿಸಿಕೊಂಡಿದ್ದಳು. ಎಂತಹ ದುಶ್ಶೀಲನಾದರೂ ಪತಿಯು ಸ್ತ್ರೀಯರಿಗೆ ಸೇವನೀಯನು. ಇದು ಸನಾತನವಾದ ಧರ್ಮವು ॥೫॥

ಆ ದುರಾತ್ಮನ ಕೆಟ್ಟ ನಡತೆಯಿಂದ ಸಮಸ್ತ ಸಂಪತ್ತುಗಳೂ ನಷ್ಟವಾದುವು. ದುರ್ವೃತ್ತನಾಗಿ ಲೋಕಮರ್ಯಾದೆಯನ್ನು ವಿಚಾರಿ ನಡೆಯುತಕ್ಕ ಪುರುಷನನ್ನು ಲಕ್ಷ್ಮಿಯು ಬಿಟ್ಟುಹೋಗುವಳು ॥೬॥

ದುರ್ವೃತ್ತಂ ಸೇವತೇ ಜ್ಯೇಷ್ಠಾ ದುರ್ವೃತ್ತಂ ಚ ಪತಿವ್ರತಾ ।
ದುರ್ವೃತ್ತಸ್ತ್ಯಜ್ಯತೇ ಲೋಕೇ ವ್ಯಸನೈಃ ಪರಿಭೂಯತೇ ॥೬॥
ಸಾ ಸತೀ ಪರಿಹೀನಾಸು ಸಮ್ಪತ್ಸು ನಿಜಮನ್ದಿರೇ ।
ಉಪಾದಾನಪರಾ ನಿತ್ಯಂ ವೃತ್ತಿಹೀನಾ ಚಚಾರ ಹ ॥೪॥
ಸೈಕದೋಢ್ವಾ ಪತಿಂ ಸ್ವನ್ಧೇ ಭಿಕ್ಷಾರ್ಥಂ ನಗರಂ ಯಯೌ ।
ರೋಗಾವಿಷ್ಟಂ ಸ್ವಯಂ ಗನ್ತುಂ ಅಶಕ್ತಂ ಪತಿದೇವತಾ ॥೮॥
ವಿಪಣ್ಯಾಂ ಪೇಟಿಕಾಸಂಸ್ಥಂ ಅವರೋಪ್ಯ ಸ್ವಕಂ ಪತಿಮ್ ।
ತತ್ರತತ್ರ ಹಿ ಸಾ ನಾರೀ ಭಿಕ್ಷಾರ್ಥಂ ವಿಚಚಾರ ಹ ॥೧೦॥
ತತಸ್ತತ್ರೈವ ವೀಥ್ಯಾಂ ತು ಕಾಚಿದ್ವೇಶ್ಯಾ ಸಮಾಗತಾ ॥೧೧॥
ತಾಂ ದೃಷ್ಟ್ವಾ ಯೂಥಮಧ್ಯಸ್ಥಾಂ ಸರ್ವಾವಯವಸುನ್ದರೀಮ್ ।
ಮೋಹಿತಃ ಕಾಮರೋಗೇಣ ದಿಶೋ ದಶ ವಿಲೋಕಯನ್ ॥೧೨॥
ವಿಲುಠನ್ ನಿಶ್ವಸಂಶ್ಚೈವ ತಾಮೇವ ಪರಿಚಿನ್ತಯನ್ ।
ಆಸ್ವಸ್ಥಹೃದಯಸ್ತ್ವಾಸೀತ್ ಪಶ್ಚಾತ್ತ್ವಾದ್ಗನ್ತುಮುಕ್ಷ್ವಮಃ ॥೧೩॥
ಈದೃಶಂ ಸ್ವಪತಿಂ ದೃಷ್ಟ್ವಾ ಸಾ ಸತೀ ಪುನರಾಗತಾ ।
ತಮುವಾಚ ಕಿಮೇತದ್ಧಿ ತವ ಕಾರ್ಪಣ್ಯಕಾರಣಮ್ ॥೧೪॥

ದುರ್ವೃತ್ತನಾದವನನ್ನು ಜ್ಯೇಷ್ಠಾಲಕ್ಷ್ಮಿಯು ಸೇವಿಸುವಳು. ಪತಿಯು ಎಂತಹ ದುರ್ವೃದುರ್ವೃತ್ತನಾದರೂ, ಪತಿವ್ರತೆಯು ಅವನನ್ನು ಶುಶ್ರೂಷಿಸಿಕೊಂಡಿರುವಳು. ಆದರೆ, ದುರ್ವೃತ್ತನಾದವನು ಲೋಕದಲ್ಲಿ ಎಲ್ಲರಿಂದಲೂ ಬಿಡಲ್ಪಡುವನು; ವ್ಯಸನಕ್ಕೂ ಗುರಿಯಾಗುವನು ॥೬॥

ಆ ಪತಿವ್ರತೆಯು, ತನ್ನ ಮನೆಯಲ್ಲಿನ ಸಂಪತ್ತುಗಳೆಲ್ಲವೂ ಹೋಗಿಬಿಡಲಾಗಿ, ಜೀವನಕ್ಕೆ ಗತಿಯಿಲ್ಲದೆ, ನಿತ್ಯವೂ ಉಪಾದಾನವಮಾಡುತ ತಿರುಗುತಿದ್ದಳು ॥೪॥

ಮಹಾಪತಿವ್ರತೆಯಾದ ಅವಳು, ಒಂದು ಸಮಯದಲ್ಲಿ, ರೋಗಾವಿಷ್ಟನಾಗಿ ಸ್ವಯಂ ಸಂಚರಿಸಲು ಅಶಕ್ತನಾಗಿರುವ ಪತಿಯನ್ನು ಹೆಗಲಮೇಲೆ ಹೊತ್ತುಕೊಂಡು, ಭಿಕ್ಷೆಗಾಗಿ ಊರೊಳಗೆ ಹೋದಳು ॥೮॥

ಆಗ ಒಂದು ಬುಟ್ಟಿಯಲ್ಲಿದ್ದ ತನ್ನ ಪತಿಯನ್ನು ಅಂಗಡಿಬೀದಿಯೊಳಗೆ ಒಂದುಕಡೆ ಇಳುಹಿಸಿ, ಭಿಕ್ಷೆಗಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದಳು ॥೧೦॥

ಅನಂತರ, ಆ ಬೀದಿಯಲ್ಲಿಯೇ ಒಬ್ಬ ವೇಶ್ಯಾಸ್ತ್ರೀಯು ಬಂದಳು. ಜನರ ಗುಂಪಿನೊಳಗೆ ಇದ್ದ ಸರ್ವಾಂಗಸುಂದರಿಯಾದ ಅವಳನ್ನು ನೋಡಿ, ಅವನು ಮೋಹಪಟ್ಟು, ಕಾಮಾವೇಶದಿಂದ ಹತ್ತು ದಿಕ್ಕುಗಳನ್ನೂ ನೋಡುತ, ತಾನು ಹೆಳವನಾದಕಾರಣ ಅವಳಿರುವಕಡೆಗೆ ಹೋಗಲು ಅಸಮರ್ಥನಾಗಿ, ಭೂಮಿಯಲ್ಲಿ ಬಿದ್ದು ಹೊರಳುತ, ಪದೇಪದೇ ನಿಟ್ಟುಸಿರುಬಿಡುತ, ಅವಳನ್ನೇ ಚಿಂತಿಸುತ, ಅಸ್ವಸ್ಥಹೃದಯನಾಗಿಬಿಟ್ಟನು ॥೧೧—೧೩॥

ಹೀಗಿರುವಾಗ, ಭಿಕ್ಷೆಯನ್ನು ಮಾಡಿಕೊಂಡು ಹಿಂದಿರುಗಿ ಬಂದ ಆ ಸಾಧ್ವಿಯು, ಇಂತಹ ಸ್ಥಿತಿಯಲ್ಲಿರುವ ತನ್ನ ಪತಿಯನ್ನು ನೋಡಿ 'ತಮಗೆ ಇಷ್ಟು ದೈನ್ಯಕ್ಕೆ ಕಾರಣವೇನು?' ಎಂದು ಕೇಳಿದಳು ॥೧೪॥

ತಚ್ಛ್ರುತ್ವಾ ಗೃಹಿಣೀವಾಕ್ಯಂ ಸ ದ್ವಿಜಃ ಕಾಮುಲಮ್ಪಟಃ ।
ತತಃ ಪ್ರೋವಾಚ ತಾಂ ಸಾಧ್ವೀಂ ಭಾರ್ಯಾಂ ಕಮಲಲೋಚನಾಮ್ ॥೧೫॥

ಉದ್ವೃತ್ತಾವ್ಬುಸಿ ದುಸ್ತರೇ ನಾವಂ ಪ್ರಾಪ್ಯ ಯಥಾ ಸುಖೀ ।
ತಥಾ ತುತೋಷ ಚಾವಾದೀತ್ ವಿಪ್ರಾಭಾಸಃ ಪತಿವ್ರತಾಮ್ ॥೧೬॥

ಕಾಚಿದ್ವೇಶ್ಯಾ ಮಯಾ ದೃಷ್ಟಾ ವಿಪಣ್ಯಾಮಧುನಾ ಶುಭೇ ।
ತಸ್ಯಾಂ ಮೇ ಮನಆಸಕ್ತಂ ತತ್ಸೌನ್ದರ್ಯವಿಮೋಹಿತಃ ॥೧೭॥

ಕುತ್ರ ತಿಷ್ಠತಿ ಸಾ ವೇಶ್ಯಾ ಮನೋನಯನನನ್ದಿನೀ ।
ತಾಂ ವಿನಾ ಕ್ಷಣಮಪ್ಯತ್ರ ನ ಜೀವೇಯಂ ಮನಸ್ವಿನಿ ॥೧೮॥

ಇತಿ ಸಂಚೋದಿತಾ ತೇನ ಸಾ ಗತ್ವಾ ತಾಂ ದದರ್ಶ ಹ ।
ಕಿಞ್ಚಿದ್ದತ್ತ್ವಾ ಚ ಕೃತ್ವಾ ತು ಸಙ್ಕೇತಂ ನಗರಾದ್ಬಹಿಃ ।
ಪುನರಾಗತ್ಯ ಸಾ ನಾರೀ ತತ್ಸಮೀಪಂ ಕುಲಾಙ್ಗನಾ ॥೧೯॥

ದಿನಶೇಷಂ ತು ತಂ ನೀತ್ವಾ ಸೂರ್ಯೇ ಚಾಸ್ತಮಿತೇ ಸತಿ ।
ಗಾಢಾನ್ಧಕಾರಸಂವೀತೇ ಲೋಕಲೋಚನದೃಕ್ಪಥೇ ॥೨೦॥

ಸ್ವಸ್ಕನ್ಧೇ ಪತಿಮಾರೋಪ್ಯ ಸಙ್ಕೇತಂ ಸಾ ಯಯೌ ತತಃ ॥೨೧॥

ಅನ್ಧಕಾರೇ ತು ಗಚ್ಛನ್ತ್ಯಾಃ ಸ್ಕನ್ಧಾರೂಢೋ ದ್ವಿಜಾಧಮಃ ।
ಅವೃಷ್ಟ್ವಾ ಸ್ವೇನ ಶಿರಸಾ ಪಥಿ ಶೂಲಕೃತಂ ಜನಮ್ ।

ಹೀಗೆ ತನ್ನ ಹೆಂಡತಿಯು ಹೇಳಿದ ಮಾತನ್ನು ಕೇಳಿ, ಕಾಮುಲಂಪಟನಾದ ಆ ಬಾ ,ಹ, ಣನು, ಕಮಲನೇತ್ರಿಯಾದ ತನ್ನ ಪತ್ನಿಯನ್ನು ಕುರಿತು ಈ ಮಾತನಾಡಿದನು ॥೧೫॥

ದಡವಿಾರಿ ಹರಿಯುತ ದಾಟುವುದಕ್ಕಾಗದಿರುವ ನೀರಿನಲ್ಲಿ ಸಿಕ್ಕಿಕೊಂಡಿರತಕ್ಕವನು ನಾವೆ ಸಿಕ್ಕಿದರೆ ಹೇಗೆ ಸಂತೋಷಪಡುವನೋ, ಹಾಗೆ ಆ ಬ್ರಾಹ್ಮಣಬ್ರುವನು ತನ್ನ ಪತ್ನಿ ಬಂದು ದನ್ನು ಕುರಿತು ಸಂತೋಷಪಟ್ಟು, ಅವಳನ್ನು ಕುರಿತು ಹೀಗೆ ಹೇಳಿದನು ॥೧೬॥

ಎಲೌ ಶುಭೇ ! ಈಗ ಈ ಅಂಗಡಿಬೀದಿಯಲ್ಲಿ ಒಬ್ಬ ವೇಶ್ಯಾಂಗನೆಯನ್ನು ನಾನು ನೋಡಿದೆನು. ಅವಳ ಸೌಂದರ್ಯದಲ್ಲಿ ಮೋಹವುಂಟಾಗಿ, ನನ್ನ ಮನಸ್ಸು ಅವಳಲ್ಲಿ ಆಸಕ್ತವಾಗಿ ಬಿಟ್ಟಿರುವುದು ॥೧೭॥

ಮನಸ್ಸಿಗೂ ನೇತ್ರಕ್ಕೂ ಆಹ್ಲಾದಕರಳಾದ ಆ ವೇಶ್ಯೆಯೆಲ್ಲಿರುವಳೋ ನನಗೆ ತಿಳಿಯದು. ಹೇ ಪತಿವ್ರತೇ! ಅವಳನ್ನು ಬಿಟ್ಟು ನಾನೊಂದು ಕ್ಷಣವಾದರೂ ಜೀವಿಸಲಾರೆನು ॥೧೮॥

ಹೀಗೆಂದು ತನ್ನ ಪತಿಯಿಂದ ಪ್ರೇರಿತಳಾದ ಆ ಪತಿವ್ರತೆಯು, ಅಲ್ಲಿಂದ ಹೊರಟು ಆ ವೇಶ್ಯೆಯನ್ನು ಕಂಡಳು; ಅವಳಿಗೆ ಸ್ವಲ್ಪ ದ್ರವ್ಯವನ್ನೂ ಕೊಟ್ಟು, ಊರಹೊರಗೆ ಸಂಕೇತಸ್ಥಾನವನ್ನೂ ಮಾಡಿ, ಮತ್ತೆ ತನ್ನ ಪತಿಯು ಸಮೀಪಕ್ಕೆ ಬಂದು, ಆ ಹಗಲಿನಲ್ಲಿ ಉಳಿದಿದ್ದ ಕಾಲವನ್ನೆಲ್ಲ ಅಲ್ಲಿಯೇ ಕಳೆದು, ಸೂರ್ಯನು ಅಸ್ತಹೊಂದಿದಬಳಿಕ, ಜನರ ನೇತ್ರಮಾರ್ಗವೆಲ್ಲವೂ ಗಾಢಾಂಧಕಾರವ್ಯಾಪ್ತವಾಗಲಾಗಿ, ತನ್ನ ಹೆಗಲುಮೇಲೆ ಆ ಪತಿಯನ್ನು ಹೊತ್ತುಕೊಂಡು, ಪೂರ್ವದಲ್ಲಿ ಏರ್ಪಡಿಸಿದ್ದ ಸಂಕೇತಸ್ಥಾನಕ್ಕೆ ಹೊರಟಳು ॥೧೯—೨೧॥

ಕತ್ತಲೆಯಲ್ಲಿ ಅವಳು ಹೋಗುತಿರುವಾಗ, ಅವಳ ಹೆಗಲುಮೇಲೆ ಹತ್ತಿಕೊಂಡಿದ್ದ ಆ

ಚೋರಂ ವೈ ತಾಡಯಾಮಾಸ ಪಾಪಃ ಪಾಪೇನ ಕರ್ಮಣಾ ॥೨೦॥
ಚಾಲಿತಸ್ತೇನ ಘಾತೇನ ಚಕಮ್ಪೇ ಸ ತಥಾವಿಧಃ ।
ವಿಹ್ವಲೋ ವೇದನಾರ್ತಶ್ಚ ಪ್ರೋವಾಚ ವಚನಂ ತದಾ ॥೨೧॥
ವೇದನಾರ್ತಸ್ಯ ಮೇ ಯಸ್ತು ಪುನಃ ಪೀಡಾಂ ಕರೋತಿ ವೈ ।
ಸ ತು ಸೂರ್ಯೋದಯಾದೂರ್ಧ್ವಂ ಮರಿಷ್ಯತಿ ನ ಸಂಶಯಃ ॥೨೪॥
ಶ್ರುತ್ವಾ ಶಾಪಂ ತದಾ ಸಾಧ್ವೀ ಪತಿನಾಶೇನ ವಿಹ್ವಲಾ ।
ಅವರೋಪ್ಯ ಪತಿಂ ಸ್ಕನ್ಧಾತ್ ವಿನಿಶ್ವಸ್ಯ ಪುನಃಪುನಃ ॥೨೫॥
ಅತಿದುಃಖತರಾ ಸಾಧ್ವೀ ಮನಸ್ಯೇವ ವಿಚಿನ್ತ್ಯ ಸಾ ।
ಕರೌ ಪಾದೌ ಚ ವದನಂ ಪ್ರಕ್ಷಾಳ್ಯ ಪುನರಬ್ರವೀತ್ ॥೨೬॥
ಗೃಹೀತ್ವಾಞ್ಜಲಿದೇಶೇಪೋ ಮಾಸ್ತು ಸೂರ್ಯೋದಯೋ ಭುವಿ ।
ಇತ್ಯುಕ್ತ್ವಾಞ್ಜಲಿಮುದ್ಯಮ್ಯ ಚಿಕ್ಷೇಪಾರ್ಘ್ಯಂ ತದಾ ಸತೀ ॥೨೭॥
ಶ್ರುತ್ವಾ ತಚ್ಚಾಪವಚನಂ ನೋದೀಯಾಯಾಥ ಭಾಸ್ಕರಃ ॥೨೮॥
ಇನ್ದ್ರಾಗ್ನಿಯಮಚನ್ದ್ರಾರ್ಕವರುಣಾಸ್ತಥಾ ।
ವಾಯುಃ ಕುಬೇರಈಶಾನಃ ದೇವಾಶ್ಚ ಪರಮರ್ಷಯಃ ॥೨೯॥
ವಿಸ್ಮಯಂ ಪರಮಂ ಜಗ್ಮುಃ ದೃಷ್ಟ್ವಾ ಸಾಧ್ವೀವ್ರತಂ ಮಹತ್ ।
ತ್ರೈಲೋಕ್ಯೇ ತಮಸಾ ವ್ಯಾಪ್ತೇ ಸ್ನಾನಸನ್ಧ್ಯಾದಿವರ್ಜಿತೇ ॥೩೦॥

ಪಾಪನಾದ ಬ್ರಾಹ್ಮಣಾಧಮನು, ದಾರಿಯಲ್ಲಿ ಶೂಲಕ್ಕೆ ಹಾಕಿದ್ದ ಒಬ್ಬ ಕಳನನ್ನು ತನ್ನ ಪಾಪ ಕರ್ಮಶೇಷದಿಂದ ಕಾಣದೆ ತನ್ನ ತಲೆಯಿಂದ ಹೊಡೆದನು ॥೨೨॥

ಹೀಗೆ ಹೊಡೆಯಲ್ಪಟ್ಟ ಆ ಚೋರನು, ಆ ಏಟಿನಿಂದ ಅಳ್ಳಾಡಿಹೋದನು ; ಇದರಿಂದ ಅವನಿಗೆ ಯಾತನೆ ಹೆಚ್ಚಾಗಿ, ಅವನು ' ಮೊದಲೇ ಯಾತನೆ ಪಡುತಿದ್ದ ನನಗೆ ಈಗ ಯಾವನು ಇನ್ನೂ ಹೆಚ್ಚಾಗಿ ಯಾತನೆಯುಂಟುಮಾಡಿದನೋ, ಅವನು ಸೂರ್ಯೋದಯವಾದೊಡನೆಯೇ ನಿಸ್ಸಂಶಯವಾಗಿ ಮರಣಹೊಂದುವನು ' ಎಂದು ಹೇಳಿಬಿಟ್ಟನು ॥೨೩—೨೪॥

ಹೀಗೆ ಅವನು ಶಪಿಸಿದುದನ್ನು ಕೇಳಿ, ತನ್ನ ಪತಿಗೆ ನಾಶವುಂಟಾಗುವುದೆಂದು ಬಹಳ ಕಳವಳಪಟ್ಟ ಆ ಪತಿವ್ರತೆಯು, ತನ್ನ ಪತಿಯನ್ನು ಹೆಗಲಮೇಲಿಂದ ಕೆಳಕ್ಕಿಳುಹಿಸಿ, ಮತ್ತೆಮತ್ತೆ ನಿಟ್ಟುಸಿರುಬಿಡುತ, ಅತಿ ದುಃಖದಿಂದ ಮನಸ್ಸಿನಲ್ಲಿಯೇ ಯೋಚಿಸಿ, ಕೈಕಾಲುಗಳನ್ನು ತೊಳೆದುಕೊಂಡು, ಬೊಗಸೆಯಲ್ಲಿ ನೀರುಹಿಡಿದುಕೊಂಡು, ಭೂಮಿಯಲ್ಲಿ ಸೂರ್ಯೋದಯವೇ ಆಗಬೇಡವೆಂದು ಹೇಳಿ, ಆ ಅರ್ಘ್ಯವನ್ನು ಕೆಳಗೆ ಚೆಲ್ಲಿಬಿಟ್ಟಳು ॥೨೫—೨೭॥

ಅನಂತರ, ಅವಳ ಶಾಪವಚನವನ್ನು ಕೇಳಿ ಸೂರ್ಯನು ಉದಯಿಸಲೇ ಇಲ್ಲ. ಆಗ, ಇಂದ್ರ ಅಗ್ನಿ ಯಮ ಚಂದ್ರ ಸೂರ್ಯ ವರುಣ ವಾಯು ಕುಬೇರ ಈಶಾನ ಮೊದಲಾದವರೂ, ಸಮಸ್ತ ದೇವತೆಗಳೂ, ಸಮಸ್ತ ಮಹರ್ಷಿಗಳೂ, ಅವಳ ಪಾತಿವ್ರತ್ಯಮಹಿಮೆಯನ್ನು ನೋಡಿ, ಅತಿಯಾಗಿ ಆಶ್ಚರ್ಯಪಟ್ಟರು ॥೨೮—೨೯॥

ಆಗ ಮೂರು ಲೋಕವೂ ಅಂಧಕಾರಾವೃತವಾಗಿ ಸ್ನಾನಸಂಧ್ಯಾದಿ ವರ್ಜಿತವಾಗಿರಲಾಗಿ, ಸ್ವಾಹಾಕಾರ ಸ್ವಧಾಕಾರ ವಷಟ್ಕಾರಗಳೆಲ್ಲವೂ ಕ್ಷಯಹೊಂದಲಾಗಿ, ಹವ್ಯಕವ್ಯಗಳೆಲ್ಲವೂ ಬಿಟ್ಟು

ಸ್ವಾಹಾಕಾರೇ ಸ್ವಧಾಕಾರೇ ವಷಟ್ಕಾರೇ ಕ್ಷಯಂ ಗತೇ ।
ಹವ್ಯೇ ಕವ್ಯೇ ಚ ಸನ್ತ್ಯಕ್ತೇ ಯಜ್ಞೇ ಚ ವಿಲಯಂ ಗತೇ ।
ನಷ್ಟೇ ದಾನೇ ಚ ಧರ್ಮೇ ಚ ತ್ರೈಲೋಕ್ಯಂ ಕರ್ಮವರ್ಜಿತಮ್ ॥೩೧॥
ತತೋ ದೇವಾಃ ಸಗನ್ಧರ್ವಾಃ ಯಕ್ಷರಾಕ್ಷಸಪನ್ನಗಾಃ ।
ಪದ್ಮಯೋನಿಂ ಪುರಸ್ಕೃತ್ಯ ಪ್ರಜಗ್ಮುಸ್ತತ್ರ ಯತ್ರ ಸಾ ॥೩೨॥
ತತಾಗತ್ಯ ಮಹಾತ್ಮಾನಃ ಸಾಧ್ವೀಂ ತಾಮಿದಮಬ್ರುವನ್ ।
ಸೂಯೋರ್ದಯೋಸ್ತು ಭದ್ರಂ ತೇ ಲೋಕಾಃ ಸನ್ತು ನಿರಾಮಯಾಃ ।
ಪತಿಸ್ತೇ ದೀಯತೇಸ್ಮಾಭಿಃ ಜೀವಿತೋ ನಾತ್ರ ಸಂಶಯಃ ॥೩೩॥
ಏವಮುಕ್ತಾ ತು ಸಾ ದೇವೈಃ ತಥಾ ಚಕ್ರೇ ವರಾಙ್ಗನಾ ।
ಪುನರಭ್ಯಂ ಪ್ರಚಿಕ್ಷೇಪ ಸೂಯೋರ್ದಸ್ತು ಪ್ರೋದಿತೋ ಭುವಿ ॥೩೪॥
ಶ್ರುತ್ವೈ ತು ವಚನಂ ಸಾಧ್ವ್ಯಾಃ ಉದಿತೋಭೂದ್ದಿವಾಕರಃ ।
ಪತಿವ್ರತಾಯಾವಾಹಾತ್ಮ್ಯಾತ್ ಪುನರುಜ್ಜೀವಿತೋ ದ್ವಿಜಃ ॥೩೫॥
ಸೌನ್ದರ್ಯಸ್ಯ ನಿಧಿಃ ಸಾಕ್ಷಾತ್ ಯುವಾ ಷೋಡಶವಾರ್ಷಿಕಃ ।
ಧರ್ಮಿಷ್ಠಃ ಸತ್ಯವಾದೀ ಚ ಸರ್ವಸನ್ಪತ್ಸಮನ್ವಿತಃ ।
ತಯಾ ಸಾಧ್ವ್ಯಾ ಸಮೇತಃ ಸ ರೇಮೇ ಸಂವತ್ಸರಾ ಬಹೂನ್ ॥೩೬॥
ಏವಂ ದತ್ವಾ ವರಂ ತಸ್ಯ ದೇವಾಃ ಸ್ವಭವನಂ ಯಯುಃ ॥೩೭॥

ಹೋಗಲಾಗಿ, ಯಜ್ಞಕರ್ಮವು ಲುಪ್ತವಾಗಲಾಗಿ, ದಾನಧರ್ಮವೆಲ್ಲವೂ ನಷ್ಟವಾಗಲಾಗಿ, ತ್ರೈಲೋಕ್ಯವೆಲ್ಲವೂ ಕರ್ಮಹೀನವಾಗಿಬಿಟ್ಟಿತು ॥೩೦—೩೧॥

ಅನಂತರ, ದೇವತೆಗಳೂ ಗಂಧರ್ವರೂ ಯಕ್ಷ ರಾಕ್ಷಸ ಪನ್ನಗರೂ ಬ್ರಹ್ಮನನ್ನು ಮುಂದಿಟ್ಟುಕೊಂಡು, ಆ ಪತಿವ್ರತೆಯಿರುವ ಕಡೆಗೆ ಬಂದರು ॥೩೨॥

ಅಲ್ಲಿಗೆ ಬಂದು, ಆ ಮಹಾತ್ಮರೆಲ್ಲರೂ ಅವಳನ್ನು ಕುರಿತು 'ಅಮ್ಮಾ! ಸೂರ್ಯೋದಯವಾಗುವಂತೆ ಮಾಡು; ನಿನಗೆ ಮಂಗಳವಾಗಲಿ. ಲೋಕಗಳೆಲ್ಲ ಸುಖವಾಗಿರಲಿ. ನಿನ್ನ ಪತಿಯನ್ನು ಜೀವದೊಡನೆ ನಾವು ನಿನಗೆ ಕೊಡುವೆವು. ಇದರಲ್ಲಿ ಸಂಶಯವಿಲ್ಲ.' ಎಂದು ಹೇಳಿದರು ॥೩೩॥

ಹೀಗೆ ದೇವತೆಗಳಿಂದ ಹೇಳಲ್ಪಟ್ಟ ಆ ಪತಿವ್ರತೆಯು, ಹಾಗೆಯೇ ಆಗಲೆಂದೊಪ್ಪಿಕೊಂಡು, ಭೂಮಿಯಲ್ಲಿ ಸೂರ್ಯೋದಯವಾಗಲೆಂದು ಹೇಳಿ, ಮತ್ತೆ ಅರ್ಘ್ಯವನ್ನು ಚೆಲ್ಲಿದಳು ॥೩೪॥

ಇವಳ ಮಾತನ್ನು ಕೇಳಿದೊಡನೆಯೇ ಸೂರ್ಯನು ಉದಯಿಸಿದನು. ಅವಳ ಪಾತಿವ್ರತ್ಯ ಮಹಿಮೆಯಿಂದ, ಪತಿಯು ಪುನಃ ಬದುಕಿಕೊಂಡನು ॥೩೫॥

ಆಗ ಅವನು, ಸೌಂದರ್ಯಕ್ಕೆ ಗಣಿಯಾಗಿಯೂ, ಹದಿನಾರುವರ್ಷದ ಯೌವನಸ್ಥನಾಗಿಯೂ, ಧರ್ಮಿಷ್ಠನೂ ಸತ್ಯವಾದಿಯೂ ಸರ್ವಸಂಪತ್ಸಮನ್ವಿತನೂ ಆಗಿಯೂ, ಆ ಪತಿವ್ರತೆಯೊಡನೆ ಸಂಗತನಾಗಿ, ಅನೇಕ ವರ್ಷಕಾಲ ಕ್ರೀಡಿಸಿಕೊಂಡಿದ್ದನು. ಹೀಗೆ ಅವಳಿಗೆ ವರವನ್ನು ಕೊಟ್ಟು, ದೇವತೆಗಳೆಲ್ಲರೂ ತಂತಮ್ಮ ಮನೆಗೆ ಹೊರಟುಹೋದರು ॥೩೬—೩೭॥

ಏವಂ ಪತಿವ್ರತಾಃ ಸನ್ತಿ ಪೃಥಿವೀಧಾರಣಕ್ಷಮಾಃ ।
ತಸ್ಮಾತ್ ಸೀತೇ ಮಹಾಭಾಗೇ ಲೋಕಪೂಜ್ಯಾ ಪತಿವ್ರತಾ ।
ಪತಿವ್ರತಾನಾಂ ಧರ್ಮಾಸ್ತು ತ್ವಾದೃಶೀಷು ಪ್ರದೃಶ್ಯತೇ ॥೫೪॥

ತ್ವದ್ವಿಧಾಸ್ತು ಗುಣೈರ್ಯುಕ್ತಾಃ ದೃಷ್ಟಲೋಕಪರಾವರಾಃ ।
ಸ್ತ್ರಿಯಃ ಸ್ವರ್ಗೇ ಚರಿಷ್ಯನ್ತಿ ಯಥಾ ಧರ್ಮಕೃತಸ್ತಥಾ ॥೫೫॥

ಇತ್ಯುಕ್ತ್ವಾ ತಾಂ ಸಮಾಲಿಙ್ಗ್ಯ ವತ್ಸೇ ಸೀತೇತಿ ಸಾದರಮ್ ।
ಅನಸೂಯಾ ರಾಮಪತ್ನೀಂ ಸ್ತೋತುಂ ಸಮುಪಚಕ್ರಮೇ ॥೫೦॥

ತ್ವಂ ಹಿ ಸೀತೇ ಮಹಾದೇವಿ ಚಿದಾನನ್ದಸ್ವರೂಪಿಣೀ ।
ಜಗದುತ್ಪತ್ತಿ ಸಂಹಾರಹೇತುಭೂತಾ ಶುಚಿಸ್ಮಿತೇ ॥೫೧॥

ರಾಮಸನ್ನಿಧಿಮಾತ್ರೇಣ ಕರೋಷಿ ತ್ವಂ ಸದಾಖಿಲಮ್ ।
ಪರಾತ್ಮಾ ಚಿದ್ಘನೋ ರಾಮಃ ಪುರುಷೋತ್ತಮ ಈಶ್ವರಃ ।
ಕ್ಷೀರಾಬ್ಧಿನಿಲಯಃ ಶ್ರೀಶಃ ಶಙ್ಕರೋ ಹರಿರವ್ಯಯಃ ॥೫೨॥

ಲಕ್ಷ್ಮೀಸ್ತ್ವಮಸಿ ತತ್ಪತ್ನೀ ತ್ವಮೇವ ಗಿರಿಜಾ ಶುಭೇ ।
ತ್ವಷ್ಟೃ ರೂಪಧರೋ ರಾಮಃ ಸಾವಿತ್ರೀ ತ್ವಂ ಶುಭಾನನೇ ॥೫೩॥

ಎಲೌ ಸೀತೆ! ಹೀಗೆ ಪತಿವ್ರತೆಯರು ಭೂಮಿಯನ್ನೆಲ್ಲ ತಮ್ಮ ವಶದಲ್ಲಿಟುಕೊಳ್ಳಲು ಸಮರ್ಥರಾಗಿರುವರು. ಅದುಕಾರಣ, ಎಲೌ ಪೂಜ್ಯಳೇ ! ಪತಿವ್ರತೆಯು ಲೋಕಮಾನ್ಯಳಾಗಿರುವಳು. ಅಂತಹ ಪತಿವ್ರತಾಧರ್ಮವು, ನಿನ್ನಂಥವರಲ್ಲಿ ಕಾಣಿಸುತ್ತಿರುವುದು ॥೫೪॥

ನಿನ್ನಂತಹ ಸದ್ಗುಣಸಂಪನ್ನೆಯರಾದ ಸ್ತ್ರೀಯರು, ಲೋಕದ ಪೂರ್ವಾಪರಗಳನ್ನು ತಿಳಿದವರಾಗಿರುತ, ಇತರವಾದ ಧರ್ಮಗಳನ್ನೆಲ್ಲ ಮಾಡಿರುವರಂತೆಯೇ, ಸ್ವರ್ಗದಲ್ಲಿ ಸುಖವಾಗಿ ವಾಸ ಮಾಡುವರು. (ಎಂದು ಅನುಸೂಯಾದೇವಿ ಹೇಳಿದಳು) ॥೫೫॥

ಈರೀತಿಯಾಗಿ ಹೇಳಿ, ಅನಸೂಯೆಯು, ರಾಮಪತ್ನಿಯಾದ ಸೀತೆಯನ್ನು–ವತ್ಸೇ! ಸೀತೇ! ಎಂದು ಆದರದೊಡನೆ ಆಲಿಂಗಿಸಿ, ಸ್ತೋತ್ರಮಾಡಲುಪಕ್ರಮಿಸಿದಳು ॥೫೦॥

ಎಲೌ ಸೀತಾದೇವಿ! ನೀನು, ಚಿದಾನಂದಸ್ವರೂಪಿಣಿಯು, ಹೇ ಮಧುರಸ್ಮಿತೇ ! ಜಗತ್ತಿನ ಉತ್ಪತ್ತಿ ಲಯಗಳಿಗೆ ನೀನು ಕಾರಣಭೂತಳು ॥೫೧॥

ಶ್ರೀರಾಮನ ಸಾನ್ನಿಧ್ಯಮಾತ್ರದಿಂದಲೇ, ನೀನು ಸರ್ವದಾ ಸಮಸ್ತಕಾರ್ಯವನ್ನೂ ಮಾಡುತಿರುವೆ. ಶ್ರೀರಾಮನು, ಸಾಕ್ಷಾತ್ ಪರಮಾತ್ಮನು; ಅಖಂಡ ಚಿದ್ರೂಪನು; ಪುರುಷೋತ್ತಮನು; ಈಶ್ವರನು; ಕ್ಷೀರಸಾಗರ ನಿಲಯನು; ಲಕ್ಷ್ಮೀಪತಿಯು; ಶಂಕರನು; ಅವ್ಯಯನಾದ ಶ್ರೀ ಹರಿಯು ॥೫೨॥

ಅವನ ಪತ್ನಿಯಾದ ನೀನು, ಸಾಕ್ಷಾಲ್ಲಕ್ಷ್ಮಿಯು; ನೀನೇ ಪಾರ್ವತಿಯು. ಎಲೌ ಸುಮುಖಿ! ರಾಮನು ಬ್ರಹ್ಮರೂಪಧರನು; ಆಗ ನೀನು ಸಾವಿತ್ರೀರೂಪಳಾಗುವೆ ॥೫೩॥

ಯದ್ಯದ್ವಿಭೂತಿಮದ್ರೂಪಂ ರಾಮಸ್ಯ ಪರಮಾತ್ಮನಃ ।
ತತ್ತದ್ರೂಪಾನುರೂಪಾ ತ್ವಂ ತಸ್ಯತಸ್ಯಾಸಿ ಭಾಮಿನಿ ॥೪೪॥
ಪುಂರೂಪೋ ರಾಘವಃ ಶ್ರೀಮಾ ಸ್ತ್ರೀರೂಪಾ ತ್ವಂ ಚ ಜಾನಕಿ ।
ಪರಬ್ರಹ್ಮ ದ್ವಿಧಾಭೂತಂ ಸ್ತ್ರೀಪುಂಭೇದೇನ ವರ್ತತೇ ॥೪೫॥
ರಾಮೋ ರಾವಣಹನ್ತಾ ತು ತ್ವಂ ಶತಾನನನಾಶಿನೀ ।
ತವ ರೂಪಂ ವಿಜಾನಾಸಿ ತ್ವಮೇವ ಜನಕಾತ್ಮಜೇ ॥೪೬॥
ಇತಿ ಸಂಸ್ತುತ್ಯ ತಾಂ ಸೀತಾಂ ಅಙ್ಗರಾಗಂ ಸುಖಂ ದದೌ ।
ಕಾಶ್ಮೀರಕುಙ್ಕುಮೋಪೇತಂ ಚನ್ದನಂ ರಕ್ತಚನ್ದನಮ್ ॥೪೭॥
ಕೌಶೇಯವಸನಂ ಚಾಪಿ ಭೂಷಣಾನ್ಯತುಲಾನಿ ಚ ।
ವಿಚಿತ್ರಪುಷ್ಪಮಾಲಾಶ್ಚ ಕಜ್ಜಲಂ ಕುಙ್ಕುಮಂ ತಥಾ ॥೪೮॥
ಸದಾ ಪ್ರಕ್ಷಾಳಿತಾಙ್ಗತ್ವಂ ಮಾಲಿನ್ಯಪರಿವರ್ಜಿತಮ್ ।
ಕೇಶಬನ್ಧಸ್ನಿಗ್ಧತಾಂ ಚ ವಿಕಸತ್ಪದ್ಮಜಾನನಮ್ ।
ದದೌ ಪೀಯೂಷಫೇನಾಭಂ ಕೂರ್ಪಾಸಂ ರತ್ನಗುಮ್ಫಿತಮ್ ॥೪೯॥
ಸದಾಲಂಕಾರಸಂಯುಕ್ತಾಂ ಸೀತಾಂ ಸುರಸುತೋಪಮಾಮ್ ।
ಅನಸೂಯಾ ಚಕಾರೋಚ್ಚೈಃ ಪಾತಿವ್ರತ್ಯತಪೋಬಲಾತ್ ॥೫೦॥

ಪರಮಾತ್ಮನಾದ ರಾಮನು, ಯಾವಯಾವ ವಿಭೂತಿಯುಕ್ತನಾದ ರೂಪವನ್ನು ಸ್ವೀಕರಿಸುವನೋ, ಅದದಕ್ಕೆ ಅನುಗುಣವಾಗಿ ನೀನು ರೂಪಗಳನ್ನು ಧರಿಸುವೆ ॥೪೪॥

ಶ್ರೀ ರಾಘವನು ಪುರುಷರೂಪನು; ನೀನು ಸ್ತ್ರೀರೂಪಳು. ಹೀಗೆ ಪರಬ್ರಹ್ಮನೇ ಎರಡುವಿಧವಾಗಿ ಸ್ತ್ರೀಪುರುಷಭೇದದಿಂದ ಕಾಣಿಸಿಕೊಳ್ಳುತಿರುವನು ॥೪೫॥

ರಾಮನು ರಾವಣನ್ನು ಕೊಲ್ಲುವನು; ನೀನು ಶತಕಂಧರ ರಾವಣನನ್ನು ಕೊಲ್ಲುವೆ. ಹೇ ಜನಕರಾಜನಂದಿನಿ! ನಿನ್ನ ಸ್ವರೂಪವನ್ನು ನೀನೆ ಅರಿತವಳಾಗಿರುವೆ ॥೪೬॥

ಹೀಗೆಂದು ಆ ಸೀತೆಯನ್ನು ಸ್ತೋತ್ರಮಾಡಿ, ಕೇಸರಾದಿಗಳಿಂದ ಪರಿಮಳಿತವಾಗಿರುವ ರಕ್ತಚಂದನವನ್ನು ಅಂಗಲೇಪನಕ್ಕಾಗಿ ಕೊಟ್ಟಳು ॥೪೭॥

ಮತ್ತು, ಕೌಶೇಯ ವಸ್ತ್ರವನ್ನೂ, ಅಸದೃಶವಾದ ದಿವ್ಯಭೂಷಣಗಳನ್ನೂ, ವಿಚಿತ್ರವಾದ ಪುಷ್ಪಮಾಲಿಕೆಗಳನ್ನೂ, ಕಾಡಿಗೆಯನ್ನೂ, ಕುಂಕುಮವನ್ನೂ, ಮೈಯಲ್ಲಿ ಕೊಳೆಯಿಲ್ಲದೆ ಸರ್ವದಾ ಸ್ನಾನಮಾಡಿದಂತೆ ಶುಭ್ರವಾಗಿರುವಿಕೆಯನ್ನೂ, ಕೇಶಬಂಧವು(ಜುಟ್ಟುಗಂಟು)ಸರ್ವದಾ ಮಿರುಗುತಿರುವಿಕೆಯನ್ನೂ, ಮುಖದಲ್ಲಿ ಸರ್ವದಾ ಅರಳಿದ ತಾವರೆಯಂತೆ ವಿಕಾಸವನ್ನೂ, ಅಮೃತದ ನೊರೆಯಂತೆ ಶುಭ್ರವಾಗಿರುವ ರತ್ನಖಚಿತವಾದ ಕುಪ್ಪಸವನ್ನೂ ಕೂಡ, ಅಹಲ್ಯೆಯು ಸೀತಾದೇವಿಗೆ ಅನುಗ್ರಹಿಸಿದಳು ॥೪೮—೪೯॥

ಹೀಗೆ ಆ ಅನಸೂಯೆಯು ದೇವತಾ ಸದೃಶೆಯಾದ ಸೀತೆಯನ್ನು ತನ್ನ ಪಾತಿವ್ರತ್ಯ ತಪೋಬಲದಿಂದ ಸರ್ವದಾ ಅಲಂಕಾರಯುಕ್ತಳನ್ನಾಗಿ ಮಾಡಿದಳು ॥೫೦॥

ಅಙ್ಗರಾಗಾರ್ಪಣಂ ಪ್ರಾಪ್ಯ ಸೀತಾ ಸಾ ತನುಮಧ್ಯೆವೊ ।
ಚನ್ದ್ರರೇಖೇವ ಸಾ ಭಾತಿ ಸಾಕ್ಷಾದಗ್ನಿಶಿಖೋಪಮಾ ॥೪೧॥
ತಥಾ ತು ಭೂಷಿತಾಂ ಸೀತಾಂ ದದರ್ಶ ವದತಾಂ ವರಃ ।
ರಾಘವಃ ಪ್ರೀತಿದಾನೇನ ತಪಸ್ವಿನ್ಯಾಜಹರ್ಷ ಚ ॥೪೨॥
ತತಸ್ತಾಂ ಶರ್ವರೀಂ ಪ್ರೀತಃ ಪುಣ್ಯಾಂ ಶಶಿನಿಭಾನನಃ ।
ಅರ್ಚಿತಸ್ತಾಪಸೈಃ ಶುದ್ಧೈಃ ಉವಾಸ ರಘುನನ್ದನಃ ॥೪೩॥

ಇತಿ ಶ್ರೀ ನಾನಾಪುರಾಣಾಗಮೂದಿನಿಷ್ಠ ತತ್ತ್ವಸಙ್ಗ್ರಹಭೂತೇ
ಶ್ರೀತತ್ತ್ವಸಙ್ಗ್ರಹರಾಮಾಯಣೇ ಅಯೋಧ್ಯಾಕಾಣ್ಡೇ
ಪಾತಿವ್ರತ್ಯಮಹಿಮಾದಿವರ್ಣನಂ ನಾಮ

ದ್ವಾತ್ರಿಂಶಃ ಸರ್ಗಃ.

ಅಯೋಧ್ಯಾಕಾಣ್ಡಃ ಸಮಾಪ್ತಃ.

ಓಮ್ ತತ್ ಸತ್.

ಹೀಗೆ ಕೃಶಮಧ್ಯಳಾದ ಆ ಸೀತೆಯು, ಅನಸೂಯೆಯಿಂದ ಕೊಡಲ್ಪಟ್ಟ ಅಂಗರಾಗವನ್ನು ಸ್ವೀಕರಿಸಿ, ಚಂದ್ರಲೇಖೆಯಂತೆಯೂ ಅಗ್ನಿಜ್ವಾಲೆಯಂತೆಯೂ ಪ್ರಕಾಶಿಸುತಿದ್ದಳು ॥೪೧॥

ಈರೀತಿಯಾಗಿ ಅಂಕೃತಳಾಗಿರುವ ಸೀತೆಯನ್ನು ನೋಡಿ ಶ್ರೀರಾಮಚಂದ್ರನು, ಅನಸೂಯೆಯು ಪ್ರೀತಿಪೂರ್ವಕವಾಗಿ ಕೊಟ್ಟ ಅಂಗರಾಗಾದಿಗಳನ್ನು ಕಂಡು ವಿಶೇಷವಾಗಿ ಹರ್ಷಪಟ್ಟನು॥

ಅನಂತರ, ಚಂದ್ರಸಮಾನಮುಖನಾದ ಶ್ರೀರಾಮನು, ಮಹಾಪ್ರೀತಿಸಮನ್ವಿತನಾಗಿ, ಪರಿಶುದ್ಧರಾದ ತಾಪಸರಿಂದ ಪೂಜಿಸಲ್ಪಟ್ಟು, ಆ ರಾತ್ರಿ ಅತ್ರಿಮುನಿಯ ಆಶ್ರಮದಲ್ಲಿಯೇ ವಾಸವಾಗಿದನು ॥೪೩॥

ಇದು ಶ್ರೀ ತತ್ವಸಂಗ್ರಹ ರಾಮಾಯಣದ ಅಯೋಧ್ಯಾಕಾಂಡದಲ್ಲಿ ಪಾತಿವ್ರತ್ಯಾದಿ ವರ್ಣನವೆಂಬ ಮುವ್ವತ್ತೆರಡನೆಯ ಸರ್ಗವು.

ಇಂತು ಶ್ರೀಮದಖಿಲಮಹೀಮಂಡಲಮಂಡನಾಯಮಾನ ಕರ್ಣಾಟಕ ಜನಪದಾಧೀಶ್ವರ
ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಜೆ. ಸಿ. ಎಸ್. ಐ. ಯವರ
ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿಯಿಂದ
ವಿರಚಿತವಾದ
ತತ್ವಪ್ರಕಾಶವೆಂಬ
ಶ್ರೀ ತತ್ವಸಂಗ್ರಹ ರಾಮಾಯಣದ ಟೀಕಿನೊಳಗೆ

ಅಯೋಧ್ಯಾಕಾಂಡವು ಸಂಪೂರ್ಣವು.

ಓಮ್ ತತ್ ಸತ್.